No. M 5618

4-1-1940

ನವಯುಗ

NAVAYUGA

ನವಯುಗ ಪರ್ಯಾಯ ಸಂಚಿಕೆ.

ತಾ. 11-1-1940ಕ್ಕೆ ಹೊರಡುವುದು.

ನಿರೀಕ್ಷಿಸಿರಿ !

ನಿರೀಕ್ಷಿಸಿರಿ!!



ಶ್ರೀಗಳಾದ—

ಕೊರಡ್ಕಲ್ ಶ್ರೀನಿವಾಸ ರಾವ್,

ಕೆ. ಕೃಷ್ಣರಾವ್, ಬಿ. ಎ.

ಕೆ. ವಿ. ಪುಟ್ಟಪ್ಪ, ಎಂ. ಎ.

ಎಸ್. ಎಲ್. ಸುಬ್ರಹ್ಮಣ್ಯಂ,

ಮಂಗಳೂರು ಚಾರಪ್ಪ,

ಗೋವಿಂದ ಪೈ, ಬಿ. ಎ.

ಕಟಪಾಡಿ ಶ್ರೀನಿವಾಸ ಶೆಣೈ,

ಎನ್. ಎಸ್. ಜೈನಿ,

ವಿ. ಕೃ. ಗೋಕಾಕ, ಎಂ. ಎ.

ಯು. ರಾಘವೇಂದ್ರಾಚಾರ್ಯ, ಬಿ. ಎಸ್. ಸಿ.

ಶ್ರೀಗಳಾದ—

ಪಿ. ವಿ. ಉಪಾಧ್ಯಾಯ, ಬಿ. ಎ. ಎಲ್.ಎಲ್. ಬಿ

ಎ. ಬಿ ಶೆಟ್ಟಿ, ಎಂ. ಎಲ್. ಎ.

ಶಿವರಾಮ ಕಾರಂತ್,

ಬಿ. ರಾಮಕೃಷ್ಣಾಚಾರ್, ಬಿ.ಎ.ವಿದ್ವಾನ್

ದ. ರಾ. ಬೇಂದ್ರೆ, ಬಿ. ಎ.

ಮೊದಲಾದವರ ಲೇಖನ, ಕಥೆ, ಕವನಾದಿಗಳು, ಬಣ್ಣ ಬಣ್ಣದ ಚಿತ್ರಗಳು, ನೂರಕ್ಕೂ ಮಿಕ್ಕ ಪುಟಗಳು.

ಬೆಲೆ: 0-4-0 ಮಾತ್ರ.

Wishing you

a happy and

a prosperous new year

J. A. PUTRAN,
BRANCH MANAGER,

THE ASIAN ASSURANCE Co. LTD., MANGALORE.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ, ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್
ಕೆ. ಆರ್. ಕೆ. ಶೆಟ್ಟಿ ಬಿಲ್ಡಿಂಗ್,
ಮಿಶ್ಯನ್ ಹೈಸ್ಕೂಲ್ ರೋಡು, ಮಂಗಳೂರು.

ಅಥವಾ

ಎಚ್. ವೆಂಕಟರಾಮಯ್ಯ
ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

1940 ಡೈರಿಗಳು

ಕರ್ನಾಟಕ ಡೈರಿ:

ದೊಡ್ಡದು ೦—೧೦—೦ ಚಿಕ್ಕದು ೦—೫—೦

„ ಮುಚ್ಚಳವುಳ್ಳದ್ದು ೦—೧೨—೦ „ ಮುಚ್ಚಳವುಳ್ಳದ್ದು ೦—೬—೦

ತುಳುನಾಡ್ ಡೈರಿ:

— ಬೆಲೆ: ಬರಿಯ ನಾಲ್ಕಾಣೆ —

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು.

GENERAL SUPPLIES LIMITED
UDIPI - - - - - S. INDIA

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ—ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಾಪಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯಾಪಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,
ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್

ಫೋನ್ 406
ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು
ಫೋನ್ ನಂಬ್ರ 347

ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್:- ಕೆ. ಗುರುರಾಜಾಚಾರ್ಯ.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು. ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಸಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD 1921 ಸ್ಥಾಪನೆ

FOUNDER:
SRI. A. B. SHETTY M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA

ಚಂದಾ ವಿವರ:
1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12-0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೧೮

ಉಡುಪಿ, ಗುರುವಾರ, ೪—೧—೧೯೪೦.
UDIPI, THURSDAY, 4-1-1940.

VOL. 19
No. 18

12ಲಕ್ಷ ಚೀನೀ ಸೇನೆ ಸಿದ್ಧವಾಗಿದೆ

ಅವಶ್ಯಬಿದ್ದಲ್ಲಿ ರಣರಂಗಕ್ಕೆ ಹೋಗಲು ಚೆನ್ನಾಗಿ ತರಬೇತಿಹೊಂದಿದ 12 ಲಕ್ಷ ಚೀನೀ ಸೇನೆಯು ಈಗ ತಯಾರಾಗಿದೆ. ಪ್ರಕೃತ ಈ ಸೇನೆಯನ್ನು ಚೀನವು ಉಪಯೋಗಿಸುವಹಾಗಿಲ್ಲ. ಈಗ ಅದು ಗೋರಿಲ್ಲ ಕ್ರಮದ ಯುದ್ಧವನ್ನೇ ಪ್ರಬಲವಾಗಿ ನಡಿಸುವುದು. ಜಾಪಾನು ಚೀನದ ಸಮುದ್ರಕರಾವಳಿಯ ಮೇಲೆ ಸಂಪೂರ್ಣವಾಗಿ ತನ್ನ ಅಧಿಕಾರವನ್ನು ಸ್ಥಾಪಿಸಿದುದರಿಂದ ವಿದೇಶೀ ವ್ಯಾಪಾರಿಗಳಿಗೆ ತೊಡಕಾಗಬಹುದೇ ವಿನಾ ಚೀನಕ್ಕೆ ಅದರಿಂದೇನೂ ಬಾಧಕವಿಲ್ಲ. ಕಡಿಮೆ ಪಕ್ಷ ಒಂದು ವರ್ಷಕ್ಕೆ ಬೇಕಾದ ಯುದ್ಧೋಪಕರಣಗಳನ್ನೀಗ ಚೀನವು ಸಂಗ್ರಹಿಸಿಕೊಂಡಿದೆ. ಮಿಶನ್ ಕೋವಿ ಮತ್ತು ಕೋವಿ ಮೊದಲಾದುವುಗಳನ್ನು ಚೈನವೇ ಈಗ ತಯಾರಿಸುತ್ತಿದೆ. 1938ನೇ ಅಕ್ಟೋಬರ ತಾರೀಕು 24ರಲ್ಲಿ ಹ್ಯಾಂಕೋ ಪಟ್ಟಣದ ಪತನವಾದ ಮೇಲೆ ಚೀನೀಯರು ಸಮರಂಗ ಯುದ್ಧವನ್ನೇ ಬಿಟ್ಟು ಗೋರಿಲ್ಲಯುದ್ಧ ನಿರತರಾಗಿದ್ದಾರೆ. ಕಳದ 2½ ವರ್ಷಗಳಿಂದ ಜಾಪಾನರಿಗೆ ಒಮ್ಮೆಯಾದರೂ ಯೆಲ್ಲೋ ನದಿಯನ್ನು ದಾಟಲು ಸಾಧ್ಯವಾಗಿರುವುದಿಲ್ಲ. ಚೈನವು ಇದೇ ರೀತಿಯ ಕಾದಾಟವನ್ನೇ ನಡೆಸುತ್ತ ಹೋಗುವುದು. ಒಬ್ಬನೇ ಒಬ್ಬ ಜಪಾನ ಸೈನಿಕನು ಚೀನದಲ್ಲಿರುವನಕ ಅದು ಸಂಧಿಗೊಪ್ಪುವಹಾಗಿಲ್ಲ. ಚೀನದ ಪಶ್ಚಿಮದ ಪ್ರಾಂತಗಳೀಗ ಆಶ್ಚರ್ಯಕರ ಪ್ರಗತಿ ಹೊಂದುತ್ತಿವೆ. ಹಲವು ಹೊಸ ರಸ್ತೆಗಳು ಮಾಡಲ್ಪಟ್ಟವೆಯೆಂದು 35 ವರ್ಷಗಳಿಂದ ಚೀನದಲ್ಲಿ ಮಾರ್ಶಲ್ ಚ್ಯಾಂಗರ ಸಲಹೆಗಾರರಾಗಿರುವ ಮಿ. ಡೋನಾಲ್ಡರು ರಂಗೂನಿನಲ್ಲಿ ಎಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯೊಡನೆ ಹೇಳಿರುವರು. ಚೈನಕ್ಕೆ ಹೋಗಲಿರುವ ಸರ್. ಸ್ಟಾಫೋರ್ಡ್ ಕ್ರಿಪ್ಸರನ್ನು ಸ್ವಾಗತೀಕರಿಸಿ ಕರದೊಯ್ಯಲು ಅವರು ರಂಗೂನಿಗೆ ಬಂದಿದ್ದರು.

ಭೂಕಂಪದಿಂದ 8000ಮಂದಿಯ ಪ್ರಾಣಹಾನಿ

ಡಿಸಂಬರ ತಾ. 27ನೇ ಮಧ್ಯರಾತ್ರಿಯ ಅನಂತರ 1ಘಂಟೆಗೆ ಟರ್ಕಿಯ ಅನಟೋಲಿಯದಲ್ಲಿ ಅಭೂತಪೂರ್ವ ಪ್ರಚಂಡ ಭೂಕಂಪವುಂಟಾಗಿ 8000ದ ವರೆಗೆ ಜನರು ಕೊಲ್ಲಲ್ಪಟ್ಟಿರುವರೆಂದು ತಿಳಿದುಬಂದಿದೆ. ಒಟ್ಟಿಗೆ 7 ತೀವ್ರ ಭೂಕಂಪಗಳುಂಟಾಗಿರುವವು. ಟೋಕಟ್ ಎಂಬ ಒಂದೇ ಸ್ಥಳದಲ್ಲಿ 963ಮಂದಿ ಕೊಲ್ಲಲ್ಪಟ್ಟು 443 ಜನರು ಗಾಯಗೊಂಡಿರುವರು. ಬೆಳೆ ಮತ್ತು ಮನೆಮಾರು ಸೊತ್ತುಗಳು ಇಂತಿಷ್ಟೇ ನಷ್ಟವಾಗಿರುವವೆಂದು ಹೇಳಲು

ಸಮಾಚಾರ ಸಂಗ್ರಹ

ಸಾಧ್ಯವಿಲ್ಲ ನೂರಾರು ಬೆಂಕಿಯೆದ್ದು ಹಾವಳಿಯಾಗಿದೆ. ಎರ್ಜಿಂಜ್ಯನ್ ಇಡೀ ಪಟ್ಟಣವೇ ಉರಿಯುತ್ತಿದೆ. ಇದರ ಶೇಕಡ 80ರಷ್ಟು ಜನಸಂಖ್ಯೆಯು ಕೊಲ್ಲಲ್ಪಟ್ಟಿದ್ದಾರೆ! 12 ಪ್ರಾಂತಿಕ ಪಟ್ಟಣಗಳು ಮತ್ತು 80 ಹಳ್ಳಿಗಳು ಅಂಶ ಅಥವಾ ಸಂಪೂರ್ಣ ನಾಶವಾಗಿವೆ. ಭೂಕಂಪದಿಂದ ಸತ್ತವರ ಮತ್ತು ಗಾಯಗೊಂಡವರ ಒಟ್ಟು ಸಂಖ್ಯೆ ಕಡಿಮೆಯೆಂದರೆ 35,000 ಆಗಬಹುದೆಂದು ನಂಬಲಾಗಿದೆ. ಎರ್ಜಿಂಜನ್ ಜಿಲ್ಲೆಯ 60,000 ಜನಸಂಖ್ಯೆಯಲ್ಲಿ 42,000ಮಂದಿ ಒಂದೋ ಕೊಲ್ಲಲ್ಪಟ್ಟಿರುವರು, ಇಲ್ಲವೆ ಗಾಯಗೊಂಡಿರುವರೆಂದು ಹೆಬರ್ ಎಂಬ ಟರ್ಕಿಶ್ ಪತ್ರಿಕೆಯ ಸುದ್ದಿ. ಅನೇಕ ರೈಲ್ವೇ ಸಂಕಗಳು ಮುರಿದುಹೋಗಿವೆ. ತೀವ್ರ ಚಳಿಯಿಂದ ಜನತೆಯ ಸಂಕಷ್ಟವು ಮತ್ತಷ್ಟು ಹೆಚ್ಚಾಗಿದೆ. ಮನೆಮಾರಿಲ್ಲದೆ ನಿರಾಶ್ರಿತರಾದ ಹಲವು ಜನರು ಚಳಿಯಿಂದ ಮರಗಟ್ಟಿಹೋಗಿ ಸತ್ತಿರುತ್ತಾರೆ. ಕೆವಾಸ್ ಎಂಬ ಪಟ್ಟಣವು ಸಂಪೂರ್ಣ ನಾಶವಾಗಿದೆ. ಪ್ರೆಸಿಡೆಂಟ್ ಇನ್ನೊನೂರವರು ಭೂಕಂಪ ಹಾವಳಿಯ ಪ್ರದೇಶಗಳಲ್ಲಿ ಸಂಚರಿಸುತ್ತಿರುವರು. ಸಾವಿರಾರು ಮಂದಿ ನಿರಾಶ್ರಿತರಿಗೆ ಸಹಾಯವೀಯಲು ಪ್ರಯತ್ನ ನಡೆಸಲ್ಪಡುತ್ತಿದೆ. ಇಡೀ ದೇಶದಲ್ಲೆಲ್ಲಾ ಹಣ, ಆಹಾರ ಸಾಮಗ್ರಿ ಮತ್ತು ವಸ್ತ್ರ ಸಂಗ್ರಹವಾಗುತ್ತಿದೆ.

ಜನರಲ್ ಗೋರಿಂಗರ ಪಾಡೇನು?

ಜರ್ಮನಿಯ ಪ್ರಚಾರ ಮಂತ್ರಿ ಡಾಕ್ಟರ್ ಗೊಬ್ಬೆಲ್ಸರು ಹಿಟ್ಲರರ ಸಿಟ್ಟಿಗೊಳಗಾಗಿ ಅಧಿಕಾರಚ್ಯುತರಾಗಿದ್ದಾರೆಂದು ಒಮ್ಮೆ ಸುದ್ದಿಯುಂಟಾಗಿತ್ತು. ಆದರೆ ಅದು ಸತ್ಯವಲ್ಲೆಂದೀಗ ಸಿದ್ಧವಾಗಿದೆ. ಡಾಕ್ಟರ್ ಗೊಬ್ಬೆಲ್ಸರು ಯಥಾಪ್ರಕಾರ ತನ್ನ ಕೊಂಬು ಊದುತ್ತಿದ್ದಾರೆ. ಆದರೆ ಇತ್ತಲಾಗಿ ಫೀಲ್ಡ್ ಮಾರ್ಶಲ್ ಗೋರಿಂಗರ ಸುದ್ದಿಯೇ ಇಲ್ಲ. ಯುದ್ಧದಲ್ಲಿ ಮುಂದಾಗಿರತಕ್ಕವರವರು. ಆದರೆ ಅವರು ಮೌನಧರಿಸಿರುವಂತಿದೆ. ಪೋಲಂಡಿನ ಮೇಲೆ ಧಾಳಿ ನಡಿಸುವುದಕ್ಕೆ ಮತ್ತು ಇಂಗ್ಲೆಂಡಿನೊಡನೆ ವೈರ ಬೆಳೆಸುವುದಕ್ಕೆ ಫೀಲ್ಡ್ ಮಾರ್ಶಲ್ ಗೋರಿಂಗರಿಗಷ್ಟು ಸಮ್ಮತಿಯಿರಲಿಲ್ಲೆಂಬುದನ್ನು ಜರ್ಮನಿಯಲ್ಲಿದ್ದ ಬ್ರಿಟಿಷ್ ರಾಯಭಾರಿ ಸರ್. ಹೆಂಡರ್ಸನರ ಅಭಿಪ್ರಾಯದಿಂದ ಸ್ಪಷ್ಟವಾಗುತ್ತದೆ. ಆದರೆ ಹಿಟ್ಲರರು ಹೇಳಿದಂತೆ ನಡೆಯತಕ್ಕದ್ದು ಅವರೆಲ್ಲ. ಈ ಸಲ ಕ್ರಿಸ್ ಹಬ್ಬದ ಸಂದರ್ಭದಲ್ಲಿ ಹರ್, ಹೆಸ್, ಹಿಮ್ಲರ್ ಮತ್ತು ಡಾಕ್ಟರ್ ಗೊಬ್ಬೆಲ್ಸರು ಕ್ರಿಸ್‌ಮಸ್ ಹಬ್ಬಗಳಲ್ಲಿ ಭಾಷಣಗಳನ್ನಿತ್ತಿರುವರು. ಹರ್ ಹಿಟ್ಲರ್ ಮತ್ತು ಜನರಲ್ ಬ್ರೌಚಿಚರು ಪಶ್ಚಿಮ ರಣರಂಗವನ್ನು ಸಂದರ್ಶಿಸಿರುವರು. ಆದರೆ ಜನರಲ್ ಗೋರಿಂಗರು ತನ್ನ ಹಳ್ಳಿ ನಿವಾಸದಲ್ಲೇ ಸದ್ದಿಲ್ಲದೆ ಕ್ರಿಸ್‌ಮಸ್ ಹಬ್ಬ ಕಳೆದಿರುವರು. ಇದರ ಕಾರಣವೇನೆಂದು ಜರ್ಮನಿಯಲ್ಲೆಲ್ಲಾ ಪ್ರಶ್ನೆಯುಂಟಾಗಿದೆ. ಮುಂದೆ ಯುದ್ಧವನ್ನು ನಡಿಸುವ ರೀತಿ ಸೋವಿಯೆಟ್ ಜರ್ಮನ್ ಸಂಬಂಧದ ಕುರಿತು ನಾಝಿಪಕ್ಷ ಮತ್ತು ಸೇನೆಗಳೊಳಗೆ ತೀವ್ರ ಭಿನ್ನಾಭಿಪ್ರಾಯವುಂಟಾಗಿದೆಯೆಂದೂ, ಅದು ಇತ್ಯರ್ಥವಾಗುವನಕ ಗೋರಿಂಗರು ಮೌನವಹಿಸಿರುವರೆಂದೂ ಒಂದು ಸುದ್ದಿ. ಹಿಟ್ಲರರೊಡನೆ ಕಲಹಮಾಡಿ ಅವಮಾನಿತರಾಗಿ ಹಿಂದೆಸರಿದಿರುವರೆಂದು ಇನ್ನೊಂದು ಸುದ್ದಿ.

ಹಿಂದೂ ಮಹಾಸಭೆಯ ಅಧಿವೇಶನ

ಹಿಂದು ಮಹಾಸಭೆಯ ಕಲ್ಕತ್ತ ಅಧಿವೇಶನದ ಅಧ್ಯಕ್ಷರಾದ ಶ್ರೀ|| ವಿ. ಡಿ ಸಾವರ್ಕರರು ಡಿಸಂಬರ ತಾ 27ರಲ್ಲು ಕಲ್ಕತ್ತಕ್ಕೆ ಬಂದಿಳಿದಾಗ, ರೈಲ್ವೇ ಸ್ಟೇಶನಿನಲ್ಲಿ ಜನರು ಕಿಕ್ಕಿರಿದು ನೆರೆದು ಅವರನ್ನು ಸ್ವಾಗತೀಕರಿಸಿದರು. ಹಿಂದು ಧ್ವಜಧಾರಿಗಳಾದ ಸ್ವಯಂಸೇವಕರು ಕಿರಸಿನ ಬಣ್ಣದ ಮುಂಡಾಸು ತೊಟ್ಟು ಸಾಲಾಗಿ ನಿಂತಿದ್ದರು. ಅನಂತರ ಒಂದು ಮೈಲುದ್ದ ಮೆರವಣಿಗೆ ನಡೆಯಿತು. ಮೋಟರ್ ಸೈಕಲ್ ಸ್ವಯಂಸೇವಕ ದಳದವರು ಅಗ್ರಗಾಮಿಗಳಾಗಿ ಹೋಗುತ್ತಿದ್ದರು. ಅವರ ಬೆಂಡುವಾದನ ನಡೆಯುತ್ತಿತ್ತು. ರಸ್ತೆಗಳ ಎರಡು ಪಕ್ಕಗಳಲ್ಲಿ ಜನರು ಸಾಲುಗಟ್ಟಿ ನಿಂತು ವಂದನಾರ್ಪಿಸುತ್ತಿದ್ದರು. ಸಾವರ್ಕರರು ವೆಲಿಂಗ್ಟನ್ ಸ್ಕ್ವೇರಿನಲ್ಲಿ ಹಿಂದೂ ಮಹಾಸಭೆಯ ಧ್ವಜಾರೋಹಣ ನಡಿಸಿದರು. ಈ ಸಂದರ್ಭದಲ್ಲಿ ಸು

NATURAL CAUSE may deprive your family

YOU MEANT TO TAKE OUT A POLICY YOU HAD DISCUSSED ONE WHICH WOULD HAVE BROUGHT YOU SUFFICIENT INCOME BUT WRITING WAS TOO MUCH TROUBLE FOR YOU THEN AN ACCIDENT HAPPENED NOW YOUR FAMILY IS LEFT PENNILESS A SAD STORY BUT, ALAS HOW COMMON! YOU ARE IN DANGER AT EVERY MOMENT. SAFEGUARD TO DAY INSURE WITH TROPICAL. WOULD YOU NOT FIND PLEASURE IN PROVIDING PROTECTION FOR YOUR FAMILY? WOULD YOU NOT FEEL SATISFACTION IN KNOWING THAT YOUR FAMILY WILL NEVER BE COMMITTED TO A LOWER STANDARD OF LIFE?

Quotations for all ages and amounts to suit all circumstances.

TROPICAL INSURANCE COY., LTD. NEW DELHI.

ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ನ್ಯೂ-ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ.

ಎಂ. ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು.

ಅಥವಾ

ಕೆ ರಾಮಮೂರ್ತಿ, ಎಂ. ಎ., ಬ್ರಾಂಚ್ ಸೆಕ್ರೆಟರಿ, 160 ಮೌಂಟ್‌ರೋಡ್, ಮದ್ರಾಸು.

ಜನರಲ್ ಗೋರಿಂಗರು

ಮಾರು 20,000 ಹಿಂದುಗಳು ನೆರೆದಿದ್ದರು. ಹಿಂದು ಧ್ವಜವು ಅತಿ ಪುರಾತನವಾದುದು. ಅದರ ಓಂ ಸಂಕೇತವು ಅಧ್ಯಾತ್ಮಿಕತೆಯನ್ನು ತೋರಿಸಿರುವುದು. ಅದರ ಮೇಲೆ ಖಡ್ಗ ಮತ್ತು ಸ್ವಸ್ತಿಕವಿರುವುದು. ಹಿಂದುಗಳು ಬಹಳವಾಗಿ ಓಂ ಪೂಜಾನಿರತರಾಗಿದ್ದರು. ಅದು ಅವರ ತಪ್ಪು. ಆದುದರಿಂದ ಅವರೀಗ ಖಡ್ಗಧಾರಿಗಳಾಗಬೇಕಾಗಿದೆ. ಅದರೆ ಆತ್ಮರಕ್ಷಣೆಗಾಗಿ ಮಾತ್ರ. ಸ್ವಸ್ತಿಕವು ಹಿಂದುಗಳಿಗೆಲ್ಲಾ ಮಾನ್ಯವಾಗಿರುವುದು ಎಂದು ಶ್ರೀ| ಸಾವರ್ಕರರು ಹಿಂದು ಧ್ವಜದ ಅರ್ಥವನ್ನು ವಿವರಿಸಿದರು.

ದಶಂಬರ ತಾ. 28ರಲ್ಲು ದೇಶಬಂಧು ಪಾರ್ಕಿನಲ್ಲಿ ಜಾಹೀರು ಅಧಿವೇಶನವು ಅತ್ಯಂತ ವಿಜೃಂಭಣೆಯಿಂದ ನಡೆಯಿತು. 35,000ಕ್ಕಿಂತಲೂ ಮಿಕ್ಕಿದ ಪ್ರತಿನಿಧಿಗಳು ಮತ್ತು ಪ್ರೇಕ್ಷಕರು ಹಾಜರಿದ್ದರು. ಡಾಕ್ಟರ್ ಮೂಂಜೆ, ಭಾಯಿ ಪರಮಾನಂದ್, ಸೇಟ್ ಜುಗಲ್ ಕಿಶೋರ್ ಬಿರ್ಲ, ಡಾಕ್ಟರ್ ಎನ್. ಡಿ. ಸಾವರ್ಕರ್, ಶ್ರೀ. ಜಮ್ನಾದಾಸ್ ಮೇಥಾ, ಕಲ್ಕತ್ತದ ಮೇಯರಾದ ಶ್ರೀ. ಎನ್. ಡಿ. ಸೆನ್, ಮೊದಲಾದ ಮುಖಂಡರು ಮಂಡಿತರಾಗಿದ್ದರು. ಸರ್. ಮನ್ಮಥನಾಥ ಮುಖರ್ಜಿಯರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದರು. "ಭಾರತ ಭೂಮಿಯ ಮಾತೃಭೂಮಿಯಾಗಿರುವವರೆಲ್ಲಾ ಹಿಂದುಗಳು. ವೈದಿಕ, ಸನಾತನ, ಜೈನ, ಬುದ್ಧ, ಲಿಂಗಾಯತ, ಸಿಖ್ಖ ಮೊದಲಾದ ಧರ್ಮಗಳೂ, ಆರ್ಯಸಮಾಜ, ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ, ದೇವಸಮಾಜ ಮೊದಲಾದ ಸಮಾಜಗಳೂ ಮೂಲನಿವಾಸಿ ಧರ್ಮಗಳೂ ಹಿಂದೂ ಧರ್ಮಕ್ಕೇನೇ ಸೇರಿದವುಗಳು. ಹಿಂದೂದೇಶದಲ್ಲಿ ವಾಸಿಸುವವರೆಲ್ಲಾ ಹಿಂದೀಯರೆಂಬ ಕಾಂಗ್ರೆಸಿನ ಆದರ್ಶವಾಗಿರುವ ಪ್ರಾದೇಶಿಕವಕ್ಯವು ಅವ್ಯವಹಾರ್ಯ ಮತ್ತು ಅಸಾಧ್ಯವೆಂಬುದಕ್ಕೆ ಜೆಕೊಸ್ಲೊವೇಕಿಯ, ಪೋಲೆಂಡುಗಳೇ ಸಾಕ್ಷಿ. ಹಿಂದೂಸ್ಥಾನವು ಹಿಂದೂ ಜನಾಂಗದ ರಾಜ್ಯ. ಅದು ಅವಿಭಕ್ತವಾಗಿರಬೇಕು. ಹಿಂದೂತ್ವದ ರಾಜ್ಯವೇ ಹಿಂದುಗಳ ಸ್ವರಾಜ್ಯ. ಹಿಂದೂಸ್ಥಾನದಲ್ಲಿ ಹಿಂದುಗಳನ್ನು ಸಂಘಟಿಸಿ ಹಿಂದುತ್ವವನ್ನು ಸ್ಥಿರವಾಗಿ ನೆಲೆಗೊಳಿಸಲು ಸ್ಥಾಪಿತವಾಗಿರುವ ರಾಷ್ಟ್ರೀಯ ಸಂಘ ಹಿಂದೂ ಮಹಾಸಭೆ. ಮುಸಲ್ಮಾನರೊಂದು ಪ್ರತ್ಯೇಕ ಜನಾಂಗ. ಅವರೊಂದು ಅಲ್ಪಸಂಖ್ಯಾಕರು ಹಿಂದೂಸ್ಥಾನದಲ್ಲಿ. ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳಿಗೇ ಅವರು ಅರ್ಹರು. ಅವರ ಹಿಂದೂ ರಾಷ್ಟ್ರವಿಘಾತುಕ ಧೋರಣೆಯು ಹಿಂದುಗಳಿಗೆ ಅಪಾಯಕರ. ಕಾಂಗ್ರೆಸು ವಂಚಕ ರಾಷ್ಟ್ರೀಯ ಭಾವನಾಪ್ರೇರಿತವಾಗಿದೆ. ಆದುದರಿಂದ ಅದು ಹಿಂದುಗಳ ಹಿತವಿರೋಧಿಯಾದೆ. ಹಿಂದುಗಳ ಓಟಿನ ಬಲದಿಂದ ಆರಿಸಲ್ಪಟ್ಟ ಕಾಂಗ್ರೆಸ್ ಮಂತ್ರಿಗಳು ಮುಸಲ್ಮಾನ ಪಕ್ಷಪಾತಿಗಳಾಗಿ ಹಿಂದುಗಳಿಗೆ ಘಾತವನ್ನುಂಟುಮಾಡಿದ್ದಾರೆ. ಹಿಂದೂಸ್ಥಾನ ಸರಕಾರಕ್ಕೆ ವಿಧೇಯರಾಗಿರುವವರಿಗೆಲ್ಲಾ ಜಾತಿ, ಮತ, ಜನಾಂಗ ಭೇದವಿಲ್ಲದೆ ಸಮಾನ ಹಕ್ಕುಬಾಧ್ಯತೆಗಳಿರಬೇಕೆಂಬುದೇ ಹಿಂದೂ ಸಂಘಟನಾಪಕ್ಷದ ಉದ್ದೇಶವೆಂದು ಶ್ರೀ. ಸಾವರ್ಕರರು ತನ್ನ ಭಾಷಣದಲ್ಲಿ ಹಿಂದೂ ಮಹಾಸಭೆಯ ಉದ್ದೇಶ ಮತ್ತು ಅದು ಮಾಡತಕ್ಕ ಕೆಲಸಗಳನ್ನು ವಿವರಿಸಿದರು.

ಖಾದಿಯಿಂದಲೇ ವಿಮೋಚನೆ

ದಶಂಬರ ತಾರೀಕು 27ರಲ್ಲು ಮಹಾತ್ಮ ಗಾಂಧಿಯವರು, ಮಧ್ಯಪ್ರಾಂತದ ಪ್ರಾಂತಿಕ ಕಾಂಗ್ರೆಸ್ ಕೆಲಸಗಾರರ ಶಿಬಿರದಲ್ಲಿ ಭಾಷಣವೀಯುತ್ತಾ ಹಿಂಸಾತ್ಮಕ ಹೋರಾಟದಲ್ಲಿ ಖಾದಿಗೆ ಸ್ಥಾನವಿಲ್ಲ. ಅಹಿಂಸಾತ್ಮಕ ಹೋರಾಟದಲ್ಲಿ ಅದು ನಮ್ಮ ಮದ್ದುಗುಂಡು. ಖಾದಿಯಿಲ್ಲದೆ ನಾವು ನಮ್ಮ ಕೋವಿಗಳನ್ನು ಹಾರಿಸಿದರೆ ಪರಾಜಿತರಾಗುವೆವು. ಕಾಂಗ್ರೆಸ್ ಕೆಲಸಗಾರರೆಲ್ಲಾ ನೂಲಬೇಕು. ನನ್ನಲ್ಲಿ ಪ್ರಾಣವಿರುವ ತನಕ ನಾನು ಖಾದಿ ಮಂತ್ರ ಪಠಿಸುವೆನು. ಯಾಕೆಂದರೆ ಅದರಿಂದಲೇ ನಮ್ಮ ವಿಮೋಚನೆಯೆಂದು ನನ್ನ ನಂಬಿಕೆ. ಖಾದಿಯೇ ಸ್ವರಾಜ್ಯದ ಬೀಗದ ಕೈ ನಮಗೆ ಸಾಕಷ್ಟು ಬಲಬಂದಾಗ ಮಾತ್ರ ನಾವು ಕಾಯಿದೆ ಭಂಗ ಚಳವಳ ಹೂಡಬೇಕು ಅದು ನನ್ನ ಧರ್ಮವಾಗಿ ಅನಿವಾರ್ಯವಾಗ ಬೇಕು. ಎಂದು ಹೇಳಿದರು."

ಬಿಕ್ಕಟ್ಟು ಬೇಗನೆ ಕೊನೆಹೊಂದುವುದು

ಸಂಯುಕ್ತ ಪ್ರಾಂತದಜಿಲ್ಲಾ ಬೋರ್ಡ್‌ಗಳ ಪರಿಷತ್ತು ದಶಂಬರ ತಾ. 26 ರಲ್ಲು ಬುಡೋನಿನಲ್ಲಿ ನಡೆಯಿತು. ಈ ಪರಿಷತ್ತಿಗೆ ಗವರ್ನರರು ಸಂದೇಶವೀಯುವಾಗ ಪ್ರಕೃತದ ಬಿಕ್ಕಟ್ಟು ಬೇಗನೆ ಕೊನೆಗೊಂಡು, ಪ್ರಜಾಜವಾಬ್ದಾರಿ ಮಂತ್ರಿಗಳು ಪುನಃ ಆಡಳಿತ ನಡಿಸುವಂತಾಗುವುದೆಂದುತಾನು ಹಾರೈಸುತ್ತೇನೆಂದು ಹೇಳಿರುವರು.

ಜಿನ್ನರಿಗೆ ಪಟೇಲರ ಉತ್ತರ

ದಶಂಬರ ತಾ. 26ರಲ್ಲು ಬೊಂಬಾಯಿಯ ಕಾಂಗ್ರೆಸು ಎಸೆಂಬ್ಲಿ ಪಕ್ಷದ ಸಭೆಯು ಬೊಂಬಾಯಿಯಲ್ಲಿ ನಡೆದು ಕಾಂಗ್ರೆಸ್ ಎಸೆಂಬ್ಲಿ ಮೆಂಬರರೆಲ್ಲಾ ತಮ್ಮ ತಮ್ಮ ಜಿಲ್ಲೆಗಳಿಗೆ ಹೋಗಿ ಪ್ರಚಾರಕಾರ್ಯ ಕೈಕೊಳ್ಳಬೇಕೆಂದು ನಿರ್ಧರಿಸಲಾಯಿತು. ಈ ಸಂದರ್ಭದಲ್ಲಿ ಸರ್ದಾರ್ ವಲ್ಲಭಾಯಿ ಪಟೇಲರು ಒಂದು ಘಂಟೆ ಮಾತನಾಡಿ ಮಿ.ಜಿನ್ನಾರಿಗೆ ಸರಿಯಾದ ಉತ್ತರವಿತ್ತಿರುವರು. ಕಾಂಗ್ರೆಸ್ ಮಂತ್ರಿಗಳು ಅಧಿಕಾರದಿಂದ ಹೊರಗೋಡಿಸಲ್ಪಟ್ಟಿರುವರೆಂಬಂತೆ ಮುಸ್ಲೀಮ್ ಲೀಗಿನವರು ಮುಸಲ್ಮಾನ ವಿಮೋಚನಾದಿನಾಚರಣೆ ಮಾಡಿರುವರು. ಮನಸ್ಸಿದ್ದರೆ ಕಾಂಗ್ರೆಸು ಮಂತ್ರಿಗಳು ಈಗಲೇ ಪುನಃ ಅಧಿಕಾರಕ್ಕೆ ಬರಬಹುದು. ಒಂದುವೇಳೆ ಕಾಂಗ್ರೆಸಿನವರು ಪುನಃ ಅಧಿಕಾರಕ್ಕೆ ಬರುವಂತಾದರೆ ಮಿ. ಜಿನ್ನರು ಏನು ಮಾಡುವರೋ? ಮೂರನೇ ಪಕ್ಷವೊಂದು ನಮ್ಮ ನಡುವೆ ಇರುವಷ್ಟರವರೆಗೆ ಅಲ್ಪ ಸಂಖ್ಯಾಕ ಪ್ರಶ್ನೆಯನ್ನು ರಾಜಿಯಿಂದ ತೀರ್ಮಾನಿಸಲು ಸಾಧ್ಯವಿಲ್ಲ. ಅಲಹಾಬಾದಿನಲ್ಲಿ ಐಕ್ಯ ಪರಿಷತ್ತಿನಲ್ಲಿ ಸರ್. ಸಾಮುವೆಲ್ ಹೋರರು ಮುಸಲ್ಮಾನರನ್ನು ಹಿಂದುಗಳ ವಿರೋಧವಾಗಿ ಎತ್ತಿಕಟ್ಟಿದ್ದರು ಹಿಂದುದೇಶದಲ್ಲಿ ಉಂಟಾಗಬಹುದಾದ ಅಂತಃ ಕಲಹದ ಅಪಾಯದ ಬೆದರಿಕೆಗಳಿಗಾಗಿ ನಾವು ನಮ್ಮ ತತ್ವಗಳನ್ನು ಬಿಟ್ಟುಹಾಕುವಹಾಗಿಲ್ಲ.

ಮುಸ್ಲಿಮ್ ಲೀಗಿನವರಿಗೆ ಬೇಕಾದುದಾದರೂ ಏನೆಂದು ತಿಳಿಯುವುದಿಲ್ಲ. ಕಾಂಗ್ರೆಸು ಅದನ್ನೊಲಿಸಿಕೊಳ್ಳಲು ಪ್ರಯತ್ನಿಸಿದಷ್ಟು ಸಲ ನಿರಾಶೆ ಹೊಂದಿದೆ. ಪಂಡಿತ ಮಾಲವೀಯರ ಕೇಳಿಕೆಯನ್ನು ಕೂಡಾ ಮನ್ನಿಸದೆ ಕಾಂಗ್ರೆಸು ಜಾತೀಯ ಎವಾರ್ಡನ್ನು ಮನ್ನಿಸಿದೆ. ಕಾಂಗ್ರೆಸಿನ ಸೂಚನೆಗಳನ್ನೆಲ್ಲಾ ಮುಸ್ಲಿಮ್ ಲೀಗು ನಿರಾಕರಿಸಿದೆ. ಆದರೆ ತಾನಾವ ಸೂಚನೆಯನ್ನೂ ಮಾಡಿಲ್ಲ. ಸಂಯುಕ್ತ ಮಂತ್ರಿಮಂಡಲಗಳನ್ನು ಸ್ಥಾಪಿಸಬೇಕೆಂದು ಕೆಲವರ ಸೂಚನೆ. ಯಾವ ಶರ್ತಗಳಿಂದ ಮತ್ತು ಯಾರೊಡನೆ? ಮುಸ್ಲಿಮ್ ಲೀಗು ಆ ಕುರಿತೇನಾದರೂ ಹೇಳಿದುದಿದೆಯೆ? ಮುಸ್ಲಿಮ್ ಲೀಗನ್ನು ಹಿಂದೀ ಮುಸಲ್ಮಾನರ ಏಕ ಮಾತ್ರ ಪ್ರತಿನಿಧಿ ಸಂಸ್ಥೆಯಾಗಿ ಕಾಂಗ್ರೆಸು ಸ್ವೀಕರಿಸಬೇಕೆಂದು ಮಿ. ಜಿನ್ನರ ಛಲ. ಕಾಂಗ್ರೆಸು ಹಾಗೆ ಮಾಡಿದರೆ ಉತ್ತರದ ಪಠಾಣರನ್ನು ಕೈ ಬಿಟ್ಟು ಹಾಕಿದ ಹಾಗಾಗುವುದು. 3 ಕೋಟಿ ಶೀಯರನ್ನು ಮೂಲೆಗೊತ್ತಿದ ಹಾಗಾಗುವುದು. ಮೌಲಾನ ಅಬುಲ್ ಕಲಮ್ ಆಜದರಂತ ಕಾಂಗ್ರೆಸ್ ಮುಸಲ್ಮಾನರಿಗೆ ವಿದ್ರೋಹಗೈದ ಹಾಗಾಗುವುದು. ಮಿ ಜಿನ್ನರನ್ನು ತೃಪ್ತಿಪಡಿಸಲಿಕ್ಕಾಗಿ ಕಾಂಗ್ರೆಸು ತನ್ನ ತತ್ವಗಳನ್ನು ಬಲಿಯಿತ್ತು ಆತ್ಮಘಾತ ಮಾಡಿಕೊಳ್ಳಲು ಸಾಧ್ಯವಿಲ್ಲ" ಎಂದೇ ಸರ್ದಾರ್ ಪಟೇಲರ ಸ್ಪಷ್ಟೋಕ್ತಿ.

ಸರ್ದಾರ್ ವಲ್ಲಭಾಯಿ ಪಟೇಲ್

ಮುಸ್ಲಿಮ್ ಪೀರರ ಉದಾತ್ತ ಮಾದರಿ

ಇಡೀ ಹಿಂದೂದೇಶದಲ್ಲಿ ಸುಮಾರು ಒಂದು ಮಿಲ್ಯ ಅನುಯಾಯಿಗಳಿರುವ ಸಿಂಧಿನ ಪೀರ್ ಪರಾಗೋ ಎಂಬವರು ಹಿಂದೂ ಮುಸಲ್ಮಾನ ಐಕ್ಯಕ್ಕಾಗಿ ಬಹಳ ಪ್ರಯತ್ನ ನಡಿಸುತ್ತಿರುವರು. ಮಿ. ಜಿನ್ನ

(ಪುಟ ೬ಕ್ಕೆ ಮುಂದುವರಿದಿದೆ.)

ಹೊಸ ವರ್ಷದ ಅಭಿವಂದನೆ

ನಮ್ಮ ಎಲ್ಲಾ
ಪೊಲಿಸಿದಾರರಿಗೂ ಏಜಂಟರಿಗೂ ಹಿತಚಿಂತಕರಿಗೂ

ನವ ವರ್ಷವು

ಆನಂದದಾಯಕವಾಗಿಯೂ
ಅಭಿವೃದ್ಧಿಕರವಾಗಿಯೂ
ಪರಿಣಮಿಸಲೆಂದು

ನಾವು
ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್,
ಮದ್ರಾಸು ಶಾಖಾ ಕಾರ್ಯದರ್ಶಿಗಳು,

ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ,
ಲಿಮಿಟೆಡ್,
ಬೊಂಬಾಯಿ ಲ್ಯಾಫ್ ಬಿಲ್ಡಿಂಗ್,
ಸರ್ ಲಲ್ಲೂಭಾಯಿ ಸಾಮಲ್ದಾಸ್ ರೋಡ್,
ಗಾಂಧಿನಗರ, ಉಡುಪಿ.

ಹೀಗೆಯೇ ಯುದ್ಧ ನಡೆದರೆ ಹೇಗೆ——?

ಯುದ್ಧದ ಭವಿಷ್ಯವಾದರೂ ಏನು? ಮುತ್ತಿಗೆಯು ಜಯಶೀಲವಾಗಬಹುದೇ? ಜರ್ಮನಿಯಲ್ಲಿ ಕ್ರಾಂತಿಯೇಳಬಹುದೇ? ತಟಸ್ಥ ರಾಷ್ಟ್ರಗಳು ಮಧ್ಯಸ್ಥಿಕೆ ಮಾಡಬಹುದೇ?

ಇತಿಹಾಸದಲ್ಲೇ ವಿಚಿತ್ರವಾದ ಯುದ್ಧವಿದು. ಮೂರು ವಾರಗಳೊಳಗೆ ಪೋಲರು ಪತನ ಹೊಂದಿದರು. ಆದರೆ ಅವರಿಗಾಗಿ ತೊಡಲ್ಪಟ್ಟಿರುವ ಪಶ್ಚಿಮ ರಣರಂಗದ ಯುದ್ಧವು ಇನ್ನೂ ಆರಂಭವಾಗಿಲ್ಲೆಂದೇ ಹೇಳಬಹುದು. ಸಮಬಲರಾದ ಜಟ್ಟಿಗಳಿಬ್ಬರು ಒಬ್ಬರಮೇಲೊಬ್ಬರು ಮೊದಲು ಕೈಮಾಡಲು ಹೆದರುವಂತೆ ವರ್ತಿಸುತ್ತಿದ್ದಾರೆ ಇತ್ತಂಡದವರೂ. ಮೆಗಿನೊ ಟ್ ಅಥವಾ ಸಿಗ್‌ಫ್ರಿಡ್ ಕೋಟೆಗಳನ್ನು ಮುರಿಯಲೆತ್ನಿಸುವುದೆಂದರೆ ಸೇನೆಯ ದೊಡ್ಡ ಭಾಗದ ನಾಶ ನಿಶ್ಚಯ. ಆದರೂ ವಿಜಯವು ಸಂದೇಹಕರ.

ಹಲವು ವರ್ಷಗಳ ವಿಜ್ಞಾನ ಶೋಧ ಮತ್ತು ಅತುಲ ಧನವ್ಯಯದಿಂದ ಇತ್ತಂಡದವರೂ ಸಿದ್ಧಗೊಳಿಸಿರುವ ವಿಮಾನಪಡೆಯು ದೊಡ್ಡ ಹೋರಾಟ ನಡೆಸಲು ಹಿಂಜರಿಯುತ್ತದೆ. ಆಗಾಗ ಚಿಕ್ಕಪುಟ್ಟ ಧಾಳಿಗಳು ಮಾತ್ರ ನಡೆಸಲ್ಪಡುತ್ತಿವೆ.

ಇಂದೀಗ ಯುದ್ಧವು ಮುತ್ತಿಗೆ ಯುಕ್ತಿಗಳಲ್ಲಿನ ಪ್ರತಿಸ್ಪರ್ಧೆ ಮಾತ್ರವೆಂಬರೆ ತಪ್ಪಾಗದು. ಸಂದೇಹಗೊಂಡು ದಂಡೆಯಲ್ಲಿ ಕುಳಿತು ಕಾಯುವ ಈ ರೀತಿಯ ಯುದ್ಧವು ಎಷ್ಟು ಸಮಯ ನಡೆಯುವುದು? ಮಿತ್ರ ರಾಷ್ಟ್ರಗಳ ಸಮರಾಧಿಕಾರಿಗಳ ಮನೋವೃತ್ತಿಯನ್ನು ನೋಡಿದರೆ, ಈ ರೀತಿಯ ಸಮರವೇ ಅನಿಶ್ಚಿತ ಕಾಲದ ವರೆಗೆ ಮುಂದುವರಿಸಲ್ಪಡುವಂತೆ ತೋರುತ್ತದೆ. ಈ ರಕ್ಷಣಾ ಪ್ರಯುಕ್ತಿಯನ್ನು ಅವರಿಗೆ ಥಕ್ಕನೆ ಬದಲಾಯಿಸಲು ಸಾಧ್ಯವಿಲ್ಲ. ಧೈರ್ಯ, ಸ್ಥೈರ್ಯ, ತರಬೇತಿ ಮತ್ತು ಸಿದ್ಧತೆಗಳಲ್ಲಿ ಬಹುತೇಕ ಸಮಬಲರಾಗಿರುವ ಸೇನೆಗಳು ಒಂದರ ಮೇಲೊಂದು ಏರಿ ಹೋಗುವುದು ಅಪಾಯಕರ. ಸೈನಿಕ ಬಲದಲ್ಲಾಗಲಿ, ವಿಮಾನಪಡೆಯಲ್ಲಾಗಲಿ ಮಿತ್ರರಾಷ್ಟ್ರಗಳು ಜರ್ಮನಿಗಿಂತ ಶ್ರೇಷ್ಠತೆಯನ್ನೇನೂ ಪಡೆದಿಲ್ಲ. ಆದುದರಿಂದ ಅವರೇನೂ ದುಡುಕುವ ಹಾಗಿಲ್ಲ. ಆ ಅವಸರವೂ ಅವರಿಗಿಲ್ಲ. ಆದರೆ ಜರ್ಮನಿಯು ಸ್ವಿಟ್ಸರ್ಲೆಂಡ್ ಅಥವಾ ಹೊಲ್ಲೆಂಡಿನ ಮೂಲಕ ಫ್ರಾನ್ಸಿನ ಮೇಲೇರಿ ಹೋಗಿ ತನ್ನ ಸರ್ವ ಸೇನಾಶಕ್ತಿಯನ್ನೂ ಉಪಯೋಗಿಸಿ ಫ್ರಾನ್ಸನ್ನು ಸದೆಬಡಿಯುವ ಸಾಹಸ ನಡಿಸಬಹುದು. ಇಲ್ಲವೆ ಹಿಂದುಮುಂದು ಯೋಚಿಸದೆ ತನ್ನ ಸಹಸ್ರಗಟ್ಟಲೆ ವಿಮಾನಗಳನ್ನೆಲ್ಲಾ ಬ್ರಿಟನಿನ ಮೇಲೆ ಒಮ್ಮೆಯೇ ನಡಿಸಿ ಧಾಳಿಯಿಡಲು ದುಡುಕಬಹುದು. ಆದರೆ ಜರ್ಮನಿಯು ಇಂತಹ ಅಪಾಯಕರ ಸಾಹಸಕ್ಕೆ ಕೈಯಿಕ್ಕಲಾರದು. ಹಾಗದು ಮಾಡಿದರೆ ಅದನ್ನು ತಡೆಗಟ್ಟುವಷ್ಟರ ರಕ್ಷಣಾ ಭದ್ರತೆಗಳನ್ನು ಹೊಂಗಿವೆ ಬ್ರಿಟನ್ ಮತ್ತು ಫ್ರಾನ್ಸುಗಳು.

ಜರ್ಮನಿಯು ದುಡುಕದೆ ಸುಮ್ಮನಿದ್ದುಬಿಟ್ಟರೆ ಮಿತ್ರ ರಾಷ್ಟ್ರಗಳು ಹಿಟ್ಲರ್ ಶಾಹಿಯನ್ನು ನಾಶಮಾಡಿ ಪೋಲರನ್ನು ಮತ್ತು ಜೆಕ್ಕರನ್ನು ಸ್ವತಂತ್ರವಾಗಿ ಮಾಡುವುದಾದರೂ ಹೇಗೆ? ಅದಕ್ಕೆ ನವ ಜರ್ಮನಿ ಮತ್ತು ನವ ಯುರೋಪಿನ ನಿರ್ಮಾಣವಾಗಬೇಕು. ಅದನ್ನು ಸಾಧಿಸುವುದಾದರೂ ಹೇಗೆ? ಮಿತ್ರ ರಾಷ್ಟ್ರಗಳು ಜರ್ಮನಿಯ ಮೇಲೇರಿ ಹೋಗದಿದ್ದಲ್ಲಿ ಇತರ ಮೂರು ದಾರಿಗಳಿವೆ ಅದಕ್ಕೆ. 1. ಮುತ್ತಿಗೆ ಮತ್ತು ಅದರ ಪರಿಣಾಮರೂಪವಾಗಿ ಉಂಟಾಗುವ ಸಂಕಷ್ಟಗಳ ಮೂಲಕ. ಇದಕ್ಕೆ ಬಹಳ ದೀರ್ಘ ಕಾಲ ಬೇಕು. 2. ಜರ್ಮನಿಯಲ್ಲಿ ಕ್ರಾಂತಿಯೇಳುವುದರಿಂದ. ಇದು ಕೂಡಾ ಶೀಘ್ರ ಸಂಭವನೀಯವಲ್ಲ. 3 ದೊಡ್ಡ ತಟಸ್ಥ ರಾಷ್ಟ್ರಗಳ ಮಧ್ಯಸ್ಥಿಕೆಯಿಂದ. ಇದೂ ನಿಶ್ಚಯದ ಸಂಗತಿಯಲ್ಲ.

ಮಿತ್ರರಾಷ್ಟ್ರಗಳು ತಮ್ಮ ಮನೋವೃತ್ತಿ ಬದಲಿಸಬೇಕು.

ಮಿತ್ರರಾಷ್ಟ್ರಗಳು ಕೇವಲ ಮುತ್ತಿಗೆಯ ಮೇಲೆ ಹೊಂದಿಕೊಂಡಿದ್ದರೆ ಅವರ ಉದ್ದೇಶವು ನೆರವೇರುವುದಾದರೂ ಯಾವಾಗೆಂದು ಹೇಳಬರುವುದಿಲ್ಲ. ಇಟೆಲಿ ಮತ್ತು ಭೂಮಧ್ಯಸಾಗರದ ಹಾದಿಯು ತೆರೆದಿದೆ. ಮುಸಲೋನಿಯವರ ಕುರಿತು ಬ್ರಿಟನೂ ಫ್ರಾನ್ಸೂ ಈಗ ಸುಮನಸ್ಸುಳ್ಳವಾಗಿವೆ. ಆದರೆ ಭೂಮಧ್ಯಸಾಗರವನ್ನು ಮುಚ್ಚದೆ ಮುತ್ತಿಗೆಯು ಸಂಪೂರ್ಣ ಜಯಶೀಲವಾಗುವ ಹಾಗಿಲ್ಲ. ಇದು ಹೊರತು ನಾರ್ವೆ, ಪೋಲೆಂಡ್ ಮತ್ತು ಡೆನ್ಯೂಬ್ ನದಿಯ ಪ್ರದೇಶಗಳಿಂದ ಆಹಾರ ಸಾಮಗ್ರಿಗಳನ್ನು ಒದಗಿಸಿಕೊಳ್ಳಬಹುದು. ಪೆಟ್ರೋಲನ್ನು ರುಮೇನಿಯದಿಂದಲೂ ರಶ್ಯದಿಂದಲೂ ತರಿಸಿಕೊಳ್ಳಬಹುದು.

ರಶ್ಯವು ಫಿನ್ಲೆಂಡನ್ನು ಗೆದ್ದರೆ ಸ್ವೀಡನ್ ನೋರ್ವೆ ಮತ್ತು ಡೆನ್ಮಾರ್ಕುಗಳು ರಶ್ಯ ಮತ್ತು ಜರ್ಮನಿಗಳೊಡನೆ ಒಪ್ಪಂದ ಮಾಡಿಕೊಳ್ಳಲೇ ಬೇಕಾಗುವುದು. ಸ್ವಲ್ಪ ಸಮಯ ತಾಗಿದರೂ ಫಿನ್ಲೆಂಡನ್ನು ರಶ್ಯವು ಗೆಲ್ಲುವುದಂತೂ ನಿಶ್ಚಯ. ಅಂದ ಮೇಲೆ ರಶ್ಯ ಮತ್ತು ಇಡೀ ಉತ್ತರ ನ ಪೂರ್ವ ಯುರೋಪಿನ ರಾಜ್ಯಗಳೊಡನೆ ಜರ್ಮನಿಯು ವ್ಯಾಪಾರ ವಹಿವಾಟು ನಡಿಸಿ ತನಗೆ ಬೇಕಾದ ಸಾಮಗ್ರಿಗಳನ್ನು ಅವುಗಳಿಂದ ಪಡೆಯಬಹುದು. ಇದು ಹೊರತು ಆದು ದೊಡ್ಡ ಯುದ್ಧವನ್ನೇನದಿ ಸುವ ಗೊಡವೆಗೆ ಹೋಗದೆ ರಕ್ಷಣೆಯ ಭದ್ರತೆಯಲ್ಲೇ ನಿರತವಾದರೆ ಅದಕ್ಕೆ ಹೆಚ್ಚಿನ ಪೆಟ್ರೋಲು, ಲೋಹ ಮೊದಲಾದ ಸಾಮಗ್ರಿಗಳೇನೂ ಬೇಕಾಗಲಾರವು. ಸಮುದ್ರ ಮುತ್ತಿಗೆಯಿಂದ ಜರ್ಮನಿಯ ಮೇಲೆ ಅಷ್ಟೊಂದು ತೀವ್ರ ಹಾಗೂ ಪ್ರಬಲ ಪರಿಣಾಮವಾಗುವ ಹಾಗಿಲ್ಲ.

ಜರ್ಮನಿಯಲ್ಲಿ ಕ್ರಾಂತಿಯುಂಟಾಗ ಬಹುದೆಂಬ ನಿರೀಕ್ಷೆಯೂ ಬಹುತೇಕ ಬಯಲು ಭ್ರಾಂತಿಯೆಂದೇ ಹೇಳಬಹುದು. ಹಿಟ್ಲರರ ಮೇಲೆ ಜರ್ಮನ್ ಜನತೆಯ ಪ್ರೀತಿ ವಿಶ್ವಾಸವು ಸ್ಥಿರವಾಗಿರುವುದು. ಸೇನೆಗೆ ಅವರ ಮೇಲೆ ತುಂಬಾ ಅಭಿಮಾನವಿರುವುದು. ಇದು ಹೊರತು ಗೆಸ್ಟೇಪೋ ಮತ್ತು ಬ್ಲೇಕ್‌ಗಾರ್ಡ್ ದಳದವರು ಜರ್ಮನಿಯಲ್ಲಿ ಹಿಟ್ಲರರಿಗೆ ಒಂದಿಷ್ಟಾದರೂ ವಿರೋಧವೇಳ ಬಿಡುವಹಾಗಿಲ್ಲ. ಕೈಸರ್ ಮನೆತನದ ರಾಜರನ್ನು ಪುನಃ ಸಿಂಹಾಸನಾರೂಢರನ್ನಾಗಿ ಮಾಡಬೇಕೆಂಬ ಚಳವಳ ಕೂಡಾ ಮೊಳಕೆಯಲ್ಲೇ ಮುರಿದುಹೋಗಿದೆ.

ಸಂಭಾರ್ಗಾನುಸಾರ ಮುಸಲೋನಿಯವರು ಇಲ್ಲವೆ ಪ್ರೆಸಿಡೆಂಟ್ ರುಸವೆಲ್ಟರು ಮಧ್ಯಸ್ಥಿಕೆಯ ಯತ್ನಮಾಡಿ ಸಂಧಿಮಾಡುಮಸಂಭಂವವಿರುವುದು. ಅದಕ್ಕೊಪ್ಪಲು ಇತ್ತಂಡದವರೂ ಸೋತು ಸುಣ್ಣವಾಗ ಬೇಕು. ಇದಕ್ಕೆ ಕಡಿಮೆಯೆಂದರೆ ಎರಡು ಮೂರು ವರ್ಷಬೇಕು.

ರಶ್ಯದ ಧೋರಣೆಯಾದರೂ ಏನು? ಮೊದಲಾಗಿ ಸ್ಟೆಲಿನರು, ಎರಡು ರಣರಂಗಗಳಲ್ಲಿ ಯುದ್ಧವಾಗುವ ಭಯವಿಲ್ಲೆಂದು ಹಿಟ್ಲರರಿಗೆ ಅಭಯವಿತ್ತು ಶೀಘ್ರವಾಗಿ ಯುದ್ಧವಾಗುವಂತೆ ಮಾಡಿದರು. ಎರಡನೆದಾಗಿ, ತನ್ನಿಂದ ಸಾಧ್ಯವಾದ ಸಾಮಗ್ರಿಗಳನ್ನೆಲ್ಲಾ ಜರ್ಮನಿಗೊದಗಿಸಿ ಯುದ್ಧವು ಆದಷ್ಟು ದೀರ್ಘ ಕಾಲ ನಡೆಯಲೆಂದು ಬಯಸುವಂತಿದೆ. ಬಾಲ್ಟಿಕ್ ಮತ್ತು ಬಾಲ್ಕನ್ ಪ್ರದೇಶಗಳ ಮೇಲೆ ರಶ್ಯದ ಪ್ರಭಾವವನ್ನು ಬೆಳೆಸುವದೇ ಸ್ಟೆಲಿನರ ಉದ್ದೇಶವಿರುವಂತೆ ತೋರುತ್ತದೆ. ರಶ್ಯಕ್ಕೆ ಇನ್ನೂ ವ್ಯಾಪಕವಾದ ಉದ್ದೇಶವಿರಬಹುದು. ಮಿತ್ರ ರಾಷ್ಟ್ರಗಳೂ ಜರ್ಮನಿಯೂ ದೀರ್ಘ ಕಾಲದ ಯುದ್ಧದಿಂದ ಸೋತಾಗ, ಜರ್ಮನಿಯಲ್ಲಿ ಮತ್ತು ಇತರ ಕಡೆಗಳಲ್ಲಿ ಕಮ್ಯೂನಿಸ್ಟ್ ಕ್ರಾಂತಿಯನ್ನೆಬ್ಬಿಸಿ ಸೋವಿಯೆಟ್ ಸ್ಥಾಪಿಸಬಹುದು. ಅದಕ್ಕೆ ಬೆಂಬಲವೀಯುವ ಆಲೋಚನೆ ಇರಬಹುದು ಸ್ಟೆಲಿನರಿಗೆ.

ಜರ್ಮನಿಗೆ ಆಹಾರ ಸಾಮಗ್ರಿಗಳು ಸಿಗದಂತೆ ಮಾಡಬೇಕೆಂದು ಮಿತ್ರ ರಾಷ್ಟ್ರಗಳು ಹಾಕಿರುವ ಮುತ್ತಿಗೆಯನ್ನು ರಶ್ಯವು ನಿರರ್ಥಕಗೊಳಿಸುವುದೆನ್ನಬಹುದು. 9 ತಿಂಗಳೊಳಗೆ ಒಂದು ಮಿಲ್ಯ ಟನ್ನು ಗೋಧಿ ಮತ್ತು ಕಡಲೆ ಮೊದಲಾದುವನ್ನು ರಶ್ಯವು ಜರ್ಮನಿಗೆ ಒದಗಿಸಲಿದೆ. ಇದರಿಂದಾಗಿ ಜರ್ಮನರು ಉಪವಾಸಬೀಳುವಂತೆ ಮಾಡಲು ಎಷ್ಟರಮಟ್ಟಿಗೆ ಸಾಧ್ಯವೆನ್ನಲಾಗುವುದಿಲ್ಲ. ಉಪವಾಸಬೀಳುವಂತೆ ಮುತ್ತಿಗೆಯ ಪ್ರಯತ್ನಮಾಡಿ ಜಯಶೀಲವಾಗದಿದ್ದರೆ ಮಿತ್ರ ರಾಷ್ಟ್ರಗಳನ್ನು ಜರ್ಮನ್ ಜನತೆಯು ಮತ್ತಷ್ಟು ದ್ವೇಷಿಸುವಂತಾಗುವುದು, ತಮಗೆ ಆಹಾರವೀಯುವ ರಶ್ಯದ ಕುರಿತವರು ಅಭಿಮಾನತಾಳುವಂತಾಗುವುದು. ರಶ್ಯವು ಜರ್ಮನಿಗೆ ಎಂತಹ ಸಹಾಯವನ್ನೆಲ್ಲಾ ಮಾಡಬಹುದೆಂದು ಹೇಳಬರುವುದಿಲ್ಲ.

(ಇಂಗ್ಲೀಷ ಪತ್ರಿಕೆಯಿಂದ ಸಂಗ್ರಹಿಸಿದುದು)

NO WAR SCARE NO RISE IN PRICE

X'Mas Grand Reduction Sale.

Strong & Durable
Accurate
Time Keepers

All Swiss Made
GUARANTEED
Lever WATCHES



No 416 Chromium Case Rs 8—10
No 417 Golden Case Rs 6—6
No 417 R Rolledgold 10yrs
Jewelled Mov Rs 12—8



ROUND OR CUSHION
No 401 Chromium Case Rs 3—12
No 402 Golden Case Rs. 4— 8



No 421 Chromium Case Rs 7— 8
No 422 Golden Case Rs 8 4
No 125 L Rolledgold 10yrs 13 8

No 435 Chromium Case Rs 12—0
No. 436 Rolledgold 10yrs Rs 16—8

As. 3/- Extra for Postage
For further particulars send for our new cat.
(Correspondance in English)
BAPALAL & CO.
101 Abdul Rehman Street,
BOMBAY, 3.

LADIES MINIATURES



Geneva Movement.
No 160 Chromium Case Rs 10—8
No 461 Golden Case Rs 13—0
No 462 Rolledgold 10yrs Rs. 15—0

೪ನೇ ಪುಟದಿಂದ ಮುಂದರಿಸಿದ್ದು

ರ ಗೋರಿಣಂಯನ್ನವರು ಪ್ರಬಲವಾಗಿ ವಿರೋಧಿಸಿರುವರು ಹಿಂದೂ ಮುಸಲ್ಮಾನ ಐಕ್ಯ ಸಾಧನೆಗಾಗಿ ತನ್ನ ಅನುಯಾಯಿಗಳೆಲ್ಲಾ ದನದ ಮಾಂಸ ತಿನ್ನಬಾರದೆಂದು ಪಾಟ್ಲೆ ಘೋಷಿಸಿದ್ದರು ಈಗ ಪುನಹ ತನ್ನ ಅನುಯಾಯಿಗಳು, ಮದ್ಯಪಾನ ವರ್ಜ ಮಾಡಬೇಕು, ದುಂದುವ್ಯಯ ನಿಲ್ಲಿಸಬೇಕು, ಧಾರ್ಮಿಕ ಜೀವನ ನಡಿಸಿ ಹಿಂದೂ ಮುಸಲ್ಮಾನ ಐಕ್ಯಕ್ಕಾಗಿ ದುಡಿಯಬೇಕೆಂದು ಆಜ್ಞೆ ಯಿತ್ತಿರುವರು

ಜರ್ಮನಿಯ ಸಾಂಪತ್ತಿಕ ದುಃಸ್ಥಿತಿ

ಇತ್ತಲಾಗಿ ಜರ್ಮನಿಯನ್ನು ಬಿಟ್ಟೋಡಿ ಒಂದಿರುವ ಜರ್ಮನ್ ಭಂಡವಾಳಗಾರ ಧೀರರಾದ ಹರ್ ಅಗಸ್ಟ್ ಥೈಸನರು ಈಗ ಸ್ವಿಸರ್ಲೆಂಡಿನ ಜೊಂಜನಲ್ಲಿರುವರು. ಕಳದ 12 ವರ್ಷಗಳಲ್ಲಿ ಥೈಸೆನರ ಉಕ್ಕಿನ ಕೈಗಾರಿಕ ಕಂಪೆನಿಯವರು ನಾಝಿ ಪಕ್ಷಕ್ಕೆ 62 ಮಿಲ್ಯ ಮಾರ್ಕ್ಸ್‌ಗಳನ್ನು ಸಹಾಯಮಾಡಿದ್ದರಂತೆ ರಸ್ಯಾ ಮತ್ತು ಜರ್ಮನಿಗಳೊಳಗಣ ಒಪ್ಪಂದವನ್ನು ಥೈಸೆನರು ಪ್ರಬಲವಾಗಿ ವಿರೋಧಿಸಿ ಹಿಟ್ಲರರು ಸಿಟ್ಟುಗೊಳ್ಳಗಾದರು. ಕೂಡಲೆ ಜರ್ಮನಿ ಬಿಟ್ಟರು. ಅವರ ಸೊತ್ತುಗಳನ್ನೆಲ್ಲಾ ಸರಕಾರವು ಈಗ ಸ್ವಾಧೀನಪಡಿಸಿಕೊಂಡಿವ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಬೇಕಷ್ಟು ಕಚ್ಚಾ ಸಾಮಾನುಗಳು ಸರಬರಾಯಿ ಜರ್ಮನಿಯಲ್ಲಿಲ್ಲ ಉಕ್ಕಿನ ಬದಲಿಗೆ ಬೇರೊಂದ ಲೋಹವೀಗ ಉಪಯೋಗಿಸಲ್ಪಡುತ್ತದೆ ಸೇನೆಗೆ ಮಾತ್ರ ಇದು ಗೊತ್ತಿಲ್ಲೆಂದು ಥೈಸೆನರು ಹೇಳಿರುವರೆಂದು ಪ್ರಕಟವಾಗಿದೆ.

ಸಂಬಳ ಖಾಸಗಿ ಉಪಯೋಗಕ್ಕಿಲ್ಲ

ಕಾಂಗ್ರೆಸ್ ಎಸೆಂಬ್ಲಿ ಮೆಂಬರರು ಕೆಲವರು ತಮ್ಮ ಸಂಬಳವನ್ನು ಖಾಸಗಿಯಾಗಿ ಉಪಯೋಗಿಸುತ್ತಿರುವರೆಂಬುದು ವಿಷಾದಕರ. ಅವರದನ್ನು ಸ್ವೀಕರಿಸಬೇಕು. ಈಗ ಎಸೆಂಬ್ಲಿ ಸಭೆ ಇಲ್ಲದಿರುವುದರಿಂದ ಅವರು ತಮ್ಮ ಸಂಬಳದ ಕೆಲವಂಶವನ್ನು ಕಾಂಗ್ರೆಸ್ಸಿಗಾಗಲಿ, ಗಾಂಧಿ ಸೇವಾಸಂಘಕ್ಕಾಗಲಿ ಕೊಡಬೇಕೆಂದು ಗಾಂಧಿಜಿಯವರು ಸೂಚಿಸಿರುವರು. ಹಿಂದೂ–ಮುಸಲ್ಮಾನರು ನಿರಂತರವೂ ಹೋರಾಡಿಕೊಂಡಿರಲಾರರು. ಖಾದಿಯಂತಹ ಕೆಲಸದಲ್ಲಿ ಎರಡು ಸಮಾಜಗಳವರೂ ನಿರತರಾದರೆ ಅವರೊಳಗಣ ಭೇದವು ದೂರವಾಗುವುದು ತಾನೊಬ್ಬ ಸೇನಾನಿ, ಕಠಿಣ ಕೆಲಸವನ್ನು ಕೂಡಾ ಮಾಡಿಸುವವನು ಆದುದರಿಂದ ಹೋರಾಟಕ್ಕೆ ಆಜ್ಞೆಕೊಡುವನಕ ಎಲ್ಲರೂ ಅತ್ಯಂತ ನಿಷ್ಠೆಯಿಂದ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಬೇಕೆಂದೇ ಮಹಾತ್ಮರ ಆಗ್ರಹದ ಹೇಳಿಕೆ

ಅನಿಶ್ಚಿತ ಕಾಲದ ವರೆಗೆ ಕಾದಿರಲು ಸಾಧ್ಯವಿಲ್ಲ

'ಬ್ರಿಟಿಷ್' ಸರಕಾರದ ಉತ್ತರಕ್ಕಾಗಿ ಕಾಂಗ್ರೆಸು ಬಹಳ ಹೆಚ್ಚು ಸಮಯ ಕಾದು ದಾಯಿತು. ಅನಿಶ್ಚಿತ ಕಾಲದ ವರೆಗೆ ಕಾಯುತ್ತ ಕುಳಿತಿರಲು ಅದಕ್ಕೆ ಸಾಧ್ಯವಿಲ್ಲ. ನ್ಯಾಯವಾದ ಕಾಲಾವಧಿಯೊಳಗೆ ಬ್ರಿಟಿಷ್ ಸರಕಾರವು ಉತ್ತರಕೊಡದಿದ್ದ ಪಕ್ಷದಲ್ಲಿ ಕಾಂಗ್ರೆಸು ತನ್ನ ದಾರಿಹಿಡಿದು ಮುಂದುವರಿಯುವುದು ಮಹಾತ್ಮಗಾಂಧಿಯವರು ತನ್ನ ಮುಷ್ಟಿನಲ್ಲಿ ಲಕ್ಷಿಸದೆ ಹೋರಾಟವನ್ನು ನಡಿಸಲೊಪ್ಪಿರುವರು ಆದರೆ ಆ ಮೊದಲವರು ವಿಧಾಯಕ ಕಾರ್ಯಕ್ರಮವನ್ನು ಜಯಶೀಲರಾಗಿ ನಡಿಸುವ ಶರ್ತಹಾಕಿರುವರು ಅದನ್ನು ನಿಷ್ಠೆಯಿಂದ ಎಲ್ಲರೂ ಅನುಸರಿಸಬೇಕು. ಸಂಪೂರ್ಣ ಸ್ವಾತಂತ್ರ್ಯದಿನಾಚರಣೆಯನ್ನು ಎಲ್ಲರೂ ಉತ್ಸಾಹದಿಂದ ಆಚರಿಸಬೇಕು. ಅದು ಕಾಂಗ್ರೆಸಿನ ಬಲವನ್ನು ತೋರಿಸುತ್ತದೆಂದು ಸರ್ದಾರ್ ವಲ್ಲಭಾಯಿಯವರು ದಶಂಬರ ತಾ.28ರಲ್ಲಿ ಬೊಂಬಾಯಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು

ಪೋಪ್ ಸಾಹೇಬರು ಮತ್ತು ಇಟಲಿಯ ಅರಸರು

ರೋಮನ್ ಕಥೋಲಿಕ್ ಜಗದ್ಗುರು ಪೋಪ್ ಸಾಹೇಬರಿಗೂ, ಇಟಲಿಯ ಅರಸರಿಗೂ ಕಳದ 69 ವರ್ಷಗಳಿಂದ ಇದ್ದ ಕಲಹವು ಈಗ ರಾಜಿಯಾಗಿ ಕಳೆದ ವಾರ ಇಟಲಿಯ ಅರಸರು ಯುವರಾಜರೇ ಮೊದಲಾದವರೊಂದಿಗೆ ಪೋಪರನ್ನು ಸಂದರ್ಶಿಸಿದ್ದರು ದಶಂಬರ ತಾ. 28ರಲ್ಲು ಪೋಪ್ ಸಾಹೇಬರು ತನ್ನ ಪರಿವಾರದೊಂದಿಗೆ ಹೋಗಿ ಅರಸರನ್ನು ಸಂದರ್ಶಿಸಿದರು. ಇದು ತಾ 1ಕ್ಕೆ ಪೋಪರು ಮುಸಲೋನಿಯವರಿಗೆ ಭೇಟಿಕೊಡುವರಾಗಿ ತಿಳಿದು ಬಂದಿದೆ

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	Rs	1,00,000
Subscribed & Paid up Capital	Rs	31,340
Reserves & other Funds	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK

OF SUPPLY AGENCY LIMITED,

ಝಾಂಡೂ ಮಲೇರಿಯಾ ಮಿಕ್ಶ್ಚರ್

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ ಖಾತ್ರಿಯಾದ ಸಿದ್ಧೌಷಧ

ಕ್ರಯ ಆಣೆ 0-13-0 ಮಾತ್ರ.

ಸ್ಥಳೀಯ ಏಜಂಟರು—ಸಿ. ಎ ಪೈ ಬ್ರದರ್ಸ್.

ಕಾರ್ಕಳದ ಏಜಂಟರು—ವಿ ವಿ. ಶೆಣೈ, ಕೆಮಿಸ್ಟ್ಸ್.

ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೆ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗಳಿಗೂ ಏಜನ್ಸಿಗಳಿಗೂ ಬರೆಯಿರಿ.—

ಶಿಬಿರಾನು ಅಾಜಿಕ

ದಾಮೋದರ್ ಎಂಡ್ ಕೊ,

ZANDU 78ಚೀನಾ ಬಜಾರ್ ರೋಡ್ ಜಿ. ಟಿ. ಮದರಾಸು

DAMODER & CO,.

78 China Baz.ar Road, G. T MADRAS

GET RICH AND PROSPEROUS through Simple Means upheld and pursued by Millions....... . !

WRITE NOW WITH STAMP.—

K. S. Row,

Worli, BOMBAY

1940

ನೇ ಇಸವಿಯ

ಪಾಕೆಟ್ ಡೈರಿ

ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ

ಉಡುಪಿ.

32000 ರೂಪಾಯಿಗಳು

ಸಂಪೂರ್ಣ ಸರಿಯಾದ 16 ಇನಾಮುಗಳೊಳಗೆ ಹಂಚಲ್ಪಡುವುದು.

ನಮ್ಮ ಸಾಂಕೇತಿಕ ಉತ್ತರದ ಯಾವುದಾದರೊಂದು ಸಾಲಿಗೆ ಅನುಕ್ರಮವಾಗಿ ಸರಿಯಾದ ಉತ್ತರ ಕಳುಹಿಸುವ 'ಕನ್ನರ್ಸ್ ಅಪ್' ಇವರಿಗೆ ರೂ 20ರ 50 ಇನಾಮುಗಳನ್ನು ಸಮಾಧಾನಾರ್ಥವಾಗಿ ಕೊಡಲಾಗುವದು ಮುದ್ರೆ ಹಾಕಿ ಇಡಲ್ಪಟ್ಟಿರುವ ನಮ್ಮ ಉತ್ತರದ ಮೊದಲಿನ ಎರಡು ಸಮಾನಾಂತರ ಸಾಲುಗಳಿಗೆ ಅನುಕ್ರಮವಾಗಿ ಸರಿಯಾದ ಸಾಲುಗಳನ್ನು ಸೂಚಿಸುವವರಿಗೆ ರೂ 100ರ ಗ್ಯಾರಂಟಿ ಇರುವುದು ಅತಿ ಹೆಚ್ಚಿನ ಉತ್ತರ ಕಳುಹಿಸುವವರಿಗೆ ರೂ 150 ರಿಸರ್ವ್ ಮಾಡಲಾಗಿದೆ.

ಕೊಡಲ್ಪಟ್ಟಿರುವ ಚೌಕಟ್ಟಿನಲ್ಲಿ 5ರಿಂದ 20ರ ವರೆಗಣ ಅಂಕೆಗಳನ್ನು ಅಡ್ಡಕ್ಕೆ ಮತ್ತು ನೀಟಕ್ಕೆ ಪ್ರತಿಯೊಂದು ಸಾಲಿನ ಮತ್ತು ಮೂಲೆಗಳಿಂದ ಮೂಲೆಗಳಿಗೆ ಎರಡು ಸಾಲಿನ ಸಂಖ್ಯೆಗಳನ್ನು ಕೂಡಿಸಿದರೆ ದಕ್ಕ 50 ಆಗತಕ್ಕದ್ದು ಪ್ರತಿಯೊಂದು ಅಂಕೆಯೂ ಒಮ್ಮೆಯೇ ಉಪಯೋಗಿಸಲ್ಪಡಬೇಕು ಉತ್ತರ ಕಳುಹಿಸುವ ಕೊನೆಯ ತಾ 16 1 40 ಫಲಿತಾಂಶ ಪ್ರಕಟಣಾ ತಾರೀಕು 24-1-40.

ಪ್ರತಿಯೊಂದು ಉತ್ತರಕ್ಕೆ ಪ್ರವೇಶಹಾಸಲು ರೂ. 1 ಅಥವಾ 3ಕ್ಕೆ ರೂ 2 ಅಥವಾ 8ರ ಪ್ರತಿಯೊಂದು ಸಪ್ಪಿಗೆ ರೂ 5

ಕ್ರಮಗಳ — ಬಿಳಿ ಕಾಗದದಲ್ಲಿ ಸ್ಪಷ್ಟವಾಗಿ ಬರೆದು, ಅಗತ್ಯವಿದ್ದ ಪ್ರವೇಶ ಹಾಸಲಿನ ಸಮೇತವಾಗಿ ಎಷ್ಟು ಬೇಕಾದರೂ ಉತ್ತರಗಳನ್ನು ಕಳುಹಿಸಬಹುದು ಪ್ರವೇಶಹಾಸಲನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸತಕ್ಕದ್ದು ಪ್ರವೇಶಹಾಸಲು ಸಂಗ್ರಹವಾದ ಮೇರೆಗೆ ಇನಾಮುಗಳು ಬದಲಾಯಿಸಲ್ಪಡುವವು ಆದರೆ ಬೊಂಬಾಯಿಯ ಪ್ರಸಿದ್ಧವಾದ ಬೇಂಕೊಂದರಲ್ಲಿ ಡೆಪೋಸಿಟ್ ಇಡಲ್ಪಟ್ಟಿರುವ ಉತ್ತರವನ್ನು ಹೋಲುವ ಸರಿಯಾದ ಉತ್ತರ ಕಳುಹಿಸುವ ಪ್ರತಿಯೊಬ್ಬರಿಗೆ ರೂ 2000ದಷ್ಟರ ಇನಾಮಿನ ಗ್ಯಾರಂಟಿ ಇದೆ ಫಲಿತಾಂಶವನ್ನು ಪಡೆಯುವದಕ್ಕಾಗಿ ವಿಳಾಸ ಸಮೇತ ಖಾಲಿ ಕವರೊಂದನ್ನು ಸ್ಟಾಂಪು ಸಹಿತ ಲಗ್ತೀಕರಿಸತಕ್ಕದ್ದು ಮೆನೇಜರರ ನಿರ್ಣಯವೇ ಕೊನೆಯದಾಗಿ ಸಂಘವಾದುದೂ ಬಿಗಿ ಪೂರು

ಮುಮ್ಮಿ 54ರ ಹಿಂದಿನ ಸಮಸ್ಯೆಯ ಮುದ್ರೆ ಹಾಕಿ ಇಡಲ್ಪಟ್ಟ ಉತ್ತರ

1ನೇ ಸಾಲು	15,	21,	6,	12
2ನೇ ಸಾಲು	20,	8,	19,	7
3ನೇ ಸಾಲು	10,	14.	13,	17
4ನೇ ಸಾಲು	9,	11,	16,	18

ನಿಮ್ಮ ಉತ್ತರ ಮತ್ತು ಪ್ರವೇಶ ಹಾಸಲನ್ನು ಈ ಕೆಳಗಣ ವಿಳಾಸಕ್ಕೆ ಕಳುಹಿಸಿರಿ,

ದಿ ಮೆನೇಜರ್,

ಪ್ರೆಸಿಡೆನ್ಸಿ, ಕೆಮರ್ಶಿಯಲ್ ಸಿಂಡಿಕೇಟ್

ಮುಂಬಾದೇವಿ, ಬೊಂಬಾಯಿ 2.

The Manager,

Presidency, Commercial Syndicate,

Mumbadevi, BOMBAY 2.

ಒಂದು ವಾರದ ಯುದ್ಧ ವಾರ್ತೆ

(೧ನೇ ಪುಟದಿಂದ)

ತ್ತಿದ್ದಾರೆ. ಫಿನ್ನಿಶ್ ಸ್ತ್ರೀಯರೂ ಕಾದಾಡಲಾರಂಭಿಸಿರುತ್ತಾರೆ

ಫಿನ್ನರು ವಿಮಾನಗಳ ಮೂಲಕ ಕರಪತ್ರಗಳನ್ನು ಸೋವಿಯೆಟ್ ಸೈನಿಕರಲ್ಲಿ ಹಂಚಿ ಪ್ರಚಾರಮಾಡಿದ ಪರಿಣಾಮವಾಗಿ ರಸ್ಯಾನರ 10 ಯುದ್ಧ ವಿಮಾನ ಮತ್ತು ಒಂದು ಇಡೀ ಟಾಂಕಿ ದಳವು ಫಿನ್ನರಿಗೊಪ್ಪಿಸಲ್ಪಟ್ಟಿರುವವೆಂದು ಸುದ್ದಿಯುಂಟಾಗಿದೆ

ದಶಂಬರ ತಾ. ೨೮ರಲ್ಲಿ ಸುವೆಟೋ ಸರೋವರವನ್ನು ದಾಟಿದ ೨ ದಳ ಸೋವಿಯೆಟ್ ಸೈನಿಕರೊಡನೆ ಫಿನ್ನರು ಕೈ ಕೈ ಹೋರಾಟ ನಡಿಸಿ ಅವರನ್ನು ಸಂಪೂರ್ಣವಾಗಿ ನಾಶಪಡಿಸಿರುವರು. ಸುವುಸ್ಸಾಲ್ಮಿಯಲ್ಲಿ ರಸ್ಯಾನರು ದೊಡ್ಡ ಅಪಜಯ ಹೊಂದಿರುತ್ತಾರೆ ಹೆಲ್ಸಿಂಕಿ ಮತ್ತು ಕರಾವಳಿಯ ಇತರ ಪಟ್ಟಣಗಳ ಮೇಲೆ ಸೋವಿಯೆಟ್ ವಿಮಾನಗಳು ಪ್ರತಿದಿನವೂ ಧಾಳಿ ನಡಿಸುತ್ತಿವೆ ಉತ್ತರ ಸೋವಿಯೆಟ್ ಸೇನೆಯಲ್ಲಿ ಬಂಡಾಯವೆದ್ದಿದೆಯೆಂದೂ ಬಂಡಾಯಗಾರರ ಮೇಲೆ ವಿಮಾನ ಮೂಲಕ ಬೋಂಬೆಸೆಯಲ್ಪಡುತ್ತಿದೆಯೆಂದೂ, ಉತ್ತರದಲ್ಲಿ ಸೋವಿಯೆಟ್ ಸೇನೆಯ ಪ್ರಬಲ ಅಪಜಯದ ನಿಮಿತ್ತ ೩ ಮಂದಿ ಸೋವಿಯೆಟ್ ಸೇನಾ ನಾಯಕರ ತಲೆ ಕಡಿಯಲ್ಪಟ್ಟಿರುವರೆಂದೂ ಫಿನ್ಲೆಂಡಿನ ಸುದ್ದಿ. ಇಷ್ಟರ ವರೆಗೆ ಫಿನ್ನರು ಪ್ರತಿಯೊಂದು ರಣರಂಗದಲ್ಲಿಯೂ ಸೋವಿಯೆಟ್ ಸೈನಿಕರಿಗಿಂತ ಎಷ್ಟೋ ಹೆಚ್ಚಿನ ಧೈರ್ಯ ಮತ್ತು ಸ್ಥೈರ್ಯ ತೋರಿಸಿರುತ್ತಾರೆ. ಸೋವಿಯೆಟ್ ಸೈನಿಕರು ತೀವ್ರ ಚಳಿಯಿಂದ ಕಂಗೆಟ್ಟು ಹೋರಾಡುವ ಉತ್ಸಾಹವಿಲ್ಲದವರಿದ್ದಾರೆ. ಈ ವರೆಗೆ ಒಬ್ಬ ಫಿನ್ನಿಶ್ ಸೈನಿಕನಿಗೆ 40 ಮಂದಿಯಂತೆ ಸೋವಿಯೆಟ್ ಸೈನಿಕರು ಕೊಲ್ಲಲ್ಪಟ್ಟಿರುವರೆಂದೂ ಹಸರಾಗಿ ಗಾಯಗೊಂಡೆಂದೆಲ್ಲಾ ಸುಮಾರು 1 ಲಕ್ಷ ಸೋವಿಯೆಟ್ ಸೈನಿಕರನ್ನು ರಸ್ಯವು ಈ ವರೆಗೆ ಕಳೆದುಕೊಂಡಿರುವುದೆಂದೂ ಸುದ್ದಿ ಉತ್ತರದ ಸೇನೆಗೆ ಆಹಾರ ಸಾಮಾಗ್ರಿಗಳನ್ನೊಯ್ಯುವ ಒಂದೇ ಒಂದು ರೈಲ್ವೇ ರಸ್ತೆಯನ್ನು ಫಿನ್ನಿಶ್ ಸೈನಿಕರು ಕಡಿದುಹಾಕಿರುವರೆಂದು ಪ್ರಕಟವಾಗಿದೆ.

ಸ್ಕೂಲ್, ಲೈಬ್ರರಿ ಮತ್ತು ಗ್ರಾಮಪಂಚಾಯಿತಿಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ.

ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಇದೆ.

ಪಿ. ಎ. ಉಪಾಧ್ಯಾಯ,

ಬುಕ್ ಸೆಲರ್ ಅಂಡ್ ಪಬ್ಲಿಷರ್,

೪೫ ಎ ಎಸ್ ಸ್ಟ್ರೀಟ್ ಬೆಂಗಳೂರು ಸಿಟಿ

೧ ರೂ. ಕೊಡುವ ಚಂದಾದಾರರಿಗೆ ಮಾತ್ರ

ರೂ. ೩ರ ಪುಸ್ತಕಗಳು

ಈಗಲೇ] **ಉಚಿತ** [ಈ ದಿನವೇ

ಪುಸ್ತಕಗಳ ತಪಸೀಲುಪಟ್ಟಿಗೆ ಬರೆಯಿರಿ

ವ್ಯವಸ್ಥಾಪಕ - ಪಿ. ಎ. ಉಪಾಧ್ಯಾಯ

ಪೂರ್ವಗ್ರಂಥ ಪ್ರಕಾಶನ ಸಮಿತಿ,

೪೫ ಎ ಎಸ್. ಸ್ಟ್ರೀಟ್, ಬೆಂಗಳೂರು ಸಿಟಿ

ಫಿನ್ಲೆಂಡಿನ ಮೇಲೆ ಪ್ರಚಂಡ ಧಾಳಿ

ದಶಂಬರ ತಾ ೩೦ರಲ್ಲಿ ರಸ್ಯಾನರು ಫಿನ್ಲೆಂಡಿನ ಮೆನ್ನರ್‌ಹೈಮ್ ಕೋಟೆಯ ದಕ್ಷಿಣ ಮೂಲೆಯಲ್ಲಿ ಪ್ರಚಂಡ ಧಾಳಿಯನ್ನಾರಂಭಿಸಿ ದೊಡ್ಡ ಹೋರಾಟ ನಡೆಯುತ್ತಿರುವುದು. ಸೈಬೇರಿಯದಿಂದ 1,50,000 ಸೇನೆಯನ್ನು ರಸ್ಯವು ತಂದಿರುತ್ತದೆ. 2 ದಿನಗಳ ತೀವ್ರ ಹೋರಾಟದಲ್ಲಿ ಇಕ್ಕಡೆಯಲ್ಲಿಯೂ ಹೆಚ್ಚಿನ ಪ್ರಾಣಹಾನಿಯಾಗಿದೆ 3000 ಮಂದಿ ರಸ್ಯಾನರು ಕೊಲ್ಲಲ್ಪಟ್ಟಿರುವರೆಂದು ತಿಳಿದು ಬರುತ್ತದೆ.

ದಶಂಬರ ತಾ ೨೯ರಲ್ಲಿ ಉತ್ತರದಲ್ಲಿ ಪೆಟ್ರೋಲ್ ಇಲ್ಲದೆ ಇನಾರಿಸರೋವರದ ಒಳ ಇಳಿದ 7 ಸೋವಿಯೆಟ್ ವಿಮಾನಗಳನ್ನು ಫಿನ್ನರು ವಶಪಡಿಸಿಕೊಂಡಿರುವರು. ರಸ್ಯಾನರು ಇಷ್ಟರ ವರೆಗೆ ಹೆಚ್ಚಿನ ಯಾವ ಪ್ರಯೋಜನವೂ ಇಲ್ಲದೆ 300 ಟಾಂಕಿ ಮತ್ತು 260 ವಿಮಾನಗಳನ್ನು ಕಳಕೊಂಡಿರುವರೆಂದು ತಿಳಿದುಬಂದಿದೆ ಉತ್ತರ ಸೋವಿಯೆಟ್ ಸೇನಾವಲಯವಾದ ಮುರ್ಮಾನ್ಸ್ಕ ಲೆನಿನ್‌ಗ್ರಾಡ್ ರೈಲ್ವೆಯನ್ನು ಫಿನ್ನರು ಕಡಿದು ಹಾಕಿರುವರೆಂದು ಸುದ್ದಿ ಮತ್ತು ಎಲ್ಲಾ ರಣರಂಗದಲ್ಲಿ ಫಿನ್ನಿಶ್ ಸೇನೆಯು ಸೋವಿಯೆಟ್ ರಾಜ್ಯದೊಳಗೆನೇ ಹೊಕ್ಕು 53 ಮೈಲು ಮುಂದೊತ್ತಿರುವದಂತೆ. ಫಿನ್ನರು ಇಷ್ಟರವರೆಗೆ ರಸ್ಯಾನರನ್ನು ಜಯಶೀಲವಾಗಿ ತಡೆಗಟ್ಟಿ ತಮ್ಮ ಧೈರ್ಯ ಸ್ಥೈರ್ಯ ತೋರಿಸಿರುತ್ತಾರೆ ಆದರೆ ಇನ್ನು ಮುಂದೆ ಯುರೋಪಿನ ದೊಡ್ಡ ರಾಷ್ಟ್ರಗಳು ಆದಕ್ಕೆ ಬೇಗನೆ ಸಹಾಯಮಾಡಬೇಕು. ಆ ಸಹಾಯವು ಬರುವುದೆಂಬ ವಿಶ್ವಾಸವಿದೆಯೆಂದು ಫಿನ್ಲೆಂಡಿನ ಪ್ರಧಾನ ಮಂತ್ರಿಗಳು ವಿನಂತಿಮಾಡಿಕೊಂಡಿರುವರು.

NAVAYUGA
Advertisement Tariff

1 Page	Rs. 25/-	per insertion
½ „	Rs. 15/-	„ „
¼ „	Rs 8/	„ „
⅛ „	Rs 5/-	„ „

Per Single inch col. Re. 1 „
Contract rates on application
Manager-**Navayuga UDIPI.**

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ವುಂಟಾಗುತ್ತದೆ

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,

ನಳ್ ಬಜಾರ್, ಡಂಕನ್ ರೋಡ್,

ಮುಂಬಾಯಿ 4

Sorath Pharmacy,

Null Bazzar, Duncan Road,
BOMBAY 4.

ಪ್ರಕಟಣೆ

ಕಾಂಗ್ರೆಸ್ ಸದಸ್ಯರ ಸಂಖ್ಯೆ.

ಈ ವರ್ಷ ನಮ್ಮ ಪ್ರಾಂತದಲ್ಲಿ ಕೆಳಗಿನಂತೆ ಕಾಂಗ್ರೆಸ ಪ್ರಾಥಮಿಕ ಸದಸ್ಯರಾಗಿರುವರು ಜಲ್ಲಾವಾರು ಅಂಕೆಗಳು ಕೆಳಗೆ ಕೊಡಲ್ಪಟ್ಟಿವೆ

ಜಿಲ್ಲೆ	ಸದಸ್ಯತ್ವ ಸಂಖ್ಯೆ
೧ ಬೆಳಗಾವಿ	೯೯೮೨೭
೨ ಧಾರವಾಡ	೧೬೩೯೬
೩ ವಿಜಾಪುರ	೧೨೯೩೦
೪ ಕಾರವಾರ	೨೯೧೮
೫ ಮಂಗಳೂರು	೭೫೨೪
೬ ಬಳ್ಳಾರಿ	೩೩೩೯
೭ ಕೊಡಗು	೧೩೨೩
೮ ಬೆಂಗಳೂರ ದಂಡು	೯೧೧
೯ ಮೈಸೂರ	೨೨೪೨
೧೦ ಕರೂರ	೨೭೨
೧೧ ಹೈದರಾಬಾದ ಸಂಸ್ಥಾನ	೧೭೪೦
(ಕನ್ನಡ ಭಾಗ)	ಒಟ್ಟು ೭೫,೪೬೭

ಒಟ್ಟು ಸದಸ್ಯರಲ್ಲಿ ೫೯೯೫ ಸ್ತ್ರೀಯರೂ ೧೯೯೭ ಮುಸಲ್ಮಾನರೂ ಸದಸ್ಯರಿರುವರು. ಮತ್ತು ೪೭ ಮುಸಲ್ಮಾನ ಸ್ತ್ರೀಯರಿರುವರು.

ಖಾದಿಯನ್ನು ಕೊಳ್ಳುವದೆಂದರೆ ದೇಶದ ಬಡತನವನ್ನು ಕೊಲ್ಲುವುದು

ಭರತ ಖಂಡವು ಬಡತನ ಬೇಗೆಯಲ್ಲಿ ಕುದಿಯುತ್ತಿದೆ ೩೫ ಕೋಟಿ ಜನಸಂಖ್ಯೆಯಲ್ಲಿ ಸುಮಾರು ೧೦ ಕೋಟಿ ಜನರು ಅರೆಹೊಟ್ಟೆಯಿಂದ, ಬರಿಮೈಯಿಂದ ಜೀವಿಸುತ್ತಿದ್ದಾರೆ. ಹಳ್ಳಿಗಳಲ್ಲಿದ್ದ ೨೪ ಕೋಟಿ ಜನರು ವರ್ಷದಲ್ಲಿ ಸುಮಾರು ೬ ತಿಂಗಳು ನಿರುದ್ಯೋಗಿಗಳಾಗಿ ಉಳಿಯುತ್ತಾರೆ ಹೀಗೆ ಒತ್ತಾಯದ ನಿರುದ್ಯೋಗದಿಂದ ಬಡತನವೆ ಮತ್ತಷ್ಟು ಬೆಳೆಯುತ್ತಿದೆ. ಈಗ ೩೫ ಕೋಟಿ ಜನರಲ್ಲಿ ಎಷ್ಟೋ ಜನರು ಹೊಟ್ಟೆಗಾಗಿ ಕೆಟ್ಟು ಪಟ್ಟಣ ಸೇರುತ್ತಿದ್ದಾರೆ ಎಷ್ಟೋ ಭಗಿನಿಯರು ಬಡತನದಿಂದ ಕಂಗೆಟ್ಟು ತಮ್ಮ ಮಾತೃತ್ವಕ್ಕೆ ಸೇರಿದು ಉಪಜೀವನಕ್ಕಾಗಿ ದೇಹವಿಕ್ರಯಕ್ಕೆ ಕೂಡ ಸಿದ್ಧರಾದಂತಹ ಕಟು ಉದಾಹರಣೆಗಳು ಎಷ್ಟೋ ಇವೆ. ಚಿಕ್ಕ ಬಾಲಕರು ಹೊಟ್ಟೆಗಾಗಿ ತಮ್ಮ ತಾಯಿತಂದೆಗಳನ್ನಗಲಿ ಕಸ್ತುಪಡುತ್ತ ಶಿಕ್ಷಣವಿಲ್ಲದೆ ಪಶುಗಳಂತೆ ದುಡಿಯುತ್ತಿದ್ದುದನ್ನು ದಿನಾಲು ನೋಡುತ್ತೇವೆ ಇಂತಹ ಬಡತನ, ನಿರುದ್ಯೋಗಕ್ಕೆ ಮಹಾತ್ಮರು ಕಂಡು ಹಿಡಿದ ದಿವ್ಯೌಷಧವೆಂದರೆ ಖಾದಿ. ಖಾದಿಯಿಂದ ಹಳ್ಳಿಗರಿಗೆ ನಿರುದ್ಯೋಗದ ಭೀತಿಯಿಲ್ಲ. ಹೆಣ್ಣುಮಕ್ಕಳು ತಮ್ಮ ಮರ್ಯಾದೆಯನ್ನು ರಕ್ಷಿಸಿಕೊಂಡು, ತಮ್ಮ ಊರಲ್ಲಿ, ತಮ್ಮ ಮನೆಯಲ್ಲಿ ತಮ್ಮ ಕುಟುಂಬದ ಜನರೊಂದಿಗೆ ಸೇರಿ ಕೂತು ಆನಂದದಿಂದ ಚರಕವನ್ನು ತಿರುಗಿಸುತ್ತ ಉಪಜೀವನ ಸಾಗಿಸಬಹುದು. ಖಾದಿಗೆ ಮಹಾತ್ಮರು ಅಂತೆಯೇ ಅಷ್ಟು ಮಹತ್ವ ಕೊಡುವದು ಬಾಂಧವರೇ ಬಡತನದ ಬೇಗೆಯನ್ನು ಹೊಡೆದೋಡಿಸಲು ಖಾದಿಯನ್ನು ಕೊಳ್ಳಿರಿ ನಮ್ಮ ಬಾಂಧವರನ್ನೂ ನಿರುದ್ಯೋಗದಿಂದ ರಕ್ಷಿಸಿರಿ.

ನಾ| ಸು| ಹರ್ಡೀಕರ

WANTED.

Applications are invited from duly qualified registered Medical Practitioners (Allopathic) for being appointed as a special Medical Officer for prevention and control of Leprosy in the South Kanara District. The candidate will be paid at Rs (50-0-0) fifty only plus a fixed allowance of Rs (15-0-0) fifteen only per mensem The Applicants should state their qualifications, date of birth and caste or religion The applications should reach the President, District Board, South Kanara on or before 20-1-1940.

(Sd) ***K Vittal Shetty,***
President, **District Board,**
South Kanara.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್.

ಉಡುಪಿಯಲ್ಲಿ ಹೊಸತಾಗಿ ಸ್ಥಾಪನೆಯಾದ ಈ ಕಂಪೆನಿಗೆ ಪಾಲು ಭಂಡವಾಳವನ್ನು ಸಂಗ್ರಹಿಸಲು ಕಂಪೆನಿಯ ಕೆಲವು ಡೈರೆಕ್ಟರರೂ ಹಿತೈಷಿಗಳೂ ಸೇರಿ ಜಿಲ್ಲೆಯಲ್ಲೂ ಹೊರಪ್ರದೇಶದಲ್ಲೂ ಈಗಾಗಲೇ ಸಂಚರಿಸತೊಡಗಿರುವರೆಂದು ತಿಳಿದುಬರುತ್ತದೆ ಸಕಲರೂ ಹೆಚ್ಚುಹೆಚ್ಚಾಗಿ ಪಾಲುಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸದಿರರೆಂದು ನಿರೀಕ್ಷಿಸಲಾಗಿದೆ.

ಪಾಲು ಒಂದಕ್ಕೆ ರೂಪಾಯಿ 10/- ಮಾತ್ರ. ಪ್ರವೇಶ ಹಾಸಲು ರೂ. 1, (ಜುಮ್ಲಾ ರೂ 11) ಪೂರ್ತಿ ಹಣವನ್ನು ಒಮ್ಮೆಯೇ ಕೊಡಬೇಕಾಗಿದೆ ಟಪ್ಪಾಲು ಮೂಲಕ ಪಾಲುಗಳನ್ನು ಅಪೇಕ್ಷಿಸುವವರೂ, ಕಂಪೆನಿಯ ಕುರಿತು ಮಾಹಿತಿಯನ್ನು ಪಡೆಯಲಪೇಕ್ಷಿಸುವವರೂ ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಚರ್ಚ್ ರೋಡು, ಉಡುಪಿ. ಈ ವಿಳಾಸಕ್ಕೆ ಬರೆಯಬಹುದು.

ಬೊಂಬಾಯಿ

(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ 29 12-1939

ಮಂತ್ರಿಗಳೂ ಕ್ರಿಸ್‌ಮಸ್ಸೂ— ನಮ್ಮ ಕೋಂಗ್ರೆಸ ಮಂತ್ರಿಗಳು ಈ ವರ್ಷದ ಕ್ರಿಸ್‌ಮಸ್ ಸಮಯವನ್ನು ಅತ್ಯಾನಂದದಲ್ಲಿ ಕಳೆದರು ಮುಂಬಯಿಯಲ್ಲಂತೂ ಮಂತ್ರಿಗಳಿಗೆ ಭೋಜನ ಸಮಾರಂಭಗಳೇನು, ಟ್ರಿಪ್‌ಗಳೇನು ಅಂತೂ ಆನಂದ ಸಾಗರದಲ್ಲೇ ತೇಲಾಡುವಂತಾಯಿತು ಈ ಸಲದ ಕ್ರಿಸ್‌ಮಸ್ಸಿನಲ್ಲಿ ಅಹಿಂಸೆಯ ಗಾಂಧಿಜಯವರು 'ಐಕ್ಯ' 'ಐಕ್ಯ' ಎಂದು ಕೂಗುತ್ತಿರಲು ಇಡಿ ಕೋಂಗ್ರೆಸ್ ಮಂಡಲವು 'ಇದ್' 'ಕ್ರಿಸ್‌ಮಸ್' ಮೊದಲಾದ ಪರಜಾತೀಯ ಸಮಾರಂಭಗಳಲ್ಲಿ ಭಾಗವಹಿಸಿ ಐಕ್ಯವನ್ನು ಸಮಾಪಿಸುತ್ತಿರುವಂತೆ ಕಂಡು ಬರುತ್ತದೆ. ಕೋಂಗ್ರೆಸ್ ಹೌಸಿನಲ್ಲಿ ಎರಡು ಮೂರು ದಿವಸಗಳಲ್ಲಿ ಊಟೋಪಚಾರಗಳಾಯಿತು. ಅಲ್ಲಿ ಭಾಷಣ ಮಾಡುತ್ತಾ ಸರದಾರ ಪಟೇಲರವರು ಉತ್ಸಾಹ ಭರದಿಂದ ಜನವರಿ 26ಕ್ಕೆ ಬರಲಿರುವ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸರ್ವ ಜಾತಿಯರೂ ಮಿಲಿತರಾಗಬೇಕು, ಮಕ್ಕಳು ಮುದಿಗಳಂತೆ ಭೇದವಿರದೆ ಎಲ್ಲರೂ ಸತ್ಯಾಗ್ರಹ ಹೂಡಲು ಸಿದ್ಧರಿರಬೇಕೆಂದು ಸಾರುತ್ತಿರುವರು.

ಮುಂಬಯಿಯಲ್ಲಿ ಸಾಮ್ಯವಾದಿಗಳ ಚಟುವಟಿಕೆಯು ಭರದಿಂದ ಸಾಗುತ್ತಿದೆ. ಮುಂಬಯಿಯಲ್ಲಿ ಯುದ್ಧ ವಿರುದ್ಧ ಪ್ರಚಾರ ಮಾಡುವವರೆಂದರೆ ಇವರೇ ಸರಿ 'The Communist' ಎಂಬ ಪತ್ರಿಕೆಯನ್ನು ಆಗಾಗ ತೋರಿಸುತ್ತಿರುವರು ಅಲ್ಲದೆ ತಮ್ಮ ಪಾರ್ಟಿಯ ವಾರಪತ್ರಿಕೆಯಾದ 'National Front' ಎಂಬ ಅತ್ಯುತ್ತಮವಾದ ವಾರಪತ್ರಿಕೆಯನ್ನೂ ಹೊರಡಿಸಲು ಪ್ರಯತ್ನಿಸುತ್ತಿರುವರು.

ಸೋಸಿಯಲಿಸ್ಟ್ ಪಕ್ಷದ ಪ್ರೈಯನ್ಸ್ಟ ಮಾಡಿದಂತೆ ಶ್ರೀ. ಮಸಾನಿಯವರು ರಾಜನಾಮೆ ಕೊಟ್ಟಿದ್ದು ಕೆಲವರಿಗೆ ಸಂತೋಷವಾಯಿತು ಆದರೂ ಹಳೆ ಜನತೆವರನ್ನು ಬಿಟ್ಟಿಲ್ಲ. ಸತ್ಯಾಗ್ರಹಿಗಳನ್ನು ಸೇರಿಸುವ ಕಾರ್ಯವು ಭರದಿಂದ ಸಾಗುತ್ತಿದೆ ಗಾಂಧೀಜಿಯವರ್. ಸದ್ಯದಲ್ಲಿ ಸತ್ಯಾಗ್ರಹವನ್ನು ಹೂಡುವ ಯೋಚನೆಯಿಲ್ಲವೆಂದು ಪರಿಹಾರವಾಗಿ ಹೇಳುತ್ತಿರುವಾಗಲೂ ಹೀಗೆ ಸತ್ಯಾಗ್ರಹಿಗಳನ್ನು ಕೂಡಿಸುವುದರ ಅಭಿಪ್ರಾಯವೇನು?

Our Greetings & Good Wishes

to

All our Constituents, Depositors,
Shareholders & Well-wishers

for

A Happy & Prosperous New Year

The Canara Banking Corporation Limited.

(Incorporated in British India)

Estd: 1906.

ನವಯುಗ

ಉಡುಪಿ, ಗುರುವಾರ ತಾ. ೪-೧-೧೯೪೦

ಹಿಂದು ಮಹಾ ಸಭೆಯ ಅಧಿವೇಶನ

ಅಖಿಲಭಾರತ ಹಿಂದು ಮಹಾಸಭೆಯ 21ನೇ ಅಧಿವೇಶನವು ಕಲ್ಕತ್ತದಲ್ಲಿ ದಶಂಬ ತಾ. 28, 29 ಮತ್ತು 30ರಲ್ಲು ಬಹಳ ಉತ್ಸಾಹ ಮತ್ತು ವಿಜೃಂಭಣೆಯಿಂದ ಜರಗಿತು. ಅದರ ಅಧ್ಯಕ್ಷರಾದ ಶ್ರೀ. ವಿನಾಯಕ ದಾಮೋದರ ಸಾವರ್ಕರರ ಭಾಷಣದ ಸಾರಾಂಶವು ಇನ್ನೊಂದೆಡೆ ಕೊಡಲ್ಪಟ್ಟದೆ. ಈ ಅಧಿವೇಶನದಲ್ಲಿ ಸಿಖ್ಖ ಮತ್ತು ಬೌದ್ಧ ಮುಂದಾಳುಗಳೂ ಭಾಗವಹಿಸಿದ್ದರು. ಸಿಂಧ್ ಪ್ರಾಂತದ ಸುಕ್ಕೂರಿನ ಹಿಂದು ಮುಸಲ್ಮಾನ ಗಲಾಟೆಯ ಕುರಿತು ಸಿಂಧಿನ ಮಂತ್ರಿಮಂಡಲದ ದುರ್ಬಲಧೋರಣೆಯನ್ನು ನಿಷೇಧಿಸುವ, ದೇಶಹಿತವಿಘಾತುಕವಾದ ಜಾತೀಯ ಎವಾರ್ಡನ್ನು ಹಿಂತೆಗೆಯಬೇಕೆಂಬ, ಹೈದರಾಬಾದಿನ ಸತ್ಯಾಗ್ರಹವು ಜಯಶೀಲವಾಗಿ ನಡೆಸಲ್ಪಟ್ಟದ್ದಕ್ಕಾಗಿ ಸಂತೋಷ ಸೂಚಿಸಿ ಹೈದರಾಬಾದಿನ ಸುಧಾರಣೆಯು ತೀರಾ ಅತೃಪ್ತಿಕರವಾದರೂ ಅದನ್ನು ಶೀಘ್ರವಾಗಿ ಜಾರಿಗೆ ತರಬೇಕೆಂಬ, ವಾಯುವ್ಯ ಗಡಿನಾಡಿನ ಹಿಂದುಗಳ ಅವಸ್ಥೆಯ ಕುರಿತು ದುಃಖ ಸೂಚಿಸಿ ಅಲ್ಲಿಯ ಕಾಂಗ್ರೆಸ್ ಮಂತ್ರಿಗಳ ಆಡಳಿತದ ಅತೃಪ್ತಿ ಸೂಚಿಸುವ ನಿರ್ಣಯಗಳು ತಾ. 29ರಲ್ಲಿ ಮಂಜೂರಾದುವು ಆ ದಿನ 40,000ದ ವರೆಗೆ ಜನರು ನೆರೆದು ಬಂದಿದ್ದರು. ಬಂಗಾಳ ಮಂತ್ರಿ ಮಂಡಲವು ಕೇವಲ ಮುಸಲ್ಮಾನ ಪಕ್ಷಪಾತಿಯಿದ್ದು ಹೇಗೆ ಹಿಂದುಗಳ ಹಿತ ಘಾತುಕ ವರ್ತನೆಯುಳ್ಳದ್ದಾಗಿರುವುದೆಂಬುದಕ್ಕೆ 30ಉದಾಹರಣೆಗಳನ್ನಿತ್ತು ಡಾಕ್ಟರ್ ಶ್ಯಾಮ ಪ್ರಸಾದ ಮುಖರ್ಜಿಯವರು ಸಿದ್ಧಗೊಳಿಸಿ ಅವನ್ನು ತಾನು ರುಜುಪಡಿಸಲು ಸದಾ ಸಿದ್ಧನಿರುವನೆಂದು ಹೇಳಿದರು, ಮತ್ತು ಹಕ್ ಮಂತ್ರಿ ಮಂಡಲವನ್ನು ನಿಷೇಧಿಸುವ, ಅದರಲ್ಲಿರುವ ಹಿಂದೂ ಮಂತ್ರಿಗಳು ರಾಜಿನಾಮೆಕೊಡಬೇಕೆಂಬನಿರ್ಣಯಮಾಡಲಾಯಿತು. ಹಿಂದುಗಳ ಮೂಲಭೂತ ಹಕ್ಕು ಹಿಂದು ಮಹಾಸಭೆಯು ನಡಿಸಬೇಕಾದ ಸಾಮಾಜಿಕ ಕೆಲಸ ಹಿಂದು ಸಂಘಟನೆ ಮತ್ತು ಶುದ್ಧಿಯ ಕುರಿತಾದ ನಿರ್ಣಯಗಳಾದ ಮೇಲೆ ಹಿಂದುಸೇನೆಯೊಂದನ್ನು ಸಂಘಟಿಸಬೇಕೆಂದು ನಿರ್ಧರಿಸಲ್ಪಟ್ಟು 18ರಿಂದ 45 ವರ್ಷದ ಹಿಂದುಗಳೆಲ್ಲರೂ ಅದಕ್ಕೆ ಸೇರಬೇಕೆಂದು ವಿನಂತಿ ಮಾಡಿಕೊಂಡು ಈ ಸೇನೆಯನ್ನು ತಯಾರಿಸಲು ಡಾಕ್ಟರ್ ಮೂಂಜೆಯವರು ನಾಯಕರನ್ನಾಗಿ ನೇಮಿಸಲ್ಪಟ್ಟರು. ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯ ಸಾಧನೆಯ ತಮ್ಮ ಯುದ್ಧೋದ್ದೇಶವನ್ನು ಬ್ರಿಟಿಷರು ಮೊದಲಾಗಿ ಹಿಂದುದೇಶದಲ್ಲಿ ಕಾರ್ಯಕ್ಕೆ ಹಚ್ಚುವದಾವಶ್ಯವಿದೆ. ಹಿಂದೂದೇಶದ ರಕ್ಷಣೆಯ ಕುರಿತು ಬ್ರಿಟಿಷ್ ಸರಕಾರ, ಹಿಂದೂದೇಶಗಳೊಳಗೆ ಹೆಚ್ಚಿನ ಸಹಕಾರವು ಅಗತ್ಯವಾಗಿದೆ. ಅಂತಹ ಸಹಕಾರವು ಸಾಧ್ಯವಾಗುವಂತೆ ಬ್ರಿಟನು ಕೂಡಲೇ ಕೇಂದ್ರದಲ್ಲಿ ಪ್ರಜಾಜವಾಬ್ದಾರಿ ರಾಜ್ಯಭಾರವನ್ನು ಸ್ಥಾಪಿಸಬೇಕು, ಜಾತೀಯ ಎವಾರ್ಡಿನಿಂದಾಗಿ ಹಿಂದುಗಳಿಗಾಗಿರುವ ಅನ್ಯಾಯಗಳನ್ನು ನಿವಾರಿಸಬೇಕು. ಅದಷ್ಟು ಬೇಗನೆ ಹಿಂದೀ ಸೇನೆಯನ್ನು ಸಂಪೂರ್ಣವಾಗಿ ರಾಷ್ಟ್ರೀಯ ಸೇನೆಯಾಗಿ ಮಾರ್ಪಡಿಸಬೇಕು. ಶಸ್ತ್ರಸಂಬಂಧವಾದ ಕಾನೂನನ್ನು ಬದಲಾಯಿಸಿ ಟೆರಿಟೋರಿಯಲ್ ಸೇನೆ ಮತ್ತು ಯುನಿವರ್ಸಿಟಿ ಟ್ರೈನಿಂಗ್ ಸೈನಿಕದಳವನ್ನು ಸ್ಥಾಪಿಸಿ ರಕ್ಷಣೆಯ ಪ್ರತಿಯೊಂದು ಶಾಖೆಯಲ್ಲಿಯೂ ಹಿಂದೀಯರಿಗೆ ತರಬೇತಿಯನ್ನಿತ್ತು ಯಾವ ಸಂದರ್ಭದಲ್ಲಾದರೂ ದೇಶರಕ್ಷಣೆಗವರನ್ನು ಸಿದ್ಧಗೊಳಿಸಬೇಕೆಂಬ ಪ್ರಾಮುಖ್ಯ ನಿರ್ಣಯವು ಸರ್ವಸಮ್ಮತಿಯಿಂದ ಮಂಜೂರಾಯಿತು. ಸಂಪೂರ್ಣ ಸ್ವಾತಂತ್ರ್ಯವೇ ಹಿಂದೂದೇಶದ ಗುರಿಯೆನ್ನುವ ಮತ್ತು ಹಿಂದೂದೇಶದ ರಾಜಕೀಯ ಪ್ರಗತಿಯು, ಜಾತೀಯ ಪ್ರಶ್ನೆಯ ಇತ್ಯರ್ಥದ ಮೇಲೆ ಅವಲಂಬಿಸಿದೆಯೆಂಬ ವೈಸರಾಯರ ಮತ್ತು ಇಂಡಿಯಾ ಸೆಕ್ರೆಟರಿಗಳ ಹೇಳಿಕೆಗಳನ್ನು ನಿಷೇಧಿಸುವ ನಿರ್ಣಯಗಳಾದುವು. ಮುಸಲ್ಮಾನ ವಿಮೋಚನಾದಿನಾಚರಣೆಯು ಅಧಾರರಹಿತವಾದುದು. ಒಂದು ವೇಳೆ ಮುಸಲ್ಮಾನರ ಸಂಕಷ್ಟಗಳ ಕುರಿತು ವಿಚಾರಿಸಲು ರೋಯಲ್ ಕಮಿಶನು ನೇಮಿಸಲ್ಪಟ್ಟಲ್ಲಿ ಹಿಂದುಗಳ ಸಂಕಷ್ಟಗಳ ವಿಚಾರಣೆಯೂ ಆಗಬೇಕೆಂದು ಡಾಕ್ಟರ್ ಮೂಂಜೆಯವರು ತಂದ ನಿರ್ಣಯವು ಮಂಜೂರಾಯಿತು. ಪ್ರಾಂತಿಕ ಎಲ್ಲೆಗಳನ್ನು ಜನಾಂಗ ಭಾಷೆ ಸಂಸ್ಕೃತಿ ಮೊದಲಾದುವುಗಳ ನೇರಿಗೆ ರಚಿಸಬೇಕೆಂಬ ಮತ್ತು ಬರುವ ಜನಗಣತಿಯಲ್ಲಿ ಸಹಕರಿಸುವ ನಿರ್ಧಾರಮಾಡಲಾಯಿತು. ಜಪಾನ ಮತ್ತು ಚೀನಾದೇಶಗಳಿಗೆ ಸೌಹಾರ್ದಸೂಚಕ ಸಂದೇಶಗಳನ್ನು ಕಳುಹಿಸಬೇಕೆಂದು ನಿಶ್ಚೈಸಲಾಯಿತು. ಅಧಿವೇಶನ ಅಂತ್ಯದಲ್ಲಿ ಬಂಗಾಳ ಹಿಂದುಗಳಿಗೆ ಕೈಗಾರಿಗೆ ಮತ್ತು ವ್ಯಾಪಾರ ವೃತ್ತಿಗಳಲ್ಲಿ ತರಬೇತಿಮಾಡುವ ಏರ್ಪಾಡು ನಡಿಸುವರೆ ಪ್ರತಿವರ್ಷ ರೂ. 36,000 ವನ್ನು ದಾನವಾಗಿ ಕೊಡುವೆನೆಂದು ಶ್ರೀ ಜುಗಲ್ ಕಿಶೋರ್ ಬಿರ್ಲರವರು ವಾಗ್ದಾನಮಾಡಿದರು. ಸಿಂಧಿನಲ್ಲಿ ಸೈನಿಕ ತರಬೇತಿ ಕೋಲೇಜೊಂದನ್ನು ಸ್ಥಾಪಿಸಲು ರೂ. ಒಂದುಲಕ್ಷ ದಾನವನ್ನು ಕರಾಚಿಯ ವಾಸಿಯಾದ ರೈ ಬಹದೂರು ನರಮದಾಸರು ವಾಗ್ದಾನವಿತ್ತರು. ಮಹಾಸಭೆಯ ಬರುವ ಅಧಿವೇಶನವು ಮದ್ರಾಸಿನಲ್ಲಿ ಜರಗುವುದಾಗಿ ನಿಶ್ಚೈಸಲಾಯಿತು.

ಮುಸ್ಲಿಮ್ ಲೀಗ್ ಮತ್ತು ಹಿಂದೂ ಮಹಾಸಭೆ.

ಹಿಂದೂ ಮಹಾಸಭೆಯ ಇಷ್ಟೊಂದು ಜಯಶೀಲ ಅಧಿವೇಶನವು ಈ ವರೆಗೆ ಜರಗಲಿಲ್ಲೆಂದು ಅಧ್ಯಕ್ಷರೇ ಹೇಳಿರುವರು. ಇದಕ್ಕಾಗಿ ಹಿಂದೂ ಮಹಾಸಭೆಯು ಮಿ. ಜಿನ್ನರಿಗೂ ಮುಸ್ಲಿಮ್ ಲೀಗಿಗೂ ತುಂಬಾ ಆಭಾರಿಯಾಗಲೇಬೇಕು. ವಿಶಾಲ ರಾಷ್ಟ್ರೀಯ ಭಾವನೆಯಿಂದ ಹಿಂದುಗಳು ಹೆಚ್ಚಾಗಿ ಈ ವರೆಗೆ ಕಾಂಗ್ರೆಸಿಗೆ ಬೆಂಬಲವೀಯುತ್ತಾ ಬಂದಿರುವರು. ಕಾಂಗ್ರೆಸು ತನ್ನ ತತ್ವವನ್ನಾದರೂ ಬದಿಗೊತ್ತಿ ಹಿಂದುಗಳ ತೀವ್ರ ವಿರೋಧವನ್ನು ಕಡೆಗಣಿಸಿ ಪಂಡಿತ ಮಾಲವೀಯರಂತಹ ಸನ್ಮಾನ್ಯ ಮುಖಂಡರ ಸಲಹೆಗೆ ಮಾನ್ಯವೀಯದೆ ಜಾತೀಯ ಎವಾರ್ಡನ್ನೊಪ್ಪಿ ಮುಸಲ್ಮಾನ ಪಕ್ಷಪಾತಿಯಾಯಿತು. ತನ್ನಿಂದ ಸಾಧ್ಯವಾದ ಮಟ್ಟಿಗೆ ಮುಸಲ್ಮಾನರನ್ನು ಒಲಿಸಿಕೊಳ್ಳಲೆತ್ನಿಸುತ್ತಾ ಬಂದಿರುವುದು. ಆದರೆ ಕಾಂಗ್ರೆಸು ಎಷ್ಟು ತಗ್ಗಿತೋ ಅಷ್ಟೇ ಏರುತ್ತಾ ಬಂದಿದೆ ಮುಸ್ಲಿಮ್ ಲೀಗು. ಕಾಂಗ್ರೆಸಿನ ವಿನೀತತೆ ಮತ್ತು ಉದಾರತೆಯನ್ನು ಮುಸ್ಲಿಮ್ ಲೀಗಿನ ಮುಖಂಡರು ದುರ್ಬಲತೆಯೆಂದು ತೆಗೆದುಕೊಂಡು ಪ್ರಕೃತದ ಸಂದರ್ಭದಲ್ಲಿ ಅದು ತಮ್ಮನ್ನೊಲಿಸಿಕೊಳ್ಳಲು ಏನು ಬೇಕಾದರೂ ಮಾಡಲಿರುವುದೆಂಬ ಮನೋವೃತ್ತಿಯಿಂದಿದ್ದರು. ಆದರೆ ಯಾವುದಕ್ಕಾದರೂ ಅದೊಂದು ಮಿತಿಯಿದೆ. ಮಿ. ಜಿನ್ನರ ಮುಸಲ್ಮಾನ ವಿಮೋಚನಾದಿನಾಚರಣೆಯು ಕಾಂಗ್ರೆಸನ್ನು ಸಂಪೂರ್ಣವಾಗಿ ತಾಳ್ಮೆಗೆಡಿಸಿ ನಿರಾಶೆಗೊಳಿಸಿತು. ಮಿ. ಜಿನ್ನರು ಮುಸ್ಲಿಮ್ ಲೀಗಿನ ನಾಯಕರಾಗಿರುವನಕ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳೊಳಗೆ ಒಡಂಬಡಿಕೆಯಾಗುವ ಸಂಭವ ತೋರುವದಿಲ್ಲ. ದೇಶದ ಸ್ವಾತಂತ್ರ್ಯಸಾಧನೆಗಾಗಿ ಹೋರಾಡಿ ಕಾಂಗ್ರೆಸಿನೊಂದಿಗೆ ಸಹಕರಿಸಿ ಸ್ವತಂತ್ರ ಹಿಂದುಸ್ಥಾನದಲ್ಲಿ ನ್ಯಾಯವಾದ ಸ್ಥಾನವನ್ನು ಪಡೆಯುವ ಸ್ವಾಭಿಮಾನದ ಹಾದಿಯನ್ನು ಬಿಟ್ಟು ಮಿ. ಜಿನ್ನರು ಕಾಂಗ್ರೆಸಿನ ಮೇಲಿನ ಹಠದಿಂದ ಸ್ವಾತಂತ್ರ್ಯ ಚಳವಳವನ್ನೇ ತಡೆಗಟ್ಟಿ ಎಲ್ಲದಕ್ಕೂ ಮೊದಲು ಮುಸ್ಲಿಮ್ ಲೀಗಿನ ಸ್ಥಾನವನ್ನು ಬಲಪಡಿಸಿಕೊಳ್ಳುವ ಧೋರಣೆ ವಹಿಸಿರುತ್ತಾರೆ. ಬ್ರಿಟಿಷ್ ರಾಜ್ಯಭಾರದ ಸಮರ್ಥಕರಾಗಿ ಸರಕಾರದ ಕೈಗೊಂಬೆಯಂತಾಗಿದ್ದಾರೆ. ಹೀಗೆ ರಾಷ್ಟ್ರದ ಹಿತವನ್ನು ಒಂದಿಷ್ಟೂ ಪರಿಗಣಿಸದೆ ಕೇವಲ ತಮ್ಮ ಸ್ವಾರ್ಥ ಮತ್ತು ವಿಶಿಷ್ಟತರದ ಹಕ್ಕುಬಾಧ್ಯತೆಯೇ ಮುಖ್ಯವೆಂದು ಮುಸಲ್ಮಾನರು ಭಾವಿಸಿ ಕೊಟ್ಟಷ್ಟು ಮತ್ತೂ ಕೇಳುವ ಧೋರಣೆಯುಳ್ಳವರಾಗಿರುವಾಗ ಹಿಂದುಗಳಲ್ಲಿ ತಮ್ಮ ನ್ಯಾಯವಾದ ಹಕ್ಕುಬಾಧ್ಯತೆಗಳ ಕುರಿತು ಜಾಗ್ರತಿಯುಂಟಾಗುವುದು ಸ್ವಾಭಾವಿಕ. ಹಿಂದೂ ಮಹಾಸಭೆಯ ಜಯಶೀಲತೆ ಮತ್ತು ನಿರ್ಣಯಗಳು ಮುಸ್ಲಿಮ್ ಲೀಗಿನವರ ಕಣ್ಣು ತೆರೆಯಿಸದಿರಲಾರದು. ಮುಸಲ್ಮಾ...

ಮೈಸೂರು

(ನವಯುಗದ ಬಾತ್ಮೀದಾರರಿಂದ)

ಮೈಸೂರು ಜನವರಿ 2

ಅಖಿಲ ಭಾರತ ಸ್ಟ್ಯಾಟಿಸ್ಟಿಕಲ್ ಸಮ್ಮೇಳನ–ಕೊಲಂಬಿಯ ವಿಶ್ವವಿದ್ಯಾನಿಲಯದ ಪ್ರೊ|| ಹೆರಾಲ್ಡ್ ಹೊಟ್ಲಿಂಗ್‌ರವರಧ್ಯಕ್ಷತೆಯಲ್ಲಿ ಮೇಲ್ಕಂಡ ಸಮ್ಮೇಳನವು ಮೈಸೂರು ನಗರದಲ್ಲಿರುವ ಮಹಾರಾಜ ಕಾಲೇಜ್ ಕಟ್ಟಡದಲ್ಲಿ ಇದೆ ಮಾಹೆ ತಾ. 6ರಲ್ಲಿ ನಡೆಯುತ್ತ. ಆದರೀ ಸಮ್ಮೇಳನವು ಪೂರ್ವಭಾವಿಯಾಗಿ ಮದ್ರಾಸ್ ನಗರದಲ್ಲಿ ಇದೇ ಮಾಹೆ ತಾ.2ರಲ್ಲಿ ನಡೆಯುವುದನ್ನೂ ಮದ್ರಾಸ್ ಗವರ್ನರರು ಪ್ರಾರಂಭೋತ್ಸವ ನಡೆಸಿ ಭಾಷಣ ಮಾಡುವರು. ನಂತರ ಪ್ರತಿನಿಧಿಗಳೆಲ್ಲರೂ ಮೈಸೂರು ವಿಶ್ವವಿದ್ಯಾನಿಲಯದವರ ಆಹ್ವಾನದ ಮೇಲೆ ಮೈಸೂರಿಗೆ ಬಂದು ಕಾರ್ಯಕಲಾಪಗಳನ್ನು ಮುಂದುವರಿಸುವರು. ಇಡೀ ಭಾರತದಿಂದ ಸುಮಾರು ನಲ್ವತ್ತು ಮಂದಿ ಪ್ರತಿನಿಧಿಗಳು ಇದಕ್ಕೆ ಬರುತ್ತಾರೆ. ಇವರಲ್ಲಿ ಅನೇಕರು ಮುಖ್ಯರಿರುತ್ತಾರೆ. ಈ ಸಮ್ಮೇಳನದಲ್ಲಿ ಚರ್ಚಿಸಲ್ಪಡುವ ವಿಷಯುಗಳೂ ಮತ್ತು ಟ್ರೇಡ್ ಯೂನಿಯನ್ ಮುಂತಾದ ಇತರ ವಿಷಯಗಳ ಮೇಲೆ ಲೇಖನವನ್ನೋದುವರು. ಈ ಸಮ್ಮೇಳನದ ಪ್ರತಿನಿಧಿಗಳಿಗೆ ಬೃಂದಾವನದಲ್ಲೊಂದು ಸಂತೋಷಕೂಟ ಏರ್ಪಡಿಸಲಾಗಿದೆ.

ಬಹುಮಾನ ವಿನಿಯೋಗ— ಹಾಸನದಲ್ಲಿ ನಡೆಯುತ್ತಿರುವ ದನಗಳ ಜಾತ್ರೆಯಲ್ಲಿ ಬಹುಮಾನ ಪಡೆಯುವ ರಾಸುಗಳ ಮಾಲೀಕರಿಗೆ ಬಹುಮಾನ ಹಂಚುವುದನ್ನು ಇದೇ ಮಾಹೆ ತಾ. 6ರಲ್ಲಿ ಶ್ರೀ. ಪ್ರಿನ್ಸ್ ಜಯಚಾಮರಾಜ ಒಡೆಯರಧ್ಯಕ್ಷತೆ ವಹಿಸಿ ನೆರವೇರಿಸುತ್ತಾರೆ.

ಕ್ರಿಸ್ ಮಸ್ ಸಾರದಲ್ಲೇನು— ಬ್ರಿಟನ್ನಿನಲ್ಲಿ ಯುದ್ಧ ಉಂಟಾಗಿ ತೊಂದರೆ ಪಡುತ್ತಿದ್ದರೂ ಅಲ್ಲಿರುವ ಪ್ರಜೆಗಳು ಕ್ರಿಸ್‌ಮಸ್ ಹಬ್ಬ ಆಚರಿಸಿದಂತೆ ಮೈಸೂರು ಸಂಸ್ಥಾನದಲ್ಲಿರುವ ಕ್ರೈಸ್ತ ಪ್ರಜೆಗಳೆಲ್ಲರೂ ಚರ್ಚಿನಲ್ಲಿ ಪ್ರಾರ್ಥನೆ ನಡೆಸಿ ಕ್ರಿಸ್‌ಮಸ್ ಹಬ್ಬವನ್ನಾಚರಿಸಿದರು. ಮೈಸೂರು ಅರಮನೆ ಮುಂಭಾಗದಲ್ಲಿ ನವೀನ ರೀತಿಯಲ್ಲಿ ಅಂಧಕಾಸುರ ಸಂಹಾರವನ್ನೇರ್ಪಡಿಸಲಾಗಿತ್ತು. ಮೈಸೂರು ದಿವಾನ ಸರ್ ಮಿರ್ಜಾರವರು ತಮ್ಮ ಪರಿವಾರ ಮತ್ತು ಸಹೋದ್ಯೋಗಿಗಳೊಡನೆ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಸಂಚರಿಸಿ ಪ್ರಜೆಗಳ ಅವಹಾಲನ್ನು ಕೇಳಿ ಅನೇಕ ಕಟ್ಟಡಗಳ ಪ್ರಾರಂಭೋತ್ಸವ ನೆರವೇರಿಸಿದರು. ಸದ್ರಿ ದಿವಾನರು ಇದೇ ಮಾಹೆ ತಾ. 10ರಿಂದ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಾರೆ. ಮೈಸೂರು ಕಾಂಗ್ರೆಸ್ ಚಳುವಳಿ ಮುಂದುವರಿದು ಕಾಂಗ್ರೆಸ್ ಅಧ್ಯಕ್ಷ ಮತ್ತು ಇತರ ಮುಖಂಡರುಗಳು ಸಂಸ್ಥಾನದ ಕೆಲವು ಕಡೆ ಪ್ರವಾಸ ಮಾಡಿ ಕಾಂಗ್ರೆಸ್ ತತ್ವ ಸಾರಿ ಜನಜಾಗೃತಿ ಉಂಟುಮಾಡಿ ಬಂದರು. ಮೈಸೂರು ಶ್ರೀಮನ್ಮಹಾರಾಜರು ಇದೇ ಮಾಹೆ ಕೊನೆಯ ಹೊತ್ತಿಗೆ ದಾವಣಗೆರೆಗೆ ಭೇಟಿಕೊಡುವರೆಂದು ಗೊತ್ತಾಗಿದೆ. ಇಂಗ್ಲಾಂಡಿನಲ್ಲಿದ್ದ ಮೈಸೂರು ಶ್ರೀಮದ್ಯುವರಾಜರು ಈ ದಿನ ಮುಂಬೈಗೆ ಬಂದಿದ್ದಾರೆಂದೂ ಇನ್ನೆರಡು ಮೂರು ದಿನಗಳಲ್ಲೇ ಮೈಸೂರಿಗೆ ಬರುತ್ತಾರೆಂದೂ ಇಲ್ಲಿಗೆ ಸುದ್ದಿ ಬಂದಿದೆ. ಮೈಸೂರಲ್ಲಿರುವ ಮಹಿಳಾ ಸದನದಲ್ಲಿ ಮಹಿಳೆಯರಿಗೆ ಚರಕಾ ಕಲಿಕೆಗಳನ್ನು ತೆರೆದಿರುವುದು ಪ್ರಶಂಸನೀಯವಾದುದು. ಕ್ರಿಸ್‌ಮಸ್ ರಜಾ ಪ್ರಯುಕ್ತ ಈ ವರ್ಷ ಎಂದೂ ಇಲ್ಲದಷ್ಟು ಟೂರಿಸ್ಟುಗಳು ಮೈಸೂರಿಗೆ ಬಂದಿದ್ದರು.

ನೆರು ಕೇವಲ ...
ತರಾಗಿ ತಮ್ಮ ...
ಜಿತ ಬುದ್ಧಿ ...
ಧೋರಣೆ ವಹಿಸಿ ...
ಸಲು ಹಿಂದೂ ...
ರೇ ಇದ್ದಾರೆ ...
ಚಳವಳ, ...
ಇದಿರಾಡಬೇಕು ...
ಕೂಡಾ ಇನ್ನಾಗಿ ...
ಷ ತಮ್ಮ ಜನ್ಮ ...
ರಿತು ಮುಸಲ್ಮಾ ...
ಧರ್ಮಬಂಧುಗಳ ...
ದೂದೇಶವನ್ನು ...
ಹಿಂದೂದೇಶವು ...
ಜನ್ಮಭೂಮಿ, ...
ಅವರ ...
ಹಿಂದುಗಳು ...
ದ್ದಾರೆ. ಮುಸ ...
ದೃಷ್ಟಿ ಇಟ್ಟ ...
ತಮ್ಮ ...
ಹರಿಸುತ್ತಾರೆ. ...
ಬೆಳೆಯ ...
ಮಹಾಸಭೆಯ ...
ಹಾಗೂ ...
ಬಹುದು.

ಕಾಂಗ್ರೆ...

ಒಂದು ದೇ...
ನ್ನವನ್ನು ...
ಯಾವ ಧರ್ಮ...
ಇರಲಿ, ಒಂದು ...
ಷ್ಟ್ರೀಯ ಸರಕಾ...
ರೆಂಬ ಕಾಂಗ್ರೆಸ...
ತ ವಿವೇಕಪರ ...
ದಿಯಾಗಿದೆ. ...
ಪರಿಗಣಿಸುತ್ತಾ ...
ಯದಲ್ಲಿ ಅಧಿ...
ಇನ್ನು ಮುಂದೆ ...
ಕೋಟಿಯೇ ...
ಯಬೇಕಾಗಿದೆ. ...
ತೀಯ ಹಕ್ಕು ...
ಇಲ್ಲ. ಅವಿ...

ನವ...

ನೆ...
ಬರುವ ವಾರ...
ಸಂಚಿಕೆಯು ...
ಎಂಬ ವಿಶೇಷ ...
ರಡಲಿರುವುದು ...
ಸರ್ವಾಂಗ ...
ನ್ನಾಗಿ ಮಾಡಿ ...
ಚಿಕೆಯಾಗಿ ...
ಲಾಗುವುದು. ...
ವಾಗಿ ದುಡಿದ ...
ರುವ ನಮ್ಮ ...
ಕೆಲಸಗಾರರ ...
ತಾ. 18-1-...
ನಿಲ್ಲಿಸಲಾಗುವ ...
ಸಂಚಿಕೆಯು ...
ಯೊರದುವು ...
ಚಂದಾದಾರರ ...
ವಿನಂತಿ.

ಟರ್ಕಿಯಲ್ಲಿ ಭೀಕರ ಭೂಕಂಪ ಮತ್ತು ನೆರೆಹಾವಳಿ

ಫಿನ್ಲೆಂಡಿನ ಪ್ರಬಲ ವಿರೋಧ!

ಯಿಸುವಂಥವುಗಳಾಗಿವೆ. ಆದುದರಿಂದ ಮುಂದಿನ ರಾಷ್ಟ್ರ ಹಾಗೂ ಲೌಕಿಕ ರಚನೆಯ ವ್ಯವಸ್ಥೆಯಲ್ಲಿ ಜಾತಿ, ಜನಾಂಗ ಮತ್ತು ಧರ್ಮಗಳಿಗೆ ಸ್ಥಾನಕೊಡಲು ಸಾಧ್ಯವೇ ಇಲ್ಲ. ಖಾಸಗಿಯಾಗಿ ಒಬ್ಬನು ಯಾವ ಜಾತಿಗಾಗಲಿ ಧರ್ಮಕ್ಕಾಗಲೀ ಸೇರಬಹುದು. ಆದರೆ ರಾಜಕೀಯ ಮತ್ತು ಸಾರ್ವಜನಿಕವಾಗಿ ಮಾನವರೆಲ್ಲಾ ಒಂದೇ ಜಾತಿ. ಒಂದು ಭೂಗೋಲಿಕ ಪ್ರದೇಶದೊಳಗಿರುವ ಎಲ್ಲಾ ಜಾತಿ ಮತಗಳವರೂ ಒಂದು ರಾಷ್ಟ್ರವಾಗಬೇಕು. ಅವರೆಲ್ಲರ ಸಾಂಪತ್ತಿಕ ರಾಜಕೀಯ ಮತ್ತು ನಾಗರಿಕ ಹಕ್ಕುಬಾಧ್ಯತೆಗಳ ರಕ್ಷಣೆಯನ್ನು ಸರಕಾರವು ಸಮದೃಷ್ಟಿಯಿಂದ ಮಾಡಬೇಕು. ಈ ದೂರ ಹಾಗೂ ವಿಶಾಲದೃಷ್ಟಿಯಿಂದ ಉದಾತ್ತ ತತ್ವಪ್ರೇರಿತವಾಗಿ ಕಾಂಗ್ರೆಸು ಕೆಲಸಮಾಡಿಕೊಂಡುಬಂದಿರುವುದೇ ಹೊರತು ಹಿಂದುಗಳ ಅಥವಾ ಮುಸಲ್ಮಾನರ ಹಿತವನ್ನದು ಬೇರೆಂದು ಮೂಲೆಗೊತ್ತಿ ತುಳಿದು ನಡೆದಿರುವುದಿಲ್ಲ. ಸಂಕುಚಿತ ಸ್ವಾರ್ಥದ ದೃಷ್ಟಿಗೆ ಮಾತ್ರ ಹಾಗೆ ತೋರಬಹುದು.

ಅಖಿಲ ಭಾರತ ಮುಂದಗಾಮಿ ಮತ್ತು ಕ್ರೈಸ್ತ ಪರಿಷತ್ತು

ಇದೇ ತಾ. 28ರಲ್ಲಿ ಅಖಿಲಭಾರತ ಮುಂದಗಾಮಿ ಪರಿಷತ್ತು ಅಲಹಾಬಾದಿನಲ್ಲಿ ಡಾಕ್ಟರ್ ಪರಾಂಜಪೆಯವರ ಅಧ್ಯಕ್ಷತೆ ಜರಗಿತು. ಡಾಕ್ಟರ್ ಪರಾಂಜಪೆಯವರು ತನ್ನ ಭಾಷಣದಲ್ಲಿ ಹಿಂದೂದೇಶದ ಕುರಿತು ಬ್ರಿಟಿಷರ ಸಂಶಯಾತ್ಮಕ ಧೋರಣೆಯನ್ನು ಕಟುವಾಗಿ ಟೀಕಿಸಿರುವರಾದರೂ ಕಾಂಗ್ರೆಸನ್ನು ದೂಷಿಸಲು ಮರೆಯಲಿಲ್ಲ. ಯುದ್ಧದಲ್ಲಿ ಬ್ರಿಟಿಷರಿಗೆ ಸಂಪೂರ್ಣ ಮನಸ್ಸಿನಿಂದ ಸಹಾಯ ಮಾಡಬೇಕು. ಕಾಂಗ್ರೆಸು ಸೂಚಿಸುವ ಕನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯೂ ಅನ್ಯನಹಾರ್ಯ. ಹಿಂದೀ ರಾಜಕೀಯ ಪ್ರಶ್ನೆಯ ಇತ್ಯರ್ಥಕ್ಕಾಗಿ ಒಳ ಕಮಿಟಿಯೊಂದು ಆರಿಸಲ್ಪಡಬೇಕೆಂದು ಡಾಕ್ಟರ್ ಪರಾಂಜಪೆಯವರ ಸೂಚನೆ. ಈ ಪರಿಷತ್ತಿನಲ್ಲಿ ಮಂಜೂರಾದ ಗೊತ್ತುವಳಿಗಳು ಬಹುತೇಕ ಕಾಂಗ್ರೆಸಿನ ಧೋರಣೆಯನ್ನು ಸಮರ್ಥಿಸುವಂಥವುಗಳಾಗಿವೆ. ಯುದ್ಧದಲ್ಲಿ ಹಿಂದಿಯರೆಲ್ಲರ ಉತ್ಸಾಹಪರ ಬೆಂಬಲ ದೊರೆಯುವವಂತಹ ಮನೋವೃತ್ತಿಯನ್ನು ಬ್ರಿಟನು ಸೂಚಿಸಿರುವುದಿಲ್ಲ. ಅಂತಹ ಮನೋಮಾರ್ಪಾಟವನ್ನದು ತೋರಿಸಿ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನೀಯುವವಾಗ್ದಾನ ಮಾಡಬೇಕೆಂದೇ ಮುಂದಗಾಮಿಗಳ ಅಭಿಮತ. ಹಿಂದೀ ಸೇನೆಯ ಕುರಿತು ಬ್ರಿಟಿಷ್ ಸರಕಾರದ ಧೋರಣೆಯನ್ನು ಮುಂದಗಾಮಿ ಪರಿಷತ್ತಿನವರು ಪ್ರಬಲವಾಗಿ ವಿರೋಧಿಸಿ ಚೇಟ್‌ಫೀಲ್ಡ್ ರಿಪೋರ್ಟನ್ನು ನಿಷೇಧಿಸಿರುವರು. ರಾಜಕೀಯ ಪ್ರಗತಿಗೆ ಜಾತೀಯ ಪ್ರಶ್ನೆಯ ಇತ್ಯರ್ಥವನ್ನು ಪ್ರಮುಖ್ಯವೆಂದು ಸೂಚಿಸಿರುವ ವೈಸರಾಯರ ಮತ್ತು ಇಂಡಿಯಾ ಸೆಕ್ರೆಟರಿಗಳ ಸೂಚನೆಯು ಅನುಚಿತವಾದುದೆಂದು ಮುಂದಗಾಮಿಗಳ ಅಭಿಮತ. ಆದರಿಂದ ಅಲ್ಪಸಂಖ್ಯಾಕರು ಬಹುಸಂಖ್ಯಾಕರ ಮೇಲೆ ಅಧಿಕಾರ ನಡಿಸುವಂತಾಗುವುದೆಂಬುದನ್ನು ಅವರೂ ಒಪ್ಪುತ್ತಾರೆ. ದಶಂಬರ ತಾ. 27ರಲ್ಲಿ ನಾಗಪುರದಲ್ಲಿ ನಡೆದ ಅಖಿಲ ಭಾರತ ಕ್ರೈಸ್ತ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಚ್. ಸಿ. ಮುಖರ್ಜಿಯವರು ಮಾಡಿರುವ ಭಾಷಣವು ರಾಷ್ಟ್ರೀಯಭಾವನಾ ಪ್ರೇರಿತವಿದ್ದು ವಿವೇಕಪರವಾಗಿದೆ. ಜಾತೀಯ ಪ್ರಶ್ನೆಗೆ ಯಾವಾಗಲೂ ಪ್ರಾಧಾನ್ಯವಿತ್ತು ಸರಕಾರವು ಬೇಕೆಂದು ಅದನ್ನು ಹಿಂದೀಯರ ರಾಜಕೀಯ ಪ್ರಗತಿಗೆ ಅಡ್ಡ ತರುವುದೆಂಬುದನ್ನು ಕ್ರೈಸ್ತ ಪರಿಷತ್ತಿನವರೂ ಒಪ್ಪಿ ವೈಸರಾಯರ ಮತ್ತು ಲೋರ್ಡ್ ಜೆಟ್ಲೆಂಡರ ಧೋರಣೆಯ ಕುರಿತು ಅತೃಪ್ತಿ ಸೂಚಿಸಿರುತ್ತಾರೆ. ಹಿಂದೀ ಕ್ರೈಸ್ತರು ರಾಷ್ಟ್ರೀಯಭಾವನೆ ಮತ್ತು ರಾಷ್ಟ್ರದ ಹಿತಸಾಧನೆಯಲ್ಲಿ ಇತರ ದೇಶಾಭಿಮಾನಿಗಳನ್ನು ಬಿಟ್ಟಿಲ್ಲೆಂಬುದು ಈ ಪರಿಷತ್ತಿನ ಅಧ್ಯಕ್ಷರ ಭಾಷಣ ಮತ್ತು ನಿರ್ಣಯಗಳು ವ್ಯಕ್ತಗೊಳಿಸುತ್ತವೆ.

ಬ್ರಿಟನಿಗೆ ಎಚ್ಚರಿಕೆ.

ಸರ್ ಸ್ಟಾಫೋರ್ಡ್ ಕ್ರಿಪ್ಸರು ದಶಂಬ್ರ ತಾ. 29ರಲ್ಲಿ ರಂಗೂನಿನಲ್ಲಿ ಪತ್ರಿಕಾ ಪ್ರತಿನಿಧಿಗೆ ಭೇಟಿಕೊಟ್ಟು, ಬರುವ ಕಾಂಗ್ರೆಸ್ ಅಧಿವೇಶನದ ಮೊದಲು ಬ್ರಿಟಿಷ್ ಸರಕಾರವು ಕಾಂಗ್ರೆಸನ್ನು ತೃಪ್ತಿಪಡಿಸದಿದ್ದ ಪಕ್ಷದಲ್ಲಿ ಕಾಯಿದೆಭಂಗ ಚಳವಳ ಆರಂಭವಾಗುವುದು ನಿಶ್ಚಯ. ಆಗ ಬ್ರಿಟನ್ ಮತ್ತು ಹಿಂದೂದೇಶಗಳೊಳಗೆ ಒಡಂಬಡಿಕೆಯು ಮತ್ತಷ್ಟು ಕಷ್ಟವಾಗುವುದು. ಕಾಯಿದೆಭಂಗವನ್ನಡಗಿಸಲು ಸರಕಾರವು ದಬ್ಬಾಳಿಕೆ ಹೂಡಬೇಕಾಗುವುದು. ಆಗ ಲೋಕಮತವು ಅದಕ್ಕೆ ವಿರೋಧವಾಗುವುದು. ಈಗ ಗಾಂಧಿಯವರು ಕಾಂಗ್ರೆಸನ್ನು ತಡೆದಿಟ್ಟಿರುವಾಗಲೆ ಬ್ರಿಟನು ಅವರೊಡನೆ ಸಂಧಿ ಮಾಡಿಕೊಳ್ಳಬೇಕು. ರಾಜಕೀಯ ಸ್ವಾತಂತ್ರ್ಯ ಮತ್ತು ಅಲ್ಪ ಸಂಖ್ಯಾಕ ಪ್ರಶ್ನೆಯನ್ನು ಒಟ್ಟಿಗೇನೇ ಇತ್ಯರ್ಥ ಮಾಡಲೆತ್ನಿಸಬೇಕೆಂದು ಬ್ರಿಟಿಷ್ ಸರಕಾರವನ್ನು ಎಚ್ಚರಿಸಿರುವರು. ಸರ್ ಸ್ಟಾಫೋರ್ಡರು ಕಾಂಗ್ರೆಸ್ ಮುಖಂಡರ ಮನೋವೃತ್ತಿಯನ್ನು ಚೆನ್ನಾಗಿ ತಿಳಿದು ಈ ಎಚ್ಚರವಿತ್ತಿರುವುದರಿಂದ ಬ್ರಿಟಿಷ್ ಸರಕಾರವು ಅದಕ್ಕೆ ಲಕ್ಷ್ಯಕೊಡುವುದೆಂದು ನಂಬಲಾಗಿದೆ. ಅನಿಶ್ಚಿತ ಕಾಲದ ವರೆಗೆ ಕಾಯುತ್ತಾ ಕೂತುಕೊಳ್ಳಲು ಕಾಂಗ್ರೆಸಿಗೆ ಸಾಧ್ಯವಿಲ್ಲೆಂದು ಸರ್ದಾರ್ ವಲ್ಲಭಾಯಿಯವರು ಕೂಡಾ ಎಚ್ಚರಿಸಿರುವರು. ಹೋರಾಟವು ನಿಶ್ಚಯವೆಂಬಂತೆ ದೇಶವು ಅದಕ್ಕೆ ಶೀಘ್ರವಾದ ಸಿದ್ಧತೆ ಮಾಡಬೇಕೆಂದು ಪಂಡಿತ ಜವಾಹರಲಾಲರು ಸಾರುತ್ತಾ ಬರುತ್ತಿರುವರು. ಬ್ರಿಟಿಷ್ ಸರಕಾರದ ಧೋರಣೆಯಿಂದ ಗಾಂಧಿಜಿಯವರೂ ನಿರಾಶೆಗೊಂಡು ಇನ್ನೊಂದು ಹೋರಾಟವಿಲ್ಲದೆ ಗತ್ಯಂತರವಿಲ್ಲೆಂಬ ನಿರ್ಧಾರಕ್ಕೆ ಬಂದಿರುವಂತಿದೆ. ಅದರ ಪೂರ್ವ ಸಿದ್ಧತೆಯ ಕುರಿತು ಅವರೀಗ ಸಲಹೆಕೊಡಹತ್ತಿದ್ದಾರೆ. ಪರಿಸ್ಥಿತಿಯು ಇದೇ ರೀತಿ ನಡೆದಲ್ಲಿ ಒಂದು ದಿನ ಅವರು ಕಾಯಿದೆಭಂಗವನ್ನಾರಂಭಿಸದಿರಲಾರರೆಂದು ನಿಶ್ಚಯವಾಗಿ ಹೇಳಬಹುದು. ಬ್ರಿಟಿಷ್ ಸರಕಾರದ ಧೋರಣೆಯೇನೆಂದು ಈ ವರೆಗೆ ತಿಳಿದಿಲ್ಲ. ಜಾತೀಯ ಪ್ರಶ್ನೆಯ ಹಾಡನ್ನೇ ಅದು ಇನ್ನೂ ಹಾಡುತ್ತಾ ಹೋದಲ್ಲಿ ಕಾಂಗ್ರೆಸನ್ನದು ಮತ್ತಷ್ಟು ಉದ್ರೇಕಿಸಿದಂತಾಗುಗುವುದು. ಮುಸ್ಲೀಮ್ ಲೀಗಿನ ಧೋರಣೆಯಿಂದ ಕಾಂಗ್ರೆಸು ಕೈಕಟ್ಟಿ ಸುಮ್ಮನೆ ಕುಳಿತುಕೊಳ್ಳುವುದೆಂಬ ಅಭಿಪ್ರಾಯವನ್ನು ಸರಕಾರವು ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಅದು ಬೇಗನೆ ನಿಶ್ಚಿತ ಧೋರಣೆಯನ್ನು ಕೈಕೊಂಡು ಬಹುತೇಕ ಇಡೀ ದೇಶದ ಒಮ್ಮತದ ಕೇಳಿಕೆಯಾಗಿರುವ ಹಿಂದೀ ಸ್ವಾತಂತ್ರ್ಯ ಪ್ರಶ್ನೆಯನ್ನು ಇತ್ಯರ್ಥಪಡಿಸಲೆತ್ನಿಸುವುದೆಂದು ನಿರೀಕ್ಷಿಸಬಹುದೇ?

40,000 ಜನ ಹಾನಿ

ಟರ್ಕಿಯ ಭೂಕಂಪದಿಂದ ಒಟ್ಟು 46,000 ಮಂದಿಗೆ ಹಾನಿಯುಂಟಾಗಿ 30,000 ಮಂದಿ ಕೊಲ್ಲಲ್ಪಟ್ಟಿರುವರೆಂದು ಅಂದಾಜುಮಾಡಲಾಗಿದೆ. ಎರ್ಜಿಂಗ್ಯನ್ ಜಿಲ್ಲೆಯ 66,000 ಜನಸಂಖ್ಯೆಯಲ್ಲಿ ಸೇಕಡ ಕೊಲ್ಲಲ್ಪಟ್ಟ 20 ಮಂದಿ ಗಾಯಗೊಂಡಿರುವರು. ಇಡೀ ಟರ್ಕಿ ಜನಾಂಗವು ಭೂಕಂಪಪೀಡಿತರಿಗೆ ಸಹಾಯವೀಯುವುದರಲ್ಲಿ ನಿರತವಾಗಿದೆ. ಕೆಲವೆಡೆ ವಿಮಾನ ಮೂಲಕ ತಿಂಡಿತಿನಸು-ವಸನಾದಿಗಳು ಎಸೆಯಲ್ಪಡುತ್ತಿವೆ. ಬ್ರಿಟಿಷ್ ಸರಕಾರವು ಟರ್ಕಿಯ ನಿರಾಶ್ರಿತರಿಗೆ 26,000 ಪವನು ಸಹಾಯಮಾಡಿದೆ. ಇಷ್ಟೇ ಹಣವನ್ನು ಫ್ರೆಂಚ್ ಸರಕಾರವೂ ಕೊಟ್ಟಿದೆ. ಮುಸಲ್ಮಾನ ರಾಷ್ಟ್ರಗಳವರೆಲ್ಲಾ ಹೆಚ್ಚಿನ ಸಹಾಯಮಾಡುತ್ತಿದ್ದಾರೆ. ಗ್ರೀಸ್ ರುಮೇನಿಯ ಅಮೇರಿಕ ಮೊದಲಾದ ರಾಷ್ಟ್ರಗಳೂ ಸಹಾಯವೀಯುತ್ತಿವೆ.

ಭೂಕಂಪದ ಬೆನ್ನಲ್ಲಿ ಪ್ರಚಂಡ ನೆರೆ

ಟರ್ಕಿಯ ಅನಟೋಲಿಯದಲ್ಲಿ ಭೂಕಂಪದ ಬೆನ್ನಲ್ಲಿ ಪ್ರಚಂಡ ನೆರೆ ಹಾವಳಿಯುಂಟಾಗಿ ಹಲವರು ಮುಳುಗಿ ಹೋಗಿರುವರು. ಜಾನುವಾರು ಮತ್ತು ಬೆಳೆಗಳಿಗೆ ಅತಿ ಹೆಚ್ಚಿನ ಸಹಾವಳಿಯಾಗಿರುವುದು. 16 ಹಳ್ಳಿಗಳು ಸಂಪೂರ್ಣ ಮುಳುಗಿಹೋಗಿವೆ. ಸ್ಮಿರ್ನಾ, ಬ್ರೂಸಾ ಮತ್ತು ಅಡ್ರಿಯನೋಪ್ಲ್ ಜಿಲ್ಲೆಗಳಲ್ಲಿ ಹೆಚ್ಚು ಹಾವಳಿಯಾಗಿದೆ. ಟರ್ಕಿಯ ನಿರಾಶ್ರಿತರ ಸಹಾಯಾರ್ಥವಾಗಿ ಹಿಂದೂದೇಶದ ಹಲವು ಕಡೆಗಳಲ್ಲಿ ಸಹಾಯ ಧನ ಸಂಗ್ರಹವಾಗುತ್ತಿರುವುದು.

ಚೀನಾ ಜಪಾನ ಯುದ್ಧ

1939ರಲ್ಲಿ ಚೀನಿ ಮತ್ತು ಜಪಾನು ಸೇನೆಗಳೊಳಗೆ 6000 ಹೋರಾಟಗಳು ನಡೆದು 4ಲಕ್ಷ ಜಪಾನ ಸೈನಿಕರು ಕೊಲ್ಲಲ್ಪಟ್ಟಿರುವರು ಇಲ್ಲವೆ ಗಾಯ ಹೊಂದಿರುವರೆಂದು ತಿಳಿದು ಬರುತ್ತದೆ. ಕಟ್ಟಕಡೆಗೆ ಚೀನವು ಜಯಶೀಲವಾಗುವುದೆಂದು ಜನರಲ್ ಹುಸೈಕೆಂಗ್‌ರವರು ವಿಶ್ವಾಸ ಸೂಚಿಸಿರುವರು.

ರಷ್ಯ ಮತ್ತು ಜಪಾನುಗಳೊಳಗೆ ಒಪ್ಪಂದ

ರಷ್ಯ ಮತ್ತು ಜಪಾನುಗಳೊಳಗೆ ಒಪ್ಪಂದವಾಗುವ ಸಂಭವ ತೋರುತ್ತದೆ. ಉತ್ತರ ಮಂಚೂರಿಯ ರೈಲ್ವೆಯನ್ನು ಬಿಟ್ಟುಕೊಟ್ಟ ಸಂಬಂಧವಾಗಿ ರಷ್ಯಕ್ಕೆ ಜಪಾನು ಕೊಡತಕ್ಕ ಹಣದ ಪ್ರಶ್ನೆ ಮತ್ತು ಫಿರಂಗಿಗಳ ಕಲಹದ ಕುರಿತು ಒಡಂಬಡಿಕೆಯಾಗಿದೆ. ಇನ್ನು ಕೆಲವು ವಿಷಯಗಳ ಚರ್ಚೆ ನಡೆಯುತ್ತಿದೆ. ಇದೇ ರೀತಿ ಅಮೆರಿಕದೊಂದಿಗೂ ಜಪಾನು ಒಪ್ಪಂದಮಾಡಿಕೊಳ್ಳುವಪ್ರಯತ್ನ ಮಾಡುತ್ತಿರುವಂತಿದೆ.

ಉಪಕಾರ ಸ್ಮರಣೆ

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್ ಉಡುಪಿ

ಇದರ ಶೇರ್ ಕಲೆಕ್ಷನಿಗಾಗಿ ಶ್ರೀಗಳಾದ ಕೆ. ಜೆ. ಬಲ್ಲಾಳ್, ಬಿ.ಎ ಎಲ್.ಎಲ್.ಬಿ. ಬಿ. ಶ್ಯಾಮರಾಯ ಶೆಟ್ಟಿ, ಬಿ. ಎ. ಎಲ್. ಟಿ, ಬಿ. ಕೃಷ್ಣಯ್ಯ ಹೆಗ್ಡೆ, ಡಿ. ಬೊಮ್ಮಬರ್, ಕೆ. ಹೊನ್ನಯ್ಯ ಶೆಟ್ಟಿ ಮೊದಲಾದವರು ಇತ್ತೀಚೆಗೆ ಸಂಚರಿಸಿದಾಗ ಹೋದಲ್ಲೆಲ್ಲಾ ಮಹನೀಯರನೇಕರು ಸಹಾನುಭೂತಿಪರ ಸಹಕಾರವಿತ್ತು ಪ್ರೋತ್ಸಾಹಿಸಿದ್ದಾರೆ. ಸೀತಾನದಿಯಲ್ಲಿ ಶ್ರೀಗಳಾದ ಬೇಳಂಜೆ ವಿಟ್ಠಲ ಹೆಗ್ಡೆ, ತಿಂಗಳೆ ರಾಮಣ್ಣ ಹೆಗ್ಡೆ, ಹೆಬ್ರಿ ಭುಜಂಗ ಬಲ್ಲಾಳ್, ಬೇಳಂಜೆ ಕೃಷ್ಣಯ್ಯ ಹೆಗ್ಡೆ ಮೊದಲಾದವರು, ಬೈಂದೂರಲ್ಲಿ ಶ್ರೀ ಕೆ. ಸಂಜೀವ ಶೆಟ್ಟಿ, ಬಿ. ಎ. ಎಲ್. ಟಿ, ಮತ್ತು ಎಡ್ತರೆ ಕೃಷ್ಣಪ್ಪ ಶೆಟ್ಟಿ ಮತ್ತು ಸಹೋದರರೇ ಮೊದಲಾದವರು, ಕೊಲ್ಲೂರಲ್ಲಿ ಶ್ರೀ. ಸಿ. ಹಿರಿಯಣ್ಣ ಶೆಟ್ಟರು, ಕುಂದಾಪುರದಲ್ಲಿ ಶ್ರೀ. ಶಿವರಾಮ ಶೆಟ್ಟಿ, ಬಿ. ಎ. ಬಿ. ಎಲ್. ವಕೀಲ್, ಇವರೇ ಮುಂತಾದವರು, ಕೋಟದಲ್ಲಿ ಶ್ರೀ. ಎಂ. ನಾರಾಯಣ ಶೆಟ್ಟರು ತುಂಬಾ ಸಹಾಯ ಮಾಡಿರುವರು. ಮಂಗಳೂರಲ್ಲಿ ಶ್ರೀಗಳಾದ ಬಿ. ಮಂಜಯ್ಯ ಹೆಗ್ಡೆ, ಬಿ. ಎ. ಬಿ. ಎಲ್, ಎಡ್ವಕೇಟ್, ಪಿ. ಯಂ. ಹೆಗ್ಡೆ, ಒಡಿಟರ್, ಕೆ. ತಿಮ್ಮಪ್ಪ ಶೆಟ್ಟಿ, ಎಚ್. ರಾಮಯ್ಯ ನಾಯಕ್, ಎನ್. ಎಸ್. ಶೆಟ್ಟಿ ಮೊದಲಾದವರು ಉಪಕರಿಸಿದ್ದಾರೆ. ಮೂಲ್ಕಿಯಲ್ಲಿ ಶ್ರೀಗಳಾದ ಕೆ. ಶ್ರೀನಿವಾಸ ಕಿಣಿ, ಬಿ. ಎ. ಎಲ್. ಟಿ. ಸಿದ್ಧ ಶೆಟ್ಟಿ, ಕೆ. ಮುದ್ದಣ್ಣ ಶೆಟ್ಟಿ, ಬಿ. ಎ ಎಲ್. ಟಿ, ವಿಟ್ಠಪ್ಪ, ಬಿ. ಎ. ಎಲ್. ಟಿ, ಬಿ. ಭೋಜರಾವ್, ಎಂ ಆರ್. ಪೂಂಜ, ಶಿವಪ್ಪ ಪೂಂಜ ಮೊದಲಾದವರೂ, ಕಿನ್ನಿಗೋಳಿಯಲ್ಲಿ ಶ್ರೀ. ದೊಡ್ಡಣ್ಣ ಶೆಟ್ಟರು, ಎಕ್ಕಾರು, ಬಜಪೆಗಳಲ್ಲಿ ಶ್ರೀಗಳಾದ ಎಕ್ಕಾರು ಸುಬ್ಬಯ್ಯ ಹೆಗ್ಡೆ, ಹಿರಿಯಣ್ಣ ಹೆಗ್ಡೆ ಮೊದಲಾದವರು ಸಹಕರಿಸಿದ್ದಾರೆ. ಇವರೆಲ್ಲರ ಉಪಕಾರವನ್ನು ಸ್ಮರಿಸುವೆವಲ್ಲದೆ ಪಾಲುಗಳನ್ನು ಪಡಕೊಂಡು ಪ್ರೋತ್ಸಾಹಿಸಿದ ಸಕಲರಿಗೂ ಕೃತಜ್ಞಪೂರ್ವಕ ಅಭಿವಂದನೆಗಳನ್ನು ಸಮರ್ಪಿಸುತ್ತೇವೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ವಿ. ಸೂ —ಕಂಪೆನಿಯ ಪಾಲಿಗೆ ಅರ್ಜಿ ಮಾತ್ರ ಕೊಟ್ಟು ಪಾಲಿನ ಹಣವನ್ನು ಕೊಡದ ಮಹನೀಯರು ಅದನ್ನು ದಯಮಾಡಿ ಅದನ್ನು ಬೇಗನೆ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 1-1-1940

ರಜಕ ಕುಲೋದ್ಧಾರಕ ಸಂಘ ತೃತೀಯ ವಾರ್ಷಿಕೋತ್ಸವ— ನಿನ್ನೆಯ ದಿನ ಸಾಯಂಕಾಲ ಅಪರಾಹ್ನ ಘಂಟೆ 2ಕ್ಕೆ ಮೇಲಿನ ಸಂಘದ ತೃತೀಯ ವಾರ್ಷಿಕೋತ್ಸವವು ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸೇರಿತು. ಸಮಾರಂಭವು ಶಾರದಾ ವಿದ್ಯಾಬೋಧಿನಿ ಶಾಲಾ ಭವನದಲ್ಲಿ ನಡೆಯಿತು. ಜಿಲ್ಲೆಯ ಎಲ್ಲಾ ತಾಲೂಕುಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಶ್ರೀ ಪಿ. ಕೆ. ನಾರಾಯಣರವರು ಗತ ವರ್ಷದ ವರದಿಯನ್ನೋದಿದರು. ಶ್ರೀ ಯಂ. ರಾಮಪ್ಪನವರು ಸರಕಾರದಿಂದ ರಜಕರಿಗೆ ಸಂಬಂಧಿಸಿ ಬಂದ ಸರಕಾರಿ ಹುಕುಮುಗಳನ್ನೋದಿ ವಿವರಿಸಿದರು. ಅನಂತರ ಶ್ರೀಗಳಾದ ಪಿ. ಕೆ. ನಾರಾಯಣ, ಕೆ. ಎ. ಮಾಂಕು ಮತ್ತು ಬಿ. ದೇವಪ್ಪ ಇವರುಗಳು ಭಾಷಣ ಮಾಡಿ ಸಮಾಜದವರು ವಿದ್ಯೆ ಮತ್ತು ಆರ್ಥಿಕ ಸ್ಥಿತಿಗಳಲ್ಲಿ ಎಷ್ಟು ಹಿಂದೆ ಬಿದ್ದಿರುವರೆಂಬುದನ್ನು ಅನೇಕ ನಿದರ್ಶನಗಳನ್ನಿತ್ತು ತಿಳಿಸಿದರು. ಅನಂತರ ದೇಶಭಕ್ತ ನಾರಾಯಣ ಕಿಲ್ಲೆಯವರೂ, ಕೆ. ಕೃಷ್ಣರಾಯರೂ ಭಾಷಣ ಮಾಡಿದರು. ಶ್ರೀ ಕಿಲ್ಲೆಯವರು, ಸಮಾಜದಲ್ಲಿ ವಿದ್ಯೆಯ ಪ್ರಸಾರವಾಗುತ್ತಿದ್ದರೂ, ಸಮಾಜದಲ್ಲಿ ಯುವಕರಿಂದ ಕೆಲಸ ನಡೆಯುತ್ತಿದ್ದರೂ, ಬಹಳ ಆಗತ್ಯವೆಂದರು. ಸಂಘದ ಸದಸ್ಯರ ಸಂಖ್ಯೆಯನ್ನು ಈಗಿನಿಂದ 10ರಷ್ಟು ಹೆಚ್ಚಿಸಬೇಕು; ವಿದ್ಯಾನಿಧಿಯನ್ನು ಸ್ಥಾಪಿಸಬೇಕು ಎಂಬುದನ್ನು ಶ್ರೀ ಕೃಷ್ಣರಾಯರು ತಿಳಿಸಿದರು. ರಜಕ ವರ್ಗದವರು ವಿದ್ಯೆಯಲ್ಲಿಯೂ ಆರ್ಥಿಕ ಸ್ಥಿತಿಯಲ್ಲಿಯೂ ಬಹಳ ಹಿಂದುಳಿದಿರುವುದರಿಂದ ಅವರಿಗೆ ವೇತನ ಕೊಡಲಾದುದನ್ನಿತ್ತು ವಿದ್ಯೆ ಕಲಿಯುವ ಹಾಗೆ ಪ್ರೋತ್ಸಾಹಿಸುವಂತೆ ಸರಕಾರದವರನ್ನು ಕೇಳಿಕೊಳ್ಳುವುದು, ಮದ್ರಾಸ್ ಅಧಿಪತ್ಯದ ಈ ವರ್ಗಕ್ಕೆ ಸೇರಿದವರೆಲ್ಲಾ ರಜಕ ಎಂಬ ಹೆಸರನ್ನೇ ಕೊಡುವಂತೆ ಸರಕಾರವನ್ನು ಕೇಳಿಕೊಳ್ಳುವುದು, ಮ್ಯುನಿಸಿಪಾಲಿಟಿಗಳೂ, ಪಂಚಾಯತುಗಳೂ ಸರಿಯಾದ ಧೋಬಿಖಾನೆಗಳನ್ನು ಏರ್ಪಡಿಸಿ ಕೊಡುವಂತೆ ಕೇಳಿಕೊಳ್ಳಬೇಕೆಂದೂ, ರಜಕರನ್ನು ಹೀನೈಸಿ ವೇಷಗಳನ್ನು ಮಾಡುವುದಕ್ಕೆ ಲೈಸನ್ಸ್ ಕೊಡಬಾರದಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನು ಕೇಳಿಕೊಳ್ಳಬೇಕೆಂದೂ ಠರಾವುಗಳಾದುವು. ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಸಂಘ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಕಡೆಗೂ, ವಿದ್ಯಾರ್ಜನೆಯ ಕಡೆಗೂ ಹೆಚ್ಚಿನ ಗಮನ ಕೊಡಬೇಕೆಂದು ಹೇಳಿದರು. ಧನ್ಯವಾದಾರ್ಪಣೆ ಮಂಗಳ ಗೀತ, ಉಪಾಹಾರಗಳು ನಡೆದು ಸಭಾಂತ್ಯವಾಯಿತು.

ಹರಿಜನ ಲೇಬರ್ ಲೀಗ್ ತೃತೀಯ ವಾರ್ಷಿಕೋತ್ಸವ— ನಿನ್ನೆಯ ದಿನ ಸಾಯಂ. 5. 30ಕ್ಕೆ ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಮಂದಿರದಲ್ಲಿ ದ. ಕ. ಜಿಲ್ಲಾ ಹರಿಜನ ಲೇಬರ್ ಲೀಗಿನ ತೃತೀಯ ವಾರ್ಷಿಕೋತ್ಸವವು ಶ್ರೀ ಕೆ. ಕೃಷ್ಣರಾವ್ ಬಿ. ಎ.ಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾಗಿ ಶ್ರೀ ಕೆ. ಈಶ್ವರ ಯಂ. ಎಲ್. ಎ.ಯವರು ಗತ ವರ್ಷದ ವರದಿಯನ್ನೋದಿದರು. ಅನಂತರ ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಲೀಗು ನಡಿಸುವ ಏಳಿಗೆಗಾಗಿ ದುಡಿಯುತ್ತಿರುವುದರಿಂದ ಅದಕ್ಕೆ ಸಮಾಜದವರ ಬೆಂಬಲವು ಆಗತ್ಯವೆಂದೂ, ಶ್ರೀ ಕೆ. ಈಶ್ವರನವರು ನಿಸ್ವಾರ್ಥ ದೃಷ್ಟಿಯಿಂದ ಮಾಡುವ ಸಮಾಜ ಸೇವೆಯ ಫಲವನ್ನು ಸಕಲರೂ ಅನುಭವಿಸ ಬಹುದೆಂದೂ, ಶ್ರೀ ಈಶ್ವರನವರಿಗೆ ಸಕಲರೂ ಬೆಂಬಲ ಕೊಡಬೇಕೆಂದೂ ಸೂಚಿಸಿದರು.

ಬೋಳೂರು ದ್ರಾವಿಡ ಬ್ರಾಹ್ಮಣರ ನಾಟಕ ಸಂಘ— ಇದರ ವಾರ್ಷಿಕೋತ್ಸವವು ಪ್ರೆಸಿಡೆನ್ಸಿ ಕಾಲೇಜಿನ ನಿವೃತ್ತ ಕನ್ನಡ ಪಂಡಿತರಾದ ಶ್ರೀ ಸಾಬಾಜಿ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ನಿನ್ನೆಯ ದಿವಸ ಸಾಯಂಕಾಲ ವಿಜೃಂಭಣೆಯಾಗಿ ನಡೆಯಿತು. ನಾಟಕ ಸಂಘದವರು ಕೈಗೊಂಡಿರುವ ಕಲಾ ಸೇವೆಯನ್ನು ಶ್ಲಾಘಿಸಿ ಅಧ್ಯಕ್ಷರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಅನಂತರ ನಾಟಕ ಸಂಘದವರು ಸಂಗೀತ ನಾಟಕಾಭಿನಯ ಮಾಡಿ ಸಭಿಕರನ್ನು ಸಂತೋಷಗೊಳಿಸಿದರು.

ಕೆನರಾ ಹೈಸ್ಕೂಲ್ ದಿನಾಚರಣೆ— ಈ ಹೈಸ್ಕೂಲಿನ ವರ್ಧಂತ್ಯುತ್ಸವವು ಕಳೆದ ತಾ. 26ರಲ್ಲಿ ಶ್ರೀ ಬಿ. ವಿ. ಬಾಳಿಗ ಯಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ವಂದಿ ವಾಚನ, ಇನಾಮು ಹಂಚೋಣಗಳಾದ ತರುವಾಯ ಅಧ್ಯಕ್ಷರು ಶಾಲೆಯು ಹೊಂದುತ್ತಿರುವ ಪ್ರಗತಿಯನ್ನು ಪ್ರಶಂಸಿಸಿ ಇನ್ನೂ ಹೆಚ್ಚಿನ ಅಭಿವೃದ್ಧಿ ಸ್ಥಿತಿಗೆ ಬರಲೆಂದು ಹಾರೈಸಿದರು. ಶಾಲಾ ವಿದ್ಯಾರ್ಥಿಗಳು ನಾಟಕ, ವಿವಿಧ ವಿನೋದಾವಳಿಗಳಿಂದ ಸಭಿಕರನ್ನು ಆನಂದಗೊಳಿಸಿದರು.

ತೆರಿಗೆ ತೆರುವವರ ಸಂಘ— ಈ ಸಂಘದ ಒಂದು ಸಭೆಯು ಶ್ರೀ ಎಸ್. ಪಿ. ಬಿ. ರೆಬೆಲ್ಲೋರವರ ಅಧ್ಯಕ್ಷತೆಯಲ್ಲಿ ಫಳ್ನೀರಿನಲ್ಲಿ ಸೇರಿತು. ಶ್ರೀ ಎಸ್. ನಾಗರಾಜಯ್ಯನವರು ನಗರದ ಆಡಳಿತೆಯನ್ನು ಟೀಕಿಸಿ, ಬೆಟರ್‌ಮೆಂಟ್ ಟ್ಯಾಕ್ಸನ್ನು ಹೊರಿಸುವುದು ನ್ಯಾಯವಲ್ಲವೆಂದೂ, ಅದನ್ನು ತೆಗೆದು ಹಾಕಬೇಕೆಂದೂ ಸೂಚಿಸಿದರು.

೫ ವರ್ಷದ ಕಠಿನ ಸಜೆ— ಕಂಕನಾಡಿ ಬೈದರ್ಕಳ ಗರಡಿಯ ರಾಮ ಪೂಜಾರಿ ಎಂಬವನನ್ನು ಕಡಿದು ಹಾಕಿ ಕೊಂದ ವಿಚಾರದಲ್ಲಿ ಕೊರಗ ಪೂಜಾರಿಯು ಈ ಕೊಲೆ ಕೃತ್ಯ ನಡೆಸಿದನೆಂಬ ಕಾರಣ ಅವನ ಮೇಲೆ ತಕ್ಸೀರು ನಡೆಸಿ ಸೆಶ್ಶನ್ಸಿಗೆ ಕಮಿಟು ಮಾಡಿದ್ದರು. ಕೊರಗ ಪೂಜಾರಿಯ ಕೈಯಲ್ಲಿದ್ದ ಕುರುಹಿನಿಂದಲೂ ಅವನ ಮೈ ಮೇಲಿದ್ದ ರಕ್ತದ ಬಿಂದುಗಳಿಂದಲೂ ಅವನೇ ತಪ್ಪಿತಸ್ಥನೆಂದು ತಿಳಿದ ಬಲ್ಲವ ಕೆಲ ಸಾಕ್ಷಿಗಾರರ ಮುಂದೆ ತಾನು ಕೊಂದಿರುವುದಾಗಿ ಕೊರಗನು ಹೇಳಿದ್ದರಿಂದ ಅವನ ಮೇಲೆ ತಪ್ಪು ಸಾಬೀತು ಮಾಡುವ ಸಂಭವವಿತ್ತು. ಎಸೆಸರರು ಆಪಾದಿತನು ತಪ್ಪುಗಾರನಲ್ಲವೆಂದು ಅಭಿಪ್ರಾಯ ಪಟ್ಟರೂ ಸೆಶ್ಶನ್ಸ್ ಜಡ್ಜರು ಅವನಿಗೆ ೫ ವರ್ಷಗಳ ಕಠಿಣ ಸಜೆ ವಿಧಿಸಿದರು.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜಾಯ್ನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಕ್ಯಾನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವುದು.

ಅಮೃತಕಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್ ಡಿಜ್ಯಾನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

ಉಡುಪಿ

ಸತ್ಕಾರ ಕೂಟ— ಸ್ಥಳೀಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಚೆಯರ್‌ಮೇನರಾದ ಡಾ. ಟಿ. ಮಾಧವ ಪೈಗಳವರು ಇತ್ತೀಚೆಗೆ ಶಸ್ತ್ರಚಿಕಿತ್ಸೆಗೊಳಪಟ್ಟು ಸ್ವಸ್ಥರಾದುದರ ಸಂತೋಷ ಸೂಚನಾರ್ಥವಾಗಿ ತುಳುನಾಡ್ ದೇಂಕಿನವರು ತುಳುನಾಡ್ ಪ್ರೆಸ್ಸಿನಲ್ಲಿ ತಾ. 1-1-'40ನೇ ಸೋಮವಾರ ದಿನ ಸಂಜೆ ಸತ್ಕಾರಕೂಟವನ್ನೇರ್ಪಡಿಸಿದ್ದರು. ಈ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಶ್ರೀ ಎ. ಲಕ್ಷ್ಮೀನಾರಾಯಣರಾಯರು ವಹಿಸಿದ್ದರು. ಶ್ರೀ. ಮಾಧವ ಪೈಗಳವರ ಕುರಿತು ಶ್ರೀಗಳಾದ ಡಾ. ಶ್ರೀಪಾದರಾವ್, ಕೊಡಿಯಾಲ್ ಶ್ರೀನಿವಾಸರಾವ್, ರೋಚ್ಚಿ ಫೆರ್ನಾಂಡೀಸ್ ಮೊದಲಾದವರು ಮಾತನಾಡಿದರು. ಟೀಪಾರ್ಟಿ ಸತ್ಕಾರದ ಬಳಿಕ ಶ್ರೀ. ಮಿಯ್ಯಾರು ನರಸಿಂಹಾಚಾರ್ಯರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಶ್ರೀ ಅದಮಾರು ಮಠಾಧಿಪತಿಗಳ ಆಗಮನ— ಇದೇ ತಾ. 18ರಲ್ಲಿ ಶ್ರೀಕೃಷ್ಣ ಮಠದ ಪರ್ಯಾಯ ಪೀಠವನ್ನಲಂಕರಿಸಲಿರುವ ಶ್ರೀ. ಅದಮಾರು ಮಠದ ಶ್ರೀ ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರು ತಾ. 1-1-40ನೇ ಸೋಮವಾರ ಸಂಜೆ ಸಕಲ ಪರಿವಾರದೊಡನೆ ಪುರ ಪ್ರವೇಶಮಾಡಿದರು. ವಾದ್ಯ ಘೋಷಗಳಿಂದ ಕೂಡಿದ ಮೆರವಣಿಗೆಯಿಂದ ಶ್ರೀ. ಶ್ರೀಗಳವರು ಸ್ವಾಗತೀಕರಿಸಲ್ಪಟ್ಟರು.

ಹೊಸ ಮುನ್ಸೀಫರು— ಸ್ಥಳೀಯ ಮುನ್ಸೀಫರಾಗಿದ್ದ ಶ್ರೀ. ಆರ್. ಎಮ್. ವಿ. ಎಸ್. ರಾಯರು ಸಬ್ ಜಡ್ಜರಾಗಿ ವರ್ಗಾಯಿಸಲ್ಪಟ್ಟುದರಿಂದ ಅವರ ಸ್ಥಾನದಲ್ಲಿ ಶ್ರೀ. ಕೆ. ಆರ್. ಕೃಷ್ಣಯ್ಯ ಚೆಟ್ಟಿಯಾರರು ನೇಮಿಸಲ್ಪಟ್ಟಿರುವರು.

ಎಯಿಡೆಡ್ ಶಾಲಾ ಮಾಸ್ತರರ ಸಭೆ— ಉಡುಪಿ ತಾಲೂಕು ಎಯಿಡೆಡ್ ಶಾಲಾ ಮಾಸ್ತರರ ವರ್ಷಾವಧಿ ಸಭೆಯು 14-1-40ನೇ ಆದಿತ್ಯವಾರ ಅಪರಾಹ್ನ 2ಘಂಟೆಗೆ ಉಡುಪಿ ಬೋರ್ಡ್ ಶಾಲೆಯಲ್ಲಿ ಜರಗಲಿರುವುದು. ಎಲ್ಲರೂ ಬರಬೇಕಾಗಿ ಯೂನಿಯನ್ನಿನ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ.

ಕೆಫೆ ರೋಯಲ್— 'ಕೆಫೆ ರೋಯಲ್' ಎಂಬ ಹೆಸರಿನಿಂದ ಊಟ ವಸತಿ, ಕಾಫಿ, ತಿಂಡಿ ತಿನಸುಗಳ ಹೋಟೆಲೊಂದು ಅತ್ಯಾಧುನಿಕ ರೀತಿಯಲ್ಲಿ ಸಂತೆಕಟ್ಟೆ ಕೇಂದ್ರದಲ್ಲಿ ಕಳೆದ ಆದಿತ್ಯವಾರ ಮುನಿಸಿಪಲ್ ಚೆಯರ್‌ಮೇನ್ ಶ್ರೀ. ಎ. ಲಕ್ಷ್ಮೀನಾರಾಯಣರಾಯರಿಂದ ತೆರೆಯಲಾಯಿತು. ಇದರ ಮ್ಹಾಲಿಕರಾದ ಶ್ರೀ. ವೆಂಕಟ್ರಮಣ ಭಟ್ಟರು ನೆರೆದ ಮಹಾಜನರೆಲ್ಲರಿಗೂ ಉಪಹಾರವಿತ್ತು ಸತ್ಕರಿಸಿದರು.

ಸ್ಕೌಟ್ ರೇಲಿ— ದ. ಕ. ಜಿಲ್ಲಾ ಸ್ಕೌಟ್ ಕಮಿಶನರು ಉಡುಪಿ ತಾಲೂಕಿನ 'ಸ್ಕೌಟ್ ರೇಲಿ'ಯೊಂದನ್ನು ಇದೇ ತಿಂಗಳಲ್ಲಿ ನಡೆಯಲಿರುವ ವಿದ್ಯಾ ವಸ್ತು ಪ್ರದರ್ಶನ ಕಾಲದಲ್ಲಿ, ಬೋರ್ಡ್ ಹೈಸ್ಕೂಲಲ್ಲಿ ಜರಗಿಸಲಿರುವರೆಂದೂ ಈ ಬಗ್ಗೆ ತಾಲೂಕಿನ ಸ್ಕೌಟರೆಲ್ಲರೂ ತಾ. 6-1-40ಕ್ಕೆ ಸಂಜೆ 4ಗಂಟೆಗೆ ಬೋರ್ಡ್ ಹೈಸ್ಕೂಲಲ್ಲಿ ನಡೆಯಲಿರುವ ಸಭೆಗೆ ಬರಬೇಕೆಂದೂ ಕನ್ವೀನರರು ತಿಳಿಸುತ್ತಾರೆ.

ಟೂರ್ನಮೆಂಟ್ಸ್— ಉಡುಪಿ ಮುನ್ಸಿಪಲ್ ಜಿಮ್ಖಾನ ಕಮಿಟಿಯವರು ಫೆಬ್ರವರಿ ಪ್ರಥಮ ವಾರದಿಂದ ನಡೆಸಲಿರುವ ಬೇಡ್‌ಮಿಂಟನ್, ಟೆನ್ನೀಸ್, ಫೂಟ್ ಬಾಲ್, ಸ್ಕೇಟಿಂಗ್ ಪಂದ್ಯಾಟಗಳಲ್ಲಿ ಭಾಗವಹಿಸಲಿಚ್ಛಿಸುವವರು ಇದೇ ತಾ 20ರೊಳಗೆ ತಕ್ಕ ಫೀಸಿನೊಂದಿಗೆ ಅರ್ಜಿ ಬರೆದುಕೊಳ್ಳತಕ್ಕದ್ದೆಂದು ಸೆಕ್ರೆಟರಿಗಳು ತಿಳಿಸುತ್ತಾರೆ.

ಉದ್ಯಿ— ಇದೇ ತಾ 30ನೇ ಶನಿವಾರ ಹರಿಜನ ಲೀಗಿನ ಆಶ್ರಯದಲ್ಲಿ ಉದ್ಯಿಯ ಹರಿಜನ ಮುಖಂಡರ ಸಭೆ ಜರಗಿ ಪರ್ಯಾಯ ಸಮಯದಲ್ಲಿ ಹರಿಜನ ಲೀಗ್ ಪರಿಷತ್ತನ್ನೂ ಜಿಲ್ಲಾ ಲೇಬರ್ ಶಿಕ್ಷಾ ಅಧ್ಯಾಪಕರ ಪರಿಷತ್ತನ್ನೂ ಜರಗಿಸಬೇಕಾಗಿ ನಿರ್ಣಯಿಸಿ ಸ್ವಾಗತ ಕಮಿಟಿ ರಚಿಸಲಾಗಿದೆ.

ಶಂಕರನಾರಾಯಣ— ತಾ 25ನೇ ಸೋಮವಾರ ದಿನ ಘಂಟೆ 5ಕ್ಕೆ ಸ್ಥಳೀಯ ಶಾಲಾ ಕಟ್ಟೋಣದಲ್ಲಿ 'ಗ್ರಾಮಸೇವಾ ಸಂಘ'ದ ವಾರ್ಷಿಕ ಮಹಾಸಭೆಯು ಶ್ರೀ. ಎ. ಕೃಷ್ಣರಾಯ ಕೊಡಗಿಯವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಸಂಘದ ಕಾರ್ಯ ಸಮಿತಿಯ ಮೆಂಬರರು ಸ್ಥಳೀಯ ಸರಕಾರಿ ಉದ್ಯೋಗಸ್ಥರು ಹಾಗೂ ಇನ್ನಿತರ ಗ್ರಾಮದ ಮುಖ್ಯ ರೈತರು ಕೂಡಾ ಸಭೆಯನ್ನಲಂಕರಿಸಿದ್ದರು. ಆರಂಭದಲ್ಲಿ ಪ್ರಾರ್ಥನೆ ಆದ ನಂತರ ಸಂಘದ ವಾರ್ಷಿಕ ವರದಿಯನ್ನು ಓದಿ ಹೇಳಲಾಯಿತು. ಪ್ರಾಂತ್ಯದ ಬಾಬ್ತು ಕುಂದಾಪುರಕ್ಕೆ ಬರುವ ಟಪಾಲನ್ನು ಅದೇ ದಿವಸವೇ 'ಮೈಲ್ ಬಸ್' ಮೂಲಕ ಇಲ್ಲಿಗೆ ತಲಪುವ ಏರ್ಪಾಡಿನ ಕುರಿತು ಟಪ್ಪಾಲ್ ಇಲಾಖೆಯನ್ನು ಕೇಳಿಕೊಳ್ಳಬೇಕಾಗಿಯೂ ಇನ್ನು ಮುಂದೆ ಹಾಲಾಡಿಯಲ್ಲಿ ನಿಲ್ಲುವ ಬಸ್ ಸರ್ವೀಸನ್ನು ಸೀದಾ ಇಲ್ಲಿಗೇನೇ ಬಂದು ನಿಲ್ಲುವಂತೆ ಬಸ್ಸು ಕಂಪನಿಯ ಜ್ಯೋಂಟ್ ಮೇನೇಜರನ್ನು ಕೇಳಿಕೊಳ್ಳಬೇಕಾಗಿಯೂ ಇಲ್ಲಿಯ ಜಾತ್ರೆ ಸಮಯವಾದ ಜನವರಿ ತಿಂಗಳಿನ 2ನೇ ಹಪ್ತೆಯಲ್ಲಿ ಕೃಷಿ ಗೊಬ್ಬರ ಬೀಜ ವಗೈರೆ ಕುರಿತಾಗಿ ಒಂದು ಕೃಷಿ ಪ್ರದರ್ಶನವನ್ನು ತೋರಿಸುವಂತೆ ಕುಂದಾಪುರ ಎಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರ್‌ರನ್ನು ಕೇಳಿಕೊಳ್ಳಬೇಕಾಗಿಯೂ ಸ್ಥಳೀಯ ಸಾರ್ವಜನಿಕ ಉಪಯೋಗಾರ್ಥವಾಗಿ ಗೋಳಿಕಟ್ಟೆ ಶಂಕರನಾರಾಯಣ ರಸ್ತೆ ದುರಸ್ತಿಯನ್ನು ಸಂಘದ ಕಾರ್ಯದರ್ಶಿಗಳೂ ಗ್ರಾಮ ಮುಖ್ಯ ರೈತರ ಜನ ಸಹಾಯ ಮೂಲ್ಯ ನಡಿಸಬೇಕಾಗಿಯೂ ಸರ್ವಾನುಮತದಿಂದ ನಿರ್ಣಯಿಸಲಾಯಿತು. ತದನಂತರ ಸ್ಥಳೀಯ ವ್ಯಾಯಾಮ ಮಂಡಳಿಯವರಿಂದ ಭಾಷಣಗಳ ಸಹಿತ ಒಂದು ವ್ಯಾಯಾಮ ಪ್ರದರ್ಶನವು ತೋರಿಸಲಾಯಿತು. ಮುಗಿದ ಬಳಿಕ ಅಧ್ಯಕ್ಷರು ಸಭಿಕರಿಗೂ ವ್ಯಾಯಾಮ ಮಂಡಳಿಯವರಿಗೂ ಸಂಘದ ಪರವಾಗಿ ತನ್ನ ಅಭಿವಂದನೆಗಳನ್ನರ್ಪಿಸಿ ವಂದೇ ಮಾತರಂ ಹಾಡಿ ಸಭೆಯು ಬೀಳ್ಕೊಂಡಿತು.

ಕಾರ್ಕಳ— ತಾ. 30-12-39ರ ದಿನ ಕಾರ್ಕಳ ಶ್ರೀ ವೆಂಕಟ್ರಮಣ ದೇವಾಲಯದಲ್ಲಿ ಶ್ರೀ. ವಕೀಲ ಕೆ. ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಕೊಂಕಣಿ ಭಾಷಾಭಿಮಾನಿಗಳ ಒಂದು ಸಾರ್ವಜನಿಕ ಸಭೆಯು ಕೂಡಿ, ಕಾರವಾರದ ವಕೀಲ ಶ್ರೀ ಯಂ. ಮಾಧವ ಮಂಜುನಾಥ ಶ್ಯಾನುಭಾಗ ಯಂ ಎ. ಎಲ್. ಬಿ.ಯವರು ಕೊಂಕಣಿ ಭಾಷೆಯ ಇತಿಹಾಸ ಮತ್ತು ಅದನ್ನು ಉನ್ನತಿಗೆ ತರುವ ಸಾಧನೋಪಾಯಗಳು ಎಂಬ ಕುರಿತು ಒಂದು ಬೋಧಪ್ರದವಾದ ಭಾಷಣವನ್ನು ಕೊಟ್ಟರು. ಕೊಂಕಣಿ ಭಾಷಾ ಭಾಷಿಗಳು ಪರಸ್ಪರ ಪತ್ರ ವ್ಯವಹಾರವನ್ನು ಕನ್ನಡ, ದೇವನಾಗರಿ ಅಥವಾ ಅನುಕೂಲವಾದ ಬೇರೆ ಲಿಪಿಯಲ್ಲಿ ಕೊಂಕಣಿಯ ಮೂಲಕವೇ ಮಾಡಬೇಕು ಎಂಬಿತ್ಯಾದಿ ಕೆಲವು ಠರಾವುಗಳು ಮಂಜೂರಾದ ಬಳಿಕ, ಆ ಬಗ್ಗೆ ಕೆಲಸ ಮಾಡುವ ದಕ್ಕೋಸ್ಕರ ಒಂದು ಸ್ಥಳೀಯ ಸಮಿತಿಯ ರಚನೆಯಾಯಿತು.



KOPRAN
Tooth Paste

ಹಿಂದೂದೇಶದ ಜನಪ್ರಿಯ ದಂತಾಂಜನ

ಜಾಲಿಗಿಡದ ತತ್ತ್ವಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ. ತೀವ್ರಸತ್ವವುಳ್ಳದ್ದು, ವಿಷಹಾರಕವಾದದು.

KOPRAN CHEMICAL CO.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯುಳ್ಳ ಜೀವ ವಿಮಾ ಸಂಘವಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ:—

ಶಾಖಾ ಕಾರ್ಯದರ್ಶಿ,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಸ್ಯೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ಒಂದು ವಾರದ ಯುದ್ಧ ವಾರ್ತೆ

ಪುನಃ ಸಂಧಿಯ ಪ್ರಯತ್ನವೇ?

ದಸೆಂಬರ ತಾ 24ಕ್ಕೆ ಅಂತ್ಯವಾಗುವ ಒಂದ ವಾರದಲ್ಲಿ 10 ಬ್ರಿಟಿಷ್ ಮತ್ತು 8 ತಟಸ್ಥ ರಾಷ್ಟ್ರಗಳ ಹಡಗಗಳು ಮುಳುಗಿಸಲ್ಪಟ್ಟಿವೆ. ಐವರ್ಲೀನ್ ಎಂಬ ದೊಡ್ಡ ಬ್ರಿಟಿಷ್ ಹಡಗವೊಂದು ಸ್ಫೋಟವಾಗಿ ಸಂಪೂರ್ಣ ನಾಶಹೊಂದಿರುವುದು.

ತಾ 25ನೇ ಕ್ರಿಸ್‌ಮಸ್ ಹಬ್ಬದ ರಾತ್ರಿ ಪಶ್ಚಿಮ ರಣರಂಗದಲ್ಲಿ ದೊಡ್ಡ ಹೋರಾಟವೇನೂ ನಡೆಯಲಿಲ್ಲ. ಗ್ರೇಸಿ ಫೀಲ್ಡ್ಸೆಂಬ ಸಿನೆಮ ನಟಿಯು ಪಶ್ಚಿಮ ರಣರಂಗಕ್ಕೆ ಹೋಗಿ ಸೈನಿಕರು ಮತ್ತು ವೈಮಾನಿಕರಿಗಾಗಿ ಹಲವು ವಿನೋದಪರ ಮತ್ತು ಭಕ್ತಿಪರ ಹಾಡುಗಳನ್ನು ಆಕ್ಯಾರ್ಷಕವಾಗಿ ಹಾಡಿ ಎಲ್ಲರನ್ನೂ ಆತ್ಯಾನಂದಗೊಳಿಸಿದಳು.

ದಶಂಬರ ತಾ 25ರಲ್ಲು ಸ್ಟೇನ್ ಹೋಪ್ ಎಂಬ ಬ್ರಿಟಿಷ್ ಹಡಗವನ್ನು ಜರ್ಮನ್ ಸಬ್‌ಮೇರೀನೊಂದು ಯಾವ ಎಚ್ಚರವೂ ಕೊಡದೆ ಮುಳುಗಿಸಿ 11 ಮಂದಿಯ ಪ್ರಾಣಹಾನಿಯಾಗಿದೆ. ಪಶ್ಚಿಮ ರಣರಂಗದಲ್ಲಿ ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲೇನೂ ಹೋರಾಟವು ನಿಲ್ಲಿಸಲ್ಪಡಲಿಲ್ಲ. ಜರ್ಮನರು ಯಥಾಪ್ರಕಾರ ಚಿಕ್ಕಪುಟ್ಟ ಹೋರಾಟಗಳನ್ನು ನಡಿಸಿರುವರು. ತಾ. 26ನೇ ಬೆಳಿಗ್ಗೆ 4 ಘಂಟೆಗೆ ಮೊಸೆಲ್ ಪಟ್ಟಣದ ಫ್ರೆಂಚ್ ಸೈನಿಕ ನಿಲ್ದಾಣವನ್ನು ವಶಪಡಿಸಲೆತ್ನಿಸಿ 90 ಮಿನಿಟು ಹೋರಾಡಿ ಭಗ್ನಮನೋರಥರಾಗಿ ಹಿಂದೆ ಸರಿದರು. ಹರ್ ಹಿಟ್ಲರರು ಕ್ರಿಸ್‌ಮಸ್ ಹಬ್ಬದ ದಿನಗಳಲ್ಲಿ ಪಶ್ಚಿಮ ರಣರಂಗದಲ್ಲೆಲ್ಲಾ ಸಂಚರಿಸಿ, ಸೈನಿಕರಿಗೆಲ್ಲಾ ಪಾರಿತೋಷಗಳನ್ನಿತ್ತು ಸೈನ್ಯಾಧಿಕಾರಿಗಳನೇಕರನ್ನು ಮೇಲಿನ ಸ್ಥಾನಗಳನ್ನಿತ್ತು ಗೌರವಿಸಿದರು. ದಶಂಬರ ತಾ 26ರಲ್ಲು ಪ್ರಥಮವಾಗಿ ಆಸ್ಟ್ರೇಲಿಯದಿಂದ ವೈಮಾನಿಕ ದಳವೊಂದು ಸುರಕ್ಷಿತವಾಗಿ ಇಂಗ್ಲೆಂಡಿಗೆ ಮುಟ್ಟಿರುವುದು.

ಮಬ್ಬು ಕವಿದುದರಿಂದ ವಿಮಾನ ಹೋರಾಟವು ಅಸಾಧ್ಯವಾದರೂ ದಶಂಬರ ತಾ. 27ರಲ್ಲು, ಫ್ರೆಂಚ್ ಸೈನಿಕ ನಿಲ್ದಾಣಗಳ ಮೇಲೆ ಜರ್ಮನ್ ಸೈನಿಕರು ಹಲವು ಸಲ ಧಾಳಿನಡಿಸಿ ತೀವ್ರ ಕೈ ಕೈ ಹೋರಾಟ ನಡೆದು ಕೆಲಮಂದಿ ಫ್ರೆಂಚ್ ಸೈನಿಕರು ಸೆರೆಹಿಡಿಯಲ್ಪಟ್ಟಿರುವರು. ದಶಂಬರ ತಾ. 28ರಲ್ಲು ಹಿಂದೀ ಸೈನಿಕ ದಳಗಳು ಸುರಕ್ಷಿತವಾಗಿ ಫ್ರಾನ್ಸಿಗೆ ಮುಟ್ಟಿರುವವು. ಈ ಸೈನಿಕರನ್ನು ಪಶ್ಚಿಮ ರಣರಂಗದ ಮುಂಭಾಗಕ್ಕೆ ಕಳುಹಿಸಲಾಗುವುದು.

4 ತಿಂಗಳ ಯುದ್ಧದಲ್ಲಿ ಬ್ರಿಟಿಷ್ ವಿಮಾನಗಳು 58 ಜರ್ಮನ್ ವಿಮಾನಗಳನ್ನು ನಾಶಮಾಡಿರುವವು. 57 ಸಲ ಜರ್ಮನ್ ಸಬ್‌ಮೆರೀನುಗಳ ಮೇಲೆ ಧಾಳಿಯಿಟ್ಟಿರುವವು. 400 ವ್ಯಾಪಾರಿ ಹಡಗಗಳಿಗೆ ರಕ್ಷಣೆಯನ್ನಿತ್ತಿರುವವು. ಜರ್ಮನಿಯ ಮೇಲೆ 27 ಸಲ ಹಾರಿಹೋಗಿ 4,250,000 ಕರಪತ್ರಗಳನ್ನೆಸೆದು ಕೆಲವು ಧಾಳಿನಡಿಸಿರುವವು.

ತಾ 29ರಲ್ಲು ಜರ್ಮನ್ ಸಬ್‌ಮೆರೀನೊಂದು ಬ್ರಿಟಿಷ್ ಯುದ್ಧ ಹಡಗವೊಂದರ ಮೇಲೆ ಟೋರ್ಪೆಡೋ ತೋಟೆಯನ್ನೆಸೆದು ಹಾನಿಯಾಗಿ 3 ಮಂದಿ ಕೊಲ್ಲಲ್ಪಟ್ಟಿರುವರು. ಅಸ್ಟ್‌ವರ್ತ್ ಎಂಬ ಬ್ರಿಟಿಷ್ ಹಡಗವು 3 ಸಲ ಜರ್ಮನ್ ಸಬ್‌ಮೆರೀನಿನಿಂದ ತಪ್ಪಿಸಿಕೊಂಡು, ಆಮೇಲೆ ಮುಳುಗಿಸಲ್ಪಟ್ಟಿತು. ಇದರ ನಾವಿಕರು ಜೀವರಕ್ಷಣಾ ದೋಣಿಗಿಳಿದ ಮೇಲೆ ಆ ದೋಣಿಗೂ ಜರ್ಮನರು ಗುಂಡೆಸೆದು ಒಡೆದು ಹಾಕಿದರು. ಬಾಹಿಯ ಬ್ಲಾಂಕ ಎಂಬ ದೊಡ್ಡ ಜರ್ಮನ್ ಸ್ಟೀಮರೊಂದು ಹಿಡಿಯಲ್ಪಟ್ಟಿರುವುದು.

ದಶಂಬರ ತಾ 30 ರಲ್ಲು ಮುಸಲೋನಿಯವರು, ಮುಖ್ಯ ಸೇನಾಧಿಕಾರಿಯಾದ ಮಾರ್ಶಲ್ ಗ್ರೆಜಿಯಾನಿಯವರೊಡನೆ 3 ಘಂಟೆ ಪ್ರಾಮುಖ್ಯ ಮಾತುಕತೆ ನಡಿಸಿರುವರು. ಇಟೆಲಿಯ ಅರಸರಿಗೆ ಪೋಪರ ಸಂದರ್ಶನ ಮತ್ತು ಇಟೆಲಿಯ ಜರ್ಮನ್ ರಾಯಭಾರಿಯು ಜರ್ಮನಿಗೆ ತೆರಳಿದುದರಿಂದೆಲ್ಲಾ ಪುನಃ ಸಂಧಿ ಪ್ರಸ್ತಾಪದ ಸುದ್ದಿಯುಂಟಾಗಿರುವುದು. ಲೋಕ ಶಾಂತಿಯ ಯಾವ ಸೂಚನೆಯನ್ನಾದರೂ ಯಾರಾದರೂ ಮಾಡಿದ ಪಕ್ಷದಲ್ಲಿ ಆ ಕುರಿತು ಚರ್ಚಿಸಲು ತಾನು ತಯಾರಿರುವೆನೆಂದು ಪ್ರೆಸಿಡೆಂಟ್ ರೂಸವೆಲ್ಟರು ಪ್ರಕಟಗೊಳಿಸಿರುವರು. ಬರ್ಲಿನಿನ ಪೋಪ್ ಸಾಹೇಬರ ಪ್ರತಿನಿಧಿಯು ಕಳೆದ ವಾರದಲ್ಲಿ 6 ಸಲ ಜರ್ಮನ್ ವಿದೇಶಾಂಗ ಖಾತೆಯನ್ನು ಸಂದರ್ಶಿಸಿರುವರೆಂದು ತಿಳಿದು ಬರುತ್ತದೆ. ಪೋಪ್ ಸಾಹೇಬರೂ ಮುಸಲೋನಿಯವರೂ, ಯುರೋಪಿನ ಯುದ್ಧವು ಇನ್ನೂ ವ್ಯಾಪಿಸದಂತೆ ತಮ್ಮಿಂದ ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡಲಿರುವರೆಂದೂ, ಜರ್ಮನಿಯ ರಷ್ಯದ ಅಧಿಕಾರ ವ್ಯಾಪನೆಯನ್ನು ತಡೆಗಟ್ಟುವಂತೆ ಮುಸಲೋನಿಯವರು ಹಿಟ್ಲರರನ್ನು ಒತ್ತಾಯಪಡಿಸಿ ಒಪ್ಪಿಸುವರೆಂದೂ, ಸಂಧಿಯ ಸೂಚನೆಗಳ ಕುರಿತು ಆಲೋಚನೆ ನಡೆಯುತ್ತಿರುವುದೆಂದೂ ತಿಳಿದುಬರುತ್ತದೆ.

ಹಿಟ್ಲರ್ ಮತ್ತು ಗೋರಿಂಗರ ವಿಜಯದ ಭರವಸೆ
ಎಲ್ಲೆಲ್ಲಿಯೂ ಫಿನ್ಲೆಂಡಿನ ಪ್ರಬಲ ವಿಜಯ!

ಹಿಟ್ಲರ್ ಮತ್ತು ಗೋರಿಂಗರ ಭಾಷಣ

ದಶಂಬರ ತಾ. 30ರಲ್ಲು ಹರ್ ಹಿಟ್ಲರು ಜರ್ಮನ್ ಸೇನೆಗೆ ಮತ್ತು ನಾಝಿ ಪಕ್ಷಕ್ಕೆ ಕೊಟ್ಟಿರುವ ಸಂದೇಶಗಳಲ್ಲಿ ವಿಜಯದ ಭರವಸೆ ತೋರಿಸಿರುವರು. 1940ನೇ ವರ್ಷದ ಸಂದೇಶವೇ 'ವಿಜಯ'ವೆಂದು ಮಾರ್ಶಲ್ ಗೋರಿಂಗರಂದಿರುವರು. 1939ನೇ ಇಸವಿಯಲ್ಲಿ ಜರ್ಮನ್ ಸೇನೆಯು ಹೆಮ್ಮೆಪಡತಕ್ಕ ಮಹತ್ಕಾರ್ಯಗಳನ್ನು ಸಾಧಿಸಿರುವುದು. ಹದಿನೆಂಟೇ ದಿನಗಳಲ್ಲಿ ಪೋಲೆಂಡನ್ನು ಗೆದ್ದು ವರ್ಸೇಲ್ಸ್ ಒಪ್ಪಂದವು ಜರ್ಮನಿಯ ಪೂರ್ವಭಾಗದಲ್ಲಿ ಮಾಡಿರುವ ಅನ್ಯಾಯವು ನಿವಾರಿಸಲಾಗಿದೆ 1939 ಜರ್ಮನಿಗೆ ಐತಿಹಾಸಿಕ ವರ್ಷ. ಬರುವ ವರ್ಷದಲ್ಲಿ ಕೂಡಾ ಭಗವಂತನು ನಮಗೆ ಇದೇ ರೀತಿಯ ವಿಜಯ ಮತ್ತು ಉತ್ಸಾಹವನ್ನೀಯಲೆಂದು ನನ್ನ ಹಾರ್ದಿಕ ಪ್ರಾರ್ಥನೆಯಾಗಿದೆ. ಜರ್ಮನ್ ಜನತೆಯ ರಕ್ಷಣೆ ಮತ್ತು ಅಸ್ತಿತ್ವಕ್ಕಾಗಿ ಅತ್ಯಂತ ಪ್ರಯಾಸದ ಹೋರಾಟವು ನಮ್ಮ ಮುಂದಿದೆ. ಆದರೂ, ಇಡೀ ಜರ್ಮನ್ ಜನಾಂಗವು ನಿಮ್ಮ ಮೇಲೆ ಅಭಿಮಾನಪೂರ್ಣವಾದ ವಿಶ್ವಾಸವುಳ್ಳವರಿರುವೆವು. ನಿಮ್ಮಂತಹ ಸೈನಿಕರುಳ್ಳ ಜರ್ಮನಿಯು ವಿಜಯ ಹೊಂದದಿರಲಾರದು" ಎಂಬುದೇ ಜರ್ಮನ್ ಸೇನೆಗೆ ಹಿಟ್ಲರರ ಸಂದೇಶ. ನಾಝಿ ಪಕ್ಷಕ್ಕಿತ್ತ ಸಂದೇಶದಲ್ಲಿ ಹರ್ ಹಿಟ್ಲರು ತಾನು ಅಧಿಕಾರಕ್ಕೆ ಬಂದ ಮತ್ತು ಅನಂತರದ ವಿದ್ಯಮಾನಗಳನ್ನೆಲ್ಲಾ ಪರಿಶೀಲಿಸಿ, 1940ನೇ ವರ್ಷವು ನಿರ್ಧಾರವನ್ನು ತರಲಿ. ಅದು ನಮಗೆ ವಿಜಯದ ನಿರ್ಧಾರವನ್ನೇ ತರದಿರಲಾರದು. ವರ್ಸೇಲ್ಸ್ ಒಪ್ಪಂದದ ಅಭಂಗರು ಪುನಃ ವಿಜಯ ಹೊಂದುವಂತಾದರೆ ಜರ್ಮನಿ ಅವಸ್ಥೆ ಏನಾಗುವುದೆಂದು ಹೇಳಬರುವುದಿಲ್ಲ. ನಾವು ವರ್ಸೇಲ್ಸಿನ ಒಪ್ಪಂದ ವಿರೋಧವಾಗಿ ಮಾತ್ರವಲ್ಲದೆ ಮುಂದೆ ಬರಲಿರುವ ಅದಕ್ಕಿಂತಲೂ ಹೆಚ್ಚಿನ ಅನ್ಯಾಯಗಳನ್ನು ತಡೆಗಟ್ಟಲು ಕೂಡಾ ಹೋರಾಡುತ್ತಿದ್ದೇವೆ. ಕೊಳತು ಹೋಗುತ್ತಿರುವ ಮುದಿರಾಷ್ಟ್ರಗಳು ಯುರೋಪವನ್ನು ಪುನರ್ಘಟಿಸಲಾರವು. ಇಂದೀಗ ಜರ್ಮನಿಯು ವೈರಿಗಳಿಗೆ ಪಶ್ಚಿಮದ ಗೋಡೆಯ ಮೇಲೆ ಧಾಳಿ ಇಡುವ ಧೈರ್ಯವಿಲ್ಲ. ಇವ್ವರೆ ಪರೆಗಿನ ಪ್ರತಿಯೊಂದು ಹೋರಾಟದಲ್ಲಿಯೂ ಜರ್ಮನ್ ಸೈನಿಕರು ಪ್ರಶಂಸನೀಯ ಭಾಗವಹಿಸಿದ್ದಾರೆಂದು ಹೇಳಿರುವರು.

"ಶಾಂತಿಪರ ಪಿಥಿಯಶಾಸ್ತ್ರಕ ಲೋಕದ ರಚನೆಗಾಗಿ ಜರ್ಮನಿಯು ನಡಿಸಿದ ಪ್ರಯತ್ನವನ್ನು ಇಂಗ್ಲೆಂಡ ಪಾಶವಿಕವಾಗಿ ನಾಶಗೊಳಿಸಿದೆ. ಆದುದರಿಂದಲೇ ಹೋರಾಡಿ ವಿಜಯ ಸಾಧಿಸಲು ಫ್ಯೂರರು ಆಜ್ಞೆ ಕೊಡಬೇಕಾಯಿತು. ಪೋಲೆಂಡಿನ ಪತನದಿಂದ ಯುದ್ಧವು ಅಂತ್ಯವಾಗದುದಕ್ಕೆ ಮಿತ್ರರಾಷ್ಟ್ರಗಳು ಕಾರಣ. ಈವರೆಗೆ ಶಾಂತಿಬೇಕಾಗಿಲ್ಲ. ಹಾಗಾದರೆ ಅವರು ಯುದ್ಧದ ಅನುಭವವನ್ನೇ ಪಡೆಯಲಿ. ಜರ್ಮನಿಯ ವಿಮಾನಪಡೆಯು ಇಷ್ಟರಲ್ಲೇ ತನ್ನ ಸಾಹಸವನ್ನು ವ್ಯಕ್ತಗೊಳಿಸಿದೆ. ಇನ್ನು ಫ್ಯೂರರು ಆಜ್ಞೆ ಕೊಟ್ಟ ಕ್ಷಣ ಇಡೀ ಪಡೆಯು ಗಿಡುಗದಂತೆ ವೈರಿಗಳ ಮೇಲೆರಗುವುದು. 1940ರ ಜರ್ಮನಿಯ ಸಂದೇಶವೆಂದರೆ ವಿಜಯ. ಜರ್ಮನ್ ರಾಷ್ಟ್ರವು ಇಷ್ಟರಲ್ಲೇ ಯುದ್ಧಕ್ಕೆ ಬೇಕಾದ ಸಿದ್ಧತೆಯನ್ನೆಲ್ಲಾ ಮಾಡಿದೆ. ಜನತೆಗೆ ಆಹಾರದ ಕೊರತೆಯುಂಟಾಗುವ ಭೀತಿಯೇನೂ ಇಲ್ಲ. ನಾವು ನಮ್ಮ ಶಕ್ತಿಯ ಬಲದಿಂದ ನಮ್ಮ ಮುಂದಿರುವ ಮಹತ್ತಾದ ಸಮಸ್ಯೆಗಳನ್ನು ಬಿಡಿಸಿ ಜಯಸಂಪಾದನೆ ಮಾಡುವೆವು" ಎಂದು ಮಾರ್ಶಲ್ ಗೋರಿಂಗರು ನವವರ್ಷದ ಸಂದೇಶವನಿತ್ತಿರುವರು. ಜರ್ಮನ್ ಸೇನೆಯ ಮುಖ್ಯ ನಾಯಕ ಜನರಲ್ ಬ್ರೋಚಿಚರೂ ನೌಕಾನಾಯಕ ಎಡ್ಮಿರಲ್ ರೈಡರರೂ ಹಿಟ್ಲರರ ಕುರಿತು ದೃಢವಿಶ್ವಾಸ ಸೂಚಿಸಿ ವಿಜಯದ ಭರವಸೆಯ ಸಂದೇಶಗಳನ್ನಿತ್ತಿರುವರು.

ರಷ್ಯಾ ಫಿನ್ಲೆಂಡ್ ಯುದ್ಧ

ದಶಂಬರ ತಾ. 25ರಲ್ಲು ನೂರಾರು ಸೋವಿಯೆಟ್ ವಿಮಾನಗಳು ಫಿನ್ಲೆಂಡಿನಲ್ಲೆಲ್ಲಾ ಹಾರಾಡಿ ಬಾಂಬೆಸೆದಿರುವವು. ಹೆಲ್ಸಿಂಕಿಯಲ್ಲಿ ಜನರು ಕ್ರಿಸ್‌ಮಸ್ ಹಬ್ಬವನ್ನು ನೆಲಮಾಳಿಗೆಗಳಲ್ಲಿ ಕಳೆಯಬೇಕಾಯಿತು. ದಶಂಬರ ತಾ 30ರಲ್ಲಿ ಕರೇಲಿಯನ್ ಭೂಕಂಠದಲ್ಲಿ ಹಲವು ಕಡೆ ಸೋವಿಯೆಟ್ ಸೇನೆಯು ಧಾಳಿ ನಡಿಸಿ ಹಿಂದಕ್ಕಟ್ಟಿರುವರೆಂದು ಹೆಲ್ಸಿಂಕಿಯ ವಾರ್ತೆ. ಸುವಂಟೋ ಸರೋವರವನ್ನು ದಾಟಲು ಸೋವಿಯೆಟ್ ಸೈನಿಕರು ನಾಲ್ಕು ಕಡೆಗಳಲ್ಲಿ ಪ್ರಯತ್ನಿಸಿ 700 ಮಂದಿ ಕೊಲ್ಲಲ್ಪಟ್ಟಿರುವರು. ದಶಂಬರ 25ರಲ್ಲಿ ಫಿನ್ನರು 26 ಸೋವಿಯೆಟ್ ವಿಮಾನಗಳನ್ನು ನಾಶಮಾಡಿರುವರೆಂದು ತಿಳಿದುಬರುತ್ತದೆ. ಸ್ವೀಡನಿನಿಂದ ಸಾವಿರಾರು ಮಂದಿ ಸ್ವಯಂಸೇವಕರು ಬಂದು ಫಿನ್ನಿಶ್ ಸೇನೆಗೆ ಸೇರು-

(೭ನೇ ಪುಟ ನೋಡಿರಿ)

GREETINGS

THE DIRECTORS OFFICERS AND STAFF OF THE CANARA BANK LTD JOIN IN SENDING YOU THIS MESSAGE OF APPRECIATION FOR THE VALUED PATRONAGE AND FRIENDSHIP WE HAVE ENJOYED DURING THE PAST YEAR. WE SINCERELY WISH YOU A

HAPPY & PROSPEROUS NEW YEAR.

MEMBER RESERVE BANK OF INDIA.

MEMBER BOMBAY CLEARING HOUSE

ESTD 1906

CANARA BANK LIMITED.

- ರೌರವ ನರಕ ಬುಚೆನ್‌ವಾಲ್ಡ್ ಶಿಬಿರ -

ಜರ್ಮನಿಯ ದುಃಖದ ನಗರ

ಕೈದಿಗಳ ಮೇಲೆ ನಡಿಸುವ ಪೈಶಾಚಿಕ ಅತ್ಯಾಚಾರಗಳ ವೃತ್ತಾಂತ.

('ಬುಚೆನ್ ವಾಲ್ಡ್' ಎಂದರೆ ಸಾಕು ಜರ್ಮನಿಯ ಜನತೆಯ ಮೈಯೆಲ್ಲಾ ಜುಮ್ಮೆನ್ನುವುದು. ಅಷ್ಟೊಂದು ಭೀಕರವಾಗಿದೆ, ಆ ಶಬ್ದ. 'ಬೀಚ' ಮರಗಳ ಸುಂದರ ಸುತ್ತುವರಿಯುವಿಕೆಯೊಳಗಿದೆ ಈ ಭಯಂಕರ ದುಃಖದ ನಗರ. ವಿದ್ಯುತ್ ತುಂಬಿದ ಕಬ್ಬಿಣದ ಸರಿಗೆ ಬೇಲಿಯಿಂದ ಆವರಿಸಲಾಗಿದೆ. ಬ್ಲೇಕ್ ಗಾರ್ಡ್‌ರೆಂಬ ಕ್ರೂರ ಜರ್ಮನ್ ಪಹರೆಗಾರರು ಕಾಯುತ್ತಿದ್ದಾರೆ. ಅದನ್ನು ಮಿಶನ್ ತೋಪುಗಳ ಸನ್ನದ್ಧತೆಯಿಂದ ಯೆಹೂದ್ಯ ಕೈದಿಯೊಬ್ಬರು ಈ ಶಿಬಿರದಲ್ಲಿ ಕಂಡು ಬರೆದ ಭೀಷಣ ವಿದ್ಯಮಾನಗಳನ್ನು ಸಂಕ್ಷೇಪವಾಗಿ ಈ ಕೆಳಗೆ ಕೊಡಲಾಗಿದೆ.)

●

ನಾನು ಇತರ ಸುಮಾರು 16,000 ಮಂದಿಯೊಂದಿಗೆ 1938ನೇ ಇಸ್ವಿ ಜೂನ್ ತಾ. 13ರಲ್ಲಿ ಕೈದುಮಾಡಲ್ಪಟ್ಟೆನು. ನಮ್ಮೊಂದಿಗೆ 70ವರ್ಷದ ಮುದುಕರೂ, ಕ್ಷಯವೇ ಮೊದಲಾದ ರೋಗಪೀಡಿತರೂ ಇದ್ದರು. ಕೈದುಮಾಡಲ್ಪಟ್ಟೊಡನೆಯೇ ಆರಂಭವಾಗಿದೆ ನಮ್ಮ ತುಳಿತ ಮತ್ತು ಒದೆತಕ್ಕೆ. ಪಶುಗಳ ಹಿಂಡುಗಳಿಗಿಂತ ಕಳತೆಯಾಗಿದ್ದೆವು ನಾವು. ಬುಚೆನ್ ವಾಲ್ಡಿಗೆ ಮುಟ್ಟಿದೊಡನೆಯೇ, ಅದರ ಸುಪರಿಂಟೆಂಡೆಂಟರಾದ ರೊಯಿಡೆಲರು ಈ ಮಾತುಗಳಿಂದ ನಮ್ಮನ್ನು ಸ್ವಾಗತೀಕರಿಸಿದರು.

"ನಿಮ್ಮಲ್ಲಿ ಕೆಲವರು ಈ ಮೊದಲು ಕಾರಾಗೃಹಗಳಿಗೆ ಹೋದವರಿರಬಹುದು. ಇಲ್ಲಿನ ಕಷ್ಟದ ದೃಷ್ಟಿಯಲ್ಲಿ ಅದು ಮಹತ್ತಾದ ಸುಖ. ನೀವು ಸ್ಥಾನಬದ್ಧ ಶಿಬಿರದೊಳಗೆ ಬರುವುದೆಂದರೆ ನರಕಕ್ಕೇನೇ ಪ್ರವೇಶಿಸುವುದು. ಇಲ್ಲಿಯ ಪಹರೆಗಾರರನ್ನು ಸ್ವಲ್ಪವೇನಾದರೂ ಎದುರಿಸಲೆತ್ನಿಸಿದರೆ ಕೂಡಲೆ ಗುಂಡಿಗೆ ಬಲಿಯಾಗಬೇಕು. ಈ ಶಿಬಿರದಲ್ಲಿ ಎರಡು ವಿಧದ ಶಿಕ್ಷೆಗಳು ಮಾತ್ರ ಇವೆ. ಕೊರಡೆ ಮತ್ತು ಗುಂಡಿನೇಟು."

ಶಿಬಿರದ ದ್ವಾರದಲ್ಲಿ ಮಿಶನ್ ತೋಪುಗಳ ಪಹರೆಯಿದ್ದಿತು. "ತಪ್ಪಾಗಲಿ ಒಪ್ಪಾಗಲಿ ನನ್ನ ದೇಶವೇ ಮುಖ್ಯ ನನಗೆ" ಎಂದು ದ್ವಾರದಲ್ಲೇ ಬರೆಯಲ್ಪಟ್ಟಿತ್ತು. ಪಹರೆಗಾರರು ಎರಡು ಸಾಲಿನಲ್ಲಿ ನಿಂತಿದ್ದರು. ಅವರ ನಡುವೆ ನಾವು ಸರಿದುಹೋಗಬೇಕಿತ್ತು. ಒಳಗೆ ಪ್ರವೇಶಿಸುವಾಗ ಆಗಲೇ ಆರಂಭವಾಯಿತು ಗುದ್ದು ಮತ್ತು ಒದೆಗಳಿಗೆ. ನಮ್ಮ ತಲೆಯನ್ನೆಲ್ಲಾ ಬೋಳಿಸಿ ನಮ್ಮ ಉಡಿಗೆ ತೊಡಿಗೆ ತೆಗೆದು ಕೈದಿ ದುಸ್ತು ಕೊಡಲಾಯಿತು ನಮಗೆ. ಆಮೇಲೆ ನಮ್ಮನ್ನೆಲ್ಲಾ ಒಂದೊಂದು ಕೋಣೆಗೆ 600 ಮಂದಿಯಂತೆ ಹಟ್ಟಿ ಕೋಣೆಗಳಲ್ಲಿ ತುಂಬಲಾಯಿತು. ಇಲ್ಲಿ ಮೇಜು ಕುರ್ಚಿಗಳಂತಿರಲಿ, ಮಲಗಲು ಚಾಪೆ ಕೂಡಾ ಇಲ್ಲ. ನಾವೆಲ್ಲ ನೆಲದಲ್ಲಿ ಕೂತು ಕಣ್ಣುಗೂರುತ್ತಾ ರಾತ್ರಿ ಕಳೆದೆವು. ಸ್ಥಳಾಭಾವದಿಂದ ಕೈಕಾಲು ನೀಡಿ ಮಲಗಲು ಸಾಧ್ಯವಿದ್ದಿಲ್ಲ. ಪ್ರತಿಯೊಬ್ಬ ಕೈದಿಗೆ ತೆಳುವಾದ ಎರಡು ಹರಕು ಜಮಖಾನಗಳು ಕೊಡಲ್ಪಟ್ಟವು. ಕೈಕಾಲು ತೊಳೆಯಲು ಯಾವ ಅನುಕೂಲತೆಯೂ ಇರಲಿಲ್ಲ. ಒಂದು ವಾರದ ವರೆಗೆ ನಾವಾದರೂ ಕೈಕಾಲು ಕೂಡಾ ತೊಳೆಯಲಿಲ್ಲ. ಅನಂತರ 600ಮಂದಿಗೆ ಕೈಕಾಲು ತೊಳೆಯಲು 8ಬೋಗುಣಿಗಳನ್ನು ಕೊಡಲಾಯಿತು. ನಮ್ಮ ಮೇಲೆ ಅಧಿಕಾರ ನಡಿಸುವವೆಂದರೆ ತಕ್ಷೀರನ್ನೇ ತಮ್ಮ ವೃತ್ತಿಯನ್ನಾಗಿಮಾಡಿ ಕಾರಾಗೃಹಗಳಲ್ಲೇ ಜೀವನ ಕಳೆವ ಹೃದಯರಹಿತ ಕೈದಿಗಳು. ಇವರು ಶುದ್ಧ ಪಶುಗಳವರು. ಅವರು ಕೊಡುವ ಪೀಡೆಯು ಅಸಹನೀಯವಿರುವುದು. ಪೀಡೆಯ ಕುರಿತು ಒಂದಿಷ್ಟು ಆಕ್ಷೇಪಿಸಿದರೆ ಗುಂಡಿನ ಬಾಯಿಯೇ ಗತಿ ನಮಗೆ. ಆದುದರಿಂದ ಅವರೇನೂ ಮಾಡಿದರೂ ತಾಳಿಕೊಳ್ಳಬೇಕು ನಾವು

ಆದೊಂದು ಭಯಂಕರ ಸ್ಮರಣೆಯು ಈಗಲೂ ನನ್ನ ಹೃದಯವನ್ನು ಭೇದಿಸುವುದು. ಹಗಲಲ್ಲಿ ನಾವು ಕೆಲಸಮಾಡುವಾಗ ಮುದುಕ ಕೈದಿಯೊಬ್ಬನಿಗೆ ಪಹರೆಗಾರರು ಕೊಟ್ಟ ಒದೆಯ ನೋವಿನಿಂದ ರಾತ್ರಿ ಅವನು ನರಳುತ್ತಾ ಎಡೆಬಿಡದೆ ಬೊಬ್ಬೆಹಾಕುತ್ತಿದ್ದನು. ಆ ಕೋಣೆಯ ಮೇಲ್ವಿಚಾರಕನಾದ ಪಶುವು, ಸುಮ್ಮನಿರೆಂದು ಹೇಳುತ್ತಾ ಅವನ ಮುಖಕ್ಕೆ ಗುದ್ದುತ್ತಾ ಇದ್ದನು. ಬೆಳಗ್ಗೆ ನೋಡುವಾಗ ಮುದುಕನು ಮೃತನಾಗಿದ್ದನು.

ಶಿಬಿರಕ್ಕೆ ಹೋದ ಮೊದಲಿನ ಎರಡು ದಿವಸಗಳಲ್ಲಿ ನಮಗೆ ಯಾವ ಆಹಾರವೂ ಕೊಡಲ್ಪಡಲಿಲ್ಲ. ಆದರೂ ನಾವು ಬಹಳ ಶ್ರಮವಹಿಸಿ ದುಡಿಯಬೇಕಿತ್ತು. ಶಿಬಿರಕ್ಕೆ ಸೇರಿದೊಡನೆಯೇ, "ನಾವು ಯೆಹೂದ್ಯರು, ಕೆಲಸಮಾಡಲು ತಪ್ಪಿಸಿದವರು, ಒಪ್ಪದವರು. ಸ್ವಸಂತೋಷದಿಂದಲೇ ನಾವೀ ರೀತಿ ಬರೆದುಕೊಡುವುದು" ಎಂದು ನಾವು ಸಹಿಹಾಕಿ ಬರೆದುಕೊಡಬೇಕು. ವಕೀಲನೊಬ್ಬನು ಎಷ್ಟಕ್ಕೂ ಅದಕ್ಕೊಪ್ಪಲಿಲ್ಲ. ಪೈಶಾಚಿಕ ಪೀಡೆಗೊಳಗಾದನು. ಆದರೂ ಅವನೊಪ್ಪಲಿಲ್ಲ. 4 ದಿನಗಳ ಮೇಲೆ ಅವನ ಶರೀರವೆಲ್ಲಾ ಗಾಯಗಳಿಂದ ಛಿನ್ನಭಿನ್ನವಾಗಿ ಆತನು ಮರಣೋನ್ಮುಖನಾಗಿ ಅರೆಮರವೆಯಲ್ಲಿರುವಾಗ ಸಹಿಕೊಟ್ಟನು.

ಕೆಲಸಮಾಡುವಾಗ ನೀರು ಕುಡಿದರೆ ಮಧ್ಯಾಹ್ನ ಊಟವಿಲ್ಲ. 4ಘಂಟೆ ಬಿಸಿಲಲ್ಲಿ ನೆಟ್ಟಗೆ ಶಿಕ್ಷಾಗಿ ನಿಲ್ಲಬೇಕು. ಕೆಲಸದ ಸಮಯದಲ್ಲಿ ಸಿಗರೇಟ್ ಎಳೆದರೆ ಕೊರಡೆ ಚಡಿ. ಚರ್ಮದ ಚಬುಕಿನಿಂದ ಕುಂಡೆಗೆ ಚಡಿಕೊಡಲಾಗುವುದು. ಇಬ್ಬರು ಟೊಣಪ ಪಹರೆಗಾರರು ಎರಡು ಬದಿಗಳಲ್ಲಿ ನಿಂತು ಒಬ್ಬನ ಅನಂತರ ಇನ್ನೊಬ್ಬ ಚಡಿ ಕೊಡುವರು. ಮೂರನೆಯವನೊಬ್ಬನು, ಕೈದಿಯು ಕೂಗದಂತೆ ಗಲ್ಲಗಳನ್ನೊತ್ತಿ ಹಿಡಿಯುವನು. ಮಂದಿತನದ ನಿಮಿತ್ತ ಚುರುಕಾಗಿ ಕೆಲಸಮಾಡಲಾಗದ ಕೈದಿಗಳು, ರೋಗಿಗಳೆಂದು ಈ ಕೊರಡೆ ಚಡಿಯ ಶಿಕ್ಷೆಗೊಳಗಾಗುತ್ತಾರೆ. ಚಡಿಕೊಟ್ಟ ಮೇಲೆ ಪೆಟ್ಟು ಸರಿ ತಾಗಿ ಗಾಯಗಳಾಗಿವೆಯೆಂಬುದನ್ನು ಖಾತ್ರಿಮಾಡಿಕೊಳ್ಳಲು ಪಹರೆಗಾರರಿಗೆ ಚಲ್ಲಣ ತೆಗೆದು ಕುಂಡೆ ತೋರಿಸಬೇಕು. ಬೆವರು ಪೆಟ್ಟಿಗೆಯೊಳಗೆ ದಾಕಿಡುವುದು ಇನ್ನೊಂದು ಶಿಕ್ಷಾಕ್ರಮ. ಈ ಪೆಟ್ಟಿಗೆಯೊಳಗಿಂದ ಹೊರ ತೆಗೆಯುವಾಗಲೆ ಕೈದಿಯು ಸತ್ತುಹೋಗಬಹುದು. ಮರಕ್ಕೆ ಬಿಗಿದು ಸುತ್ತು ಸುತ್ತು ತಿರುಗುವಂತೆ ಮಾಡುವುದು ಮತ್ತೊಂದು ರೀತಿಯ ದಂಡನೆ. ಏನಾದರೂ ಸ್ವಲ್ಪ ತಪ್ಪುಮಾಡಿದರೆ ಕೈದಿಯನ್ನೊಯ್ದು ಮರವನ್ನಪ್ಪುವಂತೆ ಬಿಗಿಯಲಾಗುವುದು. ಅವನ ಕೈಗಳು ಹಿಂದೆ ಕಟ್ಟಲ್ಪಡುವವು. ಆಮೇಲೆ ಅವನು ಮರದ ಸುತ್ತಲೂ ತಿರುಗುವಂತೆ ನಿರ್ಬಂಧಿಸಲಾಗುವುದು. ಮೆಲ್ಲಗೆ ತಿರುಗಿದರೆ ಒದೆ ಮತ್ತು ತುಳಿತ ಇದ್ದೇ ಇದೆ. ಇದರಲ್ಲೇ ಕಠಿಣ ತರದ ಇನ್ನೊಂದು ಬಗೆಯ ಶಿಕ್ಷೆಯಿದೆ. ಮುಖ ಹೊರಗೆಮಾಡಿ ಕೈದಿಯನ್ನು ಮರಕ್ಕೆ ಗಟ್ಟಿಯಾಗಿ ಬಿಗಿಯಲಾಗುವುದು. ಕೈಗಳು ಮರದ ಸುತ್ತೂ ಎಳೆದು ಕಟ್ಟಲ್ಪಡುವವು. ಎದೆ, ಸೊಂಟ, ತೊಡೆ, ಮೊಣಕಾಲುಗಳನ್ನೆಲ್ಲಾ ಗಟ್ಟಿಯಾಗಿ ಮರಕ್ಕೆ ಬಿಗಿದು ಕೆಲವು ಗಂಟೆಗಳತನಕ ಹಾಗೆಯೇ ಬಿಟ್ಟುಬಿಡಲಾಗುವುದು. ಈ ಶಿಕ್ಷೆಗೊಳಗಾದವರು ಅಲ್ಲಿಯೇ ಪ್ರಾಣಬಿಟ್ಟುಬಿಡುವುದುಂಟು. ಈ ಶಿಕ್ಷೆಗಳೆಲ್ಲಾ ಬುಚೆನ್‌ವಾಲ್ಡಿಯಲ್ಲಿ ಸರ್ವಸಾಮಾನ್ಯವಾಗಿ ಪ್ರತಿ ದಿನ ವಿಧಿಸಲ್ಪಡುತ್ತವೆ.

ನಮ್ಮನ್ನೆಲ್ಲಾ ಕೆಲಸಕ್ಕೆ ಕರೆದೊಯ್ದ ಪ್ರಥಮ ದಿನದ ಸ್ಮರಣೆಯನ್ನು ನಾನು ಎಂದೆಂದಿಗೂ ಮರೆಯಲಾರೆ. ಅಂದು ಜೂನ್ ತಿಂಗಳ ಪ್ರಖರ ತಾಪದಲ್ಲಿ ಪ್ರಾಯ ಸಂದ ಹಲವು ಮಂದಿ ಕೈದಿಗಳು ಕಲ್ಪಣೆಗಳಲ್ಲಿ ಕೆಲಸಮಾಡುತ್ತಿದ್ದಂತೆಯೇ ಬಿದ್ದು ಪ್ರಾಣ ಬಿಟ್ಟರು. ನಮ್ಮನ್ನೆಲ್ಲಾ ಕಲ್ಲಿನ ಕಲ್ಪಣೆಗೆ ಅಟ್ಟಿಕೊಂಡು ಹೋಗಲಾಯಿತು. ನಮ್ಮಲ್ಲಿ 100ರಲ್ಲಿ 80ಮಂದಿ ಅವರೆಗೆ ಶಾರೀರಿಕ ಕೆಲಸಮಾಡಿದವರಲ್ಲ. ಆದರೂ ನಾವು ಅತ್ಯಂತ ಭಾರವಾದ ಕಲ್ಲುಗಳನ್ನು ಹೆಗಲ ಮೇಲೆ ಹೊತ್ತು ಹೋಗಬೇಕಾಗಿತ್ತು. ಮೂರು ನಾಲ್ಕು ಮಂದಿ ಸೇರಿ ಕಲ್ಲುಗಳನ್ನು ನಮ್ಮ ಭುಜದ ಮೇಲೆ ಹೇರುತ್ತಿದ್ದರು. ಸುಮಾರು ಒಂದು ಮೈಲು ದೂರದಲ್ಲಿ ಕೈದಿಗಳಿಂದಲೇ ಕಟ್ಟಲ್ಪಡುವ ರಸ್ತೆಗೆ ಈ ಕಲ್ಲುಗಳನ್ನೊಯ್ಯಬೇಕು. ಕಲ್ಲುಗಳನ್ನೊಯ್ಯುವ ದಾರಿ ಕೂಡಾ ಸಮತಟ್ಟಾದುದಲ್ಲ. ಕೈದಿಗಳಾರಾದರೂ ನಿಂತರೆ ಅಥವಾ ಮೆಲ್ಲಗೆ ಹೋದರೆ ಒದೆ, ಗುದ್ದು, ದೊಣ್ಣೆ ಪೆಟ್ಟು, ಬೋವಿಕಡೆಯ ಜಜ್ಜುವಿಕೆಗೊಳಗಾಗಬೇಕು. ಹೊತ್ತು ಏರಿದಂತೆ ಬಿಸಿಲಿನ ತಾಪವು ಅಸಹನೀಯವಾಗುತ್ತಿತ್ತು. ಪಹರೆಗಾರರು ಮೋಟರ್ ಕಾರುಗಳಲ್ಲಿ ಅತ್ತಿತ್ತ ಓಡಾಡುತ್ತಾ ಧೂಳಿನ ಮೋಡಗಳನ್ನೆಬ್ಬಿಸುತ್ತಿದ್ದರು. ಈ ಕಲ್ಪಣೆಯ ಸಮೀಪವೇ ಶುದ್ಧ ನೀರ ಬುಗ್ಗೆಯೊಂದಿತ್ತು. ಈ ಬುಗ್ಗೆಯ ಒಳಗೆ ಹೋಗಿ ಒಂದು ಗುಟುಕು ನೀರು ಕುಡಿಯಲೆತ್ನಿಸಿದವರನ್ನು ಪಹರೆಗಾರರು ದೊಣ್ಣೆಗಳಿಂದ ಹೊಡೆಯಟ್ಟುತ್ತಿದ್ದರು. ಅಪರಾಹ್ನವಾಗುವುದರೊಳಗೆ ನಮ್ಮಲ್ಲಿ 30ಮಂದಿ ಬೋಧ ತಪ್ಪಿ ಬಿದ್ದರು. ಹೀಗೆ ಬಿದ್ದವರನ್ನು ಪಹರೆಗಾರರು ಅಮಾನುಷವಾಗಿ ಹಿಂಸಿಸಿ ಎಬ್ಬಿಸಲೆತ್ನಿಸುತ್ತಿದ್ದರು. ಕೆಲಸ ಮುಗಿದ ಮೇಲೆ ನಾವು ಅವರನ್ನೆಲ್ಲಾ ಶಿಬಿರದ ಆಸ್ಪತ್ರೆಗೆ ಹೊತ್ತುಕೊಂಡುಹೋಗಬೇಕಾಯಿತು. ಅವರಲ್ಲಿಬ್ಬರು ಮೃತರಾಗಿದ್ದರು.

ಬುಚೆನ್‌ವಾಲ್ಡ್ ಶಿಬಿರದಲ್ಲಿ ಪ್ರತಿ ದಿನವು ಮರಣಗಳಾಗುತ್ತಲೇ ಇವೆ. 1939 ನೇ ಜೂನ್ ತಾ. 16ರಲ್ಲಿ ಶಿಬಿರಕ್ಕೆ ಬಂದ 3000 ಮಂದಿ ಯೆಹೂದ್ಯ ಕೈದಿಗಳ ಪೈಕಿ 80ಮಂದಿ ಪ್ರಥಮ ಎರಡು ವಾರಗಳಲ್ಲಿ ಮೃತರಾದರು. 5ನೇ ವಾರದಲ್ಲಿ ಇನ್ನೂ 30 ಮಂದಿ ಸತ್ತರು, ಆದರೆ ಈ ಸಮಾಚಾರವು ಹೊರಗೆ ತಿಳಿಸಲ್ಪಡುವುದಿಲ್ಲ. ಶಿಬಿರದಿಂದ ಓಡಿಹೋಗಲೆತ್ನಿಸಿ ಕೆಲವುಮಂದಿ ಕೈದಿಗಳು ಕೊಲ್ಲಲ್ಪಟ್ಟಿರುವರೆಂದು ಪ್ರಕಟಗೊಳಿಸಲಾಗುವುದು. ಪಹರೆಮಾಡುತ್ತಾ ನಿಂತುಕೊಂಡು ಬೇಸತ್ತ ಪಹರೆಗಾರರು ಕೆಲವು ವೇಳೆ

GREETINGS FOR THE NEW YEAR.

The Directors, Officers and the staff of The CANARA INDUSTRIAL & BANKING SYNDICATE LTD., Join in sending to their numerous shareholders, constituents, wishers and friends, their hearty greetings for a Prosperous and Happy New Year and express gratitude for for their increasing co-operation, good-will and support in the past and solicit the same in the future.

The Canara Industrial & Banking Syndicate Ltd.

Estd.] (Incorporated in British India) [1925.

Head Office:—UDIPI, (S India).

ಜೀವಂತ ಕೈದಿಗಳನ್ನು ತಮ್ಮ ಸಮೀಪಕ್ಕೆ ಕರೆಯುವರು. ಅವರು ಬಂದೊಡನೆಯೇ ಗುಂಡುಹಾರಿಸಿ ಕೊಂದುಹಾಕುವರು. ಇಂತಹ ವಿನೋದವು ಆಗಾಗ ನಡೆಯುತ್ತದೆ. ಆದರೆ ಬುಚೆನ್‌ವಾಲ್ಡಿನಲ್ಲಿ ಹೆಚ್ಚಿನ ಕೈದಿಗಳು ಸಾಯುವುದೆಂದರೆ ಕಲ್ಪಣೆಗಳಲ್ಲಿ ಕೆಲಸಮಾಡುವಾಗ. ದುರ್ಬಲರಾದವರಿಗೆ ದೊಡ್ಡ ದೊಡ್ಡ ಕಲ್ಲುಗಳನ್ನು ಹೊರಲು ಅಸಾಧ್ಯವಾಗುವುದು. ಆಗ ಪಹರೆಗಾರರು ಕಲ್ಲುಗಳನ್ನು ಅವರ ಹೆಗಲ ಮೇಲೆ ಪ್ರಯತ್ನಪಟ್ಟು ಹೇರಿ ಎದ್ದು ನಿಲ್ಲಿಸುವರು. ಅವರಲ್ಲಿ ಕೆಲವರು ಕಲ್ಲುಗಳನ್ನು ಹೊರಲಾರದೆ ಕೆಳಗೆ ಹೊತ್ತುಹಾಕಿ ನಿಂತುಬಿಡುವರು. ಇಂಥವರನ್ನು ಪಹರೆಗಾರರು ಹತ್ತಿರದ ತಮ್ಮ ನಿಲ್ದಾಣಕ್ಕೊಯ್ದು ಗುಂಡು ಹೊಡೆದು ಕೊಲ್ಲುವರು.

ಎರಿಕ್ ಲೋವೆನ್‌ಬರ್ಗ್ ಎಂಬ ೨೩ ವರ್ಷ ಪ್ರಾಯದ ಯೆಹೂದ್ಯನ ಕತೆಯು ಹೃದ್ರಾವಕವಿರುವುದು. ಅವನು ಸ್ವಲ್ಪ ಸಮಯದ ಮೊದಲು ಮದುವೆಯಾಗಿದ್ದು ಹೆಂಡತಿಯು ಇನ್ನೆರಡು ತಿಂಗಳುಗಳಲ್ಲಿ ಹೆರುವವಳಿದ್ದಳು. ಪಹರೆಗಾರರು ಇವನನ್ನು ಹಿಡಿದು ಕಲ್ಪಣೆಯ ಬಳಿಯ ರಸ್ತೆಗೊಯ್ದು, ದೊಡ್ಡ ಲೋರಿಯೊಂದು ಬರುವಾಗ ಅದರಡಿಗೆ ದೂಡಿದರು. ಒಂದುವರೆ ಘಂಟೆಯ ಅನಂತರ ಎರಿಕನು ಗತಪ್ರಾಣನಾದನು.

ಯೆಹೂದ್ಯ ಕೈದಿಗಳಿಗೆ ಇತರರಿಗಿಂತಲೂ ಹೆಚ್ಚಿನ ಶಿಕ್ಷೆಕೊಡಲಾಗುವುದು. ಅವರಿಗೆ ಕೊಡಲ್ಪಡುವ ಕಾಫಿ, ರೊಟ್ಟಿಗಳೆಲ್ಲಾ ಇತರರಿಗಿಂತ ಕಡಿಮಾಸಿ. ಅವರಾರಾದರೂ ಕಾಯಿಲೆಯಲ್ಲಿ ಬಿದ್ದರೆ ಔಷಧಿ ಕೊಡದಂತೆ ನಿಷೇಧವಿದೆ. ಚಿಕಿತ್ಸೆಯಿಲ್ಲದೆ ಹಲವರು ಸಾಯುತ್ತಾರೆ. ಬುಚೆನ್‌ವಾಲ್ಡ್ ಶಿಬಿರದ ಆಸ್ಪತ್ರೆ ಡಾಕ್ಟರರೂ ಯೆಹೂದ್ಯ ರೋಗಿಗಳನ್ನು ತೆಗೆದುಕೊಳ್ಳುವಹಾಗಿಲ್ಲ. ಒಬ್ಬ ರೋಗಿಯು ಕೇವಲ ನಟನೆಮಾಡುವನೆಂದು ಡಾಕ್ಟರರು ಒಮ್ಮೆ ಹೊರಹಾಕಿದರು. ೩ ಘಂಟೆಗಳೊಳಗೆ ಆತನು ಸತ್ತುಹೋದನು. ಮರಣೋನ್ಮುಖನಾದ ನಮ್ಮ ಸಂಗಾತಿಗಳಿಗೆ ಒಂದು ಗ್ಲಾಸು ನೀರು ಕೂಡಾ ಕೊಡಲು ನಮಗೆ ಸಾಧ್ಯವಿಲ್ಲ. ರಾತ್ರಿ ಕೋಣೆ ಬಿಟ್ಟು ಹೊರಗೆ ಹೋಗಲಿಕ್ಕಿಲ್ಲ. ಹೋದರೆ ಪಹರೆಗಾರರು ಗುಂಡಿಕ್ಕಿ ಕೊಲ್ಲುವರು.

ಶಿಬಿರದ ಪಹರೆಗಾರರಲ್ಲಿಯೂ ಕೆಲವರು ಸುಹೃದಯದವರಿದ್ದಾರೆ. ಅವರು ನಮಗೇನೂ ಹೆಚ್ಚಿನ ಪೀಡೆ ಕೊಡುವುದಿಲ್ಲ. ಆದರೆ ಅಂಥವರನ್ನು ಯೆಹೂದ್ಯ ಪ್ರಿಯರೆಂದು ದಂಡಿಸಲಾಗುವುದು. ಅವರಿಗೂ ಕೊರಡೆ ಚಡಿಕೊಡಲಾಗುವುದು. ಒಮ್ಮೆ ಆಸ್ಟ್ರಿಯದಿಂದ ಒಂದು ದಳ ಪಹರೆಗಾರರು ಬುಚೆನ್‌ವಾಲ್ಡ್ ಶಿಬಿರಕ್ಕೆ ತರಲ್ಪಟ್ಟರು. ಆಗ ನಾವು ಪಟ್ಟ ಕಷ್ಟಗಳು ಅವರ್ಣನೀಯವಿವೆ.

ಸರ್ವಸಾಮಾನ್ಯ ಜರ್ಮನ್ ಪೋಲೀಸರಿಗೆ ಸ್ಥಾನಬದ್ಧ ಶಿಬಿರಗಳಲ್ಲಿ ನಡೆಸಲ್ಪಡುವ ಅತ್ಯಾಚಾರಗಳ ಸಂಗತಿಯೇ ತಿಳಿದಿರುವುದಿಲ್ಲ. ಯಾರಾದರೂ ಅವರಿಗೆ ತಿಳಿಸಿದರೆ ಅವರು ಚಕಿತರಾಗುವರು. ಹಿಡಿದು ಬಂಧಿಸುವ ಕೆಲಸ ಗೆಸ್ಟೆಪೋ ಗುಪ್ತ ಪೋಲೀಸರದ್ದು. ಅಮಾನುಷ ಪೀಡೆಕೊಡುವ ಕೆಲಸ ಎಸ್. ಎಸ್. ಎಂಬ ಹೆಸರಿನ ಜರ್ಮನ್ ಬ್ಲೇಕ್ ಗಾರ್ಡ್ ದಳದವರದ್ದು. ಎಸ್. ಎ ಎಂದರೆ ಸ್ಟ್ರೋಮ್ ಡಿಟೇಚ್‌ಮೆಂಟ್ ಎಂಬ ದಳ. ಎಸ್. ಎಸ್. ಎಂದರೆ ಬ್ಲೇಕ್ ಗಾರ್ಡ್ಸ್ ದಳ. ಎಚ್. ಜೆ. ಎಂದರೆ ಹಿಟ್ಲರ್ ಯುವಕ ದಳ. ಎಸ್. ಎ. ದಳವೆಂದರೆ ಹಿಟ್ಲರರ ಖಾಸಗಿ ಸೇನೆಯೆಂಬ ಪಹರೆ ಮೊದಲಾದ ಕೆಲಸಗಳಿಗಾಗಿ ಆರಿಸಲ್ಪಟ್ಟ ದಳ. ಎಚ್. ಜೆ. ಎಂದರೆ, ನಾಝಿ ತತ್ವಗಳಲ್ಲಿ ಜರ್ಮನ್ ಹುಡುಗ ಹುಡುಗಿಯರನ್ನು ತರಬೇತಿ ಮಾಡುವ ಹಿಟ್ಲರ್ ಯುವಕ ದಳ.

(೫ನೇ ಪುಟದಿಂದ ಮುಂದರಿಸಿದ್ದು)

ಫಿನ್ಲೆಂಡಿನ ಯುದ್ಧದಿಂದಾಗಿ ಮಿತ್ರರಾಷ್ಟ್ರಗಳ ಮೇಲೆ ರಶ್ಯಕ್ಕೆ ಮತ್ತಷ್ಟು ದ್ವೇಷವುಂಟಾಗಿದೆ. ಫಿನ್ಲೆಂಡಿಗೆ ಇಂಗ್ಲೆಂಡು ಮತ್ತು ಫ್ರಾನ್ಸುಗಳು ಸಹಾಯಮಾಡುತ್ತಿರುವುದರಿಂದ ರಶ್ಯವು ಜರ್ಮನಿಗೆ ಸೇನಾಸಹಾಯವನ್ನು ಮಾಡಲಾರದೆಂದು ಹೇಳಬರುವುದಿಲ್ಲ. ಭವಿಷ್ಯದ ಕಲ್ಪನೆಯೇ ಗೊಂದಲಮಯವಾಗಿದೆ. ವಿಮಾನ, ಟಾಂಕಿ, ಯುದ್ಧಹಡಗ, ಸಬ್‌ಮೆರೀನ್ ಮೊದಲಾದುವುಗಳಿಂದ ಯೂರೋಪಿನ ಹಾಗೂ ಲೋಕದ ಅದೃಷ್ಟವು ನಿಶ್ಚಯವಾಗುವಂತೆ ತೋರುವುದಿಲ್ಲ. ರಾಜಕೀಯವು ಅದನ್ನು ನಿಶ್ಚಯಿಸಲಿರುವುದು.

ಜರ್ಮನಿಯ ಜನತೆ, ರಶ್ಯಾ, ಅಮೇರಿಕ ಮತ್ತು ಇಡೀ ಲೋಕರಚನೆಯ ಮೇಲೆ, ರಾಷ್ಟ್ರಗಳ ಧೋರಣೆಯಿಂದುಂಟಾಗುವ ಪರಿಣಾಮದಿಂದ ಈ ಯುದ್ಧದ ಭವಿಷ್ಯವು ನಿರ್ಧರಿಸಲ್ಪಡುವಂತಿದೆ. ಈ ವಿಷಯದಲ್ಲಿ ಇಷ್ಟರವರೆಗೆ ಮಿತ್ರರಾಷ್ಟ್ರಗಳ ವರ್ತನೆಯು ಏನೂ ತೃಪ್ತಿಕರವಿರುವುದಿಲ್ಲ.

ಇನ್ನೂ ಸಾಮ್ರಾಜ್ಯಶಾಹಿ ಸ್ವಾರ್ಥವನ್ನು ಕಟ್ಟಿಕೊಂಡು ಧನಿಕ ಹಾಗೂ ಬಂಡವಾಳಶಾಹಿ ಪದ್ಧತಿಯ ಸಮಾಜವನ್ನೇ ಎತ್ತಿಹಿಡಿಯಲೆಳಸುವ ಮನೋವೃತ್ತಿಯಿಂದ ಯುದ್ಧ ನಡಿಸಿದ ಪಕ್ಷದಲ್ಲಿ ಲೋಕದ ಜನತೆಯಲ್ಲಿ ಮಿತ್ರರಾಷ್ಟ್ರಗಳ ಕುರಿತು ಅಭಿಮಾನವುಂಟಾಗಲಾರದು. ಇಡೀ ಲೋಕದ ರಾಜಕೀಯ ಪುನರ್ವ್ಯವಸ್ಥೆಯ ಉದ್ದೇಶವನ್ನು ಮುಂದಾಗಿ ಮಾಡಿಕೊಂಡು ಯುದ್ಧ ಕೂಡ ಅದಕ್ಕನುಗುಣವಾಗಿಯೇ ವರ್ತಿಸಿದ ಪಕ್ಷದಲ್ಲಿ ಬ್ರಿಟನ್ ಫ್ರಾನ್ಸುಗಳಿಗೆ ಲೋಕದ ಸಹಾನುಭೂತಿ ದೊರೆಯುವುದು. ಜನತೆಯಲ್ಲದು ನವದೃಷ್ಟಿ ಮತ್ತು ಸ್ಫೂರ್ತಿಯನ್ನುಂಟುಮಾಡುವುದು. ಪ್ರಜಾಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯನ್ನು ಲೋಕದಲ್ಲಿ ಸ್ಥಿರವಾಗಿ ನೆಲೆಗೊಳಿಸಿ ಲೋಕದ ಎಲ್ಲಾ ರಾಷ್ಟ್ರಗಳ ಫೆಡರೇಶನನ್ನು ಸ್ಥಾಪಿಸುವ ಉದ್ದೇಶವನ್ನು ಮಿತ್ರರಾಷ್ಟ್ರಗಳು ಸ್ಪಷ್ಟಪಡಿಸಿ ಆ ರೀತಿ ನಡೆದರೆ ಯುದ್ಧವು ಬೇಗನೆ ಕೊನೆಹೊಂದುವ ಸಂಭವವಿರುವುದು.

ಈ ದೃಷ್ಟಿಯಿಂದ ಹಿಂದೂದೇಶಕ್ಕೆ ಬೇಗನೆ ಸ್ವಾತಂತ್ರ್ಯವೀಯಬೇಕು. ಸೋವಿಯೆಟ್ ಸರಕಾರದ ಮನಸ್ಸನ್ನು ಒಲಿಸಿಕೊಳ್ಳುವಷ್ಟರ ಶಕ್ತಿಯುಳ್ಳ ಬ್ರಿಟಿಷ್ ಮಂತ್ರಿಯೊಬ್ಬರನ್ನ ಮೋಸ್ಕೋವಿಗೆ ಕಳುಹಿಸಬೇಕು. ಜರ್ಮನಿಯನ್ನು ವಿಭಾಗಿಸುವ ಅಥವಾ ಅಸ್ಟ್ರಿಯದಲ್ಲಾಗಲಿ ಅರಸುತನವನ್ನು ಸ್ಥಾಪಿಸುವ ಆಲೋಚನೆ ಬಿಟ್ಟುಬಿಡಬೇಕು. ಎಲ್ಲಾ ರಾಷ್ಟ್ರಗಳೂ ಸಾಮ್ರಾಜ್ಯಸ್ವಾರ್ಥ ಬಿಟ್ಟು, ಶಿಷ್ಟ ತ್ಯಾಗ ಮಾಡಿ, ಲೋಕದಲ್ಲಿ ಎಲ್ಲಾ ಜನಾಂಗದವರಿಗೂ ವ್ಯಾಪಾರ, ಉದ್ಯಮಗಳನ್ನು ನಡಿಸಲು ಸಮಾನ ಅನುಕೂಲತೆಗಳಿರುವಂತಾಗಬೇಕು. ಹಾಗಾದರೆ ಯುದ್ಧವು ಬೇಗನೆ ಕೊನೆಗೊಂಡು ಸಂಧಿಯಾಗುವ ಸಂಭವವಿರುವುದೆಂದು ಮಿ. ಎಚ್. ಎನ್. ಬ್ರೈಲ್ಸ್‌ಫೋರ್ಡರು ಲೇಖನ ಬರೆದಿರುವರು.

Every Policyholder is a Member

IN

The Canara Mutual

ASSURANCE COMPANY, LTD.

(Head Office:- UDIPI, S. India.)

Everyday the Membership increases.

The Company issues all the well-known plans of Assurance.

Female lives accepted.

JOIN ITS EVER INCREASING MEMBERSHIP.

ಮೇಷ — ನೀವೆಷ್ಟೇ ಸಮರ್ಥಶಾಲಿಗಳಾಗಿರಲಿ ಕಾರ್ಯದಕ್ಷರಿರಲಿ ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಮುಂಗುಸಿಯ ಮುಂದಿರುವ ಸರ್ಪದಂತಾಗಿರುತ್ತದು. ತದ್ವತ್ ಗ್ರಹಮಾನವು ಪ್ರತಿಕೂಲವಾಗಿರುವುದು. ಆದ್ದರಿಂದಲೇ ಜನಸಾಮಾನ್ಯರಲ್ಲಿ ಕಲಹ ವಿಶೇಷತಃ ಸ್ತ್ರೀಯರೊಡನೆ ಜಗಳ ದೇಹಾಲಸ್ಯ ದುರ್ವ್ಯಸನ ಮನೋರೋಗಗಳು ಹೆಚ್ಚುವವು. ಆರೋಗ್ಯವೂ ಕೆಡುವುದು. ನೂತನ ವ್ಯಕ್ತಿಯಲ್ಲಿ ಕನ್ನನಪ್ಪಗಳೇ ಅಧಿಕವಾಗಿ ಇಷ್ಟವೂ ಕನಸಿನಲ್ಲೂ ದೊರೆಯದು. ತಾ. 4, 10, 11 ಈ ದಿನಗಳ ಮಟ್ಟಿಗೆ ಗೃಹಸುಖ ಸ್ತ್ರೀಮೂಲಕ ಧನಪ್ರಾಪ್ತಿಗಳಾಗಬಹುದು.

ವೃಷಭ—ನಿಮ್ಮ ರಾಶಿಗೆ ಈ ವಾರದಲ್ಲಿ ಹೆಚ್ಚಿನ ಗ್ರಹರು ಅನುಕೂಲರಾಗಿರುವರು. ಆತನವ ನಿಮ್ಮ ಆರೋಗ್ಯವೂ ಲಯವೂ ತೃಪ್ತಿಕರವಾಗಿರುವುದು ವಿದ್ಯಾರ್ಥಿಗಳಿಗೂ ವಿದ್ಯೋಪಜೀವಿಗಳಿಗೂ ವ್ಯವಸಾಯ ವಾಣಿಜ್ಯಾದಿ ವೃತ್ತಿಯವರಿಗೂ ಪರಿಶ್ರಮಕ್ಕೂ ಅಧಿಕವಾಗಿ ಫಲ ದೊರೆಯಲಿರುವುದು. ಹಿಡಿದ ಕಾರ್ಯದಲ್ಲಿ ಪರಾಜಯವನ್ನು ಕಾಣಲಾರಿರಿ. ಜನಜನ ಮನ್ನಣೆಗೂ ಪಾತ್ರರಾಗುವಿರಿ. ಸಂಪಾದನೆಯಲ್ಲಿ ಹೆಚ್ಚಿನಂಶವು ಸತ್ಪಾತ್ರದಲ್ಲಿ ವಾ ಸತ್ಕಾರ್ಯದಲ್ಲಿ ವ್ಯಯವಾಗದೆ ಕುಕರ್ಮಗಳ ಸಲುವಾಗಿ ಹೋಗುವುದು. ತಾ. 4ರಿಂದ 7ರ ವರೆಗಿನ ದಿನಗಳು ಅನುಕೂಲ.

ಮಿಥುನ—ದೈಹಿಕ ಮತ್ತು ಮಾನಸಿಕ ಶಕ್ತಿಯು ಕುಗ್ಗುವದರಿಂದ ದೇಹದಲ್ಲಿ ಆಲಸ್ಯವೂ ಉದ್ಯೋಗದಲ್ಲಿ ಔದಾಸೀನ್ಯವೂ ವೃದ್ಧಿಹೊಂದುವುದು. ಉದ್ಯೋಗಕ್ಕೆ ತಕ್ಕ ಫಲ ದೊರೆಯದು. ಸಮಯದಲ್ಲಿ ಹೆಚ್ಚಿನಂಶವನ್ನು ಪರ್ಯಟನಾದಿಗಳಲ್ಲೇ ಕಳೆಯಬೇಕಾಗಿ ಬರುವುದು. ಸ್ತ್ರೀಮೂಲಕವಾಗಿಯೂ ವ್ಯಾಪಾರೀ ವೃತ್ತಿಯಲ್ಲೂ ಸುಚೀನ ಮಟ್ಟಿಗೆ ಹಣ ದೊರೆಯುವುದರಿಂದ ಆರ್ಥಿಕ ಬಿಕ್ಕಟ್ಟು ಒದಗದು. ಸದ್ಯ ನಿಮ್ಮಲ್ಲಿ ಇತರ ಗುಣಗಳಿಗಿಂತಲೂ ತಾಮಸ ಗುಣಕ್ಕೇನೇ ಹೆಚ್ಚಿನ ಪ್ರಾಧಾನ್ಯತೆ ಕಂಡುಬರುವುದು. ಆದ್ದರಿಂದ ತಾ. 4, 10, 11 ಈ ದಿನಗಳಲ್ಲಿ ಶೋಕನಿಷ್ಟಗಳನ್ನು ಹೊಂದಲಿರುವಿರಿ.

ಕರ್ಕಾಟಕ—ಕ್ಷೀರಸಾಗರ ಮಥನ ಕಾಲದಲ್ಲಿ ಕಿಂಚಿತ್ಕಾಲ ವ್ಯವಧಾನದಿಂದ ಹಾಲಾಹಲವೂ ಅಮೃತವೂ ಹುಟ್ಟಲಿಲ್ಲವೇ. ಅಂತೆಯೇ ಏಕಾಧಿಕರಣದಲ್ಲಿ ಸಮಯಭೇದದಿಂದ ಪರಸ್ಪರ ವಿರೋಧಗುಣಗಳ ಯಾ ವಸ್ತುಗಳ ಆವಿರ್ಭಾವವಾಗುವುದು. ಪ್ರಕೃತ ನಿಮ್ಮಲ್ಲೂ ಕೆಲವೊಮ್ಮೆ ಸೌಜನ್ಯವೂ ಮತ್ತೊಮ್ಮೆ ದೌರ್ಜನ್ಯವೂ ಕಂಡುಬರುವುದು. ಆದ್ದರಿಂದ ನೌಕರಿ ಭಾಗದಲ್ಲೂ ರಾಜಕೀಯ ವಿಚಾರದಲ್ಲೂ ನಿಮ್ಮ ಇಷ್ಟವು ಸಿದ್ಧಿಸುವುದಾದರೂ ಸ್ತ್ರೀಮೂಲಕವಾಗಿ ಶೋಕಾನಿಷ್ಟಗಳೂ ಶತ್ರುಜನರಿಂದ ಕೆಲವು ಕಾರ್ಯಗಳಲ್ಲಿ ಪರಾಭವವೂ ಕೀರ್ತಿಗೆ ಕಳಂಕವೂ ಉಂಟಾಗಲಿದೆ. ತಾ. 4ರಿಂದ 6ರ ವರೆಗೆ ಪ್ರತಿಕೂಲಗಳು ಹೆಚ್ಚುವುದರಿಂದ ಜಾಗರೂಕರಾಗಿರಿ.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಲೆಕ್ಕಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕೇವಲ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಆದರಿಂದ ತಯಾರಿಸಿದ ಸಾರಾಂಶದ ಪಟ್ಟಿಯು ಕೆಲವೇ ನಿಮಿಷಗಳಲ್ಲಿ ತೆರಿಗೆಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ರಿಯಾಯತಿಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವ ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಳಿಯಾಗಿ ಹೋಗಿದ್ದರೂ ಕೆಡವಾಗಲಿಲ್ಲ. ಲೆಕ್ಕ ಹಾಜರ ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ಈ ವಾರದ ಭವಿಷ್ಯ

ತಾರೀಕು 4-1-1940ರಿಂದ — — — 11-1-1940ರ ವರೆಗೆ

ಸಿಂಹ—'ದೈವೋ ದುರ್ಬಲಘಾತಕಃ' ಎಂಬ ಲೋಕೋಕ್ತಿಯಂತೆ ಬಲಹೀನರಿಗೆ ದೈವವು ಸದಾ ಪ್ರತಿಕೂಲವೇ. ಹೇಗೆಂದರೆ ದೈವ ವಗ್ಗರೆಗಳ ತೃಪ್ತಿಗಾಗಿ ಪಾಪದ ಕುರಿಮರಿಗಳ ಕಲೆಕಡಿವರೇ ಹೊರತು ಹುಲಿ ಮೊದಲಾದ ದುಷ್ಟಪ್ರಾಣಿಗಳನ್ನಾರೂ ಬಲಿಗೊಡವುದಿಲ್ಲ. ಸದ್ಯ ನೀವೂ ಕೂಡ ಹಲವು ಭಾಗಗಳಲ್ಲಿ ಬಲಹೀನರಿರುವಿರಿ. ಗೃಹದಲ್ಲಿ ಪರಸ್ಪರ ಭಿನ್ನಮತದಿಂದಾಗಿ ಸಂಘಶಕ್ತಿಯಿಲ್ಲ. ಅನಾರೋಗ್ಯ ನಿಮಿತ್ತ ದೇಹಬಲವೂ ಇಲ್ಲ. ಕಿಂಚಿತ್ತೂ ಆಯವಿಲ್ಲದೆ ಸರ್ವತ್ರ ಖರ್ಚೇ ಇರುವುದರಿಂದ ಆರ್ಥಿಕ ಬಲವೂ ಇಲ್ಲ. ಇನ್ನೆಲ್ಲ ಚಿಂತೆಗಳಿಂದಾಗಿ ಮನಸ್ಸು ದುರ್ಬಲವಾಗುವುದು. ಆದರೂ ಗ್ರಹರಿಗೆ ತಕ್ಕ ಶಾಂತಿಯನ್ನು ಮಾಡಿಕೊಂಡರೆ ತಾ. 4, 10, 11 ಅನುಕೂಲವಾದೀತು.

ಕನ್ಯಾ—ನಿಮಗೀ ವಾರದಲ್ಲಿ ಸುಖದುಃಖಾದಿ ಇಷ್ಟಾನಿಷ್ಟಗಳು ಸಮನಾಗಿ ಪರಿಣಮಿಸಲಿವೆ. ದಕ್ಷಿಣ ಜನರಿಗೆ ಆಪಥ ಪಿಸ್ಸು ಕೋರ್ಟು ವಗ್ಗೆರೆ ಕಲಹಗಳಲ್ಲಿ ಪ್ರತಿಕೂಲವೇ ಹೆಚ್ಚೀತು. ಗೃಹಭಿನ್ನದಿಂದ ಮನೋವ್ಯಥೆ ಮತ್ತು ಅಜೀರ್ಣ ರೋಗವೂ ಕಂಡುಬರಲಿವೆ. ಅದರೂ ನೌಕರಿ ಭಾಗದಲ್ಲಿ ಶ್ರಮವು ವ್ಯರ್ಥವಾಗಲಾರದು. ಬಂಧುಬಳಗದವರ ಬೆಂಬಲದಿಂದ ಶತ್ರುಜನರನ್ನು ನಿಗ್ರಹಿಸಲು ಶಕ್ತರಾಗುವಿರಿ. ಸ್ವಪ್ರತಿಷ್ಠೆಗೇನೂ ಕುಂದುಂಟಾಗದು. ಶಯನಸುಖಕ್ಕೂ ಚ್ಯುತಿಯಾಗಲಾರದು. ತಾ. 5, 6, 7 ಉತ್ತಮ.

ತುಲಾ—ತಿಳಿಯದೆ ಮಾಡಿದಕ್ಕೆ ತಪ್ಪಿಗಿಂತಲೂ ತಿಳಿದು ಮಾಡಿದಕ್ಕೆ ಅನ್ಯಾಯವು ಪ್ರಬಲವಾದುದು. ಅಂತೆಯೇ ನೀವೀವಾರದಲ್ಲಿ ತಿಳಿದೂ ಮನಸ್ಸಾಕ್ಷಿಗೆ ವಿರೋಧವಾದ ಕಾರ್ಯವನ್ನು ಲಾಭದ ಸಲುವಾಗಿ ಮಾಡಿ ಜನನಿಂದೆಗೂ ವಿರೋಧಿಗಳ ಕಾಟಕ್ಕೂ ಸಿಲುಕಲಿರುವಿರಿ. ಆದರೂ ಕಾರ್ಯದಲ್ಲಿ ವಿಜಯಿಗಳಾಗುವಿರಿ. ಒಳ್ಳೇ ಸಾಹಸಿಗರಾದ ನಿಮಗೆ ಕೆಲವರು ಬೆದರಿಯೇ ಸುಮ್ಮನಾಗುವರು. ಇನ್ನು ಕೆಲವರು ದುಡ್ಡಿದ್ದವನೇ ದೊಡ್ಡವನೆಂಬ ನ್ಯಾಯವನ್ನನುಸರಿಸುವರು. ಪ್ರಯಾಣಕ್ಕೆ ಈ ವಾರವು ಹಿತಕರವಾದುದಲ್ಲ. ಮಿತ್ರ ಜನರ ನಿರಾಶಗವುವ ಪತ್ರಗಳು ದೊರಕುವವು. ತಾ. 4. 8. 9. ಕಾರ್ಯಜಯ ಸ್ತ್ರೀಸುಖ ಇಷ್ಟಭೋಜನದಾಯಕಗಳಾಗಿವೆ.

ವೃಶ್ಚಿಕ—ಹೇಳಿ ತೋರಿಸುವುದು ಸುಲಭ, ಮಾಡಿ ತೋರಿಸುವುದು ಕಷ್ಟ ಎಂಬೀ ಮಾತು ಸದ್ಯದ ನಿಮ್ಮ ಕೃತಿಯಿಂದ ಸ್ಪಷ್ಟವಾಗುವುದು. ನಿಮ್ಮ ಮಾತಿನಂತೆ ಕಾರ್ಯ ನಡೆಸುವ ಧೈರ್ಯ ಸ್ಥೈರ್ಯಗಳು ಸದ್ಯ ನಿಮ್ಮಲ್ಲಿಲ್ಲವು. ಇತರರ ಆಶ್ರಯವನ್ನು ನೀವು ಪಡೆದಲ್ಲಿ ಅಂಶೂ ನಿತ್ಯೋದ್ಯಮ ಅವ್ಯಾಹತವಾಗಿ ನಡೆಯುವುದು. ಧನ ಲಾಭವು ಹಲವು ವಿಧಾನದಿಂದ ನಿಮಗಾಗುವುದು. ಗೃಹಸುಖವೂ ಉತ್ತಮವಾಗಿರುವುದು. ಆದರೂ ಶತ್ರು ಜನರ ಮೂಲಕ, ಮಕ್ಕಳು ಮರಿಗಳ ಅನಾರೋಗ್ಯ ನಿಮಿತ್ತ ನಿಮ್ಮ ಹಣವು ಕೆಲವಂಶ ವ್ಯಯವಾಗುವುದು. ತಾ. 4, 8, 9 ಈ ದಿನಗಳಲ್ಲಿ ಅತ್ಯಾಯ ಕಾರ್ಯವಿಘ್ನಗಳು ಪ್ರಾಪ್ತವಾಗಲಿವೆ. ಜಾಗ್ರತರಾಗಿರಿ.

ಧನು—ಏನೊಂದೂ ಕಾರ್ಯವಿಲ್ಲದೆ ನಿರುದ್ಯೋಗದಿಂದ ಕಾಲ ಕಳೆಯುವ ಪ್ರಸಂಗ ಬಂದಿದೆ ನಿಮಗೀಗ. ಕಾರಣ "ಪ್ರಯೋಜನಮನುದ್ದಿಶ್ಯನ ಮಂದೋಪಿ ಪ್ರವರ್ತತೇ" ಫಲಾಪೇಕ್ಷೆಯಿಲ್ಲದೆ ಮೂರ್ಖನೂ ಕೂಡಾ ಒಂದು ಕಾರ್ಯದಲ್ಲಿ ಪ್ರವೃತ್ತಿ ಮಾಡಲಾರನು. ಅಂದ ಮೇಲೆ ಏನೊಂದು ಇಷ್ಟಾರ್ಥವೂ ಕೈಗೂಡುವ ಸಂಭವವಿಲ್ಲದೆ ನೀವಾದರೂ ಹೇಗೆ ಕಾರ್ಯಾರಂಭಿಸುವುದು. ನಿಮಗೆ ನಿಮ್ಮ ಹೊರತು ಇತರರಾರೂ ಹಿತಬಯಸತಕ್ಕವರಿಲ್ಲ. ವಿಶೇಷ ರೀತಿಯ ಖರ್ಚಿಗ ನಿಮ್ಮಲ್ಲಿ ಧನವಿಲ್ಲದಿದ್ದರೂ ಆನ ದಿನದ ನಟ್ಟಿಗೆ ದುಡಿಯುವಿರಿ. ತಾ 4. 8. 9 ಈ ದಿನಗಳಲ್ಲಿ ಮಿತ್ರರ ಸಹಾಯದಿಂದಲೂ ಸ್ವಶಕ್ತಿಯಿಂದಲೂ ಕಿಂಚಿದಿಷ್ಟಸಿದ್ಧಿಯಿದೆ.

ಮಕರ— ನ್ಯಾಯನೀತಿಯಿಂದ ಗಳಿಸಿದ ಹಣವೂ ನಿಲ್ಲದ ಈ ಕಾಲದಲ್ಲಿ ಅನ್ಯಾಯ ಮಾರ್ಗದಿಂದ ಸಂಪಾದಿಸಿದ ಧನವು ಉಳಿವುದಾದರೂ ಹೇಗೆ. ಪ್ರಾಯಶಃ ಅದು ಆಕಸ್ಮಿಕವಾ ರೂಪದಲ್ಲೇ ವ ಇತರ ಕಳ್ಳ ಕಾಕರ ಮೂಲಕವಾಗಿಯೇ ನಾಶವಾಗುವುದು. ಪ್ರಕೃತದ ನಿಮ್ಮ ದುಡಿಮೆಯು ಕಷ್ಟಾರ್ಜಿತವಾಗಿಲ್ಲವೆನ್ನಬೇಕು. ಆದ್ದರಿಂದಲೇ ಅದು ಶತ್ರುಗಳ ಮೂಲಕವೂ ಕುಕರ್ಮಗಳಿಗೂ ವ್ಯಯವಾಗುತ್ತಿರುವುದು. ಆರೋಗ್ಯವೂ ಸರಿಯಾಗಿಲ್ಲ. ಸದಾ ಒಂದಲ್ಲೊಂದು ರೋಗದಿಂದ ಪೀಡಿತರಾಗಿದ್ದು ದೈಹಿಕ ಸುಖವನ್ನು ಕಾಣಲಾರಿರಿ. ಆದರೂ ವಾರಾದಿಯ ನಾಲ್ಕು ದಿನಗಳಲ್ಲಿ ಕಿಂಚಿದ್ದೈವಾನುಗ್ರಹದಿಂದ ಇಷ್ಟಸಿದ್ಧಿಯ ಮೂಲಕ ಸುಖ ಹೊಂದುವಿರಿ.

ಕುಂಭ—ಹೊತ್ತು ಹೋದರೆ ಮತ್ತೆ ಬಾರದು ಮುತ್ತು ಹೋದರೆ ಮತ್ತೆ ಬಪ್ಪುದು, ಎಂದು ಹಿರಿಯರು ನುಡಿದ ವಚನವನ್ನು ವ್ಯರ್ಥಮಾಡಬೇಡಿ. ಸತ್ಕರ್ಮಸದುದ್ಯೋಗದಲ್ಲಿ ನಿರತರಾಗಿ ಮಹತ್ಫಲವನ್ನು ಹೊಂದಲು ನೀವು ಅರ್ಹರಾಗಿರುವಿರಿ. ಗ್ರಹರು ದಿನೇ ದಿನೇ ಮುಂದರಿಯುವುದರಿಂದ ನಿಮ್ಮ ಅದೃಷ್ಟಚಕ್ರವೂ ತಿರುಗುತ್ತಿದೆ. ಮುಂದಿನ ವಾರದಲ್ಲಿ ನೀವು ಇಷ್ಟು ಉತ್ತಮ ಸ್ಥಿತಿಯಲ್ಲಿರುವಿರೆಂದು ಹೇಳಲಾಗದು. ರಾಜಕೀಯ ಭಾಗದಲ್ಲಿ ಧೈರ್ಯವಾಗಿ ನಿಮ್ಮ ಕಾರ್ಯ ಸಾಧಿಸಿರಿ. ಇಷ್ಟಾರ್ಥವು ಅನಾಯಾಸವಾಗಿ ಕೈಗೂಡುವುದು. ತಾ. 5ರಿಂದ 9ರ ವರೆಗೆ ಅತ್ಯುತ್ತಮ.

ಮೀನ—ಕೈಯಲ್ಲಿನ ಧನವು ಒಮ್ಮೆಗೆ ನಷ್ಟವಾದರೂ ಯಾ ನೂರಾರು ಕಡೆಗಳಿಂದ ಒಮ್ಮೆಯೇ ಖರ್ಚುಗಳು ಪ್ರಾಪ್ತವಾದರೂ ನರನಿಗೆ ಭಯ ದುಃಖಗಳು ಅಧಿಕವಾಗಿ ಏನುಮಾಡಬೇಕು ಬೇಡ ಎಂಬ ವಿಚಾರಶಕ್ತಿಯು ಶೂನ್ಯವಾಗುವುದು ಸ್ವಾಭಾವಿಕ. ಪ್ರಕೃತದಲ್ಲಿ ನಿಮಗೆ ಈ ಎರಡು ತರಹದ ಸಂದರ್ಭ ಒದಗಿಬಂದಿದೆಯೆನ್ನಬಹುದು. ಆದರೂ ನೀವು ಕರ್ತವ್ಯ ಭ್ರಷ್ಟರಾಗದೆ ಇದ್ದಲ್ಲಿ ನಿಮಗೀ ಹಣದ ಅಡಚಣೆಯು ದೂರವಾಗುವುದು. ನೌಕರಿಯಲ್ಲೂ ತೃಪ್ತಿಯಿದೆ. ಮಿತ್ರರ ಸಹಾಯವೂ ದೊರಕುವುದು. ಸಂಚಾರದಲ್ಲಿ ಜಾಗರೂಕರಾಗಿರಿ. ಆರೋಗ್ಯದ ಮಟ್ಟಿಗೂ ಹೆಚ್ಚಿನ ನಿಗಾ ಇಡಿರಿ. ತಾ. 8ರಿಂದ 11ರ ವರೆಗೆ ನಿಮ್ಮ ಮನೋರಥಗಳು ಅಪ್ರತಿಹತಗಳಾಗುವವು.

ಪ್ರಮುಖ ಬರೆಹಗಾರರ ಲೇಖನದಿಂದೊಳಗೊಂಡಿರುವ
ನವಯುಗ "ಪರ್ಯಾಯ"
ಸಂಚಿಕೆಯನ್ನೋದಲು ಮರೆಯದಿರಿ!

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೊನೊಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೧ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೊಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾಹರಣ
ವಿಜ್ಞಾನದ ನವೀನ ಮತ್ತು
ವಿಚಿತ್ರ ಶೋಧ

ಕಿವಿ ಸೋರುವುದು, ನೋವು, ಊದಿಕೊಳ್ಳುವುದು, ಶಬ್ದ ಕೇಳುವುದು, ಸುರಿಸುವುದು, ಕಿವಿ ಅಥವಾ ವೆಡೆಯೇಳುವುದು, ಕರ್ಣಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ಷೀಣ ತೆಗೆದುಕೊಂಡ ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂತಹ ಕಿವಿರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಖಾತ್ರಿಗುಣಹೊಂದುವರು. ಈ ಎಣ್ಣೆ ಔಷಧಿಯಿಂದ ನೂರಾರು ಜನರು ಕಿವುಡರು ಚೆನ್ನಾಗಿ ಶ್ರವಣಶಕ್ತಿಯನ್ನು ಪಡೆದಿರುತ್ತಾರೆ ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸ ಕೊಡಲಾಗುವುದು ಬಾಟ್ಲಿ 1ರ ಬೆಲೆ ರೂ 2, 3 ಬಾಟ್ಲಿಗಳಿಗೆ ರೂ 5, ಅಂಚೆಯ ಖರ್ಚು ಪ್ರತ್ಯೇಕ

ವಿಳಾಸ — ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು
ನಿಗಮಿತ ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja,	ಯಂ ಆರ್. ಪೂಂಜ,
President & Manager,	ಪ್ರೆಸಿಡೆಂಟ್ ಮತ್ತು ಮೆನೇಜರ್

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆತಬಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು ಸೀಸೆ 1ಕ್ಕೆ 13ಆಣೆ, ಟಪಾಲ್ 6ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.
ಉಡುಪಿ ಸ್ಟಾಕಿಸ್ಟ್ರು. ನವಭಾರತ ಬುಕ್‌ಡಿಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ** —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು **ಸುಖಸೇವನ** ಸುಖಸೇವನದಿಂದಮಧುರವೂ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ನೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ

ಮೈಸೂರ ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ,

DAIMONDS! DAIMONDS!

K. R. K. SHET

Opposite Govt College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟೆಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ ಬೋರ್ಡು ಜವಾನರ ಬೇಜು ಮಾನೊಗ್ರಾಮ್ ಸೀಲು ಇತ್ಯಾದಿಗಳು ತ್ವರಿತವಾಗಿ ಮಾಡಿಕೊಡಲ್ಪಡುವವು

Crown Rubber Stamp Co , 18 Balmat Road, MANGALORE
Approved by the Govt of Madras   Certified by the Agent of the Govt of India in Ceylon

SALE! SALE! SALE



ಮುಂಚಿನ ಕ್ರಯ ರೂ 10,
ಈಗಿನ ಕ್ರಯ ರೂ 3 12 0

Swiss Lever Wrist Watch
ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನವನವೀನ ಗಡಿಯಾರಗಳು ಓಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡುವದಕ್ಕೂ ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳುವುದಕ್ಕೂ ಬಹು ಅಂದವಾಗಿವೆ ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷದಷ್ಟೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ರೈಲ್ವೆ ಉದ್ಯೋಗಸ್ಥರೂ, ದೊಡ್ಡ ಆಫೀಸರುಗಳೂ, ಜವಾನರೂ ಬಹಳವಾಗಿ ಉಪಯೋಗಿಸುತ್ತಿರುವರು ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ತರಿಸಲಿಕ್ಕೆ ಪ್ರಿಯಪಡುವರು

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ 3-12-0

ROYAL CO 19 Bunder SOWCARPET G T MADRAS
ರಾಯಲ್ ಕಂಪೆನಿ ೧೯ ಬಂದರ್ ಸಾಹುಕಾರ ಪೇಟೆ ಜ ಟಿ ಮದರಾಸು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇತ್ತಿದ ಪರಿಗಳ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ಪ್ರತ್ಯಾಕಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯರ ಅವರಲ್ಲಿಗೆ ಬನ್ನಿರಿ
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ-ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಸಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ.

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರೈಡ್ – ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೀ ನೆತ್ತರು ಹಂದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹವನನ್" ಎಂಬ ಹೆಮೊರೈಡ್ ಒಯಿಂಟ್ ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4-0 ವಿ.ಪಿ. ಬೇರೆ.

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವಡಕ್ಕೆ ಒಳಗಾದವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವದು. ಮಲಬದ್ಧತೆಯ ಲಕ್ಷಣಗಳುಳ್ಳವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಆಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B & C. I. Ry. BOMBAY PRESIDENCY.

ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.

... No. 3618 25-1-1940.

ನವಯುಗ

NAVAYUGA

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್

ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರ ವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ:—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್	ಅ	ಎಚ್. ವೆಂಕಟರಾಮಯ್ಯ
ಕೆ. ಆರ್. ಕೆ. ಶೆಟ್ ಬಿಲ್ಡಿಂಗ್,	ಥ	ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್
ಮಿಶ್ಯನ್ ಹೈಸ್ಕೂಲ್ ರೋಡು, ಮಂಗಳೂರು.	ವಾ	ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಝಂಡೂ ಮಲೇರಿಯಾ ಮಿಕ್ಶ್ಚರ್

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ ಆಣೆ 0–13–0 ಮಾತ್ರ.

ಸ್ಥಳೀಯ ಏಜಂಟರು:–ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:–ವಿ. ವಿ. ಶೆಣೈ, ಕೆಮಿಸ್ಟ್ಸ್.

ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೆ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಬರೆಯಿರಿ:—

ದಾಮೋದರ್ ಎಂಡ್ ಕೊ,

ZANDU 78ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು.

DAMODER & CO.,

78 China Bazaar Road, **G. T. MADRAS**

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

SAVINGS & SPENDING

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between **SAVING & SPENDING** and who have, by sheer force of will, built up a bulky Savings Bank Account.

The Canara Industrial & Banking Syndicate Ltd.

Estd.] (Incorporated in British India) [1925.

Head Office:–**UDIPI**, (S. India).

THE ASIAN ASSURANCE COMPANY, LIMITED.

ASIAN BUILDINGS - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,601	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
„ **M. Shivarama Rao,** Organizer, Puttur.

Or

Sri. J. A. PUTRAN,
Branch Manager, MANGALORE.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ-.. ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಾಪಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಪಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯಾಪಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

Your anxiety in finding a sound and progressive Life Office both to insure or to represent will end on consultation with:

Branch Secretary,
The New Guardian of India Life Ins. Co. Ltd., Madras.
MANGALORE Branch

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

ಸ್ಕೂಲ್, ಲೈಬ್ರೆರಿ ಮತ್ತು ಗ್ರಾಮಪಂಚಾಯಿತಿಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ.

ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಇದೆ.

ಪಿ. ಎ. ಉಪಾಧ್ಯಾಯ,
ಬುಕ್ ಸೆಲರ್ ಅಂಡ್ ಪಬ್ಲಿಷರ್,
೪೫ ಎ.ಎಸ್ ಸ್ಟ್ರೀಟ್ ಬೆಂಗಳೂರು ಸಿಟಿ

೧ ರೂ.ಕೊಡುವ ಚಂದಾರರಿಗೆ ಮಾತ್ರ ರೂ. ೩ರ ಪುಸ್ತಕಗಳು

ಈಗಲೇ] **ಉಚಿತ** [ಈ ದಿನವೇ

ಪುಸ್ತಕಗಳ ತಪಸೀಲುಪಟ್ಟಿಗೆ ಬರೆಯಿರಿ

ವ್ಯವಸ್ಥಾಪಕ:-ಪಿ. ಎ. ಉಪಾಧ್ಯಾಯ
ಮಾಧ್ವಗ್ರಂಥ ಪ್ರಕಾಶನ ಸಮಿತಿ,
೪೫ ಎ ಎಸ್ ಸ್ಟ್ರೀಟ್, ಬೆಂಗಳೂರು ಸಿಟಿ

Every Policyholder is a Member

IN

The Canara Mutual

ASSURANCE COMPANY, LTD.

(Head Office:- UDIPI, S. India.)

Everyday the Membership increases.

The Company issues all the well-known plans of Assurance.

Female lives accepted.

JOIN ITS EVER INCREASING MEMBERSHIP.

ESTD 1921 ಸ್ಥಾಪನೆ

FOUNDER
SRI A B SHETTY, M. L. A.,
ಸಂಸ್ಥಾಪಕರು
ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ
ಕೆ. ಕೆ. ಶೆಟ್ಟಿ

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ 3–4–0
6 ತಿಂಗಳಿಗೆ – ರೂ 1-12-0
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ

ಸಂಪುಟ ೧೯
ಸಂಚಿಕೆ ೨೦

ಉಡುಪಿ, ಗುರುವಾರ, ೨೫–೧–೧೯೪೦.
UDIPI, THURSDAY, 25-1-1940.

VOL 19
No. 20

160 ಹಿಂದುಗಳು ಕೊಲ್ಲಲ್ಪಟ್ಟಿರುವರು

ಸಿಂಧುದೇಶದ ಸುಕ್ಕೂರಿನಲ್ಲಿ ನಡೆದ ಹಿಂದೂ ಮುಸಲ್ಮಾನ ಗಲಾಟೆಯಲ್ಲುಂಟಾಗಿರುವ ಪ್ರಾಣ ಮತ್ತು ಸೊತ್ತು ನಷ್ಟದ ಕುರಿತು ಸರಕಾರವು ಹೇಳಿಕೆ ಹೊರಡಿಸಿರುವುದು. ಈ ಪ್ರಕಾರ 142 ಹಿಂದುಗಳು ಕೊಲ್ಲಲ್ಪಟ್ಟಿರುತ್ತಾರೆ 10 ಮಂದಿ ಸಜೀವವಾಗಿ ಸುಡಲ್ಪಟ್ಟಿರುತ್ತಾರೆ. 58 ಮಂದಿ ಗಾಯಗೊಂಡಿರುತ್ತಾರೆ ಗಾಯಗೊಂಡವರಲ್ಲಿ 9 ಮಂದಿ ಸತ್ತಿರುವರು 27 ಮಂದಿ ಗುಣ ಹೊಂದಿರುವರು 22 ಮಂದಿ ಇನ್ನೂ ಆಸ್ಪತ್ರೆಯಲ್ಲಿರುವರು. 14 ಮಂದಿ ಮುಸಲ್ಮಾನರು ಕೊಲ್ಲಲ್ಪಟ್ಟು 12 ಮಂದಿ ಗಾಯಗೊಂಡಿರುವರು. ಬಹುತೇಕವಾಗಿ ಹಿಂದುಗಳ ಸುಮಾರು 164 ಮನೆಗಳು ಸುಡಲ್ಪಟ್ಟು ರೂ. 1,48,000 ನಷ್ಟವಾಗಿರುತ್ತದೆ. 407 ಮನೆಗಳು ಲೂಟಿಯಾಗಲ್ಪಟ್ಟು ರೂ 6,53,000 ನಷ್ಟವಾಗಿದೆ. 7 ಮಂದಿ ಫಕಾಯಿತಿಗಳು ಕೊಲ್ಲಲ್ಪಟ್ಟು 700 ಮಂದಿ ದಸ್ತಗಿರಿ ಮಾಡಲ್ಪಟ್ಟಿರುವರು ಹೆಚ್ಚಿನ ಹಾವಳಿಗೊಳಗಾದುವೆಂದರೆ ಸುಕ್ಕೂರು ತಾಲೋಕು ಮತ್ತು ಪಟ್ಟಣ. ಈ ಗಲಾಟೆಯ ಕುರಿತು ವಿಚಾರಿಸಲು ವಾಯುವ್ಯಗಡಿನಾಡಿನ ಡಿಲ್ಲಿ ಎಸೆಂಬ್ಲಿ ಮೆಂಬರರಾದ ಮಿ. ಅಬ್ದುಲ್ ಕಾಯುಮರು ಕಾಂಗ್ರೆಸ್ಸಿನಿಂದ ನೇಮಿಸಲ್ಪಟ್ಟಿ ಅವರು ತನ್ನ ಫಲಿತಾಂಶವನ್ನು ಪರಿಶೀಲಿಸಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೊಪ್ಪಿಸಿರುವರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಸಿಂಧಿನ ಕಾಂಗ್ರೆಸ್ ಮುಖಂಡರಾದ ಶ್ರೀ ಗಿದ್ವಾನಿ ಮತ್ತು ಪ್ರೊಫೆಸರ್ ಘನಶ್ಯಾಮದಾಸರನ್ನು ಕರೆದು ವಿಚಾರಿಸಿರುವರು.

ಚೀನೀ ಜಪಾನು ಯುದ್ಧ

ಇತ್ತಲಾಗಿ ಚೀನೀ ಸೇನೆಯು ಜಪಾನರೆದುರಾಗಿ ಕೆಲವು ವಿಜಯಗಳನ್ನು ಪಡೆದಿರುವರು ಚೀನೀ ಯುದ್ಧದಿಂದಾಗಿ ಜಪಾನು ದೊಡ್ಡ ಗಂಡಾಂತರಕ್ಕೊಳಗಾಗಿದೆ ಅದರ ಉಗ್ರಗಾಮಿ ಮಂತ್ರಿಮಂಡಳಗಳು ಬಿದ್ದುಹೋಗಿ ಈಗ ಎಡ್ಮಿರಲ್ ಯೊನಾಯಿಯವರ ಸೌಮ್ಯಗಾಮಿ ಮಂತ್ರಿಮಂಡಲವು ಅಧಿಕಾರಕ್ಕೆ ಬಂದಿರುವುದು. ಮಿ. ಅರಿಟರವರು ಪುನಃ ವಿದೇಶ ಮಂತ್ರಿಗಳಾಗಿರುವರು ಜಪಾನು ರಷ್ಯ ಮತ್ತು ಅಮೇರಿಕಗಳೊಡನೆ ಮೈತ್ರಿಯನ್ನು ಬೆಳೆಸಿ ಹೇಗಾದರೂ ಚೀನೀ ಯುದ್ಧವನ್ನು ಕೊನೆಗೊಳಿಸುವ ನಿರ್ಧಾರದಿಂದಿರುವುದು ಉತ್ತರ ಚೀನದ ಜಪಾನ ಹಸ್ತಕವಾದ ಸರಕಾರದ ಮುಖ್ಯಸ್ಥರಾದ ವಾಂಗ್‌ಚಾಂಗ್ ವೈಯವರು, ಮಾರ್ಶಲ್ ಚ್ಯಾಂಗರು ಜಪಾನಿನೊಡನೆ ಸಂಧಿಮಾಡಿಕೊಳ್ಳಲು

ಸಮಾಚಾರ ಸಂಗ್ರಹ

ಇದೀಗ ಸುಸಂದರ್ಭವೆಂದೂ, ಆ ಕುರಿತು ತಾನು ತನ್ನಿಂದ ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡಲಿರುವೆನೆಂದೂ ವಿನಂತಿ ಮಾಡಿಕೊಂಡಿರುವರು. ಇದರಿಂದ ಜಪಾನು ಸಂಧಿಮಾಡಿಕೊಳ್ಳಲು ಆತುರದಲ್ಲಿರುವುದೆಂಬುದರಲ್ಲಿ ಸಂದೇಹವಿಲ್ಲ ಉತ್ತರ ಚೈನದ ಜನರಲ್ ಯೆನ್‌ರವರ ಕೈಕೆಳಗಣ 2,60,000 ಸೈನಿಕರೊಳಗೆ ಅಂತಃಕಲಹವುಂಟಾಗಿರುವುದೆಂದು ತಿಳಿದು ಬಂದಿದೆ ಜನರಲ್ ಯೆನ್ನರ ಹಳೆಯ ಸೇನೆಗೂ, ಹೊಸತಾಗಿ ಸೇರಿಸಲ್ಪಟ್ಟಿರುವ ಕಮ್ಯೂನಿಸ್ಟ್ ಮತ್ತು ಒಕ್ಕಲಿಗ ಸೈನಿಕರಿಗೂ, ತಿಕ್ಕಾಟವುಂಟಾಗಿ ಅವರು ಪರಸ್ಪರ ಹೋರಾಡಹತ್ತಿರುತ್ತಾರೆ ಮಾರ್ಶಲ್ ಚ್ಯಾಂಗರು ರಾಜಿಮಾಡಲೆತ್ನಿಸುತ್ತಿದ್ದಾರೆ. ಬೇಗನೆ ಏನಾದರೂ ರಾಜಿಯಾಗದಿದ್ದರೆ ಕಮ್ಯೂನಿಸ್ಟ್ ಸೇನೆಗೂ ಜನರಲ್ ಯೆನ್ನರ ಸೈನಿಕರಿಗೂ ಯುದ್ಧ ನಿಶ್ಚಯವೆಂಬಂತೆ ತೋರುತ್ತದ

ಕಾಂಗ್ರೆಸಿನ ವಿರೋಧಿ ಪಕ್ಷ

ಮದ್ರಾಸಿನ ಜಸ್ಟಿಸ್ ಪಕ್ಷದ ನಾಯಕರಾದ ಶ್ರೀ ರಾಮಸ್ವಾಮಿ ನಾಯಕರರು ಬೊಂಬಾಯಿಗೆ ಹೋಗಿ ಮಿ ಜಿನ್ನಾ ಮತ್ತು ಡಾಕ್ಟರ್ ಅಂಬೇಡ್ಕರರೊಡನೆ ಮಾತಾಡಿ, ಕಾಂಗ್ರೆಸನ್ನು ವಿರೋಧಿಸುವ ಸಂಘಟಿತ ಪಕ್ಷವೊಂದನ್ನು ಸ್ಥಾಪಿಸುವ ಕುರಿತು ಆಲೋಚಿಸಿರುವರು. ಕಾಂಗ್ರೆಸು ಈಗ ಬ್ರಿಟಿಷ್ ಸರಕಾರವನ್ನು ಸಮರ್ಥಿಸುವ ಸಂಸ್ಥೆಯಾಗಿದೆಯೆಂದೂ, ಸರಕಾರವು ಕೂಡಾ ಕಾಂಗ್ರೆಸಿನ ಬೆನ್ನು ಚಪ್ಪರಿಸುತ್ತಿರುವುದೆಂದೂ ಶ್ರೀ ನಾಯ್ಕರರ ಅಭಿಮತ ಅವರು ಮದ್ರಾಸಿನಲ್ಲಿ ಹಿಂದೀ ವಿರೋಧ ಚಳವಳವನ್ನು ಪುನರುಜ್ಜೀವಿಸುವ ಆಲೋಚನೆಯಿಂದಿರುವರು ಅದಕ್ಕೆ ಮಿ. ಜಿನ್ನರ ಬೆಂಬಲವಿರುವುದಂತೆ ಇಡೀ ಹಿಂದೂಸ್ಥಾನದ ಕಾಂಗ್ರೆಸ್ ವಿರೋಧಿಗಳನ್ನೆಲ್ಲಾ ಒಂದುಗೂಡಿಸಿ ಸಂಘಟಿಸಿ ಒಂದು ಪಕ್ಷ ಸ್ಥಾಪಿಸುವ ಆಲೋಚನೆಯಿದೆಯಂತೆ ಶ್ರೀ ನಾಯ್ಕರು, ಡಾಕ್ಟರ್ ಅಂಬೇಡ್ಕರ ಮತ್ತು ಮಿ ಜಿನ್ನರಿಗೆ ಇದಕ್ಕಾಗಿ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಡಾಕ್ಟರ್ ಸಾವರ್ಕರರೊಡನೆ ಕೂಡಾ ಮಿ ಜಿನ್ನರು ಮಾತಾಡಲಿರುವರೆಂದು ಸುದ್ದಿಯುಂಟಾಗಿದೆ ಆದರೆ ಹಿಂದೂ ಮಹಾಸಭೆಯು ಮುಸ್ಲಿಮ್ ಲೀಗಿನೊಂದಿಗೆ ಸಹಕರಿಸುವ ಸಂಭವ ತೋರುವುದಿಲ್ಲ ಮಿ ಜಿನ್ನರು, ಜಾತೀಯ ನಿಲ್ದಾಣವನ್ನು ಬಿಟ್ಟು ಕಾಂಗ್ರೆಸಿನ ವಿರೋಧಿಗಳನ್ನೆಲ್ಲಾ ಒಂದುಗೂಡಿಸುವ ಪ್ರಯತ್ನ ಮಾಡುತ್ತಿರುವುದು ಸಂತೋಷಕರ ಅವರಕ್ಕೊಂದು ಅರ್ಥವಿದೆ ದೇಶದಲ್ಲಿ ಕಾಂಗ್ರೆಸ್ ಮತ್ತು ಕಾಂಗ್ರೆಸ್ ವಿರೋಧಿಯೆಂದು ಎರಡು ಪಕ್ಷಗಳಿರುವುದು ಸ್ವಾಭಾವಿಕವೆಂದು ಮಹಾತ್ಮ ಗಾಂಧಿಯವರು ಅಭಿಪ್ರಾಯಪಡುತ್ತಿದ್ದಾರೆ.

ಫಿನ್ಲೆಂಡಿನ ಯುದ್ಧ

ಕಳೆದ 35 ವರ್ಷಗಳಲ್ಲಿ ಉಂಟಾಗದಷ್ಟು ಕಠಿಣ ಚಳಿಯು ಫಿನ್ಲೆಂಡಿನಲ್ಲಿ ಈಗ ಉಂಟಾಗಿರುವುದು ಉತ್ತರದಲ್ಲಿ ಫಿನ್ಲೆಂಡನ್ನು ವಿಭಾಗಿಸಲು ರಷ್ಯನರು, ಸಲ್ಲಾರಣರಂಗದಲ್ಲಿ ಪ್ರಬಲ ಹೋರಾಟ ನಡೆಸುತ್ತಿರುವರು ಪೂರ್ವದಲ್ಲಿ ಲಡೋಗ ಸರೋವರದ ಉತ್ತರದಲ್ಲಿ ಫಿನ್ನರು ವಿಜಯ ಪಡೆದಿರುವರು ಕರೇಲಿಯ ಭೂಸಂಧಿಯಲ್ಲಿಯೂ ಫಿನ್ನರು, ರಷ್ಯನರಿಗೆ ಪೆಟ್ಟು ಕೊಡುತ್ತಿರುವರು, ಅವರು ದೊಡ್ಡ ಯುದ್ಧವನ್ನೇನೂ ನಡೆಸದೆ ಚಿಕ್ಕ ಚಿಕ್ಕ ಸಂಘರ್ಷಗಳಿಂದಾಗಿ ರಷ್ಯನರ ಮೇಲೆ ಆಕಸ್ಮಾತ್ತಾಗಿ ಬಿದ್ದು ಹಾನಿ ಮಾಡುತ್ತಿರುವರು. 300-400 ಸೋವಿಯೆಟ್ ವಿಮಾನಗಳು ಫಿನ್ಲೆಂಡಿನ ಮೇಲೇರಿ ಹೋಗಿ ಬೋಂಬು ಸಿಡಿದು ಹಾವಳಿ ಮಾಡುತ್ತಿವೆ ಇದೇ ತಾ. 18ರಲ್ಲು ಸಲ್ಲಾರಣರಂಗದಲ್ಲಿ ಕೂಡಾ ರಷ್ಯನರು ಪ್ರಬಲ ಅಪಜಯ ಹೊಂದಿರುವರೆಂದು ತಿಳಿದು ಬರುತ್ತದೆ ಮೈಕಿನಿವಿ ಎಂಬಲ್ಲಿ ಭೀಕರ ಕದನ ನಡೆದು ಸೋವಿಯೆಟ್ ಸೇನೆಯು ಪರಾಜಿತವಾಗಿ ಹಲವು ಮೈಲು ಹಿಂದಕ್ಕಟ್ಟಲ್ಪಟ್ಟಿರುವುದೆಂದು ಸುದ್ದಿ. ಫಿನ್ಲೆಂಡಿನ ಭೂಸ್ಥಿತಿಯಿಂದಾಗಿ ಶೀಘ್ರ ವಿಜಯವು ಅಸಾಧ್ಯವೆಂಬುದನ್ನು ಅವರು ಮೊದಲೇ ತಿಳಿದಿದ್ದರೆಂದೂ ಇದು ಹೊರತು ಫಿನ್ಲೆಂಡಿನ ಮೆನ್ನರ್ ಹೈಮ್ ಕೋಟೆಯು ಮ್ಯಾಗಿನಟ್ ಕೋಟೆಯಷ್ಟೇ ಗಟ್ಟಿಯಾಗಿರುವುದೆಂದೂ, ಆದುದರಿಂದ ದೀರ್ಘ ಯುದ್ಧವು ನಿರೀಕ್ಷಿಸಲ್ಪಟ್ಟಿದ್ದಿತೆಂದೂ ರಷ್ಯನರ ಕಡೆಯ ಹೇಳಿಕೆ.

ಪೋಲಂಡಿನಲ್ಲಿ ಸಾಮೂಹಿಕ ಕೊಲೆ

ಪೋಲಂಡಿನ ಪೋಸನ್, ಪೊಮೆರೇನಿಯ ಮತ್ತು ಸಿಲೀಸಿಯದಲ್ಲಿ ಪೋಲಿಶ್ ನಾಗರಿಕರ ಸಾಮೂಹಿಕ ಕೊಲೆಯು ಕ್ರಮವಾಗಿ ನಡೆಸಲ್ಪಡುತ್ತಿದೆ. ಈ ಜಿಲ್ಲೆಗಳಲ್ಲಿ ಯಾವ ತರದ ವಿಚಾರಣೆಯೂ ಇಲ್ಲದೆ 15,000 ಮಂದಿ ಪ್ರಮುಖ ನಾಗರಿಕರು ಕೊಲೆಮಾಡಲ್ಪಟ್ಟಿರುತ್ತಾರೆ 136 ಬಾಲಕ ಹುಡುಗರನ್ನು ಗುಂಡುಹಾಕಿ ಕೊಲ್ಲಲಾಗಿದೆ. ಜರ್ಮನರು ಪೋಲಿಶ್ ಭಾಷೆ ಮತ್ತು ಸಂಸ್ಕೃತಿಯನ್ನೇ ನಾಶಮಾಡುತ್ತಿದ್ದಾರೆ. ಗೆಸ್ಟಪೋ ಗುಪ್ತಪೋಲೀಸರು ನಡೆಸುತ್ತಿರುವ ಅತ್ಯಾಚಾರಗಳು ಭೀಕರವಾಗಿವೆ.

ಅಂತರಂಗದ
ಮೊಹರಮ್ ವಿಶೇಷ ಸಂಚಿಕೆ

ತಾ. 18–2–1940ರಲ್ಲಿ ಹೊರಬೀಳಲಿರುವುದು.

ಮುಸಲ್ಮಾನರ ಸಂಸ್ಕೃತಿ, ಅವರ ಧರ್ಮದ ಹೆಗ್ಗುರುತಾದ ಬಾಂಧವ್ಯದ ವೈಶಿಷ್ಟ್ಯ, ಸಮಾಜದ ರೀತಿನೀತಿ, ಅವರು ಅನುಸರಿಸುವ ಪದ್ಧತಿಗಳೂ, ಹುಳುಕು ಬೆಳಕುಗಳೂ ನಿರ್ದಾಕ್ಷಿಣ್ಯವಾಗಿ ಈ ಸಂಚಿಕೆಯಲ್ಲಿ ತಜ್ಞರಿಂದ ಚರ್ಚಿಸಲ್ಪಡುವುವು.

ಜಾಹೀರಾತಿಗೆ ಉತ್ತಮ ಸಾಧನ.

ವಿಶೇಷ ಮಾಹಿತಿಗೆ ಬರೆಯಿರಿ.

ಅಂತರಂಗ ಕಾರ್ಯಾಲಯ, ಉಡುಪಿ.

ಕೆಲೆಂಡರು ಸ್ವೀಕಾರ

ಈ ಕೆಳಗಣವರಿಂದ ಈ ಕಚೇರಿಗೆ ಕಳುಹಿಸಲ್ಪಟ್ಟ 1940ನೇ ಇಸ್ವಿಯ ಕೆಲೆಂಡರುಗಳನ್ನು ಆಭಾರದಿಂದ ಸ್ವೀಕರಿಸುತ್ತೇವೆ

1. ಶ್ರೀ. ... ಉಡುಪಿ, 2 ಮೆ. ... ವರ್ಕ್ಸ್, ಉಡುಪಿ 3 ಮೆ. ... 4 ಮಿ ... ಕಂಪೆನಿ ... 5 ಮೆ ಉಡುಪಿ ಪ್ರೆಸ್, ಉಡುಪಿ. 6. ಮೆ ... 7 ಮೆ. ... 8. ಮೆ ದಿ ಇಂಡಿಯಾ ... ಬ್ಯಾಂಕ್ ...

ಪ್ರಕಟಣೆ.

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. S. 236/1939

R. E. P. 800/1939

The Canara Banking Corporation Ltd., Udipi, by its Agent. ಅರ್ಜಿದಾರ.

ಮತ್ತು

K ಪುರುಷೋತ್ತಮ ಪೈ ಕೂಡಾ

ಎದ್ರಿರು. ಇವರೊಳಗೆ

1ನೇ ಎದ್ರಿ ಕೆ. ಪುರುಷೋತ್ತಮ ಪೈ, ಕೊಚ್ಚಿಕರ್ ಎ.ವಿ.ಚಂದ್ರ ಪೈಗಳ ಮಗ, ಉಡುಪಿ ತಾಲೂಕು ಬಾಳ್ಕುದ್ರು ಗ್ರಾಮದ ಹಂಗಾರಕಟ್ಟೆ ಇವರಿಗೆ ತಿಳಿಸುವುದೇನೆಂದರೆ:—

ಮೇಲ್ಕಂಡ ಡಿಕ್ರಿ ಅಮಲುಜಾರಿಯಲ್ಲಿ 1ನೇ ಎದ್ರಿ ಹಕ್ಕಿನ ಬಾಬ್ತು ಕಂಪೋಜಿಷನ್ ಹೋಲ್ಡರ್ ತೋನ್ಸೆ ಸಟ್ಟು ಕಿಣಿಯರ ಸ್ವಾಧೀನವಿರುವ ಬಗ್ಗೆ ವ ಸದರಿ ಕಂಪೋಜಿಷನ್ ಹೋಲ್ಡರರು 1ನೇ ಎದ್ರಿಯ ಬಾಲಿಗೇಣಿ ವಳ್ಳಿಗಳಿಂದ ವಸೂಲು ಮಾಡುವ ಬಾಕಿ ಪ್ರಮಾಣಿ ಸಂಬಂಧ ಗೇಣಿ ವಸೂಲಿ ಹಕ್ಕು ನಮ್ಮ ಅಪ್ಪಿಗೆ ಅಟೇಚ್ಮೆಂಟ್ ಕೊಟ್ಟ ಮೇಲ್ಕಂಡ ಅರ್ಜಿಯು ತಾ. 6-2-1940ಕ್ಕೆ ತನ್ನ ಬಗ್ಗೆ ಇಡೋಣಗಿಯದೆ, ಸದ್ರಿ 1ನೇ ಎದ್ರಿಯು ಸದ್ರಿ ಕೋರ್ಟಿನ ಮುಂದೆ ಆ ದಿವಸ ಸ್ವತಃ ಯಾ ಪ್ಲೀಡರ್ ಮುಖಾಂತರ ಹಾಜರಾಗಿ ಆಕ್ಷೇಪ ಹೇಳತಕ್ಕದ್ದು, ತಪ್ಪಿದರೆ ಅತನ ಗೈರ್‌ಹಾಜರಿಯಿಂದ ಸದರಿ ಅಮಲ್ದಾರಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಪ್ರಕಟಿಸಲಾಗಿಯದೆ.

By order of the Court.

M. Vittal Kamath, B. A., B. L.

UDIPI 17-1-1940 } *Pleader for Petitioner.*

ನೋಟೀಸು.

ಕಾರ್ಕಳ ಡಿ ಮು. ಕೋರ್ಟಿನಲ್ಲಿ

Scs. No. 130/1939

ಕುಕ್ಕ ಸಟ್ಟ-ಮೊನ್ನ ಹೆಂಗ್ಸಿನ ಮಗ ಮಂಗ್ಳೂರು ತಾಲೂಕು ಕಿಲೆಂಜೂರು ಗ್ರಾಮದಲ್ಲಿರುವವ, } ವಾದಿ.

ಮತ್ತು

ಸಿದ್ದ ಸಟ್ಟ-ಕುದ್ರಿ ಮಾರು ಗುತ್ತು ಐರೆಲ್ ರಾಮಯ್ಯ ಸಟ್ರ ಆಳಿಯ, ಸದ್ರಿ ಕಿಲೆಂಜೂರು ಗ್ರಾಮಸ್ಥ, ಈಗ ಹಾಲಿ ಬೊಂಬಾಯಿಯಲ್ಲಿ ಶ್ರೀರೋಡ್ ಪೋಷ್ಟಾಪ್ ಸಾಂತಕ್ರೂಸಾ ಬೊಂಬಾಯಿ No. 23ಲ್ಲಿರುವವ. } ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಮೇಲ್ಕಂಡ ವ್ಯವಹಾರದಲ್ಲಿ ವಾದಿಯು ಪ್ರತಿವಾದಿಯಿಂದ ಬರತಕ್ಕ ದಾವಾ ಡಿಮಾಂಡ್ ಪ್ರಾಮಿಸರಿ ನೋಟಿನ ಬಾಬ್ತು ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವರೆ ದಾಖಲು ಮಾಡಿರುವ ದಾವೆಯು ತಾ 12-2-40ಕ್ಕೆ ಅಪ್ಪಿರು ತನ್ನಯ ಬಗ್ಗೆ ಇಟ್ಟಿರ ತ್ತದೆ. ಆದುದರಿಂದ ಈ ವಿಷಯದಲ್ಲಿ ನಿಮಗೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕು ಹಗಲು ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಖುದ್ದು ಯಾ ವಕೀಲರ ಮುಖಾಂತರ ಹಾಜರು ಆಗಿ ನಿಮ್ಮ ಆಕ್ಷೇಪಗಳನ್ನು ನಿವೇದಿಸಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ಸಂಬಂಧವು ನಿಶ್ಚಯಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಯಲಾಗುತ್ತದೆ.

A. N. S. Achar,

Pleader for Plaintiff

KARKALA, Dated 18-1-1940

NAVAYUGA
Advertisement Tariff

1 Page	Rs 25/-	per insertion	
½ „	Rs. 15/-	„	„
¼ „	Rs. 8/-	„	„
⅛ „	Rs. 5/-	„	„

Per Single inch col. Re. 1 „

Contract rates on application

Manager-**Navayuga UDIPI.**

NOTICE

ನೋಟೀಸು.

THE PANGAL NAYAK BANK LTD, KATAPADI, S.K.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಕಟಪಾಡಿ, ದ. ಕ.

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗಳಿಗೆ ಕಳುಹಿಸಿದ್ದ ರಿಜಿಸ್ತ್ರಿ ನೋಟೀಸುಗಳ ಪ್ರತಿ ಮೊದಲನೆಯವರು ವ್ಯಾಪಾರಕ್ಕಾಗಿದ್ದಾರಾಗಿ ನಮಗೆ ವಾಪಸು ಬಂದಿರುವುದರಿಂದಲೂ ವ ಎರಡನೆಯವರಿಗೆ ನೋಟೀಸು ಜ್ಯಾರಿಯಾದರೂ ಉತ್ತರ ಬಡ್ಡಿ ಕೊಡದೆ ಇರುವುದರಿಂದಲೂ ಸದರಿ ಅಸಾಮಿಗಳು ಈ ಬೇಂಕಿನಿಂದ ಪಡೆದ ಲೋನುಗಳಲ್ಲಿ ಅಡವಿಟ್ಟ ಚಿನ್ನಾಭರಣಗಳನ್ನು ಇದೇ ತಿಂಗಳ ತಾ. 30ನೇ ಮಂಗಳವಾರ ದಿವಸ ಮಧ್ಯಾಹ್ನ ಎರಡು ಘಂಟೆಗೆ ಅಥವಾ ಬೇಂಕಿಗೆ ಯುಕ್ತತೋರುವ ಇತರ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
198/38	ನಾಗಪ್ಪ ಶೆಟ್ಟಿ, ರಾಮಣ್ಣ ಶೆಟ್ರ ಮಗ, ಬೊಕ್ಕಾಡಿ ಏಣಗುಡ್ಡೆ ಗ್ರಾಮ, ಕಟಪಾಡಿ ಪೋಸ್ಟು	15/-
337/38	„ „ „	30/
341/38	„ „ „	20/-
342/38	„ „ „	30/-
66/38	ಎಮ್ ಕೃಷ್ಣಪ್ಪಯ್ಯ ಬಾಳ್ಕ, ಬಾಳ್ಕ ಶೀನಪ್ಪಯ್ಯರ ಮಗ, ಮಟ್ಟು ಗ್ರಾಮ, ಕಟಪಾಡಿ ಪೋಸ್ಟ್ ದ. ಕ	12/-

ಬೇಂಕಿನ ಆಫೀಸು, ಕಟಪಾಡಿ, 20-1-40

K G Kudva. ಏಜಂಟ್

ನೋಟೀಸು.

ಉಡುಪಿ ಡಿ ಮು ಕೋರ್ಟಿನಲ್ಲಿ

O. S No 4/38

R. I. A No. 1102/39

ನಾರಾಯಣ ಅಡ್ಯಂತಾಯ-ವಾದಿ-

ಮತ್ತು ಅರ್ಜಿದಾರ.

P. O. ಹೊನ್ನಯ್ಯ ಹೆಗ್ಡೆ ಕೂಡಾ

ಪ್ರತಿವಾದಿರು-ಎದ್ರಿರು.

ಉಡುಪಿ ತಾಲೂಕು ಅಂಜಾರು ಗ್ರಾಮದ ಪೊಂತಬೆಟ್ಟಿನಲ್ಲಿರುವ ರಾಮಯ್ಯ ಹೆಗ್ಡೆರ ಮಗ 1ನೇ ಎದ್ರಿ P. O. ಹೊನ್ನಯ್ಯ ಹೆಗ್ಡೆ ವ ಸದ್ರಿ ಹೊನ್ನಯ್ಯ ಹೆಗ್ಡೇರ ಆಳಿಯ 3ನೆ ಎದ್ರಿ ಸುರೇಂದ್ರ ಹೆಗ್ಡೆ ಕೂಡಾ 2 ಜನರಿಗೆ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ವ್ಯಾಜ್ಯದಲ್ಲಿ ತಾ 14-11-'39 ರಲ್ಲು ಕೊಡಲಾದ ಡಿಕ್ರಿಯಲ್ಲಿ ಬಹುಧಾನ್ಯ ಸಂವತ್ಸರದ ಆದಿಯಿಂದಾದರೂ ವರ್ಷ 1ರ ತೋಳ್ನಲು ಅಕ್ಕಿ ಕಳ್ಸಿಡೆ ಮುಡಿ 14, ನಗದು ರೂಪಾಯಿ 6/-ರಂತೆ ಹುಟ್ಟುವಳಿ ಸಮೇತ ದಾವಾ ಸ್ಥಾವರ ಆಸ್ತಿಗಳನ್ನು ಪ್ರತಿವಾದಿರು ವಾದಿಯ ಸ್ವಾಧೀನ ಬಿಟ್ಟುಕೊಡುವ ಹಾಗೆ ವಿಧಿಸಿ ಆಮೇರಿಗೆ ಡಿಕ್ರಿ ದುರಸ್ತಿ ಪಡಿಸಬೇಕಾಗಿ ಸಿ. ಪ್ರೊ. ಕೋಡಿನ 152ನೇ ಸೆಕ್ಷನ್ ಪ್ರಕಾರ ಅರ್ಜಿದಾರನು ದಾಖಲುಮಾಡಿದ ಮೇಲ್ಕಂಡ ಅರ್ಜಿಯನ್ನು ತಾ 30 1-40ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ದಿವಸ ಹಗಲು ಗಂಟೆ 10ಕ್ಕೆ ನೀವು ಈ ಕೋರ್ಟಿನ ಮುಂದೆ ಹಾಜರಾಗಿ, ನಿಮ್ಮ ಆಕ್ಷೇಪಣೆ ಇದ್ರೆ ಅದನ್ನು ಹಾಜರು ಪಡಿಸಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Jagannath Ballal,

Vakil for Petitioner.

UDIPI, Dated 9-1-'40

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 644/36

ಪರ್ಸನಲ್ ಡಿಕ್ರಿ R. I. A 635/39

R. E. A. 1258/1938

ಕೃಷ್ಣಯ್ಯ-ಪೈಕಲೆವಾದಿಯ ವಾರಿಸ್ದಾರ

ಅರ್ಜಿದಾರ

ಮತ್ತು

ನಾರಾಯಣಯ್ಯ-ಕಟ್ಟೆಲಿಗುತ್ತು ಸುಬ್ಬಯ್ಯರ ಮಗ, ಉಡುಪಿ ತಾಲೂಕು ಎಲ್ಲೂರು ಗ್ರಾಮದ ಕೊಳಚೂರು ಎಂಬಲ್ಲಿರುವವ—ಹಾಲಿ K S. Narayana Pothy, Coffee Hotel Keeper Palavangadi, Trivendrum. ಎಂಬಲ್ಲಿರುತ್ತಾನೆ, ಪ್ರತಿವಾದಿ ಎದ್ರಿ.

ಮೇಲ್ಕಂಡ ಡಿಕ್ರಿ ಅಮಲುಜ್ಯಾರಿಯ ಪೈಕಲೆ ವಾದಿಯು ಇತ್ತಲಾಗೆ ಮೃತಪಟ್ಟಿರುವುದರಿಂದ ಆತನಸ್ಥಾನದಲ್ಲಿ ಆತನ ವಾರಿಸ್ದಾರ ಹಿರೇಮಗನ ಕಂಟಿನ್ಯುವ ಮೇನೇಜರನಾದ ಅರ್ಜಿದಾರನನ್ನು ಕಕ್ಷಿಯಲ್ಲಿ ಸೇರಿಸಬೇಕಾಗಿ ಕೊಟ್ಟ ಅಮಲ್ಜ್ಯಾರಿ ಅರ್ಜಿ ಬಗ್ಗೆ ನಿಮಗೆ ಏನಾದರೂ ಆಕ್ಷೇಪಣೆಯಿದ್ದರೆ ಮೇಲ್ಕಂಡ ಕೋರ್ಟಿನಲ್ಲಿ ತಾ. 30 1 40ಕ್ಕೆ ಹಗಲು ಗಂಟೆ 10ಕ್ಕೆ ನೀವು ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಹೇಳತಕ್ಕದ್ದು. ಇಲ್ಲವಾದ್ರೆ ನಿಮ್ಮ ಗೈರುಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ.

(*Sd*) **K. Venkatesha Pai,**

Pleader for Petitioner

ಕಾರ್ಕಳ, ತಾ. 17-1-40

CANARA BANK LIMITED.

THE ONLY BANK TO HAVE A SHARE-HOLDERS ASSOCIATION TO SAFE-GUARD THE INTERESTS OF DEPOSITORS, CONSTITUENTS AND SHARE-HOLDERS.

RESOURCES OF A CRORE

ಪ್ರಕಟಣೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S No. 111/37

R E P No. 1297/39

ಹೊಸಬೆಟ್ಟು ರಾಮರಾವ್—ಅರ್ಜಿದಾರ

ಮತ್ತು

ಕೃಷ್ಣಯ್ಯ ಕೂಡ 3 ಜನರು—ಎದ್ರಿರು

ಇವರೊಳಗೆ

ಸದ್ರಿ ಅಮಲುಜ್ಯಾರಿಯ 1ನೇ ಎದ್ರಿ ಕೃಷ್ಣಯ್ಯ, ಹೊಸಮನೆ ಮುಮ್ಮಡಪ್ರಭುಯ್ಯನವರ ಮಗ, ಉಡುಪಿ ತಾಲೂಕು ಬೆಳ್ಳೆ ಗ್ರಾಮದಲ್ಲಿರುವವರು. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಸದ್ರಿ ಅಮಲುಜ್ಯಾರಿಯಲ್ಲಿ ಅರ್ಜಿದಾರನ ಸ್ಥಿರಾಸ್ತಿ ಏಲಂ ಬಗ್ಗೆ ನಾವುಗಳು ಕೂಡಿದ ಏಲಂ ಇಸ್ತಿಹಾರಿನ ವಜೂಲಾತಿ ಕುರಿತು ಮತ್ತು ಸದ್ರಿ ಆಸ್ತಿ ಏಲಂ ಸಮಯ ಬಿಡ್ ಮತ್ತು Set off ಮಾಡುವದರ ಕುರಿತು ಕೊಟ್ಟ ಅರ್ಜಿಯು ತಾ. 3-2-40ಕ್ಕೆ ಈ ಕೋರ್ಟಿನಲ್ಲಿ ತನಿಖೆಗೆ ಇರಿಸಲ್ಪಟ್ಟಿದೆ. ಈ ದಿವಸ ಬೆಳಗ್ಗೆ 11 ಗಂಟೆಗೆ ಈ ಕೋರ್ಟಿನ ಮುಂದೆ ನೀವು ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗದೆ ಇದ್ದಲ್ಲಿ ಸದ್ರಿ ಅರ್ಜಿಯು ನಿಮ್ಮ ಗೈರ ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

(ಕೋರ್ಟಿನವರ ಹುಕುಂ ಪ್ರಕಾರ.)

ಯಂ ಯಸ್. ಅಧಿಕಾರಿ,

ಅರ್ಜಿದಾರನ ಕಡೆ ವಕೀಲ

ಕಾರ್ಕಳ, ತಾ 7-1-1940.

WANTED.

"Applications are invited from midwives possessing a diploma recognised for registration as midwife in this Presidency under the Madras Nurses and Midwives Act, 1926, for the appointment of two Midwives under the Maternity & Child Welfare Scheme under the South Kanara District Board. The Midwives should not be less than 21 years nor more than 40 years of age on the day of appointment. The applications should reach the President, District Board by the 6th February 1940

(*Sd.*) **K. Vittal Shetty,**

President, District Board S K

ದಿ ನೇಶನಲ್ ಮಿಲ್ಕ್‌ಹೌಸ್

THE **NATIONAL MILK HOUSE**

Patti House, Gunbow Street, Fort BOMBAY.

ದನದ ಮತ್ತು ಎಮ್ಮೆಗಳ ಶುದ್ಧ ಹಾಲು, ತುಪ್ಪದಿಂದ ತಯಾರಿಸಿದ ಪುರಿ ಗ್ರಾಹಕರಿಗೆ ಬೇಕಾದ ಅನುಕೂಲತೆ ಎಲ್ಲವೂ ನಮ್ಮಲ್ಲಿರುವುವು. ಒಮ್ಮೆ ಸಂದರ್ಶಿಸಿರಿ. ಕಡಿಮೆ ಬೆಲೆಯಲ್ಲಿ ತೃಪ್ತಿಹೊಂದಿರಿ.

ಹೆಚ್ಚಿನ ವಿವರಗಳಿಗೆ ಬರೆಯಿರಿ:—

T M. Shetty,

Proprietor

ಹಿಂದೂದೇಶದಲ್ಲಿ ಮಾತೃತ್ವ ಮತ್ತು ಶಿಶುಸಂರಕ್ಷಣೆ.

ತಾ. 15-1-1940ರಲ್ಲಿ ಶ್ರೀ। ಎ. ಬಿ. ಶೆಟ್ಟಿ, ಎಂ ಎಲ್ ಎ, ರವರು ಬೈಂದೂರು ಹೆರಿಗೆ ಆಸ್ಪತ್ರೆಯ ಆರಂಭ ಸಮಾರಂಭ ನಡೆಸುವಾಗ ಕೊಟ್ಟ ಭಾಷಣದ ಮುಖ್ಯಾಂಶಗಳು.

ಬೈಂದೂರು ಹೆರಿಗೆ ಆಸ್ಪತ್ರೆಯ ವ್ಯವಸ್ಥಾಪಕ ಕಮಿಟಿಯವರು ಮತ್ತು ಈ ಕಮಿಟಿಯ ಉತ್ಸಾಹೀ ಕಾರ್ಯದರ್ಶಿ ಶ್ರೀ. ಸುಬ್ಬಣ್ಣ ಶೆಟ್ಟಿ ಇವರು ಈ ಆಸ್ಪತ್ರೆಯನ್ನು ಒದಗಿಸುವ ವ್ಯವಸ್ಥೆ ಮಾಡಿದ ಬಗ್ಗೆ ಈ ಪ್ರದೇಶದ ಜನರೆಲ್ಲರ ಕೃತಜ್ಞತೆಗೆ ಪಾತ್ರರಿದ್ದಾರೆ. ಈ ರೀತಿಯ ವೈದ್ಯಕೀಯ ಸಹಾಯದ ವಿಸ್ತರಣೆಗಾಗಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾಕ್ಟರ್ ಶ್ರೀ. ಏರಲ ಶೆಟ್ರು ಕೆಲಸ ಮಾಡುತ್ತಿರುವುದೂ ಇತರ ಹಲವು ಸ್ಥಳಗಳ ಮಹಾಜನರೂ ಇವರ ವಿನಂತಿಯನ್ನು ಮನ್ನಿಸಿ ಜಿಲ್ಲಾ ಬೋರ್ಡ್ ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಿಗೆ ಹೆರಿಗೆ ಶಾಖೆಗಳನ್ನು ಜೊತೆಗೂಡಿಸಲು ಉದಾರ ಬುದ್ಧಿಯಿಂದ ಸಹಾಯ ಮಾಡಿರುವ ರೆಂಬುದೂ ಸಂತೋಷದ ಸಂಗತಿಗಳು.

ಸೂಲಗಿತ್ತಿಯರು

ನಮ್ಮ ಪ್ರಾಂತ್ಯದಲ್ಲಿ ಆಸ್ಪತ್ರೆಗಳಲ್ಲಿ ಮತ್ತು ಹೆರಿಗೆ ಚಿಕಿತ್ಸಾಲಯಗಳಲ್ಲಿ 630 ಮಂದಿ ಸೂಲಗಿತ್ತಿಯರೂ ಖಾಸಗಿಯಾಗಿ ಚಿಕಿತ್ಸೆ ನಡೆಸುವ 2,411 ಮಂದಿ ರಿಜಿಸ್ಟರ್ ಆದ ಸೂಲಗಿತ್ತಿಯರೂ ಇದ್ದಾರೆ. ಯುರೋಪಿನ ದೇಶಗಳಲ್ಲಿ 100 ಜನಗಳಿಗೆ ಒಬ್ಬ ಸೂಲಗಿತ್ತಿಯಾದರೂ ಇರುವುದು ಅಗತ್ಯವೆಂದು ಈಗ ಎಣಿಸಲಾಗುತ್ತಿದೆ. ನಮ್ಮ ಪ್ರಾಂತ್ಯದಲ್ಲಿ ಈಗ 3782 ಜನಗಳಿಗೆ ಒಬ್ಬ ಸೂಲಗಿತ್ತಿಯಂತೆ ಇರುವರು. ಸೂಲಗಿತ್ತಿಯರ ಆವಶ್ಯಕತೆ ಎಷ್ಟಿದೆಯೆಂದು ತಿಳಿದೇ ಕಾಂಗ್ರೆಸ್ ಮಂತ್ರಿಗಳು ನಮ್ಮಲ್ಲಿಯ ಗ್ರಾಮ ಚಿಕಿತ್ಸಾಲಯಗಳಿಗೆ 203 ಮಂದಿ ಸೂಲಗಿತ್ತಿಯರನ್ನು ಒದಗಿಸಲು ಹಣವನ್ನು ಮಂಜೂರು ಮಾಡಿದ್ದಾರೆ. ಈ ಪೈಕಿ ನಮ್ಮ ಜಿಲ್ಲೆಗೆ ಕೆಲವು ಮಂದಿ ಸೂಲಗಿತ್ತಿಯರನ್ನು ಒದಗಿಸಲಾಗಿದೆ.

ಹಳ್ಳಿಯ ಸೂಲಗಿತ್ತಿಯರಿಗೆ ಶಿಕ್ಷಣ

ನಮ್ಮ ಗ್ರಾಮಗಳಿಗೆ ಸಾಕಷ್ಟು ಮಂದಿ ತರ್ಬೇತಿ ಹೊಂದಿದ ಸೂಲಗಿತ್ತಿಯರನ್ನು ನಾವು ಒದಗಿಸುವ ತನಕ ಹಳ್ಳಿಯ ಸೂಲಗಿತ್ತಿಯರ ಮೇಲೆಯೇ ನಾವು ಹೊಂದಿಕೊಂಡಿರಬೇಕಾಗಿದೆ. ಇವರಿಗೆ ಈ ಕೆಲಸದ ಸರಿಯಾದ ಮಾಹಿತಿ ಇಲ್ಲದೆ ಇವರ ಅಜಾಗರೂಕತೆಯಿಂದ ಅನೇಕ ಬಾರಿ ನಂಜಾಗಿ ಬಾಣಂತಿ ಜ್ವರಕ್ಕೆ ಕಾರಣವಾಗುತ್ತದೆ. ಪ್ರಸೂತ ಮರಣಗಳಲ್ಲಿ ಇದೊಂದು ಮುಖ್ಯ ಕಾರಣವಿರುತ್ತದೆ. ಹಳ್ಳಿಯ ಸೂಲಗಿತ್ತಿಗೆ ನಂಜಾಗದಂತೆ ಕೆಲಸಮಾಡುವ ಮಾಹಿತಿ ಇಲ್ಲದೆ ಅನಾವಶ್ಯಕ ತೊಂದರೆ ಮಾಡುತ್ತಾಳೆ. ಇವರ ಪೈಕಿ ಚಿಕ್ಕ ಪ್ರಾಯದ ಹಾಗೂ ತಿಳುವಳಿಕೆಯುಳ್ಳ ಸೂಲಗಿತ್ತಿಯರನ್ನು ಆರಿಸಿ ಇವರಿಗೆ ಸಾಧ್ಯವಿರುವ ಸ್ವಲ್ಪ ಶಿಕ್ಷಣವನ್ನಾದರೂ ಕೊಟ್ಟು ಗ್ರಾಮಗಳಲ್ಲಿಯ ಈಗಿನ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆಯ ವ್ಯವಸ್ಥೆಯನ್ನು ತಾತ್ಕಾಲಿಕವಾಗಿಯಾದರೂ ಮಾಡಿಕೊಳ್ಳಬೇಕಾಗಿದೆ. ಸೂಲಗಿತ್ತಿಯರ ಕಸಬು ಮಾಡುವವರಿಗಿಂತ ಪ್ರತ್ಯೇಕ ಸ್ತ್ರೀಯರಿಗೆ ಇಂಥ ಶಿಕ್ಷಣವನ್ನು ಒದಗಿಸಿ ತರ್ಬೇತಿ ಮಾಡುವದೇ ಉತ್ತಮವೆಂದೂ ಇವರು ತಪ್ಪು ದಾರಿಗಳ ಅಭ್ಯಾಸ ಬಿಡಬೇಕಾದ ತೊಂದರೆಯಾದರೂ ಉಳಿಯುವುದೆಂದೂ ಇನ್ನೂ ಒಂದು ಬಗೆಯ ಅಭಿಪ್ರಾಯವುಂಟು. ಈ ರೀತಿ ತರ್ಬೇತಿ ಹೊಂದಿದವಳು ಸರಿಯಾದ ಶಿಕ್ಷಿತ ಸೂಲಗಿತ್ತಿಯ ಸಮಕ್ಷಮ ೨೦ ಪ್ರಸೂತಗಳನ್ನು ನಡೆಸಿದ ಮೇಲೆ ಇವಳು ಸ್ವತಂತ್ರವಾಗಿ ಈ ಕೆಲಸ ಕೈಕೊಳ್ಳಬಹುದೆಂಬ ಏರ್ಪಾಡು ಮಾಡಬೇಕು.

ಪ್ರಸೂತ ಚಿಕಿತ್ಸೆಯ ಸಂಸ್ಥೆಗಳು

ಕ್ರಮ ಮೀರಿ ನಡೆಯುವ ಪ್ರಸೂತಗಳಲ್ಲಿ ಅಥವಾ ಅನಾರೋಗ್ಯದಿಂದಾಗಿ ಇಲ್ಲವೆ ಮನೆಗಳಲ್ಲಿ ಯೋಗ್ಯ ವ್ಯವಸ್ಥೆ ಮಾಡಲು ಸಾಧ್ಯವಿಲ್ಲದ್ದಲ್ಲಿ ಆಸ್ಪತ್ರೆಗಳಲ್ಲಿ ಅಥವಾ ಪ್ರಸೂತ ಚಿಕಿತ್ಸಾಲಯಗಳಲ್ಲಿ ಪ್ರವೇಶ ಕೊಡುವದು ಅಗತ್ಯವಾಗುತ್ತದೆ. ಮೊದಲ ಬಾರಿಯ ಪ್ರಸೂತವು ದೀರ್ಘವೂ ಕಷ್ಟತರದ್ದಾಗಿಯೂ ಇರುವುದು ಸಾಮಾನ್ಯವೆಂಬುದರಿಂದ ಮೊದಲ ಬಾರಿಗೆ ಇಂಥ ಚಿಕಿತ್ಸಾಲಯಗಳೇ ಅನುಕೂಲವೆಂದು ತಿಳಿದು ಬರುವವರಿದ್ದಾರೆ. ಒಟ್ಟು ಪ್ರಸೂತಗಳಲ್ಲಿ ಸುಮಾರು ಶೇಕಡಾ 30ಕ್ಕೆ ಈ ರೀತಿ ಆಸ್ಪತ್ರೆಗಳ ವ್ಯವಸ್ಥೆ ಬೇಕಾಗಬಹುದು. ಒಂದು ಪ್ರಸೂತಕ್ಕೆ ಸುಮಾರು 12 ದಿನಗಳ ಚಿಕಿತ್ಸೆ ಬೇಕೆಂದಿಟ್ಟುಕೊಂಡಲ್ಲಿ ಆಸ್ಪತ್ರೆಯಲ್ಲಿ ಒಂದು ಸ್ಥಾನದಲ್ಲಿ (Maternity bed) ವರ್ಷಕ್ಕೆ 30 ಮಂದಿಗೆ ಈ ಸೌಕರ್ಯವನ್ನು ಒದಗಿಸಲು ಬರುತ್ತದೆ. ಜನನಗಳ ಶೇಕಡಾ 30ಕ್ಕೆ ಈ ಸೌಕರ್ಯ ಸಿಕ್ಕಬೇಕಾದರೆ ಪೇಟೆಗಳಲ್ಲಿ 100 ಜನನಗಳಿಗೆ ಸಾಮಾನ್ಯ ಕಡಮೆಯೆಂದರೆ ಒಂದು ಸ್ಥಾನವಾದರೂ ಒದಗಿಸಬೇಕಾಗುತ್ತದೆ. ಬ್ರಿಟನ್ ದೇಶದಲ್ಲಿ 10,000 ಸ್ಥಾನಗಳ ವ್ಯವಸ್ಥೆ ಇದೆ. ನಮ್ಮ ಪ್ರಾಂತದಲ್ಲಿ 1313 ಮಾತ್ರ. ಇವುಗಳಲ್ಲಿ ಕೂಡಾ ಹೆಚ್ಚಿನವು ಪಟ್ಟಣಗಳಲ್ಲಿರುತ್ತವೆ. ಗ್ರಾಮಗಳಲ್ಲಿ ಈ ಸೌಕರ್ಯವು ತೀರಾ ಕಡಿಮೆಯೆನ್ನಲು ಅಡ್ಡಿಯಿಲ್ಲ. ಮದ್ರಾಸು ಸಂಸ್ಥಾನದಲ್ಲಿ ಗ್ರಾಮಗಳಲ್ಲಿಯ 100 ಜನನಗಳಿಗೆ 017ರಷ್ಟು ಮಾತ್ರ ಈ ಸೌಕರ್ಯದ ಅನುಕೂಲತೆ ಈಗ ಇರುತ್ತದೆ. ಈ ಹೆರಿಗೆ ಆಸ್ಪತ್ರೆಯನ್ನು ವ್ಯವಸ್ಥೆಗೊಳಿಸಿ ನೀವು ಈ ನಿಜವಾದ ಆವಶ್ಯಕತೆಯನ್ನು ಸ್ವಲ್ಪ ಮಟ್ಟಿಗೆ ಪೂರೈಸಲು ಸಹಾಯ ಮಾಡಿದ್ದೀರಿ.

ಮಾತೃತ್ವ ಮತ್ತು ಶಿಶುಸಂರಕ್ಷಣಾ ಕಾರ್ಯ

ತಾಯಂದಿರ ರಕ್ಷಣೆಯ ಕೆಲಸವು ಈಗಿನ ದಿನಗಳಲ್ಲಿ ಗರ್ಭಿಣಿಯರಾಗಿರುವ ಕಾಲದಲ್ಲಿ ಬೇಗನೆ ಆರಂಭಿಸಿ ಬಾಣಂತಿಯರಾದ ಸ್ವಲ್ಪ ಸಮಯದ ಮೇಲಿನ ತನಕ ಮುಂದುವರಿಸುತ್ತಾರೆ. ಪ್ರಸೂತದ ಮೊದಲಿನ ಜಾಗ್ರತೆಗಾಗಿ ಇಂಗ್ಲೆಂಡಿನಲ್ಲಿ ಅನೇಕ ಸ್ಥಳೀಕ ಸಂಸ್ಥೆಗಳು ಹಲವು ಡಾಕ್ಟರರನ್ನೂ ಸೂಲಗಿತ್ತಿಯರನ್ನೂ ನೇಮಿಸುತ್ತಾರೆ. ಸ್ತ್ರೀಯು ಗರ್ಭಿಣಿಯಾಗಿರುವಾಗ ಅವಳ ಆರೋಗ್ಯವನ್ನು ನೋಡುತ್ತಲೇ ಇರುತ್ತಾರೆ. ಬಾಣಂತಿಯಾದ ಬಳಿಕ ೯ರಿಂದ 8 ವಾರಗಳ ತನಕ ಸ್ತ್ರೀಯರ ಆರೋಗ್ಯ ಪರೀಕ್ಷೆ ಮತ್ತು ಜಾಗ್ರತೆ ಅಗತ್ಯವಿರುತ್ತದೆ ಮತ್ತು ಇಂಗ್ಲೆಂಡಿನಲ್ಲಿ ಈಗ ಇದಕ್ಕೆ ಗಮನಕೊಡುತ್ತಿದ್ದಾರೆ. ನಮ್ಮ ದೇಶದಲ್ಲಿ ಪ್ರಸೂತದ ಮೊದಲಿನ ಪರಿಶೀಲನ ಹಾಗೂ ಪ್ರಸೂತದ ಬಳಿಕದ ಜಾಗ್ರತೆ ಇವು ಇನ್ನೂ ತನಕ ಗೊತ್ತೇ ಇಲ್ಲದ ಸಂಗತಿಗಳೆನ್ನಬಹುದು. ಈ ಬಗ್ಗೆ ಕೆಲಸಮಾಡುವ ಸಂರಕ್ಷಣಾ ಕೇಂದ್ರಗಳು (Welfare centers) ಇಂಗ್ಲೆಂಡು ಮತ್ತು ವೇಲ್ಸುಗಳಲ್ಲಿ ೩೬೦೨ ಇವೆ. ನಮ್ಮ ಪ್ರಾಂತ್ಯದಲ್ಲಿ 177 ಮಾತ್ರ. ಸಂರಕ್ಷಣಾ ಕೇಂದ್ರದ ಶಿಬಂದಿಯಾಗಿ ನೇಮಿಸಲ್ಪಡುವ ತರ್ಬೇತಿ ಹೊಂದಿದ ಆರೋಗ್ಯ ಪರಿಶೀಲಕಳು (Health visitor) ಪ್ರತಿ ತಿಂಗಳಲ್ಲಿ ಕ್ರಮವಾಗಿ ಅವರವರ ಮನೆಗಳನ್ನು ಸಂದರ್ಶಿಸಿ ಗರ್ಭಿಣಿಯರನ್ನೂ ಒಂದು ವರ್ಷ ಪ್ರಾಯದ ವರೆಗಿನ ಮಕ್ಕಳನ್ನೂ ಪರೀಕ್ಷೆಮಾಡಿ ತಾಯಂದಿರಿಗೆ ತಮ್ಮ ಆರೋಗ್ಯದ ಜಾಗ್ರತೆಯ ಕುರಿತು ಹಾಗೂ ಅವರ ಚಿಕ್ಕ ಮಕ್ಕಳ ಆರೋಗ್ಯದ ಕುರಿತು ಬೇಕಾದ ಮಾಹಿತಿಯನ್ನು ಒದಗಿಸುತ್ತಾಳೆ. ಮಾತೃತ್ವದ ಸರಿಯಾದ ತಿಳುವಳಿಕೆ ಮತ್ತು ಅನುಭವವಿಲ್ಲದಿರುವುದು ಶಿಶುಮರಣ ಸಂಖ್ಯೆಯು ಹೆಚ್ಚಾಗಿರುವುದರ ಒಂದು ಮುಖ್ಯ ಕಾರಣವೆನ್ನಲು ಅಡ್ಡಿಯಿಲ್ಲ. ಈ ರೀತಿಯ ಆರೋಗ್ಯ ಪರಿಶೀಲಕರನ್ನು ತರ್ಬೇತಿಗೊಳಿಸುವುದಕ್ಕಾಗಿ ಮದ್ರಾಸು ಸರಕಾರದವರು 1938ರಿಂದ ಒಂದು ಶಾಲೆ ನಡೆಸುತ್ತಿದ್ದಾರೆ. ಈಗ ನಮ್ಮ ಪ್ರಾಂತದಲ್ಲಿರುವ 69 ಮಂದಿ ಆರೋಗ್ಯ ಪರಿಶೀಲಕರು ಈ ಕೆಲಸಕ್ಕೆ ಎಷ್ಟು ಮಟ್ಟಿಗೂ ಸಾಲದೆಂಬುದು ಸ್ಪಷ್ಟ. ಇಂಗ್ಲೆಂಡಿನಲ್ಲಿ ೬350 ಮಂದಿ ಇಂಥ ಆರೋಗ್ಯ ಪರಿಶೀಲಕರಿದ್ದಾರೆ.

ಬಹಳ ಹೆಚ್ಚಿನ ಮರಣ ಸಂಖ್ಯೆ

ಹೆಚ್ಚಿನ ತಾಯಂದಿರು ಮತ್ತು ಮಕ್ಕಳು ಸರಿಯಾದ ಆಹಾರವಿಲ್ಲದವರಿದ್ದು, ಯೋಗ್ಯ ವ್ಯವಸ್ಥೆಯಿಲ್ಲದೆ ಪ್ರಸೂತಕಾರ್ಯವು ನಡೆಯಬೇಕಾಗಿದ್ದು, ತರ್ಬೇತಿಯಿಲ್ಲದ ಸೂಲಗಿತ್ತಿಯರ ಸಹಾಯ ಮಾತ್ರ ದೊರೆಯುತ್ತಿರುವ ಈ ದೇಶದಲ್ಲಿ ತಾಯಂದಿರ ಮತ್ತು ಶಿಶುಗಳ ಮರಣಸಂಖ್ಯೆಯು ವಿಪರೀತವಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಪಾಶ್ಚಾತ್ಯ ದೇಶಗಳಿಗಿಂತ ನಮ್ಮಲ್ಲಿ ಪ್ರಸೂತ ಮರಣಗಳ ಸಂಖ್ಯೆ 4 ಯಾ 5ರಷ್ಟು ಹೆಚ್ಚಿಗಿರುತ್ತದೆ. ಪ್ರಸೂತ ಮರಣಗಳ ಸಂಖ್ಯೆಯೂ ನಮ್ಮಲ್ಲಿ 1000 ಜೀವಂತ ಜನನಗಳಿಗೆ 20ರಂತಿದೆ. ಇಂಗ್ಲೆಂಡಿನಲ್ಲಿ 3.5 ಮಾತ್ರ, ಅಂದರೆ ನಮ್ಮಲ್ಲಿ ಇಂಗ್ಲೆಂಡಿಗಿಂತ 6 ಪಾಲು ಹೆಚ್ಚು. ಹೆರಿಗೆಯಲ್ಲಿ ವರ್ಷ ಒಂದರ ನಮ್ಮಲ್ಲಿ ಎರಡು ಲಕ್ಷ ಸ್ತ್ರೀಯರು ಮರಣ ಹೊಂದುತ್ತಾರೆ. ದೀರ್ಘ ಕಾಯಿಲೆಯಿಂದ ಇಂಥಾ ಮರಣವು ಹೆಚ್ಚಿನ ಬಾರಿ ಒಂದು ಕೊನೆಯ ಬಿಡುಗಡೆಯಾಗಿ ಪರಿಣಮಿಸುತ್ತಿದೆ. ಶೇಕಡಾ 30ರಷ್ಟು ಮರಣ ತಾಯಂದಿರು

(೧೨ನೇ ಪುಟಕ್ಕೆ ಮುಂದುವರಿಸಿದೆ)

THE

BOMBAY LIFE ASSURANCE

Company Limited.

[ESTD. 1908]

COMPARE

Your Life Assurance with any other property you possess what is its guarranteed value

If you live-today-a few years more-when you are old?
If you die-to your family and dependants?

REMEMBER THAT if you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	**Rs. 1,44,91,900**
Life Assurance Fund .. .	**Rs. 1,17,69,748**
Total Assets	**Rs. 1,31,28,998**

To insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	CALICUT. Puthiyara,	Central Station Road, TRIVANDRUM.

ಕಾಂಗ್ರೆಸನ್ನು ತೃಪ್ತಿಪಡಿಸಲು ಬ್ರಿಟಿಷ್ ಸರಕಾರವು ಆತುರಪಡುತ್ತಿದೆ.

ವೈಸರಾಯರ ಬೊಂಬಾಯಿಯ ಭಾಷಣದಲ್ಲಿ ಸಂಧಾನದ ಚಿಹ್ನೆಗಳಿವೆ.

ಗಾಂಧಿಯವರು ಹೋರಾಟಕ್ಕೆ ಆತುರಪಡುವುದಿಲ್ಲ.

ವೈಸರಾಯರ ಹೇಳಿಕೆಯ ಕುರಿತು ಮಹಾತ್ಮರ ಅಭಿಮತ!

ವೈಸರಾಯರು ನಾಗಪುರ ಮತ್ತು ಬೊಂಬಾಯಿ ಪಟ್ಟಣಗಳನ್ನು ಸಂದರ್ಶಿಸಿದಾಗ ಮಾಡಿದ ಭಾಷಣಗಳಿಂದ, ಕಾಂಗ್ರೆಸು ಮತ್ತು ಬ್ರಿಟಿಷ್ ಸರಕಾರಗಳೊಳಗೆ ಸಂಧಿಯಾಗುವ ಆಶೋದಯ ಉಂಟಾಗಿದೆ. ವಿಶೇಷವಾಗಿ ಬೊಂಬಾಯಿಯ ಓರಿಯಂಟ್ ಕ್ಲಬ್ಬಿನಲ್ಲಿ ವೈಸರಾಯರು, ಕನಡ, ದಕ್ಷಿಣ ಆಫ್ರಿಕವೇ ಮೊದಲಾದ ಬ್ರಿಟಿಷ್ ವಸಾಹತುಗಳಂತಹ ಸ್ವಾತಂತ್ರ್ಯವನ್ನು ಆದಷ್ಟು ಬೇಗನೆ ಕೊಡಲಾಗುವುದು. ಆ ಮೊದಲು ಅಲ್ಪ ಸಂಖ್ಯಾಕ ಪ್ರಶ್ನೆಯನ್ನು ಹಿಂದೀಯರು ತಮ್ಮೊಳಗೆ ಇತ್ಯರ್ಥಪಡಿಸಿಕೊಳ್ಳಬೇಕೆಂದು ಹೇಳಿರುವುದು ಮಾತ್ರವಲ್ಲದೆ ಮಿ. ಜಿನ್ನಾರೇ ಮೊದಲಾದವರೊಡನೆ ಮಾತಾಡಿ, ನ್ಯಾಯ ಪಕ್ಷದ ಅಲ್ಪಸಂಖ್ಯಾಕರ ಹಕ್ಕು ಭದ್ರತೆಗಳಿಗೆ ಸರಕಾರವು ಎಂದೂ ಪ್ರೋತ್ಸಾಹ ನೀಡಲಾರದೆಂದು ಎಚ್ಚರಿಸಿರುವರೆಂದು ತಿಳಿದುಬಂದಿದೆ. ಅಲ್ಪ ಸಂಖ್ಯಾಕ ಪ್ರಶ್ನೆಯ ಇತ್ಯರ್ಥದ ವಿಷಯದಲ್ಲಿ ವೈಸರಾಯರು ಯಥಾರ್ಥವಾದ ಪ್ರಯತ್ನ ನಡಿಸುತ್ತಿರುವಂತಿದೆ. ಇದು ಹೊರತು ವೈಸರಾಯರು ಕಾಂಗ್ರೆಸ್ ಮುಖಂಡರೊಡನೆಯೂ ಮಾತಾಡಿರುವರು. ಬ್ರಿಟಿಷ್ ಸರಕಾರವು ಈಗ ಹಿಂದೀ ಪ್ರಶ್ನೆಯನ್ನು ಯಾವ ರೀತಿಯಲ್ಲಾದರೂ ಇತ್ಯರ್ಥ ಪಡಿಸಬೇಕೆಂದು ಆತುರ ಪಡುತ್ತಿರುವಂತಿದೆ. ಸರ್. ಸಾಮುವಲ್ ಹೋರ್ ಮತ್ತು ಮಿ. ಚರ್ಚಿಲ್ಲರೇ ಮೊದಲಾದ ಅನುಭವಿಗಳೂ ಈ ಕುರಿತು ಚಿಂತಿಸುತ್ತಿರುವರೆಂದು ತಿಳಿದುಬಂದಿದೆ. ಕಾಂಗ್ರೆಸು ಸೂಚಿಸುವ ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿಯನ್ನು ಕರೆದು ಹಿಂದೀ ರಾಜಕೀಯ ಘಟನೆಯನ್ನು ತಯಾರಿಸುವ ಏರ್ಪಾಡುಮಾಡಲು ಬ್ರಿಟಿಷ್ ಸರಕಾರವು ಸಿದ್ಧವಿರುವುದಿಲ್ಲ. ಅದು ವ್ಯವಹಾರ್ಯವಲ್ಲವೆಂದು ಅನೇಕರ ಅಭಿಮತ. ಐಗುಪ್ತದ ಮಾದರಿಯಲ್ಲಿ ರಾಜಕೀಯ ಘಟನೆಯನ್ನು ತಯಾರಿಸಿ ಹಿಂದೀಯರನ್ನು ತೃಪ್ತಿ ಪಡಿಸುವ ಆಲೋಚನೆ ನಡೆದಿದೆ. ಅದುದರಿಂದಲೇ ಈಗ ವಾರ್ಧಾದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಧಾರವನ್ನು ಸರಕಾರವು ಆತುರದಿಂದ ನಿರೀಕ್ಷಿಸಿಕೊಂಡಿರುವಂತಿದೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇದೇ ತಾ. 19ನೇ ಅಪರಾಹ್ನ ಮತ್ತು 20ರಲ್ಲು, ವೈಸರಾಯರ ಹೇಳಿಕೆ ಮತ್ತು ಶ್ರೀ ಭೂಲಭಾಯಿ ದೇಸಾಯಿಯವರೇ ಮೊದಲಾದವರು ಅವರನ್ನು ಬೊಂಬಾಯಿಯಲ್ಲಿ ಕಂಡು ಮಾತಾಡಿದ ವಿಷಯಗಳ ಕುರಿತೆಲ್ಲಾ ಆಲೋಚಿಸುತ್ತಿರುವರು ಅವರು ಅವಸರದಿಂದ ಯಾವ ನಿರ್ಧಾರವನ್ನೂ ಮಾಡುವ ಹಾಗಿಲ್ಲ ವೈಸರಾಯರ ಬೊಂಬಾಯಿಯ ಭಾಷಣವು, ಇಷ್ಟರವರೆಗೆ ಬ್ರಿಟಿಷ್ ಸರಕಾರದ ಪರವಾಗಿ ಮಾಡಲ್ಪಟ್ಟಿರುವ ಹೇಳಿಕೆಗಳೆಲ್ಲವುಗಳಿಂತಲೂ ಮುಂದುವರಿದಿದೆಯೆಂಬುದೇ ಹೆಚ್ಚಿನ ವರ್ಕಿಂಗ್ ಕಮಿಟಿ ಮೆಂಬರರ ಅಭಿಮತವಿರುತ್ತದೆ ಇನ್ನೂ ಕೆಲವು ವಿಷಯಗಳ ಕುರಿತು ಸಂದೇಹವನ್ನು ನಿವಾರಿಸಿಕೊಳ್ಳಲು ಗಾಂಧಿಜಿಯವರು ವೈಸರಾಯರನ್ನು ಕಾಣುವುದುಚಿತವೆಂದೂ, ಬೇಗನೆ ಗಾಂಧಿ ವೈಸರಾಯ ಮಾತುಕತೆಯು ಇನ್ನೊಮ್ಮೆ ನಡೆಯಬಹುದೆಂದೂ ನಂಬಲಾಗಿದೆ

● ಮಹಾತ್ಮರು ಪುನಃ ವೈಸರಾಯರನ್ನು ಕಾಣುವರೇ?

ಜನವರಿ ತಾ 20ರ ಹರಿಜನ ಪತ್ರಿಕೆಯಲ್ಲಿ ಮಹಾತ್ಮ ಗಾಂಧಿಯವರು ಬರೆದೊಂದು ಅಗ್ರಲೇಖನವು, ಈ ಸಂದೇಹವನ್ನು ಮತ್ತಷ್ಟು ಬಲಪಡಿಸುತ್ತದೆ ಶ್ರೀ ಸುಭಾಸಭೋಸರನ್ನುವಂತೆ ತಾನೇನೂ ಬ್ರಿಟಿಷ್ ಸರಕಾರದೊಡನೆ ಹೋರಾಡಲು ಹಾತೊರೆಯುವುದಿಲ್ಲೆಂದು ಅವರು ಸ್ಪಷ್ಟವಾಗಿ ಒಪ್ಪಿರುತ್ತಾರೆ. ಬ್ರಿಟಿಷ್ ಸರಕಾರದೊಂದಿಗೆ ಗೌರವ ಪೂರ್ವಕವಾದ ಒಡಂಬಡಿಕೆಗಾಗಿ ತಾವು ಆತುರ ಪಡುತ್ತಿರುವೆನು ಸತ್ಯಾಗ್ರಹದ ರೀತಿಯೇ ಹಾಗೆ. ಆದುದರಿಂದ ತಾನೇನೂ ಅವಸರಪಡಲಾರೆನು ಆದರೆ ಹೋರಾಟವು ಅನಿವಾರ್ಯವಾದ ಪಕ್ಷದಲ್ಲಿ ಯಾರ ಬೆಂಬಲವೂ ದೊರೆಯದಿದ್ದ ಪಕ್ಷದಲ್ಲಿಯೂ ತಾನೊಬ್ಬನೇ ಕಾದಾಡುವೆನು. ಆದರೆ ತನಗೆ ಬ್ರಿಟಿಷ್ ಸರಕಾರದ ಮೇಲಿನ ವಿಶ್ವಾಸವು ಹೋಗಿಲ್ಲೆಂದು ಮಹಾತ್ಮರು ಅಭಿಪ್ರಾಯಪಟ್ಟಿರುವರು.

ಲೋರ್ಡ್ ಲಿನ್ಲಿತ್‌ಗೋರವರ ಇತ್ತಲಾಗಿನ ಹೇಳಿಕೆಯು ಒಳ್ಳೇದಿದೆ ಅವರ ಯಥಾರ್ಥತೆಯಲ್ಲಿ ತನಗೆ ವಿಶ್ವಾಸವಿದೆ. ಆ ಭಾಷಣದಲ್ಲಿ ಅಲ್ಲಲ್ಲಿ ಸಿಕ್ಕುಗಳಿವೆಯೆಂಬುದರಲ್ಲಿ ಸಂದೇಹವಿಲ್ಲ. ಇನ್ನು ಇತ್ಯರ್ಥವಾಗದೇ ಕಾದ ಹಲವು ವಿಷಯಗಳಿವೆ. ಆದರೆ ಅದರಲ್ಲಿ ಇತ್ಯರ್ಥದ ಬೀಜವಿರುವಂತಿದೆ. ತಾನು ಯಾವಾಗಲೂ ಈ ರೀತಿ ಸಮಾಧಾನಪಡುವ ಮನೋವೃತ್ತಿಯುಳ್ಳವನು ಇದನ್ನು ದೇಶವು ತಿಳಿದುಕೊಳ್ಳಬೇಕೆಂದು ಗಾಂಧಿಯವರು ತನ್ನ ಪ್ರಕೃತದ ಘೋಷಣೆಯನ್ನು ಕಟ್ಟೋಕ್ತವಾಗಿ ಹೇಳಿ, ದೇಶವು ಅದಕ್ಕೊಪ್ಪದಿದ್ದಲ್ಲಿ ತಾನು ನಾಯಕತ್ವವನ್ನು ವಹಿಸಲು ಸಾಧ್ಯವಿಲ್ಲೆಂದು ಹೇಳಿರುವರು.

ಇದರಿಂದ ಕಾಂಗ್ರೆಸ್ ಮತ್ತು ಬ್ರಿಟಿಷ್ ಸರಕಾರಗಳೊಳಗೆ ರಾಜಿಯಾಗುವ ಆಶೆಯು ಬಲಗೊಳ್ಳುವಂತಾಗಿದೆ. ಡಿಲ್ಲಿಯಲ್ಲಿಯೂ ಆಶೋದಯವುಂಟಾಗಿದೆ ವೈಸರಾಯರ ಪ್ರಯತ್ನದಿಂದಾಗಿ ಬೇಗನೆ ಹಿಂದು ಮುಸಲ್ಮಾನ ಪ್ರಶ್ನೆಯು ಇತ್ಯರ್ಥವಾಗಬಹುವೆಂದು ತೋರುತ್ತದೆ ಯಾಕೆಂದರೆ ಸರಕಾರದ ಆಶಯವೊಂದು ತಪ್ಪಿದ ಪಕ್ಷದಲ್ಲಿ ಅಲ್ಪ ಸಂಖ್ಯಾಕರಿಗೆ ಕಾಂಗ್ರೆಸ್ಸಿನೊಂದಿಗೆ ಯಾವುದಾದರೊಂದು ರೀತಿಯ ಒಪ್ಪಂದ ಮಾಡಿಕೊಳ್ಳದೆ ನಿರ್ವಾಹವಿಲ್ಲದಾಗುವುದು. ಈಗಣ ವಿದ್ಯಮಾನಗಳನ್ನು ಕಂಡಲ್ಲಿ ಬರುವ ಎಪ್ರಿಲ್ ತಿಂಗಳೊಳಗೆ ಹಿಂದೂ ದೇಶದ ಬಿಕ್ಕಟ್ಟು ಯಾವುದಾದರೊಂದು ರೀತಿಯಲ್ಲಿ ಪರಿಹಾರವಾಗಬಹುದೆಂದು ತೋರುತ್ತದೆ.

ಮಹಿಳಾ ಸಾಹಿತ್ಯ!

ಕನ್ನಡ ಸುದಿವಾರ್ತೆಗೊಂದು

ಕನ್ನಡಗಿತ್ತಿಯ ಗಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಂಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ ಬೆಲೆ ೦-೩

ಬರೆದವರು –

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವರ್ಧಕ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ: 'ಗ್ರಂಥ ಶೈಲಿ ಗಂಭೀರವಾಗಿಯೂ ಹೃದಯಂಗಮವಾಗಿಯೂ ಇದೆ ಪ್ರತಿಪಾದಿತವಾದ ವಿಷಯವು ಉಪಯೋಗಕರವಾಗಿಯೂ ಮನೋರಂಜಕವಾಗಿಯೂ ಇದೆ ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ'

ಪ್ರತಿಗಳು ಸಿಗುವ ಸ್ಥಳ

Navabharat Book Depot, UDIPI-

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (೫ ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ

ರೂ 1 8 0 ಕಳುಹಿಸಿದಲ್ಲಿ ಆರು ಪುಸ್ತಕಗಳನ್ನು ಕಳಿಸಲಾಗುವುದು, (ಅಂಚೆವೆಚ್ಚ ಫಕ್ಕತ್)

ವ್ಯಾಪಾರಿಗಳಿಗೆ ಧಾರಾಳ ಕಮೀಶನ್

ಪ್ರತಿಗಳಿಗೆ ಬರೆಯಿರಿ –

ಮೆನೇಜರ್,

ನವಭಾರತ ಪುಸ್ತಕ ಭಂಡಾರ

ಉಡುಪಿ

NO WAR SCARE NO RISE IN PRICE

X'Mas Grand Reduction Sale.

Strong & Durable Accurate Time Keepers

All Swiss Made GUARANTEED Lever WATCHES.



No 416 Chromium Case Rs 5—10
No 417 Golden Case Rs 6— 6
No 117 R Rollcdgold 10yrs. Jewelled Mov Rs 12—8



ROUND OR CUSHION
No 401 Chromium Case Rs 3—12
No 402 Golden Case Rs. 4— 8



No 424 Chromium Case Rs. 7—8
No. 425 Golden Case Rs. 8—4
No 425 R Rolledgold 10yrs 13—8



No 435 Chromium Cas. Rs 12—0
No 436 Rolledgold 10yrs. Rs 16—8

As 9/ Extra for Postage
For further particulars send for our new catalogue
(Correspondance in English)

BAPALAL & CO.
101 Abdul Rehman Street,
BOMBAY, 3.

LADIES MINIATURES

Geneva Movement.
No 460 Chromium Case Rs 10—8
No 461 Golden Case Rs 12—0
No 162 Rolledgold 10yrs Rs 15—0

ಯಾವುದಾದರೊಂದು ಪ್ರದರ್ಶನದ ಸಾರ್ಥಕ್ಯವನ್ನು ಅಳೆಯುವುದು ಅದರ ಕಾರ್ಯನಿರ್ವಾಹಕ ಸಮಿತಿಯ ಹೆಸರ ಮಾಲೆಯಿಂದಲ್ಲ. ಅದರ ಪ್ರಾರಂಭೋತ್ಸವದ ಅಗ್ರಾಸನವನ್ನು ವಹಿಸಿದ ವ್ಯಕ್ತಿಯ ದೊಡ್ಡ ಹೆಸರಿಂದಲೂ ಅಲ್ಲ. ಪ್ರದರ್ಶನದ ಯಶಸ್ಸು ಇರುವುದು ಅಲ್ಲಿ ಪ್ರದರ್ಶಿತವಾದ ಉತ್ಕೃಷ್ಟ ವಸ್ತುಗಳ ಬಾಹುಳ್ಯದಲ್ಲಿ, ಸಂದರ್ಶಕ ಸಂಖ್ಯೆಯಲ್ಲಿ, ಸುವ್ಯವಸ್ಥೆಯಲ್ಲಿ. ಈ ಮಾನದಿಂದ ಅಳೆದು ನೋಡಿದರೆ ಶಿಕ್ಷಣ ಪ್ರದರ್ಶನವು ಜಯಶೀಲವಾಗಿ ಫಲಕಾರಿಯಾಗಿ ಪರಿಣಮಿಸಿತೆನ್ನಲು ತುಂಬ ಆನಂದವಿದೆ.

ಜಿಲ್ಲೆಯ ಶಾಲೆಗಳ ಉತ್ಸಾಹ ಪ್ರದರ್ಶನ ವಸ್ತುಗಳ ರಾಶಿ

ನೂರಾರು ಶಾಲೆಗಳ ಮಕ್ಕಳೂ ಉಪಾಧ್ಯಾಯರೂ ವಿಶೇಷ ಪರಿಶ್ರಮ ವಹಿಸಿ ಶೈಕ್ಷಣಿಕ ಮಹತ್ವವಿರುವ ರಾಶಿರಾಶಿ ವಸ್ತುಗಳನ್ನು ತಯಾರಿಸಿ ಕಳುಹಿಸಿರುವರು. ಅವುಗಳಲ್ಲಿ ಸ್ವಯಂಕರ್ತೃತ್ವಶಕ್ತಿ, ಕಲಾಕೌಶಲ್ಯ, ವೃತ್ತಿಚಾತುರ್ಯ, ಕಸಬು ಕೈಗಾರಿಕೆಗಳ ಜ್ಞಾನ ಮುಂತಾದುವನ್ನು ತೋರುವವು ನೂರುಗಟ್ಟಲೆಯಲ್ಲಿದ್ದುವು. ಇಂತಹವುಗಳಲ್ಲಿ ಉತ್ಕೃಷ್ಟವಾದವುಗಳನ್ನು ಪರಿಶೀಲಿಸಿ ಅವುಗಳಿಗಿತ್ತ ಪ್ರಶಸ್ತಿ ಪತ್ರಗಳೇ ಸುಮಾರು ಮೂರುನೂರೆಂಬುದರ ಮೇಲಿಂದಲೇ ಒಟ್ಟು ಪ್ರದರ್ಶಿತವಾದ ವಸ್ತುಗಳ ಸಂಖ್ಯೆಯೆಷ್ಟಿರಬಹುದೆಂಬುದನ್ನು ಸುಲಭವಾಗಿ ಊಹಿಸಬಹುದು.

ಸಾವಿರಾರು ಸಂದರ್ಶಕರು ನೋಡಿ ಕಲಿತುಹೋಗಿರುವರು.

ವಸ್ತುಪ್ರದರ್ಶನ ಮಂದಿರವು ಪೂರ್ವಾಹ್ಣ ಅಪರಾಹ್ಣವೆಂದು ದಿನಾಲೂ ೫ ತಾಸು ತೆರೆದಿಡಲ್ಪಟ್ಟಿತ್ತು. ಸಂದರ್ಶಕ ವಾಹಿನಿಯು ರಭಸದಿಂದ ಹರಿಯುತ್ತಲೇ ಇತ್ತು. ಆದರೂ ಪ್ರೇಕ್ಷಕ ವರ್ಗಕ್ಕೆಲ್ಲ ಅವಕಾಶ ದೊರೆಯಲಿಲ್ಲವೆಂದು ಕೊನೆಯ ದಿನ ಬೆಳಗ್ಗೆ ೮ ಘಂಟೆಯಿಂದ ಸಾಯಂಕಾಲ ೫ ಘಂಟೆಯ ತನಕ ನಡುವೆ ವಿರಾಮವಿಲ್ಲದೆ ಒಂದೇ ಸವನೆ ೯ ತಾಸೂ ಪ್ರದರ್ಶನ ಮಂದಿರವು ತೆರೆದಿಡಲ್ಪಟ್ಟು ಗುಂಪು ಕೂಡಿ ಬರುವ ಸಂದರ್ಶಕರಿಗೆ ಅಸ್ಪದ ಕೊಡಬೇಕಾಗಿ ಬಂತೆಂದ ಮೇಲೆ ಪ್ರದರ್ಶನವು ಅದೆಷ್ಟು ಜನಪ್ರೀತವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಹೈಸ್ಕೂಲಿನ ವಿದ್ಯಾರ್ಥಿ ವಿದ್ಯಾರ್ಥಿನಿಗಳನ್ನು ವಸ್ತುಗಳ ಬಳಿಯಲ್ಲಿ ನಿಲ್ಲಿಸಿ ಅವುಗಳ ವಿವರ ಪರಿಚಯಗಳನ್ನು ಪ್ರೇಕ್ಷಕರಿಗೆ ಮಾಡಿಕೊಡುತ್ತ ಪ್ರವೇಶ ಸಂಚಾರ ನಿಷ್ಕ್ರಮಣಗಳಲ್ಲೆಲ್ಲ ಯಾವ ತರದ ಗಲಭೆಗೌಜಿಗಳಿಲ್ಲದಂತೆ ಸುವ್ಯವಸ್ಥೆ ಸೂತ್ರಚಾಲನೆಯನ್ನು ವಸ್ತುಪ್ರದರ್ಶನ ಶಾಖೆಯ ಕಾರ್ಯದರ್ಶಿ ಶ್ರೀ ಯು. ವೆಂಕಟರಾಯರೂ ಸ್ಕೌಟ್ ಮಾಸ್ಟರ್ ಲಕ್ಷ್ಮೀನಿಧಿರಾಯರೂ ದಕ್ಷತೆಯಿಂದ ನಿರ್ವಹಿಸಿರುವುದು ಅಭಿನಂದನೀಯ.

ಜಿಲ್ಲಾ ವಿದ್ಯಾಧಿಕಾರಿಗಳ ಸಮರ್ಥ ನಿರ್ದೇಶಕತ್ವ ಮತ್ತು ಮಥಿತ ಭಾಷಣ

ಹಲವು ಶಿಕ್ಷಣ ಪ್ರದರ್ಶನಗಳನ್ನು ಯಶಸ್ವಿಯಾಗಿ ನಡೆಯಿಸಿದ ಡಿ. ಇ. ಓ.ಗಳಾದ ಶ್ರೀ. ಯು. ಕಣ್ಣಪ್ಪ, ಎಮ್. ಎ. ಎಲ್. ಟಿ., ಇವರುಗಳು ಪ್ರದರ್ಶನ ವಸ್ತುಗಳನ್ನಿಡುವ ಸುವ್ಯವಸ್ಥೆಯ ನಿರ್ದೇಶಕತ್ವವನ್ನು ವಹಿಸಿಕೊಂಡು ಸಾಮಾನ್ಯ ಸ್ವಯಂಸೇವಕರಂತೆ ಶ್ರಮಿಸಿ ಪ್ರದರ್ಶನದ ಚೆಲುವೇರಿಸಿರುವರು. ಉಡುಪಿ ರೇಂಜಿನ ಡೆಪ್ಯುಟಿ ಉಗ್ರಾಣಕಾರರವರೂ ಅತ್ಯುತ್ಸಾಹದ

ದಕ್ಷಿಣ ಕನ್ನಡಜಿಲ್ಲಾ ವಿದ್ಯಾಶಿಕ್ಷಣ ಪ್ರದರ್ಶನ.

(ಜನವರಿ ತಾ ೧೪ರಿಂದ ೧೮ರ ವರೆಗೆ ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ)

(ಬರೆದು ಬಂದುದು)

ಭಾಗವಹಿಸಿ ಹೈಸ್ಕೂಲಿನ ಉಪಾಧ್ಯಾಯ ವೃಂದ ಹಾಗೂ ವಾಲಂಟೀಯರ್ ವಿದ್ಯಾರ್ಥಿ ತಂಡದೊಡನೆ ಕೈಗೆಕೈಗೊಟ್ಟು ದುಡಿದುದರಿಂದ ಒಂದೇ ದಿನದೊಳಗೆ ಪ್ರದರ್ಶನ ವಸ್ತುಗಳು ವರ್ಗೀಕೃತವಾಗಿ ಪ್ರೇಕ್ಷಣೀಯವಾದ ರೀತಿಯಲ್ಲಿ ಇಡಲ್ಪಟ್ಟಿದ್ದುವು. ಶೈಕ್ಷಣಿಕ ವಿಚಾರದಲ್ಲಿ ತನ್ನ ಜೀವಿತವನ್ನು ವಿನಿಯೋಗಿಸಿ ಅದರಲ್ಲಿ ನುರಿತ ನವಿಕ ಡಿ. ಇ. ಓ. ಕಣ್ಣಪ್ಪನವರುಗಳ ಪ್ರದರ್ಶನ ಪ್ರಾರಂಭೋತ್ಸವದ ಭಾಷಣವು ಶಿಕ್ಷಣ ಶರಧಿ ಮಥನದಿಂದ ಉದ್ಭವಿಸಿದ ಅಮೃತವಾಣಿಯಂತಿತ್ತು. ಅನುಭವ ಸಾಗರದ ತಳಕ್ಕಿಳಿದು ಎತ್ತಿ ತಂದಿತ್ತ ಅಣಿಮುತ್ತುಗಳೇ ಅವರ ಆ ಮಾತುಗಳು.

ಕ್ರಿಶ್ಚನ್ ಹೈಸ್ಕೂಲಿನಲ್ಲಿ ರಿಫ್ರೆಶರ್ ಕೋರ್ಸ್

ಪ್ರದರ್ಶನದ ಜತೆ ಕಾರ್ಯದರ್ಶಿಯರಾದ ಕ್ರಿಶ್ಚನ್ ಹೈಸ್ಕೂಲಿನ ಹೆಡ್‌ಮಾಸ್ಟರ್ ಕೌಂಡಿನ್ಯರವರುಗಳೂ ಸೀನಿಯರ್ ಡೆಪ್ಯುಟಿ ಉಗ್ರಾಣಕಾರರವರೂ ಡಿ. ಇ. ಓ ಗಳವರ ನಿರ್ದೇಶಕತ್ವದಲ್ಲಿ ಉತ್ಸಾಹಪರ ಭಾಗವಹಿಸಿ ಈ ಶಿಕ್ಷಣ ಪುನರ್ವಿಚಾರ ಭಾಷಣಗಳ ಏರ್ಪಾಡನ್ನು ಸಸೂತ್ರವಾಗಿ ನಡೆಯಿಸಿದರು. ವಿವಿಧ ಶಿಕ್ಷಣ ವಿಷಯಗಳ ಕುರಿತು ಸುಮಾರು ೧೬ ಭಾಷಣಗಳು ನಡೆದುವು. ಐನೂರಕ್ಕೆ ಮಿಕ್ಕಿ ಅಧ್ಯಾಪಕರು ಶ್ರೋತೃಗಳಾಗಿದ್ದರು.

ವ್ಯಾಯಾಮ ಪ್ರದರ್ಶನ ಮತ್ತು ಪಂದ್ಯಾಟ.

ಬೋರ್ಡ್ ಹೈಸ್ಕೂಲಿನ ವಠಾರದಲ್ಲಿ ದಿನಾಲೂ ಬೆಳಿಗ್ಗೆ ಪಂದ್ಯಾಟ, ಸಾಯಂಕಾಲ ವ್ಯಾಯಾಮ ಪ್ರದರ್ಶನಗಳು ಪ್ರೇಕ್ಷಕರ ಕಣ್ಣು ಹಬ್ಬವಾಗಿದ್ದುವು. ಅಲ್ಲಿಯ ವ್ಯಾಯಾಮ ಶಿಕ್ಷಕರಾದ ಶ್ರೀ. ಬಿ ಎಮ್. ಬಾಳಿಗರ ನೇತೃತ್ವದಲ್ಲಿ ಅವರ ವಿದ್ಯಾರ್ಥಿಗಳೂ ಸುತ್ತುಮುತ್ತಲಿನ ಸುಮಾರು ಹನ್ನೆರಡು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳೂ ಸೇರಿಕೊಂಡು ಸಾಮೂಹಿಕವಾಗಿ ತೋರಿದ ವ್ಯಾಯಾಮಗಳ ಶಿಸ್ತು ಆಟಗಳ ವಿವಿಧತೆ ನೂತನತೆ ಮನಮೋಹಕತೆ ಇವು ಪ್ರೇಕ್ಷಕರನ್ನು ಪರಮಾಶ್ಚರ್ಯಗೊಳಿಸಿತು.

ಕ್ರಿಶ್ಚನ್ ಹೈಸ್ಕೂಲ್, ಮಂಗಳೂರ ಬಾಲಮಾರುತಿ ವ್ಯಾಯಾಮ ಮಂಡಲ ... ಉಡುಪಿ ಇವರ ಪ್ರದರ್ಶನಗಳೂ ಸೇರಿ ಬಂದುದರಿಂದ ಕಾರ್ಯಕ್ರಮವು ಮತ್ತಷ್ಟು ಉಜ್ವಲವಾಗಿ ಕಂಗೊಳಿಸಿತು.

ವಿವಿಧ ವಿನೋದ ಗೋಷ್ಠಿ

ಬೋರ್ಡ್ ಹೈಸ್ಕೂಲಿನ ವಠಾರದಲ್ಲಿ ನಾಲ್ಕಾರಾಗಿ ಏರ್ಪಡಿಸಿದ್ದ ನಾಟಕ ಗೃಹದಲ್ಲಿ ದಿನಾಲೂ ಸಾಯಂಕಾಲ ಆರೂವರೆ ಘಂಟೆಗೆ ತುಸು ಮೀರದೆ ಪರದೆ ಎತ್ತಿತೆಂದರೆ ೮ ಬಳಿಕ ಸಿನೆಮಾ ರೀಲ್ ಬಿಡಿಸಿದಂತೆ ರಂಗಭೂಮಿಯ ಮೇಲೆ ವಿರಾಮವಿಲ್ಲದೆ ವಿನೋದ ಪ್ರವೇಶಗಳೋ ನಗುಬರಿಸುವ ಪ್ರಹಸನಗಳೋ ವಿಚಾರದ್ಯೋತಕ ದೃಶ್ಯಗಳೋ ಸಾಮಾಜಿಕ ಜೀವನದ ಮಾರ್ಮಿಕ ನೋಟಗಳೋ ಗೊಂಬೆಗಳ ಅತ್ಯಾಶ್ಚರ್ಯಕರ ನಗೆಯಾಟಗಳೋ ಬರುತ್ತಲೇ ಇದ್ದುವು. ಐನೂರು ಪ್ರೇಕ್ಷಕರಿಗೆ ಸಾಕಾಗುವಷ್ಟು ಸ್ಥಳಾವಕಾಶವಿರುವ ನಾಟಕ ಗೃಹವು ಕಿಕ್ಕಿರಿದು ತುಂಬಿಯೂ ಸುತ್ತಲೂ ಹೊರಗಿಂದ ನೂರಾರು ಜನರು ನೋಡಲು ಅಸ್ಪದವಿದ್ದು ದಿನಾಲೂ ಎಷ್ಟೋ ಜನರು ಸ್ಥಳಾಭಾವದಿಂದ ಹಿಂತೆರಳಬೇಕಾಗಿತ್ತೆಂದ ಬಳಿಕ ಈ ವಿನೋದ ಗೋಷ್ಠಿ ಅದೆಷ್ಟು ಚಿತ್ತಾಕರ್ಷಕವಾಗಿತ್ತೆಂದು ಹೇಳಬೇಕಾಗಿಲ್ಲ. ಗಿಳಿಯೂರು, ಕಿದಿಯೂರು, ಆದಿಉಡುಪಿ, ಕಡಿಯಾಳಿ, ಮೋಡರ್ನ್ ಟ್ರೈನಿಂಗ್ ಸ್ಕೂಲ್ ಮುಂತಾದ ಹಾಯರ್ ಎಲಿಮೆಂಟರಿ ಶಾಲೆಗಳೂ ಮುನ್ಸಿಪಲ್ ಶಾಲೆಗಳೂ, ಶಾರದಾ ಸಂಗೀತಕಲಾ ಶಾಲೆ ಈ ವಿನೋದ ಗೋಷ್ಠಿಯಲ್ಲಿ ಪ್ರಶಂಸನೀಯವಾದ ಭಾಗವಹಿಸಿದ್ದುವು. ಇವೆಲ್ಲ ತಂಡಗಳೊಂದಿಗೆ ತಮ್ಮ ಶಾಲೆಯುದನ್ನೂ ಕಟ್ಟಿಕೊಂಡು ಆ ಚಿಕ್ಕ ರಂಗಭೂಮಿಯಲ್ಲಿ ಗಲಭೆ ಗಲಾಟೆ ವಿರಾಮಗಳಿಲ್ಲದೆ ಚಿತ್ತಾಕರ್ಷಕವಾದ ಪ್ರವೇಶಗಳೇ ಬರುವಂತೆ ಕಾರ್ಯಕ್ರಮದ ಪೂರ್ವ ವ್ಯವಸ್ಥೆಯನ್ನೂ ರಂಗಭೂಮಿಯ ನಿರ್ದೇಶಕತ್ವವನ್ನೂ ಶ್ರೀ ಕೊರಡ್ಕಲ್ಲರು ದಕ್ಷತೆಯಿಂದ ನಿರ್ವಹಿಸಿರುವರು.

ಶ್ರೀ. ರೋಶ್ ಫೆರ್ನಾಂಡಿಸರ ದಕ್ಷತೆಯ ಸಾರ್ಥಕತ್ವ

ಹೀಗೆ ಬೋರ್ಡ್ ಹೈಸ್ಕೂಲಿನಲ್ಲಿ ಅನುದಿನ ಬೆಳಗ್ಗೆ ೬ ಘಂಟೆಯಿಂದ ಸಾಯಂಕಾಲ ೯ ಘಂಟೆಯ ತನಕ ಎಡೆ ಬಿಡದ ಏನಾದರೊಂದು ಪ್ರೇಕ್ಷಣೀಯ ಚಿತ್ತಾಕರ್ಷಕ ಕಾರ್ಯಕ್ರಮವು ನಡೆಯುತ್ತಲೇ ಇತ್ತು. ಇವೆಲ್ಲವುಗಳ ಏಕ ಮಾತ್ರ ಸೂತ್ರಚಾಲಕರೆಂದರೆ ಅಲ್ಲಿ ಯಹೆಡ್ ಮಾಸ್ತರು ರೋಶ್ ಫೆರ್ನಾಂಡೀಸ್, ಬಿ ಎ, ಎಲ್. ಟಿ ಇವರು ಸಕಲ ವ್ಯವಸ್ಥೆ ಕಾರ್ಯಕ್ರಮಗಳ ಮೇಲೆ ದೃಷ್ಟಿಯಿಟ್ಟುಕೊಂಡು ಪರಿಶೀಲಿಸುತ್ತ ತನ್ನ ದಕ್ಷತೆಯ ಕಾರ್ಯದಕ್ಷತ್ವದಿಂದ ಅವಿಶ್ರಾಂತವಾಗಿ ಪರಿಶ್ರಮಿಸಿದ ವ್ಯಕ್ತಿ. ಇವರೆಂದರೆ ಸಹಾಯಕ ಉಪಾಧ್ಯಾಯ ವರ್ಗಕ್ಕೆ ಪ್ರಾಣ. ವಿದ್ಯಾರ್ಥಿ ವೃಂದಕ್ಕೆ ಜೀವ. ಅಂತಹ ಗುಣ ವಿಶೇಷವಿದ್ದವರೂ ಅವರ ಶಾಲೆಯ ಊ ಶಿಕ್ಷಣ ಪ್ರದರ್ಶನಕ್ಕೆ ದೊರಕಿದುದು ಸುಯೋಗವೇ.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕ ಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ವೌಲ್ಯವಾನ್ ದ್ರವ್ಯ ಯೂ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಆಮ್ಲವ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವದು, ಹಾಗೂ ಆಲಸ್ಯ ಯಾ ವಾಯುಗಳಂಟ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5 0, 500, ೨ 0 0, 1000, 9-0 0.

5ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ, (ಗುಟಿ)ಗಳನ್ನು ಕಳುಹಿಸುತ್ತವೆ.

ಸ್ವದೇಶೀ ಔಷಧಿ ಭಂಡಾರ,

(ರಿಜಿಸ್ಟರ್ಡ್) ಕುಂಜಾಲು.

ಪೋಸ್ಟ್—ಬ್ರಹ್ಮಾವರ, ದ. ಕ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡೆಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ ೩. ವಿ. ಪಿ ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS,
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೨೫-೧-'೪೦

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಕಳೆದ ತಾ. 19, 20 ಮತ್ತು 21ರಲ್ಲಿ ವಾರ್ಧದಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿ ಪ್ರಾಮುಖ್ಯವಾಗಿ ಚರ್ಚಿಸಲ್ಪಟ್ಟ ವಿಷಯವೆಂದರೆ ಬೊಂಬಾಯಿಯ ವೈಸರಾಯರ ಭಾಷಣ. ಮಹಾತ್ಮ ಗಾಂಧಿಯವರು ಈ ಚರ್ಚೆಯಲ್ಲಿ ಮುಖ್ಯ ಭಾಗವಹಿಸಿದ್ದರು. ವರ್ಕಿಂಗ್ ಕಮಿಟಿಯವರು ಈ ಕುರಿತು ನಿರ್ಣಯವನ್ನೇನೂ ಮಾಡಿರುವುದಿಲ್ಲ. ವೆಸ್ಟ್ ಮಿನಿಸ್ಟರ್ ರೀತಿಯ ಅಂದರೆ, ದಕ್ಷಿಣ ಆಫ್ರಿಕ, ಕೆನಡಾ ಮೊದಲಾದ ಬ್ರಿಟಿಷ್ ಸಾಮಂತ ರಾಜ್ಯಗಳಂತಹ ಸ್ವಾತಂತ್ರ್ಯವನ್ನು ಹಿಂದೂದೇಶವು ಆದಷ್ಟು ಬೇಗನೆ ಪಡೆಯುವುದೆಂದು ವೈಸರಾಯರು ಬೊಂಬಾಯಿಯಲ್ಲಿ ಮಾಡಿದ ಭಾಷಣವು, ಇಷ್ಟರವರೆಗೆ ಬ್ರಿಟಿಷ್ ಸರಕಾರದ ಪರವಾಗಿ ಮಾಡಲ್ಪಟ್ಟಿರುವ ಹೇಳಿಕೆಗಳಿಗಿಂತ ಮುಂದುವರಿದಿದ್ದು ಸಂಧಾನದ ಆಶೋದಯವನ್ನುಂಟುಮಾಡಿರುವುದೆಂದೇ ವರ್ಕಿಂಗ್ ಕಮಿಟಿ ಮೆಂಬರರ ಒಮ್ಮತದ ಅಭಿಪ್ರಾಯವಾಗಿದ್ದಿತು. ಇನ್ನೂ ಸ್ಪಷ್ಟೀಕರಿಸಲ್ಪಡಬೇಕಾದ ಹಲವು ವಿಷಯಗಳಿರುವುದರಿಂದ ಮಹಾತ್ಮ ಗಾಂಧಿಯವರು ವೈಸರಾಯರನ್ನು ಕಂಡು ಮಾತಾಡಬೇಕೆಂದು ವರ್ಕಿಂಗ್ ಕಮಿಟಿಯ ಅಭಿಪ್ರಾಯವಿರುವುದು. ಆ ಪ್ರಕಾರ ಗಾಂಧಿಯವರು ಇಷ್ಟರಲ್ಲೇ ವೈಸರಾಯರಿಗೆ ಬರೆದುಕೊಂಡಿರುವರು. ಫೆಬ್ರವರಿ ಮೊದಲನೇ ವಾರದಲ್ಲಿ ಗಾಂಧಿಯವರು ಡಿಲ್ಲಿಗೆ ಹೋಗಿ ವೈಸರಾಯರೊಡನೆ ಮಾತಾಡಬಹುದು. ಈ ಮಾತುಕತೆಯು ಜಯಶೀಲವಾದರೆ ಬರುವ ಎಪ್ರಿಲ್ ತಿಂಗಳೊಳಗೆ ಪುನಃ ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಬರಬಹುದೆಂದು ನಂಬಲಾಗಿದೆ.

ಮಹಾತ್ಮಗಾಂಧಿಯವರು ಸ್ಪಷ್ಟವಾಗಿ ಹೇಳಿರುವಂತೆ, ಬ್ರಿಟಿಷ್ ಸರಕಾರದೊಡನೆ ಹೋರಾಡಲು ಹಾತೊರೆಯುವುದರಿಂದೇನೂ ಫಲವಿಲ್ಲ. ಪ್ರಕೃತದ ಪರಿಸ್ಥಿತಿಯಲ್ಲಿ ದೇಶವು ಹೋರಾಟಕ್ಕೆ ಸಿದ್ಧವಿರುವುದೆಂದು ನಾವು ಎಣಿಸುವುದಿಲ್ಲ. ಮುಸ್ಲಿಮ್ ಲೀಗ್, ಜಸ್ಟಿಸ್ ಪಕ್ಷಗಳವರೇ ಮೊದಲಾದವರು ಕಾಂಗ್ರೆಸಿನ ಮೇಲೆ ಪ್ರತೀಕಾರ ಮಾಡುವ ಸಂದರ್ಭವನ್ನೇ ಕಾಯುತ್ತಿರುವರು. ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದುದರಿಂದಾಗಿ ಎಲ್ಲೆಲ್ಲಿಯೂ ಅದಕ್ಕೆ ವಿರೋಧವು ಹೆಚ್ಚಿರುವುದು, ಕಾಂಗ್ರೆಸಿನೊಳಗೇನೇ ಅಂತಃಕಲಹವು ಬಲವಾಗಿರುವುದು. ಅಧಿಕಾರ ಸ್ಪರ್ಧೆಯಿಂದಾಗಿ ಉಂಟಾದ ವಿಷಮಪರಿಣಾಮದಿಂದ ಹಲವು ಕಡೆಗಳಲ್ಲಿ ಕಾಂಗ್ರೆಸು ಕೇವಲ ಸ್ವಾರ್ಥಿಗಳ ಹಸ್ತಕವಾಗಿ ನಿರ್ಜೀವವಾಗಿರುವುದು. ಕರ್ನಾಟಕದ ರಾಜಕೀಯ ಪರಿಸ್ಥಿತಿಯನ್ನು ಇದಕ್ಕೊಂದು ಉದಾಹರಣೆಯಾಗಿ ಎತ್ತಿ ಹೇಳಬಹುದು. ಆದುದರಿಂದ ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಹೋರಾಟಮಾಡಬೇಕಲ್ಲದೆ ಸಮರಕ್ಕಾಗಿ ಚಡಪಡಿಸುತ್ತಿರುವುದು ಅವಿವೇಕವಾಗಿದೆ. ಮಹಾತ್ಮಾ ಗಾಂಧಿಯವರು ಅನುಸರಿಸುತ್ತಿರುವ ಧೋರಣೆಯು ಯುಕ್ತವಾದುದೆಂಬುದರಲ್ಲಿ ಸಂದೇಹವಿಲ್ಲ.

ಸಿಂಧ್ ಪ್ರಾಂತದ ಪ್ರಶ್ನೆಯನ್ನು ವರ್ಕಿಂಗ್ ಕಮಿಟಿಯವರು ವಿಚಾರಿಸಿ, ಅಲ್ಲಾಬಕ್ಷ್ ಮಂತ್ರಿಮಂಡಲಕ್ಕೆ ಅಲ್ಲಿಯ ಕಾಂಗ್ರೆಸ್ ಪಕ್ಷೀಯರು ಬೆಂಬಲವೀಯಬೇಕೆಂದು ಅಭಿಪ್ರಾಯಕ್ಕೆ ಬಂದಿರುವುದು ಸಂತೋಷಕರವಿದೆ. ಇಲ್ಲವಾದರೆ ಅಲ್ಲಾಬಕ್ಷರು ಮುಸ್ಲಿಮ್ ಲೀಗಿನ ಬಲೆಗೆ ಬಲಿಯುವ ಸಂಭವವಿರುವುದು. ಇದಕ್ಕೆ ಅವರು ಇತ್ತಲಾಗಿ ಲಾಹೋರಿಗೆ ಹೋಗಿ ಸರ್ ಸಿಕಂದರ್ ಹಾಯತ್‌ಖಾನರೊಡನೆ ನಡಿಸಿದ ಮಾತುಕತೆಯೇ ಸಾಕ್ಷಿ. ಅಸ್ಸಾಮಿನ ಉದಾಹರಣೆಯಿಂದ ಕಾಂಗ್ರೆಸಿನವರು ಪಾಠ ಕಲಿತು, ಕಾಂಗ್ರೆಸಿನ ಬದ್ಧವಿರೋಧಿಗಳು ಅಧಿಕಾರಕ್ಕೆ ಬರುವುದಕ್ಕಿಂತ, ಕಾಂಗ್ರೆಸಿನ ಕುರಿತು ತುಂಬಾ ಸಹಾನುಭೂತಿಯುಳ್ಳವರು ಮಂತ್ರಿಗಳಾಗುವುದನ್ನು ಸ್ವಾಗತೀಕರಿಸಬೇಕು. ಅಸ್ಸಾಮಿನ ಶ್ರೀ ಸಾದುಲ್ಲ ಮಂತ್ರಿಮಂಡಲಕ್ಕೆ ಸಾಕಷ್ಟು ಬೆಂಬಲ ದೊರೆತಂತಿದೆ. ಉತ್ಕಲದ ಕಲಹದ ಸಂಬಂಧವಾಗಿ ವರ್ಕಿಂಗ್ ಕಮಿಟಿಯವರು ಕಾಂಗ್ರೆಸ್ ಪ್ರೆಸಿಡೆಂಟರು ವಹಿಸಿದ ಧೋರಣೆಯನ್ನು ಸಮರ್ಥಿಸಿರುವರು. ಅಲ್ಲಿ ಈ ಸಲದ ಚುನಾವಣೆಯ ಪರಿಣಾಮವೇನಾಗುವುದೆಂದು ನೋಡಬೇಕು. ಬಂಗಾಳದ ಪ್ರಶ್ನೆಯ ಕುರಿತು ಶ್ರೀ ಶರಚ್ಚಂದ್ರಬೋಸರೇ ಮೊದಲಾದವರ ಅಭಿಪ್ರಾಯವನ್ನು ವರ್ಕಿಂಗ್ ಕಮಿಟಿಯವರು ಕೇಳಿರುವರು. ಶ್ರೀ ಶರಚ್ಚಂದ್ರರು ಮಹಾತ್ಮ ಗಾಂಧಿಯವರೊಡನೆ ಮಾತಾಡಿರುವರು. ಈ ಕುರಿತು ಕಾಂಗ್ರೆಸ್ ಪ್ರೆಸಿಡೆಂಟರು ಹೇಳಿಕೆಯೊಂದನ್ನು ಹೊರಡಿಸಲಿರುವರು. ಯಾವ ರೀತಿಯಲ್ಲಾದರೂ ಈ ಕಲಹವು ರಾಜಿಯಿಂದ ಇತ್ಯರ್ಥವಾಗದಿದ್ದರೆ ಬಂಗಾಳದ ಪರಿಸ್ಥಿತಿಯು ಮತ್ತಷ್ಟು ವಿಷಮವಾಗದಿರಲಾರದು.

ರಾಮಗಢ ಕಾಂಗ್ರೆಸ್ ಅಧಿವೇಶನವು ಮಾರ್ಚ್ ತಾ 19, 20 ಮತ್ತು 21ರಲ್ಲಿ ಜರಗಬೇಕೆಂದು ವರ್ಕಿಂಗ್ ಕಮಿಟಿಯವರು ನಿರ್ಧರಿಸಿರುವರು. ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು ಫೆಬ್ರವರಿ ತಾ 4ಕ್ಕೆ ನಡೆಯಲಿರುವುದು. ಮೌಲಾನ ಆಜಾದರು ಈ ಸಲ ಪ್ರತಿಸ್ಪರ್ಧಿಯಿಲ್ಲದೆ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಡುವ ಸಂಭವವಿದೆ. ವರ್ಕಿಂಗ್ ಕಮಿಟಿಯವರು ಅವರನ್ನು ಕೇಳಿಕೊಂಡಿರುವರೆಂದು ತಿಳಿದು ಬರುತ್ತದೆ. ಎಡಪಕ್ಷಗಳ ಪರವಾಗಿ ಯಾರಾದರೂ ಉಮೇದ್ವಾರರಾಗಿ ನಿಲ್ಲುವ ಸಂಭವವಿರುವುದಿಲ್ಲ.

ಜರ್ಮನ್ ಯುದ್ಧ

ಇಡೀ ಯುರೋಪಿನಲ್ಲೆಲ್ಲಾ ಅಸಾಧಾರಣ ಚಳಿಯುಂಟಾಗಿರುವುದು. ಪಶ್ಚಿಮ ರಣರಂಗದಲ್ಲಿ, ಸಣ್ಣ ಪುಟ್ಟ ವಿಮಾನ ಯುದ್ಧಗಳ ಹೊರತು ದೊಡ್ಡ ಸಮರವೇನೂ ನಡೆದಿರುವುದಿಲ್ಲ. ಜರ್ಮನಿಯ ಅರೆವಾಸಿಯಷ್ಟರ ಸಬ್‌ಮೆರೀನುಗಳು ಇಷ್ಟರಲ್ಲೇ ನಾಶವಾಗಿವೆ. ಅವುಗಳನ್ನು ಹೊಸತಾಗಿ ಕಟ್ಟುವ ಪ್ರಯತ್ನವು ಜಯಶೀಲವಾಗಿಲ್ಲೆಂದು ಮಿ. ಚರ್ಚಿಲ್ಲರು ಉದ್ಘೋಷಿಸಿರುವರು. ಜಲತೋಟೆ ಮತ್ತು ಟೋರ್ಪೆಡೋಗಳಿಂದ ಹಡಗುಗಳನ್ನು ಮುಳುಗಿಸುವ ಯುದ್ಧವು ಯಥಾಪ್ರಕಾರ ನಡೆಯುತ್ತಿರುವುದು. ಗ್ರೆನ್‌ವಿಲ್ ಎಂಬ ಬ್ರಿಟಿಷ್ ಯುದ್ಧಹಡಗವೊಂದು ಇದೇ ತಾ. 21ರಲ್ಲು ಉತ್ತರಸಮುದ್ರದಲ್ಲಿ ಮುಳುಗಿಸಲ್ಪಟ್ಟು ಸುಮಾರು 100 ಮಂದಿ ನಾವಿಕರು ಹತರಾಗಿರುವರು. ಕೆರೋನಿ, ಅಬಿದೀನಿನ್ ಮತ್ತು ಪ್ರೊಜಿಲೋಸ್ ಎಂಬ ಬ್ರಿಟಿಷ್ ಹಡಗಗಳು ಮುಳುಗಿಸಲ್ಪಟ್ಟು ಹೆಚ್ಚಿನ ಪ್ರಾಣಹಾನಿಯಾಗಿದೆ. ಇದು ಹೊರತು ತಟಸ್ಥ ರಾಷ್ಟ್ರಗಳ ಹಲವು ಹಡಗಗಳು ಮುಳುಗಿಸಲ್ಪಟ್ಟಿವೆ. ಯುರೋಪಿನ ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆ ಮತ್ತು ಶಾಂತಿಸ್ಥಾಪನವು ಹೊರತು ಈ ಯುದ್ಧದಿಂದ ಇಂಗ್ಲೆಂಡೇನೂ ಪ್ರಯೋಜನ ಪಡೆಯಲೆಳಸವುದಿಲ್ಲೆಂದು ಬ್ರಿಟಿಷ್ ವಿದೇಶಮಂತ್ರಿ ಲೋರ್ಡ್ ಹಲಿಫೇಕ್ಸರು ಸ್ಪಷ್ಟಪಡಿಸಿರುವರು. ಆಂಗ್ಲೇಯರು ಜರ್ಮನಿಯ ನಾಶಕ್ಕಾಗಿ ಹಾತೊರೆಯುತ್ತಿದ್ದಾರೆ, ಈಗ ಜರ್ಮನಿಯ ಬದ್ಧವಿರೋಧಿಯೆಂದರೆ ಬ್ರಿಟನು, ಗೋಮುಖವ್ಯಾಘ್ರರು ಆಂಗ್ಲೇಯರೆಂದು ಡಾಕ್ಟರ್ ಗೊಬ್ಬೆಲ್ಸರು ಬ್ರಿಟಿಷರ ಕುರಿತು ದ್ವೇಷದ ಕೆಂಡ ಕಾರಿರುವರು. ಮಿತ್ರ ರಾಷ್ಟ್ರಗಳ ಸಮುದ್ರ ಮುತ್ತಿಗೆಯಿಂದ ಜರ್ಮನಿಯ ಸಮುದ್ರವ್ಯಾಪಾರವೇ ನಿಂತುಹೋಗಿ ಬಹಳ ಹಾನಿಯಾಗಿದೆಯೆಂದೂ, ಜರ್ಮನಿಯಲ್ಲಿ ಆಹಾರ ಸಾಮಗ್ರಿ ಮತ್ತು ಪೆಟ್ರೋಲಿನ ಅಭಾವವು ಇಷ್ಟರಲ್ಲೇ ಉಂಟಾಗಿರುವುದೆಂದೂ ನಂಬಲಾಗಿದೆ. ಹೊಲ್ಲೆಂಡಿನ ಬಳಿಯ ಎಲ್ಲೆಯನ್ನು ಜರ್ಮನರು ಭದ್ರಪಡಿಸುತ್ತಿದ್ದಾರೆ. ಬ್ರಿಟನು 3೯೪ ಮಿಲ್ಯ ಪವನುಗಳಷ್ಟರ ಯುದ್ಧ ವಿಮಾನ ಮತ್ತು ಇತರ ಸಾಮಾನುಗಳನ್ನು ಅಮೆರಿಕದ ಯುನೈಟೆಡ್ ಸ್ಟೇಟ್ಸಿನಿಂದ ಪಡೆಯಲಿದೆ. ಬರುವ ಮಾರ್ಚ್ ಮತ್ತು ಎಪ್ರಿಲ್ ತಿಂಗಳುಗಳಲ್ಲಿ ದೊಡ್ಡ ಯುದ್ಧಗಳು ನಡೆಯುವುದು ನಿಶ್ಚಯವೆಂದು ಬ್ರಿಟಿಷ್ ಪ್ರಧಾನ ಮಂತ್ರಿಗಳ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಜರ್ಮನರೂ ಅದಕ್ಕೆ ಬೇಕಾದ ಸಿದ್ಧತೆ ಮಾಡುತ್ತಿದ್ದಾರೆ.

ಬಾಲ್ಕನ್ ರಾಷ್ಟ್ರಗಳ ಪರಿಸ್ಥಿತಿ.

ರಶ್ಯವು ತನ್ನ ಅಧಿಕಾರವನ್ನು ಬಾಲ್ಕನ್ ರಾಷ್ಟ್ರಗಳ ಕಡೆಗೂ ವ್ಯಾಪಿಸದಂತೆ ನೋಡುವ ಜವಾಬ್ದಾರಿಯನ್ನು ಇಟೆಲಿಯು ಹೊತ್ತಿರುವಂತಿದೆ. ಈ ಸಂಬಂಧವಾಗಿ ಮುಸಲೋನಿ ಮತ್ತು ಹಿಟ್ಲರರು ಉಭಯ ಸಂಕಟದಲ್ಲಿ ಬಿದ್ದಿರುವರೆಂದೂ ತಿಳಿದುಬರುತ್ತದೆ. ಬಾಲ್ಕನ್ ರಾಷ್ಟ್ರಗಳನ್ನೆಲ್ಲಾ ಒಂದುಗೂಡಿಸಿ ರಶ್ಯವು ತನ್ನ ಅಧಿಕಾರ ವ್ಯಾಪಿಸದಂತೆ ತಡೆಗಟ್ಟಬೇಕೆಂದು ಇಟೆಲಿಯು ಪ್ರಯತ್ನಿಸುತ್ತಲಿದೆ. ಫಿನ್ಲೆಂಡಿಗೆ ಕೂಡಾ ಅದು 5000 ಸ್ವಯಂಸೇವಕರನ್ನು ಕಳುಹಿಸಿದೆ. ರಶ್ಯದ ವಿರೋಧವಾಗಿ ಹೋರಾಡಲು ಫಿನ್ಲೆಂಡಿನ ಯುದ್ಧದ ಪರಿಸ್ಥಿತಿಯಿಂದ ಹಿಟ್ಲರರು ತಳಮಳಗೊಂಡು ಅದನ್ನು ಬೇಗನೆ ಕೊನೆಗೊಳಿಸಲು ಹಾತೊರೆಯುತ್ತಿದ್ದಾರೆ. ಇಟೆಲಿಯು ಹಂಗೇರಿಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ರುಮೇನಿಯ ಮತ್ತು ಯುಗೊಸ್ಲಾವಿಗಳ ವಿದೇಶ ಮಂತ್ರಿಗಳು ಇದೇ ತಾ. ೨೦ರಲ್ಲಿ ವರ್ಸೆಚ್ ಎಂಬಲ್ಲಿ ಒಟ್ಟುಕೂಡಿ ಮಾತುಕತೆ ನಡಿಸಿರುವರು. ರುಮೇನಿಯದಲ್ಲಿ ಪೆಟ್ರೋಲು ಹೇರಳವಾಗಿ ದೊರೆಯುವುದರಿಂದ ಜರ್ಮನಿಯು ಅದನ್ನೆಲ್ಲಾ ಪಡೆಯಲು ಪ್ರಯತ್ನಿಸುತ್ತಿದೆ.

ಆದರೆ ಜರ್ಮನಿಯು ಕೇಳುವ ರೀತಿಯಲ್ಲಿ ರುಮೇನಿಯವು ಅದನ್ನು ಕೊಡಲು ಸಿದ್ಧವಿರುವುದಿಲ್ಲ. ಬಲಾತ್ಕಾರದಿಂದಾದರೂ ಜರ್ಮನಿಯು ರುಮೇನಿಯದ ಪೆಟ್ರೋಲನ್ನು ಪಡೆಯುವ ನಿರ್ಧಾರಮಾಡಿರುವಂತಿದೆ. ರಶ್ಯವೂ ರುಮೇನಿಯದ ಎಲ್ಲೆಯ ಬೆಸ್ಸರೇಬಿಯ ಎಂಬ ಸ್ಥಳದ ಮೇಲೆ ಕಣ್ಣಿಟ್ಟಿದೆ. ಇಷ್ಟರಲ್ಲೇ ನಾಝಿ ಸೇನೆಯು ರುಮೇನಿಯದ ಪಶ್ಚಿಮದಲ್ಲಿಯೂ, ಸೋವಿಯೆಟ್ ಸೇನೆಯು ಪೂರ್ವದಲ್ಲಿಯೂ ಸಂಗ್ರಹಿಸಲ್ಪಡುತ್ತಿದೆಯೆಂದು ಸುದ್ದಿಯುಂಟಾಗಿದೆ. ಈ ಗಂಡಾಂತರವನ್ನು ರುಮೇನಿಯವು ಮೊದಲೇ ತಿಳಿದು, ತನ್ನ ಪಶ್ಚಿಮ ಮತ್ತು ಪೂರ್ವದ ಎಲ್ಲೆಗಳಲ್ಲಿ ಮೆಗಿನೆಟ್ ಕೋಟೆಗಳಂತೆ ಭದ್ರವಾದ ಕೋಟೆಗಳನ್ನು 1938ರಿಂದ ಕಟ್ಟಲಾರಂಭಿಸಿದೆ. ಪಶ್ಚಿಮ ರಣರಂಗದಲ್ಲಿ ಪ್ರಬಲ ಹೋರಾಟವೇನೂ ನಡೆಯದಿದ್ದರೆ ಜರ್ಮನಿ ಮತ್ತು ರಶ್ಯಗಳು ಪೂರ್ವ ಯುರೋಪಿನಲ್ಲಿ ತಮ್ಮ ಅಧಿಕಾರ ಸ್ಥಾಪಿಸುವ ಕಡೆಗೆ ದೃಷ್ಟಿಹರಿಸುವ ಸಂಭವವಿದೆ.

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.

ಬ್ರಾಂಚ್.—ರಥಬೀದಿ ಮಂಗಳೂರು.

...ನ ಧಾಳಿಯ ಭೀಕರ ಹಾವಳಿ

...ನಗಳು ಫಿನ್ಲೆಂಡಿ
...ಕಬಿಡದೆ ಧಾಳಿ
...20ರಲ್ಲು ಜಬೊ
...1 ಸೋವಿಯೆಟ್
...ದೊಡ್ಡ ವಿಮಾ
...50 ಸ್ಫೋಟಕ
...ವ ಬೋಂಬನ್ನೆ
...ಯಾಗಿರುವುದು.
...ನಿಂದ ಆಬೋ
...ನಿವಾಸನಧಾಳಿ
... ಅತಿ ಭಯಂಕ
... ಬೆಂಕಿಯೆದ್ದು
... ಸುಟ್ಟುಹೋಗಿ
...ನೂರು ಬಿಟ್ಟು
... ರಸ್ತೆಯಲ್ಲಿ
...ಣಂತೆ ಗೃಹ
...ಪಾ ಬೋಂಬು
...ವುದು. ಕಳದ
...ರಿನ ಜನರು
...ಬ ನೆಲಮಾಳಿಗೆ
...ಯ ಕಳೆಯು

...ರಲ್ಲಿ ಫಿನ್ನಿಶ್
...ಟ್ ಮತ್ತು ಬಾ
...ಟ್ ವಿಮಾನ
... ನಡಿಸಿರುವವು.
...ರು ನೋವಿಯೆ
...ನ ಮೇಲೆಲ್ಲಾ
... ಆಸ್ಪತ್ರೆಗಳ
...ತ್ತಿನ ಸೋ
...ಲಿನ ಆಭಾ
... ತಿಳಿದುಬಂದಿದೆ.
... ಬಂದರುಗಳ
...ಧಾಳಿ ನಡಿಸಿ,
...ಹು ಪರದೇಶ
...ಗಳನ್ನು ತರಿಸ
...ದ ಉದ್ದೇಶವಾ
...ಗಳಿಂದ ಹೆಚ್ಚಿನ
... ಇಟಲಿಯಿಂದ
...ಫಿನ್ಲೆಂಕೆಗೆ ಹೊ
...ಬರುತ್ತದೆ.
...ದೇಶಗಳೂ ಫಿ
...ಪ. ಅವು
...ನ ಶ್ರೀಮಂ
...ವು ಸಂಗ್ರಹಿಸಿ
... ಇನ್ನೊಂದು
...ದ್ದಾರೆ.
...ರಿಗೆ
...ತ್ತರ
...ಸ್ ವಿರೋಧಿಗ
... ಜಾತೀಯತೆ
...ವಾದ ಪಕ್ಷ
...ನ್ನನು ಅಭಿ
...ಬ್ರಾಹ್ಮಣೇತರ
... ರಾಮಸ್ವಾ
...ರ್ ಅಂಬೇ
..., ಜಿನ್ನರಿಂ
...ರ್ ಸಾವರ್ಕರ
...ಸುಕತೆ ನಡಿ

ಯುವ ಸುದ್ದಿಯುಂಟಾಗಿದೆ. ಕಾಂಗ್ರೆಸ್ ವಿರೋಧಿಗಳೆಲ್ಲರೂ ಒಂದುಗೂಡಿ ಒಂದು ಪಕ್ಷ ಸ್ಥಾಪಿಸುವುದರಲ್ಲಿ ಅರ್ಥವಿದೆಯೆಂದು ಮಹಾತ್ಮ ಗಾಂಧಿಯವರು ಹರಿಜನದಲ್ಲಿ ಲೇಖನವೊಂದು ಬರೆದಿರುವುದು ಮಾತ್ರವಲ್ಲದೆ ಅದನ್ನು ಮುಂಚಿತವಾಗಿಯೇ ಮಿ. ಜಿನ್ನರಿಗೆ ಕಳುಹಿಸಿದ್ದಾರೆ. ಇವಕ್ಕೆ ಮಿ. ಜಿನ್ನರು ದೀರ್ಘವಾದ ಉತ್ತರವಿತ್ತು, ಹಿಂದೂದೇಶವು ಅದೊಂದು ರಾಷ್ಟ್ರವಲ್ಲ; ಭೂಖಂಡ

ಹಿಂದುಗಳು ಮತ್ತು ಮುಸಲ್ಮಾನರು ಬೇರೆಬೇರೆ ಜನಾಂಗ ಸಮಾನ ಆಪತ್ತಿನಲ್ಲಿ ಮುಸ್ಲಿಮ್ ಲೀಗಿನೊಂದಿಗೆ ಇತರ ಅಲ್ಪ ಸಂಖ್ಯಾಕರು ಸೇರಿರುತ್ತಾರೆ. ಹೆಚ್ಚಿನ ಹಿಂದುಗಳ ವಿಶ್ವಾಸಕ್ಕೆ ಪಾತ್ರರಾಗಿರುವ ಗಾಂಧಿಯವರು ವಿವೇಕಪರ ಧೋರಣೆ ವಹಿಸಿದರೆ ಪ್ರಕೃತದ ದೇಶದ ಬಿಕ್ಕಟ್ಟನ್ನು ಪರಿಹರಿಸಬಹುದು. ಆದರೆ ಅವರು ವಾಸ್ತವಿಕ ಸ್ಥಿತಿಗತಿಗಳ ಗೊಡವೆಯಿಲ್ಲದ ಆದರ್ಶವಾದಿಯಾಗಿದ್ದಾರೆ. ಅವರ ಖಾದಿ, ಅಹಿಂಸೆ, ಚರ್ಕವೇ ಮೊದಲಾದುವುಗಳಿಂದ ಸ್ವರಾಜ್ಯ ದೊರೆಯಲಾರದು. ವಾಸ್ತವಿಕ ಪರಿಸ್ಥಿತಿಯ ಪರಿಜ್ಞಾನವಿರುವ ಮುತ್ಸದ್ದಿತನವು ಈಗ ಅವಶ್ಯವಿದೆಯೆಂದು ಅಭಿಪ್ರಾಯಪಟ್ಟಿರುವರು.

ಪಂಡಿತ ನೆಹರುಗಳ ಭಾಷಣ

ಇದೇ ತಾ. 21ರಲ್ಲು ನಾಗಪುರದಲ್ಲಿ ಪಂಡಿತ ನೆಹರುಗಳು ದೊಡ್ಡ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣವಿತ್ತು, ಯಾವ ಹೋರಾಟವಾದರೂ ಜಯಶೀಲವಾಗಿ ನಡೆಸಲ್ಪಡಬೇಕಾದರೆ ಶಿಸ್ತು ಮತ್ತು ಸಂಘಟನೆಯು ಆವಶ್ಯವೆಂದು ಸೂಚಿಸಿ ಕಾಂಗ್ರೆಸಿನೊಳಗೆ ಕಠಿಣ ಶಿಸ್ತು ನೆಲೆಗೊಳ್ಳುವಂತೆ ಎಲ್ಲರೂ ಪ್ರಯತ್ನಿಸಬೇಕೆಂದು ವಿನಂತಿ ಮಾಡಿಕೊಂಡಿರುವರು. ಯುದ್ಧ ಆರಂಭವಾದೊಡನೆಯೇ ಕಾಯಿದೆ ಭಂಗ ಹೂಡುತ್ತಿದ್ದರೆ ಅದರಿಂದ ಕಾಂಗ್ರೆಸಿನ ದೌರ್ಬಲ್ಯವೇ ವ್ಯಕ್ತವಾಗುತ್ತಿತ್ತು. ಕಾಂಗ್ರೆಸಿನೊಳಗೆ ಶಿಸ್ತಿಲ್ಲದೆ ಹೋರಾಟ ಹೂಡಿ ಫಲವಿಲ್ಲ. ವೈಸರಾಯರ ಬೊಂಬಾಯಿಯ ಭಾಷಣವು ಸವಿಮಾತುಗಳಿಂದ ತುಂಬಿದ್ದರೂ, ಈಗಣ ಬ್ರಿಟಿಷ್ ಮಂತ್ರಿಮಂಡಲವು, ಹಿಂದೀಯರಿಗೆ ಸ್ವರಾಜ್ಯವೀಯುವ ಮನೋವೃತ್ತಿಯಿಂದಾಗಿರುವುದಿಲ್ಲ. ಆದುದರಿಂದ ಪ್ರಕೃತದ ಬಿಕ್ಕಟ್ಟು ರಾಜಿಯಿಂದ ಪರಿಹಾರವಾಗುವ ಸಂಭವ ತೋರುವುದಿಲ್ಲ. ಹಿಂದೀ ಸ್ವರಾಜ್ಯದ ದಾರಿಯಲ್ಲಿ ಆತಂಕವಾಗಿ ಬಂದಿರುವ ಜಾತೀಯ ಪ್ರಶ್ನೆಗೆ ಧರ್ಮದ ಬಣ್ಣ ಕೊಡಲ್ಪಟ್ಟಿದ್ದರೂ ಅದು ರಾಜಕೀಯವಾದುದು. ರಾಜಕೀಯ ಅಧಿಕಾರ ಪಾಲನೆಯೇ ಅದಕ್ಕೆ ಕಾರಣ. ನಮ್ಮ ಬಲದಿಂದಲ್ಲವಾದರೂ ಇಂಗ್ಲೆಂಡಿನ ದೌರ್ಬಲ್ಯದಿಂದ ಸ್ವರಾಜ್ಯವನ್ನು ನಾವು ಪಡೆಯುವ ಸಂದರ್ಭವೀಗ ಬಂದಿದೆ. ದೇಶದ ಹೊರಗಣವರು ಕಾಂಗ್ರೆಸು ಮತ್ತು ಗಾಂಧಿಜಿಯವರ ಹೆಸರನ್ನು ಮಾತ್ರವಲ್ಲ, ಕಾಂಗ್ರೆಸ್ಸಿನಂತಹ ರಾಜಕೀಯ ಸಂಸ್ಥೆಯು ಇಡೀ ಲೋಕದಲ್ಲೇ ಇಲ್ಲ. ಮುಸ್ಲಿಮ್ ಲೀಗಿನ ಧೋರಣೆಯಿಂದ ಅದು ಸ್ವರಾಜ್ಯಕ್ಕೇನೇ ವಿರೋಧವಿರುವಂತೆ ತೋರುತ್ತದೆ. ಆದರೆ ಸ್ವರಾಜ್ಯವನ್ನು ತಡೆಗಟ್ಟಲು ಯಾರಿಗೂ ಸಾಧ್ಯವಿಲ್ಲದ ಪರಿಸ್ಥಿತಿ ಈಗ ಉಂಟಾಗಿರುವುದೆಂಬುದೇ ಪಂಡಿತರ ಭಾಷಣದ ಸಾರಾಂಶ.

ಭೂತದ ವಿಚಿತ್ರ ಚೇಷ್ಟೆ

ಆಂಧ್ರ ದೇಶದ ಎಲ್ಲೂರು ಮುನಿಸಿಪಾಲಿಟಿಯ ಮೆನೇಜರರಾದ ಶ್ರೀ ಶೇಷಯ್ಯನವರ ಮನೆಯಲ್ಲಿ ಈಗ 4 ತಿಂಗಳುಗಳಿಂದ ವಿಚಿತ್ರ ಭೂತಚೇಷ್ಟೆಯುಂಟಾಗುತ್ತಿರುವುದು. ವಸ್ತ್ರಹಾಸಿಗೆಗಳಿಗೆಲ್ಲಾ ವಿಚಿತ್ರವಾಗಿ ಬೆಂಕಿ ಹಿಡಿದು ಅವು ಉರಿಯುವವು. ಕವಾಟನೊಳಗೆ ಬೀಗ ಹಾಕಿ ಇಡಲ್ಪಟ್ಟ ಸಾಮಾನುಗಳು ಹೊರಗೆಸೆಯಲ್ಪಡುವವು. ತಾಮ್ರದ ಪಾತ್ರೆ ನೊರಲಾದುವುಗಳು ಹಾರಿ ಮನೆಯವರ ಕಾಲಮೇಲೆ ಬೀಳುವವು. ಮೊದಲಿದ್ದ ಮನೆಯು ಪ್ರೇತಪೀಡಿತವಾಗಿರುವುದೆಂದು ಶ್ರೀ ಶೇಷಯ್ಯನವರು ಇನ್ನೊಂದು ಮನೆಗೆ ಹೋದರು ಅಲ್ಲಿಯೂ ಅವರಿಗೆ ಈ ವಿಚಿತ್ರ ಪೀಡೆ ತಪ್ಪಲಿಲ್ಲ. ಪೋಲೀಸ್ ಅಧಿಕಾರಿಗಳು ಮತ್ತು ಇತರ ಜನರ ಸಮಕ್ಷಮದಲ್ಲೇ ಈ ವಿಚಿತ್ರ ಚೇಷ್ಟೆಗಳು ನಡೆದಿರುವವು.

ದಕ್ಷಿಣ ಕನ್ನಡ

ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ಹಳೇ ವಿದ್ಯಾರ್ಥಿಗಳ ಸಂಘಸ್ಥಾಪನೆ

ಬಂಟರಯಾನೆ ನಾಡವಸಮಾಜದ ವಿದ್ಯಾರ್ಥಿಗಳ ಸಲುವಾಗಿ ಆಢ್ಯ ಮಹನೀಯರಿಂದ ಸ್ಥಾಪಿಸಲ್ಪಟ್ಟ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಅನೇಕ ತರುಣರು ವಿದ್ಯಾ ವ್ಯಾಸಂಗಮಾಡುವ ಸಮಯ ಅಲ್ಲೇ ಉಳಕೊಂಡಿದ್ದು ತದನಂತರ ಉದ್ಯೋಗದ ಸಲುವಾಗಿ ಮದ್ರಾಸು, ಬೊಂಬಾಯಿ ಹಚ್ಚೇಕೆ ಇಡೀ ಹಿಂದೂಸ್ಥಾನದ ಬೇರೆ ಬೇರೆ ಸ್ಥಳಗಳಲ್ಲಿ ಜೀವನನಡೆಸಿಕೊಂಡಿರುವರಷ್ಟೆ. ಇವರೆಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದೇ ಸ್ಥಳದಲ್ಲಿ ಕಲೆತು ಭ್ರಾತೃಪ್ರೇಮವು ಅವರಲ್ಲಿ ಅಭಿವೃದ್ಧಿಹೊಂದುವ ಸಲುವಾಗಿ ಸದ್ರಿ ವಿದ್ಯಾರ್ಥಿಭವನದ ಹಳೇ ವಿದ್ಯಾರ್ಥಿಗಳ ಸಂಘಸ್ಥಾಪನೆಯ ಆವಶ್ಯಕತೆಯೆಂಬುದನ್ನು ಬಲ್ಲವರಿಗೆ ಪ್ರತ್ಯೇಕ ಹೇಳಬೇಕಾಗಿಲ್ಲವಷ್ಟೆ. ಅತಏವ ಇಂತಹ ಸಂಘಸ್ಥಾಪನೆಯ ಕುರಿತು ಆಲೋಚಿಸುವರೆ ತಾ. 28-1-'40ನೇ ಆದಿತ್ಯವಾರ ಪೂರ್ವಾಹ್ನ 10½ ತಾಸಿಗೆ ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಹಳೇ ವಿದ್ಯಾರ್ಥಿಗಳ ಸಭೆಯೊಂದು ಜರಗಲಿರುವುದು. ವಿದ್ಯಾರ್ಥಿಭವನದ ಉಪಯೋಗವನ್ನು ಪಡೆದ ಹಳೆ ವಿದ್ಯಾರ್ಥಿಗಳೆಲ್ಲರೂ ಸಕಾಲದಲ್ಲಿ ಕೈಕೊಂಡ ಯೋಜನೆಯು ಸಫಲವಾಗುವಂತೆ ಸರ್ವರೂ ಸಹಕರಿಸಬೇಕಾಗಿ ಭವನದ ಹಳೇ ಬೋರ್ಡರರ ವಿನಂತಿಯಿದೆ.

ಕಟಪಾಡಿ—ತಾ 10—1—1940ರಲ್ಲಿ ಕಟಪಾಡಿ ಪಂಚಾಯತ್ ಬೋರ್ಡು ಚುನಾವಣೆಯ ಬಗ್ಗೆ ನಾಮಪತ್ರಗಳನ್ನು ಸ್ವೀಕರಿಸಲಾಯ್ತು. 4 ವಾರ್ಡುಗಳ 16 ಸೀಟುಗಳಿಗೆ 23 ನೋಮಿನೇಶನ್ ಪತ್ರಗಳು ಇದ್ದುವು. ಅವುಗಳಲ್ಲಿ 7 ನೋಮಿನೇಶನ್ ಪತ್ರಗಳನ್ನು ತಾ. 11-1-40ರಲ್ಲಿ ಅಸಿಸ್ಟೆಂಟ್ ಪಂಚಾಯತ್ ಬೋರ್ಡು ಆಫೀಸರರಾದ ಶೀನಸೆಟ್ಟಿ ಸಮಕ್ಷಮದಲ್ಲಿ ಹಿಂತೆಗೆದುಕೊಂಡದ್ದರಿಂದ ಯಾವ ದೊಂದೂ ಚುನಾವಣೆ ಇಲ್ಲದೆ ಈ ಕೆಳಗಿನವರು ಆಯಾಯ ವಾರ್ಡುಗಳಿಗೆ ಆರಿಸಲ್ಪಟ್ಟರು.

(1) ಯೇಣಗುಡ್ಡೆ ವಾರ್ಡ್–1. ಕೆ. ಗೋಪಾಲ ಅನಂತ ಶಮ್ರು, 2. ವೈ. ಶ್ಯಾಮ ಹೆಗ್ಡೆ, 3. ಪಿ. ವೆಂಕಟರಾಯ ನಾಯಕ್, ಬಿ. ಎಸ್. ಸಿ. 4 ಕೆ. ಮೈಂದ ಪೂಜಾರಿ, 5. ಕೆ. ಕುಂಜಾಲಿ ಬ್ಯಾರಿ (ಮುಸ್ಲಿಮ್ ರಿಸರ್ವ್ಡ್ ಸೀಟ್) (2) ಮೂಡಬೆಟ್ಟು ವಾರ್ಡ್–1. ಕೆ. ಮುಕುಂದ ಶೆಟ್ಟಿ 2 ಕೆ ರಮಾನಾಥ ಶೆಟ್ಟಿ, 3. ಕೆ. ಸಂಜೀವ ಬಲ್ಲಾಲ್, 4. ಜೋಸೆಫ್ ಡಿ ಸಿಲ್ವ, (ಕ್ರಿಶ್ಚಿಯನ್ ರಿಸರ್ವ್ಡ್ ಸೀಟು) (3) ಕೋಟೆ ವಾರ್ಡ್ 1. ಕೆ ಮೋನಪ್ಪ ಸೆಟ್ಟಿ. 2. ಖಂಡಿಗೆ ಶ್ರೀನಿವಾಸಭಟ್ಟ, 3. ಪಿಟ್ಟರ್ ಪಿಂಟೊ. (ಕ್ರಿಶ್ಚಿಯನ್ ರಿಸರ್ವ್ಡ್ ಸೀಟ್) (4) ಪಟ್ಟೆ ವಾರ್ಡ್ 1. ಎಮ್. ಪದ್ಮನಾಭ ರಾವ, 2. ಎಮ್. ಲಕ್ಷ್ಮೀನಾರಾಯಣ ರಾವ್, 3 ಕೆ ಕಾಂತಪ್ಪ ಮುಕಾಲಿ,4. ಮುರ್ಡ,(ಹರಿಜನ ರಿಸರ್ವ್ಡ್)

ಸಿದ್ದಾಪುರ— (ಕುಂದಾಪುರ) ತಾರೀಖು 26 12-39ರಲ್ಲಿ ಶ್ರೀಗಳಾದ ಕುಂಚಿಮಕ್ಕಿ ನಾಗಪ್ಪ ಉಡುಪ, ಅಜ್ರಿ ಜಿ. ನಾರಾಯಣ ಐತಾಳ, ಕೂಗಿ ಸೂರ್ಯನಾರಾಯಣ ಉಪಾಧ್ಯಾಯರೇ ಮೊದಲಾದವರ ಪ್ರಯತ್ನದಿಂದ 'ಭೀಷ್ಮೋತ್ಪತ್ತಿ' ಎಂಬ ಯಕ್ಷಗಾನ ತಾಳಮದ್ದಳೆಯು ಬಹು ಸಂಭ್ರಮದಿಂದ ಜರಗಿತು.

ಸಾಂತೂರು—ತಾ. 1–1–40ರಲ್ಲಿ ಇಲ್ಲಿಯ ಬಿ ಇ. ಯಂ. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ. ಆನಂದರವರು ವರ್ಗಾಯಿಸಲ್ಪಟ್ಟಿರುವುದರಿಂದ ಅಧ್ಯಯಿಗೆ ಶ್ರೀ. ಯಸ್. ಸುಂದರ ಶೆಟ್ಟರು ಒಂದು ವಿದಾಯ ಸತ್ಕಾರ ಕೊಟವನ್ನೇರ್ಪಡಿಸಿದ್ದರು. ಸಮಾರಂಭವು ಡಾ. ಕುಮಾರನ್ ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಆನಂದರನ್ನು ಕೊಂಡಾಡಿ ಕೆಲವರ ಭಾಷಣಗಳಾದುವು.

ನೆಂದಳಿಕೆ—ಸಂಯುಕ್ತ ಕಾಂಗ್ರೆಸ್ ಕಮಿಟಿಯ ಮಾಸಿಕ ಸಭೆಯು ತಾ. 14–1–40ರಲ್ಲು ಬೋಳ್ನಗ್ರಾಮದ ಶ್ರೀ. B. M. ರಾಮ ಸಟ್ಟಿ ಕಟ್ಟೋಣದಲ್ಲಿ ಶ್ರೀ. P. K. ಜಿ. ಆಚಾರ್ಯರವರ ಅಧ್ಯಕ್ಷತೆಯಲ್ಲಿ ಜರಗಿಸಲಾಯ್ತು. ಅನೇಕ ವಿಷಯಗಳು ಚರ್ಚಿಸಲ್ಪಟ್ಟವು. ಕಷಾಯ ಶಿಕ್ಷಣದ ಕುರಿತು ಶ್ರೀಗಳಾದ N. ಭೋಜರಾಯ ಸೆಟ್ಟಿ ನಾರಾಯಣ ಸೆಟ್ಟಿ ಮುಂತಾದವರು ಭಾಷಣಮಾಡಿದರು. ಬರುವ ತಿಂಗಳ ಸಭೆಯು ನಂದಳಿಕೆಯಲ್ಲಿ ತಾ. 25–2–40ಕ್ಕೆ ಕೆದಿಂಜೆ ಮಂಜರಪಳ್ಕೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ 26–2–40ಕ್ಕೂ ಜರಗಲಿರುವುದು.

ಮೂಲ್ಕಿ—ಸ್ಥಳೀಕ ಬೋರ್ಡ್ ಹೈಸ್ಕೂಲಿನಲ್ಲಿ S S. L. C. ಕ್ಲಾಸಿನಲ್ಲಿದ್ದ 37 ಹುಡುಗರ ಪೈಕಿ 6 ಹುಡುಗಿಯರು, ಇವರೆಲ್ಲರನ್ನೂ ಪರೀಕ್ಷೆಗೆ ಕಳುಹಿಸುವಂತೆ ಚುನಾಯಿಸಿದ್ದಾರೆಂದು ತಿಳಿದುಬರುತ್ತದೆ.

ಇಲ್ಲಿಯ ಜಮೀನ್ದಾರರೂ ಬಂಟರ ಯಾನೆ ನಾಡವರ ಸಮಾಜದ ಮುಖಂಡರೂ ಬಪ್ಪನಾಡು ಶ್ರೀ. ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿತ ಮೊಕ್ತೇಸರರೂ ಆಗಿದ್ದ ಶ್ರೀ ಮೂಲ್ಕಿ ಹೊಸಮನೆ ರಾಮ ಶೆಟ್ಟಿ ತಮ್ಮ 73ನೇ ವಯಸ್ಸಿನಲ್ಲಿ ಆಕಸ್ಮಾತ್ ಹೃತ್ಕ್ರಿಯೆ ನಿಂತು ತಾ. 5–1–40ನೇ ರಾತ್ರೆ ಸುಮಾರು 11 ಘಂಟೆ ಸಮಯಕ್ಕೆ ದಿವಂಗತರಾದರೆಂದು ತಿಳಿಸಲು ತುಂಬ ವಿಷಾದಪಡುತ್ತೇವೆ. ದಿವಂಗತರು ಅನೇಕ ಬಡಬಗ್ಗರಿಗೆ ಕೈದೀವಿಗೆಯಾಗಿದ್ದರು. ಬಪ್ಪನಾಡು ಸಹಕಾರ ಸಂಘದ ಅಧ್ಯಕ್ಷರಾಗಿ ಸುಮಾರು 10 ವರ್ಷ ಕೆಲಸಮಾಡಿದ್ದರು. ಶ್ರೀಪರಮಾತ್ಮನು ಇವರ ಪವಿತ್ರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲೆಂದು ಕೋರುವೆವು. ಇವರ ನಿಧನದ ದುಃಖಸೂಚನೆಗಾಗಿ ಬಪ್ಪನಾಡು ಸಹಕಾರ ಸಂಘವು ತಾ. 6-1–40ರಲ್ಲಿ ಮುಚ್ಚಲ್ಪಟ್ಟಿತು.

ಬೈಂದೂರು— ಸ್ಥಳೀಯ ಮಾಧ್ಯಮಿಕ ಶಾಲಾ ವರ್ಷಂತ್ಯೋತ್ಸವವು ತಾ. 14–1–40ರಲ್ಲಿ ಶ್ರೀ. ಡಾ| ಕೆ. ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಶಾಲೆಯ ವರದಿ ವಾಚನ, ಶ್ರೀ ಸುಬ್ಬಣ್ಣ ಶೆಟ್ಟರಿಂದ ಶಾಲೆಯ ಶ್ರೇಯಃ ಪ್ರಾರ್ಥನೆ, ಪಾರಿತೋಷಕ ಹಂಚೋಣಾದಿ ಕಾರ್ಯಕ್ರಮಗಳು ನಡೆದ ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯು ಸರ್ವವಿಧದಲ್ಲೂ ಸರ್ವತೋಮುಖವಾದ ಪ್ರಗತಿಪಥದಲ್ಲಿ ಅಭಿವೃದ್ಧಿ ಹೊಂದಿರುವುದೆಂದೂ ತಾನು ಶಾಲೆಯನ್ನು ಶಾಶ್ವತವಾಗಿ ಇರಿಸಲು ಕೈಲಾದಷ್ಟು ಪ್ರಯತ್ನಿಸುವೆನೆಂದೂ ಹೇಳಿ ಕೆಲವು ಹಿತವಚನಗಳನ್ನಿತ್ತರು. ಆ ಮೇಲೆ ನಾಟಕಾದಿ ವಿವಿಧ ವಿನೋದಗಳೂ ಕುಂದಾಪುರದ "ವ್ಯಾಯಾಮ ಮಂಡಳ"ಯವರ ವಿವಿಧ ವ್ಯಾಯಾಮ ಪ್ರದರ್ಶನಗಳೂ ನಡೆದುವು. ಶಾಲೆಯನ್ನು ಉನ್ನತಸ್ಥಿತಿಗೆ ತಂದ ಮುಖ್ಯೋಪಾಧ್ಯಾಯರಾದ ಶ್ರೀ. ಕೆ ಸಂಜೀವ ಶೆಟ್ಟರ ಅಧ್ಯಾಪಕ ವೃಂದದವರು ಮತ್ತು ಊರವರ ಸಾಹಸವು ಸ್ತುತ್ಯ.

ಬೈಂದೂರಿಗೆ ಚಿತ್ತೈಸಿದ್ದ ಜಿಲ್ಲಾಬೋರ್ಡಿನ ಸದಸ್ಯರುಗಳಾದ ಶ್ರೀ. ಎ. ಬಿ. ಶೆಟ್ಟಿ, M. L A. ಮೊದಲಾದ ಅಧ್ಯಕ್ಷ ಮಹಾಶಯರುಗಳಿಗೂ ತಾ. 14ನೇ ಆದಿತ್ಯವಾರ ರಾತ್ರೆ ಇಲ್ಲಿಯ ಸುಪ್ರಸಿದ್ಧ ಜಮೀನುದಾರರಾದ ಶ್ರೀ. ಯಡ್ತರೆ ಕೃಷ್ಣಪ್ಪ ಶೆಟ್ರ ಮನೆಯಲ್ಲಿ ವಿಶೇಷವಾದ ಔತಣಸಮಾರಂಭವಿದ್ದಿತು.

ಸ್ಥಳೀಯ ಆಸ್ಪತ್ರೆಯ ಪ್ರಸೂತಿಗೃಹ ಪ್ರವೇಶೋತ್ಸವವು ಶ್ರೀ. ಎ. ಬಿ. ಶೆಟ್ಟಿ M. L. A ಯವರಿಂದ ತಾ. 15ನೇ ಸೋಮವಾರ ಪೂರ್ವಾಹ್ನ 8 ಗಂಟೆಗೆ ನೆರವೇರಿಸಲ್ಪಟ್ಟಿತು (ಶ್ರೀ ಶೆಟ್ಟರ ಭಾಷಣದ ಸಾರಾಂಶವನ್ನು ಇನ್ನೊಂದೆಡೆ ಕೊಡಲಾಗಿದೆ) ಕೆಂಪಿನ್ ಉಪಹಾರದೊಂದಿಗೆ ಈ ಸಂಭ್ರಮವು ಸಾಂಗವಾಗಿ ಕೊನೆಗೊಂಡಿತು ಆರಂಭದಲ್ಲಿ ಶ್ರೀ. ಕೆ. ಕೆ. ರೈ ಮತ್ತು ಸುಬ್ಬಣ್ಣ ಶೆಟ್ಟರ ಭಾಷಣಗಳಿದ್ದುವು.

ದಕ್ಷಿಣ ಕನ್ನಡ ಜಿಲ್ಲಾಬೋರ್ಡಿನ ಒಂದು ಸಾಮಾನ್ಯ ಸಭೆಯು ತಾ. 15ರಲ್ಲಿ ಜರಗಿತು. ಹಲವು ಸರಕಾರೀ ಹುಕುಂಗಳು ದಿವಾಮಾಡಲ್ಪಟ್ಟವು. ಬೋರ್ಡಿನಿಂದಲೇ ಒಂದು ಛಾಪಖಾನೆಯನ್ನು ಸ್ಥಾಪಿಸುವ ಮತ್ತು ಬೋರ್ಡಿನ ಕೈಕೆಳಗಿರುವ ಎಲ್ಲಾ ವಿದ್ಯಾಸಂಸ್ಥೆಗಳಿಗೆ ಬೇಕಾಗುವ ಪುಸ್ತಕಗಳನ್ನು ಆ ಛಾಪಖಾನೆಯಿಂದಲೇ ತಯಾರಿಸಿ ಒದಗಿಸಬೇಕೆಂಬುವ ಎರಡು ಠರಾವುಗಳು ಮುಂದಿನ ಸಭೆಗೆ ಬಾಕಿ ಇಡಲ್ಪಟ್ಟುವು. ಆಗಿಹೋದ ಲೋಕಲ್ ಬೋರ್ಡು ಗುಮಾಸ್ತರಿಗೆ ಅಗತ್ಯ ಇದ್ದ ಸಂಬಳವನ್ನು ಸರಕಾರದವರು 1939ರಲ್ಲಿ ಇದ್ದಂತೆ ಕೊಡಬಹುದೆಂಬ ಶಿವರ್ಗಾನದ ಹುಕುಮನ್ನು 1934ರಲ್ಲಿ ಇದ್ದಂತೆ ಕೊಡಬೇಕೆಂಬ ತಿದ್ದುಪಡಿಯೊಂದಿಗೆ ಪುನಃ ಸರಕಾರಕ್ಕೆ ಬರೆಕೊಳ್ಳುವದೆಂದು ನಿಶ್ಚಯಿಸಲಾಯಿತು. ಉಪ್ಪುಂದ ಹೊಳೆಗೆ ಸೇತುವೆ, ಬೈಂದೂರಿನಿಂದ ನಾಗರಕ್ಕೆ ರಸ್ತೆ ಇವೇ ಮೊದಲಾದ ಉಪಯುಕ್ತ ಕಾರ್ಯಗಳನ್ನು ಜಿಲ್ಲಾ ಸಂಸ್ಥೆಯ 5 ವರ್ಷದ ಯೋಜನೆಯಲ್ಲಿ (5 years'plan) ಸೇರಿಸಲಾಗುವದೆಂದು ನಿರ್ಧರಿಸಲ್ಪಟ್ಟಿತು. ಕುಂದಾಪುರ ಹೈಸ್ಕೂಲಿನ ಅಧ್ಯಾಪಕರಾದ ಜನಾಬ್ ಕೆ. ಅಬ್ದುಲ್ಲಾ ಖಾದರ್ ಸಾಹೇಬರು ಕುಂದಾಪುರ ತಾಲೂಕಿನ ವಿದ್ಯಾಸಮಿತಿಯಲ್ಲಿ ಸದಸ್ಯತನವನ್ನು ಮುಂದರಿಸತಕ್ಕದೆಂಬ ಇತ್ಯನೇಕ ವಿಷಯಗಳು ಚರ್ಚಿಸಲ್ಪಟ್ಟು ಸಭೆಯು ಅಂತ್ಯವಾಯ್ತು.

ಕಾಸರಗೋಡು—ಇಲ್ಲಿಯ 1ನೇ ಕ್ಲಾಸ್ ಬೆಂಚು ಮೆಜಿಸ್ಟ್ರೇಟರ ಕೋರ್ಟಿನ ಪ್ರೆಸಿಡೆಂಟರ ಸ್ಥಾನ ವಹಿಸಿ ಸುಮಾರು 2 ವರ್ಷಗಳ ಕನಕ ಶ್ರದ್ಧೆಯಿಂದ ಕೆಲಸಮಾಡಿ ನೋಸ್ಟೆ ತುಸ್ ಜಿಲ್ಲಾ ಕಲೆಕ್ಟರವರು ಕೋರ್ಟಿನ ಕಾರ್ಯಕಲಾಪಗಳ ಮೇಲೆ ಕೆಲವು 'ರಿಮಾರ್ಕು'ಗಳನ್ನು ಬರೆದಿರುವುದರಿಂದ ಅಸಮಾಧಾನಗೊಂಡು ಶ್ರೀ| ಅಪ್ಪೆಂಬನ ಶ್ರೀನಿವಾಸಯ್ಯ, ಯಮ್. ನರಸಿಂಗರಾವ್, ಬಿ ದೇವಪ್ಪ ಆಳ್ವ, ಸಿ ಶ್ರೀನಿವಾಸ ಕಾಮತ್, ಬಿ. ಎ , (ಬೆಂಚ್‌ಮೆಜಿಸ್ಟ್ರೇಟರು) ಇವರುಗಳು ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟಿರುತ್ತಾರಾಗಿ ವರ್ತಮಾನ.

ಮಿಯ್ಯಾರು—(ಕಾರ್ಕಳ)ತಾ. 20-1 40 ರಲ್ಲಿ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ. ಎಂ. ನೇಮಿರಾಜ ಸೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಎಂ. ಡಿ. ಅಧಿಕಾರಿಗಳು ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿ ಭಾಷಣಮಾಡಿದರು.

ಬೊಂಬಾಯಿ

ಸುದ್ದಾ ಜನತಾ ಸಂಘ— ದ ವಾರ್ಷಿಕೋತ್ಸವವು ತಾ 7–1–40ರಲ್ಲು ಶ್ರೀ. ಕೆ. ಎ. ಸಾಲಿಯಾನರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಯವರು ಗತವರ್ಷದ ವರದಿಯನ್ನು ಓದಿದ ಬಳಿಕ 1940ನೇ ಇಸವಿಯ ಆಡಳಿತ ಸಮಿತಿಗೆ ಹತ್ತು ಜನರ ಮೆಂಬರರನ್ನು ಚುನಾಯಿಸಲಾಯ್ತು. ತದನಂತರ ಶ್ರೀ. ಎಲ್. ಕೆ. ಕುಂದರ್ ಯಾ. ಬಿ. ದಾಸ್, ಎನ್. ಎಸ್. ಕುಂದರ್, ಯಮ್. ಪಿ. ಕರ್ಕೇರ್, ಕೆ ಪಿ. ಕುಂದರ್ ಮುಂತಾದವರು ಸಂಘದ ಏಳಿಗೆಯನ್ನು ಬಯಸಿ ಮಾತಾಡಿದರು.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತಾದಾರರಿಂದ)

ಮಂಗಳೂರು ತಾ 21-1-1940

ಮಂಗಳೂರು ನಗರಸಭೆ— ತಾರೀಕು 15-1-40ರಲ್ಲಿ ನಗರಸಭೆಯು ಶ್ರೀ ಬಿ ವಿ. ಬಂಗ್ಗ, ಬಿ ಎ., ಎಲ್. ಎಲ್. ಬಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸತಾಗಿ ಆರಿಸಲ್ಪಟ್ಟ ಸದಸ್ಯರಾದ ಮಿ. ಡೆನ್ನಿಸ್ ಪಿಂಟೋರವರು ರಾಜಭಕ್ತಿ ಪ್ರತಿಜ್ಞೆಯನ್ನು ಮಾಡಿದ ತರುವಾಯ ಸರಕಾರಿ ಹುಕುಂಗಳು ಓದಲ್ಪಟ್ಟು ರಿಕಾರ್ಡು ಮಾಡಲ್ಪಟ್ಟವು. ಮಂಗಳೂರು ನಗರಸಭೆಯವರು ಕಟ್ಟಿಸಿರುವ ರೇಡಿಯೋ ಮಂದಿರದ ಬಗ್ಗೆ ವಿದ್ಯುಚ್ಛಕ್ತಿಗೆಂದು ರೂ. 150 ಮಂಜೂರಾಯಿತು. ಮಂಗಳೂರಿನ ವಸ್ತುಸಂಗ್ರಹಾಲಯದ ಕಟ್ಟಡದ ಬಗ್ಗೆ ನಗರಸಭೆಯು ತಿಂಗಳೊಂದರ ರೂ. 35ರಂತೆ ಕೊಡಲು ಸಮ್ಮತಿಸಿತು. ಇತರ ಕೆಲ ವಿಷಯಗಳನ್ನು ಚರ್ಚಿಸಿ ನಿರ್ಧಾರಮಾಡಿದ ಬಳಿಕ ಸಭೆಯು ಮುಕ್ತಾಯವಾಯಿತು.

ರಿಜಿಸ್ಟ್ರೇಶನ್ ಡೈರೆಕ್ಟರರು— ಮದ್ರಾಸ್ ಸರಕಾರದ ರಿಜಿಸ್ಟ್ರೇಶನ್ ಡೈರೆಕ್ಟರರಾದ ದಿವಾನ್ ಬಹದ್ದೂರು ಶ್ರೀ. ಟಿ. ವಿ. ಶ್ರೀಹರಿರಾವ್ ನಾಯುಡುರವರು ಕಳೆದ ತಾ 14ರಲ್ಲಿ ಮಂಗಳೂರಿಗೆ ಚಿತ್ತೈಸಿದರು. ಜಿಲ್ಲೆಯ ರಿಜಿಸ್ಟ್ರೇಶನ್ ಕಚೇರಿಗಳನ್ನು ತನಿಖೆಮಾಡಲು ಬಂದಿರುವರಾಗಿ ತಿಳಿದು ಬರುತ್ತದೆ.

ಹೊಸ ಡೆಪ್ಯುಟಿ ಕಲೆಕ್ಟರರು— ಮಂಗಳೂರು ಡಿವಿಜನಿನ ಡಿ. ಕಲೆಕ್ಟರಾಗಿ ಶ್ರೀ ಬಾಲಗುರುನಾಥನ್ ಪಿಳ್ಳೆಯವರು ನೇಮಿಸಲ್ಪಟ್ಟಿರುವರಷ್ಟೆ. ಅವರು ಕಳೆದ ತಾ 12ರಲ್ಲಿ ತಮ್ಮ ಅಧಿಕಾರವನ್ನು ವಹಿಸಿಕೊಂಡರು.

ಹಿಂದೀ ಶಿಕ್ಷಣ—ವೈ. ಯಂ. ಎಸ್. ಎ ಸಂಘದ ಸಭೆಯೊಂದು ಕಳೆದ ತಾ. 18ರಲ್ಲಿ ಶ್ರೀ. ಎನ್. ಎಸ್. ಶೆಟ್ಟಿರ ಅಧ್ಯಕ್ಷತೆಯಲ್ಲಿ ಸೇರಿತು. ಅಧ್ಯಕ್ಷರು ಹಿಂದೀ ಭಾಷೆಯನ್ನು ಕಲಿಯುವ ಅವಶ್ಯಕತೆಯ ಕುರಿತು ಭಾಷಣಮಾಡಿದರು. ಅನಂತರ ಶ್ರೀಗಳಾದ ಎಸ್. ಎಸ್. ಸ್ವಾ. ಎಚ್. ವಿ. ನಾಯಕ್, ಯು. ವಿ. ಶೆಣೈಯವರೇ ಮೊದಲಾದವರು ಭಾಷಣಮಾಡಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಹಿಂದೀ ತರಗತಿಗಳನ್ನು ಶ್ರೀ ಎಸ್. ಎಸ್. ವೈಗಳವರ ಅಧ್ಯಾಪಕತ್ವದಲ್ಲಿ ತೆರೆಯುವ ವಿಚಾರವಾಯಿತು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಸೈ. ಆಗ್ನೇಸ್ ಕಾಲೇಜಿನ ವರ್ಧಂತಿ

ತಾ. 19ನೇ ಶುಕ್ರವಾರ ಸಾಯಂಕಾಲ ಜಿಲ್ಲಾ ಕಲೆಕ್ಟರರಾದ ಮಿ ಎ. ಸಿ. ಉಡ್‌ಹೌಸ್ ದೊರೆಗಳ ಅಧ್ಯಕ್ಷತೆಯಲ್ಲಿ ಸೈ ಆಗ್ನೇಸ್ ಕಾಲೇಜಿನ ವರ್ಧಂತ್ಯುತ್ಸವವು ನಡೆಯಿತು ಪ್ರಾರ್ಥನೆ, ವರದಿ ವಾಚನವಾದ ಬಳಿಕ ಮಾಯು ಮಿಸೆಸ್ ಉಡ್‌ಹೌಸ್ ರವರು ಪಾರಿತೋಷಿಕಗಳನ್ನು ಹಂಚಿದರು. ಕಾಲೇಜಿನ ವಿದ್ಯಾರ್ಥಿನಿಯರು ನಾಟಕ, ನರ್ತನ, ಸಂಗೀತದಿಂದ ಸಭಿಕರನ್ನು ಆನಂದಗೊಳಿಸಿದರು. ಇದೇ ಸಂದರ್ಭದಲ್ಲಿ ಹೈಸ್ಕೂಲು ವಿದ್ಯಾರ್ಥಿನಿಯರಿಂದ ತಯಾರಿಸಲ್ಪಟ್ಟ ಕೈಗಾರಿಕೆ ವಸ್ತುಗಳ ಪ್ರದರ್ಶನವೂ ಇತ್ತು. ವಸ್ತುಗಳು ವಿದ್ಯಾರ್ಥಿನಿಯರ ಕೈಚಮತ್ಕಾರವನ್ನು ಸೂಚಿಸುತ್ತಿದ್ದುವು

ಮಿಶನ್ ಹೈಸ್ಕೂಲು ವರ್ಧಂತಿ— ಕಳೆದ ತಾ. 20ನೇ ಸಾಯಂಕಾಲ ಸ್ಥಳೀಯ ಬಿ. ಇ. ಯಂ. ಹೈಸ್ಕೂಲಿನ ವರ್ಧಂತಿಯು ಜಿಲ್ಲಾ ಬೋ. ಅಧ್ಯಕ್ಷರಾದ ಮಾನ್ಯ ಬಾ. ವಿಠ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾನಂತರ ಮಿ ಯು. ಹಮ್ಮಾಬ್ಬನವರು ಶಾಲಾ ಅಭಿವರ್ಣನವನ್ನು ಮಾಡಿದರು. ಹೆಡ್ಮಾಸ್ಟರರು ವರದಿಯನ್ನೋದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯು ಜಿಲ್ಲೆಯ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಮಾಡುತ್ತಿರುವ ಪ್ರಯತ್ನವನ್ನು ಶ್ಲಾಘಿಸಿದರು. ಇನಾಮು ಹಂಚಿದ ಬಳಿಕ ಹೆಡ್ಮಾಸ್ಟರರು ಧನ್ಯವಾದಗಳನ್ನರ್ಪಿಸಿದರು. ಶಾಲಾ ವಿದ್ಯಾರ್ಥಿಗಳು ನಾಟಕ ಪ್ರದರ್ಶನಮಾಡಿದರು. ತಾ. 21ನೇ ಸಾಯಂಕಾಲ ಮೋಹಿನ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಸಭೆಯು ಶ್ರೀ. ಬಿ. ವಿ ಬಾಳಿಗರ ಅಧ್ಯಕ್ಷತೆಯಲ್ಲಿ ಸೇರಿತು.

ದ ಕ. ಜಿಲ್ಲಾ ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರ ಸಂಘ, ಮಂಗಳೂರು

ಈ ಸಂಘದ ವರ್ಷಾವಧಿ ಮಹಾಸಭೆಯನ್ನು ತಾ 28-1-40ನೇ ಆದಿತ್ಯವಾರ ಅಪರಾಹ್ನ ಘಂಟೆ 2ಕ್ಕೆ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಯಂ ಆರ್. ಪೊಂಜಾರವರ ಅಧ್ಯಕ್ಷತೆಯಲ್ಲಿ ಜರಗಿಸುವುದಾಗಿ ನಿಶ್ಚಯಿಸಿರುತ್ತದೆ. ತತ್ಸಂಬಂಧ ತಾಲೂಕು ಮ ಇತರ ಸೆಂಟರ್ ಸಂಘಗಳಿಂದ ನಿಶ್ಚಿತವಾದ ಪ್ರತಿನಿಧಿಗಳನ್ನು ಕಳುಹಿಸಬೇಕಾಗಿ ಅಪೇಕ್ಷೆ ತೋರಿಸಲಾಗುತ್ತದೆ. ಸಭೆಯಲ್ಲಿ ಮಂಡಿಸತಕ್ಕ ಗೊತ್ತುವಳಿಗಳೇನಾದರೂ ಇದ್ದರೆ ತಾ. 25-1-40ರ ಒಳಗೆ ಮುಟ್ಟುವಂತೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡತಕ್ಕದ್ದು ಅದೇ ದಿನ ಪೂರ್ವಾಹ್ನ ಘಂಟೆ 10ಕ್ಕೆ ಸಭಾಸ್ಥಾನದಲ್ಲಿಯೇ ಸಂಘದ ಕಾರ್ಯನಿರ್ವಾಹಕ ಸಭೆಯು ಸೇರಲಿರುವುದು ಎಲ್ಲಾ ಸದಸ್ಯರೂ ತಕ್ಕ ಜೊತೆಗೆ ಉಪಸ್ಥಿತರಾಗಬೇಕಾಗಿ ವಿನಂತಿ ಎಂದು ಅಧ್ಯಕ್ಷ ಶ್ರೀ ಬಿ ಭೋಜರಾಯರು ತಿಳಿಸುತ್ತಾರೆ.

ಗವರ್ನಮೆಂಟ್ ಬಾಯ್ಸ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಸ್ಕೌಟುಗಳು—ಸುಮಾರು 40 ಮಂದಿ ತಾ. 12ರಲ್ಲಿ ತಮ್ಮ ಸ್ಕೌಟುಮಾಸ್ಟರ್ ಶ್ರೀ. ಕೆ. ರಾಮಕೃಷ್ಣ ಶೆಟ್ಟಿ, ಬಿ.ಎ. ಎಲ್ ಟಿ.ಯವರೊಂದಿಗೆ Y M C A ಯ ಸ್ಕೌಟ್‌ಮಾಸ್ಟರ್ ಶ್ರೀ ಟಿ. ಸಾಲಿನ್ಸ್, ಬಿ. ಎ. ಎಲ್. ಟಿ. ಮತ್ತು 9 ಸ್ಕೌಟುಗಳನ್ನು ಕೂಡಿಕೊಂಡು ಕಾಲುನಡಿಗೆಯಿಂದಲೇ ಮೂಲ್ಕಿಗಾಗಿ ಉಡುಪಿಗೆ ತೆರಳಿ ಅಲ್ಲಿಯ ಸ್ಕೌಟು ರೇಲಿಯಲ್ಲಿ ಭಾಗವಹಿಸಿ ತಾ. 15ರಲ್ಲಿ ಹಿಂದಿರುಗಿ ಬಂದಿರುವರು, ಇವರು ಉಡುಪಿಯಲ್ಲಿ ಮಿಷನ್ ಹಿಲಾ ಕಂಪೌಂಡಿನಲ್ಲಿ ಉಳಕೊಂಡಿದ್ದರು, ಕಾಲ್ನಡಿಗೆಯಿಂದಲೇ ಮಲ್ಪೆಗೂ ಹೋಗಿದ್ದರು. ತಾರೀಕು 14ರಲ್ಲಿ ಶ್ರೀ ಯು. ಕಣ್ಣಪ್ಪ, ಎಂ. ಎ, ಎಲ್. ಟಿ, ಯವರ ಅಧ್ಯಕ್ಷತೆಯಲ್ಲಿ ಉಡ್ಪಿ ಮಿಶನ್ ಹೈಸ್ಕೂಲ್ ಸ್ಕೌಟರೊಂದಿಗೆ ಶಿಬಿರಾಗ್ನಿಯೊಂದನ್ನು ಜರಗಿಸಿ ನಾನಾ ತರದ ವಿನೋದಗಳನ್ನು ಪ್ರದರ್ಶಿಸಿದರು. ಸ್ಕೌಟುಗಳು ತಮ್ಮ ಮೂಟೆಗಳನ್ನು ತಾವೇ ಹೊತ್ತು ಸುಮಾರು 90ಮೈಲುಗಳ ಪ್ರಯಾಣವನ್ನು ಕಾಲ್ನಡಿಗೆಯಿಂದಲೇ ಮಾಡಿರುವರು. ತಾ. 14ರಲ್ಲಿ ಉಡುಪಿ ಉತ್ಸವದ ಜನಸಂದಣಿಯಲ್ಲಿ ಬಾಲಕನೋರ್ವನು ಕಾಲಡಿಗೆ ಬಿದ್ದು ಸ್ಮೃತಿತಪ್ಪಿದಾಗ ಈ ಸ್ಕೌಟುಗಳಲ್ಲಿ ಕೆಲವರು ಪ್ರಥಮ ಚಿಕಿತ್ಸೆ ನಡಿಸಿ ಚೇತರಿಸುವಂತೆ ಮಾಡಿದರೆಂದೂ ತಿಳಿದುಬರುತ್ತದೆ.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕೇವಲವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಆದರಿಂದ ತಯಾರಿಸಿದ ಸಾರಾಂಶದ ಸಹಿತವೂ ಕೆಲವೇ ನಿಮಿಷಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನು" ಕಳ್ಳುಹಿಸಿ ಹೋಗಿದ್ದರೂ ತಡವಾಗಿಲ್ಲ. ಲೆಕ್ಕ ಪಾಸು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ಉಡುಪಿ

ಪರ್ಯಾಯ ವಸ್ತುಪ್ರದರ್ಶನ— ಉಡುಪಿಯಲ್ಲಿ ಪ್ರಥಮ ಸಲ ಏರ್ಪಡಿಸಲ್ಪಟ್ಟ ಪರ್ಯಾಯ ವಸ್ತುಪ್ರದರ್ಶನದ ಉದ್ಘಾಟನಾ ಸಮಾರಂಭವನ್ನು ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಕಳೆದ ತಾ. 8ರಲ್ಲಿ ಜಯಶೀಲವಾಗಿ ಪೂರೈಸಿದರು. ವಸ್ತುಪ್ರದರ್ಶನದಲ್ಲಿ ಮೈಸೂರು ಒಡೆಯರುಗಳೂ ಭದ್ರಾವತಿ ಕಬ್ಬಿಣ ಕಾರ್ಖಾನೆಯ ಸಾಮಾನುಗಳೂ ಸ್ವದೇಶೀ ಕಾಗದವೂ ಬಡಗವಾರ ಖಾದಿಯೂ ಅಲ್ಲದೆ ನಮ್ಮ ಜಿಲ್ಲೆಯ ಅನೇಕ ಕಲಾಕೈಗಾರಿಕೆ ವಸ್ತುಗಳೂ ಪ್ರದರ್ಶಿಸಲ್ಪಟ್ಟಿದ್ದುವು ವಿವಿಧ ವರ್ಣದ ರಂಗವಲ್ಲಿ ಪುಡಿಗಳಿಂದ ಕೈಗಳಿಂದಲೇ ಚಿತ್ರಿಸಲ್ಪಟ್ಟ ತಿರುಪತಿ ವೆಂಕಟರಮಣ ಉಡುಪಿ ಶ್ರೀಕೃಷ್ಣ ಇತ್ಯಾದಿಗಳು ಪ್ರೇಕ್ಷಣೀಯವಾಗಿದ್ದುವು. ಯಾತ್ರಿಕರ ಸೌಕರ್ಯದ ಸಲುವಾಗಿ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನವರು ಹಣದ ಲೇವಾದೇವಿಯ ವ್ಯವಸ್ಥೆಯನ್ನು ಮಾಡಿದ್ದರು. ದಿನಾಲೂ ಎಂಬಂತೆ ವಿವಿಧ ವಿನೋದಗೋಷ್ಠಿಗಳೂ ಪ್ರೇಕ್ಷಕರ ಮನಸೆಳೆಯುತ್ತಿದ್ದುವು. ಬಹುಮಾನ ವಿತರಣೆಯು ಶ್ರೀ ಫಲಿಮಾರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತಾ 23ರಲ್ಲಿ ನಡೆಯಿತು.

ಮೆರವಣಿಗೆಯಿಂದ ಶ್ರೀ ಸ್ವಾಮಿಗಳವರನ್ನು ಸ್ವಾಗತಿಸಿದ ಮೇಲೆ ಶ್ರೀ ಕೆ. ವೆಂಕಟ್ರಮಣಾಚಾರ್ಯರ ಪ್ರಾರ್ಥನೆ ಮಾಡಿದರು. ಶ್ರೀ. ಮನಾರಾಯಣ ಪ್ರಭುಗಳು ವಸ್ತುಪ್ರದರ್ಶನದ ವರದಿಯನ್ನೋದಿದರು. ವರದಿಯು ಪ್ರದರ್ಶನದ ಆವಶ್ಯಕತೆ, ಈ ಪ್ರದರ್ಶನದ ಜಯಶೀಲತೆ, ಅದಕ್ಕೆ ನೆರವಾದವರ ಉಪಕಾರಸ್ಮರಣೆಗಳಿಂದ ಕೂಡಿತ್ತು. ಅನಂತರ ಸ್ಟಾಲ್‌ನವರಿಗೂ, ವಿನೋದಗೋಷ್ಠಿಯಲ್ಲಿ ಭಾಗವಹಿಸಿದವರಿಗೂ ಸರ್ಟಿಫಿಕೇಟು ಮತ್ತು ಬಹುಮಾನಗಳನ್ನು ಅಧ್ಯಕ್ಷರು ಹಂಚಿದರು. ಸಂತೋಷಸೂಚಕ, ಇದಕ್ಕಿಂತಲೂ ಉತ್ತಮ ಪ್ರದರ್ಶನಗಳಾಗಬೇಕೆಂದು ಹಾರೈಸುವ ಅಧ್ಯಕ್ಷರ ಅಭಿಪ್ರಾಯವು ವಿಷದೀಕರಿಸಲ್ಪಟ್ಟ ಮೇಲೆ ಶ್ರೀ. ಸೂರ್ಯನಾರಾಯಣರಾಯರೇ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು ಅಂತೂ ಪ್ರಥಮ ಪ್ರದರ್ಶನವಾದರೂ ಸಾಕಷ್ಟು ಉತ್ತಮರೀತಿಯಲ್ಲಿ ಜರಗಿಸುವಂತೆ ವ್ಯವಸ್ಥೆಮಾಡಿದ ಕಮಿಟಿಯವರು ಅಭಿನಂದನೀಯರು. ಮಾತ್ರವಲ್ಲದೆ ಸುಧಾರಕ ಮನೋವೃತ್ತಿಯ ಶ್ರೀ ಫಲಿಮಾರು ಸ್ವಾಮಿಗಳವರು ಸಾರ್ವಜನಿಕ ಸಭೆಯೊಂದರ ಅಧ್ಯಕ್ಷತೆ ವಹಿಸಿ ಸಾರ್ವಜನಿಕರ ಹೊಣೆಕ್ಕೆ ಬೇಕೆಯನ್ನು ಬೆಳೆಸುವಂತಾದುದು ಶುಭಚಿಹ್ನೆಯಾಗಿದೆ.

ಮೈಸೂರು ಮಹಾರಾಜರುಗಳ ಭಾವಚಿತ್ರ ಅನಾವರಣ—ಮೈಸೂರು ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ, ಅವರ ತಂದೆ ಮೈಸೂರಿನ ಶ್ರೀ. ಚಾಮರಾಜೇಂದ್ರ ಒಡೆಯರ್ ಮತ್ತು ಅವರ ಅಜ್ಜ ಕೀರ್ತಿಶೇಷ ಶ್ರೀಮನ್ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರರ ಭಾವಚಿತ್ರಗಳನ್ನು ಶ್ರೀ. ಸೋದೆಮಠದಲ್ಲಿ ಇದೇ ತಾ. 16ರಲ್ಲು ಬೋಕನೇಮಿಸನತ ಕಡೂರು ಶ್ರೀ. ಎಮ್. ಎಚ್. ದ್ಯಾವೆಗೌಡ, ಎಮ್. ಎಲ್. ಸಿ. (ಮೈಸೂರು) ಇವರು ಅನಾವರಣ ಮಾಡಿದರು. ಶ್ರೀ. ಸೋದೆ ಮತ್ತು ಶ್ರೀ ಫಲಿಮಾರು ಸ್ವಾಮಿಗಳವರು ಈ ಸಮಾರಂಭದಲ್ಲಿ ಹಾಜರಿದ್ದರು

ಮುದ್ದಣ್ಣನ ಜಯಂತಿ—ಜಿಲ್ಲಾ ಪಂಡಿತ ಸಂಘ ಮತ್ತು ಕೇರಿಯರ ಪ್ರಪಂಚಗಳ ಸತಿಯಿಂದ ಮುದ್ದಣ್ಣ ಕವಿಯ ಜನ್ಮದಿನಾಚರಣೆಯು ಇದೇ ತಾ 14ರಲ್ಲು ಬೋರ್ಡು ಹೈಸ್ಕೂಲು ವರಾಂಡದಲ್ಲಿ ಶ್ರೀಮಾನ್ ಕಡೆಕಾರ್ ರಾಜಗೋಪಾಲ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಚ್ ಶೀನಪ್ಪರಾವ್, ಎಮ್. ಎನ್. ಕಾಮತ್, ವಿದ್ವಾನ್ ನಾರಾಯಣ ಭಟ್, ಪಂಡಿತ ವೆಂಕಟ್ರಮಣಾಚಾರ್, ವಿದ್ವಾನ್ ಎಸ್. ಕೃಷ್ಣ ಭಟ್ಟರೇ ಮೊದಲಾದವರು ಸಂದರ್ಭೋಚಿತ ಭಾಷಣಗಳನ್ನಿತ್ತರು ಶ್ರೀ. ಹೊನ್ನಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಶ್ರೀ. ಅದಮಾರು ಸ್ವಾಮಿಗಳ ಪರ್ಯಾಯ ಮಹೋತ್ಸವ—ಶ್ರೀ. ಅದಮಾರು ಮಠದ ಶ್ರೀ. ವಿಬುಧಮಾನ್ಯತೀರ್ಥ ಶ್ರೀಪಾದಂಗಳವರು ಇದೇ ತಾ. 18ರಲ್ಲು ಪೂರ್ವಾಹ್ನ ಶ್ರೀ ಕೃಷ್ಣನ ದೇವ ಪರ್ಯಾಯಪೀಠವನ್ನೇರಿದರು. ಇದರ ಶುಭಸೂಚಕಾರ್ಥವಾಗಿ ಬಡಗುಮಾಳಿಗೆಯಲ್ಲಿ ವೈದಿಕ ಲೌಕಿಕ ಸದ್ಗೃಹಸ್ಥ ಗೃಹಿಣಿಯರ ಸಮ್ಮಿಲನ ಒಂದು ಜರಗಿತ್ತು. ಪರ್ಯಾಯ ಶ್ರೀಗಳವರ ಕಡೆಯಿಂದ ವಿಧಿಪ್ರಕಾರ ಗಂಧಪುಷ್ಪಾದ್ಯುಪಚಾರಗಳು ನಡೆದವು. ಅಂದು ಮಧ್ಯಾಹ್ನ ಮಹಾಜನ ಸಂತರ್ಪಣೆ ರಾತ್ರಿ ಮಹಾರಥೋತ್ಸವಾದಿಗಳು ಶ್ರೀಕೃಷ್ಣ ಸನ್ನಿಧಿಯಲ್ಲಿ ನಡೆಯಿತು. ಪರ್ಯಾಯ ಮಠಕ್ಕೆ ಶ್ರೀ. ಸಾಹುಕಾರ ಮುದ್ದಣ್ಣ ಶೆಟ್ಟರು ಐದು ಸಾವಿರ ಹೊರೆ ಕಳಿಸಿಯೂ, ಶ್ರೀ. ಕುರ್ಕಾಲು ಗಣಪಯ್ಯ ಶೆಟ್ಟರು ತೆಂಗಿನಕಾಯಿಗಳ, ಶ್ರೀ. ಮಟ್ಟಿ ಪದ್ಮನಾಭರಾಯರು ಗುಳ್ಳದ, ಶ್ರೀ. ಮಟ್ಟಿ ಸರು ಫಲವಸ್ತುಗಳ ಹೊರೆ ಕಳಿಸಿಯೂ, ಶ್ರೀ. ಅಲೆವೂರು ಗೋಪಾಲಕೃಷ್ಣ ಭಟ್ಟರು ಒಂದು ದಿನದ ಸಕಲ ವೆಚ್ಚವನ್ನು ವಹಿಸಿಯೂ ನೆರವಾಗಿರುವರೆಂಬುದು ಅಭಿನಂದನೀಯ.

ಜಿಲ್ಲಾ ಹರಿಜನ ಪರಿಷತ್ತು— ಇದೇ ತಾ 18ರಲ್ಲು ಜಿಲ್ಲಾ ಹರಿಜನ ಪರಿಷತ್ತು ಶ್ರೀ. ಕೆ. ಜಿ. ಬಲ್ಲಾಳ್, ಬಿ ಎ ಎಲ್. ಎಲ್. ಬಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಪಾಳ್ಯಪ್ರಬೀಡು ಕೃಷ್ಣಯ್ಯ ಹೆಗ್ಡೆಯವರು ಬೋಧಪ್ರದ ಹಾಗೂ ವಿಚಾರಪರ ಭಾಷಣವಿತ್ತು ಪರಿಷತ್ತನ್ನು ತೆರೆದರು. ಹರಿಜನರ ಏಳಿಗೆಗೆ ನೆರವಾಗುವ ವಿಧಾಯಕಕಾರ್ಯಕ್ರಮವು ಅಧ್ಯಕ್ಷಭಾಷಣದಲ್ಲಿ ಅಡಕವಾಗಿದ್ದುವು ಮಾನ್ಯ ಸರಕಾರವೂ ಕಾಂಗ್ರೆಸ್ ಸಂಸ್ಥೆಯೂ ಈ ಭಾಗದಲ್ಲಿ ಸಹಕರಿಸತಕ್ಕ ಸೂಚನೆಗಳು ಸಹ ಉಲ್ಲೇಖಿಸಲ್ಪಟ್ಟಿದ್ದುವು.(ಈ ಬಾರಿ ಸ್ಥಳಾಭಾವವಿದ್ದುದರಿಂದಲೂ ಭಾಷಣದ ಪ್ರಮುಖಾಂಶಗಳನ್ನು ಬರುವ ಸಂಚಿಕೆಯಲ್ಲಿ ಕೊಡಲಾಗುವುದು.)

ಆರೋಗ್ಯ ಸಪ್ತಾಹ—ನಗರಸಭೆಯ ಆಶ್ರಯದಲ್ಲಿ ಏರ್ಪಡಿಸಲ್ಪಟ್ಟ ಆರೋಗ್ಯ ಸಪ್ತಾಹವು ಇದೇ ತಾ 20ರಲ್ಲು ಕೊನೆಗೊಂಡಿತು. ನಗರ ಮೆರವಣಿಗೆ, ಮ್ಯುನಿಸಿಪಲ್ ಮೈನ್ ಶಾಲೆಯಲ್ಲಿ ಸಬ ಕಲೆಕ್ಟರ್ ಶ್ರೀ. ಕಾಮಾತಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಮುಂತಾದ ಕಾರ್ಯಕ್ರಮಗಳಿದ್ದುವು

'ದೇಶಭಕ್ತ' ನಾಟಕಾಭಿನಯ— ಮೋಡರ್ನ್ ಸ್ಕೂಲ್ ಒಫ್ ಕೋಮರ್ಸ್, ಇದರ ಆಶ್ರಯದಲ್ಲಿ ಕಮ್ಶಿರಿಯಲ್ ಕೊಸ್ಮೊಪೊಲಿಟನ್ ಎಮೆಚೂರರು ಇದೇ ತಾ. 21ರಲ್ಲು ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ. ಕೆ. ಕೆ. ಸಟ್ಟಿರಿಂದ ಬರೆಯಲ್ಪಟ್ಟು ಕರಿಯುತ ಪ್ರಪಂಚದವರು ಪ್ರಕಟಿಸಿದ "ದೇಶಭಕ್ತ" ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಡಿ. ಮುನ್ಸಿಫ್ ಶ್ರೀ. ಕೆ. ಆರ್. ಕೃಷ್ಣಯ್ಯ ಚೆಟ್ಟಿಯವರು ವಹಿಸಿದ್ದರು. ನಾಟಕಾಂತ್ಯದಲ್ಲಿ ಶ್ರೀ. ಎನ್. ಎಸ್. ಕಿಲ್ಲೆಯವರ ಸಮಯೋಚಿತ ಭಾಷಣವಿತ್ತು ಈ ನಾಟಕದ ಉತ್ಪತ್ತಿಯು ಸಾರ್ವಜನಿಕ ಕಮ್ಶಿರಿಯಲ್ ಲೈಬ್ರರಿಗೆ ಉಪಯೋಗಿಸಲ್ಪಡುವುದೆಂದು ತಿಳಿದುಬರುತ್ತದೆ.

Transport & Car Owners

ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES — — — — — MANGALORE

ಮಾತೃಮಂದಿರ

ಅಕ್ಕ ತಂಗಿಯರಿಗೊಂದು ಮಾತು!

ನಿಮ್ಮ ರಕ್ಷಣೆಯನ್ನು ನೀವೇ ಮಾಡಿಕೊಳ್ಳಬೇಕು.

ಕಪಟ ವೇಷಧಾರಿಗಳಾದ ಮಾರ್ಜಾಲ ಸನ್ಯಾಸಿಗಳ ಪುಂಡಾಟ!

ಯುವಕರಲ್ಲಿ ಈಗ 'ಮಾರಲಿಸ್ಟ್'ರಾಗಬೇಕೆಂಬ ಹೊಸ ರೋಗವೊಂದು ಬಹಳ ಪ್ರಚಾರಕ್ಕೆ ಬರುತ್ತಿದೆ. ಇದರಿಂದ ಪರಿಣಾಮವಾಗಿ ಎಷ್ಟೋ ಮಂದಿ ಯುವತಿಯರ ನೈತಿಕ ಪತನವಾಗುತ್ತಿದೆ. ಯುವತಿಯರು ಈ ಪುಂಡರ ಈ ಚೇಷ್ಟೆಗಳಿಂದ ರಕ್ಷಿಸಿಕೊಳ್ಳಲು ಸ್ವಯಂ ಪರೀಕ್ಷೆ ಮತ್ತು ಸಾಹಸಗಳಿಂದ ಕೆಲಸಮಾಡಬೇಕೆಂಬುದನ್ನು ಇಲ್ಲಿ ಬಹಳ ಸ್ವಾರಸ್ಯವಾಗಿ ಸಂಭಾಷಣೆ ಮೂಲಕ ವರ್ಣಿಸಲಾಗಿದೆ.

ನಂದಿನಿ:—ನಳಿನಿ, ನೀನು ಹೇಳುವಂತೆ ಪುರುಷರಲ್ಲಿ ತಮ್ಮ ಪತ್ನಿಗಳೊಡನೆ ಪೂರ್ಣ ಸಂಬಂಧವನ್ನಿಟ್ಟುಕೊಂಡಿದ್ದು, ವೇಶ್ಯಾ ಸಂಸರ್ಗವನ್ನು ಸಹ ಮಾಡುವ ತಮ್ಮ ಪರಿವಾರಕ್ಕೆ ಸೇರಿದ ಹೆಣ್ಣು ಮಕ್ಕಳ ಮೇಲೆ ಕೂಡ ಪಾಪದೃಷ್ಟಿಯನ್ನು ಬೀರುವಂತಹವರು ಇರುವರೆ? ಪುರುಷರಲ್ಲಿ ಇಂತಹ ನೀಚರೂ ಇರುವರೇ? ಇವನ್ನು ತಡೆಯಲಾಗುವುದಿಲ್ಲವೇ?

ನಳಿನಿ:—ಪುರುಷನು ನೀಚನೋ ಅಲ್ಲವೋ ಅದು ಬೇರೆ ಪ್ರಶ್ನೆ. ಇದನ್ನು ತಡೆಯುವುದು ಹೇಗೆಂಬುದೇ ಮಹತ್ವದ ಪ್ರಶ್ನೆ. ನಿರ್ಬಂಧಮಾಡುವುದೇನೋ ಆಗತಕ್ಕ. ಆದರೆ ಮಾಡುವವರಾರು? ಹೇಗೆ? ಸ್ತ್ರೀಯರ ವಿಚಾರದಲ್ಲಿ ಸಹಾನುಭೂತಿಯುಳ್ಳರಾಗಿ ಉದ್ದುದ್ದ ಭಾಷಣಗಳನ್ನು ಮಾಡುವ ಎಷ್ಟೋ ವ್ಯಕ್ತಿಗಳು ಹೊರಗಡೆ ನೋಡುವುದಕ್ಕೆ 'ಮಾರಲಿಸ್ಟರೇ' ಆಗಿರುವರು. ಇದರ ಮನೋವಿಜ್ಞಾನದ ದೃಷ್ಟಿಯೇ ಬೇರೆ. ಈ ಮಾರಲಿಸ್ಟರು—ಆದರ್ಶವಾದಿಗಳು—ಆಗಿರುವುದರಲ್ಲೇ ಅವರ ಅಸ್ತಿತ್ವದ ಅವರ ಪ್ರವೃತ್ತಿಗಳ ಸಾರ್ಥಕತೆ ಇರುವುದು. ಇವರ ಈ ಹೆಸರಿನಿಂದ ಯಾರೂ ಇವರಲ್ಲಿ ಅವಿಶ್ವಾಸವನ್ನಿಡುವುದಿಲ್ಲವಾದುದರಿಂದ ಇವರು ಪರಿವಾರದಲ್ಲಿ ಎಲ್ಲಿಗೆ ಬೇಕಾದರೂ ಸುಲಭವಾಗಿ ಪ್ರವೇಶಿಸುವರು. ಪ್ರವೇಶವಷ್ಟೇ ಅಲ್ಲ, ಆ ಪರಿವಾರದ ಹೆಣ್ಣುಮಕ್ಕಳ, ಸೊಸೆಯರೊಡನೆ ವಿಶೇಷ ಪ್ರೀತಿಯನ್ನು ತೋರಿಸುವಂತೆ ನಟಿಸುವರು. ಗೌರವಸ್ಥರಾದ ಹಿರಿಯರಂತೆ ಅವರ ಶರೀರದಮೇಲೆ ಕೈ ಆಡಿಸಲು ಸಹ ಹಿಂಜರಿಯುವುದಿಲ್ಲ. ಮನೆಯವರಿಗೆ ಈ ಕಪಟ ಸನ್ಯಾಸಿಗಳ ಅಂತರಂಗವು ತಿಳಿಯುವುದೇ ಇಲ್ಲ; ಅಂದಮೇಲೆ ಇವರನ್ನು ತಡೆಯುವುದಾದರೂ ಹೇಗೆ?

ನಂದಿನಿ—ಅಂದರೆ ಇಂತಹ ಘಟನೆಗಳನ್ನು ತಡೆಯಬೇಕಾದರೆ ಮನೆಯ ಗಂಡಸರನ್ನು ಹೊರತು ಕನ್ನೆಯರು ಇತರರನ್ನು ನೋಡಲೇ ಬಾರದಂತಾಯಿತು. ಪರದೆಯೊಳಗಿರಬೇಕಾಗುವುದು!

ನಳಿನಿ—ತಂಗೀ, ಇದು 20ನೆಯ ಶತಮಾನ. ಈಗ ಇಂತಹ ವಿಚಾರವನ್ನು ಕೇಳಿದರೆ ನಗು ಬರುವುದು. ಇಂದಿನ ನಾರೀಜಾಗೃತಿಯನ್ನು ನೋಡಿದ ಮೇಲೆ, ಅವರನ್ನು ಬಂಧನದಲ್ಲಿಡುವುದು ಕೇವಲ ಮೂರ್ಖತನವೆಂದೇ ತಿಳಿಯುವುದಿಲ್ಲವೇ? ಇಂದಿನ ಸ್ತ್ರೀಯರಿಗೂ ಸಹ ಪುರುಷರಂತೆಯೇ ಗಾಳಿ ಬೆಳಕು, ಆಮೋದ ಪ್ರಮೋದಗಳು ಇವುಗಳನ್ನು ಅನುಭವಿಸಬೇಕೆಂಬ ಇಚ್ಛೆಯುಂಟಾಗಿದೆ. ಪರದೆಯಲ್ಲಿರುವುದರಿಂದ ಅವರ ಶಿಕ್ಷಣವು ಮಣ್ಣುಗೂಡುವುದೆಂದು ಅವರು ತಿಳಿದಿರುವರು.

ನಂದಿನಿ—ವಿಚಿತ್ರವನ್ನೇ ಹೇಳಿದೆ. ಹುಡುಗಿಯರನ್ನು ಹೊರಗೆ ಬರದಂತೆ ತಡೆಯುವ ಯಾವ ಉಪಾಯವೂ ಇಲ್ಲವೇ? ಇಂತಹ ಧೂರ್ತ ಮಾರಲಿಸ್ಟರು ಮನೆಗೆ ಪ್ರವೇಶಿಸದಂತೆ ತಡೆಯುವ ಯಾವ ಮಾರ್ಗವೂ ಇಲ್ಲವೇ? ಅಂದ ಮೇಲೆ ಇಂತಹ ದುರ್ಘಟನೆಗಳು ಹೀಗೆ ನಡೆಯುತ್ತಲೇ ಇರಬೇಕೇ?

ನಳಿನಿ—ಜಗತ್ತಿನಲ್ಲಿ ಎಲ್ಲಕ್ಕೂ ಉಪಾಯವಿದ್ದೇ ಇದೆ. ನಾನು ಒಂದು ಉದಾಹರಣೆಯನ್ನು ಕೊಡುವೆನು ಕೇಳು. ನಿನ್ನೆ ಮೊನ್ನೆಯ ಸುದ್ದಿ........ದೇವಾಲಯದ ಬಳಿ ನಡೆದುದು. ನೀವೆಲ್ಲರೂ ತಿಳಿದಿರುವಂತೆ ಅಲ್ಲಿ ಪ್ರತಿದಿನವೂ ಸಂಜೆಯ ವೇಳೆ ಬಹಳ ಮಂದಿ ಸೇರುವರು. ದರ್ಶನದ ಹೆಸರಿನಲ್ಲಿ ಎಷ್ಟೋ ಮಂದಿ ಯುವಕರು ಯುವತಿಯರ ಸೌಂದರ್ಯದ ಬೇಟೆಗಾಗಿ ಬರುವರು. ದಿನ ದಿನವೂ ಇಂತಹ ಎಷ್ಟೋ ಘಟನೆಗಳು ನಡೆಯುತ್ತಲೇ ಇದ್ದರೂ, ಜನರ ಕಣ್ಣು ಮಾತ್ರ ಇನ್ನೂ ತೆರೆದಿರುವುದಿಲ್ಲ. ಆ ದಿನ ಆ ಗುಂಪಿನಲ್ಲಿ ಒಬ್ಬ ಯುವತಿಯಿದ್ದಳು. ದುರ್ದೈವದಿಂದ ಆಕೆಯು ಆಗ ಒಂದೇ ಒಂದು ವಸ್ತ್ರವನ್ನು ಧರಿಸಿದ್ದಳು. ಆರತಿಯಾಗುವಾಗ, ಆಕೆಯು ಬಗ್ಗಿ ಕಣ್ಣು ಮುಚ್ಚಿಕೊಂಡು ಪೂಜೆ ಮಾಡುತ್ತಿದ್ದಾಗ, ಒಬ್ಬ ಪುಂಡನು ಆಕೆಯ ಎದೆಗಳ ಮೇಲೆ ಕೈ ಹಾಕಿಬಿಟ್ಟ. 17-18 ವರ್ಷದ ಆ ಯುವತಿಯು ತಕ್ಷಣ ಹಿಂದಿರುಗಿ ಆ ದುಷ್ಟನ ಕೈಗಳನ್ನು ಹಿಡಿದು ಬಿಟ್ಟಳೆಂದು ಕೇಳಿ ನಿಮಗೆ ಆಶ್ಚರ್ಯವಾಗದಿರದು. ಅಷ್ಟು ದೊಡ್ಡ ಗುಂಪಿನಲ್ಲಿ ಆ ಪುಂಡನ ಮುಖವು ನೋಡತಕ್ಕದ್ದಿತ್ತು. ಒಬ್ಬ ದುರ್ಬಲ-ಅಶಿಕ್ಷಿತ-ಅಬಲೆ ಯುವತಿಯ ಸಾಹಸವು ಅವನ ಎಲ್ಲ ಸಾಹಸವನ್ನೂ ಮಣ್ಣುಪಾಲು ಮಾಡಿತು. ಅವನಿಗೆ ತನ್ನ ಕೈಗಳನ್ನು ಬಿಡಿಸಿಕೊಳ್ಳುವ ಶಕ್ತಿಯೇ ಇರಲಿಲ್ಲ.

ನಂದಿನಿ—ಯಾಕೆ? ಅವನ ಶಕ್ತಿ, ಎಲ್ಲವೂ ಏನಾಯಿತು?

ನಳಿನಿ—ಅದೇ ಮುಖ್ಯವಾದ ವಿಚಾರ. ಇಂತಹವರ ನೈತಿಕ ಸಾಹಸವಳಿದರೆ, ಶಾರೀರಿಕ ಬಲವೂ ಸಹ ಕುಂಠಿತವಾಗಿ ಬಿಡುವುದು.

ನಂದಿನಿ—ನಂತರ ಏನಾಯಿತು?

ನಳಿನಿ—ಆಗುವುದೇನು? ಆ ಹಳ್ಳಿಯ ಹುಡುಗಿಯು ಆ ಸಮಯದಲ್ಲಿ ಹೇಳಿದ ಎರಡು ಶಬ್ದಗಳು ಇಂದಿಗೂ ನನ್ನ ಕಿವಿಯಲ್ಲಿ ಮೊಳಗುತ್ತಿವೆ. ಏನೆಂದರೆ—"ಯಾವದೇ ಸ್ತ್ರೀಯ ಸ್ತನಗಳ ಮೇಲೆ ಕೈ ಇಡುವ ಅಧಿಕಾರವು ಕೇವಲ ಇಬ್ಬರಿಗೆ ಇದೆ. ಪತಿ ಅಥವಾ ಸಂತಾನ. ಇವೆರಡರ ಪೈಕಿ ನೀನು ಯಾವುದನ್ನಾದರೂ ಸ್ವೀಕರಿಸಿದೆಯೆಂದರೆ ಸರಿ ಪತಿಯಾಗುವೆಯಾದರೆ, ಈಗಲೇ ನಾನು ನಿನ್ನ ಕೈ ಹಿಡಿದು ಬರಲು ಸಿದ್ಧಳಿರುವೆನು. ಸಂತಾನವಾಗುವುದಾದರೆ, ಈಗಲೇ ಎಲ್ಲರೆದುರಿನಲ್ಲಿ ನನ್ನನ್ನು 'ತಾಯಿ' ಎಂದು ಕರೆಯಬೇಕು." ಅವನು ನಿರುಪಾಯನಾಗಿ "ಅಮ್ಮಾ ಎಂದು ಹೇಳಿ ಅಲ್ಲಿಂದ ಬಿಡುಗಡೆಯಾದನು.

ನಂದಿನಿ:—ನಿಜವಾಗಿಯೂ ಆಕೆಯು ಬಹಳ ವೀರಳು. ಎಲ್ಲ ಸ್ತ್ರೀಯರೂ ಹೀಗೆ ಆದರೆ, ಇಂತಹ ದುರ್ಘಟನೆಗಳು ಆಗಲಾರವು.

ನಳಿನಿ:—ತಂಗಿ, ಇದಂತೂ ಒಬ್ಬ ಹಳ್ಳಿಯ ಹೆಂಗಸಿನ ಮಾತಾಯಿತು. ಅಂತಹವಳೇ ಇಷ್ಟು ಸಾಹಸವನ್ನು ತೋರಿಸಿದಳೆಂದರೆ ನಮ್ಮ ಶಿಕ್ಷಿತ ಸ್ತ್ರೀಯರು ಈ ದೂರ್ತರನ್ನೆದುರಿಸಲಾರರೆ? ದಿನದಿನವೂ ಪುಂಡರ ಕಾಟವು ಹೆಚ್ಚುತ್ತಿದೆ. 'ಲೀವ್' ಮೊಕದ್ದಮೆಗಳು ನಡೆಯುತ್ತಿವೆ. ಈ ಧೂರ್ತರು ಬಾಯಿಯಲ್ಲಿ ಅಕ್ಕ ತಂಗಿಯರ ಸಂಬಂಧಿಗಳೆಂದು ಹೇಳಿಕೊಳ್ಳುತ್ತ ದೂರದ ಆದರ್ಶವಾದ ಮತ್ತು ನೈತಿಕತೆಯ ಮಾತನ್ನೂ ಆಡುತ್ತ ಬೇಟೆಯಾಡುವರು. ಇವರ ತಮ್ಮ ವ್ಯವಹಾರದಲ್ಲಿ ಗುಟ್ಟಿಲ್ಲದೆ ಸ್ಪಷ್ಟವಾಗಿದ್ದಲ್ಲಿ ನಾವು ಎಚ್ಚರಿಕೆಯಿಂದಿರಬಹುದು. ಆದರೆ ಈ ಮಾರ್ಜಾಲ ಸನ್ಯಾಸಿಗಳು ಆಡುವುದೊಂದು, ಮಾಡುವುದೊಂದು. ಕೆಲವು 'ಎಡ್ವಾನ್ಸ್' ಆದ ಶಿಕ್ಷಿತ ಯುವತಿಯರೇನೋ ಇವರ ಬೆನ್ನುಹತ್ತೇ ಹೋಗುವರೆನ್ನು!

ಆದರೆ ಎಲ್ಲ ಯುವತಿಯರೆ ಮೇಲ್ಕಂಡ ಹಳ್ಳಿ ಹುಡುಗಿಯ ಆದರ್ಶವನ್ನು ಎದುರಿನಲ್ಲಿಟ್ಟುಕೊಂಡು, ಈ ಪುಂಡರಿಗೆ ಸ್ವಯಂ ಬುದ್ಧಿಯನ್ನು ಕಲಿಸಬೇಕು. ಆಗಲೂ ನಡೆಯದಿದ್ದರೆ, ಸಂಕೋಚವನ್ನು ದೂರಮಾಡಿ, ಮನೆಯವರಿಗೆ ತಿಳಿಸಬೇಕು.

ನಂದಿನಿ:—ಒಳ್ಳೆಯ ಉಪಾಯವೇ ಹೌದು. ಆದರೆ ಅಕ್ಕ! ಈ ಪುರುಷರೇ ಸ್ತ್ರೀಯರನ್ನೂ 'ಸೀತಾ ಸಾವಿತ್ರಿ'ಯಂತೆ ಕಾಣುವ ಕಲ್ಪನೆಯನ್ನು ಕಂಡು ನಗಬೇಕೋ, ಅಳಬೇಕೋ?

ನಳಿನಿ:—ಅಷ್ಟೇ ಅಲ್ಲ, ಕೇಳು. ಇವರಿಗೆ ತಮ್ಮ ಕಾರ್ಯದಲ್ಲಿ ಸಫಲತೆಯಾಗದಿದ್ದಲ್ಲಿ, ಅವರು ಇತರರನ್ನೂ ಕರೆದುಕೊಂಡು ಬಂದು ವಿಧವಿಧವಾದ ಮಾತುಗಳನ್ನಾಡುವರು. ಹೆಸರಿಲ್ಲದ ಪತ್ರಗಳನ್ನು ಮನೆಯವರಿಗೆ ಬರೆಯುವರು. ಮನಸ್ಸಿಗೆ ಬಂದುದನ್ನೂ ಬಗುಳುವರು ಮಾಡುವರು. ನಿರ್ಲಜ್ಜೆಯ ಪೋಷಾಕನ್ನು ಧರಿಸಿದ ಈ ಹೇಡಿಗಳು, ತಮ್ಮ ಕಾರ್ಯಸಾಧನೆಯ ಬಗ್ಗೆ ಮಾಡಬಾರದ್ದನ್ನು ಮಾಡುವರು. ಅವರ ಉದ್ಯೋಗವೇ ಇದೆಂದರೂ ಸರಿಯೆ. ಇವರಿಂದ ಉಳಿದು, ಪಾರಾಗಲು, ಯುವತಿಯರು ಸ್ವಯಂ ಸಚೇತರಾಗಿರಬೇಕು. ಅವರು ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಂಡಲ್ಲಿ, ಇಂತಹ ದುರ್ಘಟನೆಗಳು ಆಗುವುದೂ ಇಲ್ಲ; ಅವುಗಳ ತೀರ್ಮಾನಕ್ಕೆ ನ್ಯಾಯಾಲಯಕ್ಕೆ ಹೋಗಬೇಕಾದುದೂ ಇರುವುದಿಲ್ಲ. (S. L. S)

ನಮ್ಮ ಉಡುಪಿ

ಹೊಸ ಮಾದರಿಯ ಸಚಿತ್ರ ಪುಸ್ತಕ

ಎಲ್ಲೆಲ್ಲೂ ಪ್ರಸಿದ್ಧಿ ಪಡೆದಿರುವ ಉಡುಪಿಯ ಚರಿತ್ರೆಯನ್ನು ತಿಳಿಯಬೇಕೇ? ಹಾಗಿದ್ದರೆ ಶ್ರೀ ಕೊರಡ್ಕಲ್ಲರು ಹೊಸ ದೃಷ್ಟಿಯಿಂದ ಬರೆದ 'ನಮ್ಮ ಉಡುಪಿ'ಯನ್ನು ಓದಿರಿ.

ಉಡುಪಿ ಕ್ಷೇತ್ರಕ್ಕೆ ಯಾತ್ರಾ ದೃಷ್ಟಿಯಿಂದಾಗಲೀ, ಐತಿಹಾಸಿಕ ಮಹತ್ವದ ದೃಷ್ಟಿಯಿಂದಾಗಲೀ, ಸಂದರ್ಶನಾರ್ಥವಾಗಿ ಬಂದವರೂ, ಬರುವವರೂ, ನೋಡಲಾಗಿ ತಿಳಿದುಕೊಳ್ಳಬೇಕಾದುದು ಈ ಕ್ಷೇತ್ರದ ಹಿಂದಿನ ಮತ್ತು ಇಂದಿನ ಸಚಿತ್ರ ವಿವರ, ಸಮಾಜ ಸೇವಕರಿಗೆ ಬೇಕಾದುದು ವೈಯಕ್ತಿಕ ಜೀವಜ್ಯೋತಿಗಳ ಜೀವನ ಚರಿತ್ರೆ, ಅವೆಲ್ಲವೂ ಈ ಪುಸ್ತಕದಲ್ಲಿದೆ.

ಬೆಲೆ: 0-5-0, ಟ. ಖರ್ಚು 0-1-0

(ಫೆಬ್ರವರಿ ಅಂತ್ಯದೊಳಗೆ 0-5-0 ಸ್ಟಾಂಪು ಕಳುಹಿಸುವವರಿಗೆ ಟಪ್ಪಾಲ ಖರ್ಚು ಮಾಫಿ.)

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಈ ಕೆಳಗಿನ ಪ್ರಕಾಶಕರಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ,

ಚರ್ಚ್‌ರೋಡು, ಉಡುಪಿ

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	Rs	1,00,000
Subscribed & Paid up Capital	....	Rs	31,340
Reserves & other Funds	...	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK

OF SUPPLY AGENCY LIMITED.

ಪ್ರಕಟಣೆ

ಸಾಹಿತ್ಯ ಪರಿಷತ್ತಿನ 'ಕನ್ನಡ ಜಾಣ' ಪ್ರೌಢ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತರಬೇತಿ ಮಾಡ ಬೇಕೆಂದು ಒಂದು ಶಿಕ್ಷಣ ಕೇಂದ್ರವನ್ನು ಮಂಗಳೂರಿನಲ್ಲಿ ತೆರೆಯುವರೆ ದಕ್ಷಿಣ ಕರ್ನಾಟಕ ಪ್ರಾಂತಸಮಿತಿಯು ನಿರ್ಣಯಿಸಿದೆ. ಶ್ರೀ. ಮುಳಿಯ ತಿಮ್ಮಪ್ಪಯ್ಯ, ಶ್ರೀ. ಕೆ. ರಂಗನಾಥಭಟ್ಟರು, ಶ್ರೀ. ನಾರಾಯಣ ಭಟ್ಟ, ಪ್ರೊ. ಉ. ಮಂಗೇಶರಾವ್ ಮೊದಲಾದ ಮಹನೀಯರು ಗೌರವ ಶಿಕ್ಷಕರಾಗಲು ಒಪ್ಪಿರುವರು. ಸಾಕಷ್ಟು ವಿದ್ಯಾರ್ಥಿಗಳು ದೊರೆತಲ್ಲಿ, ಮುಂದಕ್ಕಾಗಿ ಸಾಹಿತ್ಯಶಿಕ್ಷಣದ ವ್ಯವಸ್ಥೆ ಮಾಡಲಾಗುವುದು. ಆಸಕ್ತರಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

31-1-'40. } ಶಿವರಾಮ ಕಾರಂತ, ಪುತ್ತೂರು ದ. ಕ.

(೫ನೇ ಪುಟದಿಂದ ಮುಂದರಿಸಿದ್ದು)

ಹೆಚ್ಚಿನ ಅಥವಾ ಸಾಮಾನ್ಯ ಕಾಯಿಲೆಗಳಿಗೆ ಗುರಿಯಾಗುತ್ತಾರೆ. ನಮ್ಮ ದೇಶದಲ್ಲಿ ಗಂಡಸರಿಗಿಂತ ಸ್ತ್ರೀಯರ ಸಂಖ್ಯೆ ಕಡಿಮೆಯಾಗುತ್ತ ಹೋಗುತ್ತಿದ್ದು ಈಗ ಇದು 11 ಮಿಲಿಯಕ್ಕೆ ಮುಟ್ಟಿರುತ್ತದೆ. 1931ರಲ್ಲಿ 1000 ಗಂಡಸರ ಸಂಖ್ಯೆಗೆ 940 ಹೆಂಗಸರ ಸಂಖ್ಯೆ ಇತ್ತು. ಈ ರೀತಿ ಹಿಂದುಸ್ಥಾನದಲ್ಲಿ ಸ್ತ್ರೀಯರ ಸಂಖ್ಯೆ ಇಷ್ಟು ಕಡಿಮೆಯಾಗಲು ಪ್ರಸೂತಮರಣಗಳು ಒಂದು ಮುಖ್ಯ ಕಾರಣವೆನ್ನಬಹುದು. ಮುಖ್ಯವಾಗಿ ಇಂಥ ಮರಣಗಳು 15ರಿಂದ 30 ವರ್ಷ ಪ್ರಾಯದ ಸ್ತ್ರೀಯರಲ್ಲಿ ಸಂಭವಿಸುತ್ತಿವೆ.

ಶಿಶು ಮರಣ ಸಂಖ್ಯೆಯು ಇತರ ಹೆಚ್ಚಿನ ದೇಶಗಳಿಗಿಂತ ನಮ್ಮ ದೇಶದಲ್ಲಿ 2 ಯಾ 3 ಪಾಲು ಹೆಚ್ಚಾಗಿರುತ್ತದೆ. ಸರಾಸರಿ ಲೆಕ್ಕದಂತೆ 1000ಕ್ಕೆ ನಮ್ಮಲ್ಲಿ 162 ಮರಣಗಳು, ಇಂಗ್ಲಾಂಡಿನಲ್ಲಿ 57 ಮಾತ್ರ. ನಮ್ಮಲ್ಲಿ ಹುಟ್ಟುವ ಮಕ್ಕಳಲ್ಲಿ ಎಷ್ಟೋ ಮಂದಿ ಒಂದು ವರ್ಷ ಪ್ರಾಯದೊಳಗೆ ತೀರಿಹೋಗುತ್ತವೆ. ಈ ಪೈಕಿ ಅರೆವಾಸಿ ಮೊದಲನೆ ತಿಂಗಳಲ್ಲೆ ಸಾಯುತ್ತವೆ. ತಾಯಂದಿರ ಮತ್ತು ಮಕ್ಕಳ ಈ ವಿಪರೀತ ಮರಣ ಸಂಖ್ಯೆಯು ನಮ್ಮ ದೇಶದಲ್ಲಿ ಮಾತೃತ್ವ ಮತ್ತು ಶಿಶುಸಂಗೋಪನ ರಕ್ಷಣಾ ಕೆಲಸದ ಮಹತ್ವವನ್ನು ತೋರಿಸುತ್ತದೆ.

ಹಿಂದುಸ್ಥಾನದ ಪ್ರಶ್ನೆ ಬೇರೆ

ಈ ದೇಶದಲ್ಲಿ ಪ್ರತಿವರ್ಷ 12 ಯಾ 13 ಮಿಲಿಯ ಮಕ್ಕಳು ಹುಟ್ಟುತ್ತಾರೆ ಮತ್ತು ಇವರ ಪೈಕಿ 8ರಿಂದ 9 ಮಿಲಿಯದ ತನಕ ಮರಣ ಹೊಂದಿ 3 ರಿಂದ 4 ಮಿಲಿಯ ತನಕ ಉಳಿಯುತ್ತವೆ. ಪ್ರತಿ ವರ್ಷ ನಮ್ಮ ಜನಸಂಖ್ಯೆ ಶೇಕಡಾ 1ರಂತೆ ಹೆಚ್ಚುತ್ತಿದೆ. 1941ರಲ್ಲಿ ನಮ್ಮ ಜನಸಂಖ್ಯೆ 400 ಮಿಲಿಯಕ್ಕೆ ಬರುತ್ತದೆಂದು ಎಣಿಸುತ್ತಾರೆ. ಈ ಬಡ ದೇಶದಲ್ಲಿ ಈ ರೀತಿ ಜನಸಂಖ್ಯೆ ಏರುವುದು ಹಿತಕರವಲ್ಲ. ಇದರಿಂದ ಇನ್ನು ಹೆಚ್ಚಿನ ಉಪವಾಸ ಮತ್ತು ದುಃಖಕ್ಕೆ ಕಾರಣವಾಗುತ್ತದೆ. ಮಾತ್ರವಲ್ಲ ಈ ಸಂಖ್ಯೆಯಾದರೂ ಭಯಂಕರ ಮಾನವ ದುಃಖದೊಡನೆ ಬೆಳೆಯುತ್ತಿದೆ. ಅರೆವಾಸಿಗಿಂತ ಹೆಚ್ಚು ಮಕ್ಕಳು 10ನೇ ವರ್ಷದೊಳಗೆ ತೀರಿಹೋಗುತ್ತವೆನ್ನುವಾಗ ಇಷ್ಟೊಂದು ಮಕ್ಕಳು ಹುಟ್ಟಿ ಪ್ರಯೋಜನವೇನು? ಒಂದು ಕುಟುಂಬದಲ್ಲಿ ಎಷ್ಟು ಮಕ್ಕಳು ಹುಟ್ಟಬೇಕೆಂಬುದು ದೇವರು ಮಾಡುವುದಾಗಿರದೆ ನಾವೇ ನಿರ್ಣಯಿಸುವ ವಿಷಯವೆಂದು ತಿಳಿದುಕೊಳ್ಳಬೇಕು. ಫ್ರಾನ್ಸು ಜರ್ಮನಿ ಮತ್ತು ಇಟೆಲಿಗಳಲ್ಲಿ ಜನನ ಸಂಖ್ಯೆ ಬೀಳುತ್ತಿರುವುದನ್ನು ತಡೆಗಟ್ಟಲು ಮಾಡುವ ಯತ್ನಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿಲ್ಲ. ಎರಡು ಮಕ್ಕಳ ಕುಟುಂಬವು ಪಾಶ್ಚಾತ್ಯರಿಗೆ ಮಾದರಿಯಾಗುತ್ತಲಿದೆ. ನೂರು ಮಕ್ಕಳಿಗಿಂತ ಹೆಚ್ಚಿನೆ ಇರುವುದು ತಾಯಿ ತಂದೆಯರಿಗೆ ಶ್ರೇಯಸ್ಕರವಲ್ಲವೆಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಜನನ ಸಂಖ್ಯೆ ಕಡಿಮೆಯಾಗಿ ಜೀವನ ಪ್ರಮಾಣವು (standard of life) ಹೆಚ್ಚಿ ಇತರ ದೇಶಗಳಲ್ಲಿ ಮರಣ ಸಂಖ್ಯೆ ಕಡಿಮೆಯಾಗುತ್ತಿದೆ. ಹಿಂದುಸ್ಥಾನದಲ್ಲಿ ಜನಸಂಖ್ಯೆಯನ್ನು ತಿಳುವಳಿಕೆಯಿಂದ ಮಿತದಲ್ಲಿರಿಸುವುದು ಒಂದು ಅತ್ಯಗತ್ಯದ ವಿಷಯವಾಗುತ್ತಿದೆ. ಜೀವನ ಪ್ರಮಾಣವು ಬಹಳ ಕೆಳಗಿದ್ದು ಜನಸಂಖ್ಯೆಯು ಇನ್ನೂ ಹೆಚ್ಚುತ್ತಿರುವುದು ಈ ದೇಶದಲ್ಲಿ ಬಹಳ ಅತೃಪ್ತಿಕರವಾದ ಎರಡು ಸಂಗತಿಗಳೆಂದು ತಿಳಿದುಕೊಳ್ಳಬೇಕು.

ಮಿತವಾದ ಕುಟುಂಬವು ಆರ್ಥಿಕ ಹಾಗೂ ಆರೋಗ್ಯದ ಕಾರಣಗಳಿಂದಾಗಿ ಅಪೇಕ್ಷಣೀಯವಿರುತ್ತದೆ. ಅತೀ ಹೆಚ್ಚಿನ ಮಕ್ಕಳಿಂದಾಗಿ ಕುಟುಂಬದ ಆರ್ಥಿಕ ಸ್ಥಿತಿಯೂ ತಾಯಿಯ ಆರೋಗ್ಯವೂ ಹಾಳಾಗುತ್ತಿವೆ. ಮಕ್ಕಳ ಸಂಖ್ಯೆ ಕಡಿಮೆ ಇದ್ದರೆ ಹೆತ್ತವರು ಇವರಿಗೆ ಹೆಚ್ಚಿನ ಜಾಗರೂಕತೆ, ಸೌಕರ್ಯ ಹಾಗೂ ಹೆಚ್ಚಿನ ವಿದ್ಯಾಭ್ಯಾಸ ಕೊಡಲು ಅನುಕೂಲವಾಗುತ್ತದೆ. ಹೆಚ್ಚಿನ ಜನನ ಸಂಖ್ಯೆಗೂ ಹೆಚ್ಚಿನ ಶಿಶು ಮರಣ ಸಂಖ್ಯೆಗೂ ಸಮೀಪದ ಸಂಬಂಧವಿರುತ್ತದೆ. 15 ವರ್ಷ ಪ್ರಾಯಕ್ಕೆ ಮೊದಲಿನ ಹುಡುಗಿಯರ ವಿವಾಹ ಸಂಖ್ಯೆ ಹೆಚ್ಚಿದಂತೆಯೂ ಶಿಶು ಮರಣಸಂಖ್ಯೆ ಹೆಚ್ಚುತ್ತಿದೆ.

ತಾಯಂದಿರ ಹಾಗೂ ಶಿಶುಗಳ ಮರಣ ಸಂಖ್ಯೆ ಹೆಚ್ಚಿಗಿರಲು ಕಾರಣಗಳು

ತಾಯಂದಿರ ಮರಣ ಸಂಖ್ಯೆ ಹೆಚ್ಚಲು ಅನೇಕ ಹಾಗೂ ಆಗಾಗ ಇವರು ಮಕ್ಕಳನ್ನು ಹೆರುತ್ತಿರುವುದು ಒಂದು ಮುಖ್ಯ ಕಾರಣವೆನ್ನಬಹುದು. ಒಮ್ಮೆ ಹೆರುವುದಕ್ಕೂ ಇನ್ನೊಮ್ಮೆ ಹೆರುವುದಕ್ಕೂ ಮಧ್ಯೆ 3 ವರ್ಷಗಳ ಅಂತರವಾದರೂ ಇರಬೇಕು. ಚಿಕ್ಕ ಪ್ರಾಯದಲ್ಲಿ ಮದುವೆಮಾಡುವುದರಿಂದ ಮಕ್ಕಳ ಸಂಖ್ಯೆ ಹೆಚ್ಚುತ್ತದೆ. ಯಾಕೆಂದರೆ 15ರಿಂದ 20ರ ತನಕದ ಪ್ರಾಯದಲ್ಲಿ ಮಕ್ಕಳಾಗುವುದು ಹೆಚ್ಚು. ಅನಂತರ 20ರಿಂದ 30ರ ತನಕದ ಪ್ರಾಯವು ಮಕ್ಕಳಾಗಲು ಅನುಕೂಲವ ಪ್ರಾಯವೆನ್ನಬಹುದು. 30ರ ನಂತರ ಮಕ್ಕಳಾಗುವುದು ಕಡಮೆಯಾಗುತ್ತಾ ಹೋಗುವುದು. ಆಯರ್ಲೆಂಡ್ ದೇಶದಲ್ಲಿ ಹೆಂಗಸರು 30ನೇ ಪ್ರಾಯದ ತನಕ ಮದುವೆ ಮಾಡಿಕೊಳ್ಳದಿರಲು ಇದೊಂದು ಕಾರಣವಿರುತ್ತದೆ. ನಮ್ಮ ಸ್ತ್ರೀಯರಲ್ಲಿ ಶೇಕಡಾ 50ಕ್ಕಿಂತ ಹೆಚ್ಚು 15ನೇ ಪ್ರಾಯದ ಒಳಗೆ ಮದುವೆಯಾಗುತ್ತಾರೆ. ಈ ರೀತಿ ಸರಿ ಬೆಳವಣಿಗೆ ಇಲ್ಲದ ತಾಯಂದಿರಿಂದ ಹುಟ್ಟುವ ಮಕ್ಕಳಿಂದ ಆರೋಗ್ಯಕರ ಮತ್ತು ದೃಢಕಾಯರಾದವರ ಒಂದು ಜನಾಂಗವನ್ನು ಬೆಳೆಸುವುದು ಅಸಾಧ್ಯ. ಇಂಗ್ಲಾಂಡಿನಲ್ಲಿ ಸ್ತ್ರೀಯರು ವಿವಾಹವಾಗುವ ಸರಾಸರಿ ಪ್ರಾಯ 26.

ಬಡತನ ಮತ್ತು ಪೌಷ್ಟಿಕ ಆಹಾರದ ಅಭಾವ

ತಾಯಂದಿರ ಹಾಗೂ ಮಕ್ಕಳ ಮರಣ ಸಂಖ್ಯೆ ಈ ದೇಶದಲ್ಲಿ ಇಷ್ಟು ಹೆಚ್ಚಿಗಿರಲು ಒಂದು ಮುಖ್ಯ ಕಾರಣವೆಂದರೆ ನಮ್ಮಲ್ಲಿಯ ಬಡತನ ಮತ್ತು ಸಾಕಷ್ಟು ಒಳ್ಳೆಯ ಆಹಾರದ ಅಭಾವವೆನ್ನಬಹುದು. ಚಿಕ್ಕ ಮಕ್ಕಳಿಗೆ ಎಳೆಯ ಪ್ರಾಯದಲ್ಲಿ ದೇಹದ ಹಾಗೂ ಮಾನಸಿಕ ಬೆಳವಣಿಗೆಗೆ ಯೋಗ್ಯ ಆಹಾರವು ಅತೀ ಅಗತ್ಯ. ಚಿಕ್ಕ ಪ್ರಾಯದ ಹುಡುಗಿಗೆ ಸರಿಯಾದ ಆಹಾರವಿಲ್ಲದೆ ಗ್ರಹಣಿರೋಗ (rickets) ಮತ್ತು ಕಟಿ ಎಲುಬಿನ ಊನಕ್ಕೆ pelvic deformity) ಕಾರಣವಾಗಿ ಮುಂದೆ ಹೆರಿಗೆಯ ಆಪತ್ತಿಗೆ ಗುರಿಯಾಗಿ ತಾಯಿ ಮಗುವಿನ ಮರಣಕ್ಕೆ ಕಾರಣವಾಗುವುದು. ಗರ್ಭಿಣಿಯರಿಗೆ ಹಾಗೂ ಮೊಲೆ ಉಣ್ಣಿಸುವ ತಾಯಿಗೆ ಸರಿಯಾದ ಪೌಷ್ಟಿಕ ಆಹಾರವು ಅತೀ ಅಗತ್ಯವಿರುತ್ತದೆ. ಹಾಲು ಪ್ರಕೃತಿಯು ಒದಗಿಸುವ ಅತ್ಯುತ್ತಮ ಆಹಾರ. ಅದ್ದರಿಂದಲೇ ಇಂಗ್ಲಾಂಡು ಮೊದಲಾದ ಇತರ ಹಲವು ದೇಶಗಳಲ್ಲಿ ತಾಯಂದಿರಿಗೂ ಮಕ್ಕಳಿಗೂ ರಕ್ಷಣಾಕೇಂದ್ರಗಳಲ್ಲಿ ಹಾಗೂ ಶಾಲಾಮಕ್ಕಳಿಗೆ ಹಾಲನ್ನು ಧರ್ಮಾರ್ಥವಾಗಿ ಇಲ್ಲವೆ ಸ್ವಲ್ಪ ಕ್ರಯಕ್ಕೆ ಒದಗಿಸುವ ಏರ್ಪಾಡು ಮಾಡುತ್ತಾರೆ. 6 ತಿಂಗಳ ಪ್ರಾಯದ ತನಕ ಮಕ್ಕಳಿಗೆ ಅತ್ಯುತ್ತಮವಾದ ಒಂದೇ ಆಹಾರವೆಂದರೆ ತಾಯಿಯ ಮೊಲೆ ಹಾಲು. ಕೃತಕ ಆಹಾರ ಅಥವಾ ದನದ ಹಾಲನ್ನು ಕೂಡಾ ಈ ಪ್ರಾಯದಲ್ಲಿ ಕೊಡಬಾರದು. ಮೊಲೆ ಹಾಲಿನಿಂದ ಸಾಕುವ ಮಕ್ಕಳಿಗಿಂತ ಕೃತಕ ಆಹಾರದಿಂದ ಸಾಕುವ ಮಕ್ಕಳ ಮರಣ ಸಂಖ್ಯೆ ಹೆಚ್ಚಿರುತ್ತದೆ. ಆಹಾರದ ಪ್ರಶ್ನೆಯು ಈ ಬಡ ದೇಶದಲ್ಲಿ ಅತೀ ಮಹತ್ವದ ಪ್ರಶ್ನೆ ಇದ್ದಂತೆ ಅದನ್ನು ಯೋಗ್ಯ ರೀತಿಯಲ್ಲಿ ನಿವಾರಿಸುವುದೂ ಇಲ್ಲಿ ಅತೀ ಕಷ್ಟದಸಂಗತಿಯಾಗಿದೆ.

15-1-1940.

ಜನರು
ಯಥಾರ್ಥವಾಗಿಯೂ
ಒಪ್ಪಿಕೊಳ್ಳುತ್ತಾರೆ:—
ಸ್ವಸ್ತಿಕ
ಪರ್ಫ್ಯೂಮ್ಡ್ ಕೆಸ್ಟರಾಯಿಲ್
ಗುಣದಲ್ಲೂ ಪರಿಮಳದಲ್ಲೂ ಸ್ವದೇಶ ಅಥವಾ ವಿದೇಶದ ಯಾವ ಕೂದಲೆಣ್ಣೆಯನ್ನಾದರೂ ಸೋಲಿಸುವ ಅತ್ಯುತ್ತಮವಾದ ಹೇರ್ ಆಯಿಲ್ ಎಂದು.
ಎಲ್ಲೆಲ್ಲೂ ವಿಕ್ರಯಿಸಲ್ಪಡುತ್ತದೆ.
83

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೋನಿಕ್ ಪಿಲ್ಸ್"

ಇವರ ಸೇವನೆಯಿಂದ ನವಚೇತನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4
Sorath Pharmacy,
Null Bazzar, Duncan Road,
BOMBAY 4.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜೈನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಆಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಕ್ರಾನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನು ಕೈಕೊಳ್ಳಲಾಗುವುದು.

ಅಮೃತಕಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್, ಡಿಜೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

ಈ ವಾರದ ಭವಿಷ್ಯ

ತಾರೀಖು 25-1-1940ರಿಂದ ||| 1-2-1940ರ ವರೆಗೆ

ಮೇಷ—ಇತ್ತೀಚೆಗೆ ನಿಮ್ಮ ಕಾಪತ್ರ್ಯಗಳು ಬಹ್ವಂಶ ನಿವೃತ್ತಿಯಾಗಿ ಕಾರ್ಯದಲ್ಲಿ ಆಸಕ್ತಿ, ತನ್ಮೂಲಕ ಮನಸ್ಸಿಗೆ ತೃಪ್ತಿಯೂ ದೊರೆಯುತ್ತಲಿದೆ ನೌಕರಿ ಜನರಿಗೂ ವ್ಯಾಪಾರೀ ವರ್ಗದವರಿಗೂ ಶ್ರಮಕ್ಕೆ ತಕ್ಕುದಾದ ಫಲವು ಸಿಗುವುದರಿಂದ ಸ್ವವೃತ್ತಿಯಲ್ಲಿ ವಿಶೇಷತಃ ಮುಂದುವರಿಯಲಿದ್ದವರು ಪ್ರತಿಸ್ಪರ್ಧಿಗಳಿಂದ ಪೀಡೆ ಇರುವುದಾದರೂ ರಾಜಕೀಯ ಕಾರ್ಯಗಳಲ್ಲಿ ವಿಜಯಗಳುಗುವಿರಿ ಶರೀರಾಲಸ್ಯ ಪ್ರಸಂಗಗಳು ಸಂಭವಿಸುವುದಾದರೂ ಆರ್ಥಿಕ ಸಂಪತ್ತು ಸಾಕಷ್ಟಿರುವುದರಿಂದ ಹೆಚ್ಚಿನ ಪೀಡೆಯಾಗದು ಸ್ವಜನ ವಿಯೋಗ ಮತ್ತು ಕಲಹಗಳಿಂದ ಮಾನಸಿಕ ಚಿಂತೆಯುಂಟಾಗುವುದಾದರೂ ವಾರಾಂತ್ಯದ ಐದು ದಿನಗಳೂ ಸುಖಕರವಾಗಿ ಪರಿಣಮಿಸುವವು

ವೃಷಭ—ಆತ್ಮೀಯ ಬುದ್ಧಿಕೌಶಲದಿಂದಲೂ ಪರಾಕ್ರಮದಿಂದಲೂ ಜನಸಾಮಾನ್ಯರಲ್ಲಿ ಗಣನೀಯ ಸ್ಥಾನವನ್ನು ಪಡೆಯುವಿರಿ ವಿಜ್ಞಾನಿಗಳೂ ಪಂಡಿತರೂ ಸ್ವಕಾರ್ಯದಲ್ಲಿ ಜಯಶೀಲರಾಗಿ ಕೀರ್ತಿ ಪಡೆವರು. ಕೃಷೀವಲರಿಗೂ ಜಮೀನ್ದಾರರಿಗೂ ಬಹು ಮುಖದಿಂದ ಧನಾಗಮವಾಗುವುದು. ಆದರೂ ಕಾಸೊಂದೂ ಉಳಿಯಲಾರದು ಧನ ನಿಮಿತ್ತ ಕೆಲವರಲ್ಲಿ ವಿವಾದಕ್ಕೆಡೆಯಾಗುವುದು ಕೆಲವೊಮ್ಮೆ ಸಂಘಟಿಸತಕ್ಕ ದ ಘಟನೆಯಿಂದ "ಮಾತು ಬಲ್ಲವನಿಗೆ ಜಗಳವಿಲ್ಲ"ಎಂಬ ಗಾದೆಯೇ ಸುಳ್ಳೆಂದು ತೋರೀತು ವ್ಯಾಪಾರದಲ್ಲಿ ಉನ್ನತಿಯಾಗದು ನೌಕರಿಯಲ್ಲಿ ಸ ಮವಸದು ಅಂತೂ ತಾ 2೧ರಿಂದ 28ರ ವರೆಗೆ ಬಲು ಜಾಗರೂಕತೆಯಿಂದ ದಿನಗಳೆಯಬೇಕಾದೀತು

ಮಿಥುನ—ದೇಹಾಲಸ್ಯ ಮತ್ತು ಗೃಹಕಲಹ ನಿಮಿತ್ತವಾಗಿ ಮನಶ್ಶಾಂತಿಗೆ ಭಂಗವೂ ವೇದನೆಯೂ ಉಂಟಾದೀತು. ಆದರೂ ವಿದ್ಯಾಬುದ್ಧಿಗಳಲ್ಲಿ ಸಾಕಷ್ಟು ಮುಂದುವರಿವ ನಿಮಗೆ ವ್ಯಾಪಾರ ವಹಿವಾಟುಗಳಲ್ಲೂ ಕೈಗಾರಿಕೆ ನೌಕರಿ, ಮೊದಲಾದ ಉದ್ಯಮಗಳಲ್ಲೂ ಕರ್ಮಾಧಿಕವಾಗಿ ಫಲ ಪ್ರಾಪ್ತಿಯಾಗುವ ಯೋಗವಿದೆ ಸೇವಾವೃತ್ತಿಯಿಂದ ಜೀವಿಸತಕ್ಕವರು ಅಧಿಕಾರಿಗಳ ಅನುಗ್ರಹಕ್ಕೆ ಪಾತ್ರರಾಗುವರು ಕೋರ್ಟು ನಗ್ಗೆರೆ ರಾಜಕೀಯ ಭಾಗದಲ್ಲಿ ತಾತ್ಕಾಲಿಕ್ಕೆ ವಿರೋಧವೇ ಹೆಚ್ಚುವುದು ಆರ್ಥಿಕ ವಿಚಾರದಲ್ಲಿ ತುಂಬಾ ಸುಧಾರಣೆ ಹೊಂದುವಿರಿ ವನಿತಾ ಸುಖವು ತೃಪ್ತಿಕರವಿಹದು ಆದರೂ ತಾ 26. 27 ಈ ದಿನಗಳನ್ನು ಬಿಟ್ಟು ಇತರ ದಿನಗಳಲ್ಲಿ ಪ್ರಿಯಾಡ ಆಪ್ತರಲ್ಲಿ ಕಲಹ ಉದರ ರೋಗಗಳು ಕಂಡು ಬರುವವು

ಕರ್ಕಾಟಕ—ಸುರಾಸುರ ಮಂತ್ರಿದ್ವಯರ ಅನುಗ್ರಹವು ನಿಮ್ಮ ಮೇಲಿರುವುದರಿಂದ ಸಾರ್ವಜನಿಕರಿಗೆ ಉಪಯುಕ್ತವಾದ ಕಾರ್ಯಗಳಲ್ಲಿ ಸ್ವಾಂದಿಕ್ಕ ಪ್ರದರ್ಶನದಿಂದ ಜನಮನ್ನಣೆಗೆ ಪಾತ್ರರಾಗುವಿರಿ ದವಾಖಾನೆಗಳು ಅನಾಯಾಸದಿಂದ ದೊರೆವವು, ವ್ಯಾಪಾರಿಗಳಿಗೂ ಸಂಗೀತ ಪ್ರವೀಣರಿಗೂ ನಟನಟಿಯರಿಗೂ ಧನ ಲಾಭವೂ ಇಷ್ಟ ಸಿದ್ಧಿಯೂ ಲಭಿಸುವುದು, ಆದರೆ ದರ್ಜನ ಸಂಸರ್ಗದಿಂದ ಜನರ ತಾತ್ಸಾರ ಮತ್ತು ಸಂದೇಹಗಳಿಗೆ ಗುರಿಯಾಗುವ ಸಂಭವವಿದೆ, ವಿದ್ಯೋಪಜೀವಿಗಳಿಗೆ ವಿರೋಧಿಗಳಿಂದ ತೊಂದರೆಗಳು ಸಂಭವಿಸ ಬಹುದು ಭೋಜನಸಂಬಂಧವಾಗಿಯೂ ಅನಾರೋಗ್ಯ ನಿಮಿತ್ತವೂ ಕೆಲವಂಶ ಹಣ ವ್ಯಯವಾಗುವುದು ತಾ 25 28 29 ಈ ದಿನಗಳಲ್ಲಿ ಕಾರ್ಯಸಿದ್ಧಿಯು, ಗೃಹಸುಖಗಳು ದೊರೆಯುವವು

ಸಿಂಹ—ಕೆಲವೊಮ್ಮೆ ಉಪಾಯದಿಂದಲೂ ಇನ್ನು ಕೆಲವೊಮ್ಮೆ ಧೈರ್ಯ ಶೌರ್ಯಗಳಿಂದಲೂ ಕಾರ್ಯಗಳಿಗೆ ವಿಘ್ನವನ್ನುಂಟುಮಾಡತಕ್ಕ ಇದಿರಾಳಿಗಳನ್ನು ಜಯಿಸಿ ಸ್ವಕಾರ್ಯವನ್ನು ಸಾಧಿಸಿಕೊಳ್ಳಲು ನೀವು ಸಮರ್ಥರಿರುವಿರಾದರೂ ಸ್ತ್ರೀಯರಿಂದ ಅವಮಾನ ಶತ್ರು ಜನರಿಂದ ಧನಹಾನಿಗಳಿಗೆ ನಾಶಿಯು ಅನಿವಾರ್ಯವಾಗಿರುವುದ ದೈಹಿಕ ಸುಖವು ನಿಮಗೆ ಬಹಳ ದುರ್ಲಭವಾಗುವುದ, ಆಕಸ್ಮಿಕ ಪ್ರವಾಸಗಳುಂಟಾಗುವುದಾದರೂ ಪುಣ್ಯಕ್ಷೇತ್ರಗಳ ದರ್ಶನ ಲಾಭವಾಗುವುದು, ರಾಜಕೀಯ ಭಾಗದಲ್ಲಿ ಇಷ್ಟವು ಸಿದ್ಧಿಸುವುದು ಉಪಾಧ್ಯಾಯ ವಕೀಲ ಮುಂತಾದ ವಿದ್ಯಾಜೀವಿಗಳು ಸುಖದಿಂದ ದಿನಗಳೆವರಾದರೂ ವ್ಯಾಪಾರಿಗಳು ಕಷ್ಟಜೀವಿಗಳು ನಷ್ಟದಲ್ಲಿ ಸಿಲುಕುವರು ತಾ 26 27 30 31 1 ಈ ದಿನಗಳುತ್ತಮವಿವೆ

ಕನ್ಯಾ—"ಅಶೋಕ ದರಿದ್ರರಾದ ಬಲವಂತರೋ ಧಿಕಾ ತನಗಿಂತ ಅಧಿಕ ಬಲಶಾಲಿಗಳವರಲ್ಲಿ ಹಗೆಯನ್ನು ಕಟ್ಟಿಕೊಳ್ಳುವುದು ಸ್ವನಾಶಕ್ಕೇ ಕಾರಣವಾಗುವುದು ಆದುದರಿಂದಲೇ ನೀವು ಈಗೀಗ ಬಲು ಜಾಗರೂಕರಾಗಿರಬೇಕಾಗಿದೆ, ಸಕಲ ಗೃಹ ಮಂಡಲವೇ ನಿಮಗೆ ವಿರೋಧವಾಗಿ ನಿಂತಿರವುದಾದರೂ ಗುರುವು ಮಾತ್ರ ಶುಭನಾಗಿರುವುದೊಂದು ಸಂತೋಷಕರ ಸಾಂಸಾರಿಕ ತಾಪತ್ರಯದಿಂದಲೂ ಗೃಹಜನರ ಕಲಹದಿಂದಲೂ ನಿಮಗೆ ಸ್ವಲ್ಪವೂ ಸುಖಗಳಾರದು ಪ್ರಕೃತಿಯೂ ಚೆನ್ನಾಗಿರದು ಶತ್ರುಜನರ ಪೀಡೆ ದಿನೇ ದಿನೇ ಹೆಚ್ಚುವುದು ಒಮ್ಮೊಮ್ಮೆ ತಾಪದಾಯಕವಾದ ಜ್ವರವೂ ತಲೆದೋರಿತು ತಾ 25 28. 29ರಲ್ಲಿ ಮಿತ್ರ ಸಂದರ್ಶನದಿಂದಲೂ ಭೋಗ್ಯವಸ್ತುಗಳ ಪ್ರಾಪ್ತಿಯಿಂದಲೂ ತೃಪ್ತರಾಗುವಿರಿ

ತುಲಾ—ಸ್ವಕಾರ್ಯಸಾಧನೆಯ ಸಲುವಾಗಿ ಸಾಮಾನ್ಯ ಜನರಂತಿರಲಿ ಶತ್ರು ಜನರೊಡನೆಯೂ ಕೂಡ ಮೈತ್ರಿಯನ್ನು ಬೆಳೆಸುವಿರಿ ಬಂಧುಗಳ ಸಹಾಯವೂ ಮಿತ್ರಜನರ ಬೆಂಬಲವೂ ನಿಮಗೆ ದೊರೆವಾಗಿರುವುದರಿಂದ ದುಃಸಾಧ್ಯವಾದ ಕಾರ್ಯಗಳನ್ನು ಅನಾಯಾಸದಿಂದ ಕೊನೆಗೊಳಿಸುವಿರಿ ನೌಕರಿ ವ್ಯಾಪಾರಗಳಲ್ಲಿ ನಿಮಗೆ ದಿನೇ ದಿನೇ ಅಭಿವೃದ್ಧಿಯ ಚಿಹ್ನೆಗಳು ಕಾಣಬರುವವು ಕೋರ್ಟುಕಚೇರಿಗಳ ಕಾರ್ಯಗಳಲ್ಲಿ ಸದ್ಯ ನಿಮಗೆ ಅನಿಷ್ಟವಿರುವುದರಿಂದ ಅವುಗಳನ್ನು ಮುಂದರಿಸುವುದೊಳ್ಳಿತು ಪರ್ಯಟನ ಇಷ್ಟವಸ್ತುಗಳ ಅಲಾಭದಿಂದಲೂ ಸದಾ ಮನೋರೋಗ ಪೀಡಿತರಾಗುವಿರಿ ತಾ 28, 29ರಲ್ಲಿ ಅತಿವ್ಯಯ ರೋಗ ಭಯ ಗಳಿವೆ.

ವೃಶ್ಚಿಕ—ಹಟ್ಟುಗುಣವು ಗಟ್ಟಿ ಹತ್ತಿರಲೂ ಬಿಡದೆಂಬಂತೆ ಅದು ಸುಗುಣವಾಗಲಿ ದುರ್ಗುಣವಾಗಲಿ ಎಷ್ಟು ಬಚ್ಚಿಟ್ಟರೂ ಕಾಲದಲ್ಲಿ ಅವಿಷ್ಕಾರಕ್ಕೆ ಬಂದೇ ಬರುವುದು, ಸದ್ಯ ನಿಮ್ಮಲ್ಲಿ ಶಿಷ್ಟಸಂಪ್ರದಾಯಕ್ಕೆ ವಿರುದ್ಧವಾದ ಗುಣವು ಆಗಾಗ ಕಂಡುಬಂದು ಪರಕೀಯರ ಟೀಕೆಗೊಳಗಾಗಲಿರುವಿರಿ ಗೃಹಕೃತ್ಯದಲ್ಲಿ ಅನಾರೋಗ್ಯದಿಂದಾಗಿ ಸದಾ ಚಿಂತೆಯು ನಿಮ್ಮನ್ನು ಪೀಡಿಸುವುದ ಆದರೂ ನೀವದನ್ನು ಗಣನೆಗೆ ತರಲಾರಿರಿ ಹಿಡಿದ ಕಾರ್ಯವನ್ನು ಕೊನೆಗೊಳಿಸಿ ಇಷ್ಟವನ್ನು ಹೊಂದುವಿರಿ ಆರೋಗ್ಯ ಸಂಪತ್ತು, ಆರ್ಥಿಕ ಸಂಪತ್ತು ನಿಮಗೆ ಅನ್ಯಾನವಾಗಿರುವುದು ಸ್ವವೃತ್ತಿಯಲ್ಲಿ ದಿನೇದಿನೇ ಮುನ್ನಡೆಯುವಿರಿ ಬಂಧುಬಳಗದಿಂದಲೂ ಮಿತ್ರರಿಂದಲೂ ಕೂಡಿ ಸಂತೋಷದಿಂದ ಕಾಲಯಾಪನೆ ಮಾಡುವಿರಿ ತಾ 26ರಿಂದ 29ರ ವರೆಗೆ ಮಿಶ್ರ ಫಲ ಪ್ರಸಂಗಗಳಿವೆ

ಧನು—ನೌಕರಿ ವ್ಯಾಪಾರಾದಿ ವಿಭಾಗಗಳಲ್ಲಿ ಶ್ರಮಕ್ಕೆ ತಕ್ಕ ಫಲ ದೊರೆಯುವುದಾದರೂ ಮನೋರೋಗದಿಂದ ನಿರ್ಮುಕ್ತರಾಗಲಾರಿರಿ, ಕಾರಣ ನಾನಾ ವಿಧವಾದ ತಾಪತ್ರಯಗಳು ನಿಮ್ಮನ್ನು ಸದಾ ಪೀಡಿಸುತ್ತಿರುವವು ಬಂಧುಗಳೂ ಮಿತ್ರರೂ ಕೂಡ ನಿಮ್ಮ ವಿಪಕ್ಷೀಯರ ಸ್ಥಾನಕ್ಕೆ ಶ್ರಿಯಿಯಿಂದ ಸೇರಲರ್ಹರಿರವರು, ಶಿರೋನೇತ್ರ ಸಂಬಂಧವಾದ ಕಾಹಿಲೆಗಳು ಒಂದಲ್ಲೊಂದು ನಿಮ್ಮನ್ನು ಪೀಡಿಸುತ್ತಿರುವವು ಹಾಸಿಗೆ ತಕ್ಕ ಕಾಲು ನೀಡಬೇಕೆಂಬ ಹಿರಿಯರ ಮಾತನ್ನು ನೀವು ಅತಿಕ್ರಮಿಸುವಿರಿ. ಪ್ರತಿಯೊಂದು ಕಾರ್ಯದಲ್ಲಿ ಅನುಕೂಲಕ್ಕಿಂತ ಅಡಚಣೆಗಳೇ ಹೆಚ್ಚುವವು ಶುಕ್ರಾದಿಯ ಮೂರು ದಿನಗಳು ಹೆಚ್ಚಿನ ಕಷ್ಟದಾಯಕವಾಗಿದ್ದರೂ ಮುಂದಿನ ದಿನಗಳಲ್ಲಿ ಇಷ್ಟಸಿದ್ಧಿ ಮೂಲಕ ಸುಖ ಸಿಗಲಿದೆ.

ಮಕರ—ಮರಳಿ ಯತ್ನವ ಮಾಡು ಮರಳಿ ಯತ್ನವ ಮಾಡು ಎಂದು ಕಾರ್ಯಸಾಧಕರನ್ನು ವಂತೆ ಕಾರ್ಯದಲ್ಲಿ ಒಂದೊಮ್ಮೆಗೆ ಸೋತರೂ ಪುನಃ ಪುನಃ ಯತ್ನದಿಂದ ನಿಮ್ಮ ಗುರಿಯನ್ನು ಹೊಂದುವ ಆಶಾ

1940ರ ವರ್ಷ ಭವಿಷ್ಯ

ಯಾರ್‍ಯಾರು ಏನೇನು ಮಾಡಬಹುದೆಂಬುದರ ಕುರಿತೊಂದು ವಿನೋದವಿಚಾರ

ಹೊಸ ವರ್ಷದ ಆಗಮನದ ಸಮಯದಲ್ಲಿ ಜನರು ತಮ್ಮ ಆ ವರ್ಷದ ಕಾರ್ಯಕ್ರಮವನ್ನು ಸಿದ್ಧಗೊಳಿಸಿಟ್ಟುಕೊಳ್ಳುವುದೂ ಒಂದು ಪದ್ಧತಿಯಾಗಿದೆ ಈ ರೀತಿ ಹೊಸ ವರ್ಷದ ಹಬ್ಬಯುಗಳು. ಒಂದು ಐತಿಹಾಸಿಕ ಮಹತ್ವವನ್ನೇ ಹೊಂದಿವೆ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಪ್ರಗತಿಯ ಬಗ್ಗೆ, ತನ್ನ ತಪ್ಪನ್ನು ತಿದ್ದಿಕೊಳ್ಳುವುದರಲ್ಲಿ, ಅಥವಾ ತನ್ನ ಜೀವನದ ಇತರ ವಿಚಾರಗಳಲ್ಲಿ ಒಂದು ಪ್ರತಿಜ್ಞೆ ಮಾಡಿಕೊಳ್ಳುವ ಅಧಿಕಾರವಿದ್ದೇ ಇದೆ ಉದಾಹರಣೆಗೆ, ಯಾರಾದರೂ ಮಿತಿಮೀರಿ ಖರ್ಚು ಮಾಡುವ ವ್ಯಕ್ತಿ ಇದ್ದಲ್ಲಿ, ಮುಂದೆ ಮಿತವ್ಯಯದಿಂದ ಇರುವೆಂತೆ ನಿಶ್ಚಯಮಾಡಿಕೊಳ್ಳಬಹುದ ಈ ರೀತಿ ಎಷ್ಟೋ ವಿಧವಾದ ಹೊಸ ನಿಶ್ಚಯಗಳು ಹೊಸ ವರ್ಷದ ದಿನ ತೆಗೆದುಕೊಳ್ಳಲ್ಪಡುವುವು ಕೆಳಗೆ ನಮ್ಮ ಅಭಿಪ್ರಾಯದಲ್ಲಿ ಹೊಸ ವರ್ಷದ ದಿನ ಕೆಲವು ಪ್ರಮುಖ ಮುಖಂಡರು ಮಾಡಿಕೊಂಡಿರಬಹುದೆಂದೆನಿಸಿರುವ ಕೆಲವು ನಿರ್ಧಾರಗಳನ್ನು ಕೊಡುತ್ತೇವೆ.

ಮಿ ಚೇಂಬರ್ ಲೇನ್—"ಮ್ಯೂನಿಚ್" ನಂತಹ ಪ್ರಸಿದ್ಧ ತಪ್ಪನ್ನು ನಾನು ಪುನಃ ಮಾಡುವುದಿಲ್ಲ

ಲಾರ್ಡ್ ಹ್ಯಾಲಿಫ್ಯಾಕ್ಸ್—ಇಂಗ್ಲೆಂಡಿಗೆ ಎಂತಹ ವಿಪತ್ತೇ ಬರಲಿ, ರಷ್ಯದೊಡನೆ ಒಪ್ಪಂದ ಮಾಡಿಕೊಳ್ಳಲು ನಾನು ಎಂದಿಗೂ ನೆರವಾಗಲಾರೆನ.

ಲಾರ್ಡ್ ಜೆಟ್ಲೆಂಡ್—(ಭಾರತ ಮಂತ್ರಿ) ಕಾಂಗ್ರೆಸ್ಸಿನವರು ಜಗಳದ ನೆಪವನ್ನು ಮುಂದಿಟ್ಟು, ಭಾರತದ ಸ್ವಾತಂತ್ರ್ಯ ಪಥದಲ್ಲಿ ನಾನು ಯಾವಾಗಲೂ ಅಡ್ಡಿ ಆತಂಕಗಳನ್ನೇ ಒಡ್ಡುತ್ತಿರುವೆನು.

ಲಾರ್ಡ್ ಲಿನ್‌ಲಿಥ್‌ಗೋ—(ವೈಸರಾಯರು) ಪೌರ್ವಾತ್ಯರ ಕಲಹ ನಾಸ್ತಿ'ಎಂಬ ಸುಭಾಷಿತದ ಉಪಯುಕ್ತವಾದ ದೆಂಬುದನ್ನು ನಾನು ಬಲ್ಲೆನು ಆದುದರಿಂದ ಇನ್ನು ಮುಂದೆ ನಾನು ಮೌನವಾಗಿಯೇ ಇರುವೆನು ಯಾರೋ ಹೇಳಿರುವಂತೆ

ಮಾನ್ಯ ಸಾಹಸಿಗರಿರುವಿರಿ, ಪ್ರಯತ್ನವು ಎಂದೂ ನಿಷ್ಫಲವಾಗದು, ಆದರೆ ಖಚಿತವಾಗಿ ತಕ್ಕ ಆದಾಯವಿಲ್ಲವೆಂದೇ ನಿಮ್ಮ ಹಂಬಲ ಶತ್ರು ಜನರು ವಿಶೇಷವಾಗುವರು ಆಗಾಗ ಕಾರ್ಯಗಳು ಆಗಾಗ ತಡೆಯಾಗಿ ಕೊನೆಯೊಂದಲು ಚಿರಕಾಲ ಬೇಕಾಗುವುದು ಮನೋದೌರ್ಬಲ್ಯವು ಹೆಚ್ಚುವುದು ಆರ್ಥಿಕ ಸಂಕಷ್ಟದಿಂದ ಸದಾ ಪೀಡಿಸಲ್ಪಡುವಿರಿ ತಾ 25, 30 31, 1 ಈ ದಿನಗಳ ಅನುಕೂಲಗಳಾಗಿವೆ,

ಕುಂಭ—ಈಗೀಗ ನಿಮ್ಮ ಆದಾಯವು ಕುಂದುತ್ತಾ ವ್ಯಯವು ವೃದ್ಧಿ ಹೊಂದುತ್ತಾ ಬರುತ್ತಿದೆ ಅಂತೂ ಎರಡು ಉತ್ಪತ್ತಿಯನ್ನು ಅರ್ಧಂವರ್ಧಿಗೆ ಮಾಡಲು ಸ್ವಲ್ಪ ಕಷ್ಟವಾದೀತ, ನೌಕರಿಯಲ್ಲಿ ತೃಪ್ತಿಯಿರದ ಮೇಲದಲ್ಲಿ ಸೌಖ್ಯವೂ ಕಡಿಮೆಯಾಗುವುದು ಕೆಲವೊಂದು ಕಾರ್ಯಗಳು ನಿಷ್ಫಲವಂತೆ ಕೊನೆಗಾಣುವು ವಿಶೇಷತಃ ರಾಜಕೀಯ ಭಾಗದಲ್ಲಿ ಜಯವಿಲ್ಲವು ಆದರೂ ಸಹ ಭಕ್ತಾದಿ ಸುಜನರಿಂದ ಕೆಲವು ಸಂಸಾರದ ವಿವಾಹ ಪೂರ್ಣವಾಗಿರುವುದ, ವಾಣಿಜ್ಯ ಮತ್ತು ಸೇವಕ ವೃತ್ತಿಯವರಿಗೆ ದಿನಗಳು ಸುಖದಿಂದ ಸಾಗಲಿವೆ ವಿತ್ತಲಾಭವು ಪೂರ್ಣವಿರುವು ದರಿಂದ ಶತ್ರುಜನರ ಮಾತುವು ನಡೆಯದ ಸನ್ಮಾರ್ಗವಲಂಬಿಗಳಿಗೆ ಹೆಚ್ಚಿನ ಇಷ್ಟವು ಸಿದ್ಧಿಸಲಿವೆ ಶುಕ್ರಾದಿಯ ಮೂರು ದಿನಗಳು ಉತ್ತಮವಿವೆ

ಮೀನ—ಮನದಲ್ಲಿ ಅಶಿಸಲಾಶೆಗಳ ಗೊಂದಲವು ತುಂಬಿರುವವು ವೈದ್ಯ ವಕೀಲ ಉಪಾಧ್ಯಾಯ ವರ್ಗದವರಿಗೂ ವ್ಯಾಪಾರಿಗಳಿಗೂ ಸ್ವವೃತ್ತಿಯಲ್ಲಿ ಉತ್ತಮ ಯಶೋಲಾಭಗಳು ದೊರೆಯುವವು ಆದರೂ ಖರ್ಚಿನ ಮಾರ್ಗಗಳು ಸತ್ಕಲಾ ನಿಮ್ಮನ್ನಾವರಿಸಿರುವುದರಿಂದ ಎಷ್ಟೇ ಲಾಭ ದೊರೆತರೂ ಹಣದ ಅಡಚಣೆ ತಪ್ಪದು, ಕೆಲವೊಮ್ಮೆ ಧನವಿಷಯಕ ಚಿಂತೆಯಿಂದ ಮನಸ್ಸಿಗೆ ಮುಂದಿನ ಕಾರ್ಯವೇನೆಂದು ಹೊಳೆಯದೆ ಜಡದಂತೆ ಸ್ತಂಭೀಭೂತರಾಗುವಿರಿ, ಆಕಸ್ಮಾತ್ತಾಗಿ ಶರೀರಕ್ಕೆ ಪೆಟ್ಟು ತಗಲಿ ಗಾಯಾದಿಗಳಾಗಲಿವೆ ತಾ 25, 30, 31, 1 ಈ ದಿನಗಳಲ್ಲಿ ಕಾರ್ಯಹಾನಿ ಪ್ರವಾಸಾದಿ ಅನಿಷ್ಟಗಳಿಂದ ಶೋಕವುಂಟಾಗಲಿದೆ.

"ಒಂದು ಮೌನವು ಸಾವಿರ ಜಗಳವನ್ನು ಪರಿಹರಿಸುವುದ"

ಮಹಾತ್ಮ ಗಾಂಧಿ—ನನ್ನ ಸತ್ಯ ಮತ್ತು ಅಹಿಂಸೆಯ ಕಡೆಗೆ ಜಗತ್ತನ್ನು ಒಯ್ಯಲು ಯತ್ನಿಸುವೆನು.

ಪಂ ಜವಹರಲಾಲ್ ನೆಹರು—ಭಾರತವನ್ನು ಸ್ವಾತಂತ್ರ್ಯ ಪಥದಲ್ಲಿ ಒಯ್ಯಲು, ನಾನೂ ಪ್ರಮುಖನಾಗಿರುವುದಲ್ಲದೆ, ಇತರರೂ ಕೆಲಸ ಮಾಡುವಂತೆ ಪ್ರೇರಿಸುವೆನು

ಮೌಲಾನ ಅಬುಲ್ ಕಲಾಂ ಆಜಾದ್—ಈ ವರ್ಷದಲ್ಲಿ ನಾನೆ ಹಿಂದು ಮುಸ್ಲಿಂ ಐಕ್ಯತೆಗಾಗಿ ಸಂಪೂರ್ಣವಾಗಿ ಯತ್ನಿಸುವೆನು

ಜನಾಬ್ ಜಿನ್ನಾ ಸಾಹೇಬ್—ನಾನು ಹಿಂದೂ ಮುಸಲ್ಮಾನರ ಏಕತೆ ಎಂದೆಂದಿಗೂ ಆಗದಂತೆ ನೋಡಿಕೊಳ್ಳುವೆನು ಕಾಂಗ್ರೆಸ್ಸನ್ನು ವಿರೋಧಿಸತ್ತಾ, ಸಾಮ್ರಾಜ್ಯವನ್ನು ಬಲಪಡಿಸುವೆನು. ಅಲ್ಲದೆ ಹಿಂದೂಸ್ಥಾನದಲ್ಲಿ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ಪ್ರಚಾರ ಮಾಡುತ್ತಿರುವೆನು.

ಮಿ ಫಜಲುಲ್ ಹಕ—ನಾನು ಕಾಂಗ್ರೆಸ್ 'ಸರಕಾರಗಳ'ಅತ್ಯಾಚಾರ''ಗಳ ವಿಚಾರಣೆಗಾಗಿ ಜವಹರಲಾಲರೊಡನೆ ಎಂದಿಗೂ ಮಾತಾಡ ಹೋಗುವುದಿಲ್ಲ.

ಮಿ. ನಳಿನೀರಂಜನ ಸರ್ಕಾರ್—ನಾನು ಇನ್ನು ಎಂದಿಗೂ ಬಂಗಾಳ ಮಂತ್ರಿಮಂಡಲದಲ್ಲಿ, ನಾಸೇ ಪ್ರಧಾನನಾಗುವ ವಿನಹ ಸೇರುವುದಿಲ್ಲ,

ಸರ್ ಸಿಕಂದರ್ ಹಯಾತ್ ಖಾನ್—ನಾನು ಇನ್ನು ಮುಂದೆ ಯಾವುದೇ ಒಂದು ಪಾಸಗಿ ಅಥವಾ ಗುಟ್ಟಿನ ಕೆಲಸಕ್ಕೆ ಮುಂಬಯಿಗೆ ಹೋಗುವುದಿಲ್ಲ ಅಲ್ಲದೆ ಪಂಜಾಬಿನ ಮುಸಲ್ಮಾನರಿಗೆ ಸೈನ್ಯದಲ್ಲಿ ಬಹುಸಂಖ್ಯೆಯ... ದೊರೆಯುವಂತೆ ಯತ್ನಿಸುವೆ

ಶ್ರೀ ಸುಭಾಷ್ ಚಂದ್ರಭೋಸ್—ನಾನು ಕಾಂಗ್ರೆಸ್ಸಿನಿಂದ ಬೇರೆಯಾಗಿದ್ದು, ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸುವೆನು ಮತ್ತು ಬಂಗಾಳವನ್ನು ಭಾರತದಿಂದ ಬೇರೆ ಮಾಡಿ, ಅದನ್ನು ಬಂಗಾಳ ಕೊಲ್ಲಿಯಲ್ಲಿ ಮುಳುಗಿಸಿ ಬಿಡುವೆನು

ಡಾ ಖರೆಂಜಸೆ—ನಾನು ನ್ಯಾಷನಲ್ ಲಿಬರಲ್ ಫೆಡರೇಶನ್ನಿನ ಅಧ್ಯಕ್ಷನಾಗಿ ಆ ನಾಯಕಲ್ಪನೆಯಲ್ಲಿ, ನನ್ನ ಅಧ್ಯಕ್ಷ ಭಾಷಣದಲ್ಲಿನ ಅನಿಷ್ಟಕರವಾದ ವಿಚಾರಗಳನ್ನು ತೆಗೆದು ಬಿಡುವೆನ

ಸರ್ ಮಾರಿಸ್ ಗ್ವಾಯರ್—ಮುಂದೆ ಯಾವುದಾದರೂ ವಿಶ್ವವಿದ್ಯಾಲಯದ ಪದವೀಧರೋತ್ಸವದಲ್ಲಿ(convocation)ಭಾಷಣ ಮಾಡುವಾಗ, ಅದರಲ್ಲಿ ರಾಜಕಾರಣವನ್ನು ಸೇರಿಸ ಹೋದಿಲ್ಲ.

ಕಾಮ್ರೇಡ್ ಎಂ ಎನ್ ರಾಯ್—ನಾನ ಇನ್ನು ಮುಂದೆ ದಿನ 1ಕ್ಕೆ ಒಂದಕ್ಕಿಂತ ಹೆಚ್ಚು ಪ್ರಕಟಣೆಯನ್ನು ಹೊರಡಿಸುವುದಿಲ್ಲ

ಸಂಪಾದಕ ಮಂಡಲಿ—ನಾವು ಈ ವಿಚಾರವಾಗಿ ಈ ಸಾರಿ ಇದಕ್ಕಿಂತ ಹೆಚ್ಚಿಗೆ ಬರೆಯು, ವಾಚಕರ ಮನಸ್ಸಿಗೆ ಬೇಸರವನ್ನುಂಟು ಮಾಡ ಬಯಸುವುದಿಲ್ಲ.

("ತೇಜ್")

GET
Rich & Prosperous!

Heie is an authorised simple means upheld and pursued by millions of persons with great advantage This should lead you also to Riches and Prosperity Ask for details-go through it carefully-take advantage of it and enjoyfull comforts luxury, influence and all that go to make HAPPINESS complete

K. S. ROW,
Worli, BOMBAY

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುನಷ್ಟ ಮೊದಲಾದವುಗಳನ್ನು ಶೀಘ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಶೇಷವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ - 40 ಮಾತ್ರೆಗಳ ಡಬ್ಬಿ 1ರ ರೂ 1—0—0

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಕೋಪ್ರಾನರ ಟೀಂಡರ್ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಒಂದೂ ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ (ಮಾಲಕರ —ಮಗನಭಾಯಿ ಅಲೂನ್ ಅಂಡ್ ಕಂಪೆನಿ ಮುಂಬಯಿ)

ಮಂಗಳೂರಿನ ಚಾಲತಿ ಧಾರಣೆ.

	ರೂ ಆ	ರೂ ಆ
ಮಸ್ಕತಿ ತೊಳಿ	4—6	4—8
ಗುಡ್ಡ ಕಾಳು	4—4	4—6
ಗುಡ್ಡ ರಾಶಿ	4—0	4—4
ಸಗ್ಗಿ ಅಕ್ಕಿ	4—8	4 10
ಅವ್ವಲ್ ಬೆಳ್ತಿಗೆ ಕಾರ್ಕಳ	4-10	5—2
ಕಾ ಗುಡ್ಡ ಬೆಳ್ತಿಗೆ	4—8	4-10
ನೆಲ್ಲೂರು ಬೆಳ್ತಿಗೆ	4—4	4—8
ರಂಗೂನು ಬೆಳ್ತಿಗೆ ಗೋಣಿ ಗಳಿಗೆ	7-12	8—4
ರಂಗೂನು ಕುಚ್ಚಲಕ್ಕಿ ಗೋಣಿ ಗಳಿಗೆ		8—4
ಗೋಧಿ	11—4	15—0
ಹುರಳಿ	6—8	6-10
ತೊಗರಿ ಬೇಳೆ	13—8	22—0
ಉದ್ದು ಮುಡಿ ಗಳಿಗೆ	5-10	5 12
ಹೆಸರು ,,	5-12	6 -0
ಊರ ಬೆಲ್ಲ ಖಂಡಿ ಗಳಿಗೆ	40—0	50—0
ಉಪ್ಪು ಗೋಣಿ ಗಳಿಗೆ	4—8	5-14
ಮೊಂಬೈ ಗೋಧಿಹಿಟ್ಟು ಗೋಣಿ ಗೆ	12—8	13 —4
ಕಡ್ಲೆಹಿಟ್ಟು ,,	14—8	15—0
ಕಾಳು ಮೆಣಸು ಮಣ ಗಳಿಗೆ	5—0	5—4
ಕೊಬ್ಬರಿ ಖಂಡಿ ಗೆ	68—0	70—0
ಕೊಬ್ಬರಿ ಹಿಂಡಿ ಖಂಡಿ ಗಳಿಗೆ	26—8	27—8
ಎಳ್ಳಿಂಡಿ ,,	27—8	30 -0
ತೆಂಗಿನಕಾಯಿ ಗಂಡಕ್ಕೆ	5—8	6—0
ಕೊಬ್ರಿ ಎಣ್ಣೆ ಮಣ ಗಳಿಗೆ	4-14	5 14
ಊರ ಎಳ್ಳೆಣ್ಣೆ ,	6—0	6—8
ಮಂಗಳೂರು ಹರಳೆಣ್ಣೆ		3—9
ಬೀಯಿಂಬಲ್ಕ್ ಹರಳೆಣ್ಣೆ		3—0
ಮೊರಿಸ್ ಸಕ್ಕರೆ ಮಣ ಗಳಿಗೆ		4 12
ಊರ ಮೆಣಸಿನ ಕಾಯಿ ,,		5—8
ಸಾಂಬಿ ಮುಡಿ ಗಳಿಗೆ	6—4	6—8
ಕೊತ್ತಂಬರಿ ,,	3-14	5—6
ಅಡಿಕೆ(ಹಳ್ಳ)ಖಂಡಿಗಳಿಗೆ	125—0	155 —0
ಸಣ್ಣದು ಕೋಳ ಅಡಿಕೆ	88—0	100—0
ದೊಡ್ಡದು ಕೋಳ ಅಡಿಕೆ	105—0	115—0
ಪ್ಲೇಂಟೇಶನ ಕಾಫಿ ಬೀಜ ,	40 12	12—0
ಚರಿ ಖಂಡಿ ಗಳಿಗೆ	162—8	167—8
ಪೀಬ್ರಿ ಖಂಡಿ ಗಳಿಗೆ	180 -0	185—0
ಯಾಲಕ್ಕಿ ಮಣ ಗಳಿಗೆ(ಕೊ)38—0		42—0
,, (ಮಂ) ಸಕಲೇಶಪುರ	50 - 0	55 —0
ಕಬ್ಬಿಣ ಖಂಡಿ ಗಳಿಗೆ		60—0
ತಾಮ್ರ ಪಾತ್ರಗಳು ಮಣ ಗಳಿಗೆ		25 - 0
ತಾಮ್ರತಗಡು ಮಣ ಗಳಿಗೆ		23—0
ಚೀನಿ ಬೆಳ್ಳಿ ಸೇರು ಗಳಿಗೆ		15—8
ಹಿತ್ತಾಳಿ ತಗಡು ಮಣ ಗಳಿಗೆ		13—0
ಪಾದರಸ ಗಳಿಗೆ		27 - 0
ಗೇರುಬೀಜ ಮುಡಿ ಗಳಿಗೆ	3—0	3 - 1

ಬೊಂಬಾಯಿ

ನಾಟಕ—ಮೊನ್ನೆ ಹಿಂದೂ ಎಲಿಫಿಂಟನ್ [illegible] ಪ್ರೆಸಿಡೆನ್ಸಿ ಥಿಯೇಟರಿನಲ್ಲಿ ಮೊನ್ನೆ 6 ರಾತ್ರಿ ಘಂಟೆ 9-15ಕ್ಕೆ "[illegible]" ಎಂಬ ನಾಟಕ [illegible] ಪ್ರದರ್ಶಿಸಿದರು. [illegible] ಸಂದರ್ಭದಲ್ಲಿ [illegible] ಅಧ್ಯಕ್ಷಸ್ಥಾನ ವಹಿಸಿದ್ದರು.

ಶ್ರೀ ಪಾಂಡುರಂಗ ಭಜನ ಮಂಡಳಿ

ಇದರ ವರ್ಷಾಂತಿಕ ಸಭೆಯು ಇದೇ ತಾ. 6ರಲ್ಲಿ ಶ್ರೀ ಕೃಷ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ನೆರವೇರಿತು. ನೂತನ [illegible] ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಲಾಯಿತು.

ಕೆನರಾ ಬುಕ್ಸ್ ಎಂಡ್ ನ್ಯೂಸ್ ಏಜನ್ಸಿ—ಕನ್ನಡ ವಾರಪತ್ರಿಕೆ, ಪುಸ್ತಕಗಳ ಪ್ರಚಾರಾರ್ಥವಾಗಿ, ಅವಿಶ್ರಾಂತವಾಗಿ ದುಡಿಯುತ್ತಿರುವ ದಿ ಕೆನರಾ ಬುಕ್ಸ್ ಎಂಡ್ ನ್ಯೂಸ್ ಏಜನ್ಸಿಯ ಮಾಲೀಕರಾದ ಶ್ರೀ ವಿ. ಆರ್ ಪ್ರಭುಗಳು ತಾ 6-1-40ರಿಂದ ತಮ್ಮ [illegible] ಪ್ರೊಟೀನಲ್ಲಿ [illegible] ಇದರಿಂದ [illegible] ಕನ್ನಡಿಗರಿಗೆ ಬಹಳ ಅನುಕೂಲವೆಂದು ತಿಳಿದು ಬರುತ್ತದೆ.

ತಿದ್ದುಪಡಿ—ಡಿಸೆಂಬರ ತಾ 28ರಲ್ಲಿ ಪ್ರಕಟಿಸಿದ ಬಂಟರ ಯಾನೆ ನಾಡವರ ಸಂಘ ಮುಂಬಯಿ ಇದರ ಸುದ್ದಿಯಲ್ಲಿ "ತೆಂಕುಮನೆ ರಾಮಣ್ಣ ಶೆಟ್ಟಿ" ಎಂಬುದಾಗಿ ಪ್ರಕಟಿಸಿದ್ದನ್ನು "ಪಾದೂರು ತೆಂಕುಮನೆ ರಾಮಣ್ಣ ಶೆಟ್ಟಿ" ಎಂಬುದಾಗಿ ತಿದ್ದಿಕೊಳ್ಳಬೇಕಾಗಿದೆ.

ಶ್ರೀಮದ್ಭಾರತ ಕೋಲಾಟ ಮಂಡಳಿ

ಶ್ರೀ ಸುರತ್ಕಲ್ ಬಾಬು ಮೆಂಡನ್‌ರವರು ಕೆಲವು ವರ್ಷಗಳಿಂದ ನಡೆಸಿಕೊಂಡು ಬರುವ ಈ ಮಂಡಳಿಯವರು ಈ ವರ್ಷ ನಡೆಸಿದ "ಶ್ರೀಪಾದ ಕೊರವ ರ ಪ್ರಾಯ"ದ ಮಂಗಳೋತ್ಸವವು ತಾ 23-12 39 ರಲ್ಲಿ ಶ್ರೀ ಹನುಮಾನ್ ಭಜನೆ ಮಂಡಳಿಯವರನ್ನು ಒಡಗೊಂಡು ಕೋಲಾಟ, ಕಡಿ ಸಭಿಕರನ್ನು ಸಂತೋಷಪಡಿಸಿದರು. ಈ ಸಂದರ್ಭದಲ್ಲಿ ಮೂಲ್ಕಿ ಬಿ ವಾರ್ಡ ರಾಷ್ಟ್ರೀಯ ಸಂಘದ ಪರವಾಗಿ ಬಂಗಾರದ ಪದಕ ಶ್ರೀ ಸುರತ್ಕಲ್ ಬಾಬು ಮೆಂಡನರಿಗೆ ಸಂಘದ ಅಧ್ಯಕ್ಷರಾದ ಶ್ರೀ ಬಿ ಅಪ್ಪು ತಿಮ್ಮಪ್ಪ ಪ್ರೀತ್ಯರ್ಥವಾಗಿ ಕೊಟ್ಟು ಸನ್ಮಾನಿಸಿದರು. ಅಲ್ಲದೆ ತಾ 25-12-39ರಲ್ಲಿ ಸದ್ರಿ ಮಂಡಳಿಯ ಛಾಯಾಚಿತ್ರವನ್ನು ತೆಗೆಯಲಾಯಿತು. ಮಂಡಳಿಯ ಕುರಿತು ಅತೀ ಪ್ರಯಾಸಪಟ್ಟ ಫ್ರೆಂಚ್ ಬ್ಯಾಂಕಿನವರೂ ಶ್ರೀ ಕೆ. ಸೋಮಪ್ಪ, ಅವರನ್ನೇ ಮೊದಲಾದವರ ಅಭಿನಂದನೀಯರು.

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗನ ಜೀವನಕ್ಕೆ ತಕ್ಕ ಏರ್ಪಾಡು ಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ

ಓರಿಯಂಟಲ್‌ನಲ್ಲಿ ಪಡೆಯಿರಿ.

--- ಮಕ್ಕಳ ಮುಂದುವರಿಸಲ್ಪಡುವ ವಿಮೆಯು ---

ನೂತನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಹಾಪತೆಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇಡೀ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿದೆ. ಇದರಲ್ಲಿ 22ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ್" ಆರಂಭವಾಗುವುದು.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ:—

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ

ಅಥವಾ ದಿ ಬ್ರಾಂಚ್ ಸೆಕ್ರೆಟರಿ,

ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,

ಸೌತ್‌ಪೆರೇಡ್ ಬೆಂಗಳೂರು.

—ORIENTAL—

GOVERNMENT SECURITY LIFE ASSURANCE CO, LTD.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಮೂಲವ್ಯಾಧಿ

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಆರ್ಶಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಹಳೆಯ ಅಥವಾ ಹೊಸ ತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲ ವ್ಯಾಧಿಯು 'ಆರ್ಶಮಾರಾ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತ ವಾಗಿ ಗುಣಹೊಂದುವುದು. ನೋವು ತುರಿಸುವಿಕೆ, ಉರಿಯುವಿಕೆ, ಕೀವು, ರಕ್ತಸ್ರಾವವಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಓಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.
ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಅಳಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮಕೈಗೆಸೇರುವುದು ಸೀಸೆ1ಕ್ಕೆ12ಆಣೆ, ಟ.ಖ.೯ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರಮನೋಹರವಾದ ಈ ರಸಾಯನವು ಬಾಣಂತಿಯು ರಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.
ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! **DAIMONDS!**

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನಾಯಿತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ: **ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್‌ಬೋರ್ಡ್, ಜವಾನರ ಬಿಲ್ಲೆ, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.
Approved firm by the Govt. of Mysore. Certified by the Agent of the Govt. of India in Ceylon

SALE ! SALE ! SALE !

ಮೊಂಟಿನ ಕ್ರಯ ರೂ. 10,
ಈಗಿನ ಕ್ರಯ ರೂ. 3-12-0.

Swiss Lever Wrist Watch
ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನವಫೇಶನ ಗಡಿಯಾರಗಳು ಸ್ವಿಟ್ಜರ್ಲೆಂಡಿನಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡುವುದಕ್ಕೂ ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳುವುದಕ್ಕೂ ಬಹು ಅಂದವಾಗಿವೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ರೈಲ್ವೆ ಉದ್ಯೋಗಸ್ಥರೂ, ದೊಡ್ಡ ಆಫೀಸರುಗಳೂ, ಜಮೀನ್ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ತಿಂಗಳಿಕ್ಕೆ ಪ್ರಯತ್ನಪಡುವರು.

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ 3-12-0

ROYAL CO, 19 East SOWCARPET G. T. MADRAS.
ರಾಯಲ್ ಕಂಪೆನಿ, ೧೯ ಪೇಟೆ ಸಾಹುಕಾರ ಪೇಟೆ, ಜಿ. ಟಿ. ಮದರಾಸು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— **ಡಿಪೋವಿನ ರಿಂಗ್‌ವರ್ಮ್ ಮುಲಾಮು** —
ಇತ್ತೀಚಿನ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ,
ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿ
ಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅತ್ತಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸಿಹಿಮೂತ್ರ, ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಆ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಸಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ವೇಳೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ

ತ್ವರೆಯಾಗಿ ತರಿಸಿಕೊಳ್ಳಿರಿ.

'ಹವನನ್' ಹೆಮೊರ್‍ರೋಯ್ಡ್ – ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾವರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರವುದಾದರೆ, "ಹವನನ್" ಎಂಬ ಹೆಮೋರೋಯ್ಡ್ ಒಯಿಂಟ್ ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. **ಸೀಸೆ 1ಕ್ಕೆ ರೂ 1-4-0 ವಿ.ಪಿ. ಬೇರೆ**

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವಾಹಕ್ಕೆ ತುತ್ತಾದವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಾ ಪ್ರತಿರಾತ್ರಿ ಮಲಗುವಾಗ 3–4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವವು. ಮಲಬದ್ಧತೆಯ ತ್ರಸ್ತಜನಗಳದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1 0 0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು.

The Eclipse Distributing Agency,

Dahanu Road, B. B & C. I. Ry BOMBAY PRESIDENCY.

ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S S KARANTH AT THE THULUNAD PRESS, UDIPI AND PUBLISHED BY K H. SHETTY AT NAVAYUGA OFFICE, UDIPI, S. INDIA

Registered No M 3616 1-2-1940.

ನವಯುಗ
NAVAYUGA

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ
ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್
ಸೆಕ್ಯೂರಿಟಿ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ ಕರುಣಾಕರ ಹೆಗ್ಡೆ ಆರ್ಗನೈಜರ್	ಅ	ಎಚ್. ವೆಂಕಟರಾಮಯ್ಯ
ಕೆ ಆರ್ ಕೆ ಕೋಟ್ ಬಿಲ್ಡಿಂಗ್, ಮಿಷನ್ ಹೈಸ್ಕೂಲ್ ರೋಡು ಮಂಗಳೂರು	ಥ / ವಾ	ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಝಾಂಡೂಮಲೇರಿಯಾಮಿಕ್ಶ್ಚರ್

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ
ಖಾತ್ರಿಯಾದ ಸಿದ್ಧೌಷಧ
ಕ್ರಯ ಆಣೆ 0—13—0 ಮಾತ್ರ.
ಸ್ಥಳೀಯ ಏಜಂಟರು—ಪಿ. ಎ. ಪೈ ಬ್ರದರ್ಸ್.
ಕಾರ್ಕಳದ ಏಜಂಟರು—ವಿ ವಿ. ಶೆಣೈ, ಕೆಮಿಸ್ಟ್ಸ
ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೆ ಏಜಂಟರು ಬೇಕಾಗಿದ್ದಾರೆ.
ಶರ್ತಗಳಿಗೂ ಏಜನ್ಸಿಗಳಿಗೂ ಬರೆಯಿರಿ—
ದಾಮೋದರ್ ಎಂಡ್ ಕೊ,
ZANDU 78ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು.
DAMODER & CO,
78 China Bazaar Road, G. T MADRAS

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು
ಮೈಸೂರು
ಸೇಂಡಲ್ ಸೋಪು
ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು
ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ.—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ ಮಲಬದ್ಧತೆ ಸ್ವಪ್ನಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ದಮನಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುವವು.

ಕ್ರಯ - 40 ಮಾತ್ರೆಗಳ ಡಬ್ಬಿ 1ರ ರೂ 1—0—0

ಮದನಮಂಜರಿ ಫಾರ್ಮಸಿ, 185 ಚೈನಾಬಜಾರ್ ಮದ್ರಾಸ್
ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯಲ್ಲಿರುವ ಜೀವ ವಿಮಾ ಸಂಸ್ಥೆಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾಪೂರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ

ನಾಟಿ ಕಾರ್ಯದರ್ಶಿ,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಸೂರೆನ್ಸ್ ಕೊ ಲಿಮಿಟೆಡ್, ಮದ್ರಾಸು
ಮಂಗಳೂರು ಬ್ರಾಂಚ್

THE ASIAN ASSURANCE COMPANY, LIMITED.

ASIAN BUILDINGS — — BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,55,764	22,34,301	67,66,528

ದಿ ಏಶಿಯನ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
,, M. Shivarama Rao, Organizer, Puttur.

Or

Sri. J. A. PUTRAN,
Branch Manager, MANGALORE.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES — — — — — MANGALORE

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತಸಂಕಟ, ಮಲಬದ್ಧತೆ ಇತ್ಯಾದಿಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ. ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:—ರಥಬೀದಿ ಮಂಗಳೂರು.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್

ಸ್ಥಾಪನೆ ವರ್ಷ 1874] ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ— ಮುಂಬಯಿ.

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ಮುದ್ದಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲುಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ **ಆರ್ಥಿಕ ಸ್ವಾತಂತ್ರ್ಯದ** ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲ್ಯಾಫ್ ಆಫೀಸು,
ಮೈನ್ ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲ್ಯಾಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ORIENTAL

GOVERNMENT SECURITY LIFE ASSURANCE CO., LTD.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA

ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ. 3—4—0
6 ತಿಂಗಳಿಗೆ – ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨೧

ಉಡುಪಿ, ಗುರುವಾರ, ೧—೨—೧೯೪೦.
UDIPI, THURSDAY, 1-2-1940.

VOL. 19
No. 21

ಇಡೀ ದೇಶವನ್ನು ಖಾದಿಮಯವಾಗಿ ಮಾಡುವ ಯೋಜನೆ

ಹಿಂದೂದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗ ಇಡೀ ದೇಶವನ್ನೇ ಖಾದಿಮಯವಾಗಿ ಮಾಡುವ ಯೋಜನೆಯ ಕುರಿತು ಮಹಾತ್ಮ ಗಾಂಧಿಯವರು ಖಾದಿ ಕೆಲಸಗಾರರೊಡನೆ ಆಲೋಚಿಸುತ್ತಿರುವರೆಂದು ತಿಳಿದುಬರುತ್ತದೆ. ಫೆಬ್ರವರಿ ತಾ. ೨೦ರಲ್ಲಿ ಗಾಂಧಿ ಸೇವಾ ಸಂಘದ ವಾರ್ಷಿಕ ಸಭೆಯು ಮುಕಂಡ ಎಂಬಲ್ಲಿ ನಡೆಯುವುದು. ಮಹಾತ್ಮ ಗಾಂಧಿ, ಡಾಕ್ಟರ್ ರಾಜೇಂದ್ರ ಪ್ರಸಾದರೇ ಮೊದಲಾದವರು ಈ ಸಂದರ್ಭದಲ್ಲಿ ಮೇಲಿನ ಯೋಜನೆಯ ಕುರಿತು ಚರ್ಚಿಸಲಿರುವರು. ಮಹಾತ್ಮರು ಮುಕಂಡಕ್ಕೆ ಹೋಗುವಾಗ ಶಾಂತಿನಿಕೇತನವನ್ನು ಸಂದರ್ಶಿಸಿ ಅಲ್ಲಿ ಎರಡು ಮೂರು ದಿನವಿದ್ದು ಕವಿ ರವೀಂದ್ರರೊಡನೆ ಮಾತಾಡಲಿರುವರು.

10ವರ್ಷದ ವಿಚಿತ್ರ ಬಾಲ ಯೋಗಿ

ವಿಲ್ಲುಪುರಮ್ ರೈಲ್ವೇ ಜಂಕ್ಷನಿನ ಕೆಲಸಗಾರನೊಬ್ಬನ 10ವರ್ಷದ ಪುತ್ರನು ಬಾಲ ಯೋಗಿಯಾಗಿ ವೇದಾಂತ ಮತ್ತು ಉಪನಿಷತ್ತುಗಳ ಕುರಿತು ಧಾರ್ಮಿಕ ಬೋಧೆಯನ್ನೀಯುತ್ತಿರುವನು. ಇವನೀಗ ತಿರುವಣ್ಣಾಮಲೆಯ ರಮಣಾಶ್ರಮಕ್ಕೆ ಸೇರಿ ಬಾಲ ಯೋಗಿ ರಾಮದಾಸನೆಂದು ಕರೆಯಲ್ಪಡುತ್ತಿರುವನು. ಈ ಬಾಲ ಯೋಗಿಯು ಹುಟ್ಟುವ ಮೊದಲು ಆತನ ತಂದೆತಾಯಿಗಳಿಗೆ ಆಂಜನೇಯನು ಅವರ ಮಗುವಾಗಿ ಹುಟ್ಟುವನೆಂಬ ಕನಸು ಬಿತ್ತೆಂದೂ, ಈ ಕನಸಿನಲ್ಲಿ ಹೇಳಿದ ದಿನವಲ್ಲೇ ಮಗು ಹುಟ್ಟಿತೆಂದೂ, ಮಗುವಿನ ಎರಡು ವರ್ಷವಾದೊಡನೆಯೇ ಅದು ವೇದಾಂತ ಮಾತಾಡ ತೊಡಗಿತೆಂದೂ ತಿಳಿದುಬರುತ್ತದೆ. ನಾಲ್ಕನೇ ವರ್ಷದಲ್ಲೇ ಸಾರ್ವಜನಿಕವಾಗಿ ಬೋಧನೆಯನ್ನೀಯಲಾರಂಭಿಸಿತು. ಏಳನೇ ವರ್ಷದಲ್ಲಿ ಶ್ರೀ ರಮಣಾಶ್ರಮಕ್ಕೆ ಹೋಗಿ ಮಹರ್ಷಿಗಳನ್ನೇ ನೋಡುತ್ತಾ, ಅರ್ಧ ಘಂಟೆ ಮೌನವಾಗಿ ಕುಳಿತು ಆ ಮೇಲೆ ಕಣ್ಣೀರಿಟ್ಟನು. ಅಂದಿನಿಂದ ಈ ಬಾಲಕನು ರಮಣಾಶ್ರಮದಲ್ಲಿಯೇ ಇದ್ದು ತನ್ನ ಧಾರ್ಮಿಕ ಬುದ್ಧಿ ಮತ್ತು ವೈರಾಗ್ಯದಿಂದ ಜನರಲ್ಲಿ ವಿಸ್ಮಯವನ್ನುಂಟುಮಾಡಿರುವನು.

ಹಿಟ್ಲರರ ಜೋಯಿಸರ ದಸ್ತಗಿರಿ

ಹಿಟ್ಲರರ ಜೋಯಿಸರಾದ ಡಾಕ್ಟರ್ ಹೆಬರರು ದಸ್ತಗಿರಿಮಾಡಲ್ಪಟ್ಟಿರುವರೆಂದು ತಿಳಿದುಬರುತ್ತದೆ. ಇತ್ತಲಾಗಿ ಡಾಕ್ಟರ್ ಹೆಬರರ ಭವಿಷ್ಯಗಳೆಲ್ಲಾ ಸುಳ್ಳಾಗಿರುವವು. ಇಂಗ್ಲೆಂಡು ಯುದ್ಧಕ್ಕೆ ಬರಲಾರದೆಂದವರು ಹೇಳಿದ್ದರು, ಅದು ಸುಳ್ಳಾಯಿತು. ಬಾಲ್ಕನಿನಲ್ಲಿ ಹಿಟ್ಲರರಿಗೆ ರಾಜನೈತಿಕ ವಿಜಯವಾಗುವುದೆಂಬ ಭವಿಷ್ಯವೂ ಸುಳ್ಳಾಗಿ ಟರ್ಕಿಯು ಜರ್ಮನಿಗೆ ವಿರೋಧವಾಯಿತು. ಡಾಕ್ಟರ್ ಹೆಬರರು, ಹಿಟ್ಲರರನ್ನು 30ವರ್ಷಗಳ ಯುದ್ಧದ ಸೇನಾನಿ ವಾಲ್ಲೆನ್ ಸ್ಟೈನಿಕರಿಗೆ ಸರಿಹೋಲಿಸಿದರು. ಈ ಸೇನಾನಿಯನ್ನು ಅವರ ಸೈನಿಕರೇ ಕೊಲೆಮಾಡಿದ್ದರು. ಇದರಿಂದ ಸಿಟ್ಟುಗೊಂಡ ಹಿಟ್ಲರರು ಹೆಬರರನ್ನು ಕೈದುಮಾಡಿಸಿ ಬಂಧನದಲ್ಲಿರಿಸಿದರು.

ಸಮಾಚಾರ ಸಂಗ್ರಹ

ಇಂಗ್ಲೆಂಡಿನ ಕುರಿತು ಜಪಾನರ ಕ್ರೋಧ

ಆಸಮಮಾರು ಎಂಬ ಜಪಾನ ಹಡಗವೊಂದನ್ನು ಶಾಂತ ಸಾಗರದಲ್ಲಿ ಬ್ರಿಟಿಷ್ ಯುದ್ಧ ಹಡಗಗಳು ನಿಲ್ಲಿಸಿ ಅದರಲ್ಲಿದ್ದ ಜರ್ಮನರನ್ನು ಸೆರೆ ಹಿಡಿದುದರಿಂದ ಜಪಾನ ಸರಕಾರವೂ ಜನರೂ ಬಹಳ ಕ್ರೋಧಗೊಂಡು ಟೋಕಿಯೋ ಪಟ್ಟಣದ ಬ್ರಿಟಿಷ್ ರಾಯಭಾರಿ ನಿವಾಸದ ಬಳಿ ಜನರು ನಿಷೇಧ ಪ್ರದರ್ಶನಗಳನ್ನು ನಡಿಸಿರುವರು. ಇದರಿಂದ ಬ್ರಿಟಿಷ್ ಸರಕಾರವು ಜಪಾನ ಜನಾಂಗಕ್ಕೇನೇ ಅಪಮಾನ ಮಾಡಿದಂತಾಗಿದೆಯೆಂದೂ, ಅದಕ್ಕೆ ತಕ್ಕ ಪ್ರತೀಕಾರ ಮಾಡಿಯೇ ಸಿದ್ಧವೆಂದೂ ಜಪಾನ ಪತ್ರಿಕೆಗಳು ಇಂಗ್ಲೆಂಡಿನ ವರ್ತನೆಯನ್ನು ಉಗ್ರವಾಗಿ ಟೀಕಿಸಿರುತ್ತವೆ. ಜನರು ಉದ್ವೇಗಗೊಂಡಿರುತ್ತಾರೆ. ಜಪಾನ ಸರಕಾರವು ತೀವ್ರ ನಿಷೇಧ ಸೂಚಿಸಿದೆ. ತಾವು ಅಕ್ರಮವಾದುದೇನನ್ನೂ ಮಾಡಿಲ್ಲೆಂದೂ, ಜರ್ಮನಿಯು ಹಲವು ವೇಳೆ ಹೀಗೆ ಮಾಡಿರುವುದೆಂದೂ, ಜಪಾನರಿಗೆ ಅವಮಾನಿಸುವ ಆಲೋಚನೆಯೇ ಇರಲಿಲ್ಲೆಂದೂ ಬ್ರಿಟಿಷ್ ಸರಕಾರವು ತಿಳಿಸಿರುವುದು. ಆದರೂ ಜಪಾನರು ತೃಪ್ತರಾಗಿರುವುದಿಲ್ಲ. ಅವರು ಪ್ರತೀಕಾರಾರ್ಥವಾಗಿ ಬ್ರಿಟಿಷ್ ಹಡಗಗಳನ್ನು ನಿಲ್ಲಿಸ ತೊಡಗಿರುವರು.

3 ಹಳ್ಳಿಗಳ ನಾಶದ ಶಿಕ್ಷೆ

ವಾಯವ್ಯ ಗಡಿನಾಡಿನ ಆಫ್ರಿದಿ ಪಂಗಡಿಗರ ಪ್ರದೇಶದ ಟೀರಾ ಎಂಬಲ್ಲಿ ಎರಡು ತಂಡಗಳೊಳಗೆ ಯಾವಾಗಲೂ ಕಲಹವೆದ್ದು ಕೊಲೆ ಲೂಟಿಗಳು ನಡೆಯುತ್ತಾ ಇದ್ದವು. ಇದರಿಂದ ಜುಗುಪ್ಸೆಗೊಂಡು ಈ ತಂಡಗಳ ಧಾರ್ಮಿಕ ಗುರುವಾದ ಹಾಜಿಮಹಮ್ಮದ್ ಸೈಯದ್ ಅಖುಂಜಾದಾರವರು, ಇನ್ನುಮುಂದೆ ಈ ತಂಡಗಳವರು ಜಗಳ ಮಾಡಿಕೊಂಡರೆ ಕಠಿಣವಾಗಿ ಶಿಕ್ಷಿಸಲಾಗುವುದೆಂದು ಕಟ್ಟಾಜ್ಞೆಯಿತ್ತರು. ಈ ಆಜ್ಞೆಯನ್ನುಲ್ಲಂಘಿಸಿ ಒಂದು ತಂಡದ ಪಾಲಕರನ್ನು ಇನ್ನೊಂದು ತಂಡದವರು ಕೊಲೆಮಾಡಿದರು. ಕೂಡಲೆ ಹಾಜಿ ಮಹಮ್ಮದ್ ಸೈಯದರು ತನ್ನ ಅನುಯಾಯಿಗಳೊಂದಿಗೆ ಕೊಲೆಗಾರ ತಂಡದವರ ಪ್ರದೇಶಕ್ಕೆ ಹೋಗಿ ಅವರು ಕೊಲೆ ಮಾಡಿದುದು ನಿಜವೆಂಬುದರ ಕುರಿತು ರುಜುವಾತು ಪಡೆದು ಅವರ 3 ಹಳ್ಳಿಗಳನ್ನು ನಾಶಮಾಡುವ ಮತ್ತು ರೂ.10,000 ಜುಲ್ಮಾನೆಯ ಶಿಕ್ಷೆ ವಿಧಿಸಿದರು. ಆ ಪ್ರಕಾರ ಆ ಹಳ್ಳಿಗಳನ್ನು ಸುಟ್ಟು ನಾಶಮಾಡಿ ಜುಲ್ಮಾನೆ ಹಣವನ್ನು ವಸೂಲುಮಾಡಿದರು.

ಜಪಾನಿನೊಡನೆ ಸಂಧಿಯಿಲ್ಲ

ಜಪಾನು ಈಗ ತನ್ನ ಕೈಗೊಂಬೆಯ ಕೇಂದ್ರ ಸರಕಾರವನ್ನು ಚೈನದಲ್ಲಿ ಸ್ಥಾಪಿಸುವ ಏರ್ಪಾಡುಮಾಡುತ್ತಿರುವುದು. ಜನರಲ್ ವಾಂಗ್‌ಚಂಗ್ ವೈಯವರೇ ಇದರ ಮುಖ್ಯಸ್ಥರು. ಜನರಲ್ ವಾಂಗರು, ಮಾರ್ಶಲ್ ಚ್ಯಾಂಗರು ಜಪಾನರೊಡನೆ ರಾಜಿಮಾಡಿಕೊಳ್ಳುವಂತೆ ಒತ್ತಾಯಪಡಿಸಿ ಭಗ್ನ ಮನೋರಥರಾಗಿರುವರು. ಚೀನೀ ರಾಷ್ಟ್ರೀಯ ಸರಕಾರವು ಜಪಾನರೊಡನೆ ಸಂಧಿಮಾಡಿಕೊಳ್ಳುವ ಸಂಭವವೇ ಇರುವುದಿಲ್ಲ. ಜನರಲ್ ವಾಂಗರು, ಅಧಿಕಾರಲಾಲಸೆಯಿಂದ ತನ್ನ ದೇಶದ ಸ್ವಾತಂತ್ರ್ಯವನ್ನು ವಿಕ್ರಯಿಸಲು ಮುಂದಾಗಿರುವರು. ಜಪಾನರಿಗೆ ಇನ್ನು ಹೆಚ್ಚು ಕಾಲ ಚೀನೀ ಯುದ್ಧವನ್ನು ನಡಿಸಲು ಸಾಧ್ಯವಾಗಲಾರದು. ಅವರ ಸಾಂಪತ್ತಿಕ ಸ್ಥಿತಿಯು ಬಹಳವಾಗಿ ಕೆಟ್ಟುಹೋಗಿರುವುದು. ಮಾತ್ರವಲ್ಲದೆ ಸಹಸ್ರಗಟ್ಟಲೆ ತರುಣರು ಚೀನೀ ರಣರಂಗದಲ್ಲಿ ಮಡಿಯುತ್ತಿರುವರು. ಚೀನೀ ಯುದ್ಧದ ಪರಿಣಾಮವಾಗಿ ಕಟ್ಟಕಡೆಗೆ ಜಪಾನರ ಅಧೋಗತಿ ನಿಶ್ಚಯವೆಂಬಂತೆ ತೋರುತ್ತದೆ.

ಮನುಷ್ಯನ ಹೊಟ್ಟೆಯೊಳಗೆ ಹಾವು.

ಯುಗೊಸ್ಲಾವಿಯದ ಹಳ್ಳಿಯೊಂದರಲ್ಲಿ ನಿಕಾ ಸ್ಟಾಂಕೊವಿಚನೆಂಬ 60ವರ್ಷದ ಮುದುಕನೊಬ್ಬನು, ತನ್ನ ಮನೆಯ ಹತ್ತಿರದ ಕೊಳದಲ್ಲಿ ಸ್ನಾನ ಮಾಡುವಾಗ ತಿಳಿಯದೇನೇ ಹಾವೊಂದನ್ನು ನುಂಗಿಬಿಟ್ಟ. ಈ ಹಾವು ಆತನ ಹೊಟ್ಟೆಯಲ್ಲೇ ಒಂದು ವರ್ಷದ ವರೆಗೆ ಬದುಕಿ ಬೆಳೆಯಿತು. ಒಂದು ವರ್ಷದ ಮೇಲೆ ನಿಕಾ ಸ್ಟಾಂಕೊವಿಚನಿಗೆ ತೀವ್ರ ಹೊಟ್ಟೆ ನೋವು ಆರಂಭವಾಗಿ ಏನೇನು ಮದ್ದು ಮಾಡಿದರೂ ನಿಲ್ಲಲಿಲ್ಲ. ಬ್ರೇಂಡಿ ಕುಡಿದು ಹೊಗೆಬತ್ತಿ ಸೇದಿದರೆ ಮಾತ್ರ ನೋವು ಸ್ವಲ್ಪ ಕಡಿಮೆಯಾಗುತ್ತಿತ್ತು, ಅವನ ಹೊಟ್ಟೆಯಲ್ಲೇನೋ ಹುರುಳಿದಂತಾಗುತ್ತಿತ್ತು. ನಿಕಾನು 15ದಿವಸ ಕಟ್ಟುಪವಾಸ ಮಾಡಿ ನೋಡಿದ, ನೋವು ಮತ್ತೂ ಹೆಚ್ಚಾಗಿ ಸಹಿಸಲಾರದೆ ತಾನು ಸಾಯುವುದು ನಿಶ್ಚಯವೆಂದು ನೆನಸಿಕೊಂಡ. ಅನಂತರ ಅವನ ಗೆಳೆಯನೊಬ್ಬನು ಹೇಳಿದ ಪ್ರಕಾರ ಸುಡುವಷ್ಟು ಬಿಸಿ ಹಾಲನ್ನು ಒಮ್ಮೆಯೇ ಕುಡಿದುಬಿಟ್ಟ. ಬಾಯಿ ಮತ್ತು ಕುತ್ತಿಗೆಯೆಲ್ಲಾ ಸುಟ್ಟು ಹೋಯಿತು. ಆಗ ಅವನಿಗೆ ಒಮ್ಮೆಯೇ ಓಕರಿಕೆಯುಂಟಾಯಿತು. ಆ ಮೇಲೆ ಹೊಟ್ಟೆಯಿಂದ ಹಾವೊಂದು ಹೊರಳಿ ಬಂದು

ತುಳುನಾಡ್ ಬೇಂಕ್
ಆಫ್ ಸಪ್ಲೈಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	Rs 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.
ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.
ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK
OF SUPPLY AGENCY LIMITED.

ಹೊರಬಿತ್ತು. ಅದು ಜೀವದಿಂದಿದ್ದು 1½ ಅಡಿ ಉದ್ದವಾಗಿತ್ತು. ಅದನ್ನು ಕೊಂದು ಸಿರ್ಕಾರಹಾಕಿದ ಕುಪ್ಪಿಯೊಳಗಿಟ್ಟಿರು. ಒಂದು ವರ್ಷಕ್ಕಿಂತ ಸ್ವಲ್ಪ ಮೊದಲು ನೀರನ್ನು ಕೊಳವೊಂದರಡಿಗೆ ಮಲಗಿರುವಾಗ ಆಕಸ್ಮಾತ್ತಾಗಿ ಬಾಯಿ ತುಂಬ ನೀರು ಕುಡಿದನಂತೆ. ಆಗ ನೀರಿನೊಟ್ಟಿಗೆ ಸುರುಳಿ ಕಟ್ಟಿದುದನ್ನೇನನ್ನೋ ತಾನು ನುಂಗಿದೆನೆಂದು ತಿಳಿದು ಚಕಿತನಾದನಂತೆ. ಆದರೆ ಮತ್ತೇನೂ ಮಾಡಲಾಗದೆ ಆ ವಿದ್ಯಮಾನವನ್ನೇ ಮರೆತು ಬಿಟ್ಟಿದ್ದನಂತೆ.

ಮುಸ್ಲಿಮ್ ಲೀಗ್ ಪ್ರಚಾರ ಫಂಡು.

ಮಿ. ಜಿನ್ನಾರವರು ಸ್ವತಂತ್ರವಾಗಿ ಪತ್ರಿಕೆಯೊಂದನ್ನು ಸ್ಥಾಪಿಸುವ ಆಲೋಚನೆಯಲ್ಲಿದ್ದಾರೆ. ಅದಕ್ಕಾಗಿ ಹಣ ಸಂಗ್ರಹಿಸಲು ಒಂದು ಕಮಿಟಿಯನ್ನು ಸ್ಥಾಪಿಸಿ ಈ ಕಮಿಟಿಯವರೊಂದಿಗೆ ಕಥಿಯಾವಾಡ ಮೊದಲಾದ ಸ್ಥಳಗಳಲ್ಲಿ ಒಂದು ವಾರ ಸಂಚರಿಸಿ ಹಣ ಶೇಖರಿಸುತ್ತಿದ್ದಾರೆ. ಕಲ್ಕತ್ತದ ಸರ್. ಆದಮ್ಜಿ ದಾವೂದರು, ಈ ಫಂಡಿಗೆ ರೂ. ೨೦,೦೦೦ ದಾನ ಕೊಟ್ಟಿರುತ್ತಾರೆ ಕಥಿಯಾವಾಡದ ಶ್ರೀಮಂತ ಮೊಮಿನ್ ವ್ಯಾಪಾರಿಗಳು ಉದಾರ ಸಹಾಯ ಮಾಡಿರುತ್ತಾರೆ.

ದರ್ಬಾರ್ ವೀರವಾಲರ ಮರಣ

ರಾಜಕೋಟೆ ಸಂಸ್ಥಾನದ ಪ್ರಕರಣದಲ್ಲಿ ಮುಖ್ಯ ಸೂತ್ರಧಾರಿಯಾಗಿ ತರುಣ ಸಂಸ್ಥಾನಾಧಿಪತಿಯನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡು ಗಾಂಧಿಜಿಯವರನ್ನು ಜಯಶೀಲವಾಗಿ ವಿರೋಧಿಸಿದ ದರ್ಬಾರ್ ವೀರವಾಲರವರು ಇತ್ತಲಾಗಿ ಕೆಲಸಮಯದಿಂದ ಕಠಿಣ ರೋಗಗ್ರಸ್ತರಾಗಿದ್ದು ಜನವರಿ ತಾ. 24ರಲ್ಲು ಮೃತರಾಗಿರುವರು.

ಮಹಾತ್ಮಾ ಗಾಂಧಿಯವರು

ಫೆಬ್ರವರಿ ತಾ. ೪ಕ್ಕೆ ವಾರ್ಧಾದಿಂದ ಡಿಲ್ಲಿಗೆ ಹೋಗಿ ತಾ. ೫ ಮತ್ತು ೬ರಲ್ಲು ವೈಸರಾಯರನ್ನು ಕಾಣಲಿರುವರು. ಆಗತ್ಯವಿದ್ದರೆ ಅವರು ಮತ್ತೂ ಕೆಲವು ದಿನ ಡಿಲ್ಲಿಯಲ್ಲಿ ಉಳಿಯುವರು. ಜನವರಿ ತಾರೀಕು ೨೫ರಲ್ಲು ಶ್ರೀ. ಎಂ. ಎಸ್. ಆಣೆಯವರು ಅವರನ್ನು ಕಂಡುಮಾತಾಡಿದರು.

ಜಪಾನಿನ ಉಭಯ ಸಂಕಟ

ಜಪಾನು ಅಮೆರಿಕದ ಯುನೈಟೆಡ್ ಸ್ಟೇಟಿಗೆ ತನ್ನ ಹೆಚ್ಚಿನ ಸಾಮಾನುಗಳನ್ನು ಕಳುಹಿಸುತ್ತದೆ, ಮತ್ತು ಅಲ್ಲಿಂದ ತನಗೆ ಬೇಕಾದ ಸಾಮಾನುಗಳನ್ನು ತರಿಸುತ್ತದೆ. ಯುದ್ಧ ಸಾಮಗ್ರಿಗಳನ್ನೀಗ ಅದು ಹೆಚ್ಚಾಗಿ ಅಮೇರಿಕದಿಂದಲೇ ತರಿಸಬೇಕಾಗಿದೆ. ಆದರೆ ಚೀನದ ಅಮೇರಿಕಾನ ವ್ಯಾಪಾರದ ಹಕ್ಕುಬಾಧ್ಯತೆಗಳಿಗೆ ಜಪಾನು ಹಾನಿಯನ್ನುಂಟುಮಾಡಿದುದರಿಂದ ಸಂತಪ್ತವಾದ ಅಮೇರಿಕವು 6 ತಿಂಗಳ ನೋಟೀಸು ಕೊಟ್ಟು ಜಪಾನಿನ ವ್ಯಾಪಾರ ಸಂಬಂಧವನ್ನು ಕಡಿದು ಹಾಕಿರುವುದು. ಈ ಅವಧಿಯು ಜನವರಿ ತಾ. 25ಕ್ಕೆ ಮುಗಿದಿರುವುದು. ಜಪಾನು ಅಮೇರಿಕವನ್ನು ಸಮಾಧಾನ ಪಡಿಸಿ ಹೊಸ ಒಪ್ಪಂದಮಾಡಿಕೊಳ್ಳಲು ಬಹಳವಾಗಿ ಪ್ರಯತ್ನಿಸುತ್ತಿರುವುದು ಆದರೆ ಯುನೈಟೆಡ್ ಸ್ಟೇಟ್ ಸರಕಾರವು ಇಷ್ಟರ ವರೆಗೆ ಒಪ್ಪಿರುವುದಿಲ್ಲ. ಜಪಾನು ಮತ್ತು ಯುನೈಟೆಡ್ ಸ್ಟೇಟುಗಳೊಳಗೆ ಹೊಸ ಒಪ್ಪಂದವಾಗದಿದ್ದ ಪಕ್ಷದಲ್ಲಿ ಜಪಾನಿನ ಸಾಂಪತ್ತಿಕ ಸ್ಥಿತಿಯು ಮತ್ತಷ್ಟು ಕೆಟ್ಟುಹೋಗುವುದು ಜಪಾನು ಚೀನದಲ್ಲಿ ಸಂಪೂರ್ಣ ಅಧಿಕಾರ ಸ್ಥಾಪಿಸಲೆತ್ನಿಸುತ್ತಿರುವುದು. ಅದಕ್ಕೆ ಅಮೇರಿಕವು ಒಪ್ಪುವ ಹಾಗಿಲ್ಲ. ಜಪಾನು ಚೈನದಲ್ಲಿ ಅಮೇರಿಕದ ಹಕ್ಕು ಬಾಧ್ಯತೆಗಳನ್ನು ಮನ್ನಿಸದೆ ಅದು ಜಪಾನಿನೊಡನೆ ಹೊಸ ಒಪ್ಪಂದಮಾಡಿಕೊಳ್ಳುವ ಹಾಗಿಲ್ಲ. ಹೀಗೆ ಜಪಾನು ದೊಡ್ಡ ಉಭಯ ಸಂಕಟದಲ್ಲಿ ಬಿದ್ದಿದೆ.

ವಿಚಾರಣೆಯು ಸಾಧ್ಯವಿಲ್ಲ

ಕಾಂಗ್ರೆಸ್ ಮಂತ್ರಿಗಳ ಆಡಳಿತದಿಂದ ಅಲ್ಪ ಸಂಖ್ಯಾಕರಿಗುಂಟಾಗುವ ಅನ್ಯಾಯಗಳ ಕುರಿತು ವಿಚಾರಿಸಲು ರೋಯಲ್ ಕಮಿಶನೊಂದನ್ನು ನೇಮಿಸಬೇಕೆಂದು ಮಿ. ಜಿನ್ನರು ಕೇಳಿಕೊಂಡಿರುವರಷ್ಟೆ. ಈ ಕುರಿತು ಜನವರಿ ತಾ. 25ರಲ್ಲು ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ನಡೆದಾಗ ಇಂಡಿಯಾ ಅಂಡರ್ ಸೆಕ್ರೆಟರಿಗಳು, ಅಂತಹ ವಿಚಾರಣೆಯು ಇತ್ತಂಡದವರಿಗೂ ಹಿತಕರವಾಗದೆಂದೂ, ಆದರಿಂದ ಮತ್ತಷ್ಟು ಹಿಂದು ಮುಸಲ್ಮಾನ ವೈಷಮ್ಯವು ಬೆಳೆಯುವಂತಾಗುವುದೆಂದೂ ಉತ್ತರವಿತ್ತಿರುವರು. ಆದುದರಿಂದ ಮಿ. ಜಿನ್ನರ ರೋಯಲ್ ಕಮಿಶನಿನ ವಿಚಾರಣೆಯು ಆಶೆ ನಿರಾಶೆಯಾಯಿತು.

ಸಿಂಧ್ ಪ್ರಾಂತದ ಹಿಂದೂ ಮಂತ್ರಿಗಳ ರಾಜಿನಾಮೆ

ಸುಕೂರಿನ ಬಳಿಯ ಮಂಜಿಲ್ಗಾ ಎಂಬ ಸ್ಥಳವನ್ನು ಹಿಂದುಗಳು ತಮ್ಮದೆಂದು ಸಾಧಿಸುವುದು ತಪ್ಪೆಂದು ಸಿಂಧಿನ ಪ್ರಧಾನ ಮಂತ್ರಿಗಳು ಸ್ಪಷ್ಟವಾಗಿ ಹೇಳಿರುವರು. ಆ ಸ್ಥಳವು ಯಾರ ಹಕ್ಕಿನದೆಂಬುದರ ಕುರಿತು ವಿಚಾರಿಸಲು ಕಮಿಟಿಯನ್ನು ಸ್ಥಾಪಿಸಲು ಅವರು ತಯಾರಿಲ್ಲ. ಹಿಂದು ಪಕ್ಷದ ನಿರ್ಧಾರದಂತೆ ಜನವರಿ ತಾ. 26ರಲ್ಲು ಅಲ್ಲಾಬಕ್ಷ್ ಮಂತ್ರಿ ಮಂಡಲದ ಹಿಂದೂ ಮಂತ್ರಿಗಳಾದ ಶ್ರೀ. ನಿಚಲ್ದಾಸ್ ವಜೀರಾನಿ ಮತ್ತು ಶ್ರೀ ದಯಾಮಲ್ ದೌಲತ್ರಾಮರು ರಾಜಿನಾಮೆ ಕೊಟ್ಟಿರುವರು. ರಾಜಿಯ ಪ್ರಯತ್ನವು ನಡೆಯುತ್ತಿರುವುದು. ಸಿಂಧ್ ಎಸೆಂಬ್ಲಿಯಲ್ಲಿ ಒಟ್ಟು 59 ಮಂದಿ ಮೆಂಬರರಿರುತ್ತಾರೆ. ಇವರಲ್ಲಿ ಕಾಂಗ್ರೆಸ್ ಮೆಂಬರರು 10 ಮಂದಿ. ಹಿಂದು ಸ್ವತಂತ್ರ ಪಕ್ಷೀಯರು 10 ಮಂದಿ. ಮತ್ತು ಮುಸ್ಲಿಮ್ ಲೀಗಿನವರು 8 ಮಂದಿ ಅಲ್ಲಾಬಕ್ಷರ ಬೆಂಬಲಕ್ಕೆ 25 ಮಂದಿ ಮುಸಲ್ಮಾನ ಮೆಂಬರರು, ಇಬ್ಬರು ಸ್ವತಂತ್ರ ಮೆಂಬರರು ಮತ್ತು 3 ಮಂದಿ ಯುರೋಪಿಯನರಿರುತ್ತಾರೆ. ಹೀಗೆ ಸರಕಾರಕ್ಕೆ ಕೇವಲ ಒಬ್ಬ ಮೆಂಬರರ ಬಹುಪಕ್ಷವಿದೆ.

ಸ್ವಾತಂತ್ರ್ಯ ದಿನಾಚರಣೆ

ಜನವರಿ ತಾ. ೨೬ರಲ್ಲು ಸಂಪೂರ್ಣ ಸ್ವಾತಂತ್ರ್ಯ ದಿನಾಚರಣೆಯು ದೇಶದಲ್ಲೆಲ್ಲಾ ಅತ್ಯುತ್ಸಾಹದಿಂದ ಆಚರಿಸಲ್ಪಟ್ಟಿರುವುದು. ಅಹಮ್ಮದಾಬಾದಿನಲ್ಲಿ ಶ್ರೀ ವಲ್ಲಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ದೊಡ್ಡ ಸಭೆ ನಡೆದು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಲಾಯಿತು. ಅಲಹಾಬಾದಿನಲ್ಲಿ ಪಂಡಿತ ಜವಾಹರಲಾಲರು ಬೆಳಗ್ಗೆ ಧ್ವಜಾರೋಹಣ ಮಾಡಿದರು. ಮತ್ತು ಸ್ಥಳೀಯ ಕ್ರಿಶ್ಚನ್ ಕೊಲೇಜಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನಾರಂಭಿಸಿದರು. ಬೊಂಬಾಯಿಯಲ್ಲಿ ತಾ. 20 ಬೆಳಗ್ಗೆ ದೊಡ್ಡ ಮೆರವಣಿಗೆ ನಡೆದು ಶ್ರೀ ಭೂಲಭಾಯಿ ದೇಸಾಯಿಯವರು ಚೌಪಾಟಿಯಲ್ಲಿ ಧ್ವಜಾರೋಹಣ ಮಾಡಿದರು. ಮಾತುಂಗದಲ್ಲಿ ಶ್ರೀ. ಬಿ. ಜಿ ಖೇರರು ಧ್ವಜಾರೋಹಣ ಮಾಡಿದರು, ಬೊಂಬಾಯಿಯಲ್ಲಿ ಮಾರ್ಕೆಟುಗಳು ಮತ್ತು ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ವಾರ್ಧದಲ್ಲಿ ಶ್ರೀ ಮಹದೇವ ದೇಸಾಯಿಗಳು ರಾಷ್ಟ್ರೀಯ ಧ್ವಜಾರೋಹಣ ಮಾಡಿದರು. ಮಹಾತ್ಮ ಗಾಂಧಿಯವರು ಪ್ರಾರ್ಥನೆ ಮತ್ತು ಉಪವಾಸದಿಂದ ಸ್ವಾತಂತ್ರ್ಯ ದಿನವನ್ನಾಚರಿಸಿದರು. ಅವರೊಂದಿಗೆ ಡಾಕ್ಟರ್ ರಾಜೇಂದ್ರ ಪ್ರಸಾದರೂ ಉಪವಾಸ ವ್ರತ ಹಿಡಿದಿದ್ದರು. ಮದ್ರಾಸಿನಲ್ಲಿ ಶ್ರೀ ಸತ್ಯ ಮೂರ್ತಿಗಳು ರಾಷ್ಟ್ರೀಯ ಧ್ವಜಾರೋಹಣ ಮಾಡಿದರು. ಸಂಜೆ ಶ್ರೀ ಸತ್ಯಮೂರ್ತಿಗಳ ಅಧ್ಯಕ್ಷತೆಯಲ್ಲಿ ದೊಡ್ಡ ಸಾರ್ವಜನಿಕ ಸಭೆ ನಡೆದು ಶ್ರೀ. ರಾಜಗೋಪಾಲಾಚಾರ್ಯರು, ಇಡೀ ದೇಶವು ಒಕ್ಕಟ್ಟಾಗಿ ಗಾಂಧಿಜಿಯವರನ್ನು ಅನುಸರಿಸಬೇಕೆಂದು ಕೇಳಿಕೊಂಡರು. ರೊಯಪುರಮ್, ಹ್ಯಾರಿಕೋರ್ಟ್ ಬ್ರಿಜ್ ಮೊದಲಾದ ಕಡೆಗಳಲ್ಲಿಯೂ ಸಭೆಗಳು ನಡೆದಿದ್ದವು. ವಿದ್ಯಾರ್ಥಿಗಳೂ, ಮಜೂರರೂ ಸಭೆಗಳನ್ನು ನಡಿಸಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಂಡಿರುವರು. ಬೊಂಬಾಯಿ, ಕಲ್ಕತ್ತ, ಲಾಹೋರು, ಡಿಲ್ಲಿ ಮೊದಲಾದ ಕಡೆಗಳಲ್ಲಿ ಮುಸಲ್ಮಾನರೂ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಉತ್ಸಾಹದಿಂದ ಭಾಗ ವಹಿಸಿರುವರು.

ಜನರಲ್ ಸ್ಮಟ್ಸರಿಗೆ ಬೆಂಬಲ

ದಕ್ಷಿಣ ಆಫ್ರಿಕವು ಯುದ್ಧದಲ್ಲಿ ತಟಸ್ಥರಾಗಿರಬೇಕೆಂಬ ಘೋರಣೆ ವಹಿಸಿದ ಪ್ರಧಾನ ಮಂತ್ರಿ ಜನರಲ್ ಹರ್ಟ್ಸೊಗರು ಅಧಿಕಾರ ಚ್ಯುತರಾಗಿ ಜನರಲ್ ಸ್ಮಟ್ಸರು ಅಧಿಕಾರಕ್ಕೆ ಬಂದಿರುವರಷ್ಟೇ. ಜನರಲ್ ಸ್ಮಟ್ಸರ ಧೋರಣೆಯನ್ನು ನಿಷೇಧಿಸಿ, ಯುರೋಪಿನ ಯುದ್ಧದಲ್ಲಿ ದಕ್ಷಿಣ ಆಫ್ರಿಕವು ಭಾಗವಹಿಸುವುದು ಅನುಚಿತವೆಂದು ಖಂಡಿಸಿ ಜನರಲ್ ಹರ್ಟ್ಸೊಗರು ಸೂಚನೆಯೊಂದನ್ನು ಎಸೆಂಬ್ಲಿಯಲ್ಲಿ ತಂದು ಆ ಕುರಿತು ೬ ದಿನಗಳ ವರೆಗೆ ತೀವ್ರ ಚರ್ಚೆ ನಡೆಯಿತು ಯುರೋಪಿನ ಯುದ್ಧಕ್ಕೆ ವರ್ಸೆಲಿನ ಒಪ್ಪಂದವೇ ಕಾರಣ ಯುರೋಪಿನ ಹಾಗೂ ಲೋಕದ ಮೇಲೆ ಅಧಿಕಾರ ನಡೆಸಬೇಕೆಂದು ಹಿಟ್ಲರರು ಆಶಿಸುವರೆಂಬುದು ಸುಳ್ಳು ಬ್ರಿಟಿಷರ ಅಧಿಕಾರ ಲಾಲಸೆಯೇ ಈ ಯುದ್ಧಕ್ಕೆ ಕಾರಣ ಯುರೋಪಿನ ಯುದ್ಧಕ್ಕೂ ದಕ್ಷಿಣ ಆಫ್ರಿಕಕ್ಕೂ ಯಾವ ಸಂಬಂಧವೂ ಇಲ್ಲ ಅನಾಹುತಕಾರಿಯಾದ ಈ ಯುದ್ಧವು ಬೇಗನೆ ಕೊನೆಗೊಳ್ಳುವಂತಾಗಬೇಕು. ದಕ್ಷಿಣ ಆಫ್ರಿಕವು ತಟಸ್ಥವಹಿಸಬೇಕೆಂದೇ ಜನರಲ್ ಹರ್ಟ್ಸೊಗರ ಟೀಕೆ. ದಕ್ಷಿಣ ಆಫ್ರಿಕವು ಇಂಗ್ಲೆಂಡಿನ ಸಂಬಂಧವನ್ನೇ ಕಡಿದು ಹಾಕಬೇಕೆಂಬವಷ್ಟು ಕೂಡಾ ಮುಂದುವರಿದಿರುವರು ಡಾಕ್ಟರ್ ಮಲಾನರೇ ಮೊದಲಾದವರು. ದಕ್ಷಿಣ ಆಫ್ರಿಕದ ರಕ್ಷಣೆಗಾಗಿಯೇ ಅದು ಇಂಗ್ಲೆಂಡಿನ ಸಹಾಯಕ್ಕೆ ಹೋಗಬೇಕಾಗಿದೆ ಎಂದೆಲ್ಲಾ ಜನರಲ್ ಸ್ಮಟ್ಸರು ಜನರಲ್ ಹರ್ಟ್ಸೊಗರನ್ನು ಉಗ್ರವಾಗಿ ಟೀಕಿಸಿ ಹಿಟ್ಲರರನ್ನು ನಿಷೇಧಿಸಿದ ಮೇಲೆ ಓಟುತೆಗೆದಾಗ ಹರ್ಟ್ಸೊಗರ ಸೂಚನೆಗೆ ೫೯ ಮತ್ತು ಅದರ ವಿರೋಧವಾಗಿ ೮೧ ಓಟುಗಳು ದೊರೆತು ಅದು ಬಿದ್ದು ಹೋಯಿತು.

Canara Bank Ltd.,

THE ONLY BANK TO HAVE A SHARE-HOLDERS ASSOCIATION TO SAFE-GUARD THE INTERESTS OF DEPOSITORS, CONSTITUENTS AND SHARE-HOLDERS.

RESOURCES OF A CRORE

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯ ಯಾ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲ, ಚಳಿಜ್ವರ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವದು, ಹಾಗೂ ಆಲಸ್ಯ ಯಾ ವಾಯುಗಳೆಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, 5-0-0, 1000, 9-0-0.

5ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ಗುಟಿ) ಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ,

(ರಿಜಿಸ್ಟರ್ಡ್) ಕುಂಜಾಲು.

ಪೋಸ್ಟ್—ಬ್ರಹ್ಮಾವರ, ದ. ಕ.

ರಸ್ಯ ಮತ್ತು ಅದರ ನೆರೆಯ ರಾಷ್ಟ್ರಗಳು.

ಲೆನಿನ್‌ಗ್ರಾಡಿಗೆ ಫಿನ್ಲೆಂಡು ಬೀಗದಕೈ.

ಸೋವಿಯೆಟ್ ರಸ್ಯವು ಅನ್ಯಾಯಮಾಡುತ್ತಿರುವುದೇ?

ರಸ್ಯದ ದಕ್ಷಿಣದಲ್ಲಿ ಟರ್ಕಿಯುಂಟು, ಕಳೆದ ಮಹಾಯುದ್ಧದ ಕೊನೆಯಲ್ಲಿ ಗ್ರೀಕ್, ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಗಳು ಟರ್ಕಿಯ ಮೇಲೆ ಧಾಳಿ ನಡಿಸಿದಾಗ ರಸ್ಯದ ಸೋವಿಯೆಟ್ ಸರಕಾರವು ಅದನ್ನು ಮೈತ್ರಿಯಿಂದ ಕಂಡು, ಧೂರ್ತರು ವಶಪಡಿಸಿಕೊಂಡಿದ್ದ ಟರ್ಕಿಯ ಜನತೆಯು ನೆಲಸಿಕೊಂಡಿರುವ ಪ್ರದೇಶವನ್ನು ಅದಕ್ಕೆ ಬಿಟ್ಟುಕೊಟ್ಟು, ಹಣ ಸಾಲಕೊಟ್ಟು, ಅದರ ಔದ್ಯೋಗಿಕ ಅಭಿವೃದ್ಧಿಗೆ ನೆರವಾದುದು ಮಾತ್ರವಲ್ಲದೆ, ಅದರ ಸ್ವಾತಂತ್ರ್ಯದ ಕೈಕೀಲಿಯಂತಿರುವ ಡಾರ್ಡನೆಲ್ಲಿಸ್ ಬಂದರವನ್ನು ಭದ್ರಪಡಿಸುವ ಹಕ್ಕನ್ನದು ಪಡೆಯುವಂತೆ ಸಹಾಯಮಾಡಿರುವುದು. ಈಗ ಟರ್ಕಿಶ್ ಸರಕಾರವು 90,000,000 ಪವನು ಸಾಲಪಡೆದು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳೊಂದಿಗೆ ಒಡಂಬಡಿಕೆಮಾಡಿಕೊಂಡಿರುವುದು. ಇದರ ಪರಿಣಾಮವೇನಾಗುವುದೆಂದು ಹೇಳಬರುವುದಿಲ್ಲ. ಆದರೆ ಇಷ್ಟರವರೆಗೆ ಟರ್ಕಿ ಮತ್ತು ರಸ್ಯಗಳೊಳಗೆ ಮೊದಲಿನಂತೆಯೇ ಸ್ನೇಹವಿರುವುದು.

ಕಪ್ಪು ಸಮುದ್ರದ ಪಶ್ಚಿಮದಲ್ಲಿ ಬುಲ್ಗೇರಿಯ ಮತ್ತು ರುಮೇನಿಯ ದೇಶಗಳಿವೆ. ಬುಲ್ಗೇರಿಯವು ಬಡ ರಾಜ್ಯ. ಇಲ್ಲಿ ಪ್ರಜಾಶಾಹಿಪ್ರಿಯ ಕೃಷಿಕರು ಹೆಚ್ಚಾಗಿರುತ್ತಾರೆ. ಬೋರಿಸ್ ಎಂಬವರು ಇದರ ಅರಸರು. ಹಲವುವರ್ಷಗಳಿಂದ ಫೆಸಿಸ್ಟ್ ಸೈನ್ಯಾಧಿಕಾರಿ ಕೂಟವು ಬುಲ್ಗೇರಿಯವನ್ನಾಳುತ್ತಿರುವುದು. ಬುಲ್ಗೇರಿಯದ ಸಾಂಪತ್ತಿಕ ಸ್ಥಿತಿಯು ಸಂಪೂರ್ಣವಾಗಿ ಜರ್ಮನಿಯ ಆಮದು ರಫ್ತಿನ ಮೇಲೆ ಹೊಂದಿಕೊಂಡಿದ್ದಿತು. ಕಳೆದ ನೆಕೆಕಾಲದಲ್ಲಿ ರಸ್ಯವು ಇದಕ್ಕೆ ಸಹಾಯಮಾಡಿ ನಾಝಿ ಗುಲಾಮಗಿರಿಯಿಂದ ಅದನ್ನು ತಪ್ಪಿಸಿರುವುದು. ಮತ್ತು ಅದರೊಡನೆ ವ್ಯಾಪಾರ ಸಂಬಂಧವಾದ ಒಡಂಬಡಿಕೆಮಾಡಿಕೊಂಡಿರುವುದು. ಜನರು ರಸ್ಯದ ಕುರಿತು ಹೆಚ್ಚಿನ ಪ್ರೇಮವುಳ್ಳವರಾಗುತ್ತಿರುವರಾದರೂ ಆಳುವ ಪಂಗಡದವರು ಮುಸಲೋನಿಯವರೊಡನೆ ಒಳಸಂಚು ನಡಿಸುತ್ತಿದ್ದಾರೆ.

ರುಮೇನಿಯವು ಆಂಗ್ಲೇಯ ಮತ್ತು ಫ್ರೆಂಚ್ ಎಣ್ಣೆ ವ್ಯಾಪಾರಿಗಳ ಸೂತ್ರಜಾಲನೆಗೊಳಗಾಗಿದೆ. ಅದರ ಕಚ್ಚಾಪದಾರ್ಥಗಳನ್ನೆಲ್ಲಾ ಜರ್ಮನಿಯು ಪಡೆಯುತ್ತದೆ. ಅದರ ಕೆಲಸಗಾರರು ಮತ್ತು ಕೃಷಿಕರು ಪೀಡೆಗೊಳಗಾಗಿದ್ದಾರೆ. ರುಮೇನಿಯವು ಆಂಗ್ಲೇಯ ಮತ್ತು ಫ್ರೆಂಚ್ ಸರಕಾರಗಳಿಂದ ಹಣ ಸಹಾಯಪಡೆದು ಅವುಗಳೊಂದಿಗೆ ಒಪ್ಪಂದಮಾಡಿಕೊಂಡಿದೆ. ಕಳೆದ ಮಹಾಯುದ್ಧಾನಂತರ ರುಮೇನಿಯವು ಬೆಸ್ಸರೇಬಿಯ ಎಂಬ ಪ್ರದೇಶವನ್ನು ರಸ್ಯದಿಂದ ಕಸಕೊಂಡಿರುವುದು. ಅದರಲ್ಲಿ ಯೆಹೂದ್ಯರು, ಜಿಪ್ಸಿಗಳು, ಬುಲ್ಗೇರಿಯನರು, ಹಂಗೇರಿಯನರು ಮತ್ತು ಉಕ್ರೇನಿಯರೇ ಮೊದಲಾದವರಿರುತ್ತಾರೆ. ಈ ಪ್ರದೇಶಗಳೆಲ್ಲಾ ಕಳೆದ ಮಹಾಯುದ್ಧಾನಂತರ ಕಸಕೊಂಡವುಗಳಾಗಿವೆ. ಆದರೂ ರಸ್ಯವು ಜರ್ಮನಿಯ ಧಾಳಿಯ ಅಪಾಯದಿಂದ ರುಮೇನಿಯವನ್ನು ರಕ್ಷಿಸಿರುವುದು.

ಪೋಲೆಂಡು ರಸ್ಯಕ್ಕೆ ಎಷ್ಟೊಂದು ವಿರೋಧವಿದ್ದರೂ, ರಸ್ಯವು ಅದಕ್ಕೇನೂ ಹಾನಿಮಾಡಲಿಲ್ಲ. ಜರ್ಮನಿಯ ಎದುರಾಗಿ ಸಹಾಯಮಾಡಲು ಸಿದ್ಧವಿದ್ದಿತು. ಆದರೆ ಪೋಲಿಶ್ ಸರಕಾರದ ಅಧಿಕಾರಿಗಳಿಗೇನೇ ಆ ಮನಸ್ಸಿರಲಿಲ್ಲ. ಸೋವಿಯೆಟ್ ಸೇನೆಯು ಪೋಲೆಂಡಿಗೆ ಪ್ರವೇಶಿಸಬಾರದೆಂದು ಅವರ ಛಲವಿದ್ದಿತು. ಅದರ ಫಲವನ್ನವರು ಉಣ್ಣುವಂತಾಯಿತು. ಪೋಲೆಂಡಿನಲ್ಲಿಯೂ ಅಧಿಕಾರದಲ್ಲಿದ್ದುದು ಸೈನಿಕರ ಫೆಸಿಸ್ಟ್ ರಾಜ್ಯ. ಅದಕ್ಕೆ ಜನಬೆಂಬಲವಿರಲಿಲ್ಲ. ಅದು 10ದಿನಗಳೊಳಗೆ ನಾಶವಾದುದರಲ್ಲೇನೂ ಆಶ್ಚರ್ಯವಿಲ್ಲ.

ಲಿಥುವಾನಿಯ, ಲಟ್ವಿಯ ಮತ್ತು ಎಸ್ಟೋನಿಯಗಳು ಮೊದಲು ಝಾರರ ಸಾಮ್ರಾಜ್ಯಕ್ಕೇನೇ ಸೇರಿದವುಗಳು. ಅವುಗಳಿಗೆ ಸ್ವತಂತ್ರವಿತ್ತುದು ಸೋವಿಯೆಟ್ ಸರಕಾರ. ಆಮೇಲೆ ಈ ರಾಜ್ಯಗಳ ಸರಕಾರಗಳವರು ಜರ್ಮನ್ ಮತ್ತು ಬ್ರಿಟಿಷರ ಒಳಸಂಚಿಗೊಳಗಾಗಿ, ಅವರ ಸೇನಾ ಸಹಾಯದಿಂದ ಕಮ್ಯೂನಿಷ್ಟರನ್ನೆಲ್ಲಾ ಹಿಡಿದು ಗುಂಡಿಗೆ ಬಲಿಕೊಟ್ಟು ನಾಶಮಾಡಿದರು. ಒಂದು ಬಗೆಯ ಸರ್ವಾಧಿಕಾರಿ ರಾಜ್ಯಭಾರವು ಈ ದೇಶಗಳಲ್ಲಿ ಸ್ಥಾಪಿತವಾಗಿ ಆಳುವ ಕೂಟದವರು ರಸ್ಯದ ವಿರೋಧವಾಗಿ ಇಂಗ್ಲೆಂಡ್ ಮತ್ತು ಜರ್ಮನಿಗಳೊಡನೆ ಸಂಚುನಡಿಸಿ ಕೆಲವು ನೌಕಾನಿಲಯವನ್ನವುಗಳಿಗೆ ಬಿಟ್ಟುಕೊಡಲು ಕೂಡಾ ಸಿದ್ಧರಿದ್ದರು. ಈಗ ಸಂದರ್ಭನೋಡಿ ರಸ್ಯವು ಈ ರಾಜ್ಯಗಳ ಮೇಲೆ ತನ್ನ ಅಧಿಕಾರಸ್ಥಾಪಿಸಿರುವುದಾದರೂ ಅವುಗಳ ಸ್ವಾತಂತ್ರ್ಯವನ್ನೇನೂ ಅಪಹರಿಸಿರುವುದಿಲ್ಲ. ಲಿಥುವಾನಿಯದ ಪುರಾತನ ಪ್ರಧಾನ ಪಟ್ಟಣವನ್ನು ಪೋಲೆಂಡು ಅಪಹರಿಸಿತ್ತು. ಅದನ್ನು ರಸ್ಯವು ಅದಕ್ಕೇನೇ ಬಿಟ್ಟುಕೊಟ್ಟಿರುವುದು. ಲಟ್ವಿಯಾ ಎಸ್ಟೋನಿಯಗಳಿಗೂ ಸ್ವಲ್ಪ ಸ್ವಲ್ಪ ರಾಜ್ಯವನ್ನು ಬಿಟ್ಟುಕೊಟ್ಟಿರುವುದು.

ಫಿನ್ಲೆಂಡು ರಸ್ಯಕ್ಕೆ ತುಂಬಾ ಆಭಾರಿಯಾಗಿರಬೇಕಿತ್ತು. ಅದರ ಸ್ವಾತಂತ್ರ್ಯವನ್ನು ಪ್ರಥಮವಾಗಿ ಅಂಗೀಕರಿಸಿ ಮನ್ನಿಸಿದ ರಾಜ್ಯ ರಸ್ಯ. ಉತ್ತರ ಧ್ರುವದ ಕಡಲ ವಳಿಯವನ್ನು ಫಿನ್ಲೆಂಡಿಗೆ ಉದಾರ ಬುದ್ಧಿಯಿಂದ ಬಿಟ್ಟುಕೊಟ್ಟುದು ಸೋವಿಯೆಟ್ ಸರಕಾರ. ಆದರೆ ಫಿನ್ಲೆಂಡು ರಸ್ಯಕ್ಕೆ ವಿರೋಧವಾಗಿ ಇಂಗ್ಲೆಂಡು ಮತ್ತು ಜರ್ಮನಿಗಳೊಡನೆ ಒಳಸಂಚು ನಡಿಸಿ ಅವುಗಳಿಗೆ ನೌಕಾನಿಲಯಗಳನ್ನು ಬಿಟ್ಟುಕೊಡಲು ತಯಾರಿದ್ದಿತು. ಫಿನ್ಲೆಂಡಿನಲ್ಲಿ ಹೆಸರಿಗೆ ಪ್ರಜಾಶಾಹಿ ಸರಕಾರವು ಸ್ಥಾಪಿಸಲ್ಪಟ್ಟಿದೆ. ಆದರೆ ಫಿನ್ನಿಶ್ ಸೇನಾ ನಾಯಕರಾದ ಬೇರನ್ ಮೆನ್ನರ್ ಹೈಮರೇ ಅಲ್ಲಿಯ ಸರ್ವಾಧಿಕಾರಿಯಂತಿದ್ದಾರೆ. ಇವರು ಬ್ರಿಟಿಷ್ ಮತ್ತು ಜರ್ಮನ್ ಸೇನೆಯ ಸಹಾಯದಿಂದ ಫಿನ್ಲೆಂಡಿನ ಕಮ್ಯೂನಿಷ್ಟರನ್ನು ಸೋಲಿಸಿ ಕಡೆಗೆ ಸಾವಿರಾರು ಮಂದಿ ಕೆಲಸಗಾರರನ್ನೂ ಅವರ ಹೆಂಡಿರು ಮಕ್ಕಳನ್ನೂ ಕೊಲೆ ಮಾಡಿಸಿದ್ದರು. ರಸ್ಯದ ಎರಡನೆಯ ಮುಖ್ಯ ಬಂದರಾದ ಲೆನಿನ್‌ಗ್ರಾಡು ಫಿನ್ಲೆಂಡಿನ ಸಮೀಪವಿದೆ. ನಕಾಶೆಯನ್ನು ನೋಡಿದರೆ ಲೆನಿನ್‌ಗ್ರಾಡಿಗೆ ಹತ್ತಿರದ ಮಾರ್ಗವೆಂದರೆ ಫಿನ್ಲೆಂಡಿನ ಮೂಲಕ. ಲೆನಿನ್‌ಗ್ರಾಡೇ ರಸ್ಯದ ಪ್ರಧಾನ ಪಟ್ಟಣವಾದ ಮೊಸ್ಕೋವಿಗೆ ಬೀಗದ ಕೈ. ಲೆನಿನ್‌ಗ್ರಾಡಿನ ಜನ ಸಂಖ್ಯೆಯು ಇಡೀ ಫಿನ್ಲೆಂಡಿನಷ್ಟಿದೆ. ಮೊದಲು ಆಂಗ್ಲೇಯರು ಫಿನ್ಲೆಂಡ್‌ಕೊಲ್ಲಿಯ ವರೆಗೆ ಸಬ್‌ಮೆರಿನ್ ಕಳುಹಿಸಿ ರಸ್ಯದ ಮೇಲೆ ಮುತ್ತಿಗೆ ಹಾಕಿದ್ದರು. ಫಿನ್ಲೆಂಡನ್ನು ತಮ್ಮ ಹಸ್ತಕವನ್ನಾಗಿ ಮಾಡಿಕೊಂಡು ರಸ್ಯದ ಮೇಲೆ ಧಾಳಿ ನಡಿಸುವ ಒಳಸಂಚು ನಡಿಸುವವರು ಇದ್ದಾರೆ. ಆದುದರಿಂದಲೇ ರಸ್ಯವು ಫಿನ್ಲೆಂಡಿನೊಂದಿಗೆ ಪರಸ್ಪರ ಸಹಾಯದ ಒಪ್ಪಂದ ಮಾಡಿಕೊಳ್ಳಬೆಳ್ಳಿಸಿತು ಮತ್ತು ಅದರಿಂದ ಕೆಲವು ನೌಕಾನಿಲಯಗಳನ್ನು ಪಡೆದು ಪ್ರತಿಯಾಗಿ ಎಷ್ಟೋ ಹೆಚ್ಚು ಪ್ರದೇಶವನ್ನು ಬಿಟ್ಟುಕೊಡಲು ಸಿದ್ಧವಾಗಿತ್ತು, ಆದರೆ ಫಿನ್ಲೆಂಡು ಇದಕ್ಕೆ ಸಿದ್ಧವಿರಲಿಲ್ಲ

ತಮ್ಮಿಂದ ಬಹಳ ದೂರವಿದ್ದು ರಸ್ಯದ ನೆರೆಯಲ್ಲಿರುವ ಫಿನ್ಲೆಂಡನ್ನು ತನ್ನ ಉಪಕರಣವನ್ನಾಗಿ ಮಾಡಿಕೊಳ್ಳಲು ಇಂಗ್ಲೆಂಡು, ಫ್ರಾನ್ಸು, ಇಟೆಲಿ ಮೊದಲಾದುವುಗಳು ಪ್ರಯತ್ನಿಸುವಾಗ ರಸ್ಯವು ಮುಂಜಾಗ್ರತೆ ತೆಗೆದುಕೊಂಡು ತನ್ನ ಸ್ಥಾನವನ್ನು ಭದ್ರಪಡಿಸಲು ತಕ್ಕ ವ್ಯವಸ್ಥೆ ಮಾಡುವುದರಲ್ಲಿ ತಪ್ಪೇನು? ಫಿನ್ಲೆಂಡು ಹೇಗಾದರೂ ಮಾಡಿ ರಸ್ಯದೊಡನೆ ಒಪ್ಪಂದಮಾಡಿಕೊಳ್ಳುವುದನ್ನು ಬಿಟ್ಟು ಇಂಗ್ಲೆಂಡ್ ಫ್ರಾನ್ಸ್ ಮೊದಲಾದ ದೇಶಗಳ ಆಶಯ ಪಡೆಯಬೇಕೇಕೆ?

THE

BOMBAY LIFE ASSURANCE

Company Limited.

[ESTD. 1908]

COMPARE

Your Life Assurance with any other property you possess what is its guarranteed value

If you live–today–a few years more–when you are old?
If you die–to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	CALICUT, Puthiyara.	Central Station Road, TRIVANDRUM.

ಪ್ರಕಟಣೆ.

ಭೂಮಿ ಅಡವಿನ ಸಹಕಾರೀ ಬ್ಯಾಂಕುಗಳು.

ನಮ್ಮ ಭೂಮಿ ಅಡವಿನ ಸಹಕಾರೀ ಬ್ಯಾಂಕುಗಳಲ್ಲಿ ಯುರೋಪಿನಲ್ಲಿ ನಡೆಯುವ ಯುದ್ಧದಿಂದಾಗಿ ಸಾಲ ಸಿಕ್ಕುವುದು ನಿಂತುಹೋಗುತ್ತದೆಂದು ಕೆಲವು ಗ್ರಾಮಗಳಲ್ಲಿ ಒಂದು ಅಭಿಪ್ರಾಯವುಂಟಾಗಿಯದೆಂದು ಕೇಳಬರುತ್ತದೆ. ಇದು ಸರಿಯಾದ ಅಭಿಪ್ರಾಯವಲ್ಲ. ನಮ್ಮ ಜಿಲ್ಲೆಯಲ್ಲಿಯೂ ಉಡುಪಿ ಕುಂದಾಪುರ ತಾಲೂಕುಗಳಿಗಾಗಿ ಇರುವ ಉಡುಪಿ ಭೂಮಿ ಅಡವಿನ ಸಹಕಾರೀ ಬ್ಯಾಂಕ್, ಇತರ ಮಂಗಳೂರು ತಾಲೂಕುಗಳಿಗಾಗಿ ಇರುವ ಮಂಗಳೂರು ಭೂಮಿ ಅಡವಿನ ಸಹಕಾರಿ ಬ್ಯಾಂಕು ಮತ್ತು ಕಾಸರಗೋಡು ಪುತ್ತೂರು ತಾಲೂಕುಗಳಿಗಾಗಿ ಇರುವ ಪುತ್ತೂರು ಭೂಮಿ ಅಡವಿನ ಬ್ಯಾಂಕು, ಈ ಮೂರು ಬ್ಯಾಂಕುಗಳಲ್ಲಿಯೂ ಭೂಮಿ ಅಡವಿನ ಮೇಲೆ ಒಟ್ಟು ಸಾಲಗಾರರಿಗೆ ರೂಪಾಯಿ 5000 ದ ಮಿತಿಗೆ ಒಳಪಟ್ಟು ಇಪ್ಪತ್ತು ವರ್ಷಗಳ ಕಂತಿನಲ್ಲಿ ಸಾಲಗಳನ್ನು ಎಂದಿನಂತೆ ಕೊಡಲಾಗುತ್ತವೆಂದು ಭೂಮಿ ಅಡವಿನ ಸಹಕಾರೀ ಬ್ಯಾಂಕುಗಳ ಸಬ್ ರಿಜಿಸ್ಟ್ರಾರರು ತಿಳಿಸುತ್ತಾರೆ.

ಹರಿಜನೋದ್ಧಾರದ ಬಗೆಯೆಂತು——?

ಜಿಲ್ಲಾ ಹರಿಜನ ಪರಿಷತ್ತಿನಲ್ಲಿ ಶ್ರೀ. ಕೆ. ಜಿ. ಬಲ್ಲಾಳರ ಯಥಾರ್ಥ ಹಿತಬೋಧೆ

(ತಾ. 18-1-40ರಲ್ಲಿ ಉಡುಪಿಯಲ್ಲಿ ಜರಗಿದ ಪ್ರಥಮ ಜಿಲ್ಲಾ ಹರಿಜನ ಪರಿಷತ್ತಿನಲ್ಲಿ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಕೆ. ಜಿ. ಬಲ್ಲಾಳ್, ಬಿ. ಎ. ಬಿ. ಎಲ್‌ರವರು ಮಾಡಿದ ಭಾಷಣದ ಮುಖ್ಯಾಂಶಗಳು.)

ಹರಿಜನ ಸಂಕಷ್ಟವೆಂಬುದು ಮಾನವ ಕೋಟಿಯಷ್ಟೇ ಪುರಾತನವಾದುದು. ಸವರ್ಣ ಹಿಂದುಗಳು ನಿಮ್ಮನ್ನು ಅಸ್ಪೃಶ್ಯರೆಂದು ಪರಿಗಣಿಸಿ, ತಮ್ಮ ಸೇವೆಗಾಗಿಯೇ ನೀವು ಹುಟ್ಟಿದವರೆಂದೆಣಿಸಿ ಅವರು ಅನುಭವಿಸುವ ಹಕ್ಕು ಬಾಧ್ಯತೆಗಳನ್ನು ನಿಮಗೆ ನಿರಾಕರಿಸಿರುವರು. ಈ ಭೇದವನ್ನು ಮಾಡಿದವರಾರೋ ತಿಳಿಯದು. ಈಶ್ವರನೇ ಈ ಭೇದವನ್ನು ಮಾಡಿರುವನು, ಅದಕ್ಕೆ ಶಾಸ್ತ್ರದಲ್ಲಿ ಬೇಕಾದ ಆಧಾರವಿದೆ ಎಂದು ಶಾಸ್ತ್ರಜ್ಞರು ಹೇಳುತ್ತಾರೆ. ಶಾಸ್ತ್ರಗಳಲ್ಲಿ ಅಂತಹ ಭೇದಕ್ಕೆ ಆಸ್ಪದವೇ ಇಲ್ಲವೆಂದು ಅಷ್ಟೇ ಪಾಂಡಿತ್ಯವುಳ್ಳ ಇನ್ನೂ ಕೆಲವು ಶಾಸ್ತ್ರಜ್ಞರ ಅಭಿಮತ. ಶಾಸ್ತ್ರಜ್ಞನೇನೂ ಅಲ್ಲದ ನನಗೆ ಯಾರು ಸರಿ ಯಾರು ತಪ್ಪೆಂದು ಹೇಳಲು ಸಾಧ್ಯವಿಲ್ಲ. ನಿಮ್ಮ ತಪ್ಪೇನೂ ಇಲ್ಲದೆ ನಿಮ್ಮನ್ನು ಹುಟ್ಟಾರಭ್ಯ ಪೀಡಿಸಲಾಗಿದೆಯೆಂದು ನನಗನಿಸುತ್ತದೆ. ಶಾರೀರಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ನೀವು, ಇತರ ಮಾನವರಂತೆಯೇ ಇರುತ್ತೀರಿ. ನಿಮಗೆ ಇತರರಂತೆಯೇ ನೋಡಲು ಕಣ್ಣಿದೆ, ಕೇಳಲು ಕಿವಿಯಿದೆ, ವಾಸನೆ ನೋಡಲು ಮೂಗಿದೆ, ರುಚಿನೋಡಲು ನಾಲಿಗೆಯಿದೆ. ಸವರ್ಣ ಹಿಂದುಗಳಷ್ಟೇ ಬಲವಾದ ಕಾಲು ಕೈ ಮತ್ತು ಇತರ ಅಂಗಗಳುನಿಮಗಿದೆ. ನಿಮ್ಮ ಬುದ್ಧಿ ಶಕ್ತಿಯೂ ನಮ್ಮಷ್ಟೇ ಬಲವಾದುದಾಗಿದೆ. ನಮ್ಮಷ್ಟೇ ಒಳ್ಳೇ ಸಾಮಾಜಿಕ ಜೀವಿಗಳು ನೀವು. ನನ್ನ ಕಲ್ಪನೆ ಮತ್ತು ನಿಮ್ಮನ್ನು ಅಸ್ಪೃಶ್ಯರಾಗಿ ಪರಿಗಣಿಸುವ ನಮ್ಮ ಜಾಪಕರ ಆಚಾರಗಳ ದೃಷ್ಟಿಯ ಹೊರತು ಭೇದವಾದರೂ ಎಲ್ಲಿದೆ?

ಇತ್ತಲಾಗಿನ ವರೆಗೆ ಈ ನಿಮ್ಮ ಪಾಡಿನ ಕುರಿತು, ಅಲ್ಲಲ್ಲಿ ಕೆಲವರು ಮತ್ತು ಕೆಲಮಟ್ಟಿಗೆ ಸರಕಾರದವರ ಹೊರತು ಇತರರಾರೂ ಲಕ್ಷ್ಯಕೊಟ್ಟಿರಲಿಲ್ಲ. ಕೆಲವೇ ಜನರು ಯಾವತರದ ಸಂಘಟನೆಯಿಲ್ಲದೆ ನಡಿಸಲ್ಪಟ್ಟ ಕೆಲಸವು ಹೆಚ್ಚೇನೂ ಫಲಕಾರಿಯಾಗಿರುವುದಿಲ್ಲ. ಸರಕಾರವು, ನಿಮಗೆ ಸ್ಥಳ ಕೊಟ್ಟು ವಿದ್ಯಾನುಕೂಲತೆಗಾಗಿ ಲೇಬರ್ ಶಾಲೆಗಳನ್ನು ಸ್ಥಾಪಿಸಿ ವಿದ್ಯಾವೇತನಗಳನ್ನಿತ್ತು ನಿವಾಸಾಲಯಗಳನ್ನು ಸ್ಥಾಪಿಸಿ ಮತ್ತು ಅವಕ್ಕೆ ಸಹಾಯಮಾಡಿ ನಿಮಗೆ ಪ್ರತ್ಯೇಕ ಸಹಕಾರಿಸಂಘಗಳನ್ನೇರ್ಪಡಿಸುವುದೇ ಮೊದಲಾದ ರೀತಿಯಲ್ಲಿ ಸಹಾಯಮಾಡಿರುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಇಲ್ಲಿಯೂ ತೃಪ್ತಿಕರವಾಗಿ ಕೆಲಸ ನಡೆದಿರುವುದಿಲ್ಲ. ನಿಮಗೋಸ್ಕರವಾಗಿ ಸರಕಾರವು ವ್ಯಯಮಾಡುವ ಸುಮಾರು ರೂ. 11 ಲಕ್ಷದಲ್ಲಿ, ಅರೆವಾಸಿಗಿಂತಲೂ ಹೆಚ್ಚು ಲೇಬರ್ ಡಿಪಾರ್ಟ್‌ಮೆಂಟಿನ ಸಿಬಂದಿಯ ಸಂಬಳ ಮತ್ತು ಪ್ರಯಾಣ ಭತ್ತೆಗಳಿಗೆ ಹೋಗುವುದು. ಇದುದೊಡ್ಡ ಅನ್ಯಾಯ. ನಿಮಗೆ ಕೊಡಲ್ಪಡುವ ಸ್ಥಳವೆಲ್ಲಾ ಪುಂಜವಾಗಿದ್ದು ಅಪ್ರಯೋಜಕವಾಗಿರುತ್ತದೆ. ಅದನ್ನು ಊರ್ಜಿತಕ್ಕೆ ತರಲು ನಿಮ್ಮ ಆರ್ಜನೆಗೆ ಮೀರಿದಷ್ಟು ಹಣವನ್ನು ವ್ಯಯಿಸಬೇಕಾಗುವುದು. ಇದರ ಪರಿಣಾಮವಾಗಿ ಸರಕಾರವು ನಿಮಗೆ ಕೊಟ್ಟಿರುವ ಸ್ಥಳವು ಒಂದೋ ಬಂಜರು ಬಿದ್ದಿರುವುದು; ಇಲ್ಲವೆ ಇತರರ ಅಧೀನವಾಗಿರುವುದು. ಸರಕಾರವು ಬಹಳವಾಗಿ ಹೊಗಳುತ್ತಿರುವ ಲೇಬರ್ ಶಾಲೆಗಳು ಕೂಡಾ ತೃಪ್ತಿಕರವಿರುವುದಿಲ್ಲ. ಸಹಕಾರಿ ಸಂಘಗಳ ಕುರಿತಂತೂ ಹೇಳುವುದೇ ಬೇಡ. ಇಷ್ಟರವರೆಗೆ ನಿಮ್ಮ ಉದ್ಧಾರದ ಕುರಿತು ನಡೆಸಲ್ಪಟ್ಟಿರುವ ಪ್ರಯತ್ನಗಳಿಂದ ನಿಮಗೆ ಹೆಚ್ಚಿನ ಪ್ರಯೋಜನವೇನೂ ಆಗಿರುವುದಿಲ್ಲ. ಆದರೆ ಅದರಿಂದಾಗಿ ನಿಮ್ಮ ಅಸ್ಪೃಶ್ಯತೆಯು ಪ್ರಾಮುಖ್ಯವಾಗಿ ಗಮನಕ್ಕೆ ಬಂದಿದೆ.

ನಿಮ್ಮ ಉದ್ಧಾರಕಾರ್ಯವು ಆಸಕ್ತಿಯಿಂದ ಮತ್ತು ಯಥಾರ್ಥವಾಗಿ ಕೈಕೊಳ್ಳಲ್ಪಟ್ಟುದೆಂದರೆ ಮಹಾತ್ಮ ಗಾಂಧಿಯವರು ನಾಯಕರಾಗಿ ಕೆಲಸಮಾಡಲಾರಂಭಿಸಿದ ಮೇಲೆ. ಇಂದಿಗೆ ಹಿಂದೀ ರಾಷ್ಟ್ರೀಯ ಸಭೆಯು ನಿಮ್ಮ ಉನ್ನತಿಸಾಧನೆಯ ದೀಕ್ಷೆಯುಳ್ಳದಾಗಿ, ಅದರ ವಿಧಾಯಕ ಕಾರ್ಯಕ್ರಮದಲ್ಲಿ ಅದು ಪ್ರಾಮುಖ್ಯ ವಿಷಯವಾಗಿದೆ. ಸಾವಿರಾರು ಜನರು ಮತ್ತು ಹರಿಜನ ಸೇವಾಸಂಘ, ಹರಿಜನ ಲೀಗ್ ಮೊದಲಾದ ಸಂಸ್ಥೆಗಳು ನಿಮ್ಮ ಉದ್ಧಾರಕ್ಕಾಗಿ ದುಡಿಯುತ್ತಿವೆ. ಇಂತಹ ಪ್ರಯತ್ನದಿಂದಾಗಿ ನಿಮ್ಮ ಭವಿಷ್ಯೋನ್ನತಿಯ ಕುರಿತು ನೀವು ಅತುರಪಡಬೇಕಾಗಿಲ್ಲ.

ಆದರೆ ನೀವು ಮಾಡತಕ್ಕ ಕೆಲಸವು ಹೆಚ್ಚಿನದಿದೆ. ನಿಮ್ಮ ಅಭಿವೃದ್ಧಿಗೆ ನಿಜವಾದ ತೊಡಕು ಬಾಹ್ಯಕ್ಕಿಂತಲೂ ಹೆಚ್ಚು ಅಂತರಿಕವಾದುದು. ಈ ಜಿಲ್ಲೆಯಲ್ಲಿ ನಿಮ್ಮೆಲ್ಲರ ಜನಸಂಖ್ಯೆಯು 1,50,000ಕ್ಕಿಂತಹೆಚ್ಚಿಲ್ಲ. ಇಷ್ಟು ಕಡಿಮೆಜನಸಂಖ್ಯೆಯಲ್ಲಿ 33 ಒಳಭೇದಗಳಿರುತ್ತವೆಂದು ನಾನು ಕೇಳುತ್ತೇನೆ. ಇವುಗಳೊಳಗೆ ಹೆಚ್ಚಿಲ್ಲದಿದ್ದರೂ ಸವರ್ಣ ಹಿಂದುಗಳ ನಾಲ್ಕು ಜಾತಿಗಳೊಳಗಿರುವಷ್ಟೇ ಭೇದವಿರುತ್ತದೆ. ಈ ಒಳಜಾತಿಗಳೊಳಗೆ ಅಂತರ್ವಿವಾಹ ಅಂತರ್ಭೋಜನಗಳೇನೂ ಇರುವುದಿಲ್ಲ. ಇನ್ನೂ ಕೆಟ್ಟದೆಂದರೆ, ಪ್ರತಿ ಮೇಲ್ಜಾತಿಯು ಅನುಕ್ರಮವಾಗಿ ಕೆಳಗಣದನ್ನು ಅಸ್ಪೃಶ್ಯವಾಗಿ ಪರಿಗಣಿಸುತ್ತದೆ. ಸವರ್ಣ ಹಿಂದುಗಳಂತೆಯೇ ಈ ಭೇದವು ಕೊನೆಯ ಅತ್ಯಂತ ಹೀನಜಾತಿಯ ವರೆಗೂ ಹೋಗುತ್ತದೆ. ನಿಮ್ಮೊಳಗೇನೇ ಈ ಅವಸ್ಥೆ ಇರುವಾಗ ಸವರ್ಣ ಹಿಂದುಗಳನ್ನಾಗಲೀ ಇತರರನ್ನಾಗಲೀ ದೂರುವುದೇಕೆ? ಇಂತಹ ಅಪಮಾನಕರ ಕಳಂಕವನ್ನು ನಿವಾರಿಸುವುದು ನಿಮ್ಮ ಆದ್ಯ ಕರ್ತವ್ಯವಲ್ಲವೇ? ನೀವೆಲ್ಲಾ ಒಕ್ಕಟ್ಟಾಗಿ ಒಂದುಗೂಡಿ ನಡೆದರೆ, ಸವರ್ಣ ಹಿಂದುಗಳಾಗಲೀ, ಇತರರಾರೇ ಆಗಲಿ ನಿಮ್ಮನ್ನು ತಮ್ಮ ಹಸ್ತಕರನ್ನಾಗಿ ಉಪಯೋಗಿಸಲು ಸಾಧ್ಯವಿದೆಯೇ? ನಿಮ್ಮ ಸಾಮಾಜಿಕ, ರಾಜಕೀಯ ಮತ್ತು ಸಾಂಪತ್ತಿಕ ಉನ್ನತಿಯು ವಿಳಂಬವಾಗಲು ಸಾಧ್ಯವಿದೆಯೇ? ನಿಜವಾಗಿಯೂ ಸಾಧ್ಯವಿಲ್ಲ. ಹಾಗಾದರೆ ನಿಮ್ಮ ಉನ್ನತಿಯ ಜವಾಬ್ದಾರಿಯಾದರೂ ಯಾರ ಕೈಯ್ಯಲ್ಲಿದೆಯೆಂಬುದು ಸುಸ್ಪಷ್ಟವಲ್ಲವೇ?

ಈ ಸಹಕಾರ ಮತ್ತು ಒಂದುಗೂಡುವಿಕೆಯ ಬದಲಿಗೆ ಅನೇಕ ವೇಳೆ, ಹರಿಜನ ಕೆಲಸಗಾರರು ಮತ್ತು ಸಂಸ್ಥೆಗಳಲ್ಲಿ ಮಾತ್ರವಲ್ಲದೆ, ಹರಿಜನ ಮುಖಂಡರೊಳಗೇನೇ ವೈಷಮ್ಯ ಮತ್ತು ಇಕ್ಕಟ್ಟಿರುತ್ತದೆ. ಇದು ಅತ್ಯಂತ ಶೋಚನೀಯವಿದೆ. ಇತರರೆಲ್ಲರಿಗಿಂತಲೂ ತಾವೇ ಹೆಚ್ಚಿನ ಕೆಲಸಮಾಡಿರುವರೆಂಬ ಪ್ರಶಂಸೆಪಡೆಯಬೇಕೆಂದು ಸಂಸ್ಥೆಗಳಲ್ಲಿ ಮತ್ತು ಕೆಲಸಗಾರರಲ್ಲಿ ಇರುವ ಮನೋವೃತ್ತಿಯೇ ಇದಕ್ಕೆ ಕಾರಣವೆಂದು ನಾನು ಭಾವಿಸುತ್ತೇನೆ. ಒಂದೊಮ್ಮೆ ಆ ಸ್ವಾರ್ಥಾಭಿಲಾಷೆಯನ್ನು ಮರೆತು, ಕೇವಲ ಸೇವಾದೃಷ್ಟಿಯಿಂದ ಕೆಲಸಗಾರರು ಮತ್ತು ಸಂಸ್ಥೆಗಳು ದುಡಿದ ಪಕ್ಷದಲ್ಲಿ, ಅಂತಹ ಅನುಚಿತ ಇಕ್ಕಟ್ಟು ಮತ್ತು ವೈಷಮ್ಯಗಳಿಗೆ ಆಸ್ಪದವಿರಲಾರದು. ಹರಿಜನೋದ್ಧಾರದ ದೃಷ್ಟಿಯಿಂದ ಎಲ್ಲಾ ಕೆಲಸಗಾರರೂ ಸಂಸ್ಥೆಗಳೂ ತಮ್ಮ ವೈಷಮ್ಯಗಳನ್ನು ಬದಿಗೊತ್ತಿ, ತಮ್ಮೆಲ್ಲರ ಸಾಮಾನ್ಯ ಉದ್ದೇಶವು ಸಾಧಿಸಲ್ಪಡುವಂತೆ ಸೌಹಾರ್ದದಿಂದ ಮತ್ತು ಒಕ್ಕಟ್ಟಿನಿಂದ ಕೆಲಸಮಾಡಬೇಕಾಗಿ ನಾನು ಆಗ್ರಹದಿಂದ ವಿನಂತಿ ಮಾಡಿಕೊಳ್ಳಲೇ?

ಈ ರೀತಿಯ ಪರಿಷತ್ತು ನಿಮಗೆ ಹೊಸತಾದರೂ ಈ ಪರಿಷತ್ತಿನಲ್ಲಡಕವಾಗಿರುವ ಅಭಿಪ್ರಾಯವು ನಿಮಗೇನೂ ಹೊಸತಲ್ಲ. ಹೆಚ್ಚಿನವರಿಗೆ ನಿಮಗೆ ಗ್ರಾಮಕೂಟ ಮಾಗಣೆಕೂಟ ಮತ್ತು ಹೋಬಳಿಕೂಟಗಳಿರುತ್ತವೆ. ಈ ಕೂಟಗಳಲ್ಲಿ ನೀವು ಒಟ್ಟು ಸೇರಿ ನಿಮ್ಮ ಜಾತಿಗೆ ಸಂಬಂಧಪಟ್ಟ ಹಲವು ವಿಷಯಗಳನ್ನು ಚರ್ಚಿಸಿ ಇತ್ಯರ್ಥಪಡಿಸುವಿರಿ. ಇಂತಹ ಕೂಟಗಳ ನಿರ್ಣಯಗಳು ಸ್ವೀಕೃತವಾಗಿ ನಿಷ್ಠೆಯಿಂದ ಪಾಲಿಸಲ್ಪಡುತ್ತವೆ. ಈ ಕೂಟಗಳು ಕೇವಲ ಕೆಲವೊಂದು ವಿಷಯಗಳಿಗೆ ಮಾತ್ರ ಅನ್ವಯಿಸುವಂತಹವಿದ್ದು ಒರಟು ರೀತಿಯಲ್ಲಿ ನಡೆಸಲ್ಪಡುವವೆಂಬುದೇನೋ ನಿಜ. ಅದನ್ನು ನೀವು ಅಭಿವೃದ್ಧಿಗೊಳಿಸಿ ಸಂಘಟಿಸುವ ಬದಲಿಗೆ ಅವುಗಳೆಂದರೆ ನೀವು ನಾಚಿಕೆಪಡಹತ್ತಿರುತ್ತೀರಿ. ನೀವು ಮಾತ್ರ ಹಾಗೆ ಮಾಡುವುದಲ್ಲ. ನಾವೆಲ್ಲರೂ ಅದೇ ರೀತಿ ನಡೆಯುತ್ತಿದ್ದೇವೆ. ಆಂಗ್ಲೇಯ ಶಿಕ್ಷಣಪಡೆದ ನಾವು, ನಮ್ಮ ಸಂಸ್ಕೃತಿ, ನಮ್ಮ ಆಚಾರ ವಿಚಾರ ಮತ್ತು ಸಂಸ್ಥೆಗಳು ಎಷ್ಟು ಒಳ್ಳೆಯದಾಗಿದ್ದರೂ ಅವನ್ನು ನಿಷೇಧಿಸುವ ಅಭ್ಯಾಸವುಳ್ಳವರಾಗಿ, ನಮಗೆ ಅವೆಷ್ಟು ಅಯೋಗ್ಯವಾದರೂ ಪಾಶ್ಚಾತ್ಯ ಸಂಸ್ಕೃತಿ, ರೀತಿ ನೀತಿ ಮತ್ತು ಸಂಸ್ಥೆಗಳನ್ನು ಮೆಚ್ಚುವವರಾಗಿರುವೆವು. ಈ ಮನೋವೃತ್ತಿಯನ್ನು ಬದಲಾಯಿಸಲು ನಾವು ಕಲಿಯಬೇಕು. ಹಿಂದೀಯವಾದುದನ್ನೆಲ್ಲಾ ಮೆಚ್ಚಲೆತ್ನಿಸಬೇಕು. ಅವುಗಳಲ್ಲೇನಾದರೂ ದೋಷವಿದ್ದ ಪಕ್ಷ ಅವನ್ನು ನಿವಾರಿಸಿ ಸುಧಾರಿಸಬೇಕು. ಆದುದರಿಂದ ಮೊದಲೇ ನಿಮ್ಮಲ್ಲಿರುವ ಜಾತಿ ಕೂಟಗಳನ್ನು ಅಭಿವೃದ್ಧಿಗೊಳಿಸಿ ಎಲ್ಲಾ ಹರಿಜನರಿಗೆ ಇಡೀ ಜಿಲ್ಲೆಗೊಂದು ಸಂಯುಕ್ತ ಕೂಟವನ್ನು ಸ್ಥಾಪಿಸಲೆತ್ನಿಸಿರಿ. ಅದಕ್ಕೆ ನಿಮಗೆ ಸರಿತೋರುವ ಯಾವ ಹೆಸರನ್ನು ಬೇಕಾದರೂ ಕೊಡಿರಿ. ಹರಿಜನರಿಗೆ ಸಂಬಂಧವಾದ ಎಲ್ಲಾ ವಿಷಯಗಳನ್ನೂ ಈ ಕೂಟದಲ್ಲೇ ಚರ್ಚಿಸಿ ನಿರ್ಧರಿಸಿರಿ. ಇದೇ ರೀತಿ ಎಲ್ಲಾ ಜಿಲ್ಲಾ ಕೂಟಗಳನ್ನೊಂದುಗೂಡಿಸಿ, ಇಡೀ ಪ್ರಾಂತಕ್ಕೊಂದು ಸಂಯುಕ್ತ ಕೂಟವಿರಬೇಕು. ಪ್ರಾಂತಿಕ ಕೂಟಗಳಿಗೆಲ್ಲಾ ಒಂದು ಅಖಿಲ ಭಾರತ ಕೂಟವಿರಬೇಕು.

ಸರಕಾರವೂ, ಹಿಂದೀ ರಾಷ್ಟ್ರೀಯ ಸಭೆಯೂ ಈ ಉದ್ದೇಶವಿಟ್ಟುಕೊಂಡು ಕೆಲಸ ಮಾಡಬೇಕು. ಹರಿಜನೋದ್ಧಾರ ಕೆಲಸಕ್ಕಾಗಿ ಪ್ರತ್ಯೇಕವಾದೊಂದುಫಂಡನ್ನು ಸ್ಥಾಪಿಸಬೇಕು. ಅದರ ಹೆಚ್ಚಿನ ಅಂಶವು ಸರಕಾರದಿಂದ ದೊರೆಯಬೇಕು. ಹಿಂದೀ ರಾಷ್ಟ್ರೀಯಸಭೆ ಮತ್ತು ಇತರ ಸಂಸ್ಥೆಗಳು ಅದಕ್ಕೆ ವಾರ್ಷಿಕ ಸಹಾಯಮಾಡಬೇಕು. ಹರಿಜನೋದ್ಧಾರಕಾರ್ಯ ನಡಿಸಿ ಅವರಲ್ಲಿ ಒಕ್ಕ

(೧೧ನೇ ಪುಟಕ್ಕೆ ಮುಂದುವರಿದಿದೆ)

ಅಂತರಂಗದ

ಮೊಹರಮ್ ವಿಶೇಷ ಸಂಚಿಕೆ

ತಾ. 18—2—1940ರಲ್ಲಿ ಹೊರಬೀಳಲಿರುವುದು.

ಮುಸಲ್ಮಾನರ ಸಂಸ್ಕೃತಿ, ಅವರ ಧರ್ಮದ ಹೆಗ್ಗುರುತಾದ ಬಾಂಧವ್ಯದ ವೈಶಿಷ್ಟ್ಯ, ಸಮಾಜದ ರೀತಿನೀತಿ, ಅವರು ಅನುಸರಿಸುವ ಪದ್ಧತಿಗಳೂ, ಹುಳುಕು ಬೆಳಕುಗಳೂ ನಿದರ್ಶನ್ಯವಾಗಿ ಈ ಸಂಚಿಕೆಯಲ್ಲಿ ತಜ್ಞರಿಂದ ಚರ್ಚಿಸಲ್ಪಡುವುವು.

ಜಾಹೀರಾತಿಗೆ ಉತ್ತಮ ಸಾಧನ.

ವಿಶೇಷ ಮಾಹಿತಿಗೆ ಬರೆಯಿರಿ.

ಅಂತರಂಗ ಕಾರ್ಯಾಲಯ, ಉಡುಪಿ.

ಹಳೆ ಕೆಟ್ಟಾಡಿಯಿಂದ ಮಣೂರು ವರೆಗಿನ 105 ಊರಿನ ಬಿಲ್ಲವರ ಹೋಬಳಿ, ಬೊಂಬಾಯಿ

ಈ ಸಭೆಯ ವಾರ್ಷಿಕ ಮಹೋತ್ಸವವು ಶ್ರೀಯುತ ಬೋಳ್ಳ ನಕ್ರ ಶ್ರೀಯಾನರ ಅಧ್ಯಕ್ಷತೆಯಲ್ಲಿ ಬೊಂಬಾಯಿ ಕೋಟೆಯೊಳಗಿನ ಅಫ್ಘಾನ್ ಬಿಲ್ಡಿಂಗಿನ ಒಂದನೇ ಮಾಳಿಗೆಯಲ್ಲಿ ಶ್ರೀ. ಉದ್ಯಾವರ ಪಂಗಪ್ಪನವರ ಆಫೀಸಿನಲ್ಲಿ ತಾ. 7-1-40ರಲ್ಲು ಜರಗಿತು. ಕಾರ್ಯದರ್ಶಿಯವರು ಕ್ರಮಪ್ರಕಾರ ನಡೆದ ನಂತರ ಗತವರ್ಷದ ಲೆಕ್ಕಪತ್ರಗಳನ್ನು ಪರಿಶೋಧಿಸಿ, ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ. ಕಿದಿಯೂರು ಕೆ. ಎಮ್. ಪದ್ಮನಾಭನವರಿಗೂ ಉಪಾಧ್ಯಕ್ಷ ಸ್ಥಾನವನ್ನು ಶ್ರೀಯುತ ಸಂಕೇಶ ಗೋವಿಂದನ್. ಶ್ರೀಯುತರಿಗೂ ಕೊಟ್ಟದ್ದಲ್ಲದೆ ಶ್ರೀಗಳಾದ ಬೋಳ್ಜ ಮುತ್ತಯ್ಯ ಆರ್. ಶ್ರೀಯಾನರು ಮತ್ತು ಗಡಪಳೊಪ್ಪ ತನಿಯಪ್ಪ ಎಸ್. ಕಾಂಚನರು ಕಾರ್ಯದರ್ಶಿಯರಾಗಿಯೂ, ಶ್ರೀಗಳಾದ ಬೋಳ್ಜ ಗಿರಿಯಪ್ಪ ಆರ್. ಶ್ರೀಯಾನರು ಮತ್ತು ಪೋಸ್ಸೆ ಕೂಸಪ್ಪ ಅರ್. ಸಾಲ್ಯಾನರು ಕೋಶಾಧಿಕಾರಿಯರಾಗಿಯೂ, ಶ್ರೀಯುತರುಗಳಾದ ಪುದ್ರಕೆರೆ ತಬುರ್ಕ ಗುರಿಕಾರರು, ಬೋಳ ನಕ್ರ ಶ್ರೀಯಾನರು, ಕುತ್ಪಾಡಿ ದಾಸಪ್ಪ ಪಿ. ಕರ್ಕೇರರು, ಪೇನಗುಡ್ಡೆ ದೇಜು ಬಿ. ಕಾಂಚನರು ಮತ್ತು ಕಿದಿಯೂರು ಬಾಬು ಟಿ. ಕುಂದರರು ಕಮಿಟಿಯ ಸದಸ್ಯರಾಗಿಯೂ ಸರ್ವಾನುಮತದಿಂದ ಚುನಾಯಿಸಲ್ಪಟ್ಟು ಸಭಾಂತ್ಯವಾಯಿತು.

ದಿ ಕೆನರಾ ಬಿಲ್ಲವರ ಅನಾಥ ಸಂಘ ಮುಂಬಾಯಿ—ಈ ಸಂಘದ ತೃತೀಯ ವಾರ್ಷಿಕ ಮಹಾಸಭೆಯು ತಾ. 21-1-40ರಲ್ಲಿ ಶ್ರೀ. ಸ್ಮೆ. ಮುತ್ತಪ್ಪನವರ ಅಧ್ಯಕ್ಷತೆಯಲ್ಲಿ ಡಾ. ಪೋಲ್ಕರ್ ಜಸ್ಟಾರಾಮ್ ಕಂಪೆನಿಯ ಮಹಡಿಯಲ್ಲಿ ಬಹು ಮಂದಿ ಮೆಂಬರರಿಂದೊಡಗೂಡಿ ಜರಗಿತು. ಶ್ರೀಗಳಾದ ಕೆ. ವೆಂಕಪ್ಪ ಸುವರ್ಣ, ಕೆ. ಸ. ಪಿ. ಕುಂದರ್, ವೈ. ಜಿ. ಬಂಗೇರರು ಸುರಸ ಭಾಷಣ ಗೈದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಸಂಘದ ಉದ್ದೇಶವನ್ನು ತಿಳಿಸಿದಲ್ಲದೆ ಮೆಂಬರರುಗಳಲ್ಲಿ ನವಚೇತನವನ್ನು ಹುಟ್ಟಿಸಿದರು. ಕಾರ್ಯದರ್ಶಿಯು ಧನ್ಯವಾದಗಳನ್ನರ್ಪಿಸಿದ ನಂತರ ಸಭಿಕರು ಲಘು ಫಲಾಹಾರವನ್ನು ಸ್ವೀಕರಿಸಿ ಸಭೆಯು ಮುಗಿಯಿತು.

ಮೈಸೂರು ಪತ್ರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮದ್ರಾಸಿನ ಮಾಜಿ ಮಂತ್ರಿ ಶ್ರೀ. ವಿ. ವಿ. ಗಿರಿಗಳ ತಂದೆಯವರು ಮೈಸೂರಿನಲ್ಲಿ ಮೃತರಾದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಕರಾಗಿ "ರಾಷ್ಟ್ರೀಯ ಯೋಜನೆ" ವಿಚಾರವಾಗಿ ಭಾಷಣಮಾಡಲು, ಮದ್ರಾಸಿನ ಮಾಜಿ ಮಂತ್ರಿ ಶ್ರೀ. ವಿ. ವಿ. ಗಿರಿಗಳು ಅವರ ತಂದೆ ಮತ್ತು ತಮ್ಮ ಕುಟುಂಬದೊಡನೆ ಮೈಸೂರಿಗೆ ಬಂದು ಶೇಷಾದ್ರಿ ಕಟ್ಟಡದಲ್ಲಿ ಬಿಡಾರ ಮಾಡಿದ್ದರು. ಇವರುಗಳು ಮೈಸೂರಿನಲ್ಲಿರುವ ಅನೇಕ ಸಂಸ್ಥೆಗಳಿಗೆ ಭೇಟಿಕೊಟ್ಟು, ಊರೆಲ್ಲವನ್ನೂ ನೋಡಿ ವಿಶ್ರಾಂತಿ ಪಡೆದು ಸಂಜೆ ನಾಲ್ಕು ಘಂಟೆಗೆ ಮೈಸೂರಿನಲ್ಲಿರುವ ಕಾಂಗ್ರೆಸ್ ಮುಂದಾಳುಗಳೊಬ್ಬರ ಗೃಹದಲ್ಲಿ ಅವರ ಆಹ್ವಾನದ ಮೇಲೆ ಶ್ರೀ. ಗಿರಿಗಳೂ ಅವರ ತಂದೆಯವರೂ ಸತ್ಕಾರ ಸಮಾರಂಭದಲ್ಲಿ ಭಾಗಿಗಳಾಗಿದ್ದರು. ಈ ಕೂಟದಲ್ಲಿ ಮಾತುಕತೆಗಳು ನಡೆಯುತ್ತಿರುವಾಗ ಶ್ರೀ. ವಿ. ವಿ. ಗಿರಿಗಳ ತಂದೆ, ಶ್ರೀ. ವಿ. ವಿ. ಜೋಗಯ್ಯ ಪಂತುಲು (M. L. C.) ರವರು ಅಕಸ್ಮಾತ್ತಾಗಿ ಏನೇನೋ ಉಂಟಾಯಿತೆಂದು ತಿಳಿಸಲು ಎಲ್ಲರೂ ಗಾಬರಿಗೊಂಡು ಶ್ರೀಯುತರನ್ನು ತಕ್ಷಣವೇ ಶ್ರೀಕೃಷ್ಣ ರಾಜೇಂದ್ರ ಆಸ್ಪತ್ರೆಗೆ ಮೋಟಾರಿನಲ್ಲಿ ಕೊಂಡೊಯ್ದರು. ಅಲ್ಲಿ ವೈದ್ಯರುಗಳು ಎಷ್ಟು ಚಿಕಿತ್ಸೆ ಸಹಾಯವಾಡಿದರೂ ವಿಫಲವಾಗಿ ಶ್ರೀಯುತರು ಹೃದಯಸ್ತಂಭನದಿಂದ ಮೃತರಾದರು. ಅಷ್ಟು ಹೊತ್ತಿಗೆ ಸಂಜೆ 7 ಘಂಟೆಯಾಗಿತ್ತು. ಇತ್ತ ಆಗ ಶ್ರೀ. ಗಿರಿಗಳ ಭಾಷಣ ಕೇಳಲು ಕಾಲೇಜ್ ಅಂಗಳದಲ್ಲಿ ಸೇರಿದ್ದ ಜನಸ್ತೋಮಕ್ಕೆ ಅವರು ತೀರಿಹೋದ ಬಳಿಕ ಭಾಷಣವನ್ನು ರದ್ದುಗೊಳಿಸಲು ಎಲ್ಲರೂ ನಿರಾಶೆಯೊಡನೆ ಮನೆಗೆ ತೆರಳಿದರು.

ಅತ್ತಲಾಗಿ ರೈಲ್ವೆ ವರ್ಕ್‌ಶಾಪಿನ ಸಂಘದ ಸದಸ್ಯರುಗಳು ಶ್ರೀ. ವಿ. ವಿ. ಗಿರಿಗಳಿಗೆ ಒಂದು ಅಡ್ರೆಸ್ ಕೊಡಬೇಕೆಂದು ಏರ್ಪಡಿಸಿ ಎಲ್ಲ ಶ್ರಮಜೀವಿಗಳೂ ಸಭೆ ಸೇರಿದ್ದರು. ಅವರಿಗೂ ಇದು ತಿಳಿಯಲು ಎಲ್ಲರೂ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಬಂದು ಗುಂಪು ಸೇರಿದರು.

ಶ್ರೀ. ಜೋಗಯ್ಯ ಪಂತುಲುರವರ ಮರಣ ವಾರ್ತೆಯು ಅಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ಶ್ರೀ. ವಿ. ವಿ. ಗಿರಿಗಳು ಇಲ್ಲಿಯೇ ದಹನ ಸಂಸ್ಕಾರ ಮಾಡಬೇಕೆನ್ನಲು ತಕ್ಷಣವೆ ಬ್ರಾಹ್ಮಣ ಧರ್ಮ ಸಹಾಯಕ ಸಭೆಯಿಂದ ಸಾಮಾನುಗಳನ್ನು ತರಿಸಿ ಕಳೇಬರವನ್ನು ಸಾಗಿಸಲು ಏರ್ಪಾಡು ನಡೆಯಿತು. ಮೃತದೇಹವನ್ನು ಚಟ್ಟದ ಮೇಲಿಟ್ಟು ಅಲ್ಲಿ ರಾಷ್ಟ್ರೀಯ ತ್ರಿವರ್ಣ ಧ್ವಜವನ್ನು ಅದರ ಮೇಲೆ ಹೊದ್ದಿಸಿ ಹೂವಿನ ಹಾರಗಳಿಂದ ಅಲಂಕರಿಸಲಾಯಿತು. ನಂತರ ಮುಂಭಾಗದಲ್ಲೂ ಹಿಂಭಾಗದಲ್ಲೂ ಕಾಂಗ್ರೆಸ್ ನಾಯಕರುಗಳೂ, ಸ್ವಯಂಸೇವಕರುಗಳೂ ರಾಷ್ಟ್ರೀಯ ಧ್ವಜಹಿಡಿದು ನಡೆದರು.

ಕಳೇಬರವು ಸ್ಯಯ್ಯಾಜೀರಾವ್ ರಸ್ತೆ, ಸಂತೇಪೇಟೆ ಮೂಲಕ ಬಂದು ಹಳೆ ಅಗ್ರಹಾರದಲ್ಲಿ ಬಂದು ಕೊನೆಗೆ ರುದ್ರಭೂಮಿ ಸೇರಿತು. ಅಲ್ಲಿ ಸುಮಾರು 5-6 ಸಹಸ್ರ ಪ್ರಜೆಗಳು ನೆರೆದಿದ್ದರು. ರುದ್ರಭೂಮಿಯಲ್ಲಿ ಕಳೇಬರಕ್ಕೆ ಶಾಸ್ತ್ರೋಕ್ತವಾಗಿ ಬ್ರಾಹ್ಮಣರ ವಿಧಿಯಂತೆ ಕರ್ಮ ನಡೆಸಲಾಯಿತು. ನಂತರ ಶ್ರೀ. ಗಿರಿಗಳೂ ಇತರರೂ ಹಿಂತಿರುಗಿದರು. ಶ್ರೀ. ಜೋಗಯ್ಯ ಪಂತುಲುರವರು ಸುಮಾರು 70 ವರ್ಷದ ವಯಸ್ಸಿನ ಪ್ರಮುಖ ಕಾಂಗ್ರೆಸ್ ಮುಖಂಡರು, ಮದ್ರಾಸ್ ಕೌನ್ಸಿಲಿನ ಮೆಂಬರರು. ಶ್ರೀ. ಗಿರಿಗಳು ದಿನ ರಾತ್ರಿ ಬೆಂಗಳೂರಿಗೆ ಪ್ರಯಾಣ ಮಾಡಿ ನಂತರ ಮದ್ರಾಸಿಗೆ ಹೊರಟರು.

ಸ್ವಾತಂತ್ರ್ಯ ದಿನಾಚರಣೆ— ಅ| ಭಾ| ಕಾಂ| ನಿರ್ಣಯದಂತೆ ಮೈಸೂರು ಸಂಸ್ಥಾನದಾದ್ಯಂತದಲ್ಲೂ, ಕಾಂಗ್ರೆಸ್ಸಿನವರು ಸ್ವಾತಂತ್ರ್ಯ ದಿನವನ್ನು ಶಾಂತ ರೀತಿಯಲ್ಲಿ ನಡಿಸಿ ಆ ದಿನ ಸಭೆಸೇರಿ ಭಾಷಣಮಾಡಿ ಸ್ವಾತಂತ್ರ್ಯ ಪ್ರತಿಜ್ಞೆ ಸ್ವೀಕರಿಸಿದರು.

"ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರ ಸ್ಥಾನವೇನು?" ಎಂಬ ವಿಚಾರವಾಗಿ ಶ್ರೀ| ಡಿ| ವಿ| ಯಸ್. ಶ್ರೀನಿವಾಸ ಶಾಸ್ತ್ರಿಗಳು ಮೈಸೂರಲ್ಲಿ ಅಮೋಘ ಭಾಷಣಮಾಡಿದರು.

ಮೈಸೂರು ವಿಶ್ವವಿದ್ಯಾಲಯ ಅಕಡೆಮಿಕ್ ಕೌನ್ಸಿಲ್ ಸಭೆಯೊಂದು ವೈಸ್ ಛಾನ್ಸಲರ್‌ರವರ ಅಧ್ಯಕ್ಷತೆಯಲ್ಲಿ ನಡೆದು ವಿಶ್ವವಿದ್ಯಾಲಯಕ್ಕೆ ಸೇರಿದ ವಿಷಯ ಚರ್ಚಿಸಲಾಯಿತು.

ಶ್ರೀಮನ್ ಮಹಾರಾಜ ಸಾಹೇಬರವರು ಈ ವಾರದಲ್ಲಿ ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ಪ್ರವಾಸಮಾಡಬೇಕಾದ್ದನ್ನು ಕಾರಣಾಂತರಗಳಿಂದ ರದ್ದುಗೊಳಿಸಲಾಯಿತು.

ಮೈಸೂರು ಬಳಿಯಿರುವ ಬೆಳಗೊಳ ಫರ್ಟಿಲೈಸರ್ ಮತ್ತು ಕೆಮಿಕಲ್ಸ್ ಕಾರ್ಖಾನೆಯಲ್ಲಿ "ಸಿಂಥೆಟಿಕ್ ಅಮೋನಿಯ ಮತ್ತು ಅಮೋನಿಯಂ ಸಲ್ಫೇಟ್" ತಯಾರಿಸಿದ್ದಾರೆ. ಇದು ಇಡೀ ಭರತಖಂಡದ ಚರಿತ್ರೆಯಲ್ಲಿ ಮೊಟ್ಟಮೊದಲೆಂದು ಹೇಳಲಾಗಿದೆ. ಇದರಿಂದ ಮೈಸೂರಿಗೆ ಕೀರ್ತಿ.

ಮುಂಡಗದ್ದೆ—ತಾ. 18—1—1940ರಲ್ಲಿ ದ. ಕ. ಜಿಲ್ಲಾ ಹಿಂದೂ ಮಹಾಸಭೆಯ ಗೌರವ ಕಾರ್ಯದರ್ಶಿಗಳಾದ ಶ್ರೀ. ಉಪ್ಪೂರು ಶೇಷಪ್ಪಯ್ಯನವರು ಹಿಂದೂ ಸಂಘಟನೆಯ ವಿಷಯದಲ್ಲಿ ಸಾರ್ವಜನಿಕ ಭಾಷಣವಮಾಡಿದರು. ಉಪನ್ಯಾಸಕರು ಹಿಂದೂ ಸಂಘಟನೆಯಾಗದ ಹೊರತು ಭಾರತವರ್ಷಕ್ಕೆ ಕಲ್ಯಾಣವಾಗಲಾರದೆಂದೂ, ಹಿಂದೂ ಮಹಾಸಭೆಯು ಕೈಗೊಂಡಿರುವ ಶುದ್ಧೀ ಸಂಸ್ಕಾರಕ್ಕೆ ಮಹಾಜನರು ಬೆಂಬಲವನ್ನು ಕೊಡಬೇಕೆಂದೂ ಹೇಳಿದರು. ಮತ್ತು ಹಿಂದೂ ಮಹಾಸಭೆಯು ರಾಷ್ಟ್ರೀಯ ಸಂಸ್ಥೆಯಲ್ಲವೆಂಬುದನ್ನು ನಿದರ್ಶನಗಳಿಂದ ನಂಬಿಸಿ ಹಿಂದೂ ಮಹಾಸಭೆಗೆ ಸರ್ವರೂ ಬೆಂಬಲವನ್ನು ಕೊಡಬೇಕೆಂದು ವಿನಂತಿಮಾಡಿದರು. ಈ ದಿವಸದ ಸಭೆಗೆ ಕ್ರೈಸ್ತಧರ್ಮಕ್ಕೆ ಸೇರಿದ್ದ ಚನ್ನಪ್ಪ ಗೌಡರು ಅಧ್ಯಕ್ಷತೆಯನ್ನು ವಹಿಸಿದ್ದರು.

NOTICE.

ಪುತ್ತೂರು ಡಿ| ಮು| ಕೋರ್ಟಿನಲ್ಲಿ

O. P. $\frac{121}{1939}$

ಹಾಸ್ಯಗಾರ ಲಕ್ಷ್ಮಿನಾರ್ಣಪ್ಪಯ್ಯ— ಅರ್ಜಿದಾರ.

ಕೃಷ್ಣಮ್ಮ —ಎದುರ್ದಾರ.

ಸದ್ರಿ ಎದ್ರಿ ಕೃಷ್ಣಮ್ಮಗೆ ಈ ಮೂಲಕ ತಿಳಿಸುವುದೇನೆಂದರೆ—

ಎದ್ರಿಯು ಅರ್ಜಿದಾರನ ಮೇಲೆ ಸಬ್ರಹ್ಮಣ್ಯ ಪಂಚಾತ ಕೋರ್ಟಿನಲ್ಲಿ ದಾಖಲುಮಾಡಿದ ಸಿವಿಲ್ ಕ್ಯಾಜ್ಯ ನಂಬ್ರ 20/1939ನೇ ದಾವೆಯನ್ನು ಬೇರೆ ಕೋರ್ಟಿಗೆ ಟ್ರಾನ್ಸ್‌ಫಾರು ಮಾಡಬೇಕೆಂತಲೂ ಮತ್ತು ಸದರಿ ಅರ್ಜಿ ತೀರ್ಮಾನದ ವರೇಗೆ ದಾವೆಯನ್ನು ತನಿಖೆ ನಡಿಸದಂತೆ ಸ್ಟೇ ಹುಕುಂ ಕೊಡಬೇಕಾಗಿ ಕೊಡಾ ಅರ್ಜಿದಾರನು ಅರ್ಜಿಗಳನ್ನು ದಾಖಲು ಮಾಡಿರುತ್ತಾನೆ. ಮತ್ತು ಸದರಿ ಅರ್ಜಿಗಳನ್ನು ತಾ. 7-2-'40ಕ್ಕೆ ತನಿಖೆಗೆ ಇಟ್ಟಿರುವದರಿಂದ ಅವುಗಳ ಕುರಿತು ಆಕ್ಷೇಪವಿರುವದಾದರೆ ತಾ. 7-2-'40ಕ್ಕೆ ಹಗಲು ಘಂಟೆ 10ಕ್ಕೆ ಕೋರ್ಟು ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನ ಮಾಡಲಾದೀತು.

ಪುತ್ತೂರು,
ತಾ. 27-1-40

B. Shivarama Holla.
Advocate of Petitioner.

ನವಯುಗ

ನೋಟೀಸು.

ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅದನ್ನು ದಯಮಾಡಿ ಕೂಡಲೇ ಕಳಿಸಿಕೊಡತಕ್ಕದ್ದಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಚಾಲ್ತಿ ವರ್ಷದ ಚಂದಾ ಹಣ ಬಾಕಿ ಇರುವವರು ಅದನ್ನು ಆದಷ್ಟು ಬೇಗನೆ ಕಳಿಸುವಂತೆಯೂ ವಿನಂತಿ. —ಮೇನೇಜರ್.

ನಂಬ್ರ 11 | ಗ್ಯಾರಂಟಿ ಇನಾಮುಗಳು

40,000 ರೂಪಾಯಿಗಳು

ಸಂಪೂರ್ಣ ಸರಿಯಾದ 20 ಇನಾಮುಗಳೊಳಗೆ ಹಂಚಲ್ಪಡುವುದು.

ಮುದ್ರೆ ಹಾಕಿ ಇಡಲ್ಪಟ್ಟಿರುವ ನಮ್ಮ ಉತ್ತರಕ್ಕೆ ಸರಿಹೋಲುವ ಅಡ್ಡಗೆರೆಗಳಲ್ಲಿಯ ಪ್ರಥಮದ ಎರಡು ಸಂಖ್ಯೆಗಳು ಸರಿಯಾದ್ದಲ್ಲಿ ಅಂತವುಗಳಿಗೆ ರೂಪಾಯಿ ಐದರ ಇನಾಮು ಕೊಡಲಾಗುವುದು.

ನಮ್ಮ ಸಾಂಕೇತಿಕ ಉತ್ತರದ ಯಾವುದಾದರೊಂದು ಸಾಲಿಗೆ ಅನುಕ್ರಮವಾಗಿ ಸರಿಯಾದ ಉತ್ತರ ಕಳುಹಿಸುವ 'ರನ್ನರ್ಸ್ ಅಪ್' ಇವರಿಗೆ ತಲಾ ಒಂದರ ರೂ. 20ರಂತೆ ಕೊಡಲಾಗುವುದು ಭದ್ರವಾಗಿರಿಸಲ್ಪಟ್ಟ ನಮ್ಮ ಉತ್ತರದ ಮೊದಲಿನ ಎರಡು ಸಮಾನಾಂತರ ಸಾಲುಗಳಿಗೆ ಅನುಕ್ರಮವಾಗಿ ಸರಿಯಾದ ಸಾಲುಗಳನ್ನು ಸೂಚಿಸುವವರಿಗೆ ರೂ. 100ರ ಗ್ಯಾರಂಟಿ ಇದೆ. ಅತಿ ಹೆಚ್ಚಿನ ಉತ್ತರ ಕಳುಹಿಸುವವರಿಗೆ ರೂ. 150 ರಿಸರ್ವ್ ಮಾಡಲಾಗಿದೆ.

ಕೊಡಲ್ಪಟ್ಟಿರುವ ಚೌಕಟ್ಟಿನಲ್ಲಿ 4ರಿಂದ 19ರ ವರೆಗಿನ ಅಂಕೆಗಳನ್ನು ಅಡ್ಡಕ್ಕೆ ಮತ್ತು ನೀಟಕ್ಕೆ ಪ್ರತಿಯೊಂದು ಸಾಲಿನ ಮತ್ತು ಮೂಲೆಗಳಿಂದ ಮೂಲೆಗಳಿಗೆ ಎರಡು ಸಾಲಿನ ಸಂಖ್ಯೆಗಳನ್ನು ಕೂಡಿಸಿದರೆ ಜುಮ್ಲಾ 46 ಆಗತಕ್ಕದ್ದು. ಪ್ರತಿಯೊಂದು ಅಂಕೆಯೂ ಒಮ್ಮೆಯೇ ಉಪಯೋಗಿಸಲ್ಪಡಬೇಕು. ಉತ್ತರ ಕಳುಹಿಸುವ ಕೊನೆಯ ತಾ. 12-2-40, ಫಲಿತಾಂಶ ಪ್ರಕಟಣಾ ತಾರೀಕು 20-2-40.

ಪ್ರತಿಯೊಂದು ಉತ್ತರಕ್ಕೆ ಪ್ರವೇಶಹಾಸಲು ರೂ. 1 ಅಥವಾ 3ಕ್ಕೆ ರೂ. 2 ಅಥವಾ 8ರ ಪ್ರತಿಯೊಂದು ಸೆಟ್ಟಿಗೆ ರೂ. 5.

ಕ್ರಮಗಳು— ಖಾಲಿ ಕಾಗದದಲ್ಲಿ ಸ್ಪಷ್ಟವಾಗಿ ಬರೆದು, ಅಗತ್ಯವುಳ್ಳ ಪ್ರವೇಶ ಹಾಸಲಿನ ಸಮೇತವಾಗಿ ಎಷ್ಟು ಬೇಕಾದರೂ ಉತ್ತರಗಳನ್ನು ಕಳುಹಿಸಬಹುದು. ಪ್ರವೇಶಹಾಸಲನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸತಕ್ಕದ್ದು. ಪ್ರವೇಶಹಾಸಲು ಸಂಗ್ರಹವಾದ ಮೇರೆಗೆ ಇನಾಮುಗಳು ಬದಲಾಯಿಸಲ್ಪಡುವವು, ಆದರೆ ಬೊಂಬಾಯಿಯ ಪ್ರಸಿದ್ಧವಾದ ಬ್ಯಾಂಕೊಂದರಲ್ಲಿ ಡೆಪೋಸಿಟ್ ಇಡಲ್ಪಟ್ಟಿರುವ ಉತ್ತರವನ್ನು ಹೋಲುವ ಸರಿಯಾದ ಉತ್ತರ ಕಳುಹಿಸುವ ಪ್ರತಿಯೊಬ್ಬರಿಗೆ ರೂ. 2500ವರೆಗಿನ ಇನಾಮಿನ ಗ್ಯಾರಂಟಿ ಇದೆ. ಫಲಿತಾಂಶವನ್ನು ಪಡೆಯುವುದಕ್ಕಾಗಿ ವಿಳಾಸ ಸಮೇತವಾದ ಕವರೊಂದನ್ನು ಸ್ಟಾಂಪು ಸಹಿತ ಲಗ್ತೀಕರಿಸತಕ್ಕದ್ದು. ಮೇನೇಜರರ ನಿರ್ಣಯವೇ ಕೊನೆಯದೂ ಸಿಂಧುವಾದುದೂ ಆಗಿರುವುದು.

ಜುಮ್ಲಾ 50ರ ಹಿಂದಿನ ಸಮಸ್ಯೆಯ ಮುದ್ರೆ ಹಾಕಿ ಇಡಲ್ಪಟ್ಟ ಉತ್ತರ.

1ನೇ ಸಾಲು	17,	14,	8,	11
2ನೇ ಸಾಲು	12,	7,	13,	18
3ನೇ ಸಾಲು	5,	10,	20,	15
4ನೇ ಸಾಲು	16,	19,	9,	6

ನಿಮ್ಮ ಉತ್ತರ ಮತ್ತು ಪ್ರವೇಶ ಹಾಸಲನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ,

ದಿ ಮೇನೇಜರ್,

ಪ್ರೆಸಿಡೆನ್ಸಿ, ಕಮರ್ಶಿಯಲ್ ಸಿಂಡಿಕೇಟ್

ಮುಂಬಾದೇವಿ, ಬೊಂಬಾಯಿ 2.

The Manager,
Presidency, Commercial Syndicate,
Mumbadevi, BOMBAY 2.



ರೂ. 1—8—0ಕ್ಕೆ

3 ವಾಚುಗಳೂ, 1295 ಷೋಕಿನ ಇನಾಮುಗಳೂ

ಫೀಸು ಒಂದರ ರೂ 1-8-0ಯಂತೆ ಒಮ್ಮೆಯೇ 10ಕ್ಕಿಂತ ಸಮಾನ ಒಟೋಮೇಟಿಕ್ ಪರಿಮಾಣ ದ್ರವ್ಯವನ್ನು ಕೊಂಡುಕೊಳ್ಳುವವರಿಗೆ ಗಿಲ್ಟಿನ ಡೆಮಿ ಗೋಲ್ಡ್ ರಿಸ್ಟ್‌ವಾಚು, ಸೇಫ್ಟಿ ವಾಚು, ಬಾಂಡುವಾಲ್ಡ ಸಿಟ್ಟು, ಕ್ರಿಸ್ಟಿಟ್ಯಾಮ್, ಡಬ್ಬಿ ಪಾಕೆಟ್‌ವಾಚು, ಸೇಫ್ಟಿರೇಜರ್, ಮುಟ್ಟಿದ, ಸೇವಿಂಗ್ ಸೋಪು, ಸೇವಿಂಗ್ ಬ್ರಷ್, ಕನ್ನಡಿ, ಪೌಡರ್ ಪಕೇಟು, ಕ್ಲಿಪ್ಪು ಸಮೇತ ಪೆನ್ಸಿಲು, ಸಿಗರೇಟ್ ಕೇಸ, ಸಿಗರೇಟು ಲೈಟರ್, ಅಂಗವಸ್ತ್ರ, ಉಂಗುರ, ಕತ್ತರಿ, 555 ಅದಿ ದಾರ ಫ್ರೆಂಚ ಕೊಡುವ ಹೋಟರ್‌ಲ್ಯಾಟ್ ಅಥವಾ ಐದು ವರ್ಷ ಗ್ಯಾರಂಟಿಯುಳ್ಳ ಟೈಮ್‌ಪೀಸು ಧರ್ಮಾರ್ಥವಾಗಿ ಕೊಡಲಾಗುವುದು. ಪೋಸ್ಟೇಜು ಮತ್ತು ಪ್ಯಾಕಿಂಗ್ 12ಆಣೆ ಪ್ರತ್ಯೇಕ, ಇಂದೇ ಬರೆಯಿರಿ

THE FRENCH WATCH CO.
Post Box No. 12216 Calcutta (N. G.)

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೧-೨-'೪೦.

ಸ್ವ-ಪರವಂಚನೆ

ಮಹಾತ್ಮ ಗಾಂಧಿಯವರು ರಾಜಕೀಯವನ್ನು ಎಷ್ಟೆಂದು ನೀತಿ ಮತ್ತು ಸತ್ಯಮಯವನ್ನಾಗಿ ಮಾಡಲೆತ್ನಿಸಿದರೂ ಅದು ಮೋಸ, ವಂಚನೆ ಮತ್ತು ಕುತಂತ್ರಗಳಿಂದ ತುಂಬಿಯೇ ಇರುತ್ತದೆ. ಧಾರ್ಮಿಕ ಆದರ್ಶಗಳನ್ನು ರಾಜಕೀಯದಲ್ಲಿ ಪ್ರಯೋಗಕ್ಕೆ ಹಚ್ಚಿದರೆ ಅವು ವ್ಯವಹಾರ್ಯವಾಗುವುದಾದರೂ ಹೇಗೆ? ಆದರೆ ಅನೊಂದು ಅಂಧವಿಶ್ವಾಸ ಮತ್ತು ಪೌರುಷಹೀನತನದಿಂದಾಗಿ ಗಾಂಧಿಜಿಯವರ ನಾಯಕತ್ವವನ್ನು ಕಳಕೊಳ್ಳಲು ಹೆಚ್ಚಿನ ಕಾಂಗ್ರೆಸ್‌ವಾದಿಗಳು ತಯಾರಿಲ್ಲ ಆದುದರಿಂದಲೇ ಅವರ ಉದಾತ್ತ ತತ್ವ ಮತ್ತು ವಿಧಾಯಕ ಕಾರ್ಯಕ್ರಮದ ಮೇಲಿನ ವಿಶ್ವಾಸದ ನಟನೆಯಿಂದ ಅವರು ತಮಗೆ ತಾವೇ ವಂಚಕರಾಗಿ ನಡೆಯುವುದು ಮಾತ್ರವಲ್ಲದೆ ಮಹಾತ್ಮರ ಕಣ್ಣಿಗೂ ಮಣ್ಣು ಹಾಕಲೆತ್ನಿಸುತ್ತಾರೆ.

ಕಳೆದ ತಾ. 26ರಲ್ಲಿ ದೇಶದಲ್ಲೆಲ್ಲಾ ಆಚರಿಸಲ್ಪಟ್ಟಿರುವ ಸ್ವಾತಂತ್ರ್ಯ ದಿನಾಚರಣೆಯು ಇದಕ್ಕೊಂದು ನಿದರ್ಶನವಾಗಿದೆ. ಈ ವರ್ಷ ಬದಲಾಯಿಸಲ್ಪಟ್ಟಿರುವ ಸ್ವಾತಂತ್ರ್ಯ ಪ್ರತಿಜ್ಞೆಯು ಅನೇಕ ಕಡೆಗಳಲ್ಲಿ ಸಾಮುದಾಯಿಕವಾಗಿ ತೆಗೆದುಕೊಳ್ಳಲ್ಪಟ್ಟಿದೆ. ಗಾಂಧಿಜಿ ಮತ್ತು ವೈಸರಾಯರೊಳಗೆ ಮಾತುಕತೆ ನಡೆದು ಹಿಂದೀ ಪ್ರಶ್ನೆಯು ರಾಜಿಯಿಂದ ಇತ್ಯರ್ಥವಾಗುವ ಸಂಭವವಿರುವುದರಿಂದ ಅಧಿಕಾರಕಾರಣದಿಂದಾಗಿ ಕಾಂಗ್ರೆಸಿಗೆ ಬಂದು ಸೇರಿರುವ ಹಲವರು ಈ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಧೈರ್ಯದಿಂದ ತೆಗೆದುಕೊಳ್ಳಲು ಮುಂದಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ನೂಲುವ ಮಾತಂತಿರಲಿ, ಅನುನಿತ್ಯ ಖಾದಿ ಕೂಡಾ ಧರಿಸುವವರು ಸಹ ಅಲ್ಲ. ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಬರುವುದು ನಿಶ್ಚಯವೆಂಬಂತೆ ತೋರುವುದರಿಂದ ಈ ಜನರು ಮುಂದಿನ ತಮ್ಮ ಅಧಿಕಾರಸ್ಥಾನವನ್ನು ಬಲಪಡಿಸಿಕೊಳ್ಳಲು ಟೊಂಕಕಟ್ಟಿ ಮುಂದೆ ಬಂದಿರುವರೇ ಹೊರತು ಖಾದಿ ಮತ್ತು ಚರಕದ ಮೇಲಿನ ವಿಶ್ವಾಸದಿಂದಲ್ಲೆಂದು ಧೈರ್ಯದಿಂದ ಹೇಳಬಹುದು. ಮತ್ತು ನಾಳೆ ಕಾಯಿದೆಭಂಗ ಚಳವಳ ಆರಂಭವಾದರೆ ಇವರಲ್ಲಿ ಎಷ್ಟು ಜನರು ಜೈಲಿಗೆ ಹೋಗಲು ತಯಾರಿರುವರೋ?

ದಕ್ಷಿಣಕನ್ನಡ ಜಿಲ್ಲೆಯ ಉದಾಹರಣೆಯನ್ನು ನಾವು ಎತ್ತಿ ಹೇಳಲೆಳಸುತ್ತೇವೆ. ಮಂಗಳೂರಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದರಲ್ಲಿ ಅಗ್ರಗಣ್ಯರಾದ ಮಹನೀಯರುಗಳು, ಸಭೆಗಳ ಹೊರತು ಇತರ ಸಂದರ್ಭಗಳಲ್ಲಿ ಖಾದಿಯನ್ನು ಹಾಕಿಕೊಳ್ಳುವವರಲ್ಲೆಂಬುದು ಜನಜನಿತ ವಿಷಯ, ನೂಲುವವರಂತೂ ಇಡೀ ಜಿಲ್ಲೆಯಲ್ಲಿ ಕೇವಲ ಬೆರಳೆಣಿಕೆಯಷ್ಟಿರಬಹುದು. ಆದರು ಜಾಹೀರಾಗಿ ಸ್ವಾತಂತ್ರ್ಯ ಪ್ರತಿಜ್ಞೆ ತೆಗೆದುಕೊಳ್ಳುವ ಪ್ರದರ್ಶನಕ್ಕಾಗಿ ಮುಂದೆ ಬಂದಿಲ್ಲ. ಇತರ ಕಡೆಗಳ ಪರಿಸ್ಥಿತಿಯೂ ಹೆಚ್ಚು ಕಡಿಮೆ ಇದೇ ರೀತಿ ಇರಬಹುದು.

ಈಗ ಕಾಂಗ್ರೆಸಿನೊಳಗೆ ಸೇರಿರುವ ಅನೇಕರ ಈ ರೀತಿಯ ಸ್ವ—ಪರ ವಂಚನ ಧೋರಣೆಯಿಂದಾಗಿ ಕಾಂಗ್ರೆಸಿನ ಕುರಿತು ಜನತೆಯಲ್ಲಿ ಭಕ್ತಿ ವಿಶ್ವಾಸವು ಕಡಿಮೆಯಾಗುತ್ತಿದೆ. ಕಾಂಗ್ರೆಸು ಕಮಿಟಿಗಳು ಜನಬೆಂಬಲವಿಲ್ಲದೆ ಜೀವನ್ಮೃತಾವಸ್ಥೆಯಲ್ಲಿರುವವು. ಹೆಚ್ಚಿನ ಹಳೆಯ ಕಾಂಗ್ರೆಸ್ ಕೆಲಸಗಾರರು ಜಿಗುಪ್ಸೆಗೊಂಡು ಹಿಂದುಳಿದಿರುವರು. ಕಾಂಗ್ರೆಸ್ ಮಂತ್ರಿಗಳ ಆಡಳಿತವೇ ಕಾಂಗ್ರೆಸಿನ ಸರ್ವಸ್ವವೆಂಬಂತಾಗಿ ಜನಜಾಗೃತಿ ಮತ್ತು ಸಂಘಟನೆಯ ಕೆಲಸವೇ ಮೂಲೆಗುಂಪಾಗಿರುವುದು. ಇಂತಹ ಪರಿಸ್ಥಿತಿಯಲ್ಲಿ ಜನರು ಕಾಯಿದೆ ಭಂಗಕ್ಕೆ ತಯಾರಿರುವರೆಂಬುದು ದೊಡ್ಡ ಅವಿವೇಕವಿರುವುದು.

ಗಾಂಧಿಜಿ ವೈಸರಾಯರ ಮಾತುಕತೆ

ಫೆಬ್ರವರಿ ಮೊದಲನೇ ವಾರದಲ್ಲಿ ಮಹಾತ್ಮ ಗಾಂಧಿಯವರು ಡಿಲ್ಲಿಗೆ ಹೋಗಿ ಅಲ್ಲಿಯೇ ಕೆಲದಿನವಿದ್ದು ವೈಸರಾಯರೊಡನೆ ಮಾತುಕತೆ ನಡಿಸಲಿರುವರು. ಇಂಗ್ಲಂಡಿನ ಈಗಣ ಮಂತ್ರಿ ಮಂಡಲವು ಅಧಿಕಾರದಲ್ಲಿರುವವರೆಗೆ ಹಿಂದೀಪ್ರಶ್ನೆಯು ತೃಪ್ತಿಕರವಾಗಿ ಇತ್ಯರ್ಥವಾಗುವ ಹಾಗಿಲ್ಲ. ಆದುದರಿಂದ ಕಾಂಗ್ರೆಸಿನವರು ಸಂಧಿಯ ಆಶೆ ಕಟ್ಟಿಕೊಳ್ಳದೆ ಹೋರಾಟಕ್ಕೆ ಭರದಿಂದ ಸಿದ್ಧತೆ ಮಾಡಬೇಕೆಂದು ಪಂಡಿತ ಜವಾಹರಲಾಲರು ಎಚ್ಚರಿಸಿರುತ್ತಾರೆ. ಆದರೆ ಗಾಂಧಿಯವರು ವೈಸರಾಯರ ಯಥಾರ್ಥತೆ ಮತ್ತು ಬ್ರಿಟಿಷ್ ಜನತೆಯ ವಿವೇಕಪರತೆಯ ಕುರಿತು ವಿಶ್ವಾಸವುಳ್ಳವರಿದ್ದು ಸಂಧಿಯಾಗಬಹುದೆಂಬ ಆಶೆಯುಳ್ಳವರಿದ್ದಾರೆ. ಕಾಂಗ್ರೆಸ್ ಮಂತ್ರಿಗಳು ಬೇಗನೆ ಅಧಿಕಾರಕ್ಕೆ ಬರುವಂತಾಗುವುದೆಂದು ಶ್ರೀ ಸತ್ಯಮೂರ್ತಿಗಳೇ ಮೊದಲಾದವರು ಉದ್ಘೋಷಿಸುತ್ತಿದ್ದಾರೆ. ಮಿ. ಜಿನ್ನರ ತೊಡಕೊಂದಿಲ್ಲದಿರುತ್ತಿದ್ದರೆ ವೈಸರಾಯರು ಇಷ್ಟರಲ್ಲೇ ಕಾಂಗ್ರೆಸಿನೊಂದಿಗೆ ರಾಜಿ ಮಾಡುತ್ತಿದ್ದರೆಂಬ ಅಭಿಪ್ರಾಯವನ್ನು ಶ್ರೀ.ರಾಜಗೋಪಾಲಾಚಾರ್ಯರು ಕೊಟ್ಟಿರುತ್ತಾರೆ.

ವೈಸರಾಯರು ಎಲ್ಲಿ ಕಾಂಗ್ರೆಸ್ಸಿನೊಡನೆ ಸಂಧಿಮಾಡುವರೋ ಎಂದು ಮಿ. ಜಿನ್ನರು ತಳಮಳಗೊಂಡಿರುತ್ತಾರೆ. ಕಾಂಗ್ರೆಸ್ ಮಂತ್ರಿಗಳು ಮುಸಲ್ಮಾನರೇ ಮೊದಲಾದ ಅಲ್ಪಸಂಖ್ಯಾಕರಿಗೆ ಮಾಡಿರುವ ಅನ್ಯಾಯಗಳ ಕುರಿತು ವಿಚಾರಿಸಲು ರೋಯಲ್ ಕಮಿಶನನ್ನು ನೇಮಿಸಬೇಕೆಂಬ ಮಿ. ಜಿನ್ನರ ಸೂಚನೆಯನ್ನು ಬ್ರಿಟಿಷ್ ಸರಕಾರವು ನಿರಾಕರಿಸಿದ ನಂದ ಮಿ. ಜಿನ್ನರು ಮತ್ತಷ್ಟು ಸಿಟ್ಟುಗೊಂಡಿದ್ದಾರೆ. ಅವರ ಧೋರಣೆಯು ವಿಘಾತುಕವಾದುದೆಂಬ ಲಂಡನ್ ಟೈಮ್ಸ್ ಪತ್ರಿಕೆಯ ಸಹಜವಾದ ಟೀಕೆಯು ಅವರನ್ನು ರೇಗಿಸಿಬಿಟ್ಟಿದೆ. ಮುಸಲ್ಮಾನರು ಯಾರ ಮೇಲೆಯೂ ಹೊಂದಿರುವ ಹಾಗಿಲ್ಲ ಸ್ವತಂತ್ರವಾಗಿ ಅವರು ಹಿಂದುಸ್ಥಾನದಲ್ಲಿ ತಕ್ಕ ಸ್ಥಾನ ಪಡೆಯುವ ಶಕ್ತಿಯುಳ್ಳವರಾಗಿದ್ದಾರೆ. ಮುಸಲ್ಮಾನರ ಹಕ್ಕುಬಾಧ್ಯತೆಗಳನ್ನು ನಿಶ್ಚಯಪಡಿಸದ್ದಲ್ಲಿ ಅವರು ಹೋರಾಟಕ್ಕೆ ಸಿದ್ಧರಾಗಬೇಕೆಂಬಂತೆ ಮಿ. ಜಿನ್ನರು ಹೇಳಿಕೆ ಕೊಟ್ಟಿದ್ದಾರೆ ಮಿ. ಜಿನ್ನರೀಗ ಮುಸಲ್ಮಾನರ ಡಿಕ್ಟೇಟರಂತಾಗಿದ್ದಾರೆ ಮುಸ್ಲಿಮ್ ಲೀಗಿನವರು ಅಂತಹ ಸ್ಥಾನವನ್ನವರಿಗೆ ಕೊಟ್ಟಿರುತ್ತಾರೆ. ಆದರೆ ಇದೇ ರೀತಿಯ ಧೋರಣೆಯನ್ನವರು ಮುಂದೆಯೂ ವಹಿಸಿದ ಪಕ್ಷದಲ್ಲಿ ಬ್ರಿಟಿಷ್ ಸರಕಾರಕ್ಕಾಗಲಿ ಕಾಂಗ್ರೆಸ್ಸಿಗಾಗಲಿ ಅವರನ್ನು ಅವರಷ್ಟಕ್ಕೆ ಬಿಡದೆ ನಿರ್ವಾಹವಿಲ್ಲವಾಗುವುದು. ಯಾವುದಕ್ಕಾದರೂ ಒಂದು ಮಿತಿಯಿದೆ, ಆ ಮಿತಿಯನ್ನೀಗ ಮಿ ಜಿನ್ನರು ದಾಟಿ ಬಹಳ ಮುಂದುವರಿದಿದ್ದಾರೆ ಮಿ. ಜಿನ್ನರಿಗೆ ಹೆಚ್ಚಿನ ಮುಸಲ್ಮಾನರು ಬೆಂಬಲವಿತ್ತಿರುವುದೆಂದರೆ ಅವರ ಧೋರಣೆಗೆ ಸರಕಾರದ ಬೆಂಬಲವಿರುವುದೆಂದು. ಸರಕಾರದ ವಿರೋಧವಾಗಿ ಚಳವಳ ಹೂಡುವ ಸಂದರ್ಭದಲ್ಲಿ ಎಷ್ಟು ಮಂದಿ ಮುಸಲ್ಮಾನರು ಮಿ. ಜಿನ್ನರ ಬೆಂಬಲಕ್ಕೆ ನಿಲ್ಲುವರೋ?

ಕಾಂಗ್ರೆಸ್ಸಿನೊಡನೆ ಸರಕಾರವು ಸಂಧಿ ಮಾಡಿಕೊಳ್ಳುವುದಕ್ಕೆ ಮಿ. ಜಿನ್ನರು ಪ್ರಬಲ ಆತಂಕವಾಗಿರುತ್ತಾರೆ. ಇದರಿಂದಾಗಿ ಗಾಂಧಿ ವೈಸರಾಯ ಮಾತುಕತೆಯಾದರೂ ಹೇಗೆ ಪರಿಣಮಿಸುವುದೆಂದು ಹೇಳಬರುವುದಿಲ್ಲ. ವೈಸರಾಯರು ಮಿ. ಜಿನ್ನರನ್ನು ಸಮಾಧಾನಪಡಿಸಲು ನಡಿಸಿದುವ ಪ್ರಯತ್ನವು ಫಲಕಾರಿಯಾಗಿರುವಂತೆ ತೋರುವುದಿಲ್ಲ. ಆದುದರಿಂದಲೇ ಅವರು ಸರ್. ಸಿಕಂದರ್ ಹಾಯತ್‌ಖಾನರನ್ನು ಕರೆದು ಮಾತಾಡಿರುವರು. ಈ ಸಂದರ್ಭದಲ್ಲಿ ಆಗಾಖಾನರು ಹಿಂದುದೇಶದಲ್ಲಿದ್ದರೆ ಪರಿಸ್ಥಿತಿಯು ಇಷ್ಟೊಂದು ಕೆಟ್ಟುಹೋಗುತ್ತಿರಲಿಲ್ಲ. ಸರಕಾರವು ಕೇವಲ ಕಾಂಗ್ರೆಸಿನೊಡನೆ ಒಡಂಬಡಿಕೆಮಾಡಿಕೊಂಡು ಮುಸಲ್ಮಾನರ ವಿರೋಧವನ್ನಿದಿರಿಸಲು ತಯಾರಿರಲಾರದು. ಮಿ. ಜಿನ್ನರು, ಮುಸಲ್ಮಾನರು ನಾಯಕರಾಗಿರುವವರೆಗೆ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳೊಳಗೆ ಒಪ್ಪಂದವಾಗುವ ಆಶೆ ತೋರುವುದಿಲ್ಲ ಅಂದ ಮೇಲೆ ಗಾಂಧಿ ವೈಸರಾಯ ಮಾತುಕತೆಯು ಬೇಗನೆ ಸತ್ಪರಿಣಾಮಕಾರಿಯಾಗುವುದು ಹೇಗೋ?

ಅನಿಶ್ಚಿತ ಪರಿಸ್ಥಿತಿ

ಹಿಂದೀ ಬಿಕ್ಕಟ್ಟನ್ನು ಯಾವ ರೀತಿಯಲ್ಲಿ ಪರಿಹರಿಸುವುದೆಂಬ ವಿಷಯದಲ್ಲಿ ಸರಕಾರವು ಯಾವುದನ್ನೂ ನಿಶ್ಚೈಸಿದುವಂತೆ ತೋರುವುದಿಲ್ಲ. ಕಾಂಗ್ರೆಸಿನ ಕೇಳಿಕೆಯಾದ ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ಕರೆಯಲು ಸರಕಾರವು ಸಿದ್ಧವಿರುವುದಿಲ್ಲ ಆ ಮೂಲಕ ಹಿಂದೀ ರಾಜಕೀಯ ಘಟನೆಯನ್ನು ತಯಾರಿಸುವುದು ವ್ಯವಹಾರ್ಯವಲ್ಲೆಂದು ಹಲಮಂದಿ ತಜ್ಞರ ಅಭಿಮತವಿದೆ ಅದನ್ನು ಬೇಗನೆ ಹಿಂದೂದೇಶಕ್ಕೆ ವೆಸ್ಟ್‌ಮಿನಿಸ್ಟರ್ ರೀತಿಯ ಸಾಮಂತ ಸ್ವರಾಜ್ಯವನ್ನೀಯಲಾಗುವುದೆಂದು ಮಾತ್ರ ವೈಸರಾಯರು ಹೇಳಿರುವರೆ ಹೊರತು, ಪ್ರಕೃತದ ಕೇಂದ್ರ ಸರಕಾರದಲ್ಲ ಯಾವ ಬದಲಾವಣೆ ಮಾಡಲಾಗುವುದೆಂಬುದನ್ನೇನೂ ಸೂಚಿಸಲಿಲ್ಲ. ಅವರು ಯುದ್ಧಾರಂಭದಲ್ಲಿ ಸೂಚಿಸಿದ ಕನ್ಸಲ್ಟೇಟಿವ್ ಕಮಿಟಿಯು ಎಲ್ಲರಿಂದಲೂ ವಿರೋಧಿಸಲ್ಪಟ್ಟು ಮೂಲೆಗುಂಪಾಗಿದೆ. ಹಿಂದೂದೇಶದ ಪ್ರಕೃತದ ಆಳ್ವಿಕೆಯ ರೀತಿನೀತಿಯೇ ಬದಲಾವಣೆಯಾಗದಿದ್ದ ಪಕ್ಷದಲ್ಲಿ ಕಾಂಗ್ರೆಸಿನವರು ಒಪ್ಪುವ ಹಾಗಿಲ್ಲ. ಈಗ ಎಗ್ಸಿಕ್ಯೂಟಿವ್ ಕೌನ್ಸಿಲಿಗೇನೇ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಮೆಂಬರರನ್ನು ಸೇರಿಸುವ ಸೂಚನೆಗೆ ಕಾಂಗ್ರೆಸು ಎಂದೂ ಒಪ್ಪಲಾರದು. ವೈಸರಾಯರು ಕೇಂದ್ರದಲ್ಲಿ ಹೊಸ ಮಂತ್ರಿಮಂಡಲವನ್ನು ರಚಿಸಿ ಅವರ ಸಲಹೆ ಮೇರೆಗೆ ನಡೆಯುವಂತಾದರೆ ದೇಶದಲ್ಲಿ ತೃಪ್ತಿಯುಂಟಾಗಬಹುದು, ಆದರೆ ಅವರು ಫೆಡರೇಶನಿನ ಹೊಗಳಿಕೆಯ ಗಾನವನ್ನೇ ಹಾಡುತ್ತಿದ್ದಾರೆ, ದೇಶೀಯ ಸಂಸ್ಥಾನಾಧಿಪತಿಗಳು ಫೆಡರೇಶನಿಗೆ ಸೇರಲೊಪ್ಪುವಂತೆ ಪ್ರಯತ್ನ ನಡೆಯುತ್ತಿದೆ. ನಾನಾ ಸೂಚನೆಗಳು ಗಾಳಿಯಲ್ಲಿ ಹಾರಾಡುತ್ತಿವೆ. ಹೀಗೆ ಪರಿಸ್ಥಿತಿಯು ಅನಿಶ್ಚಿತವಾಗಿ ಗೊಂದಲಮಯವಾಗಿದೆ, ವೈಸರಾಯರು ಸರ್ವ ಪಕ್ಷಗಳ ಪ್ರತಿನಿಧಿಗಳ ಸಭೆಯೊಂದನ್ನು ಕೂಡಿಸಿ ಆಲೋಚಿಸದ ಪಕ್ಷದಲ್ಲಿ ಏನಾದರೊಂದು ನಿಶ್ಚಯಕ್ಕೆ ಬರುವಂತಾಗಬಹುದು.

ಮಜೂರ ಹಿತವರ್ಧಕ ಪರಿಷತ್ತು

ಈ ಪರಿಷತ್ತು ಇಂದಿಯಾ ಸರಕಾರದ ಎಗ್ಸಿಕ್ಯೂಟಿವ್ ಕೌನ್ಸಿಲರಾದ ಶ್ರೀ. ರಾಮಸ್ವಾಮಿ ಮುದಲಿಯಾರರ ಅಧ್ಯಕ್ಷತೆಯಲ್ಲಿ ಡಿಲ್ಲಿಯಲ್ಲಿ ಎರಡು ದಿನ ನಡೆಯಿತು. ಕೈಗಾರಿಕೆಗಳಲ್ಲಿನ ಕಲಹಗಳ ಇತ್ಯರ್ಥ, ಮಜೂರರಿಗೆ ಸಂಬಳ ಸಮೇತ ರಜೆ ಕೊಡುವಿಕೆ, ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಮಜೂರರ ಸಂಖ್ಯೆ ಮತ್ತು ಸ್ಥಿತಿಗತಿಗಳ ಪರಿಶೀಲನೆ, ಮತ್ತು ಮಜೂರರಿಗೆ ಸಂಬಳ ತೆರುವ ಸಂಬಂಧವಾದ ಕಾನೂನಿನ ತಿದ್ದುಪಡಿ ಈ ನಾಲ್ಕು ವಿಷಯಗಳ ಕುರಿತು ಕೇಂದ್ರ ಸರಕಾರವು ಕಾನೂನು ಮಾಡಬೇಕೆಂಬುದೇ ಈ ಪರಿಷತ್ತಿನಲ್ಲಿ ನಡೆದ ಚರ್ಚೆಯ ಪರಿಣಾಮ. ಮೇಲಿನ ವಿಷಯಗಳನ್ನೊಳಗೊಂಡ ಖರಡು ಮ

ಫಿನ್ಲೆಂಡ್

ಕಳೆದ ...
2 ಲಕ್ಷ
ಲಡೋಗ ಸ...
ರ ಮೇಲೆ ...
ರ್ ಪ್ರ...
ಆಪರಿಕಲು ...
ಶೀಲವಾಗಿ...
ಫಿನ್ನಿಶ್ ಸೇ...
ಯನ್ನು ಜ...
ದು. ಕಿಡೇ...
ಸಂಪರ್ಕವೂ
ನೋವಿಯೆ...
ನಾಶಪಡಿಸ...
ಈ ಪ್ರಚಂಡ
ಕಾಳೆಗದಲ್ಲಿ
ಯೋನಾಗಿ...
ಫಿನ್ನರು ಇ...
ಸೋವಿಯೆ...
ಳು ಗಿ ಹೋ...
ಬರುತ್ತದೆ

ಸ್ವೀಡನ್...
ಟ್ ವಹಿಸಿ...
ಸಹಾಯ ಮಾ...
630,000 ...
ತ್ತಿದೆ ಪ...
ವೈಮಾನಿಕ...
ಬಂದಿದೆ ತ...

ಸೂಚನೆಯೊ...
ಪರಿಶೀಲನೆ...
ಪ್ರಾಂತಿಕ ಸ...
ಪ್ರಾಯಗಳನ್ನ...
ಜನವರಿ ಕಿಂ...
ರ ಹಿತಸಾಧ...
ಈ ಮೇಲೆ ...
ಸೆಂಬ್ಲಿಯ ...

ಈಗ ಹಿಂದ...
ಪ್ರಾಂತಗಳಲ್ಲಿ
ಮಜೂರರ ಕ...
ಇಡೀ ಹಿಂದೂ...
ಅನ್ವಯಿಸುವ
ಇರುವುದಿಲ್ಲ.
ಸರಕಾರವು ...
ಜ್ಯಾರಿಗೆ ...
ವಾಗಿಯಾದರೂ
ಜನೆ ಮಾಡಿ...
ಕೈಗಾರಿಕೆಗ...
ಹಿತದ ಮೇ...
ಮಜೂರರು ...
ವಂತಾದರೆ ...
ನಾದ ದೇಶ...
ಇಲ್ಲವಾಸ...
ಮುಖ್ಯರಿವೇ
ಕಾರಣವ ...
ದೇಶದ ಕೈಗ...
ಮಜೂರರಿಲ್ಲಿ ...
ಉಂಟಾಗಿದೆ...
ವಾದ ಹಕ್ಕು...
ನೆಲ್ಪೆಟ್ಟಿಗಿ ...
ಮಾಗಿರುತ್ತದೆ.

ಸುವಾದು
ಸೈನಿಕರು
ದಲ್ಲಿ ಫಿನ್ನ
ಯು ಮೆನ್ನ
ಹಿಂದಿನಿಂದ
ವು ಜಯ
ಚಿಸ್ಥ ದಳ
ಟ್ ಸೇನೆ
ಕಟ್ಟಿರುವು
ಣ ಯಾವ
ಕ್ಕಿಬಿದ್ದಿದ್ದ
ಫಿನ್ನರು
ಸೇನೆಯು
ಮದಾಗಿದೆ.
ನೆಯ ಗತಿ
ಗೆ ತಿಳಿದಿಲ್ಲ.
ಟಿಗೆ ಸಿಕ್ಕಿ
ದು ಮು
ವ ತಿಳಿದು

ಕ್ಕ ಧೋರಣೆ
ಗೆ ಬಹಳೆ
ಹ ವರೆಗೆ
ಮಾಡಿರು
00 ಮಂದಿ
ಯಾಕಶ್ಯಾಗಿ

ಸಂಕ್ರಮಗಳ
ಗುವುದು.
ವ ಅಭಿ
1941ನೇ
ನ ಮಂಜೂ
ಮುಂದಿಟ್ಟು
ಕೇಂದ್ರ ಎ
ಸು.
ಬೇರೆ
ರೀತಿಯ
ಪೆ. ಆದರೆ
ದೇ ರೀತಿ
ನಾವುದೂ
ಾಡಿಯಾ
ನೊಂದನ್ನು
ಮು ವಿಳಂಬ
ಈ ಆಲೋ
ದನೀಯ.
ಮಜೂರರ
ಡಿಸುತ್ತವೆ.
ಡಿಯು
ನಿಜ
ಗುವವು.
ದೇಶದಲ್ಲಿ
ಟಿಗಳಿಗೆ
ಗಿ ಹಿಂದು
ಡಿ ಯು ವ
ಸಂಘಟನೆ
ನ ನ್ಯಾಯ
ಮನ್ನಿಸಿ
ಶ್ಯಾವಶ್ಯಕ

...ನ ಮತ್ತು ಜರ್ಮನಿಯ ಯುದ್ಧದಪರಿಸ್ಥಿತಿ

ರಶ್ಯದ ಪ್ರಬಲ ಧಾಳಿ-ಫಿನ್ನರ ವಿಜಯ.

ಫೆಬ್ರುವರಿಯಲ್ಲಿ ಪ್ರಚಂಡ ವಿಮಾನ ಯುದ್ಧ.

ಮಾರ್ಚಿ ತಿಂಗಳಲ್ಲಿ ಪಶ್ಚಿಮ ರಣರಂಗದಲ್ಲಿ ಪ್ರಬಲ ಹೋರಾಟ.

ರಶ್ಯದ ಜಲ, ನೆಲ ಮತ್ತು ಆಕಾಶ ಪಡೆಯ ಸಂಯುಕ್ತ ನಾಯಕ ಮಾರ್ಶಲ್ ವರೊಶಿಲೊಫರು ಫಿನ್ಲೆಂಡಿನ ರಣರಂಗವನ್ನು ಸಂದರ್ಶಿಸಿರುವರು. ಸ್ಟಾಲಿನರೂ ಸಂದರ್ಶಿಸಿರುವರೆಂದು ತಿಳಿದುಬರುತ್ತದೆ. ಸೋವಿಯೆಟ್ ಸರಕಾರವು ಫಿನ್ನರಿಂದ ಇಷ್ಟೊಂದು ಪ್ರಬಲ ವಿರೋಧವನ್ನು ನಿರೀಕ್ಷಿಸದೆ ಪ್ರಬಲ ಹೋರಾಟಕ್ಕೆ ಸರಿಯಾದ ಸಿದ್ಧತೆ ಮಾಡಿರಲಿಲ್ಲ ಆದುದರಿಂದಲೇ ಅವರು ಅಪಜಯ ಹೊಂದಲು ಕಾರಣವಲ್ಲದೆ ಸೋವಿಯೆಟ್ ಸೈನಿಕರ ಧೈರ್ಯ ಸ್ಥೈರ್ಯದ ಕೊರತೆಯಿಂದಲ್ಲ. ಇದು ಹೊರತು ಫಿನ್ಲೆಂಡಿನ ಭೂಸ್ಥಿತಿಯು ಬಹಳ ತೊಡಕಿನದಾಗಿರುವುದಲ್ಲದೆ, ಮೆನ್ನರ್ ಹೈಮ್ ಕೋಟೆಯು ಕೂಡಾ ಬಹಳ ಭದ್ರವಾಗಿರುವುದು ಈಗ ಸೋವಿಯೆಟ್ ಸೇನೆಯು ದೀರ್ಘಕಾಲದ ಯುದ್ಧಕ್ಕೆ ಬೇಕಾದ ಸಿದ್ಧತೆಮಾಡಿ ಫಿನ್ನರ ಮೇಲೆ ಪ್ರಬಲ ಧಾಳಿ ನಡಿಸಿರುವುದು. ಧಾಳಿಯು ಇದೇ ರೀತಿ ನಡೆದ ಪಕ್ಷದಲ್ಲಿ ಮೆನ್ನರ್ ಹೈಮ್ ಕೋಟೆಯನ್ನು ರಶ್ಯನರು ಹಿಂಬದಿಯಿಂದ ಆವರಿಸುವ ಗಂಡಾಂತರವು ನಿಶ್ಚಯವೆಂಬಂತೆ ತೋರುತ್ತದೆ.

ಜರ್ಮನ್ ಯುದ್ಧ

ಪಶ್ಚಿಮ ರಣರಂಗದಲ್ಲೀಗ ಚಳಿ ಸ್ವಲ್ಪ ಕಡಿಮೆಯಾಗಿ ಹಿಮವು ಕರಗಹತ್ತಿರುವುದು. ಮಾರ್ಚಿ ತಿಂಗಳೊಳಗೆ ಪ್ರಬಲ ಯುದ್ಧವು ನಿಶ್ಚಯವೆಂದೇ ಹೇಳಬಹುದು. ಮಿತ್ರ ರಾಷ್ಟ್ರಗಳ ವಿಮಾನಗಳು ಇನ್ನು ಸುಮ್ಮನಿರುವ ಹಾಗಿಲ್ಲ. ಹಿಟ್ಲರರು, ಜಯಶೀಲವಾದ ದಾಳಿಯ ಉತ್ಕೃಷ್ಟ ಸಂದರ್ಭವನ್ನು ಕಳಕೊಂಡಿರುವರು. ಇಷ್ಟರವರೆಗೆ ಅವರು ವೈಮಾನಿಕ ಧಾಳಿ ನಡಿಸುತ್ತಿದ್ದರೆ ಅದನ್ನು ತಡೆಗಟ್ಟಲು ಮಿತ್ರರಾಷ್ಟ್ರಗಳಿಗೆ ಬಹಳ ಕಷ್ಟವಾಗುತ್ತಿತು ಇನ್ನು ಮುಂದೆ ಏನೂ ಕಷ್ಟವಾಗಲಾರದು. ಸಮುದ್ರ ಯುದ್ಧದಲ್ಲಿ ಬ್ರಿಟನು ಸಂಪೂರ್ಣ ವಿಜಯಹೊಂದಿದೆ. ಮಿತ್ರರಾಷ್ಟ್ರಗಳ ಆರ್ಥಿಕ ಮುತ್ತಿಗೆಯು ಜರ್ಮನಿಯ ಸಾಂಪತ್ತಿಕ ಸ್ಥಿತಿಯನ್ನು ಕೆಡಿಸಿದೆಯೆಂದು ಮಿ ಚರ್ಚಿಲ್ಲರು ಅಭಿಪ್ರಾಯಪಟ್ಟಿರುವರು ಹೆಚ್ಚಾಗಿ ತಟಸ್ಥರಾಷ್ಟ್ರಗಳ ಹಡಗಗಳು ಪ್ರತಿದಿನವೂ ಮುಳುಗಿಸಲ್ಪಡುತ್ತಿವೆ.

ಜರ್ಮನಿಯು ಬಾಲ್ಕನ್ ರಾಷ್ಟ್ರಗಳನ್ನು ತನ್ನ ಕಡೆಗೆಳೆಯುವ ಪ್ರಯತ್ನ ನಡಿಸುತ್ತಿದೆ ಬಾಲ್ಕನ್ ಕೂಟದ ರಾಷ್ಟ್ರಗಳ ಸಭೆಯೊಂದು ಸದ್ಯದಲ್ಲೇ ನಡೆಯಲಿರುವುದು. ಇದರಲ್ಲಿ ಹಿಟ್ಲರರು ತನ್ನ ವರ್ಚಸ್ಸನ್ನೆಲ್ಲಾ ಉಪಯೋಗಿಸಿ, ಟರ್ಕಿಯು ಮಿತ್ರರಾಷ್ಟ್ರಗಳ ಸ್ನೇಹದಿಂದ ವಿಮುಖವಾಗುವಂತೆ, ಬಾಲ್ಕನ್ ರಾಷ್ಟ್ರಗಳ ಮೇಲೆ ಇಂಗ್ಲೆಂಡ್ ಮತ್ತು ಫ್ರಾನ್ಸುಗಳ ಪ್ರಭಾವವೇನೂ ಇರದಂತೆ, ಬಾಲ್ಕನ್ ರಾಷ್ಟ್ರಗಳೆಲ್ಲಾ ತಟಸ್ಥವಾಗಿದ್ದು ಜರ್ಮನಿಯೊಡನೆ ವ್ಯಾಪಾರ ವಹಿವಾಟು ನಡೆಸುವಂತೆ ಮತ್ತು ಬಲ್ಗೇರಿಯವನ್ನು ಬಾಲ್ಕನ್ ಕೂಟದೊಂದಿಗೆ ಸೇರಿಸುವಂತೆ ಪ್ರಯತ್ನಿಸಲಿರುವರೆಂದು ತಿಳಿದುಬರುತ್ತದೆ ಈ ಸಂಬಂಧವಾಗಿ ಇಷ್ಟರಲ್ಲೇ ಜರ್ಮನ್ ಪತ್ರಿಕೆಗಳು ಪ್ರಚಾರಕ್ಕಾರಂಭಿಸಿವೆ.

ರುಮೇನಿಯವು ತನ್ನ ಪೆಟ್ರೋಲನ್ನೆಲ್ಲ ಜರ್ಮನಿಗೆ ಕೊಡುವಂತೆ ಜರ್ಮನಿಯು ಒತ್ತಾಯಪಡಿಸುತ್ತದೆ. ಇದರಿಂದ ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ತಳಮಳಗೊಂಡಿವೆ. ರುಮೇನಿಯವು ಬಹಳ ತೊಡಕಿನಲ್ಲಿ ಸಿಕ್ಕಿದೆ. ಜರ್ಮನಿಯು ಎಣ್ಣೆಗಾಗಿ ಅದನ್ನು ಒತ್ತಾಯಪಡಿಸಿ ಬೆದರಿಸುತ್ತಿದೆ. ರಶ್ಯವು ಕೂಡಾ ಬೆಸರೇಬಿಯದ ಮೇಲೆ ಕಣ್ಣಿಟ್ಟು ರುಮೇನಿಯಕ್ಕೆ ಬೆದರಿಕೆ ಹಾಕಿದೆ ಬಲ್ಗೇರಿಯವು ದಕ್ಷಿಣ ಡೆಬ್ರೂಡ್ಜಾ ಎಂಬ ಸ್ಥಳವನ್ನು ಕೇಳುತ್ತಿದೆ. ಹಂಗೇರಿಯು ಟ್ರಾನ್ಸಿಲ್ವೇನಿಯವು ತನಗೆ ಸಿಕ್ಕಬೇಕೆಂದಿದೆ ಇಟೆಲಿಯು ರುಮೇನಿಯದ ಮೇಲೆ ತನ್ನ ಪ್ರಭಾವವನ್ನು ಸ್ಥಾಪಿಸಲೆಳಸುತ್ತದೆ, ಇಂಗ್ಲೆಂಡು ಮತ್ತು ಫ್ರಾನ್ಸುಗಳು ಮೊದಲೇ ರುಮೇನಿಯವನ್ನು ತಮ್ಮ ಹಸ್ತಕವನ್ನಾಗಿ ಮಾಡುವ ಹಂಚಿಕೆ ಮಾಡಿವೆ. ಹೀಗೆ ರುಮೇನಿಯದ ಮೇಲೆ ಎಲ್ಲರ ದೃಷ್ಟಿಯೂ ಬಿದ್ದು ಅದಕ್ಕೆ ಏನು ಮಾಡುವುದೆಂದು ತೋಚದಾಗಿದೆ.

ಯುದ್ಧದಲ್ಲಿ ತಮಗೇನೇ ಜಯ ನಿಶ್ಚಯವೆಂಬ ದೃಢವಿಶ್ವಾಸದಿಂದ ಜರ್ಮನರು, ಇಂಗ್ಲೆಂಡನ್ನು ವಶಪಡಿಸಿಕೊಂಡ ಮೇಲೆ ಆಳಲು ಅಧಿಕಾರಿಗಳನ್ನು ಈಗಲೇ ತರಬೇತಿ ಮಾಡುತ್ತಿರುವರೆಂದು ತಿಳಿದುಬರುತ್ತದೆ. ಮಾರ್ ಬರ್ಗ್ ಎಂಬ ವಿಶ್ವವಿದ್ಯಾಲಯದಲ್ಲಿ ಬಟಿಸನ್ನು ಮುಂದೆ ಆಳುವವರೆಂಬವರಿಗೆ ಇಂಗ್ಲಿಷ್ ಭಾಷೆ, ಪದ್ಧತಿ ಮತ್ತು ಭೂಸ್ಥಿತಿಯು ಕಲಿಸಲ್ಪಡುತ್ತಿದೆ

ವಿದೇಶ ಸಂಬಂಧವಾದ ಧೋರಣೆಯ ವಿಷಯದಲ್ಲಿ ಜರ್ಮನಿ ಮತ್ತು ರಶ್ಯಗಳೊಳಗೆ ಸಂಪೂರ್ಣ ಒಮ್ಮತವುಂಟಾಗಿದೆ. ಫಿನ್ಲೆಂಡಿನ ಯುದ್ಧವನ್ನು ಜರ್ಮನಿಯು ಸಮರ್ಥಿಸುತ್ತದೆ. ಯಾವ ವಿಷಯದಲ್ಲಾದರೂ ಜರ್ಮನಿ ಮತ್ತು ರಶ್ಯಕ್ಕೆ ಭಿನ್ನಾಭಿಪ್ರಾಯವಿರುವುದಿಲ್ಲ. ಅತ್ಯಂತ ಸೌಹಾರ್ದಪರ ಅನ್ಯೋನ್ಯತೆಯುಂಟಾಗಿದೆಯೆಂದು ಮೋಸ್ಕೋ ಪಟ್ಟಣದ ರೇಡಿಯೋ ವಾರ್ತೆ.

ಯುದ್ಧ ದೀರ್ಘ ಕಾಲ ನಡೆಯುವುದು

ಪ್ರಕೃತದ ಯುದ್ಧವು ಬಹಳ ಕಷ್ಟದ್ದು ಮತ್ತು ಪ್ರಾಯಶಃ ಅತಿ ದೀರ್ಘಕಾಲ ನಡೆಯುವುದು. ಜರ್ಮನಿಯ ಸಾಂಪತ್ತಿಕ ಸ್ಥಿತಿಯು ಬೇಗನೆ ಕೆಟ್ಟುಹೋಗಲಾರದು, ಬ್ರಿಟಿಷರು ಸಾಧ್ಯವಾದಷ್ಟು ಮಿತವ್ಯಯದ ಜೀವನ ನಡಿಸಬೇಕು. ಕಟ್ಟಕಡೆಗೆ ಜಯವಂತೂ ಮಿತ್ರ ರಾಷ್ಟ್ರಗಳಿಗೆಂಬುದರಲ್ಲಿ ಸಂದೇಹವಿಲ್ಲೆಂದು ಜರ್ಮನಿಯಲ್ಲಿ ಸಚ್ಚ ಕಾಲ ಬ್ರಿಟಿಷ್ ರಾಯಭಾರಿಯಾಗಿದ್ದ ಸರ್ ನೆವ್ಹೈಲ್ ಹೆಂಡರ್ಸನರು ಅಭಿಪ್ರಾಯಪಡುತ್ತಿರುವರು. ಇಂಗ್ಲೆಂಡ್ ಫೆಬ್ರವರಿ ತಾ. 17ಕ್ಕೆ ಪುನಃ 250,000 ಸೇನಾ ಸಂಗ್ರಹ ಮಾಡಲಿರುವುದು.

ಕಾಲವಿಳಂಬದಿಂದ ಜರ್ಮನಿಗೂ ಪ್ರಯೋಜನವಿದೆ. ಅದು ಕೂಡಾ ತನಗೆ ಬೇಕಾದ ಸಾಮಾನುಗಳನ್ನು ಭೂಮಾರ್ಗವಾಗಿ ತರಿಸಿಕೊಳ್ಳುವ ಏರ್ಪಾಡು ಮಾಡುತ್ತಿರುವುದು. ಪೆಟ್ರೋಲ್ ಮೊದಲಾದ ಎಣ್ಣೆಗಾಗಿ ಹೋರಾಟ ನಡೆಯುವ ಸಂಭವವಿದ್ದು ಕೊಕೇಸಿಸ್, ಪರ್ಶಿಯಾ ಇರಾಕ್ ಮತ್ತು ಅರೇಬಿಯಕ್ಕೂ ಅದು ವ್ಯಾಪಿಸಬಹುದೆಂದು ಜರ್ಮನರ ಅಭಿಪ್ರಾಯವಿರುವುದು. ಈ ದೃಷ್ಟಿಯಿಂದ ಹಿಟ್ಲರರು ಈಗ ಯುದ್ಧ ಸಿದ್ಧತೆ ಮಾಡುತ್ತಿರುವತಿವೆ.

200 ಮಂದಿ ಸುಟ್ಟುಹೋದರು

ಇದೇ ತಾ. 29ರಲ್ಲು ಜಪಾನಿನ ಅಜಕಾವ ಎಂಬಲ್ಲಿ ಪೆಟ್ರೋಲಿಂದ ನಡಿಸಲ್ಪಡುವ ಟ್ರೈನೊಂದು ಕಂಬತಪ್ಪಿ ಮಗುಚಿಬಿದ್ದು ಇಡೀ ಟ್ರೈನಿಗೆ ಬೆಂಕಿ ಹಿಡಿದು ಅದರೊಳಗಿದ್ದ 200 ಮಂದಿ ಸಜೀವವಾಗಿ ಸುಡಲ್ಪಟ್ಟಿರುವರು 100 ಮಂದಿಗೆ ಹೆಚ್ಚಿನ ಜಖಮ್ ಆಗಿರುವುದು.

ನವಯುಗ ಎಂಟರ್ಪ್ರೈಸ್ ಲಿಮಿಟೆಡ್, ಉಡುಪಿ

ಉಪಕಾರ ಸ್ಮರಣೆ

ಶ್ರೀಗಳಾದ ಕೆ. ಜೆ. ಬಲ್ಲಾಳ, ಬಿ. ಎ. ಎಲ್. ಎಲ್. ಬಿ; ಬಿ. ನಾರಾಯಣ ಶೆಟ್ಟಿ, ಬಿ. ಎ. ಬಿ. ಎಲ್; ಕೆ. ಹೊನ್ನಯ್ಯ ಶೆಟ್ಟಿ ಇವರು ಕಳೆದ ವಾರದಲ್ಲಿ ಕಂಪೆನಿಯ ಶ್ಯೇರ್ ಕಲೆಕ್ಷನಿಗಾಗಿ ಬ್ರಹ್ಮಾವರಕ್ಕೆ ಹೋದಾಗ ಅವರೊಡನೆ ಸಹಕರಿಸಿದ ಶ್ರೀಗಳಾದ ಬಿ. ಮಹಾಬಲೇಶ್ವರ ಶೆಟ್ರು, ಇರ್ಮಾಡಿ ವಿಟ್ಠಲ ಶೆಟ್ರು, ಪಕ್ಕಮನೆ ಮಹಾಬಲ ಶೆಟ್ರು, ಬಿ. ಮಾಧವರಾವ್ ಇವರಿಗೂ ಶ್ರೀಗಳಾದ ಟಿ ಗಣಪಯ್ಯ ಶೆಟ್ಟಿ, ಬಿ. ಎ. ಎಲ್ಎಲ್ ಬಿ; ಬಿ. ನಾರಾಯಣ ಶೆಟ್ಟಿ, ಬಿ. ಎ, ಬಿ ಎಲ್ ಮೊದಲಾದವರು ಹಿರೆಬೆಟ್ಟಿಗೆ ಹೋದಾಗ ಸಹಕಾರವಿತ್ತ ಶ್ರೀ ಚಂದ್ರಯ್ಯ ಹೆಗ್ಗಡೆ ಮತ್ತು ಶ್ರೀ ಬಿ. ಸದಾಶಿವ ಹೆಗ್ಗಡೆ ಇವರಿಗೂ, ಶ್ರೀಗಳಾದ ಬೇಳಿಂಜೆ ವಿಟ್ಠಲ ಹೆಗ್ಡೆ, ಬಿ ಕೃಷ್ಣಯ್ಯ ಹೆಗ್ಗಡೆ, ಕೆ. ಸರ್ವೋತ್ತಮ ಶೆಟ್ಟಿ ಮೊದಲಾದವರು ಹಿರಿಯಡ್ಕ ಪಗ್ರೈತೆ ಸ್ಥಳಗಳಿಗೆ ಹೋದಾಗ ಸಹಕರಿಸಿದ ಶ್ರೀ. ಬಿ. ಸದಾಶಿವ ಹೆಗ್ಡೆ ಮೊದಲಾದವರಿಗೂ ಪ್ರತಿ ಕಡೆಗಳಲ್ಲೂ ಉದಾರ ಮನಸ್ಸಿನಿಂದ ಪಾಲುಗಳನ್ನು ಪಡಕೊಂಡು ಪ್ರೋತ್ಸಾಹಿಸಿದ ಸಕಲ ಮಹನೀಯರಿಗೂ ಈ ಮೂಲಕ ಸಂಬಂಧಪಟ್ಟವರು ಧನ್ಯವಾದಗಳನ್ನು ಅರ್ಪಿಸುತ್ತಾರೆ.

ವಿ ಸೂ: ಪಾಲಿನ ಹಣವನ್ನು ಬಾಕಿಯಾಗಿರಿಸಿಕೊಂಡವರು ಅದನ್ನು ಆದಷ್ಟು ಬೇಗನೆ ದಯಮಾಡಿ ಕಳಿಸಿಕೊಡುವಂತೆ ಅಪೇಕ್ಷಿಸಲಾಗುತ್ತದೆ.

ಬೈಂದೂರು— ಈ ಸರ್ಕಲಿನ ಉಪ್ಪುಂದ ಗ್ರಾಮದ ಉತ್ಸಾಹಿ ಕಾಂಗ್ರೆಸ್ ಪಕ್ಷದವರಾದ ಮಂಜಯ್ಯ ಶೆಟ್ಟರು ತಾ. 15-1-40ರಲ್ಲಿ ತಮ್ಮ 36ನೇ ವರ್ಷದಲ್ಲಿ ಜ್ವರದಿಂದ ಮರಣಪಟ್ಟದ್ದು ಬಹು ವಿಷಾದವಾಗುತ್ತದೆ. ಇವರು ಕಳೆದ ಕಾಂಗ್ರೆಸ್ ಸತ್ಯಾಗ್ರಹದಲ್ಲಿ ಫಾರೆಸ್ಟ್ ಕಾನೂನು ಉಲ್ಲಂಘನೆ ಮಾಡಿ ಜೈಲು ಶಿಕ್ಷೆಯನ್ನು ಬಹಳವಾಗಿ ತಿಂದು ಸೆರೆಮನೆಗೆ ಸಹ ಹೋಗಿದ್ದರು ಕಳೆದ ಚುನಾವಣೆಯ ಕಾಲದಲ್ಲಿ ಕಾಂಗ್ರೆಸ್ ಕಡೆಯಿಂದ ಅತ್ಯಂತ ಆಸಕ್ತಿಯಿಂದ ಕೆಲಸಮಾಡಿದ್ದರು. ಅಲ್ಲದೆ ತಮ್ಮ ಗ್ರಾಮಾಭಿವೃದ್ಧಿಗಾಗಿ ಶ್ರದ್ಧೆವಹಿಸಿ ದುಡಿದವರು, ಇವರ ಮರಣದಿಂದ ಬೈಂದೂರು ಸರ್ಕಲಿಗೆ ಅಪಾರ ನಷ್ಟವಿದೆ. ಮೃತರ ದುಃಖಿತ ಕುಟುಂಬವರ್ಗದವರಿಗೆ ನಮ್ಮ ಸಂತಾಪವನ್ನು ವ್ಯಕ್ತಪಡಿಸುವೆವು

ಮೂಲ್ಕಿ—ಸ್ಥಳೀಕ ಎಲಿಮೆಂಟರಿ ಶಾಲಾ ಅಧ್ಯಾಪಕರ ಸಂಘದ ಸಾಮಾನ್ಯ ಸಭೆಯು ತಾ. 20-1-1940ರಲ್ಲಿ ಹೆಡವಾಡ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಯಂ. ರಾಮರಾವ್ ಕಾಮತ್ ರವರ ಅಧ್ಯಕ್ಷತೆಯಲ್ಲಿ ಜರಗಿತು.

ಸ್ಥಳೀಕ ಗವರ್ನಮೆಂಟ್ ಲೇಬರ್ ಶಾಲೆಯ ವರ್ಷಂತಿಯು ಇದೇ ಬರುವ ತಾ. 3-2-1940ನೇ ಶನಿವಾರ ಸಾಯಂಕಾಲ ಘಂಟೆ 5ಕ್ಕೆ ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಶ್ರೀ. ಕೆ. ವಿಠಲ ಶೆಟ್ರು ಅಧ್ಯಕ್ಷತೆಯಲ್ಲಿಯೂ, ಗದ್ರಿ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ವರ್ಷಂತಿಯು ತಾ. 4-2-1940ನೇ ಆದಿತ್ಯವಾರ ಸಾಯಂಕಾಲ ಘಂಟೆ 6ಕ್ಕೆ ಜಿಲ್ಲಾ ಲೇಬರ್ ಆಫೀಸರಾದ ಶ್ರೀ. ಟಿ ಡಿ. ವೆಲಿಯತ್, ಬಿ ಎ ರವರ ಅಧ್ಯಕ್ಷತೆಯಲ್ಲಿಯೂ ಜರಗಲಿರುವುದಾಗಿ ತಿಳಿದುಬರುತ್ತದೆ.

ಮಂಗಳೂರಿನ ಚಾಲತಿ ಧಾರಣೆ.

	ರೂ. ಅ.	ರೂ. ಅ.
ಮುಸ್ಕತಿ ಹೊಸ	4—6	4—8
ಗುಡ್ಡ ಹೊಸ	4—4	4—6
ಗುಡ್ಡ ಬತಿ	4—0	4—4
ಸಗ್ಗಿ ಅಕ್ಕಿ	4—8	4-10
ಅಪ್ಪಲ್ ಬೆತ್ತಗೆ ಕಾರ್ಕಳ	4-10	5—2
ಕಾ. ಗುಡ್ಡ ಬೆತ್ತಗೆ	4—8	4-10
ಸೆಲ್ಲೂರು ಬೆತ್ತಗೆ	4—4	4—8
ರಂಗೂನು ಬೆತ್ತಗೆ ಗೋಣಿಗಕ್ಕೆ	7-12	8—4
ರಂಗೂನು ಕುಚ್ಚಲಕ್ಕಿ ಗೋಣಿಗಕ್ಕೆ		8—4
ಗೋಧಿ	11—4	15—0
ಹುರುಳಿ	6—8	6-10
ತೊಗರಿ ಬೇಳೆ	13—8	22—0
ಉದ್ದು ಮುಡಿಗಕ್ಕೆ	5-10	5-12
ಹೆಸರು "	5-12	6—0
ಊರ ಬೆಲ್ಲ ಖಂಡಿಗಕ್ಕೆ	40—0	50—0
ಉಪ್ಪು ಮೂಟೆಗಕ್ಕೆ	4—8	5-14
ಬೊಂಬಾಯಿ ಗೋಧಿಹಿಟ್ಟು ಗೋಣಿಗದ	12—8	13—4
ಕಪ್ಪೆಹಿಟ್ಟು "	14—8	15—0
ಕಾಳು ಮೆಣಸು ಮಣಗಕ್ಕೆ	5—0	5—4
ಕೊಬ್ಬರಿ ಖಂಡಿಗದ	68—0	70—0
ಕೊಬ್ಬರಿ ಹಿಂಡಿ ಖಂಡಿಗಕ್ಕೆ	26—8	27—8
ಎಳ್ಳಿಂಡಿ "	27—8	30—0
ತೆಂಗಿನಕಾಯಿ ಗಂಟಿಗೆ	5—8	6—0
ಕೊಬ್ರಿ ಎಣ್ಣೆ ಮಣಗಕ್ಕೆ	4-14	5-14
ಊರ ಎಳ್ಳೆಣ್ಣೆ "	6—0	6—8
ಮುಂಡಿ ಬೀಜದ ಎಣ್ಣೆ		3—9
ಚೀಯಬರ್ಸ್ ಚಿಮಿಣಿ ಎಣ್ಣೆ		3—0
ಮಾರಿಸ್ ಸಕ್ಕರೆ ಮಣಗಕ್ಕೆ		4-12
ಊರ ಮೆಣಸಿನ ಕಾಯಿ "		5—8
ಸಾಸಿವೆ ಮುಡಿಗಕ್ಕೆ	6—4	6—8
ಕೊತ್ತಂಬರಿ "	3-14	5—6
ಅಡಿಕೆ(ಹಸ್ತ)ಖಂಡಿಗಕ್ಕೆ	125—0	155—0
ಸಣ್ಣದು ಹೊಸ ಅಡಿಕೆ	88—0	100—0
ದೊಡ್ಡದು ಹೊಸ ಅಡಿಕೆ	105—0	115—0
ಪ್ಲೇಂಟೇಶನ್ ಕಾಫಿ "	40-12	42—0
ಚಾ ಖಂಡಿಗಕ್ಕೆ	162—8	167—8
ಪಿಬ್ರಿ ಖಂಡಿಗಕ್ಕೆ	180—0	185—0
ಯಾಲಕ್ಕಿ ಮಣಗಕ್ಕೆ(ಕೊ.)	38—0	42—0
" (ಮಂ.) ಸಕಲೇಶಪುರ	50—0	55—0
ಕೆಪ್ಪಿನ ಖಂಡಿಗಕ್ಕೆ		60—0
ತಾಮ್ರ ಪಾತ್ರೆಗಳು ಮಣಗಕ್ಕೆ		25—0
ತಾಮ್ರ ತಗಡು ಮಣಗಕ್ಕೆ		23—0
ಬೀಡಿ ಎಲೆ, ಸೇರು ಗಕ್ಕೆ		15—8
ಹಿತ್ತಾಳೆ ತಗಡು ಮಣಗಕ್ಕೆ		18—0
ಸತು ಗಕ್ಕೆ		27—0
ಗೇರುಬೀಜ ಮುಡಿಗಕ್ಕೆ	3—0	3—4

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತಾಹರರಿಂದ)

ಮಂಗಳೂರು ತಾ. 29-1-1940

ಸ್ವಾತಂತ್ರ್ಯ ದಿನಾಚರಣೆ—ಕಳೆದ ತಾ. 26ನೇ ಶುಕ್ರವಾರ ಸಾಯಂಕಾಲ ಮಂಗಳೂರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನಡೆಯಿತು. ಅಂದು ಬೆಳಗ್ಗೆ ಪ್ರಭಾತಫೇರಿ ನಡೆದು ಧ್ವಜವಂದನೆಯೂ ಆಯಿತು. ಸಾಯಂಕಾಲ ಮೈದಾನದಲ್ಲಿ ಸಾರ್ವಜನಿಕ ಸಭೆ ಜರಗಿತು. ಸುಮಾರು 1000ಕ್ಕೂ ಮಿಕ್ಕಿ ಜನರು ಸೇರಿದ್ದರು. ಶ್ರೀ. ಬಿ. ಎ. ಬಾಳಿಗರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಬಿ. ವೈಕುಂಠ ಬಾಳಿಗರೂ, ಮಾನ್ಯ ಡಾ| ಕೆ. ವಿಠ್ಠಲ ಶೆಟ್ಟಿಯವರೂ ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ವಿವರಿಸಿ ಭಾಷಣ ಮಾಡಿದರು. ಅಧ್ಯಕ್ಷರು ಭಾಷಣ ಕರ್ತರ ಅಭಿಪ್ರಾಯಗಳನ್ನು ಅನುಮೋದಿಸಿ ಭಾಷಣಮಾಡಿದರು. ಅನಂತರ ಸ್ವಾತಂತ್ರ್ಯ ಪ್ರತಿಜ್ಞೆಯನ್ನೋದಿದರು. ಪ್ರತಿಜ್ಞೆ ತೆಗೆದುಕೊಂಡವರೆಲ್ಲರೂ ಆ ಪ್ರತಿಜ್ಞೆಯನ್ನು ತಾವೂ ಹೇಳಿದರು. ಪ್ರತಿಜ್ಞೆ ತೆಗೆದುಕೊಂಡ ಅನಂತರ ಸಭಾಂತ್ಯವಾಯಿತು.

ಹಿಂದೂ ಮಹಾಸಭೆಯ ಶಾಖೆ—ನಿನ್ನೆಯ ದಿನ ಸಾಯಂಕಾಲ ರಥಬೀದಿ ವಿದ್ಯಾಬೋಧಿನಿ ಶಾಲೆಯಲ್ಲಿ ನಡೆದ ಹಿಂದೂ ಗೃಹಸ್ಥರ ಸಭೆಯೊಂದು ಶ್ರೀ. ಎಸ್. ನಾಗರಾಜಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರಲ್ಲಿ ಹಿಂದೂ ಮಹಾಸಭೆಯ ಶಾಖೆಯನ್ನು ತೆರೆಯುವ ವಿಷಯದಲ್ಲಿ ಅಧ್ಯಕ್ಷರು ಕೆಲವು ಹಿತಸೂಚನೆಗಳನ್ನಿತ್ತರು. ಶ್ರೀಗಳಾದ ತಿಮ್ಮಪ್ಪ ಕಾರಂತ್, ಗೋಪಾಲ ನಾಯಕ್, ರಾವ್ ಬಹದ್ದೂರು ಎಸ್. ಎನ್. ಸುವರ್ಣರು ಸಂದರ್ಭೋಚಿತವಾಗಿ ಭಾಷಣಮಾಡಿದ ಮೇಲೆ ಸಭೆಯಲ್ಲಿ ಹಾಜರಿದ್ದವರು ಹಿಂದೂ ಸಮಾಜದ ಉದ್ಧಾರಕ್ಕಾಗಿ ಒಂದು ಶಾಖೆಯನ್ನು ಮಂಗಳೂರಲ್ಲಿ ಸ್ಥಾಪಿಸಬೇಕೆಂದು ತೀರ್ಮಾನವಾಯಿತು. ಹನ್ನೆರಡು ಮಂದಿ ಮಹನೀಯರಿರುವ ಒಂದು ಸಮಿತಿಯು ಏರ್ಪಟ್ಟಿತು. ಶ್ರೀ. ನಾಗರಾಜಯ್ಯನವರು ಅಧ್ಯಕ್ಷರಾಗಿಯೂ, ಭಟ್ ಜಯಪರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಎಸ್. ನರ್ಸಪ್ಪಯ್ಯ (ಅಡ್ವೋಕೇಟ್) ಮತ್ತು ಯು. ಗೋಪಾಲ ನಾಯ್ಕರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಶ್ರೀ. ಕುಡ್ಪಿ ಗೋಪಾಲಕೃಷ್ಣ ರಾವ್ ಅಡ್ವೊಕೇಟ್‌ರವರು ಧನ್ಯವಾದಗಳನ್ನರ್ಪಿಸಿದ ತರುವಾಯ ಸಭಾಂತ್ಯವಾಯಿತು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ದಿನಾಚರಣೆ—ಮಂಗಳೂರಿನ ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಮಿನ ದಿನಾಚರಣೆಯು ನಿನ್ನೆಯ ದಿನ ಸಾಯಂಕಾಲ ಅತಿ ವಿಜೃಂಭಣೆಯಿಂದ ನೆರವೇರಿತು. ನಿನ್ನೆ ಬೆಳಗ್ಗೆ ವಿವಿಧ ಆಟಗಳಲ್ಲಿ ಸ್ಪರ್ಧೆ ನಡೆಯಿತು. ಸಾಯಂಕಾಲ 5 ಘಂಟೆಗೆ ಸರಿಯಾಗಿ ಹಾಸ್ಟೆಲಿನ ಸಭಾ ಸ್ಥಾನದಲ್ಲಿ ಸೈ. ಎಲೋಸಿಯಸ್ ಕಾಲೇಜಿನ ಪ್ರೈರೆಕ್ಟರೂ ಪ್ರಿನ್ಸಿಪಾಲರೂ ಆದ ರೆ. ಫಾ. ಬಿ. ಡಿ ಸೋಜ ಎಸ್. ಜೆ. ಇವರ ಅಧ್ಯಕ್ಷತೆಯಲ್ಲಿ ಮಹಾಸಭೆ ಜರಗಿತು. ಅನೇಕ ಮಹನೀಯರೂ ಮಹಿಳೆಯರೂ ಬಂದಿದ್ದರು. ಪ್ರಾರ್ಥನೆಯಾದ ಮೇಲೆ ಡಾ| ವಿಠ್ಠಲ ಶೆಟ್ಟಿಯವರು ರೆ. ಫಾ. ಡಿ ಸೋಜರನ್ನು ಅಧ್ಯಕ್ಷ ಸ್ಥಾನ ವಹಿಸುವಂತೆ ಪ್ರಾರ್ಥಿಸಿದರು. ಅನಂತರ ವರದಿ ವಾಚನ ನಡೆಯಿತು. ಹಾಸ್ಟೆಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾದ ವಿಷಯವಾಗಿ ಅದರಲ್ಲಿ ಉಲ್ಲೇಖಿಸಲ್ಪಟ್ಟಿತು. ಅನಂತರ ಶ್ರೀ. ಕೆ. ನಾರಾಯಣ ರೈ ಬಿ. ಎ., ಬಿ. ಎಲ್.ರವರು ಹಾಸ್ಟೆಲ್ ಅಭಿನಂದನಾ ಭಾಷಣ ಮಾಡಿದರು. ಶ್ರೀ| ವೇಣುಗೋಪಾಲ ಶೆಟ್ಟಿಯವರು ಅದಕ್ಕುತ್ತರವಿತ್ತರು. ಅನಂತರ ಆಟಗಳಲ್ಲಿ ಗೆದ್ದವರಿಗೂ, ಪಠಿಕ್ ಸ್ಪರ್ಧೆಯಲ್ಲಿ ಗೆದ್ದವರಿಗೂ ಪಾರಿತೋಷಗಳು ಹಂಚಲ್ಪಟ್ಟವು. ಆ ಮೇಲೆ ಅಧ್ಯಕ್ಷರು ಭಾಷಣ ಮಾಡುತ್ತಾ ಬಂಟರ ಸಮಾಜದವರು ಈ ಜಿಲ್ಲೆಯ ಅಲಂಕಾರಗಿದ್ದರೆಂದೂ ಹಿಂದು ಇದ್ದಿನ [illegible]ಯೋಧರಾಗಿದ್ದರೆಂದೂ, ಈಗ [illegible]ಯಲ್ಲಿ ಮುಂದು [illegible] ಅಧಿಕಾರ ಸ್ಥಾನಗಳನ್ನು [illegible] ಆಳುತ್ತಿದ್ದಾರೆಂದೂ, ಅದಕ್ಕೆ ಈಗಿನ [illegible] ಬೋರ್ಡು ಅಧ್ಯಕ್ಷರೂ, ಶ್ರೀ| ಎ. ಬಿ. ಶೆಟ್ಟರೂ ಉದಾಹರಣೆಯೆಂದೂ ಹೇಳಿದರು. ಮುಂದಕ್ಕೆ ಯೂನಿವರ್ಸಿಟಿ ಟ್ರೈನಿಂಗ್ ಕಾಲೇಜು ಇಲ್ಲಿ ಸ್ಥಾಪಿಸಲ್ಪಡುವಾಗ ಈ ಸಮಾಜದ ವಿದ್ಯಾರ್ಥಿಗಳು ಅದರಲ್ಲಿ ಪ್ರಧಾನ ಭಾಗವಹಿಸಿ ಸಮಾಜಕ್ಕೂ ದೇಶಕ್ಕೂ ಕೀರ್ತಿಯನ್ನು ತರಬೇಕೆಂದೂ ಹೇಳಿದರು. ಅನಂತರ ಜ್ವಾಲಾಮುಖಿ ಎಂಬ ಕನ್ನಡ ನಾಟಕ್ಕ, ಹೆನ್ರಿ VIII ಅರಸನು ಹೆಂಡತಿಯನ್ನು ಬಿಡುವ ವಿಷಯದ ಕಥೆಯನ್ನು ಯಕ್ಷಗಾನ ರೂಪದಿಂದ ತೋರಿಸುವ ಸಾಹಸ, ಸರ್ವ ಪಕ್ಷಗಳ ಪರಿಷತ್ತು (ಪ್ರಹಸನ) ಇವು ಬಹಳ ಸೊಗಸಾಗಿ ಅಭಿನಯಿಸಲ್ಪಟ್ಟವು. ಶ್ರೀ| ಯು. ಎಸ್. ಕೃಷ್ಣರಾಯರ ಸಂಗೀತವೂ ಚೆನ್ನಾಗಿತ್ತು.

ಆಗಮನ—ಕಳೆದ ತಾ. 27ನೇ ಸಾಯಂಕಾಲ ಮದ್ರಾಸ್ ಸರಕಾರದ ಸರ್ಜನ್ ಜನರಲರಾದ ಮೇಜರ್ ಜನರಲ್ ವಿಲ್ಸನರು ತಮ್ಮ ಪತ್ನೀಸಮೇತರಾಗಿ ಮಂಗಳೂರಿಗೆ ಬಂದು ಲೇಡಿಗೋಶನ್ ಆಸ್ಪತ್ರೆಯಲ್ಲಿ ಮೆಟರ್ನಿಟಿ ವಾರ್ಡನ್ನು ತೆರೆದರು. ಮರುದಿವಸ ಸ್ಥಳೀಯ ಎರಡು ಆಸ್ಪತ್ರೆಗಳ ಸಂದರ್ಶನ ಮಾಡಿ ಅಂದು ಮದ್ರಾಸಿಗೆ ಪ್ರಯಾಣ ಬೆಳೆಸಿದರು.

ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ಬಳಿಯಲ್ಲಿರುವ ಪಿ. ಟಿ. ಥಿಯೊಫಿಲ್, ಇವರು ತನ್ನ ಮನೆಯ ಹತ್ತಿರ ದನಕರುಗಳಿಗೆ ನೀರು ಕುಡಿಯುವುದಕ್ಕಾಗಿ ಕಟ್ಟಿಸಿದ ಕಲ್ಮರಿಗೆಯನ್ನು ತೆರೆಯುವ ಸಮಾರಂಭವನ್ನು ತಾ 19-1-40ರಲ್ಲು ಒಲಿಂಪಿಕ್ ಸ್ಕೌಟು ಟ್ರೂಪ್ ಲೀಡರ್ ಶ್ರೀ ಎನ್. ಭಗವಾನ್ ದಾಸ್ ಇವರು ನಡಸಿದರು. ಸುಮಾರು ನೂರು ಮಂದಿ ಹಾಜರಿದ್ದರು. ಆರಂಭದಲ್ಲಿ ಪಿ. ಟಿ. ಥಿಯೊಫಿಲ್‌ರವರು ತಾನು ಕಲ್ಮರಿಗೆ ಕಟ್ಟಿಸಿದ ಉದ್ದೇಶವನ್ನು ಹೇಳಿ ಆ ಪ್ರೇರೇಪಣೆಯನ್ನು ತನ್ನಲ್ಲುಂಟುಮಾಡಿದ ದಿವಂಗತ ಗುಂಗೊಳ್ಳಿ ಕೃಷ್ಣರಾಯರನ್ನು ಪ್ರಶಂಸಿಸಿ ಶ್ರೀ. ಎಮ್. ಎಸ್. ಪೀತಾಂಬರ ರಾಯರನ್ನು ಅಧ್ಯಕ್ಷತೆ ವಹಿಸುವಂತೆ ಕೇಳಿಕೊಂಡರು. ಅಧ್ಯಕ್ಷರು ಪಿ. ಥಿಯೊಫಿಲ್‌ರವರಿಗೆ ಪ್ರಾಣಿಗಳ ಮೇಲಿರುವ ಕನಿಕರ ದಯಾಭಾವನಾದಿಗಳನ್ನು ಪ್ರಶಂಸಿಸಿ ಮಾತನಾಡಿದರು. ಗ್ರೂಪ್ ಫೋಟೋ ಫಲಹಾರಾದಿಗಳಿಂದ ಸಮಾರಂಭವು ಕೊನೆಗೊಂಡಿತು.

ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ಹಳೆ ನಿವಾಸಿಕರ ಸಂಘಸ್ಥಾಪನೆ—ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಹಳೆ ನಿವಾಸಿಕರಾಗಿದ್ದವರನೇಕರು ತಾ. 28-1-40ನೇ ಆದಿತ್ಯವಾರ ಪೂರ್ವಾಹ್ನ ಸದ್ರಿ ಭವನದಲ್ಲಿ ಶ್ರೀ. ಪಿ. ಎಸ್. ತಿಮ್ಮಪ್ಪ ಸೆಟ್ಟಿ, ಬಿ. ಎ. ಅಸಿಸ್ಟೆಂಟ್ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಕಾಸರಗೋಡು, ಅವರ ಅಧ್ಯಕ್ಷತೆಯಲ್ಲಿ ಒಟ್ಟುಗೂಡಿ ಸದ್ರಿ ವಿದ್ಯಾರ್ಥಿಭವನದಲ್ಲಿ ಹಳೆ ನಿವಾಸಿಕರಾಗಿದ್ದವರ ಸಂಘಸ್ಥಾಪನೆ (S.R.S. Home old Boardets Association) ಯಾಗಬೇಕೆಂದು ನಿರ್ಧಾರವಾದರು. ಆಡಳಿತೆ ಮಂಡಳಿಗೆ ಈ ಕೆಳಗಣ ಮಹನೀಯರನ್ನು ಆರಿಸಲಾಯಿತು. ಶ್ರೀಗಳಾದ ಕೆ. ಸಂಜೀವ ಸೆಟ್ಟಿ ಎಡ್ವೊಕೇಟ್ ಕುಂದಾಪುರ, ಕೆ. ತೀಬಪ್ಪ ಸೆಟ್ಟಿ ಎಡ್ವೊಕೇಟ್ ಕುಂದಾಪುರ, ವೈ ಧೂಮಣ್ಣ ಹೆಗ್ಡೆ ಎಡ್ವೊಕೇಟ್ ಉಡುಪಿ, ಬಿ. ಏನಪ್ಪ ಹೆಗ್ಡೆ ವಕೀಲ್ ಉಡುಪಿ, ಬಿ. ರಘುನಾಥ ಸೆಟ್ಟಿ ಜಮೀನ್ದಾರ್ ಬ್ರಹ್ಮಾವರ, ಕೆ. ಸದಾನಂದ ಹೆಗ್ಡೆ ಎಡ್ವೊಕೇಟ್ ಕಾರ್ಕಳ, ಡಾಕ್ಟರ್ ಎನ್. ಶಂಕರ ಅಡ್ಯಂತಾಯ ಕಾರ್ಕಳ, ಕೆ. ಮಹಾಬಲ ಹೆಗ್ಡೆ ವಕೀಲ್ ಕಾರ್ಕಳ, ಎಚ್. ಸಂಜೀವ ಸೆಟ್ಟಿ ಎಡ್ವೊಕೇಟ್ ಪುತ್ತೂರು, ಡಾಕ್ಟರ್ ಶೀನಪ್ಪ ಭಂಡಾರಿ ಪುತ್ತೂರು, ಕೆ. ಜತ್ತಪ್ಪ ರೈ ಡಿ. ಬೋ. ಮೆಂಬರ್ ಪುತ್ತೂರು, ಬಿ. ಸುಬ್ಬಣ್ಣ ಸೆಟ್ಟಿ ಡಿ. ಬೋ. ಮೆಂಬರ್ ಬೈಂದೂರು, ಕೆ. ಸುಂದರರಾಮ ಸೆಟ್ಟಿ ವಕೀಲ್ ಕಾಸರಗೋಡು, ಬಂಟ್ವಾಳ ಸುಂತಪ್ಪ ರೈ ಜಮೀನ್ದಾರ್, ಎ. ಕೃಷ್ಣಯ್ಯ ಸೆಟ್ಟಿ ಡಿ. ಬೋ. ಮೆಂಬರ್ ಕೋಟೆಕಾರ್, ಎಸ್. ರಾಮಯ್ಯ ನಾಯಕ್ ಎಡ್ವೊಕೇಟ್ ಮದ್ರಾಸ್, ಬಿ. ನಾರಾಯಣ ಸೆಟ್ಟಿ ಟಯಮ್ಸ್ ಓಫ್ ಇಂಡಿಯಾ ಬೊಂಬಾಯಿ, ಎಚ್. ಎಸ್. ಚೌಟ ವಕೀಲ್ ಮಂಗಳೂರು, ಯು. ಕೃಷ್ಣ ಸೆಟ್ಟಿ ಎಡ್ವೊಕೇಟ್ ಮಂಗಳೂರು, ಕೆ. ಉಗ್ಗಪ್ಪ ಸೆಟ್ಟಿ ಎಡ್ವೊಕೇಟ್ ಮಂಗಳೂರು, ಡಾಕ್ಟರ್ ಕೆ. ಕಾಂತಪ್ಪ ಹೆಗ್ಡೆ ಮಂಗಳೂರು, ಕೆ. ಭೋಜರಾಜ ಸೆಟ್ಟಿ ಎಡ್ವೊಕೇಟ್ ಮಂಗಳೂರು, ಕೆ. ನಾರಾಯಣ ರೈ ಬಿ. ಎ. ಬಿ. ಎಲ್. ಮಂಗಳೂರು, ಶೀತಾರಾಮ ರೈ ಮಂಗಳೂರು, ಎ. ಶಂಕರ ಆಳ್ವ ವಕೀಲ್ ಮಂಗಳೂರು, ಬಿ. ಮಂಜಯ್ಯ ಹೆಗ್ಡೆ ಎಡ್ವೊಕೇಟ್ ಮಂಗಳೂರು, ಎಚ್. ದಾಸಣ್ಣ ಆಳ್ವ ವಕೀಲ್ ಮಂಗಳೂರು.

ಶ್ರೀಗಳಾದ ಎ. ಶಂಕರ ಆಳ್ವರು ಅಧ್ಯಕ್ಷರಾಗಿಯೂ ಯು. ಕೃಷ್ಣ ಸೆಟ್ಟಿ ಮತ್ತು ಕೆ. ಭೋಜರಾಜ ಸೆಟ್ಟರು ಜತೆ ಕಾರ್ಯದರ್ಶಿಯರಾಗಿಯೂ ಡಾ| ಕೆ. ಕಾಂತಪ್ಪ ಹೆಗ್ಡೆಯವರು ಖಜಾಂಚಿಯರಾಗಿಯೂ ಆರಿಸಲ್ಪಟ್ಟು ಇವರಿಗೆ ನೆರವಾಗುವರೆ ಕಾರ್ಯಕಾರೀ ಮಂಡಳಿಗೆ ಶ್ರೀಗಳಾದ ಎಚ್. ಎಸ್. ಚೌಟ, ಕೆ. ಸುಂದರರಾಮ ಸೆಟ್ಟಿ ಮತ್ತು ಸದಾನಂದ ಹೆಗ್ಡೆಯವರು ಒಮ್ಮತದಿಂದ ಚುನಾಯಿಸಲ್ಪಟ್ಟರು. ಸಂಘ ಸ್ಥಾಪನೆಯಾಗಿ ಕಾರ್ಯಕಾರೀ ಮಂಡಳಿಯು ಸ್ಥಾಪನೆಯಾಯಿತು. ಯಾವ ಸದುದ್ದೇಶದಿಂದ ಉತ್ಸಾಹೀ ಹಳೆ ನಿವಾಸಿಕರು ಈ ಯೋಜನೆಯನ್ನು ಕೈಗೊಂಡಿರುವರೋ ಅದು ಸಫಲವಾಗುವರೆ ಸಮಾಜದ ಹತ್ತು ದಳವರು ಈ ಸಂಘಕ್ಕೆ ವರ್ಷಾವಧಿ ರೂಪಾಯಿ ಒಂದರಂತೆ ಕೊಟ್ಟು ಸದಸ್ಯರಾಗಬೇಕೆಂದು ಸಂಬಂಧಪಟ್ಟವರು ನಿರೀಕ್ಷಿಸುತ್ತಾರೆ. ಎಪ್ರಿಲ್ ತಿಂಗಳೊಳಗಾಗಿ ಎಲ್ಲರೂ ಸದಸ್ಯರಾಗಿ ಸೇರಿ ಮಹಾಸಭೆಯು ಪುನಃ ಸೇರುವರೆ ತಕ್ಕ ಪ್ರೋತ್ಸಾಹವನ್ನೀಯಬೇಕಾಗಿಯೂ ಅಪೇಕ್ಷೆ ಸೋಜಾಗಿಂದೆ. ಪತ್ರ ವ್ಯವಹಾರ ಮಾಡತಕ್ಕವರು ಶ್ರೀ. ಕೆ. ಭೋಜರಾಜ ಸೆಟ್ಟಿ. ಬಿ. ಎ. ಬಿ. ಎಲ್. ಸೆಕ್ರೆಟರಿ, ಎಸ್. ಆರ್. ಎಸ್. ಹೋಮ್, ಮಂಗಳೂರು ಇವರಿಗೆ ಬರೆಯತಕ್ಕದ್ದು.

ಉಡುಪಿ

ಟೀಪಾರ್ಟಿ ಸತ್ಕಾರ—ಶ್ರೀ. ವಿ. ಎಸ್. ಕುದ್ವರು ಸಿ. ಪಿ. ಸಿ. ಕಂಪೆನಿಯ ಮೇನೇಜಿಂಗ್ ಡೈರೆಕ್ಟರರಾಗಿ ಆರಿಸಲ್ಪಟ್ಟ ಸಂತೋಷ ಸೂಚಕವಾಗಿ ಮತ್ತು ಅವರನ್ನು ಆ ಬಗ್ಗೆ ಅಭಿನಂದಿಸುವುದಕ್ಕಾಗಿ ಕಂಪೆನಿಯ ಸ್ಥಳೀಯ ನೌಕರರು ತಾ. 28-1-40ರಲ್ಲಿ ಒಂದು ಟೀಪಾರ್ಟಿ ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಶ್ರೀ. ಪೇಜಾವರ ಮಠದಲ್ಲಿ—ಹೊಸತಾಗಿ ಪಟ್ಟವೇರಿದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಮಂತ್ರಾಕ್ಷತೆ ಪಡೆಯುವ ಸಲುವಾಗಿ ತಾ. 28-1-40ರಲ್ಲಿ ಶ್ರೀ ಪೇಜಾವರ ಮಠದಲ್ಲಿ ಮರಟ ಏಜಂಟರಾದ ಶ್ರೀ ಮಿಯಾಳ ನರಸಿಂಹಾಚಾರ್ಯರು ಒಂದು ಉಪಹಾರ ಕೂಟವನ್ನು ಜರಗಿಸಿದರು.

'ಶ್ರೀನಿವಾಸ'ರ ಆಗಮನ—ಸಣ್ಣ ಕತೆಗಳ 'ಶ್ರೀನಿವಾಸ'ರೆಂದು ಪ್ರಸಿದ್ಧರಾದ ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರರು (ಮೈಸೂರು ಸಂಸ್ಥಾನದ ಕಂಟ್ರೋಲರರು) ನಮ್ಮ ಜಿಲ್ಲೆಯ ಪ್ರವಾಸವನ್ನು ಕೈಕೊಂಡು ಸುಮಾರು ತಾ. 9ಕ್ಕೆ ಇಲ್ಲಿಗೆ ಬರುವರೆಂದು ತಿಳಿದು ಬರುತ್ತದೆ. ಈ ಸಂದರ್ಭದಲ್ಲಿ ಸಾರ್ವಜನಿಕ ಭಾಷಣದ ವ್ಯವಸ್ಥೆಯನ್ನು 'ಕಿರಿಯರ ಪ್ರಪಂಚ'ದವರು ಮಾಡಲಿರುವರೆಂದು ವದಂತಿ.

ಕಿದಿಯೂರು ಶಾಲೆಯ ವರ್ಧಂತಿ—ಸಮಾರಂಭವು ವಿದ್ಯಾಧಿಕಾರಿಗಳಾದ ಶ್ರೀ. ಕಣ್ಣಪ್ಪ, ಎಂ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ತಾ. 27-1-40ರಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಪ್ರಾರ್ಥನೆ, ವರದಿ, ಶ್ರೀಗಳಾದ ಕೆ. ಶೀನ ಶೆಟ್ಟಿ, ಕುಂಜಿರ್ಬೈಲು ಗಣಪಯ್ಯ ಶೆಟ್ಟಿ, ಇವರ ಭಾಷಣ, ಪಾರಿತೋಷ ವಿತರಣೆ, ವಿವಿಧ ವಿನೋದ, ಅಧ್ಯಕ್ಷರ ಭಾಷಣಗಳಾದ ಮೇಲೆ 'ಏಕತ್ರ ವಿದುರ ವಿಷತ್ತಿಗಂಜ' ಎಂಬ ಶ್ರೀ. ದಾಸಪ್ಪರಿಂದ ರಚಿತವಾದ ಸಾಮಾಜಿಕ ನಾಟಕವು ಅತ್ಯಂತ ಜಯಶೀಲವಾಗಿ ಪ್ರದರ್ಶಿಸಲ್ಪಟ್ಟಿತು. ನಾಟಕಾಂತ್ಯದಲ್ಲಿ ಉತ್ತಮ ಅಭಿನಯಗಾರರಿಗೆ ಶ್ರೀ. ಕೆ. ಜಿ. ಬಲ್ಲಾಳರ ಕೈಯಿಂದ ಪದಕಗಳನ್ನು ಕೊಡಿಸಲಾಯಿತೆ.

ಕಾರ್ಕಳ—ಪುತ್ತೂರು ತಾಲೂಕಿನ ಪಾಡುತ್ಯಾರ ಗ್ರಾಮದ ಲಿಂಗಾಯತ ಗೌರಮ್ಮ ಎಂಬ ಅಪ್ರಾಯಸ್ಥ ಕನ್ಯೆಯನ್ನು ಆಕೆಯ ತಂದೆ ಮತ್ತು ದೊಡ್ಡಪ್ಪನು ಸೂಳ್ಯಕ್ಕೆ ಕರಕೊಂಡು ಹೋಗುತ್ತಿದ್ದಾಗ ಮೂಡಬಿದ್ರೆ ಸಮೀಪ ದಾರಿಯಲ್ಲಿ ಹೊಂಚು ಹಾಕಿದ್ದ ಶೇಕ ಮಹಮ್ಮದ ಎಂಬವನು ತನ್ನ ಸಂಗಾತಿಗಳ ಸಹಾಯದಿಂದ ಅಪಹರಿಸಿಕೊಂಡುಹೋದ ಸಂಬಂಧ ಸ್ಥಳೀಯ ಆರ್ಯಸಮಾಜದ ಪ್ರಯತ್ನದಿಂದ ಸದರಿ ಶೇಕ ಮಹಮ್ಮದನ ಮೇಲೆ ಕುಂದಾಪುರ ಕಚೇರಿಯಲ್ಲಿ ಕನ್ಯಾಪಹಾರದ ಮೊಕದ್ದಮೆ ಆಗಿ ಅಪಾದಿತರನ್ನು ಕೈಸೆರೆಹಿಡಿಯಲಿಕ್ಕೆ ಸರ್ಚ ವಾರಂಟು ಹೊರಟು ಅವರು ತಲೆಮರಸಿಕೊಂಡಿದ್ದಾರೆ. ಅವರ ಚಲನವಲನಗಳನ್ನು ಬಲ್ಲಂಥವರು ಆ ಸಂಗತಿಯನ್ನು ಕೂಡಲೇ ಸ್ಥಳೀಯ ಆರ್ಯಸಮಾಜ ಕಾರ್ಯದರ್ಶಿಗಳಿಗೆ ತಿಳಿಸಿ, ಅಪಾದಿತರನ್ನು ನ್ಯಾಯವಿಚಾರಣೆಗೆ ಗುರಿಮಾಡಿ ಧರ್ಮರಕ್ಷಣೆಯ ಪವಿತ್ರ ಕಾರ್ಯದಲ್ಲಿ ನೆರವಾಗಬೇಕೆಂದು ಸದರಿ ಕಾರ್ಯದರ್ಶಿಗಳು ಕೋರಿದ್ದಾರೆ. ಈ ಮೊಕದ್ದಮೆಯಲ್ಲಿ ಇಲ್ಲಿಯ ವಕೀಲ ಶ್ರೀ. ಬಾಲಕೃಷ್ಣ ಶೆಟ್ಟರವರು ಪ್ರತಿಫಲ ತಕ್ಕೊಳ್ಳದೆ ಮಧ್ಯಗಳ ಕಡೆಯಿಂದ ವ್ಯವಹರಿಸುತ್ತಲಿರುವುದು ಸ್ತುತ್ಯವಾಗಿದೆ.

ತಾ. 26-1-1940ರ ದಿನ ಸ್ವರಾಜ್ಯ ಮೈದಾನದಲ್ಲಿ ಸ್ವಾತಂತ್ರ್ಯ ದಿನವು ವಿಧ್ಯುಕ್ತ ಆಚರಿಸಲ್ಪಟ್ಟಿತು. ಬೆಳಗ್ಗೆ ಪ್ರಭಾತಫೇರಿ ಮತ್ತು ಧ್ವಜವಂದನೆ ಮತ್ತು ಸಾಯಂಕಾಲ ಶ್ರೀ. ವಕೀಲ ಕೆ. ಬಾಬುರಾಯ ಜೋಯಿಸರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಕೂಡಿ, ಸಂದರ್ಭೋಚಿತ ಭಾಷಣಗಳಾದ ಬಳಿಕ ನೆರೆದ ಸಭಿಕರಲ್ಲಿ ಐವತ್ತುಮಂದಿ ಪೂರ್ಣ ಪ್ರತಿಜ್ಞೆಯನ್ನೂ ಉಳಿದ ಸುಮಾರು 200 ಮಂದಿ ನೂಲುವ ಮತ್ತು ಖದ್ದರಿನ ಮಟ್ಟಿಗೆ ತಮ್ಮ ಆಕ್ಷೇಪವನ್ನಿಟ್ಟುಕೊಂಡು ಉಳಿದ ಪ್ರತಿಜ್ಞೆಯನ್ನೂ ತೆಗೆದುಕೊಂಡರು. ವಂದೇ ಮಾತರಂ ದೊಂದಿಗೆ ಸಭೆಮುಗಿಯಿತು.

ಕಾರ್ಕಳ ಬೋರ್ಡು ಹೈಸ್ಕೂಲಿನ ವರ್ಧಂತಿ ಉತ್ಸವವು ತಾ. 10-2-40ರ ದಿನ ಜಿಲ್ಲಾ ಬೋರ್ಡು ಪ್ರೆಸಿಡೆಂಟ ಡಾಕ್ಟರ್ ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಆಗುವುದು. ಶ್ರೀ. ಲೋರೆನ್ಸ ಪೀಟರ ನಜರತ್ ಬಿ. ಎ. ಬಿ. ಟಿ. ಯವರು ಆ ಸಂದರ್ಭದಲ್ಲಿ ಶಾಲೆಯ ಸ್ವಸ್ತಿ ವಾಚನ ಮಾಡುವರು. ಶಾಲೆಯ ಹಿತಚಿಂತಕರೂ ಹಳೇ ವಿದ್ಯಾರ್ಥಿಗಳೂ ಸಹಾಯವನ್ನಿತ್ತು ಸಹಕರಿಸಿ ಉತ್ಸವವನ್ನು ಯಶಸ್ವಿಯನ್ನಾಗಿ ಮಾಡಬೇಕೆಂದು ಉತ್ಸವ ಕಮಿಟಿಯವರು ಅಪೇಕ್ಷಿಸುತ್ತಾರೆ.

ಇಲ್ಲಿಯ ಬೋರ್ಡು ಮೈನ್ ಎಲಿಮೆಂಟರಿ ಶಾಲೆಯಲ್ಲಿ ತಾ. 21-1-40ರ ದಿನ ಡೆಪ್ಯುಟಿ ಇನ್ಸ್‌ಪೆಕ್ಟರ ಶ್ರೀ. ಬಿ. ವಿ ರಮಣ ಬಿ. ಎ ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಕಾರ್ಕಳ ತಾಲೂಕು ಬೋರ್ಡು ಎಲಿಮೆಂಟರಿ ಶಾಲೆ ಉಪಾಧ್ಯಾಯರ ಒಂದು ಸಭೆಕೂಡಿ ಅವರದೊಂದು ಯೂನಿಯನು ಸ್ಥಾಪಿಸಲ್ಪಟ್ಟಿತು. ಅದಕ್ಕೆ ಈ ವರ್ಷಕ್ಕೆ ಶ್ರೀ. ಎ. ಪಾಂಡುರಂಗ ಕಿಣಿಯರು ಅಧ್ಯಕ್ಷರಾಗಿಯೂ ಶ್ರೀ. ಲೋರೆನ್ಸ ಲೋಬೋರವರು ಕಾರ್ಯದರ್ಶಿಯರಾಗಿಯೂ ಇರುವ ಒಂದು ಕಾರ್ಯಕಾರಿಣಿ ಸಮಿತಿಯು ಆರಿಸಲ್ಪಟ್ಟಿದೆ.

ಬೈಂದೂರು—ಸ್ಥಳೀಯ ಮಾಧ್ಯಮಿಕ ಶಾಲಾ ವರ್ಧಂತ್ಯುತ್ಸವದ ಸಂದರ್ಭ ಪ್ರಕಟಿಸಬೇಕಾಗಿದ್ದ ಈ ಕೆಳಗಿನ ವಿಷಯಗಳು ಕಳೆದ ಸಂಚಿಕೆಯಲ್ಲಿ, ಸ್ಥಳಾಭಾವದಿಂದ ಪ್ರಕಟಿಸಲಾಗಿಲ್ಲವೆಂದು ತಿಳಿಸಲು ವಿಷಾದವಾಗುತ್ತಿದೆ. ತಾ. 14ನೇ ಆದಿತ್ಯವಾರ ರಾತ್ರೆ ಅಧ್ಯಕ್ಷರ ಭಾಷಣದ ಮೊದಲು ಶ್ರೀ. ಕೆ. ಕೃಷ್ಣಭಕ್ತರೂ ಶ್ರೀ. D. R. ಕುಂಬ್ಳೆಯವರೂ ಶಾಲಾ ಏಳ್ಗೆಯ ಕುರಿತು ಒತ್ತಿ ಮಾತನಾಡಿದರು. ತಾ. 15ನೇ ಸೋಮವಾರ ಪೂರ್ವಾಹ್ನ ಘಂಟೆ 8ಕ್ಕೆ ಜರಗಿದ ಪ್ರಸೂತಿಗೃಹ ಪ್ರವೇಶೋತ್ಸವ ಸಮಯ, ಸ್ಥಳೀಯ ಪಂಚಾಯತ್ ಬೋರ್ಡಿನವರು ತಮ್ಮ ಉತ್ಸಾಹೀ ಅಧ್ಯಕ್ಷರಾದ ಶ್ರೀ. ಕೆ. ಕೃಷ್ಣಭಕ್ತರ ಮುಖೇನ, ಶ್ರೀ. A. B. ಶೆಟ್ಟಿ, M. L. A. ಯವರು ನ್ಯಾಯವಿಧಾಯಕ ಸಭೆಯಲ್ಲಿ ತನ್ನನ್ನು ಆರಿಸಿದವರ ಪರವಾಗಿ ಬಹಳ ಹುರುಪಿನಿಂದ ಕೆಲಸಮಾಡುತ್ತಿರುವ ಕುರಿತು ಒಂದು ಭಿನ್ನವತ್ತಳೆಯನ್ನು ಅರ್ಪಿಸಿ ಅವರ ಗುಣಕಥನವನ್ನು ಮಾಡಿದರು. ಆ ಸಂದರ್ಭದಲ್ಲಿ ಶ್ರೀ. D.K. ಕುಂಬ್ಳೆಯವರೂ ಶ್ರೀ. ಜೆ. ಪಾರ್ವತಮ್ಮರೂ ಪ್ರಸೂತಿ ಗೃಹಗಳ ಅವಶ್ಯಕತೆಯ ಕುರಿತು ಮನೋಹರವಾದ ಭಾಷಣವನ್ನು ಮಾಡಿದರು. ಮತ್ತು ಸದ್ರಿ ಬೋರ್ಡಿನವರು ನೆರೆದ ಎಲ್ಲಾ ಗೃಹಸ್ಥರಿಗೂ ವಿಶೇಷ ಉಪಹಾರದಿಂದ ಸತ್ಕರಿಸಿದರು.

ತಾ. 15ನೇ ಸೋಮವಾರ ಜಿಲ್ಲಾ ಬೋರ್ಡು ವಿಸಿಟಿಂಗಿನ ನಂತರ ಅಧ್ಯಕ್ಷ ಮತ್ತು ಸದಸ್ಯರುಗಳಿಗೆ ಸ್ಥಳೀಯ ಪಂಚಾಯತ್ ಬೋರ್ಡಿನವರು ಒಂದು ಮಾನಪತ್ರವನ್ನರ್ಪಿಸಿ ಅದರಲ್ಲಿ ಬೈಂದೂರಿನಿಂದ ಕಾರ್ನಿಗೆ ಒಂದು ಚಟೋಲ ರಸ್ತೆಯನ್ನು ಆದಷ್ಟು ಬೇಗನೆ ಒದಗಿಸಿಕೊಡಬೇಕೆಂದೂ ಮಾಧ್ಯಮಿಕ ಶಾಲೆಯನ್ನು ಖಾಯಂ ಮಾಡಬೇಕೆಂದೂ ಮುಂತಾದ ಹಲವು ಕೋರಿಕೆಗಳನ್ನು ಕಾಣಿಸಿದ್ದರು. ಜಿಲ್ಲಾ ಬೋರ್ಡು ಅಧ್ಯಕ್ಷರು ಅದಕ್ಕೆ ಸಮರ್ಪಕವಾದ ಸಮುತ್ತರವನ್ನು ಕೊಟ್ಟು ಶ್ರೀ. ಕೃಷ್ಣಭಕ್ತರ ಸಾಹಸಗಳನ್ನು ಕೊಂಡಾಡಿದರು.

(೬ನೇ ಪುಟದಿಂದ ಮುಂದರಿಸಿದ್ದು)

ಟ್ಟನ್ನು ಸಾಧಿಸಲು ತರುಣ ಹರಿಜನ ಕೆಲಸಗಾರರನ್ನು ತರಬೇತಿಮಾಡಬೇಕು. ಅಂತಹ ತರಬೇತಿಯ ನಂತರ ಅವರನ್ನು ಬೇರೆಬೇರೆ ಕಡೆಗಳಿಗೆ ಕಳುಹಿಸಬೇಕು. ಹೀಗೆ ತರಬೇತಿಹೊಂದಿ ಕಳುಹಿಸಲ್ಪಡುವ ತರುಣನು ಪ್ರತಿಯೊಂದು ಹಳ್ಳಿಗೆ ಅಥವಾ ಕೆಲವು ಹಳ್ಳಿಗಳಿಗೆ, ವಿವಿಧೋದ್ದೇಶದ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕು. ಮತ್ತು ಆ ಮೂಲಕ ಹರಿಜನರೆಲ್ಲರ ಉನ್ನತಿ ಮತ್ತು ಒಕ್ಕಟ್ಟಿಗಾಗಿ ಕೆಲಸಮಾಡಬೇಕು. ಈ ಸಹಕಾರಿ ಸಂಘಗಳಿಗೆ ಆಯಾ ಹಳ್ಳಿಯ ಅಥವಾ ಹಳ್ಳಿಗಳ ಎಲ್ಲಾ ಹರಿಜನರೂ ಮೆಂಬರರಾಗಿ ಸೇರಬೇಕು. ಮತ್ತು ಅವರು ಗ್ರಾಮ ಕೊಟಿದ ಸ್ಥಳವನ್ನು ಪಡಕೊಳ್ಳಬೇಕು.

ಇಂತಹ ಸಹಕಾರಿ ಸಂಘಗಳು ಈ ಕೆಳಗಣ ಮತ್ತು ಇತರ ಕೆಲಸಗಳನ್ನು ಮಾಡಲೆತ್ನಿಸಬೇಕು.

1. ಹರಿಜನ ಹುಡುಗ ಹುಡುಗಿಯರಿಗಾಗಿ ಪ್ರಥಮಿಕ ಶಾಲೆಗಳನ್ನು ನಡಿಸಿ, ಯೋಗ್ಯತೆ ಕಂಡಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವೀಯುವುದು. 2. ಸರಕಾರದಿಂದ ಯಾ ಶ್ರೀಮಂತ ಭೂಮ್ಯಾಲಕರಿಂದ ಸಾಗುವಳಿ ಸ್ಥಳವನ್ನು ಪಡೆದು ಸಂಯುಕ್ತ ಅಥವಾ ವ್ಯೆಯಕ್ತಿಕ ಸಾಗುವಳಿಯನ್ನೇರ್ಪಡಿಸುವುದು 3. ಬಿಡುವಿನ ಕಾಲದಲ್ಲಿ ಕೆಲಸಮಾಡಲು ಗೃಹಕೈಗಾರಿಕೆಗಳನ್ನು ಜ್ಯಾರಿಗೆ ತರುವುದು. 4. ಹರಿಜನರಿಗೆ ವಾಸಿಸಲು ಯೋಗ್ಯವಾದ ಮತ್ತು ಶುಚಿಕರವಾದ ಮನೆಗಳನ್ನು ಕಟ್ಟಿಸುವುದು. 5. ಕುಡಿಕತನವೇ ಮೊದಲಾದ ಹರಿಜನರ ದುಶ್ಚಟಗಳನ್ನು ನಿರ್ಮೂಲಿಸಿ ಅವರು ಒಳ್ಳೇ ರೀತಿಯ ಜೀವನ ನಡಿಸುವಂತೆ ಮಾಡುವುದು 6. ಹರಿಜನರೊಳಗಣ ಕಲಹಗಳನ್ನೆಲ್ಲಾ ಇತ್ಯರ್ಥಪಡಿಸುವುದು. 7. ಕಂಪ್ರಾಕ್ಟಿನಲ್ಲಿ ಮಜೂರರನ್ನು ಪಡೆದು ಇತರರ ಸ್ವಾರ್ಥೋಪಯೋಗವನ್ನು ತಡೆಗಟ್ಟುವುದು. 8. ಯೋಗ್ಯರಾದವರಿಗೆ ಸರಕಾರದಲ್ಲಿ, ಮುನಿಸಿಪಾಲಿಟಿಯಲ್ಲಿ ಲೋಕಲ್ ಬೋರ್ಡುಗಳು, ಮತ್ತು ಕಾರ್ಖಾನೆಯೇ ಮೊದಲಾದುವುಗಳಲ್ಲಿ ಉದ್ಯೋಗ ದೊರಕಿಸಿಕೊಡುವುದು. 9 ಪ್ರತಿ ಸಂಜೆ ಮೆಂಬರರೆಲ್ಲರೂ ಕೂಡಿ ಎಲ್ಲಾ ವಿಷಯಗಳನ್ನು ಚರ್ಚಿಸಿ ಸ್ಥಳೀಯ ಉತ್ಸವಗಳನ್ನು ಆಚರಿಸಿ, ನಾಟ್ಯ, ಆಟವೇ ಮೊದಲಾದ ವಿನೋದಗಳನ್ನು ನಡಿಸಲು ಸಭಾ ಸ್ಥಳವೊಂದನ್ನೇರ್ಪಡಿಸುವುದು. 10. ಸವರ್ಣ ಹಿಂದುಗಳೇ ಮೊದಲಾದವರ ಸಹಾನುಭೂತಿಯನ್ನು ಶಾಂತಪರ ರೀತಿ ನೀತಿಗಳಿಂದ ಪಡೆಯುವುದು. 11. ಹರಿಜನರೆಲ್ಲರಿಗೆ ಸಂಬಂಧಿಸುವ ಎಲ್ಲಾ ವಿಧದ ಹಿತಸಾಧಕ ಕೆಲಸಗಳನ್ನು ಕೈಕೊಳ್ಳುವುದು.

ಹರಿಜನೋದ್ಧಾರ ಕಾರ್ಯವನ್ನು ಯಾವ ರೀತಿಯಲ್ಲಿ ಸಾಧಿಸಬಹುದೆಂಬ ಕುರಿತಾದ ಯೋಜನೆಯ ನಾಕಾಶೆ ಮಾತ್ರ ಇದು. ಅದಕ್ಕೆ ಇನ್ನೂ ಹಲವು ವಿಷಯಗಳನ್ನು ಸೇರಿಸಬಹುದು. ಚೆನ್ನಾಗಿ ವಿಚಾರಿಸಿ ಹಲವು ವಿವರಗಳನ್ನು ತುಂಬಿಸಿ ಭರ್ತಿಮಾಡಬೇಕಾಗಿದೆ. ಇಂತಹ ಯೋಜನೆಯೊಂದನ್ನು ಸರಕಾರವೂ ಹಿಂದೀ ರಾಷ್ಟ್ರೀಯ ಸಭೆಯೂ ಜ್ಯಾರಿಗೆ ತಂದು ಕೆಲಸಮಾಡಿದರೆ ಹತ್ತೇ ವರ್ಷಗಳಲ್ಲಿ ಹರಿಜನರ ಸಾಮಾಜಿಕ, ಸಾಂಪತ್ತಿಕ ಮತ್ತು ನಾಗರಿಕ ಜೀವನದಲ್ಲಿ ಕ್ರಾಂತಿಯನ್ನುಂಟುಮಾಡಬಹುದೆಂಬ ವಿಶ್ವಾಸವು ನನಗಿದೆ.

ಪ್ರಕಟಣೆ.

ಕಾರ್ಕಳ ಡಿ, ಮು. ಕೋರ್ಟಿನಲ್ಲಿ

O. S 5/36 R. E. P. 1301/39

R. E A. 1343/39

ಮಾಮೋದರ ಭಟ್ಟ- ವಾದಿಯ ಮೊಕ್ತೆಸರ ರುದ್ರರ- ಅರ್ಜಿದಾರ

ಮತ್ತು

S. ರಾಮಶೆಟ್ಟಿ ಸಹಾ-ಪ್ರ. ರು. ಎದ್ರಿರು.

ಇವರೊಳಗೆ:--

ಸದ್ರಿ ಅಮ್ಲ್ಜ್ಯಾರಿಯ 2ನೆ ಎದ್ರಿಯು (5ನೆ ಪ್ರ.ಊ) ರಾಜೀವಿ ಯಾನೆ ಲಕ್ಷ್ಮಿಯನ್ನು R. ಮಾಡಿಕೊಂಡ ಶಸ್ಯಸಭಾಗದ ಹೊತ್ತ 5ನೆ ಎದ್ರಿ. ಶಂಕರನಾರಾಯಣ, ಕೆಂಜೂರು ಶೀನಪ್ಪಯ್ಯರ ಮಗ, ಕಾರ್ಕಳ ಕಸಬೆಯಲ್ಲಿರುವವರು ಇದರಿಗೆ- ಮೇಲ್ಕಂಡ ಅಮ್ಲ್ಜ್ಯಾರಿಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಕೆಲವು ಸ್ಥಿರಾಸ್ತಿ ವಿಲಂ ಬಗ್ಗೆ ಅರ್ಜಿದಾರನು ಹಾಜರು ಮಾಡಿದ ವಿಲಂ ಇಸ್ತಿಹಾರು ಕುರಿತು ಆಕ್ಷೇಪಯಿರುವ ದಾದರೆ ಮತ್ತು ಸದ್ರಿ ಅಮ್ಲ್ಜ್ಯಾರಿಯಲ್ಲಿ ಸ್ಥಿರಾಸ್ತಿ ವಿಲಂ ಸಮಯ ಅರ್ಜಿದಾರಗೆ ಯಾ ಅವನ ಕಡೆ ವಕೀಲರಿಗೆ ಬಿಡ್ ಮಾಡುವರೆ ಮೂರಾನೆ ಬಿಡ್ ಮಾಡುವ ಐವಜು ಫೈನಲ್ ಡಿಕ್ರಿ ಐವಜಿನಲ್ಲಿ Set off ಮಾಡುವರೆ ಪರ್ಮಿಶನ್ ಕೊಡಬೇಕಾಗಿ ಸದ್ರಾ ದಾಖಲು ಮಾಡಿದ ಅರ್ಜಿ ಕುರಿತು ಕೂಡ ಆಕ್ಷೇಪಯಿರುವುದಾದರೆ ಇದೇ ಇಸವಿ ಫೆಬ್ರವರಿ ತಿಂಗಳು ತಾರೀಕು 9ಕ್ಕೆ ಬೆಳಗ್ಗೆ 11 ಗಂಟೆಗೆ ಸ್ವತಹಾ ಯಾ ವಕೀಲರ ಮುಖಾಂತರ ಕೋರ್ಟಿನ ಮುಂದೆ ಹಾಜರಾಗದೆ ಇದ್ದಲ್ಲಿ ಸದ್ರಿ ಅರ್ಜಿಗಳು ನಿಮ್ಮ ಗೈರ್ ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುತ್ತದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕೋರ್ಟಿನ ಹುಕುಂ ಪ್ರಕಾರ

ಯಚ್. ಕೆ. ಗೋಪಾಲಕೃಷ್ಣರಾವ್,

ಬಿ. ಎ, ಬಿ. ಎಲ್. ಅರ್ಜಿದಾರನ ಕಡೆ ವಕೀಲ.

ಕಾರ್ಕಳ ತಾ. 25-1-40.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S. No. 302/1939.

ಕೂಕೋಟ. ಪಳ್ಳಿಕ್ಕಾಲ್ ಮೊಯಿದಿನ್-ವಾದಿ,

ಮತ್ತು

ಕದೀಸ್ಸ ಉಮ್ಮ ಕೂಡಾ-ಪ್ರತಿವಾದಿರು,

ಇವರೊಳಗೆ

ತಾ. 15-1-40

ಮೇಲ್ಕಂಡ ವ್ಯಾಜ್ಯದಲ್ಲಿ 2, 4ರಿಂದ 6ನೇ ವರೆಗಿನ ಪ್ರತಿವಾದಿಗೆ ಸಬ್‌ಸ್ಟಿಟ್ಯೂಟೆಡ್ ಸರ್ವಿಸ್ ಪ್ರಕಾರ ಜ್ಯಾರಿಯ ತನ್ನ ಬಗ್ಗೆ ತಾ. 10-2-40ಕ್ಕೆ ಸದ್ರಿ ವ್ಯಾಜ್ಯವನ್ನು ಇಟ್ಟಿರುವದರಿಂದ ಆಕ್ಷೇಪವಿದ್ದವರು ತರ್ಕಿಸಬೇಕಾಗಿ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

ಕಾಸರಗೋಡು 25-1-40 | K. Rama Varma Raja B A. B L, *Vakil for Plaintiff.*

WANTED.

"Applications are invited from midwives possessing a diploma recognised for registration as midwife in this Presidency under the Madras Nurses and Midwives Act, 1926, for the appointment of two Midwives under the Maternity & Child Welfare Scheme under the South Kanara District Board. The Midwives should not be less than 21 years nor more than 40 years of age on the day of appointment. The applications should reach the President, District Board by the 6th February 1940.

(Sd) **K. Vittal Shetty**,
President, District Board, S. K.

The Vijaya Bank Ltd., Mangalore.

ದಿ ವಿಜಯಾ ಬೇಂಕ್ ಲಿಮಿಟೆಡ್, ಮಂಗಳೂರು.

ಸ್ವಜಾತಿ ಗೃಹಸ್ಥರಲ್ಲಿ ವಿನಂತಿ

ಈ ಬೇಂಕು 1931ನೇ ಇಸವಿಯಲ್ಲಿ ಬಂಟರ ಯಾನೆ ನಾಡವ ಸಮಾಜದ ಕೆಲವು ಮಂದಿ ಮುಖಂಡರ ಪ್ರಯತ್ನದಿಂದ ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟು, ಈಗ ಅದರ ಶಾಖೆಗಳು, ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳದಲ್ಲಿ ತೆರೆಯಲ್ಪಟ್ಟಿವೆ ಬೇಂಕು ದಿನೇ ದಿನೇ ಸ್ಥಿರವಾದ ಅಭಿವೃದ್ಧಿ ಹೊಂದಿ ಜನವಿಶ್ವಾಸಕ್ಕೆ ಪಾತ್ರವಾಗಿದೆ. ಸದ್ರಿ ಬೇಂಕಿನ ಪಾಲುದಾರರಿಗೆ ಹೋದ ವರ್ಷ ಶೇಕಡಾ 7ರಷ್ಟು ಡಿವಿಡೆಂಡ್ ಹಂಚಲ್ಪಟ್ಟಿದೆ

ಬೇಂಕಿನ ಕಾರ್ಯಕ್ಷೇತ್ರವನ್ನು ಇನ್ನಷ್ಟು ವ್ಯಾಪನಗೊಳಿಸಿ ಅದನ್ನು ಹೆಚ್ಚೆಚ್ಚಾಗಿ ಜನತೆಗೆ, ವಿಶೇಷವಾಗಿ ಕೃಷಿಕರಿಗೆ ಉಪಯೋಗಕರವಾಗುವಂತೆ ಮಾಡಬೇಕೆಂಬ ನಮ್ಮೆಲ್ಲರ ಪ್ರಮುಖ ಉದ್ದೇಶವಾಗಿರುತ್ತದೆ. ಅದಕ್ಕಾಗಿ ಅದರ ಪಾಲುಗಳನ್ನು ಬಂಟರ ಯಾನೆ ನಾಡವ ಸಮಾಜದ ಗೃಹಸ್ಥರು, ಇನ್ನೂ ಹೆಚ್ಚಾಗಿ ಪಡೆದು ಪ್ರೋತ್ಸಾಹವೀಯುವುದು ಅಗತ್ಯವಾಗಿದೆ. ಬೇಂಕಿನ ಸೆಕ್ರೆಟರಿಗಳಾಗಿದ್ದ ಶ್ರೀ. ಕೆ. ಗೋಪಾಲಕೃಷ್ಣ ಶೆಟ್ರು 4 ತಿಂಗಳ ಮಟ್ಟಿಗೆ ಪಾಲುಗಳನ್ನು ಹೊಸತಾಗಿ ಸಂಗ್ರಹಿಸುವ ಕೆಲಸಕ್ಕೇನೇ ನಿಯುಕ್ತರಾಗಿದ್ದಾರೆ. ಅವರು ತನ್ನ ಕೆಲಸವನ್ನು ಇಷ್ಟರಲ್ಲೇ ಆರಂಭಿಸಿ ಕೆಲವು ಕಡೆಗಳಲ್ಲಿ ಸಂಚರಿಸಿ, ಉದಾರ ಪ್ರೋತ್ಸಾಹ ಪಡೆದಿರುತ್ತಾರೆ. ಜಿಲ್ಲೆಯ ಉಳಿದ ಭಾಗಗಳಲ್ಲಿಯೂ ಜಿಲ್ಲೆಯ ಹೊರಗೂ ಅವರು ಸಂಚರಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಆದುದರಿಂದ ಸ್ವಜಾತಿ ಗೃಹಸ್ಥರೆಲ್ಲರೂ ಸಮಾಜದ ಒಂದೇ ಒಂದು ಬೇಂಕಿಂಗ್ ಸಂಸ್ಥೆಯಾದ ವಿಜಯಾಬೇಂಕಿನ ಪಾಲುಗಳನ್ನು ಹೆಚ್ಚೆಚ್ಚಾಗಿ ತೆಗದುಕೊಂಡು ಉದಾರಾಶ್ರಯವಿತ್ತು ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ.

Mangalore, 26-1-40 (*Signed by*) **B. Manjaya Hegde.**
Chairman of the Board of Directors.

ನಮ್ಮ ಉಡುಪಿ

ಹೊಸ ಮಾದರಿಯ ಸಚಿತ್ರ ಪುಸ್ತಕ

ಎಲ್ಲೆಲ್ಲೂ ಪ್ರಸಿದ್ಧಿ ಪಡೆದಿರುವ ಉಡ್ಪಿಯ ಚರಿತ್ರೆಯನ್ನು ತಿಳಿಯಬೇಕೇ? ಹಾಗಿದ್ದರೆ ಶ್ರೀ ಕೊರಡ್ಕಲ್ಲರು ಹೊಸ ದೃಷ್ಟಿಯಿಂದ ಬರೆದ 'ನಮ್ಮ ಉಡುಪಿ'ಯನ್ನು ಓದಿರಿ.

ಉಡುಪಿ ಕ್ಷೇತ್ರಕ್ಕೆ ಯಾತ್ರಾ ದೃಷ್ಟಿಯಿಂದಾಗಲೀ, ಐತಿಹಾಸಿಕ ಮಹತ್ವದ ದೃಷ್ಟಿಯಿಂದಾಗಲೀ, ಸಂದರ್ಶನಾರ್ಥವಾಗಿ ಬರುವವರೂ, ಬರುವವರೂ, ಸೊಂಪಾಗಿ ತಿಳಕೊಳ್ಳಬೇಕಾದುದು ಈ ಕ್ಷೇತ್ರದ ಹಿಂದಿನ ಮತ್ತು ಇಂದಿನ ಸಚಿತ್ರ ವಿವರ, ಸಮಾಜ ಸೇವಕರಿಗೆ ಬೇಕಾದುದು ವ್ಯೆಯಕ್ತಿಕ ಜೀವಜ್ಯೋತಿಗಳ ಜೀವನ ಚರಿತ್ರೆ, ಅವೆಲ್ಲವೂ ಈ ಪುಸ್ತಕದಲ್ಲಿದೆ.

ಬೆಲೆ 0-5-0, ಪೋ. ಖರ್ಚು 0-1-0

(ಫೆಬ್ರವರಿ ಅಂತ್ಯದೊಳಗೆ 0-5-0 ಸ್ಟಾಂಪು ಕಳುಹಿಸುವವರಿಗೆ ಅಂಚೆ ಖರ್ಚು ಮಾಫಿ)

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಈ ಕೆಳಗಿನ ಪ್ರಕಾಶಕರಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಚರ್ಚರೋಡು, ಉಡುಪಿ

GET **Rich & Prosperous!**

Here is an authorised simple means upheld and pursued by millions of persons with great advantage. This should lead you also to Riches and Prosperity. Ask for details-go through it carefully-take advantage of it and enjoy full comforts, luxury, influence and all that go to make HAPPINESS complete.

K. S. ROW,
Worli, BOMBAY.

ಸ್ಕೂಲ್, ಲೈಬ್ರೆರಿ ಮತ್ತು ಗ್ರಾಮಪಂಚಾಯಿತಿಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ.

ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಇದೆ.

ಪಿ. ಎ. ಉಪಾಧ್ಯಾಯ,
ಬುಕ್ ಸೆಲರ್ ಅಂಡ್ ಪಬ್ಲಿಷರ್,
೮೫ ಎ.ಎಸ್.ಸ್ಟ್ರೀಟ್ ಬೆಂಗಳೂರು ಸಿಟಿ

೧ ರೂ. ಕೊಡುವ ಚಂದಾದಾರರಿಗೆ ಮಾತ್ರ

ರೂ. ೩ರ ಪುಸ್ತಕಗಳು

ಈಗಲೇ] **ಉಚಿತ** [ಈ ದಿನವೇ

ಪುಸ್ತಕಗಳ ತೆಗೆಸೀಕೊಳ್ಳುವುದಕ್ಕೆ ಬರೆಯಿರಿ

ವ್ಯವಸ್ಥಾಪಕ:-ಪಿ. ಎ. ಉಪಾಧ್ಯಾಯ

ಮಾಸ್ಯಗ್ರಂಥ ಪ್ರಕಾಶನ ಸಮಿತಿ,

೮೫ ಎ ಎಸ್. ಸ್ಟ್ರೀಟ್, ಬೆಂಗಳೂರು ಸಿಟಿ

ಈ ವಾರದ ಭವಿಷ್ಯ

ತಾರೀಕು 1-2-1940ರಿಂದ ||| 8-2-1940ರ ವರೆಗೆ

ಮೇಷ—"ಪ್ರಯತ್ನಮೇಕಮಗ್ರತೋ ನಿಧಾಯ ಭೂತಿವಾಪ್ನುಹಿ" ಇತರ ಸಹಕಾರಿ ಕಾರಣಗಳಿಷ್ಟೇ ಇರಲಿ, ಸ್ವಪ್ರಯತ್ನವನ್ನೇ ಮುಖ್ಯವಾಗಿಟ್ಟುಕೊಂಡು ನಿಮ್ಮ ಗುರಿಯನ್ನು ಹೊಂದು ಎಂದು ಶಾಸ್ತ್ರವಚನವು ಸಾರುವಂತೆ ನೀವು ಲೌಕಿಕ, ವ್ಯಾವಹಾರಿಕ, ವಾಣಿಜ್ಯ ಮತ್ತು ನೌಕರಿ ಈ ಭಾಗಗಳಲ್ಲಿ ಮನಸ್ಸಿಟ್ಟು ದುಡಿದರೆ ಕಾರ್ಯವು ಅನ್ಯಥಾ ಆಗಲಾರದು, ಖರ್ಚಿಗೆ ಬೇಕಾದಷ್ಟು ಹಣವು ಅನಾಯಾಸದಿಂದ ದೊರೆಕೀತು. ಪಿತ್ತಪ್ರಕೋಪದಿಂದಾಗಿ ಆರೋಗ್ಯವು ಚೆನ್ನಾಗಿರದು. ಆಗಾಗ ಪ್ರವಾಸ ಸಂಭವಿಸುವದಾದರೂ ಪುಣ್ಯತೀರ್ಥಕ್ಷೇತ್ರಗಳ ದರ್ಶನವಾದೀತು. ತಾ 2ರಿಂದ 5ರ ವರೆಗೆ ಚಿಂತೆ, ದೌರ್ಬಲ್ಯ, ದುಃಸ್ವಪ್ನಗಳು ಅಧಿಕವಾಗಿರುವವು.

ವೃಷಭ—ಈ ವಾರದ ಮೊದಲು ನಾಲ್ಕು ದಿನಗಳು ನಿಮಗೆ ಸ್ವಲ್ಪ ಕಷ್ಟವಾಗಿ ಕಂಡು ಬಂದರೂ ಮುಂದಿನ ದಿನಗಳು ಸ್ವಲ್ಪ ಸುಖಮಯವಾಗುವವು. ಶತ್ರುಜನರ ಪೀಡೆಯು ದಿನ ದಿನಕ್ಕೆ ಕಡಿಮೆಯಾಗುತ್ತಾ ಬರುವುದು. ವ್ಯಾಪಾರಿಗಳಿಗೂ ಕಲಾವಿದರಿಗೂ ಮತ್ತು ವಿದ್ಯೋಪಜೀವಿಗಳಿಗೂ ಆರ್ಥಿಕ ಭಾಗವು ವೃದ್ಧಿಯನ್ನೈದುವುದಾದರೂ ಅಂತೆಯೇ ಖರ್ಚೂ ಕೂಡ ಹೆಚ್ಚಲಿದೆ. ಆರೋಗ್ಯವು ಸ್ವಲ್ಪ ಕೆಡಲಿದೆ. ಸ್ತ್ರೀಯರಿಂದ ವ್ಯರ್ಥ ಕಲಹ ಸಂಭವಿಸೀತು. ಅಂತೂ ಒಂದಲ್ಲೊಂದು ಶೋಕವು ನಿಮ್ಮನ್ನು ಬಿಟ್ಟಿರದು. ತಾ. 1, 2. 3 ಈ ದಿನಗಳಲ್ಲಿ ಕೆಲವೊಂದು ಇಷ್ಟಾರ್ಥಗಳು ಕೈಗೂಡಲಿವೆ.

ಮಿಥುನ—ಆಸ್ತಿಕ ಭಾಗದಲ್ಲಿ ಆಸಕ್ತಿಯು ಹೆಚ್ಚುವದು. ಆದ್ದರಿಂದಲೇ ಸತ್ಕಾರ್ಯಗಳಿಗೆ ಸಲುವಾಗಿ ಹಣ ವ್ಯಯಿಸುತ್ತಿರುವಿರಿ. ಉದ್ಯೋಗದಲ್ಲಿ ವಿಜಯ, ಅಭಿವೃದ್ಧಿಯ ಚಿಹ್ನೆಗಳೇ ಹೆಚ್ಚಿಗಿವೆ. ವಿದ್ಯಾರ್ಥಿಗಳು ಅಧ್ಯಯನ ವಿಚಾರದಲ್ಲಿ ಯಶೋಭಾಗಿಗಳಾಗುವರು. ಆರ್ಥಿಕ ಸಂಪತ್ತೂ ಸಾಂಸಾರಿಕ ಸುಖವೂ ತೃಪ್ತಿಕರವಾಗಿರುವುದಾದರೂ ಹಣದ ಲೇವಾದೇವಿ ಸಂಬಂಧ ಕಲಹವಾದೀತು. ತಾ 2ರಿಂದ 5ರ ವರೆಗಿನ ದಿನಗಳಲ್ಲಿ ಇಷ್ಟಾರ್ಥ ಸಿದ್ಧಿ, ಧನ ವಾಹನಗಳ ಪ್ರಾಪ್ತಿ ಸುಖ ಪ್ರವಾಸಾದಿಗಳು ಜರಗುವವು

ಕರ್ಕಾಟಕ—ಚಿತ್ತಶುದ್ಧಿಯುಳ್ಳದಿರತಕ್ಕ ನಿಮಗೆ ಪ್ರಕೃತಿ ಸುಖವು ಸುಲಭವಾಗುವುದು. ಕ್ಷಣ ಕಾಲವೂ ನಿಂತಲ್ಲಿ ನಿಲ್ಲಲು ಮನಸ್ಸು ಕೇಳದು. ಮಾತ್ರವಲ್ಲ ದೇಹದಲ್ಲಿ ಉದರ ಸಂಬಂಧಿ ರೋಗಗಳೂ ಇಂದ್ರಿಯ ದುರ್ಬಲತೆಯಿಂದುಂಟಾದ ತಾಪಗಳೂ ಪೀಡಿಸುತ್ತಿರುವವು. ಧನಾಪವ್ಯಯವು ಅನಿವಾರ್ಯವಾದುದು, ಆದರೂ ಗುರು ಶುಕ್ರರ ಬಲ ನಿಮಗಿರುವುದರಿಂದಲೂ, ಸ್ವಯಂ ವಿಚಾರ ಶಕ್ತಿರುವುದರಿಂದಲೂ ಹಿಡಿದ ಕಾರ್ಯವನ್ನು ಕೊನೆಗೊಳಿಸುವಿರಿ. ಖರ್ಚಿಗೆ ತಕ್ಕುದಾಗಿ ಒಂದಲ್ಲೊಂದು ರೀತಿಯಿಂದ ದುಡಿಯುವಿರಿ. ತಾ. 4ರಿಂದ ವಾರಾಂತ್ಯದ ವರೆಗೂ ಉತ್ತಮವಿದೆ.

ಸಿಂಹ—ಸದ್ಯ ನಿಮ್ಮಲ್ಲಿ ಸಾಕ್ಷಾತುರ್ಯವೂ ಆತ್ಮಬಲಸಂಪನ್ನತೆಯೂ ತಕ್ಕಮಟ್ಟಿಗಿರುವುದರಿಂದ ವಿರೋಧಿಗಳಿಗೆಡೆಕೊಡಲಾರಿರಿ. ರಾಜಕೀಯ ಮತ್ತು ನೌಕರಿ ಭಾಗದಲ್ಲಿ ಒಂದು ಹೆಜ್ಜೆ ಮುಂದರಿಯುವಿರಿ. ಆದರೆ ಧರ್ಮಬುದ್ಧಿ ಹ್ರಾಸದಿಂದಲೋ ಎಂಬಂತೆ ನಿಮಗೆ ದೈವಾನುಗ್ರಹವಿಲ್ಲವಾಗಿದೆ. ಆದ ಕಾರಣ ಎಲ್ಲರೂ ನಿಮ್ಮ ಮೇಲೆ ಹುಲ್ಲು ಕಡಿವರೇ ಹೊರತು ಸಹಾನುಭೂತಿ ತೋರುವವರಿಲ್ಲ. ಸ್ತ್ರೀಯರಿಂದ ನಿಷ್ಠುರವಾಗಿಯೂ ನಿಮಗೆ ಅಪಾಯವಿದೆ. ಎಷ್ಟು ಜಾಗರೂಕರಾಗಿದ್ದರೂ ಆರೋಗ್ಯವು ಕೆಡುವುದು. ತಾ. 2ರಿಂದ 5ರ ವರೆಗೆ ಕಾರ್ಯಹಾನಿ, ಮಿತ್ರರಲ್ಲೂ ಕಲಹಪ್ರಸಕ್ತಿಯೂದೀತು.

ಕನ್ಯಾ—ಎಲ್ಲಾ ಗ್ರಹರೂ ನಿಮ್ಮ ಕೈ ಬಿಟ್ಟರೂ ಗುರು ಮಹಾರಾಯನು ತನ್ನೆರಡೂ ಕೈಗಳಿಂದ ಬಲವಾಗಿ ಹಿಡಿದಿರುವನು. ಇಲ್ಲದಲ್ಲಿ ಇಂತಹ ಸಂದಿಗ್ಧ ಕಾಲದಲ್ಲಿ ನಿಮ್ಮ ಪರಿಸ್ಥಿತಿಯು ಅಪ್ರೊಂದು ಅವರ್ಣನೀಯವಿತ್ತು. ಯಾಕೆಂದರೆ ನೇತ್ರ ದಂತೋದರ ರೋಗಗಳು ಒಂದರೆಯಿಂದ ಪೀಡಿಸುವವು, ಕುಟುಂಬದಲ್ಲಿ ಕಲಹವೆದ್ದು ಹೆಂಡತಿ ಮಕ್ಕಳಿಂದಲೂ ವಿಯೋಗಹೊಂದುವಿರಿ. ಶತ್ರುಜನರು ಇದೇ ಸಮಯವೆಂದು ತಮ್ಮ ಕಾರ್ಯವನ್ನು ಸಾಧಿಸುವರು. ಕ್ಷಣಾರ್ಧವೂ ಮನಸ್ಸು ನೆಮ್ಮದಿಯಾಗಿರದು. ಈ ಸಂದರ್ಭದಲ್ಲಿ ಗುರುವು ಆಪತ್ತಿನಲ್ಲಿ ಅತಿಧೈರ್ಯವೆಂದಂತೆ, ಧೈರ್ಯ, ಸ್ಥೈರ್ಯ, ವಿವೇಕಗಳನ್ನು ಕೊಟ್ಟು ಕಾಪಾಡುವನು. ತಾ. 2-3 ಬಿಟ್ಟು ಇತರ ದಿನಗಳು ಬಹಳ ಹಾನಿಕರಗಳಾಗಿವೆ.

ತುಲಾ—ಜಯಾಪಜಯ ಸುಖಕಷ್ಟ, ಆಯವ್ಯಯಗಳು ಸದ್ಯ ಏಕಪ್ರಕಾರವಾಗಿರುವವು. ಶತ್ರುಜನ ಮುಖದಿಂದಲೂ ನೌಕರಿ ವ್ಯಾಪಾರಗಳ ಮೂಲಕವಾಗಿಯೂ ಭೂಸಂಬಂಧದಿಂದಲೂ ಧನಾಪ್ತಿಯ ಚಿಹ್ನೆಗಳಿವೆ. ಆದರೂ ಶತ್ರುಕೃತಾಪಚಾರ ನಿಮಿತ್ತ ಉಂಟಾದ ಮಾನಸಿಕ ವ್ಯಥೆ ಕಡಿಮೆಯಾಗದು. ರಾಜಕೀಯ ಕಾರ್ಯಗಳಲ್ಲಿ ಅನಿಷ್ಟ ಮಾನನಷ್ಟಗಳಾದಾವು. ಆಕಸ್ಮಿಕವಾಗಿ ಪ್ರವಾಸಗಳು ಗಂಟುಬಿದ್ದು ವ್ಯರ್ಥ ಹಣ ವ್ಯಯಿಸುವಿರಿ. ತಾ. 1-4-5 ಈ ದಿನಗಳಲ್ಲಿ ಇಷ್ಟಾರ್ಥಗಳೇ ಹೆಚ್ಚಾಗಿ ಸಿದ್ಧಿಸುವವು.

ವೃಶ್ಚಿಕ—ನಿಮ್ಮ ಭಾಗ್ಯಚಕ್ರವು ದಿನೇ ದಿನೇ ಮುಂದರಿಯುತ್ತಿದೆ. ದೈಹಿಕ ಆರೋಗ್ಯ ಶಕ್ತಿಗಳೂ ಮಾನಸಿಕ ಸುಖವೂ ಚೆನ್ನಾಗಿರುವದು. ಹಿಡಿದ ಕಾರ್ಯಗಳು ಅಲ್ಪಾವಕಾಶದಲ್ಲಿ ಅನಾಯಾಸದಿಂದ ಕೊನೆಗೊಳ್ಳಲಿವೆ. ಮಕ್ಕಳು ಮರಿಗಳ ವಿಷಯಕವಾದ ಚಿಂತೆ ಸದ್ಯವೇ ನಿವೃತ್ತಿ ಹೊಂದುವುದು. ಧನಬಲದಿಂದ ಸದಾ ಕೂಡಿಕೊಂಡಿರುವಿರಿ. ವಾರಾದಿಗಿಂತಲೂ ವಾರಾಂತ್ಯದ ದಿನಗಳಲ್ಲಿ ಹೆಚ್ಚಿನ ಸೌಕರ್ಯಗಳೂ ಸುಖವೂ ಲಭಿಸುವುದು. ತಾ. 2-3-6-7-8 ಅತ್ಯುತ್ತಮವಿವೆ.

ಧನು—ದಿನಹೋದಂತೆ ಕಷ್ಟಗಳು ಒಂದೊಂದೇ ಹುಟ್ಟುತ್ತಿರುವವು. ಸ್ವಯಂ ನಿಮ್ಮಲ್ಲಿ ಅಭಾವ ಕಾರ್ಯಶಕ್ತಿಯೂ ಇಲ್ಲ. ಇತರರೊಂದಿಗೆ ಸಹಕರಿಸಲು ನಿಮ್ಮ ಮನಸ್ಸೊಪ್ಪದು. ಅಂತೂ ನಿರುದ್ಯೋಗವೇ ಹುಟ್ಟುವ ಸಂಭವವಿದೆ. ಉಷ್ಣ ವಿಕಾರದಿಂದ ದೇಹದಲ್ಲಿ ತಾಪಪ್ರದವೂ ತೋರೀತು. ಕುಜನರ ಸ್ನೇಹದಿಂದ ಅಪವಾದಕ್ಕೆ ಗುರಿಯಾಗುವಿರಿ. ಇಷ್ಟಜನರಿಂದ ಅನಿಷ್ಟವೇ ಸಂಭವಿಸುವುದು. ಕಷ್ಟಪಟ್ಟು ವಿಧಿಯುತಕ್ಕೆ ಮರಿಗೆ ವ್ಯಾಪಾರಾದಿ ಉದ್ಯೋಗಗಳಲ್ಲಿ ಧ್ರಮಿಸಿ ತಕ್ಕುದಲ್ಲವಾದರೂ ಕಿಂಚಿತ್ ಲಾಭವಿದೆ. ಆಂತೂ ಆಯಕ್ಕಿಂತ ವ್ಯಯವೇ ಅಧಿಕ. ತಾ. 1-4-5 ವಿಶೇಷ ಹಾನಿಕಾರಿಯಾಗಿಲ್ಲ.

ಮಕರ—ಒಂದು ಒಳ್ಳೆಯದಾದರೆ ಎರಡು ಕೆಟ್ಟುದು, ಈ ಪ್ರಕಾರ ನಿಮ್ಮ ದಿನಗಳು ಕಳೆಯುವವು. ನಿಮ್ಮ ಪರಾಕ್ರಮವು ದಿನೇ ದಿನೇ ಕ್ಷೀಣವಾಗುತ್ತಾ ಬರುವದು. ಆದ್ದರಿಂದಲೇ ಹೆಚ್ಚಿನ ಕಾರ್ಯಗಳು ನಿಮ್ಮಿಚ್ಛೆಯಂತೆ ಕೊನೆಗಾಣವು. ವಿರೋಧಿಗಳು ಹೆಚ್ಚುತ್ತಾ ಬರುವರು. ವ್ಯಾಪಾರದಲ್ಲಿ ಸುಖವಿದ್ದರೂ ವ್ಯವಹಾರದಲ್ಲಿ ಸುಖವಿಲ್ಲ. ಮನಸ್ಸು ಸದಾ, ವಿಚಾರತರಂಗದಲ್ಲಿ ಲೀನವಾಗಿರುವುದು. ಮೇಲಿಂದ ಮೇಲೆ ಕಷ್ಟಗಳೇ ಕಾಣುವವು ಹೊರತು ಸುಖಕಾಣದು. ತಾ. 4-5ನ್ನು ಬಹಳ ಕಷ್ಟದಿಂದ ಕಳೆವಿರಿ.

ಕುಂಭ—ಪಿತ್ರೋಷ್ಣ ಸಂಬಂಧಿಗಳಾದ ದೈಹಿಕ ರೋಗಗಳು ಗುಣಮುಖವನ್ನು ಹೊಂದುವವು. ರಾಜಕೀಯದಲ್ಲಿ ಸತ್ಕಾರ್ಯಕ್ಕೆ ಜಯವಿದೆ. ವಿದ್ಯಾರ್ಥಿಗಳಿಗೆ ಧನ ವ್ಯಯ ಪರಾಜಯಗಳು ಪ್ರಾಪ್ತವಾಗುವವು. ನಿಷ್ಠುರ ಭಾಷಣದಿಂದ ಕೆಲವರಲ್ಲಿ ಕಲಹವಾದೀತು. ಆರ್ಥಿಕ ಸಂಪತ್ತು ಗೃಹ ಸುಖಗಳು ದಿನೇ ದಿನೇ ವೃದ್ಧಿ ಹೊಂದುವುವು. ಯಾವ ವಿಚಾರದಲ್ಲೇ ಆಗಲಿ ನಿಮ್ಮ ಪಂಥವೇ ಮೇಲೆಂಬುವನ್ನು ಬಿಡಲಾರಿರಿ. ತಾ. 6, 7. 8ರಲ್ಲಿ ನಿಮ್ಮ ಮಾತಿಗೆ ವಿರೋಧ ವಿಚಾರದೀತು

ಮೀನ—ಎಂತಹ ಕಷ್ಟ ಸಾಧ್ಯವಾದ ಕಾರ್ಯವಿರಲಿ ಅದಕ್ಕೆ ಬೇಕಾದ ಜನರನ್ನು ಕಾರ್ಯವನ್ನು ಪೂರೈಸುವಿರಿ. ಇದಕ್ಕೆ ಸಹಕಾರಿಯಾಗಿ ನಿಮಗೆ ಮಿತ್ರರೂ ಬಹಳ ಮಂದಿ. ವಾರಾದಿಯಲ್ಲಿ ಸುಖ ಕಷ್ಟಗಳು ಸಮಾನದಾಗಿದ್ದರೂ ಅಂತ್ಯದಲ್ಲಿ ಕಷ್ಟವೇ ಅಧಿಕವಾಗುವಂತಿವೆ. ಉತ್ಪತ್ತಿಗಿಂತ ಹೆಚ್ಚಾಗಿ ಖರ್ಚು. ನೌಕರಿ ಭಾಗದಲ್ಲಿ ಅತೃಪ್ತಿ ತಾಣುವದು. ಸಂಚಾರದಲ್ಲಿ ಜಾಗರೂಕರಾಗಿರಿ. ವೃಕ್ಷಾರೋಹಣಾದಿಗಳನ್ನು ತ್ಯಜಿಸಿರಿ. ದೇಹಾಪಾಯ ಸಂಭವಿಸೀತು. ತಾ. 1. 2. 3ರಲ್ಲಿ ಉದರ ರೋಗ ಅತೀವ ಅನಿಷ್ಟಗಳು ಸಂಭವಿಸಲಿವೆ.

NOTICE.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 650/1939 O. S 411/1938

1. ಕೆ. ಗೋಪಾಲಕೃಷ್ಣ ಕೆದ್ಲಾಯ, 2. ವಿಷ್ಣು ಕೆದ್ಲಾಯ—**ವಾದಿರು, ಅರ್ಜಿದಾರರು.**

1. ರಾಮಚಂದ್ರಶಾಸ್ತ್ರಿ, 2. ವಾಸ್ದೇವ ಶಾಸ್ತ್ರಿ, 3. ಗೋವಿಂದ ಶಾಸ್ತ್ರಿ (ಜಾತಿ), 4. ವೆಂಕಟ್ರಮಣ ಶಾಸ್ತ್ರಿ ಮೈನರ ಗಾರ್ಡಿಯನ್ ತಾಯಿ ಸುಬ್ಬಮ್ಮ, 5. ಯಾದ ವೇಂದ್ರಾಚಾರ್ಯ, 6. ಶಾವೇರಿ, } ಪ್ರತಿವಾದಿರು, ಎದ್ರಿರು,

ಸದರಿ 1, 2, 4ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಸುವದೇನೆಂದರೆ.—

ವಾದಿರು ಮೇಲ್ಕಂಡ ಡಿಕ್ರಿಗೆ ಜವಾಬ್ದಾರಿರುವ ಆಸ್ತಿ ವಿಲಿವಿಗೆ ಆರುಲ್ಸಾರಿ ಅರ್ಜಿದಾಖಲ್ಮಾಡಿ ವಿಲಂ ಇಸ್ತಿಹಾರು ದಾಖಲ್ಮಾಡಿರುತ್ತಾರೆ ಮತ್ತು ದರ್ಖಾಸ್ತಿಗೆ ನಿಲ್ಲುವರೆ ಪರ್ಮೀಶನ್ ಕೊಡಬೇಕೆಂತ ಕೂಡಾ ಅರ್ಜಿ ಮಾಡಿರುತ್ತಾರೆ. ಸದರಿ ಅರ್ಜಿಗಳಲ್ಲಿ ನಿಮಗೇನಾದರೂ ಆಕ್ಷೇಪವಿರುವುದಾದರೆ ನೀವು ತಾರೀಕು 3-2-40ಕ್ಕೆ ಕೋರ್ಟು ಮುಂದೆ ಹಗಲು ಘಂಟೆ 10ಕ್ಕೆ ಹಾಜರಾಗಿ ತಾಜರಾಗಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನ ಮಾಡಲಾದೀತು.

B. Shivarama Holla,
Advocate for Petitioners
ಪುತ್ತೂರು, ತಾ. 18-1-40

NAVAYUGA
Advertisement Tariff

1 Page	Rs. 25/-	per insertion
½ „	Rs. 15/-	„ „
¼ „	Rs. 8/-	„ „
⅛ „	Rs. 5/-	„ „

Per Single inch col. Re. 1 „
Contract rates on application
Manager-Navayuga UDIPI-

ಮಹಿಳಾ ಸಾಹಿತ್ಯ !
ಕನ್ನಡ ನುಡಿಮಣಿಗೊಂದು
ಕನ್ನಡಗಿತ್ತಿಯ ಗಿರುಗಾಣಿಕೆ
ನಾಡ ಸೋದರಿಯರ ನೈಜ ಜೀವನದ
ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ
ಹೃದಯಗಳ ಆಳವನ್ನೂ ಹೃದಯಂಗ
ಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ ಬೆಲೆ ೦-೭-೩

ಬರಹಗಾರ್ತಿಯರು:-
ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಜ್ಞನ ವಿಮರ್ಶಕ್ಷಣ ಕರ್ಣಾಟಕ ವಿದ್ಯಾವೈಭವ, ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯ M.A, M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ "ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇವೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ಮಾರ್ಗ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ" ....

ಪ್ರತಿಗಳು ಸಿಗುವ ಸ್ಥಳ:
Navabharat Book Depot,
UDIPI-

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ಜಗತ್ಪ್ರಸಿದ್ಧ
ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

NOTICE.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 137/1937

R.E.P. No. 706/1937

ಲಕ್ಷ್ಮೀನಾರಾಯಣಪ್ಪಯ್ಯ. ಮಂಕಿ ರಾಮರಾಯರ ಮಗ ಶಿವಳ್ಳಿ ಕಸಬಾ ಗ್ರಾಮ. } ವಾದಿ ಅರ್ಜದಾರ

ಮತ್ತು

1. ಅನಂತ ಉಪಾಧ್ಯ, 2. ಗುರುರಾಜ ಉಪಾಧ್ಯ, ಸದ್ರಿ ಲಕ್ಷ್ಮೀನಾರಾಯಣ ಉಪಾಧ್ಯರ ಮಕ್ಕಳು,

ಪ್ರತಿವಾದಿರು, ಎದ್ರಿರು.

ಉಡುಪಿ ತಾಲೂಕು ಶಿವಳ್ಳಿ ಕಸಬಾ ಗ್ರಾಮ.

ಇವರೊಳಗೆ,

ಸದ್ರಿ ಎದ್ರಿರೀಗೆ,

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿಹೊಂದಿದವನಾದ ಅರ್ಜದಾರನು ಹಾಜ್ರುಪಡಿಸಿರುವ ಇಸ್ತಿಹಾರಿನಿಂದ ಕಾಣುವ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ಅರ್ಜೀ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1940 ನೇ ಇಸವಿ ಫೇಬ್ರವರಿ ತಿಂಗಳು 15ನೇ ತಾರೀಕು ನಿಶ್ಚಯಿಸೋಣಾಗಿಯದೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

ಉಡುಪಿ, ತಾ. 27-1-1940 } K. L. Narayana Rao *Counsel for Petitioner.*

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪು ವ ಇತರ ವಿಕ್ರಯ ಟೇಕ್ಸ್‌ಗಳು.

'ಇನ್ಕಮ್' ಟೇಕ್ಸಿನ ಕಾಯಿದೆಯಲ್ಲಿ 1-4-3900 ದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕು ಮಾನಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಜಪ್ರತಿ ಕೇಲವೇ ನಿಮಿಷಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ. ಲೆಖ್ಖ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ನಿಶಾನೆಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರ್ಯಾಕ್ಟೀಷನರ್,
ಕುಂದಾಪುರ ಪೋಸ್ಟ್.

ಮಿ. ಜಿನ್ನರ ಎಚ್ಚರಿಕೆ!

ಕೇವಲ ಕಾಂಗ್ರೆಸಿನೊಂದಿಗೆ ಒಡಂಬಡಿಕೆ ಮಾಡಬಾರದು.

"ಕಾಂಗ್ರೆಸ್ ಕ್ಯಾಕವಾಂಡಿನವರು, ವೈಸರಾಯರು ಮತ್ತು ಚಕ್ರವರ್ತಿ ಸರಕಾರದೊಂದಿಗೆ ರಾಜಿ ಮಾಡುವ ಆತುರದಿಂದಿದ್ದಾರೆಂದು ಗಾಂಧಿಯವರ ಲೇಖನದಿಂದ ವ್ಯಕ್ತವಾಗುತ್ತದೆ. ಈ ಸಲ ಬದಲು ಮಾಡಲ್ಪಟ್ಟ ಕಾಂಗ್ರೆಸಿನ ಸ್ವಾತಂತ್ರ್ಯ ಪ್ರತಿಜ್ಞೆಯು ಅರ್ಥರಹಿತವಾದುದು. ಆ ಮೂಲಕ ಸ್ವರಾಜ್ಯವನ್ನು ಪಡೆಯಲು ಸಾಧ್ಯವಿಲ್ಲ. ಸರಕಾರದೊಂದಿಗೆ ರಾಜಿ ಮಾಡಿಕೊಂಡು ಮುಸಲ್ಮಾನರೇ ಮೊದಲಾದ ಅಲ್ಪ ಸಂಖ್ಯಾಕರನ್ನು ಬಗ್ಗು ಬಡಿಯುವುದೇ ಕಾಂಗ್ರೆಸಿನವರ ಉದ್ದೇಶವಿದೆ. ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಡುವಂತೆ ಮಾಡಿದ್ದುದು ಕೇವಲ ಬೂಟಾಟಿಕೆ. ರಾಜಿನಾಮೆ ಕೊಟ್ಟ ಮಂತ್ರಿಗಳೀಗ ಪುನಃ ಅಧಿಕಾರಕ್ಕೆ ಬರಲು ಚಡಪಡಿಸುತ್ತಿದ್ದಾರೆ. ಮುಸ್ಲಿಮ್ ಲೀಗಿನ ವಿರೋಧದಿಂದಾಗಿ ವೈಸರಾಯರು ಕಾಂಗ್ರೆಸಿನವರನ್ನು ಒಲಿಸಿಕೊಳ್ಳಲು ಸಂದೇಹಪಡುತ್ತಿದ್ದಾರೆ. ಒಮ್ಮೆ ಅಧಿಕಾರದ ರುಚಿ ಪಡೆದ ಗಾಂಧಿಯವರು ಪುನಃ ವೈಸರಾಯರೊಡನೆ ಸಂಧಿ ಪ್ರಸ್ತಾಪ ನಡಿಸಿ ರಾಜಿ ಮಾಡಿ ಇನ್ನೂ ಹೆಚ್ಚಿನ ಅಧಿಕಾರ ಪಡೆಯಲು ಆಶಿಸುತ್ತಾರೆ. ಆದರೆ ಅಲ್ಪ ಸಂಖ್ಯಾಕರಿಗೆ ತೃಪ್ತಿಯನ್ನುಂಟುಮಾಡದೆ ಒಡಂಬಡಿಕೆಯನ್ನೇನಾದರೂ ವೈಸರಾಯರು ಕಾಂಗ್ರೆಸಿನೊಂದಿಗೆ ಮಾಡಿದರೆ ಹಿಂದೂದೇಶದಲ್ಲಿ ದೊಡ್ಡ ಬಿಕ್ಕಟ್ಟುಂಟಾಗುವುದೆಂದು ನಾನು ಎಚ್ಚರಿಸಬೇಕಾಗಿದೆ. ಅಂತಹ ಪರಿಸ್ಥಿತಿಯನ್ನು ಮುಸಲ್ಮಾನರು ತಮ್ಮ ಸಂಪೂರ್ಣ ಶಕ್ತಿಯಿಂದ ವಿರೋಧಿಸುವರು." ಎಂದು ಮಿ. ಜಿನ್ನರು ಎಚ್ಚರಿಸಿ ಮುಸಲ್ಮಾನರೂ ಇನ್ನಿತರರೂ ಕಾಂಗ್ರೆಸಿನ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಕೂಡದೆಂದು ವಿನಂತಿ ಮಾಡಿಕೊಂಡಿರುವರು

ವೈಸರಾಯರ ಉಭಯಸಂಕಟ

ಮಿ. ಜಿನ್ನರು ಕೇವಲ ವಿಧ್ವಂಸಕ ಧೋರಣೆಯನ್ನು ವಹಿಸಿರುವರೇ ಹೊರತು ಪ್ರಕೃತದ ಬಿಕ್ಕಟ್ಟನ್ನು ಪರಿಹರಿಸಲು ವಿಧಾಯಕ ಸೂಚನೆಯನ್ನೇನೂ ಮಾಡಿರುವುದಿಲ್ಲ. ಅವರ ಧೋರಣೆಯನ್ನು ಲಂಡನ್ ಟೈಮ್ಸ್ ಪತ್ರಿಕೆ ಕೂಡಾ ಖಂಡಿಸಿದೆ. ಜಿನ್ನರ ಧೋರಣೆಯಿಂದಾಗಿ ವೈಸರಾಯರು ಉಭಯ ಸಂಕಟದಲ್ಲಿ ಬಿದ್ದಿದ್ದಾರೆ. ಜಿನ್ನರು ತಾನಾಗಿ ಕಾಂಗ್ರೆಸಿನೊತನೆ ಯಾವ ಒಪ್ಪಂದವನ್ನು ಮಾಡಿಕೊಳ್ಳುವ ಹಾಗಿಲ್ಲ. ಈ ವಿಷಯದಲ್ಲಿ ವೈಸರಾಯರ ಮಧ್ಯಸ್ಥಿಕೆಯಿಂದಲೂ ಸತ್ಪರಿಣಾಮವಾಗುವ ಸಂಭವ ತೋರುವುದಿಲ್ಲ. ಅವರು ಇನ್ನೂ ಸಮಯಕಳೆಯುತ್ತಾ ಹೋದರೆ ಕಾಂಗ್ರೆಸು ಮುಂದೊತ್ತಿ ಕಾಯಿದೆಭಂಗ ಚಳವಳ ಮಾಡುವ ಅಪಾಯವಿದೆ. ಮಹಾತ್ಮಾಗಾಂಧಿಯವರ ವಿವೇಕಪರ ಧೋರಣೆಯಿಂದಾಗಿ ಕಾಂಗ್ರೆಸು ಶಾಂತವಾಗಿದೆ. ಮಹಾತ್ಮರು ಹೋರಾಟಕ್ಕಾಗಿ ದಾತೊರೆಯದೆ ಬ್ರಿಟಿಷ್ ಸರಕಾರದೊಡನೆ ಗೌರವ ಪೂರ್ವಕ ಸಂಧಿ ಮಾಡಿಕೊಳ್ಳುವ ಆತುರದಿಂದಿದ್ದು ಆ ಸಂಬಂಧವಾಗಿ ಫೆಬ್ರವರಿ ತಾ. 4ರಲ್ಲಿ ವೈಸರಾಯರನ್ನು ಕಾಣಲಿದ್ದಾರೆ. ಅಂತ ಮೇಲೆ ವೈಸರಾಯರು ಅವರನ್ನು ತೃಪ್ತಿಪಡಿಸಲು ಸಾಧ್ಯವಾದ ಪ್ರಯತ್ನ ಮಾಡಬೇಕು. ಒಂದು ವೇಳೆ ಗಾಂಧಿ ವೈಸರಾಯ ಮಾತುಕತೆಯು ಜಯಶೀಲವಾಗಿ ಕಾಂಗ್ರೆಸ್ ಮಂತ್ರಿಗಳು ಪುನಃ ಅಧಿಕಾರಕ್ಕೆ ಬರುವಂತಾದರೆ ಮಿ. ಜಿನ್ನರು, ಸರಕಾರವನ್ನು ವಿರೋಧಿಸುವ ಬೆದರಿಕೆ ಹಾಕಿದ್ದಾರೆ. ಮಿ. ಜಿನ್ನರನ್ನೂ ಕಾಂಗ್ರೆಸನ್ನೂ ತೃಪ್ತಿಪಡಿಸುವ ವಿಧಾನವನ್ನೀಗ ವೈಸರಾಯರು ಹುಡುಕುತ್ತಿರುವಂತಿದೆ.

Degrees: Books, Medicines.

Free H. L. M. S., H. M. B. H., M. D. etc Free Homeo Ayur-Unani-Naturo degrees by post also—Practitioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp.—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt.) India.

NOTICE.

1. Sealed tenders will be received by the undersigned at his Office up to 5 P. M. on Wednesday the 5th February 1940 for the work of Printing, Binding, Ruling, Numbering etc of this District Board for the year 1940-1941.

2. Tenders should be addressed to the President, District Board, South Kanara and should be superscribed "Tender for Printing Works." The tender forms can be obtained from this Office during office hours on working days. All corrections in the tender should be authenticated.

3. The President, District Board, South Kanara, will reserve to himself the right of rejecting all or any of the tenders without assigning any reasons for so doing.

4. As soon as the acceptance of the tender is notified, the successful tenderer will be required to deposit a sum of Rs. (100/-) one hundred only which will be held as security for the due fulfilment of the contract.

5. The contract must not be sublet.

(*Sd.*) K. VITTAL SHETTY,
President, Dt. Board, S. Kanara.

NOTICE.

Tenders are invited in sealed covers up to 7th February 1940 for the supply of Stationery Articles and up to 5th February 1940 for executing works of the South Kanara District Board for 1940-41.

2. Tender—Form for Printing work and List showing articles of stationery required can be had on application to the District Board Office, South Kanara, Mangalore. Quotations should be furnished only for swadeshi Articles of Stationery as far as possible. Samples in respect of such of the articles of stationery as specified in the Tender List should accompany the Tender and they will not be returned.

South Kanara District Board Office, Mangalore, 25-1-1940

(*Sd.*) K. Vittal Shetty,
President.

NOTICE.

Notice is hereby given that on account of the reconstruction of the bridge in mile 6/8 of road No. 22B (Kalpady Belmon road) the road will be closed for all kinds of traffic with effect from 26-1-1940 until further notification.

(*Sd.*) K. Vittal Shetty,
President District Board, South Kanara

S. Kanara Dt. Board Office, Mangalore,
Dated 26—1—1940.

NO WAR SCARE NO RISE IN PRICE

X'Mas Grand Reduction Sale.

Strong & Durable Accurate Time Keepers

All Swiss Made GUARANTEED Lever WATCHES.



No. 416 Chromium Case Rs 6—10
No. 417 Golden Case Rs 6— 6
No. 417 R Rolledgold 10yrs.
Jewelled Mov. Rs. 12—8



ROUND OR CUSHION
No. 401 Chromium Case Rs. 3—12
No. 402 Golden Case Rs. 4— 8



No. 424 Chromium Case Rs. 7—8
No. 425 Golden Case Rs. 8—4
No. 425 R Rolledgold 10yrs. 13—8



No. 435 Chromium Case Rs. 12—0
No. 436 Rolledgold 10yrs Rs. 16—8

As. 9/- Extra for Postage.
For further particulars send for our new catalogue.
(Correspondence in English)

BAPALAL & CO.
101 Abdul Rehman Street,
BOMBAY, 3.

LADIES MINIATURES.



Geneva Movement.
No. 450 Chromium Case Rs. 10—8
No. 461 Golden Case Rs. 12—0
No. 462 Rolledgold 10yrs. Rs 15—0

ಬುದ್ಧಿ ಕಲಿಯಲು ಸಾಲದೇ ನೋಡಿ?

ಕೆಲವು ಮುಖ್ಯ ಸಂಗ್ರಾಮಗಳ ಅಂಕಿ ಅಂಶಗಳು

ಯುರೋಪಿನಲ್ಲಿ ಈಗ ನಡೆಯುತ್ತಿರುವ ಯುದ್ಧವು ಬಹಳ ಕಾಲದ ವರೆಗೆ ನಡೆಯುತ್ತಿದ್ದಾದಲ್ಲಿ, ಅನೇಕ ದೇಶಗಳು ಅದರ ವಿನಾಶ ಚಕ್ರಕ್ಕೆ ಸಿಕ್ಕುವ ಭಯವಿದ್ದು, ಜನಹಾನಿ, ಧನಹಾನಿಗಳ ಲೆಕ್ಕವನ್ನು ಮಾಡುವುದಂತೂ ಕಠಿಣವೇ. ಹಿಂದಿನ ಯುದ್ಧಗಳಲ್ಲಿ ಆದ ನಾಶಗಳನ್ನು ನಮ್ಮೆದುರಿನಲ್ಲಿಟ್ಟುಕೊಂಡು ಕಳೆದ 20 ವರ್ಷಗಳಲ್ಲಿ ಯುದ್ಧದ ಕಲೆ(?)ಯು ವಿಜ್ಞಾನದ ಸಹಾಯದಿಂದ ಹೊಂದಿರುವ ಪ್ರಗತಿಯನ್ನು ವಿಮರ್ಶಿಸಿ ನೋಡಿದರೂ, ಎಷ್ಟು ಧನಹಾನಿ, ಪ್ರಾಣಹಾನಿಯಾಗಿರುವುದೆಂಬುದು ತಿಳಿಯುವುದು. ದಯವಿಟ್ಟು ಕೆಳಗಿನ ಚಿತ್ರಗಳ ಮೇಲೆ ಗಮನವಿಟ್ಟು ನೋಡಿ—

ಯುದ್ಧದ ಹೆಸರು	ನಡೆದ ಕಾಲ	ನಾಶವಾದವರ ಸಂಖ್ಯೆ
ನೆಪೋಲಿಯನ್ನನ ಯುದ್ಧಗಳು 1790ರಿಂದ 1815ರ ವರೆಗೆ	9ಸಾವಿರ ದಿನಗಳು	2,100,000
ಕ್ರೀಮಿಯಾ ಯುದ್ಧ 1854ರಿಂದ 56ರ ವರೆಗೆ	739 ,,	785,000
ಜರ್ಮನ್ ಡೇನಿಶ್ 1864	135 ,,	35,000
ಜರ್ಮನ್ ಆಸ್ಟ್ರಿಯಾ 1866	40 ,,	45,000
ಅಮೇರಿಕದ ಗೃಹಕಲಹ 1861ರಿಂದ 1865ರ ವರೆಗೆ	1350 ,,	700,000
ಜರ್ಮನಿ, ಫ್ರಾನ್ಸ್ ಯುದ್ಧ 1870ರಿಂದ 1871ರ ವರೆಗೆ	210 ,,	184,000
ಇಂಗ್ಲೆಂಡ್ ಬೋಅರ್ ಯುದ್ಧ 1899ರಿಂದ 1902ರವರೆಗೆ	195 ,,	9,000
ಜಪಾನ್ ರಶ್ಯ ಯುದ್ಧ 1804ರಿಂದ 1806ರ ವರೆಗೆ	548 ,,	160,000
ಬಾಲ್ಕನ್ ಯುದ್ಧ 1912ರಿಂದ 1913ರ ವರೆಗೆ	238 ,,	462,000
ಒಟ್ಟು	39 ವರ್ಷಗಳು	44,49,300

ಅಂದರೆ 39ವರ್ಷದ ವರೆಗೆ ಪ್ರತಿದಿನವೂ 335 ಜನರು ಮರಣಹೊಂದುತ್ತಲೇ ಇದ್ದರು. ಆರ್ಥಿಕ ನಷ್ಟದ ಸರಿಯಾದ ಲೆಕ್ಕವು ದೊರೆಯುವಂತಿಲ್ಲ. ಇನ್ನು 1914ರ ಸಮರದ ಕಡೆಗೆ ಗಮನವನ್ನು ಕೊಡಿ.

ದೇಶಗಳು ಮಿತ್ರಮಂಡಲಿ	ಒಟ್ಟು ಸೈನ್ಯ	ನಾಶವಾದವರ ಸಂಖ್ಯೆ	ಗಾಯ ಗೊಂಡವರು	ಪತ್ತೆ ಇಲ್ಲ ದಾದವರು	ಒಟ್ಟು
ಬ್ರಿಟಿಷ್ ಚಕ್ರಾಧಿಪತ್ಯ	8904467	908371	2090224	191652	319235
ಫ್ರಾನ್ಸ	84100000	1363000	4266000	537000	6160800
ರಶ್ಯ	12000000	1700000	4900000	2500000	9100000
ಇಟಲಿ	5615000	650000	947000	600000	2197000
ಅಮೇರಿಕ	4355000	126000	134300	4500	350300
ಜಪಾನ್	80000	300	907	3	1210
ರುಮೇನಿಯ	750000	335706	120000	80000	535706
ಬೆಲ್ಜಿಯಂ	67000	13716	44686	34659	93061
ಸರ್ಬಿಯ	707343	45000	135148	152958	331106
ಯುಕ್ರೇನ್	230000	5000	26000	1000	27000
ಪೋರ್ಚುಗಲ್	100000	7222	13751	12318	333291
ಮಾಂಟಿನೆಗ್ರೋ	50000	3000	1000	7000	20000
ಒಟ್ಟು	42188810	5157315	12831004	4141090	22089709
	ಕೇಂದ್ರ:—				
ಜರ್ಮನಿ	11000000	1773700	4216058	1152800	7142558
ಆಸ್ಟ್ರಿಯ	7800000	1200000	3620000	2200000	7020000
ಹಂಗೇರಿ	2850000	325000	400000	250000	975000
ಟರ್ಕಿ ಬಲ್ಗೇರಿಯ	1200000	87500	152390	27029	266919
ಒಟ್ಟು	228500	3386200	8388448	3629829	15404477
ಎಲ್ಲ ಸೇರಿ	65038810	8543515	21219415	7753919	37499386

ಮೇಲ್ಕಂಡ ಅಂಕೆಗಳಿಂದ ತಿಳಿದು ಬರುವುದೇನೆಂದರೆ ಜಗತ್ತಿನ ಯಾವ ಯುದ್ಧದಲ್ಲಿಯೂ ಹಿಂದೆಂದೂ ಇಷ್ಟು ಮಂದಿ ಭಾಗವಹಿಸಿರಲಿಲ್ಲ. ಈ ರೀತಿ ಭಾಗವಹಿಸಿದವರ ಪೈಕಿ ಅರ್ಧಕ್ಕಿಂತ ಹೆಚ್ಚು ಮಂದಿ (ಶೇ 58) ಅಂದರೆ ಪ್ರತಿ ಏಳು ಮಂದಿಯಲ್ಲಿ ಒಬ್ಬ ಸೈನಿಕನು ಹತನಾದನು. ಇಬ್ಬರು ಗಾಯಗೊಂಡರು. ಒಬ್ಬನು ಸೆರೆ ಹಿಡಿಯಲ್ಪಟ್ಟನು. ಕೇವಲ ಮೂವರು ಮಾತ್ರ ಜೀವಸಹಿತ ಉಳಿದರು.

ಇದಂತೂ ಪ್ರಾಣಹಾನಿಯ ವಿಚಾರವಾಯಿತು. ಹಣದ ನಷ್ಟವು ಅರ್ಬುದಗಳಿಗೆ ಏರಿದ್ದು, ಒಂದು ನೂರು ರೂಪಾಯಿನ ನೋಟನ್ನು ಸಹ ನೋಡದೆ ಇರುವ ಭಾರತೀಯರು ಇದನ್ನು ಊಹಿಸುವುದು ಸಹ ಕಷ್ಟ. 1914ರ ಯುದ್ಧದಲ್ಲಿ ಪ್ರತಿ ಘಂಟೆಯಲ್ಲಿಯೂ 3 ಕೋಟಿ ರೂಪಾಯಿಗಳು ವ್ಯಯವಾಗುತ್ತಿದ್ದುವೆಂದು ಅಂದಾಜಾಗಿದೆ.

ಪಂಡಿತ ಜವಹರಲಾಲ್ ನೆಹರೂರವರು ತಮ್ಮ ಗ್ರಂಥದಲ್ಲಿ ಮಹಾಯುದ್ಧದ ವಿಚಾರದಲ್ಲಿ ಕೊಟ್ಟಿದ್ದ ಅಂಕೆಗಳು ಈ ರೀತಿ ಇವೆ—

ಮೃತಪಟ್ಟವರು 1 ಕೋಟಿ 30 ಲಕ್ಷ. ಮೃತಪಟ್ಟ ನಗರ ವಾಸಿಗಳು 1 ಕೋಟಿ 30 ಲಕ್ಷ, ಗಾಯಗೊಂಡವರು 2 ಕೋಟಿ. ಸೆರೆ ಸಿಕ್ಕಿದವರು 30 ಲಕ್ಷ, ಅನಾಥರಾದವರು 90 ಲಕ್ಷ, ವಿಧವೆಯರಾದವರು 50 ಲಕ್ಷ, ಶರಣಾಗತರಾದವರು 1 ಕೋಟಿ.

4 ಕೋಟಿ 60 ಲಕ್ಷ ಮಂದಿ ಸತ್ತರು, ಅಥವಾ ಗಾಯಗೊಂಡರು. (ಯುಕ್ತ ಪ್ರಾಂತ್ಯದ ಜನಸಂಖ್ಯೆಯಷ್ಟು) ಇದರಲ್ಲಿ ಮಿತ್ರ ಮಂಡಲಿಗೆ ಸುಮಾರು 40 ಅರ್ಬುದ ಪೌಂಡುಗಳೂ, ಜರ್ಮನಿಗೆ 15 ಅರ್ಬುದ ಪೌಂಡುಗಳೂ, ಖರ್ಚಾದುವೆಂದು ಅಂದಾಜು ಮಾಡಲಾಗಿದೆ.

ಸಾಕೇ?

ಇನ್ನಾದರೂ ಜಗತ್ತು ಬುದ್ಧಿ ಕಲಿಯಲಿಲ್ಲವಲ್ಲ ಎಂಬುದೇ ಬಂದಿರುವ ಚಿಂತೆ!



ಅಮೆರಿಕಕ್ಕೆ ಯುರೋಪು ತೆರತಕ್ಕ ಅಪಾರ ಸಾಲ.

14 ಬಿಲ್ಯ ಡಾಲರುಗಳಿಗೂ ಮಿಕ್ಕಿದೆ.

ಕಳೆದ ಯುದ್ಧದ ಪರಿಣಾಮವಾಗಿ ಯುರೋಪಿನ ರಾಷ್ಟ್ರಗಳು ಅಮೇರಿಕದ ಯುನೈಟೆಡ್ ಸ್ಟೇಟ್ಸಿಗೆ ಒಟ್ಟು ತೆರಬೇಕಾದ ಸಾಲ 14,497,161,34052 ಡಾಲರುಗಳಾಗಿರುತ್ತವೆ. ಅಸಲು ಮತ್ತು ಬಡ್ಡಿ ಸೇರಿ ಈ ಕೆಳಗಣ ಪ್ರಮಾಣದಲ್ಲಿ ಯುರೋಪಿನ ರಾಷ್ಟ್ರಗಳು ಅಮೇರಿಕಕ್ಕೆ ಸಾಲತೆರಬೇಕಾಗಿದೆ. ಗ್ರೇಟ್ ಬ್ರಿಟನು 5,497,063,379,48 ಡಾಲರು, ಫ್ರಾನ್ಸ್ 4,180,628, 81988, ಇಟಲಿ 2024,150,441,19, ಜರ್ಮನಿ 1,259,870,43126, ಜಕೋಸ್ಲೋವಾಕಿಯಾ(?), 23,803,104,11, ಬೆಲ್ಜಿಯಮ್ 453,324,48011, ಜೆಕೊಸ್ಲೊವೇಕಿಯ 165,763,014,80, ಎಸ್ಟೋನಿಯ, 21,029,440,02, ಫಿನ್ಲೆಂಡ್ 8,333,157,56, ಆಸ್ಟ್ರಿಯ 26,011,472,09 ಗ್ರೀಸ್ 34,523,635,29 ಹಂಗೇರಿ 2,383,730,08, ಲಟ್ವಿಯ 8,668,365,93, ಲಿಥುವೇನಿಯ 7760,603,08, ಪೋಲೆಂಡ್ 263,166,368,70, ರುಮಾನಿಯ 63,999,476,67, ರಶ್ಯ 394,903,46, ಯುಗೊಸ್ಲಾವಿಯ 61,779,062,52 ಕೇವಲ ಅಮೇರಿಕದ ಯುನೈಟೆಡ್ ಸ್ಟೇಟಿನ ಋಣವಿದು. ಇನ್ನು ಯುರೋಪಿನ ರಾಷ್ಟ್ರಗಳೊಳಗೇನೇ ಪರಸ್ಪರ ಸಾಲ ಎಷ್ಟಿರುವುದೋ? ಈ ಸಾಲದ ಹೆಚ್ಚಿನ ಅಂಶವು ಅಮೇರಿಕಕ್ಕೆ ದೊರೆತಿಲ್ಲ. ರಶ್ಯವು ಝಾರರ ಸಾಲವನ್ನು ನಿರಾಕರಿಸಿ ಬಿಟ್ಟಿದೆ. ಜರ್ಮನಿಯೂ ಅದೇರೀತಿ ಮಾಡಿದೆ. ಇಂಗ್ಲೆಂಡಿಗೆ ಕೂಡಾ ಈ ಸಾಲ ತೆರಲು ಸಾಧ್ಯವಾಗಿರುವುದಿಲ್ಲ. ಕೆಲವು ರಾಷ್ಟ್ರಗಳು ಬಡ್ಡಿ ಕೂಡಾ ತೆತ್ತಿರುವುದಿಲ್ಲ. ಈ ಸಾಲದ ಹೊರತು ಕಳೆದ ಯುದ್ಧದಲ್ಲಿ ಭಾಗವಹಿಸಿ ಅಮೇರಿಕವು ಅಪಾರ ನಷ್ಟಕ್ಕೊಳಗಾಗಿದೆ. ಯುದ್ಧಾನಂತರ ಅಮೇರಿಕವು ತೀವ್ರ ಸಾಂಪತ್ತಿಕ ಮುಗ್ಗಟ್ಟಿಗೀಡಾಯಿತು. ಆದುದರಿಂದ ಈ ಬಾರಿ ಅದು ಎಷ್ಟಕ್ಕೂ ಯುದ್ಧಕ್ಕೆ ಸೇರದಂತೆ ಜಾಗರೂಕವಾಗಿದೆ. ಕಡವಾಗಿ ಸಾಮಾನುಗಳನ್ನು ಕೂಡಾ ಕೊಡುವುದನ್ನು ನಿಲ್ಲಿಸಿದೆ. ಹೋರಾಡುವ ರಾಷ್ಟ್ರಗಳು ನಗದು ಹಣ ಕೊಟ್ಟು ತಮ್ಮ ಹಡಗುಗಳ ಮೂಲಕ ಒಯ್ಯಲು ತಯಾರಿದ್ದರೆ ಮಾತ್ರ ಸಾಮಾನುಗಳನ್ನು ಕಳುಹಿಸುತ್ತದೆ.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನ ಸಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಸ್ತರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಜೀವನ ಪ್ರಾಪ್ತವಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಲ್ ಬಜಾರ, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Null Bazzar, Duncan Road,
BOMBAY 4.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
ರೂ 1-8-0 ಕಳಿಸಿದ್ದಲ್ಲಿ ಆರು ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪ್ರತ್ಯೇಕ)
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಪ್ರತಿಗಳಿಗೆ ಬರೆಯಿರಿ:-

ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯೂನೆ ನಾವದ ಸಂಘದ ಕೆಲವು ಮಂದಿಯಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಒಂದು ವಿಚಾರಿಸಿರಿ.

Kanara Printing Works,

Hampankatte, **MANGALORE.**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿ ಸೋರುವುದು, ನೋವು, ಉರಿಯುವುದು, ಶಬ್ದವಾಗುವುದು, ಗುಂಯ್ಗುಡುವುದು, ಕಿವಿ ಮಂದವಾಗುವುದು, ... ಯಾವ ತರದ ಕಿವಿ ರೋಗಗಳಿಗೂ ... 'ಬಧಿರತಾಹರಣ' ಎಂಬ ಔಷಧ ... ಉಪಯೋಗಿಸಿದವರಿಂದ ... ಪ್ರಶಂಸಾಪತ್ರಗಳು ಬಂದಿವೆ ...

ಬಾಟ್ಲಿ 1ಕ್ಕೆ ಬೆಲೆ ರೂ 2, 3 ಬಾಟ್ಲಿಗಳಿಗೆ ರೂ 5, ಅಂಚೆ ವೆಚ್ಚ ಪ್ರತ್ಯೇಕ

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE **MOOLKY BANK, LTD.,**

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಹಾಯ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja, ಯಂ. ಆರ್. ಪೂಂಜ,

President & Manager, ಪ್ರಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು ಸೀಸೆ ಕ್ಕೆ 12 ಆಣೆ, ಟ ಖ ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲನೆಂಬ

ಸೂತಿಕಾ ರಸಾಯನ

ಇದರ ಶೋಧನೆ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. ಶೋಧನ ಗುಣ —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಪೂರ್ಣ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು ಸುಖಸೇವನ ಸುಖಸೇವನದಿಂದ ಮಧುರವನ್ನೂ ಹೆರವಾದ ಈ ರಸಾಯನವು ಬಾಣಂತಿಯ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಔಷಧ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು.— ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! DAIMONDS!

K R. K. SHET

Opposite Govt College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಷ್ಟ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಾದ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್‌ಗಳೂ ಜವಾನರ ಬಿಲ್ಲೆ, ನೇಮ್‌ಪ್ಲೇಟ್ ಇತ್ಯಾದಿಗಳು ಶೀಘ್ರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE

Approved firm by the Govt of Mysore Certified by the Agent of the Govt of India in Ceylon



SALE! SALE! SALE!

ಮುಂಚಿನ ಕ್ರಯ ರೂ. 10,

ಈಗಿನ ಕ್ರಯ ರೂ. 3-12 0

Swiss Lever Wrist Watch

ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನವೀನ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡ ತಕ್ಕದ್ದು ... ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ... ಬೇರೆಯವರು ... ಪ್ರಯತ್ನ ಪಡುವರು,

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ 3-12-0

ROYAL CO, 19 Bear SOWCARPET G T, MADRAS,

ರಾಯಲ್ ಕಂಪೆನಿ, ಸಾಹುಕಾರ ಪೇಟೆ ಜಿ ಟಿ ಮದರಾಸು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ವರೆಗಿನ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ಶ್ರೀವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಬದಲಾವಣೆಯಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿರುವುದಿಲ್ಲ ಎಂಬುದನ್ನು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತೆ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡುವ ಕೊಳ್ಳುವ ಬೇಕಷ್ಟು ಸಾಮಾನುಗಳಿವೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ ' ಸಂಜೀವನ ' ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟು ಕೊಳ್ಳುವುದು ಆವಶ್ಯಕವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ " ದೇವಾನುಮೋದಿತ " ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಜನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶವಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು " ದೇವಾನುಮೋದಿತ ಔಷಧಿ " ಎಂದು ಕರೆಯುವುದರಲ್ಲಿ ಸಂದೇಹವೇನಿದೆ ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ,ಹಲ್ಲು ಹುಟ್ಟುವಾಗ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕಪ್ಸಲುಗಳ

ಕೆಲವು ಶೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ !

ಕೆಲವು ಶೀಸೆಗಳು ಮಾತ್ರ ಉಳಿದಿವೆ.

ತ್ವರೆಯಾಗಿ ತರಿಸಿಕೊಳ್ಳಿರಿ.

'ಹೆವನನ್' ಹೆಮೊರ್ರ್ಹಾಯ್ಡ್ – ಓಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳೆದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, " ಹೆವನನ್ " ಎಂಬ ಹೆಮೊರ್ರ್ಹಾಯ್ಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಶೀಘ್ರದಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಶೀಸೆ 1ಕ್ಕೆ ರೂ 1–4–0 ವಿ ಪಿ ಬೇರೆ

ಲಕ್ಷೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವಣತ್ವವುಳ್ಳವರು ಲಕ್ಷೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3–4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು ಮಲಬದ್ಧತೆಯ ಲಕ್ಷಣಗಳುಳ್ಳವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಆವಶ್ಯಕವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ ಶೀಸೆ 1ಕ್ಕೆ ರೂ 1–0 0 ವಿ ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು

The Eclipse Distributing Agency,

Dahanu Road, B. B & C I. Ry BOMBAY PRESIDENCY.

ದಯವಿಟ್ಟು ಪತ್ರಕ್ಕೆ ಇಂಗ್ಲಿಷಿನಲ್ಲಿಯೇ ಬರೆಯಿರಿ

PRINTED BY S S KARANTH AT THE THULUNAD PRESS, UDIPI AND PUBLISHED BY K H SHETTY AT NAVAYUGA OFFICE, UDIPI, S. INDIA

Registered No M. 3618 8-2-1940.

ನವಯುಗ

NAVAYUGA

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್

ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರ ವಿವಾಹ ಜೀವವಿಮೆಯ ನಿಯಮಗಳು ಮತ್ತು ಭಾರೀ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

ಕ್ಲೈಮುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ ಕರುಣಾಕರ ಹೆಗ್ಡೆ ಆರ್ಗನೈಜರ್, ಕೆ. ಆರ್ ಕೆ ಶೆಟ್ಟಿ ಬಿಲ್ಡಿಂಗ್, ಮಿಶನ್‌ಹೈಸ್ಕೂಲ್ ರೋಡು ಮಂಗಳೂರು

ಅಥವಾ

ಎಚ್. ವೆಂಕಟರಾಮಯ್ಯ, ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ,

The Asiatic Govt. Security Assurance Co. Ltd.

ಝಂಡು ಮಲೇರಿಯಾ ಮಿಕ್ಶ್ಚರ್

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ ಆಣೆ 0—13—0 ಮಾತ್ರ.

ಸ್ಥಳೀಯ ಏಜಂಟರು:- ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು - ವಿ. ವಿ. ಶೆಣೈ, ಕೆಮಿಸ್ಟ್ಸ್.

ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೆ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಬರೆಯಿರಿ:—

ದಾಮೋದರ್ ಎಂಡ್ ಕೊ,

ZANDU 78ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು.

DAMODER & CO.,

78 China Bazaar Road, G T MADRAS

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

The Canara Industrial & Banking Syndicate Ltd.

NOTICE.

The Register of Members and Transfer Books of the Syndicate will remain closed from Thursday the 15th day of February, 1940 to Thursday the 14th day of March, 1940 both days inclusive.

"MUKUND NIVAS"
UDIPI
4th February, 1940.

THE ASIAN ASSURANCE COMPANY, LIMITED.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
,, M Shivarama Rao, Organizer, Puttur.

Or

Sri. J. A. PUTRAN,
Branch Manager, MANGALORE.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ



ರೂ. 1–8–0ಕ್ಕೆ
3 ವಾಚುಗಳೂ, 1295 ಷೋಕಿನ ಇನಾಮುಗಳೂ

ಕೇಸ ಒಂದರ ರೂ. 1-8-0ಯಂತೆ ಒಮ್ಮೆಯೇ 10ಕೇಸ ಸುವಾಸನಾ ಒಟೋರೋಸ್ ಪರಿಮಳ ದ್ರವ್ಯವನ್ನು ಕೊಂಡು ಕೊಳ್ಳುವವರಿಗೆ ಗಿಲ್ಟಿನ ಡಬ್ಬಿ, ಗೋಲ್ಡ್ ರಿಸ್ಟ್‌ವಾಚು, ಸ್ಟೀಲ್ ವಾಚು, ಬಾಂಡುವಾದ್ಯ ಸೆಟ್ಟು, ಕೈಬ್ಯಾಗ್, ಡಬ್ಬಿ ಪಾಕೆಟ್‌ವಾಚು, ಸೇಫ್ಟಿರೇಜರ್, ಶಾಚಿಂಗ್ ಸೇವಿಂಗ್ ಸೋಪು, ಸೇವಿಂಗ್ ಬ್ರಷ್, ಕನ್ನಡಿ, ಪೌಡರ್ ಪಕೇಟು, ಕ್ಲಿಪ್ಪು ಸಮೇತ ಪೆನ್ಸಿಲು, ಸಿಗರೇಟ್ ಕೇಸ, ಸಿಗರೇಟ್ ಲೈಟರ್, ಅಂಗವಸ್ತ್ರ, ಉಂಗುರ, ಕತ್ತರಿ, 555 ಅಡಿ ದೂರ ಪ್ರಕಾಶ ಕೊಡುವ ಟೋರ್ಚ್‌ಲೈಟ್ ಅಥವಾ ಐದು ವರ್ಷ ಗ್ಯಾರಂಟಿಯುಳ್ಳ ಬಿ. ಟಾಯಿಂ ಪೀಸು ಧರ್ಮಾರ್ಥವಾಗಿ ಕೊಡಲಾಗುವುದು. ಪೋಸ್ಟೇಜು ಮತ್ತು ಪ್ಯಾಕಿಂಗ್ 12ಆಣೆ ಪ್ರತ್ಯೇಕ. ಇಂದೇ ಬರೆಯಿರಿ.

THE FRENCH WATCH CO.
Post Box No. 12216 Calcutta (N. G.)

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES - - - - - MANGALORE

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ. ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು.

Every Policyholder is a Member

IN

The Canara Mutual

ASSURANCE COMPANY, LTD.

(Head Office:- UDIPI, S. India.)

Everyday the Membership increases.

The Company issues all the well-known plans of Assurance. Female lives accepted.

JOIN ITS EVER INCREASING MEMBERSHIP.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨೨

ಉಡುಪಿ, ಗುರುವಾರ, ೮—೨—೧೯೪೦.
UDIPI, THURSDAY, 8-2-1940.

VOL. 19
No. 22

18,000ಮಂದಿ ಪೋಲಿಶ್ ಮುಖಂಡರ ಕೊಲೆ

ಜರ್ಮನಿಯು ವಶಪಡಿಸಿಕೊಂಡಿರುವ ಪೋಲಂಡಿನ ಪ್ರದೇಶದ ಬೇರೆ ಬೇರೆ ಕಡೆಗಳ 18,000 ಪೋಲಿಶ್ ಜನ ಮುಖಂಡರನ್ನು ನಾಝಿಗಳು ಕೊಲೆಮಾಡಿರುವರು. ಪಶ್ಚಿಮ ಪೋಲಂಡಿನಲ್ಲಿ ಪೋಲರನ್ನೆಲ್ಲಾ ನಿರ್ನಾಮಗೊಳಿಸಿ ಅದನ್ನು ಜರ್ಮನ್ ಜನತೆಯಿಂದ ತುಂಬುವುದೇ ನಾಝಿಗಳ ಉದ್ದೇಶ. ಪೋಜ್ನನ್ ಜಿಲ್ಲೆಯಿಂದ 100,000 ಜನಸಂಖ್ಯೆಯುಳ್ಳ 30,000 ಕುಟುಂಬಗಳವರು ಅವರ ಮನೆಮಾರುಗಳಿಂದ ಹೊರ ತಳ್ಳಲ್ಪಟ್ಟಿರುತ್ತಾರೆ. 1,50,000 ಪೋಲರಿದ್ದ ಗಡ್ನಿಯಾದಲ್ಲಿ ಈಗ ಪೋಲಿಶ್ ಜನರೇ ಇಲ್ಲದಂತೆ ಮಾಡಲಾಗಿದೆ. ಬೊಹೀಮಿಯ ಮತ್ತು ಮೊರಾವಿಯ ದೇಶಗಳಲ್ಲಿಯೂ ನಾಝಿಗಳು ಇದೇ ಧೋರಣೆವಹಿಸಿರುತ್ತಾರೆ. ಅಲ್ಲಿಯ ಜನರನ್ನು ಹೊರದಬ್ಬಿ ಬಾಲ್ಟಿಕ್ ಪ್ರದೇಶದ ಜರ್ಮನರು ಅಲ್ಲಿಗೆ ಹೋಗಿ ವಾಸಿಸುವಂತೆ ಮಾಡುತ್ತಿದ್ದಾರೆ. ರಶ್ಯವು ಆಕ್ರಮಿಸಿದ ಪೋಲಂಡಿನ ಭಾಗದಿಂದ 1500 ಮಂದಿ ಅಧಿಕಾರಿಗಳು ಸೇರಿ 6000 ಮಂದಿ ದಸ್ತಗಿರಿಯಾಗಿ ಅಜ್ಞಾತ ಸ್ಥಳಕ್ಕೊಯ್ಯಲ್ಪಟ್ಟಿರುತ್ತಾರೆಂದು ಈಗ ಫ್ರಾನ್ಸಿನಲ್ಲಿ ಸ್ಥಾಪಿಸಲ್ಪಟ್ಟಿರುವ ಪೋಲಿಶ್ ಸರಕಾರವು ವಿದಿತಗೊಳಿಸಿರುವುದು.

ನಾಝಿ ಪಕ್ಷಕ್ಕೆ 148 ಮಿಲ್ಯ ಪವನು

ಜರ್ಮನಿಯಲ್ಲಿ ನಾಝಿ ಪಕ್ಷವನ್ನು ಸಂಘಟಿಸಿ ನಡಿಸಲು ವರ್ಷಕ್ಕೆ 140 ಮಿಲ್ಯ ಪವನು ವೆಚ್ಚವಾಗುವುದೆಂದು ಸದ್ರಿ ಪಕ್ಷದ ಅಧಿಕಾರಿಗಳು ಪ್ರಕಟಿಸಿದ ವಾರ್ಷಿಕ ವರದಿಯಲ್ಲೇ ಕೊಡಲ್ಪಟ್ಟಿದೆ. ಲೋಕದಲ್ಲಿ ಇನ್ನಾವ ಪಕ್ಷಕ್ಕಾದರೂ ಇಷ್ಟೊಂದು ವೆಚ್ಚವು ತಗಲಲಾರದು. ಆಗಾಗ ನಡೆಸಲ್ಪಡುವ ಸಭೆ ಪ್ರದರ್ಶನಗಳಿಗೇನೇ ಅತಿ ಹೆಚ್ಚಿನ ಹಣವು ವ್ಯಯವಾಗುತ್ತದೆ. ನಾಝಿ ಪಕ್ಷದ, ವಿಶೇಷವಾಗಿ ಸಂಘಟಿತ ತರುಣ ಜರ್ಮನಿಯ ಬೆಂಬಲದಿಂದಲೇ ಹಿಟ್ಲರನು ತನ್ನ ಅಧಿಕಾರವನ್ನು ಸ್ಥಿರವಾಗಿ ಸ್ಥಾಪಿಸಿರುತ್ತಾನೆ.

ಜನಸಾಮಾನ್ಯರು ಕೇವಲ ಗುಲಾಮರು.

ಪರಾಜಿತರಾಗಿ ತಮ್ಮ ಕೈವಶರಾದವರನ್ನು ಕ್ರಮವಾಗಿ ನಾಶಪಡಿಸಿ ನಿರ್ನಾಮಗೊಳಿಸುವ ಇತಿಹಾಸದಲ್ಲೇ ನವೀನವೂ ಬರ್ಬರವೂ ಆದ ಧೋರಣೆ ನಾಝಿ ಜರ್ಮನಿಯದು. ಹಿಟ್ಲರನಿಗೆ ಮಾನವರೆಂದರೆ ಕೇವಲ ಜಾನುವಾರುಗಳೋಪಾದಿ. ಅವರನ್ನು ಸಾಮುದಾಯಿಕವಾಗಿ ಕೊಲ್ಲಿಸುವುದು ಇಲ್ಲವೆ ಮನೆಮಾರುಗಳಿಂದ ಹೊರ

ಸಮಾಚಾರ ಸಂಗ್ರಹ

ಹಾಕುವುದು ಅವನಿಗೆ ಸಾಮಾನ್ಯವಾದೊಂದು ಘಟನೆ. ತಾನು ಗೆದ್ದ ಜನರು ಬಂಡಾಯವೆಬ್ಬಿಸಲು ಆಸ್ಪದವುಂಟಾಗದಂತೆ ಶಿಕ್ಷಿತರನ್ನೆಲ್ಲಾ ಅವನು ನಿರ್ಘೃಣವಾಗಿ ಕೊಲ್ಲಿಸುವನು. ಯುರೋಪಿನಲ್ಲಿ ಮಿಲ್ಯಾಂತರ ಮಾನವ ಜೀವಿಗಳಿಂದು ಕ್ರಿಮಿಕೀಟಗಳಂತೆ ನರಳುತ್ತಿದ್ದಾರೆ. ಜರ್ಮನಿಯ ಕೆಲಸಗಾರರು ಮತ್ತು ಕೃಷಿಕರು ನಾಝಿ ಯಜಮಾನರ ಗುಲಾಮರಾಗಿದ್ದಾರೆ. ಬೊಹೀಮಿಯ ಮತ್ತು ಪೋಲಂಡಿನ ಕೆಲಸಗಾರರು ಮತ್ತು ಕೃಷಿಕರು ಈ ಗುಲಾಮರ ಗುಲಾಮರಾಗಿದ್ದಾರೆ. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ವಿಜಯಹೊಂದುವವೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಅದಕ್ಕಾಗಿ ಜನಸಾಮಾನ್ಯರು ಹೆಚ್ಚಿನ ತ್ಯಾಗ ಮಾಡಬೇಕು" ಎಂದು ಫ್ರೆಂಚ್ ಪ್ರಧಾನ ಮಂತ್ರಿ ಎಮ್. ದೆಲಡಿಯರರು ಜನವರಿ ತಾ. 29ರಲ್ಲು ಕೊಟ್ಟ ರೇಡಿಯೋ ಭಾಷಣದಲ್ಲಿ ಹೇಳಿರುವರು.

ಫಿನ್ಲೆಂಡನ್ನು ರಶ್ಯವು ಏನು ಮಾಡುವುದು?

ಫಿನ್ಲೆಂಡನ್ನು ಗೆದ್ದು ಅಧೀನ ರಾಜ್ಯವಾಗಿ ಮಾಡಬೇಕೆಂದು ರಶ್ಯದ ಸರ್ವಾಧಿಕಾರಿ ಸ್ಟೆಲಿನ್ ಮತ್ತು ಅವನ ಸಹ ವ್ಯವಸಾಯಿಗಳು ಮೊದಲು ಆಲೋಚಿಸಿದ್ದರು. ಆದರೆ ಈಗ ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿ, ಫಿನ್ಲೆಂಡನ್ನು ಜೈಸಿದರೆ ಅಲ್ಲಿಯ ಜನರನ್ನೆಲ್ಲಾ ರಶ್ಯದ ಬೇರೆ ಕಡೆಗಳಿಗೆ ಕಳುಹಿಸಿ ಅದನ್ನು ರಶ್ಯನರ ವಸಾಹತಾಗಿ ಮಾರ್ಪಡಿಸಲಿರುವರು. ಸ್ಟೆಲಿನರು ಹಿಟ್ಲರರ ಮಾದರಿಯನ್ನೇ ಅನುಸರಿಸುತ್ತಿರುವಂತಿದೆ. ಆದರೆ ಪರಿಸ್ಥಿತಿಯು ಇದೇ ರೀತಿ ನಡೆದರೆ ರಶ್ಯಕ್ಕೆ ಫಿನ್ಲೆಂಡನ್ನು ಗೆಲ್ಲಲು ಸಾಧ್ಯವಿದೆಯೋ ಎಂಬುದು ಸಂದೇಹಕರವಿದೆ. ಆರಂಭದಲ್ಲೇ ಫಿನ್ಲೆಂಡನ್ನು ರಶ್ಯವು ಗೆದ್ದು ಬಿಟ್ಟಿದ್ದರೆ ಆದರ ಕೆಲಸ ಸುಲಭ ಸಾಧ್ಯವಾಗುತ್ತಿತ್ತು. ಈಗ ಲೋಕದ ಹಲವು ರಾಷ್ಟ್ರಗಳು ಫಿನ್ಲೆಂಡಿಗೆ ಸಹಾಯ ಮಾಡುತ್ತಿರುವುದರಿಂದ ಅದನ್ನು ಗೆಲ್ಲುವುದು ಬಹಳ ಪ್ರಯಾಸ.

ಜರ್ಮನರ ಪ್ರಬಲ ವಿಮಾನ ಧಾಳಿ

ಜನವರಿ ತಾ. ೩೦ರಲ್ಲು ಸುಮಾರು 18 ಜರ್ಮನ್ ವಿಮಾನಗಳು ಇಂಗ್ಲೆಂಡ್ ಮತ್ತು ಸ್ಕೋಟ್ಲೆಂಡಿನ ಪೂರ್ವ ಮತ್ತು ಉತ್ತರದ 400 ಮೈಲು ಸಮುದ್ರಕರಾವಳಿಯ ಮೇಲೆಲ್ಲಾ ಹಾರಾಡಿ ಹಲವು ಬ್ರಿಟಿಷ್ ಹಡಗಗಳ ಮೇಲೆ ಬೋಂಬೆಸೆಯುವ ಸಾಹಸ ಮಾಡಿರುವವು. ಹವಾಗುಣವು ಬಹಳ ಕೆಟ್ಟದಾಗಿದ್ದರೂ ಬ್ರಿಟಿಷ್ ವಿಮಾನಗಳು ಕೂಡಲೆ ಮೇಲಕ್ಕೇರಿ ಜರ್ಮನ್ ವಿಮಾನಗಳನ್ನೆದುರಿಸಿ ಓಡಿಸಿದುವು. ಲಿಟ್ವೇನಿಯನ್ ಹಡಗವೊಂದರ ಮೇಲೆ ಜರ್ಮನ್ ವಿಮಾನಗಳು ಬೋಂಬೆಸೆದು ಮುಳುಗಿ ಹೋಗಿ 7 ಮಂದಿ ಕೊಲ್ಲಲ್ಪಟ್ಟಿರುವರು.

ಬಂಗಾಳ ಕಾಂಗ್ರೆಸ್ ಪ್ರಕರಣ

ಬಂಗಾಳ ಕಾಂಗ್ರೆಸ್ ಕಮಿಟಿ ಮತ್ತು ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಗಳೊಳಗಣ ಕಲಹವು ಅದೊಂದು ದೊಡ್ಡ ಪ್ರಕರಣವಾಗಿ ಪರಿಣಮಿಸಿದೆ ಈ ಸಲದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯ ಮುಂದೆ ಶ್ರೀ ಶರಚ್ಚಂದ್ರಬೋಸರು ಈಗ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ವರ್ತನೆಯನ್ನು ಪ್ರತಿಪಾದಿಸಿದರೂ ವರ್ಕಿಂಗ್ ಕಮಿಟಿಯವರು ತಮ್ಮ ಮೊದಲಿನ ನಿರ್ಧಾರವನ್ನು ಬದಲಾಯಿಸದೆ ಬಂಗಾಳಪ್ರಾಂತದ ಕಾಂಗ್ರೆಸ್ ಚುನಾವಣೆಗಳನ್ನು ನಡಿಸಲು ಮೌಲಾನ ಅಬ್ದುಲ್ ಕಲಮ್ ಅಜದರು ಅಧ್ಯಕ್ಷರಾಗಿ ಒಂದು ಸ್ವತಂತ್ರ ಕಮಿಟಿಯನ್ನು ಸ್ಥಾಪಿಸಿರುವರು. ಈ ಕಮಿಟಿಯವರೆಲ್ಲರೂ ಬಂಗಾಳದ ಅಲ್ಪಸಂಖ್ಯಾಕ ಪಕ್ಷದವರು ಇದರಿಂದ ಈಗ ಅಧಿಕಾರದಲ್ಲಿರುವ ಬಹುಪಕ್ಷೀಯರಿಗೆ ದೊಡ್ಡ ಅನ್ಯಾಯವಾಗಿದೆಯೆಂದು ಶ್ರೀ. ಶರಚ್ಚಂದ್ರಭೋಸರು ಶ್ರೀ. ಡಾಕ್ಟರ್ ರಾಜೇಂದ್ರ ಪ್ರಸಾದರಿಗೆ ತಂತಿ ಮೂಲಕ ತಿಳಿಸಿ, ಬಂಗಾಳದ ಕಾಂಗ್ರೆಸ್ ಜನತೆಯ ಬೆಂಬಲವು ಯಾರಿಗಿದೆಯೆಂಬುದನ್ನು, ಶ್ರೀ. ರಾಜೇಂದ್ರ ಪ್ರಸಾದರು ಬಂಗಾಳದ ಬೇರೆ ಕಡೆಗಳಲ್ಲಿ ಸಭೆ ನಡಿಸಿ ಪರೀಕ್ಷಿಸಬಹುದೆಂದೂ, ಆದರ ವೆಚ್ಚವನ್ನು ತಾನು ವಹಿಸುವೆನೆಂದೂ ಸೂಚಿಸಿರುವರು. ಬಾಬುರಾಜೇಂದ್ರರು ಇದಕ್ಕೊಪ್ಪದೆ, ಶ್ರೀ. ಶರಚ್ಚಂದ್ರ ಭೋಸರು ಬೇಕಾದರೆ ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ವಿನಂತಿಮಾಡಿಕೊಳ್ಳಬಹುದೆಂದೂ, ಅದೇ ಕಾಂಗ್ರೆಸ್ ಜನತೆಯಿಂದ ಚುನಾಯಿಸಲ್ಪಟ್ಟ ಪ್ರತಿನಿಧಿ ಸಂಸ್ಥೆಯೆಂದೂ ತಿಳಿಸಿರುವರು. ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಈಗಣ ಕಾಂಗ್ರೆಸ್ ಹೈಕಮಾಂಡಿನವರ ಪಕ್ಷಪಾತಿಗಳಿಂದ ತುಂಬಿರುವುದರಿಂದ ಅದರೊಡನೆ ವಿನಂತಿ ಮಾಡಿ ಫಲವಿಲ್ಲೆಂದು ಶ್ರೀ ಶರಚ್ಚಂದ್ರಭೋಸರು ಟೀಕಿಸಿರುವರು. ಇದರಿಂದ ಸಂತಪ್ತರಾದ ಕಾಂಗ್ರೆಸ್ ಪ್ರಸಿಡೆಂಟರು, ಶ್ರೀ ಭೋಸರ ಆರೋಪವು ಆಧಾರರಹಿತವಿದ್ದು ಕಾಂಗ್ರೆಸಿಗೆ ದೊಡ್ಡ ಅವಮಾನವಿರುವುದೆಂದೂ, ಈ ಕುರಿತು ಶ್ರೀ ಭೋಸರೊಡನೆ ಚರ್ಚೆ ಮುಂದುವರಿಸಲು ತಾನು ತಯಾರಿಲ್ಲವೆಂದೂ ತಿಳಿಸಿರುವರು. ಜನವರಿ ತಾ. 31ರಲ್ಲು ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಮಂಡಲಿಯು ಸೇರಿ, ಚುನಾವಣೆ ನಡಿಸಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನೇಮಿಸಿರುವ ಎಡ್‌ಹೊಕ್ ಕಮಿಟಿಯೊಡನೆ ಯಾವ ರೀತಿಯಲ್ಲಿಯೂ ಸಹಕರಿಸಕೂಡದೆಂದೂ ನಿರ್ಧರಿಸಿರುವುದು ಮಾತ್ರವಲ್ಲದೆ, ಪ್ರಕೃತದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಚುನಾವಣೆಯನ್ನೇ ಮುಂದುವರಿಸುವ ನಿರ್ಣಯ ಕೂಡಾ ಮಾಡಿರುವುದು. ಇದರಿಂದಾಗಿ ಬಂಗಾಳದ ಪರಿಸ್ಥಿತಿಯು ಅತ್ಯಂತ ವಿಷಮಸ್ವರೂಪ ತಾಳುವಂತಾಗಿ ಈಗಣ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಪ್ರತಿ ಕಾಂಗ್ರೆಸ್ ಕಮಿಟಿ ಸ್ಥಾಪಿತವಾಗುವ ಗಂಡಾಂತರವುಂಟಾಗಿದೆ

ಅಂತರಂಗದ
ಮೊಹರಮ್ ವಿಶೇಷ ಸಂಚಿಕೆ
ತಾ. 18—2—1940ರಲ್ಲಿ ಹೊರಬೀಳಲಿರುವುದು.

ಮುಸಲ್ಮಾನರ ಸಂಸ್ಕೃತಿ, ಅವರ ಧರ್ಮದ ಹೆಗ್ಗುರುತಾದ ಬಾಂಧವ್ಯದ ವೈಶಿಷ್ಟ್ಯ, ಸಮಾಜದ ರೀತಿನೀತಿ, ಅವರು ಅನುಸರಿಸುವ ಪದ್ಧತಿಗಳೂ, ಹುಳುಕು ಬೆಳಕುಗಳೂ ನಿರ್ದಾಕ್ಷಿಣ್ಯವಾಗಿ ಈ ಸಂಚಿಕೆಯಲ್ಲಿ ತಜ್ಞರಿಂದ ಚರ್ಚಿಸಲ್ಪಡುವುದು.

ಜಾಹೀರಾತಿಗೆ ಉತ್ತಮ ಸಾಧನ.
ವಿಶೇಷ ಮಾಹಿತಿಗೆ ಬರೆಯಿರಿ.

ಅಂತರಂಗ ಕಾರ್ಯಾಲಯ, ಉಡುಪಿ.

ಕನ್ನಡ ಪತ್ರಿಕೆಗಳಿಗಿರುವ ತೊಂದರೆಗಳು.

೧

ಕನ್ನಡ ಪತ್ರಿಕೆಗಳ ಪ್ರಗತಿಯ ದಾರಿಯಲ್ಲಿ ಒಂದು ದೊಡ್ಡ ತೊಡಕು ಯಾವುದೆಂದರೆ ಇಂದಿನ ಕಲಿತ ಜನರಲ್ಲಿಯ ರುಚಿವೈಷಮ್ಯ. ನಮ್ಮಲ್ಲಿಯ ಕಲಿತ ಜನರಲ್ಲಿ ಕೇವಲ ಕನ್ನಡ ಕಲಿತವರು, ಇಂಗ್ಲಿಷ್ ಕಲಿತವರು ಎಂದು ಎರಡು ಭಾಗಗಳನ್ನು ಮಾಡಬಹುದು. ಇದುವರೆಗೂ ಕನ್ನಡದಲ್ಲಿ ವಿಶಾಲ ಲೋಕದ ಸರ್ವತೋಮುಖವಾದ ಪರಿಚಯ ಮಾಡಿಕೊಡಬಲ್ಲ ಗ್ರಂಥಗಳೇ ಇಲ್ಲದುದರಿಂದ, ಬರಿಯ ಕನ್ನಡ ಕಲಿತವರ ಜ್ಞಾನದ ಪರಿಧಿ ತೀರ ಸಂಕುಚಿತವಾಗಿರುವುದು. ಎಂತಲೆ ಇಂದಿನ ಹೊಸ ಹೊಸ ಸಂಶೋಧನ, ಪ್ರಯೋಗಗಳಿಂದ ಕಂಡುಹಿಡಿದ ಸತ್ಯದ ತಳಹದಿಯ ಮೇಲೆ ನಿರ್ಮಾಣವಾಗುತ್ತಿರುವ ಸಾಹಿತ್ಯವು ಅವರಿಗೆ ವಿದೇಶೀಯವೆನಿಸುವುದು. ವಿಶ್ವಭಾಂಧವ್ಯದ ಮಾತು ಅವರಿಗೆ ಹುಚ್ಚುತನದ್ದಾಗಿ ಕಾಣುವುದು. ಮತ ಧರ್ಮಗಳ ಸಮನ್ವಯವು ಅವರ ಮನಸ್ಸನ್ನೇ ಮುಟ್ಟಲಾರದು. ವಿಜ್ಞಾನವು ಕಂಡುಹಿಡಿದ ಅನೇಕ ಸತ್ಯಗಳನ್ನವರು ಒಪ್ಪುವುದಕ್ಕೆ ಸಿದ್ಧರಾಗರು. ಅವರ ಆದರ್ಶ ಸಾಹಿತ್ಯವೆಂದರೆ ಅವರು ಓದಿದ ಹಳೆಯ ಕಾವ್ಯಗಳು, ಪುರಾಣಗಳು. ಇಂದಿನ ಕಾದಂಬರಿ ಸಣ್ಣ ಕತೆಗಳಲ್ಲಿಯ ಪಾತ್ರಪರಿಪುಷ್ಟಿಯೂ, ಮಾನವನ ಮನಸ್ಸಿನ ಹೋರಾಟ-ಹೋರಾಟದ ಸೂಕ್ಷ್ಮತೆಗಳೂ ಅವರಿಗೆ ಸಹಜಾ ಅರಣ್ಯ. ಇಂದಿನ ಕವನ-ಭಾವಗೀತಗಳು ಅವರ ಜುಗುಪ್ಸೆಗೆ ಪಾತ್ರವಾಗಿವೆ. ಲೋಕದ ಅಶಕ್ತತೆಯ ವಾಸ್ತವಚಿತ್ರವನ್ನು ತೋರಿಸಿದರೆ 'ಇದೇನು ಅಶ್ಲೀಲ ಸಾಹಿತ್ಯ! ತುಚ್ಛ ಶೃಂಗಾರ!!" ಎಂದು ಗುಲ್ಲೆಬ್ಬಿಸುವರು. ಸರ್ವಪುಸ್ತಕಗಳ ಭಾಷಾಶೈಲಿಯನ್ನು ಬಿಟ್ಟರೆ ಇನ್ನೊಂದು ಭಾಷಾಶೈಲಿ ಇವರ ಕಿವಿಗೆ ಒಗ್ಗುವುದೇ ಇಲ್ಲ. ಹಾಗೆ ಇದರ ಭಾಷಾಶೈಲಿ ಇವರ ನಿರೀಕ್ಷೆಯಲ್ಲಿ 'ಅಶುದ್ಧ' ಎಂದೋ 'ವಿಲಕ್ಷಣ' 'ವಿಚಿತ್ರ' 'ಕ್ಲಿಷ್ಟ' ಎಂದೋ ಪದವಿಯನ್ನು ಪಡೆಯುತ್ತದೆ. ಇಂದಿನ ಕಾಲದಲ್ಲಿ ರೂಢವಾದ ವೃತ್ತಗಳಲ್ಲಿ ಯಾವ ವಿಷಯವನ್ನು ಹಾಡಿದರೂ ಇವರಿಗದು ಕವಿತೆ, ಹಾಗೆ ಇರದುದು ಎಂತೆಂತಹ ಭಾವ ರಾಗ-ಚಿತ್ರಕತೆಗಳಿಂದ ಕೂಡಿದರೂ ಕವಿತೆಯಲ್ಲ. ಕೂಪ-ಮಂಡೂಕದಂತಹದು ಇವರ ಬುದ್ಧಿ, ತಮಗೆ ಗೊತ್ತಿದ್ದುದನ್ನಲ್ಲದೆ ಇನ್ನೊಂದರ ಅಸ್ತಿತ್ವವನ್ನು ಒಪ್ಪಲಿಕ್ಕೇ ಇವರು ಸಿದ್ಧರಾಗರು.

ಇನ್ನು ಇಂಗ್ಲಿಷ್ ಕಲಿತ ಕನ್ನಡಿಗರ ವಿಷಯ. ಮೊನ್ನೆ ಮೊನ್ನೆಯ ವರೆಗೂ ಇವರು ಕನ್ನಡ ಭಾಷೆಯತ್ತ ಕಣ್ಣುಬಿಟ್ಟು ನೋಡುತ್ತಿರಲೇ ಇಲ್ಲ. ಸ್ವದೇಶಾಭಿಮಾನದ ಗಾಳಿಬೀಸಿ ಅನೇಕರನ್ನು ಎಚ್ಚರಿಸಿ, ಅವರ ಕಣ್ಣೆದುರು ಕನ್ನಡವನ್ನು ಉನ್ನತಿಯ ಪಟ್ಟಕ್ಕೆ ಏರಿಸಬೇಕೆಂದು ಬಾಯಿಂದ ಮಾತನಾಡತೊಡಗಿದ್ದಾರಲ್ಲದೆ ತಮಗೆ ಓದಬೇಕೆಂದು ಎಣಿಸಿದಾಗ ಇಂಗ್ಲಿಷ್ ಗ್ರಂಥಗಳನ್ನೇ ಓದುವರು. ತಮ್ಮ ಪ್ರಾಚೀನ ಸಾಹಿತ್ಯ, ಇತಿಹಾಸ, ಕಲೆ ಸಂಸ್ಕೃತಿಗಳ ಪರಿಚಯ ಇವರಿಗೆ ಬೇಕಾಗಿಯೇ ಇಲ್ಲ. ಒಮ್ಮೆಲೆ ಇವರಿಗೆ ಕನ್ನಡ ಷೆಲ್ಲಿ-ಕನ್ನಡ ಕೀಟ್ಸ್-ಕನ್ನಡ ಬ್ರಾವುನಿಂಗ್ ಕನ್ನಡ ಬೈರನ್ನರೆ ಹುಟ್ಟಿ ಬಂದು ಇವರಿಗೆ ಕವಿತೆ ಓದಿ ಹಾಡಿಸಿಕೊಡಬೇಕು. ಷೇಕ್ಸ್ಪಿಯರ್, ಇಬ್ಸೇನ್, ಬರ್ನಾರ್ಡ್ ಶಾ ಇವರಂತಹ ನಾಟಕಕಾರರೇ ಕನ್ನಡದಲ್ಲಿ ಜನಿಸಬೇಕು. ಕನ್ನಡ ಇಮರ್ಸನ್, ಬರ್ಟ್ರಾಂಡ್ ರಸಲ್ಲರು ಹುಟ್ಟಿದಾಗಲೇ ಇವರು ಕನ್ನಡ ಪುಸ್ತಕ-ಪತ್ರಿಕೆಗಳನ್ನು ಕೊಂಡು ಓದುವವರು. ಕನ್ನಡವನ್ನು ಓದುವ ಜನರು ಎಷ್ಟು ಎಂಬ ಲೆಕ್ಕ ಇವರಿಗಿದ್ದರೂ ನಮ್ಮ ಮಾಸಪತ್ರಿಕೆಗಳು "ಮಾಡರ್ನ್ ರಿವ್ಯೂ" ಗಳಾಗಿಯೆ ಇವರ ಕೈಗೆ ದೊರೆಯಬೇಕಂತೆ. ದೈನಿಕ ಪತ್ರಿಕೆಗಳು 'ಲಂಡನ್ ಟೈಮ್ಸ್" ಗಳಷ್ಟು ವಿಷಯ ವೈವಿಧ್ಯದಿಂದ ಕೂಡಿಕೊಂಡಿರಬೇಕಂತೆ. ಹಾಗೆ ಇಲ್ಲದ ಪತ್ರಿಕೆಗಳನ್ನು ಕೈಯಲ್ಲಿ ಹಿಡಿಯುವುದೆಂದರೆಯೆ ಇವರಿಗೆ ನಾಚಿಕೆ. ಕನ್ನಡ ಸಾಹಿತ್ಯವೆಲ್ಲವು ಮಟ್ಟವಾಗಿ ಮೇಲೇರಿ ಹೋಗಬೇಕಾಗಿದೆಯೆಂಬ ತಿಳುವಳಿಕೆಯ ತಾಳ್ಮೆಯನ್ನು ತಳೆಯಲಿಕ್ಕೆ ನಮ್ಮ ಇಂಗ್ಲಿಷ್ ಪೂಜಾರಿಗಳು ಸಿದ್ಧರಾಗರು.

ಇಂತಹ ಸ್ಥಿತಿಯಲ್ಲಿ ಪತ್ರಿಕೆಗಳ ಸಂಪಾದಕರು ಏನು ಮಾಡಬೇಕು? ಒಂದೊಂದಾಗಿ ಹೆಜ್ಜೆಯಿಡುತ್ತ ಸಾಗಿದರೆ ಕನ್ನಡ ಸಾಹಿತ್ಯವೂ ಪತ್ರಿಕೆಗಳೂ ಆದರ್ಶಸ್ಥಾನದಲ್ಲಿ ಹೋಗಿ ನಿಲ್ಲಬಲ್ಲವೆಂಬ ನಂಬುಗೆಯಿಂದಲೆ ಹಲವು ಜನ ಸಂಪಾದಕರು ಈಗ ಕಾರ್ಯೋನ್ಮುಖರಾಗಿರಬಹುದು. ಆದರೆ ಬಹುಜನ ಸಮಾಜವನ್ನು ಗುರಿಯಿಟ್ಟು ಅವರು ತಮ್ಮ ಕಾರ್ಯಕ್ಕೆ ತೊಡಗಿದರೆ, ಇಂಗ್ಲಿಷ್ ಶಿಕ್ಷಣವನ್ನು ಪಡೆದ ಸಿರಿವಂತರ ವರ್ಗಕ್ಕದು ಬೇಡವಾಗುವುದು. ಸಿರಿವಂತರ ಸಮಾನ ಭೂತಿಯನ್ನಪೇಕ್ಷಿಸಿ ಅವರ ಮೆಚ್ಚಿಕೆಯನ್ನು ಪಡೆಯುವ ಹಾದಿಯನ್ನು ಹಿಡಿದರೆ ಜನಸಾಮಾನ್ಯರು ಅಂತಹ ಪತ್ರಿಕೆಯಿಂದ ದೂರವಾಗಿ ಬಿಡುವರು. ಇಷ್ಟೇ ಅಲ್ಲ, ಸಮಾಜ ಶಿಕ್ಷಣವೇ ಕರ್ತವ್ಯವಾಗಿ ಇರುವ ಪತ್ರಿಕೆಗಳು ತಮ್ಮ ಕರ್ತವ್ಯದಲ್ಲಿ ಚ್ಯುತಿಯನ್ನು ತಂದುಕೊಳ್ಳಬೇಕಾಗುವುದು. ಪರಿಸ್ಥಿತಿ ಹೀಗೆ ಇರುವುದರಿಂದ ಇಬ್ಬರಿಂದಲೂ ಸಹಾಯ ಸಹಾನುಭೂತಿಗಳನ್ನು ಪಡೆಯುವುದು ನಮ್ಮ ಪತ್ರಿಕೆಗಳಿಗೆ ಅಸಂಭ್ಯ ವಿಷಯವಾಗಿ ಕುಳಿತಿದೆ.

(ಜಯಂತಿ)

THE
BOMBAY LIFE ASSURANCE
Company Limited.
[ESTD 1908]

COMPARE
Your Life Assurance with any other property you possess what is its guarranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age
If you die, it provides your family with enough income for their maintenance and the education of your children

"BOMBAY LIFE" offers all that is best in Life Assurance.

1938 Record

Completed Business	Rs	1,44,91,000
Life Assurance Fund	Rs	1 17 69,748
Total Assets	Rs	1,31,28,998

To insure or to represent it pays you to consult
KOCHIKAR BROTHERS LTD.,
MADRAS BRANCH SECRETARIES
BOMBAY LIFE BUILDING
Sir Lalubhai Samaldas Road
GANDHI NAGAR UDIPI

Post Box No 337 Mount Road MADRAS	Visweswarapuram Circl BANGALORE CITY	Charni Road Girgaum BOMBAY No 4
Car Street MANGALORE	CALICUT Puthiyara	Central Station Road TRIVANDRUM

THE
VIJAYA BANK LTD.,
MANGALORE.
ದಿ ವಿಜಯಾ ಬೇಂಕ್ ಲಿಮಿಟೆಡ್,
ಮಂಗಳೂರು.

ಸ್ವಜಾತಿ ಗೃಹಸ್ಥರಲ್ಲಿ ವಿನಂತಿ

ಈ ಬೇಂಕು 1931 ನೇ ಇಸವಿಯಲ್ಲಿ ಬಂಟರ ಯಾನೆ ನಾಡವ ಸಮಾಜದ ಕೆಲವು ಮಂದಿ ಮುಖಂಡರ ಪ್ರಯತ್ನದಿಂದ ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟು, ಈಗ ಅದರ ಶಾಖೆಗಳ, ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳದಲ್ಲಿ ತೆರೆಯಲ್ಪಟ್ಟವೆ. ಬೇಂಕು ದಿನೇ ದಿನೇ ಸ್ಥಿರವಾದ ಅಭಿವೃದ್ಧಿ ಹೊಂದಿ ಜನವಿಶ್ವಾಸಕ್ಕೆ ಪಾತ್ರವಾಗಿದೆ. ಸದ್ರಿ ಬೇಂಕಿನ ಪಾಲುದಾರರಿಗೆ ಹೋದ ವರ್ಷ ಶೇಕಡಾ 7 ರಷ್ಟು ಡಿವಿಡೆಂಡ್ ಹಂಚಲ್ಪಟ್ಟದೆ.

ಬೇಂಕಿನ ಕಾರ್ಯಕ್ಷೇತ್ರವನ್ನು ಇನ್ನಷ್ಟು ವ್ಯಾಪನಗೊಳಿಸಿ ಅದನ್ನು ಹೆಚ್ಚಿಚ್ಚಾಗಿ ಜನತೆಗೆ, ವಿಶೇಷವಾಗಿ ಕೃಷಿಕರಿಗೆ ಉಪಯೋಗಕರವಾಗುವಂತೆ ಮಾಡಬೇಕೆಂದು ನಮ್ಮೆಲ್ಲರ ಪ್ರಾಮುಖ್ಯ ಉದ್ದೇಶವಾಗಿರುತ್ತದೆ. ಆದಕಾರಣ ಅದರ ಪಾಲುಗಳನ್ನು ಬಂಟರ ಯಾನೆ ನಾಡವ ಸಮಾಜದ ಗೃಹಸ್ಥರು, ಇನ್ನೂ ಹೆಚ್ಚಾಗಿ ಪಡೆದು ಪ್ರೋತ್ಸಾಹಿಸಿಯುವುದು ಅಗತ್ಯವಾಗಿದೆ. ಬೇಂಕಿನ ಸೆಕ್ರೆಟರಿಗಳಾಗಿದ್ದ ಶ್ರೀ ಎ ಗೋಪಾಲಕೃಷ್ಣ ಶೆಟ್ರು 4 ತಿಂಗಳ ಮಟ್ಟಿಗೆ ಪಾಲುಗಳನ್ನು ಹೊಸತಾಗಿ ಸಂಗ್ರಹಿಸುವ ಕೆಲಸಕ್ಕೇನೇ ನಿಯುಕ್ತರಾಗಿದ್ದಾರೆ. ಅವರು ತನ್ನ ಕೆಲಸವನ್ನು ಇಷ್ಟರಲ್ಲೇ ಆರಂಭಿಸಿ ಕೆಲವು ಕಡೆಗಳಲ್ಲಿ ಸಂಚರಿಸಿ, ಉದಾರ ಪ್ರೋತ್ಸಾಹ ಪಡೆದಿರುತ್ತಾರೆ. ಜಿಲ್ಲೆಯ ಉಳಿದ ಭಾಗಗಳಲ್ಲಿಯೂ ಜಿಲ್ಲೆಯ ಹೊರಗೂ ಅವರು ಸಂಚರಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಆದುದರಿಂದ ಸ್ವಜಾತಿ ಗೃಹಸ್ಥರೆಲ್ಲರೂ ಸಮಾಜದ ಒಂದೇ ಒಂದು ಬೇಂಕಿಂಗ್ ಸಂಸ್ಥೆಯಾದ ವಿಜಯಾಬೇಂಕಿನ ಪಾಲುಗಳನ್ನು ಹೆಚ್ಚುಚ್ಚಾಗಿ ತೆಗೆದುಕೊಂಡು ಉದಾರಾಶ್ರಯವಿತ್ತು ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ

Mangalore, 26 1-'40

(*Signed by*) **B Manjaya Hegde,**
Chairman of the Board of Directors

Degrees Books Medicines

Free H M S H M B H M D etc Free Homeo Ayur Unani Naturo degrees by post also—Practioners also get soons Homeo Materiamedica Rs 5 Homeo Practice book Rs 1 Insanity Cure Pills Rs 10 Enclose 2 annas stamp —

Principal Indian Homeopathic Institute and Society (Govt Regd)
P O MAHUVA (Kathiawar Dt India

NAVAYUGA
Advertisement Tariff

1 Page	Rs 25/	per insertion	
½ „	Rs 15/	„	„
¼ „	Rs 8/	„	„
⅛ „	Rs 5/	„	„

Per Single inch col Re 1 ,
Contract rates on application
Manager-**Navayuga UDIPI**

ನಿರಕ್ಷತೆಯೊಡನೆ ಹೋರಾಟ! ಇರುವ ತೊಂದರೆಗಳೂ ನಿವಾರಣೋಪಾಯಗಳೂ

(ಲೇಖಕರು:- ಶ್ರೀ. ಶ್ರೀಪ್ರಕಾಶ, ಎಂ. ಎಲ್. ಎ., ಕೇಂದ್ರ.)

ಜಗತ್ತಿನಲ್ಲಿ ಸುಧಾರಣೆ ಎಂದರೆ ಬಹಳ ಕಷ್ಟದ ಕೆಲಸ. ಯಾವುದಾದರೂ ಒಂದು ಸುಧಾರಣೆಯಾಯಿತೆಂದರೆ, ಹೊಸದೊಂದು ಸಮಸ್ಯೆಯು ಮುಂದೆ ಬರುವುದು. ಒಂದು ವಿಷಯದಲ್ಲಿ ಸುಧಾರಣೆಮಾಡುತ್ತಿರುವಾಗಲೇ, ನಮಗೆ ಇತರ ವಿಚಾರಗಳ ಸುಧಾರಣೆಯೂ ಗಮನಕ್ಕೆ ಬರುತ್ತಿರುವುದು. ಶಿಕ್ಷಣದ ವಿಚಾರವೂ ಹೀಗೆ. ನಮ್ಮ ನಾಡಿನಲ್ಲಿ ನೆಲೆಸಿರುವ ನಿರಕ್ಷತೆಯನ್ನು ನಿರ್ಮೂಲನಮಾಡಲು, ದೇಶವು ಸೊಂಟ ಕಟ್ಟಿ ನಿಂತಿದೆ. ಅನಕ್ಷರಸ್ಥನಾದ ಒಂದು ವ್ಯಕ್ತಿಯೂ ದೇಶದಲ್ಲಿರಲೇಕೂಡದು ಎಂಬುವಂತೆ ಮಾಡಲು ಪ್ರಯತ್ನ ನಡೆಯುತ್ತಿದೆ. ಒಬ್ಬ ಅನಕ್ಷರಸ್ಥನನ್ನಾದರೂ, ಶಿಕ್ಷಿತರು ಅಕ್ಷರಸ್ಥನನ್ನಾಗಿಮಾಡುವಂತೆ ಯತ್ನ ನಡೆದಿದೆ. ಮೊದಲನೆ ಅನಕ್ಷರಸ್ಥನು, ಅಕ್ಷರಸ್ಥನಾದರೆ, ಅವನು ತನ್ನ ಬಂಧುವಿಗೊಬ್ಬನಿಗೆ ಅಕ್ಷರವನ್ನು ಕಲಿಸುವಂತೆ ಪ್ರತಿಜ್ಞೆಮಾಡುವನು. ಈ ರೀತಿ ಸಾಕ್ಷರತಾಂದೋಳನಕ್ಕೆ ಸಹಾಯದೊರೆಯುತ್ತಿವೆ.

'ನಮ್ಮಲ್ಲಿ ಪ್ರತಿಯೊಬ್ಬರೂ ಒಂದೇ ಒಂದು ಕಾಸನ್ನು ಕೊಟ್ಟರೂ, ನಾವು ನಡೆಯಿಸಬೇಕೆಂಬುವ ಸಂಸ್ಥೆಗೆ ಆರ್ಥಿಕ ತೊಂದರೆಯುಂಟಾಗುವುದಿಲ್ಲ.' ಈ ರೀತಿ ಜನರು ಹೇಳುವುದನ್ನು ಕೇಳಿದ್ದೇನೆ. ಆದರೆ ಪೈಯೇನೋ ಕೆಲವರಿಂದ ವಸೂಲಾಗುವುದು. ಆದರೆ ಕೆಲವು ಕಾಲದ ನಂತರ ಅದು ನಿಂತೇಹೋಗುವುದು. ನಮ್ಮ ನಿರಕ್ಷತಾ ನಿವಾರಣೆಯ ಆಂದೋಳನವೂ ಇದೇ ರೀತಿ ಆದೀತೇನೋ ಎಂಬ ಹೆದರಿಕೆ ಇದೆ ನನಗೆ. ನಮ್ಮಲ್ಲಿ ಯಾವುದನ್ನೂ ಕೊನೆವರೆಗೆ ಮಾಡುವ ಪ್ರವೃತ್ತಿ ಇಲ್ಲ. ಯಾವ ಕೆಲಸದಲ್ಲೇ ಆಗಲಿ ಆರಂಭಶೂರತ್ವ ಒಂದೇ ನಮ್ಮಲ್ಲಿರುವುದು.

ನಮ್ಮ ಮಾರ್ಗದಲ್ಲಿ ಅನೇಕ ಅಡ್ಡಿಗಳಿರುವುವು. ಬಡತನದಿಂದ ಜನರಿಗೆ ಹೊಟ್ಟೆ ತುಂಬಿಸಿಕೊಳ್ಳುವ ಚಿಂತೆಯೇ ಅಧಿಕವಾಗಿರುವುದರಿಂದ ಅವರಿಗೆ ಅಭಿವೃದ್ಧಿ ಮತ್ತು ಪ್ರಗತಿಯ ಯಾವ ವಿಚಾರವೂ ರುಚಿಸುವುದಿಲ್ಲ. ಅವರಿಗೆ ದೊರೆಯುವ ಅಲ್ಪಸ್ವಲ್ಪ ಸಮಯವನ್ನೂ ಅವರಸೇ ಆದ ವಿಶಿಷ್ಟರೀತಿಯ ಆಮೋದ ಪ್ರಮೋದಗಳಲ್ಲಿ ಕಳೆಯುವರು. ಪಟ್ಟಣಗಳ ಮಾತಿರಲಿ, ಹಳ್ಳಿಗಳಲ್ಲಿ ಶಿಕ್ಷಣದ ಅವಶ್ಯಕತೆಯನ್ನೂ ತಿಳಿದುಕೊಳ್ಳುವುದಕ್ಕೆ ಸಹ ಜನರು ಸಿದ್ಧರಾಗಿಲ್ಲ.

ಕಿವಿಗಿಂತಲೂ ನಾವು ಕಣ್ಣುಗಳಿಂದಲೇ ಹೆಚ್ಚು ಕೆಲಸ ಮಾಡುತ್ತೇವೆ. ಏಕೆಂದರೆ ಪ್ರತಿ ದಿನವೂ ಲಕ್ಷಾಂತರ ಟನ್ ಕಾಗದವು ಅಚ್ಚಾಗಿ ಜಗತ್ತಿನಲ್ಲಿ ಜ್ಞಾನ ವೃದ್ಧಿಯನ್ನುಂಟುಮಾಡುತ್ತಿದೆ. ಶಿಕ್ಷಣ ಪ್ರಚಾರವು ಹೇಗೆ ಯಶಸ್ವಿಯಾಗುವುದು ಎಂಬ ವಿಚಾರವು ಕೇವಲ ಕಾಂಗ್ರೆಸ್ಸಿನವರಿಗೆ ಮಾತ್ರ ಸೇರಿದ್ದಲ್ಲ. ನಾವಂತೂ ಪರಿಸ್ಥಿತಿಯನ್ನು ಉಂಟುಮಾಡಿರುವೆವು. ಅಲ್ಲದೆ ಇದರಿಂದ ಎಷ್ಟು ಲಾಭವನ್ನು ಹೊಂದಲು ಸಾಧ್ಯವೋ ಹೊಂದಲೆತ್ನಿಸುವೆವು.

ಶಿಕ್ಷಿತರಲ್ಲಿ ನಿರುದ್ಯೋಗವು ಹರಡಿರುವುದಲ್ಲ ಎಂದು ಕೆಲವರು ಆಕ್ಷೇಪಿಸುವರು. ಶಾಲಾ ಕಾಲೇಜುಗಳಿಂದ ಹೊರಬೀಳುವ ತರುಣರಿಗೆ ಯಾವ ಕೆಲಸವನ್ನು ಮಾಡುವುದಕ್ಕೂ ಶಕ್ತಿ ಇರುವುದಿಲ್ಲ ಎಂದು ಅವರವಾದ. ಈ ಯುವಕರ ನಿರುದ್ಯೋಗದ ಕಾರಣದಿಂದ, ಶಿಕ್ಷಣವನ್ನೇ ದೂಷಿಸುವರು. ಆದರೆ ದೂಷಿಸಲ್ಪಡಬೇಕಾದುದು ಶಿಕ್ಷಾ ಪ್ರಣಾಲಿಯೇ ಹೊರತು ಶಿಕ್ಷಣವಲ್ಲ. ಅವರು ವಿದ್ಯಾವಂತರಾಗಿರುವುದರಿಂದಲೇ ತಮ್ಮ ನಿರುದ್ಯೋಗದ ಕಾರಣವನ್ನು ತಿಳಿಯಲು ಶಕ್ತರಾಗಿರುವುದು. ಶಿಕ್ಷಿತರಲ್ಲದೆ ಹೋಗಿದ್ದರೆ, ಮನೆಯಲ್ಲಿ ಮಂಕರಂತೆ ಕುಳಿತು, ಅವರ ನಿರುದ್ಯೋಗದ ಕಾರಣವೇ ತಿಳಿಯುವಂತಿರಲಿಲ್ಲ. ಶಿಕ್ಷಣವೆಂದರೆ ನೌಕರಿಯೆಂದಲ್ಲ. ಓದಿದವರೆಲ್ಲರಿಗೂ ನೌಕರಿಗಳನ್ನು ಒದಗಿಸುವುದು ಅಸಂಭವ. ನೌಕರಿಯೇ ತನ್ನ ಸರ್ವಸ್ವವೆಂದು ತಿಳಿದವರನ್ನು ಬಿಟ್ಟು ಯಾವ ಶಿಕ್ಷಿತ ಯುವಕನೂ ಸುಮ್ಮನೆ ಕುಳಿತಿರುವುದಿಲ್ಲ. ಜೀವಿತವನ್ನು ಗಳಿಸಲು ಜಗತ್ತಿನಲ್ಲಿ ಎಷ್ಟೋ ರೀತಿಯ ಸಾಧನೆಗಳಿವೆ.

ನಿರಕ್ಷರತಾ ನಿವಾರಣೆಯ ಆಂದೋಲನದ ಮೂಲಕ ನಾವು ಮಕ್ಕಳಿಗಲ್ಲ ಶಿಕ್ಷಣ ಕೊಡುತ್ತಿರುವುದು. ದೊಡ್ಡವರಿಗೆ. ಮಕ್ಕಳಿಗೆ ಹೇಳಿಕೊಡುವಂತೆ ಪ್ರೌಢರಿಗೆ ಬಾಲಬೋಧೆಗಳನ್ನುಪಯೋಗಿಸಬಾರದು. ಏಕೆಂದರೆ ದೊಡ್ಡವರು ತಮ್ಮ ಉಪಾಧ್ಯಾಯರಿಗಿಂತಲೂ ಎಷ್ಟೋ ವಿಷಯಗಳನ್ನು ಹೆಚ್ಚಾಗಿ ತಿಳಿದಿರುವರು. ಆದುದರಿಂದ ಅವರಿಗೆ ನಿತ್ಯ ಜೀವನದ ವ್ಯವಹಾರಗಳಲ್ಲಿ ಉಪಯೋಗಕ್ಕೆ ಬರುವಂತಹ ವಿಷಯಗಳನ್ನೊಳಗೊಂಡ ಪುಸ್ತಕಗಳನ್ನೇ ಬೋಧಿಸಬೇಕು.

ಹಳ್ಳಿಗಳ ನಿರಕ್ಷರ ವ್ಯಕ್ತಿಗಳ ಮತ್ತು ನಗರಗಳ ವಯಸ್ಕರ ಶಿಕ್ಷಣದಲ್ಲಿ ಅವರಿಗೆ ಓದಲು ಯೋಗ್ಯವಾದ ಸಮಯವಾವುದೆಂಬುದನ್ನೂ ಗಮನಿಸಬೇಕು. ಹಗಲೆಲ್ಲ ಅವರಿಗೆ ಜೀವಿತಾರ್ಜನದಲ್ಲೇ ಇರಬೇಕಾದುದರಿಂದ, ರಾತ್ರಿಯಲ್ಲೇ ಅವರಿಗೆ ಕಲಿಸಬೇಕು ನಿರಕ್ಷರತೆಯ ನಿವಾರಣೆಯೆಂದರೆ, ತಮ್ಮ ಜೀವನ ಮಾರ್ಗವನ್ನು ಬಿಟ್ಟು ಅಕ್ಷರಸ್ಥರಾಗಬೇಕೆಂದಲ್ಲ.

ಯಾರಾದರೂ ಅನಕ್ಷರಸ್ಥರಿಗೆ ಅಕ್ಷರ ಜ್ಞಾನವಾಯಿತೆಂದರೆ, ಅವನಿಗೆ ಓದುಬರಹದ ಶಕ್ತಿ ಬಂತೆಂದರೆ, ಅವನ ಮನಸ್ಸನ್ನು ಸಾಹಿತ್ಯದ ಕಡೆಗೆ ತಿರುಗಿಸಬೇಕು. ನಂತರ ಅವನೇ ಅಧಿಕ ಪುಸ್ತಕಗಳನ್ನು ಓದುವನು. ಇದರಿಂದ ಅವನ ಸಂಸ್ಕಾರವು ಸುಧಾರಿಸಲ್ಪಡುವುದು. ನಂತರ ಇತರರೊಡನೆ ಯಾವ ರೀತಿ ಕಳೆಯಬೇಕು? ಹೇಗೆ ವ್ಯವಹರಿಸಬೇಕು? ಅವರ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು? ತಮ್ಮ ಸಂಪಾದನೆಯನ್ನು ಯಾವ ರೀತಿ ಹೆಚ್ಚಿಸಿಕೊಳ್ಳಬೇಕು? ಇವುಗಳನ್ನು ತಿಳಿಸಬೇಕು. ಅಲ್ಲದೆ ಸಮಾಜವು ಅವರ ಉನ್ನತಿಗಾಗಿ ಎಷ್ಟು ಯತ್ನ ಮಾಡಿರುವಾಗ, ಅವರು ಅದಕ್ಕೆ ಬದಲಾಗಿ ಮಾಡಬೇಕಾದ ಪ್ರತ್ಯುಪಕಾರವೇನು? ಎಂಬುದನ್ನು ತಿಳಿಸಿ ಇತರರ ಉನ್ನತಿಗಾಗಿ ಯತ್ನಿಸುವುದೇ ಅವರ ಕರ್ತವ್ಯವೆಂಬುದನ್ನು ಕಲಿಸಬೇಕು.

ನಮ್ಮ ದೇಶದವರು ಅಶಿಕ್ಷಿತರೆಂಬುದನ್ನು ನಾನು ಒಪ್ಪುವುದಿಲ್ಲ. ಯಾಕೆಂದರೆ ಕೆಸರಿನಲ್ಲಿ ಗೋಧಿಯನ್ನು ಬೆಳೆಯಬಲ್ಲವನು ಅಶಿಕ್ಷಿತನು ಹೇಗೆ ತಾನೆ ಆಗುವನು? ನಮ್ಮ ಶಿಕ್ಷಿತರೆಂದೆನಿಸಿಕೊಳ್ಳುವವರಿಂದ ನಾವು ಈ ಕೆಲಸವಾಗುವ ನಿರೀಕ್ಷಣೆ ಮಾಡಬಹುದೆ? ಹೇಳಿ. ಈಗಲೂ ನಮ್ಮಲ್ಲಿ 'ಕಿವಿ'ಗಳ ಮೂಲಕ ಕೇಳಿ ಕಲಿತುಕೊಳ್ಳುವವರು ಬಹಳ ಮಂದಿ ಇರುವರು. ಅವರಲ್ಲಿ ಅನೇಕರು 'ಬಹುಶ್ರುತ'ರಿರುವರು.

ಅಕ್ಷರಸ್ಥರಾಗುವುದಕ್ಕೆ ಬಹಳ ಸಮಯ ಹಿಡಿಯುವುದಲ್ಲದೆ ಹೆಚ್ಚು ಪರಿಶ್ರಮವೂ ಬೇಕಾಗುವುದು. ನಾವು ಇತರರಿಂದ ಕೇಳಿ ತಿಳಿದುಕೊಳ್ಳುವಷ್ಟನ್ನೂ, ಓದಿ ಕಲಿಯಲಾಗುವುದಿಲ್ಲ. ಪುಸ್ತಕಗಳನ್ನು ಓದುವುದರಿಂದ ನಮ್ಮ ಜ್ಞಾನ ವೃದ್ಧಿಯಾಗಲು ಸಹಾಯವೇನೋ ಆಗುವುದು. ಆದರೆ 'ಇದರಿಂದ ಮನುಷ್ಯನ ಬುದ್ಧಿಯು ಒಂದೇ ವಿಚಾರದ ಮೇಲೆ ಕೇಂದ್ರೀಕೃತವಾಗುವುದಲ್ಲದೆ ಪ್ರಕೃತಿಯ ಮೂಲಕ ಕಲಿಸಲ್ಪಡುವ ಇತರ ವಿಷಯಗಳ ಕಡೆಗೆ ಹೋಗುವುದಿಲ್ಲ. ನಾವು ಓದು ಬರಹ ಬಲ್ಲವರಾಗುವುದರ ಜೊತೆಗೆ 'ಬಹುಶ್ರುತ'ರೂ ಆಗುವುದಾದರೆ, ಅದರಿಂದ ನಮಗೆ ಬಹಳ ಲಾಭವಾಗುವುದು. ಆ ರೀತಿ ಆಗುವುದು ಯಾವಾಗ? ಸಾಕ್ಷರತಾ ಪ್ರಚಾರವು ಸರಿಯಾದ ರೀತಿಯಲ್ಲಿ ನಡೆದಾಗ ಮಾತ್ರ. ಕಾಂಗ್ರೆಸಿನ ಪ್ರಚಾರವೂ ಈ ರೀತಿಯದೇ ಆಗಬೇಕೆಂದು ನನ್ನ ಪ್ರಾರ್ಥನೆ. ಯಾವ ಸರಕಾರವೇ ಆಗಲಿ, ಅದು ಎಷ್ಟೇ ಲೋಕಪ್ರಿಯವಾಗಿರಲಿ, ಎಷ್ಟೇ ಶಕ್ತಿಶಾಲಿಯಾಗಿರಲಿ ಜನರಿಗೆ ಹೆಚ್ಚು ಲಾಭದಾಯಕವಾದ ಕೆಲಸವನ್ನು ತಾನೇ ಮಾಡಲಾರದು. ಅದಕ್ಕೆ ಜನತೆಯೂ ಸಹ ಯತ್ನಿಸಬೇಕು. ಜನತೆಯು ಆ ಕಾರ್ಯವನ್ನು ತಮ್ಮದೇ ಎಂದು ತಿಳಿದು, ಅದನ್ನು ಶ್ರದ್ಧೆಯಿಂದ ಮಾಡುವವರೆಗೂ, ಸರಕಾರದ ಮೂಲಕ ಆ ಕಾರ್ಯವು ಸಂಪೂರ್ಣವಾಗಿ ಆಗುವ ಸಂಭವವಿಲ್ಲ. ಜನತೆಯ ಸಹಯೋಗವು ನಮಗೆ ಪ್ರಾಪ್ತವಾಗುವುದೆಂದೂ, ಅದರ ಸಹಾಯದಿಂದ ನಿರಕ್ಷರತಾ ನಿವಾರಣೆಯ ಕಾರ್ಯವು ಸಫಲವಾಗುವುದೆಂದೂ ನನಗೆ ಸಂಪೂರ್ಣವಾದ ವಿಶ್ವಾಸವಿದೆ.

(ಅನುವಾದಕ:—S. L. ಸುಬ್ರಹ್ಮಣ್ಯಂ)

ನಮ್ಮ ಉಡುಪಿ

ಹೊಸ ಮಾದರಿಯ ಸಚಿತ್ರ ಪುಸ್ತಕ

ಎಲ್ಲೆಲ್ಲೂ ಪ್ರಸಿದ್ಧಿ ಪಡೆದಿರುವ ಉಡುಪಿಯ ಚರಿತ್ರೆಯನ್ನು ತಿಳಿಯಬೇಕೇ? ಹಾಗಿದ್ದರೆ ಶ್ರೀ ಕೊಂಡ್ಕಲ್ಲರು ಹೊಸ ದೃಷ್ಟಿಯಿಂದ ಬರೆದ 'ನಮ್ಮ ಉಡುಪಿ' ಯನ್ನು ಓದಿರಿ.

ಉಡುಪಿ ಕ್ಷೇತ್ರಕ್ಕೆ ಯಾತ್ರಾ ದೃಷ್ಟಿಯಿಂದಾಗಲೀ, ಐತಿಹಾಸಿಕ ಮಹತ್ವದ ದೃಷ್ಟಿಯಿಂದಾಗಲೀ, ಸಂದರ್ಶನಾರ್ಥವಾಗಿ ಬಂದವರೂ, ಬರುವವರೂ, ಮೊದಲಾಗಿ ತಿಳಿದುಕೊಳ್ಳಬೇಕಾದುದು ಈ ಕ್ಷೇತ್ರದ ಹಿಂದಿನ ಮತ್ತು ಇಂದಿನ ಸಚಿತ್ರ ವಿವರ, ಸಮಾಜ ಸೇವಕರಿಗೆ ಬೇಕಾದುದು ವೈಯಕ್ತಿಕ ಬೀವಜ್ಯೋತಿಗಳ ಜೀವನ ಚರಿತ್ರೆ. ಅವೆಲ್ಲವೂ ಈ ಪುಸ್ತಕದಲ್ಲಿದೆ.

ಬೆಲೆ: 0-5-0, ಟ. ಖರ್ಚು 0-1-0

(ಫೆಬ್ರವರಿ ಅಂತ್ಯದೊಳಗೆ 0-5-0 ಸ್ಟಾಂಪು ಕಳುಹಿಸುವವರಿಗೆ ಟಪ್ಪಾಲು ಖರ್ಚು ಮಾಫಿ.)

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಈ ಕೆಳಗಿನ ಪ್ರಕಾಶಕರಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಚರ್ಚ್‌ರೋಡು, ಉಡುಪಿ.

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	Rs. 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK
OF SUPPLY AGENCY LIMITED.

GET
Rich & Prosperous!

Here is an authorised simple means upheld and pursued by millions of persons with great advantage. This should lead you also to Riches and Prosperity. Ask for details-go through it carefully-take advantage of it and enjoyfull comforts, luxury, influence and all that go to make HAPPINESS complete.

K. S. ROW,
Worli, BOMBAY.

ಯುರೋಪಿನ ಕಲಹದ ಕಣ ಬಾಲ್ಟಿಕ್ ಪ್ರದೇಶ.

ಬಾಲ್ಟಿಕ್ ರಾಷ್ಟ್ರಗಳನ್ನೊಲಿಸಿಕೊಳ್ಳುವ ಪ್ರಯತ್ನ – ಇಟಲಿಯ ಸೂತ್ರಚಾಲನೆ – ಜರ್ಮನಿಯ ಒಳಸಂಚು – ರಶ್ಯದ ಎಚ್ಚರಿಕೆ - ಮಿತ್ರ ರಾಷ್ಟ್ರಗಳ ಲಂಚ.

ಬಾಲ್ಕನ್ ರಾಷ್ಟ್ರಗಳ ಪರಿಸ್ಥಿತಿ

ಯಾವಾಗಲೂ ಬಾಲ್ಕನ್ ಪ್ರದೇಶವು ಯುರೋಪಿನ ಕಲಹದ ಕಣವಾಗಿರುವುದು ಇಂದೀಗ ಜರ್ಮನ್ ಮತ್ತು ಮಿತ್ರರಾಷ್ಟ್ರಗಳ ಸೇನೆಗಳು ಸಿಗ್‌ಫ್ರಿಡ್ ಮತ್ತು ಮೆಗಿನಟ್ ಕೋಟೆಗಳ ಹಿಂದಿಯಲ್ಲಿ ನಿಂತು ಮೊದಲಾಗಿ ಯಾರು ಧಾಳಿನಡಿಸುವರೆಂದು ನಿರೀಕ್ಷಿಸುತ್ತಿವೆ. ಮಿತ್ರರಾಷ್ಟ್ರಗಳು ಥಕ್ಕನೆ ಜರ್ಮನಿಯ ಮೇಲೆ ಧಾಳಿ ನಡಿಸುವ ಸಂಭವ ತೋರುವುದಿಲ್ಲ. ಜರ್ಮನಿಯೂ ಆ ಉತ್ಸಾಹವನ್ನು ತಡೆಗಟ್ಟಿಕೊಂಡಂತೆ ತೋರುತ್ತದೆ. ಮಿತ್ರರಾಷ್ಟ್ರಗಳ ಕಠಿಣ ಮುತ್ತಿಗೆಯಿಂದಾಗಿ ಜರ್ಮನಿಯ ಸಮುದ್ರ ವ್ಯಾಪಾರವು ಸಂಪೂರ್ಣ ಬಂದಾಗಿಹೋಗಿದೆ. ಆದುದರಿಂದ ಅದು ಭೂಮಾರ್ಗ ಮೂಲಕವಾದ ವ್ಯಾಪಾರವನ್ನು ಬೆಳಿಸಬೇಕಾಗಿದೆ. ಆದುದರಿಂದಲೇ ಹಿಟ್ಲರರೀಗ ಬಾಲ್ಕನ್ ರಾಷ್ಟ್ರಗಳ ಕಡೆಗೆ ದೃಷ್ಟಿಹರಿಸಿರುತ್ತಾರೆ. ಬಾಲ್ಕನ್ ರಾಷ್ಟ್ರಗಳ ರಾಯಭಾರಿಗಳನ್ನೆಲ್ಲಾ ಕರೆದು ಆಲೋಚಿಸಿರುತ್ತಾರೆ. ಯುದ್ಧವು ಮುಂದುವರಿದಂತೆ ಜರ್ಮನಿಗೆ ಪೆಟ್ರೋಲ್ ಮೊದಲಾದ ಎಣ್ಣೆ ಮತ್ತು ಇತರ ಕಚ್ಚಾಮಾಲುಗಳು ಹೆಚ್ಚೆಚ್ಚಾಗಿ ಬೇಕಾಗುವುವು. ಯುದ್ಧವೇನೂ ಇಲ್ಲದಾಗ ಜರ್ಮನಿಗೆ ೮ ಮಿಲ್ಯ ಟನ್ನು ಪೆಟ್ರೋಲು ಬೇಕು. ಈ ಯುದ್ಧ ಕಾಲದಲ್ಲಿ ಕಡಿಮೆಯೆಂದರೆ 10 ಮಿಲ್ಯ ಟನ್ನಾದರೂ ಬೇಕು. ಇದರ ಮೂರನೇ ಒಂದು ಭಾಗದಷ್ಟನ್ನು ಮಾತ್ರ ಜರ್ಮನಿಯು ಒದಗಿಸಿಕೊಳ್ಳಬಲ್ಲುದು. ಉಳಿದುದನ್ನು ಅದು ಹೊರಗಣಿಂದ ಪಡೆದುಕೊಳ್ಳಬೇಕು. ಅದೀಗ ರುಮೇನಿಯದಲ್ಲಿ ಸಿಗುವ 8½ ಮಿಲ್ಯ ಟನ್ನು ಎಣ್ಣೆಯಲ್ಲಿ 1½ ಮಿಲ್ಯ ಟನ್ನು ಮಾತ್ರ ಪಡೆಕೊಳ್ಳುತ್ತಿದೆ. ಯುದ್ಧವು ಪ್ರಬಲವಾಗಿ ನಡೆದು ಪೆಟ್ರೋಲು ಅತ್ಯಗತ್ಯವಾಗುವಾಗ ಜರ್ಮನಿಯು ರುಮೇನಿಯದ ಮೇಲೆ ಬಲಾತ್ಕಾರವನ್ನಾದರೂ ಉಪಯೋಗಿಸಿ ಅದರ ಪೆಟ್ರೋಲನ್ನು ಪಡೆಯದಿರಲಾರದು. ಕಳೆದ ಮಹಾಯುದ್ಧದಲ್ಲಿ ಜರ್ಮನಿಯು ರುಮೇನಿಯದ ಮೇಲೆ ಧಾಳಿನಡಿಸಿ ಅಲ್ಲಿಯ ಪೆಟ್ರೋಲನ್ನೆಲ್ಲಾ ಪಡೆಕೊಂಡಿತು. ಇಲ್ಲವಾದರೆ ಕಳೆದ ಯುದ್ಧವು ಒಂದು ವರ್ಷ ಮೊದಲೇ ಕೊನೆಗೊಳ್ಳುತ್ತಿತ್ತು. ಈ ಸಲವೂ ಇಷ್ಟರಲ್ಲೇ ರುಮೇನಿಯವನ್ನದು ಒತ್ತಾಯಮಾಡಹತ್ತಿದೆ. ರುಮೇನಿಯವೂ ಸ್ವಲ್ಪ ಹೆಚ್ಚು ಪೆಟ್ರೋಲನ್ನು ಒದಗಿಸಲೊಪ್ಪಿರುವಂತಿದೆ. ಇದರಿಂದ ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ಸಂತಪ್ತವಾಗಿವೆ. ರುಮೇನಿಯದ ಸುರಕ್ಷಿತತೆಯ ಜವಾಬ್ದಾರಿಯನ್ನು ಮಿತ್ರ ರಾಷ್ಟ್ರಗಳ ಒಹಿಸಿವೆ. ಮತ್ತು ಹೇರಳ ಹಣವನ್ನು ಕೂಡಾ ಸಾಲವಾಗಿ ಕೊಟ್ಟಿವೆ. ಆದುದರಿಂದ ರುಮೇನಿಯವು ಮಿತ್ರ ರಾಷ್ಟ್ರಗಳನ್ನು ಸಮಾಧಾನಪಡಿಸಬೇಕು. ಯುಗೋಸ್ಲಾವಿಯದ ಖನಿಜ ಪದಾರ್ಥ, ಟರ್ಕಿಯ ಮಿಶ್ರ ಲೋಹ ಮತ್ತು ಹಂಗೇರಿಯ ಗೋಧಿಯನ್ನು ಹೆಚ್ಚಾಗಿ ಜರ್ಮನಿಯು ಪಡೆಯುತ್ತದೆ. ಬಾಲ್ಕನ್ ರಾಷ್ಟ್ರಗಳೊಡನೆ ತನ್ನ ವ್ಯಾಪಾರವನ್ನು ಮತ್ತಷ್ಟು ಬೆಳೆಸುವುದೇ ಜರ್ಮನಿಯ ಉದ್ದೇಶವಿರುತ್ತದೆ. ರುಮೇನಿಯವು ಶಾಂತಿಯಿಂದ ಎಣ್ಣೆಯನ್ನೀಯಲೊಪ್ಪದಿದ್ದರೆ ಬಲಾತ್ಕಾರಮಾಡಬೇಕಾಗುವುದೆಂದು ಆ ಸಿದ್ಧತೆಯನ್ನೂ ಜರ್ಮನಿಯು ಒಳಗಿಂದೊಳಗೆ ಮಾಡುತ್ತಾ ಬಂದಿದೆ. ಹಂಗೇರಿಯ ಮೂಲಕ ಜರ್ಮನ್ ಸೇನೆಯನ್ನು ಕಳುಹಿಸಲು ಸ್ಥಳ ಕೊಡಬೇಕೆಂದು ಹಂಗೇರಿಯನ್ನದು ಒತ್ತಾಯಪಡಿಸಿದೆ.

ಬಾಲ್ಟಿಕ್ ಪ್ರದೇಶಗಳನ್ನು ಜರ್ಮನಿಯು ರಶ್ಯಕ್ಕೆ ಬಿಟ್ಟುಕೊಟ್ಟು ಬಾಲ್ಕನ್ ಪ್ರದೇಶಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಲು ರಶ್ಯದ ಸಹಾಯವನ್ನು ಪಡೆಯುವ ಒಡಂಬಡಿಕೆ ಮಾಡಿಕೊಂಡಿರುವಂತಿದೆ. ರಶ್ಯ ಮತ್ತು ಜರ್ಮನಿಗಳೊಂದುಗೂಡಿ ಇಷ್ಟರಲ್ಲೇ ಬಾಲ್ಕನ್ ರಾಷ್ಟ್ರಗಳನ್ನು ಬಗ್ಗು ಬಡೆಯಲೆತ್ನಿಸುತ್ತಿದ್ದವು. ಆದರೆ ಫಿನ್ಲೆಂಡಿನ ಯುದ್ಧವು ದೀರ್ಘಕಾಲ ನಡೆದುದರಿಂದ ಸೋವಿಯೆಟ್ ರಶ್ಯವು ಸುಮ್ಮನಿರಬೇಕಾಗಿ ಬಂದಿದೆ. ಟರ್ಕಿಯ ಮೇಲೆ ಪ್ರಭಾವ ಬೆಳೆಸುವ ಅದರ ಪ್ರಯತ್ನವು ನಿಷ್ಫಲವಾಗಿದೆ.

ಮಿತ್ರ ರಾಷ್ಟ್ರಗಳು ಲಂಚವೆಂಬಂತೆ ಹೇರಳ ಹಣವನ್ನು ಸಾಲವಾಗಿ ಕೊಟ್ಟು ಟರ್ಕಿ, ರುಮೇನಿಯವೆ ಮೊದಲಾದ ಬಾಲ್ಕನ್ ರಾಷ್ಟ್ರಗಳನ್ನೊಲಿಸಿ ಕೊಂಡಿರುತ್ತವೆ. ಗ್ರೀಸ್ ದೇಶವು ಯಾವಾಗಲೂ ಇಂಗ್ಲೆಂಡಿನ ಬೆನ್ನು ಹಿಡಿದು ಹೋಗುವುದು. ರುಮೇನಿಯದ ಎಣ್ಣೆಯು ಜರ್ಮನಿಗೆ ದೊರೆಯದಂತೆ ಮಾಡಲು ಮಿತ್ರ ರಾಷ್ಟ್ರಗಳು ಬಹಳವಾಗಿ ಪ್ರಯತ್ನಿಸುತ್ತಿವೆ. ಬಾಲ್ಕನ್ ರಾಷ್ಟ್ರಗಳು ಹೆಚ್ಚಾಗಿ ಸಮುದ್ರ ವ್ಯಾಪಾರವನ್ನು ಬೆಳಸಿ ಜರ್ಮನಿಯೊಡನೆ ವ್ಯವಹಾರ ಕಡಿಮೆ ಮಾಡುವಂತೆ ನೋಡುವುದೇ ಮಿತ್ರ ರಾಷ್ಟ್ರಗಳ ಪ್ರಯತ್ನವಾಗಿದೆ.

ಇಟಲಿಯು ಬಾಲ್ಕನ್ ರಾಷ್ಟ್ರಗಳು ಯುದ್ಧಕ್ಕಿಳಿಯಲ್ಪಡದೆ ತಟಸ್ಥವಾಗಿ ಒಕ್ಕಟ್ಟಿನಿಂದಿರುವಂತೆ ಸೂತ್ರ ಚಾಲನೆ ನಡಿಸುತ್ತಿದೆ. ಬಾಲ್ಕನ್ ಪ್ರದೇಶದಲ್ಲಿ ತನ್ನ ಪ್ರಭಾವವೇ ಹೆಚ್ಚಾಗಿ ಸ್ಥಾಪಿತವಾಗಬೇಕೆಂದು ಇಟಲಿಯ ಆಕಾಂಕ್ಷೆ. ಬಾಲ್ಕನ್ ಪ್ರದೇಶದ ರಾಷ್ಟ್ರಗಳು ಪರಸ್ಪರ ಕಲಹ ಮಾಡಿಕೊಂಡು ರಶ್ಯ ಮತ್ತು ಜರ್ಮನಿಗಳ ಒಳಸಂಚಿಗೆ ಆಸ್ಪದ ಕೊಡದಂತೆ ಇಟಲಿಯು ಪ್ರಯತ್ನಿಸುತ್ತಿದೆ. ಆದುದರಿಂದಲೇ ಅದು ಹಂಗೇರಿಯೊಡನೆ ಮಾತುಕತೆ ನಡಿಸಿ, ರುಮೇನಿಯದಿಂದ ಟ್ರಾನ್ಸಿಲ್ವಾನಿಯವನ್ನು ಪ್ರಕೃತದಲ್ಲಿ ಕೇಳದಂತೆ ಸಮಜಾಯಿಸಿದೆ. ಬಲ್ಗೇರಿಯವು ರುಮೇನಿಯದಿಂದ ದಕ್ಷಿಣ ಡೊಬ್ರುಜವನ್ನು ಕೇಳದಂತೆ ಮಾಡಲು ಪ್ರಯತ್ನ ನಡೆಯುತ್ತಿದೆ

ಇದೇ ತಾ. 2ರಲ್ಲಿ ಯುಗೊಸ್ಲಾವಿಯದ ಮುಖ್ಯಪಟ್ಟಣವಾದ ಬೆಲ್‌ಗ್ರೇಡಿನಲ್ಲಿ ಟರ್ಕಿ, ರುಮೇನಿಯ ಯುಗೋಸ್ಲಾವಿಯ ಮತ್ತು ಗ್ರೀಸ್ ದೇಶಗಳ ವಿದೇಶಮಂತ್ರಿಗಳು ಸೇರಿ ಬಾಲ್ಕನ್ ರಾಷ್ಟ್ರಗಳು ಯುದ್ಧಕ್ಕೆ ಸೇರದೆ ತಟಸ್ಥವಾಗಿರುವಂತೆ ಮತ್ತು ಒಕ್ಕಟ್ಟಾಗಿ ನಡೆಯುವಂತೆ ಏನೆಲ್ಲ ಮಾಡಬೇಕೆಂಬ ಕುರಿತು ಆಲೋಚಿಸಿದರು. ಬಲ್ಗೇರಿಯ ಮತ್ತು ಹಂಗೇರಿಗಳೂ ಈ ಬಾಲ್ಕನ್ ಕೂಟದ ರಾಷ್ಟ್ರಗಳೊಂದಿಗೆ ಸಹಕರಿಸುವವು. ಈ ಪರಿಷತ್ತಿನ ಪರಿಣಾಮವಾಗಿ ಬಾಲ್ಕನ್ ಪ್ರದೇಶದ ರಾಷ್ಟ್ರಗಳು ಜರ್ಮನಿ ಮತ್ತು ರಶ್ಯದ ಬಲೆಗೆ ಬೀಳದೆ ಸ್ವತಂತ್ರವಾಗಿದ್ದು ತಟಸ್ಥ ಧೋರಣೆಯಿಂದ ತಮ್ಮ ಹಿತರಕ್ಷಿಸಿಕೊಳ್ಳುವ ಏರ್ಪಾಡು ಮಾಡಿಕೊಳ್ಳುವವೆಂದು ನಂಬಲಾಗಿದೆ. ಮಿತ್ರರಾಷ್ಟ್ರಗಳ ಕೈಗೊಂಬೆಗಳಾಗಿ ಅವುಗಳು ಕುಣಿಯುವ ಸಂಭವ ತೋರುವುದಿಲ್ಲ ತಾವು ಯುದ್ಧಕ್ಕೆಳೆಯಲ್ಪಡದಂತೆ ಅವು ಮೊದಲಾಗಿ ಮುಂಜಾಗ್ರತೆ ತೆಗೆದುಕೊಳ್ಳಲಿವೆ. ತಟಸ್ಥನಿರುವ ಇಟಲಿಯನ್ನೇ ಅವು ಹೆಚ್ಚಾಗಿ ಅನುಸರಿಸುವ ಸಂಭವ ತೋರುತ್ತದೆ.

ಕಲ್ಕತ್ತದ ಮಹಾಜಾತಿ ಸದನ

ಶ್ರೀ. ಸುಭಾಷಚಂದ್ರ ಭೋಸರು ಕಲ್ಕತ್ತದಲ್ಲಿ ಕಟ್ಟಿಸುವ ಮಹಾಜಾತಿ ಸದನವೆಂಬ ಕಾಂಗ್ರೆಸ್ ಸದನಕ್ಕೆ ಕಲ್ಕತ್ತ ಕೋರ್ಪರೇಶನಿನವರು ಜನವರಿ ತಾ. 30ರಲ್ಲಿ 41 ಅನುಕೂಲ ಮತ್ತು 39 ಪ್ರತಿಕೂಲ ಮತಗಳಿಂದ ಒಂದು ಲಕ್ಷ ರೂ. ಗ್ರೇಂಟ್ ಕೊಟ್ಟಿರುವರು. ಡಾಕ್ಟರ್ ಬಿ ಸಿ. ರೊಯ್, ಮಿಸೆಸ್ ನೆಲ್ಲಿ ಸೆನ್ ಗುಪ್ತರೇ ಮೊದಲಾದ ಕಾಂಗ್ರೆಸ್ ಪಕ್ಷೀಯರೇ ಗ್ರೇಂಟು ಈ ಕೊಡಬಾರದೆಂದು ವಿರೋಧ ಮತವಿತ್ತಿರುವರು. ಈ ಹಣವು ಕಲ್ಕತ್ತದ ತರುಣರ ಉಪಯೋಗಾರ್ಥವಾಗಿ ಒಂದು ಪುಸ್ತಕ ಭಂಡಾರ ಮತ್ತು ಅಂಗ ಸಾಧನಾಲಯವನ್ನು ಕಟ್ಟಲು ಉಪಯೋಗಿಸಲ್ಪಡುವುದು ಈ ಕಟ್ಟೋಣದ ಸ್ಥಳವನ್ನು ಕೋರ್ಪರೇಶನಿನವರು ಶ್ರೀ. ಸುಭಾಷಚಂದ್ರರಿಗೆ 99 ವರ್ಷಗಳ ವರೆಗೆ ವರ್ಷ 1ಕ್ಕೆ ರೂ. 1ರ ನಾಮಮಾತ್ರದ ಗೇಣಿಗೆ ಕೊಟ್ಟಿರುವರು.

ಅಮೇರಿಕದ ನೌಕಪಡೆಯ ವ್ಯಾಪನೆ

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ಈಗಿರುವ ತನ್ನ ನೌಕಾಪಡೆಯನ್ನು ಶಾಂತಸಾಗರದಲ್ಲಿರಿಸಿ ಅಟ್ಲಾಂಟಿಕ್ ಸಾಗರದ ರಕ್ಷಣೆಗಾಗಿ ಪ್ರತ್ಯೇಕವಾಗಿ 70 ಯುದ್ಧದ ಹಡಗಗಳ ಹೊಸ ನೌಕಾಪಡೆಯೊಂದನ್ನು ಕಟ್ಟುವ ಯೋಜನೆಯನ್ನು ಕೈಗೊಂಡಿರುವುದು. ಇದಕ್ಕೆ 1,300 ಮಿಲ್ಯ ಡೋಲರೀಗ ಮಂಜೂರು ಮಾಡಲಾಗಿದೆ. ಫ್ರಾನ್ಸ್ ಮತ್ತು ಬ್ರಿಟನುಗಳ ನೌಕಾಬಲದ ಹೆದರಿಕೆ ಹಿಡಿದಿದೆ ಅಮೇರಿಕಕ್ಕೆ.

ಫಿನ್ನರ ವಿಮಾನಧಾಳಿ

ಜನವರಿ ತಾ. 30ರಲ್ಲಿ ಫಿನ್ನಿಶ್ ವಿಮಾನಗಳು ರಶ್ಯದ ಕೆಲವು ಬಂದರು ಮತ್ತು ರೈಲ್ವೇ ಲೈನುಗಳ ಮೇಲೆ ಬೋಂಬೆಸೆದಿರುವವು. ಲಡೋಗ ಸರೋವರದ ಉತ್ತರದ ಸೋವಿಯಟ್ ಸೇನೆಯ ಧಾಳಿಯನ್ನು ಫಿನ್ನರು ತಡೆಗಟ್ಟಿರುವರು. ಜನವರಿ ತಾ. 29ರಲ್ಲಿ 200 ಸೋವಿಯೆಟ್ ವಿಮಾನಗಳು ದಕ್ಷಿಣ ಫಿನ್ಲೆಂಡಿನ ಮೇಲೆ ಹಾರಾಡಿ ಬೋಂಬೆಸೆದು ಅತಿ ಹೆಚ್ಚಿನ ಹಾವಳಿಯಾಗಿರುವುದು. ಪಟ್ಟಣ, ಹಳ್ಳಿ, ಹೊಲಗೇರಿಗಳ ಮೇಲೂ ಬೋಂಬೆಸೆಯಲಾಗಿದೆ. ಜನವರಿ ತಾ. 21ರಿಂದ 27ರ ವರೆಗೆ 3000 ಬೋಂಬುಗಳು ಫಿನ್ಲೆಂಡಿನ ಮೇಲೆಸೆಯಲ್ಪಟ್ಟಿವೆ.

ಪರಿಸ್ಥಿತಿಯು ಇದೇ ರೀತಿ ನಡೆದ ಪಕ್ಷದಲ್ಲಿ ಫಿನ್ನರಿಗೆ ಇನ್ನು ಹೆಚ್ಚು ಸಮಯ ರಶ್ಯನರನ್ನು ವಿರೋಧಿಸಲು ಸಾಧ್ಯವಾಗಲಾರದೆಂದೂ, ಅವರಲ್ಲಿ ಯುದ್ಧ ಸಾಮಗ್ರಿಗಳ ಅಭಾವವುಂಟಾಗಿರುವುದೆಂದೂ, ಪರರಾಷ್ಟ್ರಗಳಿಂದ ಹೆಚ್ಚಿನ ಸಹಾಯ ದೊರೆಯದಿದ್ದ ಪಕ್ಷದಲ್ಲಿ ಫಿನ್ನರು ಬೇಗನೆ ಧೈರ್ಯಗುಂದಿ ನಿರುತ್ಸಾಹಗೊಳ್ಳುವಂತಾಗಬಹುದೆಂದೂ ನಂಬಲಾಗಿದೆ.

SAFE; BUT USELESS

DURING a recent archaeological digging a copper pot was unearthed containing 1800 Victoria Rupees. An inscription on the pot recorded the name of the person who buried it and the date of the "burial", 1870. The money was handed over to his heirs.

If instead of being deposited in the earth, the money had been deposited in a BANK at 3½% per annum and reinvested with the interest every year, his heirs would now have come to posses Rs. 5,600/-. And also all the time in the hands of the bank, the money would have been useful to trade and industry.

RESOURCES OF A CRORE.

ESTD: 1960

CANARA BANK LIMITED.

ಬೊಂಬಾಯಿ ಪತ್ರ

ತಾ. 2-2-1940.

ಸ್ವಾತಂತ್ರ್ಯ ದಿನಾಚರಣೆ— ಭಾರತದ ಸ್ವಾತಂತ್ರ್ಯ ದಿನಾಚರಣೆಯು ಮುಂಬಯಿಯಲ್ಲಿ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಸುಪ್ರಭಾತದಲ್ಲಿ ನಗರದ ಮೂಲೆ ಮೂಲೆಗಳಲ್ಲಿ ಪ್ರಭಾತಭೇರಿ, ಧ್ವಜವಂದನೆ ಭಾಷಣಗಳು ಜರಗಿದವು. ಸಂಜೆಯಲ್ಲಿ ಅತಿದೊಡ್ಡ ಮೆರವಣಿಗೆಯು ಕಾಂಗ್ರೆಸ್ ಗೃಹದಿಂದ ಹೊರಟು, ಪ್ರತಿಯೊಂದು ರಸ್ತೆಗಳಲ್ಲಿ ನಡೆಯುತ್ತಾ 6 ಗಂಟೆಗೆ ಆಜಾದ ಮೈದಾನಿನಲ್ಲಿ ನೆರೆಯಿತು. ಶ್ರೀ. ಭೂಲಾಭಾಯಿದೇಸಾಯಿಯವರು ಹಿಂದಿಯಲ್ಲಿಯೂ ಶ್ರೀ. ಜೋಶಿಯವರು ಮರಾಠಿಯಲ್ಲಿಯೂ ಸ್ವಾತಂತ್ರ್ಯ ರಠಾವನ್ನು ಓದಿ ಭಾಷಣಮಾಡಿದರು. ಈ ಮೆರವಣಿಗೆಯು 1½ ಮೈಲು ಉದ್ದವಿದ್ದು, ನಿಶಾಬಂಧಿಯ ನಂತರ ಇದು ಮೊದಲನೆಯ ಅತಿದೊಡ್ಡ ಮೆರವಣಿಗೆಯಿರಬಹುದು. ಈ ವರ್ಷದ ವಿಶೇಷವೆಂದರೆ, ಬೊಂಬೇ ನೇಶನಲ್ ಗಾರ್ಡ್ಸ್‌ನವರು ನಡೆಸಿದ ಸ್ಕ್ವಾಡ್ ಮೆರವಣಿಗೆ. 150 ಸ್ಕ್ವಾಡ್‌ಗಳು ರಾಷ್ಟ್ರಧ್ವಜವನ್ನೆತ್ತಿಕೊಂಡು ರಾಷ್ಟ್ರಗೀತೆಯೊಡನೆ ಮುಂಬಯಿ ನಗರವನ್ನೆಲ್ಲಾ ಸುತ್ತಿದ್ದು.

ಫೋರ್ವರ್ಡ್ ಬ್ಲೋಕ್ ಮತ್ತು ಕಾಮಗಾರರ ಸಭೆಯು ಕಾಮಗಾರ ಮೈದಾನದಲ್ಲಿ ಸಂಜೆ 6 ಘಂಟೆಗೆ ಜರಗಿತು. ಭಾಷಣಗಳಾದ ನಂತರ ನೇಶನಲ್ ಗಾರ್ಡ್ಸ್‌ನವರ ನೇತೃತ್ವದಲ್ಲಿ ಮೆರವಣಿಗೆಯು ಹೊರಟು ಕಾಮಗಾರ ಸ್ಥಳಗಳನ್ನೆಲ್ಲಾ ಸುತ್ತಿತು. ಹೀಗೆ ಸರ್ವರೂ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಿದ್ದರು.

ರಾಮಘಡ್ ಕೋಂಗ್ರೆಸ್ಸಿಗೆ ಪ್ರತಿನಿಧಿಗಳು—ಚುನಾವಣೆಯು 21ನೆಯ ತಾರೀಕಿಗೆ ಜರಗಿ 15 ಮಂದಿ ಬಲಪಕ್ಷದವರೂ, 10 ಎಡಪಕ್ಷದವರೂ ಚುನಾಯಿಸಲ್ಪಟ್ಟರು. ಈ ಸಲವೂ ಬೋಗಸ್ ಓಟಿಂಗಿಗೇನೂ ಕಡಿಮೆಯಿರಲಿಲ್ಲ. ಈ ಸಲದ ತಮಾಷೆಯೆಂದರೆ ಗಿರ್ಗಾಂವಿನಲ್ಲಿ, ಗಿರ್ಗಾಂವ ಮುಂಬಯಿಯ ಮುಖ್ಯ ಅಂಗವು, ಕಲಿತವರ ನೆಲೆವೀಡು, ಕೋಂಗ್ರೆಸ್ ಚುನಾವಣೆಗಳಲ್ಲಿ ಎಡ, ಬಲ ಪಕ್ಷಗಳೊಳಗಿನ ಹೋರಾಟದ ತವರೂರು. ಅಂಥ ಸ್ಥಳದಲ್ಲಿ ಹಲವಾರು ವರ್ಷಗಳಿಂದ ಚುನಾಯಿಸಲ್ಪಟ್ಟು ಸಮಾಜವಾದದ ನೇತಾರರುಗಳೆಂದು ಮೆರೆಯುತ್ತಿದ್ದ ಶ್ರೀ. ಅಶೋಕ ಮೆಹತರನ್ನು ಮತ್ತು ಬಲಪಕ್ಷದ ಇನ್ನಿತರ ಉಮೇದವಾರರನ್ನೂ ಸೋಲಿಸಿ ಶ್ರೀ. ಎಸ್. ಎಲ್. ಉಪಾಧ್ಯಾಯರು ಚುನಾಯಿಸಲ್ಪಟ್ಟರು. ಮೂರು ಸ್ಥಳಗಳಲ್ಲಿ ಎರಡು ಎಡಪಕ್ಷದವರಿಗೆ ದೊರೆಯಿತು. ಬೋಗಸ್ ಓಟಿನಿಂದಾಗಿ ಶ್ರೀ. ಎಸ್. ಕೆ. ಪಾಟೀಲರಿಂತೂ ಚುನಾಯಿಸಲ್ಪಟ್ಟರು. ಇಲ್ಲಿ ಎಡಪಕ್ಷದವರಿಗೆ ಎರಡು ಸೀಟು ದೊರೆತದ್ದು, ಬಲಪಕ್ಷದವರಿಗೆ ಸಿಡಿಲು ಬಡಿದಂತೆ! ಭಾರತವು ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಿದ್ಧವಿದೆಂಬುದನ್ನು ಬಲಪಕ್ಷೀಯರು ಇಂದಾದರೂ ತಿಳಿಯಲಿ!

ಶ್ರೀ. ಉಪಾಧ್ಯಾಯರ ಭಾಷಣ— ರಾಮಘಡ ಕೋಂಗ್ರೆಸಿಗೆ ಪ್ರತಿನಿಧಿಯಾಗಿ ಚುನಾಯಿಸಲ್ಪಟ್ಟ ಶ್ರೀ. ಎಸ್. ಎಲ್. ಉಪಾಧ್ಯಾಯರವರು ಸ್ವಾತಂತ್ರ್ಯ ದಿನಾಚರಣೆಯ ದಿವಸ ಶ್ರೀ ಶಾರದಾವಿಜಯ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ಭಾಷಣಮಾಡುತ್ತಾ, "ಮುಂದಿನ ಜನಾಂಗದ ವೀರರುಗಳೆಂದೆನಿಸಿಕೊಳ್ಳುವವರೇ ವಿದ್ಯಾರ್ಥಿಗಳು. ಭಾರತದ ಭವಿಷ್ಯವು ಅವರ ಹಸ್ತಗತವಾಗಿದೆ. ಸರ್ವ ಜನಾಂಗಗಳ ಮೇಲ್ಮೆಯು ಜೀವಾವಳೀ ವಿದ್ಯಾರ್ಥಿ ತಂಡ. ಆದ್ದರಿಂದ ವಿದ್ಯಾರ್ಥಿಗಳು ಬರೀ ಶಿಕ್ಷಣಕ್ಕಾಗಿಯೇ ತಮ್ಮ ಜೀವನವನ್ನು ವಿಕ್ರಯಿಸದೆ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಆತ್ಮ ಬಲಿದಾನವೀಯಲು ಸಿದ್ಧರಾಗಬೇಕು." ಎಂದು ವಿದ್ಯಾರ್ಥಿಗಳಿಗೆ ಉತ್ಸಾಹಪೂರಿತ ಭಾಷಣಮಾಡುತ್ತಾ, ಇಂದಿನ ಯುದ್ಧದ ಪರಿಸ್ಥಿತಿಯನ್ನು ವಿವರಿಸಿ ಈ ಸುಸಂದರ್ಭವನ್ನು ಭಾರತಕ್ಕೆ ಸ್ವಾತಂತ್ರ್ಯವನ್ನು ತರಲು ಉಪಯೋಗಿಸಬೇಕೆಂದು ಹೇಳಿದರು.

ಮೈಸೂರು ಪತ್ರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮೈಸೂರು ರೈಲ್ವೆ ವರ್ಕ್‌ಶಾಪ್ ಪ್ರಕರಣ— ಮೈಸೂರಿನಲ್ಲಿರುವ ಸೆಂಟ್ರಲ್ ರೈಲ್ವೆ ವರ್ಕ್‌ಶಾಪ್‌ನ ಕೆಲಸಗಾರರುಗಳು 'ಸರಿಯಾಗಿ ಕೆಲಸಮಾಡದೆ ಕಾಲಹರಣಮಾಡಿ ಅವಿಧೇಯತೆಯಿಂದ ನಡೆಕೊಳ್ಳುತ್ತಿರುವರೆಂದು" ಆಪಾದಿಸಿ ಮೈ! ರೈಲ್ವೆ ಆಕ್ಟಿಂಗ್ ಜನರಲ್ ಮೆನೇಜರ್‌ರವರು ಸಹಿಹಾಕಿ ಒಂದು ನೋಟೀಸ್ ಹೊರಡಿಸಿ ವರ್ಕ್‌ಶಾಪನ್ನು ಅನಿರ್ದಿಷ್ಟ ಕಾಲದ ವರೆಗೆ ಬಂದ್ ಮಾಡಿ ವರ್ಕ್‌ಶಾಪಿನ ಸುತ್ತಲೂ ಬಲವಾದ ರಿಸರ್ವ್ ಪೋಲಿಸ್ ಪಡೆ ಕಾವಲು ಹಾಕಲಾಗಿದೆ. ರೈಲ್ವೆ ವರ್ಕ್‌ಶಾಪಿನ ಕೆಲಸಗಾರರುಗಳು ತಮ್ಮ ಕೂಲಿ ಹೆಚ್ಚಿಸುವುದು ಮತ್ತು ಇತರ ವಿಷಯಗಳ ಬಗ್ಗೆ ರೈಲ್ವೆ ಅಧಿಕಾರಿಗಳೊಂದಿಗೆ ಬಹಳ ದಿನಗಳಿಂದಲೂ ಚರ್ಚೆ ನಡೆಸುತ್ತಿದ್ದರೆಂದು ಗೊತ್ತಾಗಿದೆ. ಇಷ್ಟಲ್ಲದೆ ಈ ಕೆಲಸಗಾರರ ಪಿಕೆಸ್ಮೋಸ್ಕರ ಎಲ್ಲರೂ ಒಟ್ಟುಗೂಡಿ ಒಂದು ರೈಲ್ವೆಸಂಘ ಸ್ಥಾಪಿಸಿಕೊಂಡು ಅವರಲ್ಲೇ ಓರ್ವ ಅಧ್ಯಕ್ಷ ಕಾರ್ಯದರ್ಶಿಗಳನ್ನು ಚುನಾಯಿಸಿಕೊಂಡಿದ್ದರು. ಪೋಲೀಸರಿಗೆ ಈ ಸಂಘದ ಮೇಲೆ ಗುಮಾನಿ ಬಂದಿದ್ದರಿಂದ ಒಂದು ದಿನ ಬೆಳಗ್ಗಿನ ಝಾವದಲ್ಲಿ ಸಂಘವನ್ನು ಝಡ್ತಿಮಾಡಿ ಅನೇಕ ಕಾಗದಪತ್ರ ಮತ್ತು ಸಂಘದ ಬೋರ್ಡನ್ನು ತೆಗೆದುಕೊಂಡು ಹೋಗಿರುತ್ತಾರಲ್ಲದೆ ಸಂಘಕ್ಕೆ ಸೇರಿದ ಕೆಲವರನ್ನು ಮೈಸೂರು ಪಬ್ಲಿಕ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ದಸ್ತಗಿರಿಮಾಡಿರುತ್ತಾರೆ. ವರ್ಕ್‌ಶಾಪಿನ ಕೆಲಸಗಾರರುಗಳು ತಮ್ಮ ಕಷ್ಟನಿಷ್ಠುರಗಳನ್ನು ಮೈಸೂರಿಗೆ ಬಂದಿದ್ದ ಮದ್ರಾಸಿನ ಮಾಜಿ ಕೈಗಾರಿಕ ಮಂತ್ರಿ ಶ್ರೀ. ವಿ. ವಿ. ಗಿರಿಗಳಿಗೆ ಹೇಳಿಕೊಳ್ಳಬೇಕೆಂದಿದ್ದರು. ಆದರೆ ಶ್ರೀ. ಗಿರಿಗಳ ತಂದೆಯವರು ಮೃತರಾದ್ದರಿಂದ ಇದು ಸಾಧ್ಯವಾಗಲಿಲ್ಲ. ಇದನ್ನು ಕೆಲಸಗಾರರ ದುರದೃಷ್ಟವೆನ್ನಬಹುದು. ಲಾಕ್‌ಔಟ್ ಪ್ರಕರಣವನ್ನು ಕೇಳಿದ ಕೂಡಲೆ ಇದೇ ಭಾರತದಲ್ಲಿರುವ ಅನೇಕ ಲೇಬರ್ ಮುಖಂಡರು ಮತ್ತು ಶ್ರೀ. ಗುರುಸ್ವಾಮಿಗಳು ನಾಗಪುರದಿಂದ ಒಂದು ತಂತಿ ಕಳುಹಿಸಿ "ಶ್ರಮಜೀವಿಗಳು ಶಾಂತ ಮತ್ತು ಶಿಸ್ತಿನಿಂದ ಕೂಡಿ ಮುಂದಕ್ಕೆ ಪ್ರಯತ್ನಿಸಿ" ಎಂದಿದ್ದಾರೆ. ವರ್ಕ್‌ಶಾಪಿನ ಬಳಿ ಬಲವಾದ ಪೋಲಿಸ್ ಕಾವಲು ಮತ್ತು ಪಾರಸ್ನು ಮುಚ್ಚಿರುವುದರಿಂದ ಶ್ರಮಜೀವಿಗಳಿಗೆ ಅಲ್ಲಿಗೆ ಹೋಗಲು ಪ್ರವೇಶವೇ ಇಲ್ಲ. ಪ್ರತಿ ಬೆಳಗ್ಗೆಯೇ ಶ್ರಮಜೀವಿಗಳು ವರ್ಕ್‌ಶಾಪ್ ಬಳಿಯಿರುವ ಮೈದಾನದಲ್ಲಿ ಸಭೆ ನಡೆಸಿ ಭಾಷಣಮಾಡುತ್ತಾರೆ. ಅಧಿಕಾರಿಗಳು ಯಾವ ವಿಧದಲ್ಲೂ ಮುಂದೆ ಬಂದಿಲ್ಲ. ವರ್ಕ್‌ಶಾಪ್ ಬಂದ್ ಮಾಡಿರುವುದರಿಂದ ಅದರೊಳಗೆ ಇರುವ ಬಹಳ ಬೆಲೆ ಬಾಳುವ ಯಂತ್ರೋಪಕರಣಗಳು ಕಾರ್ಯವಿಲ್ಲದೆ ತುಕ್ಕು ಹಿಡಿಯುತ್ತಾ ಬಿದ್ದಿರುವುವೆಂದು ನಂಬಲಾಗಿದೆ. ವರ್ಕ್‌ಶಾಪಿನಲ್ಲಿ ವಿದ್ಯುಚ್ಛಕ್ತಿಯನ್ನೆಲ್ಲಾ ನಿಲ್ಲಿಸಿರುತ್ತಾರೆ. ಶ್ರಮಜೀವಿಗಳಿಗೆ ಸಹಾಯ ಮತ್ತು ಸಹಾನುಭೂತಿ ತೋರಿಸಲು ಒಂದು ಸಾರ್ವಜನಿಕ ಸಭೆ ನಡೆಯಿತು. ಕೆಲವು ಸಾರ್ವಜನಿಕ ಮುಂದಾಳುಗಳು ಇದನ್ನು ಆದಷ್ಟು ಬೇಗ ಕೊನೆಗಾಣಿಸಿ ಪುನಃ ವರ್ಕ್‌ಶಾಪ್ ತೆಗೆದು ಕೂಲಿಗಳಿಗೆ ಕೂಲಿ ಬರುವಂತೆ ಮಾಡಲು ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ. ಅನೇಕ ಶ್ರಮಜೀವಿಗಳು ಕೇವಲ ಈ ಕೂಲಿಯಿಂದಲೇ ತಮ್ಮ ಸಂಸಾರವನ್ನು ನಡೆಸಬೇಕಾಗಿರುವುದರಿಂದ ಅವರುಗಳು ಕಷ್ಟದಲ್ಲಿ ನರಳುತ್ತಿದ್ದಾರೆ. ಶ್ರಮಜೀವಿಗಳಲ್ಲೇ ಕೆಲವರು ಇದನ್ನು ಬೇಗ ಬಗೆಹರಿಸಲು ಅಧಿಕಾರಿಗಳನ್ನು ಕಾಣುವರೆಂದು ಗೊತ್ತಾಗಿದೆ. ವರ್ಕ್‌ಶಾಪನ್ನು ಈ ರೀತಿ ಮುಚ್ಚಿದ್ದರೂ, ಶ್ರಮಜೀವಿಗಳು ಯಾವ ವಿಧವಾದ ಗಲಭೆಮಾಡದೆ ಶಾಂತರೀತಿಯಾಗಿರುವುದು ಪ್ರಶಂಸನೀಯವಾದುದು. ಈಗ ಪರಿಸ್ಥಿತಿ ಶಾಂತವಾಗಿದೆ. ಇದು ಎಷ್ಟು ದಿನ ನಡೆಯುತ್ತೊ ಹೇಳಲು ಸಾಧ್ಯವಿಲ್ಲವೆಂದು ಕೆಲವರು ಹೇಳುತ್ತಾರೆ. "ನವಯುಗ" ಪ್ರತಿನಿಧಿಗಳು ಬಹು ಜವಾಬ್ದಾರಿಯುತವಾದ ಕಡೆಗಳಲ್ಲಿ ವಿಚಾರಿಸಿದ್ದರಲ್ಲಿ ಇವತ್ತು ಅಥವಾ ನಾಳೆ ವರ್ಕ್‌ಶಾಪನ್ನು ತೆರೆಯುತ್ತಾರೆಂದು ಹೇಳಲಾಗಿದೆ. ಪ್ರಕರಣವು ಯಾವ ರೀತಿ ನಡೆಯುತ್ತೋ ಮುಂದೆ ನೋಡೋಣ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

R. E. P. ೧೯೩೯ (O. S. $\frac{5}{39}$ of Udipi Dt. M. Court.)

ಸೂರಣ್ಣ ಸೆಟ್ಟಿ— ಅರ್ಜದಾರ. ಮತ್ತು

ನಾಗಮ್ಮ ಸೆಟ್ತಿ, ಉಂಡಾಮ್ಮ ಸೆಟ್ತಿ ಮಗಳು, ಉಡುಪಿ ತಾಲೂಕು ನಂದಿಕೂರು ಗ್ರಾಮ.ದಲ್ಲಿರ.ವವಳು —ಎದ್ರಿಳು.

ಸದ್ರಿ ಎದ್ರಿಳಿಗೆ ತಿಳಿಯಪಡಿಸುವುದೇನೆಂದರೆ—

ಅರ್ಜದಾರನು ನಿಮ್ಮ ಕುಟುಂಬದ (ಮೃತ ಸಿದ್ದು ಸೆಟ್ಟಿಯ) ಪಾಲ್ಪ ಸ್ಥಿರಾಸ್ತಿಯನ್ನು ಏಲಂಗೆ ಅಪೇಕ್ಷಿಸಿ ಬರೆಕೊಂಡ ಏಲಂ ಇಸ್ತಿಹಾರಿನ ಶರ್ತಗಳನ್ನು ಮಂಜೂರು ಮಾಡುವದಕ್ಕೂ, ಮತ್ತು ಏಲಂ ಕಾಲದಲ್ಲಿ ಅರ್ಜದಾರನಿಗೆ ದರ್ಖಾಸ್ತಿಗೆ ನಿಲ್ಲುವದೆ ಪರ್ಮಿಶನ್ ವ set off ಕೂಡಾ ಕೇಳಿ ಕೊಟ್ಟ ಅರ್ಜಿಯು ಸಹಾ ತಾ. 1-3-1940ಕ್ಕೆ ಇಟ್ಟಿರುವದರಿಂದ ಇವುಗಳ ಕುರಿತು ನಿಮ್ಮ ಆಕ್ಷೇಪಗಳಿದ್ದರೆ ಸದ್ರಿ ತಾ. 1-3-1940ನೇ ದಿನ ಹಗಲು ಗಂಟೆಗೆ 10ಕ್ಕೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು; ತಪ್ಪಿದಲ್ಲಿ ನಿಮ್ಮ ಗೈರ್‌ಹಾಜರಿಯಿಂದ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟು ಹುಕುಂ ಪ್ರಕಾರ,

ಕಾರ್ಕಳ, 5-2-40 — K. Mahabala Hegde, ಅರ್ಜದಾರನ ವಕೀಲ.

NOTICE.

NOTICE is hereby given that on account of formation of some cracks in three spans of the bow string girders of the Nidgal bridge in mile 42/3 of Road No. A 23 (Mangalore-MysoreRoad) the bridge over half the road way at the cracks of the bridge will be closed for traffic with effect from 29-1-1940 until further notification.

(*Sd.*) **K. Vittal Shetty,**
President, Dt. Board, S. Kanara
MANGALORE, 29-1-1940.

ರೂ. ೨೬,೦೦೦ ಬಹುಮಾನ

RS. 26000

ಸರಿಸಮಾನವಾದ 18 ಉತ್ತರಗಳೊಳಗೆ ಹಂಚಲಾಗುವುದು.

ಭದ್ರವಾಗಿರಿಸಲ್ಪಟ್ಟ ನಮ್ಮ ಉತ್ತರಕ್ಕೆ ಸರಿಹೋಲುವ ಉತ್ತರ ಕಳುಹಿಸುವ ಪ್ರತಿಯೋರ್ವ ಉಮೇದ್ವಾರರಿಗೂ ರೂಪಾಯಿ 2000 ವರೆಗಿನವರೆಗೆ ಪಡೆಯುವ ಸುಸಂಧಿ! ರನ್ನರ್ಸ್ ಅಪ್ ಇವರಿಗೂ ಆಕರ್ಷಕ ಇನಾಮುಗಳಿವೆ ಎಂಬುದನ್ನು ಸಹ ಗಮನಿಸಿರಿ!!

ನಮ್ಮ ಉತ್ತರದ ಯಾವುದೇ ಎರಡು ಸಾಲುಗಳ ಅಂಕೆಗಳಿಗೆ ಸರಿಯಾದ ಉತ್ತರ ಕಳುಹಿಸುವ ಪ್ರತಿಯೋರ್ವರಿಗೂ ರೂ. 75ರ ಬಹುಮಾನವಿದೆ. ಯಾವುದೇ ಒಂದು ಸಾಲಿನ ಉತ್ತರವು ನಮ್ಮೊಡನಿರುವ ಉತ್ತರದ ಸಾಲಿಗೆ ಅನ್ವಯಿಸಿದರೆ ಅಂತವರಿಗೆ ರೂ. 20ರ ಇನಾಮು ಸಿಗುವುದು. ಅರ್ಧ ಸಾಲಿನ ಯಾವುದಾದರೂ ಎರಡು ಅಂಕೆಗಳು ಸರಿಯಾದಲ್ಲಿ ರೂ. 5ರ ಸಮಾಧಾನಕರ ಪಾರಿತೋಷಕವಿರುವುದು.

ಚೌಕಕೋಣೆಯಲ್ಲಿಯ ಅಸ್ಸಂಟುಗಳಲ್ಲಿ ಯಾವುದೇ ಅಗಲ 3ರಿಂದ 18 ಅಂಕೆಗಳನ್ನು ಜುಮ್ಲಾ 42 ಬರುವಂತೆ ಹಾಕಿರಿ. ನಮ್ಮ ಉಪಯೋಗಿಸಿದ ಸಂಖ್ಯೆಯನ್ನು ಪುನಃ ಉಪಯೋಗಿಸಕೂಡದು. ಉತ್ತರ ಸ್ವೀಕರಿಸುವ ಕೊನೆಯ ದಿನ 21-2-'40. ಉತ್ತರ ಪ್ರಕಟಣೆಯ ದಿನ 2-3-'40.

ಪ್ರವೇಶಧನ:— ಪ್ರತಿಯೊಂದು ಉತ್ತರಕ್ಕೆ ರೂಪಾಯಿ 1ರಂತೆಯೂ, 3 ಉತ್ತರಗಳಿಗೆ ರೂ. 2 ರಂತೆಯೂ, ಎಂಟು ಯಾ ಅದರ ಸೆಟ್ಟಿಗೆ ರೂ. 5ರಂತೆಯೂ ಪ್ರವೇಶ ಧನವನ್ನು ಕಳುಹಿಸಬೇಕು.

ಕ್ರಮಗಳು:— ಖಾಲಿ ಕಾಗದದಲ್ಲಿ ಬರೆಯಲ್ಪಟ್ಟು ಮೇಲೆ ಸೂಚಿಸಿದ ದಾಖಲೆಯುಳ್ಳ ಪ್ರವೇಶ ಧನದೊಂದಿಗೆ ಎಷ್ಟು ಬೇಕಾದರೂ ಉತ್ತರ ಕಳುಹಿಸಿಕೊಡಬಹುದು. ಪ್ರವೇಶ ಹಣವನ್ನು ಮನಿಯಾರ್ಡರ್ ಮೂಲಕ ಅಥವಾ ಪೋಸ್ಟಲ್ ಆರ್ಡರ್ ಮುಖೇನ ಕಳುಹಿಸಿಕೊಡತಕ್ಕದ್ದು. ವಸೂಲಾದ ಹಣದ ದಾಖಲೆಯಂತೆ ಮೇಲೆ ಬಹುಮಾನಗಳ ಮೊತ್ತವು ಬದಲಾಯಿಸಲಾಗುವುದು. ಆದರೆ ಪ್ರತಿಯೊಂದು ಎಲ್ಲಾ ಸರಿಯಾದ ಉತ್ತರಕ್ಕೆ ರೂ. 2000ದ ಗ್ಯಾರಂಟಿಯಿದೆ. ಈ ಉತ್ತರವು ಮಾತ್ರ ಸುಪ್ರಸಿದ್ಧ ಬೊಂಬಾಯಿ ಬೇಂಕೊಂದರಲ್ಲಿರಿಸಲ್ಪಟ್ಟುದಕ್ಕೆ ಸರಿಹೋಲಬೇಕು. ತಾ. 26-2-'40ರ ನಂತರ ಬಂದುದಾದ ಉತ್ತರಗಳನ್ನು ಸ್ವೀಕರಿಸಲಾಗುವುದಿಲ್ಲ. ನಿಮ್ಮ ಹೆಸರು, ವಿಳಾಸ ಮತ್ತು ಸಂಖ್ಯೆಗಳನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಬರೆಯಿರಿ. ಉತ್ತರಕ್ಕಾಗಿ ಸ್ಟಾಂಪು ಅಂಟಿಸಿದ ನಿಮ್ಮ ವಿಳಾಸದ ಕವರನ್ನು ಕಳುಹಿಸಿರಿ. ಈ ಸ್ಪರ್ಧೆಯ ಅಖೈರು ತೀರ್ಮಾನದ ಹಕ್ಕು ಮೆನೇಜರಿಗೇನೇ ಇರುವುದು.

ಜುಮ್ಲಾ 38 ಬರುವ ಕಳೆದ ಸ್ಪರ್ಧೆಯ ಉತ್ತರ.

1ನೇ ಸಾಲು	14,	8,	13,	3
2ನೇ ಸಾಲು	5,	11,	6,	16
3ನೇ ಸಾಲು	3,	12,	9,	15
4ನೇ ಸಾಲು	17,	7,	10,	4

ಹಣವನ್ನೂ ಉತ್ತರವನ್ನೂ ಈ ಕೆಳಗಣ ವಿಳಾಸಕ್ಕೆ ಕಳುಹಿಸಿರಿ.

Manager,
The National Distributing Co.
Gazder House, Dhobitalao, BOMBAY.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಅನಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS,
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1900.

ಉಡುಪಿ, ಗುರುವಾರ ತಾ. ೮-೨-'೪೦

ಕಾಂಗ್ರೆಸಿನ ಚುನಾವಣೆಗಳು

'ಶುದ್ಧೀಕರಣ! ಶುದ್ಧೀಕರಣ'ವೆಂದು ಮಹಾತ್ಮ ಗಾಂಧಿಯವರು ಎಷ್ಟೊಂದು ಒದಾಬಡಿಸಿದರೂ, ಅದನ್ನು ತಡೆಗಟ್ಟಲು ಎಂತಹ ನವಕ್ರಮಗಳನ್ನೆಲ್ಲಾ ಜ್ಯಾರಿಗೆ ತಂದರೂ ಕಾಂಗ್ರೆಸಿನ ಚುನಾವಣೆ ಮತ್ತು ಕಾಂಗ್ರೆಸ್ ಕಮಿಟಿಗಳ ವ್ಯವಹಾರದಲ್ಲಿ ವಂಚನೆ, ಅನೀತಿ, ಹಿಂಸೆ, ಮತ್ತು ಅನಾಚಾರಗಳು ಕಡಿಮೆಯಾಗುವ ಬದಲಿಗೆ ಅಧಿಕವಾಗಹತ್ತಿವೆಯೆಂಬೇ ಹೇಳಬಹುದು. ಕಾಂಗ್ರೆಸ್ ಮಂತ್ರಿಪದವಿ ಸ್ವೀಕಾರ ಮಾಡಿದಂದಿನಿಂದ ದುಡ್ಡು, ವೈಯಕ್ತಿಕ ಸ್ಥಾನಮಾನ, ಮತ್ತು ಜಾತೀಯ ಭಾವನೆಯ ಬಲದಿಂದ ಕಾಂಗ್ರೆಸ್ ಕಮಿಟಿಗಳನ್ನು ಹೆಚ್ಚಾಗಿ ಅದರ ಹಿತಶತ್ರುಗಳು ವಶಪಡಿಸಿಕೊಳ್ಳಲೆತ್ನಿಸಿ ಕೆಲಮಟ್ಟಿಗೆ ಜಯಶೀಲರಾಗಿರುವರು. ಇದು ಹೊರತು ತ್ರಿಪುರಿ ಕಾಂಗ್ರೆಸಿನ ನಂತರ ಗಾಂಧಿವಾದಿಗಳೆಂಬ ವೇಷಧಾರಿಗಳನೇಕರು ಕಾಂಗ್ರೆಸ್ ಕಮಿಟಿಗಳನ್ನು ತಮ್ಮ ಗುತ್ತಿಗೆಯ ಸಂಸ್ಥೆಗಳನ್ನಾಗಿ ಮಾಡಿಕೊಳ್ಳುವುದರಲ್ಲಿ ಜಯಶೀಲರಾಗಿರುವರು. ಇವರು ಮಾಡುವ ಕಾಂಗ್ರೆಸ್ ಕೆಲಸವೆಂದರೆ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನಿಸಿಪಾಲಿಟಿಗಳಲ್ಲಿ ಸ್ಥಾನಮಾನಕ್ಕಾಗಿ ಹೊಡೆದಾಡುವುದು, ಕಾಂಗ್ರೆಸ್ ಮಂತ್ರಿಗಳು ಬರುವಾಗ ಅವರನ್ನು ಇರುವೆಗಳಂತೆ ಮುತ್ತಿ ವಶಪಡಿಸಿಕೊಂಡು ತಮ್ಮಿಚ್ಛೆ ಪ್ರಕಾರ ಕುಣಿಸುವುದು. ನಿಜವಾದ ಜನಜಾಗ್ರತಿ ಮಾಡಿ, ಹಳ್ಳಿಹಳ್ಳಿಗಳಿಗೆ ಹೋಗಿ ಪ್ರಚಾರಮಾಡಿ, ಕಾಂಗ್ರೆಸ್ ಕಮಿಟಿಗಳನ್ನು ಪುನರುಜ್ಜೀವಿಸಿ ಸಂಘಟಿಸಿ ಬಲಪಡಿಸುವ ಗೊಡವೆಗೆ ಹೋಗುವವರೇ ಇವರಲ್ಲ ಹಾಗೇನಾದರೂ ತಮ್ಮ ಭಕ್ತಿ ಮತ್ತು ಶಕ್ತ್ಯನುಸಾರ ಕೆಲಸಮಾಡುವವರಿಗೆ ಕಾಂಗ್ರೆಸ್ ಕಮಿಟಿಗಳಲ್ಲಿ ಸ್ಥಾನ ದೊರೆಯದಂತಾಗಿದ ಕಾಂಗ್ರೆಸು ಕಾಯಿದೆಭಂಗ ಹೂಡುತ್ತಿದ್ದರ ಕೂಡಲೆ ಈ ಜನರ ಹಿತ್ತಿಲಿಯು ಹೊರಬೀಳುತ್ತಿತ್ತು ಅವರ ಈಗಣ ವಿದ್ಯಮಾನಗಳನ್ನು ನೋಡಿದರೆ ಯೋಗ್ಯಟವಾಗುವ ಸಂಭವ ತೋರುವುದಿಲ್ಲ. ಆದುದರಿಂದ ಜನವರಿ ತಾ. 26ರ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಲು ಎದೆಗೊಂಡು ಈ ಜನರು ಮುಂದೆ ಬಂದಿರುವರು. ಅವರು ಸ್ವಾತಂತ್ರ್ಯ ದಿನಾಚರಣಾ ಸಭೆಯಿಂದ ಹಿಂತಿರುಗಿದೊಡನೆಯೇ ಖಾದಿ ತೆಗೆದುಹಾಕಿ ತಮ್ಮ ನಿತ್ಯಕಟ್ಟಳೆಯ ಉಡುಪನ್ನು ಹಾಕಿಕೊಂಡರೂ, ಚರಕವನ್ನು ತಿರುಗಿಸುವುದು ಹೇಗೆಂದು ಕೂಡಾ ಅವರಿಗೆ ತಿಳಿಯದಾದರೂ ಸ್ವಾತಂತ್ರ್ಯ ಪ್ರತಿಜ್ಞೆ ತೆಗೆದುಕೊಳ್ಳಲು ಅವರ ಮನಸ್ಸಾಕ್ಷಿಯೇನೂ ಆತಂಕಮಾಡುವುದಿಲ್ಲ. ಇಂತಹ ವಂಚನೆಯೇ ಇಂದಿನ ಕಾಂಗ್ರೆಸಿನವರೆಂಬವರ ವ್ಯವಹಾರದ ರೀತಿನೀತಿಯಾಗಿದೆ ಸಾರ್ವಜನಿಕ ಜೀವನವನ್ನೇ ಕಲಿಸಿರುವ ಅಂಟುರೋಗವಾಗಿದೆ

ಈ ಸಲದ ಕಾಂಗ್ರೆಸ್ ಚುನಾವಣೆಯಲ್ಲಿಯೂ ಬೇಕಷ್ಟು ವಂಚನೆ ಮತ್ತು ಸೂತ್ರಚಾಲನೆ ನಡೆದಿರುವುದು, ಕಾಂಗ್ರೆಸ್ ಪ್ರೆಸಿಡೆಂಟರೂ, ಗಾಂಧಿಜಿಯವರ ಅತ್ಯಂತ ನಿಷ್ಠಾವಂತ ಅನುಯಾಯಿಯೂ ಆದ ಬಾಬು ರಾಜೇಂದ್ರ ಪ್ರಸಾದರ ಬಿಹಾರ್ ಪ್ರಾಂತದಲ್ಲಿಯೇ ಕಾಂಗ್ರೆಸ್ ಚುನಾವಣೆಗಳಲ್ಲಿ ಹಿಂಸೆ, ವಂಚನೆ, ಮತ್ತು ಅನೀತಿಗಳು ನಡೆದಿರುತ್ತವೆಂದು, ಆ ಕುರಿತು ವಿಚಾರಿಸಲು ನಿಯುಕ್ತವಾದ ಕಮಿಟಿಯ ವರದಿಯಿಂದ ವಿದಿತವಾಗುತ್ತದೆ, ಆಂಧ್ರ, ಪಂಜಾಬು, ಡಿಲ್ಲಿ, ಮೊದಲಾದ ಪ್ರಾಂತಗಳಲ್ಲಿಯೂ ವಂಚನೆ ಮತ್ತು ಅನೀತಿಗಳು ನಡೆದಿವೆ ತೀವ್ರಗಾಮಿಗಳನೇಕರು ತೀರಾ ಜುಗುಪ್ಸೆಗೊಂಡು ಕಾಂಗ್ರೆಸ್ ಕಮಿಟಿಗಳ ಚುನಾವಣೆಗಳಲ್ಲಿ ಪ್ರತಿಸ್ಪರ್ಧಿಸುವುದನ್ನೇ ನಿಲ್ಲಿಸಲ್ಪಟ್ಟಿರುವರು ಇನ್ನು ಕೆಲವು ಕಡೆ ಹಳೆಯ ಕಾಂಗ್ರೆಸ್ ಕೆಲಸಗಾರರಲ್ಲಿ ಬೇಸರಗೊಂಡು ಕಾಂಗ್ರೆಸ್ ಕಮಿಟಿಗಳನ್ನು ಬಿಟ್ಟು ಹೊರ ನಿಲ್ಲಬೇಕಾಗಿ ಬಂದಿರುವುದು ಕೆಲವು ವ್ಯಕ್ತಿಗಳು ಕಾಂಗ್ರೆಸ್ ಕಮಿಟಿಗಳನ್ನು ವಶಪಡಿಸಿಕೊಂಡು ಸೂತ್ರಚಾಲನೆ ನಡೆಸುವ ದುಷ್ಟತನವು ಅಪ್ರತಿಹತವಾಗಿ ನಡೆದಿರುವುದು

ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಗಳೊಳಗಣ ವಿವಾದವು ಅತ್ಯಂತ ಶೋಚನೀಯವಿರುವುದು. ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಉದ್ಧಟ ಘೋಷಣೆಯು ಯುಕ್ತವಾದುದೆಂದು ಯಾರೂ ಪ್ರತಿಪಾದಿಸಲಾರರು ಆದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನಿಷ್ಪಕ್ಷಪಾತವಾಗಿ ವರ್ತಿಸಿರುವುದೇ? ಕಾಂಗ್ರೆಸ್ ಹೈ ಕಮಾಂಡಿನವರೂ ಶ್ರೀ ಬೋಸ್ ಪಕ್ಷೀಯರನ್ನು ಕೆಳಗೆ ಹಾಕಿ ತಮ್ಮ ಪಕ್ಷಪಾತಿಗಳಾದ ಶ್ರೀ ಬಿ. ಸಿ ರಾಯ್ ಮೊದಲಾದವರನ್ನು ಅಧಿಕಾರಕ್ಕೆ ತರಲೆತ್ನಿಸುವ ಅಪವಾದದಿಂದ ವಿಮುಕ್ತರಾಗಿರುವರೇ? ಅವರು ಬಂಗಾಳದ ಚುನಾವಣೆಯಲ್ಲಿ ನಡೆಸಲು ನೇಮಿಸಿದ ಎಡ್‌ಹೋಕ್ ಕಮಿಟಿಗಾದರೂ ಎರಡೂ ಪಕ್ಷದವರಲ್ಲದ ನಿಷ್ಪಕ್ಷಪಾತಿಗಳನ್ನೇಕೆ ನೇಮಿಸಲಿಲ್ಲ? ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಘೋಷಣೆಯಿಂದಾಗಿ ಇಡೀ ಬಂಗಾಳದಲ್ಲಿ ಮತ್ತಷ್ಟು ಒಡಕು ಹೆಚ್ಚಿ, ಕಾಂಗ್ರೆಸ್ ಕಮಿಟಿಗಳಿಗೆ ಪ್ರತಿ ಕಮಿಟಿಗಳು ಸ್ಥಾಪಿಸಲ್ಪಟ್ಟು ತೀವ್ರ ಸ್ಪರ್ಧೆ ಮತ್ತು ಕಲಹಕ್ಕೆ ಕಾರಣವಾಗದಿರಲಾರದು. ಇದರಿಂದ ಬಂಗಾಳದ ವಾತಾವರಣವು ಮತ್ತಷ್ಟು ಕೆಟ್ಟುಹೋಗುವುದು.

ಕಮಿಟಿಗಳ ಈಗಣ ರೀತಿ ನೀತಿಗಳಿಂದ ಕಾಂಗ್ರೆಸಿಗೆ ಜನಸಾಮಾನ್ಯರ ಬೆಂಬಲವು ತಪ್ಪುತ್ತಿರುವುದು. ಅದು ಜನಸಾಮಾನ್ಯದ ಸಂಪರ್ಕದಿಂದ ದೂರವಾಗುತ್ತಿರುವುದು. ಅದರ ಕುರಿತು ಜನತೆಯಲ್ಲಿ ನೆಲೆಗೊಂಡಿದ್ದ ಭಕ್ತಿ ಮತ್ತು ವಿಶ್ವಾಸವು ಮಾಯವಾಗುತ್ತಿರುವುದು. ಕೆಲವೆಡೆ ಕಾಂಗ್ರೆಸ್ ಕಮಿಟಿಗಳೆಂದರೆ ಜನತೆಯು ಮೂಗು ಮುರಿಯುವಂತಾಗಿದೆ ಉದಾಹರಣೆಗಾಗಿ ನಾವು ಕರ್ನಾಟಕದ ಮತ್ತು ದಕ್ಷಿಣ ಕನ್ನಡದ ಪರಿಸ್ಥಿತಿಯನ್ನೆತ್ತಿ ಹೇಳ ಬಯಸುತ್ತೇವೆ. ಕರ್ನಾಟಕದಲ್ಲೀಗ ಕಾಂಗ್ರೆಸ್ ಕಮಿಟಿಗಳು ಜೀವಂತ ಸಂಸ್ಥೆಗಳಾಗಿರುವವೆಂದು ಹೇಳಬರುವದಿಲ್ಲ ಶ್ರೀಗಳಾದ ದಿವಾಕರ್ ಗಂಗಾಧರ ರಾವ್ ಹರ್ಡಿಕರ್ ಹುಕ್ಕೇರಿಕರ್ ನಾರಾಯಣ ರಾವ್, ಜೋಶಿ ಮೊದಲಾದ ಸುರಿತ ಕರ್ನಾಟಕ ಕಾಂಗ್ರೆಸ್ ಮುಖಂಡರು ಇಂದು ಕಾಂಗ್ರೆಸ್ ಕಮಿಟಿಗಳ ಅಧಿಕಾರಿಗಳಿಂದ ನಿವೃತ್ತರಾಗಿ ಅದರ ಕೇವಲ ನಾಲ್ಕಾಣೆ ಮೆಂಬರರಾಗಿ ಉಳಿಯುವಂತಾಗುವ ಪರಿಸ್ಥಿತಿಯು ಅತ್ಯಂತ ವಿಷಾದಕರವಿರುವುದು ಇಂತಹ ಅವಸ್ಥೆಗೆ ಕರ್ನಾಟಕದ ರಾಜಕೀಯ ಜೀವನವನ್ನು ಕೊರೆಯುವ ವಿಷಕೀಟವಾದ ವೈಯಕ್ತಿಕ ಹಾಗೂ ಜಾತೀಯ ಸ್ವಾರ್ಥ ಮತ್ತು ಅಧಿಕಾರ ಲಾಲಸೆಯೇ ಮೂಲಕಾರಣ. ಈಗ ಅಧಿಕಾರವನ್ನೆಲ್ಲಾ ಬಿಟ್ಟು ದೂರ ನಿಂತಿರುವ ಕರ್ನಾಟಕದ ಮುಖಂಡರು ಇಂದಿನ ವಿಷಾದಕರ ಪರಿಸ್ಥಿತಿಗೆ ಯಾವರೀತಿಯಲ್ಲಿಯೂ ಕಾರಣರಲ್ಲೆಂದು ಅಂತಃಕರಣಪೂರ್ವಕವಾಗಿ ಹೇಳಬಲ್ಲರೇ? ಇಂದೀಗ ಕರ್ನಾಟಕದಲ್ಲಿ ಉಗ್ರಸ್ವರೂಪತಾಳಿರುವ ಅಧಿಕಾರಣಕಾರಣಕ್ಕೆ ಹಳೆಯ ಮುಖಂಡರೇ ಬೀಜಬಿತ್ತಿದವರಲ್ಲವೇ? ಇನ್ನಾದರೂ ಈ ಅಧಿಕಾರ ಸ್ವಾರ್ಥದ ವಾತಾವರಣವು ಸ್ವಚ್ಛವಾಗುವ ಆಶೆ ಇದೆಯೇ?

ಕರ್ನಾಟಕದ ಬೇರೆ ಜಿಲ್ಲೆಗಳ ಪರಿಸ್ಥಿತಿಯು ನಮಗೆ ಚೆನ್ನಾಗಿ ತಿಳಿದಿಲ್ಲ. ಆದರೆ ದಕ್ಷಿಣಕನ್ನಡದ ಸಂಗತಿಗಳನ್ನು ನೋಡಿದರೆ ಈ ವರುಷವಾದರೂ ಕರ್ನಾಟಕ ಕಾಂಗ್ರೆಸಿನವಾತಾವರಣವು ಅಧಿಕಾರಲಾಲಸೆಯ ಕಳಂಕದಿಂದವಿಮುಕ್ತವಾಗುವ ಸಂಭವತೋರುವುದಿಲ್ಲ. ಸುರಿತ ಮುಖಂಡರು ಹಿಂದೆ ನಿಂತುದರಿಂದ ಅತ್ಯಂತ ಸಂಕುಚಿತ ಬುದ್ಧಿಯ ಸ್ವಾರ್ಥಸಾಧಕ ವ್ಯಕ್ತಿಗಳು ಕೆಲವರ ಆಟವು ನಿರಾತಂಕವಾಗಿ ನಡೆಯಲು ಅಸ್ಪದವಾಗುವುದು. ಈ ವೃತ್ತಿಯಿಂದಲೇ ದಕ್ಷಿಣಕನ್ನಡ ಜಿಲ್ಲೆಯ ಈ ಸಲದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಮೆಂಬರರ ನೊಮಿನೇಶನು (ಚುನಾವಣೆಯೆಂದು ನಾವದಕ್ಕೆ ಕರೆಯುವುದಿಲ್ಲ) ನಡೆದಿರುವುದೆಂದು ನಾವು ಎಣಿಸುತ್ತೇವೆ. ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸು ನಿರ್ಜೀವವಾಗಿದೆ. ಜನತೆಯಲ್ಲಿ ಅದರ ವರ್ಚಸ್ಸು ಒಂದಿಷ್ಟೂ ಇರುವುದಿಲ್ಲ ಆದುದರಿಂದ ಅದರ ಕಾರ್ಯಕಲಾಪಗಳಿಗೆ ಯಾರೂ ಗಮನಕೊಡುವವರೇ ಇಲ್ಲ ಈ ಸಲ ಕೆ. ಪಿ ಸಿ. ಸಿ. ಚುನಾವಣೆಯು ಒಬ್ಬ ವ್ಯಕ್ತಿಯ ನೋಮಿನೇಶನಾಗಿರುವುದೆಂದರೆ ತಪ್ಪಾಗಲಾರದು. ಈ ಜಿಲ್ಲೆಯಲ್ಲಿ ಜನರು ಸಿಗದೆ ಧಾರವಾಡದಿಂದ ಇಬ್ಬರನ್ನು ತಂದು ದಕ್ಷಿಣಕನ್ನಡದ ಮೆಂಬರರನ್ನಾಗಿ ಮಾಡಲಾಗಿದೆ. ಇಲ್ಲಿಯವರೇ ಆಗಿರುವ ಹೆಚ್ಚಿನ ಮೆಂಬರರು ನಿತ್ಯಖಾದಿ ಹಾಕಿಕೊಳ್ಳುವವರು ಕೂಡಾ ಅಲ್ಲೆಂದು ನಾವು ಧೈರ್ಯದಿಂದ ಹೇಳಬಲ್ಲೆವು. ಜಿಲ್ಲೆಯ ಕಾಂಗ್ರೆಸ್ ಕೆಲಸಗಾರರಾಗಲಿ, ಜಿಲ್ಲೆಯ ಬಹು ಸಂಖ್ಯಾಕ ಸಮಾಜಗಳ ಪ್ರತಿನಿಧಿಗಳಾಗಲಿ ಈ ಸಲದ ಕೆ. ಪಿ. ಸಿ. ಸಿ ಮೆಂಬರರಲ್ಲಿ ತೋರಿಬರುವುದಿಲ್ಲ. ಹೆಸರಿಗೆ ಮಾತ್ರವೂ ಇಲ್ಲ ಕಾಂಗ್ರೆಸ್ ಕಮಿಟಿಗಳು ಇದೇ ರೀತಿ ರಚಿಸಲ್ಪಟ್ಟಲ್ಲಿ ಅವನ್ನು ಎಷ್ಟರ ಮಟ್ಟಿಗೆ ರಾಷ್ಟ್ರೀಯ ಸಂಸ್ಥೆಗಳೆಂದು ಕರೆಯ ಬಹುದೋ ತಿಳಿಯದು!

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಕಂಪೆನಿಯ 31-12-39ಕ್ಕೆ ಅಂತ್ಯವಾಗುವ 5ನೇ ವಾರ್ಷಿಕದ ವರದಿಯು ನಮ್ಮ ಬಳಿಗೆ ಬಂದಿದೆ. ವರದಿಯ ವರ್ಷದಲ್ಲಿ ರೂ. 12,27,750ರಷ್ಟರ ಹೊಸ ವಹಿವಾಟು ನಡೆಸಲ್ಪಟ್ಟು ಇದರಿಂದ ಮತ್ತು ಹಿಂದೆ ಬಾಕಿ ಇದ್ದ ಪೋಲಿಸಿಗಳಿಂದ ರೂ. 10,09,000ದಷ್ಟರ ಪೋಲಿಸಿಗಳು ಸಿಂಧುವಾಗಿ ಸ್ವೀಕರಿಸಲ್ಪಟ್ಟು ರೂ. 55,196 ಆಣೆ 13 ಪೈ 0ರಷ್ಟರ ವಾರ್ಷಿಕ ಚಂದಾ ಆದಾಯ ದೊರೆತಿರುವುದು ಅಭಿನಂದನೀಯವಿದೆ. ಈ ವರ್ಷಾಂತ್ಯದಲ್ಲಿ ಕಂಪೆನಿಯ ಚಂದಾ ಆದಾಯವು ರೂಪಾಯಿ 1,16,609ಕ್ಕೆ ಮತ್ತು ಬಡ್ಡಿ ಆದಾಯವು ರೂ. 5,512-13-0ಕ್ಕೇರಿರುತ್ತದೆ. ವೆಚ್ಚವು ಚಂದಾ ಆದಾಯದ ಸೇಕಡಾ 38, 31ರಷ್ಟಾಗಿರುತ್ತದೆ. ವರದಿಯ ವರ್ಷದಲ್ಲಿ ರೂ. 17,041 3-1ರಷ್ಟರ ಕ್ಲೈಮುಗಳ ಹಣವನ್ನು ತರಲಾಗಿದೆ ರೂ. 26500 ರಷ್ಟರ ಸರಕಾರಿಭದ್ರತೆಗಳನ್ನು ಈ ವರ್ಷ ಕಂಪೆನಿಯು ರಿಸರ್ವ್ ಬೇಂಕಿನಲ್ಲಿರಿಸಲ್ಪಟ್ಟಿವೆ. ಇಷ್ಟರ ವರೆಗೆ ಒಟ್ಟು ರೂಪಾಯಿ 1,36,500ರಷ್ಟರ ಸರಕಾರಿ ಭದ್ರತೆಗಳು ರಿಜರ್ವ್ ಬೇಂಕಿನಲ್ಲಿರಿಸಲ್ಪಟ್ಟಿವೆ ಕಂಪೆನಿಯ ಜೀವವಿಮಾ ಫಂಡ್ ರೂಪಾಯಿ 1 90,421—2—1 ಆಗಿರುತ್ತದೆ. ಅತ್ಯಂತ ಮಿತವ್ಯಯದಿಂದ ಐದೇ ವರ್ಷಗಳಲ್ಲಿ ಇಷ್ಟೊಂದು ಹೆಚ್ಚಿನ ವಹಿವಾಟು ನಡಿಸಿ ಜನಪ್ರೀತವಾಗಿರುವ ಈ ಕಂಪೆನಿಯ ಆಡಳಿತ ದಕ್ಷತೆಯು ಪ್ರಶಂಸನೀಯವಿರುವುದು. ಈ ಕಂಪೆನಿಯು ತನ್ನ ಕಾರ್ಯಕ್ಷೇತ್ರವನ್ನು ಇನ್ನಷ್ಟು ವ್ಯಾಪಿಸಿ ಮತ್ತೂ ಹೆಚ್ಚಿನ ವಹಿವಾಟು ಪಡೆದು ದಕ್ಷಿಣ ಕನ್ನಡಕ್ಕೆ ಕೀರ್ತಿತರುವುದೆಂದು ನಂಬುತ್ತೇವೆ.

ರೊಳಗೆ
ಕಿತೆ.
ಹ್ನ 11
ವರು ವೈಸ
ವರೊಡನೆ
ಕತೆ ನಡೆಸಿ
ಂದ ಹೊರ
ವರ ದಾರಿ
ಹೋಯಿತು.
ವಲಾಗಿದೆ.
ಅರಮನೆಗೆ
ಲವರು ಸೇರಿ
ಕೆಲವರು,
ಂಟುಮಾ

ಯಕ್
ಷ್
ಅಂತ್ಯ
ನಾಶಿಕ
ಗವಾಗಿದೆ.
ದಿಂದಾಗಿ ಜ
ತು ವಿದ್ವಾ
ವುಂಟಾಗಿ
ಅಘಾತವುಂ
ಧಾರಣ ಸ್ಥಿ
ನ್ನು ಅದಳ
ತೆಯಿಂದ
ದಿಯ ವ
ಯ ರೂ
ಇವರಲ್ಲಿ
ಗಿ ಹಂಚ
ವಹಿವಾ
ದು ಹಾ

ಟೆಡ್.
ಣೆ
ಕಲೆಕ್ಷನಿ
ವರೆಂದ
ಟ್ಟಿಲ್ಲವೆಂದು
ಥ ನಾ
ಮೊದ
ಸಹಾಯ
ಭುಜಂಗ
ಬೆಳಂ
ಆರ್
ನಾಯಕ್
ಗಳೊರಲ್ಲಿ
ಮಕೃಷ್ಣ
ಯಂ. ಹೆಗ
ಜವರಿಗೂ
ಪ್ರೋತ್ಸಾ
ಗೂ ಈ
ಗುವೆವೆಂ
ಸುತ್ತಾರೆ.
ಅನ್ನದಯ
ಕೈವಿವಾದ
ಕ್ಷಿಸೋಣಾ

ವೈಸರಾಯರ ಮಾತುಕತೆ

ಸರ್. ಸಿಕಂದರ್ ಖಾನ್ ಮತ್ತು ಮಹಾತ್ಮರ ಭೇಟಿ.

ಜಿನ್ನಾ ಗಾಂಧಿಜಿ ಮಾತುಕತೆ ನಡೆಯುವ ಹಾಗಿಲ್ಲ

ಡಲಿ' ಎಂದು ಹಾರೈಸಿದರು. ಅಪರಾಹ್ನ ಘಂಟೆ 1-30ಕ್ಕೆ ಮಹಾತ್ಮರು ವೈಸರಾಯರ ಅರಮನೆಯಿಂದ ಹಿಂದಿರುಗಿ ಬಿರ್ಲರ ಮನೆಗೆ ಬಂದರು. ಬಂದೊಡನೆಯೇ ಶ್ರೀ ಬಿರ್ಲ ಮತ್ತು ಶ್ರೀ ಮಹದೇವ ದೇಸಾಯಿಗಳೊಡನೆ 5 ಮಿನಿಟು ಮಾತಾಡಿ ಅನಂತರ ವಿಶ್ರಾಂತಿ ತೆಗೆದುಕೊಂಡರು. ಗಾಂಧಿ ವೈಸರಾಯ ಮಾತುಕತೆಯ ಕುರಿತು ಹೇಳಿಕೆಯೇನೂ ಹೊರಡಿಸಲ್ಪಟ್ಟಿರುವುದಿಲ್ಲ. ಆದರೆ ಹೆಚ್ಚಿನ ಆಶಾವಾದವೇನೂ ತೋರಿಬರುವುದಿಲ್ಲ. ಮಹಾತ್ಮರು ತಾ. 6ನೇ ಬೆಳಗ್ಗೆ ವಾರ್ಧಕ್ಕೆ ಹೊರಡಲಿರುವರು. ಗಾಂಧಿಜಿ ಮತ್ತು ಜಿನ್ನರೊಡನೆ ನಡೆಯುವುದೆಂದಿದ್ದ ಮಾತುಕತೆಯು ನಡೆಯುವ ಹಾಗಿಲ್ಲೆಂದು ತಿಳಿದು ಬರುತ್ತದೆ

ಗಾಂಧಿಜಿ ಸರ್ ಸಿಕಂದರರ ಭೇಟಿ

ಪಂಜಾಬಿನ ಪ್ರಧಾನ ಮಂತ್ರಿಗಳಾದ ಸರ್ ಸಿಕಂದರ್ ಹಾಯತ್‌ಖಾನರು, ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗಿನೊಂದಿಗೂ, ಸರಕಾರದೊಂದಿಗೆ ರಾಜಿಯನ್ನುಂಟುಮಾಡಲು ಸರದಿಯ ಹಿಂದಿನಿಂದ ಪ್ರಯತ್ನ ನಡಿಸುತ್ತಾ ಬಂದವರು. ಅವರು ಮಿ. ಜಿನ್ನರ ಘೋಷಣೆಯನ್ನೊಪ್ಪುವವರಲ್ಲ. ಗಾಂಧಿಜಿಯವರು ಬಿರ್ಲರ ಮನೆಗೆ ಮುಟ್ಟಿದೊಡನೆಯೇ ಸರ್ ಸಿಕಂದರ್ ಹಾಯತ್‌ಖಾನರು ತನ್ನ ಕಾರ್ಯದರ್ಶಿಯಾದ ಮೂರ್ ಹುಕ್‌ಬುಲ್ ಮಹಮ್ಮದರೊಂದಿಗೆ ಗಾಂಧಿಯವರನ್ನು ಸಂದರ್ಶಿಸಿದರು. ಮಹಾತ್ಮರು ಅವರೊಡನೆ 45 ನಿಮಿಷಗಳತನಕ ಮಾತಾಡಿ ಆಮೇಲೆ ಮೌನಧಾರಣೆ ಮಾಡಿದರು. ಸರ್ ಸಿಕಂದರ್ ಖಾನ ಮತ್ತು ಗಾಂಧಿಜಿಯವರ ಮಾತುಕತೆಯು ಮೊದಲೇ ನಿಶ್ಚಿತವಾಗಿದ್ದಿತು. ಈ ಮಾತುಕತೆಯ ಪರಿಣಾಮವಾಗಿ ಗಾಂಧಿಜಿಯವರು ಮಿ. ಜಿನ್ನರೊಡನೆ ಮಾತಾಡುವದೆಂದು ನಿಶ್ಚೈಸಲ್ಪಟ್ಟಿತು. ಆದರೆ ಅನಂತರ ಯಾವ ಕಾರಣದಿಂದಲೋ ಅದನ್ನು ಬಿಟ್ಟು ಬಿಡಲಾಯಿತು. ಸರ್. ಸಿಕಂದರರು ತಾ. 4ನೇ ರಾತ್ರಿ ಲಾಹೋರಿಗೆ ಹೊರಟು ಹೋಗಿರುವರು.

ವೈಸರಾಯರೊಡನೆ ಮಾತಾಡಿ ಹಿಂತಿರುಗಿದೊಡನೆಯೇ ಮಹಾತ್ಮರು ತನ್ನ ಮೌನ ವ್ರತವನ್ನು ಸಂಪೂರ್ಣಗೊಳಿಸುವುದಕ್ಕಾಗಿ ಪುನಃ ಮೌನಧಾರಣೆ ಮಾಡಿದರು. ಈ ಮಾತುಕತೆಯ ಪರಿಣಾಮವಾಗಿ ಪ್ರಕೃತದ ಬಿಕ್ಕಟ್ಟು ಬೇಗನೆ ಕೊನೆಗೊಳ್ಳುವ ಸಂಭವ ತೋರುವುದಿಲ್ಲ. ವೈಸರಾಯರು ತನ್ನ ಬೊಂಬಾಯಿಯ ಭಾಷಣವನ್ನು ಗಾಂಧಿಜಿಯವರಿಗೆ ವಿವರಿಸಿದರು. ಗಾಂಧಿಜಿಯವರೂ ಕಾಂಗ್ರೆಸಿನ ಘೋಷಣೆಯನ್ನವರಿಗೆ ವಿವರವಾಗಿ ತಿಳಿಸಿದರು. ಈ ಮಾತುಕತೆಯ ಪರಿಣಾಮವನ್ನು ವೈಸರಾಯರು ಪ್ರಾಯಶಃ ಬ್ರಿಟಿಷ್ ಸರಕಾರಕ್ಕೆ ತಿಳಿಸಿ ಅನಂತರ ಮುಂದೇನು ಮಾಡಬೇಕೆಂಬುದು ನಿಶ್ಚೈಸಲ್ಪಡಲಿದೆ. ಇನ್ನುಮುಂದೆ ಮಹಾತ್ಮರು ವೈಸರಾಯರನ್ನು ಕಾಣುವ ಹಾಗಿಲ್ಲ.

ಮಿ. ಫಜ್ಲುಲ್ ಹಕ್ಕರ ಐಕ್ಯದ ಯತ್ನ

ಹಿಂದೂ ಮುಸಲ್ಮಾನ ಪ್ರಶ್ನೆಯನ್ನು ಆಯಾ ಪ್ರಾಂತವಾರಾಗಿ ಇತ್ಯರ್ಥಪಡಿಸಬೇಕೆಂಬುದೇ ವೈಸರಾಯರ ಅಭಿಪ್ರಾಯವಿರುವಂತಿದೆ. ಇದಕ್ಕೆ ಸರ್. ಸಿಕಂದರ ಹಯಾತ ಖಾನ್ ಮತ್ತು ಮಿ. ಫಜುಲ ಹಕ್ಕರು ಪ್ರಯತ್ನ ನಡಿಸುತ್ತಿದ್ದಾರೆ. ಮಿ. ಫಜ್ಲುಲ್ ಹಕ್ಕರು ಹಿಂದೂಮಹಾಸಭೆಯ ಮುಖಂಡರಾದ ಶ್ರೀ. ಬಿ.ಸಿ. ಚಟರ್ಜಿಯವರೊಂದಿಗೆ ಬಂಗಾಳದಲ್ಲಿ ಹಿಂದು ಮುಸಲ್ಮಾನ ಐಕ್ಯಸ್ಥಾಪನೆಯ ಕುರಿತು ಹೇಳಿಕೆಯೊಂದನ್ನು ಪ್ರಕಟಿಸಿರುವುದಲ್ಲದೆ ಅಬಗ್ಗೆ ಇದೇ ತಾ. 10ರಲ್ಲಿ 15 ಮಂದಿ ಹಿಂದು ಮತ್ತು 15 ಮಂದಿ ಮುಸಲ್ಮಾನ ಮುಖಂಡರ ಸಭೆಯೊಂದನ್ನು ಕರೆದಿರುವರು. ಇದಕ್ಕೆ ಶ್ರೀಗಳಾದ ಬಿ.ಸಿ.ಚಟರ್ಜಿ, ಡಾಕ್ಟರ್ ಶ್ಯಾಮ ಪ್ರಸಾದ ಮುಖರ್ಜಿ ಡಾ ಬಿ. ಸಿ. ರೈ ಮತ್ತು ಶ್ರೀ ಶರಶ್ಚಂದ್ರ ಭೋಸರನ್ನು ಆಮಂತ್ರಿಸಿರುವರು. ಪ್ರಕೃತದ ಸಂದರ್ಭದಲ್ಲಿ ಯಾವ ಪಕ್ಷವಾಗಲಿ ಸಮಾಜವಾಗಲಿ ದೇಶದ ರಾಜಕೀಯ ಪ್ರಗತಿಗೆ ಅಡ್ಡಬರಬಾರದು. ದೇಶದ ರಾಜಕೀಯ ಪಕ್ಷಗಳೆಲ್ಲ ಒಂದುಗೂಡಿ ಬ್ರಿಟಿಷ್ ಸರಕಾರದೊಡನೆ ಒಪ್ಪಂದಮಾಡಿ ಕೊಳ್ಳಬೇಕು. ಸಂಯುಕ್ತ ಮಂತ್ರಿಮಂಡಲವನ್ನು ರಚಿಸುವುದೇ ಈಗಣ ಸಂದರ್ಭದಲ್ಲಿ ಉತ್ತಮ ಉಪಾಯ. ಅದರಿಂದಲೇ ದೇಶದಲ್ಲಿ ಐಕ್ಯಸ್ಥಾಪನೆಗೆ ಆಸ್ಪದವಾಗುವುದು. ತಾನು ಕಾಂಗ್ರೆಸ್ ಪಕ್ಷೀಯರನ್ನು ಮಂತ್ರಿಮಂಡಲಿಗೆ ಸೇರಿಸಿಕೊಳ್ಳಲು ಸಿದ್ಧನಿರುವೆನೆಂದು ಮಿ. ಫಜ್ಲುಲ್ ಹಕ್ಕರು ಹೇಳಿಕೆ ಹೊರಡಿಸಿ, ತಾನು ಇತ್ತಲಾಗಿ ಜಬ್ಬಲಪುರದಲ್ಲಿ ಹಿಂದುಮಹಾಸಭೆ ಮತ್ತು ಕಾಂಗ್ರೆಸನ್ನು ಕಟುವಾಗಿ ಟೀಕಿಸಿಮಾಡಿದ ಭಾಷಣಕ್ಕಾಗಿ ಪಶ್ಚಾತಾಪ ಸೂಚಿಸಿರುವುದು ಮಾತ್ರವಲ್ಲದೆ, ಆವೇಶಪ್ರಧಾನನಾದ ತಾನು ಕೆಲವು ವೇಳೆ ತಪ್ಪಿನಡೆದರೆ ಅದನ್ನು ಉದಾರದೃಷ್ಟಿಯಿಂದ ಮರೆತು ಬಿಡಬೇಕೆಂದು ಈಗ ಎಲ್ಲರೂ ಹಿಂದಾದುದನ್ನು ಮರೆತು ಶುದ್ಧ ಹೃದಯದಿಂದ ಒಂದುಗೂಡಬೇಕೆಂದು ಆಗ್ರಹದಿಂದ ವಿನಂತಿ ಮಾಡಿಕೊಂಡಿರುವರು. ಇದರಿಂದ ಬಂಗಾಳದ ಹಿಂದು ಮಹಾಸಭೆಯವರೂ ಕಾಂಗ್ರೆಸಿನವರೂ ಮಿ. ಹಕ್ಕರೊಂದಿಗೆ ಸಹಕರಿಸುವ ಸಂಭವ ತೋರುತ್ತದೆ.

ರಷ್ಯಕ್ಕೆ ಜರ್ಮನಿಯ ಸಹಾಯ

ಜರ್ಮನಿಯು ಫಿನ್ಲೆಂಡಿನ ಉತ್ತರದ ಪೆಟ್ಸಾಮೋ ಮತ್ತು ಮರ್ಮಾನ್ಸ್ಕ್ ಬಂದರಗಳಿಗೆ ರಷ್ಯನರ ಸಹಾಯಾರ್ಥವಾಗಿ ಯುದ್ಧ ಸಾಮಗ್ರಿಗಳನ್ನು ಕಳುಹಿಸುತ್ತಿರುವುದೆಂದು ತಿಳಿದುಬಂದಿದೆ. ಮಾತ್ರವಲ್ಲದೆ 16 ಸಬ್ ಮೆರೀನುಗಳನ್ನು ರಷ್ಯದಿಂದ ಪಡೆದು ಎರಡು ಯುದ್ಧ ಹಡಗಗಳನ್ನು ಕೊಡಲಿದೆಯೆಂದು ಸುದ್ಧಿಯುಂಟಾಗಿದೆ.

ಟರ್ಕಿಯಲ್ಲಿ ಪುನಃ ಭೂಕಂಪ

ಇದೇ ತಾ. 4ರಲ್ಲಿ ಟರ್ಕಿಯ ಎಜಿಂಡ್ಜಾನ್ ಎಂಬಲ್ಲಿ ಪುನಃ ಭೂಕಂಪವುಂಟಾಗಿ 2 ಹಳ್ಳಿಗಳು ಸಂಪೂರ್ಣವಾಗಿ ನಾಶಗೊಳಿಸಲ್ಪಟ್ಟವೆ. 45 ಮಂದಿ ಕೊಲ್ಲಲ್ಪಟ್ಟಿರುತ್ತಾರೆ. ಅನೇಕರಿಗೆ ಪೆಟ್ಟಾಗಿದೆ.

ಕಾಂಗ್ರೆಸಿನ ವಿಜಯ.

ಪಶ್ಚಿಮ ಕೃಷ್ಣಾ ಜಿಲ್ಲೆಯ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷೀಯರು 26ರಲ್ಲಿ 18 ಸ್ಥಾನಗಳನ್ನು ಗೆದ್ದಿರುವರು. ಮಲಬಾರು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸಿಗೆ 49ರಲ್ಲಿ 39 ಸೀಟುಗಳು ದೊರೆತಿರುತ್ತವೆ.

ಚೇಂಬರ್ಲೇನರು ಬೇಡ ಗಾಂಧಿಯವರು ಬೇಕು.

ಇಂಗ್ಲೆಂಡಿನ ಮಿಷ್ಸ್‌ಸೆಕ್ಸ್ ಎಂಬಲ್ಲಿಯ ಸಾಹಿತ್ಯ ಸಂಘದಲ್ಲಿ ನೂತನ ರೀತಿಯ ಚರ್ಚೆಯೊಂದು ನಡೆಯಿತು. ಗ್ರೇಸಿ ಫೀಲ್ಡ್ ಎಂಬ ಸಿನೆಮ ನಟಿ, ಮಿ. ಚೇಂಬರ್ಲೇನ್ ಮಹಾತ್ಮಗಾಂಧಿ ಮತ್ತು ಮಿ. ಬೆರ್ನಾರ್ಡ್ ಶೋರವರು ಒಂದು ಸುರಳುಗಾಡು ದ್ವೀಪವೊಂದರಲ್ಲಿ ಸಿಕ್ಕಿಬಿದ್ದು ಇವರಲ್ಲಿ ಯಾರಾದರೊಬ್ಬರನ್ನು ಮಾತ್ರ ಬದುಕಿಸಲು ಸಾಧ್ಯವಾದರೆ ನೀವು ಯಾರನ್ನು ಬದುಕಿಸಲೆಳಸುವಿರಿ? ಎಂಬುದೇ ವಾದದ ವಿಷಯ. ತೀವ್ರ ಚರ್ಚೆಯಾದ ಮೇಲೆ ಸಾಹಿತ್ಯ ಸಂಘದವರು ಮೊದಲಾಗಿ ಗಾಂಧಿಯವರನ್ನು ರಕ್ಷಿಸಬೇಕೆಂಬ ನಿರ್ಧಾರಕ್ಕೆ ಬಂದರು. ಎರಡನೆಯದಾಗಿ ಮಿ. ಚೇಂಬರ್ಲೇನರನ್ನೂ ಮೂರನೆಯದಾಗಿ ಗ್ರೇಸಿಫೀಲ್ಡಳನ್ನೂ ನಾಲ್ಕನೆಯದಾಗಿ ಮಿ. ಬರ್ನಾರ್ಡ್ ಶೋರನ್ನೂ ಬದುಕಿಸಬೇಕೆಂದು ನಿರ್ಣಯಮಾಡಲಾಯಿತು.

ರಷ್ಯದ ಧಾಳಿಯ ಸುಳ್ಳುದಿಗಿಲು

ಹಿಂದೂದೇಶದ ಮೇಲೆ ಸೋವಿಯೆಟ್ ರಷ್ಯವು ಧಾಳಿ ನಡಿಸಬಹುದು. ಸೋವಿಯೆಟ್ ಸೇನೆಯು ಅಫಘಾನಿಸ್ಥಾನದ ಬಳಿ ಇದೆ. ಆದುದರಿಂದ ಬ್ರಿಟನಿನ ಆಶ್ರಯವು ಹಿಂದೂದೇಶಕ್ಕೆ ಅತ್ಯಾವಶ್ಯಕವೆಂದೂ ದಿಗಿಲನ್ನೆಬ್ಬಿಸಲಾಗಿದೆಯಷ್ಟೆ. ಇದಕ್ಕೆ ಯಾವ ಆಧಾರವೂ ಇಲ್ಲೆಂದು ಈಗ ತಿಳಿದುಬಂದಿದೆ. ಅಫಘಾನಿಸ್ಥಾನದ ಬಳಿ ಸೋವಿಯೆಟ್ ಸೇನೆಯೇ ಇರುವುದಿಲ್ಲೆಂದು ಅಫಘಾನ ಸರಕಾರವು ಸ್ಪಷ್ಟಪಡಿಸಿದೆ. ನೂರಾರು ಮೈಲು ಮರುಳುಗಾಡು, ನೂರಾರು ಮೈಲು ಬಂಡೆಗಲ್ಲು ತುಂಬಿದ ಪರ್ವತಗಳ ನಡುವಿನಿಂದ ಸೇನೆಯನ್ನು ನಡಿಸಿಕೊಂಡು ಧಾಳಿನಡಿಸಲು ರಷ್ಯಕ್ಕೆ ಇನ್ನು ಕೆಲ 10 ವರ್ಷಗಳ ವರೆಗೆ ಸಾಧ್ಯವೇ ಇಲ್ಲವೆಂದು ಅನುಭವಶಾಲಿ ಸೇನಾನಿಗಳಾದ ಜನೆರಲ್ ಸರ್. ಹ್ಯೂಬರ್ಟ ಗಫರು ಅಭಿಪ್ರಾಯಪಿಟ್ಟಿರುವರು.

ಸ್ವೀಕಾರ.

ವರದಿಗಳು:—

(1) **ಉತ್ತರಕನ್ನಡ ರೈತ ಸಹಾಯಕ ಮಂಡಲ ಧಾರವಾಡ**—ಇವರ ತಾ. 1-7-34ರಿಂದ 1-10-39ರ ವರೆಗಿನ ವರದಿ ಹಾಗೂ ಲೆಕ್ಕವು ನಮ್ಮ ಹಸ್ತಗತವಾಗಿದೆ. ಕರನಿರಾಕರಣ ಸತ್ಯಾಗ್ರಹ ಸಮರದಲ್ಲಿ ಭಾಗ ವಹಿಸಿ ಆಪತ್ತಿಗೊಳಗಾದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ಹಾಗೂ ಅಂಕೋಲಾ ತಾಲೂಕಿನ ಹಲವು ರೈತ ಕುಟುಂಬಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಹೊರಟ ಮಂಡಲದ ಕಾರ್ಯವು ಸ್ತುತ್ಯವಾಗಿದೆ.

(2) **ದ. ಕ. ಜಿಲ್ಲಾ ಹರಿಜನ ಲೇಬರ್ ಲೀಗ'**— ಇವರ 38, 39 ಇಸವಿಯ 3ನೇ ವರ್ಷದ ವರದಿ, ಹರಿಜನೋದ್ಧಾರ ಕಾರ್ಯಕ್ಕಾಗಿ ಶ್ರೀ. ಕೆ. ಈಶ್ವರ ಎಂ. ಎಲ್. ಎ. ರವರಿಂದ ಸ್ಥಾಪಿತವಾದ ಈ ಲೀಗಿನ ಕಾರ್ಯಗಳೂ ವ ತ್ತು ಲೆಕ್ಕದ ವಿವರವು ಇದರಲ್ಲಿವೆ.

(3) **ಶ್ರೀ ಭಾರತೀ ವಾಚನಾಲಯ, ಮೈಸೂರು**—ಇವರ ಎಂಟನೇ ವರ್ಷದ ವರದಿ, ವಿಶೇಷ ಉತ್ಸಾಹದಿಂದ ಜನಸೇವೆ ಮಾಡುತ್ತಿರುವ ವಾಚನಾಲಯದ ಕಾರ್ಯಕರ್ತರುಗಳು ಅಭಿನಂದನೀಯ.

(4) **ಜಾಕೋರು ಬಿಲ್ಲವರ ಪರಸ್ಪರ ಸಹಾಯಕ ಫಂಡು ಮುಂಬಯಿ**—ಪರಸ್ಪರ ಸಹಾಯವು ಅತ್ಯಾವಶ್ಯಕವಾದ ಈ ಕಾಲದಲ್ಲಿ ಅದೇ ಉದ್ದೇಶದಿಂದ ಹೊರಟ ಈ ಫಂಡಿನ ಕ್ರಮನಿಬಂಧನೆಗಳು ತಮ್ಮ ಹಸ್ತಗತವಾಗಿವೆ. ಇದಕ್ಕೆ ಎಲ್ಲರೂ ಮೆಂಬರರಾಗಿ ಸೇರಿ, ಫಂಡನ್ನು ಉನ್ನತಿಗೆ ತಂದು, ತಾವು ಪ್ರಯೋಜನಹೊಂದುವಂತಾಗಲೆಂದು ಹಾರೈಕೆ.

(5) **ಕೆನರಾ ಬಿಲ್ಲವರ ಅನಾಥ ಸಂಘ ಮುಂಬಯಿ**—ಇವರ 3ನೇ ವರ್ಷದ ವರದಿ, ಸತ್ಕಾರ್ಯಗಳನ್ನು ನಡಸುತ್ತಿರುವ ಈ ಸಂಘವು ಇನ್ನಷ್ಟು ಅಭಿವೃದ್ಧಿಹೊಂದಲೆಂದು ಹಾರೈಕೆ.

ನಂದಳ್ಕೆ— ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ಮಹೋತ್ಸವಾದಿಗಳು, ತಾ. 20-3-1940ರಿಂದ ತಾ. 29-3-40 ರ ವರೆಗೆ ವಿಜೃಂಭಣೆಯಿಂದ ಜರಗಲಿರುವದರಿಂದ ಭಜಕ ಮಹಾಶಯರೆಲ್ಲರೂ ಆಗಮಿಸಿ ಶ್ರೀ ಮಹಾಲಿಂಗೇಶ್ವರ ದೇವರ ಕೃಪೆಗೆ ಪಾತ್ರರಾಗಬೇಕೆಂದು ಆಡಳಿತೆಯ ಕಡೆಯಿಂದ ಶ್ರೀ. ಎನ್. ಚಂದ್ರಶೇಖರ ಹೆಗ್ಡೆಯವರು ತಿಳಿಸುತ್ತಾರೆ. ಈ ಸಂದರ್ಭದಲ್ಲಿ ನಂದಳ್ಕೆ ಸಂಯುಕ್ತ ಕಾಂಗ್ರೆಸ್ ಕಮಿಟಿಯವರ ಪ್ರಚಾರಕಾರ್ಯವೂ ನಂದಳ್ಕೆ ಗುರುಭಕ್ತಿ ಸಮಾಜದ ಸಭೆಯೂ ನೆರವೇರಲಿದೆ

ವಿದ್ಯಾದಾಯಿನಿ ಸಭಾ, ಮುಂಬಾಯಿ

ಇದರ ೧೯ನೇ ವಾರ್ಷಿಕ ಮಹಾಸಭೆಯು ಇದೇ ತಾ. 11ನೇ ಆದಿತ್ಯವಾರ ಅಪರಾಹ್ನ ಘಂಟೆ 2–30ಕ್ಕೆ ಬಾಬ್ಲೆಬಾಯಿ, ಎಲ್ಫಿನ್‌ಸ್ಟನ್ ಇನ್ಸ್ಟಿಟ್ಯೂಟ್ (ಟ್ರಿಬಾವ್ಡ್ ಹೌಸ್, ಫ್ರೆಸ್ ಕೋರ್ಟ್ ರೋಡು)ನ ಕಟ್ಟಡದಲ್ಲಿ ಜರಗುವುದು. ಅದಕ್ಕೆ ಸರ್ವರೂ ಹಾಜರಾಗಿ ಸಭೆಯ ಕಾರ್ಯಕ್ರಮಗಳನ್ನು ಸಾಂಗವಾಗಿ ನೆರವೇರಿಸಿಕೊಡಬೇಕಾಗಿ ವಿನಂತಿ ಎಂದು ಗೌ. ಕಾರ್ಯದರ್ಶಿ ಅಣ್ಣಯ್ಯನವರು ಅಪೇಕ್ಷಿಸುತ್ತಾರೆ.

ನವಯುಗ

ನೋಟೀಸು.

ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅದನ್ನು ದಯಮಾಡಿ ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸೋಣಾಗುತ್ತದೆ. ಚಾಲ್ತಿ ವರ್ಷದ ಚಂದಾ ಹಣ ಬಾಕಿ ಇರುವವರು ಅದನ್ನು ಆದಷ್ಟು ಬೇಗನೆ ಕಳಿಸುವಂತೆಯೂ ವಿನಂತಿ. —ಮೆನೇಜರ್

ಮಂಗಳೂರು

(ನಮ್ಮ ಸ್ವಂತ ವಾರ್ತಾಹರರಿಂದ)

ಮಂಗಳೂರು ತಾ. 5-2-1940

"ಈಗಿನ ಘೋರ ಯುದ್ಧ"—ಮೇಲಿನ ವಿಷಯವಾಗಿ ಶ್ರೀ. ಕೆ. ಕೃಷ್ಣರಾವ್ ಇವರು ಕಳೆದ ತಾ. 2ರಲ್ಲಿ ವಿದ್ಯಾಬೋಧಿನಿ ಶಾಲೆಯಲ್ಲಿ ಉಪನ್ಯಾಸ ಮಾಡಿದರು. ವಿದ್ವಾನ್ ಯಂ. ಆರ್. ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಭಾಷಣಕರ್ತರು, ಈಗಿನ ಯುದ್ಧಕ್ಕೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಕಾರಣಗಳನ್ನು, ಹಿಟ್ಲರರ ಸಾಮ್ರಾಜ್ಯ ತೃಷ್ಣೆಯನ್ನು ಇತರ ಜನಾಂಗಗಳು ಜರ್ಮನಿಗೆ ಮಾಡಿದ ವಂಚನೆಯನ್ನು, ವರ್ಸೇಲ್ಸ್ ಒಪ್ಪಂದದ ಕಾಠಿಣ್ಯವನ್ನು ತಿಳಿಸಿ, ನೆಲ, ಜಲ, ಆಕಾಶದಲ್ಲಿ ಯುದ್ಧವು ಹೇಗೆ ಲ್ಲಾ ನಡಿಯುತ್ತಿದೆಯೆಂಬುದನ್ನು ಅನೇಕ ಉದಾಹರಣೆಗಳನ್ನಿತ್ತು ವ್ಯಕ್ತಗೊಳಿಸಿದರು. ಈಗಿನ ಯುದ್ಧವು ರಾಮರಾವಣರ ಮತ್ತು ಪಾಂಡವ ಕೌರವರ ಯುದ್ಧಗಳಿಗಿಂತಲೂ ಘೋರವಾದುದೆಂದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಮಂಗಳೂರು ರೇಡಿಯೋ ಭವನ— ಮೈದಾನದಲ್ಲಿ ರೇಡಿಯೋ ಭವನವನ್ನು ಕಟ್ಟಿಸಿದ್ದಾರೆ. ಇದರ ಉದ್ಘಾಟನಾ ಸಮಾರಂಭವು ನಾಳೆಯ ದಿನ ಮಾನ್ಯ ಬಿಷೋಪರಿಂದ ನೆರವೇರಿಸಲ್ಪಡುವುದು.

ವಿವೇಕಾನಂದರ ಜನ್ಮದಿನ— ಶ್ರೀ. ಸ್ವಾಮಿ ವಿವೇಕಾನಂದರ 78ನೇ ಜನ್ಮದಿನೋತ್ಸವವು ಕಳೆದ ತಾ. 31ರಲ್ಲಿ ವೈ. ಯಂ. ಎಸ್. ಎ. ಸಭೆಯ ಆಶ್ರಯದಲ್ಲಿ ನಡೆಯಿತು. ಶ್ರೀ. ಬಿ. ಆರ್. ಪ್ರಭುಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಯಸ್. ಯಸ್. ಶೆಟ್ಟರ್, ಕೆ. ಕೆ. ಕಾಮತರು, ಎಚ್.ಎಸ್. ನಾಯಕರು, ಸ್ವಾಮಿಜಿಯವರ ವಿಷಯದಲ್ಲಿ ಭಾಷಣ ಮಾಡಿದರು.

ವಿದ್ಯಾರ್ಥಿಗಳ ಪರಿಷತ್ತು— ದಕ್ಷಿಣ ಕನ್ನಡ ವಿದ್ಯಾರ್ಥಿಗಳ ದ್ವಿತೀಯ ಪರಿಷತ್ತು ತಾ. 10-11ಕ್ಕೆ ಶ್ರೀ. ಕೆ. ಸಂತಾನಂ, ಎಂ. ಎಲ್. ಎ. (ಕೇಂದ್ರ) ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಇದು ಜಯಶೀಲವಾಗುವಂತೆ ಸಕಲರೂ ಉದಾರ ಪ್ರೋತ್ಸಾಹವೀಯಬೇಕಾಗಿ ಸಂಬಂಧಪಟ್ಟವರು ಅಪೇಕ್ಷಿಸುತ್ತಾರೆ.

ಸೌತ್ ಕೆನರಾ ಪ್ರೆಸ್ಸ್ ವರ್ಕರ್ಸ್ ಯೂನಿಯನ್—ಇದರ ಆರು ತಿಂಗಳಿಗೊಮ್ಮೆ ಸೇರುವ ಮಹಾಸಭೆಯು ಫೆಬ್ರವರಿ ತಾ. 11ನೇ ಸಾಯಂ ಗಂಟೆ 4-30ಕ್ಕೆ ಸೆಂಟ್ರಲ್ ಮೈದಾನದಲ್ಲಿ ಜರಗುವುದು, ಯೂನಿಯನ್ ಎಲ್ಲಾ ಸದಸ್ಯರೂ ಮಹಾ ಸಭೆಗೆ ತಪ್ಪದೆ ಬರಬೇಕೆಂದು ವಿನಂತಿಸಲಾಗಿದೆ.

"ದ. ಕ. ಜಿಲ್ಲಾ ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರ ಸಂಘ" ಮಂಗಳೂರು—ಇದರ ಮಹಾಸಭೆಯು ತಾ. 28-1-40ರಲ್ಲಿ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಶ್ರೀ. ಯಂ. ಆರ್. ಪೂಂಜರವರ ಅಧ್ಯಕ್ಷತೆಯಲ್ಲಿ ಜರಗಿತು. ಪೂರ್ವಾಹ್ನ ಕಾರ್ಯಕಾರಿ ಸಮಿತಿಯ ಸಭೆಯು ಕೂಡಿ ಹಲವೊಂದು ಮುಖ್ಯ ಸಂಗತಿಗಳನ್ನು ಪರ್ಯಾಲೋಚಿಸಿ ಮಹಾಸಭೆಯ ಕಾರ್ಯಕ್ರಮ ಪಟ್ಟಿಯನ್ನು ತಯಾರುಗೊಳಿಸಲಾಯಿತು. ಸಂಘದ ಅಧ್ಯಕ್ಷ ಶ್ರೀ. ಬಿ. ಭೋಜರಾಯರು ಸಂಘದ ಗತವರ್ಷದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಬಾಯ್ದೆರೆ ಹೇಳಿದರು. ನಂತರ ಸಂಘದ ಮುಂದಿನ ಜೀವಿತದ ವಿಷಯ ದೀರ್ಘ ಪರ್ಯಾಲೋಚಿಸಿ ಸಂಘವನ್ನು "ಯೂನಿಯನ್" ಎಂಬ ಹೆಸರಿನಿಂದ ಕರೆಯುವುದಾಗಿಯೂ, ಅದರ ಕ್ರಮ ನಿಬಂಧನೆಗಳನ್ನು ತಯಾರಿಸಿ ಜಿಲ್ಲಾ ಬೋರ್ಡಿಗೆ ಒಪ್ಪಿಸಲಿಕ್ಕೆ ಶ್ರೀ. ಎ. ಪಾಂಡುರಂಗ ರಾವ್, (ಪುತ್ತೂರು) ಶ್ರೀ. ಎ. ಸೀತಾರಾಮ ರಾವ್, (ನಂದಳಿಕೆ) ಶ್ರೀ. ಬಿ. ಭೋಜರಾವ್ (ಮೂಲ್ಕಿ) ಈ ಮೂರು ಜನರಿಂದ ಕೂಡಿದ ಸಮಿತಿಗೆ ಅಧಿಕಾರ ಕೊಡಲಾಯಿತು. ಇದಾದ ಮೇಲೆ ಕಡಿತದ ವಿಚಾರ, ರಜೆಪಟ್ಟಿ, ಎಲಿಮೆಂಟರಿ ಶಾಲಾ ಉಪಾಧ್ಯಾಯರು ಬರೆಯುವ ಪುಸ್ತಕಗಳಿಗೆ ಬೋರ್ಡಿನವರು ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು ಇವೇ ಮೊದಲಾದ ವಿಷಯಗಳಲ್ಲಿ ನಿರ್ಧಾರಗಳಾದುವು. ತಾ. 15-2-40ರ ಒಳಗೆ ಸಂಘದ ಮೊದಲಿನ ಕಾರ್ಯದರ್ಶಿಗಳೂ ಖಜಾಂಜಿಗಳೂ ಲೆಕ್ಕ-ರೊಕ್ಕವನ್ನು ಶ್ರೀ. ಬಿ. ಭೋಜರಾಯರಿಗೆ ಒಪ್ಪಿಸಬೇಕೆಂದಾಯಿತು. ಮಾನ್ಯ ಜಿಲ್ಲಾ ಬೋರ್ಡು ಪ್ರೆಸಿಡೆಂಟರವರೂ ಶ್ರೀಗಳಾದ ಯಸ್. ಮುಕುಂದ ರಾವ್ ಜಿಲ್ಲಾ ಬೋರ್ಡು ವಿದ್ಯಾಧಿಕಾರಿಗಳೂ, ಶ್ರೀ. ಯಂ. ಯಸ್. ವಿಠಾಂಬರರಾಯರೂ ಯೂನಿಯನ್ನಿನ ಆವಶ್ಯಕತೆ, ಪ್ರಯೋಜನ ಇತ್ಯಾದಿ ಕುರಿತು ಯೋಗ್ಯ ಸಲಹೆಗಳನ್ನು ಕೊಟ್ಟರು. ಸಭಾಧ್ಯಕ್ಷರು ಉಪಾಧ್ಯಾಯರ ಕಷ್ಟ ಸಂಕಷ್ಟಗಳನ್ನು ನಿವಾರಣೆಮಾಡಬಹುದಾದ ಕುರಿತು ಅಮೂಲ್ಯ ಸೂಚನೆಗಳನ್ನು ಕೊಟ್ಟು, ಬೋರ್ಡಿನ ಆರ್ಥಿಕ ಸ್ಥಿತಿಗತಿಗಳನ್ನು ಹೆಚ್ಚಿಸಲು ಉಪಾಧ್ಯಾಯರು ಬೆಂಬಲಕೊಡಬೇಕೆಂದೂ ಬರೇ ಠರಾವುಗಳನ್ನು ಮಾಡುವುದರಲ್ಲಿ ಸಂತೃಪ್ತರಾಗದೆ ಉಪಾಧ್ಯಾಯರು ಮೇಲ್ಮೆಗಾಗಿ ಕಾರ್ಯತಃ ಕೆಲಸಮಾಡಬೇಕೆಂದೂ ಹಲವು ಉಪಯುಕ್ತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಸಂಘವು ಚಿರಾಯುವಾಗಲೆಂದು ಹರಸಿದರು. ಅನಂತರ ಧನ್ಯವಾದ ಸಮರ್ಪಣೆಗಳಿಂದ ಸಭೆಯು ಮುಕ್ತಾಯವಾಯಿತು.

ಉಡುಪಿ

ಮಿಸೆಸ್ ಡಾಕ್ಟರ್ ಐತಾಳರಿಗೆ ಸತ್ಕಾರ— ಡಾ| ಕೆ. ಎಲ್. ಐತಾಳರ ಧರ್ಮಪತ್ನಿ ಶ್ರೀಮತಿ ಕೆ. ಗಿರಿಜಾಬಾಯಿಯವರು ಸ್ಥಳೀಯ ಒನರರಿ ಬೆಂಚ್ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರೆಂಬುದು ಅಭಿನಂದನೀಯ. ಈ ಬಗ್ಗೆ ಇವರನ್ನು ಅಭಿನಂದಿಸಲು ಶ್ರೀಮತಿ ಕೃಷ್ಣವೇಣಿಯಮ್ಮ ಆರ್. ಆರ್. ಕುಂಜಿಬೆಟ್ಟುರವರು ತಮ್ಮ ಮನೆಯಲ್ಲಿ ಸತ್ಕಾರಕೂಟವೊಂದನ್ನು ಶ್ರೀಮತಿ ಮಟ್ಪಾಡಿ ಕಮಲಾಕ್ಷಿ ಅಮ್ಮ ವೆಂಕೋಬಾರಾಯರ ಅಧ್ಯಕ್ಷತೆಯಲ್ಲಿ ತಾ. 31-1-40ರಲ್ಲಿ ಜರಗಿಸಿದರು.

ರಾಮಕೃಷ್ಣ ವಿದ್ಯಾರ್ಥಿ ಭವನದ ದಿನಾಚರಣೆ—ಈ ತಾ 18ನೇ ಸಂಜೆ 4. 30ಕ್ಕೆ ಸ್ಥಳೀಯ ಡಿಸ್ಟ್ರಿಕ್ಟ್ ಮುನ್ಸಿಫರಾದ ಶ್ರೀ. ಕೆ. ಆರ್. ಕೃಷ್ಣಯ್ಯ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದು ಕೇಳುತ್ತೇವೆ. ಅದೇ ದಿನ ಪ್ರಾತಃಕಾಲ 10ಘಂಟೆಗೆ ಉಡುಪಿ ತಾಲೂಕಿನ ಹಳೆ ವಿದ್ಯಾರ್ಥಿಗಳ ಸಭೆಯೂ ನಡೆಯಲಿರುವುದೆಂದೂ ಅದಕ್ಕೆ ಸಕಲರೂ ಬರಬೇಕೆಂದು ಅಪೇಕ್ಷಿಸಲಾಗಿದೆಯೆಂದೂ ತಿಳಿದುಬರುತ್ತದೆ.

ತಿದ್ದುಪಡಿ.

ಕಳೆದ ವಾರದ ಸಂಚಿಕೆಯ 13ನೇ ಪುಟದ 4ನೇ ಕಲಂನಲ್ಲಿ ಪ್ರಕಟವಾದ ಜಿಲ್ಲಾ ಬೋರ್ಡಿನ ಟೆಂಡರ್ ನೋಟೀಸಿನ 1ನೇ ಪಾರದ 6ನೇ ಲೈನಿನಲ್ಲಿ executing works ಎಂಬವರ ನಡುವೆ Printing ಎಂಬ ಶಬ್ದವು ಬಿಟ್ಟುಹೋಗಿದೆ. ದಯವಿಟ್ಟು ಅದನ್ನು ಸೇರಿಸಿ ಓದಬೇಕಾಗಿ ಕೋರುತ್ತೇವೆ. ಸಂ.ನ.

ಅತ್ಯಂತ ವಿಷಾದಕರ ಮರಣ

ಇತ್ತೀಚೆಗೆ ಪುತ್ತೂರು ಬೋರ್ಡು ಹೈಸ್ಕೂಲಿನ ಅಧ್ಯಾಪಕರಾಗಿ ನೇಮಿಸಲ್ಪಟ್ಟಿದ್ದ ಶ್ರೀ. ಎಸ್. ರಾಮಣ್ಣ ಶೆಟ್ಟಿ ಬಿ. ಎ. ಬಿ. ಎಲ್. ಟಿ. ಇವರು ಕೆಲವು ದಿನಗಳಿಂದ ಟೈಫಾಯಿಡ್ ಮತ್ತು ನ್ಯುಮೋನಿಯ ಪೀಡಿತರಾಗಿ ಕಳೆದ ತಾ. 4ರಲ್ಲು ನಿಧನಹೊಂದಿರುವರೆಂಬುದು ಅತ್ಯಂತ ವಿಷಾದಕರವಿದೆ. ಇವರು ಬರೇ ಎಳೆವಯಸ್ಸಿನ ಪ್ರಾಯದವರಿದ್ದು ಸಾರ್ವಜನಿಕ ಕೆಲಸಗಳಲ್ಲಿ ಅತ್ಯುತ್ಸಾಹವುಳ್ಳವರಿದ್ದರು. ಉಜ್ವಲ ದೇಶಾಭಿಮಾನಿಯಾಗಿ ಅತ್ಯಂತ ನಿಷ್ಠೆಯಿಂದ ಕಾಂಗ್ರೆಸಿಗಾಗಿ ದುಡಿದಿದ್ದರು. ವಿದ್ಯಾರ್ಥಿ ದೆಶೆಯಲ್ಲಿಯೇ ಜನಹಿತಸಾಧನಾ ಕಾರ್ಯದಲ್ಲಿ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದರು. ಬಿ. ಎ. ಪಾಸಾದ ಮೇಲೆ ಕಲ್ಯಾಣಪುರ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದು ಕಳೆದ ವರ್ಷ ಎಲ್. ಟಿ. ಕಲಿಯ ಹೋಗಿ ಪಾಸಾಗಿ ಕಳೆದ ಜೂನ್ ತಿಂಗಳಲ್ಲಿ ಪುತ್ತೂರು ಬೋರ್ಡು ಹೈಸ್ಕೂಲಿನ ಅಧ್ಯಾಪಕರಾಗಿ ನೇಮಿಸಲ್ಪಟ್ಟು ಒಳ್ಳೇ ಉತ್ಸಾಹದಿಂದ ಚನ್ನ ಕೆಲಸವನ್ನು ಮಾಡಿ ಎಲ್ಲರ ಪ್ರೀತಿಗೂ ಪಾತ್ರರಾಗಿದ್ದರು. ತಂದೆತಾಯಿಂದಿರ ಒಬ್ಬನೇ ಪುತ್ರನಾಗಿ ಮುಂದಿನ ಆಶಯವಾಗಿದ್ದರು. 3ವರ್ಷಗಳ ಹಿಂದೆ ವಿವಾಹಿತರಾಗಿ ಸಂತತಿಯನ್ನೇನೂ ಪಡೆದಿರಲಿಲ್ಲ. ಇಷ್ಟೊಂದು ಉತ್ಕೃಷ್ಟ ಹಾಗೂ ನಿರ್ದುಷ್ಟ ಜೀವನವು ಅರಳಿ ಮೊಗ್ಗೆಯಾಗುವಷ್ಟರಲ್ಲೇ ಉದುರಿ ಬೀಳುವಂತಹ ದುರ್ವಿಧಿಯು ಹೃದಯಭೇದಕವಾದುದು. ಅಸಹನೀಯ ದುಃಖಕ್ಕೀಡಾಗಿರುವ ಮೃತರ ಹೆತ್ತವರು ಮತ್ತು ತರುಣ ಪತ್ನಿಯೊಡನೆ ನಾವು ಸಂಪೂರ್ಣ ಸಹಾನುಭೂತಿಯುಳ್ಳವರಿರುವೆವು.

ಎಡ್ಯುಕೇಶನಲ್ ಎಡ್ವೈಜರಿ ಕಮಿಟಿ ಸಭೆ—ಉಡುಪಿ ತಾಲೂಕು ಎಡ್ಯುಕೇಶನಲ್ ಎಡ್ವೈಜರಿ ಕಮಿಟಿಯ ಸಭೆಯೊಂದು ಕಳೆದ ತಾ. 31ರಲ್ಲಿ ಚೆಯರ್ಮನ್ ಶ್ರೀ. ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಬ್ರಹ್ಮಾವರ ಕೇಂದ್ರದಲ್ಲಿ ಇತ್ತೀಚೆಗೆ ಜನ್ಮತಾಳಿದ ಹುಡುಗಿಯರ ಶಾಲೆಯ ರಿಕೊಗ್ನಿಷನನ್ನು ರದ್ದುಮಾಡಬೇಕಾಗಿ ಆಸುಪಾಸಿನ ಮಟ್ಪಾಡಿ, ಬೈಕಾಡಿ, ಬ್ರಹ್ಮಾವರ ಶಾಲೆಗಳ ಅರ್ಜಿಗಳನ್ನು ಪರಿಶೀಲಿಸಲಾಯಿತು. ಹುಡುಗಿಯರ ಶಾಲೆಯು ಅನಗತ್ಯ. ಈ ಕಮಿಟಿಯ ಅಸ್ತಿತ್ವವನ್ನು ಲೆಕ್ಕಿಸದೆ ಶಾಲಾ ಇನ್ಸ್ಪೆಕ್ಟ್ರೆಸ್‌ರವರು ಏಕಾಏಕಿಯಾಗಿ ಶಾಲೆಯನ್ನು ರಿಕೊಗ್ನೈಸ್ ಮಾಡಿದುದು ಈ ಕಮಿಟಿಗೆ ತುಂಬಾ ಅಸಮಾಧಾನಕರವಿದೆ. ಆ ಇಲಾಖೆಯವರು ಈ ಕಮಿಟಿಗೆ ತೋರಿಸಿದ ಅಗೌರವದ ಕುರಿತು ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಗೆ ಬರೆಕೊಳ್ಳುವರೆ ಚೆಯರ್ಮನರಿಗೆ ಅಧಿಕಾರವೀಯಲಾಯಿತು. ರೆ| ಫಾದರ್ ಸ್ಕ್ಯಾಸೊ ಮತ್ತು ಡೆಪ್ಯುಟಿ ಇನ್ಸ್ಪೆಕ್ಟರ್ ಶ್ರೀ. ಯು. ಕೃಷ್ಣರಾಯರು ಉಪಸ್ಥಿತರಾಗಿದ್ದರು. ವರ್ಷಾವಧಿ ಶಾಲಾ ದಿನಗಳು ೨೦೦ ಇದ್ದರೆ ಸಾಕೆಂಬುದೇ ಈ ಕಮಿಟಿಯ ಅಭಿಪ್ರಾಯವೆಂದು ಸೂಚಿಸಲಾಯಿತು.

ಜಾರ್ಕಳ— ಯುದ್ಧಸಹಾಯಕ ಕಮಿಟಿಗೆ ಕಾರ್ಕಳ ತಾಲೂಕಿನಿಂದ ಆರಿಸಲ್ಪಟ್ಟ ಶ್ರೀ. ಜಾರ್ಕಳ ನಾಗಣ್ಣ ಹೆಗ್ಡೆಯವರು ತಮ್ಮ ಮೆಂಬರಿಕೆಗೆ ರಾಜಿನಾಮೆ ಕೊಟ್ಟಿರುವರೆಂಬುದು ಅಭಿನಂದನೀಯವಿದೆ.

ಫಲಿಮಾರು— ಶ್ರೀ. ಯಸ್ ಸುಂದರ ಶೆಟ್ಟಿ ಸಾಂತೂರು ಪಂಚಾಯತ ಬೋರ್ಡಿಗೆ ಅವಿರೋಧದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟುದರ ಸಂತೋಷ ಸೂಚನಾರ್ಥವಾಗಿ ತಾ. 31-1-40ರಲ್ಲಿ ಸ್ಥಳೀಕ ಬೋ| ಹಾ| ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಸಾಮೆಬೆಟ್ಟು ರಾಮರಾಯರು ಒಂದು ಟೀ ಸತ್ಕಾರವನ್ನು ಏರ್ಪಡಿಸಿದ್ದರು. ನೆರೆದವರಲ್ಲಿ ಶ್ರೀಗಳಾದ ಕೆ. ವೆಂಕಟಪ್ಪಯ್ಯನವರೂ ಮೈ. ಶಾಳಪ್ಪ ಶೆಟ್ರು ಸಂದರ್ಭೋಚಿತವಾಗಿ ಭಾಷಣವಿತ್ತರು.

ಬ್ರಹ್ಮಾವರ— ಇಲ್ಲಿಯ ಸಾರಸ್ವತರ ಮಠದಲ್ಲಿ ವಾಡಿಕೆಯಂತೆ ಈ ವರ್ಷವೂ ತಾ 2-2-40ರಲ್ಲು 50ಜನ ಹರಿಜನ ಕೊರಗರಿಗೆ ಮೃಷ್ಟಾನ್ನ ಭೋಜನವಿತ್ತು ಆಶೀರ್ವದಿಸಿದರು.

ಸ್ವರಾಜ್ಯ ಮೈದಾನದಲ್ಲಿ ಹಳ್ಳಿಗರ ಜಾಗೃತಿಯ ಕುರಿತು ಪ್ರತಿ ಸೋಮವಾರವೂ ಸಾರ್ವಜನಿಕ ಸಭಾ ಭಾಷಣಗಳು ತಾ. 12-2-40ರಿಂದ ಪ್ರಾರಂಭಿಸಲ್ಪಡುವುದು. ಸರ್ವರಿಗೂ ಸ್ವಾಗತವಿದೆ.

ಇಲ್ಲಿಯ ಕೆರೆಕಟ್ಟೆ ಗಣಪತಿ ದೇವಸ್ಥಾನದಲ್ಲಿ ಪ್ರತಿ ವರ್ಷವೂ ನಡೆಯುವ ಭಜನಾಸೇವೆಯು ಈ ವರುಷ ಇದೇ ತಾರೀಕು 1-2-40ರಿಂದ ಪ್ರಾರಂಭವಾಗಿ, ತಾ. 12-2-40ನೇ ಸೋಮವಾರ ಪುಷ್ಪಪಾಲಕಿಯ ಉತ್ಸವ, ರಂಗಪೂಜಾ ಮೊದಲಾದ ವಿಶೇಷ ಸೇವೆಗಳು ನಡೆಯಲಿರುವವು.

ಮಂದರ್ತಿ— ಶ್ರೀ. ಚಂಡಿಕಾ ದುರ್ಗಾಪರಮೇಶ್ವರೀ ದೇವಸ್ಥಾನದ ರಥೋತ್ಸವವು ಇದೇ ತಿಂಗಳ ತಾ. 10ರಿಂದ 15ರ ವರೆಗೆ ನಡೆಯಲಿರುವುದೆಂದೂ ಸರ್ವರೂ ಬಂದು ಶ್ರೀಮುಡಿ ಪ್ರಸಾದಗಳನ್ನು ಸ್ವೀಕರಿಸಬೇಕೆಂದೂ ಆಡಳ್ತೆ ಮೊಕ್ತೇಸರ್ ಶ್ರೀ. ಎಚ್. ಶೇಷ ಹೆಗ್ಗಡೆಯವರು ಅಪೇಕ್ಷಿಸುತ್ತಾರೆ.

ಕಟಪಾಡಿ— ಪಂಚಾಯತ ಬೋರ್ಡಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ಜಿಲ್ಲಾ ಪಂಚಾಯತ್ ಆಫೀಸರ್ ಸಂಜೀವ ತಳವಾರ್ ಬಿ. ಎ. ಎಲ್. ಎಲ್. ಬಿ. ಯವರ ಅಧ್ಯಕ್ಷತೆಯಲ್ಲಿ ತಾ. 31-1-40ರಲ್ಲಿ ಜರಗಿ ಶ್ರೀ. ಪಿ. ವೆಂಕಟಪ್ಪಯ್ಯ ನಾಯ್ಕರು B. Sce. ಇವರು ಅಧ್ಯಕ್ಷರಾಗಿಯೂ, ಶ್ರೀ. ಯಮ್. ಲಕ್ಷ್ಮೀನಾರಾಯಣರಾಯರು ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಚುನಾಯಿಸಲ್ಪಟ್ಟಿರುವರು. ಬೋರ್ಡಿಗೆ ಸಂಬಂಧಪಟ್ಟ ಕೆಲವು ಸೂಚನೆಗಳಾದ ಮೇಲೆ ಅಧ್ಯಕ್ಷರ ಟೀಪಾರ್ಟಿ ಸತ್ಕಾರ ನಡೆಯಿತು. ಉಪಾಧ್ಯಕ್ಷರು ರಾಜನಾಮೆ ಕಾರಣಾಂತರಗಳಿಂದ ರಾಜಿಕೊಟ್ಟರೆಂದೂ ವದಂತಿ.

ಸಾಂತೂರು— ತಾ. 16-1-40ರಲ್ಲಿ ಇಲ್ಲಿಯ ಪಂಚಾಯತ್ ಬೋರ್ಡ್ ಚುನಾವಣೆಯು ಜಿಲ್ಲಾ ಪಂಚಾಯತ್ ಆಫೀಸರರ ನೇತೃತ್ವದಲ್ಲಿ ನಡೆದು ಶ್ರೀಗಳಾದ ಎ. ಸೀತಾರಾಮಹೆಗ್ಡೆ, ಯಸ್. ಸುಂದರ ಶೆಟ್ಟಿ, ವಿಟ್ಠಲ ಶೆಟ್ಟಿ, ನಾರಾಯಣ ಮಲ್ಯ, ಲಕ್ಷ್ಮಣ ನಾಯ್ಕ, ದುಮಿಂಗ ಸೋಜ, ಪಿಯಾದ್ ಸೋಜ, ಮಾದಣ ಶೆಟ್ಟಿ, ರಾಮಚಂದ್ರ ಭಟ್ಟ, ತುಗಲ (ಹರಿಜನ) ಇವರು ಸರ್ವಾನುಮತದಿಂದ ಚುನಾಯಿಸಲ್ಪಟ್ಟರು. ತಾ. 30-1-40ರಲ್ಲಿ ನಡೆದ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ. ಯಸ್. ಸುಂದರ ಶೆಟ್ಟಿ ಅಧ್ಯಕ್ಷರಾಗಿಯೂ ಶ್ರೀ. ನಾರಾಯಣ ಮಲ್ಯರು ಉಪಾಧ್ಯಕ್ಷರಾಗಿಯೂ ಅವಿರೋಧವಾಗಿ ಆರಿಸಲ್ಪಟ್ಟಿರುವರು. ತರುಣ ವಿದ್ಯಾವಂತರ ಅಧ್ಯಕ್ಷತೆಯಲ್ಲಿ ಹೊಸ ಪಂಚಾಯತ ಬೋರ್ಡು ಸಭೆಯಿಂದ ಗ್ರಾಮಾಭಿವೃದ್ಧಿ ಹೊಂದುವುದೆಂದು ಗ್ರಾಮಸ್ಥರ ನಿರೀಕ್ಷೆ.

ಎರ್ಮಾಳ— ಬಡಾ ಗ್ರಾಮ (ದೊಡ್ಡ ಪಟ್ಟಣ) ಮೊಗವೀರ ಹತ್ತು ಸಮಸ್ತರು ಸುಮಾರು ಏಳು ಮೂರು ಸಾವಿರ ವೆಚ್ಚದಿಂದ ತಯಾರಿಸಿರುವ ಒಂದು ಕಟ್ಟೋಣದಲ್ಲಿ ನಿರಕ್ಷರರಾದ ಬಾಲ-ಬಾಲಕಿಯರ ವಿದ್ಯಾರ್ಜನೆಗಾಗಿ "ಶ್ರೀ ವಿದ್ಯೋದಯ ಶಾಲೆ" ಎಂಬ ಹೆಸರಿನಿಂದ ಕಳೆದ ಸಂ. 1938ನೇ ಜೂನ್ ತಿಂಗಳಿಂದ ಒಂದು ಧರ್ಮಾರ್ಥ ಪ್ರಾಥಮಿಕ ಶಾಲೆಯನ್ನು ತೆರೆದು, ವಿದ್ಯಾರ್ಥಿಗಳಿಗೆ ಪುಸ್ತಕ, ಚೀಲ, ಸ್ಲೇಟು, ಕಡ್ಡಿ ಇತ್ಯಾದಿಗಳನ್ನಿತ್ತು ನಡಿಸಿಕೊಂಡು ಬರುತ್ತಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆಯು 100ಕ್ಕಿಂತಲೂ ಹೆಚ್ಚಿಗೆ ಇದ್ದು 3 ಜನ ಉಪಾಧ್ಯಾಯರುಗಳಿಂದ ಸುಧಾರಿಸಲ್ಪಡುತ್ತಲಿದೆ. ಬಡ ಸಂಸ್ಥೆಯವರಾದರೂ ಉಪಾಧ್ಯಾಯರ ಸಂಬಳ ವಗೈರೆ ಎಲ್ಲಾ ಖರ್ಚನ್ನು ಹತ್ತು ಸಮಸ್ತರೇ ತೆರುತ್ತಿದ್ದಾರೆ. ಶಾಲೆಯ ವ್ಯವಹಾರವು ಎಲ್ಲಾ ವಿಧದಲ್ಲೂ ಸಂತೃಪ್ತಿಕರವಾಗಿ ಕಂಡುಬರುತ್ತದೆ. ಸದರೀ ಶಾಲೆಯನ್ನು ಸರಕಾರದವರು ಮುಂದಾಳು ಮಾಡಿ ಫಿಶರೀಸ್ ಡಿಪಾರ್ಟ್‌ಮೆಂಟಿಗೊಪ್ಪಿಸಲಿಕ್ಕಿದ್ದಾರೆಂಬುದು ತಿಳಿದುಬರುತ್ತದೆ.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

Your anxiety in finding a sound and progressive Life Office both to insure or to represent will end on consultation with:

Branch Secretary,
The New Guardian of India Life Ins. Co. Ltd., Madras.
MANGALORE Branch.

ಹರ್ ಹಿಟ್ಲರರ ಭಾಷಣ

ಜರ್ಮನಿಯ ನಿರ್ನಾಮವೇ ಬ್ರಿಟಿಷರ ಉದ್ದೇಶ.

ಲೋಕದ ಹೆಚ್ಚಿನ ಯುದ್ಧಗಳನ್ನು ನಡಿಸಿದವರು ಬ್ರಿಟಿಷರು

ಜನವರಿ ತಾ. 30ರಲ್ಲು ನಾಝಿ ಕ್ರಾಂತಿಯ 7ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹರ್ ಹಿಟ್ಲರರು ಬರ್ಲಿನಿನ ಆಟದರ ಮನೆಯಲ್ಲಿ ಭಾಷಣಮಾಡುತ್ತಾ, ಮಿತ್ರರಾಷ್ಟ್ರಗಳ ಪ್ರಜಾಸತ್ತಾತ್ಮಕ ಧ್ಯೇಯಗಳು ಬರಿಯ ಬಾಯಿಮಾತೆಂದು ಪರಿಹಾಸ್ಯ ಮಾಡಿದರು. "ಲೋಕದಲ್ಲಿ ಹೆಚ್ಚಿನ ಯುದ್ಧಗಳನ್ನು ನಡಿಸಿರುವ ರಾಷ್ಟ್ರ ಬ್ರಿಟನು. ಯುದ್ಧದ ಉದಾತ್ತ ಉದ್ದೇಶಗಳನ್ನು ಸಾರಲು ಇಂಗ್ಲೆಂಡು ಚೆನ್ನಾಗಿ ಕಲಿತಿದೆ. ಕಳೆದ ಯುದ್ಧಾನಂತರ ಯುರೋಪಿನಲ್ಲಿ ಸುವರ್ಣ ಯುಗವಾರಂಭವಾಗುವುದೆಂದು ಉದ್ಘೋಷಿಸಲಾಗಿತ್ತು. ಆದರೆ ಆ ಸುವರ್ಣ ಯುಗದ ಬದಲಿಗೆ ಯುರೋಪಿನ ಪರಿಸ್ಥಿತಿಯು ಮತ್ತಷ್ಟು ಕೆಟ್ಟುಹೋಯಿತು. ಹಿಂದೆ ಹಲವು ಸಲ ನಡಿಸಲ್ಪಟ್ಟಿರುವ ಈ ನಟನೆಯಿಂದ ಜನರು ವಂಚಿತರಾಗುವಹಾಗಿಲ್ಲ. ಮಿ. ಚೇಂಬರ್ಲೇನರು ಉದಾತ್ತ ಯುದ್ಧೋದ್ದೇಶವನ್ನು ಸಾರುವುದೆಂದರೆ ಪಿಶಾಚಿಯು ಶಾಸ್ತ್ರಹೇಳಿದಂತೆಯೇ ಸರಿ. ಅವರ ಮಾತನ್ನಾರೂ ನಂಬಲಾರರು. ಮಿ. ಚರ್ಚಿಲ್ಲರಂದಂತೆ ಯುದ್ಧದ ಮೊದಲಿನ ಅವಸ್ಥೆಯು ಈಗ ಕೊನೆಗೊಂಡು ಎರಡನೇ ಅವಸ್ಥೆಯು ಆರಂಭವಾಗಿದೆ. ಸ್ತ್ರೀಯರು ಮಕ್ಕಳ ಮೇಲೂ ಬೋಂಬೆಸೆಯುವ ಅವಸ್ಥೆಯು ಇನ್ನು ಉಂಟಾಗಬಹುದು. ಬ್ರಿಟಿಷರು ಸ್ತ್ರೀಯರು ಮಕ್ಕಳ ಮೇಲೆ ಯುದ್ಧ ನಡಿಸಲು ಹೇಸುವಹಾಗಿಲ್ಲ. ಕಳೆದ ೬ ತಿಂಗಳಲ್ಲಿ ಬ್ರಿಟನು ಪ್ರಚಂಡ ಯುದ್ಧ ಸಿದ್ಧತೆಮಾಡಿರುವುದಂತೆ. ಜರ್ಮನಿಯು ಈ ೬ ತಿಂಗಳಲ್ಲಿ ಏನುಮಾಡಿರುವುದೆಂಬುದು ನಮ್ಮ ವೈರಿಗಳಿಗೆ ತಿಳಿದಿಲ್ಲ. ಇಂಗ್ಲೆಂಡು ಅಣಕಿಸುತ್ತಿರುವುದು ಜರ್ಮನಿಯನ್ನು. ಎಷ್ಟೊಂದು ಅಣಕಿಸಿದರೂ ನರಿಯು ಹುಲಿಯಾಗಲಾರದು. ಇಂಗ್ಲೆಂಡಿನ ಆಕಾಶವೆಲ್ಲಾ ಯುದ್ಧ ವಿಮಾನಗಳಿಂದ ತುಂಬಿದೆಯಂತೆ. ಇಡೀ ಲೋಕದ ರಾಷ್ಟ್ರಗಳೆಲ್ಲಾ ಬ್ರಿಟನಿಗಾಗಿ ಯುದ್ಧ ಸಿದ್ಧತೆಮಾಡುತ್ತಿರುವವಂತೆ. ಜರ್ಮನಿಯ ಸಬ್ ಮೆರೀನುಗಳೆಲ್ಲಾ ನಾಶವಾಗಿ 3 ಮಾತ್ರ ಉಳಿದಿವೆಯಂತೆ. ಈ ಮೂರು ಕೂಡಾ ಮುಳುಗಿಸಲ್ಪಟ್ಟ ಮೇಲೆ ಮತ್ತೂ ಜರ್ಮನ್ ಸಬ್ ಮೆರೀನುಗಳು ಬ್ರಿಟಿಷ್ ಹಡಗಗಳನ್ನು ಮುಳುಗಿಸಿದರೆ ಆಗ ಯಾವ ಕತೆ ಹೊರಡಿಸುವರೋ ಬ್ರಿಟಿಷರು! ವೈರಿಗಳ ಪ್ರಚಾರದ ರೀತಿ ನೋಡುವಾಗ ಜರ್ಮನಿಗೆ ವಿಜಯ ನಿಶ್ಚಯವೆಂಬುದು ಖಚಿತವಾಗುತ್ತದೆ. ಕೊನೆಯ ಜಯ ದೊರೆವನಕ ಜರ್ಮನಿಯು ಸಂಧಿಮಾಡಲಿಕ್ಕಿಲ್ಲ.

ಕೇವಲ 44 ಮಿಲ್ಯ ಜನರಿರುವ ಬ್ರಿಟಿಷ ಜನಾಂಗವು ಲೋಕದ 40 ಮಿಲ್ಯ ಚಚೌಕ ಮೈಲು ಪ್ರದೇಶವನ್ನಾಳುತ್ತಿದೆ. ಮತ್ತು ಅದು ತನಗೆ ದೈವದತ್ತವಾದುದೆಂದು ಹೇಳಿ ಅದನ್ನು ಬಿಟ್ಟುಕೊಡಲು ಸಿದ್ಧರಿರುವುದಿಲ್ಲ. ಇದೇರೀತಿ ಫ್ರೆಂಚ್ ಜನಾಂಗವು 9 ಮಿಲ್ಯ ಚಚೌಕ ಮೈಲು ಪ್ರದೇಶವನ್ನಾಳುತ್ತಿದೆ. 80 ಮಿಲ್ಯ ಜನರಿರುವ ಜರ್ಮನ್ ಜನಾಂಗಕ್ಕಿರುವುದು ಸುಮಾರು 6 ಲಕ್ಷ ಚಚೌಕ ಮೈಲು ಸ್ಥಳಮಾತ್ರ. ಇದು ಅಸಹನೀಯ ಪರಿಸ್ಥಿತಿಯಾಗಿದೆ. ಸಾಮಾಜಿಕ ವೈಷಮ್ಯದ ಸಮಸ್ಯೆಯಂತೆಯೇ ಈ ಸಮಸ್ಯೆಯನ್ನೂ ಬಿಡಿಸತಕ್ಕದ್ದು. ಜರ್ಮನಿಯನ್ನು ವಿಭಾಗಿಸಿ ನಿರ್ನಾಮಗೊಳಿಸುವುದೇ ಬ್ರಿಟನ್ ಮತ್ತು ಫ್ರಾನ್ಸುಗಳ ಉದ್ದೇಶ. 15 ವರ್ಷಗಳ ಹೋರಾಟದ ಮೇಲೆ ನಾಝಿ ಜರ್ಮನಿಯು ತನ್ನ ಆಂತರಿಕ ಪ್ರಶ್ನೆಯನ್ನು ಇತ್ಯರ್ಥಪಡಿಸಿ ವಿಜಯಿಯಾಗಿದೆ. ಅದೇ ರೀತಿಯ ವಿಜಯವನ್ನೇ ಅದು ಈ ಬಾಹ್ಯ ಪ್ರಶ್ನೆಯ ಸಂಬಂಧವಾಗಿಯೂ ಪಡೆಯುವುದು" ಎಂಬುದೇ ಹಿಟ್ಲರರ ಭಾಷಣದ ಸಾರಾಂಶ. ಕಡೆಯವರೆಗೂ ಹಿಟ್ಲರರ ಭಾಷಣದ ವಿಷಯವನ್ನು ಗುಟ್ಟಾಗಿರಿಸಲಾಗಿತ್ತು.

ಸ್ಕೂಲ್, ಲೈಬ್ರೆರಿ ಮತ್ತು ಗ್ರಾಮಪಂಚಾಯಿತಿಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ.

ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಇದೆ.

ಪಿ. ಎ. ಉಪಾಧ್ಯಾಯ,

ಬುಕ್ ಸೆಲರ್ ಅಂಡ್ ಪಬ್ಲಿಷರ್,

೪೫ ಎ.ಎಸ್.ಸ್ಟ್ರೀಟ್ ಬೆಂಗಳೂರು ಸಿಟಿ

೧ ರೂ. ಕೊಡುವ ಚಂದಾರರಿಗೆ ಮಾತ್ರ

ರೂ. ೩೮ ಪುಸ್ತಕಗಳು

ಈಗಲೇ] **ಉಚಿತ** [ಈ ದಿನವೇ

ಪುಸ್ತಕಗಳ ತಪಸೀಲುಪಟ್ಟಿಗೆ ಬರೆಯಿರಿ

ವ್ಯವಸ್ಥಾಪಕ:- ಪಿ. ಎ. ಉಪಾಧ್ಯಾಯ

ಮಾಧ್ವಗ್ರಂಥ ಪ್ರಕಾಶನ ಸಮಿತಿ,

೪೫ ಎ.ಎಸ್.ಸ್ಟ್ರೀಟ್, ಬೆಂಗಳೂರು ಸಿಟಿ

ಕೋಪ್ರಾನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿಮಾಡುವದು. ತಯಾರಿಸುವವರು — ಕೋಪ್ರಾನ್ ಕೆಮಿಕಲ್ ಕಂ. (ಮಾಲಕರು:— ಮುಗನಭಾಯ್ ಅಮೀನ್ ಅಂಡ್ ಕಂಪೆನಿ ಮುಂಬಯಿ.

ಸಮಾಚಾರ ಸಂಗ್ರಹ

ಬರುವ ಕಾಂಗ್ರೆಸ್ ಪ್ರೆಸಿಡೆಂಟರು

ರಾಮಘರ ಕಾಂಗ್ರೆಸಿನ ಅಧ್ಯಕ್ಷತೆಗೆ ಮೌಲಾನಾ ಅಬ್ದುಲ್ ಕಲಮ್ ಅಜದ್ ಮತ್ತು ಶ್ರೀ ಎಮ್. ಎನ್ ರೈಯ್ಯರ ಹೆಸರು ಸೂಚಿಸಲ್ಪಟ್ಟಿವೆ. ವಾಯುವ್ಯ ಗಡಿನಾಡು ಪ್ರಾಂತದವರು ಮೌಲಾನ ಅಬ್ದುಲ್ ಕಲಮ್ ಆಜದರ ಹೆಸರು ಸೂಚಿಸಿರುವರು. ಅವರೊಪ್ಪದಿದ್ದಲ್ಲಿ ಪಂಡಿತ ಜವಾಹರಲಾಲರಾಗಬೇಕೆಂದು ಅಭಿಪ್ರಾಯ ವಿತ್ತಿರುವರು. ಬಿಹಾರ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಮೌಲಾನ ಅಜದರ ಹೆಸರನ್ನು ಸೂಚಿಸಿರುವರು. ಶ್ರೀ. ಎಮ್. ಎನ್. ರೈಯವರಿಗೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳ ಬೆಂಬಲ ದೊರೆಯುವಹಾಗಿಲ್ಲ. ಅದುದರಿಂದ ಮೌಲಾನ ಆಜದರೇ ಈ ಬಾರಿ ಪ್ರಬಲ ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಡುವದು ನಿಶ್ಚಯವೆಂದು ಹೇಳಬಹುದಾಗಿದೆ. ಪ್ರಕೃತದ ದೇಶದ ಪರಿಸ್ಥಿತಿಯಲ್ಲಿ ಮೌಲಾನ ಆಜದರೇ ಕಾಂಗ್ರೆಸ್ ಪ್ರೆಸಿಡೆಂಟರಾಗುವುದು ಒಳ್ಳೇದೆಂದು ಗಾಂಧಿಯವರು ಅಭಿಪ್ರಾಯಪಟ್ಟಿರುತ್ತಾರೆ.

ಅಶೋಕ ದಿನಾಚರಣೆ

ಚೀನದಿಂದ ಹಿಂದೀ ಬಾಂಧವ್ಯ ಸ್ಥಾಪನಾ ಮಿಶಿನೊಂದು ಹಿಂದೂದೇಶಕ್ಕೆ ಬಂದಿರುವುದು. ಚೀನದ ಧಾರ್ಮಿಕ ಗುರುಗಳೇ ಈ ಮಿಶನಿನಲ್ಲಿ ಅಗ್ರಭಾಗವಹಿಸಿರುವರು. ಜನವರಿ ತಾ 31ರಲ್ಲು ಬೆನಾರಿಸಿನಲ್ಲಿ ಚೀನೀ ಮಿಶನಿನ ಮುಖ್ಯಸ್ಥರಾದ ರೆವೆರೆಂಡ್ ಟಾಯಿ ಸುರವರ ಅಧ್ಯಕ್ಷತೆಯಲ್ಲಿ ಅಶೋಕ ದಿನಾಚರಣೆಯು ನಡೆಯಿತು. ಬೆನಾರೀಸಿನ ಮುನ್ಸಿಪಲ್ ಬೋರ್ಡಿನವರು ಚೀನೀ ಮಿಶನಿಗೆ ಮಾನಪತ್ರವನ್ನು ಅರ್ಪಿಸಿ ಸತ್ಕರಿಸಿದರು. ಶ್ರೀ. ಆಚಾರ್ಯ ನರೇಂದ್ರದೇವ ಮತ್ತು ಪಂಡಿತ ಜವಾಹರಲಾಲರೇ ಮೊದಲಾದವರು ಈ ಸಂದರ್ಭದಲ್ಲಿ ಹಾಜರಿದ್ದು ಭಾಷಣಗಳನ್ನಿತ್ತರು. ಮಹಾತ್ಮಾ ಗಾಂಧಿಯವರು ಚೀನವನ್ನು ಸಂದರ್ಶಿಸಬೇಕೆಂದು ಮಾರ್ಶಲ್ ಚ್ಯಾಂಗರು ಆಮಂತ್ರಿಸಿರುವರು. ಈ ಆಮಂತ್ರಣಕ್ಕಾಗಿ ಮಹಾತ್ಮರು ಆಭಾರ ಸೂಚಿಸಿ ದೇಶದ ಪ್ರಕೃತದ ಪರಿಸ್ಥಿತಿಯಲ್ಲಿ ಚೀನಕ್ಕೆ ಹೋಗಲು ತನಗೆ ಸಾಧ್ಯವಿಲ್ಲೆಂದು ತಿಳಿಸಿರುವರು.

ಬೊಂಬಾಯಿಯಲ್ಲಿ ಮದ್ಯಪಾನ ನಿಷೇಧ

ಇಂದೀಗ ಬೊಂಬಾಯಿಯಲ್ಲಿ ಲೈಸನ್ಸ್ ಪಡೆದು 10,000 ಮಂದಿ ಕುಡಿಯುವವರಿದ್ದಾರೆ. ಆದೊಂದು ಮಿತಿಯಲ್ಲಿ ಇವರು ಕುಡಿಯಬಹುದಾಗಿದೆ. ಇವರಲ್ಲಿ 6000 ಮಂದಿ ವಿದೇಶೀಯರು. ಗೋವೆ ಮತ್ತು ಬರೋಡ ಸಂಸ್ಥಾನದಿಂದ ಕಳ್ಳಾಟಿಕೆಯಿಂದ ಮದ್ಯವು ಬೊಂಬಾಯಿ ಸಮೀಪದ ಪ್ರದೇಶಗಳಿಗೆ ತರಲ್ಪಡುತ್ತಿದೆ. ಇದನ್ನು ತಡೆಗಟ್ಟಲು ಸರಕಾರವು ತಕ್ಕ ಏರ್ಪಾಡುಮಾಡಲಿದೆ. ಸಮುದ್ರ ಪಹರೆ ನಡಿಸಲು ರೂ. 25,000 ಕೊಟ್ಟು ಒಂದು ಲೋಂಚನ್ನು ಕೊಂಡುಕೊಳ್ಳಲಾಗುವುದು. ಈ ಲೋಂಚು ಕಾರವಾರ ಕರಾವಳಿಯಲ್ಲಿ ಪಹರೆನಡಿಸುವುದು. ನರ್ಮದಾ ನದಿಯ ಅಳಿವೆಯಲ್ಲಿ ಪಹರೆನಡಿಸಿ ಬರೋಡದಿಂದ ಮದ್ಯ ಬರದಂತೆ ತಡೆಗಟ್ಟಲು 'ಡಾಯಾರ್' ಎಂಬ ಲೋಂಚನ್ನು ಉಪಯೋಗಿಸಲಾಗುವುದು.

ವಾಯುವ್ಯ ಸರಹದ್ದಿನ ಗಲಾಟೆಯು

ಪ್ರತಿದಿನವೂ ನಡೆಯುತ್ತಲೇ ಇರುವುದು. ಬಂಡಾಯಗಾರ ಪಂಗಡಿಗರು ಅಲ್ಲಲ್ಲಿ ಅವಿತು ಕೂತು ದಾರಿಯಲ್ಲಿ ಹೋಗುವ ಲೋರಿ ಮೊದಲಾದ ವಾಹನಗಳನ್ನು ತಡೆಗಟ್ಟಿ ಲೂಟಿಯಾಯಿಸಿ ಅವುಗಳಲ್ಲಿದ್ದವರನ್ನು ಕೂಡಾ ಹಿಡಿದೊಯ್ಯುತ್ತಿದ್ದಾರೆ. ಹಿಂದುಗಳ ಮನೆಗಳು ಹಲವು ಲೂಟಿಯಿಸಲ್ಪಟ್ಟಿವೆ. ಇದೇ ತಾ. 1ರಲ್ಲು ಬನ್ನು ಪಟ್ಟಣದ ಬಳಿಯ ರಸ್ತೆಯ ಲೋರಿಗಳು ಮುರಿದು ಹಾಕಲ್ಪಟ್ಟಿವೆ. ಗಡಿನಾಡಿನ ಪೋಲೀಸರಿಗೂ ಪಂಗಡಿಗರಿಗೂ ಆಗಾಗ ಚಿಕ್ಕ ಹೋರಾಟಗಳು ನಡೆಯುತ್ತಲೇ ಇವೆ. ಬನ್ನುವಿನ ಹಿಂದುಗಳ ಜೀವನ ಅಪಾಯಕ್ಕೀಡಾಗಿದೆ. ಅಲ್ಲಿಯ ಹಿಂದುಗಳ ಮತ್ತು ಸಿಖ್ಖರ ಪ್ರತಿನಿಧಿಗಳು ಗಡಿನಾಡಿನ ಗವರ್ನರರನ್ನು ಕಂಡು ಬನ್ನುವಿನ ಸುತ್ತಲಿನ ಗೋಡೆಗಳಲ್ಲಿ ಸೈನಿಕರ ಪಹರೆಯನ್ನಿರಿಸಬೇಕೆಂದೂ ಅಲ್ಲಲ್ಲಿ ಸರಿಗೆ ಬೇಲಿಹಾಕಿ ಭದ್ರಗೊಳಿಸಬೇಕೆಂದೂ, ಬನ್ನುವಿಗೆ ಪ್ರವೇಶಿಸುವವರು ಕೋವಿಗಳನ್ನು ಹಿಡಕೊಂಡು ಬರದಂತೆ ತಡೆ ಮಾಡಬೇಕೆಂದೂ ಕೇಳಿಕೊಂಡಿರುವರು. ಸರಕಾರವೂ ಈ ವ್ಯವಸ್ಥೆಯನ್ನು ಮಾಡಲಿರುವುದೆಂದು ತಿಳಿದು ಬರುತ್ತದೆ. ವಾಯುವ್ಯ ಗಡಿನಾಡಿನ ಗವರ್ನರರು ಇದೇ ತಾ. 2ರಲ್ಲು ಡಿಲ್ಲಿಗೆ ಹೋಗಿ, ಗಡಿನಾಡಿನಲ್ಲಿ ಶಾಂತಿ ಸ್ಥಾಪಿಸುವ ಏರ್ಪಾಡುಗಳ ಕುರಿತು ವೈಸರಾಯರೊಡನೆ ಮಾತಾಡಿರುವರು.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ಥಂಭದಂತಿರುವ ಭಗವಾನ್ ಧನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯಯೂ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಚಟ್ಟುವಯೂ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವದು. ಹಾಗೂ ಆಲಸ್ಯ ಯೂ ವಾಯುಗಳಿಂದ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿವೆ.

ಕ್ರಯ—12 ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, 5-0-0, 1000, 9-0-0.

5 ಅಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆ (ಗುಟಿ) ಗಳನ್ನು ಕಳುಹಿಸುತ್ತವೆ.

ಸ್ವದೇಶೀ ಔಷಧಿ ಭಂಡಾರ,

(ರಜಿಸ್ಟರ್ಡ್) ಕುಂಜಾಲು,

ಪೋಸ್ಟ್—ಬ್ರಹ್ಮಾವರ, ದ. ಕ.

ಮೇಷ—ಶತ್ರುಕಾರಕನಾದ ಅಂಗಾರಕನು ನಿಮ್ಮ ರಾಶ್ಯಧಿಪತಿಯಾಗಿದ್ದು ಈಗ ತಾನೇ ಸ್ವಸ್ಥಾನವನ್ನು ಪ್ರವೇಶಿಸಿರುವನು. ಗುರುವು ದ್ವಾದಶದಲ್ಲಿದ್ದರೂ ಅದು ಆತನ ಸ್ವಕ್ಷೇತ್ರವೇ ಆಗಿದೆ ರವಿಬುಧಶುಕ್ರರ ಏಕಾದಶ ಸ್ಥಾನಗತರಾಗಿಯೇ ಇರುವರು ಇನ್ನುಳಿದ ಜನ್ಮಸ್ಥ ಶನಿಕೇತುಗಳೂ ಸಪ್ತಮಸ್ಥ ರಾಹುವೂ ವಿಶೇಷ ಪ್ರತಿಕೂಲರಿರುವರು ಆದ್ದರಿಂದ ನಿಮ್ಮ ದೇಹಕ್ಕೆ ಆಕಸ್ಮಿಕ ಅಪಘಾತ ಮತ್ತು ವಿಷಬಾಧೆಯು ಪಯುವಂಟೀತು ಸರಕಾರಿ ಉದ್ಯೋಗಸ್ಥರಿಂದ ಲೂ ಅನಿಷ್ಟ ಸಂಘಟಿಸುವಂತಿದೆ ಆದರೂ ಯತ್ನ ಕಾರ್ಯಗಳು ಸುಖದಿಂದ ಕೊನೆಗಾಣುವವು ಖರ್ಚಿಗೆ ಬೇಕಾದಷ್ಟು ಹಣ ದೊರೆಯುವುದು ನಾಲ್ಕು ಜನರಿಂದ ಗೌರವಿಸಿಕೊಳ್ಳುವಿರಿ ತಾ 8, 9, 10, 14, 15 ವಿಶೇಷ ಅನುಕೂಲಗಳಾಗಿವೆ

ವೃಷಭ— ಉದ್ಯೋಗಶೀಲರಾದ ನಿಮಗೆ ಗ್ರಹಮಾನವೂ ತುಂಬಾ ಅನುಕೂಲವಿರುವುದರಿಂದ ಕ್ರಿಯೆಗೆ ತಕ್ಕಂಥ ಫಲವು ದೊರೆವುದು ಮಾತ್ರವಲ್ಲ, ಕಾರ್ಯದಲ್ಲಿ ಮತ್ತಷ್ಟು ಹುರುಪು ಹೆಚ್ಚುವುದು ನಿಮ್ಮ ಬದ್ಧಿಕ್ರಿಯೆಗಳು ತಮ್ಮ ಗುರಿಯನ್ನು ಬಹು ಬೇಗನೆ ಮುಟ್ಟಲಿವೆ ಆರೋಗ್ಯವು ಬಹುಶಃ ಉತ್ತಮವಾಗಿರುವುದಾದರೂ ವ್ಯರ್ಥ ಅನರ್ಥಗಳ ಮೂಲಕ ಧನನಾಶವೂ ನಿದ್ರಾಭಂಗವೂ ಉಂಟಾಗಿ ತನ್ಮೂಲಕ ಪಿತ್ಥವಿಕಾರಗಳುಂಟಾದಾವು ಸಜ್ಜನ ಸಂಸರ್ಗ, ಮಹಾತ್ಮರ ದರ್ಶನಲಾಭಗಳುಂಟಾದಾವು ಕಾರ್ಯನಿರ್ವಹಣದ ಬಗ್ಗೆ ಪ್ರಿಯಕರ ಇಷ್ಟಾಪೂರ್ತಿಗಾಗಿಯೂ ಕೆಲವಂಶ ಧನವ್ಯಯಿಸುವಿರಿ ತಾ 9 ರಿಂದ 13ರವರೆಗೆ ಪರಿಸ್ಥಿತಿ ಉತ್ತಮವಾಗಿದೆ

ಮಿಥುನ— ಪ್ರತಿಸ್ಪರ್ಧಿಗಳ ಪೀಡೆಯು ನಿಮಗೆ ಯಾವಾಗಲೂ ತಪ್ಪದು ಆದರೂ ನೀವು ಒಳ್ಳೇ ಕಷ್ಟಸಹಿಷ್ಣುಗಳಾಗಿರುವುದರಿಂದ ಎಷ್ಟೇ ಪರಿಶ್ರಮವಾದರೂ ಕಾರ್ಯವನ್ನು ಕೊನೆಗಾಣದೆ ಮಧ್ಯದಲ್ಲೇ ಬಿಡಲಾರಿರಿ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರೆವುದರಿಂದ ನಿಮಗೆ ಕಷ್ಟದ ಗಣನೆಯಾಗಲೊಲ್ಲದು ವಿಶೇಷ ಖರ್ಚುಗಳಾವುವೂ ಇಲ್ಲದಿರುವುದರಿಂದ ಆರ್ಥಿಕ ಬಿಕ್ಕಟ್ಟು ಸಂಭವಿಸದು ನೋಡಿದ್ದನ್ನು ಕೇಳಿದ್ದನ್ನು ಮುಚ್ಚುಮರೆಮಾಡದೆ ಇದ್ದಂತೆ ಹೇಳುವುದರಿಂದ ಹಲವರಿಗೆ ನಿಮ್ಮಲ್ಲಿ ಅಸೂಯೆ ಹುಟ್ಟುವುದು ಕೆಲವರೊಡನೆ ಕಲಹವೂ ಆದೀತು ದೇಹಾರೋಗ್ಯವೂ ಪ್ರಾಪಂಚಿಕ ಸುಖವೂ ಸಾಮಾನ್ಯವಾಗಿರುವುದು ವ್ಯಾಪಾರ, ವೈದ್ಯ, ವಿದ್ಯೆ ಇವುಗಳಿಂದ ಜೀವಿಸತಕ್ಕವರಿಗೆ ಸುಖಕ್ಕಿಂತಲೂ ಸ್ವಲ್ಪ ಕಷ್ಟವೇ ಹೆಚ್ಚು ವಾರಾದಿಯ ಮೂರು ದಿನಗಳು ತ್ಯಾಜ್ಯಗಳಾಗಿವೆ

ಕರ್ಕಾಟಕ—ಮನಸ್ಸೂ ಕ್ರಿಯೆಯೂ ಒಂದೇ ತರನಾಗಿಲ್ಲವು ಸ್ವಭಾವತಃ ನಾನಾತರದ ದುರ್ಮಾರ್ಗ ದುರ್ವ್ಯಸನಗಳಿಗೆ ನಿಮ್ಮ ಮನಸ್ಸು ನಿಮ್ಮನ್ನೆಳೆವುದಾದರೂ ವಿವೇಕಿಗಳಾದ ನೀವು ಯುಕ್ತಾಯುಕ್ತ ವಿಚಾರಮಾಡಿ ಸತ್ಕಾರ್ಯವನ್ನೇ ಅನುಸರಿಸುವಿರಿ ಗುರುಹಿರಿಯರ ಅನುಗ್ರಹವೂ ದೈವದ ಬೆಂಬಲವೂ ನಿಮಗಿರುವುದರಿಂದ ಆರಂಭಿಸಿದ ಪ್ರತಿಯೊಂದು ವಿಚಾರಗಳಲ್ಲೂ ಅಪ್ರತಿಹತವಾಗಿ ಮುಂದರಿಯುವಿರಿ ವಿದ್ಯಾರ್ಥಿಗಳಿಗೆ ಕಾಲವು ತುಂಬಾ ಅನುಕೂಲವಾಗಿರುವುದು ವ್ಯಾಪಾರಿಗಳು ವಿಶೇಷ ಲಾಭ ಹೊಂದುವರು ಸಂಸಾರದಲ್ಲಿ ಕ್ಷುದ್ರ ಕಲಹ ನಿಮಿತ್ತ ಸಹಿಸಿರಿ ತಾ 8, 14, 15 ಉತ್ತಮ.

ಈ ವಾರದ ಭವಿಷ್ಯ

ತಾರೀಕು 8 2-1940ರಿಂದ 15 2-1940ರ ವರೆಗೆ

ಸಿಂಹ—"ಅಪಿ ಧನ್ವಂತರಿರ್ವೈದ್ಯಃ ಕಿಂ ಕರೋತಿ ಗತಾಯುಷಿ" ಎಂಬಂತೆ ಆಯುಸ್ಸು ಮುಗಿದವನಿಗೆ ಧನ್ವಂತರಿಯೇ ಚಿಕಿತ್ಸೆ ಮಾಡಿದರೂ ಕೂಡ ಹೇಗೆ ನಿಷ್ಫಲವೋ, ಅಂತೆಯೇ ಅದೃಷ್ಟಹೀನರಾದ ನಿಮಗೆ ಯಾರು ಏನು ಸಹಾಯ ಮಾಡಿದರೂ ಅದರಿಂದ ಸ್ವಲ್ಪವೂ ಲಾಭವಿಲ್ಲವು ನಿಮಗೆ ದೇಹಾನಾರೋಗ್ಯ ನಿಮಿತ್ತ ಪ್ರಯೋಜನವಿಲ್ಲದಿದ್ದರೂ ಡಾಕ್ಟರರಿಗೆ ಹೆಚ್ಚಿನ ಹಣವನ್ನು ಸುಲ ತಂದಾದರೂ ಸುರಿವಿರಿ ದಾನಧರ್ಮಗಳಲ್ಲಿ ಮನಸ್ಸು ಹಿಂಜರಿಯುವುದು ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಪರಾಜಯವಾಗುವುದು ಆದರೂ ವಾರಾದಿಯ ಮೂರು ದಿನಗಳಲ್ಲಿ ಕಿಂಚಿದಾರೋಗ್ಯ ವಾಣಿಜ್ಯದಲ್ಲಿ ಲಾಭವೂ ದೊರೆತೀತು

ಕನ್ಯಾ—ಈ ವಾರದಲ್ಲಿ ಬಹು ಮಟ್ಟಿಗೆ ನಿಮ್ಮ ಆರೋಗ್ಯವು ಸಘಾರಿಸಲ್ಪಡದೆ ಮನೋರೋಗದಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡುವಿರಿ ಉದ್ಯೋಗ ಭಾಗದಲ್ಲಿ ಒಳ್ಳೇ ಲಾಭವೂ ವಿಜಯವೂ ಇರುವುದು ಒಲ್ಲದವರ ಮಾತು ಬೆಲ್ಲಕ್ಕಿಂತ ಸವಿ ಎಂಬ ಗಾದೆಯಂತೆ ನಿಮ್ಮ ಮಾತಿನಲ್ಲಿರುವ ಮಾಧುರ್ಯ ಗುಣದಿಂದ ಹಲವು ಜನರು ನಿಮಗೆ ಸಹಾಯಕರಾಗುವರು ಅಕಸ್ಮಾತ್ತಾಗಿ ಶತ್ರುಜನರಿಂದ ಧನನಾಶ, ಮಾನಹಾನಿಗಳು ಸಂಭವಿಸಲಿವೆ ಕಜ್ಜಿ ತುರ್ಚು ಮೊಕ್ಕೆ ಇತ್ಯಾದಿ ಚರ್ಮರೋಗಗಳು ಕಾಣಿಸಿಕೊಳ್ಳಲಿವೆ ಸ್ತ್ರೀಯರೊಡನೆ ಬಲು ಜಾಗ್ರತೆಯಿಂದ ವ್ಯವಹಾರ ಮಾಡಿರಿ ತಾ 9ರಿಂದ 13ರವರೆಗೆ ಹೆಚ್ಚಿನ ಇಷ್ಟಾರ್ಥಗಳು ಕೈಗೂಡಲಿವೆ

ತುಲಾ—"ಮನಸಿ ಚ ಪರಿತುಷ್ಟೇ ಕೋರ್ಥವಾನ್ ಕೋ ದರಿದ್ರಃ" ಎಂಬ ಶಾಸ್ತ್ರವಚನದಂತೆ ನರನ ಸುಖದುಃಖಗಳಿಗೆ ಐಶ್ವರ್ಯ ಬಡತನಗಳು ಕಾರಣವಲ್ಲವು ಅವರವರ ಮನಸ್ಸೇ ಕಾರಣವೆನಿಸುವುದು. ಮನಸ್ಸು ತೃಪ್ತವಾದರೆ ಆಗಲೇ ಪೂರ್ಣ ಸುಖ ಅದು ಅತೃಪ್ತವಾದರೆ ಆಗಲೇ ದುಃಖವು ಹೀಗಿರುವಲ್ಲಿ ನಿಮ್ಮ ಮನಃಪೂರ್ತಿಯಾಗಲು ಬೇಕಾದ ಸಾಧನ ಸಾಮಗ್ರಿಗಳೊಂದೂ ಇಲ್ಲದಿರಲು ನೀವು ತೃಪ್ತರಾಗುವದೆಂತು. ಅದೆಲ್ಲಿಂದ ನಿಮಗೆ ಸುಖ ದೊರೆತೀತು! ಶಾರೀರಿಕ ಮಾನಸಿಕ ಮತ್ತು ಸಾಂಸಾರಿಕ ಈ ಮೂರು ಭಾಗದಲ್ಲೂ ಅಪೂರ್ಣರಾಗಿರತಕ್ಕ ನಿಮಗೆ ಸದ್ಯ ದುಃಖದಿಂದ ಮುಕ್ತಿ ಕಾಣದು ಇದಕ್ಕೆ ಮುಖ್ಯ ಹೇತುವು ಸಕಲ ಗ್ರಹರ ಪ್ರತಿಕೂಲವೇ. ತಾ 8, 9, 10 ಅತೀವ ಅನಿಷ್ಟಕಾರಿ

ವೃಶ್ಚಿಕ—ಸದ್ಯ ನಿಮಗೆ ಗ್ರಹಮಾನವು ಅತೀವ ಅನುಕೂಲವಾಗಿರುವುದು ಆದಕಾರಣ ಯಾವ ಮಹತ್ಕಾರ್ಯಗಳಿಗೂ ಕೂಡ ಇದು ಸುಸಂದರ್ಭವು ಕೇವಲ ಸಂಕಲ್ಪ ಮಾತ್ರದಿಂದ ಕಾರ್ಯವು ಸಾಧ್ಯವಾಗಲಾರದು ಅದಕ್ಕೆ ತಕ್ಕುದಾಗಿ ಕೆಲಸಮಾಡಬೇಕು ಯಾವ ವಿಭಾಗದಲ್ಲಾದರೂ ಸರಿಯೇ ನಿಮ್ಮ ಮಾರ್ಗ ನಿರ್ಗಳವಾಗಿದೆ ಸಕಲರ ಸಹಾಯವೂ ನಿಮಗೆ ದೊರೆಯಲಿದೆ ಉದ್ಯೋಗ ವ್ಯಾಪಾರ ಮಗ್ಗಲುಗಳಲ್ಲಿ ತುಂಬಾ ಲಾಭವಿದೆ ಸಿಕ್ಕಿದ ಧನವನ್ನು ಅಪವ್ಯಯಮಾಡಿಕೊಳ್ಳುವಿರಿ. ಗೃಹಸುಖ ಉತ್ತಮವಾಗಿದೆ ಮನಸ್ಸಿಗೆ ಶಾಂತಿ ಸ್ತ್ರೀಗಳು ದೊರೆವರು ತಾ 8 14, 15, ಅತ್ಯುತ್ತಮ

ಧನು—ಕಾಲಕ್ಕೆ ತಕ್ಕ ಕೋಲವೆಂದರೆ ಕಾಲಗತಿಗನುಸರಿಸಿ ನಡೆದುಕೊಳ್ಳಲು ಪರಿಪಕ್ವ ವಯಸ್ಸು ಮಾಡಬೇಕಾಗುವುದು. ಸದ್ಯ ನಿಮಗೆ ಬಂಧುಗಳಿಂದ ಹಾನಿ ಸಂಭವಿಸುವಂತಿರುವುದರಿಂದ ಸಂಬಂಧವನ್ನು ಸ್ವಲ್ಪ ಅಷ್ಟಷ್ಟೇ ಇಟ್ಟುಕೊಳ್ಳಿ ಅಧಿಕಾರಿಗಳ ಮನಸ್ಸು ಶಾಂತವಾಗಿ ಬಹು ವಿಧೇಯರಾಗಿ ವರ್ತಿಸಬೇಕಾಗುವುದು ಸಂಸಾರದಲ್ಲಿ ಮಕ್ಕಳ ಅನಾರೋಗ್ಯ ನಿಮಿತ್ತ ಸ್ವಲ್ಪ ಮನಸ್ಸಿಗೆ ನೆಮ್ಮದಿಯಿಲ್ಲ ಆದರೂ ಇತರ ಯಾವ ಭಾಗದಲ್ಲೂ ಕೊರತೆಯಾಗದು ಆದರೂ ಆದಾಯಕ್ಕಿಂತ ಒಂದು ಪಾಲು ಹೆಚ್ಚು ಹೆಚ್ಚುಗವುದರಿಂದ ನಿತ್ಯವೂ ದುಡ್ಡಿನ ಅಡಚಣೆ ತಪ್ಪದು ಇದ್ದುದರಲ್ಲಿ ತಾ 9, 10 ಸ್ವಲ್ಪ ಅತ್ಯುತ್ತಮ

ಮಕರ—ತಪ್ಪಕ್ಕೆ ತಕ್ಕ ಫಲದೊರೆಯುವ ಕಾಲವಿದಲ್ಲವು ನಿಮಗೆ ಒಂದು ರೂಪಾಯಿಯ ಸಂಪಾದನೆ ಸಲುವಾಗಿ ನಾಲ್ಕು ರೂಪಾಯಿ ಖರ್ಚುಮಾಡಬೇಕಾಗಿ ಬರುತ್ತ ದೇಹದಲ್ಲಿ ಗಂಟುಸಂದುಗಳಲ್ಲಿ ನೋವು, ಹೊಟ್ಟೆನೋವು, ಇತ್ಯಾದಿಗಳಿಂದ ಸದಾ ಪೀಡಿತರಾಗುವಿರಿ ಯಾವ ನೂತನ ಕೆಲಸವನ್ನೇ ಆರಂಭಿಸಲಿರುವಿರಾದರೂ ಅದಕ್ಕಂತ ಮುಂಚೆ ವಿಘ್ನಗಳು ಕಾದು ಕುಳಿತುಕೊಂಡಿರುವುವು. ಈ ರೀತಿಯ ಪರಿಸ್ಥಿತಿಯಿಂದ ನಿಮಗೆ ಬಹಳ ಬೇಸರವುಂಟಾಗುವುದು ಸ್ತ್ರೀಯರಿಗಿಂತಲೂ ಹೆಚ್ಚಿನ ಚಂಚಲ ಸ್ವಭಾವದವರಾಗುವಿರಿ ಹಾಸಿಗೆಯಿದ್ದಷ್ಟು ಕಾಲು ನೀಡಲು ನಿಮ್ಮಿಂದಾಗದ ಕಾರಣ ಸಾಲಮಾಡುವಿರಿ ತಾ 11, 12 13, ಈ ದಿನಗಳ ಮಟ್ಟಿಗೆ ಲಾಭ ಜಯ ಸ್ತ್ರೀಸುಖಗಳು ಸ್ವಲ್ಪಮಟ್ಟಿಗಿರುವವು

ಕುಂಭ—ಈ ವಾರದಲ್ಲಿ ನೀವು ದೇಹಾರೋಗ್ಯದ ಕಡೆಗೆ ವಿಶೇಷ ಗಮನವಿಡತಕ್ಕದ್ದು ಆಹಾರದೋಷದಿಂದಲೂ ಅನಾರೋಗ್ಯ ಪ್ರಾಪ್ತವಾಗಲಿದೆ ಮತ್ತೂ ಮಾತನ್ನು ಆದಷ್ಟು ಮಿತವಾಗಿಟ್ಟುಕೊಂಡರೆ ತುಂಬಾ ಅನುಕೂಲ ಇಲ್ಲದಲ್ಲಿ ವ್ಯರ್ಥ ಕಲಹ ಅಪಮಾನಗಳಿಗೆ ಗುರಿಯಾಗಬೇಕಾದೀತು ಸಾಹಸಪ್ರಿಯರಾದ ನಿಮಗೆ ಬಂಧುಮಿತ್ರರ ಬೆಂಬಲವೂ ಗುರುಹಿರಿಯರ ಅನುಗ್ರಹವೂ ದೈವದೊಲುಮೆಯೂ ತಕ್ಕಮಟ್ಟಿಗೆ ಒಳ್ಳೇ ರೀತಿಯಲ್ಲಿರುವುದರಿಂದ ಪ್ರತಿಯೊಂದು ಕಾರ್ಯದಲ್ಲೂ ವಿಜಯಿಗಳಾಗುವಿರಿ ಉಪಾಯದಿಂದ ಮಹತ್ಕಾರ್ಯವನ್ನೂ ಕೂಡ ಅಲ್ಪಾವಕಾಶದಲ್ಲಿ ಸಾಧಿಸುವಿರಿ ಗ್ರಹಪರಿವಾರದಿಂದ ಕೂಡಿ ನಿಶ್ಚಿಂತರಾಗಿ ಸುಖದಿಂದ ದಿನಗಳನ್ನು ಕಳೆವಿರಿ ತಾರೀಕು 9, 10, 14, 15 ಸರ್ವೋತ್ಕೃಷ್ಟ

ಮೀನ—ಜನ್ಮಸ್ಥ ಉಚ್ಚ ಶುಕ್ರಾಚಾರ್ಯರನ್ನು ಬಿಟ್ಟರೆ ಮತ್ತಿನ್ಯಾರೂ ಸಹಾಯಕರಿಲ್ಲವೆನ್ನಬಹುದು ಆದ್ದರಿಂದಲೇ ನಿಮಗೆ ಕಾಲವು ಅಷ್ಟು ಕಷ್ಟವಾಗಿ ಕಂಡುಬರುವುದು ರಾಜಕೀಯ ಕಾರ್ಯಗಳಲ್ಲಿ ಶತ್ರುಜನರ ಕೈಮೇಲಾಗಿ ಪರಾಜಯವೇ ಸಂಭವಿಸುವಂತಿದೆ ಉದ್ಯೋಗದಲ್ಲಿ ಆಲಸ್ಯ, ಶರೀರದಲ್ಲಿ ಅನಾರೋಗ್ಯ ಇದರಿಂದ ನಿಮಗೆ ಆರ್ಥಿಕ ಭಾಗದಲ್ಲಿ ವಿಶೇಷ ಅಡಚಣೆಯುಂಟಾಗುವುದು ಕಾರ್ಯೋತ್ಸಾಹವು ಕುಗ್ಗುವುದರಿಂದಲೂ ಧೈರ್ಯ ಸ್ಥೈರ್ಯವು ಕಡಿಮೆಯಾಗುವುದರಿಂದ ಸಾಕಷ್ಟು ಜನಾನುಕೂಲ್ಯವು ನಿಮಗೊದಗದು ತಾ 8, 11 12, 13 ಈ ದಿನಗಳ ಮಟ್ಟಿಗೆ ಮೃಷ್ಟಾನ್ನ ಭೋಜನ ಶಯ್ಯಾ ಸುಖಗಳೂ ಸಂಪೂರ್ಣ ದೊರೆಯುವುವು

ಮಂಗಳೂರಿನ ಚಾಲತಿ ಧಾರಣೆ

	ಹಿ ಆ	ದೂ ಆ
ಮಸ್ಕತಿ ಹೊಸ	4—6	4—8
ಗುಡ್ಡು ಹೊಸ	4—4	4—6
ಗುಡ್ಡು ರಾಶಿ	3-14	4—0
ಸುಗ್ಗಿ ಅಕ್ಕಿ	4—8	4 11
ಅವ್ವಲ್ ಬೆಳ್ತಿಗೆ ಕಾರ್ಕಳ	4—8	4-12
ಈ ಗುಡ್ಡು ಬೆಳ್ತಿಗೆ	4—4	4—8
ನೆಲ್ಲೂರು ಬೆಳ್ತಿಗೆ	4—4	4—8
ರಂಗೂನು ಬೆಳ್ತಿಗೆ ಗೋಣಿ ಗೆ	7—8	8—0
ರಂಗೂನು ಕಚ್ಚಲಕ್ಕಿ ಗೋಣಿ ಗೆ		8- 4
ಗೋಧಿ	11—4	15—0
ಹುರುಳಿ	6—4	6—8
ತೊಗರಿ ಬೇಳೆ	13—8	22—0
ಉದ್ದು ಮುಡಿ ಗೆ	5 8	5-12
ಹೆಸರು ,,	5-12	6 - 0
ಊರ ಬೆಲ್ಲ ಖಂಡಿ ಗೆ	40—0	50—0
ಉಪ್ಪು ಗೋಣಿ ಗೆ	4—8	5-14
ಬೊಂಬಾಯಿ ಗೋಧಿ ಹಿಟ್ಟು ಗೋಣಿ ಗೆ	11—8	12—0
ಕಪ್ಪು ಹಿಟ್ಟು ,,	14—8	15—0
ಕಾಳು ಮೆಣಸು ಮುಡಿ ಗೆ	5 —0	5—4
ಕೊಬ್ಬರಿ ಖಂಡಿ ಗೆ	64—0	66—0
ಕೊಬ್ಬರಿ ಹಿಂಡಿ ಖಂಡಿ ಗೆ	27—8	28—8
ಎಳ್ಹಿಂಡಿ ,,	27—8	30 —0
ತೆಂಗಿನಕಾಯಿ ೧೦೦ಕ್ಕೆ	4—8	5—0
ಕೊಬ್ಬರಿ ಎಣ್ಣೆ ಮಣ ಗೆ	4-10	5-10
ಊರ ಎಳ್ಳೆಣ್ಣೆ ,,	6—0	6—8
ಮಂಕಿ ಚಿಮಿಣಿ ಎಣ್ಣೆ		3-12
ಬೇಯಿಬಲ್ ಚಿಮಿಣಿ ಎಣ್ಣೆ		3—4
ಮೋರಿಸ್ ಸಕ್ಕರೆ ಮಣ ಗೆ		4-12
ಊರ ಮೆಣಸಿನ ಕಾಯಿ ,,		4-12
ಅರಸಿನ ಮುಡಿ ಗೆ	6—4	6—6
ಕೊತ್ತಂಬರಿ ,,	3—4	4—8
ಅಡಿಕೆ(ಹಳೆ)ಖಂಡಿ ಗೆ	125—0	145—0
ಸಣ್ಣದು ಹೊಸ ಅಡಿಕೆ	80—0	95—0
ದೊಡ್ಡದು ಹೊಸ ಅಡಿಕೆ	105—0	115—0
ಪ್ಲೇಂಟೇಶನ್ ಕಾಫಿ ,	40-12	42—0
ಚೆರಿ ಖಂಡಿ ಗೆ	162—8	167—8
ಪೀಬ್ರಿ ಖಂಡಿ ಗೆ	180—0	185—0
ಯಾಲಕ್ಕಿ ಮಣ ಗೆ(ಕೊ)	38—0	42—0
,, (ಮಂ) ಸಕಲೇಶಪುರ	50 - 0	55—0
ಕಬ್ಬಿಣ ಖಂಡಿ ಗೆ		50—0
ತಾಮ್ರ ಪತ್ರಗಳು ಮಣ ಗೆ		23—0
ತಾಮ್ರ ತಗಡು ಮಣ ಗೆ		22—8
ಜಿಂಕ್ ಶೀಟು ಸೇರು ಗೆ		15—8
ಹಿತ್ತಾಳೆ ತಗಡು ಮಣ ಗೆ		16—0
ಪವನು ಗೆ		27 - 2
ಗೇರುಬೀಜ ಮುಡಿ ಗೆ	3—0	3 - 4

NO WAR SCARE NO RISE IN PRICE

X'Mas Grand Reduction Sale.

Strong & Durable
Accurate
Time Keepers

All Swiss Made
GUARANTEED
Lever WATCHES



No 416 Chromium Case Rs 8—10
No 417 Golden Case Rs 6— 6
No 417 R Rolledgold 10yrs.
Jewelled Mov Rs 12—8



ROUND OR CUSHION
No 401 Chromium Case Rs 3—12
No 402 Golden Case Rs 4— 8



No 424 Chromium Case Rs 7—8
No 425 Golden Case Rs 8—4
No 425 R Rolledgold 10yrs 13—8



No 435 Chromium Case Rs 12—0
No 436 Rolledgold 10yrs Rs 16—8

As 9/ Extra for Postage
For further particulars send for our new catalogue
(Correspondence in English)

BAPALAL & CO.,
101 Abdul Rehman Street,
BOMBAY, 3.

LADIES MINIATURES



Geneva Movement
No 460 Chromium Case Rs 10 8
No 461 Golden Case Rs 12—0
No 462 Rolledgold 10yrs. Rs 15—0

ವೈಸರಾಯರೊಡನೆ ಗಾಂಧಿ ಮತ್ತು ಜಿನ್ನರ ಭೇಟಿ

ಮುಸ್ಲಿಮ್ ಲೀಗಿನ ರಾಷ್ಟ್ರವಿಘಾತುಕ ಧೋರಣೆ!

ಮಹಾತ್ಮ ಗಾಂಧಿಯವರು ಶ್ರೀ ಮಹದೇವ ದೇಸಾಯಿ ಮತ್ತು ಶ್ರೀ ಪ್ಯಾರೇಲಾಲರೊಂದಿಗೆ ಇದೇ ತಾ. 3ರಲ್ಲು ದಿಲ್ಲಿಗೆ ಹೊರಟುಹೋಗಿರುವರು. ಅವರು ತಾ. 5ರಲ್ಲಿ ವೈಸರಾಯರನ್ನು ಕಾಣಬರುವರು. ತಾ. 6ರಲ್ಲು ಮಿ. ಜಿನ್ನರು ವೈಸರಾಯರೊಡನೆ ಮಾತಾಡುವರು. ಡಾಕ್ಟರ್ ಸಾವರ್ಕರರನ್ನೂ ವೈಸರಾಯರು ಮಾತಾಡಲು ಆಮಂತ್ರಿಸಿರುವರೆಂದು ತಿಳಿದು ಬಂದಿದೆ. ಇದೇ ತಾ. 3ರಲ್ಲಿ ವೈಸರಾಯರು ಯುರೋಪಿಯನ್ ಪಕ್ಷದ ನಾಯಕರಾದ ಮಿ. ಐಕ್ಮನರಿಗೆ ಭೇಟಿಯಿತ್ತರು. ಬಂಗಾಳದ ಪ್ರಧಾನ ಮಂತ್ರಿಗಳಾದ ಮಿ. ಫಜ್ಲುಲ್ ಹಕ್ ಮತ್ತು ಪಂಜಾಬಿನ ಪ್ರಧಾನ ಮಂತ್ರಿಗಳಾದ ಸರ್. ಸಿಕಂದರ್ ಹಯಾತ್ ಖಾನರೊಡನೆ ವೈಸರಾಯರು ಈ ದಿನ ಮಾತನಾಡಿರುವರು.

ಮುಸಲ್ಮಾನರು ಪ್ರತ್ಯೇಕವಾದೊಂದು ಜನಾಂಗ

1935ರ ಇಂಡಿಯಾ ಆಕ್ಟನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು. ಹಿಂದೀ ರಾಜಕೀಯ ಘಟನೆಯನ್ನು ಪುನಹ ಹೊಸತಾಗಿ ಆದಷ್ಟು ಬೇಗನೇ ಅಂದರೆ ಕೊನೆಯಪಕ್ಷ ಯುದ್ಧ ಮುಗಿದ ಕೂಡಲೆ ಹೊಸತಾಗಿ ಸಮಾಲೋಚಿಸಬೇಕು. ಈ ಕುರಿತು ಹೇಳಿಕೆಯೊಂದನ್ನು ಬ್ರಿಟಿಷ್ ಸರಕಾರವು ಹೊರಡಿಸಬೇಕು. ಈ ಹೇಳಿಕೆಯು ಮಾಡಲ್ಪಟ್ಟೊಡನೆಯೇ ಮುಸ್ಲಿಮ್ ಲೀಗಿನವರು ಹಿಂದೀ ರಾಜಕೀಯ ವ್ಯವಸ್ಥೆಯ ಕುರಿತಾದ ತಮ್ಮ ಅಭಿಪ್ರಾಯವನ್ನು ಸರಕಾರದ ಮುಂದಿಡುವರು. 90ಮಿಲ್ಯನಾಗಿರುವ ಹಿಂದೂಮುಸಲ್ಮಾನರು ಪ್ರತ್ಯೇಕವಾದೊಂದುಜನಾಂಗವಾಗಿದ್ದು, ಜನಾಂಗಗಳಿಗಿರುವ ಸ್ವತಂತ್ರ ಹಕ್ಕುಭಾಧ್ಯತೆಗಳಿಗೆ ಅವರು ಅರ್ಹರಾಗಬೇಕು. ಹಿಂದೀ ಮುಸಲ್ಮಾನರು ರಾಜಕೀಯ ಅನುಕೂಲತೆಗಾಗಿ ಅಲ್ಪಸಂಖ್ಯಾಕ ಸ್ಥಾನಕ್ಕಿಳಿಸಲ್ಪಡಲು ಎಂದೂ ಒಪ್ಪಲಾರರು. ಮುಸಲ್ಮಾನರ ಸ್ವಯಂ ನಿರ್ಣಯವು ನಿಜವಾಗಿಯೂ ಫಲಕಾರಿಯಾಗುವಂತೆ ಮಾಡಲು ಅವರಿಗಾಗಿ ಪ್ರತ್ಯೇಕವಾದೊಂದು ರಾಷ್ಟ್ರೀಯ ರಾಜ್ಯವೊಂದನ್ನು ಸ್ಥಾಪಿಸಬೇಕು. ಇತರ ಕಡೆಗಳಲ್ಲಿರುವ ಮುಸಲ್ಮಾನರು ಈ ರಾಜ್ಯದ ಪ್ರಜೆಗಳಾಗಿ ಅವರ ಹಕ್ಕುಬಾಧ್ಯತೆಗಳು ಸುರಕ್ಷಿತವಾಗಬೇಕು. ತಮ್ಮ ಈ ಮೂಲಭೂತ ಹಕ್ಕುಗಳಿಗೆ ಬಾಧಕವನ್ನುಂಟುಮಾಡುವ ಯಾವ ರಾಜಕಾರ್ಯ ಘಟನೆಗಾದರೂ ಮುಸಲ್ಮಾನರು ಬದ್ಧ ವಿರೋಧವಿರುವರು. ಮುಸ್ಲಿಮ್ ಲೀಗಿನ ಕಾರ್ಯನಿರ್ವಾಹಕ ಕಮಿಟಿಯು ಮುಂದಿಡಲ್ಪಡುವ ಸೂಚನೆಗಳಿವು. ಅವನ್ನಿಗ ಸ್ವೀಕರಿಸುವ ಸಂಭವವಿರುವುದು. ಇದರಿಂದ ಹಿಂದು ದೇಶವನ್ನೇ ಮುಸಲ್ಮಾನ ಮತ್ತು ಹಿಂದು ವಿಭಾಗಗಳನ್ನಾಗಿ ವಿಂಗಡಿಸ ಬೇಕಾಗುವುದು. ಮುಸ್ಲಿಮ್ ಲೀಗಿನ ಈ ಧೋರಣೆಯು ಅರ್ಥರಹಿತವಿದ್ದು ರಾಷ್ಟ್ರವಿಘಾತುಕವಿರುವುದು. ಲೀಗಿನವರು ಮೇಲೆ ಸೂಚಿಸಲ್ಪಟ್ಟಿರುವ ಧೋರಣೆಯನ್ನು ವಹಿಸಿ ಆ ಪ್ರಕಾರ ನಡೆದ ಪಕ್ಷದಲ್ಲಿ ಹಿಂದೂಸ್ಥಾನದಲ್ಲಿ ಅಂತಃಕಲಹವೇಳುವುದು ನಿಶ್ಚಯ.

ಮಿ. ಜಿನ್ನರ ಅರ್ಥ ರಹಿತ ಧೋರಣೆ

ಮಿ. ಜಿನ್ನರ ಕೇಳಿಕೆಗಳು ಅಸಾಧ್ಯವಿದ್ದು ಅವರು ಹಿಟ್ಲರರ ಮಾದರಿಯನ್ನನುಸರಿಸುವಂತಿದೆ. ಮುಸ್ಲಿಮ್ ಲೀಗಿನ ಕೇಳಿಕೆಗಳನ್ನು ಸರಕಾರವು ಮನ್ನಿಸದಿದ್ದರೆ ಜಾಗ್ರತೆ ಎಂದು ಅವರು ಎಚ್ಚರವೀಯುತ್ತಿದ್ದಾರೆ. ಜರ್ಮನ್ ಅಲ್ಪ ಸಂಖ್ಯಾಕ ಪ್ರಶ್ನೆಯನ್ನೆತ್ತಿ ಹಿಟ್ಲರರು ಇತರ ದೇಶಗಳನ್ನು ವಿಭಾಗಿಸಲೆತ್ನಿಸುತ್ತಿದ್ದಾರೆ. ಅದರಂತೆ ಮಿ. ಜಿನ್ನರು ಮುಸಲ್ಮಾನ ಅಲ್ಪ ಸಂಖ್ಯಾಕರಿಗಾಗಿ ತನ್ನ ದೇಶವನ್ನೇ ವಿಭಾಗಿಸಲೆತ್ನಿಸುತ್ತಾರೆ. ಒಮ್ಮೆ ಅವರು ಮುಸಲ್ಮಾನರೊಂದು ಜನಾಂಗವೆನ್ನುತ್ತಾರೆ, ಇನ್ನೊಮ್ಮೆ ಅಲ್ಪ ಸಂಖ್ಯಾಕರೆಂದು ಉದ್ಘೋಷಿಸುತ್ತಾರೆ. ಜನ ಸಂಖ್ಯೆಯ ಗಣನೆಯನ್ನು ನೋಡಿದರೆ ಮುಸಲ್ಮಾನ ಬಹುಪಕ್ಷೀಯ ಪ್ರಾಂತಗಳಲ್ಲಿರುವ ಅಲ್ಪ ಸಂಖ್ಯಾಕ ಹಿಂದುಗಳ ಜನ ಸಂಖ್ಯೆಯೇ ಹಿಂದು ಪ್ರಾಂತಗಳ ಮುಸಲ್ಮಾನ ಅಲ್ಪ ಸಂಖ್ಯಾಕರಿಗಿಂತ ಹೆಚ್ಚಾಗಿದೆಯೆಂಬುದನ್ನು ಶ್ರೀ ಸತ್ಯಮೂರ್ತಿಗಳು ಸಿದ್ಧಗೊಳಿಸಿದ್ದಾರೆ. ಮುಸಲ್ಮಾನ ಪ್ರಾಂತಗಳಾದ ಬಂಗಾಳ ಮತ್ತು ಪಂಜಾಬಿನಲ್ಲಿರುವ ಹಿಂದು ಅಲ್ಪ ಸಂಖ್ಯೆಯು 27,898,995 ಆಗಿದೆ. ಕಾಂಗ್ರೆಸ್ ಮಂತ್ರಿಮಂಡಲವಿದ್ದ ಪ್ರಾಂತಗಳ ಮುಸಲ್ಮಾನ ಅಲ್ಪ ಸಂಖ್ಯಾಕರ ಸಂಖ್ಯೆ 19,246,070 ಆಗಿರುತ್ತದೆ. ಹಿಂದೂ ದೇಶೀಯ ಸಂಸ್ಥಾನಗಳ ಪ್ರಶ್ನೆಯನ್ನು ತೆಗೆದುಕೊಂಡರೂ, ಮುಸಲ್ಮಾನೇತರರು ಆಳುವ ಸಂಸ್ಥಾನಗಳಲ್ಲಿ 7,364,600 ಮುಸಲ್ಮಾನರು ವಾಸಿಸುತ್ತಾರೆ. ಮುಸಲ್ಮಾನರು ಆಳುವ ಸಂಸ್ಥಾನಗಳಲ್ಲಿ 14,262,900 ಹಿಂದುಗಳಿರುತ್ತಾರೆ. ಮಿ. ಜಿನ್ನರಿಗೆ ಬೇಕಾದುದೀಗ ರಾಜಕೀಯ ಅಧಿಕಾರದಲ್ಲಿ ನ್ಯಾಯವಾದುದಕ್ಕಿಂತಲೂ ಹೆಚ್ಚಿನ ಪಾಲು. ಎಲ್ಲರ ಮೇಲೂ ಅಧಿಕಾರ ನಡಿಸುವ ಸ್ಥಾನವನ್ನು ಅವರೀಗ ಪಡೆದಿರುವರೆಂದು ಭಾವಿಸಿಕೊಂಡಿರುವಂತಿದೆ. ಆದುದರಿಂದಲೇ ಅವರು ಸರಕಾರಕ್ಕೂ, ಕಾಂಗ್ರೆಸಿಗೂ ಎಲ್ಲರಿಗೂ ಶರ್ತಗಳನ್ನೀಯುತ್ತಿದ್ದಾರೆ. ಇಂತಹ ಅಹಂಭಾವವು ತಡೆಗಟ್ಟಲ್ಪಡದಿದ್ದರೆ ದೇಶಕ್ಕೆ ಅವರಿಂದ ಗಂಡಾಂತರ ನಿಶ್ಚಯ.

ವೈಸರಾಯರ ಮುಂದಿರುವ ಸಮಸ್ಯೆ!!

ಕಾಂಗ್ರೆಸಿಗಿಂತಲೂ ಮುಸ್ಲಿಮ್ ಲೀಗನ್ನು ಸಮಾಧಾನಪಡಿಸುವುದು ವೈಸರಾಯರಿಗೀಗ ದೊಡ್ಡ ಸಮಸ್ಯೆಯಾಗಹೋಗಿದೆ. ಕಾಂಗ್ರೆಸನ್ನು ಸಮಾಧಾನಪಡಿಸಹೋದರೆ ಅವರು ಮುಸ್ಲಿಮ್ ಲೀಗಿನ ವಿರೋಧಕ್ಕೊಳಗಾಗಬೇಕಾಗಿದೆ. ಆದುದರಿಂದಲೇ ಅವರೀಗ ಮಹಾತ್ಮ ಗಾಂಧಿಯವರ ನಂತರ ಮಿ. ಜಿನ್ನ ಮತ್ತು ಶ್ರೀ. ಸಾವರ್ಕರರನ್ನೂ ಕಂಡು ಮಾತಾಡುವವರಿದ್ದಾರೆ. ಈ ನಡುವೆ ಬಂಗಾಳದ ಹಿಂದೂಮುಸಲ್ಮಾನ ಪ್ರಶ್ನೆಯನ್ನು ಅಲ್ಲಿಯ ಮುಸಲ್ಮಾನ ಮತ್ತು ಹಿಂದು ಮುಖಂಡರೇ ಇತ್ಯರ್ಥಪಡಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಈ ಕುರಿತು ಮಿ. ಹಕ್ಕರೇ ಮುಂದಾಳುತ್ವ ವಹಿಸಿರುತ್ತಾರೆ. ಇದೇ ರೀತಿ ಪಂಜಾಬಿನ ಪ್ರಶ್ನೆಯನ್ನೂ ಇತ್ಯರ್ಥಪಡಿಸಲು ಸರ್. ಸಿಕಂದರ್ ಹಯಾತ್ ಖಾನರು ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ಆಯಾ ಪ್ರಾಂತದ ಮುಂದಾಳುಗಳೇ ಅಲ್ಲಲ್ಲಿಯ ಪ್ರಶ್ನೆಗಳನ್ನು ಇತ್ಯರ್ಥಪಡಿಸಿಕೊಳ್ಳುವುದೊಳ್ಳೇದೆಂದು ವೈಸರಾಯರು ಅಭಿಪ್ರಾಯಪಡುತ್ತಿರುವಂತಿದೆ. ಈ ಉದ್ದೇಶದಿಂದಲೇ ಅವರು ಸರ್. ಸಿಕಂದರ್ ಹಾಯತ್ ಖಾನ್ ಮತ್ತು ಮಿ ಫಜ್ಲುಲ್ ಹಕ್ಕರನ್ನು ಕಂಡು ಮಾತಾಡಿದಂತೆ ತೋರುತ್ತದೆ.

ಮಿ. ಜಿನ್ನರು ಇದೇ ರೀತಿ ಅಸಾಧ್ಯ ಧೋರಣೆ ವಹಿಸಿದ ಪಕ್ಷದಲ್ಲಿ ಅವರಿಗೆ ಸರಕಾರದ ಬೆಂಬಲವು ತಪ್ಪುವುದು. ಆಗ ಅವರಿಗೆ ಎಷ್ಟು ಮಂದಿ ಮುಸಲ್ಮಾನ ಮುಖಂಡರ ಬೆಂಬಲದೊರೆಯುವುದೋ? ಇಷ್ಟರಲ್ಲೇ ಕೆಲವರಲ್ಲಿ ಅತೃಪ್ತಿ ಹುಟ್ಟಿದೆ. ಸರ್. ಸಿಕಂದರ್ ಹಾಯತ್ ಖಾನರು ಮಿ. ಜಿನ್ನರ ನಾಯಕತ್ವವನ್ನನುಸರಿಸದೆ ತನ್ನದೇ ದಾರಿಹಿಡಿದು ಮುಂದುವರಿಯುತ್ತಿದ್ದಾರೆ. ಮಿ. ಫಜ್ಲುಲ್ ಹಕ್ಕರು ಕಾಲ ಬಂದಂತೆ ಕೋಲ ಕಟ್ಟುವವರಾಗಿರುತ್ತಾರೆ. ಸಂಧಿನ ಪ್ರಶ್ನೆಯನ್ನು ಅಲ್ಲಿಯ ಹಿಂದೂ ಮತ್ತು ಮುಸಲ್ಮಾನ ಮುಖಂಡರೇ ಇತ್ಯರ್ಥಪಡಿಸಿಕೊಳ್ಳಬೇಕೆಂದು ಅಲ್ಲಿಯ ಮುಸ್ಲಿಮ್ ಲೀಗಿನ ಮುಖಂಡರೇ ಅಭಿಪ್ರಾಯಪಡುತ್ತಿರುತ್ತಾರೆ. ಹೀಗೆ ನಿಜವಾದ ಪರೀಕ್ಷೆಯ ಸಂದರ್ಭ ಬರುವಾಗ ಮಿ. ಜಿನ್ನರ ಬೆಂಬಲಕ್ಕೆ ಈಗಣ ಮುಸ್ಲಿಮ್ ಲೀಗಿನ ಹೆಚ್ಚಿನ ಮುಖಂಡರು ನಿಲ್ಲಲಾರರು. ಆದುದರಿಂದ ವೈಸರಾಯರೂ ಕಾಂಗ್ರೆಸಿನವರೂ ಇನ್ನೂ ಇನ್ನೂ ಮಿ. ಜಿನ್ನರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡದೆ ಸ್ವತಂತ್ರವಾಗಿ ನಿಜವಾದ ದೇಶ ಹಿತಸಾಧಕ ಮಾರ್ಗದಲ್ಲಿ ಮುನ್ನಡೆಯುವುದೇ ವಿವೇಕಪರವಾದುದಾಗಿದೆ.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)
ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)
ರೂ. 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪ್ರತಿಗಳಿಗೆ ಬರೆಯಿರಿ:-
ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

THE
PANGAL NAYAK BANK LTD.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.
(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡಿನ ಪಾಲುಗಳನ್ನು ಪಡಕೊಂಡು ಕಂಪೆನಿಯ ಶ್ರೇಯೋಭಿವೃದ್ಧಿಯನ್ನು ಬಯಸಿರಿ!

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಕ.

ಕಿಮ್ಮತು ರೂ. 5-0-0 ಪಚ್ಚಿ 0-8-0

ಸೊರತ್ ಫಾರ್ಮಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
Null Bazar, Duncan Road,
BOMBAY 4

ಸರಳತೆ, ಸೌಂದರ್ಯದ ಸಾಕಾರ — ಈ ಉಡುಪು

ಭಾರತೀಯ ಉಡುಪಿನ ವಿಚಾರವಾಗಿ

ಒಬ್ಬ ಯೂರೋಪಿನ ಮಹಿಳೆಯ ಅಭಿಪ್ರಾಯ.

ಬಹಳ ಹೆದರಿಕೆ ಮತ್ತು ಆಸಕ್ತಿಗಳೊಡನೆ ನನ್ನ ಪರಿಚಯವು ಒಬ್ಬ ಸಭ್ಯಗೃಹಸ್ಥರೂ ಪರದೆಯಲ್ಲಿರುವವರೂ ಆದವರೊಂದಿಗೆ ಆಯಿತು. ಯಾರನ್ನು ನಾನು ಅತ್ಯಂತ ಹೀನ ವೃತಿಗಳೆಂದು ತಿಳಿದಿದ್ದೆನೋ ಆ ಸ್ತ್ರೀಯರು ನನ್ನನ್ನು ಆಶ್ಚರ್ಯಚಕಿತಳನ್ನಾಗಿ ಮಾಡಿದರು. ಅವರ ವ್ಯರ್ಥಾಲಾಪ ಧೈರ್ಯ ಸಾಹಸಗಳು ಮತ್ತು 'ಫ್ಯಾಷನ್ನಿನ' ಗುಲಾಮಗಿರಿಗಳು ನನ್ನನ್ನು ಮತ್ತೂ ಆಶ್ಚರ್ಯದಲ್ಲಿ ಮುಳುಗಿಸಿಬಿಟ್ಟವು.

ಇದಕ್ಕೆ ಮುಂಚೆ, ಭಾರತದ ಸ್ತ್ರೀಯರು ಸಹ ಫ್ಯಾಷನ್ನಿನ ಆರಾಧಕರೆಂಬುದು ನನಗೆ ನಿಜವಾಗಿಯೂ ತಿಳಿದಿರಲಿಲ್ಲ. ನಾನು ಕೇವಲ ಅನಗತ್ಯವೆಂದು ತಿಳಿದಿದ್ದ ಸೀರೆಗಳು ಫ್ಯಾಷನ್ ಮಾಡಲು ಯೋಗ್ಯವೆಂದು ತಿಳಿದು ಬಂದಿತು. ಸೀರೆಗಳ ಆಧುನಿಕ ಫ್ಯಾಷನ್ನುಗಳು ಸ್ವಲ್ಪವೂ ಸಮರ್ಪಕವಾಗಿಲ್ಲ.

ಈ ನಡಿಗೆ ಏಕೆ?

ಭಾರತದ ಉಡುಪು ನನಗೆ ಒಪ್ಪಿಗೆಯಾಗುವುದೆಂದರೆ ಅದು ಸಂಪೂರ್ಣವಾಗಿ ಭಾರತದ್ದು ಆದಾಗ. ಅದರಲ್ಲೂ ನನಗೆ ಇಲ್ಲಿನ ಶಾಖದ ಉಡುಪುಗಳನ್ನು ಕಂಡರೆ ಬಹಳ ಆಸೆ. ಇದರಿಂದಲೇ ನಾನು ಸಾಯಂಕಾಲದಲ್ಲಿ ಸೀರೆಯನ್ನು ಉಡುತ್ತಿರುವುದು. ಆಂಗ್ಲ ಮಹಿಳೆಯು ಸೀರೆಯನ್ನು ಉಡಬಾರದೆಂದು ಬಹಳ ಜನರ ಅಭಿಪ್ರಾಯ. ಆದರೆ ನಾನು ಇದಕ್ಕೆ ತೀರ ವಿರೋಧಿ. ಯಾವ ಮನುಷ್ಯನಿಗೇ ಆಗಲಿ ತನಗೆ ಸುಂದರವೆಂದು ತೋರುವ ಯಾವ ಉಡುಪನ್ನು ಬೇಕಾದರೂ ಧರಿಸುವ ಹಕ್ಕಿದೆ.

ಸೀರೆಯನ್ನುಟ್ಟು ಉದ್ದುದ್ದ ಹೆಜ್ಜೆ ಹಾಕುತ್ತ 'ಹಾಕಿ' ಆಡುವ ಮೈದಾನದಲ್ಲಿರುವಂತೆ ನಡೆಯುವ ಹೆಂಗಸನ್ನು ಕಂಡರೆ ನನಗಾಗುವುದಿಲ್ಲ. ಸ್ತ್ರೀಯು ಸೀರೆಯನ್ನು ಉಟ್ಟರೆ ಆ ಸೀರೆಗೆ ತಕ್ಕಂತೆ ಗಂಭೀರವಾಗಿ ನಡೆಯಬೇಕು. ಆ ಉಡುಪಿಗೆ ಯೋಗ್ಯವಾದಂತೆ ವರ್ತಿಸಬೇಕು. ಭಾರತದಲ್ಲಿ ಉಪಯೋಗಿಸುವ ಬಣ್ಣಗಳು ಸಹ ಮನಸ್ಸನ್ನು ಸೂರೆಗೊಳ್ಳುವುವು. ಭಾರತವನ್ನು ಒಂದು ತೋಟವೆಂದು ಭಾವಿಸಿದರೆ, ಅದರಲ್ಲಿ ವಸಂತ ಋತುವಿನ ವೈಭವವಿರುವಂತೆ ತೋರುವುದು. ಚಿತ್ರ ವಿಚಿತ್ರವಾದ ಬಣ್ಣಗಳು ಕಣ್ಣಿಗೆ ಬೀಳುವುವು. ಒಂದು ಸುಂದರವಾದ ಹಾಸಿಗೆಯನ್ನು ಹಾಸಿ, ಅದರ ಮೇಲೆ ಬಣ್ಣ ಬಣ್ಣದ ಪುಷ್ಪಗಳ ಮಗ್ಗುಲು ಹಾಸಿಗೆಯನ್ನು ಹಾಸಿದ್ದು, ಅದರ ನಾಲ್ಕೂ ಕಡೆಗಳಲ್ಲಿಯೂ ಜನರ ವಿಶೇಷವಾದ ಗುಂಪು ನೆರೆದಿರುವಂತೆ ಕಾಣುವುದು. ಇದೇ ರೀತಿಯಲ್ಲಿ ಆ ತೋಟದಲ್ಲಿ ಊಟಮಾಡಿದರೆ ಆ ತೋಟವು ಬಣ್ಣದ ಫಿಲ್ಮಿನಂತೆ ಕಾಣುವುದು.

ಯೂರೋಪಿನಲ್ಲಿ ದರ್ಜಿಯು ನಮ್ಮ ಉಡುಪನ್ನು ಯಾವ ರೀತಿಯಲ್ಲಿಯೇ ಕತ್ತರಿಸಿ ಸಿದ್ಧಮಾಡಲಿ, ನಾವು ಆ ರೀತಿಯಲ್ಲೇ ಅದನ್ನೂ ಧರಿಸಿ ಬಿಡುವೆವು. (ಆಟದ ಉಡುಪು, ಸಂಜೆಯ ಗೌನುಗಳು ಇತ್ಯಾದಿ) ಆದರೆ ಈ ಉಡುಪುಗಳನ್ನು ನಾವು ಲೇಸ್, ಚಿನ್ನ ಬೆಳ್ಳಿಯ ಒಳ್ಳೆಗಳು, ಹೂಗಳಿಂದ ಅಲಂಕರಿಸಬಲ್ಲೆವೆಂಬ ಆಸೆಯು ನಮಗೆ ಸ್ವಲ್ಪವೂ ಇಲ್ಲ. ಭಾರತೀಯ ಸ್ತ್ರೀಯರು ಬುದ್ಧಿವಂತರೆಂದು ನಾನು ಕರೆಯುವುದಕ್ಕೆ ಕಾರಣವೇನೆಂದರೆ, ಅವರು ಹ್ಯಾಟನ್ನು ದೂರ ಮಾಡಿರುವುದೇ. ಭಾರತದಲ್ಲಿ ಯಾರಾದರೂ ಸಂಚರಿಸಿದರೆ, ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೇರೆ ಬೇರೆ ಫ್ಯಾಷನ್ನುಗಳು ಗೋಚರವಾಗುವವು.

ಬೇರೆ ಬೇರೆ ಪ್ರಾಂತ್ಯಗಳ ಉಡುಪುಗಳು

ಸಾಧಾರಣವಾಗಿ ದಕ್ಷಿಣದ ಸ್ತ್ರೀಯರು ಸೀರೆಯನ್ನೇ ಉಪಯೋಗಿಸುವರು. ಹೂವನ್ನು ತಲೆಯಲ್ಲಿ ಮುಡಿಯುವರು. ರಾಜಪುತ್ರಸ್ಥಾನದ ಸ್ತ್ರೀಯರು ನಡೆಯುವಾಗ ಅವರ ನಡೆಗೆ ತಕ್ಕಂತೆ ನೃತ್ಯಮಾಡುತ್ತಿರುವಂತೆ ತೋರುವುದು. ತೆಳುವಾದ ಅವರ ಸೆರಗು ಗಾಳಿಯಲ್ಲಿ ಹಾರುತ್ತಿರುವುದು.

ಪಂಜಾಬಿನ ಸ್ತ್ರೀಯರು ವಿಗ್ರಹವನ್ನು ಕೆತ್ತುವವರನ್ನು ನೆನಪಿಗೆ ತರುವರು. ಅವರ ಉಡುಪು ಈ ರೀತಿ ಇದೆ—ಉದ್ದವಾದ ಪಾಜಾಮು, ಶರ್ಟುಗಳು, ಸುತ್ತಿಕೊಂಡಿರುವ ಚಾದರ್. ಅಲ್ಲಿನ ಸ್ತ್ರೀಯರ ಕಾಲುಗಳಲ್ಲಿ ಸ್ಲಿಪ್ಪರ್ಸ್ ಇರುವುವು. ಇವುಗಳ ಮುಂಭಾಗವು ಮೊನೆಯಾಗಿಯೂ ಹಿಮ್ಮಡಿಗಳು ಕೆಳಭಾಗದಲ್ಲಿ ಬಗ್ಗಿಕೊಂಡೂ ಇರುವುವು.

ನಾನು ಲಕ್ನೋಗೆ ಹೋದಾಗ 'ಲಕ್ನೋ ಫ್ಯಾಷನ್ನಿನ ತವರುಮನೆ' ಎಂದು ಕೇಳಿದ್ದುದು ನಿಜವೆಂಬುದನ್ನರಿತೆನು. ಅಲ್ಲಿನವರ ಉಡುಪು ಅಷ್ಟೊಂದು ಮನಮೋಹಕವಾಗಿದ್ದಿತು.

ನಾನು ಭಾರತಕ್ಕೆ ಬಂದಾಗಿನಿಂದಲೂ, ನನ್ನ ಉಡುಪಿಗೆ ಬೇಕಾಗುವ ಕೆಲವು ವಸ್ತ್ರಗಳನ್ನು ಸಂಗ್ರಹಿಸುವುದರಲ್ಲಿ ಆಸಕ್ತಳಾಗಿರುವೆನು.

ಭಾರತದ ಒಡವೆಗಳಲ್ಲಿ ವಿಚಿತ್ರವಾದ ಸೌಂದರ್ಯದೆ. ವಿಹಿಂದಿನ ಹಾರಗಳು, ಬಳೆಗಳು ವಜ್ರವನ್ನು ಕೆತ್ತಿ ಬಂಗಾರದಲ್ಲಿ ಕೂರಿಸಲ್ಪಟ್ಟಿರುವಿಕೆ ಇವೆಲ್ಲವೂ ಪ್ರಾಚೀನ ಕಾಲದ ಐಶ್ವರ್ಯ ಮತ್ತು ವೈಭವಗಳನ್ನು ಸ್ಮರಣೆಗೆ ತರುತ್ತಿವೆ. ಆದರೆ ಭಾರತದ ಸ್ತ್ರೀಯರು ತಮ್ಮ ವೈಭವಯುಕ್ತವಾದ ಆಭರಣಗಳನ್ನು ಬಿಟ್ಟು ಪಶ್ಚಿಮದ ಟೊಳ್ಳು ಫ್ಯಾಷನ್ನಿಗೆ ಬೀಳುತ್ತಿರುವುದನ್ನು ಕೇಳಿ ನನಗೆ ಬಹಳ ವ್ಯಥೆಯಾಗುತ್ತಿದೆ. ಲಂಡನ್ ಮತ್ತು ಪ್ಯಾರಿಸ್ಸಿನ ಜವಾಹಿರು ಅಂಗಡಿಗಳಲ್ಲಿ ಇಂದಿಗೂ ಪ್ರಾಚೀನ ಭಾರತದ ಸೌಂದರ್ಯವನ್ನು ಉಪಯೋಗಿಸುವುದನ್ನು ಕಲಿಯುತ್ತಿರುವರು. ಜಗತ್ತಿನಲ್ಲೆಲ್ಲಾ ದೊಡ್ಡ ಸ್ಥಾನದ ಚಕ್ರವರ್ತಿನಿಯು ಸೇರುವುದನ್ನು ಕೇಳಿ

"ಈ ಒಡವೆಗಳು ಪ್ರಾಚೀನಭಾರತದ ಕಲಾಕುಶಲತೆಯ ಪರಿಣಾಮಗಳು."

ಭಾರತದ ನಾರಿಯರು ಸಂಸ್ಕೃತಿ ನಾಗರಿಕತೆಯ ಹೆಸರಿನಲ್ಲಿ ಪಶ್ಚಿಮದ ರೀತಿನೀತಿಗಳು ಫ್ಯಾಷನ್‌ಗಳನ್ನು ಅನುಸರಿಸುತ್ತಿರುವುದನ್ನು ಕೇಳಿದರಂತೂ ನನಗೆ ಆಶ್ಚರ್ಯವೂ, ವ್ಯಸನವೂ ಉಂಟಾಗುತ್ತವೆ. ಜಗತ್ತೇ ಭಾರತದ ಉಡುಪನ್ನು ಮೋಹಿಸಿ, ಮೆಚ್ಚುತ್ತಿರುವಾಗ, ಇಲ್ಲಿನವರು ಇತರರ ಬಲೆಗೆ ಬೀಳುವುದು ಎಂತಹ ವಿಷಾದಕರವಾದ ವಿಚಾರ! (S.)

ಕನ್ನಡ ನುಡಿವೆಣ್ಣಿಗೊಂದು
ಕನ್ನಡಗಿತ್ತಿಯ ಗಿರುಗಾಣಿಕೆ
ನಾಡ ಸೋದರಿಯರ ನೈಜ ಜೀವನದ
ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ
ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ
ಬೆಲೆ: ೦-೭-೩.
0—8—0 ಸ್ಟಾಂಪು ಕಳುಹಿಸಿದರೆ
1 ಪ್ರತಿಯನ್ನು ಕಳಿಸಬಹುದು,
ಬರೆದಗಾರ್ತಿಯರು:—
ಶ್ರೀಮತಿ ಮಟ್ಪಾಡಿ ಕಮಲಾಕ್ಷಿ
ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ಣಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ
'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ನೀತಿನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ........'
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಖ್ಖ ಇಟ್ಟರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಖರವಾದ ಕೆಲವೇ ನಿಮಿಷಗಳಲ್ಲಿ ತಕ್ಕ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು. ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಳಿಯಾಗಿ ಹೋಗಿದ್ದರೂ ತಡವಾಗಲಿಲ್ಲ. ಲೆಖ್ಖ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟು.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಇಂಗ್ಲೀಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾ ಯಾವದೇ ಸ್ಥಿತಿಯಲ್ಲಿರಲಿ), ಸೋಕು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡತಕ್ಕದ್ದು.

ಜಗತ್ಪ್ರಸಿದ್ಧ
ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಕೊಳ್ಳುವ ಮೊದಲು, ಕೋಳಿ ಗುರುತಿನ ಸರಿಯಾದ ಗುರುತನ್ನು "ಗೊನೊಕಿಲರ್" ಹೆಸರನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲಭಾಯಿ ಪಟೇಲ್ ರೋಡ್, ಮುಂಬಯಿ ೪

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,

Hampankatte, **MANGALORE.**

ಮೂಲವ್ಯಾಧಿ

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಅರ್ಶಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಪಳಿಯು ಅಥವಾ ಹೊಸ ತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲ ವ್ಯಾಧಿಯು 'ಅರ್ಶಮಾರಾ'ವನ್ನು ಹಚ್ಚಿದ ಕೂಡಲೆ ಅದ್ಭುತ ವಾಗಿ ಗುಣಹೊಂದುವುದು. ನೋವು ತುರಿಸುವಿಕೆ, ಉರಿಯುವಿಕೆ, ಕೀವು, ರಕ್ತಸ್ರಾವವಾಗುವುದೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಒಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿ ಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE **MOOLKY BANK, LTD.,**

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja,	ಯಂ. ಆರ್. ಪೂಂಜ,
President & Manager,	ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರ ವಾಗಿದೆ ಅಳಿಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು ಸೀಸೆ1ಕ್ಕೆ 13ಆಣೆ, ೮ ಖ.೯ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪ್ಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರವೂ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:– ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! **DAIMONDS!**

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಕ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೮ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ: **ಕ್ರಾನ್ ರಬ್ಬರ್ ಸ್ಟಾಂಪ್ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ ಬೋರ್ಡು ಜವಾನರ ಬೇಜು, ಮೊನೋಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.

Approved firm by the Govt. of Mysore. Certified by the Agent of the Govt. of India in Ceylon



SALE! SALE! SALE!

ಮುಂಚಿನ ಕ್ರಯ ರೂ., 10

ಈಗಿನ ಕ್ರಯ ರೂ. 3-12-0.

Swiss Lever Wrist Watch

ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನಮೂನೆ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡುವುದಕ್ಕೂ ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳುವುದಕ್ಕೂ ಬಹು ಅಂದವಾಗಿವೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ಕಡಿಮೆ ದರದಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ರೈಲ್ವೆ ಉದ್ಯೋಗಸ್ಥರೂ, ದೊಡ್ಡ ಆಫೀಸರುಗಳೂ, ದಿವಾನ್ಜಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ತರಿಸಲಿಕ್ಕೆ ಪ್ರಯತ್ನಪಡುವರು.

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ 3-12-0

ROYAL CO, 19 Beat SOWCARPET G. T. MADRAS,

ರಾಯಲ್ ಕಂಪೆನಿ, ೧೯ಬೀಟ್ ಸಾಹುಕಾರ ಪೇಟೆ, ಜಿ. ಟಿ. ಮದರಾಸು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ

ವಿಲಿಯಮ್ ಎಂಡ್ ಕೋ ರವರ

ದಾಜ ಮತ್ತು ಬಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪ್ಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ನಿವೇದನೆ ಕೊಡುತ್ತೇವೆ.

ಅಮೃತಾಂಜನ ಡಿಪ್ಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ,
ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿ,
ಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟು ಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್'ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರೈಡ್ – ಒಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಸುತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೀ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹೋಯುವದಾದರೆ ಮಲಾಶಯದಲ್ಲಿ ಗುಳ್ಳೆಗಳೆದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹವನನ್" ಎಂಬ ಹೆಮೊರೈಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4-0 ವಿ.ಪಿ. ಬೇರೆ.

ಲಕ್ಷೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಷೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವವು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B. & C. I. Ry. BOMBAY PRESIDENCY.

ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.

(Regist)ered No M 3618

15-2-1940.

ನವಯುಗ

navayuga

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್

ಸೆಕ್ಯೂರಿಟಿ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೀರ್ತಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆ ಯಿದು.

● ಪಾಲ್ಸಿಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್	ಅ	ಎಚ್. ವೆಂಕಟರಾಮಯ್ಯ
ಕೆ. ಆರ್ ಕೆ ಶೆಟ್ಟಿ ಬಿಲ್ಡಿಂಗ್,	ಥ	ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್
ಮಿಶ್ಶನ್‌ಹೈಸ್ಕೂಲ್ ರೋಡು ಮಂಗಳೂರು	ವಾ	ಭವನ, ಬೆಂಗಳೂರು ಸಿಟಿ

The Asiatic Govt. Security Assurance Co. Ltd.

ಝಾಂಡು ಮಲೇರಿಯಾಮಿಕ್ಶ್ಚರ್

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ ಆಣೆ 0 13—0 ಮಾತ್ರ.

ಸ್ಥಳೀಯ ಏಜಂಟರು —ಪಿ. ಎ. ಪೈ ಬ್ರದರ್ಸ್.

ಕಾರ್ಕಳ ಏಜಂಟರು —ಎಂ. ವಿ. ಶೆಣೈ, ಕೆಮಿಸ್ಟ್ಸ್.

ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೆ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಬರೆಯಿರಿ —

ದಾಮೋದರ್ ಎಂಡ್ ಕೊ,

ZANDU 78ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು.

DAMODER & CO.,

78 China Bazar Road, G T MADRAS

ಚರ್ಮವನ್ನು, ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು

ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುಕ್ಷೀಣ ಮೊದಲಾದವುಗಳನ್ನು ಕ್ಷಿಪ್ರದಲ್ಲೇ ಪರಿಹರಿಸಿ, ರಕ್ತ ವೀರ್ಯಗಳನ್ನು ವಿಶೇಷವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹ ಇವನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ಕ್ಕೆ ರೂ 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸರ್ವಾಂಗ ಭದ್ರತೆಯು ಹಾಗೂ ಅಭಿವೃದ್ಧಿಯು ಮೇಳೈಸಿರುವ ಜೀವ ವಿಮಾ ಸಂಘ ಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಖ್ಯಾತಿಸಿದ್ಧಿ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ.—

ಶಾಖಾ ಕಾರ್ಯದರ್ಶಿ,

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೋ ಲಿಮಿಟೆಡ್, ಮದ್ರಾಸ್

ಮಂಗಳೂರು ಬ್ರಾಂಚ್

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾಲಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷಘಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ವೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ !

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರೋಯ್ಡ್ – ಒಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹೆವನನ್" ಎಂಬ ಹೆಮೊರೋಯ್ಡ್ ಒಯಿಂಟ್ ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ತೀಕ್ಷ್ಣರೋಗಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. **ಸೀಸೆ 1ಕ್ಕೆ ರೂ. 1–4–0 ವಿ.ಪಿ. ಬೇರೆ.**

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು



ಮಲಬದ್ಧತೆಯ ಸ್ವಭಾವವುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3–4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1–0–0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು;

The Eclipse Distributing Agency,

Dahanu Road, B. B. & C. I. Ry. BOMBAY FRESIDENCY.

ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ. 3—4—0
6 ತಿಂಗಳಿಗೆ – ರೂ. 1—12—0
ಚಂದಾ ಹಣವನ್ನು ಮುಂಗಡ ಕೊಡತಕ್ಕದ್ದು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨೩

ಉಡುಪಿ, ಗುರುವಾರ, ೧೫—೨—೧೯೪೦.
UDIPI, THURSDAY, 15-2-1940.

VOL. 19
No. 23

274 ಹಡಗುಗಳ ನಾಶ

ಯುದ್ಧವಾರಂಭವಾದಂದಿನಿಂದ ಫೆಬ್ರುವರಿ ತಾ. 4ರ ವರೆಗೆ ಒಟ್ಟು 274 ಹಡಗಗಳನ್ನು ಜರ್ಮನರು ಮುಳುಗಿಸಿದರೆಂದು ತಿಳಿದುಬರುತ್ತದೆ. ಇದರಲ್ಲಿ ಇಂಗ್ಲೆಂಡಿನ ಹಡಗಗಳು 143, ಮಿತ್ರರಾಷ್ಟ್ರಗಳದ್ದು 14, ಮತ್ತು ತಟಸ್ಥ ರಾಷ್ಟ್ರಗಳದ್ದು 117. ತಾವು ಒಟ್ಟು 409 ಹಡಗ ಮುಳುಗಿಸಿರುವೆವೆಂದು ಜರ್ಮನರ ಅಂಬೋಣ. ಜರ್ಮನಿಯ ಹೇಳಿಕೆಯ ಪ್ರಕಾರ ಜನವರಿ ಅಂತ್ಯದ ವರೆಗೆ ಅದು 42 ವ್ಯಾಪಾರಿ ಹಡಗಗಳನ್ನು ಕಳಕೊಂಡಿರುತ್ತದೆ.

ಬ್ರಿಟಿಷ್ ಸೈನಿಕನಿಗೆ ಶಿಕ್ಷೆ

ಕಳೆದ ದಶಂಬರ ತಾ. 8ರಲ್ಲು ಲಕ್ನೋ ಪಟ್ಟಣದ ಸಿನೆಮ ಥಿಯೇಟರೊಂದರಲ್ಲಿ ಬ್ರಿಟಿಷ್ ಸೈನಿಕನೊಬ್ಬನು ಕಾಂಗ್ರೆಸ್ಸನ್ನು ಬಯ್ಯುತ್ತಿದ್ದಾಗ ಪಂಡಿತ ಮಾಲವೀಯರ ಪುತ್ರ ಪಂಡಿತ ಗೋವಿಂದ ಮಾಲವೀಯರು ಆಕ್ಷೇಪಿಸಿದಾಗ ಅವನು ಪಂಡಿತರಿಗೆ ಹೊಡೆದು ಪೆಟ್ಟಾಗಿರುವುದಕ್ಕೆ ಈ ಸೈನಿಕನ ಮೇಲೆ ಪಂಡಿತರು ಫಿರ್ಯಾದಿಮಾಡಿದ್ದರು. ಇದೇ ತಾ. 8ರಲ್ಲಿ ಈ ಸೈನಿಕನು 6 ವಾರಗಳ ಶಿಕ್ಷೆಗೊಳಗಾಗಿರುವನು.

3 ಮಿಲ್ಯ ಪೋಲರ ನಾಶ

1939ನೇ ಸೆಪ್ಟಂಬರದ ಲಾಗಾಯಿತು ಜರ್ಮನರ ಧಾಳಿ ಮತ್ತು ಅತ್ಯಾಚಾರದಿಂದಾಗಿ 3 ಮಿಲ್ಯ ಪೋಲರು ನಾಶವಾಗಿರುವರೆಂದು ತಿಳಿದು ಬರುತ್ತದೆ. ಪಶ್ಚಿಮ ರಣರಂಗದಲ್ಲಿ ಜರ್ಮನಿಯು ಯುದ್ಧದಲ್ಲಿ ನಿರತವಾಗಿರುವಾಗ ಪೋಲರಲ್ಲಿಯಾರೂ ದಂಗೆಯೇಳದಂತೆ ಜರ್ಮನರು ನಿರ್ಘೃಣವಾಗಿ ಒಂದಿಷ್ಟು ಸ್ವಾಭಿಮಾನ ತೋರಿಸುವ ಪೋಲರನ್ನೆಲ್ಲಾ ಕೊಂದು ಹಾಕುತ್ತಿರುವರು. ವೇಪರ್ ಎಂಬಲ್ಲಿ ಜರ್ಮನ್ ಪೋಲೀಸರು ಕೈದು ಮಾಡಲಿದ್ದ ಇಬ್ಬರು ಪೋಲರು ಗುಂಡು ಹಾರಿಸಿ ಇಬ್ಬರು ಜರ್ಮನರನ್ನು ಕೊಂದುದರ ಪ್ರತೀಕಾರಾರ್ಥವಾಗಿ 130ಕ್ಕಿಂತಲೂ ಮಿಕ್ಕಿದ ಪೋಲರು ಕೊಲೆ ಮಾಡಲ್ಪಟ್ಟಿರುವರು. ಇವರಲ್ಲಿ ಇಬ್ಬರು ಡಾಕ್ಟರರು, 17 ಮಂದಿ ಸ್ತ್ರೀಯರು, ಒಬ್ಬನು 14 ವರ್ಷದ ಹುಡುಗನು. ಮನೆಗಳಿಂದ ಜನರನ್ನು ಹೊರಗೆಳೆದು ಹಾಕಿ ಕೊಲ್ಲಲಾಯಿತು. ಹೊಟೆಲೊಂದರ ಮ್ಯಾನೇಜರನ ಕುತ್ತಿಗೆಗೆ ನೇಣು ಹಾಕಿ ತೂಗಾಡಿಸಿ ಕೊಲ್ಲಲಾಯಿತು. ಜರ್ಮನರು ಟ್ರೈನೊಂದನ್ನು ನಿಲ್ಲಿಸಿ ಅದರಲ್ಲಿದ್ದ ಪೋಲರು ಹಲವರನ್ನು ಗುಂಡು ಹೊಡೆದು ಕೊಂದರು. ಕ್ರೆಕೋ ಪಟ್ಟಣದಲ್ಲಿ ಇದೇ ರೀತಿ 73 ಮಂದಿ ಪೋಲರು ಕೊಲ್ಲಲ್ಪಟ್ಟಿರುವರು. ಇಂತಹ ಸಾಮುದಾಯಿಕ ಕೊಲೆಗಳು ಅನುನಿತ್ಯವೆಂಬಂತೆ ನಡೆಯುತ್ತಲೇ ಇವೆ.

ಸಮಾಚಾರ ಸಂಗ್ರಹ

ಚೈನದ ಟ್ರೈನಿನ ಮೇಲೆ ಬೊಂಬು

ಫ್ರೆಂಚ್ ಇಂಡೋ ಚೈನದಲ್ಲಿ ಫ್ರೆಂಚ್ ಟ್ರೈನೊಂದು ಪ್ರಯಾಣಿಕರನ್ನೊಯ್ಯುತ್ತಿದ್ದಾಗ ಜಪಾನ ವಿಮಾನಗಳೆಸೆದ ಬೋಂಬುಗಳು ಅದರ ಮೇಲೆ ಬಿದ್ದು 101 ಮಂದಿ ಪ್ರಯಾಣಿಕರು ಕೊಲ್ಲಲ್ಪಟ್ಟಿರುವರು. 120 ಮಂದಿ ಗಾಯಗೊಂಡಿರುವರು. ಈ ಕುರಿತು ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಮತ್ತು ಫ್ರೆಂಚ್ ಸರಕಾರಗಳು ತಮ್ಮ ನಿಷೇಧ ಸೂಚಿಸಿರುವವು. ಇಂಡೋಚೈನದ ಮೂಲಕ ಚೀನೀ ರಾಷ್ಟ್ರೀಯ ಸರಕಾರಕ್ಕೆ ಯುದ್ಧಸಾಮಗ್ರಿಗಳು ಗುಪ್ತವಾಗಿ ಕಳುಹಿಸಲ್ಪಡುವುದರಿಂದ ತಾವು ಬೋಂಬೆಸೆಯಬೇಕಾಯಿತೆಂದೂ, ಹೀಗೆ ಮದ್ದು ಗುಂಡು ಕಳುಹಿಸಲ್ಪಡುವುದು ನಿಲ್ಲಿಸಲ್ಪಡುವನಕ ಇಂಡೋಚೈನದ ರೈಲ್ವೆಯ ಮೇಲೆ ಬೋಂಬೆಸೆಯಲಾಗುವುದೆಂದೂ ಜಪಾನರ ಹೇಳಿಕೆ

40 ಜರ್ಮನ್ ಸಬ್‌ಮೆರೀನುಗಳ ನಾಶ

ಯುದ್ಧಾರಂಭದಲ್ಲಿ ಹೊರಗೆ ಕಳುಹಿಸಲ್ಪಟ್ಟಿದ್ದ 66 ಜರ್ಮನ್ ಸಬ್‌ಮೆರೀನುಗಳ ಪೈಕಿ ಕಡಿಮೆ ಪಕ್ಷ 40 ಇಷ್ಟರವರೆಗೆ ಮುಳುಗಿಸಲ್ಪಟ್ಟಿವೆ. ಬ್ರಿಟಿಷ್ ಮತ್ತು ಫ್ರೆಂಚ್ ನೌಕಾಪಡೆಯನ್ನು ಹೆದರಿ ಅಂಜಿ ಜರ್ಮನ್ ನೌಕಾಪಡೆಯು ಅದರ ನಿಲಯಗಳಿಂದ ಹೊರಬರುವುದಿಲ್ಲ. ಜಲತೋಟಿಗಳನ್ನಿತ್ತು ವಿಮಾನ ಮೂಲಕ ಬೋಂಬೆಸೆದು ಮತ್ತು ಸಬ್‌ಮೆರೀನುಗಳ ಮೂಲಕ ತಟಸ್ಥರಾಷ್ಟ್ರಗಳ ಹಡಗಗಳನ್ನು ಮುಳುಗಿಸುವ ಅತ್ಯಾಚಾರವೀಗ ಇಚ್ಛಾನುಸಾರ ನಡೆಸಲ್ಪಡುತ್ತದೆಂದು ಫ್ರೆಂಚ್ ನೌಕಾಮಂತ್ರಿ ಎಮ್. ಕಂಪಿಂಚಿಯವರಂದಿರುವರು. ಬ್ರಿಟಿಷ್ ಮತ್ತು ಫ್ರೆಂಚ್ ಪ್ರಧಾನ ಯುದ್ಧ ಮಂಡಲಿಯ ಸಭೆಯು ಇದೇ ತಾ. 5ರಲ್ಲು ಪೇರಿಸಿನಲ್ಲಿ ನಡೆಯಿತು. ತಾ. 5ರಲ್ಲು ನೋರ್ವೆಯ ಒಂದು ಹಡಗವೂ ಒಂದು ಸ್ವೀಡಿಶ್ ಸ್ಟೀಮರೂ ಜಲತೋಟಿಗಳನ್ನು ನಾಶಮಾಡುವ ಬ್ರಿಟಿಷ್ ಹಡಗವೊಂದು ಮತ್ತು ಪ್ರೋರ್ಟ್‌ಲೆಟ್ ಎಂಬ ಹಡಗವೂ, ಕೆನಡದ ಮೊಡ್ಡನಾದೊಂದು ಸ್ಟೀಮರೂ ಮುಳುಗಿಸಲ್ಪಟ್ಟಿರುವವು. ಗಾಯಗೊಂಡವರ ಚಿಕಿತ್ಸೆಗಾಗಿ 22 ಅಮೇರಿಕಾದ ಎಂಬ್ಯುಲೆನ್ಸ್ ದಳಗಳು ಪೇರಿಸಿನಿಂದ ಪಶ್ಚಿಮ ರಣರಂಗಕ್ಕೆ ತೆರಳಿರುವವು.

ಮಿ. ಜಿನ್ನರು ಇಂಗ್ಲೆಂಡಿಗೆ

ಬಲೂಚಿಸ್ಥಾನದ ಜಮಾಲಿ ಪಂಗಡಿಗರಿಗೆ ಸೇರಿದ ಸ್ಥಳವನ್ನು ಸರಕಾರವು ಆಕ್ರಮಿಸಿ ನಿವಾಸಗಳನ್ನು ಸ್ಥಾಪಿಸಿರುವ ಕುರಿತು ಸದ್ರಿ ಪಂಗಡಿಗರು ವ್ಯವಹರಣೆ ನಡೆಸಿರುವರು. ಈ ವ್ಯವಹರಣೆಯು ಈಗ ಪ್ರೀವಿ ಕೌನ್ಸಿಲಿನ ಮುಂದಿರುವದು. ಜಮಾಲಿ ಪಂಗಡಿಗರ ಕಡೆಯ ವಕೀಲರಾಗಿ ಮಿ. ಜಿನ್ನರು ಬರುವ ಮೇ ತಿಂಗಳಲ್ಲಿ ಇಂಗ್ಲೆಂಡಿಗೆ ಹೋಗಲಿರುವರೆಂದೂ, ಅದೇ ಸಂದರ್ಭದಲ್ಲಿ ಮುಸ್ಲಿಮು ಲೀಗಿನ ಪರವಾದ ಶಿಷ್ಟಮಂಡಲವೊಂದು ಇಂಗ್ಲೆಂಡಿಗೆ ಹೋಗಿ ಮುಸಲ್ಮಾನ ಹಕ್ಕು ಭಾಧ್ಯತೆಗಳ ಕುರಿತು ಅಲ್ಲಿ ಪ್ರಚಾರಮಾಡಲಿರುವುದೆಂದೂ ತಿಳಿದು ಬರುತ್ತದೆ. ಪತಿತವರ್ಗದ ಮತ್ತು ಲಿಬರಲ್ ಪಕ್ಷೀಯರ ಪರವಾದ ಶಿಷ್ಟಮಂಡಳಗಳನ್ನು ಇಂಗ್ಲೆಂಡಿಗೊಯ್ಯುವ ಆಲೋಚನೆ ಕೂಡಾ ನಡೆದಿದೆ. ಆದರೆ ಅವು ಮುಸ್ಲಿಮ್ ಲೀಗಿನ ಶಿಷ್ಟಮಂಡಲದೊಂದಿಗೆ ಹೋಗುವ ಸಂಭವ ತೋರುವುದಿಲ್ಲ.

30,000 ಮಂದಿ ರಸ್ಯನರ ಮರಣ

ಇದೇ ತಾ 5ರ ಹೆಲ್ಸಿಂಕಿಯ ವಾರ್ತೆಯ ಪ್ರಕಾರ ಫಿನ್ನರು ಇನ್ನೊಂದು ದೊಡ್ಡ ವಿಜಯ ಪಡೆದಿರುವರು. ಲಡೋಗ ಸರೋವರದ ಈಶಾನ್ಯದಲ್ಲಿ ಕಿಟೆಲಿನ್ ಎಂಬಲ್ಲಿ ಸಿಕ್ಕಿ ಬಿದ್ದಿದ್ದ 18ನೇ ಸೋವಿಯೆಟ್ ಸೈನಿಕದಳವನ್ನು ಫಿನ್ನರು ಆವರಿಸಿ ನಾಶಮಾಡಿರುವರು. 15 ರಿಂದ 20 ಸಾವಿರದ ವರೆಗಣ ಸೋವಿಯೆಟ್ ಸೈನಿಕರು ಕೊಲ್ಲಲ್ಪಟ್ಟು ಮತ್ತು ತೀವ್ರ ಚಳಿಯಿಂದ ಆಹಾರವಿಲ್ಲದೆ ಮರಕಟ್ಟಿ ನಾಶವಾಗಿರುವರು. ಇದರಿಂದ ಮೆನ್ನರ್‌ಹೈಮ್ ಕೋಟೆಯನ್ನು ಹಿಂಬದಿಯಿಂದ ಆವರಿಸುವ ರಸ್ಯನರ ಪ್ರಯತ್ನವು ನಿರರ್ಥಕವಾದಂತಾಯಿತು. ಈ 18ನೇ ದಳವನ್ನು ರಕ್ಷಿಸಲು ರಸ್ಯನರು ಮಾಡಿದ ಪ್ರಯತ್ನವನ್ನೆಲ್ಲಾ ಫಿನ್ನರು ಅಸಾಧಾರಣ ಧೈರ್ಯದಿಂದ ನಿಷ್ಫಲಗೊಳಿಸಿರುವರು. ಲಡೋಗ ಸರೋವರದ ಉತ್ತರದಲ್ಲಿ ನಡೆದ ಯುದ್ಧದಲ್ಲಿ 500 ಮಂದಿ ರಸ್ಯನರು ಕೊಲ್ಲಲ್ಪಟ್ಟಿರುವರು. ಇಷ್ಟರವರೆಗೆ ಒಟ್ಟು 240 ಸೋವಿಯೆಟ್ ವಿಮಾನಗಳು ನಾಶವಾಗಿವೆಯೆಂದೂ ಫಿನ್ನರು 15 ವಿಮಾನಗಳನ್ನು ಮಾತ್ರ ಕಳಕೊಂಡಿರುವರೆಂದೂ ತಿಳಿದುಬರುತ್ತದೆ. 5000 ಸೋವಿಯೆಟ್ ವಿಮಾನಗಳು ಫಿನ್ಲೆಂಡಿನ ಮೇಲೆ ಧಾಳಿ ನಡೆಸಲು ಉಪಯೋಗಿಸಲ್ಪಟ್ಟಿರುವವಾದರೂ ಅವುಗಳು ಬಹಳ ಕೆಳದರಗತಿಯವುಗಳಾಗಿವೆ. ಫಿನ್ಲೆಂಡು ಈಗ ಅತ್ಯಾಧುನಿಕ ವಿಮಾನಗಳ ಸಹಾಯವನ್ನು ಇಂಗ್ಲೆಂಡು ಮತ್ತು ಅಮೇರಿಕಗಳಿಂದ ಪಡೆದಿದೆ. ವಿಮಾನಗಳಿಂದ ಗಾಳಿಕೊಡೆಗಳ ಮೂಲಕ ಫೈರಿಪ್ರದೇಶದ ಮೇಲೆ ಹಾರಿಹೋಗುವ ರಸ್ಯನರ ಸಾಹಸವು ಸಂಪೂರ್ಣವಾಗಿ ಅಪ್ರಯೋಜಕವಾಗಿದೆ. ಅದೇ ಹೆಚ್ಚಿನ ಸೇನೆಯನ್ನು ಹೋರಾಟಕ್ಕೆ ಕರೆದಿದೆ. ಎಂದಿಗಿಂತಲೂ ಪ್ರಬಲವೂ ವ್ಯಾಪಕವೂ ಆದ ಧಾಳಿ ನಡೆಸುವ ಸಿದ್ಧತೆಯನ್ನು ಮಾಡುತ್ತಿದೆ

THE VIJAYA BANK LTD.,
ಭದ್ರತೆ ಮತ್ತು ಅನುಕೂಲತೆ.
ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.
ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಪಾಟಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.
ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.
ದಿ ವಿಜಯಾ ಬೇಂಕ್, ಲಿಮಿಟೆಡ್,
ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

Degrees: Books: Medicines.

Free H. L. M. S., H. M. B. H. M. D. etc Free Homeo-Ayur-Unani-Naturo degrees. by post also—Practioners also get soon. Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.) P. O. MAHUVA, (Kathiawar Dt, India.

ಡಿಲ್ಲಿ ಮಾತುಕತೆಯ ಕುರಿತು ಗಾಂಧಿಯವರ ಅಭಿಪ್ರಾಯ

ರಾಜಿಪ್ರಸ್ತಾಪವು ಕೊನೆಗೊಂಡಿರುವುದಿಲ್ಲ --- --- --- --- --- ಸತ್ಯಾಗ್ರಹಕ್ಕೆ ಸಮಯವು ಪರಿಪಕ್ವವಾಗಿಲ್ಲ.

ಮಹಾತ್ಮಾ ಗಾಂಧಿಯವರು, ತಾ. ೫ರಲ್ಲಿ ವೈಸರಾಯರನ್ನು ಕಂಡು ತಾ ೬ರಂದು ವಾರ್ಧಕ್ಕೆ ಹಿಂತಿರುಗಿರುವರು ಹಿಂದು ದೇಶದ ಮುಂದಿನ ರಾಜಕೀಯ ಘಟನೆಯನ್ನು ನಿಶ್ಚೈಸುವ ಹಕ್ಕು ಹಿಂದೀಯರ ದೆಂದು ಮಹಾತ್ಮರು ಕಾಂಗ್ರೆಸಿನ ಧೋರಣೆಯನ್ನು ಸ್ಪಷ್ಟೀಕರಿಸಿದರು. ಬ್ರಿಟಿಷ್ ಸರಕಾರವು ಹಿಂದೀಯರ ಅಭಿಮತಪಡೆದು ಯುಕ್ತಕಂಡ ರಾಜಕೀಯ ಘಟನೆಯನ್ನು ಹಿಂದೂಸ್ಥಾನಕ್ಕೀಯುವುದೆಂದು ವೈಸರಾಯರು ಪ್ರತಿಪಾದಿಸಿದರು ಹೀಗೆ ವೈಸರಾಯ ಗಾಂಧಿಯವರೊಳಗೆ ಮೂಲಭೂತ ಅಭಿಪ್ರಾಯಭೇದವೆದ್ದು ಗಾಂಧಿಯವರು ವರ್ಕಿಂಗ್ ಕಮಿಟಿಯವರ ಮತ್ತು ವೈಸರಾಯರು ಬ್ರಿಟಿಷ್ ಸರಕಾರದ ಅಭಿಮತ ಪಡೆದು ಮುಂದೆ ಸಂದರ್ಭಾನುಸಾರ ಪುನಃ ಒಟ್ಟು ಸೇರಿ ಮಾತಾಡುವ ಸೌಹಾರ್ದದಿಂದ ತಮ್ಮ ಮಾತುಕತೆಯನ್ನ ಕೊನೆಗೊಳಿಸಿರುವರು. "ವೈಸರಾಯರೊಡನೆ ನನ್ನ ರಾಜಿಪ್ರಸ್ತಾಪವು ಜಯಶೀಲವಾಗಿಲ್ಲೆಂದು ನನ್ನಲ್ಲೇನೂ ನಿರಾಶೆಯುಂಟಾಗಿರುವುದಿಲ್ಲ ನಾನೂ ವೈಸರಾಯರೂ ಈ ಅಪಜಯವನ್ನು ವಿಜಯದ ಮೆಟ್ಟಿಲಾಗಿ ಉಪಯೋಗಿಸಲಿರುವೆವು" ಎಂದೇ ಡಿಲ್ಲಿ ಮಾತುಕತೆಯ ಕುರಿತು ಗಾಂಧಿಯವರ ಅಭಿಮತ ಆದರೆ ಬೇಗನೆ ಹಿಂದುದೇಶದ ಬಿಕ್ಕಟ್ಟು ಪರಿಹರಿಸಲ್ಪಡದಿದ್ದರೆ ಅದರಿಂದ ಹಿಂದೂ ದೇಶಕ್ಕೂ ಇಂಗ್ಲೆಂಡಿಗೂ ಹಾನಿಯಿದೆ ಎಂದು ಗಾಂಧಿಜಿಯವರು ಎಚ್ಚರಿಸಿರುವರು. ಹಿಂದೀ ಸ್ವಾತಂತ್ರ್ಯದ ಪ್ರಶ್ನೆಯು ಇತ್ಯರ್ಥವಾಗುವನಕ ಕಾಂಗ್ರೆಸ್ ಮಂತ್ರಿಗಳು ಪುನಹ ಅಧಿಕಾರ ಸ್ವೀಕರಿಸುವಹಾಗಿಲ್ಲ. ಇದರಿಂದ ಇಷ್ಟರವರೆಗೆ ಕಾಂಗ್ರೆಸ್ ಮಂತ್ರಿಗಳು ಮಾಡಿದ ಜನಹಿತ ಸಾಧಕ ಕೆಲಸವೆಲ್ಲಾ ಅನಿಶ್ಚಿತ ಕಾಲದ ವರೆಗೆ ನಿಂತು ಹೋಗುವಂತಾಗಿದೆ ಮಿ ಜಿನ್ನರ ಕೇಳಿಕೆಯಂತೆ ಹಿಂದುದೇಶವನ್ನೂ ವಿಭಕ್ತ

ಕಾಂಗ್ರೆಸಿನ ಮುಂದಿರುವ ಕರ್ತವ್ಯ

ಗೊಳಿಸುವ ಇಲ್ಲವೆ ಒದರೆ ರಾಷ್ಟ್ರೀಯತೆಗೆ ಘಾತಕವನ್ನುಂಟು ಮಾಡುವ ಯಾವ ನಿರ್ಧಾರಕ್ಕಾದರೂ ಮಹಾತ್ಮರು ಒಪ್ಪುವ ಹಾಗಿಲ್ಲ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳನ್ನು ಮನ್ನಿಸಿ ಬ್ರಿಟಿಷ ಸರಕಾರದ ಮತ್ತು ಯುರೋಪಿಯನ್ ವ್ಯಾಪಾರಿಗಳ ನ್ಯಾಯವಾದ ಹಿತವನ್ನು ರಕ್ಷಿಸಿ ಹಿಂದೀ ಪ್ರಜೆಗಳ ಅಧಿಕಾರವನ್ನೊಪ್ಪುವ ದೇಶೀಯ ರಾಜರುಗಳ ಸ್ಥಾನ ಮಾನವನ್ನು ಕಾಪಾಡಿ, ಹಿಂದೀಯರೇ ತಮ್ಮ ರಾಜಕೀಯ ಘಟನೆಯನ್ನ ರಚಿಸಿಕೊಳ್ಳುವ ಅವರ ಸ್ವಯಂ ನಿರ್ಣಯ ಹಕ್ಕನ್ನು ಇಂಗ್ಲೆಂಡು ಮನ್ನಿಸಿ, ಪ್ರಕೃತದ ಯುದ್ಧದಲ್ಲಿ ಹಿಂದುದೇಶದ ನೈತಿಕ ಬೆಂಬಲವನ್ನು ಪಡೆಯಬೇಕೆಂದೇ ಮಹಾತ್ಮರ ಪ್ರತಿಪಾದನೆ

ನಾವು ಬೇಗನೆ ಗುರಿಮುಟ್ಟುವೆವು

ಮಹಾತ್ಮಾ ಗಾಂಧಿಯವರು ಶ್ರೀಮತಿ ಕಸ್ತೂರಿಬಾಯಿ ಗಾಂಧಿ, ಶ್ರೀಗಳಾದ ಮಹದೇವ ದೇಸಾಯಿ ಮತ್ತು ಪ್ಯಾರಿಲಾಲರೊಂದಿಗೆ ಡಿಲ್ಲಿಯಿಂದ ವಾರ್ಧಕ್ಕೆ ಹೋಗುವಾಗ ನಡುವೆ ಝಾನ್ಸಿ ಸ್ಟೇಶನಿನಲ್ಲಿ ಪೇಟೆಯ ಜನರು ಸೇರಿ ಅವರನ್ನು ಸ್ವಾಗತೀಕರಿಸಿದರು. ಮಹಾತ್ಮರು ಅತ್ಯಂತ ಪ್ರಸನ್ನಚಿತ್ತರಾಗಿದ್ದು ಜನತೆಗೆ ಚಿಕ್ಕ ಭಾಷಣವಿತ್ತರು "ರಾಜಿ ಪ್ರಸ್ತಾಪವು ಮುರಿದು ಹೋಯಿತೆನ್ನಲು ಸಾಧ್ಯವಿಲ್ಲ ಅದು ಪ್ರಕೃತ ನಿಲ್ಲಿಸಲ್ಪಟ್ಟಿರುವುದಷ್ಟೆ. ನಾವು ಬೇಗನೆ ಗುರಿ ಮುಟ್ಟಲಿರುವೆವೆಂಬ ವಿಶ್ವಾಸವೇ ನನ್ನಲ್ಲಿ ಆ ಆಶಾವಾದವನ್ನುಂಟುಮಾಡಿರುವುದು. ನಾವು ಸ್ವಾತಂತ್ರ್ಯ ಸಾಧಿಸುವುದನ್ನು ಯಾರಿಗೂ ತಡೆಗಟ್ಟಲು ಸಾಧ್ಯವಿಲ್ಲ ಕಾಂಗ್ರೆಸ್ ಪಕ್ಷೀಯರೆಲ್ಲಾ ಸಂಪೂರ್ಣ ಮನಸ್ಸಿನಿಂದ ನನಗೆ ಬೆಂಬಲವಿತ್ತರೆ ಇನ್ನೊಂದು ಹೋರಾಟ ನಡಿಸುವ ಆವಶ್ಯಕತೆಯೇ ಉಂಟಾಗಲಾರದೆಂದು ನನ್ನ ನಂಬಿಕೆ. ಹೋರಾಟಕ್ಕಾಗಿ ಹೋರಾಟ ನಡಿಸಲಿಚ್ಛಿಸುವುದಿಲ್ಲ ನಾನು. ಅದನ್ನು ನಿವಾರಿಸಲು ಪ್ರಯತ್ನಿಸುವೆನು. ಅಗತ್ಯವಿದ್ದರೆ ನನ್ನನ್ನು ಇನ್ನು ಮುಂದೆ ವೈಸರಾಯರು ಕರೆದು ಮಾತಾಡಬಹುದು" ಎಂಬುದೇ ಈ ಭಾಷಣದ ಸಾರಾಂಶ

"ನಮ್ಮ ಮುಂದಿರುವ ಕರ್ತವ್ಯ" ಎಂಬ ಶಿರೋನಾಮೆಯಿಂದ ಮಹಾತ್ಮ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಪ್ರಕಟಿಸಿರುವ ಲೇಖನದ ಸಾರಾಂಶವು ಈ ಕೆಳಗಣದಂತಿರುತ್ತದೆ

"ಡಿಲ್ಲಿ ಮಾತುಕತೆಯು ಜಯಶೀಲವಾಗಿಲ್ಲೆಂಬ ಕುರಿತು ಕಾಂಗ್ರೆಸ್‌ವಾದಿಗಳೇನೂ ನಿರಾಶೆ ಪಡಬೇಕಾಗಿಲ್ಲ. ರಾಜಿಯಾಗುವ ಸಂಭವವಿದೆಯೋ ಎಂದು ನೋಡಲು ನಾನು ಮತ್ತು ವೈಸರಾಯರು ಒಟ್ಟು ಸೇರಿದುದು ವೈಸರಾಯರ ಬೊಂಬಾಯಿಯ ಭಾಷಣದಲ್ಲಿ ನಾನು ರಾಜಿಯ ಬೀಜವನ್ನು ಕಂಡಿದ್ದೆ ಆದರೆ ಅದು ತಪ್ಪು ಭಾವನೆಯೆಂದು ನನಗೆ ವೇದ್ಯವಾಯಿತು. ವೈಸರಾಯರ ಹಸ್ತಗಳು ಬಂಧಿತವಾಗಿವೆ ಈಗ ದೇಶದ ಮುಂದಿರುವ ಸೂಚನೆಗಳಿಗಿಂತ ಮುಂದೆ ಹೋಗಲು ಅವರಿಗೆ ಸಾಧ್ಯವಾಗಲಿಲ್ಲ.

ಈ ಮಾತುಕತೆಯಿಂದಾಗಿ ನಾವಿಬ್ಬರೂ ಮತ್ತಷ್ಟು ಸಮೀಪಕ್ಕೆ ಬರುವಂತಾಗಿರುವುದು ವೈಸರಾಯರು ಬ್ರಿಟಿಷ್ ಸರಕಾರದ ಧೋರಣೆಯನ್ನು ಸ್ಪಷ್ಟೀಕರಿಸಿರುವರು ಅಂತೆಯೇ ನಾನು ಕಾಂಗ್ರೆಸ್ಸಿನ ಧೋರಣೆಯನ್ನೂ ವಿಶದಗೊಳಿಸಿರುವೆನು ಈ ನಡುವೆ ನಮ್ಮ ನಮ್ಮ ಉದ್ದೇಶವೇನೆಂಬ ಕುರಿತು ನಾವು ಲೋಕಜಾಗ್ರತಿಯನ್ನುಂಟುಮಾಡಬೇಕು. ಲೋಕದ ಶ್ವೇತವರ್ಣೇತರ ಜನಾಂಗಗಳ ಸೂರೆಯಲ್ಲಿ ಹಿಂದೂದೇಶವು ಪಾಲು ಪಡೆಯಲಾರದು. ಅಹಿಂಸಾತ್ಮಕ ಹೋರಾಟ ನಡಿಸುವ ಹಿಂದೂದೇಶವು ತನ್ನ ಹಸ್ತಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು ಆಫ್ರಿಕಾನರೇ ಮೊದಲಾದ ಜನತೆಯ ಸೂರೆಯಲ್ಲಿ ನಾವು ಭಾಗಿಯಾಗದಿರಬೇಕಾದರೆ ಹಿಂದೂದೇಶಕ್ಕೆ ಸ್ವತಂತ್ರ ಸ್ಥಾನ ಬೇಕು. ತನ್ನ ವಿದೇಶ ಧೋರಣೆಯನ್ನು ತಾನೇ ನಿರ್ಧರಿಸುವ ಹಕ್ಕು ಅದಕ್ಕಿರಬೇಕು. ಬ್ರಿಟಿಷ್ ಸರಕಾರವು ಕೊಡುವ ರಾಜಕೀಯ ಘಟನೆಯಿಂದ ಅದು ಸಾಧ್ಯವಿಲ್ಲ. ಹಿಂದೀ ಜನ ಪ್ರತಿನಿಧಿಗಳೇ ಅದನ್ನು ತಯಾರಿಸಬೇಕು. ಬ್ರಿಟಿಷ್ ಮುತ್ಸದ್ದಿಗಳು ಇದನ್ನೊಪ್ಪದಿದ್ದ ಪಕ್ಷದಲ್ಲಿ ಅಧಿಕಾರವನ್ನು ಬಿಟ್ಟುಕೊಡಲು ಅವರಿಗೆ ಮನಸ್ಸೇ ಇಲ್ಲವೆಂದು ಹೇಳಬಹುದು. ಇಂತಹ ನಿರೂಪಣೆಯನ್ನು ಮಾಡಲು ಹಿಂದೂದೇಶದ ರಕ್ಷಣಾ ಪ್ರಶ್ನೆಯಾಗಲಿ, ಯುರೋಪಿಯನರ ಹಿತದ ಭದ್ರತೆಯಾಗಲಿ

(೧೩ನೇ ಪುಟಕ್ಕೆ ಮುಂದುವರಿಯುವುದು)

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1939ರಲ್ಲಿ ಬಹಳ ವ್ಯತ್ಯಾಸಗಳಾಗಿವೆ ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಹೊಂದಿಕೆಯ ವಿಷಯಗಳು ಅನೇಕ ಇವೆ, ಕುಮಾಸ್ತ ಜಮಾ ಖರ್ಚಿನ ಪುಸ್ತಕವಿದ್ದರೂ ಸಾಲದು ಆದರಿಂದ ತಯಾರಿಸಿದ ಸಾರಾಂಶದ ನಿಖರತೆಯು ಕೆಲವೇ ನಿಮಿಷಗಳಲ್ಲಿ ತಮ್ಮ ಆಫೀಸರರಿಗೆ ಒಪ್ಪಿಗೆಯಾಗಬೇಕು ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದ ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು "ನೋಟಿಸ್" ಕಳ್ಳಿಯಾಗಿ ಹೋಗಿದ್ದರೂ ರಿಟರ್ನ್ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕೊಟ್ಟವರೊಡನೆ ಪತ್ರವ್ಯವಹಾರ ನಡಿಸಿರಿ

ಎಸ್ ಎಸ್ ಪುರಾಣಿಕ್,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

THE

BOMBAY LIFE ASSURANCE Company Limited.

[ESTD 1908]

COMPARE

Your Life Assurance with any other property you possess what is its guarranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age
If you die, it provides your family with enough income for their maintenance and the education of your children

"BOMBAY LIFE" offers all that is best in Life Assurance.

1938 Record.

Completed Business	..	Rs 1,44,91,000
Life Assurance Fund	.	Rs 1,17,69,748
Total Assets	.	Rs 1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING
Sir Lalubhai Samaldas Road,
GANDHI NAGAR, UDIPI

Post Box No. 337, Mount Road MADRAS	Visvesvarapuram Circle BANGALORE CITY	Charni Road, Girgaum BOMBAY No. 4
Car Street MANGALORE.	CALICUT Puthiyara	Central Station Road, TRIVANDRUM

NOTICE.

ಉಡುಪಿ ಡಿ ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 170/1937, R.E P. 95/1939

1 ಲಕ್ಷ್ಮೀನಾರಾಯಣಯ್ಯ } ವಾದಿರು
2. ರಾಮಚಂದ್ರಯ್ಯ } ಅರ್ಜದಾರರು.

ಮತ್ತು

1 ನಾರಾಯಣ ಹೆಬ್ಬಾರ, ಕಟ್ಟಿಂಗೇರಿ ವೆಂಕಪ್ಪ ಹೆಬ್ಬಾರ್ರ ಮಗ

2. ವೆಂಕಟ್ರಾಯ ಹೆಬ್ಬಾರ, } 1ನೇ ಎದ್ರಿರ
3 ಭ ಂಗರಾಯ ಹೆಬ್ಬಾರ, } ಮಕ್ಕಳು.

ಉಡುಪಿ ತಾಲೂಕು ಶಿರ್ವ ಗ್ರಾಮದಲ್ಲಿರುವವರು.

4. ರಾಘವೇಂದ್ರಾವ್
5. ಪದ್ಮಾವತಿ ಅಮ್ಮ

ಪ್ರತಿವಾದಿರು—ಎದ್ರಿಯು

ಇವರೊಳಗೆ.

ಸದ್ರಿ 1-2-3ನೇ ಎದ್ರಿಗೆ—

ಮೇಲೆ ಹೇಳೋದ ವ್ಯಾಜ್ಯದಲ್ಲಿ ಡಿಕ್ರಿಹೊಂದಿದ ಅರ್ಜದಾರರು ಹಾಜ್ರುಪಡಿಸಿರುವ ಪ್ರಾಕ್ಲಮೇಷನ್ ಇಸ್ತಿಹಾರಿನಂತ ಕಾಣುವ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾರೆ, ಆದುದರಿಂದ ವಿಕ್ರಯದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸಲಿಕ್ಕೆ 1940ನೇ ಇಸವಿ ಮಾರ್ಚ ತಿಂಗಳ 2ನೇ ತಾರೀಕು ನಿಶ್ಚಯಿಸೋಣಾಗಿಯದೆಂತ ಸದ್ರಿ 1 2 3ನೇ ಎದ್ರಿರಿಗೆ ಇದರಿಂದ ತಿಳಿಸೋಣಾಗುತ್ತದೆ

ಮೊಕ್ಕಾಂ ಉಡುಪಿ } K L Narayana Rao
ತಾ. 7-2-1940 } *Counsel for Petitioners*

ವಿಮಾನ ಬಲದ ಮಹತ್ವ!

ಲೇಖಕರು:—
ಬ್ರಿಟನ್ನಿನ ವಾಯುಸೈನ್ಯದ ಅಸಿಸ್ಟಾಂಟ್ ಸೆಕ್ರಿಟರಿಗಳು.

ಏನೇ ಆಗಲಿ, ಭೂಜಲ ಸೈನ್ಯದ ಮಹತ್ವವಿದ್ದೇ ಇದೆ.

ಆಧುನಿಕ ಯುದ್ಧದಿಂದ ಕಲಿಯಬೇಕಾದುದೇನು?

ಜಗತ್ತಿನಲ್ಲಿ ಯುದ್ಧ ವಿಮಾನಗಳು, ಬಾಂಬು ಸುರಿಸುವುದು, ವಿಷವಾಯುವನ್ನು ಪ್ರಯೋಗಿಸುವುದು ಮುಂತಾದುವುಗಳ ಪ್ರಯೋಗವಾರಂಭವಾದಾಗಿನಿಂದ, ವಾಯುಬಲಕ್ಕೆ ಬಹಳ ಮಹತ್ವವುಂಟಾಯಿತು. ಈಗಿನ ಯುದ್ಧದಲ್ಲಿ ಸಹ ವಾಯುಬಲವನ್ನು ಉಪಯೋಗಿಸುತ್ತಿರುವರಾದರೂ ಅದರಲ್ಲಿ ಎಷ್ಟು ಮಟ್ಟಿನ ಸಫಲತೆಯುಂಟಾಗಿದೆಯೆಂದು ಇನ್ನೂ ತಿಳಿದಿರುವುದಿಲ್ಲ. ಈ ಯುದ್ಧವು ಮುಗಿಯುವ ವರೆಗೂ, ವಿಮಾನಗಳಿಂದ ಆದ ಸಫಲತೆಯನ್ನು ತಿಳಿಯುವುದಕ್ಕಾಗುವುದಿಲ್ಲ. ಆದರೆ ವಿಮಾನಯುದ್ಧವು ವ್ಯವಸ್ಥಿತವಾಗುವುದೇ ಇಲ್ಲವೇ ಎಂಬುದರ ಬಗ್ಗೆ ಕೆಲವು ಮಾತುಗಳನ್ನು ಇಲ್ಲಿ ಚರ್ಚಿಸಲಾಗಿದೆ.

ವಿಮಾನ ಬಲವೇ ಸರ್ವಶಕ್ತಿಯಲ್ಲ

ನಾವು ನೋಡುತ್ತಿರುವಂತೆ, ವಿಮಾನ ಯುದ್ಧದ ನಿಪುಣರು ತಮ್ಮ ಅಭಿಪ್ರಾಯಗಳನ್ನು ಬದಲಾಯಿಸುತ್ತಿರುವಂತೆ ತೋರುವುದು. ವಿಮಾನ ಯುದ್ಧವು ಎಲ್ಲಿಯವರೆಗೆ ಯಶಸ್ವಿಯಾಯಿತೆಂಬುದಕ್ಕೆ ಸ್ಪೈನ್ ಯುದ್ಧವೇ ಸಾಕ್ಷಿ. ವಿಮಾನದ ಪ್ರಯೋಗವುಂಟಾದ ಮೇಲೆ, ಭೂ ಜಲ ಸೈನ್ಯಗಳ ಮಹತ್ವವು ಏನೂ ಕಡಿಮೆಯಾಗಲಿಲ್ಲವೆಂಬುದೇ ನಾವು ಇದುವರೆಗೆ ಕಲಿತಿರುವ ಪಾಠ!

ಇನ್ನು ಮುಂದೆ ನಡೆಯುವ ಯುದ್ಧಗಳಲ್ಲಿ ವಾಯುಬಲವೇ ಪ್ರಮುಖ ಪಾತ್ರವನ್ನು ವಹಿಸುವುದೆಂದು ಕೆಲವರು ಭವಿಷ್ಯ ನುಡಿದಿದ್ದರು. ಆದರೆ ಅದು ಈಗ ಸುಳ್ಳಾಗಿ ಯಾವ ಯುದ್ಧವೂ ಕೇವಲ ವಾಯುಬಲದ ಮೇಲೆಯೇ ಆಗುವುದಿಲ್ಲವೆಂಬುದು ಸಿದ್ಧವಾಯಿತು. ಭೂಮಿಯ ಮೇಲೆ ಸೀರಿನ ಮೇಲೆ ಯುದ್ಧಕ್ಕಾದ ಪ್ರಾಶಸ್ತ್ಯವು ಈಗಲೂ ಇದ್ದೇ ಇದೆ. ಇದನ್ನು ಎಂದಿಗೂ ದೂರಮಾಡಲಾಗುವುದಿಲ್ಲ.

ಮೊದಲಿನ ತತ್ವವು ತಪ್ಪಾಯಿತು

ಮುಂದಿನ ಯುದ್ಧಗಳ ತೀರ್ಮಾನವು ವಾಯು ಸೈನ್ಯ ಮತ್ತು ವಾಯುಯುದ್ಧಗಳ ಮೇಲೇ ಆಗುವುದೆಂದು ಡೂಹೆಟ್ ಗೋತ್ರದವರ ಭಾವನೆಯಾಗಿದ್ದಿತು. ಆದರೆ ಇಂದಿನ ಯುದ್ಧವು ಇದನ್ನು ಸುಳ್ಳುಮಾಡಿತೋರಿಸಿದೆ. ಇದೇ ತತ್ವವೇ ಸ್ಪೈನ್, ಅಬಿಸೀನಿಯ, ಚೀನಗಳಲ್ಲಿ ಬಹಳ ಸ್ಪಷ್ಟ ರೀತಿಯಲ್ಲಿ ಕಾಣಿಸಿತು. ಈಗಿನ ಯುದ್ಧದಲ್ಲಿ ಸಹ ಇವರ ಸತ್ಯ ಹೊರಪಡುತ್ತಿದೆ.

ಭೂಸೈನ್ಯ, ಜಲಸೈನ್ಯಗಳನ್ನೂ ತೃಣೀಕರಿಸಲಾಗುವುದಿಲ್ಲ ಎಂಬ ನಂಬಿಕೆಗೆ ಇದಕ್ಕಿಂತ ಹೆಚ್ಚಿನ ಗ್ಯಾರಂಟಿ ಬೇಕೆ? ಆದರೆ ಜರ್ಮನಿಯು ಎಷ್ಟು ಅವಸರವಸರವಾಗಿ ಪೋಲೆಂಡನ್ನು ಆಕ್ರಮಿಸಿಕೊಂಡಿತೆಂಬುದನ್ನು ನೋಡಿದಾಗ ಈ ವಾಯುಬಲದ ಮಹತ್ವವು ಗೊತ್ತಾಗುವುದು. ಪೋಲೆಂಡಿನ ಧಾಳಿಯಲ್ಲಿ ವಾಯು ಬಲದಿಂದಲೇ ಬಹಳ ಲಾಭವಾದುದು. ಇದರಿಂದಲೇ ಯುದ್ಧವಾರಂಭವಾದ ಮೊದಲನೇ ದಿನದ ಧಾಳಿಯೇ ಆ ದೇಶದ ಶಾಶ್ವತ ಶಕ್ತಿಯನ್ನು ನಿನಾಶಮಾಡಿಬಿಟ್ಟಿತು. ಫಿನ್ಲೆಂಡಿನ ಯುದ್ಧೋಪಕರಣಗಳ ಕಾರ್ಖಾನೆಗಳು ವಿಮೋಚ್ರಂಗಳು ಪುಡಿಯಾದುವು. ಅಲ್ಲಿನ ರೈಲ್ವೆ ಜಂಕ್ಷನ್‌ಗಳ ಮೇಲೆ ಆದ ಬಾಂಬ್ ಪಾತದಿಂದ ಸೈನ್ಯದ ಚಲನ ವಲನಕ್ಕೆ ಅಡ್ಡಿಯುಂಟಾಯಿತು. ಪೋಲೀಷರು ಸಹ ತಮ್ಮ ಶಕ್ತಿ ಮೀರಿ ಶತ್ರುಗಳನ್ನೂ ಎದುರಿಸಿದರೆಂಬುದರಲ್ಲಿ ಏನೇನೂ ಸಂಶಯವಿಲ್ಲ. ಆದರೇನು? ಇದು ಸರಿಸಮಾನರಿಬ್ಬರ ಕಾದಾಟವಾಗಿರದೆ ಆನೆ ಇರುವೆಗಳೊಳಗೆ ಆದ ಕದನದಂತಾಯಿತು. ಯಾವುದಾದರೂ ದೇಶದಲ್ಲಿ ಅಸಂಖ್ಯಾಕ ಯುದ್ಧ ವಿಮಾನಗಳಿದ್ದಲ್ಲಿ ಅದು ತನ್ನ ನೆರೆಹೊರೆಯ ಚಿಕ್ಕದೂ ಶಕ್ತಿಯಿಲ್ಲದ್ದೂ ಆದ ದೇಶವನ್ನು ಸುಲಭವಾಗಿ ನಾಶಪಡಿಸಬಹುದೆಂಬುದೇ ಪೋಲೆಂಡ್ ಯುದ್ಧದಿಂದ ಸಿದ್ಧವಾದುದು.

ಪಶ್ಚಿಮ ರಣರಂಗ

ಈಗ ಜರ್ಮನಿ ಮತ್ತು ಇತರ ರಾಷ್ಟ್ರಗಳೊಡನೆ ನಡೆಯುತ್ತಿರುವ ಯುದ್ಧದಲ್ಲಿ ಇದುವರೆಗೂ ಮಹತ್ವರವಾದ ವಿಮಾನ ಶಕ್ತಿಯ ಪ್ರದರ್ಶನವೇನೂ ಆಗಿರುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಎರಡು ಪಂಗಡಗಳ ವಿಮಾನ ಬಲದಲ್ಲಿ ಯಾವ ಗಣನೀಯವಾದ ಅಂತರವೂ ವ್ಯಕ್ತಪಟ್ಟಿರುವುದಿಲ್ಲ. ಆದರೆ ಸಿದ್ಧತೆಯ ದೃಷ್ಟಿಯಿಂದ ನೋಡಿದರೆ ಮಿತ್ರ ಮಂಡಲಿಯ ಬಳಿ ಇರುವಷ್ಟು ಶಕ್ತಿ ಸಂಚಯವು ಜರ್ಮನಿಯ ಬಳಿ ಇರುವುದಿಲ್ಲ. ಇದರಿಂದ ದಿನದಿನಕ್ಕೆ ಜರ್ಮನಿಯ ವಾಯು ಬಲವು ಕಡಿಮೆಯಾಗುತ್ತ ಬರುವುದು. ಮಿತ್ರರ ಬಲದಲ್ಲಿ ವೃದ್ಧಿಯಾಗುವುದು. ಇವರಿಬ್ಬರಲ್ಲಿರುವ ವ್ಯತ್ಯಾಸವು ಸ್ಪಷ್ಟವಾಗಿ ಕಾಣಿಸಿಕೊಳ್ಳುವ ಪರಿಸ್ಥಿತಿಯುಂಟಾಗುವುದು. ಈಗಲೂ ಜರ್ಮನಿಯ ಸೈನ್ಯ ಶಕ್ತಿಯು ಮಿತ್ರರಾಷ್ಟ್ರಗಳ ಶಕ್ತಿಗಿಂತ ಹೆಚ್ಚೇನೂ ಇಲ್ಲ. ಕಳೆದ ಕೆಲವು ವರ್ಷಗಳಿಂದ ಸತತ ಪ್ರಯತ್ನ ಮಾಡಿದರೂ ಆದರ ಬಲವು ಬಹಳವಾಗೇನೂ ಹೆಚ್ಚಿರುವುದಿಲ್ಲ. ಫ್ರಾನ್ಸ್ ಬ್ರಿಟನ್ನುಗಳೆರಡರ ಸಾಮೂಹಿಕ ವಾಯುಬಲವು ಜರ್ಮನಿಯ ಶಕ್ತಿಯನ್ನು ಮೀರಿಸುವ ಆ ದಿನಗಳೂ ದೂರವಾಗಿಲ್ಲ.

ಯುದ್ಧದ ವಿಮಾನಗಳು

ವಾಯು ಬಲದ ಭವಿಷ್ಯವನ್ನು ನಿರ್ಣಯಿಸುವ ಮಹತ್ವದ ಪ್ರಶ್ನೆಯೊಂದು ಈಗ ಉಂಟಾಗಿದೆ. ಏನೆಂದರೆ, ಆಕ್ರಮಣ ಮಾಡುವ ವಿಮಾನಗಳನ್ನೆದುರಿಸುವ, ವಿಮಾನಗಳೇ ಹೆಚ್ಚು ಬಲಶಾಲಿಯಾಗಿ ತೋರುತ್ತಿವೆ. ಅಂದರೆ ನಾಶಗೊಳಿಸುವವುಗಳಿಗಿಂತ, ರಕ್ಷಣೆಯ ವಿಮಾನಗಳ ಪ್ರಭಾವವೇ ಹೆಚ್ಚುತ್ತಿದೆ. ಆಧುನಿಕ ರೀತಿಯಲ್ಲಿ, ಧಾಳಿನಡೆಸುವ ವಿಮಾನಗಳಿಗೆ 'ಬಾಂಬರ್' ಎಂದೂ, ಎದುರಿಸುವುಗಳಿಗೆ "ಫೈಟರ್" ಅಂದರೆ ಕಾದುವುಗಳೆಂದೂ ಕರೆಯುವರು. ಸ್ಪೇನಿನ ಯುದ್ಧದಲ್ಲಿ ಸಹ, ಆಧುನಿಕ 'ಬಾಂಬರ್''ಗಳು, ಎಂತಹ ಪರಿಸ್ಥಿತಿಯಲ್ಲಿಯೂ 'ಫೈಟರ್'ಗಳನ್ನೂ ಎದುರಿಸಲಸಮರ್ಥವಾದುವೆಂಬುದೇ ವ್ಯಕ್ತಪಟ್ಟಿತು.

ಸ್ಪಷ್ಟವಾದ ಉದಾಹರಣೆ

1. ಸೆಪ್ಟಂಬರ 29ರಲ್ಲಿ ರಾಯಲ್ ಏರ್‌ಫೋರ್ಸಿನ ಕೆಲವು 'ಬಾಂಬರು'ಗಳು ಹೇಲಿಗೋಲೆಂಡ್ ಕೊಲ್ಲಿಯಲ್ಲಿ ನೆಲೆಸಿದ್ದ, ಜರ್ಮನಿಯ ಯುದ್ಧದ ಹಡಗುಗಳ ಮೇಲೆ ಬಿದ್ದುವು. ಜರ್ಮನ್ ನ್ಯೂಸ್, ಏಜೆನ್ಸಿಯು ಈ ವಿಚಾರದಲ್ಲಿ ಈ ರೀತಿ ಪ್ರಕಟಿಸಿದ್ದಿತು,–"ಈ ರೀತಿ ಆಕ್ರಮಣ ನಡಿಸಲು ಬಂದ ಆರು 'ಬಾಂಬರ್' ವಿಮಾನಗಳ ಪೈಕಿ, ಐದನ್ನೂ, ಜರ್ಮನಿಯ 'ಫೈಟರ್' ವಿಮಾನಗಳು ಗುಂಡು ಹಾಕಿ ನಾಶಗೊಳಿಸಿಬಿಟ್ಟುವು" ಬ್ರಿಟಿಷ್ ಸರಕಾರದವರು ಈ ಸುದ್ದಿಯು ಸುಳ್ಳೆಂದು ಇದುವರೆಗೆ ಹೇಳಿಲ್ಲ.

(2.) ಆಕ್ಟೋಬರ್ 12ಕ್ಕೆ ಸುಮಾರು 12 ಜರ್ಮನ್ ವಿಮಾನಗಳು ಫರ್ಥ್ ಆಫ್ ಫೋರ್ಥ್ ಮೇಲೆ ಧಾಳಿ ನಡೆಸಿದುವು. ಈ ಆಕ್ರಮಣದಲ್ಲಿ ಬ್ರಿಟನ್ನಿನ 'ಫೈಟರ್' ವಿಮಾನಗಳು ಜರ್ಮನಿಯ 4 ವಿಮಾನಗಳನ್ನು ನಾಶ ಪಡಿಸಿದುವು. ಮೂರನೆಯ ದಿನ ಪುನಃ 2 ಜರ್ಮನ್ ವಿಮಾನಗಳನ್ನು ನೆಲಕ್ಕೆ ಉರುಳಿಸಲಾಯಿತು.

3. ಇದೇ ರೀತಿ ಆಕ್ಟೋಬರ್ 21ಕ್ಕೆ ಪುನಃ 12 ಜರ್ಮನ್ ವಿಮಾನಗಳು ಉತ್ತರ ಸಮುದ್ರದ ಮೇಲೆ ಧಾಳಿ ನಡೆಸಿದುವು. ಇದರಲ್ಲಿ ಸಹ 4 ವಿಮಾನಗಳು ನಾಶಗೊಳಿಸಲ್ಪಟ್ಟುವು. ಈ ರೀತಿ ಎಷ್ಟೋ ಘಟನೆಗಳನ್ನು ಉದಹರಿಸಬಹುದು. ಇವುಗಳಿಂದ ಗೊತ್ತಾಗುವುದೇನೆಂದರೆ–'ಬಾಂಬರ್'ಗಿಂತಲೂ 'ಫೈಟರ್'ಗೇ ಹೆಚ್ಚು ಪ್ರಾಶಸ್ತ್ಯವಿದೆ. ಅಂದರೆ ಆಕ್ರಮಣಕ್ಕಿಂತ ರಕ್ಷಣೆಗೇ ಮೊದಲನೆಯ ಜಾಗವಿದೆ.

ನೆಲದ ಮೇಲೆ ರಕ್ಷಣೆಯ ಕಾರ್ಯಕ್ರಮ

ಸ್ಪೇನಿನ ಮತ್ತು ಈಗಿನ ಯುದ್ಧದಿಂದ ಇನ್ನೂ ಒಂದು ವಿಚಾರ ತಿಳಿದುಬಂದಿದೆ. ಏನೆಂದರೆ– ನೆಲದ ಮೇಲೆ ತೆಗೆದುಕೊಳ್ಳುವ ರಕ್ಷಣೆಯ ಕಾರ್ಯಕ್ರಮಗಳು. 'Anti Air Craft' ಸಹ ಬಹಳ ಉಪಯೋಗಕರವಾದುವೇ. ಈಗ ಸುಮಾರು 20 ವರ್ಷಗಳ ಕೆಳಗೆ, ವಿಮಾನದ ಮೂಲಕ ಆಕ್ರಮಣ ನಡೆಸುವವರು ಇದನ್ನು ಲಕ್ಷಿಸುತ್ತಲೇ ಇರಲಿಲ್ಲ. ಆದರೆ ಈಗ ಭೂಮಿಯ ಮೇಲಿನ ಅನೇಕ ಗುಂಡುಗಳಿಂದಲೇ ಎಷ್ಟೋ ವಿಮಾನಗಳು ನಾಶವಾಗಿವೆ. ಸಾರಾಂಶವೇನೆಂದರೆ, ವಾಯುಬಲವು ಪ್ರಯೋಗಕ್ಕೆ ಬಂದ ಮಾತ್ರದಿಂದ, ಭೂಸೈನ್ಯ, ಜಲಸೈನ್ಯಗಳ ಶಕ್ತಿಯ ಮಹತ್ವವೂ ಏನೇನೂ ಕಡಿಮೆಯಾಗಿರುವುದಿಲ್ಲ. ಯಾವುದೇ ಯುದ್ಧದಲ್ಲಿಯೇ ಆಗಲಿ, ಅದರ ತೀರ್ಮಾನವು ನೆಲದ ಮೇಲೇ ಆಗಿದೆ ಮತ್ತು ಮುಂದೆಯೂ ಆಗುತ್ತಿರುವುದೆಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ. ಯಾವ ಯುದ್ಧವೂ ವಾಯುವಿನಲ್ಲಿ ಅಂತ್ಯಗೊಂಡಿಲ್ಲ.

(s)

NAVAYUGA
Advertisement Tariff
1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-Navayuga UDIPI

ತುಳುನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	Rs.	1,00,000
Subscribed & Paid up Capital	....	Rs.	31,340
Reserves & other Funds	...	Rs.	22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.
ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.
ಹೆಚ್ಚಿನ ವಿವರಗಳಿಗೆ ಬರೆಯಿರಿ.
THULUNAD BANK
OF SUPPLY AGENCY LIMITED.

ನವಯುಗ
ನೋಟೀಸು.
ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅದನ್ನು ದಯಮಾಡಿ ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಹಾಲ್ತಿ ವರ್ಷದ ಚಂದಾಹಣ ಬಾಕಿ ಇರುವವರು ಅದನ್ನು ಆದಷ್ಟು ಬೇಗನೆ ಕಳಿಸುವಂತೆಯೂ ವಿನಂತಿ. —ಮೆನೇಜರ್.

ಜರ್ಮನಿಯು ಧಾಳಿನಡಿಸದಿರಲು ಕಾರಣವೇನು

ಮಾರ್ಶಲ್ ಗೋರಿಂಗರ ಸಂಧಿಯ ಸೂಚನೆ!

ಇಂದೀಗ 5 ತಿಂಗಳ ಯುದ್ಧದಲ್ಲಿ ಕೊಲ್ಲಲ್ಪಟ್ಟ ಮಿತ್ರರಾಷ್ಟ್ರಗಳ ಸೈನಿಕರು ಕೇವಲ 1500ಮಂದಿ. ಇಷ್ಟೇ ಸಮಯದಲ್ಲಿ 1914ರ ಯುದ್ಧದಲ್ಲಿ ಫ್ರೆಂಚ್ ಸೈನಿಕರೇ 72,000 ಮಂದಿ ಕೊಲ್ಲಲ್ಪಟ್ಟಿದ್ದರು. ಇದರಿಂದ ಈ ಸಲದ ಯುದ್ಧವು ಅದೆಷ್ಟು ವಿಚಿತ್ರವಾದುದೆಂಬುದು ವ್ಯಕ್ತವಾಗುವುದು. ಭಯಂಕರ ರಕ್ತಪಾತಕ್ಕೇನಾದರೂ ಹೇಸಿ ಜರ್ಮನಿಯು ಈ ರೀತಿ ತಟಸ್ಥವಾಗಿರುವುದಿಲ್ಲ. ಹಿಟ್ಲರರು ಅದೆಷ್ಟು ಕ್ರೂರಿಯೂ ಹೃದಯರಹಿತರೂ ಇರುವರೆಂಬುದನ್ನು ಪೋಲೆಂಡಿನ ಧಾಳಿಯು ಶ್ರುತಗೊಳಿಸಿರುವುದು. ಅವರು ಪ್ರಚಂಡ ಧಾಳಿ ನಡಿಸದೆ ಮೌನವಾಗಿರಲು ಕಾರಣವೆಂದರೆ ಅದರ ಜಯಶೀಲತೆಯ ಕುರಿತು ಅವರಲ್ಲುಂಟಾಗಿರುವ ಸಂದೇಹ. ವೈರಿಗಳಿಗಿಂತ 3 ಪಾಲು ಹೆಚ್ಚಿನ ಸೇನೆ ಮತ್ತು ಯುದ್ಧಶಕ್ತಿ ಇದ್ದರೆ ಮಾತ್ರ ಅವರ ಮೇಲೇರಿ ಹೋಗಿ ಜೈಸಬಹುದು. ಅಂತಹ ಸೇನಾಬಲವಾಗಲಿ ಸಮರ ಶಕ್ತಿಯಾಗಲಿ ಜರ್ಮನರಲ್ಲಿರುವುದಿಲ್ಲ. ಬೆಲ್ಜಿಯಮ್ ಮತ್ತು ಹೊಲ್ಲೆಂಡುಗಳು ಜಾಗ್ರತೆಯಿಂದಿದ್ದು ಜರ್ಮನಿಯ ಧಾಳಿಯನ್ನು ತಡೆಗಟ್ಟಲು ಬೇಕಾದ ಭದ್ರತೆಗಳನ್ನು ಮಾಡಿಕೊಂಡಿರುವುದರಿಂದ ಅವುಗಳ ಮೂಲಕ ಧಾಳಿನಡಿಸುವುದು ಕೂಡಾ ಕಷ್ಟಸಾಧ್ಯವಾಗಿದೆ. ಇದುಹೊರತು ಪೋಲೆಂಡಿನ ಮೇಲೆ ನಡಿಸಲ್ಪಟ್ಟ ಪ್ರಚಂಡಧಾಳಿಯಲ್ಲಿ ಜರ್ಮನರು ವ್ಯಯಮಾಡಿದ ಅಪಾರ ಯುದ್ಧಸಾಮಗ್ರಿಗಳನ್ನು ತುಂಬಿಸಲು ಸಮಯಬೇಕಾಗುವುದು. ಜರ್ಮನಿಗಿರುವ ಅನುಕೂಲತೆ ಮತ್ತು ಸಾಮಗ್ರಿಗಳು ಕಡಿಮೆಯಾಗಿರುವುದರಿಂದ ಅದು ಧಾಳಿಯ ಸಾಹಸಮಾಡಿ ಪರಾಜಯ ಪಡೆಯಲು ಸಿದ್ಧವಿರುವುದಿಲ್ಲ. ಅದು ಹಣದ ವಿಷಯದಲ್ಲೀಗ ಬಹಳ ಜಾಗರೂಕತೆಯಿಂದಿರಬೇಕಾಗಿದೆ. ಕಳೆದ ಯುದ್ಧಕ್ಕಿಂತ ಈ ಯುದ್ಧದಲ್ಲದು ಬಹಳ ಕಡಿಮೆ ಹಣ ವ್ಯಯಿಸುತ್ತಿದೆ. ಹಿಟ್ಲರರು ಧಾಳಿ ನಡಿಸದಿರಲು ಇನ್ನೊಂದು ಕಾರಣವೆಂದರೆ ಪ್ರಚಾರದ ಮೂಲಕಕ್ಷೇತ್ರವನ್ನು ಅಣಿಗೊಳಿಸಿ ಬಲವನ್ನುಪಯೋಗಿಸುವ ಮೊದಲು ವೈರಿಯನ್ನು ಉತ್ಸಾಹಕುಂದಿಸುವ ಪ್ರಯುಕ್ತಿಯಾಗಿದೆ. ಅವರು ಪಶ್ಚಿಮರಣರಂಗದ ಮೇಲೆ ದೃಷ್ಟಿಯಿಟ್ಟುಕೊಂಡು ಜರ್ಮನಿಯ ಉತ್ಪತ್ತಿಯನ್ನು ಅದಷ್ಟು ಹೆಚ್ಚಿಸಲೆತ್ನಿಸುವಾಗರಾಜನೈತಿಕ ಯುಕ್ತಿ ಮತ್ತು ಪ್ರಚಾರದಿಂದ ವೈರಿಯನ್ನು ಅದಷ್ಟು ಧೃತಿಕೆಡಿಸ ನೋಡುತ್ತಾರೆ. ತಟಸ್ಥರಾಷ್ಟ್ರಗಳ ಮೇಲಿನ ಒತ್ತಾಟ, ಪತ್ರಿಕೆ ಮತ್ತು ಆಕಾಶವಾಣಿಯ ಮೂಲಕ ಉಗ್ರಟೀಕೆ, ಖಂಡನೆಗಳು ಈ ಪ್ರಚಾರ ಧಾಳಿಯ ಅಂಗವಾಗಿದೆ.

ಮಾರ್ಶಲ್ ಗೋರಿಂಗರು ಮಾಡಿರುವ ಸಂಧಿಸೂಚನೆಕೂಡಾ ಮೇಲಿನ ಯುಕ್ತಿಯ ಒಂದು ಸ್ವರೂಪವಾಗಿದೆ. ಅದನ್ನು ಹರ್ ಹಿಟ್ಲರರುಸಂಪೂರ್ಣವಾಗಿಒಪ್ಪಿರುವರೆಂದು ತಿಳಿದು ಬರುತ್ತದೆ. ಯಾವಾಗಲೂ ಸಂಧಿಸೂಚನೆಗಳು ಹೊರಡುವುದು ಮಾರ್ಶಲ್ ಗೋರಿಂಗರಿಂದ. ನಾಝಿಗಳಲ್ಲಿ ಅವರು ಮಂದಗಾಮಿಗಳೆಂದಿರುವುದರಿಂದ ಅವರ ಸೂಚನೆಗಳು ಗಮನಾರ್ಹವಾಗುವವೆಂದು ನಿರೀಕ್ಷಿಸಲಾಗಿದೆ. ಸಂಧಿಮಾಡುವುದಕ್ಕಾಗಿ, ನಾಝಿಗಳು ಸ್ವಲ್ಪ ಸಮಯ ಹಿಟ್ಲರರನ್ನು ಹಿಂದೆ ಹಾಕಿ ಮಾರ್ಶಲ್ ಗೋರಿಂಗರನ್ನು ಅವರ ಸ್ಥಾನಕ್ಕೇರಿಸಿ ಮಿತ್ರರಾಷ್ಟ್ರಗಳನ್ನು ಸಮಜಾಯಿಸಲೆತ್ನಿಸುವರೆಂದೂ, ಶಾಂತಿ ಸ್ಥಾಪಿತವಾದ ಮೇಲೆ ಹಿಟ್ಲರರೇ ಪುನಹ ಅಧಿಕಾರಕ್ಕೆ ಬರುವರೆಂದೂ ಬ್ರಿಟಿಷ್ ಪತ್ರಿಕೆಯೊಂದು ಪ್ರಕಟಿಸಿದ್ದಿತು. ಅದೇನೇ ಇರಲಿ, ಮಾರ್ಶಲ್ ಗೋರಿಂಗರ ಸಂಧಿಯ ಸೂಚನೆಗಳಲ್ಲಿ ವಿಶೇಷ ಗಮನನೀಯ ತಕ್ಕ ವಿಷಯವೇನೂ ಇಲ್ಲ. ಅವು ನಾಝಿ ಜರ್ಮನಿಯ ಆಕಾಂಕ್ಷೆಯಾದ ಲೆಬನ್ ಸ್ರಮಿಗನುಗುಣವಾಗಿದ್ದು ಪೂರ್ವ ಮತ್ತು ಮಧ್ಯ ಯೂರೋಪಿನಲ್ಲಿ ಈಗಣ ಸ್ಥಿತಿಯನ್ನೇ ಸ್ಥಿರವಾಗಿರಿಸಲೆಳಸುತ್ತವೆ. ಪೋಲೆಂಡು ಮತ್ತು ಜೆಕೋಸ್ಲೊವೇಕಿಯಗಳನ್ನು ವಿಭಾಗಿಸಿ ಹಂಚಬೇಕು. ಜನಮತ ತೆಗೆದು ಆಸ್ಟ್ರಿಯದ ಪ್ರಶ್ನೆಯನ್ನು ಇತ್ಯರ್ಥ ಪಡಿಸಬೇಕೆಂಬುದೇ ಹೊಸ ಸೂಚನೆ.

ಪ್ರಾಯಶಃ ಆಸ್ಟ್ರಿಯದಲ್ಲಿ ತಮಗೇನೇ ಹೆಚ್ಚಿನ ಜನ ಬೆಂಬಲ ಸಿಗುವುದೆಂದು ನಾಝಿಗಳಿಗೆ ಖಾತ್ರಿ ಇರಬೇಕು. ಯಾರೂ ಪರಿಹಾರವನ್ನೀಯುವ ಪ್ರಶ್ನೆಯೇ ಬರಬಾರದು. ಸಾಂಪತ್ತಿಕ ಪ್ರಶ್ನೆಗಳನ್ನು ಸಭೆ ಸೇರಿ ಆಲೋಚಿಸಿ ಇತ್ಯರ್ಥ ಪಡಿಸಬೇಕೆಂಬ ಸೂಚನೆಗಳಿಗೆ ಎಲ್ಲರೂ ಒಪ್ಪದಿರಲಾರರು. ಬ್ರಿಟನ್ ಮತ್ತು ಫ್ರಾನ್ಸುಗಳು ತಮ್ಮ ಸಾಮ್ರಾಜ್ಯ ಸ್ವಾರ್ಥವನ್ನು ಇನ್ನು ಮುಂದೆ ತ್ಯಜಿಸಲೇಬೇಕೆಂಬುದೂ ಸಹಜವಾದುದೆ. ಆದರೆ ಎಲ್ಲದಕ್ಕೂ ಮೊದಲು ಹಿಟ್ಲರರ ಮಾತಿನ ಮೇಲೆ ಮಿತ್ರರಾಷ್ಟ್ರಗಳಿಗೆ ಭರವಸೆಯೇ ಇರುವುದಿಲ್ಲ. ಈಗ ಯುದ್ಧವನ್ನು ಅರ್ಧದಲ್ಲೇ ನಿಲ್ಲಿಸಿ ಹಿಟ್ಲರರ ಬಲವನ್ನು ಮತ್ತಷ್ಟು ಹೆಚ್ಚಿಸಲು ಮಿತ್ರರಾಷ್ಟ್ರಗಳು ಎಂದಿಗೂ ಸಿದ್ಧವಾಗಿರಲಾರವು. ಆದುದರಿಂದ ಮಾರ್ಶಲ್ ಗೋರಿಂಗರ ಸಂಧಿಯ ಸೂಚನೆಗಳಿಗಾರೂ ಕಿವಿಗೊಡುವ ಹಾಗಿಲ್ಲ. ಯುದ್ಧವು ದೀರ್ಘಕಾಲ ನಡೆಯುವ ಸಂಭವವೇ ಹೆಚ್ಚಾಗಿ ತೋರುತ್ತದೆ. ಒಂದು ವೇಳೆ ಹಿಟ್ಲರರು ಧಾಳಿ ನಡಿಸುವ ಸೋಗು ಮಾತ್ರ ಹಾಕಿಕೊಂಡು ಸುಮ್ಮಗಿದ್ದು ಬಿಟ್ಟರೆ ಮಿತ್ರರಾಷ್ಟ್ರಗಳು ಸುಮ್ಮಗಿರುವ ಹಾಗಿಲ್ಲ. ಕೆಲ ಸಮಯದ ವರೆಗೆ ಕಾದು ಆಮೇಲೆ ಅವುಗಳೇ ಜರ್ಮನಿಯ ಮೇಲೆ ಧಾಳಿ ನಡಿಸದಿರಲಾರವು. ಸಮಯ ಹೋದಂತೆ ಮಿತ್ರರಾಷ್ಟ್ರಗಳ ಸೇನಾಬಲವು ಹೆಚ್ಚುತ್ತಿರುವುದು. ಫ್ರೆಂಚ್ ಸೇನೆಯು ಈಗ 6 ಮಿಲ್ಯವಿರುವುದು. ಬ್ರಿಟಿಷ್ ವಿಮಾನಪಡೆಯು 3 ಪಾಲು ಹೆಚ್ಚಿರುವುದು. ನೌಕಾಪಡೆಯಲ್ಲಂತೂ ಇಂಗ್ಲೆಂಡು ಅದ್ವಿತೀಯವಿರುವುದು.

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗನ ಜೀವನಕ್ಕೆ ತಕ್ಕ ಏರ್ಪಾಡುಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು
ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ
ಓರಿಯಂಟಲ್‌ನಲ್ಲಿ ಪಡೆಯಿರಿ.

-- ಮಕ್ಕಳ ಮುಂದುವರಿಸಲ್ಪಡುವ ವಿಮೆಯು --

ನವೀನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಪಾವತಿಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇಡೀ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿದೆ ಇದರಲ್ಲಿ 22ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ್" ಆರಂಭವಾಗುವುದು.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ:—

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್
ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ.

ಅಥವಾ ದಿ ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್‌ಪೆರೇಡ್ ಬೆಂಗಳೂರು.

ORIENTAL
GOVERNMENT SECURITY LIFE ASSURANCE CO., LTD.

ಬೊಂಬಾಯಿ ಪತ್ರ

ತಾ. 8-2-1940.

ಆದಾಯ ತೆರಿಗೆ—ಒಬ್ಬನ ಒಂದು ವರ್ಷದಲ್ಲಿ 20,000 ರೂಪಾಯಿಗಿಂತ ಎಕ್ಕೆ ಲಾಭ ಪಡೆದರೆ, ಆ ಹೆಚ್ಚಿನ ಲಾಭದ ಅರ್ಧಾಂಶವನ್ನು ಸರಕಾರಕ್ಕೆ ಕೊಡಬೇಕೆಂದು ಒಂದು ಹೊಸ ಶಾಸನವನ್ನು ಇಂಡಿಯಾ ಸರಕಾರವು ಜಾರಿಗೆ ತರಲಿದೆ. ಈ ಯುದ್ಧವೆಲ್ಲ ಆಂಗ್ಲ ಭಂಡವಾಳದ ಬೊಕ್ಕಸ ತುಂಬಲಿಕ್ಕೆ! ಆದರೆ ಇಂದಿನ ತನಕ ಬಡವರನ್ನು ಗಣಿಸದೆ ಆಂಗ್ಲರ ಮೆದುದೃಷ್ಟಿಗೆ ಪಾತ್ರರಾಗಿದ್ದ ಈ ಬಂಡವಾಳ ಶಾಹಿಗಳು ತಮ್ಮ ಲಾಭಕ್ಕೆ ಹೊಡತ ಬೀಳುತ್ತಿರುವುದನ್ನು ತಿಳಿದೊಡನೆ, ನಿಮಿಷದೊಳಗೆ ಒಗ್ಗಟ್ಟಾಗಿ, "ಭಾರತವು ತನ್ನ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಬೇಕೆಂದು ಪ್ರಯತ್ನಿಸುತ್ತಿರುವಾಗ, ಆಂಗ್ಲ ಸರಕಾರದ ಈ ಶಾಸನವು ಅನ್ಯಾಯವಾದ್ದು. ಅದಕ್ಕೆ ನಾವೆಲ್ಲರೂ ವಿರೋಧಿಸುತ್ತೇವೆಂದು." ಈ ತಿಂಗಳ 6ನೆಯ ತಾರೀಕಿನ ವಿವಿಧ ಶೇರ್ ಬಜಾರ್ ಮೊದಲಾದುವುಗಳನ್ನೆಲ್ಲ ಕೆಲಸದ ಹರತಾಳವನ್ನು ನಡೆಸಿ, ವ್ಯಾಸರಾಯರ ಆಫೀಸಿಗೆ, ತಾರುಗಳ ಮಳೆಯನ್ನೇ ಸುರಿಸಿಬಿಟ್ಟರು. ಈ ಉಭಯ ಯುದ್ಧದ ಮಧ್ಯೆ ಗಂಟೆ! ಭಾರತೀಯರಿಲ್ಲಿ ಕೊಳೆಗೆ ಗತಿಯಿಲ್ಲದೆ ಕೊಳೆಯುತ್ತಿರಲು, ಆಂಗ್ಲರ ತಮಾಷೆ! ಯುದ್ಧ! ಈ ತೆರಿಗೆಯಿಂದಾಗಿ ಬಂಡವಾಳ ಶಾಹಿಗಳಿಗೂ ಬುದ್ಧಿ ಬಂದಂತಾಯಿತು!

ಮುಂಬಯಿಯಲ್ಲಿಯೂ ಭೈರವ ನಾಟ್ಯದಾರಂಭ—ಸಾಮ್ಯವಾದದ ಪಾಕ್ಷಿಕ ಪತ್ರಿಕೆಯಾದ "National Front" ಪತ್ರಿಕೆಯನ್ನೂ ಇದೇ ಪಾರ್ಟಿಯ, ಎಸ್. ವಿ. ಘಾಟೆಯವರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ "New Age" ಎಂಬ ಪತ್ರಿಕೆಯನ್ನೂ, ಛಾಪಿಸಕೂಡದೆಂದು ಮುಂಬಯಿ ಸರಕಾರವು ಆಜ್ಞೆಯಿತ್ತಿದೆ, ಆಫೀಸನ್ನೆಲ್ಲ ಶುಚಿ ಬೇಕಾದ ಪತ್ರಿಕೆಗಳನ್ನು ಹಿಡಿದುಕೊಂಡು ಹೋಗಿರುವರು, ಕೈದು ಮಾಡುವರೆ ಯಾರೂ ಸಿಗಲಿಲ್ಲ. (ಎಸ್. ವಿ. ಘಾಟೆಯವರೀಗ ಮಂಗಳೂರಲ್ಲಿರುವರು. ಮದ್ರಾಸ್ ಸರಕಾರದ ಆಜ್ಞೆಯಿದ್ದು)

ಕಾಮಗಾರರ ಅಸಂತೋಷ!—ಯುದ್ಧದಿಂದಾಗಿ ಸಾಮಾನುಗಳ ಬೆಲೆ ಮಿತಿಮೀರಿದ್ದರಿಂದ ಕಾಮಗಾರರು ಸಂಬಳವನ್ನೇರಿಸಬೇಕೆಂದು ಹೋರಾಡುತ್ತಿರುವರು. ಅಲ್ಲಲ್ಲಿ ಸಂಪುಗಳೆಲ್ಲ ನಡೆಯುತ್ತಿವೆ. ಸರಕಾರವು ಇದರ ಕುರಿತಾಗಿ ವಿಚಾರಿಸುವರೆ ಒಂದು ಕಮಿಟಿಯನ್ನು ನೇಮಿಸಿದೆ, ಇದರಲ್ಲಿ ಕಾಮಗಾರರ ಪ್ರತಿನಿಧಿಗಳೂ ಇದ್ದು ತಮ್ಮ ನ್ಯಾಯವಾದ ಹಕ್ಕನ್ನು ಕೇಳುತ್ತಿರುವರು. ಅಹಮದಾಬಾದಿನಂತೆ ಇಲ್ಲಿಯೂ ಸಾರ್ವಜನಿಕ ಸಂಪು ಜರಗಲಿದೆಯೋ ಏನೆಂಬುದನ್ನು ನೋಡಬೇಕು!

ಕೆನರಾ ಸ್ಟೂಡೆಂಟ್ಸ್ ಯೂನಿಯನ್ ಮುಂಬಾಯಿ—ಇದರ ನೇತೃತ್ವದಲ್ಲಿ 'ಸಹ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಬೇಕೋ ಯಾ ಬೇಡವೋ'? ಎಂಬ ಪಾರಿತೋಷಕ ತರ್ಕ ಸಭೆಯೊಂದು ತಾ. 4-2-40 ರಲ್ಲಿ ಕೆನರಾ ವಿದ್ಯಾದಾಯಿನಿ ಹೈಸ್ಕೂಲ್‌ನಲ್ಲಿ ಡಾಕ್ಟರ್. ವಿ. ಯಸ್. ಬೆಂಜರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪಿ. ಮುದ್ದು, ಯು. ಲಕ್ಷ್ಮೀನಾರಾಯಣ, ಬಿ. ಟಿ. ಕೋಟಿಯಾನ್, ಯು. ಪಿ. ಕುಂದರ್, ಯು. ಕೆ. ರಂಗ, ವಿ. ಪಿ. ಸೇರಾವ ಇವರು ಸಹ ವಿದ್ಯಾಭ್ಯಾಸ ಕೊಡುವುದು ಅಗತ್ಯವೆಂದೂ, ಶ್ರೀಗಳಾದ ಬಿ. ಕೃಷ್ಣಪ್ಪ, ಬಾಮಾಹರಮೇಶ್ವರ, ಟಿ. ಆರ್. ಸನೀಲ್ ಇವರು ಸಹ ವಿದ್ಯಾಭ್ಯಾಸ ಬೇಡವೆಂದೂ ಮಾತನಾಡಿದರು. ಅಧ್ಯಕ್ಷರು ಪ್ರಾಯಕ್ಕೆ ಬರುವ ವರೆಗೆ ತಮ್ಮ ಮಕ್ಕಳಿಗೆ ಸಹ ವಿದ್ಯಾಭ್ಯಾಸವನ್ನು ಕೊಡಬಹುದೆಂದು ಮಾತನಾಡಿದರು.

ಹರಿಕೀರ್ತನೆ—ಇಲ್ಲಿ ಒಂದು ತಿಂಗಳಿಂದ, ದಕ್ಷಿಣಕನ್ನಡದ ಸುಪ್ರಸಿದ್ಧ ಹರಿದಾಸರಾದ ಶ್ರೀ ಮ. ಶಿ. ಸಾಮಗ ಹರಿದಾಸರು, ಇಲ್ಲಿನ ಹಲವು ಕರ್ನಾಟಕ ಸಂಘ, ಮೊಗವೀರ ಸಂಘ ಮತ್ತು ಬಿಲ್ಲವ ಸಂಘ ಭಜನೆ ಮಂಡಳಿಗಳಲ್ಲಿ, ಹರಿಕೀರ್ತನಗಳನ್ನು ರಸಭರಿತವಾಗಿ ಮಾಡಿ, ಸಮಸ್ತ ಕನ್ನಡಿಗರ ಪ್ರಶಂಸೆಗೆ ಪಾತ್ರರಾಗಿ, ಬೊಂಬಾಯಿಯಲ್ಲಿ ಕನ್ನಡದ ಕಾಂತಿಯನ್ನು ಕಾಣಿಸಿ, ನಮ್ಮ ಜಿಲ್ಲೆಗೊಂದು ಕೀರ್ತಿ ತಂದಿದ್ದಾರೆ.

ನೃತ್ಯಕಲೆಯಲ್ಲಿ ಚತುರರಾದ ಶ್ರೀಯುತ ಮುದ್ದು ಶೆಟ್ರು

(ಮೊಗವೀರ ಧರ್ಮಾರ್ಥ ರಾತ್ರಿ ಶಾಲೆಯ ಓರ್ವ ವಿದ್ಯಾರ್ಥಿಗಳು)

ಇವರು ಮುಂಬಾಯಿಯ "ವಿ ಬಾಕರ್‌ರು ಬಿಲ್ಲವರ ಚಾರಿಟಿ ಸಂಘ"ದ ವಾರ್ಷಿಕೋತ್ಸವ ಸಮಾರಂಭದ ದಿನ ನಟಿಸಿದ ಒಂದು ದೃಶ್ಯವನ್ನು ಇಲ್ಲಿ ಕೊಡಲಾಗಿದೆ. ಶ್ರೀಯುತರು ಬಂಟರ ಮನೆತನಕ್ಕೆ ಸೇರಿದ ಉತ್ಸಾಹಿ ತರುಣರು. ಇತ್ತೀಚೆಗೆ ಶ್ರೀಯುತ ಶಣ್ಣೀರು ಬಾವಿ ತಿಮ್ಮಯ್ಯ, ಸಿ ಕರ್ಕೇರರವರ ಉದಾರತೆಯಿಂದ ನೃತ್ಯಕಲೆಯನ್ನು ಅಭ್ಯಾಸಿಸಿರುವರು. ಇವರ ನೃತ್ಯಕಲಾ ನೈಪುಣ್ಯವು ಇವರ ಹೆಸರಿಗನುಗುಣವಾಗಿ ಅದೆಷ್ಟು ಮುದ್ದಾಗಿರುವುದೆಂಬುದು ಮುಂಬಾಯಿಯಲ್ಲಿ ನೆಲೆಸಿರುವ ಕನ್ನಡಿಗರಿಗೆ ವಿಧಿತವಾಗಿರುವ ವಿಷಯವೇ ಸರಿ. ನಾಟಕದಲ್ಲಿ ಪಾತ್ರವನ್ನು ವಹಿಸಿ ನಟಿಸಿದಲ್ಲಿ ಇವರ ಹಾವ, ಭಾವ, ಹಾಗೂ ಅಚ್ಚುಮೆಚ್ಚಿನ ನಾಟ್ಯಚಾತುರ್ಯದಿಂದ ಪ್ರತಿಯೊಬ್ಬರ ಮೆಚ್ಚುಗೆಗೆ ಪಾತ್ರರಾಗಿ ಬಿಡುವರು. ಇವರಿಗೆ ಕನ್ನಡಿಗರ ಪ್ರೋತ್ಸಾಹವು ದೊರಕಿದ್ದಾದರೆ ನೃತ್ಯಕಲೆಯಲ್ಲಿ ಪ್ರವೀಣರಾಗಿ ನಮ್ಮ ಕನ್ನಡನಾಡಿಗೆ ಕೀರ್ತಿಯನ್ನು ಬೆಳಗಿಸಿ ಪ್ರಸಿದ್ಧಿ ಹೊಂದುವರೆಂಬುದಕ್ಕೆ ಸಂದೇಹವಿಲ್ಲ.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. S. 289/38 R. I. A. 1/40

ಹೂವಯ್ಯ ಸೆಟ್ಟಿ—ವಾದಿ

ಮತ್ತು

ಉಮ್ಮಕ್ಕೆ ಸೆಟ್ಟಿ ಕೂಡಾ—ಪ್ರತಿವಾದಿರು.

ಸಪ್ಲಿಮೆಂಟ್ ಪ್ರತಿವಾದಿ—ಶೀನಸೆಟ್ಟಿ 1ನೇ ಪ್ರತಿವಾದಿಳ ಮಗ—

ಉಡುಪಿ ತಾಲೂಕು ನಡ್ಸಾಲು ಗ್ರಾಮದ ಪೇರಿಗ್ರಿಯಲ್ಲಿರುವವ—

ಮೇಲ್ಕಂಡ ದಾವೆಯ 1ನೇ ಪ್ರತಿವಾದಿಳು ಹಾಲಿ ಮೃತಪಟ್ಟಿರುವುದರಿಂದ ಸದ್ರಿಯವಳ ಸ್ಥಾನದಲ್ಲಿ ಅವಳ ಮಗ ನೆ ವಾರಿಸ್ಸುದಾರನಾದ ಶೀನಸೆಟ್ಟಿಯನ್ನು ಸಪ್ಲಿಮೆಂಟು ಪ್ರತಿವಾದಿಯನ್ನಾಗಿ ಸೇರ್ಪಡಿಸಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿ ನೆ ಸದ್ರಿ ದಾವೆಯಲ್ಲಿ ಕೂಡಾ ನೋಟೀಸಿಗೆ ಹುಕುಂ ಆಗಿ ತಾ. 26-2-40ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವಿದ್ದರೆ ಸದ್ರಿ ದಿವಸ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳತಕ್ಕದ್ದು ಎಂತ ಈ ಮೇಲಣ ಕೋರ್ಟಿನ ಹುಕುಂ ಪ್ರಕಾರ ಎಲ್ಲಾ ಜನರಿಗೆ ತಿಳಿಸಲಾಗುತ್ತದೆ.

(*Sd.*) **K. Venkatesha Pai**
Pleader for Plaintiff.
ಕಾರ್ಕಳ ತಾ. 13-2-40.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

ಸ್ಮಾಲ ನಂಬ್ರ 458/39

ಪೂವಣಿಮುದ್ಯ—ವಾದಿ

ಮತ್ತು

ಕಾಳು ಪೂಜಾರಿ, ಬಾಬು ಪೂಜಾರಿ ಅಳಿಯ, ಕಾರ್ಕಳ ತಾಲೂಕು ಕುಕ್ಕುಂದೂರು ಗ್ರಾಮ. } **ಪ್ರತಿವಾದಿ.**

ವಾದಿಗೆ ಪ್ರತಿವಾದಿಯು ಕಳೆದ ತಾರೀಕು 14-12-1936ರಲ್ಲಿ ರೂಪಾಯಿ 60/-ಕ್ಕೆ ಬರೆದುಕೊಟ್ಟ ಡಿ. ಪ್ರೋ. ನೋಟಿನ ಬಾಬ್ತು ಅಸಲು ಬಂದದ್ದು ಕಳೆದು ಬಾಕಿ ಬಹಾ ಅಸಲು ಬಡ್ಡಿ ರೂಪಾಯಿ 21-4-1ನ್ನು ಈ ದಾವೆಯು ನೋಟಿನ ಬಗ್ಗೆ ಕೊಡಾ ಬಾಕಿ ಮಾಡಿದ ಮೇಲ್ಕಂಡ ದಾವೆಯು ಪ್ರತಿವಾದಿಯ ಹಾಜರಾತಿ ಬಗ್ಗೆ ಇದೇ ತಾ. 26-2-40ಕ್ಕೆ ಇಟ್ಟಿರುವುದರಿಂದ ಸದ್ರಿ ದಿವಸ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಆಕ್ಷೇಪವೇನಿದ್ದರೂ ಹೇಳತಕ್ಕದ್ದು. ಇಲ್ಲವಾದ್ರೆ ಪ್ರತಿವಾದಿಯ ಗೈರು ಹಾಜರಿಯಲ್ಲಿ ಸದ್ರಿ ದಾವೆಯು ಕೋರ್ಟಿನವರಿಗೆ ಯುಕ್ತ ತೋರುವಂತೆ ತೀರ್ಮಾನಿಸಲಾಗುವದೆಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಲಾಗುತ್ತದೆ.

(*Sd.*) **K. Venkatesha Pai,**
Pleader for Plaintiff.
Karkala 13-2-'40

ANTARANGA
YUGADI SPECIAL
(To be published on 14-4-1940)

Best Medium for Advertisement

FOR FURTHER PARTICULARS, APPLY TO:-

ADVERTISEMENT MANAGER
ANTARANGA, UDIPI.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ವಿಶ್ವಾಸದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯಯೂ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಟಚ್ಚುವ ಯಾ ಎತ್ತುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವದು. ಹಾಗೂ ಆಲಸ್ಯ ಯಾ ವಾಯುಗಳಿಂದ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿವೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, 5-0-0, 1000, 9-0-0.

5ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆ (ಗುಟಿ) ಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ,
(ರಿಜಿಸ್ಟರ್ಡ್) ಕುಂಜಾಲು.
ಪೋಸ್ಟ್—ಬ್ರಹ್ಮಾವರ, ದ. ಕ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 831/1939 O. S. 434/38

ಅರ್ಜಿದಾರ—ವೆಂಕಟಾಚಲಯ್ಯ.

ಎದುರು—ಕುಪ್ಪಯ್ಯ ಯಾನೆ ಶ್ರೀನಿವಾಸ ಕೂಡಾ 2ನೆ ಎದುರು—ಶೀತಗಿರಿ ವೈದ್ಯ, ವೆಂಕಟಾಚಲ ವೈದ್ಯರ ಮಗ, ಕುಂದಾಪುರ ತಾಲ್ಕು, ತೆಕ್ಕಟ್ಟೆ ಗ್ರಾಮಸ್ಥ, ಸದ್ರಿ 2ನೆ ಎದುರಿಗೆ ತಿಳಿಸುವುದೇನೆಂದರೆ—

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿಹೊಂದಿದವನಾದ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1940ನೆ ಇಸವಿ ಫೆಬ್ರವರಿ ತಾರೀಕು 23ಕ್ಕೆ ನಿಶ್ಚಯಿಸೋಣಾಗಿಯದೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

ತಾ. 10-2-40 } B. Mahabala Holla,
ಕುಂದಾಪುರ. } *Advocate for petitioner.*

ಪುತ್ತೂರು—ಪುತ್ತೂರು ಬೋರ್ಡು ಹೈಸ್ಕೂಲಿನ ವಾರ್ಷಿಕ ವರ್ಧಂತಿ ಉತ್ಸವವು ಇದೇ ಫೆಬ್ರವರಿ ತಾರೀಕು 18ರಲ್ಲಿ ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈ, ಬಿ. ಎ. ಬಿ. ಯ.ಲ್. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಶಾಲೆಯ ಹಳೆ ವಿದ್ಯಾರ್ಥಿಗಳೆಲ್ಲರೂ ಈ ಕಾರ್ಯದಲ್ಲಿ ಸಹಭಾಗಿಗಳಾಗಿ ಈ ಕಾರ್ಯವನ್ನು ನೆರವೇರಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಮೂಲ್ಕಿ—ಸ್ಥಳೀಕ ಗವರ್ನಮೆಂಟ್ ಲೇಬರ್ ಶಾಲೆಯ ವರ್ಧಂತ್ಯುತ್ಸವವು ತಾ 3-2-40 ರಲ್ಲಿ ಡಾ. ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಮರುದಿನ ಶಾಲಾ ಹಳೆ ವಿದ್ಯಾರ್ಥಿಗಳ ಸಂಘದ ವರ್ಧಂತಿಯು ನಿಯೋಜಿತ ಅಧ್ಯಕ್ಷರಾದ ಜಿಲ್ಲಾ ಲೇಬರ ಆಫೀಸರರ ಗೈರ್ ಹಾಜರಿಯ ದೆಸೆಯಿಂದ ಶ್ರೀ ಯಂ. ಆರ್. ಪೂಂಜರವರ ಅಧ್ಯಕ್ಷತೆಯಲ್ಲಿ ಜರಗಿತು.

ಕಟಪ್ಪಾಡಿ—ತಾ. 10-2-1940 ಕಟಪ್ಪಾಡಿ ಪಂಚಾಯಿತ ಬೋರ್ಡಿನ ವೈಸ್ ಪ್ರೆಸಿಡೆಂಟ ವಿಟ್ಟಲ ಲಕ್ಷ್ಮೀನಾರಾಯಣ ರಾಯರು ತನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟದ್ದರಿಂದ, ಆ ಸ್ಥಾನಕ್ಕೆ ಕಟಪ್ಪಾಡಿ ಬೀಡು ಸಂಜೀವ ಬಲ್ಲಾಳರನ್ನು ಸರ್ವಾನುಮತದಿಂದ ಆರಿಸಲಾಯಿತು. ಸದ್ರಿ ಬೋರ್ಡಿನ ಮುಂದಿನ ಕಾರ್ಯಕಲಾಪಗಳನ್ನು ಕೈಕೊಳ್ಳುವ ಬಗ್ಗೆ ಕೆಲವು ವಿಷಯವನ್ನು ಆಲೋಚಿಸಿ ಸಭಾಂತ್ಯವಾಯಿತು. ಸದ್ರಿ ಪಂಚಾಯತ ಬೋರ್ಡಿನ ಪ್ರೆಸಿಡೆಂಟರಾದ ಶ್ರೀ. ಪಿ. ವೆಂಕಟರಾಯ ನಾಯಕ್, ಬಿ. ಎಸ್. ಸಿ. ಇವರು ಅಧ್ಯಕ್ಷತೆ ವಹಿಸಿದ್ದರು.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೧೫-೨-'೪೦

ಕಾಂಗ್ರೆಸಿನ ಅಧ್ಯಕ್ಷ ಪದವಿ.

ರಾಮಘರ ಕಾಂಗ್ರೆಸಿನ ಅಧ್ಯಕ್ಷಪಟ್ಟವು ಈ ಸಲ ಸರ್ವಸಮ್ಮತಿಯಿಂದ ಮೌಲಾನ ಅಬ್ದುಲ್ ಕಲಮ್ ಆಜದರಿಗೆ ಕಟ್ಟಲ್ಪಡುವುದು ನಿಶ್ಚಯವೆಂದೇ ಹೇಳಬಹುದು. ಅವರ ಪ್ರತಿಸ್ಪರ್ಧಿಯಾದ ಶ್ರೀ. ಎಮ್. ಎನ್. ರೊೖಗಳು ತನ್ನ ಉಮೇದ್ವಾರಿಕೆಯನ್ನು ಹಿಂತೆಗೆಯಬಹುದೆಂದು ನಂಬಲಾಗಿದೆ. ಒಂದುವೇಳೆ ಅವರು ಚುನಾವಣೆಗೆ ನಿಂತ ಪಕ್ಷದಲ್ಲಿಯೂ ಹೆಚ್ಚಿನ ಓಟುಗಳೇನೂ ದೊರೆಯುವ ಹಾಗಿಲ್ಲ. ಕಾಂಗ್ರೆಸ್ ಸೋಸಿಯಲಿಸ್ಟ್ ಮತ್ತು ಕಿಸನ್ ಪಕ್ಷದವರು ಕೂಡಾ ಮೌಲಾನ ಆಜದರವರಿಗೇನೇ ಮತವೀಯುವ ನಿರ್ಧಾರಮಾಡಿರುತ್ತಾರೆ. ಶ್ರೀ. ಎಮ್. ಎನ್. ರೊೖಗಳಿಗೆ ಬಂಗಾಳದಲ್ಲಿ ಹೆಚ್ಚಿನ ಬೆಂಬಲದೊರೆಯಬಹುದಿತ್ತು. ಆದರೆ ಅಲ್ಲಿಯ ಕಲಹದಿಂದಾಗಿ ಚುನಾವಣೆಯೇ ಸಸೂತ್ರವಾಗಿ ನಡೆಯುವ ಸಂಭವ ತೋರುವುದಿಲ್ಲ. ಅಲ್ಲಿಯ ಚುನಾವಣೆ ನಡಿಸಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರಿಂದ ನಿಯುಕ್ತರಾದ ಎಡ್‌ಹೋಕ್ ಕಮಿಟಿಯವರೊಂದಿಗೆ ಬಂಗಾಳ ಪ್ರಾಂತಿಕ ಮತ್ತು ಹೆಚ್ಚಿನ ಜಿಲ್ಲಾ ಕಮಿಟಿಗಳು ಅಸಹಕಾರ ಮಾಡುವ ನಿರ್ಧಾರಮಾಡಿರುವುದರಿಂದ ಈ ಕಮಿಟಿಯವರು ಸ್ವತಂತ್ರವಾಗಿ ನಡಿಸ ಬಹುದಾದ ಚುನಾವಣೆಯಲ್ಲಿ ಹೆಚ್ಚಾಗಿ ಗಾಂಧಿವಾದಿಗಳೇ ಆರಿಸಿ ಬರುವದು ನಿಶ್ಚಯ. ಹೊಸತಾಗಿ ಪ್ರತಿನಿಧಿಗಳು ಆರಿಸಲ್ಪಟ್ಟ ಮೇಲೆ ಈಗಣ ಪ್ರತಿನಿಧಿಗಳು ಮತ್ತು ಕಮಿಟಿಗಳನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಅಂಗೀಕರಿಸುವಹಾಗಿಲ್ಲ. ಅಂದಮೇಲೆ ಬಂಗಾಳದಲ್ಲಿಯೂ ಶ್ರೀ. ರೊೖಗಳಿಗೆ ಬೆಂಬಲದೊರೆಯುವಹಾಗಿಲ್ಲ.

ಶ್ರೀ. ರೊೖಗಳ ಪ್ರತಿನಾಯಕತ್ವ

ಶ್ರೀ. ಎಮ್. ಎನ್. ರೊೖಗಳು ಕಾಂಗ್ರೆಸಿನ ಅಧ್ಯಕ್ಷಪದವಿಯನ್ನೇನೂ ಆಶಿಸುವವರಲ್ಲ. ಆದರೆ ಕಾಂಗ್ರೆಸಿನ ಈಗಣ ನಾಯಕತ್ವವು ನಿರರ್ಥಕವಾಗಿದೆ, ಅನಾವಶ್ಯಕವಾಗಿ ರಾಜಕೀಯದೊಂದಿಗೆ ಧಾರ್ಮಿಕ ಮತ್ತು ನೈತಿಕ ತತ್ವಗಳನ್ನು ಬೆರಸಿ ಗೊಂದಲವನ್ನುಂಟುಮಾಡಿದೆ. ಸಂಪೂರ್ಣ ಅಧಿಕಾರವು ಜನತೆಯ ಹಸ್ತಗತವಾಗುವ ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯಸಾಧನೆಯ ಗುರಿಯನ್ನು ಮೂಲೆಗೊತ್ತಿ ಅಹಿಂಸೆ, ಸತ್ಯ, ಖಾದಿ, ಹರಿಜನೋದ್ಧಾರವೇ ಮೊದಲಾದ ಅಸಂಗತ ವಿಷಯಗಳಿಗೆ ಪ್ರಾಮುಖ್ಯತೆಯನ್ನಿತ್ತು ಅವನ್ನೇ ಸರ್ವಸ್ವವನ್ನಾಗಿ ಮಾಡಿರುತ್ತದೆ. ಸ್ವರಾಜ್ಯಕ್ಕಿಂತಲೂ ಗಾಂಧಿತ್ವವೇ ಮಹತ್ವವಾದುದೆಂಬ ದಾಸ್ಯಮನೋವೃತ್ತಿಯು ಕಾಂಗ್ರೆಸಿನವರಲ್ಲಿ ಪ್ರಬಲವಾಗಿ ಹಬ್ಬಿದೆ. ಅಖಿಲಭಾರತ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸಿಗಿಂತ ಗಾಂಧಿಯವರೇ ಅವರಿಗೆ ಹೆಚ್ಚಿನವರಾಗಿರುತ್ತಾರೆ. ಕ್ರಾಂತಿಕಾರಕ ಸಂಸ್ಥೆಯಾಗಿದ್ದ ಕಾಂಗ್ರೆಸು ಇಂದು ಸೂತ್ರಬದ್ಧ ಚಳವಳದ ದಾರಿಹಿಡಿದಿದೆ. ಬ್ರಿಟಿಷರು ಶಾಂತರೀತಿಯಿಂದ ಅಧಿಕಾರವನ್ನು ಬಿಟ್ಟುಕೊಡುವರೆಂಬ ಮನೋವೃತ್ತಿಯು ಇಂದೀಗ ಕಾಂಗ್ರೆಸಿನ ಅಧಿನಾಯಕರಲ್ಲಿ ಬೆಳೆಯುತ್ತಾ ಬರುತ್ತಿದೆ. ಗಾಂಧಿಜಿಯವರೇ ಮೊದಲಾದವರು ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ರಾಜಿಮಾಡಲು ಹಾತೊರೆಯುತ್ತಿದ್ದಾರೆ. ಕಾಂಗ್ರೆಸು ಇಂದು ಹೋರಾಡುವ ಸಂಸ್ಥೆಯೆಂದು ಹೇಳಬರುವುದಿಲ್ಲ. ಇಂದೀಗ ೨೦ ವರ್ಷಗಳಿಂದ ದೇಶವು ಗಾಂಧಿಯವರ ನಾಯಕತ್ವವನ್ನನುಸರಿಸಿ ಮುನ್ನಡೆದಿದೆ. ಆದರೆ ಸ್ವರಾಜ್ಯವು ಇನ್ನೂ ದೂರದ ಗುರಿಯಾಗಿಯೇ ಇದೆ ಇದೇ ರೀತಿ ಮುನ್ನಡೆದರೆ ಕಾಂಗ್ರೆಸು ಎಂದು ಗುರಿಮುಟ್ಟುವುದೆಂದು ಹೇಳಬರುವುದಿಲ್ಲ ಆದುದರಿಂದ ಕಾಂಗ್ರೆಸಿಗೆ ಇಂದು ಹೊಸ ನಾಯಕತ್ವವು ಆವಶ್ಯಕವಿದೆ. ಗಾಂಧಿತ್ವದ ರೀತಿನೀತಿಗಳಿಂದ ಈಗ ಫಲವಿಲ್ಲ. ಅದರ ಅವಧಿಯಾಯಿತು. ಮುಂದೆ ಕಾಂಗ್ರೆಸು ನವ ರೀತಿನೀತಿಗಳನ್ನನುಸರಿಸಿ ಹೋರಾಟ ನಡಿಸಬೇಕೆಂದು ಶ್ರೀ ಎಮ್. ಎನ್. ರೊೖಗಳು ಹೊಸ ರೀತಿಯ ಕಾರ್ಯಕ್ರಮವನ್ನು ದೇಶದ ಮುಂದಿಟ್ಟು ತನ್ನ ಪ್ರತಿನಾಯಕತ್ವವು ಎಂತಹದೆಂಬುದನ್ನು ಸ್ಪಷ್ಟಪಡಿಸುವ ಉದ್ದೇಶದಿಂದ ಕಾಂಗ್ರೆಸ್ ಪ್ರೆಸಿಡೆಂಟತನಕ್ಕೆ ಉಮೇದ್ವಾರಿಯಾಗಿದ್ದಾರೆ. ಅಹಿಂಸೆಯೆಂಬುದು ಕೇವಲ ಸಾಧನ. ಅದನ್ನು ಸಾಧ್ಯದ ಸ್ಥಾನಕ್ಕೇರಿಸುವುದರಲ್ಲಿ ಅರ್ಥವಿಲ್ಲ. ಆ ಸಾಧನದ ಮೂಲಕ ಸ್ವರಾಜ್ಯವನ್ನು ಸಾಧಿಸಲು ಅಸಾಧ್ಯವಾದರೆ ಹಿಂಸೆಯಿಂದಾದರೂ ಗಳಿಸಿಕೊಳ್ಳಲೇ ಬೇಕು. ಭಾರತೀಯರೆಲ್ಲರ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸು ರಾಜಕೀಯ ಸಂಸ್ಥೆ. ದೇಶದ ರಾಜಕೀಯ ಸ್ವಾತಂತ್ರ್ಯವೇ ಅದರ ಮುಖ್ಯ ಗುರಿ. ಆದುದರಿಂದ ಕಾಂಗ್ರೆಸಿನೊಳಗೆ ಯಾವುದಾದರೊಂದು ಧರ್ಮದ ತತ್ವ ಮತ್ತು ನೀತಿಗಳನ್ನು ಆಚರಣೆಗೆ ತರುವುದು ಅವಿವೇಕವಾಗಿದೆ. ಬ್ರಿಟಿಷ್ ಸಾಮ್ರಾಜ್ಯವು ತನ್ನ ಸ್ವಾರ್ಥವನ್ನು ಬಿಟ್ಟು ಉದಾರತೆಯಿಂದ ಹಿಂದೂದೇಶಕ್ಕೆ ಸ್ವಾತಂತ್ರ್ಯವೀಯುವುದೆಂಬುದು ಬಯಲು ಭ್ರಾಂತಿ. ಬ್ರಿಟಿಷರ ಹೃದಯ ಮಾರ್ಪಾಟವಾಗುವುದೆಂಬುದು ಹಿರುಕನ ಸ್ವಪ್ನ. ಅಧಿಕಾರವನ್ನಿಟ್ಟುಕೊಳ್ಳಲು ಅಸಾಧ್ಯವೆಂಬಂತಾಗುವ ವರೇಗೆ ಅವರು ಹಿಂದೂದೇಶಕ್ಕೆ ಸ್ವಾತಂತ್ರ್ಯವೀಯಲಾರರು. ಹಿಂದೀಯರು ಹೋರಾಡಿ ಅವರ ಕೈಯಿಂದದನ್ನು ಕಿತ್ತುಕೊಳ್ಳಬೇಕು. ಹಾಗಾಗಬೇಕಾದರೆ ಸಾಮುದಾಯಿಕ ಬಂಡಾಯವೆದ್ದು ಆಡಳಿತ ನಡಿಸುವುದಕ್ಕೇನೇ ಅಸಾಧ್ಯವೆಂಬಂತಹ ಪರಿಸ್ಥಿತಿಯುಂಟಾಗಬೇಕು. ಕಾಂಗ್ರೆಸ್ ಕಮಿಟಿಗಳೇ ಸರ್ವ ಅಧಿಕಾರದ ಕೇಂದ್ರವಾಗಿ ಜನಬೆಂಬಲ ಪಡೆಯಬೇಕು. ಇದಕ್ಕೆ ಪ್ರತಿ ಹಳ್ಳಿ ಕಮಿಟಿಗಳು ಅಲ್ಲಿಯ ಜನರ ಸಾಂಪತ್ತಿಕ ಸಂಕಷ್ಟಗಳನ್ನು ನಿವಾರಿಸಲೆತ್ನಿಸಿ ಅವರ ಸಂಪೂರ್ಣ ವಿಶ್ವಾಸಕ್ಕೆ ಪಾತ್ರವಾಗಬೇಕು. ಎಡೆಬಿಡದೆ ಕಾಂಗ್ರೆಸ್ ಕೆಲಸ ಮಾಡುವವರೇ ಕಾಂಗ್ರೆಸ್ ಕಮಿಟಿಗಳನ್ನು ನಡಿಸುವಂತಾಗಬೇಕು. ಹೀಗೆ ಬುಡವೇ ಗಟ್ಟಿಯಾದ ಪಕ್ಷದಲ್ಲಿ ಕಾಂಗ್ರೆಸು ಪ್ರಚಂಡ ಶಕ್ತಿ ಪಡೆದು ಅಜೇಯವಾಗುವುದು. ಸರಕಾರಕ್ಕೆ ಪ್ರತಿಸರಕಾರವನ್ನೇ ಸ್ಥಾಪಿಸಲು ಅದಕ್ಕೆ ಸಾಧ್ಯವಾಗುವುದು. ಸ್ವರಾಜ್ಯ ಸಿಕ್ಕಿದ ಮೇಲೂ ಅಧಿಕಾರವು ಈ ಹಳ್ಳಿ ಕಮಿಟಿಗಳ ಮೂಲಕ ಜನತೆಯ ಕೈವಶವಾಗಿ ಅದರಿಂದ ನಿಜವಾದ ಜನಹಿತವಾಗುವಂತಾಗುವುದೆಂದೇ ಶ್ರೀ ಎಮ್. ಎನ್. ರೊೖಗಳ ಅಭಿಮತ ಗಾಂಧಿತ್ವದ ಅಪ್ರಯೋಜಕತೆಯನ್ನು ಜನತೆಯ ಮನಗಾಣಿಸಿ ಕಾಂಗ್ರೆಸಿನೊಳಗೆ ಹೊಸ ನಾಯಕತ್ವವನ್ನು ಸ್ಥಾಪಿಸುವ ಆವಶ್ಯಕತೆಯನ್ನು ಶ್ರುತಗೊಳಿಸುವುದಕ್ಕಾಗಿಯೇ ಅವರೀಗ ಕಾಂಗ್ರೆಸ್ ಪ್ರೆಸಿಡೆಂಟರ ಚುನಾವಣೆಯಲ್ಲಿ ಪ್ರತಿಸ್ಪರ್ಧಿಯಾಗಿ ನಿಂತಿರುವುದಾಗಿದೆ.

ತ್ರಿಪುರಿಯ ಪ್ರಮಾದ

ಶ್ರೀ ಸುಭಾಷಚಂದ್ರ ಭೋಸರು ತ್ರಿಪುರಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟದು ಕಾಂಗ್ರೆಸ್ಸಿನೊಳಗಣ ಎಡಪಕ್ಷಗಳು ಪಡೆದ ದೊಡ್ಡ ವಿಜಯವೆನ್ನುವುದರಲ್ಲಿ ಸಂದೇಹವೇ ಇಲ್ಲ. ಆದುದರಿಂದಲೇ ಗಾಂಧಿಯವರು ಅದು ತನ್ನ ಅಪಜಯವೆಂದು ತಿಗೆದುಕೊಂಡಿರುವರು. ಆದರೆ ಈ ವಿಜಯವನ್ನು ಸ್ಥಿರವಾಗಿಟ್ಟುಕೊಳ್ಳುವಷ್ಟರ ವಿವೇಕ, ಒಕ್ಕಟ್ಟು, ಸಾಮರ್ಥ್ಯ ಮತ್ತು ಆತ್ಮವಿಶ್ವಾಸವು ಕಾಂಗ್ರೆಸ್ಸಿನೊಳಗಣ ಎಡಪಕ್ಷೀಯರಲ್ಲಿರಲಿಲ್ಲ. ತ್ರಿಪುರಿಯಲ್ಲಿ ಈ ಪಕ್ಷಗಳ ಪತನ ಮತ್ತು ಗಾಂಧಿವಾದಿಗಳ ಪುನರುತ್ಥಾನವಾಯಿತು. ಎಡಪಕ್ಷೀಯರೇ ತಮ್ಮೊಳಗೆ ಕಚ್ಚಾಡಿಕೊಳ್ಳಹತ್ತಿದರು. ಅವರಲ್ಲಿ ಏಕನಾಯಕತ್ವವೆಂಬುದು ಇರಲೇ ಇಲ್ಲ. ಈಗಲೂ ಇರುವುದಿಲ್ಲ. ವಿಶೇಷವಾಗಿ ಶ್ರೀ. ಭೋಸರು ಯಾವ ನಿಶ್ಚಿತ ಧೋರಣೆಯೂ ಇಲ್ಲದೆ ದೊಡ್ಡ ಪ್ರಮಾದವನ್ನುಂಟುಮಾಡಿದರು. ಈ ಸಂದರ್ಭದ ಸದುಪಯೋಗ ಪಡೆದು ಗಾಂಧಿವಾದಿಗಳು ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ತಮ್ಮ ಕೈವಶಮಾಡಿಕೊಂಡರು. ಎಡಪಕ್ಷೀಯರು ತಮ್ಮ ಕೈಗೆ ಬಂದ ಅಧಿಕಾರವನ್ನು ಬಿಟ್ಟುಕೊಟ್ಟು ಹತಭಗ್ನರಾಗಿ ಮೂಲೆಗುಂಪಾದರು.

ಈಗಲೂ ಗಾಂಧಿವಾದಿಗಳೆಲ್ಲಾ ಅತ್ಯಂತ ಒಕ್ಕಟ್ಟಿನಿಂದ ನಡೆಯುತ್ತಿರುವಾಗ ಮಾತ್ರವಲ್ಲದೆ ಪಂಡಿತ ಜವಾಹರಲಾಲರಂತಹ ತೀವ್ರಗಾಮಿಯು ಕೂಡಾ ಅವರ ಪಕ್ಷ ಹಿಡಿದಿರುವಾಗ ಎಡಪಕ್ಷೀಯರು ಹಲವು ತರದ ಭಿನ್ನಭೇದಗಳಿಂದ ಅತ್ಯಂತ ದುರ್ಬಲರಾಗಿ ಕಾಂಗ್ರೆಸ್ಸಿನೊಳಗೆ ಮೊದಲು ಪಡೆದಿದ್ದ ಸ್ಥಾನವನ್ನೂ ಕಳಕೊಂಡಿರುತ್ತಾರೆ. ಇಂತಹ ಸಂದರ್ಭದಲ್ಲಿ ಶ್ರೀ. ಎಮ್. ಎನ್. ರೊೖಗಳು ಕಾಂಗ್ರೆಸ್ ಪ್ರೆಸಿಡೆಂಟತನಕ್ಕೆ ಉಮೇದ್ವಾರಿಯಾಗಿ ನಿಂತುದೇ ತಪ್ಪು. ಅವರ ಕಾರ್ಯಕ್ರಮವೇನೆಂಬುದನ್ನು ದೇಶವೀಗ ಚೆನ್ನಾಗಿ ಬಲ್ಲುದು. ಈಗ ಕಾಂಗ್ರೆಸ್ಸಿನೊಳಗಣ ಎಡಪಕ್ಷೀಯರ ಪ್ರಥಮ ಕರ್ತವ್ಯವೆಂದರೆ ತಮ್ಮೊಳಗೆ ಐಕ್ಯಸ್ಥಾಪಿಸಿ ಸಂಘಟಿಸಿಕೊಳ್ಳುವುದಲ್ಲದೆ ಗಾಂಧಿವಾದಿಗಳೊಡನೆ ಸೆಣಸಾಡುವುದಲ್ಲ ಇಂದೀಗ ದೇಶದಲ್ಲಿ ಗಾಂಧಿಜಿಯವರಿಗೇನೇ ಹೆಚ್ಚಿನ ಬೆಂಬಲವಿರುವುದು. ಅವರ ನಾಯಕತ್ವದಲ್ಲಿಯೇ ಜನಸಾಮಾನ್ಯರಿಗೆ ವಿಶ್ವಾಸವಿರುವುದು. ಅವರ ರೀತಿನೀತಿಗಳೇ ಕಾಂಗ್ರೆಸ್ಸಿನಲ್ಲಿ ಮಾನ್ಯವಾಗಿರುವವು

ಕಾಂಗ್ರೆಸಿನವರೆಲ್ಲಾ ಒಮ್ಮನಸ್ಸಿನಿಂದ ತನಗೆ ಬೆಂಬಲವಿತ್ತರೆ ಇನ್ನೊಂದು ಹೋರಾಟವಲ್ಲದೇನೇ ಸ್ವರಾಜ್ಯವನ್ನು ಪಡೆಯಬಹುದೆಂದು ಗಾಂಧಿಯವರ ವಿಶ್ವಾಸವಿರುವುದು ಅಂದಮೇಲೆ ಅವರಿಗೊಂದು ಕೊನೆಯ ಸಂದರ್ಭವನ್ನಿತ್ತ ಪಕ್ಷದಲ್ಲಿ ಎಡಪಕ್ಷೀಯರಿಗಾಗುವ ಹಾನಿಯಾದರೂ ಏನು? ಮುಂದೆ ಗಾಂಧಿಯವರ ಕಾರ್ಯಕ್ರಮದಿಂದ ಸ್ವರಾಜ್ಯವನ್ನು ಪಡೆಯಲು ಸಾಧ್ಯವಾಗದಿದ್ದರೆ ಎಡಪಕ್ಷೀಯರು ತಮ್ಮ ಕಾರ್ಯಕ್ರಮವನ್ನೂ, ನಾಯಕತ್ವವನ್ನೂ ಮುಂದೊತ್ತಲು ಸುಸಂದರ್ಭ ದೊರೆಯುವುದಿಲ್ಲವೇ? ಒಂದುವೇಳೆ ಗಾಂಧಿಯವರು ಜಯಶೀಲವಾದರೆ ಅದರಿಂದ ಎಲ್ಲರೂ ಸಂತೋಷವೇ ಪಡಬೇಕಲ್ಲವೇ? ಆದುದರಿಂದ ಈಗ ಗಾಂಧಿಯವರ ಮಾರ್ಗದಲ್ಲಿ ಯಾವ ಆತಂಕವನ್ನೂ ಯಾರಾದರೂ ಒಡ್ಡುವುದು ಅವಿವೇಕವಾಗುವುದು ಈ ದೃಷ್ಟಿಯಿಂದ ನಾವು ಮೌಲನಾ ಆಜದರೇ ಈ ಸಲದ ಕಾಂಗ್ರೆಸಿನ ಅಧ್ಯಕ್ಷರಾಗುವುದು ಉಚಿತವೆಂದು ಹೇಳುವುದಾಗಿದೆ.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್.

ಕಲ್ಯಾಣಪುರ, ಮೂಡಬೆಟ್ಟು, ಎರ್ಮಾಳು, ಪಡುಬಿದ್ರೆ, ಮಂದಾರ್ತಿ ಮೊದಲಾದ ಕಡೆಗಳಿಗೆ ಹೋಗಿ ಶ್ಯಾರು ಕಲೆಕ್ಷನ್ ಮಾಡಲು ಹಲವರು ನೆರವಾಗಿದ್ದಾರೆ. ಮುಖ್ಯವಾಗಿ ಸಹಾಯ ಮಾಡಿದ ಶ್ರೀಗಳಾದ ಬಿ. ನಾರಾಯಣ ಶೆಟ್ಟಿ ವಕೀಲ್, ಕೆ. ಎಸ್. ಶೆಟ್ಟಿ, ಯು. ಕೆ. ಗೋವಿಂದ ಶೆಟ್ಟಿ, ಸೀತಾರಾಮ ಘೋರೆ ಬಲ್ಲಾಳ್, ವೈ. ದೂಮಣ್ಣ ಹೆಗ್ಡೆ ವಕೀಲ್, ಕೆ. ಸರ್ವೋತ್ತಮ ಶೆಟ್ಟಿ, ಹೆಗ್ಗುಂಜೆ ಗಣಪಯ್ಯ ಶೆಟ್ಟಿ, ಶೀನಪ್ಪ ಶೆಟ್ಟಿ ಮೊದಲಾದವರಿಗೆ ತುಂಬಾ ಕೃತಜ್ಞತೆಗಳೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಈ ವರೆಗೆ ಪಾಲಿನ ಹಣ ಬಾಕಿಯಿರುವವರು ಅದನ್ನು ಕೂಡಲೇ ಕಳಿಸಬೇಕೆಂದೂ ವಿನಂತಿಸುತ್ತಾರೆ.

ಪ್ರಚಾರ
ವಿನಂತಿ.

...ಮಂತ್ರಿಗಳು
...ದ ಹೆಚ್ಚಿನ
...ಕ್ಕಿಗಳಾದ
...ವನ್ನಾಗಿ ಮಾ
...ಕೆಲಸ ಮಾಡ
...ಪ್ರಾಂತವು ಈ
...ವಿಳಂಬವಾಗಿ.
...ಕ್ಯಕ್ತಾಸಹದಿಂದ
...ವಿಳಂಬಕ್ಕಾಗಿ
...ಪಂತಿವೆ. ಶ್ರೀ.
...ರವರು
...ಾರ್ಥವಾಗಿ
...ಂದು ವಾರ
...ವರು ಮಾತ್ರ
...ಲ್ಲಾ ಸಂಚರಿ
...ಣಗಳನ್ನೀಯು
...ತಾರೀಕು 4ರಲ್ಲಿ
...ನಾಡು ಪ್ರಾಂ
...ಪ್ರಾಯಸ್ಥರ
...ಪ್ರತ್ಯೇಕವಾ
...ವುದು. ಈ
...ಂದುಸ್ಥಾನದ
...ನೆ ಎರಡನೇ
...ಲ್ಲಿ ನಡೆಯು

...ಕ್ಕೊಟ್ಟರಂತೆ
...ಕ್ಷರಜ್ಞಾನವಿ
...ನವೀನ ಶಿಕ್ಷಣ
...ನಿರಕ್ಷರತೆಯು
...ಪ್ರಾಯಸ್ಥರಿಗೂ
...ತು ಗಮನ
...ಸಾಮುದಾ
...ವು ದೇಶದ
...ಲ್ಲಿ ಒಂದಾಗಿ
...ಪ್ರಾಂತದಲ್ಲಾ
...ನತಾ ಸರಕಾ
...ರಾಷ್ಟ್ರೀಯ
...ನಡಿಸುವ ಜವಾ
...ಮಿಟಿ ಮತ್ತು
...ವಿದ್ದಿವೆ. ಹಳ್ಳಿ
...ನ್ನೀಯಲು
...ಶಾಲೆಗಳನ್ನು
...ವಿದ್ಯಾರ್ಥಿಗಳ
...ಜನತೆಯ ಸೇವೆ
...ಸಾಧ್ಯವಾದ
...ಯ ಮತ್ತು
...ಸ್ಥಾಪಿಸಬೇಕು.
...ಓಮಬರಹ
...ಕಾರ್ಯಾಳವ
...ಉಪಾಧ್ಯಾ
...ಪ್ರಾಯ
...ರೀತಿ ಪ್ರಯೋ
...ಡಿರುವರು.
...ಚಟುವಟಿಕೆಗಳ
...ರುವ ದಕ್ಷಿಣ
...ಂದುಳಿಯಲಾ
...ಯ ಕೇಂದ್ರ
...ದನ್ನು ನಡಿಸಿ
...ಚಳವಳ

ಪ್ರೆಸಿಡೆಂಟ್ ರೂಸ್‌ವೆಲ್ಟರ ಲೋಕಶಾಂತಿ ಯತ್ನ!

ಕಾಂಗ್ರೆಸ್ ಧೋರಣೆಯ ಕುರಿತು ಇಂಡಿಯಾ ಸೆಕ್ರೆಟರಿಗಳ ಟೀಕೆ

ಲೋರ್ಡ್ ಜೆಟ್ಲೆಂಡರಿಗೆ ಪಂಡಿತ ನೆಹರುಗಳ ಉತ್ತರ

ಮಿ. ಸಮ್ನರ್ ವೆಲ್ಸರು ಯುರೋಪಿಗೆ

ಅಮೆರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರದ ಅಂಡರ್ ಸೆಕ್ರೆಟರಿಗಳಾದ ಮಿ. ಸಮ್ನರ್ ವೆಲ್ಸರನ್ನು ಪ್ರೆಸಿಡೆಂಟ್ ರೂಸವೆಲ್ಟರು, ಯುರೋಪಿನ ರಾಷ್ಟ್ರಗಳನ್ನು ಸಂದರ್ಶಿಸಿ ಅಲ್ಲಿಯ ಪರಿಸ್ಥಿತಿಯನ್ನು ತಿಳಿಯಲು ಕಳುಹಿಸಲಿರುವರು. ಮಿ. ಸಮ್ನರ್ ವೆಲ್ಸರು ಇಟಲಿ, ಫ್ರಾನ್ಸ್, ಜರ್ಮನಿ ಮತ್ತು ಇಂಗ್ಲೆಂಡ್‌ಗಳನ್ನು ಸಂದರ್ಶಿಸಲಿರುವರು. ಆದರೆ ರಷ್ಯ ಮತ್ತು ಫಿನ್ಲೆಂಡಿಗೆ ಹೋಗುವುದಿಲ್ಲ. ಯುನೈಟೆಡ್ ಸ್ಟೇಟ್ಸಿನ ಪರವಾಗಿ ಅವರು ಯಾವ ಸಂದೇಶ ಅಥವಾ ನಿರೂಪಣೆಯನ್ನೊಯ್ಯುವುದಿಲ್ಲ. ಅವರು ಇಟಲಿ, ಜರ್ಮನಿ, ಫ್ರಾನ್ಸ್ ಮತ್ತು ಇಂಗ್ಲೆಂಡುಗಳನ್ನು ಸಂದರ್ಶಿಸಿ ಅಲ್ಲಿಯ ಸರಕಾರಗಳ ಅಭಿಪ್ರಾಯವನ್ನು ಸಂಗ್ರಹಿಸಿ ಪ್ರೆಸಿಡೆಂಟ್ ರೂಸವೆಲ್ಟರಿಗೆ ತಿಳಿಸುವ ಕೇವಲ ದೂತರಾಗಿರುವರು ಮಿ. ವೆಲ್ಸರು ಇದೇ ತಾ. 17ರಲ್ಲು ಅಮೇರಿಕದಿಂದ ಹೊರಟು ನೆಟ್ಟಗೆ ಇಟಲಿಗೆ ಹೋಗುವರು ಯುನೈಟೆಡ್ ಸ್ಟೇಟ್ಸಿನ ಸ್ಟೇಟ್ ಸೆಕ್ರೆಟರಿಗಳಾದ ಮಿ. ಕೋರ್ಡೆಲ್ ಹಲ್ಲರು, ಯುದ್ಧಾನಂತರ ಲೋಕದ ರಾಷ್ಟ್ರಗಳೆಲ್ಲಾ ಶಸ್ತ್ರತ್ಯಾಗಮಾಡಿ ಶಾಶ್ವತವಾಗಿ ಶಾಂತಿಯು ಸ್ಥಾಪಿತವಾಗಿ ಸಾಂಪತ್ತಿಕ ವ್ಯವಸ್ಥೆಯನ್ನು ಸ್ಥಾಪಿಸಿ ಎಲ್ಲಾ ರಾಷ್ಟ್ರಗಳೂ ವ್ಯಾಪಾರ ವಹಿವಾಟು ನಡಿಸಲು ಸಮಾನ ಅನುಕೂಲತೆಗಳನ್ನು ಪಡೆಯುವಂತೆ ಮಾಡುವ ಕುರಿತು ತಟಸ್ಥರಾಷ್ಟ್ರಗಳೊಡನೆ ಮಾತುಕತೆನಡಿಸುತ್ತಿರುವರು. ಯುದ್ಧೋಪಕರಣಗಳ ವೆಚ್ಚವನ್ನು ಕಡಿಮೆಮಾಡಿ, ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟುಗಳಿಗೆ ಹೆಚ್ಚಿನ ಸೌಕರ್ಯವನ್ನುಂಟುಮಾಡಿ ಪ್ರಕೃತದ ಯುದ್ಧಾನಂತರವಾದರೂ ಲೋಕದಲ್ಲಿ ನವವ್ಯವಸ್ಥೆಯುಂಟಾಗುವಂತೆ ಮಾಡಬೇಕೆಂಬುದೇ ಯುನೈಟೆಡ್ ಸ್ಟೇಟ್ ಸರಕಾರದ ಉದ್ದೇಶ. ಯುರೋಪಿನ ರಾಷ್ಟ್ರಗಳು ಈಗಲೇ ಈ ಸುವ್ಯವಸ್ಥೆಗೊಪ್ಪಿ ಯುದ್ಧ ನಿಲ್ಲಿಸುವಂತಾದರೆ ಪ್ರೆಸಿಡೆಂಟ್ ರೂಸ್‌ವೆಲ್ಟರು ಅದನ್ನು ಅತ್ಯಂತ ಸಂತೋಷದಿಂದ ಸ್ವಾಗತೀಕರಿಸುವರು.

ಹರ್. ಹಿಟ್ಲರರು ಇದೇ ತಾ. 10ರಲ್ಲು ಬರ್ಲಿನಿಗೆ ಬಂದು, ಪ್ರೆಸಿಡೆಂಟ್ ರೂಸ್‌ವೆಲ್ಟರ ಹಂಚಿಕೆಯ ಕುರಿತು ತನ್ನ ಸಲಹೆಗಾರರೊಡನೆ ಆಲೋಚಿಸಹತ್ತಿರುವರೆಂದು ತಿಳಿದು ಬರುತ್ತದೆ. ಇಂಗ್ಲೆಂಡು ತನ್ನ ಸಾಮ್ರಾಜ್ಯ ಸ್ವಾರ್ಥವನ್ನು ಬಿಟ್ಟು ಸಮುದ್ರಗಳ ಸ್ವಾತಂತ್ರ್ಯದ ಗ್ಯಾರಂಟಿ ಕೊಡಬೇಕು. ಸಾಂಪತ್ತಿಕ ಯುದ್ಧವನ್ನು ನಿಲ್ಲಿಸಬೇಕು. ಸಮುದ್ರವನ್ನಾಳುವ ಆಕಾಂಕ್ಷೆಯನ್ನು ಬಿಟ್ಟು ಜಿಬ್ರಾಲ್ಟರ್, ಮಾಲ್ಟಾ, ಸಿಂಗಪುರವೇ ಮೊದಲಾದ ನೌಕಾನೆಲೆಗಳ ಅಂಕೆಗೆ ರಾಷ್ಟ್ರಗಳ ಹಡಗಗಳು ಒಳಗಾಗುವಂತಾಗಲಾರದು. ಆಗ ಮಾತ್ರ ಲೋಕದಲ್ಲಿ ಸಾಂಪತ್ತಿಕ ಸಮತೋಲನವನ್ನು ಸ್ಥಾಪಿಸಲು ಸಾಧ್ಯವಿದೆ. ಇದಕ್ಕೆ ಇಂಗ್ಲೆಂಡು ಸಿದ್ಧವಿರುವುದಾದರೆ ಜರ್ಮನಿಯು ಸಂಧಿಗೆ ಸಿದ್ಧವಿದೆಯೆಂಬುದೇ ಮಾರ್ಶಲ್ ಗೋರಿಂಗರ ಅಂಬೋಣ.

ಪ್ರೆಸಿಡೆಂಟ್ ರೂಸ್‌ವೆಲ್ಟರ ಲೋಕದ ಸಾಂಪತ್ತಿಕ ವ್ಯವಸ್ಥೆ, ಯುದ್ಧೋಪಕರಣ ವೆಚ್ಚದ ಇಳಿತ ಮತ್ತು ಲೋಕ ಶಾಂತಿ ಸ್ಥಾಪನೆಯ ಸೂಚನೆಗಳಿಂದ ಇಟಲಿಯು ಅತ್ಯಾನಂದಗೊಂಡಿದೆ. ಮಿ. ಸಮ್ನರ್ ವೆಲ್ಸರನ್ನು ಇಟಲಿಯು ಸಂಭ್ರಮದಿಂದ ಸ್ವಾಗತೀಕರಿಸಿ ಮುಸಲೋನಿ ಮತ್ತು ಕೌಂಟ್ ಸಿಯಾನೋರವರು ಅವರೊಡನೆ ಮಾತಾಡಲಿದ್ದಾರೆ ಜರ್ಮನಿಯೂ ಒಳಗಿಂದೊಳಗೆ ಸಂತೋಷಗೊಂಡಿರುವಂತಿದೆ. ಮಿ. ವೆಲ್ಸರಿಗೆ ಅಲ್ಲಿಯೂ ಯೋಗ್ಯ ಸ್ವಾಗತ ದೊರೆಯದಿರಲಾರದು. ಫ್ರಾನ್ಸ್ ಮತ್ತು ಇಂಗ್ಲೆಂಡು ಯುನೈಟೆಡ್ ಸ್ಟೇಟ್ಸಿನ ರಾಯಭಾರಿಯನ್ನು ಸ್ವಾಗತೀಕರಿಸದಿರಲಾರವು. ಆದರೆ ಹಿಟ್ಲರ್ ಶಾಹಿಯು ನಾಶವಾಗದೆ ಲೋಕದ ಶಾಂತಿ ಮತ್ತು ಸಾಂಪತ್ತಿಕ ವ್ಯವಸ್ಥೆಯು ಅಸಾಧ್ಯವೆಂದೇ ಅವುಗಳ ನಿರ್ಧಾರ.

ಇಂಡಿಯಾ ಸೆಕ್ರೆಟರಿಗಳ ಹೇಳಿಕೆ.

ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರು ದಿ. ಸಂಡೇಟೈಮ್ಸ್ ಎಂಬ ಪತ್ರಿಕೆಯಲ್ಲಿ, ಹಿಂದೀ ಪ್ರಶ್ನೆಯ ಕುರಿತೊಂದು ಹೇಳಿಕೆಯನ್ನು ಪ್ರಕಟಿಸಿ, ಕಾಂಗ್ರೆಸ್ ಮುಂದಾಳು ಸಂಪೂರ್ಣ ಸ್ವಾತಂತ್ರ್ಯವೆಂಬ ಹಠಾಗ್ರಹವುಳ್ಳವರಾಗದೆ ಆದರ್ಶದ ಉಚ್ಚ ನಿಲ್ದಾಣದಿಂದ ಕೆಳಗೆ ಭೂಮಿಗಿಳಿದು ವ್ಯವಹಾರ್ಯವಾದ ಧೋರಣೆಯುಳ್ಳವರಾಗಬೇಕೆಂದು ವಿನಂತಿ ಮಾಡಿಕೊಂಡಿರುವರು. "ಅಲ್ಪ ಸಂಖ್ಯಾಕ ಪ್ರಶ್ನೆಯನ್ನು ಹಿಂದೀಯರೇ ತಮ್ಮೊಳಗೆ ಇತ್ಯರ್ಥ ಮಾಡಿಕೊಳ್ಳಬೇಕು ಜನ ಪ್ರತಿನಿಧಿಗಳು ಸೌಹಾರ್ದತೆಯಿಂದ ಒಟ್ಟು ಸೇರಿ ಚರ್ಚಿಸಿ ಒಡಂಬಡಿಕೆ ಮಾಡಿಕೊಳ್ಳಬೇಕು. ಗಾಂಧಿ ವೈಸರಾಯ ಮಾತುಕತೆಯು ಅಷ್ಟು ಬೇಗನೆ ಕೊನೆಗೊಂಡುದು ವಿಸ್ಮಯಕರ ಹಾಗೂ ವಿಷಾದಕರವಿದೆ. ಇನ್ನಾದರೂ ದ್ವಾರವು ಮುಚ್ಚಲ್ಪಟ್ಟಿರುವುದಿಲ್ಲೆಂಬುದು ಸಂತೋಷಕರ. ಕಾಂಗ್ರೆಸ್ ಮುಖಂಡರು ತಮ್ಮ ಕೇಳಿಕೆಗಳನ್ನು ಲವಲೇಶವಾದರೂ ಕಡಿಮೆ ಮಾಡುವುದಿಲ್ಲೆಂದು ಗಾಂಧಿಯವರ ಹೇಳಿಕೆಯಿಂದ ಸ್ಪಷ್ಟವಾಗುವುದು. ಅವರ ಕೇಳಿಕೆಗಳನ್ನು ಸ್ವೀಕರಿಸಲು ಬ್ರಿಟಿಷ್ ಸರಕಾರಕ್ಕಿರುವ ತೊಡಕುಗಳನ್ನವರು ಮನಗಾಣುತ್ತಿದ್ದರೆ ಚೆನ್ನಾಗುತ್ತಿತ್ತು. ಹಿಂದೀ ರಾಜಕೀಯ ಘಟನೆಯನ್ನು ತಯಾರಿಸುವ ಜವಾಬ್ದಾರಿಯನ್ನು ಹಿಂದೀಯರಿಗೇನೇ ಬಿಟ್ಟುಬಿಟ್ಟ ಪಕ್ಷದಲ್ಲಿ, ದೇಶ ರಕ್ಷಣೆ, ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆ, ದೇಶೀಯ ರಾಜರ ಮತ್ತು ಯುರೋಪಿಯನರ ಹಿತರಕ್ಷಣೆಯೇ ಮೊದಲಾದ ಎಲ್ಲಾ ವಿಷಯಗಳು ತನ್ನಂತೆಯೇ ಇತ್ಯರ್ಥವಾಗುವವೆಂಬ ಗಾಂಧಿಯವರ ಆಶಾವಾದವನ್ನು ನಾನೊಪ್ಪಲಾರೆ. ಕಾಂಗ್ರೆಸಿನ ಪ್ರಕೃತದ ಧೋರಣೆಯಿಂದಾಗಿಯೇ ಗೌರವ ಪೂರ್ವಕವಾದ ಒಡಂಬಡಿಕೆಗೆ ಹೆಚ್ಚಿನ ತೊಡಕುಗಳುಂಟಾಗಿವೆ. ಕಾಂಗ್ರೆಸಿನವರು ಸಂಪೂರ್ಣ ಸ್ವರಾಜ್ಯವೆಂಬ ಶಬ್ದಾರಾಧಕರಾಗಿರುವುದು ಶೋಚನೀಯ. ಇದರಿಂದಾಗಿ ಅವರು ಬ್ರಿಟಿಷ್ ಸಂಬಂಧವನ್ನೇ ಕಡಿದು ಹಾಕಲೆಳಸುವರೆಂಬ ತಪ್ಪು ಭಾವನೆಯು ಇಂಗ್ಲೆಂಡಿನಲ್ಲುಂಟಾಗಿದೆ. ಹಿಂದೀಯರು ತಮ್ಮನ್ನು ತಾವೇ ಆಳುವ ಸ್ವಾತಂತ್ರ್ಯವನ್ನು ಬಯಸುವರೆಂಬುದೇನೋ ನಿಜ. ಆದರೆ ಬ್ರಿಟಿಷ್ ಸಂಬಂಧವನ್ನೇ ಕಡಿದು ಹಾಕಲು ಯಾರೂ ಆಶಿಸಲಾರರು. ಬ್ರಿಟನಿನ ಭೂ, ಜಲ ಮತ್ತು ಆಕಾಶ ಬಲದಿಂದಾಗಿ ಹಿಂದೂದೇಶವು ಈಗ ಸುರಕ್ಷಿತವಾಗಿರುವುದೆಂಬುದನ್ನು ಹಿಂದೀಯರು ಮನಗಾಣಲೇಬೇಕು. ಹಿಂದೀಯರು ಮತ್ತು ಬ್ರಿಟಿಷರೊಳಗೆ ಮಾನಸಿಕ ಸಂಬಂಧವಿದೆ. ಅದನ್ನು ಕಡಿದು ಹಾಕುವುದರಿಂದ ಎರಡು ಜನಾಂಗಕ್ಕೂ ಹೆಚ್ಚಿನ ಹಾನಿಯಿದೆ. ಈಗಿನ ಕಾಂಗ್ರೆಸಿನ ನಾಯಕರೇ ಆಂಗ್ಲೇಯ ಸಾಹಿತ್ಯ ಮತ್ತು ರಾಜಕೀಯ ಭಾವನೆಗಳಿಂದ ಸ್ಫೂರ್ತಿ ಪಡೆದವರು. ಹಿಂದೀಯರನ್ನೆಲ್ಲಾ ಒಂದುಗೂಡಿಸಿರುವುದೆಂದರೆ ಆಂಗ್ಲೇಯ ಭಾಷೆ ಆಂಗ್ಲೇಯರ ನ್ಯಾಯ ನಿಷ್ಠೆ, ಆಡಳಿತ ಶುದ್ಧತೆ, ಸುರಕ್ಷಿತತೆಯ ದೃಷ್ಟಿಯಿಂದ ಬ್ರಿಟಿಷ್ ಮತ್ತು ಹಿಂದೂಸ್ಥಾನಗಳ ಸಂಬಂಧವನ್ನು ಅಳಿಯಬೇಕೆಂದೇ ಲೋರ್ಡ್ ಜೆಟ್ಲೆಂಡರ ಹೇಳಿಕೆಯ ಸಾರಾಂಶ.

ಪಂಡಿತ ನೆಹರುಗಳ ಭಾಷಣ

ಪಂಡಿತ ಜವಾಹರಲಾಲರು ಇದೇ ತಾ. 10ರಲ್ಲು ಬೊಂಬಾಯಿಯಲ್ಲಿ ಅಖಿಲ ಮಹಾರಾಷ್ಟ್ರ ಯುವಕ ಪರಿಷತ್ತನ್ನು ತೆರೆದು ಹಿಂದೀ ತರುಣರೆಲ್ಲರೂ ಸಂಕುಚಿತ ಪ್ರಾಂತೀಯಭಾವನೆಯನ್ನು ಬಿಟ್ಟು ವಿಶಾಲ ಭಾರತದ ಮನೋವೃತ್ತಿಯುಳ್ಳವರಾಗಬೇಕೆಂದು ವಿನಂತಿ ಮಾಡಿಕೊಂಡರು. ಮತ್ತು ಒಂದಲ್ಲೊಂದು ದಿನ ಹೋರಾಟವು ಅನಿವಾರ್ಯವಾದರೂ ಪ್ರಕೃತ ಆ ಕುರಿತು ಅವಸರ ಪಡದೆ ಕಾಂಗ್ರೆಸ್ಸಿನೊಳಗಣ ದೋಷಗಳನ್ನು ನಿವಾರಿಸಿ ಅದರ ಬಲವನ್ನು ಹೆಚ್ಚಿಸಬೇಕೆಂದು ಸೂಚಿಸಿದರು.

ಇದೇ ತಾ. 11ರಲ್ಲು ಪಂಡಿತ ನೆಹರುಗಳು ಬೊಂಬಾಯಿಯ ಚೌಪಾಟಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ "ಯುದ್ಧಾರಂಭವಾದೊಡನೆಯೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ವಹಿಸಿದ ಧೋರಣೆಯನ್ನು ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ. ಅದಕ್ಕಿಂತ ಹಿಂದೆ ಸರಿಯಲು ಸಾಧ್ಯವೇ ಇಲ್ಲ. ಗಾಂಧಿ ವೈಸರಾಯ ಮಾತುಕತೆಯಿಂದ ಪ್ರಕೃತದ ಬಿಕ್ಕಟ್ಟು ಪರಿಹಾರವಾಗುವುದೆಂದು ಅನೇಕರು ಭಾವಿಸಿದ್ದರು. ಗಾಂಧಿಜಿಯವರಿಗೆ ಅಮೃತವನ್ನು ಮಾಡಲು ಸಾಧ್ಯವಿಲ್ಲ. ಇಬ್ಬರು ವ್ಯಕ್ತಿಗಳು ಒಟ್ಟು ಸೇರಿ ಅಲ್ಪವಿಷಯವೊಂದನ್ನು ಇತ್ಯರ್ಥ ಮಾಡುವಂತಿಲ್ಲದು. ಪ್ರಕೃತ ಹಿಂದೀಯರಿಗನ್ವಯಿಸುವ ಮಹತ್ವದ ವಿಷಯ. ಆ ಕುರಿತು ಕಾಂಗ್ರೆಸು ತನ್ನ ಧೋರಣೆಯನ್ನು ಸ್ಪಷ್ಟಪಡಿಸಿರುವುದು ಮಹಾತ್ಮರಿಗಾದರೂ ಅದನ್ನು ಬದಲಾಯಿಸಲು ಸಾಧ್ಯವಿಲ್ಲ ಕಾಂಗ್ರೆಸ್ಸಿನ ಕೇಳಿಕೆಗಳ ಶಬ್ದಗಳಿಂದ ಲೋರ್ಡ್ ಜೆಟ್ಲೆಂಡರು ಬೆದರಿ ಹೋಗಿರುವರು. ಅದರಲ್ಲಿ ನವೀನವಾದುದೇನೂ ಇರುವುದಿಲ್ಲ. ದಶಮಾಸಗಳಿಂದ ಕಾಂಗ್ರೆಸು ಅದನ್ನು ಉದ್ಘೋಷಿಸಿ ಅದನ್ನು ಸಾಧಿಸಬೇಕೆನ್ನುತ್ತಿರುವುದು. ಬ್ರಿಟಿಷ್ ಚಕ್ರವರ್ತಿಗಳಿಗೆ ವಿಧೇಯತೆಯನ್ನು ಸೂಚಿಸುವ ನಿರ್ಣಯವನ್ನು ಕಾಂಗ್ರೆಸು ಮಾಡುತ್ತಿದ್ದರೆ ಜೆಟ್ಲೆಂಡರಂಥವರಿಗೆ ಸಂತೋಷವಾಗುತ್ತಿತ್ತು. ಹಿಂದೂದೇಶದ ಪರಾಧೀನತೆಯಿಂದ ಪ್ರಯೋಜನಪಡೆಯುವವರನ್ನು ಸಮಾಧಾನಪಡಿಸುವುದು ಕಾಂಗ್ರೆಸ್ಸಿಗೆ ಅಸಾಧ್ಯವೇ ಸರಿ" ಎಂದರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಫೆಬ್ರವರಿ ತಾ. 28ರಲ್ಲು ಮತ್ತು ಅನಂತರದ ದಿನಗಳಲ್ಲಿ ಪಾಟ್ನದಲ್ಲಿ ನಡೆಯಲಿರುವುದು. ಬಂಗಾಳದ ಮಲಿಕಂದ ಎಂಬಲ್ಲಿಗೆ ಗಾಂಧಿ ಸೇವಾಸಂಘದ ಪರಿಷತ್ತಿಗೆ ಹೋಗುವ ಗಾಂಧಿಜಿಯವರು ಅಲ್ಲಿಂದ ಹಿಂದಿರುಗುವಾಗ ಪಾಟ್ನಕ್ಕೆ ಬಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಭಾಗವಹಿಸಿ ತಾನು ವೈಸರಾಯರೊಡನೆ ನಡಿಸಿದ ಮಾತುಕತೆಯ ವೃತ್ತಾಂತವನ್ನೆಲ್ಲಾ ಕಮಿಟಿಯ ಮುಂದಿಡುವರು. ಲೋರ್ಡ್ ಜೆಟ್ಲೆಂಡರ ಹೇಳಿಕೆಯು ಈ ಸಭೆಯಲ್ಲಿ ವಿಮರ್ಶಿಸಲ್ಪಡುವುದು ರಾಮಘರ ಕಾಂಗ್ರೆಸ್ಸಿನ ಕೆಲವು ನಿರ್ಣಯಗಳೂ ಈ ಸಭೆಯಲ್ಲಿ ಚರ್ಚಿಸಲ್ಪಡುವವು.

ಫಿನ್ಲೆಂಡಿನ ಯುದ್ಧ

ಮೆನ್ನರ್‌ಹೈಮ್ ಕೋಟೆಯನ್ನು ಮುರಿಯಲು ರಷ್ಯನರು ಇನ್ನೂ ಪ್ರಬಲ ಹೋರಾಟ ನಡೆಸುತ್ತಿರುವರು. ದಿನೇ ದಿನೇ ಅವರ ಧಾಳಿಯ ಉಗ್ರತೆಯು ಹೆಚ್ಚುತ್ತಿರುವುದು. ಫೀಲ್ಡ್ ಮಾರ್ಶಲ್ ಮೆನ್ನರ್‌ಹೈಮರು, ಲಡೋಗ ಸರೋವರದ ಉತ್ತರದ ರಣರಂಗವನ್ನು ಬಿಟ್ಟು ಕರೇಲಿಯನ್ ಭೂಖಂಡಕ್ಕೆ ಬಂದಿರುವರು. ಉತ್ತರದಲ್ಲಿ ಪುನಃ ದಟ್ಟವಾಗಿ ಮಂಜು ಬೀಳಹತ್ತಿರುವುದು.

ಹರಿಜನ ವಿದ್ಯಾರ್ಥಿಭವನ ಉದ್ಘಾಟನದ ಆಡಳಿತ ಕಮಿಟಿಯ ವಿಷಯ; ತಾರೀಕು 11-2-40ರಲ್ಲು ಶ್ರೀ. ಕೆ. ಆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಭವನದ ಕಟ್ಟಡದಲ್ಲಿ ನಡೆದ ಇಷ್ಟರವರೆಗಿನ ಕಮಿಟಿ ಮತ್ತು ಕಾರ್ಯದರ್ಶಿ ಪದಾಧಿಕಾರಿಯವರನ್ನು ತೆಗೆದುಹಾಕಿ ಶ್ರೀ. ಬಲ್ಲಾಳರನ್ನು ಅಧ್ಯಕ್ಷರಾಗಿಯೂ, ಶ್ರೀ. ಪಿ. ಅಂತಯ್ಯ ಶೆಟ್ಟರನ್ನು ಕಾರ್ಯದರ್ಶಿಯನ್ನಾಗಿಯೂ ಯು. ನಾಗಪ್ಪ ಕಾಮತರನ್ನು ಭವನದ ಸುಪರಿಂಟೆಂಡೆಂಟರನ್ನಾಗಿಯೂ ಇತರ 7 ಮಂದಿಯನ್ನು ಸದಸ್ಯರನ್ನಾಗಿಯೂ ಆರಿಸಿ ಕಮಿಟಿಯೊಂದನ್ನು ರಚಿಸಿ ನಿಧಿಸಂಗ್ರಹದ ಕಾರ್ಯವನ್ನು ಕೂಡಲೆ ಕೈಗೊಳ್ಳುವಂತೆ ನಿರ್ಣಯವಾಗಿದೆ

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 12-2-1940

ದ. ಕ. ಜಿಲ್ಲಾ ವಿದ್ಯಾರ್ಥಿಗಳ ದ್ವಿತೀಯ ಸಮ್ಮೇಳನ

ಶ್ರೀ ಮೋಹನ್ ಕುಮಾರಮಂಗಲಮ್‌ರವರು ಅಧ್ಯಕ್ಷರು— ಕಳೆದ ತಾ. 10ನೇ ಶನಿವಾರ ದಿವಸ ಕೆನರಾ ಹೈಸ್ಕೂಲಿನಲ್ಲಿ ದ. ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ದ್ವಿತೀಯ ಸಮ್ಮೇಳನವು ಮದ್ರಾಸ್ ಸರಕಾರದ ಮಾಜಿ ನ್ಯಾಯಮಂತ್ರಿಗಳಾದ ಡಾ| ಸುಬ್ಬರಾಯನವರ ಕುಮಾರರಾದ ಶ್ರೀ ಮೋಹನ್ ಕುಮಾರಮಂಗಲಮ್‌ರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು.

ತಾ 10ನೇ ಪ್ರಾತಃಕಾಲ ವಿದ್ಯಾರ್ಥಿ ಸಂಘದ ಕಚೇರಿಯಿಂದ ಪ್ರಭಾತ ಫೇರಿ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ 8 ಘಂಟೆಗೆ ಕೆನರಾ ಹೈಸ್ಕೂಲಿನ ವಠಾರಕ್ಕೆ ಬಂದು ಮುಟ್ಟಿತು. ಅಲ್ಲಿ ಧ್ವಜವಂದನೆಯು ನಡೆಯಿತು. ವಿದ್ವಾನ್ ಕೈಯ್ಯಾರ ಕಿಂಞಣ್ಣ ರೈಗಳವರು ರಾಷ್ಟ್ರಧ್ವಜವನ್ನೇರಿಸಿ ರಾಷ್ಟ್ರಧ್ವಜದ ಮಹತ್ವದ ಕುರಿತು ಒಂದು ಚಿಕ್ಕ ಭಾಷಣವನ್ನು ಮಾಡಿದರು.

ಅಂದೇ ಸಾಯಂಕಾಲ ಐದು ಘಂಟೆಗೆ ಅಧ್ಯಕ್ಷರ ಮೆರವಣಿಗೆಯು ವಿದ್ಯಾರ್ಥಿ ಸಂಘದ ಕಚೇರಿಯಿಂದ ಹೊರಟಿತು. ನಗರದ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಸುಮಾರು 6 ಘಂಟೆಗೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನಕ್ಕೆ ಬಂದು ಮುಟ್ಟಿತು. ಅಲ್ಲಿ ಪ್ರಾರ್ಥನೆಯಾದ ತರುವಾಯ ಶ್ರೀ| ಕೆ. ಬಿ. ಜಿನರಾಜ ಹೆಗ್ಗಡೆ ಯಂ. ಎಲ್. ಎ. (ಕೇಂದ್ರ) ಯವರಿಂದ ಪರಿಷತ್ತಿನ ಉದ್ಘಾಟನಾ ಸಮಾರಂಭವು ನೆರವೇರಿತು. ರಾಷ್ಟ್ರೀಯ ಜೀವನದಲ್ಲಿ ವಿದ್ಯಾರ್ಥಿಗಳ ಸ್ಥಾನ, ಅವರು ದೇಶದ ಸ್ವಾತಂತ್ರ್ಯ ಮತ್ತು ಆರ್ಥಿಕ ಅಭಿವೃದ್ಧಿಯ ಕೆಲಸಗಳಲ್ಲಿ ವಹಿಸಬೇಕಾದ ಭಾಗ ಇತ್ಯಾದಿ ವಿಷಯಗಳಲ್ಲಿ ಉಪಯುಕ್ತ ಸಲಹೆಗಳನ್ನಿತ್ತು, ಭಾಷಣ ಮಾಡಿ ಪರಿಷತ್ತಿಗೆ ಸರ್ವ ಸನ್ಮಂಗಳಗಳಾಗಲೆಂದು ಹರಸಿ ಉದ್ಘಾಟನೆಯನ್ನು ನೆರವೇರಿಸಿದರು. ಅನಂತರ ಸ್ವಾಗತಾಧ್ಯಕ್ಷರಾದ ಶ್ರೀ| ಬಿ. ಎಸ್. ಭಾಸ್ಕರ ರೈಗಳು ತಮ್ಮ ಭಾಷಣ ಮಾಡುತ್ತಾ ದ. ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳ ಸಂಸ್ಥೆಗಳ ಹಿಂದಿನ ಮತ್ತು ಇಂದಿನ ಸ್ಥಿತಿಗತಿಗಳನ್ನು ವಿವರಿಸಿ, ಇಂದು ಸಂಸ್ಥೆಗಳೇ ಚೆನ್ನಾಗಿ ಬಲಹೊಂದಿವೆಯೆಂದೂ, ಈ ಮಹತ್ಕಾರ್ಯಕ್ಕೆ ಹಿಂದಿನ ವರ್ಷಗಳಲ್ಲಿ ದುಡಿದ ವಿದ್ಯಾರ್ಥಿ ಮುಖಂಡರು ಮುಖ್ಯಕಾರಣವೆಂದೂ ಹೇಳಿದರು.

ವಿದ್ಯಾರ್ಥಿಗಳು ದೇಶದ ಸ್ವಾತಂತ್ರ್ಯದ ಚಳವಳಿಯಲ್ಲಿಯೂ ಭಾಗವಹಿಸಬೇಕಾಗಿದೆಯೆಂದೂ, ಬರೆ ಪುಸ್ತಕಗಳನ್ನೋದಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರೆ ಸಾಕಾಗಲಾರದೆಂದೂ, ಆದರೂ ವಿದ್ಯಾರ್ಥಿಗಳು ತಮ್ಮ ಪ್ರಧಾನ ಕರ್ತವ್ಯವಾದ ಓದುವಿಕೆಯನ್ನು ಮರೆತೊತ್ತಲು ಸಾಧ್ಯವಿಲ್ಲವೆಂದೂ ಹೇಳಿದರು. ರಾಷ್ಟ್ರೀಯ ಚಳವಳಿಯ ಅಂಗವಾದ ರಚನಾತ್ಮಕ ಕೆಲಸಗಳಲ್ಲಿ ವಿದ್ಯಾರ್ಥಿಗಳು ಯಾವ ಪ್ರಕಾರ ಆಸಕ್ತಿ ತೋರಿಸಲು ಸಾಧ್ಯವಿದೆಯೆಂಬುದನ್ನು ತಿಳಿಸಿ, ನಿರಕ್ಷರತೆಯನ್ನು ಹೋಗಲಾಡಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಕೆಲಸ ಮಾಡಬಹುದೆಂಬುದನ್ನು ವಿವರಿಸಿದರು. "ಹಳ್ಳಿಯ ರೈತರು ನಮ್ಮ ವಿದ್ಯಾಭ್ಯಾಸಕ್ಕಾಗಿ ಹಣವನ್ನು ತೆರುತ್ತಾರೆ, ಆಂತಹ ಹಳ್ಳಿಯವರ ಉದ್ಧಾರಕ್ಕಾಗಿ ಅವರಲ್ಲಿ ವಿದ್ಯೆಯ ಬೆಳಕನ್ನು ಹರಡುವದಕ್ಕಾಗಿ ನಾವು ಪ್ರಯತ್ನಿಸುವದು ಕರ್ತವ್ಯವಲ್ಲವೆ?" ಎಂದು ಪ್ರಶ್ನಿಸಿದರು.

ರಾಷ್ಟ್ರೀಯ ಮುಖಂಡರಲ್ಲಿರುವ ಭೇದಗಳು, ರಾಷ್ಟ್ರಸಭೆಯ ನಾಯಕರಲ್ಲಿರುವ ಒಳ ಜಗಳಗಳು—ಇವುಗಳ ವಿಷಯವಾಗಿ ಹೇಳುತ್ತಾ ವ್ಯಕ್ತಿಕರಾಗಿ ನಾವು ಧುರೀಣರುಗಳನ್ನು ಅನುಸರಿಸ ಬಾರದು ಸರಿಯಲ್ಲವೆಂದೂ, ರಾಷ್ಟ್ರಸಭೆಯು ಯಾವ ರೀತಿಯಲ್ಲಿ ನಿರ್ಧರಿಸುತ್ತದೋ ಅದರಂತೆ ನಡೆಯುವುದು ಉತ್ತಮವೆಂದೂ ಹೇಳಿದರು.

ವಿದ್ಯಾರ್ಥಿನಿಯರನ್ನು ಕುರಿತು ಹೇಳುತ್ತಾ ವಿದ್ಯಾರ್ಥಿನಿಯರು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿ ಸಂಘಗಳನ್ನು ಸೇರಿ ಅವನ್ನು ಬಲಪಡಿಸುವದು ಅಗತ್ಯವಿದೆಯೆಂದೂ, ಉತ್ತರ ದೇಶದಲ್ಲಿ ವಿದ್ಯಾರ್ಥಿನಿಯರು ತಮ್ಮ ಪರಿಷತ್ತುಗಳನ್ನು ಜರಗಿಸುವವರೆಂದೂ, ಅವರಿಗಿಂತ ನಮ್ಮ ಜಿಲ್ಲೆಯ ವಿದ್ಯಾರ್ಥಿನಿಯರು ಹಿಂದೆ ಬೀಳಬಾರದೆಂದೂ ಹೇಳಿದರು.

ಕೊನೆಗೆ ಮತ್ತೊಂದು ಬಾರಿ ಪ್ರತಿನಿಧಿಗಳಿಗೂ ಅಧ್ಯಕ್ಷರಿಗೂ ಸ್ವಾಗತವನ್ನು ಬಯಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರ ಭಾಷಣ

"ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯಿರಿ"—ಶ್ರೀ. ಮೋಹನ್ ಕುಮಾರಮಂಗಲಂರವರು ತಮ್ಮ ಭಾಷಣವನ್ನಾರಂಭಿಸುತ್ತಾ ಪ್ರಕೃತ ಯುರೋಪಿನಲ್ಲಿ ನಡೆಯುವ ಯುದ್ಧದ ವಿಷಯವಾಗಿ ಪ್ರಸ್ತಾಪಿಸಿ, ಈ ಯುದ್ಧವು ಪ್ರಜಾಪ್ರಭುತ್ವ, ಒಹು ಮತ ಸರಕಾರ ಪದ್ಧತಿಯ ತತ್ವಗಳ ಪಾಲನೆಗಾಗಿ ಹೂಡಲಾಗಿದೆಯೆಂದು ಕೆಲವರು ಹೇಳುವರಾದರೂ, ಇದರ ನಿಜಸ್ಥಿತಿಯು ಹಾಗಲ್ಲವೆಂದೂ ಈಗ ಜರ್ಮನಿಯನ್ನೆದುರಿಸುವ ಮಿತ್ರಪಕ್ಷದವರು ಧನಸಹಾಯ ಮಾಡಿ ಜರ್ಮನಿಯಲ್ಲಿ ಯುದ್ಧಸಾಮಗ್ರಿಗಳ ಕಾರ್ಖಾನೆಗಳನ್ನು ವೃದ್ಧಿಪಡಿಸಲು ಸಹಾಯಮಾಡಿದರೆಂದೂ, ಜರ್ಮನಿ ರಷ್ಯಗಳೊಳಗೆ ಪರಸ್ಪರ ಜಗಳವಾಗುವಂತೆ ಈ ರಾಷ್ಟ್ರಗಳು ಪ್ರಯತ್ನಿಸಿದುವೆಂದೂ, ಈಗ ಯುರೋಪಿನ ಮುಂದಾಳುತನವನ್ನು ಇವು ತಮ್ಮ ವಶಕ್ಕೆ ಬರುವಂತೆ ಮಾಡಲು ಹೋರಾಟಕ್ಕೆ ಇಳಿದಿವೆಯೆಂದೂ ಹೇಳಿದರು.

ಯುದ್ಧದಿಂದ ಬಾಧಿತರಾಗುವವರು ತರುಣರೆಂದು ಸೂಚಿಸುತ್ತಾ, ಜರ್ಮನಿ ಇಂಗ್ಲೆಂಡ್ ಫ್ರಾನ್ಸ್‌ಗಳ ಯುವಕರು ಯುದ್ಧಕ್ಕೆ ವಿರೋಧಿಗಳಾಗಿದ್ದಾರೆಂದೂ ಹಿಂದೀ ಯುವಕರೂ ಕೂಡ ಯುದ್ಧವನ್ನು ನಿಲ್ಲಿಸಲು ತಮ್ಮ ಕೈಲಾದ ಮಟ್ಟಿಗೆ ಪ್ರಯತ್ನಿಸಬೇಕೆಂದೂ ಹೇಳಿದರು.

ವಿದ್ಯಾಪ್ರಸಾರದ ಕಾರ್ಯವನ್ನು ವಿದ್ಯಾರ್ಥಿಗಳು ಕೈಕೊಳ್ಳಬೇಕೆಂದೂ, ರಜಾಕಾಲದಲ್ಲಿ ಈ ಕೆಲಸವನ್ನು ಕೈಕೊಳ್ಳಬಹುದೆಂದೂ, ನೂರಕ್ಕೆ 92 ಮಂದಿ ನಿರಕ್ಷರರಾಗಿರುವರೆಂದೂ, ಅವರಿಗೆ ಅಕ್ಷರಾಭ್ಯಾಸ ಮಾಡಿಸುವುದು ಸಾಕ್ಷರರಾದ ನೂರಕ್ಕೆ 8ರಷ್ಟು ಜನರ ಕರ್ತವ್ಯವೆಂದೂ ಹೇಳಿದರು.

ವಿದ್ಯಾರ್ಥಿಗಳು ಸ್ವಯಂ ಸೇವಕ ದಳವನ್ನು ರಚಿಸಬೇಕೆಂದೂ, ಸುಶಿಕ್ಷಿತರಿಂದಲೂ, ಶಿಸ್ತು ಪಾಲಿಸುವವರಿಂದಲೂ ಕೂಡಿದ ಸ್ವಯಂ ಸೇವಕ ದಳದಿಂದ ದೇಶದ ಸ್ವಾತಂತ್ರ್ಯದ ಚಳವಳಿಗೆ ಬಹಳ ಅನುಕೂಲವಿದೆಯೆಂದೂ ಭರತಖಂಡದ ರಾಜಕೀಯ ಪಕ್ಷಗಳ ವಿಷಯವನ್ನೆತ್ತಿಕೊಂಡು ಹೇಳುತ್ತಾ ದೇಶದ ರೈತರಿಗೆ ಊಟಕ್ಕೆ ಬೇಕಾದಷ್ಟು ದೊರೆಯಬೇಕು. ಕೂಲಿಗಾರರಿಗೆ ನ್ಯಾಯವಾದ ಸಂಬಳವಲ್ಲದೆ ನ್ಯಾಯವಾದಷ್ಟು ಕೆಲಸದ ಸಮಯ; ವಿದ್ಯಾಭ್ಯಾಸ ಮುಗಿದ ಕೂಡಲೆ ದೇಶದ ಸೇವೆಯನ್ನು ಮಾಡಲು ಅವಕಾಶ ಇವುಗಳು ಸಕಲರಿಗೂ ದೊರೆಯಬೇಕಲ್ಲದೆ ದೇಶದ ಕೈಗಾರಿಕೆ ವ್ಯಾಪಾರ ಅಭಿವೃದ್ಧಿ ಮಾಡಲು ಅವಕಾಶವೂ ದೊರೆಯಬೇಕು, ಎಂದರು.

ಕೊನೆಯದಾಗಿ ವಿದ್ಯಾರ್ಥಿಗಳನ್ನುದ್ದೇಶಿಸಿ ವಿದ್ಯಾರ್ಥಿಗಳು ಬರೇ ಗುಲ್ಲೆಬ್ಬಿಸುವವರು, ಮುಷ್ಕರ ಹೂಡುವವರು ಎಂಬ ಅಪವಾದಗಳಿಗೆ ಗುರಿಯಾಗಿದ್ದಾರೆ. ಅಂತಹ ಅಪವಾದಗಳಿಗೆ ಎಡೆದೊರೆಯದಂತೆ ವರ್ತಿಸುವುದು ವಿದ್ಯಾರ್ಥಿಗಳ ಕರ್ತವ್ಯವೆಂದು ಹೇಳಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಎರಡನೆಯ ದಿನ (ನಿನ್ನೆ) ಪ್ರಭಾತಫೇರಿ ಇತ್ಯಾದಿಗಳು ನಡೆದು, ಮುಂಚಿನ ದಿವಸದಲ್ಲಿ ವಿಷಯನಿಯಾಮಕ ಸಮಿತಿಯವರಿಂದ ಪರಿಶೀಲಿಸಲ್ಪಟ್ಟ ಮಹಾಸಭೆಯ ಮುಂದೆ ಬಂದ ಠರಾವುಗಳ ಮೇಲೆ ಚರ್ಚೆ ನಡೆದು ಮಂಜೂರಾದುವು. ಅನಂತರ ಅಧ್ಯಕ್ಷರ ಮುಕ್ತಾಯ ಭಾಷಣವಾಯಿತು. ಸಾಯಂಕಾಲ ವಿವಿಧ ವಿನೋದಾವಳಿ, ಸ್ಪರ್ಧೆ ಇವು ನಡೆದುವು.

ಉಡುಪಿ

ಶ್ರೀ ಯು ರಾಘವೇಂದ್ರ ಆಚಾರ್ಯರು (ಬಿ. ಎಸ್. ಸಿ. ಓನರ್ಸ್)— ಉಡುಪಿಯವರಾದ ಇವರು ಮದ್ರಾಸಿನ ಲೋಯೊಲ ಕೋಲೇಜಿನ ಪದಾರ್ಥ ವಿಜ್ಞಾನದ ಪ್ರೊಫೆಸರಾಗಿರುವರು. ನವಯುಗದ ಕಳೆದ ಪರ್ಯಾಯ ಸಂಚಿಕೆಯಲ್ಲಿ 'ಕಬ್ಬಿಣವು ಚಿನ್ನವಾದೀತೇ?' ಎಂಬ ವಿಚಾರಕರ ಲೇಖನ ಬರೆದಿರುವರು. ಎಕ್ಸ್ ರೇ ಕಿರಣದ ಕುರಿತು ಇವರು ಕನ್ನಡದಲ್ಲಿ ಪ್ರಕಟಿಸಿರುವ ಪುಸ್ತಕಕ್ಕೆ ಮದ್ರಾಸ್ ವಿಶ್ವವಿದ್ಯಾಲಯದವರು ರೂ. 750ರ ಪಾರಿತೋಷಕವಿತ್ತಿರುವರೆಂಬುದು ಅಭಿನಂದನೀಯವಿದೆ. ವಿಜ್ಞಾನದ ಕುರಿತು ಕನ್ನಡದಲ್ಲಿ ಗ್ರಂಥಗಳೇ ಕಡಿಮೆ. ಶ್ರೀಯುತರು ಇದೇ ರೀತಿ ಕನ್ನಡದ ಸೇವೆ ಮಾಡಿ ಕನ್ನಡ ವಾಙ್ಮಯದ ದೊಡ್ಡ ಕೊರತೆಯೊಂದನ್ನು ನಿವಾರಿಸಲೆಂದು ಹಾರೈಸುತ್ತೇವೆ.

ಮಾನಪತ್ರ—ತಾ 12ನೇ ರಾತ್ರಿ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಉಡುಪಿ ಪುರಜನರ ಮಹಾಸಭೆಯೊಂದು ನಡೆದು ಶ್ರೀ ಹರಿಕೀರ್ತನ ಶಿರೋಮಣಿ ರಾಮಶಾಸ್ತ್ರಿ ಮುಳಗುಂದಕರ ಇವರಿಗೆ ಶ್ರೀಮದದಮಾರು ಮಠದ ಶ್ರೀಮದ್ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರು ಕೀರ್ತನ ಕಂಠೀರವ ಎಂಬ ಬಿರುದು ಸಹಿತವಾಗಿ ಮಾನಪತ್ರವನ್ನಿತ್ತು ಸನ್ಮಾನಿಸಿದರು. ಪಂಡಿತ ವೆಂಕಟ್ರಮಣಾಚಾರ್ಯರು ಈ ಸಂದರ್ಭದಲ್ಲಿ ಕೀರ್ತನಕಾರರ ಕಥಾವಸ್ತುಗಳ ನವೀನತೆ, ಅನುವಾದದ ಭವ್ಯತೆ ಮತ್ತು ಸಂಗೀತ ಪ್ರಾವೀಣ್ಯತೆಯ ಕುರಿತು ಮೆಚ್ಚುಗೆ ಸೂಚಿಸಿ ಭಾಷಣವಿತ್ತರು. ಶ್ರೀ. ಮುಳಗುಂದಕರರು ಉಡುಪಿಗೆ ಬಂದು ಒಂದು ತಿಂಗಳಿಂದ ಕೀರ್ತನೆ ಮಾಡಿರುವರು. ಕಳೆದ 8 ದಿನಗಳಿಂದ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಹರಿಕೀರ್ತನೆ ನಡಿಸಿ ತಾ. 12ರಲ್ಲಿ ಅದರ ಮಂಗಳವಾಯಿತು. ಇವರು ಮುಂದಕ್ಕೆ ಕಾರ್ಕಳಕ್ಕೆ ಹೊರಟು ಹೋಗಲಿರುವರು.

ರೇಡಿಯೋ ಮಂದಿರ—ಶ್ರೀ. ವಿಟ್ಠಲ ಶಾಂತಾರಾಮ ಕುಲಕರ್ಣಿಯವರು ತಮ್ಮ ತಂದೆಯವರಾದ ದಿವಂಗತ ಶ್ರೀ. ಶಾಂತಾರಾಮ ಮಂಗೇಶ ಕುಲಕರ್ಣಿಯವರ ಸ್ಮಾರಕವಾಗಿ ಮಂಗಳೂರು ನಾಗರಿಕರ ಉಪಯೋಗಾರ್ಥವಾಗಿ ಧರ್ಮಾರ್ಥ ಕಟ್ಟಿಸಿಕೊಟ್ಟ ರೇಡಿಯೋ ಮಂದಿರದ ಉದ್ಘಾಟನಾ ಸಮಾರಂಭವು ಮಂಗಳೂರಿನ ಪ್ರಮುಖ ಜಿಲ್ಲೋಕರಿಂದ ಕಳೆದ ತಾ. 6ರಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ. ವಿಟ್ಠಲ ಶಾಂತಾರಾಮ ಕುಲಕರ್ಣಿಯವರ ಧರ್ಮಬುದ್ಧಿಯನ್ನು ಪ್ರಶಂಸಿಸಿ ಶ್ರೀಗಳಾದ ಡಾ. ವಿಟ್ಠಲ ಶೆಟ್ಟಿರು ಎಸ್. ಎ. ಘಟಿಕಾರರು, ಬಿ. ಅನಂತ ರಾಯರು, ಯಂ. ಮಾಧವ ರಾಯರು ಮತ್ತು ಶ್ರೀಮತಿ ಲೀಲಾಬಾಯಿಯವರು ಮಾತಾಡಿದರು. ಮಾನ್ಯ ಜಿಲ್ಲೋಕರು ದಾನಶೂರ ಕುಲಕರ್ಣಿಯವರನ್ನು ಪ್ರಶಂಸಿಸಿ, ಮಂದಿರದ ಉದ್ಘಾಟನೆಯನ್ನು ನೆರವೇರಿಸಿದರು. ನಗರ ಸಭಾಧ್ಯಕ್ಷರು ನಗರಸಭೆಯ ಹೆಸರಲ್ಲಿ ರೇಡಿಯೋ ಮಂದಿರವನ್ನು ಸ್ವೀಕರಿಸಿದರು. ಶ್ರೀ. ವಿಟ್ಠಲ ಶಾಂತಾರಾಮ ಕುಲಕರ್ಣಿಯವರು ಕೃತಜ್ಞತೆಯನ್ನು ಸೂಚಿಸಿದ ಮೇಲೆ ಸಮಾರಂಭವು ಮುಕ್ತಾಯವಾಯಿತು.

ಶ್ರೀ ಕೆ. ಗೋಪಾಲರಾಯರ ಭಾವಚಿತ್ರ ಅನಾವರಣ—ಮಂಗಳೂರು ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತ್ಯುತ್ಸವವು ತಾ. 10ನೇ ಸಾಯಂಕಾಲ ಯಶಸ್ವಿಯಾಗಿ ಜರಗಿತು. ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಯು. ಕಣ್ಣಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳ ಸರ್ವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವ ಮತ್ತು ನೊನ್ನೆ ತಾನೆ ಕೆಲಸದಿಂದ ನಿವೃತ್ತರಾದ ಶ್ರೀ. ಕೆ. ಗೋಪಾಲ ರಾವ್ ಬಿ. ಎ. ಎಲ್. ಟಿ. ಯವರ ಭಾವಚಿತ್ರದ ಅನಾವರಣೋತ್ಸವವೂ ಅಧ್ಯಕ್ಷರಿಂದ ನೆರವೇರಿಸಲ್ಪಟ್ಟಿತು. ಪಟವನ್ನು ಅನಾವರಣ ಮಾಡುತ್ತಾ ಅಧ್ಯಕ್ಷರು ಶ್ರೀ. ರಾಯರ ಗುಣಗಾನ ಮಾಡಿದರು. ಶ್ರೀ. ರಾಯರು ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಅನಂತರ ಇತರ ಕಾರ್ಯಕಲಾಪಗಳು ನೆರವೇರಿದುವು.

ಫಲಿಮಾರು—ಆತಿ ಯಶಸ್ಸಿನಿಂದ ಪರ್ಯಾಯವನ್ನು ತಮ್ಮ ಇಲ್ಲಿಯ ಫಲಿಮಾರು ಮಠವನ್ನು ಪ್ರವೇಶಿಸುವ ಶ್ರೀ ಶ್ರೀಪಾದಂಗಳವರನ್ನು ಇದೇ ಕಳೆದ ತಾ. 9ರಲ್ಲಿ ಸಂಜೆ ಗಂಟೆ 5ಕ್ಕೆ ಊರ ಪರವೂರ ಸಾವಿರಾರು ಜನರು ಮೆರವಣಿಗೆಯಿಂದ ಇದಿರುಗೊಂಡು ಮಹಾ ವೈಭವದಿಂದ ಗ್ರಾಮದ ಶ್ರೀ ರುದ್ರದೇವರ ಸಂದರ್ಶನಪೂರ್ವಕ ಮಠಕ್ಕೆ ಕರೆದೊಯ್ದರು. ಶ್ರೀ ಮಠದಲ್ಲಿ ಚಿಕ್ಕಿರಿದು ನೆರೆದಿದ್ದ ಮಹಾಸಭೆಯಲ್ಲಿ ಊರ ಪರವೂರ ಜನರು ತಮ್ಮನ್ನು ಪರ್ಯಾಯ ಇದಿರಿನಲ್ಲೂ ಈಗಲೂ ತನುಮನಧನಗಳರ್ಪಣೆಗಳ ಮೂಲಕ ಪ್ರೋತ್ಸಾಹಿಸಿದುದಕ್ಕೆ ಆನಂದಾನಂದಭರಿತರಾದ ಶ್ರೀ ಶ್ರೀಗಳವರ್ ಮುದ್ರಿತವಾದ ಆಶೀರ್ವಾದ ಪತ್ರಿವನ್ನು ಅವರ ಕಡೆಯಿಂದ ಉಡುಪಿ ಕ್ರಿಶ್ಚನ್ ಹೈಸ್ಕೂಲ್ ಕನ್ನಡಪಂಡಿತರಾದ ಶ್ರೀಯುತ ವೆಂಕಟ್ರಮಣಾಚಾರ್ಯರು ಓದಿ ಹೇಳಿ ಭಾಷಣವನ್ನಿತ್ತರು. ಗ್ರಾಮಸ್ಥರು ತಮ್ಮನ್ನು ಅನುಗ್ರಹಿಸಬೇಕೆಂಬ ಮುದ್ರಿತವಾದ ಪ್ರಾರ್ಥನಾಪತ್ರವನ್ನು ಓದಿಹೇಳಿ ಶ್ರೀಗಳವರ ಅಡಿದಾವರೆಗಳಲ್ಲಿ ನಿವೇದಿಸಿದರು. ಅನಂತರ ಶ್ರೀ ಶ್ರೀಗಳವರು ಬಂದ ಮಂದಿಗೆ ಆನಂದದಿಂದ ಮಂತ್ರಾಕ್ಷತ ಪ್ರಸಾದವನ್ನಿತ್ತು ಹರಸಿ ಕಳುಹಿಸಿದರು.

ತಾ. 10ನೇ ದಿನ ಸಂಜೆ ಗಂಟೆ 4ರಿಂದ 6ರವರೆಗೆ ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಶ್ರೀಯುತ ವೆಂಕಟ್ರಮಣಾಚಾರ್ಯರು ಶ್ರೀ ಮಧ್ವಾಚಾರ್ಯರ ಸೂಕ್ಷ್ಮ ತತ್ವವಿಚಾರವನ್ನು ಬಾಲಕರಿಗೂ ತಿಳಿಯುವಂತೆ ಜನಮನರಂಜಕವಾಗಿ ಉಪನ್ಯಾಸ ಮಾಡಿದರು. ಆ ದಿನ ರಾತ್ರೆ ಹಿರಿಯಡ್ಕ ಮೇಳದವರ ದಶಾವತಾರ ಆಟವೂ ಇತ್ತು.

ಕಾರ್ಕಳ—ಸ್ಥಳೀಯ ಬೋರ್ಡ್ ಹೈಸ್ಕೂಲಿನ ವರ್ಧಂತಿ ಉತ್ಸವವು ತಾ. 10-2-1940ರ ದಿನ ಡಾಕ್ಟರ್ ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಲೋರೆನ್ಸ್ ಪೀಟರ್ ನಜರತ ಬಿ. ಎ. ಬಿ. ಟಿ. ಯವರು ಶಾಲೆಯ ಸ್ಥಿತಿವಾಚನ ಮಾಡಿದರು. ಶಾಲೆಯು ಉತ್ಕೃಷ್ಟತೆಯ ಅಭಿವೃದ್ಧಿಯನ್ನು ಹೊಂದುತ್ತಿರುವದು ವರದಿಯಿಂದ ಗೊತ್ತಾಗುತ್ತದೆ. ಶ್ರೀ. ಕೆ. ಪಿ. ಶೇಷಗಿರಿ ಪ್ರಭುಗಳವರು ಶಾಲೆಗೆ ಒಂದು ಭವ್ಯವಾದ ಸಭಾಭವನವನ್ನು ಕಟ್ಟಿಸಿಕೊಡುವ ವಾಗ್ದಾನ ಮಾಡಿದ್ದಾರೆ. ಅಧ್ಯಕ್ಷ ಭಾಷಣವಾದ ಬಳಿಕ ವಿವಿಧ ವಿನೋದಾವಳಿ ಇದ್ದಿತು.

ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಫೆಬ್ರವರಿ ತಿಂಗಳ ಸಭೆಯು ತಾ. 3-2-1940ರ ದಿನ ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ. ಬಿ. ವಿ. ರಮಣ ಬಿ. ಎ. ಯಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಕೂಡಿ ಶ್ರೀ. ಯಸ್. ರಾಮಕಾಮತರ ಸಂಗೀತದಲ್ಲಿ ಪ್ರದರ್ಶನಪೂರ್ವ ಶ್ರೀಗಳಾದ ಯಸ್. ಭಾಸ್ಕರ ರಾವ್ ಮತ್ತು ಕಡಬಾಡಿ ಶ್ರೀನಿವಾಸ ಶೆಣೈಯವರು ಶಾಲೆಗಳಲ್ಲಿ ಪುಸ್ತಕಾಲಯಗಳು ಹಾಗೂ ಶಿಕ್ಷಣಕ್ರಮದಲ್ಲಿ ಕಲೆ ಕೈಗಾರಿಕೆಗಳ ಸ್ಥಾನದ ಕುರಿತು ಭಾಷಣಗಳು ಆದುವು. ಮಾರ್ಚ್ ತಿಂಗಳಲ್ಲಿ ಕೇಂದ್ರ ದಿನವನ್ನಾಚರಿಸುವ ಬಗ್ಗೆ ಒಂದು ಕಮಿಟಿಯು ಸ್ಥಾಪಿಸಲ್ಪಟ್ಟಿತು.

ಬೋರ್ಡ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ. ವೆಂಕಟ್ರಮಣ ರಾಯರು ಕುಂದಾಪುರಕ್ಕೂ ಅಲ್ಲಿಂದ ಶ್ರೀ. ಬಿ. ಯಸ್. ರಾವ್ ಕಾಳಾರವರು ಇಲ್ಲಿಗೂ, ಶ್ರೀ. ಪಿ. ಯಂ. ಕುಡುಬಿ ಬಿ. ಎ. ಯಲ್. ಟಿ. ಯವರು ಪುತ್ತೂರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಸುಳ್ಯ—ಇಲ್ಲಿಯ ಲೇಬರ್ ಶಾಲೆಗೆ ಬರುವ ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಊಟ ಮತ್ತು ವಸ್ತ್ರದ ಪೂರೈಕೆಗಳನ್ನು ಒದಗಿಸುವರೆ ಸ್ಥಾಪಿತವಾದ ಲೇಬರ್ ಶಾಲಾ ಕಮಿಟಿಯ ಸಭೆಯು ತಾ. ೨-೩-೪೦ರಲ್ಲಿ ಜರಗಿ ಮಹಾಜನರಿಂದ ಧನ ಸಹಾಯ ಬೇಡಬೇಕಾಗಿ ನಿಶ್ಚಯಿಸಲಾಗಿದೆ.

ಹಿಂದೀಯರ ಖಾನೇಶುಮಾರಿ

ಹಿಂದೀಯರ ಖಾನೇಶುಮಾರಿಯು 1941ನೇ ಇಸ್ವಿಯಲ್ಲಿ ನಡೆಸಲ್ಪಡುವುದು. ಅದಕ್ಕೀಗ ಬೇಕಾದ ಸಿದ್ಧತೆಯೆಲ್ಲಾ ನಡೆಯುತ್ತಿರುವುದು. 1931ನೇ ಖಾನೇಶುಮಾರಿಯಲ್ಲಿ ಹಿಂದೀ ಜನಸಂಖ್ಯೆಯು 352,000,000ವಾಗಿದ್ದಿತು. 1941ರಲ್ಲಿ ಈ ಜನಸಂಖ್ಯೆಯು 400000000ಮಿಕ್ಕೀರಲಿರುವುದೆಂದು ನಿರೀಕ್ಷಿಸಲಾಗಿದೆ. 1872ರಲ್ಲಿ ಹಿಂದುದೇಶದಲ್ಲಿ ಪ್ರಥಮ ಖಾನೇಶುಮಾರಿಯು ನಡೆಯಿತು. ಅಂದಿನಿಂದ ನಡೆಸಲ್ಪಟ್ಟಿರುವ ಬೇರೆಬೇರೆ ಖಾನೇಶುಮಾರಿಗಳಲ್ಲಿ, ಹಿಂದು ದೇಶದಲ್ಲುಂಟಾಗತಕ್ಕ ಕ್ಷಾಮ ರೋಗರುಜೆಗಳ ಮೇರೆಗೆ ಜನಸಂಖ್ಯೆಯ ಪ್ರಮಾಣವು ಹೆಚ್ಚುಕಡಿಮೆಯಾಗಿದ್ದಿತು. ಕಳೆದ 18 ವರ್ಷಗಳಿಂದ ಹಿಂದೂದೇಶದಲ್ಲಿ ಭಯಂಕರ ಕ್ಷಾಮ ಡಾಮರಗಳಾಗಲಿ, ಸಾಂಕ್ರಮಿಕರೋಗಗಳಾಗಲಿ ಉಂಟಾಗುವುದಿಲ್ಲ. 1920ರಿಂದ 31ರವರೆಗಣ ದಶಮಾನದಲ್ಲಿ ಹಿಂದೀ ಜನಸಂಖ್ಯೆಯು ನೇಕಡಾ 10ರಷ್ಟು ಹೆಚ್ಚಾಗಿತ್ತು. 1931-41ರಲ್ಲಿ ಕಡಿಮೆಯೆಂದರೆ ನೇಕಡ 13ರಷ್ಟು ಹೆಚ್ಚಬಹುದೆಂದು ಅಂದಾಜು ಮಾಡಲಾಗಿದೆ. ಕಳೆದ 60 ವರ್ಷಗಳಲ್ಲಿ ಯಾವ ದಶಮಾನದಲ್ಲಾದರೂ ಇಷ್ಟೊಂದು ಜನ ಹೆಚ್ಚಿರುವುದಿಲ್ಲ. ಖಾನೇಶುಮಾರಿಗೆ ರೂ. 12 ಲಕ್ಷ ವೆಚ್ಚ ತಗಲುವುದೆಂದೂ, ಒಟ್ಟು ವೆಚ್ಚ ರೂ. 60 ಲಕ್ಷವಾಗುವುದೆಂದೂ ಅಂದಾಜು ಮಾಡಲಾಗಿದೆ.

ಚೀನಾ ಜಪಾನ ಯುದ್ಧ

ದಕ್ಷಿಣ ಕ್ವಾಂಗ್ಸಿಯಲ್ಲಿರುವ ಜಪಾನ ಸೇನೆಯು ನಾನ್ನಿಂಗ್, ಪಟ್ಟಣಕ್ಕಿಂತ 60 ಮೈಲು ಉತ್ತರಕ್ಕೆ ಮುಂದೊತ್ತಿದೆ. ನಾನ್ನಿಂಗಿನ ಈಶಾನ್ಯದಲ್ಲಿ ಚೀನೀ ಸೈನಿಕರು ಜಪಾನರ ಮುಖ್ಯ ಸೇನೆಯನ್ನು ತಡೆಗಟ್ಟಿರುವರು. ಚೀನೀರಾಷ್ಟ್ರೀಯ ಸರಕಾರದೊಡನೆ ಅಮೇರಿಕವು ಈಗಲೂ ಯಥಾಪ್ರಕಾರ ವ್ಯಾಪಾರ ನಡಿಸುತ್ತಿರುವುದು. ಚೀನೀ ಯುದ್ಧಾರಂಭವಾದಂದಿನಿಂದ, ಜಪಾನ ಸೇನೆ, ನೌಕೆ ಮತ್ತು ವಿಮಾನ ಪಡೆಗಳಲ್ಲಿ ಒಟ್ಟು ಒಂದೂವರೆ ಮಿಲ್ಯ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ಚೀನೀರಾಷ್ಟ್ರೀಯ ಸರಕಾರವು ಪ್ರಕಟಿಸಿರುವುದು.

ಐರಿಷ್‌ಮೆನರಿಗೆ ಫಾಶಿಶಿಕ್ಷೆ.

ಐಯರ್ಲೆಂಡಿನ ರಿಪಬ್ಲಿಕನ್ ಪಕ್ಷೀಯರು ಕೆಲವರು ಈಗಲೂ ಇಂಗ್ಲೆಂಡಿನಲ್ಲಿ ಹಲವೆಡೆ ಬೋಂಬು ಸ್ಫೋಟಗೊಳಿಸಿ

ಸಮಾಚಾರ ಸಂಗ್ರಹ

(ಮುಂದುವರಿದುದು.)

ಅತ್ಯಾಚಾರ ನಡಿಸುತ್ತಿರುವರು. ಈ ಸಂಬಂಧವಾಗಿ ಕೈದು ಮಾಡಲ್ಪಟ್ಟಿದ್ದ ಬಾರ್ನೆಸ್ ಮತ್ತು ರಿಚಾರ್ಡ್ಸ್ ಎಂಬವರಿಗೆ ಫಾಶಿಶಿಕ್ಷೆ ವಿಧಿಸಲಾಗಿತ್ತು. ಇದನ್ನು ರದ್ದು ಪಡಿಸಬೇಕೆಂದು ಐಯರ್ಲೆಂಡಿನಲ್ಲೆಲ್ಲಾ ಚಳವಳ ನಡೆದಿತ್ತು. ಆದರೂ ಅವರನ್ನು ಇದೇ ತಾ. 7ರಲ್ಲು ಗಲ್ಲಿಗೇರಿಸಲಾಯಿತು. ಇದರಿಂದ ಐಯರ್ಲೆಂಡಿನಲ್ಲಿ ಹಲವರಲ್ಲಿ ಉದ್ವೇಗವುಂಟಾಗಿರುವುದು. ಕೆಲವು ಕಡೆ ನಿಷೇಧ ಸಭೆಗಳು ಕೂಡಾ ನಡೆದಿರುವವು. ಬಾರ್ನೆಸ್ ಮತ್ತು ರಿಚಾರ್ಡ್ಸ್ ಇವರಿಬ್ಬರೂ ನಿರ್ದೋಷಿಗಳೆಂದು ಐಯರ್ಲೆಂಡಿನಲ್ಲಿ ಹಲವರ ಅಭಿಮತ.

ಸೋವಿಯೆಟ್ ಸೇನೆಯ ಪ್ರಚಂಡ ಧಾಳಿ

ಫಿನ್ಲೆಂಡಿನ ಮೆನ್ನರ್ ಹೈಮ್ ಕೋಟೆಯು ಸುಮ್ಮ ಪಟ್ಟಣದ ಬಳಿ ಸೋವಿಯೆಟ್ ಸೈನಿಕರು ಎಡೆಬಿಡದೆ ಪ್ರಚಂಡ ಧಾಳಿ ನಡಿಸಿ ಪ್ರಥಮ ಸಾಲಿನ ಕೋಟೆಯನ್ನು ಒಂದೆಡೆ ಭೇದಿಸಿರುವರೆಂದು ತಿಳಿದುಬರುತ್ತದೆ. ಇಲ್ಲಿ 10 ದಿನಗಳ ತನಕ ತುಮುಲ ಕಾಳಗ ನಡೆದಿದ್ದಿತು. ಆದರೆ ಸೋವಿಯೆಟ್ ಸೈನಿಕರನ್ನು ಫಿನ್ನರು ತಡೆಗಟ್ಟಿರುವರು. ಕುಹುಮೋ ಎಂಬಲ್ಲಿ ನಡೆದ 6 ದಿನಗಳ ಯುದ್ಧದಲ್ಲಿ 1,500 ಮಂದಿ ರಸ್ಯಾನರು ಕೊಲ್ಲಲ್ಪಟ್ಟಿರುವರು. ರಸ್ಯಾನ ಸೈನಿಕರು ಗಾಳಿ ಕೊಡೆಗಳ ಮೂಲಕ ಹಾರಿ ಬಂದು ಹಾವಳಿಮಾಡುತ್ತಿರುವರು. ಸ್ವೀಡಿಶ್ ಸ್ವಯಂಸೇವಕರು ಸಲ್ಲಾ ರಣರಂಗದಲ್ಲಿ ಹೋರಾಡಹತ್ತಿರುವರು. ಪರ ರಾಷ್ಟ್ರಗಳು ಈಗ ಫಿನ್ಲೆಂಡಿಗೆ ಕೊಡುತ್ತಿರುವ ಸಹಾಯವು ಕೂಡಲೆ ಹೆಚ್ಚಿಸಲ್ಪಟ್ಟರೆ ಫಿನ್ಲೆಂಡಿನ ಕುರಿತು ನಿರಾಶೆಪಡಲು ಕಾರಣವಿಲ್ಲೆಂದು ಇತ್ತಲಾಗಿ ಫಿನ್ಲೆಂಡನ್ನು ಸಂದರ್ಶಿಸಿದ್ದ ಬ್ರಿಟಿಷ್ ಮಜೂರ ಮುಖಂಡರಾದ ಸರ್. ವಾಲ್ಟರ್ ಸಿಟ್ರೈನರ ಅಭಿಪ್ರಾಯವಿರುವುದು. ಕರೇಲಿಯನ್ ಭೂಕಂಠದಲ್ಲಿ ರಸ್ಯವು ಹೊಸ ಸೇನೆಯನ್ನು ಪಯೋಗಿಸಿರುವುದು. ಫಿನ್ನರು ಇಲ್ಲಿ ವಿಚಿತ್ರ ಧೈರ್ಯ ಮತ್ತು ಸ್ಥೈರ್ಯ ತೋರಿಸಿರುವರು. ರಸ್ಯದ ಟಾಂಕಿಗಳ ದಳವು ಅತ್ಯಂತ ಪ್ರಬಲವಾದುದು. ಆದರಲ್ಲಿ 600 ಅಂದರೆ ಸುಮಾರು ಸ್ಥರಷ್ಟು ಇಷ್ಟರಲ್ಲೇ ನಾಶಮಾಡಲ್ಪಟ್ಟಿರುವವೆಂದು ತಿಳಿದು ಬರುತ್ತದೆ ಸುಮ್ಮ ರಣರಂಗದಲ್ಲಿ 5000 ಮಂದಿ ಸೋವಿಯೆಟ್ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ಫಿನ್ನರ ಕಡೆಯ ವಾರ್ತೆ.

ಫಿನ್ನರು ಅಸಾಧಾರಣ ಶಕ್ತಿವಂತರು.

ಫಿನ್ಲೆಂಡಿನ ಪರಿಸ್ಥಿತಿಯನ್ನು ಸ್ವತಹ ಕಂಡು ತಿಳಕೊಳ್ಳಲು ಬ್ರಿಟಿಷ್ ಮಜೂರ ಮುಖಂಡರು ಕೆಲವರು ಅಲ್ಲಿಗೆ ಹೋಗಿ ಹಿಂತಿರುಗಿರುವರು. "ಫಿನ್ನರು ಅಸಾಧಾರಣ ಶಕ್ತಿಯ ಜನಾಂಗ. ಅವರ 4 ದಳ ಸೇನೆಯನ್ನು ನಾವು ಕಂಡಿರುವೆವು. ಅವರಂತಹ ಸೈನಿಕರೇ ಲೋಕದಲ್ಲಿರುವುದಿಲ್ಲ. ಆದರೆ ಅವರಿಗೆ ಯುದ್ಧೋಪಕರಣಗಳ ಸಹಾಯ ಬೇಕಾಗಿದೆ. ಫಿನ್ನರಿಗೆ ತುಂಬಾ ಆತ್ಮವಿಶ್ವಾಸವಿದೆ. ಬ್ರಿಟನಿನಂತಹ ರಾಷ್ಟ್ರಗಳು ಬೇಗನೆ ಸಹಾಯವಿತ್ತಲ್ಲಿ ರಸ್ಯವನ್ನು ಪರು ಜಯಶೀಲವಾಗಿ ವಿರೋಧಿಸಬಲ್ಲರು" ಎಂದೇ ಈ ಮಜೂರ ಮುಖಂಡರ ಅಭಿಮತ. ಫಿನ್ಲೆಂಡಿನ ಯುದ್ಧ ಆರಂಭವಾದಂದಿನಿಂದ ರಸ್ಯವು 308 ವಿಮಾನ, 608 ಟಾಂಕಿ 1560 ಕುದುರೆ, 264 ಮಿಶನ್ ತೋಪು ಮತ್ತು 335 ಆಟೋಮೆಟಿಕ್ ಪಿಸ್ತೂಲುಗಳನ್ನು ಕಳಕೊಂಡಿರುವುದೆಂದು ಫಿನ್ನರ ಅಂದಾಜು.

ರಸ್ಯ ಮತ್ತು ಫಿನ್ಲೆಂಡುಗಳ ಕಲಹದ ಕುರಿತು ಮಧ್ಯಸ್ಥಿಕೆ ಮಾಡಲು ದೊಡ್ಡ ತಟಸ್ಥ ರಾಷ್ಟ್ರವೊಂದು ಮುಂದೆ ಬಂದಿರುವುದೆಂದು ತಿಳಿದುಬರುತ್ತದೆ ಆದರೆ ಫಿನ್ಲೆಂಡನ್ನೊಮ್ಮೆ ಸಂಪೂರ್ಣ ಸೋಲಿಸದೆ ರಸ್ಯವು ಯಾವ ಸಂಧಿಗೂ ತಯಾರಿರುವುದಿಲ್ಲ. ಫಿನ್ಲೆಂಡು ಯಾವಾಗಲೂ ಸಂಧಿಗೆ ತಯಾರಾಗಿಯೇ ಇದೆ.

ಮೆನ್ನರ್ ಹೈಮ್ ಕೋಟೆಯನ್ನು ಭೇದಿಸುವ ಸೋವಿಯೆಟ್ ಸೇನೆಯ ಪ್ರಚಂಡ ಧಾಳಿಯು ಕರೇಲಿಯನ್ ಭೂಕಂಠದ ವರೆಗೂ ವ್ಯಾಪಿಸಿದೆ. ಎಲ್ಲಾ ರಣರಂಗಗಳಲ್ಲಿಯೂ ತೀವ್ರ ಹೋರಾಟ ಆರಂಭವಾಗಿರುತ್ತದೆ. ಫಿನ್ನರು ದೊಡ್ಡ ದೊಡ್ಡ ನಾಯಿಗಳನ್ನು ಹಲವು ಕೆಲಸಗಳಿಗೆ ಉಪಯೋಗಿಸ ಹತ್ತಿದ್ದಾರೆ.

ವಾಯುವ್ಯ ಗಡಿನಾಡಿನ ಗಲಾಟೆ

ಹಿಂದೂದೇಶದ ವಾಯುವ್ಯಗಡಿನಾಡು ಪ್ರಾಂತ್ಯದ ಬಳಿ ವಾಸಿಸುವ ಪಂಗಡಿಗರು ಇನ್ನೂ ಲೂಟಿ, ದರೋಡೆ ಮತ್ತು ಬಲತ್ಕಾರಗಳನ್ನು ನಡಿಸುತ್ತಲೇ ಇದ್ದಾರೆ. ಕಳೆದ ಅಕ್ಟೋಬರ ತಾ 1ರಿಂದ ಡಿಸೆಂಬರ ಅಖೈರವರೆಗೆ ಈ ಪಂಗಡಿಗರ ಕೈಗೆ ಸಿಕ್ಕಿ ಮತ್ತು ಅವರೊಡನೆ ಹೋರಾಡುವಾಗ ಒಟ್ಟು 43 ಮಂದಿ ಕೊಲ್ಲಲ್ಪಟ್ಟಿರುತ್ತಾರೆ. 82ಮಂದಿ ಗಾಯಗೊಂಡಿರುತ್ತಾರೆ. ಇದೇ ತಾ. 8ರಲ್ಲು ಬನ್ನು ಪಟ್ಟಣದಿಂದ 3 ಮಂದಿ ಹಿಡಿದೊಯ್ಯಲ್ಪಟ್ಟಿರುತ್ತಾರೆ. ಇವರಲ್ಲಿ ಇಬ್ಬರು ಪೋಲೀಸರು. ಬನ್ನುವಿನಲ್ಲಿ ಕಳೆದ ಆದಿತ್ಯವಾರ ನಡೆದ ಗಲಾಟೆಯಲ್ಲಿ ಸರಕಾರದ ಕಡೆಯಲ್ಲಿ 4ಮಂದಿ ಕೊಲ್ಲಲ್ಪಟ್ಟು ಇಬ್ಬರು ಗಾಯಗೊಂಡಿರುವರು. ಮೃತರಾದವರಲ್ಲಿ ಅಸಿಸ್ಟಂಟ್ ಗೆರಿಸನ್ ಇಂಜೀಯರರಾದ ರೈ ಸಾಹೇಬ್ ಮುಕುಂದ ಲಾಲರೊಬ್ಬರು. ಕಳೆದ ವರ್ಷ ಒಟ್ಟು 121 ಗಂಡಸರು, 9 ಸ್ತ್ರೀ ಮತ್ತು 24ಮಂದಿ ಮಕ್ಕಳು ಹಿಡಿದೊಯ್ಯಲ್ಪಟ್ಟಿರುವರು.

ಮಿ. ಜಿನ್ನರ ಘೋಷಣೆಯ ಕುರಿತು ಅತೃಪ್ತಿ

ಮಿ. ಜಿನ್ನರ ವಿಘಾತುಕ ಘೋಷಣೆಯ ಕುರಿತು ಮುಸ್ಲಿಮ್ ಲೀಗಿನೊಳಗೇನೇ ಅತೃಪ್ತಿಯು ಬೆಳೆಯುಹತ್ತಿರುವುದು. ಸರ್ ಸಿಕಂದರ್ ಹಾಯತ್ ಖಾನರೇ ಮೊದಲಾದವರು ಕಾಂಗ್ರೆಸಿನೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂಬ ಅಪೇಕ್ಷೆಯುಳ್ಳವರಿರುವರು. ಆಗಖಾನರು ಹಿಂದುದೇಶಕ್ಕೆ ಬಂದಿರುವರು. ಪ್ರಾಂತಿಕ ಎಸೆಂಬ್ಲಿ ಮೆಂಬರರುಗಳ ಕನ್ವೆನ್ಶನೊಂದನ್ನು ಕರೆದು ಹಿಂದೀ ರಾಜಕೀಯ ಘಟನೆಯ ಪ್ರಶ್ನೆಯನ್ನು ಇತ್ಯರ್ಥ ಪಡಿಸಬೇಕೆಂಬ ಸರ್ದಾರ್ ವಲ್ಲಭಾಯಿ ಪಟೇಲರ ಸೂಚನೆಯನ್ನು ಆಗಾಖಾನರು ಅನುಮೋದಿಸಿರುವರು. ಆಗಾಖಾನರು ಹೆಚ್ಚು ಸಮಯ ಹಿಂದುದೇಶದಲ್ಲಿ ನಿಲ್ಲುವಂತಾದರೆ ಮಿ. ಜಿನ್ನರ ಕುರಿತಾದ ವಿರೋಧವು ಮತ್ತಷ್ಟು ಬಲಗೊಳ್ಳದಿರಲಾರದು. ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸಿನವರು ಒಟ್ಟು ಸೇರಿ ಒಡಂಬಡಿಕೆಗೆ ಬರಬಾರದೇಕೆಂಬ ಪ್ರಶ್ನೆಯು ಈಗ ಹಲವರಲ್ಲುಂಟಾಗಿರುವುದು. ಇದಕ್ಕೆ ಮಿ. ಜಿನ್ನರ ಉದ್ಧಟ ಘೋಷಣೆಯೇ ಕಾರಣವಾಗಿದೆ.

ಯಕ್ಷಗಾನ ಸಮಾರಂಭ

ಇದೇ ತಿಂಗಳ ತಾ. 18ನೇ ಆದಿತ್ಯವಾರ ದಿವಸ ನಡೆಯಲಿಕ್ಕಿರುವ ಉಡ್ಪಿ ಬಂಟರ ಯಾನೆ ನಾಡವರ ವಿದ್ಯಾರ್ಥಿ ಭವನದ ವರ್ಧಂತಿ ಉತ್ಸವದ ಸಮಾರಂಭದಲ್ಲಿ ಜಿಲ್ಲೆಯ ಸುಪ್ರಸಿದ್ಧ ಅರ್ಥದಾರಿಗಳು, ಹಾಡುಗಾರರ ಹಾಗೂ ಮೃದಂಗ ವಾದಕರ ಕೂಡುವಿಕೆಯಿಂದ ಒಂದು ಯಕ್ಷಗಾನ ಸಮಾರಂಭವು ನಡೆಯಲಿಕ್ಕಿದೆ. ಶ್ರೀಯುತರುಗಳಾದ ನಾರಾಯಣ ಕಿಲ್ಲೆಯವರು, ಅರ್ಕುಳ ಸುಬ್ರಾಯಾಚಾರಿಗಳು, ಕದ್ರಿ ರಾಮಕೃಷ್ಣ ಶಾಸ್ತ್ರಿಗಳು, ಪೆರ್ಲ ಸೇಜು ರೆಟ್ರೀ ಮೊದಲಾದವರೂ ಭಾಗವಹಿಸಲಿರುವರು. ಶ್ರೀ ಮೈಂದಪ್ಪ ರೈಗಳು ಭಾಗವತರು. ಮಹಾಜನರೆಲ್ಲರೂ ಬಂದು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಪ್ರಸಂಗ - - - ವಾಲಿವಧೆ

ಸ್ಥಳ— ಉಡ್ಪಿ ಬಂಟರ ಯಾನೆ ನಾಡವರ ವಿದ್ಯಾರ್ಥಿಭವನದ ಹಜಾರ.
ಸಮಯ— ರಾತ್ರಿ 9-30ರಿಂದ 1ರವರೆಗೆ (ತಾ. 18-2-'40.)

ಬಂಟರ ಯಾನೆ ನಾಡವರ ವಿದ್ಯಾರ್ಥಿಭವನದ ಕಮಿಟಿ ಉಡ್ಪಿ.

SAFE: BUT USELESS

DURING a recent archaeological digging a copper pot was unearthed containing 1800 Victoria Rupees. An inscription on the pot recorded the name of the person who buried it and the date of the "burial", 1870. The money was handed over to his heirs.

If instead of being deposited in the earth, the money had been deposited in a BANK at 3½% per annum and reinvested with the interest every year, his heirs would now have come to posses Rs. 5,600/-. And also all the time in the hands of the bank, the money would have been useful to trade and industry.

RESOURCES OF A CRORE.

ESTD: 1906
CANARA BANK LIMITED.

ಈ ವಾರದ ಭವಿಷ್ಯ

ತಾರೀಕು 15-2-1940ರಿಂದ 22-2-1940ರ ವರೆಗೆ

ಮೇಷ—ಶರೀರ ಪ್ರಕೃತಿಯ ವಿಚಾರದಲ್ಲಿ ನೀವು ವಿಶೇಷ ಜಾಗರೂಕರಾಗಿರತಕ್ಕದ್ದು. ಶತ್ರುಜನರಿಂದ ಭಯ, ಆಕಸ್ಮಿಕ ಅಪಘಾತ ಇತ್ಯಾದಿಗಳು ಸಂಭವಿಸಲಿವೆ. ನೀವು ಕೈಕೊಂಡ ಕಾರ್ಯಗಳು ಸಿದ್ಧ ಜಯಶೀಲವಾಗವವು. ಪುತ್ರ ಮಿತ್ರರಿಂದ ಕೂಡಿಕೊಂಡು ಸುಖದಿಂದ ದಿನಗಳೆಯತಕ್ಕ ನಿಮಗೆ ಖರ್ಚಿಗೆ ತಕ್ಕ ಉತ್ಪತ್ತಿಯಿರುವದಾದರೂ ನಿಮ್ಮ ಮನಸ್ಸಿನಲ್ಲಿ ಗಹನವಾದೊಂದು ವಿಚಾರವು ನೆಲಸಿರುವಂತೆ ತೋರುವದು. ಒಂದೇ ಸ್ಥಳದಲ್ಲಿ ಕಳೆಯಲು ಸಮಯ ಸಿಕ್ಕಲಾರದು. ಅಂತೂ ಸುಖದುಃಖಗಳೂ ಸಮನಾಗಿ ಪಾಲಿಸುವವು. ತಾ. 15, 19, 20, ಈ ಮೂರು ದಿನಗಳು ಇಷ್ಟಾರ್ಥದಾಯಕಗಳಾಗಿವೆ.

ವೃಷಭ—"ಆಹಾರೇ ವ್ಯವಹಾರೇ ಚ ತ್ಯಕ್ತ ಲಜ್ಜಃ ಸುಖೀ ಭವೇತ್" ಎಂದು ಹಿರಿಯರೆಂದಂತೆ ಆಹಾರ ವ್ಯವಹಾರಗಳಲ್ಲಿ ಕೇವಲ ದಾಕ್ಷಿಣ್ಯಕ್ಕೊಳಗಾಗಿ ಬಹಳ ಉಭಯ ಸಂಕಟದಲ್ಲಿ ಬೀಳುವ ಸಂಭವವಿದೆ. ಆದಕಾರಣ ಮನಸ್ಸಿಗೆ ಹಿತವೆಂದು ಕಾಣತಕ್ಕ ಕಾರ್ಯಗಳಲ್ಲಿ ಮಾತ್ರ ಪ್ರವರ್ತಿಸಿರಿ. ದುಷ್ಟ ಸ್ತ್ರೀಯರಿಂದಾಗಿ ಅನರ್ಥಗಳೊದಗಲಿವೆ. ಪಿತ್ತವಿಕಾರದಿಂದುಂಟಾದ ಸ್ವಪ್ನಾದಿಗಳಿಂದ ನಿದ್ರಾಭಂಗವಾದೀತು. ಸ್ತ್ರೀಯರ ಉದ್ಯೋಗದಲ್ಲಿ ಘಳಿಗೆ ತೃಪ್ತಿಕರವಾಗಿರುವುದು. ಹಿಡಿದ ಕಾರ್ಯಗಳು ಅವಿಚ್ಛಿನ್ನವಾಗಿ ಮುಂದರಿಯುವವು. ಮಿತ್ರರ ಸಹಕಾರದಿಂದ ನಿಮ್ಮ ಆರ್ಥಿಕ ಭಾಗವು ವೃದ್ಧಿ ಹೊಂದುವುದು. ವಿದ್ಯಾರ್ಥಿಗಳು ಕೀರ್ತಿಶಾಲಿಗಳಾಗುವರು ತಾ. 16, 17, 18, 21, 22 ಈ ದಿನಗಳು ಸರ್ವೋತ್ಕೃಷ್ಟಗಳಾಗಿವೆ.

ಮಿಥುನ—ಧನವು ಸಕಲ ಸುಖಕ್ಕೂ ಕಾರಣವಾದರೂ ಅದರಿಂದುಂಟಾಗತಕ್ಕ ಅನರ್ಥಗಳು ಅಸ್ಸಿಷ್ಟಲ್ಲ. ಇದರಿಂದಾಗಿಯೇ ನಿಷ್ಠುರ ಕಲಹ ವೈರಗಳು ಹುಟ್ಟುವವು. ಅಚ್ಚುಮೆಚ್ಚಿನ ಮಿತ್ರರಾಗಿದ್ದವರನ್ನು ಕೂಡ ಬೇರ್ಪಡಿಸಬಲ್ಲುದೀ ಧನವು. ಇದು ಇದ್ದಲ್ಲಿ ಹೋದಲ್ಲಿ ನಿಷ್ಠುರ ಕಷ್ಟದು. ಈ ವಿಚಾರವು ನಿಮಗೆ ಈ ವಾರದಲ್ಲಿ ಕಾರ್ಯತಃ ಅನುಭವಕ್ಕೆ ಬರಲಿದೆ. ನೀವು ನಾನಾಬಗೆಯಿಂದ ದುಡಿಯುವಿರಾದರೂ ಅದನ್ನು ಕ್ರೋಢೀಕರಿಸಲು ನಿಮ್ಮಿಂದಾಗದು. ಚಿಂತಾಪೀಡೆ ಮನೋರೋಗಗಳು ಪ್ರಬಲವಾಗಿ ಪೀಡಿಸುವವು ವಾಹನಾದಿಗಳಿಂದ ಹಾನಿ ಕಲಹವಾಗುವುದು. ನೌಕರಿ ವ್ಯಾಪಾರಗಳಲ್ಲೂ ವಿದ್ಯಾರ್ಥಿಗಳಿಗೂ ಉನ್ನತಿ ಕಾಣದು. ತಾ. 16, 17, 18, 21, 22, ಈ ದಿನಗಳಲ್ಲಿ ಕಾರ್ಯಕ್ಕೆ ವಿಘ್ನಗಳೂ ಧನಮಾನಗಳಿಗೆ ಹಾನಿಯೂ ಸಂಭವಿಸಲಿದೆ.

ಕರ್ಕಾಟಕ—ಸ್ವಪ್ರಯತ್ನಕಾರ್ಯಗಳಲ್ಲಿ ಮುಂದರಿಯಲು ನಿಮ್ಮ ಮನಸ್ಸು ಪ್ರೇರಿಸುವದಾದರೂ ದುಸ್ಸಂಸರ್ಗದಿಂದ ನೀವು ದುರ್ಮಾರ್ಗಗಾಮಿಗಳಾಗುವಿರಿ. ಸತ್ಸಂಸರ್ಗಬಲದಿಂದ ಧರ್ಮಕ್ರಿಯೆಯಲ್ಲಿ ಪ್ರವರ್ತಿಸುವಿರಿ. ಗುರುಹಿರಿಯರ ಅನುಗ್ರಹಕ್ಕೆ ಪಾತ್ರರಿರುವಿರಿ. ವಿದ್ಯಾಬುದ್ಧಿಗಳಲ್ಲಿ ವಿಶೇಷವಿರುವುದರಿಂದ ನಿಮಗೆ ಸಮಾಜದಲ್ಲಿ ಗೌರವಾದರಗಳು ದೊರೆವವು ಕೈಗೊಂಡ ಕಾರ್ಯದಲ್ಲಿ ವಿಜಯಿಗಳಾಗುವಿರಿ. ಆರ್ಥಿಕ ಭಾಗವು ಸುಧಾರಿಸುವದು. ಶಯ್ಯಾಸುಖವು ಉತ್ತಮವಿರುವದಾದರೂ ಗೃಹಚ್ಛಿದ್ರದಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ತಾ. 19, 20 ಬಿಟ್ಟು ಇತರ ದಿನಗಳೆಲ್ಲ ಶ್ರೇಯಸ್ಕಾರಿಗಳಾಗಿರುವವು.

ಸಿಂಹ—ಜಂಬಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ। ಲಲಾಟಲಿಖಿತಾಂ ರೇಖಾಂ ಪರಿಮಾರ್ಷ್ಟುಂ ನ ಶಕ್ಯತೇ ॥ ಹರಿಹರಬ್ರಹ್ಮರಿಂದಲೂ ದೇವತೆಗಳಿಂದಲೂ ಕೂಡ ವಿಧಿ ಬರೆದವನ್ನು ಮೀರಲು ಶಕ್ಯವಿಲ್ಲವು. ಹೀಗಿರುವಲ್ಲಿ ನರರ ಪಾಡೇನು? ಸದ್ಯ ನಿಮ್ಮ ವಿಧಿಯು ಬಹಳ ದುಸ್ತರವಾಗಿವೆಯೆಂದು ಗ್ರಹರು ಸೂಚಿಸುತ್ತಿರುವರು. ಆದಕಾರಣವೇ ಕ್ಷಣಕಾಲ ನಿಂತಲ್ಲಿ ನಿಲ್ಲದೆ ಅಂಡಲೆಯುತ್ತಿರುವಿರಿ. ಕೈಯಲ್ಲಿ ಕಾಸೊಂದೂ ಇಲ್ಲವು. ಶತ್ರುಜನರು ಬಹುವಾಗಿ ಪೀಡಿಸುತ್ತಿರುವರು. ಶರೀರದಲ್ಲಿ ಅನಾರೋಗ್ಯವು ಹೆಚ್ಚುವುದು. ಧರ್ಮದೇವರುಗಳಲ್ಲಿ ಅನಾದರಗಳು ಹೆಚ್ಚುತ್ತಿರುವವು. ಆದರೂ 16ರಿಂದ 20ರ ವರೆಗೆ ಅಸುರ ಗುರುಗಳ ಅನುಗ್ರಹದಿಂದ ಮಿತ್ರಸಮಾಗಮ, ಇಷ್ಟಸಿದ್ಧಿಯನ್ನು ಹೊಂದಲಿರುವಿರಿ.

ಕನ್ಯಾ—ರಾಜಕೀಯ ಭಾಗದಲ್ಲಿ ನಿಮ್ಮ ಮನೋರಥಗಳು ಈಡೇರುವವು. ಮಾನಸಿಕ ಚಿಂತೆಯೂ ದೇಹದಲ್ಲಿನ ಅನಾರೋಗ್ಯವೂ ಕಡಿಮೆಯಾಗುವವು. ಆದರೂ ವಿರೋಧಿಗಳಿಂದ ಧನನಾಶವೂ ಮಾನಕ್ಕೆ ಕುಂದೂ ಬರುವಂತಿದೆ. ಸ್ವಸ್ತ್ರೀಯೇ ಮೊದಲ್ಗೊಂಡು ಸಕಲರೂ ನಿಮಗೆ ಅಹಿತಕಾರಿಗಳೇ ಆಗುವರು. ನೌಕರಿ ಭಾಗದಲ್ಲಿ ಉನ್ನತಿ ವಿಜಯಲಾಭಗಳು ದೊರೆಯಲಿವೆ. ಬಹಳ ವಾಚಾಳರಾದ ನಿಮಗೆ ವಶವಾಗದಿರತಕ್ಕ ವರೇ ದುರ್ಲಭವೆನ್ನಬಹುದು. ಸಮಾಜದಲ್ಲಿ ಪೂಜಾಗೌರವಗಳನ್ನು ಪಡೆಯುವಿರಿ. ತಾ. 19ರಿಂದ 22ರ ವರೆಗೆ ಮಹಾಸುಖ, ಸಂತೋಷ, ಧನಪ್ರಾಪ್ತಿಯಾಗಲಿವೆ.

ತುಲಾ—ಹತ್ವ ಯ್ಯನರ್ಜುನನು, ಮತ್ತಯ್ಯ ದೇವೇಂದ್ರ ಮತ್ತೆ ಸೋದರ ಮಾವ ಶ್ರೀ ಹರಿಯು ಅಭಿಮನ್ಯುಗೆತ್ತಣ ವಿಧಿಯು, ಎಂದು ಸರ್ವಜ್ಞ ಕವಿಯು ಹೇಳಿದಂತೆ ಇಷ್ಟೆಲ್ಲಾ ಅದ್ವಿತೀಯರಾದ ಬಳಗವಿದ್ದರೂ ಅಭಿಮನ್ಯುವು ಚಕ್ರವ್ಯೂಹದಲ್ಲಿ ಪ್ರಾಣಮಾಯಕ್ಕೊಳಗಾದ ವೇಳೆ ಅಲ್ಲದ ಕಿರಿ ಮರಿಯಂತಾಗಿಲ್ಲವೇ. ಆದಕಾರಣ ವಿಧಿಯ ಮಹಿಮೆ ದವರಿಲ್ಲ. ಪ್ರಕೃತ ಈ ವಿಚಾರವೇತಕ್ಕೆ ಒಂತೆಂದರೆ ಸದ್ಯ ಕೇತುವೊಬ್ಬನನ್ನುಳಿದು (ತಾ. 15, 21, 22ರ ಚಂದ್ರ) ಇತರ ಸಕಲ ಗ್ರಹರೂ ಅನಿಷ್ಟಸ್ಥಾನಗತರಾಗಿರುವುದರಿಂದ ನಿಮ್ಮ ವಿಧಿಯು ಬಹಳ ದುರ್ಗಮವಾಗಿರುವುದು. ಇಂತಹ ಸಮಯದಲ್ಲಿ ಶರಣಾಗತರಕ್ಷಕನಾದ ಹರಿಯು ಸದಾ ನಿಮ್ಮ ಪಾಲಕನೆಂದು ತಿಳಿದಲ್ಲದೆ ಗತ್ಯಂತರವಿಲ್ಲ. ತಾ. 16ರಿಂದ 20ರ ವರೆಗೆ ಅಧಿಕ ಕಷ್ಟ.

ವೃಶ್ಚಿಕ—ಕೆಲವೊಮ್ಮೆ ಅವಿಚಾರದಿಂದ ಮಿತಿಮೀರಿ ವ್ಯರ್ಥ ಧನವ್ಯಯ ಮಾಡಿಯೂ ಇಷ್ಟವನ್ನು ಹೊಂದದೆ ಕ್ಲೇಶಗೊಳ್ಳುವಿರಿ. ತಂದೆ ಮಕ್ಕಳಲ್ಲಿ ಪರಸ್ಪರ ಭಿನ್ನಾಭಿಪ್ರಾಯದಿಂದ ಪುನಃ ಕಲಹವುಂಟಾದೀತು. ಆದಕಾರಣ ಪ್ರತಿಯೊಂದು ಕಾರ್ಯದಲ್ಲೂ ಸೂಕ್ಷ್ಮ ವಿಚಾರ ಮಾಡಿ ಮುಂದರಿದರೆ ನಿಮಗಾವ ತರದ ಹಾನಿಯೂ ಸಂಭವಿಸದು. ಸದ್ಯದ ಗ್ರಹಸ್ಥಿತಿಯು ಬಹಳ ಉತ್ತಮವಿರುವುದರಿಂದ ನಿಮ್ಮ ಪ್ರಯತ್ನವು ಎಂದೂ ನಿಷ್ಫಲವಾಗಲಾರದು. ನೀವಾಗಲಿ ನಿಮ್ಮ ಕುಟುಂಬವಾಗಲಿ ಆರೋಗ್ಯದಿಂದ ಕೂಡಿರುವುದು. ಪ್ರತಿಯೊಂದು ಉದ್ಯಮದಲ್ಲೂ ಅಭಿವೃದ್ಧಿಯುಂಟಾಗುವುದು. ವೈದ್ಯ ಜನರನ್ನು ಬಿಟ್ಟು ಇತರ ಸಕಲ ವ್ಯಕ್ತಿಯವರೂ ತಮ್ಮ ಇಷ್ಟಾರ್ಥವನ್ನು ಅಚಿರದಲ್ಲೇ ಹೊಂದುವರು. ಅಧಿಕ ಸಂಪತ್ತಿನಲ್ಲಿ ಅಧಿಕಾರ ಲಾಭವಾಗದಿರದು. ತಾ. 15ರಿಂದ 18ರ ವರೆಗೆ ಅತ್ಯುತ್ತಮ.

ಧನು—ಈ ವಾರದಲ್ಲಿ ನಿಮಗೆ ಗೃಹಸುಖವು ವ್ಯಾಪಾರಾದಿಗಳಲ್ಲಿ ಲಾಭವೂ ಧರ್ಮಕಾರ್ಯಗಳಲ್ಲಿನ ಆಸಕ್ತಿಯೂ ಅದಕ್ಕೆ ಬೇಕಾದ ಧೈರ್ಯಸಾಹಸಗಳೂ ಇರುವವು. ಸಂಗೀತಜ್ಞರಿಗೂ ನಟರಿಗೂ ಹೆಚ್ಚಿನಂಶ ಸುಖ ಲಾಭವಾಗುವುದು. ಆದರೆ ಸಹೋದರರಲ್ಲಿ ಪರಸ್ಪರ ವೈಮನಸ್ಯವೂ ಮಕ್ಕಳುಗಳಿಂದ ಮನಃಕ್ಲೇಶವೂ ಸಂಭವಿಸಲಿದೆ. ಉದ್ಯೋಗಿಗಳಿಗೆ ಅಧಿಕಾರಿಗಳಿಂದ ಭಯ ತಪ್ಪದು. "ಕುಲಕ್ಕೆ ಮೃತ್ಯು ಕೊಡಲೀ ಕಾವು" ಎಂದಂತೆ ಆತ್ಮೀಯರೇ ನಿಮಗೆ ಉಪದ್ರವಿಸಲಿರುವರು. ಭೂಸಂಬಂಧವಾದ ವ್ಯವಹಾರದಲ್ಲಿ ಕಷ್ಟನಷ್ಟಗಳುಂಟಾಗುವವು. ತಾ. 16ರಿಂದ 20ರ ವರೆಗೆ ಹೆಚ್ಚಿನ ಭಾಗದಲ್ಲಿ ಸುಖದ

ಮಕರ—"ಭಿನ್ನರುಚಿರ್ಹಿ ಲೋಕಃ" ಒಬ್ಬೊಬ್ಬರಿಗೆ ಒಂದೊಂದರಲ್ಲಿ ಅಭಿರುಚಿಯಿರುವವು. ಕೆಲವರಿಗೆ ಸಿಹಿಯಲ್ಲಿ ಇಷ್ಟವಾದರೆ ಮತ್ತೆ ಕೆಲವರಿಗೆ ಖಾರದಲ್ಲಿ ಕೆಲವರಿಗೆ ಪರೋಪಕಾರದಲ್ಲಿಷ್ಟವಾದರೆ ಇನ್ನು ಕೆಲವರಿಗೆ ಪರಪೀಡೆಯಲ್ಲಿ. ಹೀಗೆ ಪರಸ್ಪರ ಭಿನ್ನರುಚಿಯುಳ್ಳ ಲೋಕದಲ್ಲಿ ಹೆಚ್ಚಿರುವರು. ಹೀಗೆ ಪ್ರಕೃತದ ಗ್ರಹಮಾನ ರೀತ್ಯಾ ನಿಮಗೆ ದುರ್ಜನ ಸಂಸರ್ಗ ಪರಪೀಡಾ ಕೃತಘ್ನತೆ ಇತ್ಯಾದಿಗಳಲ್ಲೇ ಮನಸ್ಸು ಮುಂದರಿವುದು. ಆದಕಾರಣ ಜನಸಾಮಾನ್ಯರ ಸಹಾಯವು ನಿಮಗಿಲ್ಲ. ನೌಕರಿ ವ್ಯಾಪಾರಗಳ ಮೂಲಕ ಕಿಂಚಿದ್ಧನ ಸಂಪಾದಿಸುವಿರಾದರೂ ಅಲ್ಲಸಲ್ಲದ ಖರ್ಚುಗಳು ಹೆಚ್ಚುರತಕ್ಕ ನಿಮಗೆ ಋಣದ ಮುಗ್ಗಟ್ಟು ದಿನೇ ದಿನೇ ಹೆಚ್ಚುತ್ತಾ ಹೋಗುವುದು. ದೈಹಿಕ ಮಾನಸಿಕ ಸುಖಗಳೆರಡೂ ಇಲ್ಲವೆಂತಾಗುವುದು. ತಾ. 19ರಿಂದ 22ರ ವರೆಗೆ ಶುಭಾಧಿಕ್ಯ.

ಕುಂಭ—ಸಿಹಿ ಪದಾರ್ಥಗಳನ್ನೇ ತಿನ್ನುತ್ತಿರುವವರಿಗೆ ಮಧ್ಯೇ ಮಧ್ಯೇ ಖಾರದ ಪದಾರ್ಥಗಳ ಸೇವನೆಯು ಸಿಹಿಯ ಸಂಪೂರ್ಣ ರುಚಿಯನ್ನು ಕೊಡಲು ಹೇಗೆ ಸಮರ್ಥವಾಗುವುದೋ ಅದರಂತೆ ಬಹು ದಿನದಿಂದ ಸುಖವಾಗಿದ್ದಿರುವ ನಿಮಗೆ ಮಧ್ಯೆ ಒಂದೆರಡು ವಿಚಾರಗಳಲ್ಲುಂಟಾದ ಶೋಕವು ಸುಖದ ಸ್ವಾದುವನ್ನು ಹೆಚ್ಚಿಸಲಿದೆ. ಉಷ್ಣ ವಿಕಾರದಿಂದ ಅನಾರೋಗ್ಯ ನೈಷ್ಫಲ್ಯಗಳು ಆಗಾಗ ಕಾಣಿಸಿಕೊಳ್ಳುವವು. ನೌಕರಿ ಭಾಗದಲ್ಲಿ ಜಾಗರೂಕರಾಗಿರಿ. ಉಪ್ಪುಮಕ್ಕಳಿಂದಲೂ ಅಧಿಕವಾಗಿ ಫಲಪ್ರಾಪ್ತಿಯಾಗುವುದು. ತಾ. 15, 21, 22 ಈ ದಿನಗಳು ಇಷ್ಟದಾಯಕಗಳಾಗಿವೆ.

ಮೀನ—ಆಪತ್ತಿನೊಳಗೊಂದು ಸಂಪತ್ತು ಎನ್ನುವ ಗಾದೆಯಂತೆ ದೇಹಾಲಸ್ಯ, ಮನಸ್ತಾಪ, ಧನವಾಹನಗಳ ಹಾನಿ ವಿರೋಧಿಗಳ ಕಾಟ ಇವುಗಳಿಗೊಳಗಾಗತಕ್ಕ ನಿಮಗೆ ಉದರಲಕ್ಷ್ಮಿ ತನ್ನೊಲಿಕೆಯನ್ನು ಕಡಿಮೆಯಿರದು. ಸಮಯಾನುಸಾರ ಸವಿಯುವಿರಿ. ಸದ್ಯ ನಿಮಗೆ ಲಾಭವೆಂದರೆ ಇದೇ ಶಿಷ್ಯಜನರಿಗೂ ಸತ್ಯವಾದಿಗಳಿಗೂ ಹೆಚ್ಚಿನ ಹಾನಿಗಳು ಉಂಟಾಗಲಾರವು. ರಾಜಕೀಯದಲ್ಲೂ ನೌಕರಿ ವರ್ಗದ ಉದ್ಯೋಗದಲ್ಲೂ ಮನಸ್ಸಮಾಧಾನವಿರದು. ಕಷ್ಟಕ್ಕೆ ತಕ್ಕ ಫಲವೂ ದೊರೆಯದು. ಸಂತಾನ ಸಮಸ್ಯೆ ಹೆಚ್ಚುವುದು ತಾ. 16, 17, 18. ಇವುಗಳಲ್ಲಿ ಉತ್ತಮವಾಗಿದೆ

ನೋಟೀಸು.

ಕಾಸರಗೋಡು ಡಿ. ಮು ಕೋರ್ಟಿನಲ್ಲಿ

O.S.NO. 638/1936 R.I.A 2213/1938

REP. NO. 410/1939

ಪಾಲ್ಲೂರು ವಿಷ್ಣುಮೂರ್ತಿ ದೇವರ್ಕ ಇದ್ರು ಭಾಗ್ಯಸ್ತರು ವಿಷ್ಣು ಕುಂಡ್ಲಾಯ ಕೂಡಾ 4 ಜನರು } ವಾದಿರು ಅರ್ಜಿದಾರರು,

ಮತ್ತು

ಪನಿಯಂಕಟ್ಟೆ ಶಂಭುನ್ನಾರ ಕೂಡಾ 6 ಜನರು... ರೆಸ್ಪಾಂಡೆಂಟ್ಸು 1ರಿಂದ 4 ಮತ್ತು 6ನೇ ಪ್ರತಿವಾದಿಯು

ಇವರೊಳಗೆ

ಸದ್ರಿ ಅಮಲ್‌ಜ್ಯಾರಿಯ 1ನೇ ರೆಸ್ಪಾಂಡೆಂಟ್ ಪನಿಯಂಕಟ್ಟೆ ಶಂಭುನ್ನಾರ ಚಂದುನ್ನಾರ ಅಳಿಯ ಜ ಮೂಣಿ ಅಮ್ಮನ ಮಗ, ಈತನ ತಾಮ್ನೆತರವಾಟ್ಟು ಕಾರ್ನವ ಮೃತ್ಯು ಆದಳ್ಳಿದಾರ.

2ನೇ ರೆಸ್ಪಾಂಡೆಂಟರು ಜಾಣಕಿ ಅಮ್ಮ, ಚಂದು ನ್ನಾರ ಸೊಸೆ ಮ ಅಕ್ಕು ಅಮ್ಮನ ಮಗಳು, ಕಾಲೂರು ಗ್ರಾಮದಲ್ಲಿರುವವರು.

5ನೇ ರೆಸ್ಪಾಂಡೆಂಟ್ ಪಟಿಕ್ಕಾನ ಚೆರಕರ ಕುಂಞ್ ಕೃಷ್ಣನ್ ನ್ನಾರ, ಪಟಿಕ್ಕಾನ ಚೆರಕರ ಕೋಮು ನ್ನಾರ ಅಳಿಯ ಮ ಉತ್ತ ಅಮ್ಮನ ಮಗ, ಮಡಿಕೈ ಗ್ರಾಮದಲ್ಲಿರುವವ, ಈ ಮೂರು ಜನರಿಗೆ —

ಮೇಲ್ಕಂಡ ವ್ಯಾಜ್ಯದಲ್ಲಿ ಡಿಕ್ರಿಹೊಂದಿದವರಾದ ಅರ್ಜಿದಾರರು ಸದ್ರಿ ಡಿಕ್ರಿಯಿಂದ ತೋರುವ ಜವಾಬ್ದಾರಿ ಇರುವ ಆಸ್ತಿಗಳ ಏಲಂ ಬಗ್ಗೆ, ಏಲಂ ಸಮಯ ಪಾಟ ಕರೆಯುವರೆ ಕಮೀಶನ್ ಕೊಡಿಸುವ ಬಗ್ಗೆ, ದಾಖಲು ಮಾಡಿದ ಮೇಲ್ಕಂಡ ಅಮಲ್‌ಜ್ಯಾರಿಯು ತಾರೀಕು 26-2-1940ಕ್ಕೆ ತನ್ನಿಕೆಗೆ ಇಟ್ಟಿರುತ್ತದೆ. ಆದ್ದರಿಂದ ನಿಮಗೆ ಈ ಕುರಿತು ಆಕ್ಷೇಪವಿದ್ದರೆ ಸದ್ರಿ ತಾರೀಕಿನ ದಿವಸ ಹಗಲು ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ವ್ಯವಹರಿಸಬಹುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

ಕಾಸರಗೋಡು } 1 2-1940 } **C. M. Kamath** B.A.B.L.

Vakil for Petitioners

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER ORIGINAL

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು, ಕೋಳಿ (ಗುರುತಿನ) ಸರಿಯಾದ ಗುರುತನ್ನು "ಗೊನೊಕಿಲರ್" ಹೆಸರನ್ನು ಗಮನಿಸಿರಿ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮೊದಲಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದು ಪರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ಜೀರ್ಣರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಟಿಲ್ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 1. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—**ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ**

Sole Manufacturer DR. D. N. JASANI, Vitalbhai Patel Road. BOMBAY 4

(೪ನೇ ಪುಟದಿಂದ ಮುಂದರಿಸಿದ್ದು)

ಆತಂಕವಾಗಲಾರದು. ಒಂದೊ ನ್ಮೆ ಬ್ರಿಟನು ಹಿಂದೀಯರ ಸ್ವಯಂ ನಿರ್ಣಯ ಹಕ್ಕನ್ನೊಪ್ಪಿ ಆ ಪ್ರಕಾರ ನಡೆಯಿತೆಂದರೆ ಆ ಮೇಲೆ ಎಲ್ಲಾ ಪ್ರಶ್ನೆಗಳೂ ತನ್ನಂತೆಯೇ ಇತ್ಯರ್ಥವಾಗುವವು. ಅದು ಹಾಗೆ ಮಾಡದಿದ್ದರೆ ಜರ್ಮನಿಯೊಡನೆ ಇಂಗ್ಲೆಂಡಿನ ಯುದ್ಧವು ನ್ಯಾಯವೆಂದಾಗಲೀ, ನಿಸ್ವಾರ್ಥವೆಂದಾಗಲಿ ಹೇಳಲು ಸಾಧ್ಯವಿಲ್ಲ.

ಈಗ ಮಾಡುವುದಾದರೂ ಏನು? ಕಾಯಿದೆಭಂಗ ಚಳವಳ ಹೂಡುವುದೇ? ಅದಕ್ಕಿನ್ನೂ ಕಾಲಬಂದಿಲ್ಲ. ವೈಸರಾಯರು ನಮ್ಮನ್ನು ತಿಳಿದುಕೊಳ್ಳಲು ತನ್ನಿಂದ ಸಾಧ್ಯವಾದ ಪ್ರಯತ್ನ ಮಾಡುತ್ತಿರುವರು. ಒಮ್ಮೆಯೇ ಅವರು ನಮ್ಮ ಸ್ಥಾನಕ್ಕೆ ಬಾರಬಿಡಲು ಸಾಧ್ಯವಿಲ್ಲ. ನಾವು ನಮ್ಮ ವೈರಿಯನ್ನು ತಿರಸ್ಕರಿಸುವುದಕ್ಕಾಗಲಿ ಆತನ ಶಕ್ತಿಯನ್ನು ತೃಣೀಕರಿಸುವುದಕ್ಕಾಗಲಿ ಸಾಧ್ಯವಿಲ್ಲ. ಅವನು ದುರ್ಬಲನಿರುವನು. ಅದರ ಉಪಯೋಗ ಮಾಡಿಕೊಳ್ಳಬೇಕೆಂದು ಭಾವಿಸಿಕೊಳ್ಳುವುದು ತಪ್ಪು. ಅವನ ದೌರ್ಬಲ್ಯವು ನಮ್ಮನ್ನು ಸಬಲರನ್ನಾಗಲಿ ಸಮರಾರ್ಹರನ್ನಾಗಲಿ ಮಾಡುವುದಿಲ್ಲ. ನಾವು ಆತನ ಬಲದಿಂದ ಹತಾಶರಾಗಬೇಕಾಗಿಲ್ಲ. ನಮ್ಮ ಬಲವನ್ನು ಆತನ ಮನಗಾಣಿಸುವುದೇ ನಮ್ಮ ಕರ್ತವ್ಯ. ಇದನ್ನು ನಾವು ಕಾಯಿದೆಭಂಗದಿಂದಲ್ಲ; ನಮ್ಮ ಐಕಯವನ್ನು ಸಂಘಟಿಸುವುದರಿಂದ ಮಾಡಬೇಕು

ಮಿ. ಜಿನ್ನರ ಅಸಾಧ್ಯ ಧೋರಣೆ.

ಮಿ. ಜಿನ್ನರ ಅಸಾಧ್ಯ ಹಾಗೂ ರಾಷ್ಟ್ರ ವಿಘಾತುಕ ಧೋರಣೆಯನ್ನು ನಾವು ನಮ್ಮ ಮನಸ್ಸಿನಿಂದ ತೆಗೆದುಹಾಕಿ ಬಿಡಬಹುದು. ಆದರೆ ಮುಸಲ್ಮಾನರನ್ನು ನಾವು ಗಮನಿಸಲೇಬೇಕು. ನಮ್ಮ ಧೋರಣೆಯನ್ನು ಸ್ಪಷ್ಟವಾಗಿ ತಿಳಿದುಕೊಂಡು, ಮುಸಲ್ಮಾನರ ಕಡೆಗಿನ ನಮ್ಮ ಕರ್ತವ್ಯವನ್ನು ಮನಗಂಡು ನಾವು ಆ ಕುರಿತು ಜನಜಾಗ್ರತಿಯನ್ನುಂಟುಮಾಡಬೇಕು. ಜನ ಪ್ರತಿನಿಧಿ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ವಾದಿಗಳು ಮತ್ತು ಕಮಿಟಿಗಳು ಮುಸಲ್ಮಾನರೇ ಮೊದಲಾದವರ ಕುರಿತು ಉದಾರತನ ತೋರಿಸುವುದಿಲ್ಲೆಂದು ಮೌಲಾನ ಆಜದರು ನನ್ನೊಡನೆ ಹೇಳಿರುತ್ತಾರೆ. ನಾವು ಇಂತಹ ಸಂದೇಹಕ್ಕೆ ಆಸ್ಪದಕೊಡಕೂಡದು. ಪ್ರತಿಯೊಂದು ದೂರನ್ನೂ ಸಹಾನುಭೂತಿಯಿಂದ ಪರಿಶೀಲಿಸುವ ಆ ಪಾರ ಶ್ರಮವನ್ನು ಕಾಂಗ್ರೆಸ್ ಕಮಿಟಿಗಳು ವಹಿಸಬೇಕು. ಕೆಲವು ಕಾಂಗ್ರೆಸ್ ಕಮಿಟಿಗಳ ಮತ್ತು ಲೋಕಲ್ ಬೋರ್ಡುಗಳ ಚುನಾವಣೆಗಳಲ್ಲಿ ಮುಸಲ್ಮಾನ, ಹರಿಜನ ಮತ್ತು ಕ್ರೈಸ್ತರ ನ್ಯಾಯವಾದ ಹಕ್ಕುಗಳು ಅಲಕ್ಷ್ಯಿಸಲ್ಪಡುತ್ತಿವೆಯೆಂದು ತಂತಿಗಳು ನನಗೆ ಬಂದಿವೆ. ಹೀಗೆ ಎಲ್ಲಿ ನಡೆಯುತ್ತದೋ ಅಲ್ಲಿ ನ್ಯಾಯವನ್ನು ಮಾಡುವ ಸುವರ್ಣ ಸಂದರ್ಭವೊಂದು ಕಳೆದು ಹೋಗುವುದು.

ಅಸಹಿಷ್ಣುತೆಯಿಂದ ಅಥವಾ ನಮ್ಮ ಕೊರತೆಗಳನ್ನು ಮರೆಮಾಜಲು ನಾವು ಕಾಯಿದೆಭಂಗ ಚಳವಳ ಹೂಡುವಂತಿಲ್ಲ. ಆಂತರಿಕ ಮತ್ತು ಬಾಹ್ಯವಾದ ನಮ್ಮ ದೋಷಗಳನ್ನೆಲ್ಲಾ ಅದು ಪರಿಹರಿಸುವಂತದೇನೂ ಅಲ್ಲ ಅಸಾಧಾರಣ ಪರಿಸ್ಥಿತಿಯಲ್ಲಿ ಉಪಯೋಗಿಸಬೇಕಾದ ಸಿದ್ಧೌಷಧಿಯದು. ಆದರೆ ಅದಕ್ಕೆ ನಾವು ಸಿದ್ಧರಿರಬೇಕು. ನಾವೀಗ ತಯಾರಿರುವುದಿಲ್ಲೆಂದು ನಾನು ಸಂಪೂರ್ಣ ಜವಾಬ್ದಾರಿಯ ಪರಿವೆಯಿಂದಲೇ ಹೇಳುವೆನು. ಅದಕ್ಕೆ ಇಂದೀಗ ಕಾಲವು ಪರಿಪಕ್ವವಾಗಿಲ್ಲ. ಮುಂದೆ ಯಾವಾಗಲೂ ಆಗಬಹುದು. ಆ ಸಂದರ್ಭ ಬಂದಾಗ ನಾವು ಹಿಂದೆ ಬೀಳದೆ ತಯಾರಾಗಿರಬೇಕು ”

ಕನ್ನಡ ನುಡಿವಣ್ಣಿಗೊಂದು
ಕನ್ನಡಗಿತ್ತಿಯ ಗಿರುಗಾಣಿಕೆ
ನಾಡ ಸೋದರಿಯರ ನೈಜ ಜೀವನದ
ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ
ಹೃದಯಗಳ ಆಳವನ್ನೂ ಹೃದಯಂಗ
ಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ
ಬೆಲೆ: ೦-೭-೬.
0—8—0 ಸ್ಟ್ಯಾಂಪು ಕಳುಹಿಸಿದರೆ
1 ಪ್ರತಿಯನ್ನು ಕಳಿಸಬಹುದು.
ಬರಹಗಾರ್ತಿಯರು:-
ಶ್ರೀಮತಿ ಮಟ್ಟಾಡಿ ಕಮಲಾಕ್ಷಿ
ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶಾವಿಚಕ್ಷಣ "ಕರ್ನಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ನೀತಿ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ......'
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ
ಎಂಟರ್‌ಪ್ರೈಸ್ ಲಿಮಿಟೆಡಿನ
ಪಾಲುಗಳನ್ನು ಪಡೆದು
ಕಂಪೆನಿಯ
ಶ್ರೇಯೋಭಿವೃದ್ಧಿಯನ್ನು
ಬಯಸಿರಿ !

ಪ್ರ ಕ ಟ ಣೆ.

ಉಡ್ಪಿ ಮುನಿಸಿಪಾಲಿಟಿಯೊಳಗಿರುವ ಮಾರ್ಕೆಟು ಮಗಾಡಿ ಚೌಕಗಳಲ್ಲಿ ಮತ್ತು ವಧಾಗೃಹದಲ್ಲಿ (Slaughter house) 1940-1941ನೇ ವರ್ಷಗಳಲ್ಲಿ ವರಿ ವಸೂಲು ಮಾಡುವ ಸ್ವತಂತ್ರವನ್ನು ತಾ. 28-2-40ನೇ ಬುಧವಾರ ಪೂರ್ವಾಹ್ನ ಘಂಟೆ 11ಕ್ಕೆ ಉಡ್ಪಿಯಲ್ಲಿ ಉಡ್ಪಿ ಮುನಿಸಿಪಲ್ ಆಫೀಸಿನಲ್ಲಿ ಉಡ್ಪಿ ಮುನಿಸಿಪಲ್ ಕೌನ್ಸಿಲರ ರಿಂದ ಯಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಖಾಯಸ್ ಉಳ್ಳವರು ಏಲಂಗೆ ನಿಲ್ಲಬಹುದು.

ಏಲಂನ ಶರ್ತಗಳನ್ನು ಮ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನಿಸಿಪಲ್ ಆಫೀಸಿನಲ್ಲಿ ಬಂದು ತಿಳಕೊಳ್ಳಬಹುದು.

ಮುನಿಸಿಪಲ್ ಆಫೀಸ್, ಉಡುಪಿ
ತಾರೀಕು 29—1—1940

B. Suryanarayana Rao, M.A
ಕಮಿಶನರ್, ಉಡ್ಪಿ ಮುನಿಸಿಪಾಲಿಟಿ.

ಏಳಿರಿ ! ಎಚ್ಚೆತ್ತು ನೋಡಿರಿ !! ತ್ವರೆಮಾಡಿರಿ ಮತ್ತು ಶಕ್ತಿ ಪ್ರಾಪ್ತಿಮಾಡಿರಿ !!!

ರಾಷ್ಟ್ರೀಯ ಪರಶುರಾಮ, ಹನುಮಂತ ಮತ್ತು ಭೀಮರಂಥ ವೀರಪುರುಷರ ಅಗತ್ಯವಿದೆ.

ಆಯುರ್ವೇದ ಕೀರ್ತಿವಂತರ ರತ್ನ ೬೬ ವರ್ಷಗಳಿಂದ ಪ್ರಸಿದ್ಧವಾದ

ಶಕ್ತಿಸುಧಾಕರ ಗೋಳಿಯು (ರಿಜಿಸ್ಟರ್ಡ್)

ಪುರುಷರು ಕಳಕೊಂಡ ಶಕ್ತಿಯನ್ನು ಪುನಃ ಹೊಂದಿ ರಕ್ತಶುದ್ಧಿ ಮತ್ತು ಧಾತು ವೃದ್ಧಿಹೊಂದುತ್ತದೆ. ಸ್ವಪ್ನದಲ್ಲಿ, ಮಿತಿಮೀರಿ ಸ್ತ್ರೀಸಂಗ, ಕೆಟ್ಟ ಉಪಯೋಗ ಅಥವಾ ಮೂತ್ರದಲ್ಲಿ ಹೋಗುವ ಧಾತು (ರಕ್ತ) ಕೆಲವು ಸಮಯದ ಸೇವನೆಯಿಂದಲೇ ಸಂಪೂರ್ಣ ನಿಲ್ಲುತ್ತದೆ; ಅಲ್ಲದೆ ಸ್ಮರಣಶಕ್ತಿ ವೃದ್ಧಿಯಾಗಿ ದೇಹವನ್ನು ಪುಷ್ಟೀಕರಿಸುತ್ತದೆ. ಕ್ಷಯರೋಗವನ್ನು ಮತ್ತು ನಪುಂಸಕತ್ವವನ್ನು ಹೋಗಲಾಡಿಸಿ ನವತಾರುಣ್ಯವನ್ನುಂಟುಮಾಡುತ್ತದೆ. ಏದೆನೋವು ಎಂತೂ ಇದರ ಉಪಯೋಗದಿಂದ ಮಾಯವಾಗುತ್ತದೆನ್ನಲು ಸಂಶಯವಿಲ್ಲ. ತಾವು ಇದನ್ನು ಒಂದಾವರ್ತಿ ಉಪಯೋಗಮಾಡಿ ನೋಡಿದ್ದಲ್ಲಿ ತನ್ನಷ್ಟಕ್ಕೆ ತಾನೇ ಇದರ ಗುಣಾಂಶವು ತಿಳಿದುಬರುವುದು.

32 ಗುಳಿಗೆಗಳ ಡಬ್ಬಿ 1ರ ಬೆಲೆ ರೂ. 1 ಮಾತ್ರ.

ಕಿಶೋರು ಕಾಂತಿಗುಟಿಕಾ

ಸ್ತ್ರೀಯರಿಗೆ ಉಪಯುಕ್ತವಾದ ಔಷಧ:— ಗರ್ಭಕೋಶದ ನಾನಾತರದ ರೋಗಗಳು ಇದರ ಸೇವನೆಯಿಂದ ರಾಮಬಾಣದಂತೆ ಗುಣಹೊಂದುತ್ತವೆ. ಜೀರ್ಣಜ್ವರ, ಪ್ರದರ ಇತ್ಯಾದಿ ಅನೇಕ ರೋಗಗಳು ಗುಣಹೊಂದುತ್ತವೆ. ಮತ್ತು ಒಳ್ಳೇ ಶಕ್ತಿಬರುತ್ತದೆ. ಸುಲಭ ಬೆಲೆ, ಮಹತ್ವಾದ ಕೆಲಸ, ಶಿಫಾರಸು ಪಡಕೊಂಡ ಈ ಔಷಧವನ್ನು ನಾವಾಗಿ ಹೊಗಳುವಂಥಾದ್ದು ಅಗತ್ಯವಿಲ್ಲ. ಒಂದು ಡಬ್ಬಿಯನ್ನು ಸೇವನೆಮಾಡಿ ಪರೀಕ್ಷಿಸಿನೋಡಿರಿ.

ಬೆಲೆ ಡಬ್ಬಿ ೧ಕ್ಕೆ ರೂಪಾಯಿ ೧—೦—೦ ಮಾತ್ರ.

Vaidya Shasthry Kalaynji Thakar,
365 Kalbadevi Road, (Opp. Temple)
HANUMAN LANE CORNER,
BOMBAY 2.

ವೈದ್ಯಶಾಸ್ತ್ರಿ ಕಲ್ಯಾಣ್ಜಿ ಠಾಕರ್,
365 ಕಲ್ಬಾದೇವಿ ರಸ್ತೆ (ದೇವಾಲಯದ ಎದುರು)
ಹನುಮಾನ್ ಗಲ್ಲಿಯ ನಾಕ, ಮುಂಬಾಯಿ ನಂ. 2

ಸ್ತ್ರೀ ವಿದ್ಯಾಭ್ಯಾಸ ಮತ್ತು ಗೃಹಿಣೀ ಧರ್ಮ

ಒಲಿದರೆ ನಾರಿ! - - ಮುನಿದರೆ ಮಾರಿ!!

(ಮೈಸೂರು ಸಂಸ್ಥಾನದ ದಿವಾನರವರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ. ಸಿ. ಐ., ಇ. ಓ. ಬಿ. ಇ., ಅವರು ತಾ. 5-2-40 ರಲ್ಲಿ ಬೆಂಗಳೂರಲ್ಲಿ ಮಹಿಳೆಯರಿಗಾಗಿ ಸ್ಥಾಪಿತವಾಗಿರುವ ಮಹಾರಾಣೀ ಕಾಲೇಜಿನ ನಾಷ್ಟಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣದ ಸಾರಾಂಶ.)

ಅನೇಕ ವರ್ಷಗಳಿಗೆ ಹಿಂದೆ ಶ್ರೀ ವಿವೇಕಾನಂದ ಸ್ವಾಮಿಗಳವರು ಅಮೇರಿಕಾ ಖಂಡಕ್ಕೆ ದಯಮಾಡಿದ್ದಾಗ್ಗೆ ಬರೆದ ಒಂದು ಪತ್ರದಲ್ಲಿ ಸ್ತ್ರೀಯರ ಸ್ಥಿತಿಯು ಉತ್ತಮವಾದಲ್ಲದೆ ಪ್ರಪಂಚವು ಉದ್ಧಾರವಾಗುವುದಿಲ್ಲವೆಂದೂ, ಹಕ್ಕಿಯು ಒಂದೇ ರೆಕ್ಕೆಯಿಂದ ಹಾರುವುದು ಸಾಧ್ಯವಿಲ್ಲವೆಂದೂ ಸೂಚಿಸಿದ್ದರು. ಅವರು ಭರತಖಂಡದಲ್ಲಿ ಮಹಿಳೆಯರಿಗಾಗಿ ಒಂದು ಮಠವನ್ನೇರ್ಪಡಿಸಿ ಗಾರ್ಗಿಯಂತೆಯೂ ಮೈತ್ರೇಯಿಯಂತೆಯೂ ಇರುವ ಮಹಿಳೆಯರು ಸಿದ್ಧವಾಗುವ ವ್ಯವಸ್ಥೆ ಮಾಡಬೇಕೆಂದಿದ್ದರು. ಆದರೆ ಭರತಖಂಡದಲ್ಲಿ ಈಗಿನ ಕಾಲಕ್ಕೆ ಬೇಕಾದ ಗಾರ್ಗಿ ಮೈತ್ರೇಯಿಯರನ್ನು ಸಿದ್ಧಪಡಿಸುವುದಕ್ಕಾಗಿ ಶಿಕ್ಷಣ ಕೊಡಬೇಕಾದರೆ ಏರ್ಪಡಿಸತಕ್ಕ ವಿದ್ಯಾಭ್ಯಾಸದ ಶಿಸ್ತು, ವ್ಯಾಸಂಗ ಕ್ರಮವೂ, ಹಿಂದಿನ ಕಾಲದವುಗಳಿಗಿಂತ ಬೇರೆಯಾಗಿರಬೇಕು. ಅವುಗಳಲ್ಲಿ ನಮ್ಮ ವಿದ್ಯಾರ್ಥಿನಿಯರಿಗೆ ಬೇಕಾದ ಈಗಿನ ಕಾಲದ ವಿಜ್ಞಾನ ವಿಷಯಗಳೂ ಸೇರಿರಬೇಕು. ಈಗಿನ ಕಾಲದ ವಿದ್ಯಾರ್ಥಿನಿಯರು ಜೀವನ ವಿಜ್ಞಾನ ತರಗತಿಯಲ್ಲಿ ಪ್ರಾಣಿಗಳ ದೇಹಗಳ ನಾನಾ ಭಾಗಗಳನ್ನೂ ಪರಿಶೀಲಿಸುವುದಕ್ಕಾಗಿ ಕೊಯ್ದು ನೋಡಲು ಶಸ್ತ್ರವನ್ನು ಕುಶಲತೆಯಿಂದಲೂ ನಿರುದ್ವೇಗದಿಂದಲೂ ಪ್ರಯೋಗಿಸುವುದನ್ನು ಕಂಡಿದ್ದರೆ ಹಿಂದಿನ ಕಾಲದವರು ಆಶ್ಚರ್ಯಚಕಿತರಾಗಿ ಕೊನೆಗೆ ದಿಗ್ಭ್ರಾಂತರಾಗುತ್ತಿದ್ದರೋ ಏನೋ! ಭರತಖಂಡದ ಜನಜೀವನದಲ್ಲಿ ಮಹಿಳೆಯರ ಭಾಗವು ಹೆಚ್ಚಿದಂತೆಲ್ಲಾ ಆವಶ್ಯಕನುಸಾರವಾಗಿ ಸ್ತ್ರೀವಿದ್ಯಾಭ್ಯಾಸದ ವ್ಯಾಸಂಗ ವಿಷಯಗಳೂ ಬೆಳೆದು ಬರುತ್ತಿವೆ. ಈಗ ಭರತಖಂಡದ ಜನಜೀವನದ ಯಾವುದೊಂದು ಕ್ಷೇತ್ರದಲ್ಲಿ ಸಹ ಸ್ತ್ರೀಯರು ಭಾಗವಹಿಸದೆ ಬಿಟ್ಟಿಲ್ಲ; ಅಥವಾ ಅವರು ಹಾಗೆ ಭಾಗವಹಿಸದಂತೆ ಮಾಡುವುದು ಸಹ ಸಾಧ್ಯವಿಲ್ಲ; ಹಾಗೆ ಮಾಡುವುದಾದರೆ ಸ್ತ್ರೀಯರ ಆತ್ಮಗೌರವಕ್ಕೇ ಹಾನಿಯನ್ನುಂಟುಮಾಡಿದಂತಾಗುತ್ತದೆ.

ಆದರೆ ಮುಖ್ಯವಾದ ಧ್ಯೇಯಗಳೇನೊ ಇದ್ದಂತೆಯೇ ಇವೆ; ಸ್ತ್ರೀಯರು ಪೂರ್ಣ ವಿದ್ಯಾವತಿಯರಾಗುವುದರ ಪ್ರಯೋಜನಗಳನ್ನೆಲ್ಲ ಪಡೆದು ಜನಜೀವನದಲ್ಲಿ ತಮಗೆ ಲಭಿಸಬೇಕಾದ ಉಚಿತಸ್ಥಾನವನ್ನು ಪಡೆಯಬೇಕೆಂಬುದೇ ಆ ಧ್ಯೇಯ.

ಇಂದು ಸ್ತ್ರೀಪುರುಷರ ಜೀವನಕ್ರಮಗಳಿಗಿರುವ ಭೇದವು ಈಗ್ಗೆ ಐವತ್ತು ವರ್ಷಗಳ ಹಿಂದಿದ್ದುದಕ್ಕಿಂತಲೂ ಕಡಿಮೆಯಾಗಿದೆ. ಈಗ ಸ್ತ್ರೀಯರ ಜೀವನ ವಿಧಾನದಲ್ಲಿ ಗೃಹಿಣೀ ಧರ್ಮಗಳೂ ಸೇರಿರುತ್ತವೆ; ಮತ್ತು ಸಾಮಾಜಿಕ ಧರ್ಮಗಳೂ ಸೇರಿರುತ್ತವೆ; ಅದರಲ್ಲಿ ಗೃಹಕೃತ್ಯದ ಕೆಲಸಗಳು ಮಾತ್ರವೇ ಅಲ್ಲದೆ ಕುಟುಂಬಕ್ಕೆ ಸಂಬಂಧಪಟ್ಟಿಲ್ಲದ ಕೆಲಸಗಳೂ ಸೇರಿರುತ್ತವೆ; ಜನಜೀವನಕ್ಕೆ ಅತ್ಯವಶ್ಯವೆಂದು ಈಗ ಭಾವಿಸಲ್ಪಟ್ಟಿರುವ ಆಟಪಾಟಗಳ ಮತ್ತು ಕಲೆಗಳ ಸಂಬಂಧವಾದ ಬಗೆಬಗೆಯ ಉಲ್ಲಾಸಕರವಾದ ಅಂಶಗಳೂ ಯಥೇಷ್ಟವಾಗಿ ಸೇರಿರುತ್ತವೆ; ಮತ್ತು ಸತ್ಪ್ರಜೆಗಳ ಕರ್ತವ್ಯಗಳನ್ನು ನಿರ್ವಹಿಸುವ ಪ್ರಜಾಧರ್ಮವೂ ಮಹಿಳೆಯರ ಜೀವನ ವಿಧಾನದಲ್ಲಿ ಸೇರಿರುತ್ತದೆ.

ಆದರೆ ಒಂದು ಕಾರ್ಯಕ್ಷೇತ್ರವು ಮಾತ್ರ ಎಂದೆಂದಿಗೂ ಸ್ತ್ರೀಯರಿಗೆ ಮಾತ್ರವೇ ಮೀಸಲಾಗಿ ಅವರ ವೈಶಿಷ್ಟ್ಯವಾಗಿರುತ್ತದೆ. ಅದೇ ಗೃಹಿಣೀ ಧರ್ಮ. ನಾನು ಹೀಗೆ ಹೇಳುತ್ತಿರುವುದರಲ್ಲಿ ಯಾರೂ ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ನಂಬಿದ್ದೇನೆ. ಸ್ತ್ರೀಯರು ಗೃಹಿಣೀ ಧರ್ಮವನ್ನು ಸರಿಯಾಗಿಯೂ ಜಾಗರೂಕತೆಯಿಂದಲೂ ನಡೆಯಿಸಿಕೊಂಡು ಬಂದಲ್ಲಿ ಮಾತ್ರವೇ ಜನಜೀವನವು ಸರ್ವ ವಿಧಗಳಲ್ಲಿಯೂ ಸೊಂಪುಗೂಡಿ ಬೆಳಗುವುದು ಸಾಧ್ಯ. ನೀವು ವಿವಾಹಿತರಾಗಿ ಯಾವನೋ ಪುಣ್ಯಶಾಲಿಯ ಅರ್ಧಾಂಗಿಯಾಗಿರಬೇಕೆಂದು ನಿರ್ಧರಿಸಿದರೂ ಸರಿ; ಅಥವಾ ಅವಿವಾಹಿತೆಯರಾಗಿದ್ದು ನಿಮ್ಮ ಜೀವನಕ್ಕಾಗಿ ಆರಿಸಿಕೊಳ್ಳುವ ವೃತ್ತಿಯನ್ನು ನಡೆಯಿಸಿಕೊಂಡು ಒಬ್ಬರೇ ಸುಖಿಸಿದ್ದರೂ ಸರಿ; ಗೃಹಕಾರ್ಯನಿರ್ವಹಣವೇನೊ ನಿಮ್ಮನ್ನೇ ಅವಲಂಬಿಸಿ ನಿಮಗೆ ಹಿತಕರವಾದ ಮುಖ್ಯ ಕರ್ತವ್ಯಗಳಲ್ಲೊಂದಾಗಿದ್ದೇ ಇರುತ್ತದೆ. ಗೃಹಿಣಿಯು ತನಗೂ ಮತ್ತು ತನ್ನ ಗಂಡನಿಗೂ ಸಂತೋಷಕರವಾಗಿರುವಂತೆಯೂ ದಿನದಿನದ ಶ್ರಮವೂ ಆತಂಕವೂ ಮರೆಯಾಗಿ ಸ್ವಲ್ಪ ಕಾಲವಾದರೂ ಹಾಯಾಗಿರಲು ಸಾಧ್ಯವಾಗುವಂತೆಯೂ ಗೃಹಕಾರ್ಯಗಳನ್ನು ನಿರ್ವಹಿಸಬೇಕು. ಮದುವೆಯಾಗದೆ ಒಬ್ಬರೇ ವಾಸಿಸುವ ಮಹಿಳೆಯರು ಕೂಡ ತಮಗೋಸ್ಕರವಾದರೂ ಗೃಹಕಾರ್ಯಗಳನ್ನು ನಿರ್ವಹಿಸಿ ನೋಡಿಕೊಳ್ಳಲೇ ಬೇಕಾಗುತ್ತದೆ. ಆದಕಾರಣ, ಮಹಿಳೆಯರಲ್ಲಿ ಬಹುಭಾಗದವರಿಗೆ ಗೃಹಕಾರ್ಯನಿರ್ವಹಣದ ಮುಖ್ಯ ತತ್ವಗಳೆಲ್ಲ ತಿಳಿದಿರಬೇಕಾಗುತ್ತದೆ.

ದಂಪತಿಗಳ ವ್ಯಕ್ತಿತ್ವವೂ ಅವರು ಅನ್ಯೋನ್ಯವಾಗಿ ಒಬ್ಬರ ಕುಂದುಕೊರತೆಗಳನ್ನು ಕುರಿತು ಮತ್ತೊಬ್ಬರು ಸೈರಿಸಿ ಹೊಂದಿಕೊಂಡು ಹೋಗುವುದೂ ಒಂದು ಕುಟುಂಬದಲ್ಲಿ ಸೌಖ್ಯವು ನೆಲಸುವಂತೆ ಮಾಡುವ ಸಾಧನಗಳು. ಪರಿಣಾಮದಲ್ಲಿ ಅವುಗಳಿಂದಲೇ ಕುಟುಂಬದಲ್ಲಿ ಸೌಖ್ಯವು ನೆಲಸಲು ಕಾರಣವಾಗಬೇಕು. ಹಣವೂ ಸೌಕರ್ಯಗಳೂ ಅವುಗಳಷ್ಟು ಮುಖ್ಯವಲ್ಲ. ಆದರೂ ಅವೂ ಅವಶ್ಯವಾಗಿ ಬೇಕು. ಹೊಸದಾಗಿ ಮದುವೆಯಾದ ತನ್ನ ಮಗಳನ್ನು ಕುರಿತು ಮಹಿಳೆಯೊಬ್ಬಳು "ಆ ಪ್ರಾಣಿಗೆ ಚೆನ್ನಾಗಿ ತಿಂಡಿಹಾಕು" ಎಂದಳಂತೆ. ಆಕೆ ಬುದ್ಧಿವಂತೆ. ಆಹಾರವು ಹಿತಕರವಾಗಿರಬೇಕಾದರೆ ಅಡಿಗೆ ಚೆನ್ನಾಗಿರಬೇಕು; ಅಡಿಗೆ ಚೆನ್ನಾಗಿದ್ದು ಹೆಂಡತಿಯು ಗಂಡನಿಗೆ ಪುಷ್ಕಳವಾಗಿ ಊಟಕ್ಕೆ ಬಡಿಸಿದರೆ ಮಾತ್ರವೇ ಕುಟುಂಬದಲ್ಲಿ ಅನ್ಯೋನ್ಯತೆಯೂ ಸಾಮರಸ್ಯವೂ ಇದ್ದಾವು. ಸರಿಯಾದ ಮತ್ತು ಪುಷ್ಟಿಕರವಾದ ಆಹಾರವು ದೇಹಾರೋಗ್ಯಕ್ಕೆ ಎಷ್ಟು ಅವಶ್ಯಕವೆಂಬುದು ಈಗ ಸಮಸ್ತರಿಗೂ ತಿಳಿದಿದೆ. ಸಾಮಾನ್ಯರಿಂದ ಹಿಡಿದು "ಲೀಗ್ ಆಫ್ ನೇಷನ್ಸ್" ಸಭೆಯ ಸದಸ್ಯರಾದ ರಾಜನೀತಿಜ್ಞರ ವರೆಗೆ ಸಮಸ್ತರೂ ಅದನ್ನು ಬಲ್ಲರು. ಪುಷ್ಟಿಕರವಾದ ಆಹಾರ, ಅದಕ್ಕೆ ಬೇಕಾದ ಪದಾರ್ಥಗಳು, ರುಚಿಕರವಾಗಿಯೂ ಚಿತ್ತಾಕರ್ಷಕವಾಗಿಯೂ ಇರುವಂತೆ ಅಡಿಗೆ ಮಾಡುವುದು ಮುಂತಾದ ಅಂಶಗಳನ್ನೆಲ್ಲ ಬೋಧಿಸಲು ಈ ಸಂಸ್ಥೆಯಲ್ಲಿ ಮುಂದೆ ಗೃಹಕಾರ್ಯವಿಜ್ಞಾನವನ್ನು ಬೋಧಿಸುವವರು ಗಮನ ಕೊಡುವರೆಂದು ನಾನು ನಂಬಿದ್ದೇನೆ.

ನೀವು ಕೇವಲ ಗೃಹಕಾರ್ಯ ನಿರ್ವಹಣದಿಂದಲೇ ತೃಪ್ತರಾಗದೆ ಒಟ್ಟು ಜನಜೀವನದಲ್ಲಿ ಭಾಗಿಗಳಾಗಿ ಸಮಾಜಸೇವೆ ಮಾಡಲು ನಿರ್ಧರಿಸಿದರೂ ಅಥವಾ ಗೃಹಕಾರ್ಯ ನಿರ್ವಹಣಕ್ಕೆ ಮಾತ್ರ ಗಮನ ಕೊಟ್ಟು ಜನಜೀವನದ ಇತರ ಕ್ಷೇತ್ರಗಳಲ್ಲಿ ನಡೆಯುವ ಕಾರ್ಯಗಳಲ್ಲಿ ಸಹಾನುಭೂತಿಯಿಂದ ಆಸಕ್ತಿ ವಹಿಸಿ ಸುಮ್ಮನೆ ಪರಿಶೀಲಿಸುತ್ತ ಅವುಗಳಲ್ಲಿ ಕೆಲಸಮಾಡುವವರಿಗೆ ಒತ್ತಾಸೆಕೊಟ್ಟು ಸಹಾಯ ಮಾಡಬೇಕೆಂದು ನಿರ್ಧರಿಸಿದರೂ ಮುಂದೆ ದೃಢಕಾಯರಾಗಿ ಪೂರ್ಣಾರೋಗ್ಯದಿಂದಿರಬೇಕಾದುದು ಅತ್ಯಾವಶ್ಯಕ. ಆದಕಾರಣ ಅದಕ್ಕೆ ಸಹಾಯವಾಗುವಂತೆ, ದೇಹಪುಷ್ಟಿಯು ಸುಲಭವಾಗಿ ಸಾಧ್ಯವಾಗುವ ಈಗಿನ ವಯಸ್ಸಿನಿಂದಲೇ ತಕ್ಕಂತೆ ವ್ಯಾಯಾಮವನ್ನು ಪಡೆಯುವುದಕ್ಕೂ ನೀವು ಗಮನಕೊಡಬೇಕು.

ನಮ್ಮ ಉಡುಪಿ

ಹೊಸ ಮಾದರಿಯ ಸಚಿತ್ರ ಪುಸ್ತಕ

ಎಲ್ಲೆಲ್ಲೂ ಪ್ರಸಿದ್ಧಿ ಪಡೆದಿರುವ ಉಡುಪಿಯ ಚರಿತ್ರೆಯನ್ನು ತಿಳಿಯಬೇಕೇ?

ಹಾಗಿದ್ದರೆ ಶ್ರೀ ಕೊರಡ್ಕಲ್ಲರು ಹೊಸ ದೃಷ್ಟಿಯಿಂದ ಬರೆದ 'ನಮ್ಮ ಉಡುಪಿ' ಯನ್ನು ಓದಿರಿ.

ಉಡುಪಿ ಕ್ಷೇತ್ರಕ್ಕೆ ಯಾತ್ರಾ ದೃಷ್ಟಿಯಿಂದಾಗಲೀ, ಐತಿಹಾಸಿಕ ಮಹತ್ವದ ದೃಷ್ಟಿಯಿಂದಾಗಲೀ, ಸಂದರ್ಶನಾರ್ಥವಾಗಿ ಬಂದವರೂ, ಬರುವವರೂ, ನೋಡಲಾಗಿ ತಿಳಿದುಕೊಳ್ಳಬೇಕಾದುದು ಈ ಕ್ಷೇತ್ರದ ಹಿಂದಿನ ಮತ್ತು ಇಂದಿನ ಸಚಿತ್ರ ವಿವರ, ಸಮಾಜ ಸೇವಕರಿಗೆ ಬೇಕಾದುದು ವೈಯಕ್ತಿಕ ಜೀವಜ್ಯೋತಿಗಳ ಜೀವನ ಚರಿತ್ರೆ. ಅವೆಲ್ಲವೂ ಈ ಪುಸ್ತಕದಲ್ಲಿದೆ.

ಬೆಲೆ: 0-5-0, ಟ. ಖರ್ಚು 0-1-0

(ಫೆಬ್ರವರಿ ಅಂತ್ಯದೊಳಗೆ 0-5-0 ಸ್ಟಾಂಪು ಕಳುಹಿಸುವವರಿಗೆ ದಪ್ಪಾಲು ಖರ್ಚು ಮಾಫ್.)

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಈ ಕೆಳಗಿನ ಪ್ರಕಾಶಕರಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಚರ್ಚ್‌ರೋಡು, ಉಡುಪಿ.

The Canara Banking Corporation Ltd., Udipi.

ದಿ ಕೆನರಾ ಬೇಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್, ಉಡುಪಿ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ನಗಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಮೇಲಣ ಬಡ್ಡಿಯನ್ನಾಗಲೀ ಮ್ಯಾದೆಗೆ ಕೊಡದೆ ಇದ್ದುದರಿಂದಲೂ, ಆ ಬಗ್ಗೆ ಅವರಿಗೆ ಬಿಟ್ಟ ರಿಜಿಸ್ತ್ರ ನೋಟೀಸುಗಳು ಪಾಪ್ತಿಯಾಗದೆ ವಾಪಾಸು ಬಂದಿರುವದರಿಂದಲೂ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದ್ರಿಯವರು ಈಡಿಟ್ಟ ನಗಗಳನ್ನು ತಾ. 11-3-1940ರ ವಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ ತಾ. 16-3-1940ನೇ ಶನಿವಾರ ಅಪರಾಹ್ನ ಘಂಟೆ 1ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ತಿಳಿದಿರುವದು.

ಸಾಲದ ನಂಬ್ರ.		ಸಾಲಗಾರರ ಹೆಸರು ವಿಳಾಸ.	ಸಾಲದ ಮೊಬಲಗು.
(1)	೬೭೩/೩೮	ಸಂತೆಕಟ್ಟೆ ಆದಂ ಸಾಹೇಬ್, ಹುಸೇನ್ ಸಾಹೇಬರ ಮಗ, ಹೋಟೆಲ್ ಕೀಪರ್, ಸಂತೆಕಟ್ಟೆ, ಉಡುಪಿ.	20—0--0
(2)	೧೩೬/೩೦	ಸಂತೆಕಟ್ಟೆ ಆದಂ ಸಾಹೇಬ್, ಹುಸೇನ್ ಸಾಹೇಬರ ಮಗ, ಸಂತೆಕಟ್ಟೆ, ಉಡುಪಿ.	60--0--0.
(3)	೩೧/೩೭	ಪಿ. ಎಸ್. ವೆಂಕಟಕೃಷ್ಣ ರಾವ್, ಶ್ರೀನಿವಾಸರಾಯರ ಮಗ, ರೈತ, ಪೆರಂಪಳ್ಳಿ, ಪೋಸ್ಟ್ ಕಲ್ಯಾಣಪುರ.	20—0—0.
(4)	೩೬೦/೩೭	ಶೇಕ್ ಅಹಮ್ಮದ್ ಸಾಹೇಬ್, ಅಬ್ದುಲ್ ರಹಿಮಾನ್ ಸಾಹೇಬರ ಮಗ, ಸಡಕೆರೆ, ಉದ್ಯಾವರ.	25—0—0.

ದಿ ಕೆನರಾ ಬೇಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್,
ಆಫೀಸು ಉಡುಪಿ, ತಾರೀಕು 9-2-1.40.

N. R. Bhat,
ಏಜಂಟ್.

GET
Rich & Prosperous!

Here is an authorised simple means upheld and pursued by millions of persons with great advantage. This should lead you also to Riches and Prosperity. Ask for details-go through it carefully-take advantage of it and enjoyfull comforts, luxury, influence and all that go to make HAPPINESS complete.

K. S. ROW,
Worli, BOMBAY.

THE ASIAN ASSURANCE COMPANY, LIMITED.

ASIAN BUILDINGS - - - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
„ M. Shivarama Rao, Organizer, Puttur.

Or

Sri. J. A. PUTRAN,
Branch Manager, MANGALORE.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

THE

VIJAYA BANK LTD.,

MANGALORE.

ದಿ ವಿಜಯಾ ಬೇಂಕ್ ಲಿಮಿಟೆಡ್,

ಮಂಗಳೂರು.

ಸ್ವಜಾತಿ ಗೃಹಸ್ಥರಲ್ಲಿ ವಿನಂತಿ

ಈ ಬೇಂಕು **1931** ನೇ ಇಸವಿಯಲ್ಲಿ ಬಂಟರ ಯಾನೆ ನಾಡವ ಸಮಾಜದ ಕೆಲವು ಮಂದಿ ಮುಖಂಡರ ಪ್ರಯತ್ನದಿಂದ ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟು, ಈಗ ಅದರ ಶಾಖೆಗಳು, ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳದಲ್ಲಿ ತೆರೆಯಲ್ಪಟ್ಟವೆ. ಬೇಂಕು ದಿನೇ ದಿನೇ ಸ್ಥಿರವಾದ ಅಭಿವೃದ್ಧಿ ಹೊಂದಿ ಜನವಿಶ್ವಾಸಕ್ಕೆ ಪಾತ್ರವಾಗಿದೆ. ಸದ್ರಿ ಬೇಂಕಿನ ಪಾಲುದಾರರಿಗೆ ಹೋದ ವರ್ಷ ಶೇಕಡಾ 7ರಷ್ಟು ಡಿವಿಡೆಂಡ್ ಹಂಚಲ್ಪಟ್ಟಿದೆ.

ಬೇಂಕಿನ ಕಾರ್ಯಕ್ಷೇತ್ರವನ್ನು ಇನ್ನಷ್ಟು ವ್ಯಾಪನೆಗೊಳಿಸಿ ಅದನ್ನು ಹೆಚ್ಚೆಚ್ಚಾಗಿ ಜನತೆಗೆ, ವಿಶೇಷವಾಗಿ ಕೃಷಿಕರಿಗೆ ಉಪಯೋಗಕರವಾಗುವಂತೆ ಮಾಡಬೇಕೆಂದು ನಮ್ಮೆಲ್ಲರ ಪ್ರಾಮುಖ್ಯ ಉದ್ದೇಶವಾಗಿರುತ್ತದೆ. ಅದಕ್ಕಾಗಿ ಅದರ ಪಾಲುಗಳನ್ನು ಬಂಟರ ಯಾನೆ ನಾಡವ ಸಮಾಜದ ಗೃಹಸ್ಥರು, ಇನ್ನೂ ಹೆಚ್ಚಾಗಿ ಪಡೆದು ಪ್ರೋತ್ಸಾಹಪಡಿಸುವುದು ಅಗತ್ಯವಾಗಿದೆ. ಬೇಂಕಿನ ಸೆಕ್ರೆಟರಿಗಳಾಗಿದ್ದ ಶ್ರೀ. ಕೆ. ಗೋಪಾಲಕೃಷ್ಣ ಶೆಟ್ರು 4 ತಿಂಗಳ ಮಟ್ಟಿಗೆ ಪಾಲುಗಳನ್ನು ಹೊಸತಾಗಿ ಸಂಗ್ರಹಿಸುವ ಕೆಲಸಕ್ಕೇನೇ ನಿಯುಕ್ತರಾಗಿದ್ದಾರೆ. ಅವರು ತನ್ನ ಕೆಲಸವನ್ನು ಇಷ್ಟರಲ್ಲೇ ಆರಂಭಿಸಿ ಕೆಲವು ಕಡೆಗಳಲ್ಲಿ ಸಂಚರಿಸಿ, ಉದಾರ ಪ್ರೋತ್ಸಾಹ ಪಡೆದಿರುತ್ತಾರೆ. ಜಿಲ್ಲೆಯ ಉಳಿದ ಭಾಗಗಳಲ್ಲಿಯೂ ಜಿಲ್ಲೆಯ ಹೊರಗೂ ಅವರು ಸಂಚರಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಆದುದರಿಂದ ಸ್ವಜಾತಿ ಗೃಹಸ್ಥರೆಲ್ಲರೂ ಸಮಾಜದ ಒಂದೇ ಒಂದು ಬೇಂಕಿಂಗ್ ಸಂಸ್ಥೆಯಾದ ವಿಜಯಬೇಂಕಿನ ಪಾಲುಗಳನ್ನು ಹೆಚ್ಚೆಚ್ಚಾಗಿ ತೆಗೆದುಕೊಂಡು ಉದಾರಾಶ್ರಯವಿತ್ತು ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ.

Mangalore,
26–1–'40

(Signed by) **B. Manjaya Hegde.**
Chairman of the
Board of Directors.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಚಿಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ.)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚ ತರತಿ (5 ಏಕಾಂಕ ನಾಟಕಗಳ ಸಂಗ್ರಹ)
ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)
ರೂ. 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪ್ರತ್ಯೇಕ)
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪ್ರತಿಗಳಿಗೆ ಬರೆಯಿರಿ:–
ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸ್ವಪ್ನದೋಷ, ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ಹುಟ್ಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.
ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರಠ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
Null Bazzar, Duncan Road,
BOMBAY 4

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ. ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:–ರಥಬೀದಿ ಮಂಗಳೂರು.

ಸ್ಕೂಲ್, ಲೈಬ್ರೆರಿ ಮತ್ತು ಗ್ರಾಮಪಂಚಾಯಿತಿಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ.
ವ್ಯಾಪಾರಿಗಳಿಗೆ ಹೆಚ್ಚು ಕಮಿಶನ್ ಇದೆ,

ಪಿ. ಎ. ಉಪಾಧ್ಯಾಯ,
ಬುಕ್ ಸೆಲರ್ ಅಂಡ್ ಪಬ್ಲಿಶರ್,
೪೫ ಎ.ಎಸ್. ಸ್ಟ್ರೀಟ್ ಬೆಂಗಳೂರು ಸಿಟಿ

೧ ರೂ. ಕೊಡುವ ಚಂದಾರರಿಗೆ ಮಾತ್ರ

ರೂ. ೩ರ ಪುಸ್ತಕಗಳು

ಈಗಲೇ] **ಉಚಿತ** [ಈ ದಿನವೇ

ಪುಸ್ತಕಗಳ ಪಟ್ಟಿಗೆ ಬರೆಯಿರಿ
ವ್ಯವಸ್ಥಾಪಕ:–ಪಿ. ಎ. ಉಪಾಧ್ಯಾಯ
ಪುಷ್ಪಗ್ರಂಥ ಪ್ರಕಾಶನ ಸಮಿತಿ,
೪೫ ಎ. ಎಸ್. ಸ್ಟ್ರೀಟ್, ಬೆಂಗಳೂರು ಸಿಟಿ

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿಸೋರುವುದು, ನೋವು, ಊದಿಕೊಳ್ಳುವುದು, ಶಬ್ದ ಕೇಳುವುದು, ತುರಿಸುವುದು, ಕೀವು ಅಥವಾ ಹುಳ ಸೇರುವುದು, ಕರ್ಣಕೋಶದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೈನ್ ತೆಗೆದುಕೊಂಡ ಪರಿಣಾಮದಿಂದ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡುತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಖಾತ್ರಿಗುಣಹೊಂದುವುದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು. ಬಾಟ್ಲಿ 1ರ ಬೆಲೆ ರೂ. 2, 3 ಬಾಟ್ಲಿಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ **4.**

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರದ ಸರಕಿನ ಈಡಿನ ಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸ್ಥಿರಖಾತೆ ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಹಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager,*
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ಸೊಬಗು ಹೆಚ್ಚುವುದು. ಇದು ಮಧುರವಾಗಿದೆ ಆತಿಬಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು. ಸೀಸೆ 1ಕ್ಕೆ 12 ಆಣೆ, ಟ ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ**:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ**:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ**: ಸುಖಸೇವನದಿಂದ ಮಧುರಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:-- ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡ್ ಜವಾನರ ಬಿಲ್ಲೆ, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.
Approved firm by the Govt. of Mysore. Certified by the Agent of the Govt. of India in Ceylon

SALE! SALE! SALE!



ಮೊದಲಿನ ಕ್ರಯ ರೂ., 10
ಈಗಿನ ಕ್ರಯ ರೂ. 3-12-0.

Swiss Lever Wrist Watch

ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನಮೂನೆ ಗಡಿಯಾರಗಳು ಸ್ವಿಟ್ಸರ್ಲಾಂಡಿನಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡುವದಕ್ಕೂ ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳುವದಕ್ಕೂ ಬಹು ಅಂದವಾಗಿವೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುತ್ತಿರುವದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಇದಕ್ಕಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ರೈಲ್ವೆ ಉದ್ಯೋಗಸ್ಥರೂ, ದೊಡ್ಡ ಆಫೀಸರುಗಳೂ, ಜವಾನ್ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ಖರೀದಿಸಲಿಕ್ಕೆ ಪ್ರಯತ್ನಪಡುವರು.

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ 3-12-0

ROYAL CO, 19 Beat, SOWCARPET G. T. MADRAS,
ರಾಯಲ್ ಕಂಪೆನಿ, ೧೯ ಬೀಟ್ ಸಾಹುಕಾರ ಪೇಟೆ, ಜಿ. ಟಿ. ಮದರಾಸು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ಟ್ರೇಡ್‌ಮಾರ್ಕ್ ಮುಲಾಮು —

ಇಷ್ಟರ ವರೆಗಿನ ನಮ್ಮ ವಿಲಿಯಮ್ ಎಂಡ್ ಕೋ ಅವರ ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ **'ರೈಸಿಂಗ್ ಸನ್'**

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, -- ಬೊಂಬಾಯಿ, ಮದ್ರಾಸು, ಕಲ್ಕತ್ತ

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅತಿ ಸೋವಿಯೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S, KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.

[Regist]ered No M 3618 22-2-1940.

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಚೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ ಮಾಧವ, ಎಂ ಎ, ಎಫ್ ಆರ್ ಎ ಎಸ್, ಎ ಐ ಎ (ಲಂಡನ್)
ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅವರ್ಕಳ್ಳ್ಯಯಿಯವರ
ಅಭಿಪ್ರಾಯ ಸಾರಾಂಶ

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆಡಳಿತದ ವೆಚ್ಚ, ಬಡ್ಡಿಯ ಫಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ [illegible] ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗಾಗಿ [illegible] ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಹೇಳದೆ ಹೋಗಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು. ೫,೦೦,೦೦೦—೦—೦

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H Venkataramiah, *Divisional Superintendent* or R Purniah *Ag General Manager*

The Asiatic Govt. Security Life Assu Co. Ltd.,
Asiatic Building, BANGALORE CITY

ಝಂಡು ಮಲೇರಿಯಾಮಿಕ್ಸ್ಚರ್

ಝಂಡು ಫಾರ್ಮಸಿ

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ
ಖಾತ್ರಿಯಾದ ಸಿದ್ಧೌಷಧ
ಕ್ರಯ ಆಣೆ 0—13—0 ಮಾತ್ರ.
ಸ್ಥಳೀಯ ಏಜಂಟರು.—ಪಿ. ಎ. ಶೈ ಬ್ರದರ್ಸ್.
ಕಾರ್ಕಳದ ಏಜಂಟರು—ವಿ ವಿ. ಶೆಣೈ, ಕೆಮಿಸ್ಟ್ಸ್.
ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೆ ಏಜಂಟರು ಬೇಕಾಗಿದ್ದಾರೆ.
ಶರ್ತಗಳಿಗೂ ಏಜನ್ಸಿಗಳಿಗೂ ಬರೆಯಿರಿ—
ದಾಮೋದರ್ ಎಂಡ್ ಕೊ,
ZANDU 78ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು.
DAMODER & CO.,
78 China Bazaar Road, G T MADRAS

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಸ್ವಾ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.
ಮೈಸೂರು
ಸೇಂಡಲ್ ಸೋಪು
ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು
ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ.- 40 ಮಾತ್ರೆಗಳ ಡಬ್ಬಿ 1ರ ರೂ. 1—0—0
ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.
ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

Your anxiety in finding a sound and progressive Life Office both to insure or to represent will end on consultation with.

Branch Secretary
The New Guardian of India Life Ins Co. Ltd, Madras
MANGALORE Branch

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು, ಜಗತ್ತಿನಲ್ಲೆಲ್ಲಾ ಏಕಸ್ವರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯಾ, ಶೀತಜ್ವರ ಮತ್ತು ಮಲೇರಿಯಾಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷಪಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಗಾಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತಶುದ್ಧಿಗೆ ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯ ತರಿಸಿಕೊಳ್ಳಿರಿ.

'ಹವನಸ್' ಹೆಮೊರ್‍ಹ್ಯಾಡ್ – ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವದಾದರೆ, "ಹವನಸ್" ಎಂಬ ಹೆಮೊರ್‍ಹ್ಯಾಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4-0 ವಿ.ಪಿ. ಬೇರೆ.

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3–4ರಂತೆ ಸೇವಿಸಿದರೆ ಸುಖವಿರೇಚನವಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು. ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು;

The Eclipse Distributing Agency,

Dahanu Road, B. B & C. I. Ry BOMBAY PRESIDENCY.

ದಯವಿಟ್ಟು ಪತ್ರಗಳ ಇಂಗ್ಲಿಷಿನಲ್ಲಿಯೇ ಬರೆಯಿರಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ. 3—4—0
6 ತಿಂಗಳಿಗೆ – ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨೪

ಉಡುಪಿ, ಗುರುವಾರ, ೨೨—೨—೧೯೪೦.
UDIPI, THURSDAY, 22-2-1940.

VOL. 19
No. 24

ರೈಲು ಚಾರ್ಜು ಹೆಚ್ಚುತ್ತದೆ

ಬರುವ ಮಾರ್ಚ ತಾ. ೧ರಿಂದ ರೈಲು ಪ್ರಯಾಣದ ಹಾಗೂ ಸರಕು ಸಾಗಿಸುವುದರ ದರವು ಏರಿಸಲಾಗುತ್ತೆ. ಸರಕುಗಳ ಸ್ಯಾಗಿಸುವುದಕ್ಕೆ ಈಗಿರುವ ಚಾರ್ಜಿನ ಮೇಲೆ ರೂಪಾಯಿಗೆ ಒಂದಾಣೆಯಂತೆ ಏರುವುದು. ಆಹಾರದ ಕಾಳು-ಬೇಳೆಗಳು, ಜಾನುವಾರುಗಳ ಮೇವು ಮತ್ತು ಗೊಬ್ಬರ ಇವುಗಳನ್ನು ಸಾಗಿಸುವಲ್ಲಿ ಏರಿಕೆಯ ದರ ಹೊರಿಸಲಾಗುವುದಿಲ್ಲ. ಅಂತೆಯೇ ಒಂದು ರೂಪಾಯಿಗೆ ಏರಿದ ರೈಲ್ವೇ ಟಿಕೇಟಿನ ಮೌಲ್ಯವೂ ಬದಲಾಗುವುದಿಲ್ಲ.

ಪಂಜಾಬಿನಲ್ಲಿ ಮುಂದಿನ ವರ್ಷದ ಕಾಂಗ್ರೆಸ್ಸು ಅಧಿವೇಶನ

ಪಂಜಾಬು ಕಾಂಗ್ರೆಸ್ಸು ಕಮಿಟಿಯು ಮುಂದಿನ ವರ್ಷದ ಕಾಂಗ್ರೆಸ್ ಮಹಾಧಿವೇಶನವನ್ನು ತಮ್ಮ ಪ್ರಾಂತದಲ್ಲಿ ಜರಗಿಸಬೇಕಾಗಿ ಅಖಿಳಭಾರತ ಕಾಂಗ್ರೆಸ್ ಕಾರ್ಯನಿರ್ವಾಹಕ ಮಂಡಳಿಯನ್ನು ಕೇಳಿಕೊಳ್ಳುವ ನಿರ್ಧಾರಮಾಡಿದೆ.

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ
ಮೌಲಾನಾ ಅಜಾದರ ವಿಜಯ
ಮೌಲಾನರಿಗೆ ೧೮೫೪ ವೋಟು
ಎಮ್. ಎನ್. ರೋಯಿಗಳಿಗೆ ೧೮೩

ಸದ್ಯದಲ್ಲೇ ಜರಗಲಿರುವ ಅಖಿಳ ಭಾರತ ರಾಷ್ಟ್ರಸಭೆಯ ಅಧಿವೇಶನದ ಅಧ್ಯಕ್ಷತನಕ್ಕೆ ಸ್ಪರ್ಧಿಗಳಾಗಿದ್ದ ಮೌಲಾನಾ ಅಬ್ದುಲ್ ಕಲಾಮ್ ಅಜಾದ್ ಮತ್ತು ಕಾಮ್ರೇಡ್ ಎಮ್. ಎನ್. ರೋಯಿ ಇವರೊಳಗಿನ ಚುನಾವಣೆಯು ಬಂಗಾಳ ಮತ್ತು ಡಿಲ್ಲಿ ಹೊರತಾಗಿ ಉಳಿದೆಲ್ಲ ಪ್ರಾಂತಗಳಲ್ಲಿ ನಡೆದು ಮೌಲಾನರು ಪ್ರಬಲ ಬಹುಮತದಿಂದ ಸಭಾಪತಿಗಳಾಗಿ ಚುನಾಯಿತರಾಗಿರುವರು.

ಬೇರೆ ಬೇರೆ ಪ್ರಾಂತಗಳ ಚುನಾವಣೆಯ ಫಲಿತಾಂಶಗಳು ಕೆಳಗಿನಂತಿವೆ.

ಅಜ್ಮೀರ್-ಮೇವಾರ್-ಮೌಲಾನರಿಗೆ ೯ ವೋಟು ರೋಯಿಗಳಿಗೆ ಸೊನ್ನೆ.
ಆಂಧ್ರ-ಮೌಲಾನರಿಗೆ ೧೭೩ ವೋಟು, ರೋಯಿಗಳಿಗೆ ೧೫.
ಅಸ್ಸಾಮು-ಮೌಲಾನರಿಗೆ ೪೫ ರೋಯಿಗಳಿಗೆ ೩
ಬಿಹಾರ-ಮೌಲಾನರಿಗೆ ೨೩೯, ರೋಯಿಗಳಿಗೆ ೧೯
ಬೊಂಬಾಯಿ (ನಗರ) ಮೌಲಾನರಿಗೆ ೧೯ ರೋಯಿಗಳಿಗೆ ೧.
ಗುಜರಾತ್-ಮೌಲಾನರಿಗೆ ೧೧೧ ರೋಯಿಗಳಿಗೆ ೧.
ಕರ್ನಾಟಕ-ಮೌಲಾನರಿಗೆ ೯೨, ರೋಯಿಗಳಿಗೆ ೧೯

ಕೇರಳ–	,,	೮೭	,,	೧
ಮಹಾಕೋಸಲ–	,,	೯೭	,,	೯
ಮಹಾರಾಷ್ಟ್ರ–	,,	೧೨೭	,,	೧೭
ನಾಗಪುರ–	,,	೩೧	,,	೪
ಮಧ್ಯ ಗಡಿನಾಡು	,,	೪೮	,,	೨
ಪಂಜಾಬ್–	,,	೧೮೫	,,	೨೩
ಸಿಂಧು–	,,	೨೦	,,	೨
ತಮಿಳುನಾಡು–	,,	೧೭೮	,,	೯
ಸಂಯುಕ್ತ ಪ್ರಾಂತ	,,	೨೭೨	,,	೪೯
ಉತ್ಕಲ–	,,	೧೧೯	,,	೪
ವಿದರ್ಭ (ಬರಾರ್)	,,	೨೭	,,	೫

ಸಮಾಚಾರ ಸಂಗ್ರಹ

ಗಾಂಧೀಜಿಗಳ ಸಂಚಾರ ಕಾರ್ಯಕ್ರಮ

ಫೆಬ್ರವರಿ ತಾ. ೧೫ರಿಂದ ಮಾರ್ಚ ತಾ. ೧೦ರ ವರೆಗೆ ಶ್ರೀಮತಿ ಕಸ್ತೂರಿ ಬಾಯಿ ಶ್ರೀ. ಮಹದೇವದೇಸಾಯಿ ಮತ್ತು ಶ್ರೀ. ಪ್ಯಾರೀಲಾಲ್ ಇವರೊಂದೊಡಗೂಡಿ ಗಾಂಧೀಜಿಗಳು ತಾ. ೧೫ನೇ ರಾತ್ರಿ ವಾರ್ಧಾದಿಂದ ಶಾಂತಿನಿಕೇತನಕ್ಕೆ ಹೊರಟಿರುವರು. ಅಲ್ಲಿ ಕವಿ ರವೀಂದ್ರರೊಡನೆ ಮೂರು ದಿನ ಕಳೆದು ತಾ. ೨೦ಕ್ಕೆ ಡಕ್ಕಾ ಜಿಲ್ಲೆಯ ಮಾಲಿಖಂಡಕ್ಕೆ ಮುಟ್ಟುರುವರು. ಅಲ್ಲಿ ತಾ. ೨೦ರಿಂದ ೨೭ರ ವರೆಗೆ ಗಾಂಧೀಸೇವಾ ಸಂಘ ಸಮ್ಮೇಳನದಲ್ಲಿ ಭಾಗವಹಿಸುವರು. ಅನಂತರ ಪಾಟ್ನಾದಲ್ಲಿ ಕೂಡುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಗೆ ಹೋಗಿ ಮಾರ್ಚ ತಾ. ೩ಕ್ಕೆ ತಿರುಗಿ ವಾರ್ಧಾಕ್ಕೆ ಬಂದು ಮುಟ್ಟುವರು ಆ ಮೇಲೆ ಸುಮಾರು ತಾ. ೮ರಂದು ಕಾಂಗ್ರೆಸ್ ಅಧಿವೇಶನ ಜರಗುವ ರಾಮಘಡಕ್ಕೆ ಹೊರಟು ತಾ ೧೦ನೆಯ ದಿನ ಅಲ್ಲಿ ಕಾಂಗ್ರೆಸ್ ಪ್ರದರ್ಶನ ಪ್ರಾರಂಭೋತ್ಸವವನ್ನು ನೆರವೇರಿಸುವರು.

ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೆ ಕಾರ್ಯನಿರ್ವಾಹಕರ ಚುನಾವಣೆ

ಬಿಹಾರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಶ್ರೀ ಬಾಬು ರಾಜೇಂದ್ರ ಪ್ರಸಾದರನ್ನು ತಿರುಗಿ ಕಮಿಟಿಯ ಅಧ್ಯಕ್ಷರನ್ನಾಗಿ ಆರಿಸಿದೆ ಶ್ರೀ ರಾಮಚರಿತ್ರ ಸಿಂಗರು ಅದರ ಜನರಲ್ ಸೆಕ್ರೆಟರಿಯುವರಾಗಿ ಪುನಃ ಚುನಾಯಿತರಾಗಿರುವರು.

ಪಂಜಾಬ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ

ಅಲ್ಲಿಯ ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಗಳಾದ ಮಿಯಾನ್ ಇಫ್ತಿಖಾರ್ ಉದ್ದಿನ್ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಸರದಾರ್ ಪ್ರತಾಪಸಿಂಗ್ ಎಮ್. ಎಲ್. ಎ. ಮತ್ತು ಲಾಲಾ ಚೇದಿರಾಮ್ ಇವರು ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದೆ.

ಅಸ್ಸಾಮಿನಲ್ಲಿ ಮೊದಲಬಾರಿಗೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷತನಕ್ಕೆ ಮಹಮ್ಮದೀಯರು.

ಜನಾಬ್ ಮಹಮ್ಮದ್ ತೈಬು ಅಲ್ಲಾ ಇವರು ಸರ್ವಾನುಮತದಿಂದ ಅಸ್ಸಾಮದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರುವರು.

The Canara Industrial & Banking Syndicate, Ltd.

Estd] HEAD OFFICE: UDIPI, (S. INDIA.) [1925.

Member: RESERVE BANK OF INDIA, BANKERS' CLEARING HOUSE, BOMBAY.

Five years' Cash Certificates are issued at the price of
Rs. 8/-, Rs. 80/-, Rs. 400/- & Rs 800/-.
repayable on maturity at
Rs. 10/-, Rs 100/-, Rs. 500/- & Rs 1,000/- respectively.

You can cash the Certificates at any time before maturity.

An investment which is liquid and yet very remunerative.
FURTHER PARTICULARS ON APPLICATION.
GENERAL BANKING BUSINESS TRANSACTED.

ಗಡಿನಾಡಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ.

ಮಿಯಾನ್ ಜಫರ್ ಷಾ, ಎಮ್. ಎಲ್. ಎ. ಇವರು ಅಧ್ಯಕ್ಷರಾಗಿಯೂ ಅಬ್ಬಾಬ್ ಅಬ್ದುಲ್ ಗಫರ್‌ಖಾನ್ ಎಂ. ಎಲ್. ಎ ಇವರು ಜನರಲ್ ಸೆಕ್ರಿಟರಿಯಾಗಿಯೂ ಆರಿಸಲ್ಪಟ್ಟಿರುವರು.

ವಿದರ್ಭದಲ್ಲಿ

ಓನರೇಬಲ್ ಬ್ರಿಜಲಾಲ್ ಬಿಯಾನಿಯವರೂ ಮಹಾಕೋಸಲದಲ್ಲಿ ಠಾಕೂರ್ ಛೇದೀಲಾಲರೂ ಮಹಾರಾಷ್ಟ್ರದಲ್ಲಿ ಶ್ರೀ. ಎನ್. ವಿ. ಗಾಡ್ಗಿಲ್ ಎಮ್. ಎಲ್. ಎ (ಕೇಂದ್ರ) ಇವರೂ ಆಯಾ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರುಗಳಾಗಿ ಚುನಾಯಿತರಾಗಿರುತ್ತಾರೆ ಮಹಾರಾಷ್ಟ್ರದ ಕಾಂಗ್ರೆಸ್ ಕಮಿಟಿಗೆ ಶ್ರೀ. ಜಿ. ಎ. ದೇಶಪಾಂಡೆ ಮತ್ತು ಜಿ. ಎಚ್. ದೇಶಪಾಂಡೆ ಇವರಿಬ್ಬರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುವರು.

ಕರ್ನಾಟಕದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಅಂತಃಕಲಹ ಇಪ್ಪತ್ತ ಮೂರು ಮಂದಿಯ ಸಭಾ ಪರಿತ್ಯಾಗ (ವಾಕೌಟ್)

ಕರ್ನಾಟಕ ಪ್ರಾಂತಿಕ ಕಮಿಟಿಯು ಅದರ ಅಧ್ಯಕ್ಷ ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಗಳನ್ನು ಚುನಾಯಿಸುವುದಕ್ಕೆ ಮೂವರದೊಂದು ಪಂಚಾಯಿತನ್ನು ಮಾಡಿ ಅದರ ತೀರ್ಮಾನವನ್ನು ಕಮಿಟಿಯು ಸ್ವೀಕಾರ ಮಾಡುವುದಾಗಿ ಒಪ್ಪಿಕೊಂಡಿತು. ಆ ಪಂಚಾಯಿತು ಡಾ. ನಾಗಪ್ಪಾ ಗೌಡರನ್ನು ಅಧ್ಯಕ್ಷರನ್ನಾಗಿಯೂ ಶ್ರೀ. ಕೃಷ್ಣಾಬಾಯಿ ಪಂಜೀಕರ್ ಮತ್ತು ಶ್ರೀ. ಸುಬ್ಬರಾವ್ ಹಳದೀಪುರಕಾರ್ ಇವರಿಬ್ಬರುಗಳನ್ನು ಉಪಾಧ್ಯಕ್ಷರುಗಳನ್ನಾಗಿಯೂ ಶ್ರೀ ಅಂಬಲಿ ಮತ್ತು ಶ್ರೀ. ವಿ. ಸಿ. ಪಾಟಿಲ ಇವರುಗಳನ್ನು ಕಾರ್ಯದರ್ಶಿಗಳನ್ನಾಗಿ ಚುನಾಯಿಸಿತು. ಇದರಲ್ಲಿ ವಿಶೇಷತಃ ಅಧ್ಯಕ್ಷ ಚುನಾವಣೆಯ ಅಸಂತೃಪ್ತಿ ಸೂಚಕವಾಗಿ ಇಪ್ಪತ್ತಮೂರು ಮಂದಿ ಸದಸ್ಯರು ಸಭೆ ಬಿಟ್ಟು ಹೊರನಡೆದರು. ಅನಂತರ ಡಾ| ನಾಗಪ್ಪಾ ಗೌಡರೇ ಅಧ್ಯಕ್ಷರಾಗಿ ಚುನಾಯಿತರಾದ ಮೇಲೆ ನಾಲ್ವರು ಸದಸ್ಯರು ರಾಜೀನಾಮೆಯನ್ನಿತ್ತಿರುವರು.

ಒರಿಸ್ಸಾದಲ್ಲಿ

ಶ್ರೀ. ರಾಧಾಕೃಷ್ಣ ಬಿಸ್ವಾಸರೋಯಿ ಇವರು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿಯೂ, ಶ್ರೀ. ನಭಾ ಕೃಷ್ಣ ಚೌಧುರಿಯವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುತ್ತಾರೆ.

(೧೨ನೇ ಪುಟಕ್ಕೆ ಮುಂದರಿಯುವುದು)

ಭಾರತದ ವ್ಯವಸಾಯ ವೃತ್ತಿಯಲ್ಲಿ ವಿಮೆಯ ಆವಶ್ಯಕತೆ

ರೈತ ವೃತ್ತಿಯೇ ಮುಖ್ಯ ಉದ್ಯೋಗವಾಗಿರುವ ನಮ್ಮ ಭಾರತದಲ್ಲಿ ವ್ಯಾವಸಾಯಿಕ ವಿಮೆಯು ಸಾಮಾಜಿಕ ಆರ್ಥಿಕ ಸಮಸ್ಯೆಗಳಲ್ಲಿ ಅತಿ ಮುಖ್ಯವಾದುದಾಗಿರಬೇಕು. ಜೀವವಿಮೆಯಲ್ಲಿ ಭಾರತವು ಮುಂದುವರಿದಿದ್ದರೂ ಈ ಅತಿ ಮುಖ್ಯ ಸಮಸ್ಯೆಯನ್ನು ಯಾರೂ ಶೋಧಿಸಿಯೇ ಇಲ್ಲ. ಪ್ರತಿಯೊಂದರಲ್ಲಿಯೂ ಹಿಂದುಳಿದ ಭಾರತವು ಈ ವಿಚಾರದಲ್ಲೂ ನೂತನ ಪದ್ಧತಿಯನ್ನು ಅನುಸರಿಸಿಲ್ಲ. ಶೇಕಡ ೭೦ ಜನರಿಗೆ ಇದರಿಂದ ಅನಾನುಕೂಲವಾಗಿದೆ.

ಭಾರತದ ರೈತನು ಪ್ರಕೃತಿಯ ಅತಿವೃಷ್ಟಿ ಅನಾವೃಷ್ಟಿಗಳಿಗೆ, ಕ್ಷಾಮಡಾಮರಗಳಿಗೆ ಸಿಲುಕಿ ದಾರಿದ್ರ್ಯ ಸಾಲಸೋಲಗಳಲ್ಲಿ ಮುಳುಗಿ ಅದರಿಂದ ಪಾರಾಗುವ ಮಾರ್ಗವನ್ನೇ ಅರಿಯದವನಾಗಿರುವನೆಂಬುದು ಸರ್ವವೇದ್ಯವಾಗಿದೆ. ಪ್ರಕೃತಿಯು ಏನಾದರೂ ಸ್ವಲ್ಪ ದಯೆ ತೋರಿ ಮಳೆ ಬಂದರೆ ರೈತನ ಇರುವಿಕೆಯು ಉತ್ತಮವೆನ್ನಬಹುದು. ಆದರೆ ಅವನ ಅಜ್ಞಾನದಿಂದ ಮುಂದಿನ ದುಃಸ್ಥಿರ ದಿನಗಳನ್ನು ದಾಟಿಸಲು ಅಸಾಧ್ಯವಾಗುವುದು. ರೈತನ ಈಗ್ಗತ್ತಲೆಯ ಜೀವನಕ್ಕೆ ಬೆಳಕನ್ನು ಬೀರಲು ನಿರ್ವೀರ್ಯವನ್ನುಂಟುಮಾಡುವ ದುರದೃಷ್ಟ ಜೀವನದಿಂದ ಮುಕ್ತನನ್ನಾಗಿ ಮಾಡಿ, ಸಹಿಷ್ಣುತೆ ಮತ್ತು ದುರಾಲೋಚನೆಯುಳ್ಳವನನ್ನಾಗಿ ಮಾಡಲು ಮತ್ತು ಹಸಿವು ಮತ್ತು ಸಾಲದ ಬಾಧೆಗಳನ್ನು ನಿವಾರಿಸಿ ಸ್ವಾತಂತ್ರ್ಯ, ಸುಖ ಶಾಂತಿಗಳನ್ನು ಪಡೆಯುವಂತೆ ಮಾಡಬೇಕಾದರೆ, ಅನೇಕ ವಿಧದ ವಿಮಾರಕ್ಷಣೆಯ ಅನುಕೂಲಗಳನ್ನು ಅವನಿಗೆ ಒದಗಿಸಿ ಕೊಡಬೇಕು. ಈ ಧ್ಯೇಯಸಾಧನೆಯಲ್ಲಿ ಯಶಸ್ವಿಗಳಾದರೆ ರೈತನ ಆರ್ಥಿಕ ಜೀವನದಲ್ಲಿ ಕ್ರಾಂತಿಯುಂಟಾಗುವುದರಲ್ಲಿ ಸಂದೇಹವಿಲ್ಲ. ವರ್ಷ ವರ್ಷವೂ ಈ ಸಂದೇಹ ಸ್ಥಿತಿಯ ಜೀವನದಿಂದ ನರಳುವುದು ತಪ್ಪಿ, ಆರ್ಥಿಕ ದುಸ್ಥಿತಿಗಳಿಂದ ಪಾರಾಗಿ, ಅಭಿವೃದ್ಧಿ ಹೊಂದಿ, ರೈತನ ಜೀವನವನ್ನು ಉತ್ತಮಪಡಿಸಿದರೆ ದೇಶದ ಹಣಕಾಸಿನ ಸ್ಥಿತಿಯೂ ಭದ್ರಗೊಳ್ಳುವುದು. ಈ ವ್ಯವಸಾಯಿಕ ವಿಮೆಯು ಬೆಳೆಯು ನಾಶವಾದಾಗಲೀ, ಅಥವಾ ಅರ್ಧ ಬೆಳೆಯಾದಾಗಾಗಲೀ ಭರವಸೆಯನ್ನೀಯುವುದಲ್ಲದೆ, ನಿರುದ್ಯೋಗವನ್ನು ಮತ್ತು ಹಸಿವುತೃಷೆಗಳನ್ನೂ ನಿವಾರಿಸುವುದು.

> ವ್ಯವಸಾಯಗಾರರಿಗೆ ವಿಮೆ ಮಾಡಿಸುವಾಗ ಇತರ ಪಂಗಡದವರಿಗೆ ವಿಮೆ ಮಾಡಿಸುವಂತೆ ಸಕಲ ಬಗೆಯ ವಿಮಾ ವಿಧಾನಗಳನ್ನೂ ಪ್ರಯೋಗಿಸಬೇಕು. ಜೀವ, ಬೆಂಕಿ, ಅನಾಹುತ ಇತ್ಯಾದಿ ವಿಧಗಳಿಂದ ಕೈಗಾರಿಕೋದ್ಯಮಿಗಳಿಗೆ ಸಂಪೂರ್ಣ ರಕ್ಷಣೆಯನ್ನೀಯಲು ಇನ್ನೂ ಇತರ ವಿವಿಧ ಅನುಕೂಲತೆಗಳನ್ನು ಮಾಡಿಕೊಡಬೇಕು. ಇವುಗಳಲ್ಲಿ (ಎ) (೧) ಭವನಗಳು (೨) ಕಣಜಗಳು (೩) ರೈತನ ಸಲಕರಣೆಗಳು; (ಬಿ) ದನಕರುಗಳು (ಸಿ) ಬೆಳೆಗಳು, ಇವು ಆಕಸ್ಮಿಕ ವಿಮೆಯಲ್ಲಿ ಒಳಗೊಂಡಿರಬೇಕು. (ಎ) ಮತ್ತು (ಬಿ)ಯನ್ನು ಇತರ ವಿಮೆಗಳೊಂದಿಗೆ ಸೇರಿಸಿದರೂ ಬೆಳೆ ವಿಮೆ ಮಾಡಿಸುವುದನ್ನು ಮಾತ್ರ ಪ್ರತ್ಯೇಕಗೊಳಿಸಬೇಕು. ಇದನ್ನೇ ವ್ಯವಸಾಯಿಕ ವಿಮೆಯೆಂದರೂ ಅನ್ನಬಹುದು.

ವ್ಯಾವಸಾಯಿಕ ವಿಮೆಯ ಅಭಿವೃದ್ಧಿ

ದುರದೃಷ್ಟವಶಾತ್ ಪ್ರಪಂಚದಲ್ಲೆಲ್ಲಾ ಈ ವಿಮಾ ಪದ್ಧತಿಯು ಸುರಕ್ಷಿತ ಮಾರ್ಗದಲ್ಲಿ ವರ್ಧಿಸಿಲ್ಲ. ಪಾಶ್ಚಿಮಾತ್ಯ ದೇಶದಲ್ಲಿ ಕೇವಲ ಅಷ್ಟು ಅವಶ್ಯಕವಲ್ಲದ ವಿಷಯಗಳಾದ ಮೋಟೆಗಳ ವಿಮೆ, ಬಾಂಡುಗಳು, ಬೀಗದ ಕೈ ಇತ್ಯಾದಿಗಳಲ್ಲಿ ವಿಮಾ ಪದ್ಧತಿಯನ್ನು ಅನುಸರಣೆಗೆ ತಂದಿದ್ದಾರೆ. ಆದರೆ ಜಗತ್ತಿನಲ್ಲೆಲ್ಲಾ ಅತಿ ಮುಖ್ಯವಾದ ವ್ಯಾವಸಾಯಿಕ ವಿಮೆಯು ನಿರ್ಲಕ್ಷಿಸಲ್ಪಟ್ಟು ಪ್ರತಿಕ್ಷಣದಲ್ಲೂ ಕಂಟಕಗಳಿಗೆ ಆಸ್ಪದವಾಗಿದೆ.

ಬೆಂಕಿ ವಿಮೆ

ಮನೆ ಮತ್ತು ಸ್ವತ್ತುಗಳಲ್ಲದೆ ಕಣಜಗಳಲ್ಲಿ ಶೇಖರಿಸಿರುವ ದವಸ ಧಾನ್ಯಗಳಿಗೂ ಬೆಂಕಿಯಿಂದುಂಟಾಗುವ ನಷ್ಟಗಳಿಗೆ ರಕ್ಷಣೆಯನ್ನು ಕೊಡಬೇಕು. ಇವುಗಳಲ್ಲಿ ಸಿಡಿಲಿನಿಂದುಂಟಾಗುವ ಅಪಾಯಗಳೂ ಒಳಗೊಳ್ಳಬೇಕು. ಅನೇಕ ಸಲ ರೈತನ ದನ ಕರುಗಳು ಸಿಡಿಲಿಗೆ ಸಿಲುಕಿ ಸಾಯುತ್ತವೆ. ಆಗ ಅವನನ್ನು ಕಷ್ಟದಿಂದ ಪಾರುಮಾಡುವುದು ಅವಶ್ಯಕ. ಅಲ್ಲದೆ ರೈತನು ಅನೇಕ ಸಾರಿ ಪ್ರವಾಹ, ಭೂಕಂಪ ಇತ್ಯಾದಿ ಕಾರಣಗಳಿಂದ ಅಪಾರ ನಷ್ಟವನ್ನನುಭವಿಸುತ್ತಾನೆ. ಆದರೆ ಭಾರತದಲ್ಲಿ ಮನೆ ಮಠಗಳನ್ನು ಕಟ್ಟಲು ಅಷ್ಟು ಖರ್ಚಾಗದಿರುವುದರಿಂದ ನಾವು ಈ ಬಗೆಯ ವಿಮೆಯನ್ನು ತರ್ಕಿಸಬೇಕಾಗಿಲ್ಲ.

ದನಗಳ ವಿಮೆಯು ಅತ್ಯಾವಶ್ಯಕ

ಭಾರತದಲ್ಲಿ ದನಗಳ ವಿಮೆಯ ಅವಶ್ಯಕತೆಯು ಅಷ್ಟಿಷ್ಟಲ್ಲ. ಪ್ರತಿ ಒಬ್ಬ ರೈತನಲ್ಲೂ ಸರಾಸರಿ ಒಂದು ಅಥವಾ ಎರಡು ಜೊತೆ ದನಗಳಿರುವುದರಿಂದ, ಇವುಗಳಿಗೇನಾದರೂ ಅಪಾಯ ಸಂಭವಿಸಿದರೆ ಅವನು ಅನೇಕ ದುರಂತಗಳಿಗೊಳಗಾಗುವನು. ಕ್ಷಾಮದಿಂದಲೂ, ರೋಗಗಳಿಂದಲೂ ಲಕ್ಷಾಂತರ ದನ ಕರುಗಳು ಸಾಯುವವು. ಬಡತನದಿಂದ ನೊರಗುತ್ತಿರುವ ರೈತನಿಗೆ ಇದು ಒಂದು ದೊಡ್ಡ ದುರ್ಘಟನೆ. ಆದರೆ ರೈತನಿಗೆ ಈ ವಿಚಾರದಲ್ಲಿ ವಿಮಾರಕ್ಷಣೆಯನ್ನೀಯುವುದು ಸುಲಭ ಸಾಧ್ಯವಲ್ಲ. ಇಂಗ್ಲೆಂಡಿನಲ್ಲೂ ಸಹ ಇದು ಯಶಸ್ವಿಯಾಗಿ ನಡೆದಿಲ್ಲ. ಅಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಗಳು ರಕ್ಷಣೆಯನ್ನು ಕೊಡುತ್ತಿವೆ.

ಬೆಳೆ ವಿಮೆಯ ಸಮಸ್ಯೆ

ಬೆಳೆವಿಮೆಯೂ ದನಕರುಗಳ ವಿಮೆಯಂತೆ ರೈತನಿಗೆ ಅತ್ಯಾವಶ್ಯಕ. ವ್ಯವಸಾಯ ವೃತ್ತಿಯಲ್ಲಿರುವ ನೈಸರ್ಗಿಕ ದುರ್ಘಟನೆಗಳಿಂದ ರೈತನನ್ನು ಪಾರುಮಾಡಲು ತಯಾರಿಸುವ ವ್ಯಾವಸಾಯಿಕ ವಿಮೆಗಳಲ್ಲಿ ಪ್ರವಾಹದಿಂದಾಗಲೀ ಕ್ಷಾಮದಿಂದಾಗಲೀ ಪೈರನ್ನು ಕಾಪಾಡುವ ವಿಮಾ ವ್ಯವಧಾನವು ಅತಿ ಪ್ರಾಮುಖ್ಯವಾದುದು. ಉತ್ತಮವಾದ ಪೈರಿನ ವಿಮೆಯು ರೈತನನ್ನು ಸರ್ವ ತೊಂದರೆಗಳಿಂದಲೂ ಪಾರು ಮಾಡಬೇಕು.

THE

BOMBAY LIFE ASSURANCE

Company Limited.

[ESTD. 1908]

COMPARE

Your Life Assurance with any other property you possess what is its guarranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	...	...	Rs. 1,44,91,000
Life Assurance Fund	...	...	Rs. 1,17,69,748
Total Assets	...	..	Rs. 1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS.	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	CALICUT, Pathiyara,	Central Station Road, TRIVANDRUM.

ರೈತನಿಗೆ ವಿಮೆಯ ರಕ್ಷಣೆ ಕೊಡುವುದರಲ್ಲಿ ಅನಿಶ್ಚಿತ ಮಳೆಯೇ ದಾರಿಯ ಮಧ್ಯೆ ಅಡ್ಡವಾಗಿ ನಿಂತಿರುವುದು. ಇದು ಕಠಿಣ ಸಮಸ್ಯೆ. ತಜ್ಞರು ಇದರ ಸಂಬಂಧವಾಗಿ ವಿಚಾರಣೆ ನಡೆಸಿರುವರು. ಬೆಳೆಯೆಲ್ಲವೂ ಮಳೆಯ ಆಧಾರದ ಮೇಲೆ ನಿಂತಿರುವುದರಿಂದ ಕಂತು ಮೊಬಲಗನ್ನು ನಿರ್ಧರಿಸಬೇಕಾದರೆ ಒಂದು ತರಹದ ಮಳೆ ವಿಮೆಯು ಗುತ್ತಿಗೆ ಮಾಡುವುದೇ ಉತ್ತಮವಾದ ಮಾರ್ಗವೆಂದು ಸೂಚಿಸಿರುವರು. ಇದನ್ನು ಗೊತ್ತು ಮಾಡಬೇಕಾದರೆ ಆಯಾ ಪ್ರದೇಶದಲ್ಲಿ ಸರಾಸರಿ ಎಷ್ಟು ಅಂಗುಲ ಮಳೆ ಬೀಳುವುದೆಂಬುದನ್ನು ಪರಿಶೀಲಿಸಿ ಪ್ರೀಮಿಯಂ ಮೊಬಲಗನ್ನು ನಿರ್ಧರಿಸಬೇಕು. ಸರಾಸರಿ ಮಳೆಯನ್ನು ಕಂಡು ಹಿಡಿಯುವುದು ಕಷ್ಟ. ಅಲ್ಲದೆ ಮಳೆ ಒಂದರಿಂದಲೇ ಬೆಳೆಯು ನಾಶವಾಗುವುದಿಲ್ಲ. ಇನ್ನಿತರ ಕಾರಣಗಳೂ ಇವೆ. ಎಷ್ಟೇ ದುರ್ಭೇದ್ಯವಾದರೂ ಈ ಸಮಸ್ಯೆಯನ್ನು ಎದುರಿಸಿ ತೀರಲೇಬೇಕು.

ರೈತನ ಏಳಿಗೆಯೇ ಭಾರತದ ಏಳಿಗೆಯಾಗಿರುವುದರಿಂದ ಅಖಿಲ ಭಾರತಕ್ಕೆಲ್ಲಾ ಅನ್ವಯಿಸುವಂತೆ ಒಂದು ವಿಚಾರಣಾ ಸಮಿತಿಯನ್ನು ಏರ್ಪಡಿಸುವುದು ಅತ್ಯಾವಶ್ಯಕ. ಈ ಸಮಿತಿಯವರು ವ್ಯಾವಸಾಯಿಕ ವಿಮೆಯನ್ನು ಸಮಸ್ತ ಭಾಗಗಳಿಂದಲೂ ಪರಿಶೀಲಿಸಿ ಆಯಾ ಪ್ರಾಂತ್ಯಗಳಿಗೆ ಅನುಕೂಲಿಸುವಂಥ ಉಪಾಯವನ್ನು ಕಂಡುಹಿಡಿಯಬೇಕು.

ರೈತರಲ್ಲಿ ವಿಮೆಯ ಆವಶ್ಯಕತೆ

ರೈತರಲ್ಲಿ ವಿಮೆಯು ನಡೆದಿರುವುದು ವಿರಳ. ಅವನು ಕೇವಲ ಬಡವನಾದ್ದರಿಂದ ೪೦೦ ಅಥವಾ ೫೦೦ ರೂಪಾಯಿಗಳಿಗೆ ವಿಮೆ ಮಾಡುವ ಸೌಲಭ್ಯವನ್ನು ಏರ್ಪಡಿಸಿ ಕೊಡಬೇಕು. ಇದ್ದಾಗ್ಯೂ ರೈತನಿಗೆ ವಿಮೆಯ ಕಂತು ಮೊಬಲಗನ್ನು ಕೊಡುವುದು ಅಸಾಧ್ಯವಾಗಬಹುದು. ಈಗ ವಿಮಾ ಕಂಪೆನಿಯವರು ಉಪಯೋಗಿಸುತ್ತಿರುವ 'ಲೈಫ್' ಟೇಬಲುಗಳು ಭಾರತದ ನಿಜವಾದ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲ. ಒಂದು ವೇಳೆ ಮರಣ ಸಂಖ್ಯೆಯ ಆಧಾರದ ಮೇಲೆ ನಡೆಸಿದರೆ ಕಂತು ಮೊಬಲಗು ವಿಪರೀತವಾಗಬಹುದು. ಕಡಿಮೆ ಮಾಡಲು ಸರ್ಕಾರದ ಸಹಾಯದಿಂದ ಕಂಪೆನಿಯನ್ನು ನಡೆಸಲು ಆಗುವ ಖರ್ಚುಗಳನ್ನು ಮಿತಿಯಲ್ಲಿಟ್ಟರಾಗಬಹುದು.

ಮುಂದೆ ಬರುವ ಅಪಾಯವನ್ನು ತಿಳಿಯಲು ಸಾಧ್ಯವಾಗಿರುವ ವಿಷಯಗಳಲ್ಲೆಲ್ಲಾ ವಿಮೆಯನ್ನು ಸುಲಭ ರೀತಿಯಲ್ಲಿ ನಡೆಸಬಹುದು. ಬಂಡವಾಳದಾಗಲೀ, ರೈತರ ಪರಸ್ಪರ ಸಹಾಯಕ ಸಂಘಗಳಾಗಲೀ ಈ ತರಹದ ವಿಮೆ ನಡೆಸುವುದನ್ನು ನಿರ್ವಹಿಸಬಹುದು. ಮುಂದಾಗುವ ಅಪಾಯಗಳನ್ನು ಅರಿಯಲಾಗದ ವಿಚಾರಗಳಲ್ಲೆಲ್ಲಾ ಪರಸ್ಪರ ಸಂಘಗಳೇ ವಹಿಸಿಕೊಳ್ಳುವುದು ಉತ್ತಮ. ಇಂಥ ಸಂಘಗಳಲ್ಲಿ ವಿಮೆ ಮಾಡಿಸುವವರೂ, ಮಾಡುವವರೂ ಒಬ್ಬರೇ ಆದುದರಿಂದ ಅಪಾಯಗಳ ಭಯವು ಅಲ್ಪವಾಗಿರುವುದು. ಆದರೂ ಸರಿಯಾದ ಪ್ರೀಮಿಯಂ ಕಂತು ಮೊಬಲಗನ್ನು ನಿರ್ದಿಷ್ಟವಾಗಿ ಗೊತ್ತು ಮಾಡುವುದು ಅತ್ಯಾವಶ್ಯಕ. ಇಂತಹ ಕಂಪೆನಿಗಳನ್ನು ಸರ್ಕಾರದ ಜವಾಬ್ದಾರಿಯಲ್ಲಿಟ್ಟರೆ ಉತ್ತಮ.

ವ್ಯವಸಾಯದ ವಿಮೆಯಲ್ಲಿ ಮಳೆ, ಪ್ರವಾಹ, ಕ್ಷಾಮ, ಪ್ರಾಣಿಗಳಿಗೆ ಬರುವ ಖಾಯಿಲೆಗಳು, ಇವುಗಳಿಂದುಂಟಾಗುವ ಅಪಾಯಗಳನ್ನು ಮುನ್ನೋಡಿ ವಿಮಾ ರಕ್ಷಣೆ ಕೊಡುವುದು ಅನುಭವದಲ್ಲಿ ಬಹಳ ಕಷ್ಟ. ಇಂಥ ವಿಚಾರಗಳಲ್ಲೆಲ್ಲಾ ಸರ್ಕಾರದವರೇ ಭಾರವನ್ನು ವಹಿಸಿ ಆ ಪದ್ಧತಿಗಳನ್ನು ಮಾಡಬೇಕು. ಈ ಹಣವನ್ನು ಕೋ-ಆಪರೇಟಿವ್ ಸಂಘಗಳ ಮೂಲಕವೂ ಮತ್ತು ಇತರ ಪರಸ್ಪರ ಸಹಾಯಕ ಸಂಘಗಳ ಮೂಲಕವೂ ಬಡ್ಡಿಯಿಲ್ಲದೇ ಹಂಚಿ ರೈತರಿಗೆ ಸಹಾಯ ಮಾಡುವುದು ಬಹಳ ಉಪಯೋಗಕರವಾಗಿಯೂ, ರೈತರ ಏಳಿಗೆಗೆ ಕಾರಣವಾಗಿಯೂ ಇರುವದು. (ವಿ. ವಾ.)

Degrees: Books: Medicines.

Free H. L. M. S., H. M. B. H. M. D. etc Free Homeo-Ayur-Unani-Naturo degrees by post also—Practioners also get soons Homeo Materiamedica, Rs. 5. Homeo Practice book Rs. 4. Insanity Cure Pills Rs. 10 Enclose 4 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. ೩/೪೦

ಅರ್ಜಿದಾರ—ಲಕ್ಷ್ಮೀನಾರಾಯಣ ಭಟ್ಟ ಗಣಪಯ್ಯ ಭಟ್ಟನ ಮಗ ಉಡ್ಪಿ ತಾಲ್ಲೂಕು ಬಾಳ್ಕುದ್ರು ಗ್ರಾಮ—

ಎದ್ರಿರು.

1 ಅಕ್ಕಯಮ್ಮ ನಾರಾಯಣ ಭಟ್ಟ
2 ಶೀಲಂಮ, ಗಣಪಯ್ಯ ಭಟ್ಟನ ವಿಧವೆ
3 ಮೈನರ್ ರಾಮಕೃಷ್ಣ } ಗಣಪಯ್ಯ ಭಟ್ಟನ ಮಕ್ಕಳು
4 „ ಆನಂದ
5 „ ಸೀತಾರಾಮ

ಉಡ್ಪಿ ತಾಲ್ಲೂಕು ಬಾಳ್ಕುದ್ರು ಗ್ರಾಮದಲ್ಲಿರುವವರು.

ಎದ್ರಿರಿಗೆ ವ ಯಾವತ್ತು ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರನ ತಂದೆ ಮೃತಪಟ್ಟ ಗಣಪಯ್ಯ ಭಟ್ಟನು ಕೆನಡಾ ಸನ್‌ಲೈಫ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ನಂಬ್ರ 3064579ನೇಗೆ ರೂಪ್ಯಾ 1000ಕ್ಕೆ ಪಡೆದ ಪೋಲಿಸಿ ಪ್ರಕಾರ ಬರತಕ್ಕ ಹಣವನ್ನು ಪಡೆಯುವರೆ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರನು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯನ್ನು ತಾ 22-2-40ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಯಾರದ್ದಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿನ್ನ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿಯನ್ನು ಈ ಮೂಲಕ ತಿಳಿಯಪಡಿಸಿಯದೆ.

K. Soorappa Shetty,
Advocate for Petitioner.
Kundapoor, 13-2-40.

ಲೋರ್ಡ್ ಜೆಟ್ಲೆಂಡರು ಯುದ್ಧಕ್ಕೆ ಆಹ್ವಾನ ಮಾಡಿರುವರು.

ಹಿಂದೀಯರ ಮೇಲೆ ವಿಶ್ವಾಸವಿಟ್ಟರೆ ಮಾತ್ರ ಬ್ರಿಟನಿಗೆ ಒಳ್ಳಿತಾದೀತು.

ಹಿಂದೀಯರು ಶಾಂತಿಯಿಂದ ಕರ್ತವ್ಯಮಾರ್ಗದಲ್ಲಿ ಮುನ್ನಡೆಯಲೇಬೇಕು.

ಲೋರ್ಡ್ ಜೆಟ್ಲೆಂಡರ ಭಾಷಣದಿಂದ ಮಹಾತ್ಮ ಗಾಂಧಿಯವರು ಬಹಳ ನಿರಾಶೆಗೊಂಡಿರುತ್ತಾರೆ "ಇದೇನು ಯುದ್ಧವೇ?" ಎಂಬ ಶಿರೋನಾಮೆಯಿಂದ ಹರಿಜನಪತ್ರಿಕೆಯಲ್ಲವರು ತನ್ನ ಭಾವನೆಗಳನ್ನು ಸ್ಪಷ್ಟವಾಗಿ ಹೊರಗೆಡಹಿರುತ್ತಾರೆ. ಲೋರ್ಡ್ ಜೆಟ್ಲೆಂಡರ ಭಾಷಣವು ಬ್ರಿಟಿಷ್ ಸರಕಾರದ ಅಭಿಮತವನ್ನು ಪ್ರತಿಬಿಂಬಿಸುವುದಾದರೆ ಬ್ರಿಟಿಷ್ ಸಾಮ್ರಾಜ್ಯವಾದಿಗಳೂ ಹಿಂದೀ ರಾಷ್ಟ್ರೀಯವಾದಿಗಳೂ ಒಂದುಗೂಡಲಡೆಯಿಲ್ಲ. ಲೋರ್ಡ್ ಜೆಟ್ಲೆಂಡರ ಭಾಷಣವು ಯುದ್ಧಕ್ಕೆ ಆಹ್ವಾನವೇ ಆಗಿರುತ್ತದೆ ಈ ಯುದ್ಧಾನಂತರವೂ ಹಿಂದೂದೇಶವು ಸ್ವತಂತ್ರವಾಗದೆ ಪರದಾಸ್ಯದಲ್ಲಿರುವಂತಾದರೆ ಇಂದೀಗ ಬ್ರಿಟಿಷ್ ಸೇನೆಯು ಜಯಶೀಲತೆಗಾಗಿ ತನಗೆ ಮನಸ್ಸಾಕ್ಷಿಪೂರ್ವಕವಾಗಿ ಪ್ರಾರ್ಥಿಸಲು ಸಾಧ್ಯವಿಲ್ಲೆಂದೇ ಗಾಂಧಿಜಿಯವರ ಅಭಿಮತ.

ಹಿಂದೂದೇಶದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಕಟ್ಟಿದವರು ಅದನ್ನು, ಐರೋಪ್ಯರ ಸ್ವಾರ್ಥ, ಸೈನ್ಯ, ದೇಶೀಯ ರಾಜರುಗಳು ಮತ್ತು ಜಾತೀಯ ವಿಭಾಗಗಳೆಂಬ ನಾಲ್ಕು ಸ್ತಂಭಗಳ ಮೇಲೆ ಸ್ಥಾಪಿಸಿರುವರು. ಬ್ರಿಟಿಷರು ಸಾಮ್ರಾಜ್ಯ ಸ್ವಾರ್ಥ ಮತ್ತು ಭಾವನೆಯನ್ನು ತ್ಯಜಿಸಿಬಿಟ್ಟಿರುವೆವೆಂದು ಹೇಳಬೇಕಾದರೆ ಮೇಲಿನ ನಾಲ್ಕು ವಿಷಯಗಳಿಗೂ ಅವರು ಯಾವ ರೀತಿಯ ಆಶ್ರಯವನ್ನೂ ಕೊಡಕೂಡದು. ಆದರೆ ಅವರು ಹಾಗೇನೂ ಮಾಡದೆ ಹಿಂದೂದೇಶದ ಸ್ವಾತಂತ್ರ್ಯವನ್ನು ಸಾಧಿಸುವ ಮೊದಲು 'ಈ ನಾಲ್ಕು ಸ್ತಂಭಗಳ ಪ್ರಶ್ನೆಯನ್ನು ನೀವೇ ಇತ್ಯರ್ಥ ಮಾಡಿಕೊಳ್ಳಬೇಕೆಂದು ಹಿಂದೀ ರಾಷ್ಟ್ರೀಯವಾದಿಗಳೊಡನೆ ಹೇಳುತ್ತಾರೆ. ಐರೋಪ್ಯದ ಸ್ವಾರ್ಥಕ್ಕಿಲ್ಲಿಯಾದರೂ ಹಾನಿಯಾಗದಂತೆ ಗ್ಯಾರಂಟೀ ಕೊಡಿರಿ. ನಿಮ್ಮದೇ ಆದ ಸೇನೆಯನ್ನು ರಚಿಸಿಕೊಳ್ಳಿರಿ ದೇಶೀಯ ರಾಜರುಗಳನ್ನು ಸಮಾಧಾನಪಡಿಸಿ ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳನ್ನು ರಕ್ಷಿಸಿರಿ. ಆ ಮೇಲೆ ಸ್ವಾತಂತ್ರ್ಯದ ಪ್ರಸ್ತಾಪವೆತ್ತಿರೆಂದೇ ಆಳರಸರ ಅಂಬೋಣ. ಈ ಮಾತಿಗೆ ಹಿಂದೀ ರಾಷ್ಟ್ರೀಯವಾದಿಗಳು ಈ ರೀತಿ ಉತ್ತರವಿತ್ತಿರುವರು. 'ಐರೋಪ್ಯದ ಸ್ವಾರ್ಥವನ್ನು ನಮ್ಮ ಮೇಲೆ ಹೊರಿಸಿದವರು ನೀವು. ಅವರ ರಕ್ಷಣೆಗಾಗಿ ನೀವು ಸೇನೆಯನ್ನು ರಚಿಸಿ ಅದನ್ನು ನಿಮ್ಮದನ್ನಾಗಿಯೇ ಮಾಡಿಟ್ಟುಕೊಂಡಿರಿ ನಿಮಗೆ ಬೇಕಾದಂತೆ ಉಪಯೋಗಿಸಿಕೊಳ್ಳಲು ನೀವು ದೇಶೀಯ ಸಂಸ್ಥಾನಗಳನ್ನು ಸ್ಥಾಪಿಸಿ ದೇಶೀಯ ರಾಜರುಗಳನ್ನು ನಿಮ್ಮ ಕೈಗೊಂಬೆಗಳಾಗಿ ಉಪಯೋಗಿಸಿಕೊಂಡು ಬಂದಿರುವಿರಿ. ನಿಮಗೆ ಬೇಡವಾದವರನ್ನು ಹೊರ ಹಾಕಿ ಹೊಸಬರನ್ನು ನೇಮಿಸಿರುವಿರಿ. ಹಿಂದೂದೇಶವು ಒಂದಾಗಿ ನಿಮಗೆ ಎದುರು ನಿಲ್ಲದಂತೆ ಅದನ್ನೀರೀತಿ ವಿಭಕ್ತಗೊಳಿಸಿದಿರಿ ಹಿಂದೀಯರಲ್ಲಿ ಜಾತಿ ಮತಭೇದವು ತುಂಬಿರುವುದನ್ನು ಕಂಡು, ರಾಜಕೀಯದಲ್ಲಿ ಅಲ್ಪ ಸಂಖ್ಯಾಕ ಪ್ರಶ್ನೆಯನ್ನುಂಟುಮಾಡಲು ಅದನ್ನು ಉಪಯೋಗಿಸುವ ಕುಟಿಲ ಧೋರಣೆ ವಹಿಸಿರುವಿರಿ. ಈ ಪ್ರಕಾರ ಹಿಂದೂದೇಶವು ಒಕ್ಕಟ್ಟಾಗಿ ಒಂದು ರಾಷ್ಟ್ರವಾಗಿರಲು ಸಾಧ್ಯವೇ ಇಲ್ಲ ಆದರೆ ಈಗ ನೀವು ಹಿಂದೂದೇಶಕ್ಕೆ ಸ್ವತಂತ್ರ ಸ್ಥಾನವೀಯುವ ಸಿದ್ಧತೆ ತೋರಿಸಿರುವಿರಿ. ಅದು ಯಥಾರ್ಥವಾದರೆ ಅದರ ಮಾರ್ಗದಲ್ಲಿ ನೀವೇ ತಂದೊಡ್ಡಿರುವ ತೊಡಕುಗಳನ್ನು ತೆಗೆದು ಹಾಕಬೇಕು ನೀವು ಇನ್ನು ಮುಂದೆ ನಿಮ್ಮ ಸೇನಾ ಬಲದ ಮೇಲೆ ಹೊಂದಿಕೊಂಡಿರದೆ ಹಿಂದೀಯರ ನ್ಯಾಯಬುದ್ಧಿಯಲ್ಲಿ ವಿಶ್ವಾಸವುಳ್ಳವರಾಗಬೇಕು, ಇಷ್ಟರ ವರೆಗೆ ನೀವು ನಮ್ಮ ಅದೃಷ್ಟವನ್ನು ನಿರ್ಣಯಿಸುವವರಾಗಿದ್ದಿರಿ. ಈಗ ನಮ್ಮನ್ನು ಆಳುವ ರೀತಿ ನೀತಿಗಳನ್ನು ನಿಶ್ಚಯಿಸುವ ಜವಾಬ್ದಾರಿಯನ್ನು ನೀವು ನಮಗೆ ಬಿಟ್ಟುಬಿಡುವುದು ಮಾತ್ರವಲ್ಲದೆ ನಾವು ಅದಕ್ಕಾಗಿ ನಿಮ್ಮ ಸಹಾಯ ಕೇಳಿದರೆ ಅದನ್ನು ಕೊಡುವುದಕ್ಕೂ ಸಿದ್ಧರಿರಬೇಕು."

ಹಿಂದೂ ದೇಶದಲ್ಲಿನ ಬ್ರಿಟಿಷ್ ಸಾಮ್ರಾಜ್ಯಾಧಿಕಾರವನ್ನು ನಾಶಗೊಳಿಸಿ ಸ್ವತಂತ್ರ ರಾಜ್ಯಭಾರ ಸ್ಥಾಪಿಸಬೇಕೆಂಬವರ ಮೇಲಿನ ವಾದಕ್ಕೆ ಲೋರ್ಡ್ ಜೆಟ್ಲೆಂಡರು ಪ್ರತ್ಯುತ್ತರವಿತ್ತಿರುವರು. "ನಾವು ಈಗ ಪಡೆದಿರುವ ಅಧಿಕಾರವನ್ನು ನಮಗೆ ಬೇಕಷ್ಟು ಇಟ್ಟುಕೊಂಡು ನಿಮಗೆ ಒಳ್ಳೇದೆಂದು ನಮಗೆ ತೋರುವಷ್ಟರ ಸ್ವಾತಂತ್ರ್ಯವನ್ನೀಯುವೆವು. ನಮ್ಮ ಸಾಮ್ರಾಜ್ಯವು ಒಡೆದು ಹೋಗದಂತೆ ಮಾಡುವುದಕ್ಕಾಗಿಯೇ ನಾವು ಈ ಯುದ್ಧದಲ್ಲೀಗ ಹೋರಾಡುತ್ತಿರುವುದು. ಅದಕ್ಕೆ ನಿಮ್ಮ ಸಹಾಯವು ನಮಗೆ ಬೇಕು. ಆದರೆ ಅದನ್ನು ನೀವು ನಮ್ಮ ಶರ್ತಗಳ ಮೇರೆಗೆ ಕೊಡಬೇಕು. ಅದು ಅಸಾಧ್ಯವಾದರೆ ಬೇಡ. ನಾವು ವ್ಯವಹರಿಸಬೇಕಾದುದು ನಿಮ್ಮೊಂದು ಪಕ್ಷದೊಂದಿಗೆ ಮಾತ್ರವಲ್ಲ. ಬ್ರಿಟಿಷ್ ಆಳ್ವಿಕೆ ಮತ್ತು ಬ್ರಿಟಿಷ್ ಸಾಮ್ರಾಜ್ಯದ ಆಶ್ರಯದ ಪ್ರಯೋಜನಗಳನ್ನು ಮನಗಂಡು ಅವನ್ನಾಶಿಸುವವರು ಹಿಂದುದೇಶದಲ್ಲಿ ಅನೇಕರಿರುತ್ತಾರೆ. ನಮಗೆ ವಿಧೇಯರಾಗಿರುವ ಈ ಜನರಿಂದ ಬೇಕಾದ ಸಹಾಯ ಪಡೆದು ಯುದ್ಧದಲ್ಲಿ ಜಯಶೀಲರಾಗುವ ಭರವಸೆ ನಮಗಿದೆ. ಅವರ ಸೇವೆಯನ್ನು ಅಂಗೀಕರಿಸಿ ಯುದ್ಧಾನಂತರ ಇನ್ನೊಂದು ಕಂತಿನ ಸುಧಾರಣೆಯನ್ನೀಯುವೆವು. ಲೋಕದಲ್ಲಿ ಪ್ರಜಾಸತ್ತೆಯನ್ನು ಸುರಕ್ಷಿತವಾಗಿ ಸ್ಥಾಪಿಸುವುದೆಂಬುದರ ನಮ್ಮ ಅರ್ಥವಿದು. ಲೋಕದಲ್ಲಿ ನಮ್ಮಷ್ಟು ಪ್ರಜಾಶಾಹಿ ಪ್ರೇಮಿಗಳು ಇನ್ನೊಬ್ಬರಿಲ್ಲ ನಾವು ಹಿಂದುದೇಶವನ್ನು ಕ್ರಮಕ್ಕೆ ಪ್ರಜಾ ಜವಾಬ್ದಾರಿ ರಾಜ್ಯಭಾರದಲ್ಲಿ ತರಬೇತಿ ಮಾಡಿ ಸುರಕ್ಷಿತಗೊಳಿಸುವೆವು" ಎಂದೇ ಲೋರ್ಡ್ ಜೆಟ್ಲೆಂಡರ ಭಾಷಣದ ಯಥಾರ್ಥ.

ಬ್ರಿಟಿಷ್ ಮುತ್ಸದ್ದಿಗಳಲ್ಲಿ ಇಂತಹ ಮನೋವೃತ್ತಿಯು ದೃಢವಾಗಿರುವವರೆಗೆ ರಾಷ್ಟ್ರೀಯ ವಾದಿ ಹಿಂದೀಯರು ಮತ್ತು ಬ್ರಿಟಿಷ ಸರಕಾರಗಳೊಳಗೆ ರಾಜಿಯು ಸಾಧ್ಯವೇ ಇಲ್ಲ. ಹಿಂದೂದೇಶವು ಹೋರಾಡಿಯೇ ಅಧಿಕಾರವನ್ನು ಕಿತ್ತುಕೊಳ್ಳಬೇಕಾಗುವಂತೆ ತೋರುತ್ತದೆಂದು ಮಹಾತ್ಮರು ವಿಷಾದಪೂರ್ವಕವಾಗಿ ಬರೆದಿರುತ್ತಾರೆ.

ಇಂತಹ ಪರಿಸ್ಥಿತಿಯಲ್ಲಿ ವೈಸರಾಯರನ್ನು ಕಂಡು ಮಾತನಾಡಿದುದಕ್ಕೆ ಗಾಂಧಿಜಿಯವರೇನೂ ಪಶ್ಚಾತ್ತಾಪ ಪಡುವುದಿಲ್ಲ ಅದರಿಂದಾಗಿ ತನಗೆ ಮತ್ತಷ್ಟು ಹೆಚ್ಚಿನ ಬಲ ಬಂದಿರುವುದೆಂದೇ ಅವರ ಅಭಿಮತ. ಸತ್ಯಾಗ್ರಹಿಯಾದವನು ನಿರಾಶನಾಗಲೇಬಾರದು. ವೈರಿಯ ಹೃದಯವನ್ನೊಲಿಸಿಕೊಳ್ಳುವ ಸಂದರ್ಭವನ್ನವನು ಹಾರೈಸುತ್ತಿರಬೇಕು ಅಗತ್ಯಬಿದ್ದರೆ ವೈರಿಯ ಬಾಗಿಲು ತೆರೆಯಲ್ಪಡುವ ವರೆಗೆ ಹೊರಗೆ ಬಡಿಯುತ್ತಾ ನಿಲ್ಲುವುದಕ್ಕೂ ಆತನು ಸಿದ್ಧನಿರಬೇಕು. ನಿರಾಶೆಯ ಪರಮಾವಧಿಯೇ ಆಶೆಯ ಮೆಟ್ಟಲಾಗುವುದೇ ಹೆಚ್ಚು ದೇಶದ ಈಗಣ ಪರಿಸ್ಥಿತಿಯಿಂದಾಗಿ ಕಾಂಗ್ರೆಸ್ ಕೆಲಸಗಾರರು ನಿರುತ್ಸಾಹಗೊಳ್ಳಬಾರದು. ಅವರು ಮತ್ತಷ್ಟು ಹುರುಪಿನಿಂದ ಜಾಗ್ರತಿಯನ್ನುಂಟುಮಾಡಬೇಕು. ಕಾರ್ಯಕ್ಕೆ ತೊಡಗದಿದ್ದರೆ ಜನತೆಯ ಉತ್ಸಾಹವು ನಾಶವಾಗುವುದೆಂದೆಣಿಸುವುದು ತಪ್ಪು. ಹಿಂಸಾತ್ಮಕ ಕ್ರಾಂತಿಯಲ್ಲಿ ಅದು ನಿಜವಿರಬಹುದು. ಅವಸರಪಟ್ಟು ಹೋರಾಟ ಹೂಡಿಬಿಟ್ಟ ಪಕ್ಷದಲ್ಲಿ ನಮ್ಮನ್ನೇ ನಾವು ತಪ್ಪುಮಾರ್ಗಕ್ಕೆಳೆದುಕೊಂಡಂತಾಗುತ್ತದೆ. ಅನಿವಾರ್ಯವಾದಾಗ ಹೋರಾಟವು ತಾನೇ ಬರುವದು. ನಮ್ಮ ಕುರಿತು ಲೋಕದಲ್ಲಿ ಹಬ್ಬಿಸಲ್ಪಟ್ಟಿರುವ ತಪ್ಪುಭಾವನೆಗಳಿಂದಾಗಲಿ ನಮ್ಮೊಳಗೆ ಬೆಳೆಸಲ್ಪಡುತ್ತಿರುವ ಒಡಕುಗಳಿಂದಾಗಲಿ ನಾವು ತಳಮಳಗೊಳ್ಳಬೇಕಾಗಿಲ್ಲ. ಯಾವರೀತಿಯ ಉದ್ವೇಗಕ್ಕೂ ಒಳಗಾಗದ ಶಾಂತಪರ ಮನೋವೃತ್ತಿಯಿಂದ ನಾವು ನಮ್ಮ ಕರ್ತವ್ಯಮಾರ್ಗ ಹಿಡಿದು ಮುಂದುವರಿಯ ಬೇಕೆಂದೇ ರಾಷ್ಟ್ರಕ್ಕೆ ಮಹಾತ್ಮರ ಉಪದೇಶ

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಕ್ಕವಿಟ್ಟರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ [illegible] ಕೇಳ[illegible] ನಮೂನೆಗಳಲ್ಲಿ ತಕ್ಕ [illegible] ಆಫೀಸರರಿಗೆ ಒಪ್ಪಿಸಿಕೊಡಬೇಕು. ಅಂದು [illegible] ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ತಿಳಿದುಕೊಳ್ಳಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪೂರ್ಣ [illegible] ನಿಷ್ಕೃತಿಯನ್ನು [illegible] ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. [illegible] ನಮ್ಮಿಂದ ವಿಚಾರಿಸಲಾಗುವ ಟೇಕ್ಸು ಕಮ್ಮಿಯಾಗತಕ್ಕದು [illegible] ಟೇಕ್ಸು ಕೊಡಬೇಕಿಲ್ಲವೆಂದೂ [illegible] "[illegible]" ಕಳ್ಳಿಯಾಗಿ ಹೋಗಿದ್ದರೆ [illegible] ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕ್ಕೆ [illegible] ಪತ್ರ ವ್ಯವಹಾರ ನಡೆಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ಬೇಕಾಗಿದ್ದಾರೆ

ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯರಾಗಲಿ, ಉಪಾಧ್ಯಾಯಿನಿಯರಾಗಲಿ ಬೇಕಾಗಿದ್ದಾರೆ. ಉಮೇದ್ವಾರರು ತಾ. 20-3-40ರ ಮೊದಲು ಈ ಕೆಳಗಿನ ವಿಳಾಸಕ್ಕೆ ಅರ್ಜಿ ತಲಪಿಸಬೇಕು.

ವಿಳಾಸ:—
ಮೆನೇಜರ್,
S. M. E. ಶಾಲೆ, ನೆಂದಳಿಕೆ
ಪೋಸ್ಟ್ ಬೆಳ್ಮಣ್ಣು, S. K.

ANTARANGA
YUGADI SPECIAL
(To be published on 14-4-1940)

Best Medium for Advertisement

FOR FURTHER PARTICULARS, APPLY TO:-

ADVERTISEMENT MANAGER

ANTARANGA, UDIPI.

ಪಂಡಿತ ಜವಹರಲಾಲ ನೆಹರು

ಕೇವಲ ರಾಜಕೀಯ ಮುಖಂಡರು ಮಾತ್ರವಲ್ಲ, ಉತ್ತಮ ಸಾಹಸಿಗಳೂ ಹೌದು.

ಅವರ ಸಾಹಿತ್ಯ ಜೀವನದ ಕೆಲವು ಅಂಶಗಳು.

(ಪಂ ಜವಹರಲಾಲರ ಇಂಗ್ಲಿಷ್ ಭಾಷೆಯ ಸುಪ್ರಸಿದ್ಧ ಲೇಖಕರ ಮತ್ತು ಕವಿಗಳ ಗುಂಪಿನಲ್ಲಿ ಗೌರವಿಸಲ್ಪಡತ್ತಿರುವವರು. ಪಂಡಿತರು ಕೇವಲ ಅಹಿಂಸಾತ್ಮಕ ಚಳವಳಿಯಲ್ಲಿ ಮಾತ್ರ ಭಾಗವಹಿಸದೆ, ಆ ಚಳವಳಿಯ ಇತಿಹಾಸಕಾರರೂ ಆಗಿರುವರು. ಇವರ ಅಂತರ್ರಾಷ್ಟ್ರೀಯ ತಿಳುವಳಿಕೆಯು ಅದ್ಭುತವಾದುದು. ಇವರ ಅಭಿಪ್ರಾಯಗಳು ಬಹಳ ಅಮೂಲ್ಯವಾದುವು. ಒಂದು ವೇಳೆ ಪಂಡಿತರಿಗೆ ರಾಜಕೀಯದಲ್ಲಿ ಸ್ವಲ್ಪ ವಿರಾಮವಿರುತ್ತಿದ್ದರೆ, ಆಗ ನೋಡಬೇಕಾಗಿತ್ತು ಅವರ ಲೇಖನಿಯ ವೈಖರಿಯನ್ನು! ಇವರ ಅನುಭವ ಬುದ್ಧಿಕುಶಲತೆಯು ಎನೇನ ಹೊಸ ವಿಚಾರಗಳನ್ನು ಬೆಳಕಿಗೆ ತರುತ್ತಿತ್ತೋ. ಸಂ)

ಪಂಡಿತರ ಸಾಹಿತ್ಯದ ಚಟುವಟಿಕೆಗಳು

ಪಂಡಿತರ ಲೇಖನಿಯಿಂದ ಹೊರಬೀಳುವ, ಬಿದ್ದಿರುವ ಕೃತಿಗಳ ಪೈಕಿ ಅನೇಕ ಕೃತಿಗಳ ಬೆಳಕಿಗೆ ಬಂದಿರುವುದಿಲ್ಲ. ಇವರ ರಚನೆಗಳೆಲ್ಲ ಹೆಚ್ಚಾಗಿ ಜೈಲಿನಲ್ಲಿಯೇ ಆದುವು. ಅಂದರೆ ಸೆರೆಮನೆಯ ಕತ್ತಲು ಕೋಣೆಯಲ್ಲಿ ಮಾತ್ರ ಇವರ ಲೇಖನಿಯು ಚುರುಕಾಗಿರುವುದೆಂಬರ್ಥವಲ್ಲ. ಅವರು ಎಲ್ಲೇ ಇರಲಿ ಅವರ ಪ್ರತಿಭಾವಂತ ಲೇಖನಿಯು ತನ್ನ ಕೆಲಸವನ್ನು ನಡೆಸಿಯೇ ನಡೆಸುವುದು. ಆದರೆ ಜೈಲಿನಿಂದ ಹೊರಗೆ ಬಂದ ಮೇಲೆ ಕಾರ್ಯಬಾಹುಳ್ಯದಿಂದ ಅವರಿಗೆ ವಿರಾಮ ದೊರೆಯುವುದಿಲ್ಲ. ಅಷ್ಟೆ. ಹೊರಗೆ ಬಂದ ವೇಳೆ ಲೇಖಕರಿಗಿಂತ ಉತ್ತಮ ಸೈನಿಕರಾಗುವರು. ಈ ಕಾರಣದಿಂದಲೇ ವೃತ್ತಪತ್ರಿಕೆಗಳಿಗೆ ಕೆಲವು ಹೇಳಿಕೆಗಳನ್ನು ಕೊಟ್ಟು, ಸಣ್ಣ ಸಣ್ಣ ಪುಸ್ತಕಗಳನ್ನು (Pamphlets) ಮಾತ್ರ ಹೊರಡಿಸಬಲ್ಲರೆ ವಿನಹ, ಗ್ರಂಥಗಳ ರಚನೆಗೆ ಅವರಿಗೆ ವಿರಾಮವಿಲ್ಲ. ಆದರೂ ಜವಾಹರರೆಂದರೆ ಯಾವಾಗಲೂ ಬಿಡುವಿಲ್ಲದೆ ದುಡಿಯುವ, ಸದಾ ಕೆಲಸಮಾಡುತ್ತಿರುವ ವ್ಯಕ್ತಿ. ಆಯಾಸವನ್ನೆಂದಿಗೂ ಅವರು ಎಣಿಸುವುದೇ ಇಲ್ಲ.

ಒಂದು ಸಾರಿ ಅವರು ಈ ರೀತಿ ಹೇಳಿದ್ದರು: "ನಾನು ಆರಾಮದಿಂದಿರುವುದೆಂದರೆ, ಲಕ್ಷಾಂತರ ಹಸಿದವರಿಗೆ ಮೋಸಮಾಡಿದಂತೆಯೇ!" ಈ ಕಾರಣದಿಂದಲೇ ಪಂಡಿತರ ಲೇಖನಿಯಿಂದ ಹೊರಬಿದ್ದ ಗ್ರಂಥಗಳು ನಮಗೆ ಹೆಚ್ಚು ಲಭ್ಯವಾಗದಿರುವುದು. ಆದರೆ ಹೊರಬಿದ್ದಿರುವ ಕೆಲವು ಗ್ರಂಥಗಳಾದರೂ ಸಾಮಾನ್ಯವಾದುವೇನೂ ಅಲ್ಲ. ಅವುಗಳಲ್ಲಿ ಅವರ ದೂರದೃಷ್ಟಿ, ವಿದ್ಯುತ್ತಿನಂತಹ ಪ್ರತಿಭೆ, ವಿವೇಚನಾ ಶಕ್ತಿ, ಸೂಕ್ಷ್ಮಬುದ್ಧಿಗಳ ಗೋಚರವಾಗುವವು.

ಆತ್ಮಕಥೆ

ಸಾಹಿತ್ಯದ ದೃಷ್ಟಿಯಿಂದ ಪಂಡಿತರ ಆತ್ಮಕಥೆಯು ಬಹಳ ಉತ್ತಮ ಶ್ರೇಣಿಗೆ ಸೇರಿದೆ. ಇದನ್ನು ನೋಡುವುದರಿಂದ ಅವರ ಹೃದಯದಲ್ಲಿನ ಭಾವನೆಗಳ ನಿಜವಾದ ಚಿತ್ರವು ತಿಳಿದುಬರುವುದು. ಅವರು ಬೆಳೆದ ವಾತಾವರಣವೇನು, ಅವರು ನಂತರ ಅದು ದೇನು ಎಂಬುದು ಗೊತ್ತಾಗುತ್ತದೆ. ಈ ಪುಸ್ತಕದಲ್ಲಿ ಜವಾಹರರು ತಮ್ಮ ಎದೆಯನ್ನು ಬಿಚ್ಚಿ ಮುಚ್ಚುಮರೆಯಿಲ್ಲದೆ ತಮ್ಮ ಜೀವನವನ್ನೆಲ್ಲ ತೋರಿಸಿರುವರು. ಅದನ್ನು ಓದುವುದರಿಂದ ಅವರೊಬ್ಬ ಮಹಾ ರಾಜಕೀಯ ವ್ಯಕ್ತಿಗಳೆಂಬುದೂ ನ್ಯಾಯಕ್ಕೆ ಮಾತ್ರ ತಲೆಬಾಗುವ ವ್ಯಕ್ತಿ ಎಂಬುದೂ ತಿಳಿದುಬರುವುದು. ಇವರು ಬರೀ ಆಡಂಬರದ ವ್ಯಕ್ತಿಯಾಗಿರದೆ ಕೆಲಸಗಾರರಾಗಿರುವರು.

ಈ ರೀತಿ ದೀರ್ಘವಾದ ಅನುಭವ ಮತ್ತು ದೂರದೃಷ್ಟಿಯಿಂದ ಇವರು ಕೊಡುವ ಹೇಳಿಕೆಗಳು ಮಹತ್ತರವಾದ ಪರಿಣಾಮಕಾರಿಯಾಗುತ್ತವೆ. ದೂರದಲ್ಲಿದ್ದುಕೊಂಡೇ ತಮ್ಮ ವಿರೋಧಿಗಳ ವಿಚಾರದಲ್ಲಿ ಇತರರು ಟೀಕೆಮಾಡುವಂತೆ ಇವರು ಟೀಕೆಮಾಡುವವರಲ್ಲ. ಇತರರಂತೆ ಕೆಲಸ ಬಿದ್ದಾಗ ಓಡಿಹೋಗುವ ಸ್ವಭಾವದವರೂ ಅಲ್ಲ. ಪಂಡಿತರು ಅಂತವರ ನಿಜವಾದ ರೂಪವನ್ನು ಜಗತ್ತಿಗೆ ತೋರಿಸಿ ಅವರು ಒಳ್ಳೆ ಭಾಷಣಕಾರರೆಂಬುದನ್ನೂ ಸಮಯ ಬಂದಂತೆ ನಡೆದುಕೊಳ್ಳುವ ಹೇಡಿ ಸ್ವಭಾವದವರೆಂಬುದನ್ನೂ ತೋರಿಸುವರು.

ವಿಶ್ವದ ಇತಿಹಾಸ

ಈ ಗ್ರಂಥವು ಅತ್ಯಂತ ಪ್ರಾಮುಖ್ಯವಾದ ರಚನೆ. ಇದರಲ್ಲಿ ಕೇವಲ ಐತಿಹಾಸಿಕ ವರ್ಣನೆಗಳು ಮಾತ್ರವಲ್ಲದೆ, ಕಲಿಯಬೇಕಾದ ವಿಷಯಗಳ ದೊಡ್ಡ ಸಂಗ್ರಹವೇ ಆಗಿದೆ. ಅಬಾಲವೃದ್ಧರು ಅವಶ್ಯವಾಗಿ ನೋಡಬೇಕಾದ ಗ್ರಂಥವಿದು. ಡಾಕ್ಟರ್ ಜಾನ್ಸನ್‌ರ ರಚನೆಯ ವಿಷಯದಲ್ಲಿ ಸರ್ ವಾಲ್ಟರ್‌ರೇಲೆ ಹೇಳಿದ್ದಂತೆ, ಜವಾಹರರ ಗ್ರಂಥಗಳು ಕೇವಲ ವಿದ್ಯಾರ್ಜನೆಯ ದೃಷ್ಟಿಯಿಂದ ಮಾತ್ರವಲ್ಲದೆ ಬುದ್ಧಿಯ ವಿಕಾಸಕ್ಕೂ ಸಹಾಯವಾಗಿವೆ.

ಕೆಲವು ಸಂದರ್ಭಗಳಲ್ಲಿ ಪಂಡಿತರು ನೈಸರ್ಗಿಕ ರಮಣೀಯತೆಯನ್ನು ಸಹಜ ಮನೋರಂಜನೆಯಾಗುವಂತೆ ವರ್ಣಿಸಿರುವರು. ಕಾಶ್ಮೀರ, ಪಂಜಾಬಿಬೆಟ್ಟಗಳು, ಇವುಗಳ ವಿಚಾರದಲ್ಲಿ ಹೃದಯಸ್ಪರ್ಶಿ ರಚನೆಗಳನ್ನು ಮಾಡಿರುವರು. ಗದ್ಯವಲ್ಲದೆ ಪದ್ಯಗಳಲ್ಲೂ ಇವರಿಗೆ ಅಭಿರುಚಿಯಿದೆ.

ಮಹಾತ್ಮಾ ಗಾಂಧಿಜಿಯವರ ಶೈಲಿಯೇ ಬೇರೆ. ಜನರ ಮನಸ್ಸನ್ನು ಕೂಡಲೆ ಹರಣ ಮಾಡುವ ಶೈಲಿ ಅವರದು. ಜವಾಹರರ ಶೈಲಿಯಾದರೂ ಸ್ವಲ್ಪ ಗಂಭೀರವಾದುದು.

Every Policyholder is a Member

IN

The Canara Mutual

ASSURNCE COMPANY, LTD.

(Head Office:- UDIPI, S. India.)

Everyday the Membership increases.

The Company issues all the well-known plans of Assurance.

Female lives accepted.

JOIN ITS EVER INCREASING MEMBERSHIP.

ಮೈಸೂರು ಪತ್ರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮೈಸೂರು, ಫೆ. 19.

ಮೈಸೂರು ರೈಲ್ವೆ ವರ್ಕ್‌ಷಾಪ್ ಪ್ರಕರಣ

ಮೈಸೂರು ರೈಲ್ವೆ ವರ್ಕ್‌ಷಾಪ್ 'ಲಾಕ್ ಔಟ್' ಮುಂದುವರಿಯಿತು. ರೈಲ್ವೆ ಕೆಲಸಗಾರರುಗಳು ತಮ್ಮ ಅಧಿಕಾರಿಗಳಿಗೆ ಒಂದು ಘನ ಮೆಮೋರಿಯಲ್ ಸಲ್ಲಿಸಿ ಇದನ್ನು ವಾಪಸ್ಸು ಮಾಡಬೇಕೆನ್ನಲು ಅಧಿಕಾರಿಗಳು "ಕೆಲಸಕ್ಕೆ ಬರುವವರು ತಮ್ಮ ಹೆಸರುಗಳನ್ನು ವರ್ಕ್‌ಷಾಪ್ ಕ್ಯಾಂಟಿನ್ ಶೆಡ್ಡಿನಲ್ಲಿರುವ ಟೈಂ ಕೀಪರಿಗೆ ಕೊಡಬೇಕೆಂದೂ ಒಂದು ಖಂಡೀಶನ್" ಪ್ರಕಾರ ಒಂದು ನೋಟೀಸ್ ಹೊರಡಿಸಿದರು. ಕೆಲಸಗಾರರು ಸಭೆ ಸೇರಿ ಇದಕ್ಕೆ ಒಪ್ಪುವವರು ಯಾರಾದರಿದ್ದಲ್ಲಿ ತಮ್ಮ ಸೂಚನೆಯನ್ನು ಕೈ ಎತ್ತಿ ತೋರಿಸಬೇಕೆನ್ನಲು ಸುಮಾರು ಸಾವಿರದೈನೂರು ಮಂದಿ ಕೆಲಸಗಾರರಲ್ಲಿ ಒಬ್ಬರೂ ಕೈ ಎತ್ತದೆ ತಮ್ಮ ಅಸಮ್ಮತಿ ಸೂಚಿಸಿ ಕೆಲಸಕ್ಕೆ ಹೋಗುವುದಿಲ್ಲವೆಂದರು. ಆದರೆ ಇನ್ನಿತರರು ಇದಕ್ಕೆ ಪ್ರತಿಭಟಿಸಿ ಕೆಲಸಕ್ಕೆ ಹೋಗುವ ಸಲುವಾಗಿ ಹೆಸರುಗಳನ್ನು ಕೊಟ್ಟಿರುತ್ತಾರೆ. ಈ ರೀತಿ ಹೆಸರು ಕೊಟ್ಟಿರುವುದು ಸುಮಾರು ಒಂಬ ನಾರ್ವತ್ತೆಂದು ಈ ಪತ್ರ ಬರೆಯುತ್ತಿರುವ ವೇಳೆಯಲ್ಲಿ ಗೊತ್ತಾಗಿದೆ. "ನಾಳೆಷ್ಟು ಜನ ಬಂದರೂ ಲಾಕ್ ಔಟನ್ನು ಮುಕ್ತಾಯಗೊಳಿಸಬಹುದೆಂದು" ಸರ್ಕಾರದವರು ರೈಲ್ವೆ ಅಧಿಕಾರಿಗಳಿಗೆ ತಿಳಿಸಿರುತ್ತಾರೆ. ವರ್ಕ್‌ಷಾಪನ್ನು ಮುಚ್ಚಿ ಇಂದಿಗೆ ಮೂರು ವಾರಗಳು ಮುಗಿದು ಇಂದಿನಿಂದ ನಾಲ್ಕನೇ ವಾರ ಪ್ರಾರಂಭವಾಗುತ್ತೆ. ವರ್ಕ್‌ಷಾಪಿನ ಬಳಿ ಪೋಲೀಸ್ ಕಾವಲಿದೆ. ಕೆಲ್ಸಗಾರರು ಕೆಲಸಕ್ಕೆ ಹೋಗುವ ಸಂಭವವುಂಟು. ಕೆಲ್ಸಗಾರರು ಶಾಂತಿ ಮತ್ತು ಶಿಸ್ತಿನಿಂದಿದ್ದಾರೆ. ಪರಿಸ್ಥಿತಿಯು ಶಾಂತವಾಗಿದೆ.

ಇತರ ಸುದ್ದಿಗಳು—'ಜಾರ್ಜ್' ಚಿತ್ರಪಟವನ್ನು ಮೈಸೂರು ಸಂಸ್ಥಾನದಲ್ಲಿ ಪ್ರದರ್ಶಿಸಕೂಡದೆಂದು ಸರ್ಕಾರದಾಜ್ಞೆಯಾಗಿದೆ. ಬೆಂಗಳೂರು ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಅವಧಿ ಮುಗಿಯುತ್ತಾದ್ದರಿಂದ ಆ ಸ್ಥಳಕ್ಕೆ ಪುನಃ ಚುನಾವಣೆಯು ಇದೇ ಮಾಹೆ ತಾ. 21ರಲ್ಲಿ ನಡೆಯುತ್ತೆ. ಮೈಸೂರು ಸಂಸ್ಥಾನದಲ್ಲಿ ಒಂದು ವೈಮಾನಿಕ ಶಾಲೆ ತೆರೆಯಲೇರ್ಪಾಡು ಮಾಡಲಾಗುತ್ತಿದೆ. ಮೈಸೂರು ಪ್ಯಾಲೇಟೀನಲ್ಲಿ ಇನ್ನು ಮುಂದೆ ಅದುತಂಡಿ ಪಕ್ಷಿಗಳಿರುತ್ತಾರೆ. ಮೈಸೂರು ಕಾಂಗ್ರೆಸ್ ವರ್ಕಿಂಗ್ ಸಮಿತಿ ಸಭೆ ನಡೆದು ಅನೇಕ ವಿಷಯ ಚರ್ಚಿಸಿದರು ಮತ್ತು ಇಂದು ಪುನಃ ಸಭೆ ಸೇರಲಿದೆ, ಅಲ್ಲದೆ, ಎ. ಐ. ಸಿ. ಸಿ. ಅಧಿವೇಶನವು ಇದೇ ಮಾಹೆ ತಾ. 24-25ರಲ್ಲಿ ಮೈಸೂರು ನಗರದಲ್ಲಿ ಸೇರಲಿದೆ. ರಾಜಕೀಯ ಕೈದಿಗಳಿಗೆ ಹಿಂಸೆ ಕೊಟ್ಟರೆಂದು ಆಪಾದಿಸಿ ಸರ್ಕಾರದಿಂದ ವಿಚಾರಣೆಗೆ ನೇಮಿತರಾಗಿದ್ದ ಅಧಿಕಾರಿಗಳು ಶೀಘ್ರದಲ್ಲೆ ತಮ್ಮ ವರದಿ ಸರ್ಕಾರಕ್ಕೆ ಕಳುಹಿಸಲಿದ್ದಾರೆ. ಶ್ರೀಮನ್ ಮಹಾರಾಜ ಪಾರ್ಟಿಯವರು ಇದೇ ಮಾಹೆ ತಾ. 21ರಿಂದ 25ರ ವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಸಂಚರಿಸುತ್ತಾರೆ. ಮೈಸೂರು ಶ್ರೀಮನ್ ಮಹಾರಾಜ ಸಂಸ್ಕೃತ ಪಾಠಶಾಲೆ ವಾರ್ಷಿಕೋತ್ಸವವು ಶ್ರೀ. ಪ್ರಿನ್ಸ್ ಜಯಚಾಮರಾಜ ಒಡೆಯರ ಅಧ್ಯಕ್ಷತೆಯಲ್ಲಿ ನಡೆಯಿತು. ಗತಿಸಿದ ಆಚಾರ್ಯ ಪುರುಷ ಶ್ರೀ. ಮಧ್ವಾಚಾರ್ಯರ ದಿನವನ್ನು ಮೈಸೂರು ಸಂಸ್ಥಾನದಲ್ಲೆಲ್ಲಾ ಆಚರಿಸಲಾಯಿತು. ಮೈಸೂರು ಸಂಸ್ಥಾನ ವೈದ್ಯ ಸಮ್ಮೇಳನವು ಮುಂದಿನ ಮಾಹೆ ತಾ. 1ರಿಂದ ಮೈಸೂರಿನಲ್ಲಿ ನಡೆಯಲಿದೆ, ಬೆಂಗಳೂರು ಮಹಿಳಾಸಮಾಜ 26ನೇ ವಾರ್ಷಿಕೋತ್ಸವವು ಡಾ| ಮಿಸ್ ಅಲ್ಬುಕರ್ಕ್‌ರ ಅಧ್ಯಕ್ಷತೆಯಲ್ಲಿ ನಡೆಯಿತು. ಮೊಹರಂ ಹಬ್ಬವು ಸಂಸ್ಥಾನದಲ್ಲೆಲ್ಲಾ ಶಾಂತರೀತಿಯಲ್ಲಿ ನಡೆಯಿತು.

ಮೊಹರಮ್ ಎಂದರೇನು? ಅದರ ಸಂಕ್ಷಿಪ್ತ ವಿವರಣೆ.

('ಅಲ್‌ಕಲಾಂ' ಪತ್ರಿಕೆಯ ಸಂಪಾದಕರಾದ ಹಜರತ್ ಸೈಯದ್ ಗೌಸ್ ಮೊಹಿಯುದ್ದೀನ್ ಇವರಿಂದ)

ಪೈಗಂಬರ ಮಹಮ್ಮದರ ಮಗಳಾದ ಫಾತಿಮ ಜಹರ ಅವರ ಮಗ ಹಜರತ್ ಇಮಾಂ ಹುಸೇನರು ಕೊಲೆಯಾದ ಸಂಬಂಧದಲ್ಲಿ ನಡೆದ ದುಷ್ಕೃತ್ಯಕ್ಕಾಗಿ ಮರುಗುವುದೇ ಇಡೀ ಮುಸ್ಲಿಮ ಜನಾಂಗವು ಆಚರಿಸುವ ಮೊಹರಂ.

ನಾಲ್ಕನೆಯ ಖಲೀಫರಾದ ಹಜರತ್ ಅಲಿಗೆ ಇಬ್ಬರು ಮಕ್ಕಳಿದ್ದರು. ಅವರು ಇಮಾಂ ಹಸನ್ ಮತ್ತು ಇಮಾಂ ಹುಸೇನ್. ಹಜರತ್ ಅಲಿಯು ಕಾಲವಾದ ಮೇಲೆ ಖಿಲಾಫತ್ ಪದವಿಯು ಹಜರತ್ ಇಮಾಂ ಹುಸೇನರಿಗೆ (ಅಣ್ಣನೂ ಕಾಲವಾಗಿದ್ದುದರಿಂದ)ಬರಬೇಕಾಗಿತ್ತು. ಆದರೆ ಇದನ್ನು ಹಿಜರಿ ೬೦ರಲ್ಲಿ (ಕ್ರಿ.ಶ. ೬೮೦) ಅಮೀರ್ ಮುವಾಯಿಯಫ಼ ಪಡೆದರು. ಇವರಾದ ನಂತರ ಇದು ಇವರ ಮಗ ಎಜೀದ್‌ಗೆ ಹೋಯಿತು. ಈಪದವಿಯನ್ನು ಪಡೆದಮೇಲೆ ಎಜೀದರು ತಮ್ಮ ಖಿಲಾಫತ್ ಸ್ಥಾನವನ್ನು ಗೌರವಿಸಬೇಕೆಂದು, ಆಶ್ರಯವನ್ನು ಸೂಚಿಸಬೇಕೆಂದು, ಹಜರತ್ ಇಮಾಂ ಹುಸೇನರಿಗೆ ಹೇಳಿ ಕಳುಹಿಸಿದರು. ಹಜರತ್ ಇಮಾಂ ಹುಸೇನರು ಇದನ್ನು ಸತ್ಯಕ್ಕೆ ವಿರೋಧವಾಗಿದ್ದುದರಿಂದ ಒಪ್ಪಲಿಲ್ಲ ಅದೇ ವರ್ಷ ಇವರು ಮದೀನದಿಂದ ಮಕ್ಕಾಕ್ಕೆ ಬಂದರು. ಇಲ್ಲಿರುವಾಗ ಇವರಿಗೆ ಕೂಫಾ ಪ್ರಜೆಗಳಿಂದ ಅನೇಕ ಪತ್ರಗಳು ಬಂದವು ಈ ಪತ್ರಗಳೆಲ್ಲವೂ ಹಜರತ್ ಇಮಾಂ ಹುಸೇನರು ಕೂಫಾಕ್ಕೆ ಬರಬೇಕೆಂದೂ, ಖಿಲಾಫತ್ ಸಿಂಹಾಸನವನ್ನು ಅಲಂಕರಿಸಬೇಕೆಂದೂ ಬೇಡಿದರು.

ಜನರ ಇಚ್ಛೆಯನ್ನು ಸರಿಯಾಗಿ ತಿಳಿದು ತಕ್ಕ ವ್ಯವಸ್ಥೆ ಮಾಡಲು ಹಜರತ್ ಇಮಾಂ ಹುಸೇನರು ಮುಸ್ಲಿಂ-ಬಿನ್-ಅಖೀಲ್ ಎಂಬುವರನ್ನು ಕೂಫಾಕ್ಕೆ ಕಳುಹಿಸಿದರು. ಇವರು ಕೂಫಾದ ಸುಮಾರು ೧೮೦೦೦ ಪ್ರಜೆಗಳನ್ನು ಹಜರತ್ ಇಮಾಂ ಹುಸೇನರಿಗೆ ಅನುಕೂಲರಾಗಿರುವರೆಂದೂ, ತಮ್ಮ ಆಗಮನವನ್ನೇ ಎದುರುನೋಡುತ್ತಿರುವರೆಂದೂ ಬರೆದರು. ಆದರೆ ಕೂಫಾ ಗೌರ್ನರರಾಗಿದ್ದ ಇಬ್ನೆ ಜಿಯಾದರು ಹಜರತ್ ಇಮಾಂ ಹುಸೇನರಿಗೆ ಅನುಕೂಲರಾಗಿದ್ದ ಪ್ರಜೆಗಳಲ್ಲನೇಕರನ್ನು ಕೊಲೆ ಮಾಡಿಸಿದರು. ಈ ವಿಷಯವನ್ನು ಹಜರತ್ ಇಮಾಂ ಹುಸೇನರು ತಿಳಿಯಲು ಸಾಧ್ಯವಾಗಲಿಲ್ಲ.

ಹಜರತ್ ಇಮಾಂ ಹುಸೇನರು ಮುಸ್ಲಿಂ-ಬಿನ್-ಅಖೀಲ್ ಅವರ ಪತ್ರದ ಪ್ರಕಾರ ಮಕ್ಕಾದಿಂದ ಕೂಫಾಕ್ಕೆ ತಮ್ಮ ನೆಂಟರಿಷ್ಟರೊಡನೆ ಹೊರಟರು. ಮಾರ್ಗದ ಮಧ್ಯೆ ಸಿಕ್ಕಿದ ಹಾಜಿಜ್ ಎಂಬಲ್ಲಿ ತಂಗಿದ ಮೇಲೆ ಅವರು ಕೂಫಾ ಜನರಿಗೆ ತಾವು ಬರುತ್ತಿರುವುದಾಗಿ ಖಿಸ್-ಬಿನ್-ಮುಸ್‌ಹೀರ್ ಮೂಲಕ ಒಂದು ಪತ್ರವನ್ನು ಬರೆದು ಕಳುಹಿಸಿದರು. ಆದರೆ ಖಿಸ್-ಬಿನ್-ಮುಸ್‌ಹೀರರು ಕೂಫಾದಲ್ಲಿ ದಸ್ತಗಿರಿಯಾಗಿ ಕೊಲೆಮಾಡಲ್ಪಟ್ಟರು. ಈ ವರ್ತಮಾನವು ಕೂಡ ಹಜರತ್ ಇಮಾಂ ಹುಸೇನರಿಗೆ ತಿಳಿಯಲು ಸಾಧ್ಯವಾಗಲಿಲ್ಲ.

ಅವರು ಹಿಜರಿ ೬೧ ರಲ್ಲಿ ಶರಾಫ್ ಎಂಬ ಸ್ಥಳವನ್ನು ಸೇರಿದರು. ಇಲ್ಲಿಗೆ ಇಬ್ನೆ ಜಿಯಾದ್ ಅವರ ಸುಮಾರು ೧೦೦೦ ಸಿಪಾಯಿಗಳು ಬಂದು ಅವರನ್ನು ಸುತ್ತುಗಟ್ಟಿದರು. ಕೂಫಾಕ್ಕೆ ಹೋಗಿ ಇಬ್ನೆ ಜಿಯಾದ್ ಅವರ ಮುಂದೆ ಎಜೀದ್ ಅವರ ಖಿಲಾಫತ್ ಅಧಿಕಾರವನ್ನು ಒಪ್ಪಿದರೆ ಬಿಡುವುದಾಗಿ ಹೇಳಿದರು. ಆದರೆ ಇದನ್ನು ಒಪ್ಪುವುದೆಂತು?

ಮೂರನೆಯ (ಎರಡನೆಯ) ದಿನ ಹಜರತ್ ಇಮಾಂ ಹುಸೇನರ ಕಡೆಯವರು ತಮ್ಮ ಡೇರಾಗಳನ್ನು ಕರ್‌ಬಲ ಎಂಬ ದೊಡ್ಡ ಮೈದಾನಿನಲ್ಲಿ ಹಾಕಿಕೊಂಡರು.

ಮೂರನೆಯ ದಿನ ಉಮರ್-ಬಿನ್-ಸಾದ್ ಎಂಬವರು ೪೦೦೦ ಸೈನ್ಯದೊಡನೆ ಬಂದು ಹಜರತ್ ಇಮಾಂ ಹುಸೇನರನ್ನು ಅವರ ಆಗಮನದ ಉದ್ದೇಶವನ್ನು ಪ್ರಶ್ನಿಸಿದರು. ಅವರು ಕೂಫಾಕ್ಕೆ ಅಲ್ಲಿಯ ಪ್ರಜೆಗಳ ಕೋರಿಕೆಯಂತೆ ಹೋಗುತ್ತಿರುವರೆಂದು ತಿಳಿದು, ಇದನ್ನು ಇಬ್ನೆ ಜಿಯಾದರವರಿಗೆ ವರದಿ ಮಾಡಿದರು. ಇಬ್ನೆ ಜಿಯಾದರವರು ಎಜೀದರವರ ಖಿಲಾಫತ್ ಸ್ಥಾನವನ್ನು ಒಪ್ಪುವುದಾದರೆ ಕೂಫಾಕ್ಕೆ ಬರಬಹುದೆಂದು ಹಜರತ್ ಇಮಾಂ ಹುಸೇನರಿಗೆ ಹೇಳಿಕಳುಹಿಸಿದರು. ಅವರು ಈ ಹೇಳಿಕೆಯನ್ನು ಅಂಗೀಕರಿಸಲಾಗಲಿಲ್ಲ. ಆದುದರಿಂದ ಅವರಿಗೂ ಅವರೊಡನಿದ್ದವರಿಗೂ ನೀರು ಕೂಡ ದೊರೆಯದಂತೆ ವ್ಯವಸ್ಥೆಮಾಡಿದರು. ಪಕ್ಕದಲ್ಲೇ ಇದ್ದ ಯೂಫ್ರಟೀಸ್ ನದಿಯಿಂದ ಅವರು ನೀರನ್ನು ತೆಗೆದುಕೊಳ್ಳದಿರಲೆಂದು, ದಡದ ಮೇಲೆ ೫೦೦ ಸೈನಿಕರ ಕಾವಲಿಟ್ಟರು. ಈ ವ್ಯವಸ್ಥೆಯಿಂದ (ಏಳನೇ ದಿನದಿಂದ) ಅವರಿಗೆ ನದಿಯಿಂದ ನೀರು ದೊರೆಯದಂತೆಯೂ ಆಯಿತು.

ಒಂಭತ್ತನೆಯ ದಿನ ಉಮರ್-ಬಿನ್-ಸಾದ್‌ರವರ ಸೈನ್ಯಕ್ಕೆ ಸಿದ್ಧವಾಗುವಂತೆ ಆಜ್ಞಾಪಿಸಿ, ಹಜರತ್ ಇಮಾಂ ಹುಸೇನರಿಗೆ ಅವರ ಮೇಲೆ ಹೋರಾಟ ನಡೆಸುವುದಾಗಿ ಹೇಳಿಕಳುಹಿಸಿದರು. ಹಜರತ್ ಇಮಾಂ ಹುಸೇನರು ಆ ರಾತ್ರಿಯ ಅವಕಾಶ ಕೇಳಿದರು.

ಆ ರಾತ್ರಿ ತಮ್ಮೊಡನಿದ್ದವರೆಲ್ಲರನ್ನೂ ಸಭೆಸೇರಿಸಿ, ಪರಿಸ್ಥಿತಿಯನ್ನು ವಿವರಿಸಿ, ಎಲ್ಲರೂ ಸ್ವಸ್ಥಾನಗಳಿಗೆ ಹೊರಟುಹೋಗಬೇಕೆಂದು ಸೂಚಿಸಿದರು. ಆದರೆ ಯಾರೊಬ್ಬರೂ ಹೋಗಲು ಒಡಂಬಡಲಿಲ್ಲ. 'ನಿಮ್ಮ ರಕ್ಷಣೆಗಾಗಿ, ಸತ್ಯ ರಕ್ಷಣೆಗಾಗಿ ನಾವು ನಮ್ಮ ದೇಹದಲ್ಲಿ ಕಡೆಯ ತೊಟ್ಟು ರಕ್ತ ಇರುವವರೆಗೂ ಹೋರಾಡುವೆವು' ಎಂದು ಏಕವಾಣಿಯಲ್ಲಿ ಹೇಳಿದರು.

ಹತ್ತನೆಯ ದಿನ ಉದಯವಾಯಿತು. ಅದು ಶುಕ್ರವಾರ. ಹಜರತ್ ಇಮಾಂ ಹುಸೇನರ ಕಡೆ ಅವರ ನಂಟರಿಷ್ಟರಾದ ಕೇವಲ ೭೨ ಜನರು ಮಾತ್ರ; ಆದರೆ ವಿರೋಧವಾಗಿ ೪೦೦೦೦ ಸೈನಿಕರು. ಪ್ರಾರ್ಥನೆಯಾದ ಮೇಲೆ ಹಜರತ್ ಇಮಾಂ ಹುಸೇನರು ಯುದ್ಧರಂಗದಲ್ಲಿ ಬಹಳ ಗಂಭೀರವಾದ ಧ್ವನಿಯಲ್ಲಿ ತತ್ವೋಪದೇಶಮಾಡಿದರು. ಇದನ್ನು ಗಮನಿಸದೆ ವಿರೋಧಪಕ್ಷದವರು ಮುಂದೆ ನುಗ್ಗಿದರು, ಹಜರತ್ ಇಮಾಂ ಹುಸೇನರ ಅನುಯಾಯಿಗಳನ್ನು ಕೊಲೆಮಾಡಿದರು. ಅಲಿ ಅಕ್ಬರ್, ಅಬ್ದುಲ್ಲಾ, ಖಾಸೀಂ, ಅಬುಬಕರ್ ಮುಂತಾದವರು ಕೊಲೆಮಾಡಲ್ಪಟ್ಟರು. ಕೊನೆಗೆ ಉಳಿದವರು ಹಜರತ್ ಇಮಾಂ ಹುಸೇನರು ಮತ್ತು ಕಾಯಿಲೆಯಲ್ಲಿದ್ದ ಹಜರತ್ ಅಬೀದ್ ಅವರು.

(೯ನೇ ಪುಟಕ್ಕೆ ಮುಂದರಿಯುವುದು)

ಶ್ರೀಮನ್ ಮಹಾರಾಜರ ಪಟ್ಟಾಭಿಷೇಕ ದಿನ— ಶ್ರೀಮನ್ ಮಹಾರಾಜರು ಸಿಂಹಾಸನಾರೂಢ ದಿನವನ್ನು ಕಳೆದ ಗುರುವಾರ ಮೈಸೂರು ಅರಮನೆಯಲ್ಲಿ ಆಚರಿಸಲಾಯಿತು. ಆ ದಿನ ರಥಸಪ್ತಮಿ, ಇದನ್ನು ಸೂಚಿಸಲು ಅರಮನೇ ಬತೇರಿಯಿಂದ ಆ ದಿನ ಬೆಳಿಗ್ಗೆ 7 ಘಂಟೆಗೆ 45 ಕುಶಾಲ ತೋಪು ಹಾರಿಸಲಾಯಿತು ಮತ್ತು ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರ ನಡೆಯಿತು.

ಯುದ್ಧ ಸಹಾಯ ನಿಧಿ— ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಭಾಗವಹಿಸಿರುವ ಐರೋಪ್ಯ ಮತ್ತು ಭಾರತೀಯರಿಗೆ ಸಹಾಯಕ್ಕಾಗಿ **ಮೈಸೂರು ಶ್ರೀಮನ್ ಮಹಾರಾಜರು ಒಂದು ಲಕ್ಷ ರೂಪಾಯಿ ಸಹಾಯಮಾಡಿರುತ್ತಾ**ರೆಂದು ಗೊತ್ತಾಗಿದೆ. ಇಷ್ಟಲ್ಲದೆ ಬೆಂಗಳೂರಲ್ಲಿ ಒಂದು ಸಭೆಯು ಶ್ರೀ. ಪ್ರಿನ್ಸ್ ಜಯಚಾಮರಾಜ ಒಡೆಯರ ಅಧ್ಯಕ್ಷತೆಯಲ್ಲಿ ನಡೆದು ನಿಧಿಗೆ ಹಣ ವಸೂಲಿಮಾಡುವ ಮತ್ತು ಇತರ ಸಹಾಯ ನೀಡಲು ಒಂದು ಸಮಿತಿಯನ್ನು ರಚಿಸಲಾಯಿತು.

SAFE: BUT USELESS

DURING a recent archaeological digging a copper pot was unearthed containing 1800 Victoria Rupees. An inscription on the pot recorded the name of the person who buried it and the date of the "burial", 1870. The money was handed over to his heirs.

If instead of being deposited in the earth, the money had been deposited in a BANK at 3½% per annum and reinvested with the interest every year, his heirs would now have come to posses Rs. 5,600/-. And also all the time in the hands of the bank, the money would have been useful to trade and industry.

RESOURCES OF A CRORE.

ESTD: 1906
CANARA BANK LIMITED.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS,
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೨೨-೨-'೪೦

ರಾಮಗಡ ಕಾಂಗ್ರೆಸಿನ ಅಧ್ಯಕ್ಷರು.

ಮೌಲಾನ ಅಬ್ದುಲ್ ಕಲಮ್ ಅಜಾದರು ಪ್ರಚಂಡ ಬಹುಮತದಿಂದ ಈ ಸಲದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವುದು ಅಭಿನಂದನೀಯವಿದೆ. ಆರೋಗ್ಯವು ನೆಟ್ಟಗಿದ್ದರೆ ಸರ್ವಸಮ್ಮತಿಯಿಂದ ಅವರು ತ್ರಿಪುರಿ ಕಾಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಡುತ್ತಿದ್ದರು. ಅವರು ಅಧ್ಯಕ್ಷರಾಗಲೊಪ್ಪುತ್ತಿದ್ದರೆ ತ್ರಿಪುರಿ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿಯೂ ಅನಂತರವೂ ಉಂಟಾದ ದುರ್ಘಟನೆಗಳು ನಿವಾರಿತವಾಗುತ್ತಿದ್ದವು. ಕಾಂಗ್ರೆಸಿನೊಳಗೆ ಒಡಕಿಗೆ ಆಸ್ಪದ ದೊರೆಯುವಂತಿದ್ದಿಲ್ಲ.

ದೇಶದ ಇಂದಿನ ಪರಿಸ್ಥಿತಿಯಲ್ಲಿ ಮೌಲಾನ ಅಜಾದರೇ ಕಾಂಗ್ರೆಸ್ ಪ್ರೆಸಿಡೆಂಟರಾಗಲು ಅರ್ಹರೆಂಬುದರಲ್ಲಿ ಸಂದೇಹವೇ ಇಲ್ಲ. ಅವರು ಅತ್ಯಂತ ನಿಷ್ಠಾವಂತ ಕಾಂಗ್ರೆಸ್ ಅನುಯಾಯಿಯು. ಅತ್ಯಂತ ವಿಧೇಯತೆಯಿಂದ ಮತ್ತು ಯಾವ ತರದ ಆಡಂಬರವೂ ಇಲ್ಲದೆ ಎಡೆಬಿಡದ ಆದರ ಸೇವೆಮಾಡುತ್ತ ಬಂದು ದೇಶದಲ್ಲೆಲ್ಲಾ ಸನ್ಮಾನ್ಯರಾದ ಮುಖಂಡರು. ಅತ್ಯಂತ ಉದಾರ ಬುದ್ಧಿಯ ಸುಸಂಸ್ಕೃತ ಹಾಗೂ ಸಚ್ಚರಿತ ಮುಸಲ್ಮಾನ ಸದ್ಗೃಹಸ್ಥರು. ಅವರಷ್ಟು ಮೇಧಾವಿಯಾದ ಮುಸಲ್ಮಾನ ಧರ್ಮ ತತ್ವಜ್ಞರು ಹಿಂದೂ ದೇಶದಲ್ಲಿ ಹಲವು ಮಂದಿ ಇಲ್ಲಾದರು. ಅಸಾಧಾರಣವಾಗಿ ಅವರ ಮೃದುಮಧುರ ನಡೆನುಡಿಗಳಿಂದ ಯಾರನ್ನೂ ನೋಯಿಸದೆ ಸರ್ವರ ಪ್ರೀತಿಪಾತ್ರರಾಗಿರುವವರು. ನಿಷ್ಠಾವಂತ ಗಾಂಧಿವಾದಿಗಳಾದ ಮೌಲಾನ ಅಜಾದರಿಂದ ತೀವ್ರಗಾಮಿ ಬಲಪಕ್ಷೀಯರು ಕೂಡ ಮೂಗು ಮುರಿಯದೆ ಸೌಹಾರ್ದವುಳ್ಳವರಿರುವರು. ಆದುದರಿಂದಲೇ ಅವರ ಪ್ರತಿಸ್ಪರ್ಧಿಯಾದ ಶ್ರೀ ಎಂ.ಎನ್ ರಾಯ್ಯಗಳಿಗೆ ಅಷ್ಟೊಂದು ಕಡಿಮೆ ಓಟು ದೊರೆಯಲು ಕಾರಣವೆನ್ನಬಹುದು. ಮೌಲಾನರು ಇಡೀ ರಾಷ್ಟ್ರದ ಮನ್ನಣೆಗೆ ಪಾತ್ರರಾಗಿರುವ ಮಹಾವ್ಯಕ್ತಿಯು.

ರಾಮಗಡ ಕಾಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ
ಮೌಲಾನ ಅಬ್ದುಲ್ ಕಲಮ್ ಅಜಾದರು

ಈ ಸಲದ ಕಾಂಗ್ರೆಸ್ ಪ್ರೆಸಿಡೆಂಟ್ ಚುನಾವಣೆಯಲ್ಲಿ ಸ್ಪರ್ಧಿಸಿದ
ಶ್ರೀ ಎಮ್. ಎನ್ ರಾಯ್ಯಗಳು

ಹಿಂದು ಮುಸಲ್ಮಾನ ವೈಷಮ್ಯವು ತೀವ್ರ ಸ್ವರೂಪತಾಳಿರುವ ದೇಶದ ಪ್ರಕೃತದ ಪರಿಸ್ಥಿತಿಯಲ್ಲಿ ಮೌಲಾನ ಅಜಾದರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವುದು ಮತ್ತಷ್ಟು ಸ್ವಾಗತೀಕರಿಸಲ್ಪಡತಕ್ಕ ವಿಷಯವಿದೆ. "ಮೌಲಾನ ಅಜಾದರ ಚುನಾವಣೆಯು ದೇಶವನ್ನು ಮುನ್ನಡೆಸುವುದು ಮಾತ್ರವಲ್ಲದೆ, ಮುಸಲ್ಮಾನೇತರರ ಮುಂದೆ ಮುಸಲ್ಮಾನರ ಅಭಿಮತವನ್ನು ಪ್ರತಿಪಾದಿಸುವವರಿದ್ದಾರೆ" ಎಂದು ಮಾಜಿ ಮಂತ್ರಿಗಳೂ, ಮುಸ್ಲಿಮ್ ಲೀಗಿನ ಸಂಸ್ಥಾಪಕರಲ್ಲೊಬ್ಬರೂ ಆಗಿರುವ ಸರ್ ರಾಫಿಉದ್ದೀನ್ ಅಹಮ್ಮದರು ಕೊಟ್ಟಿರುವ ಅಭಿಪ್ರಾಯವು ವಿಚಾರಶೀಲ ಮುಸಲ್ಮಾನ ಜನತೆಯ ಮನೋವೃತ್ತಿಯನ್ನು ಪ್ರತಿಬಿಂಬಿಸುತ್ತದೆ. ಮೌಲಾನ ಅಜಾದರು ಕಾಂಗ್ರೆಸಿನೊಳಗಿನ ಬೇರೆ ಬೇರೆ ಪಕ್ಷಗಳೊಳಗೆ ಐಕ್ಯವನ್ನುಂಟುಮಾಡಲು ಅವಿಶ್ರಾಂತವಾಗಿ ಪರಿಶ್ರಮಿಸಿರುವುದು ಮಾತ್ರವಲ್ಲದೆ ಹಿಂದು ಮುಸಲ್ಮಾನ ಬಾಂಧವ್ಯದ ಪ್ರವಾದಿಯೇ ಆಗಿರುವರು.

ಇಂದೀಗ ಮಿ ಜಿನ್ನರು ಹಿಂದುಸ್ಥಾನವನ್ನು ಹಿಂದು ಮತ್ತು ಮುಸಲ್ಮಾನಸ್ಥಾನವನ್ನಾಗಿ ವಿಂಗಡಿಸ ಲೆತ್ನಿಸುತ್ತಿದ್ದಾರೆ. ಹಿಂದೀ ಜನಾಂಗವನ್ನು ಹಿಂದು ಮತ್ತು ಮುಸಲ್ಮಾನ ರಾಷ್ಟ್ರಗಳಾಗಿ ವಿಭಾಗಿಸಲು ಮುಂದಾಗಿದ್ದಾರೆ. ಏಕಮಾತ್ರ ಅಖಿಲ ಭಾರತ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸ್ಸನ್ನು ಹಿಂದೂ ಸಂಸ್ಥೆಯೆಂದು ಉದ್ಘೋಷಿಸಹತ್ತಿರುತ್ತಾರೆ. ಹಿಂದೂ ದೇಶಕ್ಕೆ ಪ್ರಜಾಸಾಹಿ ರಾಜ್ಯಭಾರವೇ ಹೇಳಿಸಿದುದಲ್ಲೆಂದು ವಾದಿಸಹತ್ತಿರುತ್ತಾರೆ. ಅದರಿಂದ ಹಿಂದುಗಳೇ ಬಹುಪಕ್ಷೀಯರಾಗಿ ರಾಜ್ಯಭಾರ ನಡಿಸುವಂತಾಗಿ ಮುಸಲ್ಮಾನರಿಗೆ ಘಾತವಾಗುವುದೆಂಬ ಭ್ರಾಮಕ ಭೀತಿಯು ಮಿ. ಜಿನ್ನರನ್ನು ಪೀಡಿಸಹತ್ತಿದೆ. ಮಿ ಜಿನ್ನರ ಅರ್ಥರಹಿತ ಹಾಗೂ ಉದ್ಧಟ ಘೋಷಣೆಯಿಂದಾಗಿ ದೇಶದ ವಾತಾವರಣವು ಒಡಕು ವೈಷಮ್ಯಗಳ ಕಲುಷಿತದಿಂದ ಆವರಿತವಾಗಿ ಸ್ವಾತಂತ್ರ್ಯ ಸಂಯೋಜನೆಯಕ್ಕೆ ದೊಡ್ಡ ಪ್ರತಿಬಂಧಕವುಂಟಾಗಿದೆ. ಮಿ ಜಿನ್ನರ ಈ ಮನೋವೃತ್ತಿಯನ್ನೊಪ್ಪದ ವಿಚಾರಶೀಲ ಮುಸಲ್ಮಾನರು ದೇಶದಲ್ಲೇನೂ ಕಡಿಮೆಯಿಲ್ಲ. ಮಿ. ಜಿನ್ನರ ಇತ್ತಲಾಗಿನ ವರ್ತನೆಯಿಂದ ಮುಸ್ಲಿಮ್ ಲೀಗಿನ ಮುಖಂಡರು ಕೆಲವರಲ್ಲಿಯೇ ಜುಗುಪ್ಸೆಯುಂಟಾಗಿರುವಂತಿದೆ. ಮುಸಲ್ಮಾನರೆಲ್ಲರ ಹೆಚ್ಚಿನ ಮನ್ನಣೆಗೆ ಪಾತ್ರರಾಗಿರುವ ಬೊಂಬಾಯಿಯ ಸರ್. ಸುಲೆಮಾನ್ ಕಾಸಿಮ್ ಮಿಠಾಯಿವರು ಮಿ ಜಿನ್ನರ ಮುಂದಾಳುತ್ವವನ್ನು ನಿಷೇಧಿಸಿ ಮುಸ್ಲಿಮ್ ಲೀಗಿಗೆ ರಾಜಿನಾಮೆ ಕೊಟ್ಟಿರುತ್ತಾರೆ. ಸಿಂಧಿನ ಸರ್. ಗುಲಾಮ್ ಹುಸೇನ್ ಹಿದಾಯತುಲ್ಲಾರವರು ಮುಸಲ್ಮಾನರೊಂದು ಪ್ರತ್ಯೇಕ ಜನಾಂಗವೆಂಬ ಮಿ. ಜಿನ್ನರ ಸಿದ್ಧಾಂತವನ್ನು ಪ್ರತಿಭಟಿಸಿ, ಸಂಯುಕ್ತ ಮತದಾನ ಪದ್ಧತಿಯಿಂದ ಮಾತ್ರವೇ ಜಾತೀಯ ಪ್ರಶ್ನೆಯನ್ನು ಸಮರ್ಪಕವಾಗಿ ಇತ್ಯರ್ಥಪಡಿಸಬಹುದೆಂದು ಸೂಚಿಸಿರುತ್ತಾರೆ. ಸನ್ಮಾನ್ಯ ಮುಸಲ್ಮಾನ ಮುಖಂಡರಾದ ಪಂಜಾಬಿನ ಪ್ರಧಾನ ಮಂತ್ರಿ ಸರ್. ಸಿಕಂದರ್ ಹಯತ್‌ಖಾನರೂ ಮೌಲಾನ ಅಜಾದರೂ ಕಳೆದ ವಾರ ಲಾಹೋರಿನಲ್ಲಿ ಮಾತುಕತೆ ನಡಿಸಿರುತ್ತಾರೆ.

ಕಾಂಗ್ರೆಸಿನೊಳಗಣ ಬೇರೆ ಬೇರೆ ತಂಡಗಳೊಳಗೆ ಐಕ್ಯವುಂಟಾಗಬೇಕು. ಎಲ್ಲಾ ಪಕ್ಷಗಳವರೂ ಕಾಂಗ್ರೆಸಿಗೆ ವಿಧೇಯವಾಗಿ ನಡೆಯುವಂತಾಗಬೇಕು. ಹಿಂದೂಮುಸಲ್ಮಾನ ಬಾಂಧವ್ಯವನ್ನು ಸ್ಥಿರವಾಗಿ ಸ್ಥಾಪಿಸಲು ಬೇಕಾದ ಪ್ರಯತ್ನವು ನಡೆಸಲ್ಪಡಬೇಕೆಂದು ಮಹಾತ್ಮಾ ಗಾಂಧಿಯವರು ಇತ್ತಲಾಗಿ ಎಡೆಬಿಡದೆ ಸಾರುತ್ತಾ ಬಂದಿರುವರು. ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನೀಯಲು ಬ್ರಿಟಿಷ್ ಸರಕಾರವು ನಾನಾ ನೆವನಗಳನ್ನು ಮುಂದೊಡ್ಡುತ್ತಿರುವ ಈ ಕಾಲದಲ್ಲಿ ಕಾಂಗ್ರೆಸಿನೊಳಗೆ ಮತ್ತು ಹಿಂದೂಮುಸಲ್ಮಾನರೇ ಮೊದಲಾದ ಬೇರೆ ಬೇರೆ ಸಮಾಜಗಳೊಳಗೆ ಒಕ್ಕಟ್ಟೇ ಎಲ್ಲಕ್ಕಿಂತಲೂ ಮೊದಲಾಗಿ ಬೇಕಾದ್ದು. ಈ ಒಕ್ಕಟ್ಟನ್ನು ಸಾಧಿಸಲು ಕಾಂಗ್ರೆಸಿನ ಹೊರತು ಇನ್ನಾವ ಪಕ್ಷಗಳಿಂದಲೂ ಸಾಧ್ಯವಿಲ್ಲ. ಈಸಲ ಮೌಲಾನ ಅಜದರು ಅಧ್ಯಕ್ಷರಾಗಿ, ಇಡೀ ದೇಶದ ಸೌಹಾರ್ದಪರ ಸಹಕಾರ ಪಡೆದು ಕಾಂಗ್ರೆಸಿನೊಳಗಣ ಹಾಗೂ ಇಡೀ ದೇಶದ ಐಕ್ಯವನ್ನು ಸಾಧಿಸಿ ಹಿಂದೀಯರು ಆದಷ್ಟು ಬೇಗನೆ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಗಳಿಸುವಂತಾಗಲೆಂದೇ ನಮ್ಮ ಉತ್ಕಟೇಚ್ಛೆ

ಫಿನ್ಲೆಂಡಿನ ಪತನವಾಗುವುದೇ ?

ಸ್ಟೆಲಿನರು ಫಿನ್ಲೆಂಡನ್ನು ಸದೆಬಡಿಯುವ ಘೋರತರ ನಿರ್ಧಾರಮಾಡಿ ಪ್ರಚಂಡ ಸೇನೆಯನ್ನು ಅದರ ಮೇಲೆ ಧಾಳಿನಡಿಸಲು ಕಳುಹಿಸಿರುವರು. ಇಷ್ಟರವರೆಗೆ ಫಿನ್ನರು ಅಸಾಧಾರಣ ಧೈರ್ಯ ಮತ್ತು ಸ್ಥೈರ್ಯದಿಂದ ಆ ಧಾಳಿಯನ್ನು ತಡೆಗಟ್ಟಿರುವರಾದರೂ, ಎಷ್ಟೊಂದು ನಾಶಮಾಡಿದರೂ ತರಂಗ ತರಂಗವಾಗಿ ಬರುವ ಸೋವಿಯೆಟ್ ಸೇನೆಯನ್ನವರಿಗೆ ತಡೆಯಲು ಸಾಧ್ಯವಾಗಿರುವುದಿಲ್ಲ. ಆದುದರಿಂದಲೇ ಕೇವಲ ಸಂಖ್ಯಾಬಲದಿಂದ ರಸ್ಯಾನರು ಮೆನ್ನರ್ಹೈಮ್ ಕೋಟೆಯ ಪ್ರಥಮ ಸಾಲುಗಳನ್ನು ಭೇದಿಸಿ ವಶಪಡಿಸಿಕೊಳ್ಳಲು ಶಕ್ತರಾಗಿರುವರು. ಈ ಕೋಟೆಯು ಭೇದಿಸಲ್ಪಟ್ಟಿತೆಂದರೆ ಮತ್ತೆ ರಸ್ಯಾನರಿಗೆ ಫಿನ್ಲೆಂಡನ್ನು ಗೆಲ್ಲುವುದೇನೂ ಕಷ್ಟವಾಗಲಾರದು. ಯುದ್ಧದ ಪರಿಸ್ಥಿತಿಯು ಇದೇ ರೀತಿ ನಡೆದಲ್ಲಿ ರಸ್ಯಾನರ ನಿರ್ಧಾರದಂತೆ ಈ ತಿಂಗಳ ಅಂತ್ಯದೊಳಗೆ ಫಿನ್ಲೆಂಡು ಪತನಹೊಂದುವ ಸಂಭವ ತೋರುತ್ತದೆ. ವಿದೇಶೀ ರಾಷ್ಟ್ರಗಳು ಶೀಘ್ರನಾಗಿ ಸೈನಿಕ ಸಹಾಯವಿತ್ತರೆ ಮಾತ್ರ ಫಿನ್ಲೆಂಡಿಗೆ ಸೋವಿಯೆಟ್ ಸೇನೆಯನ್ನು ತಡೆಗಟ್ಟಲು ಸಾಧ್ಯವಾಗಬಹುದು. ಅದೇನೂ ಸುಲಭಸಾಧ್ಯವಲ್ಲ. ಇಟೆಲಿ, ಫ್ರಾನ್ಸ್ ಮತ್ತು ಇಂಗ್ಲೆಂಡುಗಳಿಂದ ಫಿನ್ಲೆಂಡಿಗೆ ಸ್ವಯಂ ಸೇವಕರನ್ನು ಕಳುಹಿಸುವುದು ಬಹಳ ಪ್ರಯಾಸವಾಗಿದೆ. ಸ್ವೀಡನ್ ಮೊದಲಾದ ಫಿನ್ಲೆಂಡಿನ ನೆರೆಯ ರಾಷ್ಟ್ರಗಳು ಜರ್ಮನಿ ಮತ್ತು ರಸ್ಯಗಳಿಗೆ ಬೆದರಿ ತಟಸ್ಥವಾಗಿವೆ. ಜರ್ಮನಿಯು ತೋರಿಕೆಗೆ ತಾಟಸ್ಥ್ಯದ ಘೋಷಣೆ ಮಾಡಿದರೂ ಒಳಗಿಂದೊಳಗೆ ರಸ್ಯಕ್ಕೆ ಸಹಾಯಮಾಡುತ್ತಿರುವಂತಿದೆ. ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ಫಿನ್ಲೆಂಡಿಗೇನಾದರೂ ಸಹಾಯವೀಯದಂತೆ ಹಿಟ್ಲರರು ಪಶ್ಚಿಮರಣರಂಗದಲ್ಲಿ ಪ್ರಬಲ ಹೋರಾಟ ಹೂಡಲಿರುವರೆಂದು ಸುದ್ದಿಯುಂಟಾಗಿದೆ.

ನವಯುಗದ ವಾರಪತ್ರಿಕೆಯ[illegible]
ನಿಮ್ಮ ಜಾಹಿರಾತುಗಳನ್ನು ಪ್ರಕಟಿಸಿ ಪಡೆಯಿರಿ !

ದೇಶಕ್ಕೆ ಕಾಂಗ್ರೆಸ್ ಪ್ರೆಸಿಡೆಂಟರ ಸಂದೇಶ

ಇದೇ ತಾ 18ರಲ್ಲು ಮೌಲಾನ ಅಬ್ದುಲ್ ಕಲಮ ಆಜದರು ಲಾಹೋರಿನಿಂದ ದೇಶಕ್ಕೆ ಕೊಟ್ಟಿರುವ ಸಂದೇಶದ ಸಾರಾಂಶವು ಈ ಕೆಳಗಣಂತಿರುತ್ತದೆ. "ಪ್ರತಿ ದಿನವೂ ನಾವು ನಮ್ಮ ಹೋರಾಟಕ್ಕೆ ಸಮೀಪಿಸುತ್ತಿದ್ದೇವೆ. ಈ ವಿಷಯಕ್ಕೇನೇ ನಾವೀಗ ನಮ್ಮ ಸರ್ವ ಲಕ್ಷ್ಯವನ್ನೀಯಬೇಕು. ನಾನು ಅಧ್ಯಕ್ಷನಾಗಿ ಆರಿಸಲ್ಪಟ್ಟುದೆಂದರೆ ಗಾಂಧಿಜಿಯವರ ನಾಯಕತ್ವ ಮತ್ತು ಕಾರ್ಯಕ್ರಮದ ಮೇಲೆ ವಿಶ್ವಾಸ ಸೂಚನೆಯೆಂದು ನಾನು ತೆಗೆದುಕೊಳ್ಳುತ್ತೇನೆ ಈ ದೇಶದ ಮುಂದಿರುವ ಮುಖ್ಯ ಪ್ರಶ್ನೆಯು ರಾಜಕೀಯವಾದುದು ಆದರೆ ಹಿಂದೂ ಮುಸಲ್ಮಾನ ಪ್ರಶ್ನೆಯನ್ನೂ ಕಡೆಗಾಣಿಸಲು ಸಾಧ್ಯವಿಲ್ಲ. ಹಿಂದೂದೇಶದ ಸ್ವಾತಂತ್ರ್ಯ ಹೋರಾಟವನ್ನು, ದೇಶದ ಅಂತರಿಕ ಕಲಹಗಳು ಇತ್ಯರ್ಥವಾಗುವನಕ ನಿಲ್ಲಿಸಲು ಸಾಧ್ಯವಿಲ್ಲ ರಾಜಕೀಯ ಸ್ವಾತಂತ್ರ್ಯವು ಜಾತೀಯ ಪ್ರಶ್ನೆಯ ಇತ್ಯರ್ಥದ ಮೇಲೆ ಹೊಂದಿಕೊಂಡಿರುವುದಿಲ್ಲ ಈಗಣ ತಟಸ್ಥ ಸ್ಥಿತಿಯನ್ನು ಇದೇ ರೀತಿ 'ವ ಎಂದು ವರಿಸಲು ಸಾಧ್ಯವಿಲ್ಲ ರಾಮಗಡ ಕಾಂಗ್ರೆಸ್ ಅಧಿವೇಶನದ ಅನಂತರ ಕಾಂಗ್ರೆಸು ಒಂದು ಹೆಜ್ಜೆಯನ್ನು ಮುಂದಿಡಬೇಕು. ಈ ಹೆಜ್ಜೆಯು ನಿಜವಾಗಿಯೂ ಹೊಸ ಹೋರಾಟದ ರೂಪ ತಾಳುವುದು. ಬರುವ ಕಾಂಗ್ರೆಸ್ ಅಧಿವೇಶನದ ನಂತರ ಕಾಯಿದೆ ಭಂಗ ಚಳವಳ ಹೂಡಲೇ ಬೇಕಾಗುವುದು.

ಹಿಂದೂ-ಮುಸಲ್ಮಾನ ಪ್ರಶ್ನೆಯ ಕುರಿತು ಕಾಂಗ್ರೆಸು ತನ್ನ ದ್ವಾರವನ್ನು ಸದಾ ತೆರೆದಿಟ್ಟಿದೆ ಅನುಕೂಲ ವಾತಾವರಣದಲ್ಲಿ ಅದು ಸಂಧಿಪ್ರಸ್ತಾಪಮಾಡಲು ಸಿದ್ಧವೇ ಇದೆ. ರಾಜಕೀಯ ಪ್ರಶ್ನೆಯು ಇತ್ಯರ್ಥವಾದರೆ ಅನಂತರ ಸಂಯುಕ್ತ ಮಂತ್ರಿ ಮಂಡಲವನ್ನು ಸ್ಥಾಪಿಸುವ ಕುರಿತು ಕಾಂಗ್ರೆಸು ಆಲೋಚಿಸಬಹುದು.

ಕಳದ ಎರಡು ವರ್ಷಗಳಿಂದ ನನ್ನ ಸಹವ್ಯವಸಾಯಿಗಳು ನನ್ನನ್ನು ಕಾಂಗ್ರೆಸ್ಸಿನ ಅಧ್ಯಕ್ಷತನ ವಹಿಸಲು ಒತ್ತಾಯಪಡಿಸುತ್ತಾ ಬಂದಿರುವರು. ಆದರೆ ಕಾಂಗ್ರೆಸು ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಸ್ವೀಕರಿಸಿರುವಾಗ ನನಗೆ ಕಾಂಗ್ರೆಸಿನ ಅಧ್ಯಕ್ಷತನ ವಹಿಸಲು ಮನಸ್ಸಿರಲಿಲ್ಲ. ಈಗ ದೇಶದಲ್ಲಿ ಒಕ್ಕಟ್ಟುಂಟಾಗಿರುತ್ತದೆ. ಈ ಸಂದರ್ಭದಲ್ಲಿ ನಾನು ಅಧ್ಯಕ್ಷತನದ ಜವಾಬ್ದಾರಿಯನ್ನು ವಹಿಸದಿರುವುದು ಸರಿಯಲ್ಲೆಂದು ನನಗೆ ತೋರಿ ಅದಕ್ಕೆ ಹೆಗಲು ಕೊಟ್ಟಿರುವೆನು. ನನ್ನ ಮೇಲೆ ವಿಶ್ವಾಸವಿಟ್ಟಿರುವ ಸ್ನೇಹಿತರಿಗೂ ಕಾಂಗ್ರೆಸ್ ಕೆಲಸಗಾರರಿಗೂ ನಾನು ಆಭಾರಿ ಇರುವೆನು. ಅವರು ವಿಶ್ವಾಸವಿಟ್ಟಷ್ಟೇ ಉತ್ಸಾಹದಿಂದ ನನ್ನೊಂದಿಗೆ ಸಹಕರಿಸುವರೆಂಬ ಭರವಸೆಯುಳ್ಳವನಿದ್ದೇನೆ.

"ಕಾಯಿದೆಭಂಗ ಚಳವಳ ಹೂಡಲು ಅನುಕೂಲ ವಾತಾವರಣ ಬೇಕೆಂಬುದೇನೋ ನಿಜ. ಹೋರಾಟ ಆರಂಭವಾದರೆ ಹಿಂದೂ-ಮುಸಲ್ಮಾನ ಕಲಹವೇಳುವುದೆಂಬ ಭೀತಿಯೇನೂ ಇರುವುದಿಲ್ಲ. ಎಂ. ಜಿನ್ನರ ಹಿಂದೂ ಮತ್ತು ಮುಸಲ್ಮಾನ ರಾಷ್ಟ್ರಗಳ ಭಾವನೆಯು ತಪ್ಪಾದುದು. ಅದಕ್ಕೆ ನಾನೊಪ್ಪಲಾರೆ."

ಮೌಲಾನ ಆಜದರು ತಾ. 18ರಲ್ಲು ಲಾಹೋರಿನಲ್ಲಿ ಅಭೂತಪೂರ್ವ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು. ಸಹಸ್ರಗಟ್ಟಲೆ ಜನರು ನೆರೆದು ಅವರನ್ನು ಸನ್ಮಾನಿಸಿದರು. "ಮುಸಲ್ಮಾನರಿಗೆ ಭದ್ರತೆಗಳನ್ನು ಪಡೆಯುವ ಹಕ್ಕು ಇದ್ದೇ ಇದೆ. ಆದರೆ ಅದಕ್ಕಾಗಿ ಅವರು ಬ್ರಿಟಿಷ್ ಸರಕಾರದ ಆಶಯಪಡೆಯದೆ ತಮ್ಮ ದೇಶಬಂಧುಗಳಿಂದಲೇ ಪಡೆಯಬೇಕು. ಕಾಂಗ್ರೆಸು ಎಲ್ಲರಿಗೂ ತೆರೆದಿರುವ ರಾಷ್ಟ್ರೀಯ ಸಂಸ್ಥೆ. ಎಲ್ಲರೂ ಅದಕ್ಕೆ ಸೇರಿ ಅದನ್ನು ಬಲಪಡಿಸಬೇಕೆಂದು ವಿನಂತಿಮಾಡಿಕೊಂಡರು ಮೌಲಾನಾ ಆಜದರ ಪ್ರಯತ್ನದಿಂದ ಪಂಜಾಬು ಕಾಂಗ್ರೆಸ್ ಕಮಿಟಿಯೊಳಗಿದ್ದ ಅಂತಃಕಲಹವು ದೂರವಾಗಿ ಐಕ್ಯಸ್ಥಾಪಿತವಾಗಿರುವುದು. ತಾ. 17ರಲ್ಲಿ ಮೌಲಾನರು ಸರ್. ಸಿಕಂದರ್ ಹಯತ್‌ಖಾನರೊಂದಿಗೆ ಉಪಾಹಾರ ಮಾಡಿ ದೇಶದ ರಾಜಕೀಯ ಪರಿಸ್ಥಿತಿಯ ಕುರಿತು ಮಾತುಕತೆ ನಡಿಸಿದರು.

(೭ನೇ ಪುಟದಿಂದ ಮುಂದುವರಿದುದು)

ಹಜರತ್ ಇಮಾಂ ಹುಸೇನರು ವಿರೋಧಿಗಳನ್ನು ದ್ವೇಷಿಸಿ ಅವರ ವರ್ತನೆಯು ಅಧರ್ಮವಾದುದೆಂದೂ, ಕರುಣೆಯಿಂದಲೂ ಬುದ್ಧಿವಂತಿಕೆಯಿಂದಲೂ ಇರಬೇಕೆಂದೂ ಉಪದೇಶಮಾಡಿದರು. ಇದಕ್ಕೆ ವಿರೋಧಿಗಳು ಗಮನಕೊಡಲಿಲ್ಲ. ಪ್ರತಿಯಾಗಿ ಅವರು ಹಜರತ್ ಇಮಾಂ ಹುಸೇನರ ಮೇಲೆ ಬಾಣಗಳ ಮಳೆಗರೆದು ಇವರ ಮೃತ್ಯುವಿಗೆ ಕಾರಣರಾದರು.

ಅಷ್ಟೇ ಅಲ್ಲ. ಹಜರತ್ ಇಮಾಂ ಹುಸೇನರ ಶಿರವನ್ನು ಎಜೀದರ ಆಸ್ಥಾನಕ್ಕೆ ಕೂಡ ಕಳುಹಿಸಿದರು.

ಖಲೀಫರಾಗಿದ್ದ ಎಜೀದರು ಈ ಹೋರಾಟಕ್ಕಾಗಿ ಮತ್ತು ಹಜರತ್ ಇಮಾಂ ಹುಸೇನರ ಕೊಲೆಗಾಗಿ ಮುದುಗಿದರು. ಇಬ್ನ ಜಿಯಾದರ ದುಷ್ಕಾರ್ಯಕ್ಕಾಗಿ ಕೋಪಗೊಂಡರು. ಹಜರತ್ ಇಮಾಂ ಹುಸೇನರ ಮತ್ತು ಅವರ ಅನುಯಾಯಿಗಳ ಕಡೆಯ ಹೆಂಗಸರು ಎಜೀದರಲ್ಲಿಗೆ ಬಂದು ಮೊರೆಯಿಟ್ಟರು.

ಮೂರು ದಿನಗಳವರೆಗೆ ಅವರು ಗೋಳಾಡಿದರು. ಕೊನೆಗೆ ಅವರನ್ನು ಸಮಾಧಾನಗೊಳಿಸಿ, ಉಚಿತ ಗೌರವದೊಡನೆ ಎಜೀದರು ಮದೀನಕ್ಕೆ ಕಳುಹಿಸಿದರು.

ಹಜರತ್ ಇಮಾಂ ಹುಸೇನರು ಸತ್ಯಕ್ಕಾಗಿ ದೇಹತ್ಯಾಗ ಮಾಡಿದರು, ಸತ್ಯರಕ್ಷಣೆಗಾಗಿ ದೇಹವನ್ನು ತ್ಯಾಗಮಾಡಲು ಹಿಂಜರಿಯಬಾರದೆಂದು ಸ್ಪಷ್ಟಪಡಿಸಿದರು

ಅವರನ್ನು ಅಧರ್ಮಿಗಳು ಕೊಂದುದಕ್ಕೆ ವಿಷಾದವನ್ನು ವ್ಯಕ್ತಪಡಿಸುವುದೇ ಮೊಹರಮಿನ ಉದ್ದೇಶವಾಗಿದೆ ಎಂದು ಪುನಃ ಹೇಳಬೇಕಾಗಿಲ್ಲವಷ್ಟೆ. ಪ್ರಪಂಚವಿರುವವರೆಗೆ ಮುಸ್ಲಿಮರು ಈ ದೃಶ್ಯಕೃತ್ಯಕ್ಕಾಗಿ ಮರುಗುವರು.

(ತಾಯಿನಾಡು.)

ದಕ್ಷಿಣಕನ್ನಡ ಜಿಲ್ಲಾ ಹರಿಜನ ಪರಿಷತ್ತು ಮೂಲ್ಕಿ

(ಶ್ರೀ. ವಂಡ ಸ್ವಾಮಿ ಪಿಳ್ಳೆಯವರು ಅಧ್ಯಕ್ಷರಾಗಲೊಪ್ಪಿರುವರು.)

ದ.ಕ.ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಅದರ ತಾ. 28-11-39ರ ನಂ. 1ನೇ ನಿರ್ಣಯ ಪ್ರಕಾರ ಮೂಲ್ಕಿಯಲ್ಲಿ ಬಪ್ಪನಾಡು ಉತ್ಸವದ ಸಮಯ "ಜಿಲ್ಲಾ ಹರಿಜನ ಪರಿಷತ್ತು" ಜರಗಿಸುವ ಕುರಿತಾಗಿ ಹರಿಜನ ಸೇವಕ ಸಂಘದ ಮೆಂಬರರಾದ ಶ್ರೀ. ಯಂ. ಆರ್. ಪೂಂಜರ ಅಧ್ಯಕ್ಷತೆಯಲ್ಲಿ ತಾ. 4-3-10ರಲ್ಲು ಮೂಲ್ಕಿಯಲ್ಲಿ ಕೂಡಿಬಂದ "ಹರಿಜನ ಸಾರ್ವಜನಿಕ ಸಭೆ"ಯಲ್ಲಾದ ಗೊತ್ತುವಳಿಗಳು:-

1. ಪರಿಷತ್ತಿನ ಸ್ವಾಗತ ಸಮಿತಿಯ ಮೆಂಬರರಲ್ಲಿ ಹರಿಜನ ಸದಸ್ಯರಿಗೆ ರೂಪಾಯಿ ಒಂದು ಮತ್ತು ಎಂಟಾಣೆಯಂತೆಯೂ ಇತರರಿಗೆ ರೂಪಾಯಿ ನಾಲ್ಕು ಮತ್ತು ರೂಪಾಯಿ ಒಂದರಂತೆಯೂ ಚಂದಾ ನಿಷ್ಕರ್ಷಿಸಲಾಯಿತು, ರೂ. 25/-ಮತ್ತು ರೂ. 10/ ಯಾ ಇದಕ್ಕೆ ಮೇಲ್ಪಟ್ಟು ಪರಿಷತ್ತಿಗೆ ಸಹಾಯ ಧನವೀಯುವವರು ಕ್ರಮವಾಗಿ ಪೋಷಕ ಮತ್ತು 'ಆಶ್ರಯದಾತ'ರೆಂದು ಪರಿಗಣಿಸಲ್ಪಡುವರು. 3. ಜಿಲ್ಲಾ ಲೇಬರ ಇಲಾಖೆಯವರು ಪರಿಷತ್ತಿನ ಸ್ವಾಗತ ಸಮಿತಿ ಮೆಂಬರ ಯಾ ಪ್ರತಿನಿಧಿಗಳಾಗಿ ವ ಇನ್ನಿತರ ಸರ್ವ ವಿಧದ ಸಹಕಾರ ಪ್ರೋತ್ಸಾಹಗಳನ್ನೀಯಲನುಕೂಲಿಸುವಂತೆ ಜಿಲ್ಲಾ ಕಲೆಕ್ಟರರನ್ನು ಕೇಳಿಕೊಳ್ಳಲು ಹಾಗೂ ಮಂಗಳೂರು ಡಿಪ್ರೆಸ್ಡ್ ಕ್ಲಾಸ್ ಮಿಶನಿನವರೂ ಅದೇ ರೀತಿಯ ಸಹಕಾರವನ್ನೀಯುವಂತೆ ಮಾಡಲು ದ. ಕ. ಜಿಲ್ಲಾ ಹರಿಜನ ಸೇವಕ ಸಂಘದ ಅಧ್ಯಕ್ಷ ಶ್ರೀ| ಡಾಕ್ಟರ್ ಯಚ್. ವಿ ಅಡಪ್ಪರು ಕೇಳಿಕೊಳ್ಳಬೇಕಾಗಿ ನಿರ್ಧರಿಸಲಾಯಿತು. 4 ಪರಿಷತ್ತನ್ನು ಬರುವ ಮಾರ್ಚ ತಿಂಗಳ ತಾ 27 ಮತ್ತು 28ಕ್ಕೆ ಜರಗಿಸುವುದಾಗಿಯೂ ಮತ್ತು ಪರಿಷತ್ತಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸುವರೆವ ಅಧ್ಯಕ್ಷ ಸ್ಥಾನವನ್ನು ವಹಿಸುವರೆ ಯೋಗ್ಯ ಮಹನೀಯರನ್ನು ಕೇಳಿಕೊಳ್ಳುವ ಕಾರ್ಯಭಾಗವನ್ನು ಪರಿಷತ್ತಿನ ಕಾರ್ಯಕಾರಿ ಸಮಿತಿಯವರಿಗೆ ಒಪ್ಪಿಸಿಕೊಡಲಾಗಿದೆ 5. ಕಾರ್ಯಕಾರಿ ಸಮಿತಿಯವರು ಪರಿಷತ್ತಿನ ಮುಂದಿಡಲ್ಪಡುವ ವಿಷಯಗಳು, ವ ನಿರ್ಣಯಗಳ ಕುರಿತು ನಿರ್ಣಯಿಸುವರೆ ಅಧಿಕೃತರಾಗಿದ್ದಾರೆ. 6. ಪರಿಷತ್ತಿಗೆ ಪ್ರತಿಯೊಂದು ಗ್ರಾಮದಿಂದ ಕನಿಷ್ಠ ಪಕ್ಷ ಇಬ್ಬರು ಪ್ರತಿನಿಧಿಗಳಂತೆ ಆರಿಸಲ್ಪಡಬೇಕಾಗಿಯೂ, ಇವರಲ್ಲಿ ಸಾಧ್ಯವಿದ್ದಷ್ಟು ಮಟ್ಟಿಗೆ ಹರಿಜನರ ಬೇರೆ ಬೇರೆ ಪಂಗಡದ ಪ್ರತಿನಿಧಿಗಳಿರುವಂತಾಗಬೇಕಾಗಿಯೂ ನಿರ್ಣಯಿಸಲಾಯಿತು. ಪ್ರತಿನಿಧಿಗಳ ಹೆಸರುಗಳನ್ನು ಪರಿಷತ್ತಿನ ಕಾರ್ಯಕಾರಿ ಸಮಿತಿ ಅಧ್ಯಕ್ಷರಿಗೆ ಬರುವ ಮಾರ್ಚ ತಾ. 10ರೊಳಗೆ ಕಳುಹಿಸಿಕೊಡತಕ್ಕದ್ದು. 7. ಪ್ರತಿಯೊಬ್ಬ ಪ್ರತಿನಿಧಿಗೆ ನಾಲ್ಕಾಣೆಯಂತೆ ಪ್ರತಿನಿಧಿ ಫೀಸು ಇಡಲಾಗಿದೆ. 8. ಪರಿಷತ್ತಿನ ಸಂದರ್ಭದಲ್ಲಿಯೇ ತಾ. 29-3-40ಕ್ಕೆ ಹರಿಜನ ಕೆಲಸಗಾರರ ಸಭೆಯೊಂದನ್ನು ಏರ್ಪಡಿಸಬೇಕು. 9. ಪರಿಷತ್ತಿಗೆ ಬರುವ ಸ್ವಾಗತ ಕಮಿಟಿ ಮೆಂಬರರು, ಪ್ರತಿನಿಧಿಗಳು, ವಿದ್ಯಾರ್ಥಿಗಳು ಮತ್ತು ಪ್ರೇಕ್ಷಕರ ಅನುಕೂಲತೆ ಬಗ್ಗೆ ಧರ್ಮಾರ್ಥ ಯಾ ಸ್ಪೆಶಲ್ ರಿಯಾಯತಿ ದರದಲ್ಲಿ ಟಿಕೇಟುಗಳನ್ನು ಒದಗಿಸುವಂತೆ ಜಿಲ್ಲೆಯ ಮೋಟರು ಕಂಪೆನಿಯವರನ್ನು ವ ರೈಲ್ವೆ ಅಧಿಕಾರಿಗಳನ್ನು ಕೇಳಿಕೊಳಬೇಕು. 10. ಜಿಲ್ಲೆಯ ವಾರ್ತಾ ಪತ್ರಿಕೆಯವರು ಪರಿಷತ್ತು ಯಶಸ್ವಿಯಾಗುವಂತೆ ಸರ್ವವಿಧದ ಸಹಕಾರವೀಯುವಂತೆ ಬೇಡಿಕೊಳ್ಳಬೇಕು. 11. ಪರಿಷತ್ತು ದಿವಸಗಳಲ್ಲಿ ಧರ್ಮಾರ್ಥ ಊಟ ಕೊಡುವರೆ ಅನುಕೂಲವಾಗುವಂತೆ ವ್ಯಕ್ತಿಗಳು, ವ್ಯಕ್ತಿಗಳು ಕೇವರು ಯಾ ಸಂಸ್ಥೆಗಳು, ಅವರ ಅಭಿಪ್ರಾಯ ಸೂಚಿಸಿ ಧನಸಹಾಯ ಕೊಡುವಲ್ಲಿ ಅವರವರ ಹೆಸರಲ್ಲಿ ಏರ್ಪಾಡುಮಾಡುವುದು 12. ಜಿಲ್ಲೆಯಲ್ಲಿರುವ ಗ್ರಾಮ ಕೈಗಾರಿಕೆಗಳ ಮತ್ತು ಶಾಲಾ ಕೈಗಾರಿಕೆಗಳ (School & Village Handicrafts) ಪ್ರದರ್ಶನವನ್ನು ಪರಿಷತ್ತಿನ ಸಂದರ್ಭದಲ್ಲಿ ಏರ್ಪಡಿಸಲಾಗುವುದು. ಪ್ರದರ್ಶಿಸಲ್ಪಡುವ ಕೈಗಾರಿಕೆ ಸಾಮಾನುಗಳ ಪೈಕಿ ಉತ್ತಮವಾದವುಗಳಿಗೆ ಬಹುಮಾನ ವಿನಿಯೋಗಕ್ಕಾಗಿ ಸಹಾಯ ಧನವನ್ನು ನಿರೀಕ್ಷಿಸಲಾಗಿದೆ. 13. ಹರಿಜನೋದ್ಧಾರ ಕಾರ್ಯಕ್ರಮಗಳಲ್ಲಿ ಆಸಕ್ತಿಯಿರುವ ಮಹನೀಯರು ಈ ಕುರಿತಾದ ತಮ್ಮ ಸಲಹೆ ಯಾ ನಿರ್ಣಯಗಳನ್ನು ಪರಿಷತ್ತಿನ ಅಧಿವೇಶನದ ಮುಂದಿಡುವ ಬಗ್ಗೆ ತಾ. 10-3-40ರೊಳಗಾಗಿ ಕಾರ್ಯಕಾರಿ ಸಮಿತಿ ಅಧ್ಯಕ್ಷರಿಗೆ ಕಳುಹಿಸಿಕೊಡುವಂತೆ ಕೋರಲಾಗಿದೆ. 14. ಪರಿಷತ್ತನ್ನು ಯಶಸ್ವಿಗೊಳಿಸುವರೆ ಅಗತ್ಯವುಳ್ಳ ಎಲ್ಲಾ ತರದ ಹಂಚಿಕೆ ವ ಯತ್ನಗಳನ್ನು ಮಾಡುವರೆ ಕಾರ್ಯಕಾರಿ ಸಮಿತಿಯವರಿಗೆ ಅಧಿಕಾರವೀಯಲಾಗಿದೆ.

ಎಂ. ಆರ್. ಪೂಂಜ, ಅಧ್ಯಕ್ಷ,
ಸ್ವಾಗತಕಮಿಟಿ, ಮೂಲ್ಕಿ.

(ಪ್ರಕೃತ 112 ಮಹನೀಯರನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಹೆಚ್ಚಿಗೆ ಮೆಂಬರರನ್ನು ಸೇರಿಸಿಕೊಳ್ಳುವ ಹಕ್ಕು ಸಮಿತಿಗೆ ಕೊಡಲಾಗಿದೆ.)

ಶ್ರೀ ಭಗವದ್ಗೀತಾ

ಪಂಡಿತ ಪಾನ್ಯಂ ಸುಂದರ ಶಾಸ್ತ್ರಿಗಳು ಮತ್ತು ಪಂಡಿತ ದೊಡ್ಡ ಬೆಲೆ ನಾರಾಯಣ ಶಾಸ್ತ್ರಿಗಳು—ಮೊದಲಾದ ನಾಲ್ವರು ಮಹಾವಿದ್ವಾಂಸರಿಂದ ರಚಿಸಲ್ಪಟ್ಟ

'ಭಾವಬೋಧಿನೀ' ಎಂಬ ಟೀಕಾ ತಾತ್ಪರ್ಯ ಸಹಿತ

ಪುಟಗಳು 664 ಬೆಲೆ 3-0-0

(ಪೂರ್ಣ ನಾಮಮಾತ್ರ ಬೆಲೆ)

ಕೆಲವು ಪ್ರತಿಗಳು ಮಾತ್ರ ಉಂಟು.

ಉಪಾಧ್ಯಾಯ ಬುಕ್ ಡಿಪೋ
4. S ಸ್ಟ್ರೀಟ್, ಬೆಂಗಳೂರು ಸಿಟಿ.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತಾದಾರರಿಂದ)
ಮಂಗಳೂರು ತಾ 19 2 1940

ಡಿ. ಸಿ. ಯಂ ವರ್ಧಂತಿ—ಕಳೆದ ತಾ. 16ನೇ ಸಾಯಂಕಾಲ ಡಿ ಸಿ. ಯಂ ವರ್ಧಂತಿಯು ಶ್ರೀ. ಬಿ. ವಿ ಬಾಳಿಗ ಯಂ ಎಲ್, ಎ. ಇವರ ಅಧ್ಯಕ್ಷತೆಯಲ್ಲಿ ಡಿ ಸಿ ಯಂ. ಶಾಲೆಯಲ್ಲಿ ನಡೆಯಿತು. ಶ್ರೀ ಎ ಆರ್. ನಾಯನಾರ್ ಇವರು ವರದಿಯನ್ನೋದಿದರು. ಅಧ್ಯಕ್ಷರು ಬಾಲಕ ಬಾಲಕಿಯರಿಗೆ ಪಾರಿತೋಷಕಗಳನ್ನು ಹಂಚಿದ ತರುವಾಯ ತಮ್ಮ ಅಧ್ಯಕ್ಷ ಭಾಷಣ ಮಾಡುತ್ತಾ, ಹರಿಜನರನ್ನು ದೂರ ಇರಿಸುವುದರಲ್ಲಿ ನ್ಯಾಯವಿಲ್ಲವೆಂದೂ, ಅವರನ್ನು ದೂರವಿರಿಸಿ ಹಿಂದಿನವರು ಸ್ವಾತಂತ್ರ್ಯ ಕೇಳುವುದರಲ್ಲಿ ನ್ಯಾಯವಿಲ್ಲವೆಂದೂ ಹೇಳಿದರು. ಅನಂತರ ಬಾಲಕರ ವಿವಿಧ ವಿನೋದಾವಳಿ, ನಾಟಕ ಇತ್ಯಾದಿಗಳು ನಡೆದುವು. ಇದೇ ಸಂದರ್ಭದಲ್ಲಿ ಒಂದು ವಸ್ತು ಪ್ರದರ್ಶನವೂ ಏರ್ಪಡಿಸಲಾಗಿದ್ದಿತು.

ಜಿ. ಬೋ ನೌಕರರ ಪರಿಷತ್ತು—ಕಳೆದ ತಾ 17ನೇ ಶನಿವಾರ ಜಿ. ಬೋ. ನೌಕರರ ಪರಿಷತ್ತು ಜಿ. ಬೋ. ಆಫೀಸಿನಲ್ಲಿ ಶ್ರೀ ಯಂ ಸುಂದರರಾಯರ ಅಧ್ಯಕ್ಷತೆಯಲ್ಲಿ ಸೇರಿತು ಡಾ| ಕೆ. ವಿಟ್ಠಲ ಶೆಟ್ಟಿಯವರು ಪರಿಷತ್ತನ್ನು ಉದ್ಘಾಟಿಸಿ ಮಾಡುತ್ತಾ, ಸದ್ಯ ನೌಕರರ ಸಂಬಳದಲ್ಲಿ ಕಡಿಮೆಯಾಗುವ ಲಕ್ಷಣ ತೋರುತ್ತಿಲ್ಲವೆಂಬ ಆಶ್ವಾಸನೆಯನ್ನಿತ್ತು ಬೋರ್ಡಿನ ನೌಕರರ ಪರವಾಗಿ ತಾವು ವಾದಿಸಲು ಸದಾ ಸಿದ್ಧರಿರುವುದಾಗಿಯೂ, ನೌಕರರ ಪರವಾಗಿ ತಮ್ಮಿಂದಾಗಬಹುದಾದ ಪ್ರಯತ್ನಗಳನ್ನು ಮಾಡುವುದಾಗಿಯೂ ತಿಳಿಸಿ, ನೌಕರರೆಲ್ಲರೂ ಸಂಘವನ್ನು ಸೇರಿ ಅದನ್ನು ಬಲಪಡಿಸಿಕೊಳ್ಳಬೇಕೆಂದರು

ಅನಂತರ ಪರಿಷದಧ್ಯಕ್ಷರಿಂದ ಶ್ರೀ ಯಂ ಸುಂದರರಾಯರು, ನೌಕರರ ಸಂಕಷ್ಟಗಳನ್ನು ವಿವರಿಸಿದರು. ಮಾಜಿ ತಾಲೋಕು ಬೋರ್ಡು ಕ್ಲಾರ್ಕರ ಸಂಬಳ, ಬಡ ಕೀಳು ನೌಕರರಿಗೆ ಪ್ರಾವಿಡೆಂಟ್ ಫಂಡ್ ಸೌಕರ್ಯ ಇತ್ಯಾದಿಗಳಲ್ಲಿ ಅನುಕೂಲಪಡಿಸಿಕೊಡಬೇಕಾದ ಆಗತ್ಯವಿರುವುದೆಂದರು. ಅನಂತರ ಬಡ ನೌಕರರನ್ನು ಇತರ ಪ್ರಾಂತಗಳಿಗೆ ವರ್ಗಾಯಿಸುವುದರಿಂದ ತೊಂದರೆಯಾಗುವುದೆಂದೂ, ಹೆಚ್ಚು ಸಂಬಳದವರನ್ನು ವರ್ಗಾಯಿಸಿದರೆ ಅದರಿಂದ ತೊಂದರೆಯಾಗುವುದಿಲ್ಲವೆಂದೂ ಹೇಳಿದರು ಮತ್ತು ನೌಕರರ ಸಂಘದಿಂದ ದೊರೆತ ಪ್ರಯೋಜನಗಳನ್ನು ವಿವರಿಸಿ ಸಕಲರೂ ಅದನ್ನು ಸೇರಬೇಕೆಂದರು.

ಅಧ್ಯಕ್ಷರ ಭಾಷಣವಾದ ವೇಳೆ ಕಾಫಿ ಫಲಾಹಾರಾದಿ ಸತ್ಕಾರಗಳಾದುವು ಅನಂತರ ಮಹಾಸಭೆಯು ಪುನಃ ಸೇರಿ ಹಲವು ಠರಾವುಗಳನ್ನು ಚರ್ಚಿಸಿ ಮಂಜೂರು ಮಾಡಿದರು. ಸುಮಾರು 6 30ಕ್ಕೆ ಸಭೆಯು ಮುಕ್ತಾಯವಾಯಿತು.

ನಗರ ಶುಚಿತ್ವದ ಚಳವಳಿ—ತಾ 17ನೇ ಸಾಯಂಕಾಲ ನಗರ ಸಭಾಧ್ಯಕ್ಷರಾದ ಶ್ರೀ. ಬಿ. ವಿ. ಬಾಳಿಗರು ನಗರ ಶುಚಿತ್ವದ ಚಳವಳಿಯ ಆರಂಭೋತ್ಸವವನ್ನು ಜರಗಿಸಿದರು ಶ್ರೀ ಎಸ್ ಎನ್ ಹೊಳ್ಳರು ಭಾಷಣ ಮಾಡುತ್ತಾ ಯಾವ ತರದ ಕೆಲಸ ಮಾಡಿದರೂ ಅದರಿಂದ ಅಗೌರವವಿಲ್ಲವೆಂದು ಹೇಳಿದರು.

ಯಕ್ಷಗಾನ ಸಂಘದ ವರ್ಧಂತಿ—ಕದಿರೆ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾವರ್ಧಕ ಸಂಘದ ವರ್ಧಂತಿಯು ಶ್ರೀ ಕೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಿನ್ನೆ ಜರಗಿತು. ಬೆಳಗ್ಗೆ ಭಜನೆ, ಚಿತ್ರಮಾಗಿ ಫಲಾಹಾರ ನಡೆಯಿತು ಅನಂತರ ಮಹಾಸಭೆ ಸೇರಿತು ಸಂಘದ ಸದಸ್ಯರಲ್ಲಿ ಅನೇಕರು ಭಾಷಣ ಮಾಡಿದರು. ಅವೇಳೆ ಅಧ್ಯಕ್ಷರ ಭಾಷಣವಾಗಿ ಮುಂದಿನ ವರ್ಷದ ಕಾರ್ಯಕಾರಿ ಮಂಡಳಿಯ ಸದಸ್ಯರ ಚುನಾವಣೆಯಾಯಿತು ಸಾಯಂಕಾಲ ಪುನಃ ಸಭೆ ಸೇರಿತು. ಅಧ್ಯಕ್ಷರು ಕೆಲವು ಹಿತ ಸೂಚನೆಗಳನ್ನು ಕೊಟ್ಟ ಬಳಿಕ ಮಲಿಸ ಗ್ರೀವದ ಕಾಳಗದ ಯಕ್ಷಗಾನ ಕಾಲಕ್ಷೇಪವು ಯಶಸ್ವಿಯಾಗಿ ಜರಗಿತು

ಉಡುಪಿ

ಯೂನಿಯನ್ ಮಹಾಸಭೆ—ಉಡುಪಿ ಲೋಕಲ್ ಕೋಅಪರೇಟಿವ್ ಯೂನಿಯನ್ನಿನ ಮಹಾಸಭೆಯು ತಾ 18–2–40ನೇ ಆದಿತ್ಯವಾರ ಅಪರಾಹ್ನ ಎರಡು ತಾಸಿಗೆ ಯೂನಿಯನ್ ಆಫೀಸಿನಲ್ಲಿ ಶ್ರೀ ಕೆ ಜಿ ಬಲ್ಲಾಳ, ಬಿ ಎ ಎಲ್ ಎಲ್. ಬಿ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ನಿಗೆ ಸಂಬಂಧಿಸಿದ ಗ್ರಾಮ ಸಂಘಗಳ ಡೆಲಿಗೇಟರು ಹಾಜರಿದ್ದರು. ಯೂನಿಯನ್ನಿನ ಗತ ವರ್ಷದ ವರದಿಯನ್ನು ಶ್ರೀ ಕೆ ಆರ್. ಶೆಣೈಯವರು ಓದಿದರು. ಮುಂದಿನ ವರ್ಷದ ಬಜೆಟು ಮಂಜೂರಾತಿಯಾದ ಬಳಿಕ ಇಲಾಖಾ ಆಫೀಸರರ ಸರ್ಕಿಲಾರುಗಳನ್ನು ಓದಲಾಯಿತು. ಶ್ರೀಗಳಾದ ಕೆ ಜಿ ಬಲ್ಲಾಳ್ (ಪ್ರೆಸಿಡೆಂಟ್) ಕೆ ಆರ್. ಶೆಣೈ (ಕಾರ್ಯದರ್ಶಿ) ಎನ್. ಶಂಕರನಾರಾಯಣರಾವ್, ಎಮ್. ರಾಮಕೃಷ್ಣ ಭಟ್, ಯು. ಕೆ ಗೋವಿಂದ ಸೆಟ್ಟಿ, ಕೆ ಗಣಪಯ್ಯ ಸೆಟ್ಟಿ ಮತ್ತು ಎಸ್. ಅಣ್ಣಯ್ಯ ಹೆಗ್ಡೆ ಇವರುಗಳು ಆಡಳಿತೆ ಮಂಡಳಿಯ ಡೈರೆಕ್ಟರರಾಗಿ ಒಮ್ಮತದಿಂದ ಆರಿಸಲ್ಪಟ್ಟರು. ಯೂನಿಯನ್ ಸ್ಥಾಪಿತವಾದಂದಿನಿಂದ ಪ್ರತಿಸ್ಪರ್ಧಿಗಳಿಲ್ಲದೆ ಒಮ್ಮತದಿಂದ ಡೈರೆಕ್ಟರರ ಚುನಾವಣೆ ನಡೆದುದು ಇದೇ ಮೊದಲನೆಯ ಬಾರಿಯೆಂದು ಹಲವರ ಅಂಬೋಣ. ಟೀಪಾರ್ಟಿಯಾಗಿ ಮಹಾಸಭೆಯು ಕೊನೆಗೊಂಡಿತು

ಶ್ರೀರಾಮಕೃಷ್ಣ ವಿದ್ಯಾರ್ಥಿಭವನದ ದಿನಾಚರಣೆ—ಬಂಟರ ಯಾನೆ ನಾಡವರ ಸಂಘದ ವಿದ್ಯಾರ್ಥಿಭವನದ ವಾರ್ಷಿಕ ದಿನಾಚರಣೆಯು ತಾ 18ನೇ ಸಂಜೆ 4-30ಕ್ಕೆ ಸ್ಥಳೀಯ ಡಿ ಮ ಸ್ಕೂಲ್ ಶ್ರೀ. ಕೆ ಆರ್ ಕೃಷ್ಣಯ್ಯ ಶೆಟ್ಟಿ, ಬಿ ಎ, ಬಿ. ಎಲ ರವರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ಜರಗಿತು. ಕಾರ್ಯದರ್ಶಿಗಳಾದ ಶ್ರೀ ಕೆ. ಗೋವಿಂದ ಶೆಟ್ಟರು ಭವನದ ಪ್ರಗತಿಪರ ವರದಿಯನ್ನೋದಿದರು. ಶ್ರೀ ಪಿ. ಎನ್. ತಿಮ್ಮಪ್ಪ ಶೆಟ್ಟಿ, ಬಿ. ಎ ಇವರು ಶ್ರೇಯೋ ಭಾಷಣ (ಟೋಸ್ಟ್) ಮಾಡುತ್ತ ವಿದ್ಯಾರ್ಥಿ ಭವನದ ಆವಶ್ಯಕತೆ, ಹೊಸ್ಟೆಲ್ ಜೀವನದ ಪ್ರಯೋಜನಾದಿಗಳನ್ನು ವಿವರಿಸಿದರು. ಶ್ರೀ. ರಾಮಣ್ಣ ಶೆಟ್ಟಿ, ಬಿ ಎ ಎಲ್ ಟಿ. ಯವರು ಅವಕ್ಕೆ ಉತ್ತರವೀಯುತ್ತ ವಿದ್ಯಾರ್ಥಿಭವನ ದಿನಾಚರಣೆಯ ಆವಶ್ಯಕತೆ ಮೊದಲಾದುವನ್ನು ವಿವರಿಸಿದರು. ಅನಂತರ ವಿವಿಧ ಆಟಗಳಲ್ಲಿ ಗೆದ್ದವರಿಗೆ ಪಾರಿತೋಷಕಗಳನ್ನು ಹಂಚಲಾಯಿತು. ಅಧ್ಯಕ್ಷರು ಸವಿಸ್ತರ ಭಾಷಣ ಮಾಡುತ್ತ ವಿದ್ಯಾರ್ಥಿಭವನಗಳ ಪ್ರಾಮುಖ್ಯತೆ, ಜಾತೀಯ ಸಂಘಸಂಸ್ಥೆಗಳ ಆವಶ್ಯಕತೆ ಮೊದಲಾದವನ್ನು ವಿವರಿಸಿ ಈ ಭವನವನ್ನು ಉತ್ತಮ ರೀತಿಯಲ್ಲಿ ನಡಿಸಿಕೊಂಡು ಬರುತ್ತಿರುವ ಕಮಿಟಿಯನ್ನು ಮುಖ್ಯವಾಗಿ ಶ್ರೀ. ಕೆ. ಜಿ ಬಲ್ಲಾಳರನ್ನು ಅಭಿವಂದಿಸಿ, ಭವನಕ್ಕೆ ಇನ್ನಷ್ಟು ಅಭಿವೃದ್ಧಿಯನ್ನು ಕೋರಿದರು. ತರುವಾಯ ವಿವಿಧ ವಿನೋದಾವಳಿಗಳ ಪ್ರದರ್ಶನವು ಪ್ರೇಕ್ಷಕರ ಕಣ್ಮನಾನಂದವನ್ನುಂಟು ಮಾಡಿತು. ಮಾಸ್ಟರ್ ದಯಾನಂದ ಶೆಟ್ಟಿ, ಮಾಸ್ಟರ್ ಕೆ ನಾರಾಯಣ ಶೆಟ್ಟಿ, ಮಾಸ್ಟರ್ ಕೆ. ಭೋಜ ಶೆಟ್ಟಿ, ಮಾಸ್ಟರ್ ಎನ್. ರಾಜೀವ ಶೆಟ್ಟಿ ಮೊದಲಾದವರ ಪಾತ್ರಾಭಿನಯವು ಮನೋಹರವಾಗಿತ್ತು. ಇತರರೆಲ್ಲರ ಪಾತ್ರಗಳೂ ತೃಪ್ತಿಕರವಾಗಿಯೇ ಇದ್ದುವು. ಕೊನೆಗೆ ಶ್ರೀ ಬಿ ಶ್ಯಾಮರಾಯ ಶೆಟ್ಟಿ ಬಿ. ಎ, ಎಲ್.ಟಿ. ಯವರು ಅತಿ ಹುರುಪಿನಿಂದ ಸ್ವಾರಸ್ಯವಾಗಿ ಅಭಿವಂದನೆಯನ್ನರ್ಪಿಸಿದರು. ಶ್ರೀ ಎ ಬಿ ಶೆಟ್ಟರು ಮತ್ತು ಶ್ರೀ ಕೆ. ಜಿ. ಬಲ್ಲಾಳರು ಸಮಾಜದ ಏಳ್ಗೆಗಾಗಿ ದುಡಿಯುತ್ತಿರುವುದನ್ನು ಮನಗಾಣಿಸಿದರು.

ರಾತ್ರೆ 9 30ಕ್ಕೆ ಮೊದಲೇ ನವಯುಗದಲ್ಲಿ ಪ್ರಕಟಿಸಿದಂತೆ 'ವಾಲಿವಧೆ' ಯಕ್ಷಗಾನ ಸಮಾರಂಭವು ಜರಗಿತು. ಅಂತ್ಯದಲ್ಲಿ ಶ್ರೀ ಕೆ ಕೆ. ಶೆಟ್ಟರು ಅಭಿವಂದನೆಯನ್ನಿತ್ತರು

ಮೂಲ್ಕಿ—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರಾಗಿದ್ದ ಶ್ರೀ| ಕಾರ್ನಾಡು ಸಂಜೀವ ರಾಯರು ಕೆಲವು ದಿನಗಳ ಕಾಯಿಲೆಯಿಂದಿದ್ದು ತಾ 17 2 1940ರಲ್ಲಿ ಅಕಸ್ಮಾತ್ ನಿಧನ ಹೊಂದಿದ ಸಂಗತಿಯು ವಿಷಾದಕರವಿದೆ ಇವರು ಸುಮಾರು 1918ರ ಲಾಗಾಯ್ತು ಇದೇ ಶಾಲೆಯ ಮುಖ್ಯ ಉಪಾಧ್ಯಾಯರಾಗಿದ್ದು ಶಾಲೆಯು ಹಾಯರ್ ಎಲಿಮೆಂಟರಿ ಸ್ಥಿತಿಯಲ್ಲಿದ್ದಾಗ ಜಿಲ್ಲೆಯಲ್ಲಿ ಅತಿ ದೊಡ್ಡ ಶಾಲೆಯೆಂದು ಹೆಸರು ಪಡೆಯುವಂತೆ ಹೆಚ್ಚಿನ ಪರಿಶ್ರಮೋತ್ಸಾಹಗಳಿಂದ ಕೆಲಸ ಮಾಡಿ ಸಕಲರ ಮೆಚ್ಚುಗೆಗೂ ವಿಶ್ವಾಸಕ್ಕೂ ಪಾತ್ರರಾಗಿದ್ದರು. ತುಂಬ ಸನ ಧಾನಿಯೂ ನಿಗರ್ವಿಯೂ ಆಗಿದ್ದು ತಮ್ಮ ಕೈಕೆಳಗೆ ಕೆಲಸ ಮಾಡುತ್ತಿದ್ದ ಸಹಾಯಕರನ್ನು ಪ್ರೀತಿಯಿಂದ ನಡಿಸಿಕೊಂಡಿದ್ದರು. ಇವರ ನಿಧನದ ದುಃಖ ಸೂಚನೆಗಾಗಿ ಶಾಲೆಯು ನಿನ್ನೆ ಮುಚ್ಚಲ್ಪಟ್ಟಿರುವುದು

ಮಂಗಳೂರು ಎಮೆಚೂರ್—ಸುರಿತ ನಟವರ್ಗದಿಂದೊಡಗೂಡಿ ಕೀರ್ತಿಗೊಂಡ ಈ ಸಂಗೀತ ನಾಟಕ ಸಭೆಯವರು ಸದ್ಯದಲ್ಲಿಯೇ 'ಪ್ರೇಮಸಾಮ್ರಾಜ್ಯ'ವೆಂಬ ಹಾಸ್ಯರಸ ಪ್ರಧಾನವಾದ ನವೀನ ಸಾಮಾಜಿಕ ನಾಟಕವನ್ನು ಅಭಿನಯಿಸಲಿದ್ದಾರೆಂದು ತಿಳಿದುಬರುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಗೌಡ ವಿದ್ಯಾ ಸಂಘ, ಪುತ್ತೂರು—ಈ ಸಂಘದ ವರ್ಷಾವಧಿ ಮಹಾಸಭೆಯನ್ನು ತಾ 3-3-1940 ನೇ ಆದಿತ್ಯವಾರ ಅಪರಾಹ್ನ ಘಂಟೆ 5ಕ್ಕೆ ಪಂಜ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಮಠಾರದಲ್ಲಿ ಡಿ ಬೋ ಪ್ರೆಸಿಡೆಂಟ್ ಡಾ ಕೆ ವಿಟ್ಠಲ್ ಶೆಟ್ಟರ ಸಭಾಧ್ಯಕ್ಷತೆಯಲ್ಲಿ ಜರಗಿಸುವುದೆಂತ ನಿರ್ಣಯಿಸಿಯದೆ. ಆ ಪ್ರಯುಕ್ತ ಸಂಘದ ಎಲ್ಲಾ ಮೆಂಬರರೂ ಹಿತಚಿಂತಕರೂ ದಯಮಾಡಿ ಬಂದು, ಸಭಾ ಕಾರ್ಯಗಳನ್ನು ನೆರವೇರಿಸಿಕೊಡಬೇಕಾಗಿ ಪ್ರಾರ್ಥಿಸುವನೆಂದು ಅಧ್ಯಕ್ಷರಾದ ಲಿಂಗಪ್ಪ ಗೌಡರು ತಿಳಿಸುತ್ತಾರೆ.

ಸುಬ್ರಹ್ಮಣ್ಯ—ಪುತ್ತೂರು ತಾಲೂಕು ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಒಂದು ಡಿಸ್ಪೆನ್ಸರಿಯನ್ನು ತೆರೆಯುವ ವಿಚಾರದಲ್ಲಿ ದೇವಸ್ಥಾನದ ಅಧಿಕಾರಿಗಳಿಗೂ, ಡಿ ಬೋರ್ಡಿಗೂ ಕಳೆದ 10 ವರ್ಷಗಳಿಂದ ಅನೇಕ ಪತ್ರ ವ್ಯವಹಾರಗಳು ನಡಿಯುತ್ತಿದ್ದು ಕೊನೆಗೆ ದೇವಸ್ಥಾನದ ಅಧಿಕಾರಿಗಳು ಡಿ. ಬೋರ್ಡಿಗೆ ಪ್ರತಿ ವರ್ಷ ರೂಪಾಯಿ 350 0-0ರ ವಂತಿಗೆಯನ್ನು, ಡಿಸ್ಪೆನ್ಸರಿಯನ್ನು ನಡಿಸುವ ಬಗ್ಗೆ ಒಂದು ದಮೂರ್ಹವಾದ ಯೋಗ್ಯ ಕಟ್ಟಡವನ್ನೂ ಕೊಡುವ ಶರ್ತದ ಮೇಲೆ ತಾ 1-4-1940ರಿಂದ ಡಿಸ್ಪೆನ್ಸರಿಯನ್ನು ತೆರೆಯುವ ವಿಷಯವನ್ನು ಕಳೆದ ಡಿ. ಬೋರ್ಡು ಮೀಟಿಂಗಿನಲ್ಲಿ ಮಂಜೂರು ಮಾಡಿರುತ್ತಾರೆ ಎಂಬುದು ತುಂಬಾ ಸಂತೋಷಕರವಾಗಿದೆ. ವೈದ್ಯಕೀಯ ಸಹಾಯವೆಂದರೇನೆಂಬುದನ್ನು ತಿಳಿಯದ ಬಡಹಳ್ಳಿಯ ಜನರಿಗೂ, ಯಾತ್ರಿಕರಿಗೂ ಇದರಿಂದ ತುಂಬಾ ಪ್ರಯೋಜನ ಉಂಟಾಗಬಹುದೆಂದು ನಿರೀಕ್ಷಿಸಿಯದೆ ಡಿ ಬೋರ್ಡಿನ ಹಾಗೂ, ದೇವಸ್ಥಾನದ ಅಧಿಕಾರಿಗಳ ಈ ಸತ್ಕಾರ್ಯ ನಿರ್ಧಾರಕ್ಕೆ ಈ ಪ್ರದೇಶದ ಸುತ್ತ ಮುತ್ತಲಿನ ಬಡ ರೈತರು ಈ ಮೂಲಕ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆ.

ಕುಂದಾಪುರ—ಕುಂದಾಪುರ ಸರ್ಕಲಿನ ಜಿಲ್ಲಾ ಕೋಂಗ್ರೆಸ್ ಕಮಿಟಿಯ ಪ್ರತಿನಿಧಿ ಸ್ಥಾನಕ್ಕೆ ಚುನಾವಣೆಯು ತಾ. 13 2-40ರಲ್ಲಿ ಜರಗಿತು ಕುಂದಾಪುರ, ಕಂದಾವರ, ಕೋಣಿ, ಬಸ್ರೂರು, ಮರವಂತೆ ಕೋಟೇಶ್ವರ, ಹಂಗ್ಳೂರು, ಕೋಟೇಶ್ವರ, ಈ ಎಲ್ಲಾ ಗ್ರಾಮಗಳ ಕೋಂಗ್ರೆಸ್ ಪ್ರಾಥಮಿಕ ಸದಸ್ಯರು ತಮಗೆ ಸಂಬಂಧಪಟ್ಟ ಬಸ್ರೂರು ಮತ್ತು ಕುಂದಾಪುರ ಪೋಲಿಂಗ್ ಸ್ಟೇಶನ್ನುಗಳಲ್ಲಿ ತಮ್ಮ ಮತದಾನ ಮಾಡಿದ್ದರು, ಶ್ರೀ ಕೆ ಸಂಜೀವ ಹೆಗ್ಗೆಯರು 120 ಓಟುಗಳನ್ನು ಪಡೆದು ಜಯವನ್ನು ಪಡೆದರು. ಇವರ ಪ್ರತಿಸ್ಪರ್ಧಿಗಳಾದ ನಮ್ಮ ಈಗಿನ ಜಿಲ್ಲಾ ಕೋಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಮತ್ತು ಕಳೆದ ವರ್ಷದ ಪ್ರಾಂತೀಯ ಕೋಂಗ್ರೆಸ್ ಕಮಿಟಿಯ ಮೆಂಬರರಾಗಿದ್ದ ಶ್ರೀ ಎಸ್ ಶೇಷಗಿರಿ ರಾಯರು ಬರೇ 63 ಓಟುಗಳನ್ನು ಪಡೆದು ಸೋತು ಹೋದರು.

ವಧು ಬೇಕಾಗಿದೆ.

ಬಂಟರ ಜಾತಿಯ, ಗೌರವ ಕುಟುಂಬದ, ಮುಂಬಾಯಿಯಲ್ಲಿ ತಿಂಗಳೊಂದಕ್ಕೆ ರೂಪಾಯಿ 160/- ಸಂಬಳ ತೆಗೆದುಕೊಳ್ಳುವ 26 ವರ್ಷದ ವಿದ್ಯಾವಂತ ತರುಣನಿಗೆ ವಧುವು ಬೇಕಾಗಿದೆ. ವಧುವು ವಿದ್ಯಾವತಿಯಾಗಿಯೂ, ರೂಪವತಿಯಾಗಿಯೂ ಇರತಕ್ಕದ್ದು. ವಧುವಿನ ಪ್ರಾಯವು 20 ವರ್ಷ ಮೀರಬಾರದು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಫೋಟೋ (Photo) ಸಹಿತ ಬರೆಯಿರಿ.

C/o X ನವಯುಗ

ಬೊಂಬಾಯಿ ಪತ್ರ

ಧರ್ಮಾರ್ಥ ಯೋಗ ಮತ್ತು ನಿಸರ್ಗ ಉಪಚಾರ

ಪ್ರತಿ ಒಂದು ಆದಿತ್ಯವಾರ ಬೆಳಿಗ್ಗೆ ಆರು ವರೆ ಘಂಟೆಯಿಂದ ಹತ್ತು ಘಂಟೆಯ ವರೆಗೆ ಕಷ್ಟಸಾಧ್ಯ ರೋಗಗಳ ನಿವಾರಣೆ ಸಲುವಾಗಿ ಶ್ರೀರಾಮತೀರ್ಥ ಯೋಗಾಶ್ರಮ (ಪ್ರಾರ್ಥನಾ ಸಮಾಜ, ಸೆಂಡ್ ಹರ್ಸ್ಟ್ ರೋಡ್, ಆರ್ಯ ಪಥಿಕಾಶ್ರಮ ಲೋಜಿನ ಎದುರಿಗ)ದಲ್ಲಿ ಯೋಗಿರಾಜ ಶ್ರೀ. ಉಮೇಶ ಚಂದ್ರರು ನೇತಿ, ಧೋತಿ, ಬಸ್ತಿ, ನೌಲಿ, ತ್ರಾಟಕ, ಕಪಾಲಭಾತಿ, ಆಸನ, ಪ್ರಾಣಾಯಾಮ, ಜಲೋಪಚಾರ, ಸೂರ್ಯಕಿರಣ ಚಿಕಿತ್ಸೆ, ಮಸಾಜ ಮತ್ತು ಮಾನಸಿಕ ಉಪಚಾರದ್ವಾರೆ ಸ್ತ್ರೀಯರಿಗೆ ಸ್ತ್ರೀಯರೇ ಉಪಚಾರ ಮಾಡುತ್ತಾರೆ.

"ಮೊಗವೀರ ಧರ್ಮೋದ್ಧಾರಕ ಮಂಡಳಿ, ಮುಂಬಾಯಿ

ಮೇಲಿನ ಸಂಸ್ಥೆಯ ಮಹಾಸಭೆಯೊಂದು ಇದೇ ಫೆಬ್ರವರಿ ತಿಂಗಳ ತಾ. 25ರಲ್ಲು ಅಪರಾಹ್ನ 2 ಘಂಟೆಗೆ ಮುಂಬಾಯಿ ಕೋಟೆಯೊಳಗೆ ನವೋದಯ ರಕ್ಷೆಯಲ್ಲಿರುವ ಮೊಗವೀರ ರಾತ್ರಿ ಶಾಲಾ ಕಟ್ಟಡದಲ್ಲಿ ಮಂಡಳಿಯ ಪ್ರಮುಖರಾದ ಶ್ರೀ ಕೊರಗಪ್ಪ ದೂವ ನವರ ಅಧ್ಯಕ್ಷತೆಯಲ್ಲಿ ಜರಗುವುದು. ಈ ಸಭೆಯು ಇನ್ನುತರ ಕಾರ್ಯಬೋಧಿಗೆ ಮೊಗವೀರ ಧರ್ಮೋದ್ಧಾರಕ ಮತ್ತು ವ್ಯವಸ್ಥಾಪಕ ಮಂಡಳಿಗಳ ಐಕ್ಯತೆಯ ಸೂಚನೆಯನ್ನು ನಿಶ್ಚಯಿಸ ತಕ್ಕ ನಿರ್ಧಾರಗೈಯಲಿರುವುದು.

ಸೈಗಲ್ ಮುಂಬಯಿಯಲ್ಲಿ—ನ್ಯೂಥಿಯೇಟರ್ಸಿನ ಪ್ರಸಿದ್ಧ ನಟರೂ, ಹಾಡುಗಾರರೂ ಆದ ಶ್ರೀ ಕೆ. ಎಲ. ಸೈಗಲರವರು ಹಲವು ದಿನಗಳಿಂದ ಮುಂಬಯಿಯಲ್ಲಿರುವರು ಬಂದ ಕಾರಣ? ಇಂದಿನ ಕೆಲವು 4-5 ಚಿತ್ರಪಟಗಳಲ್ಲಿ ಭಾಗಿಗಳಾಗಿದ್ದ ಸಿಕೋರ ಪ್ರದರ್ಶಕರು, ನ್ಯೂಥಿಯೇಟರ್ಸ್ ಮತ್ತು ಬೋಂಬೇ ಟಾಕೀಸಿನವರ ಅನುಮತಿಯಿಂದ ಸೈಗಲ್ ಮತ್ತು ದೇವಿಕಾರಾಣಿ ಜೊತೆಯಲ್ಲಿ ನಡಿಸುವ ಚಿತ್ರವನ್ನು ತೆಗೆಯಬೇಕೆಂದು ನಿಶ್ಚಯಿಸಿರುವರು. ಇದರ ವಿಷಯವಾಗಿ ಮಾತಾಡುವರು ಶ್ರೀ ಸರ್ಕಾರರವರ ಜೊತೆಯಲ್ಲಿ ಸೈಗಲರವರೂ ಬಂದಿರುವರು. ಮುಂಬಯಿ ವಿದ್ಯಾರ್ಥಿ ಸಂಘದವರು ಇವರಿಗೆ ಎರಡು ಸಲ ಸ್ವಾಗತವನ್ನಿತ್ತು ಒಂದು ಬೆಳ್ಳಿಯ ಪೆಟ್ಟಿಗೆಯನ್ನು ಬಹುಮಾನವಾಗಿ ಕೊಟ್ಟರು. ವಿದ್ಯಾರ್ಥಿಗಳ ಉಪದ್ರವನ್ನು ತಡೆಯಲಾರದೆ ಸೈಗಲರವರು ತಮ್ಮ ಕಂಠವು ಸರಿಯಿಲ್ಲದಿದ್ದರೂ ಒಂದು ಹಾಡನ್ನು ಹಾಡಿ, ಇನ್ನೂ ಹಾಡಬೇಕೆಂದು ಒತ್ತಾಯಪಡಿಸಲು ಕಂಠ ಸರಿಯಿಲ್ಲವೆಂದು ಹೇಳಿ ಸುಮ್ಮನಾದರು. ಮುಂಬಾಯಿಯಲ್ಲಿ ತನಗೆ ದೊರೆತ ಈ ಸ್ವಾಗತವನ್ನು ಕಂಡು ಸೈಗಲರವರು ಆಶ್ಚರ್ಯಪಟ್ಟುದೇನೂ ವಿಶೇಷವಲ್ಲ.

ಕೋಂಗ್ರೆಸ್ ಅಧ್ಯಕ್ಷರ ಚುನಾವಣೆ—25 ಪ್ರತಿನಿಧಿಗಳಲ್ಲಿ 19 ಮಂದಿ ಮೌಲಾನಾ ಅಬ್ದುಲ್ ಕಲಂ ಆಜಾದರವರಿಗೂ ಒಬ್ಬರು ಶ್ರೀ ರಾಯ್ ಗಳವರಿಗೂ ಓಟು ಕೊಟ್ಟರು ರಾಮಘಢ ಅಧ್ಯಕ್ಷ ಚುನಾವಣೆಯಲ್ಲಿ ನಾಲ್ಕು ಮಂದಿ ಸಾಮ್ಯವಾದಿಗಳು ಯಾರಿಗೂ ಓಟು ಕೊಡಲಿಲ್ಲ ಒಬ್ಬರು ಗೈರ್ ಹಾಜರಿದ್ದರು.

ಶ್ರೀ ಜವಹರಲಾಲರವರು—ಮುಂಬಯಿಗೆ ಬಂದಿದ್ದು, ಆಲ್ ಮಹಾರಾಷ್ಟ್ರ ಯುವಕ ಪರಿಷತ್ತಿನ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅನಂತರ ನೇಶನಲ್ ಪ್ಲೇನಿಂಗ್ ಕಮಿಟಿಯ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿ, ಅದಷ್ಟು ತ್ವರಿತದಲ್ಲೇ ತಮ್ಮ ಸರ್ವ ರಿಪೋರ್ಟನ್ನೂ ಸಿದ್ಧಗೊಳಿಸಿ, ಕಾಂಗ್ರೆಸಿಗೆ ಅರ್ಪಿಸಬೇಕೆಂದು ಸದಸ್ಯರಿಗೆ ಹೇಳಿದನು.

ಮಂಗಳೂರಿನ ಕೆನರಾ ಬೇಂಕಿನ ಮನೇಜರರಾದ ಶ್ರೀ ನ್ಯಾಕರವರೂ, "Rural malketıng and Finanee S committe"ಯಲ್ಲಿ ರುವರೆಂಬದು ಬಹಳ ಹೆಮ್ಮೆಯ ಮಾತು ನಮಗೆ,

ಈ ವಾರದ ಭವಿಷ್ಯ

ತಾರೀಕು **22-2-1940**ರಿಂದ **29-2-1940**ರ ವರೆಗೆ

ಮೇಷ—"ಚಿಂತಾತುರಾಣಾಂ ನ ಸುಖಂ ನ ನಿದ್ರಾ" ಎಂಬ ನೀತಿವಾಕ್ಯದಂತೆ ವಸ್ತೋರೋಗ ಪೀಡಿತರಿಗೆ ಸುಖವೂ ನಿದ್ರೆಯೂ ಸ್ವಲ್ಪವೂ ಇರದು. ಇಂತಹ ಪರಿಸ್ಥಿತಿಯಲ್ಲಿ ಪರಿತಪಿಸುತ್ತಿರುವ ನಿಮಗೆ ಈ ವಾರದಲ್ಲಿ ಬಹಳ ಕಷ್ಟಗಳು ತಟ್ಟಲಿವೆ. ದೇಹಾಲಸ್ಯ ಔದಾಸೀನ್ಯದಿಂದ ಯಾವ ಕಾರ್ಯವನ್ನೂ ಮುಂದರಿಸಲಾರಿರಿ. ಸ್ವಜನ ವಿರಹ, ಶತ್ರುಗಳ ಕಾಟ, ದೇಶಾಂತರ ಪ್ರವಾಸ ಇತ್ಯಾದಿಗಳಿಂದ ಕಷ್ಟನಷ್ಟಗಳಧಿಕವಾಗುವವು. ವಿದ್ಯಾರ್ಥಿಗಳಿಗೆ ಅಧ್ಯಯನ ಭಾಗಕ್ಕೆ ತೊಂದರೆಗಳು ಹೆಚ್ಚುವವು. ಆದರೂ ತಾ 25ರಿಂದ 28ರ ವರೆಗೆ ದೈವಾನುಕೂಲವು ತಕ್ಕಷ್ಟಿರುವುದರಿಂದ ಖರ್ಚು ವೆಚ್ಚಗಳಿಗೆ ಸಾಕಷ್ಟು ಧನವೂ ಜನಮನ್ನಣೆ, ಆರೋಗ್ಯ, ರಾಜಕೀಯದಲ್ಲಿ ವಿಜಯವೂ ದೊರೆಯಲಿದೆ

ವೃಷಭ—ಸದ್ಯ ನಿಮಗೆ ಗ್ರಹಮಾನವು ಬಹ್ವಂಶ ಅನುಕೂಲವಾಗಿರುವುದಾದರೂ ಶನಿ ಕುಜರು ಅನಿಷ್ಟಕಾರಿಗಳಾಗಿರುವರು. ಅದರಲ್ಲೂ ಕುಜನು ಸ್ವಕ್ಷೇತ್ರಸ್ಥನಾದುದರಿಂದ ಆತನಿಂದ ಹೆಚ್ಚು ಕೇಡು ಸಂಭವಿಸುವಂತಿಲ್ಲ. ಸದ್ಯ ನಿಮಗೆ ವಿಶೇಷ ಪ್ರತಿಕೂಲನೆಂದರೆ ನೀಚನಾಗಿರತಕ್ಕ ಶನಿಯೇ. ಉದ್ಯೋಗ ವ್ಯಾಪಾರಗಳಲ್ಲಿ ನೀವು ಬೇಕಷ್ಟು ದುಡಿಯುವಿರಾದರೂ ಒಮ್ಮಿಂದೊಮ್ಮೆಗೆ ಅನರ್ಥ ಶತಗಳು ಪ್ರಾಪ್ತವಾಗಿ ಕೈಯಲ್ಲಿ ಕಾಸಿಲ್ಲದಂತೆ ಮಾಡಿಸುವನೀತನು ಆದ ಕಾರಣ ಸ್ತುತಿ ಜಪಾದಿಗಳಿಂದ ಈ ಶನಿ ಮಹಾರಾಯನನ್ನು ನೀವು ಪ್ರಸನ್ನೀಕರಿಸಿಕೊಂಡರೆ ನಿಮ್ಮಿಂದ ಅಸಾಧ್ಯವೆಂಬುದಾವುದೂ ಇರಲಾರದು. ಮನೋರ್ಥಗಳು ಅಚಿರದಲ್ಲಿ ಕೈಗೂಡುವವು. ತಾ. 23ರಿಂದ 26ರ ವರೆಗೆ ಹೆಚ್ಚು ಅನುಕೂಲ ಸಿಗದು.

ಮಿಥುನ—ಈ ವಾರವು ನಿಮಗೆ ಸುಖದುಃಖಗಳಿಂದ ಮಿಶ್ರವಾಗಿರುವುದು. ನೌಕರಿ ಭಾಗದಲ್ಲಿ ಅಭಿವೃದ್ಧಿಯುಂಟಾಗುವದು ಹಲವು ವಿಧಾನದಿಂದ ಧನವನ್ನು ಗಳಿಸುವಿರಿ. ನಾಲ್ಕು ಜನರಿಗೆ ಬೇಕಾದವರಾಗಿದ್ದು ಸಮಾಜದಲ್ಲಿ ಮನ್ನಣೆಗೆ ಪಾತ್ರರಾಗುವಿರಿ. ಆದರೆ ಅನಿವಾರ್ಯವಾದೊಂದು ಚಿಂತೆಯು ನಿಮ್ಮ ಅಂತರಂಗವನ್ನು ಬಲವಾಗಿ ಆವರಿಸುವುದರಿಂದ ಮುಖವು ಕಳೆಗುಂದಿರುವುದು. ವ್ಯಾಪಾರದಲ್ಲಿ ಕಷ್ಟನಷ್ಟ ನಿರ್ಬಂಧಗಳೇ ಸಿಗುವವು. ಧನ ನಿಮಿತ್ತವಾಗಿ ಕೋರ್ಟು ಕಚೇರಿಗಳಿಗೆ ಹೋಗುವ ಪ್ರಸಕ್ತಿಯೂ ಬರುವಂತಿದೆ. ತಾ. 23 24. 29 ಈ ದಿನಗಳು ಹೆಚ್ಚಿನ ಅನುಕೂಲಗಳು

ಕರ್ಕಾಟಕ—ಕರ್ಮ ಸ್ಥಾನದಲ್ಲಿ ನೀಚ ಶನಿಯೂ ಮತ್ತು ಕುಜನು ಇರುವುದರಿಂದ ನಿತ್ಯ ವೈರಿಗಳು ನಿಮ್ಮಿಂದ ದೂರವಾಗುವವು. ಅನಾಚಾರ ಅನ್ಯಾಯಗಳಲ್ಲಿ ಹೆಚ್ಚಾಗಿ ಸಮಯವನ್ನು ಕಳೆಯತಕ್ಕ ನಿಮಗೆ ಶತ್ರುಗಳ ಪೀಡೆಯೂ ಅಧಿಕವಾಗುವುದು ಮಾತ್ರವಲ್ಲ. ಸ್ವಗೃಹದಲ್ಲಿನ ಜನರೇ ವಿರೋಧವಾಗಿ ನಿಲ್ಲುವರು. ಜನನಿಂದೆಗೆ ಗುರಿಯಾಗುವಿರಿ. ವಿದ್ಯಾಭಾಗಕ್ಕೆ ಹಾನಿಯೊದಗುವದು. ಆದರೂ ಭಾಗ್ಯ ಸ್ಥಾನವು ಚೆನ್ನಾಗಿರುವುದರಿಂದ ಕೈಯಲ್ಲಿ ಹಣವೆಂದಿಗೂ ತಪ್ಪದು. ಜನಬೆಂಬಲವೂ ಸ್ತ್ರೀ ಸುಖವೂ ಬೇಕಾಗುವಷ್ಟಿರುವುದು. ಚಾಪಾಕ್ಷರಾದ ನಿಮಗೆ ತಾ. 22, 25, 26 ಈ ದಿನಗಳು ಅನುಕೂಲಕಾರಿಗಳಾಗಿರುವವು

ಸಿಂಹ—ಅವ ಬಲವಿದ್ದರೇನು ದೈವ ಬಲವಿಲ್ಲದವಗೆ ಎಂಬ ನಾಣ್ಣುಡಿಯಂತೆ ದೈವಬಲದಿಂದ ವಿರಹಿತರಾದ ನಿಮಗೆ ಯಾರ್‍ಯಾರ ಸಹಾಯವಿದ್ದರೇನು, ಅವೊಂದೂ ಕಾಲಕ್ಕೆ ಫಲಿಸಲಾರವು ನೀವು ಅತ್ಯಂತ ಶ್ರದ್ಧೆಯಿಂದಲೂ ಶ್ರಮಪೂರ್ವಕವಾಗಿಯೂ ಉದ್ಯೋಗ ವ್ಯಾಪಾರಗಳಲ್ಲಿ ದುಡಿಯುವಿರಾದರೂ ಅದರಿಂದ ನಿಮಗೆ ಸಿಗತಕ್ಕ ಲಾಭಕ್ಕಿಂತಲೂ ನಷ್ಟವೇ ಅಧಿಕವಾಗುವುದು. ತಾ. 22. 25. 26. 29 ವಿಶೇಷ ಹಾನಿಕರಗಳಾಗಿವೆ

ಕನ್ಯಾ—ಹೊಳೆಯುವುದೆಲ್ಲಾ ಹೊನ್ನೆಂದು ತಿಳಿದು ಭ್ರಾಂತರಾಗಬೇಡಿರಿ. ಯಾಕೆಂದರೆ ಬಾಹ್ಯತಃ ನೋಡುವಾಗ ನಿಮಗೆ ಎಲ್ಲರೂ ಮಿತ್ರ ಜನರೆಂದೇ ತೋರಿ ಬಂದರೂ ಅಂತರಿಕವಾಗಿ ಅವರೆಲ್ಲಾ ವಿರೋಧಿಗಳ ಸಾಲಿಗೆ ಸೇರಲರ್ಹರಿರುವರು. ನೀವು ಆಳವಾಗಿ ವಿಚಾರಿಸದೆ ಬರಿದೆ ಮೋಸ ಹೋಗಬೇಡಿರಿ ಸದ್ಯ ನಿಮಗೆ ಗ್ರಹಮಾನವು ಹೆಚ್ಚಿನಂಶ ಪ್ರತಿಕೂಲವಿರುವುದರಿಂದ ಧನವ್ಯಾಪಹಾರಿಗಳಾದ ಕಾರ್ಯಗಳು ಅನೇಕ ಸಂಭವಿಸಲಿವೆ. ಸ್ತ್ರೀಪುತ್ರರ ವಿಯೋಗ, ಅಚಾತುರ್ಯದಿಂದ ಅವಮಾನ ಇತ್ಯಾದಿಗಳು ಪ್ರಾಪ್ತವಾಗಲಿವೆ ಸ್ವಕೀಯ ವಿಶ್ವಾಸ ಚಾತುರ್ಯದಿಂದ ರಾಜಕೀಯ ವಿಚಾರಗಳಲ್ಲಿ ನೀವು ವಿಜಯಗಳಿಸಬಹುದು. ತಾ. 23 24. 27. 28ರಲ್ಲಿ ದೇಹಾಲಸ್ಯ ಧನವ್ಯಯಗಳು ಹೆಚ್ಚಲಿವೆ

ತುಲಾ—ದಾವೋಷ್ಟಕ್ಕೆ ಹೋದರೂ ಶನೀಶ್ವರನು ಬಿಡನು ಎಂಬಂತೆ ನಿಮಗೆ ದಿನೇ ದಿನೇ ದಿನ್ನಾಟ್ಟರ ಕಾಟವು ಹೆಚ್ಚುತ್ತಾ ಬರುತ್ತಿದೆ. ಕಾರಣ ಶನಿಯು ಸ್ವಭಾವತಃ ದುಷ್ಟನು. ಈಗಿರುವುದು ನೀಚರಾಶಿಯಲ್ಲಿ ಸಂಗಾತಿಯೂ ದುಷ್ಟ ಚಕ್ರವರ್ತಿ ಅಂಗಾರಕ, ಅಂತಿರುವಲ್ಲಿ ಕೇಳಬೇಕೇ? ಮತ್ತು ಸದ್ಯ ಬುಧಕೇತುಗಳನ್ನುಳಿದು ಇತರರೆಲ್ಲರೂ ಈತನಿಗೆ ಸಹಾಯಕಾರಿಗಳೇ ಆಗಿರುವರು. ಆದಕಾರಣ ತಾಪಜ್ವರ, ನೇತ್ರೋದರ ಪೀಡೆ, ಶತ್ರುಗಳ ಉಪಟಳ, ಅರ್ಧಾಂಗಿಯೊಡನೆ ಕಲಹ ಇತ್ಯಾದಿಗಳಿಂದ ಸದಾ ಚಿಂತಾಂಬುಧಿಯಲ್ಲಿ ತಲ್ಲೀನರಾಗುವಿರಿ. ಆದರೂ ತಾ 22, 23, 24, 27, 28 ಈ ದಿನಗಳಲ್ಲಿ ದೈವದೊಲುಮೆಯು ಕಿಂಚಿತ್ತಿರುವುದರಿಂದ ಹೆಚ್ಚಿನ ಹಾನಿಯೆಂದಗದು.

ವೃಶ್ಚಿಕ—ಸಕಲ ವಿಚಾರಗಳಲ್ಲೂ ನೀವು ಮುಂದರಿದವರಾದರೂ, ಸಂಸಾರದಲ್ಲಿ ತೃಪ್ತಿ ಕಾಣುವುದಿಲ್ಲ. ಗೃಹಚ್ಛಿದ್ರದಿಂದಾಗಿ ಮನೆಯ ಜನರೊಳು ನಿತ್ಯ ಕಲಹ ತಪ್ಪದು. ಆದರೂ ನಿಮ್ಮಾ ಹಾಂಗಳು ಸಮಯಕ್ಕೆ ಸರಿಯಾಗಿ ಒದಗುವು. ಇವನ್ನು ಬಿಟ್ಟು ವ್ಯಾಪಾರ, ನೌಕರಿ ಇತ್ಯಾದಿ ಕಾರ್ಯಗಳಲ್ಲಿ ನಿಮ್ಮ ಮನಸ್ಸಮಾಧಾನ ಹೊಂದುವುದು, ಶತ್ರುಗಳೂ ಕೂಡ ಪರಸ್ಪರ ಸೌಹಾರ್ದದಿಂದ ವರ್ತಿಸುವರು. ಸಾಮಾಜಿಕ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಆರೋಗ್ಯವೂ ಚೆನ್ನಾಗಿ ಉಳಿವುದು. ಧನಾಗಮವೂ ಉತ್ತಮವಾಗಿರುವುದು. ತಾ. 22, 27, 28, ಇವನ್ನು ಬಿಟ್ಟು ಇತರ ದಿನಗಳನ್ನು ನಿಶ್ಚಿಂತೆಯಿಂದ ಕಳೆವಿರಿ.

ಧನು—ಶ್ರಮಕ್ಕೆ ತಕ್ಕ ಫಲ ದೊರೆವುದರಿಂದ ಸ್ವವೃತ್ತಿಯಲ್ಲಿ ಔತ್ಸುಕ್ಯವು ಹೆಚ್ಚುವುದು. ನಿಮ್ಮ ದೇಹಾರೋಗ್ಯವೂ ಕೂಡ ಚೆನ್ನಾಗಿಯೇ ಇರುವುದು. ಕಾರ್ಯಸಾಧಕರಿಗೆ ರಾಜಕೀಯ ಭಾಗದಲ್ಲಿ ವಿಜಯವು ಲಭಿಸಲಿದೆ. ವಿದ್ಯಾರ್ಥಿಗಳೂ ತಮ್ಮ ಅಧ್ಯಯನವನ್ನು ಸುಖದಿಂದ ಮುಂದುವರಿಸುವರು. ಸ್ವಕೀಯ ಪರಕೀಯರ ಸಹಾಯವೂ ಮಿತ್ರರ ಬೆಂಬಲವೂ ನಿಮಗೆ ಸಿಗಲಿವೆ. ಆದರೆ ಬಂಧುಜನರಿಂದ ಮನಸ್ವಾಸ್ಥ್ಯವು ಕೆಡಲಿದೆ ಸಂಸಾರದಲ್ಲಿ ಅನಾರೋಗ್ಯವೂ ಕಲಹವೂ ಕಂಡುಬರುವುವು. ಅಂತೂ ಮನಸ್ಸಿಗೆ ನೆಮ್ಮದಿ ಸಿಗುವುದು ದುರ್ಲಭವು. ತಾ. 25ರಿಂದ 28ರ ವರೆಗಿನ ದಿನಗಳು ಉತ್ತಮವಿವೆ.

ಮಕರ—ನಾಟಕಶಾಲಾ ಜೀವಿಗಳಿಗೂ ಕುಸಿದ ವ್ಯಕ್ತಿಯವರಿಗೂ ವರ್ತಕ ಜನರಿಗೂ ಈ ವಾರವು ತಕ್ಕಮಟ್ಟಿಗಾಗಿರುವುದಾದರೂ ಇತರ ಜನವೃಂದಕ್ಕೆ ಹೆಚ್ಚಿನ ಹಾನಿಕಾರಿಯಾಗಿ ಪರಿಣಮಿಸಲಿದೆ. ಅನಾರೋಗ್ಯಪೀಡಿತರಾದ ನಿಮಗೆ ಚಿತ್ತಚಾಂಚಲ್ಯವು ಹೆಚ್ಚಲಿದೆ. ಉದ್ಯೋಗದಲ್ಲಿ ನಿರುತ್ಸಾಹವು ಹೆಚ್ಚುವದು. ಶತ್ರುಜನರ ಉಪಟಳದಿಂದ ಹಿಡಿದ ಕಾರ್ಯವು ಕೊನೆಗಾಣದು. ಕೃತ್ರಿಮ ಮಿತ್ರರು ಮೋಸದ ಬಲೆಯಲ್ಲಿ ನಿಮ್ಮನ್ನು ಸಿಲುಕುವರು. ಕೆಟ್ಟವೇಳೆ ಬುದ್ಧಿ ಬಂತು, ಅಪ್ಪವೇಳೆ ಒಲ್ಲೆ ಉರಿಯಿತು ಎಂಬ ಗಾದೆಯ ಮಾತನ್ನು ಕಾರ್ಯತಃ ಅನುಭವಿಸುವಿರಿ. ತಾ. 23ರಿಂದ 26ರ ವರೆಗೆ ಕಷ್ಟ ಅನಿಷ್ಟಗಳು ಹೆಚ್ಚಲಿವೆ.

ಕುಂಭ—ನಿಮ್ಮಿಂದ ನಿಮ್ಮನ್ನು ಪೂಜ್ಯಪುರುಷರು ಕೃತಕೃತ್ಯರೆಂದರೂ ತಪ್ಪುಗಲಾರದು. ಯಾ ಅತಿಶಯೋಕ್ತಿಯೂ ಆಗಲಾರದು. ಯಾವ ಕಾರ್ಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಬೇಕಾಗದು. ಯಾವ ಉಪಭೋಗಗಳಿಗೂ ನಿಮಗೆ ಕೊರತೆ ಕಾಣದು ಮನಸ್ಸಿನಲ್ಲಿ ಸಂಕಲ್ಪಿಸಿದ ಕಾರ್ಯಗಳು ಅಚಿರಾದೇವ ಕಾರ್ಯರೂಪವನ್ನು ತಾಳುವುವು. ಧನಜನ ಸಹಾಯಕ್ಕೇನೂ ಕೊರತೆಯಿಲ್ಲದ ನಿಮಗೆ ದೇಹಾರೋಗ್ಯದಲ್ಲಿ ಕಿಂಚಿದ್ವ್ಯತ್ಯಯ ದೊರೆಯುವದು. ತಾ. 25ರಿಂದ 28ರ ವರೆಗೆ ಜರದ ರೋಗದ ಚಿಹ್ನೆಗಳು ಕಾಣಿಸುವವು.

ಮೀನ—ನಿಮಗೆ ಒಂದರ ಹಿಂದೊಂದೆಂಬಂತೆ ಬೇರೆ ಬೇರೆ ಪ್ರಾಪ್ತವಾಗತಕ್ಕ ಅನಿಷ್ಟಶತಗಳನ್ನು ನಿವಾರಿಸಲು ದಾರಿಯೊಂದೂ ಕಾಣದು. ಸುತ್ತಲೂ ನಿಮ್ಮ ಜ್ಞಾನದೃಷ್ಟಿಗೆ ಕಗ್ಗತ್ತಲೆಯೇ ಕವಿದುಕೊಂಡಂತಿರುವುದು. ಚಿಂತಾಕ್ರಾಂತರಾದ ನಿಮ್ಮ ಮುಖವು ನಿಸ್ತೇಜವೂ ನಿರ್ವೀರ್ಯವಾಗಿರುವುದು. ಆದರೂ ನ್ಯಾಯಶೀಲರಿಗೂ ಸತ್ಯಸಂಧರಿಗೂ ದೇವರು ಕೈಬಿಡುವಂತಿಲ್ಲ. ಆಗಸ್ಯವಾದ ವಸ್ತುಗಳು ಎಂದಲ್ಲೊಂದು ರೂಪದಿಂದ ತತ್ಕಾಲಕ್ಕೆ ದೊರೆತೇ ತೀರುವವು. ತಾ. 23ರಿಂದ 26ರ ವರೆಗೆ ಸ್ವಲ್ಪ ಅನಿಷ್ಟಗಳು ಕಡಿಮೆಯಾಗಲಿವೆ.

ನೋಟೀಸು

ಕಾರ್ಕಳ ಡಿ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 9/1940.

ಹೊನ್ನಯ ಹೆಗ್ಗಡೆ, ವೆಂಕಟಯ್ಯ ಬಲ್ಲಾಳರ ಅಳಿಯ, ಉಡುಪಿ ತಾಲೂಕು ಬೊಮ್ಮಾರು ಬೆಟ್ಟು ಗ್ರಾಮದಲ್ಲಿರುವವ. } **ವಾದಿ**

ಮತ್ತು

ನರ್ಸ ಹೆಗ್ಗಡೆ, ಗಿರಿಯಮ್ಮ ಹೆಗ್ಗಡ್ತಿಯ ಮಗಳು, ಕಾರ್ಕಳ ತಾಲೂಕು ಎರ್ಲಪಾಡಿ ಗ್ರಾಮಸ್ಥರು, } **ಪ್ರತಿವಾದಿ**

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಯು ಪ್ರತಿವಾದಿಯಾದ ನಿಮ್ಮಿಂದ ಬರತಕ್ಕ ವಾಯಿದೆ ಮೀರಿ ಹೋದ ಸಾಲ ವ ಅದರ ಮೇಲಿನ ಬಡ್ಡಿ ಕೂಡಾ ಮಗ್ಗೆರೆ ಹಣಗಳನ್ನು ಬರಮಾಡಿಕೊಳ್ಳುವ ಬಗ್ಗೆ ನಿಮ್ಮ ಮೇಲೆ ದಾಖಲುಮಾಡಿರುವ ಮೊಕ್ಕದ್ದಮೆಯು ತಾ. 18-3-1940ಕ್ಕೆ ಅಖೈರು ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕು ಹಗಲು 10 ಘಂಟೆಗೆ ಸದ್ರಿ ಕೋರ್ಟು ಮುಂದೆ ನೀವು ಖುದ್ದಾಗಿ ಯಾ ವಕೀಲರ ಮುಖಾಂತ್ರ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ನಿವೇದಿಸಿಕೊಳ್ಳತಕ್ಕದ್ದು. ಇಲ್ಲವಾದ್ರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ನಂಬ್ರವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಈ ಮೂಲಕ ತಿಳಿಸಲಾಗುತ್ತದೆ.

KARKAL, 14-2-40 } **A N. S. Achar,** *Pleader for Plaintiff*

ಕನ್ನಡ ನುಡಿವೆಣ್ಣಗೊಂದು ಕನ್ನಡಿಗಿತ್ತಿಯ ಗಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ರಚನೆ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: ೦-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.

ಬರೆಹಗಾರ್ತಿಯರು:—

ಶ್ರೀಮತಿ ಮಟ್ಟಿಪಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಚ್ಯ ನವ್ಯ ವಿಚಕ್ಷಣ ಕರ್ನಾಟಕ ವಿದ್ವನ್ಮಣಿ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M A ,M.R A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ

'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರಂತನವಾದಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ.... ....'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)



ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೆಯುಳ್ಳ ಮೊಹಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀ ಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—**ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ.**

Sole Manufacturer DR. D. N. JASANI, Vitalbhai Patel Road, BOMBAY 4

ಸಮಾಚಾರ ಸಂಗ್ರಹ

(೪ನೇ ಪುಟದಿಂದ ಮುಂದರಿಸಿದ್ದು)

ಆಂಧ್ರದಲ್ಲಿ

ಶ್ರೀ ಟಿ ಪ್ರಕಾಶಂ ಎಮ್. ಎಲ್. ಎ. ಇವರು ಸರ್ವಾನುಮತದಿಂದ ಆಂಧ್ರ ಪ್ರಾಂತಿಕ ಕಾಂಗ್ರೆಸ್ಸು ಕಮಿಟಿಯ ಅಧ್ಯಕ್ಷರಾಗಿಯೂ ಶ್ರೀ. ಕೋಟಿ ರೆಡ್ಡಿಯವರು ಉಪಾಧ್ಯಕ್ಷರಾಗಿಯೂ ಶ್ರೀ. ಕಾಳವೆಂಕಟ ರಾಯರು ಜನರಲ್ ಸೆಕ್ರೆಟರಿಯರಾಗಿಯೂ ಶ್ರೀ. ಗಳಾವ ಸಂಜೀವರೆಡ್ಡಿ ಮತ್ತು ವೆಂಕಟ ರಾಜು ಇವರು ಜತೆ ಕಾರ್ಯದರ್ಶಿಗಳಾಗಿಯೂ ಆಯ್ಕೆಗೊಂಡಿದ್ದಾರೆ.

ಸಿಂಧ್ ಪ್ರಾಂತದ ಮಂತ್ರಿ ಮಂಡಳದ ರಾಜಿನಾಮೆ

ಸಿಂಧ್ ಪ್ರಾಂತದ ಪ್ರಧಾನ ಮಂತ್ರಿಗಳಾದ ಖಾನ್ ಬಹದೂರ್ ಅಲ್ಲಾಬಕ್ಸ್ ಇವರು ತಮ್ಮ ಮಂತ್ರಿ ಕೂಟದ ರಾಜಿನಾಮೆಯನ್ನಿತ್ತಿರುವರು. ಗವರ್ನರರು ಬೇರೆ ಮಂತ್ರಿ ಮಂಡಳವನ್ನು ನಿರ್ಮಿಸುವರೆ ಪ್ರಯತ್ನಿಸುತ್ತಿರುವರು. ಮುಸ್ಲಿಮು ಲೀಗಿನ ಮತ್ತು ಹಿಂದೂ ಸ್ವತಂತ್ರ ಪಕ್ಷದ ಮೆಂಬರರು ಒಂದುಗೂಡಿ ನವ ಮಂತ್ರಿ ಮಂಡಳ ಸ್ಥಾಪಿಸುವ ಯೋಜನೆಯಲ್ಲಿದ್ದಾರೆ.

ಪಂಜಾಬ್ ಕಾಂಗ್ರೆಸ್ ಕಮಿಟಿಯ ಅಂತಃಕಲಹವು ಮುಗಿಯಿತು. ಐಕ್ಯವು ಸ್ಥಾಪನೆಯಾಯಿತು.

ಮೌಲಾನಾ ಅಬುಲ್ ಕಲಮ್ ಅಜಾದರು ಈ ಸಂದರ್ಭದಲ್ಲಿ "ಹತ್ತು ವರುಷಗಳ ಅಂತಃಕಲಹವಿಂದು ಮುಗಿದು ಐಕಮತ್ಯದ ಕಾಂಗ್ರೆಸ್ ಕಮಿಟಿಯು ಸ್ಥಾಪನೆಯಾದುದು ಪರಮಾನಂದ" ಎಂದು ತಮ್ಮ ಸಂತೋಷವನ್ನು ಸೂಚಿಸಿರುವರು. ಪಂಜಾಬ್ ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಮಂಡಳಿಯಲ್ಲಿ ಬೇರೆಬೇರೆ ಪಕ್ಷದವರಿಗೆ ಇರಬೇಕಾದ ಸ್ಥಾನಸಂಖ್ಯೆಗಳು ನಿಶ್ಚಿತವಾದುವು. ಇಪ್ಪತ್ತೊಂದು ಸ್ಥಾನಗಳಲ್ಲಿ ಹದಿನಾಲ್ಕು ಗೋಪೀಚಂದ್ ಮತ್ತು ಅಕಾಲೀ ಪಕ್ಷದವರಿಗೆ ಮತ್ತು ಉಳಿದ ಏಳು ಡಾಕ್ಟರ್ ಸತ್ಯಪಾಲರ, ರೆಡಿಕಲ್ ಲೀಗಿನ ಮತ್ತು ಸೋಶ್ಯಲಿಸ್ಟ್ ಪಾರ್ಟಿಗಳಿಗಾಗಿ ಬಿಡಲ್ಪಟ್ಟಿವೆ.

ಗಂಗಾಯಮುನಾ ಸಂಗಮಸ್ನಾನದಿಂದ ಶುದ್ಧೀಕರಣ-ಸನಾತನಿಗಳ ನಿರ್ಣಯ

ಪ್ರಯಾಗದಲ್ಲಿ ಮಾಘಮೇಳ ಸಂಬಂಧವಾಗಿ ಎಷ್ಟೋ ಹಿಂದೂ ಸನಾತನೀ ಸಭೆಗಳೂ ಸಮ್ಮೇಳನಗಳೂ ಜರಗುತ್ತಲಿವೆ. ಅವುಗಳಲ್ಲಿ ಅಖಿಳ ಭಾರತ ಸನಾತನೀ ಮಹಾಸಭೆಯ ಅಧಿವೇಶನಕ್ಕೆ ಪಂಡಿತ ಮಾಲವೀಯರು ಅಧ್ಯಕ್ಷರಾಗಿದ್ದರು. ಅದರಲ್ಲಿನ ನಿರ್ಣಯಗಳಲ್ಲಿ ಮಹತ್ವದ್ದೊಂದು ಕಾಶೀ ಮಹಾ ಪಂಡಿತ ವರ್ಗದ ಸಹಿಸಮ್ಮತಿಗಳಿಂದ ಮುಂದು ಬಂದು ಅಂಗೀಕೃತವಾದುದು, ಅದೇನೆಂದರೆ ಜಾತಿಬಿಟ್ಟು ಹೋದ ಯಾವ ಹಿಂದುವೇ ಆಗಲಿ ಪ್ರಯಾಗದಲ್ಲಿ ಗಂಗಾ ಯಮುನಾ ಸಂಗಮದಲ್ಲಿ ಸ್ನಾನ ಮಾಡಿದಲ್ಲಿ ಆತನು ಪುನೀತನಾಗಿ ತಿರುಗಿ ತನ್ನ ಜಾತಿ ಸಮಾಜಗಳಲ್ಲಿ ಬೆರೆದು ಬದುಕುವ ಅರ್ಹತೆಯುಳ್ಳವನಾಗುತ್ತಾನೆ.

ಅಖಿಲ ಕರ್ನಾಟಕ ಮಕ್ಕಳ ಕೂಟ.

"ಅಖಿಲ ಕರ್ನಾಟಕ ಮಕ್ಕಳ ಕೂಟ"ದ ಮೂರನೇ ಅಧಿವೇಶನವು ಮಾರ್ಚ ತಿಂಗಳಲ್ಲಿ ಬೇಸಿಗೆ ರಜದಲ್ಲಿ ಬೆಂಗಳೂರು ನಗರದಲ್ಲಿ ಜರಗುವುದು. ಸರ್ ಮಿರ್ಜಾ ಎಂ. ಇಸ್ಮೈಲ್, ಅವರು ಸಮ್ಮೇಲನ ಪ್ರಾರಂಭೋತ್ಸವವನ್ನು ನೆರವೇರಿಸಲು ದಯವಿಟ್ಟು ಒಪ್ಪಿರುವರು. ನಾನಾವಿಧವಾದ ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನಗಳನ್ನು ದಂಚಲು ಶ್ರೀಮದ್ಯುವರಾಜರವರ ದ್ವಿತೀಯ ಕುಮಾರಿಯವರಾದ ರಾಜಕುಮಾರಿ ವಿಜಯ ಲಕ್ಷ್ಮಮ್ಮಣ್ಣಿಯವರನ್ನು ಪ್ರಾರ್ಥಿಸಿಕೊಳ್ಳಲಾಗಿದೆ.

ಸಮ್ಮೇಲನಕ್ಕೆ ಸಂಬಂಧಪಟ್ಟಂತೆ ಮಕ್ಕಳುಗಳಿಂದಲೇ ತಯಾರುಮಾಡಲ್ಪಟ್ಟ ವಸ್ತುಗಳ ಪ್ರದರ್ಶನವನ್ನೂ, ಮಕ್ಕಳ ಪುಸ್ತಕ ಪ್ರದರ್ಶನವನ್ನೂ ಏರ್ಪಡಿಸಲಾಗುವುದು. ಸಮ್ಮೇಲನವು ಮೂರು ದಿನಗಳು ನಡೆಯುವುದಾಗಿ ನಿಶ್ಚಯವಾಗಿದೆ. ಮೊದಲನೆಯ ದಿನ ಹಿರಿಯರ ಸಭೆ, ಎರಡನೆಯ ದಿನ ಮಕ್ಕಳ ಸಮ್ಮೇಲನ, ಮೂರನೆಯ ದಿನ ಮಕ್ಕಳ ಏಳಿಗೆಯ ವಿಷಯವಾಗಿ ಮಕ್ಕಳಿಂದಲೇ ತಯಾರಿಸಲ್ಪಟ್ಟ ರಚನೆಗಳು, ಚರ್ಚೆಗಳು, ಕಥೆ ಕವಿತೆಗಳ ವಾಚನ, ಮಕ್ಕಳ ಕೂಟದ ನಾನಾವಿಧವಾದ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿನಿಯೋಗ, ವಿವಿಧ ವಿನೋದಾವಳಿಗಳು, ಹಿರಿಯರಿಂದ ಮಕ್ಕಳಿಗಾಗಿ ಭಾಷಣಗಳು, ಸಮ್ಮೇಲನದ ಸಮಾರೋಪ ಸಮಾರಂಭ ಮೊದಲಾದುವುಗಳು ನಡೆಯುವವು. ಮಕ್ಕಳ ಮೇಲ್ಮೆಗಾಗಿ ಕೆಲಸ ಮಾಡತಕ್ಕ ಸಂಘಗಳೂ ಸಂಸ್ಥೆಗಳೂ ಮಕ್ಕಳನ್ನು ಪ್ರತಿನಿಧಿಗಳಾಗಿ ಕಳುಹಿಸಿ ಪ್ರದರ್ಶನಕ್ಕೆ ಮಕ್ಕಳಿಂದಲೇ ತಯಾರಿಸಲ್ಪಟ್ಟ ವಸ್ತುಗಳನ್ನೂ "ಶಿಶು ಸಾಹಿತ್ಯ" ಗ್ರಂಥಗಳನ್ನೂ ಕಳುಹಿಸಿ ಸಮ್ಮೇಲನವು ಯಶಸ್ವಿಯಾಗಿ ನಡೆಯಲು ನಮಗೆ ನೆರವಾಗಬೇಕಾಗಿ ಪ್ರಾರ್ಥನೆ.

ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳನ್ನೂ ಪ್ರದರ್ಶನಕ್ಕೆ ಕಳುಹಿಸತಕ್ಕ ಸಾಮಾನುಗಳನ್ನೂ ಮಾರ್ಚಿ ತಿಂಗಳು ೫ನೇ ತಾರೀಖಿನೊಳಗಾಗಿ ಮಕ್ಕಳ ಕೂಟದ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಬೇಕು.

ವ್ಯವಸ್ಥಾಪಕರು,
ಅಖಿಲ ಕರ್ನಾಟಕ ಮಕ್ಕಳ ಕೂಟ,
ಚಾಮರಾಜ ಪೇಟೆ, ಬೆಂಗಳೂರು ನಗರ,

ಶಿರ್ವ ಪಂ| ಬೋ| ಪ್ರೆಸಿಡೆಂಟರಿಂದ ಪ್ರಕಟಣೆ.

ಉಡುಪಿ ತಾಲೂಕು ಶಿರ್ವ ಪಂಚಾಯತಬೋರ್ಡಿಗೊಳಪಟ್ಟ ಶಿರ್ವ ಸಂತೆಕಟ್ಟೆ, ಪತ್ತನಾರು ಮಾರ್ಕೆಟು ಮತ್ತು ದಿನಚರಿಗಳ ವರಿಗಳನ್ನು 1940-'41ನೇ ಒಂದು ವರ್ಷದ ಬಗ್ಗೆ ನಡಸಲು ಇರುವಂಥ ಸ್ವತಂತ್ರವನ್ನು ಇದೇ 1940ನೇ ಇಸ್ವಿ ಮಾರ್ಚ ತಾ. 6ನೇ ಬುಧವಾರ ಹಗಲು ಘಂಟೆ 3ಕ್ಕೆ ಸರಿಯಾಗಿ ಸದ್ರಿ ಪಂಚಾಯತಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಸದ್ರಿ ಏಲಂಗಳು ಪಂಚಾಯತ್ ಬೋರ್ಡಿನ ಮಂಜೂರಾತಿಗೊಳಪಟ್ಟವುಗಳಾಗಿರುತ್ತವೆ. ಮತ್ತು ಸಂಬಂಧಪಟ್ಟ ಸಂಪೂರ್ಣ ಮಾಹಿತಿ ವಗೈರೆಗಳನ್ನು ಆಫೀಸ್ ನೋಟೀಸ್ ಬೋರ್ಡಿನ ಬಹಿರಂಗ ಪ್ರಕಟಣಾದಿಗಳಿಂದ ಓದಿ ತಿಳಕೊಳ್ಳಬಹುದು ಎಂದು ಉಮೇದ್ವಾರ ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

[*N. B:* ಮೇಲ್ಕಾಣಿಸಿದ ಸದ್ರಿ ಏಲಂ 1939-40ನೇ ವರ್ಷದಲ್ಲಿ ರೂ. 207-0-0ಕ್ಕೆ ಏಲಂ ಕಾಯಂ ಆಗಿತ್ತು.]

(*Sd*) S. Annaya Hegde,
President, Panchayath Board,
ತಾ. 14-2-1940. SHIRVA.

NAVAYUGA
Advertisement Tariff

1 Page	Rs. 25/-	per insertion	
½ „	Rs. 15/-	„	„
¼ „	Rs. 8/-	„	„
⅛ „	Rs. 5/-	„	„

Per Single inch col. Re. 1 „
Contract rates on application
Manager-Navayuga UDIPI-

GET
Rich & Prosperous!
Here is an authorised simple means upheld and pursued by millions of persons with great advantage. This should lead you also to Riches and Prosperity. Ask for details-go through it carefully-take advantage of it and enjoyfull comforts, luxury, influence and all that go to make HAPPINESS complete.
K. S. ROW,
Worli, BOMBAY

ಪ್ರಕಟಣೆ

ಮಂಗಳೂರು ತಾಲೂಕು ಪಳೆಯಂಗಡಿ, ಸಂತೆಕಟ್ಟೆ ಗ್ರಾಮದಲ್ಲಿರುವ ಉಗ್ರಾಣಿ ಶೇಕ್ ಮಜೀದ್ ಸಾಹೇಬರ ಮಗ, ಹಾಲಿ ಬೊಂಬಾಯಲ್ಲಿ ನೌಕರಿ ಕಸಬಿನ ಶೇಕ್ ಜಾಫರನು ಸರ್ವ ಜನರಿಗೆ ಈ ಮೂಲಕ ತಿಳಿಯ ಪಡಿಸುವದೇನೆಂದರೆ:

ಸದ್ರಿ ಗ್ರಾಮದಲ್ಲಿರುವ ಇಮಾಮು ಸಾಹೇಬರು, ಕೆಲವು ವರ್ಷಗಳ ಮೊದಲು ತನ್ನ ಸ್ಥಿರಾಸ್ತಿಯನ್ನು ನನಗೆ ತೋರದತ್ತ ಮಾಡಿಕೊಟ್ಟಿರುತ್ತಾರೆ. ಕಳೆದ ವರ್ಷ ಸದ್ರಿ ಇಮಾಮು ಸಾಹೇಬರು, ಆಸ್ತಿಯನ್ನು ಖಂಡಿತ ಕ್ರಯಕ್ಕೆ ಬರೆಸಿಕೊಡುತ್ತೇನೆಂದು ನನಗೆ ತಿಳಿಸಿದ ವೇಳೆಗೆ ಆ ಬಗ್ಗೆ ನನ್ನ ಪರವಾಗಿ ನನ್ನ ದೊಡ್ಡ ಅಣ್ಣ ಶೇಕ್ ಹುಸ್ಸೈನ್ ಸಾಹೇಬರನ್ನು, ಬಾಕಿ ತಗಲಬಹುದಾದ ಹಣವನ್ನು ಕೊಟ್ಟು ಬೊಂಬಾಯಿಂದ ಊರಿಗೆ ಕಳುಹಿಸುತ್ತೇನೆ. ಸದ್ರಿ ನನ್ನ ಅಣ್ಣನವರು, ಬೇರೆಯವರ ದುರ್ಬೋಧನೆಯಿಂದಲೋ, ತನ್ನ ಅಭಿಲಾಷೆಯಿಂದಲೋ, ನನಗೆ ಮೋಸ ಮಾಡುವ ಇರಾದೆಯಿಂದ, ಮೇಲೆ ಕಾಣಿಸಿದ ಆಸ್ತಿ ಅಲ್ಲದ ಬೇರೆ ಎರಡು ಸ್ಥಳ ಕೂಡಾ ತನ್ನ ಹೆಸರಲ್ಲೇ ಕ್ರಯಕ್ಕೆ ಬರೆಸಿಕೊಂಡಿರುತ್ತಾರೆಂಬಾಗಿ ವರ್ತಮಾನ ಕೇಳುತ್ತೇನೆ.

ಆದ್ದರಿಂದ ನಾನು ಈ ಮೂಲಕ ಜಾಹೀರುಮಾಡಿಕೊಳ್ಳುವದೇನೆಂದರೆ, ನನ್ನ ಅಣ್ಣ ಶೇಕ್ ಹುಸ್ಸೈನ್ ಸಾಹೇಬರು, ತನ್ನ ಹೆಸರಲ್ಲಿ ಬರೆಸಿಕೊಂಡ ಎಲ್ಲಾ ಆಸ್ತಿ ಮನೆ, ಚರಸೊತ್ತು ನನ್ನ ಹಕ್ಕಿನವುಗಳಾಗಿದ್ದು, ಇವುಗಳ ಆಡಳಿತೆಯನ್ನು ನಡಿಸಲಿಕ್ಕೆ ಹಕ್ಕು ಇಲ್ಲದೆ ಅವುಗಳನ್ನು ತನ್ನ ಇಚ್ಛೆಯಂತೆ ವಿನಿಯೋಗಿಸಲು ಸದ್ರಿಯವರಿಗೆ ಯಾವ ವಿಧದಿಂದಲೂ ಹಕ್ಕಿರುವುದಿಲ್ಲ. ಆದ್ದರಿಂದ ನನ್ನ ಒಪ್ಪಿಗೆ ಶಿವಾಯಿ ಏನಾದರೂ ರಿಕಾರ್ಡು ಮಾಡಿಸಿದ್ದರೆ ಯಾ ಇನ್ನು ಮುಂದೆ ಮಾಡಿಸುವದಾದರೆ ಅಂಥಾ ರಿಕಾರ್ಡುಗಳು, ಯಾವ ವಿಧದಿಂದಲೂ ಸಿಂಧುವಾಗತಕ್ಕವುಗಳೂ ಅಲ್ಲ. ಇದಕ್ಕೆ ವಿರುದ್ಧವಾಗಿ, ಒಳಗುಟ್ಟಿನಿಂದ ಸುಳ್ಳು ರಿಕಾರ್ಡು ಮಾಡಿಕೊಂಡಲ್ಲಿ ಮುಂದೆ ನಡಿಸುವ ಕೋರ್ಟು ವ್ಯವಹಾರಗಳಲ್ಲಿ ಸ್ವಂತ ಜವಾಬ್ದಾರಿಯಾಗತಕ್ಕದ್ದೆಂದು ತಿಳಿಸೋಣಾಗಿದೆ.

ಶೇಕ್ ಜಾಫರ್ ಸಾಹೇಬ.

ಮೊಕ್ಕಾಂ: ಪಳೆಯಂಗಡಿ ಸಂತೆಕಟ್ಟೆ
ತಾರೀಕು 12—2—1940.

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
ಕ್ರಮ ನಂಬ್ರ $\frac{43}{1934}$
R. E. P. No. $\frac{593}{1939}$

ಯಬ್ರಾಯಿನ ಬಾರಿ ಸಹಾ ವಾದಿರು —ಅರ್ಜದಾರರು
ಮತ್ತು ಲಿಂಗಪ್ಪಯ್ಯ ಸಹಾ —ಪ್ರತಿವಾದಿರು
ರೆಸ್ಪಾಂಡೆಂಟ ಇವರುಗಳೊಳಗೆ

2ನೇ ರೆಸ್ಪಾಂಡೆಂಟ ಲಕ್ಷ್ಮಣಯ್ಯ ದಾಸಪ್ಪಯ್ಯನ ಮಗ, ವೆಕ್ಸಿನೇಟರ್, ಮಂಗಳೂರು ತಾಲೂಕು ಉಳ್ಳಾಲದಲ್ಲಿರುವವ; 3ನೇ ರೆಸ್ಪಾಂಡೆಂಟ B. ವೆಂಕಟ್ರಮಣಯ್ಯ, ಬೀರನ ಬೈಲ್ ಸೀಳಯ್ಯನವರ ಮಗ, ವಿಟ್ಲ ಪಟ್ಣದಲ್ಲಿರುವವ.

ಸದ್ರಿ 2ನೇ & 3ನೇ ರೆಸ್ಪಾಂಡೆಂಟರಿಗೆ ನೋಟೀಸು.

ಸದ್ರಿ ಅರ್ಜದಾರರು ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಸ್ಥಿರಾಸ್ತಿಗಳನ್ನು ವಿಕ್ರಯದ ಬಗ್ಗೆ ಹಾಜರು ಪಡಿಸಿದ ಏಲಂ ಯಾಸ್ತಿಹಾರು ಮಂಜೂರು ಪಡಿಸುವರೆಯೂ ಮತ್ತೆ ಏಲಂ ಸಮಯ ಅರ್ಜದಾರರಿಗೆ ವಾರು ಕರೆಯುವರೆಯೂ ನಾಂದಿ ಆ್ಯವಜು ರಿಸ್ಕಿ ಆ್ಯವಜಿನಲ್ಲಿ ಮಟ್ಟ ಕೊಡಿಸುವರಿ ಪರ್ಮಿಶನ್ ಕೊಡುವ ಬಗ್ಗೆ ಕೂಡಾ ಅಮಲ್ದಾರಿಯು ತಾರೀಕು 9-3-1940ಕ್ಕೆ ಇಟ್ಟಿರುವದರಿಂದ ಆಕ್ಷೇಪವಿದ್ದರೆ ಆ ದಿವಸ ಹ್ಯಾಜರುಮಾಡಿಕೊಳ್ಳಬೇಕೆಂತ ಈ ಮೂಲಕ ತಿಳಿಸೋಣಾಗಿಯದೆ.

ಕಾಸರಗೋಡು } (*Sd*) P. Ahmad.
12-2-1940. } ಅರ್ಜದಾರನ ಎಡ್ವೊಕೇಟ್

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ಥಂಬರಂತಿರುವ ಭಗವಾನ್ ಧಾನ್ವಂತರಿಯು ಲೋಕ ಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯ ಯಾ ಶಾಸ್ತ್ರಕರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಚುಚ್ಚುವ ಯಾ ಎಳೆಯುವ ಸರ್ವವಿಧ ದೋಷಗಳನ್ನು ನಿವೃತ್ತಿಪಡಿಸುವದು. ಹಾಗೂ ಆಲಸ್ಯ ಯಾ ವಾಯುಗಳಿಂದ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, 5-0-0, 1000, 9-0-0.

5ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆ (ಗುಟಿ)ಗಳನ್ನು ಕಳುಹಿಸುತ್ತವೆ.

ಸ್ವದೇಶೀ ಔಷಧಿ ಭಂಡಾರ,
(ರಜಿಸ್ಟರ್ಡ್) ಕುಂಜಾಲು.
ಪೋಸ್ಟ್-ಬ್ರಹ್ಮಾವರ, ದ. ಕ.



ರೂ. 1—8—0ಕ್ಕೆ
3 ವಾಚುಗಳೂ, 1295 ಪೋಕಿನ ಇನಾಮುಗಳೂ

ಕೇಸ ಒಂದರ ರೂ. 1-8-0ಯಂತೆ ಒಮ್ಮೆಲೇ 10ಕೇಸ ಸುವಾಸನಾ ಒಡಿಕೊಲೋನ್ ಪರಿಮಳ ದ್ರವ್ಯವನ್ನು ಕೊಂಡುಕೊಳ್ಳುವವರಿಗೆ ಗಿಲ್ಟಿನ ಡಮ್ಮಿ ಗೋಲ್ಡ್ ರಿಸ್ಟ್‌ವಾಚು, ಸೆಪ್ಟಿವಾಚು, ಬಾಂಡ್ ಮಾದ್ರಸಿಟ್ಟಿ, ರೈಲ್ವೆಟೈಮ್, ಡಮ್ಮಿ ಪಾಕೆಟ್‌ವಾಚು, ಸೇಫ್ಟಿರೇಜರ್, ಬಾಟಲ್, ಸೇವಿಂಗ್ ಸೋಪು, ಸೇವಿಂಗ್ ಬ್ರಷ್, ಕನ್ನಡಿ, ಪೌಡರ್ ಪಕೇಟು, ಕ್ಲಿಪ್ಪು ಸಮೇತ ಪೆನ್ನಿಲು, ಸಿಗರೇಟ್ ಕೇಸ, ಸಿಗರೇಟು ಲೈಟರ್, ಅಂಗವಸ್ತ್ರ, ಉಂಗುರ, ಕತ್ತರಿ, 555 ಅದಿ ದೂರ ಪ್ರಕಾಶ ಕೊಡುವ ಟೋರ್ಚ್‌ಲೈಟ್ ಅಥವಾ ಐದು ವರ್ಷ ಗ್ಯಾರಂಟಿಯುಳ್ಳ ಟೈಮ್‌ಪೀಸು ಧರ್ಮಾರ್ಥವಾಗಿ ಕೊಡಲಾಗುವುದು. ಪೋಸ್ಟೇಜು ಮತ್ತು ಪ್ಯಾಕಿಂಗ್ 12ಆಣೆ ಪ್ರತ್ಯೇಕ. ಇಂದೇ ಬರೆಯಿರಿ

THE FRENCH WATCH CO.
Post Box No. 12216 Calcutta (N. G.)

ಕರ್ನಾಟಕ ಏಕೀಕರಣವೂ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳೂ

ಲೇಖಕರು —ಶ್ರೀ ಬೆನಗಲ್ ರಾಮರಾವ್, ಎಂ ಎ ಎಲ್ ಎಲ್ ಬಿ, ಮಲ್ಲೇಶ್ವರ, ಬೆಂಗಳೂರು.

ಮುಂದೆ ಕ್ಷಿಪ್ರದೊಳಗಾಗಿ ಏರ್ಪಡಿಸಬೇಕೆಂದು ನಾವುಗಳೆಲ್ಲ ಇದಿರು ನೋಡುತ್ತಲಿರುವ ಸಂಯುಕ್ತ ಹಾಗೂ ಸ್ವತಂತ್ರ ಕರ್ನಾಟಕ ರಾಷ್ಟ್ರದೊಳಗೆ ಅಡಗಿರಬೇಕಾದ ಎಂಟು ಹತ್ತು ಜಿಲ್ಲೆಗಳೊಳಗೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡವೆಂಬ ಎರಡು ಜಿಲ್ಲೆಗಳು ಕೂಡ ಸೇರಬೇಕೆಂಬ ವಾದಕ್ಕೆ ಆ ಜಿಲ್ಲೆಗಳ ಹೆಸರೇ ಪ್ರಬಲವಾದ ಆಧಾರವಾಗಿರುವುದು. ಮೈಸೂರಿನ ಹುಲಿಯೆಂದು ಕರೆಯಲ್ಪಡುತ್ತಿದ್ದ ಟಿಪ್ಪುವನ್ನು ಸೋಲಿಸಿ ೧೭೯೯ನೇ ಇಸವಿಯಲ್ಲಿ ಇಂಗ್ಲಿಷರು ಅದುವರೆಗೆ ಒಂದೇ ಜಿಲ್ಲೆಯಾಗಿ ವ್ಯವಹರಿಸಲ್ಪಡುತ್ತಿದ್ದ ಕನ್ನಡ ಜಿಲ್ಲೆಯನ್ನು ತಮ್ಮನೇರಾದ ಆಡಳಿತಕ್ಕೆ ಒಳಪಡಿಸಿ ಮದ್ರಾಸು ಅಧಿಪತ್ಯದ ಕೆಳಗಿರಿಸಿದರು. ಮುಂದೆ ಹಲವರು ಹಲವು ವಿಧವಾಗಿ ಊಹಿಸುತ್ತಲಿರುವ ಕಾರಣಗಳಿಗಾಗಿ ೧೮೬೨ನೇ ಇಸವಿಯಲ್ಲಿ ಈ ಜಿಲ್ಲೆಯನ್ನು ಎರಡಾಗಿ ವಿಭಾಗಿಸಿ, ಉತ್ತರದ ಭಾಗವನ್ನು ಬೊಂಬಾಯಿ ಅಧಿಪತ್ಯಕ್ಕೆ ಒಪ್ಪಿಸಿಕೊಟ್ಟರು. ಹೀಗೆ ಉಂಟಾದ ಈ ವಿಭಜನದ ದೆಸೆಯಿಂದ ಒಂದೇ ಕುಲಕ್ಕೆ ಸೇರಿ ಒಂದೇ ಭಾಷೆಯನ್ನಾಡತಕ್ಕ ಜನರಲ್ಲಿ ಕೂಡ ದಕ್ಷಿಣ ಕನ್ನಡದವರು, ಉತ್ತರ ಕನ್ನಡದವರೆಂಬ ಭಿನ್ನ ಭಾವಗಳು ಮೂಡಿ ಆ ಜಿಲ್ಲೆಗಳು ತುಂಬ ಅವನತ ದಶೆಗೆ ಬರುತ್ತಲಿವೆ, ಮತ್ತು ಸಂಘ ಶಕ್ತಿಯು ಕುಂದುತ್ತ ಹೋಗಿ ಅವೆರಡರಲ್ಲಿಯೂ ಪರಜನರ ಪ್ರಾಬಲ್ಯವು ಕ್ರಮಕ್ರಮವಾಗಿ ಹೆಚ್ಚುತ್ತಲಿದೆ.

"ಹೆಸರು ಕ್ಷೀರಸಾಗರ ಭಟ್ಟ, ಮಜ್ಜಿಗೆಯ ನೀರಿಗೆ ತತ್ವಾರ"ವೆಂಬ ಗಾದೆಯು ಈ ಕನ್ನಡ ಜಿಲ್ಲೆಗಳಿಗೆ ಚೆನ್ನಾಗಿ ಅನ್ವಯಿಸುತ್ತದೆ. ಹೆಸರೇನೋ ಬೇರೆ ಯಾವ ಜಿಲ್ಲೆಗೂ ಇಲ್ಲದಂಥ ಶ್ರೇಷ್ಠವಾದುದು—ಕನ್ನಡಜಿಲ್ಲೆ. ಆದರೆ ಮನೆಮಾತಾಗಿ ಕನ್ನಡವಾಡುವ ಜನರ ಪ್ರಮಾಣವು ಮಾತ್ರ ಈ ಜಿಲ್ಲೆಗಳಲ್ಲಿರುವಷ್ಟು ಕಡಿಮೆಯಾಗಿ ಕನ್ನಡ ನಾಡಿಗೆ ಸೇರತಕ್ಕಂಥಾದ ಬೇರೆ ಯಾವ ಜಿಲ್ಲೆಯಲ್ಲಿಯೂ ಇರುವುದಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮರಾಠಿ ಹಾಗೂ ಅದರ ಪ್ರಾಂತಿಕ ರೂಪಾಂತರವಾದ ಕೊಂಕಣಿಯನ್ನಾಡುವ ಜನರು ದೊಡ್ಡ ಸಂಖ್ಯೆಯಲ್ಲಿ ಸ್ಥಾಯಿಯಾಗಿ ಬಹುಕಾಲದಿಂದ ನೆಲಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸ್ಥಿತಿಯು ಇದಕ್ಕೂ ಹೀನವಾಗಿದೆ. ಅದರ ಅರ್ಧಕ್ಕೂ ಹೆಚ್ಚಾದ ಮಧ್ಯಭಾಗವು ತುಳುನಾಡು, ಇದು ಕೇವಲ ತುಳುಮಯವಾಗಿರುವುದು. ಕೇವಲ ದಕ್ಷಿಣದ ಭಾಗವು ಬಹಳ ಮಟ್ಟಿಗೆ ಮಲೆಯಾಳಮಯವಾಗಿದೆ. ಸಾಲದುದಕ್ಕೆ ಕೊಂಕಣಿಯು ಎಲ್ಲೆಲ್ಲಿಯೂ ಕೆಲಕೆಲವು ಜಾತಿಯ ಜನರಿಂದ ಆಡಲಾಗುತ್ತದೆ. ಹೀಗೆ ಒಟ್ಟಾಗಿ ಆಲೋಚಿಸಿ ನೋಡಿದರೆ ಈ ಎರಡು ಜಿಲ್ಲೆಗಳಲ್ಲಿಯೂ ಕನ್ನಡವಾಡುವ ಜನರ ಸಂಖ್ಯೆಗಿಂತ ಅನ್ಯ ಭಾಷೆಗಳನ್ನಾಡುವ ಜನರ ಸಂಖ್ಯೆಯೇ ಬಹಳ ಹೆಚ್ಚಾಗಿರುವುದು, ಮತ್ತು ಆ ದೃಷ್ಟಿಯಿಂದಲೇ ಗಮನಿಸಿ ಲೆಕ್ಕಿಸುವ ಪಕ್ಷದಲ್ಲಿ, ಆ ಜಿಲ್ಲೆಗಳು ಆ ಹೆಸರಿಗೂ, ಕನ್ನಡ ನಾಡಿನ ಅಂಗವಾಗಿ ಸೇರುವುದಕ್ಕೂ ಕೇವಲ ಅನರ್ಹವಾಗಿವೆಯೆಂದು ನಿರುಪಾಯವಾಗಿ ಒಪ್ಪಲೇಬೇಕು. ಇಷ್ಟೊಂದು ಕೆಟ್ಟ ಸ್ಥಿತಿಯು ಕರ್ನಾಟಕದೊಳಗಣ ಬೇರೆ ಯಾವ ಜಿಲ್ಲೆಯಲ್ಲಿಯೂ ಕಂಡುಬರುವುದಿಲ್ಲವೆಂದು ಎಣಿಸುತ್ತೇನೆ.

ಆದರೆ ಯಾವ ದೇಶ ಭಾಗಗಳು ಕನ್ನಡ ನಾಡಿನೊಳಕ್ಕೆ ಸೇರತಕ್ಕವೆಂದು ನಿರ್ಣಯಿಸುವಲ್ಲಿ ಇದೊಂದೇ ಪ್ರಧಾನವಾದ ಪರೀಕ್ಷೆಯಲ್ಲ. ಮುಖ್ಯವಾಗಿ ನೋಡಬೇಕಾದುದು, ಆ ಆ ಭಾಗದಲ್ಲಿ ಚಿರಕಾಲದಿಂದಲೂ ವಾಸವಾಗಿರುವ ಕೃಷೀವಲರೂ ಇತರ ಕಸಬುಗಳ ಜನರೂ, ಮೂಲ ನಿವಾಸಿಗಳೂ ಯಾರು? ಯಾವ ಭಾಷೆಯನ್ನಾಡುವವರು?—ಎಂಬುದು ಇದೇ ಬಹಳ ಬಲವಾದ ಆಧಾರವೆಂದು ಎಣಿಸಲ್ಪಡಬೇಕು. ಈ ದೃಷ್ಟಿಕೋನದಿಂದ ನೋಡಿದರೆ, ಕನ್ನಡ ಜಿಲ್ಲೆಗಳಲ್ಲಿ ಕೊಂಕಣಿ ಮರಾಠಿಗಳಿಗೆ ಹಾಗೂ ಹಿಂದೂಸ್ಥಾನಿಗೆ ಕೂಡ ಮಾಸಲಾಗಿರತಕ್ಕ ಸ್ಥಳವಾವುದೂ ಇರುವುದಿಲ್ಲವೆಂದೂ, ಈ ಜಿಲ್ಲೆಗಳೆರಡೂ ಅಚ್ಚಗನ್ನಡದವೆಂದೂ, ಅವುಗಳಲ್ಲಿ ಈಗ ಸ್ಥಾಯಿಯಾಗಿ ವಾಸವಾಗಿರುವ ಈ ಅನ್ಯ ಭಾಷೆಗಳನ್ನು ಮನೆ ಮಾತಾಗಿ ಆಡುವ ಜನರು, (ಅವರು ಎಷ್ಟೊಂದು ಶತಮಾನಗಳಿಂದ ಕನ್ನಡ ನಾಡಿನಲ್ಲಿ ನೆಲಸಿರಬಹುದಾದರೂ) ಒಂದಾನೊಂದು ಕಾಲದಲ್ಲಿ ಪರದೇಶದಿಂದ ಬಂದವರೆಂದೂ ಐತಿಹಾಸಿಕ ಆಧಾರಗಳಿಂದ ತೋರಿಸಲು ಬರುತ್ತದೆ. ಇನ್ನು ಉಳಿಯುವುದು ತುಳು ಮಲೆಯಾಳ ಭಾಗಗಳ ಸಮಸ್ಯೆ. ಇದು ಪೂರ್ತಿಯಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸಂಬಂಧಪಟ್ಟದು. ತುಳುವರಿಗೆ ಕನ್ನಡದಿಂದ ಕೇವಲ ಪ್ರತ್ಯೇಕವಾದ ಒಂದು ಸಂಸ್ಕೃತಿಯೇ ಆಗಲಿ ಗಣ್ಯವಾದ ಪ್ರಾಚೀನ ಸಾಹಿತ್ಯವೇ ಆಗಲಿ ಇರುವುದಿಲ್ಲವಾದುದರಿಂದಲೂ, ಚಿರಕಾಲದಿಂದಲೂ ಈ ಜನರು ಕನ್ನಡಿಗರ ನಿಕಟ ಮಧುರ ಸಹವಾಸದಲ್ಲಿದ್ದವರಾದುದರಿಂದಲೂ* ವಿಸ್ತೀರ್ಣದಲ್ಲಿಯೂ ಜನಸಂಖ್ಯೆಯಲ್ಲಿಯೂ ಪ್ರತ್ಯೇಕವಾದ ಒಂದು ಪ್ರಾಂತ್ಯವಾಗಿ ಏರ್ಪಡಲು ತಕ್ಕುದಲ್ಲವಾಗಿರುವುದರಿಂದಲೂ, ಈ ಹಿಂದಿನಂತೆ ಈ ಮುಂದೆಯೂ ಕನ್ನಡಿಗರೂ ತುಳುವರೂ ಮಿಳಿತರಾಗಿ ಒಂದೇ ಆಡಳಿತದೊಳಗಿರಬೇಕಾದುದು ಉಭಯ ಪಕ್ಷದವರಿಗೂ ಶ್ರೇಯಸ್ಕರವೆಂಬುದು ಸ್ಪಷ್ಟವು. ಕೊನೆಯದಾಗಿ ಕಾಸರಗೋಡು ತಾಲೂಕಿನ ಅತ್ಯಂತ ದಕ್ಷಿಣದಲ್ಲಿರುವ ಸ್ವಲ್ಪ ಭಾಗವು ಕೇವಲ ಮಲೆಯಾಳಮಯವಾಗಿರುವುದೆಂಬ ಅಂಶವನ್ನು ನಾವು ಒಪ್ಪದೆ ಗತ್ಯಂತರವಿಲ್ಲ. ಹೀಗಾದುದರಿಂದ ಈ ಭಾಗದ ಭವಿತವ್ಯವೇ, ಎಂದರೆ ಇದು ಮುಂದೆಯೂ ಕನ್ನಡ ನಾಡಿನ ಭಾಗವಾಗಿಯೇ ಉಳಿಯಬೇಕೆ? ಕೇರಳವನ್ನು ಸೇರಬೇಕೆ ಎಂಬುದು ಈಗ ಒಂದು ದೊಡ್ಡ ಬಿಕ್ಕಟ್ಟಿನ ಸಮಸ್ಯೆಯಾಗಿ ನಿಂತಿದೆ. ಕೇರಳೀಯರೇನೋ ಆ ಭಾಗವನ್ನಷ್ಟೇ ಅಲ್ಲದೆ, ಇಡೀ ಕಾಸರಗೋಡು ತಾಲೂಕನ್ನೇ, ಅಷ್ಟೇಕೆ? ಸಮಗ್ರ ದಕ್ಷಿಣ ಕನ್ನಡ ಜಿಲ್ಲೆಯನ್ನೇ ತಮಗೆ ಕೊಡಬೇಕೆಂದು ಚಳವಳ ಹೂಡಿ ಕೆಲವು ವರ್ಷಗಳಿಂದ ಸರ್ವ ಪ್ರಯತ್ನಗಳನ್ನು ನಡೆಸುತ್ತಲಿದ್ದಾರೆ. ನನ್ನ ಅಭಿಪ್ರಾಯದ ಮೇರೆಗೆ, ಇಂಥ ಪರಭಾಷಾ ಪ್ರಚುರವಾದ ತುಂಡುಗಳನ್ನು ನಮ್ಮ ನಾಡಿನಲ್ಲಿ ಉಳಿಸಿಕೊಳ್ಳುವುದರಿಂದ ನಮ್ಮ ಕನ್ನಡ ದೇಶಕ್ಕೆ ಲಾಭವೇನೂ ಆಗುವಂತಿಲ್ಲವಷ್ಟೇ ಅಲ್ಲದೆ, ಅವು ಕಾಲಾಂತರದಲ್ಲಿ ನಮ್ಮ ಕೊರಳಿಗೇ ಉರುಲಾಗಿ ಅನರ್ಥಕಾರಿಗಳಾಗಿ ಪರಿಣಮಿಸಬಹುದು. ಆದರೆ ಒಂದೊಂದು ಗಡಿ ಜಿಲ್ಲೆಯಲ್ಲಿಯೂ ಎಷ್ಟು ಭಾಗವು ಯಾರಿಗೆ ಸೇರತಕ್ಕದೆಂಬುದು ತುಂಬ ವಿವಾದಾಸ್ಪದವಾದ ವಿಷಯ. ಇಂತಹ ಸಮಸ್ಯೆಗಳು ಆ ಭಾಷೆಯ ಪಟ್ಟಿಗೆ ಬೇರೆಬೇರೆಯಾಗಿ ತೀರ್ಮಾನವಾಗತಕ್ಕವಲ್ಲವೆಂದೂ, ಇವನ್ನು ಭಾರತ ಭೂಮಿಯೊಳಗಣ ಎಲ್ಲ ಭಾಷೆಗಳ ಪ್ರಾಂತಸ್ಥಿತಿಗಳು ಸೇರಿ, ಕೆಲಕೆಲವು ನಿರ್ದಿಷ್ಟವಾದ ಸೂತ್ರಗಳನ್ನು ಗೊತ್ತುಪಡಿಸಿ ಆ ಸೂತ್ರಗಳನ್ನು ನಿಷ್ಪಕ್ಷಪಾತವಾಗಿ ಸಲುವಳಿಯಲ್ಲಿ ತಂದು ಏರ್ಪಡಿಸತಕ್ಕದ್ದೆಂದೂ ನಾನು ಅಭಿಪ್ರಾಯಪಡುತ್ತೇನೆ. ಈ ಕಾರ್ಯವು ಮುಂದಾಗಿ ಎಂದರೆ ಈಗಲೆ ಕೈಕೊಳ್ಳಲ್ಪಡಬೇಕೆಂದೂ ಅದರಂತೆ ಜಿಲ್ಲೆಗಳನ್ನು ಈಗಲೇ ಪುನರೇರ್ಪಡಿಸಿದರೆ ಸಕಾಲದಲ್ಲಿ ಅವನ್ನು ಆ ಆ ಭಾಷಾಮಯ ಪ್ರಾಂತ್ಯದೊಳಗೆ ಜಗಳಕ್ಕೆ ಅವಕಾಶವಿಲ್ಲದಂತೆ ಸುಕರವಾಗಿ ಸೇರಿಸಲು ಬರುವುದೆಂದೂ ನನ್ನ ಭಾವನೆ.

ಕನ್ನಡ ನಾಡಿನ ವಿಷಯವಾಗಿ ಆಲೋಚಿಸುವಲ್ಲಿ ತುಳು ಮಲೆಯಾಳಗಳ ವಿಷಯವೇ ಬೇರೆ, ಕೊಂಕಣಿ ಮರಾಠಿ ಭಾಷೆಗಳನ್ನಾಡುವವರ ವಿಷಯವೇ ಬೇರೆಂಬುದನ್ನು ನಾವು ಮರೆಯತಕ್ಕದಲ್ಲ. ಆರ್ಯಕುಲದ ಭಾಷೆಗಳನ್ನಾಡುವ ಈ ಜನರು ಮೂಲತಃ ಸ್ವದೇಶದವರಲ್ಲ ನೆರೆಹೊರೆಯ ಪರದೇಶಗಳಿಂದ ಬಂದು ಕನ್ನಡ ನಾಡಿನಲ್ಲಿ ನೆಲಸಿದವರೆಂಬುದನ್ನು ಮೇಲೆ ಹೇಳಿಯೇ ಇರುವೆನು. ಈ ಜನರು ಕನ್ನಡ ಜಿಲ್ಲೆಯ ಯಾವ ತಾಲೂಕಿನಲ್ಲಿಯೇ ಆಗಲಿ, ಹೋಬಳಿಯಲ್ಲಿಯೇ ಆಗಲಿ, ಹೆಚ್ಚೇಕೆ? ಯಾವ ಊರಲ್ಲಿಯೇ ಆಗಲಿ, ಎಲ್ಲಾದರೂ ಸರಿಯೇ, ಕಾಳು ಚೆಲ್ಲಿದ ಹಾಗೆ ಇರುವರೇ ವಿನಾ, ಒಕ್ಕಟ್ಟಾಗಿ ದೊಡ್ಡ ಪ್ರಮಾಣದಲ್ಲಿ ಒಂದೇ ಕಡೆ ಇರುವುದಿಲ್ಲ. ಆದರೂ ತಮ್ಮ ಬುದ್ಧಿಬಲದಿಂದಲೂ, ಕಾರ್ಯದಕ್ಷತೆಯಿಂದಲೂ, ಸಂಘ ಶಕ್ತಿಯಿಂದಲೂ ತಮ್ಮ ಸಂಖ್ಯಾಪ್ರಮಾಣಕ್ಕೆ ಮೀರಿ ದೇಶದಲ್ಲಿ ಗಣ್ಯರಾಗಿ, ಪ್ರಬಲರಾಗಿ ಬೆಳೆಯುತ್ತಲಿದ್ದಾರೆ. ದಕ್ಷಿಣ ಕನ್ನಡಕ್ಕಿಂತ ಉತ್ತರ ಕನ್ನಡದಲ್ಲಿ ಒಂದಿಷ್ಟು ಹೆಚ್ಚಾಗಿ ಇವರಲ್ಲಿ ಇವರಿಗೇ ವಿಶೇಷವಾದ ಮಹಾರಾಷ್ಟ್ರ ಸಂಸ್ಕೃತಿಯು ಈ ಹೊತ್ತಿಗೂ ಉಳಿದಿದೆ; ಮತ್ತು ಮರಾಠೀ ಭಾಷೆಯ ಕಡೆಗೆ ಒಲವೂ ರಾಜಕೀಯ ಕಾರಣಗಳ ದೆಸೆಯಿಂದ ಮಹಾರಾಷ್ಟ್ರ ಜನತೆಯ ಸ್ನೇಹ ಸಂಬಂಧವೂ ಇವರಲ್ಲದೆ ಇವರಲ್ಲಿ ಕೆಲಕೆಲವರಿಗೆ ಕರ್ನಾಟಕ ಏಕೀಕರಣವೇ ಆಗಲಿ, ದಕ್ಷಿಣೋತ್ತರ ಜಿಲ್ಲೆಗಳು ಕರ್ನಾಟಕದಲ್ಲಿ ಅಂತರ್ಗತವಾಗಿರಬೇಕೆಂಬ ಅಪೇಕ್ಷೆಯೇ ಆಗಲಿ ಸ್ವಲ್ಪವೂ ಇರುವುದಿಲ್ಲ. ಹಾಗೆ ಎಲ್ಲಾದರೂ ಆದಪಕ್ಷದಲ್ಲಿ ತಮಗೆ ಈಗ ಇರತಕ್ಕ ಪ್ರಾಧಾನ್ಯವೂ ಮೂಲ ದೇಶದ ಬೆಂಬಲವೂ ಕಡಿಮೆಯಾಗಬಹುದೆಂಬ ಭಯವು ಇವರನ್ನು ಬಾಧಿಸುತ್ತಿರುವಂತೆ ತೋರುತ್ತದೆ. ಆದರೆ ಇಂತಹ ಶಂಕೆಗೆ ಸ್ವಲ್ಪವೂ ಕಾರಣವಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆನು.

[ಮುಂದುವರಿಯಲಿರುವುದು]

*ಕನ್ನಡಿಗರದಾದ ವಿಜಯನಗರ ಸಾಮ್ರಾಜ್ಯವನ್ನಾಳಿದ ಒಂದು ರಾಜವಂಶದವರು ತುಳುವರೆಂಬುದನ್ನೂ, ಆ ಚಕ್ರವರ್ತಿಗಳೊಳಗೆ ಅತ್ಯಂತ ಶ್ರೇಷ್ಠನಾದ ಕೃಷ್ಣದೇವರಾಯನು ಆ ತುಳು ವಂಶದವನೆಂಬುದನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ—ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ನವಯುಗ

ನೋಟೀಸು.

ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅದನ್ನು ದಯಮಾಡಿ ಕೂಡಲೇ ಕಳಿಸಿಕೊಡಬೇಕೆಂತ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಹಾಲ್ತಿ ವರ್ಷದ ಚಂದಾಹಣ ಬಾಕಿ ಇರುವವರು ಅದನ್ನು ಆದಷ್ಟು ಬೇಗನೆ ಕಳಿಸುವಂತೆಯೂ ವಿನಂತಿ —ಮೆನೇಜರ್.

ವಿವಾಹವೆಂತಹುದಾಗಬೇಕು?

ಪ್ರೇಮ ವಿವಾಹ ಒಳ್ಳೆಯದೆ? ಅಥವಾ ರೂಢಿಯ ವಿವಾಹವೇ?

ಭಾರತದ ಹುಡುಗಿಯರಿಗೆ ಪತಿಯು - - - - - - — — — ಒಂದು "ಇನ್‌ಸ್ಟಿಟ್ಯೂಷನ್ನ"ಂತೆ!

ಪತಿ ಪತ್ನಿಯರ ಸಂಬಂಧನಸೌಹಾರ್ದತೆಯು ವಿವಾಹ ಜನಜೀವನದ ಆನಂದ ಮತ್ತು ಶಾಂತಿ ಇವು ಬಹಳ ಬೆಲೆ ಬಾಳತಕ್ಕ ವಸ್ತುಗಳೆಂದೇ ಇದುವರೆಗಿನ ಭಾವನೆ. ಆದರೆ ಆಸ್ಟ್ರಿಯದಲ್ಲೊಬ್ಬ ಮಹನೀಯನಿರುವನು. ಅವನ ಹೆಸರು ಕೌಂಟ್ ಹ್ಯಾರಿಸನ್ ಕೇಸರ್‌ಲಿಂಗ್ ಎಂದು, ಅವನು ಒಂದು ಗ್ರಂಥವನ್ನು ಬರೆದು ಅದರಲ್ಲಿ ಈ ರೀತಿ ಬರೆದಿರುವನು. 1. ಜಗತ್ತಿನಲ್ಲಿ ಜನ್ಮತಾಳಿರುವ ದೊಡ್ಡ ಮನುಷ್ಯರೆಲ್ಲರೂ ಈ ವಿಷಮ ದಾಂಪತ್ಯ ಜೀವನ ಪರಿಣಾಮವೇ ಆಗಿರುವರು. 2. ಪತಿ ಪತ್ನಿಯರ ಸಂಬಧವು ತೃಪ್ತಿಕರವಾಗಿಲ್ಲದಿದ್ದರೆ ಅದರಿಂದ ಅವರ ಆತ್ಮಗಳಿಗೆ ಹೆಚ್ಚು ನಷ್ಟವೇನೂ ಆಗುವಂತಿಲ್ಲ. 3. ಸಂಬಂಧಗಳು ಅತೃಪ್ತಿಕರವಾಗಿದ್ದಲ್ಲಿ ಗಂಡಹೆಂಡರಿಬ್ಬರೂ ಬೇರೆ ಬೇರೆಯಾಗಿಯೇ ಅಭಿವೃದ್ಧಿಗೆ ಬರುವರು. ಈ ಭಿನ್ನತೆಯು ಅವರಿಗೆ ಸಹಾಯವನ್ನೇ ಮಾಡಿದಂತಾಗುವುದು. ಕೌಂಟ್ ಕೇಸರ್‌ಲಿಂಗರು ವಿವಾಹದ ವಿಚಾರವಾಗಿ ಇನ್ನೂ ಕೆಲವು ವಿಚಿತ್ರವಾದ ಅಭಿಪ್ರಾಯಗಳನ್ನು ಪ್ರಕಟಿಸಿರುವರು.

(1) ಅನುಭವಿಗಳಾದ ಬಂಧುಗಳ ಮೂಲಕ ನಡೆಯುವ ವಿವಾಹಗಳು ಪ್ರೇಮ ವಿವಾಹಗಳಿಗಿಂತ ಹೆಚ್ಚು ಶಾಂತಿಯನ್ನೂ ಆನಂದವನ್ನೂ ಉಂಟುಮಾಡುವುವು. (2)ಹಳ್ಳಿಗರು, ವರ್ತಕರು ಇವರಿಗೆ ಪ್ರೇಮ ವಿವಾಹಗಳಿಗಿಂತಲೂ ಹಣಗಳಿಸುವಿಕೆಯೇ ಮುಖ್ಯವಾಗಿರುವುದರಿಂದ ಹಣ ದೊರೆಯುವ ವಿವಾಹವೇ ಅವರಿಗೆ ಹೆಚ್ಚು ಮೋಹಕರವಾದುದಾಗಿದೆ.(3)ವಾಸ್ತವವಾಗಿ ನಿಷ್ಕಳಂಕ ಪ್ರೇಮದ ವಿವಾಹಗಳು ಸಾಧಾರಣವಾಗಿ ಈಗ ಅರ್ಥವಿಲ್ಲದ ಒಂದು ಪದ್ಧತಿಯಂತಾಗಿವೆ, ಏಕೆಂದರೆ ಇದರ ಸರಿಯಾದ ಅರ್ಥವನ್ನು ಗ್ರಹಿಸುವಂತಹ ದೊಡ್ಡ ವಿದ್ವಾಂಸರ ಸಂಖ್ಯೆಯು ಬಹಳ ಕಡಿಮೆ. ಆದುದರಿಂದ ಇವು ಜನ ಸಾಧಾರಣದ ಮನೋವೃತ್ತಿಗನುಗುಣವಾಗಿಲ್ಲ. (4) ಹುಡುಗ ಹುಡುಗಿಯರಲ್ಲಿ ಮೈತ್ರಿಯುಂಟಾಗಿದ್ದರೆ ಅವರಿಗೆ ವಿವಾಹವಾಗಲು ಅವಕಾಶ ಕೊಡಬಾರದು. ಏಕೆಂದರೆ ಇಂತಹ ಮೈತ್ರಿಯ ವಿವಾಹಗಳು ಅಸಫಲವಾಗಿರುವುದು ಕಂಡುಬಂದಿದೆ. (5) ಕಲೆ, ಕುಶಲತೆಯಲ್ಲಿ ನಿಷ್ಣಾತರಾದ ಪುರುಷರು ಅದೇ ಕಲೆಯಲ್ಲಿ ನಿಪುಣೆಯಾದ ಹೆಂಗಸರನ್ನು ಮದುವೆಯಾಗುವುದು ಮೂರ್ಖತನ. (6) ಪ್ರತಿಯೊಬ್ಬನೂ ತನಗಿಂತ ಉತ್ತಮ ದರ್ಜೆಯವನ್ನೇ ವಿವಾಹವಾಗಬೇಕು.

ಬರ್ನಾರ್ಡ್ ಶಾರವರ ಅಭಿಪ್ರಾಯ

ಕೌಂಟ್‌ಕೇಸರ್‌ಲಿಂಗರು ತಮ್ಮಪುಸ್ತಕವನ್ನು ಪ್ರಕಟಿಸುವುದಕ್ಕೆ ಮುಂಚೆ ಜಗತ್ತಿನ ಮಹಾ ಮಹಾ ಗ್ರಂಥಕರ್ತರನ್ನು ವಿವಾಹದ ವಿಚಾರವಾಗಿ ಪ್ರಶ್ನಿಸಿದ್ದರು. ಇದಕ್ಕೆ ಉತ್ತರವಾಗಿ ಇಂಗ್ಲೆಂಡಿನ ಸುಪ್ರಸಿದ್ಧ ಗ್ರಂಥಕರ್ತರಾದ ಬರ್ನಾರ್ಡ್ ಷಾರವರು ಈ ರೀತಿ ಉತ್ತರವಿತ್ತಿರುವರು– 'ತನ್ನ ಹೆಂಡತಿಯು ಬದುಕಿರುವ ವರೆಗೂ ಯಾರೇ ಆಗಲಿ ವಿವಾಹದ ವಿಚಾರವಾಗಿ, ನಿಜವಾದ ಅಭಿಪ್ರಾಯವನ್ನು ಪ್ರಕಟಿಸಲಾರನು. ತನ್ನ ಹೆಂಡತಿಯೊಡನೆ ಬಹಳವಾದ ಭಿನ್ನಾಭಿಪ್ರಾಯವಿದ್ದರೆ ಮಾತ್ರ ಹೇಳಬಹುದು. ಸಂಯೋಗದಿಂದ ನನಗೂ ನನ್ನ ಪತ್ನಿಗೂ ತೀರ ಮತಭೇದವಿದೆ"

ಟಾಗೂರರ ಅಭಿಪ್ರಾಯ

ಡಾ|| ರವೀಂದ್ರನಾಥ ಟಾಗೂರರು ಈ ರೀತಿ ಉತ್ತರವಿತ್ತರು–"ಭಾರತದ ಕಲ್ಪನೆಯಲ್ಲಿ ವೈಯಕ್ತಿಕ ಆನಂದ, ಆಕರ್ಷಣೆ ಅಥವಾ ಆಕಾಂಕ್ಷೆಗಳಿಗೆ ಸ್ವಲ್ಪವೂ ಜಾಗವಿಲ್ಲ. ವಿವಾಹದ ವಿಚಾರದಲ್ಲಿ ನೈಸರ್ಗಿಕ ಪ್ರೇಮವು ನಂಬತಕ್ಕದ್ದಲ್ಲ. ಆದುದರಿಂದ ವಿವಾಹಕ್ಕೆ ಮೊದಲೇ ಸೂಕ್ತರೀತಿಯಲ್ಲಿ ಪ್ರೇಮಸಂಬಂಧವನ್ನುಂಟುಮಾಡಿ ಅದನ್ನು ಪೋಷಿಸಬೇಕು. ಅದರ ಒಳ್ಳೇ ಪರಿಣಾಮಗಳನ್ನೇ ಆರಿಸಿಕೊಳ್ಳಬೇಕು. ಹಿಂದೂ ಸಮಾಜದಲ್ಲಿ ಹುಡುಗಿಗೆ ಬಾಲ್ಯದಿಂದಲೇ, ಪತಿಯ ವಿಚಾರವಾಗಿ ಪೂಜ್ಯಭಾವನೆಗಳನ್ನು ಉಪದೇಶಿಸುವರು. ಉದಾಹರಣೆಗೆ–ಕತೆಗಳು, ಹಾಡುಗಳು, ಗಾನ, ಹಬ್ಬ-ಹರಿದಿನಗಳು, ಪ್ರಾರ್ಥನೆಗಳು, ಮುಂತಾಗಿ ಎಲ್ಲೆಲ್ಲಿಯೂ, ಎಲ್ಲ ಕಾಲದಲ್ಲಿಯೂ ಇದು ಕಂಡುಬರುತ್ತಿದೆ. ಆದುದರಿಂದ ಹುಡುಗಿಗೆ ವಿವಾಹವಾದ ಮೇಲೆ, ಆಕೆಯ ಪತಿಯು ಆಕೆಯ ದೃಷ್ಟಿಯಲ್ಲಿ ಎಲ್ಲರಂತೆ ಒಬ್ಬ ಮನುಷ್ಯನಾಗಿರುವುದಿಲ್ಲ. ನಿಸ್ಪೃಹತೆ, ಮಾತೃಭೂಮಿಯ ಪ್ರೇಮ ಮುಂತಾದುವುಗಳಂತೆ ಒಂದು ಗೊತ್ತಾದ ಸಿದ್ಧಾಂತ, ಅಥವಾ (Institution) ಸಂಸ್ಥೆಯಾಗಿ ಬಿಡುವನು."

ಸ್ವೀಕಾರ ವಿಮರ್ಶೆ.

ದೇವಪೂಜಾವಿಧಿ— ಸಾಹಿತ್ಯ ವಿದ್ವಾನ್ ಶ್ರೀನಿವಾಸ ಶಾಸ್ತ್ರಿಗಳಿಂದ ಪರಿಶೋಧಿಸಲ್ಪಟ್ಟು ಶ್ರೀ. ಪಿ. ಎ. ಉಪಾಧ್ಯಾಯ, ಉಡುಪಿ ಸ್ಟೋರ್ಸ್, ಬೆಂಗಳೂರು ಸಿಟಿ ಇವರಿಂದ ಪ್ರಕಟಿಸಲ್ಪಟ್ಟಿದೆ. ಬೆಲೆ: 0-3-0. ಭಗವಂತನನ್ನು ಒಲಿಸಿಕೊಳ್ಳಬೇಕಾದರೆ ಭಕ್ತರು ಆಚರಿಸತಕ್ಕ ನಿತ್ಯಕರ್ಮಗಳಲ್ಲಿ ಯಥಾವಿಧಿ ದೇವರ ಪೂಜೆಯೂ ಅತಿ ಮುಖ್ಯವಾದುದೆಂದೂ ಅದರಿಂದ ಪ್ರತಿಯೊಬ್ಬರಿಗೂ ಉಪಯೋಗವಾಗಲೆಂದೂ ಈ ಪುಸ್ತಕವನ್ನು ಪ್ರಕಾಶಕರು ದೋಷಗಳಿಲ್ಲದಂತೆ ಶಿಸ್ತಿನಿಂದ ಪ್ರಕಟಿಸಿರುತ್ತಾರೆ.

ಶ್ರೀ ವಿಷ್ಣುಸಹಸ್ರನಾಮ ಸ್ತೋತ್ರ– ಇದರ ಪರಿಶೋಧಕರೂ ಪ್ರಕಾಶಕರೂ ಮೇಲಿನವರೇ. ಬೆಲೆ: 0-2-0. ಸಂಸಾರಬಂಧನ (ದುಃಖ)ದಿಂದ ಬಿಡುಗಡೆ ಹೊಂದಿ ಶಾಶ್ವತ ಮೋಕ್ಷ (ಸುಖ) ವನ್ನು ಪಡೆಯಬೇಕಾದರೆ ಹರಿನಾಮಸ್ಮರಣೆಯು ಮುಖ್ಯವೆಂದೂ ಹರಿನಾಮಸ್ಮರಣೆಗೆ ಅನುಕೂಲವಾಗಲೆಂದೂ ನಾಮಾವಳಿ ಸಹಿತ ಈ ಪುಸ್ತಕವು ಪ್ರಕಟಿಸಲ್ಪಟ್ಟಿದೆ.

ಶ್ರೀಸೂಕ್ತ ಪುರುಷಸೂಕ್ತ (ಯಜುರ್ವೇದ)—ಇದರ ಪರಿಶೋಧಕರೂ ಪ್ರಕಾಶಕರೂ ಮೇಲಿನವರೇ. ವೇದಾಂತಗಳನ್ನು ಅಭ್ಯಾಸಿಸಲು ಅಸಾಧ್ಯವಾದವರು "ದೂಕ್ತೇನ ಪುರುಷೋಕ್ತೇನಂ ಯಜಂತ್ಯಧ್ಯತ್ಕಶೋ ವಿದಃ" ಎಂಬಂತೆ ಸರ್ವವೇದಾರ್ಥಗಳೂ ಅಡಕವಾಗಿರುವ ಪುರುಷಸೂಕ್ತವನ್ನಾದರೂ ಪಾರಾಯಣ ಮಾಡಲೆಂದು ಇದನ್ನು ಪ್ರಕಟಿಸಲಾಗಿದೆ. ಶ್ರೀ ಲಕ್ಷ್ಮೀದೇವಿಯ ಗುಣಗಳನ್ನು ಸಮರ್ಥಿಸುವ ಶ್ರೀಸೂಕ್ತವನ್ನು ಇದರೊಡನೆ ಸೇರಿಸಲಾಗಿದೆ. ಈ ಮೂರು ಪುಸ್ತಕಗಳೂ ಶ್ರದ್ಧಾಳುಗಳಿಗೆ ಅತ್ಯುಪಯುಕ್ತವೆನ್ನಬಹುದು.

ಮೂಕಾಂಬಿಕಾ ಪುರಾಣ— ಇದು ದೇವಿದಾಸಕೃತ ಕನ್ನಡಟೀಕೆಯ ತಾತ್ಪರ್ಯ ಸಹಿತವಾಗಿ ಪಂಡಿತರಿಂದ ಪರಿಶೋಧಿತವಾಗಿ ಕುಂದಾಪುರ ತಾಲೂಕಿನಲ್ಲಿರುವ ಕೊಲ್ಲೂರ (ಕೊಲ್ಲೂರು) ಕ್ಷೇತ್ರ ಶ್ರೀ ಮೂಕಾಂಬಿಕಾ ದೇವಸ್ಥಾನದ ಮೆನೇಜರ್ ಶ್ರೀ. ಸಿ. ಎಚ್. ಶೆಟ್ಟಿರಿಂದ ಪ್ರಕಟಿಸಲ್ಪಟ್ಟಿದೆ ಬೆಲೆ: 0-4-0. ದೇವೀಮಾಹಾತ್ಮೆಯನ್ನು ತಿಳಿಯಬೇಕೆಂದಿರುವವರಿಗೆ ಅತ್ಯುಪಯುಕ್ತವಾದ ಪುಸ್ತಕವಿದು.

ಹೊಸಕನ್ನಡ ಪಾಠಮಾಲೆ–I, II, III, IV ಮತ್ತು Vನೇ ತರಗತಿಗಳಿಗಾಗಿ ಐದು ರೀಡರುಗಳು ಶ್ರೀ. ಉಳ್ಳಾಲ ಮಂಗೇಶರಾಯರಿಂದ ಬರೆಯಲ್ಪಟ್ಟು ಮಂಗಳೂರಿನ ಬಾಲಸಾಹಿತ್ಯ ಮಂಡಲ, ಲಿಮಿಟೆಡ್ ಇವರಿಂದ ಈಗತಾನೆ ಪ್ರಕಟಿಸಲ್ಪಟ್ಟಿವೆ. ಬೆಲೆ: 0-2-0, 0-2-6, 0-3-0, 0-4-0, ಮತ್ತು 5 ಆಣೆ. ಶ್ರೀ. ಉಳ್ಳಾಲ ಮಂಗೇಶರಾಯರು ಉಪಾಧ್ಯಾಯರಾಗಿ, ಇನ್ಸ್‌ಪೆಕ್ಟರಾಗಿ, ವಿದ್ಯಾಇಲಾಖೆಯಲ್ಲಿ ಪರಿಪಕ್ವ ಅನುಭವವನ್ನು ಪಡೆದವರು. ಶಿಕ್ಷಣ ಪ್ರಪಂಚದಲ್ಲಿ ಅವರ ಹೆಸರನ್ನು ಕೇಳದವರೇ ಇಲ್ಲವೆನ್ನಬಹುದು. ಮಕ್ಕಳ ಮನೋಧರ್ಮವನ್ನು ಚೆನ್ನಾಗಿಬಲ್ಲ ಇವರು ಎಂದೋ ಪಾಠಪುಸ್ತಕಗಳನ್ನು ಬರೆಯಬೇಕಾಗಿತ್ತು. ಈಗ ವಿಳಂಬವಾಗಿಯಾದರೂ ಇವರು ಐದು ರೀಡರುಗಳನ್ನು ಉತ್ತಮವಾಗಿ ಪೋಣಿಸಿ ಪ್ರಕಟಿಸಿದ್ದು ಅಭಿನಂದನೀಯವಿದೆ. ಪ್ರತಿಯೊಂದು ಪುಸ್ತಕದ ಪಾಠಗಳೂ ಆಯಾಯ ದರ್ಜೆಯ ಮಕ್ಕಳ ಮನಸ್ಸಿಗೆ ಬಗೆಮುಟ್ಟುವಂತಿದೆ. ಮುದ್ರಣವೂ ಅಂತರಂಗ ಬಹಿರಂಗಗಳೂ ಚಿತ್ತಾಕರ್ಷಕವಿವೆ, ಇವುಗಳು ಬೇಗನೆ ಮುಂಜೂರಾತಿ ಹೊಂದುವವೆಂದೂ ಶ್ರೀ. ರಾಯರು ಆದಷ್ಟು ಬೇಗನೆ VI, VII, ಮತ್ತು VIIIರೀಡರುಗಳನ್ನು ಬರೆಯುವಂತಾಗಲೆಂದೂ ಹಾರೈಸುವೆವು.

ಸಮಾಜ ಸೇವಕ— ಬೆಂಗಳೂರಿಂದ ಶ್ರೀ. ಯಂ. ರಾಮರಾಯರ ಸಂಪಾದಕತ್ವದಲ್ಲಿ ನೂತನವಾಗಿ ಹೊರಟ ಪ್ರತಿ ಸೋಮವಾರ ಪ್ರಕಟಿಸಲ್ಪಡುವ ವಾರಪತ್ರಿಕೆ. ಪುಲ್ಸ್‌ಕೇಪ್ ಅರ್ಧಾಕಾರದ 12 ಪುಟಗಳು, ಬಿಡಿ ಸಂಚಿಕೆಗೆ 0-0-6. ಮುದ್ರಣವೂ ಲೇಖನಗಳೂ ಚೆನ್ನಾಗಿವೆ, ಈ ನೂತನ ಬಂಧುವಿಗೆ ನಮ್ಮ ಸ್ವಾಗತ.

ಕಲಿಯುಗ— ಡಾ. ಗೋಪಾಲಕೃಷ್ಣರಾಯರ ಸಂಪಾದಕತ್ವದಲ್ಲಿ ಧಾರವಾಡದಿಂದ ಹೊರಡುವ ಕಾಮವಿಜ್ಞಾನಕ್ಕೆ ಮೀಸಲಾಗಿರುವ ಮಾಸಪತ್ರಿಕೆಯ ಜನವರಿ ತಿಂಗಳ ವಿಶೇಷ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಕ್ರಾನ್ ಅಷ್ಟಪತ್ರದ 96 ಪುಟಗಳು, ಬೆಲೆ: 0-4-0. ಕನ್ನಡದಲ್ಲಿ ಈ ಬಗೆಯ ಪತ್ರಿಕೆಯು ಇದೊಂದೆ. ಇದರ ಪ್ರತಿ ಲೇಖನಗಳೂ ವಾಚನೀಯವೂ ಉಪಯುಕ್ತವೂ ಆಗಿರುವುದೆಂಬುವದರಲ್ಲಿ ಸಂಶಯವಿಲ್ಲ.

ತುಳುನಾಡ್ ಬೇಂಕ್
ಆಫ್ ಸಪ್ಲೈಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	Rs. 1,00,000
Subscribed & Paid up Capital	....	Rs. 31,340
Reserves & other Funds	...	Rs. 22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ. ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK
OF SUPPLY AGENCY LIMITED.

ಪ್ರಕಟಣೆ.

ಉಡುಪಿ ಮುನಿಸಿಪಾಲಿಟಿಯೊಳಗಿರುವ ಮಾರ್ಕೇಟು ಮ ಗಾಡಿ ಚೌಕಗಳಲ್ಲಿ ಮತ್ತು ವಧಾಗೃಹದಲ್ಲಿ (Slaughter house) 1940-1941ನೇ ವರ್ಷಗಳಲ್ಲಿ ವರಿ ವಸೂಲು ಮಾಡುವ ಸ್ವತಂತ್ರವನ್ನು ತಾ. 28-2-40ನೇ ಬುಧವಾರ ಪೂರ್ವಾಹ್ನ ಘಂಟೆ 11ಕ್ಕೆ ಉಡುಪಿಯಲ್ಲಿ ಉಡುಪಿ ಮುನಿಸಿಪಲ್ ಆಫೀಸಿನಲ್ಲಿ ಉಡುಪಿ ಮುನಿಸಿಪಲ್ ಕಮಿಶನರರವರಿಂದ ಯಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಟವಾಗಿ ಏಲಂ ಮಾಡಲ್ಪಡುವುದು. ಖಾಯಸ್ ಉಳ್ಳವರು ಏಲಂಗೆ ನಿಲ್ಲಬಹುದು.

ಏಲಂನ ಶರ್ತಗಳನ್ನು ಮ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನಿಸಿಪಲ್ ಆಫೀಸಿನಲ್ಲಿ ಬಂದು ತಿಳಕೊಳ್ಳಬಹುದು.

B. Suryanarayana Rao, M.A.
ಕಮಿಶನರ್, ಉಡುಪಿ ಮುನಿಸಿಪಾಲಿಟಿ.

ಮುನಿಸಿಪಲ್ ಆಫೀಸ್, ಉಡುಪಿ.
ತಾರೀಕು: 29-1-1940

THE ASIAN ASSURANCE COMPANY, LIMITED.

ASIAN BUILDINGS — — BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,45,40,501	9,24,965	24,50,234
1935	2,52,08,418	18,39,296	42,98,820
1938	3,61,56,764	22,54,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar Or Sri J. A. PUTRAN,

„ M Shivarama Rao, Organizer, Puttur. Branch Manager, MANGALORE.

ಸೀರೆಗಳು ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance*

CANARA AUTOMOBILES — — — — — MANGALORE

THE

VIJAYA BANK LTD.,

MANGALORE.

ದಿ ವಿಜಯಾ ಬೇಂಕ್ ಲಿಮಿಟೆಡ್,

ಮಂಗಳೂರು.

ಸ್ವಜಾತಿ ಗೃಹಸ್ಥರಲ್ಲಿ ವಿನಂತಿ

ಈ ಬೇಂಕು 1931ನೇ ಇಸವಿಯಲ್ಲಿ ಬಂಟರ ಯಾನೆ ನಾಡವ ಸಮಾಜದ ಕೆಲವು ಮಂದಿ ಮುಖಂಡರ ಪ್ರಯತ್ನದಿಂದ ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟು, ಈಗ ಅದರ ಶಾಖೆಗಳು, ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳದಲ್ಲಿ ತೆರೆಯಲ್ಪಟ್ಟಿವೆ ಬೇಂಕು ದಿನೇ ದಿನೇ ಸ್ಥಿರವಾದ ಅಭಿವೃದ್ಧಿ ಹೊಂದಿ ಜನವಿಶ್ವಾಸಕ್ಕೆ ಪಾತ್ರವಾಗಿದೆ ಸದ್ರಿ ಬೇಂಕಿನ ಪಾಲುದಾರರಿಗೆ ಹೋದ ವರ್ಷ ಶೇಕಡಾ 7ರಷ್ಟು ಡಿವಿಡೆಂಡ್ ಹಂಚಲ್ಪಟ್ಟಿದೆ

ಬೇಂಕಿನ ಕಾರ್ಯಕ್ಷೇತ್ರವನ್ನು ಇನ್ನಷ್ಟು ವ್ಯಾಪನೆಗೊಳಿಸಿ ಅದನ್ನು ಹೆಚ್ಚಿಚ್ಚಾಗಿ ಜನತೆಗೆ, ವಿಶೇಷವಾಗಿ ಕೃಷಿಕರಿಗೆ ಉಪಯೋಗಕರವಾಗುವಂತೆ ಮಾಡಬೇಕೆಂದು ನಮ್ಮೆಲ್ಲರ ಪ್ರಾಮುಖ್ಯ ಉದ್ದೇಶವಾಗಿರುತ್ತದೆ. ಅದಕ್ಕಾಗಿ ಅದರ ಪಾಲುಗಳನ್ನು ಬಂಟರ ಯಾನೆ ನಾಡವ ಸಮಾಜದ ಗೃಹಸ್ಥರು, ಇನ್ನೂ ಹೆಚ್ಚಾಗಿ ಪಡೆದು ಪ್ರೋತ್ಸಾಹವೀಯುವುದು ಅಗತ್ಯವಾಗಿದೆ. ಬೇಂಕಿನ ಸೆಕ್ರೆಟರಿಗಳಾಗಿದ್ದ ಶ್ರೀ. ಕೆ ಗೋಪಾಲಕೃಷ್ಣ ಶೆಟ್ರು 4 ತಿಂಗಳ ಮಟ್ಟಿಗೆ ಪಾಲುಗಳನ್ನು ಹೊಸತಾಗಿ ಸಂಗ್ರಹಿಸುವ ಕೆಲಸಕ್ಕೇನೇ ನಿಯುಕ್ತರಾಗಿದ್ದಾರೆ. ಅವರು ತನ್ನ ಕೆಲಸವನ್ನು ಇಷ್ಟರಲ್ಲೇ ಆರಂಭಿಸಿ ಕೆಲವು ಕಡೆಗಳಲ್ಲಿ ಸಂಚರಿಸಿ, ಉದಾರ ಪ್ರೋತ್ಸಾಹ ಪಡೆದಿರುತ್ತಾರೆ. ಜಿಲ್ಲೆಯ ಉಳಿದ ಭಾಗಗಳಲ್ಲಿಯೂ ಜಿಲ್ಲೆಯ ಹೊರಗೂ ಅವರು ಸಂಚರಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಆದುದರಿಂದ ಸ್ವಜಾತಿ ಗೃಹಸ್ಥರೆಲ್ಲರೂ ಸಮಾಜದ ಒಂದೇ ಒಂದು ಬೇಂಕಿಂಗ್ ಸಂಸ್ಥೆಯಾದ ವಿಜಯಬೇಂಕಿನ ಪಾಲುಗಳನ್ನು ಹೆಚ್ಚೆಚ್ಚಾಗಿ ತೆಗೆದುಕೊಂಡು ಉದಾರಾಶ್ರಯವಿತ್ತು ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ

Mangalore, 26-1-'40

(*Signed by*) B Manjaya Hegde.
Chairman of the Board of Directors.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂ. ಆರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ (ಅಂಚೆವೆಚ್ಚ 0 0-6 ಪ್ರತ್ಯೇಕ)

ರೂ 1 8 0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವದು, (ಅಂಚೆವೆಚ್ಚ ಪ್ರತ್ಯೇಕ)

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಪ್ರತಿಗಳಿಗೆ ಬರೆಯಿರಿ:—

ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸ್ವಪ್ನದೋಷ, ಶಕ್ತಿಹೀನತೆ ಮೊದಲಾದ ಅನೇಕ ಕೆಟ್ಟ ಮತ್ತು ಗುಪ್ತರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ

"ಸೆಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ಉಂಟಾಗುತ್ತದೆ

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ

ಕಿಮ್ಮತ್ತು ರೂ. 3-0-0 ಡಬ್ಬಿ 0-8-0

ಸೋರತ್ ಫಾರ್ಮೆಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Null Bazar Duncan Road
BOMBAY 4

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ ರಕ್ತ ವೃದ್ಧಿಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ

ಬ್ರಾಂಚ್:—ರಥಬೀದಿ ಮಂಗಳೂರು

ಕೋಪ್ರಾನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ

ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಒಂದು ವಾರದಿ ನಿಲ್ಲಿಸಿ ಗಟ್ಟಿ ಮಾಡುವದು ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ. (ವಾಲಕರ —ಮಿಗನ್ನಾ ಆಪ್ ಇಂಡಿ ಕಂಪೆನಿ ಮುಂಬಯಿ.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಮೂಲವ್ಯಾಧಿ

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಆರ್ಶಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಾಧಿಸುವ ಹಳೆಯ ಅಥವಾ ಹೊಸ ತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲ ವ್ಯಾಧಿಯು 'ಆರ್ಶಮಾರಾ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತ ವಾಗಿ ಗುಣಹೊಂದುವುದು. ನೋವು ಉರಿಸಾಟ, ತುರಿಯುವಿಕೆ, ಕೀವು, ರಕ್ತಸ್ರಾವವಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಒಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿ ಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಇದನ್ನು ಶಿಫಾ ರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲ ಗಾರರ ಹಿತವು ಸಹಾ ನಮ್ಮ ಚಿಂತನೆಯಾಗಿರುವುದು.

M. R. Punja,　　　ಯಂ. ಆರ್. ಪೂಂಜ,
President & Manager,　　　ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರ ವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮಕೈಗೆಸೇರುವುದು ಸೀಸೆ1ಕ್ಕೆ12ಆಣೆ, ಟ ಖ.೯ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶ ವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿ ಯಾಗಿ ತಿರುಗಿ ಹೊಂದುವಳು. **ಸುಖಸೇವನ:**ಸುಖಸೇವನದಿಂದಮಧುರಮನೋ ಹರವಾದಈರಸಾಯನವುಬಾಣಂತಿಯರಅರುಚಿ,ಅಗ್ನಿಮಾಂದ್ಯ,ನಿಧ್ರಾನಾಶವೊದ ಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆ ಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS!　　　DAIMONDS!

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING!　　**ವಜ್ರಗಳು**　　BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪ ಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತು ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆವಶ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್‌ಸಿಲ್, ಜವಾಹರೆ ಬೀಜ, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.
Approved firm by the Govt. of Mysore,　　Certified by the Agent of the Govt. of India in Ceylon

---

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇತ್ತರ ಏರಿಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ. — ಬೊಂಬಾಯಿ, ಮದ್ರಾಸು, ಕಲ್ಕತ್ತ.

SALE !　SALE !　SALE !



ಮುಂಚಿನ ಕ್ರಯ ರೂ., 10
ಈಗಿನ ಕ್ರಯ ರೂ. 3-12-0.

Swiss Lever Wrist Watch

ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನಮೂನೆ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಟ ಸಾಮಾನುಗಳಿಂದ ತಯಾರಿಸ ಲ್ಪಟ್ಟು ನೋಡುವುದಕ್ಕೂ ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳುವದಕ್ಕೂ ಬಹು ಅಂದವಾಗಿವೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುವದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಮಾರಿಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ರೈಲ್ವೆ ಉದ್ಯೋಗಸ್ಥರೂ, ದೊಡ್ಡ ಆಫೀಸರುಗಳೂ, ಬಹಿವಾಟುದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ಸಂತೋಷ ಪ್ರಯತ್ನಪಡುವರು.

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ 3-12-0

ROYAL CO, 19 Beat SOWCARPET G. T. MADRAS,
ರೋಯಲ್ ಕಂಪನಿ, ಸಾಹುಕಾರ ಪೇಟೆ. ಜಿ. ಟಿ. ಮದರಾಸು

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA"

red No M. 3618 29-2-1940.

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮಾಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ ಮಾಧವ, ಎಂ.ಎ, ಎಫ್ ಆರ್.ಎ.ಎಸ್., ಎ.ಐ.ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅವರ್ಕ್ಯುಲರಿಯವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆದಾಯದ ಮಟ್ಟ, ಬಡ್ಡಿಯ ಫಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗಿರುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ....ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗಾಗಿ . ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದುಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H. Venkataramiah, *Divisional Superintendent* } or { R Purniah *Ag General Manager*

The Asiatic Govt. Security Life Assu. Co. Ltd.,
Asiatic Building, BANGALORE CITY

ಝಂಡು ಮಲೇರಿಯಾಮಿಕ್ಸ್ಚರ್

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ ಆಣೆ 0—13—0 ಮಾತ್ರ.

ಸ್ಥಳೀಯ ಏಜಂಟರು:—ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:—ವಿ. ವಿ. ಶೆಣೈ, ಕೆಮಿಸ್ಟ್ಸ್.

ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೆ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಬರೆಯಿರಿ:—

ದಾಮೋದರ್ ಎಂಡ್ ಕೊ,

ZANDU 78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು.

DAMODER & CO.,
78 China Bazaar Road, G T MADRAS

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:— 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸರ್ವಾಂಗ ಭದ್ರತೆಯ ಹಾಗೂ ಲಾಭ ವೃದ್ಧಿಯ ಮೇಲ್ಮೆಯುಳ್ಳಿರುವ ಜೀವ ವಿಮಾ ಸಂಘಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ.—

ಶಾಖಾ ಕಾರ್ಯದರ್ಶಿ,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟು ಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ, ಪಿತ್ತಜ್ವರ, ನ್ಯುಮೋನಿಯು, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹು ಮೂತ್ರ ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವವರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತಶುದ್ಧಿಗೆ ನಮ್ಮ ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರ್ರೈಡ್ – ಒಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹೆವನನ್" ಎಂಬ ಹೆಮೊರ್ರೈಡ್ ಒಯಿಂಟ್ ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4-0 ವಿ ಪಿ ಬೇರೆ

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3–4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳ ಕೆಲಸಗಳಿಗೆ ಸಲೀಸಾಗಿ ಸಾಗಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ, ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1 0-0 ವಿ. ಪಿ ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು

The Eclipse Distributing Agency,

Dahanu Road, B. B & C. I. Ry BOMBAY PRESIDENCY.

ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ ಎಲ್ ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ. 3—4—0
6 ತಿಂಗಳಿಗೆ – ರೂ. 1–12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨೫

ಉಡುಪಿ, ಗುರುವಾರ, ೨೯—೨—೧೯೪೦.
UDIPI, THURSDAY, 29-2-1940.

VOL. 19
No. 25

ಸಮಾಚಾರ ಸಂಗ್ರಹ

ಶಾಲೆಗಳಲ್ಲಿ ಹಿಂದಿಯು ನಿರ್ಬಂಧವಿಲ್ಲ
ಬೇಕಾದವರು ಕಲಿಯ ಬಹುದು; ಮದ್ರಾಸು ಸರಕಾರದ ಪ್ರಕಟಣೆ

ಹಿಂದಿಯನ್ನು ಸೆಕೆಂಡರೀ ಶಾಲೆಗಳ ಮೊದಲ ಮೂರು ಫಾರ್ಮುಗಳಲ್ಲಿ ಖಡ್ಡಾಯವಾಗಿ ಕಲಿಯಬೇಕೆಂದು ಕಾಂಗ್ರೆಸ್ಸು ಸರಕಾರವು ವಿಧಿಸಿದುದಕ್ಕೆ ವಿರೋಧವಾಗಿ ಸತ್ಯಾಗ್ರಹ ಚಳವಳವು ವಿಶೇಷವಾಗಿ ಮದ್ರಾಸಿನಲ್ಲಿ ತಮಿಳರಿಂದ ನಡೆಯುತ್ತಿದ್ದಿತಷ್ಟೆ. ಅಂತಹ ಅಸಂತೃಪ್ತಿಯನ್ನೂ ವಿರೋಧವನ್ನೂ ನಿವಾರಿಸುವುದಕ್ಕಾಗಿ ಈಗ ಮದ್ರಾಸು ಸರಕಾರವು ಹೊಸ ಪ್ರಕಟಣೆಯನ್ನು ಹೊರಡಿಸಿದೆ. ಅದರ ಪ್ರಕಾರ ಹಿಂದಿಯು ಪ್ರಥಮ ಮೂರು ಫಾರ್ಮುಗಳಲ್ಲಿ ಬೇಕೆಂಬವರಿಗೆ ಮಾತ್ರ ಕಲಿಸಲಾಗುವುದು. ಎಲ್ಲರೂ ಕಲಿಯಲೇಬೇಕೆಂಬ ನಿರ್ಬಂಧವಿಲ್ಲ. ಅಂತಹ ಕ್ರಮವನ್ನು ಹೈಸ್ಕೂಲ್ ಫಾರ್ಮುಗಳಲ್ಲಿಯೂ ಮುಂದುವರಿಸಿ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಐಚ್ಛಿಕ (ಆಪ್ಷನಲ್) ವಿಷಯಗಳಲ್ಲಿ ಒಂದಾಗಿ ಇರಿಸಲಾಗುವಂತೆ ಈಗ ಹಿಂದೀ ಶಿಕ್ಷಣ ಪ್ರಾರಂಭವಾದೆಡೆಗಳಲ್ಲಿ ಪ್ರೋತ್ಸಾಹಕೊಡಲಾಗುವುದು. ಈ ರೀತಿ ಒಂದನೇ ಫಾರ್ಮಿನಿಂದ ಆರನೇ ಫಾರ್ಮಿನ ವರೆಗೆ ಹಿಂದಿಯನ್ನು ಇಷ್ಟಾನುಸಾರ ಕಲಿಯುವಾಗ ಅದನ್ನು ಕಲಿಯುವ ಮಕ್ಕಳ ಸಂಖ್ಯೆಯು ತಕ್ಕಷ್ಟು ಇದ್ದರೆ ಆ ಸಂಬಂಧ ಶಾಲೆಗೆ ಗ್ರಾಂಟು ದೊರಕುವುದು.

ಮೈಸೂರಲ್ಲಿ ಸತ್ಯಾಗ್ರಹ ಚಳವಳ ಕೈಗೊಳ್ಳಲಾಗುವುದಿಲ್ಲ. ಸ್ಟೇಟ್ ಕಾಂಗ್ರೆಸ್ಸಿನ ನಿರ್ಧಾರ.

ಮೈಸೂರು ಕಾಂಗ್ರೆಸು ವರ್ಕಿಂಗ್ ಕಮಿಟಿಯು ತನ್ನ ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸುವುದಿಲ್ಲವೆಂದು ನಿರ್ಧರಿಸಿದೆ. ಈ ಧೋರಣೆಯು ಯುಕ್ತವಾದುದೆಂದು ಹಲವು ಕಡೆಗಳಿಂದ ಅಭಿನಂದನೆಯು ದೊರಕಿದೆ.

ವಿದ್ಯಾರ್ಥಿಶಿಕ್ಷಣದ ಕುರಿತು ಅಂಧಾಭಿಮಾನದಿಂದ ನಡುಕಬಾರದು. ಒನರೇಬಲ್ ಡಾ| ಎ ಆರ್. ಮೆನೋನ್‌ರವರ ಎಚ್ಚರಿಕೆಯ ಮಾತು.

ಕೊಚ್ಚಿ ಸಂಸ್ಥಾನದ ಗ್ರಾಮಾಭ್ಯುದಯ ಖಾತೆಯ ಮಂತ್ರಿಗಳಾದ ಒನರೇಬಲ್ ಡಾ| ಎ. ಆರ್. ಮೆನೋನ್‌ರವರು ಗ್ರಾಮೋದ್ಯಮ ಶಾಲೆಯೊಂದರ ವರ್ಧಂತಿ ಸಮಾರಂಭದ ಅಧ್ಯಕ್ಷ ಭಾಷಣವನ್ನೀಯುತ್ತ ಹೀಗೆಂದಿರುವರು. ಔದ್ಯೋಗಿಕ ಶಾಲೆಗಳಿಗಾಗಿ ಸರಕಾರವು ಹೇರಳ ಹಣವನ್ನು ವಿನಿಯೋಗಿಸಿಯೂ ಅವುಗಳು ಫಲಕಾರಿಯಾಗಲಿಲ್ಲ. ಅಂತಹ ಶಾಲೆಗಾಗಿ ಮಕ್ಕಳನ್ನು ಕಳುಹಿಸುವ ವಿಷಯದಲ್ಲಿ ಹೆತ್ತವರಿಗೆ ಉತ್ಸಾಹವಿಲ್ಲ. ಅವುಗಳಲ್ಲಿ ಕಲಿತ ಮಕ್ಕಳು ಆ ಉದ್ಯೋಗವನ್ನು ಮುಂದುವರಿಸುವುದರಲ್ಲಿ ಉತ್ಸಾಹ ತೋರಲಿಲ್ಲ. ವಾರ್ಧಾ ಯೋಜನೆಯ ರೀತಿ-ನೀತಿಗಳೆಂತೂ ಅಸಾಧ್ಯವೆಂದೇ ತೋರುತ್ತವೆ. ಈಗಿನ ಶಿಕ್ಷಣದ ಕುಂದುಕೊರತೆಗಳನ್ನು ಅದು ನಿವಾರಿಸೀತೇ ಎಂಬುದನ್ನು ಪ್ರತಿಯೊಬ್ಬನೂ ಸ್ವತಂತ್ರವಾಗಿ ವಿಚಾರಿಸಿ ನಿರ್ಧರಿಸಬೇಕಲ್ಲದೆ ಇಂದಿನ ಮಹಾವ್ಯಕ್ತಿಯೊಬ್ಬರುಹೇಳಿರುವರೆಂಬ ಅಂಧಾಭಿಮಾನದಿಂದ ಮಡುಕಬಾರದೆಂದು ವಿನಂತಿಸಿಕೊಂಡಿರುವರು.

ಗಾಂಧೀ ಸೇವಾಸಂಘ ಸಮ್ಮೇಳನದಲ್ಲಿ ಕಪ್ಪು ನಿಶಾನಿಗಳ ಪ್ರದರ್ಶನ. ಸ್ವಯಂ ಸೇವಕರಿಗೆ ಚೂರಿಯ ಇರಿತ!

ಮಾಲಿಕಂದದಲ್ಲಿ ತಾ ೨೦ರಿಂದ ಗಾಂಧೀ ಸೇವಾಸಂಘ ಸಮ್ಮೇಳನವು ಗಾಂಧೀಜಿಗಳ ಸಮಕ್ಷಮದಲ್ಲಿ ಜರಗತೊಡಗಿರುವುದಷ್ಟೆ. ಅಲ್ಲಿ ಗಾಂಧೀಜಿಗಳ ದಿವ್ಯ ಹಸ್ತದಿಂದಲೇ ಗ್ರಾಮ ಕೈಗಾರಿಕೆಗಳ ಪ್ರದರ್ಶನವೂ ತೆರೆಯಲ್ಪಟ್ಟಿತು. ಆ ಪ್ರದರ್ಶನ ಮುಂದಿರದ ಹೊರಗೆ ಒರಿಸ್ಸಾದ ಮಂತ್ರಿಗಳಾಗಿದ್ದ ಶ್ರೀ ನಿತ್ಯಾನಂದಕಾನುಂಗರು ಮಹಾಸಭೆಯೊಂದರಲ್ಲಿ ಭಾಷಣಮಾಡುತ್ತಿದ್ದಾಗ ಕರಿನಿಶಾನೆಗಳನ್ನೂ ಗಾಂಧೀ ವಾದ ವಿರೋಧ ಸೂಚಕ ಬರಹದ ಹಲಿಗೆಗಳನ್ನೂ ಎತ್ತಿ ಹಿಡಕೊಂಡು ಗಲಭೆ ಮಾಡುವ ತಂಡ ಬಂತು. ಗಲಭೆಯೆದ್ದಿತು. ಕೈಕೈ ಯಾಯಿತು. ಇಬ್ಬರು ಸ್ವಯಂಸೇವಕರಿಗೂ ಇತರ ಆರ್‍ವರಿಗೂ ಚೂರಿಯು ಇರಿತವಾಯಿತು. ಅಷ್ಟರಲ್ಲಿ ಪೋಲೀಸರೂ ಸ್ವಯಂ ಸೇವಕರೂ ಶಾಂತಿ ಸ್ಥಾಪನೆ ಮಾಡಿದರು. ಕಾನೂನಿಗೆ ವಿರುದ್ಧವಾದ ಉದ್ದಗಲದ ಚೂರಿಯನ್ನು ಹಿಡಿದುಕೊಂಡಿದ್ದ ಕೆಂಪಂಗಿಯ ಮುದಿಯನೊಬ್ಬನು ಪೋಲೀಸರ ಕೈಗೆ ಸಿಕ್ಕಿಬಿದ್ದನು. ಗಾಯಗೊಂಡವರು ಸೇವಾಸಂಘದ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಒಯ್ಯಲ್ಪಟ್ಟರು. ಸಾಯಂಕಾಲ ಗಾಂಧೀಜಿಗಳು ಅಲ್ಲಿಗೆ ಹೋಗಿ 'ಸತ್ಯಕ್ಕಾಗಿ ಆತ್ಮಬಲಿಯನ್ನಿತ್ತವರೆಲ್ಲಿ?' ಎನ್ನುತ್ತ ಅವರ ಯೋಗಕ್ಷೇಮವನ್ನು ವಿಚಾರಿಸಿದರು.

ಕೆನಾಡದಲ್ಲಿ ಯುದ್ಧ ಸಹಾಯದ ಸಿದ್ಧತೆ

ಬ್ರಿಟನರ ಸಹಾಯಕ್ಕೆ ಅವಶ್ಯವಿದ್ದಾಗ ಕಳುಹಿಸಿಕೊಡಲು ಒಂದು ವಿಮಾನ ಪಡೆಯು ಈ ಮೊದಲೇ ಕೆನಾಡದಲ್ಲಿ ಶಿಕ್ಷಣಗೊಂಡು ಸಿದ್ಧವಾಗಿದೆ. ಎರಡನೆಯವರ ಶಿಕ್ಷಣವು ಭರದಿಂದ ಮುಕ್ತಾಯವಾಗುತ್ತಿದೆ. ಮೂರನೆಯದೊಂದಕ್ಕೆ ಆರಂಭವಾಗಿದೆ. ಕೆನಾಡದಲ್ಲೇ ಸಿದ್ಧವಾಗುವ ಐನೂರು ವಿಮಾನಗಳನ್ನು ಈ ಪಡೆಗಳ ವಿನಿಯೋಗಕ್ಕಾಗಿ ಕೊಂಡು ಕೊಳ್ಳಲಾಗುವುದು. ೧೯೪೦-೪೧ನೆಯ ಇಸವಿಯಲ್ಲಿ ಯುದ್ಧದ ವೆಚ್ಚಕ್ಕಾಗಿ ಐನೂರು ಮಿಲಿಯ ಡಾಲರುಗಳನ್ನು ಬಜೆಟಿನಲ್ಲಿ ಎಡೆಗೊಟ್ಟು ಇಡಲಾಗಿದೆ ಈಗ ಸರ್ವ ಸನ್ನಾಹಗೊಂಡ ಎಪ್ಪತ್ತುಸಾವಿರ ಸೈನಿಕರೂ ಒಂಭತ್ತು ಸಾವಿರ ವೈಮಾನಿಕರೂ ಆರುಸಾವಿರ ನೌಕಾ ಪಡೆಯವರೂ ಇರುವರು. ಅವಶ್ಯಬಿದ್ದರೆ ಈ ಸಂಖ್ಯೆಗಳನ್ನು ದಶಸಹಸ್ರಗಟ್ಟಳೆಯಲ್ಲೇ ಏರಿಸುವ ಏರ್ಪಾಡು ಇದೆ ಎಂದು ಮುಂಚಾಗಿ ಕೆನಾಡದ ಪ್ರಧಾನ ಮಂತ್ರಿಗಳಾದ ಮೆಕೆಂಜೀಕಿಂಗ್‌ರವರು ತನ್ನ ಆಕಾಶವಾಣಿ ಭಾಷಣದಲ್ಲಿ ಸಾರಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ತಾ. ೨೭ರಂದು ಪಾಟ್ನಾದಲ್ಲಿ ಇದಕ್ಕೆ ದಯಮಾಡಿಸಬೇಕೆಂದು ರಾಜಾಜಿಯವರಿಗೆ ಸ್ಪೆಶ್ಯಲ್ ಹೇಳಿಕೆ ಬಂದಿದೆಯಂತೆ. ತಾ. ೨೫ನೆಯ ದಿನ ಮದ್ರಾಸಿನಿಂದ ಅವರು ಪಾಟ್ನಾಕ್ಕೆ ಹೊರಡುವರು. ಸೇಟ್ ಜಮ್ನಾಲಾಲ್ ಬಜಾಜಿ ಮತ್ತು ರಾಜೇಂದ್ರ ಪ್ರಸಾದರವರು ಸಭೆಗೆ ಹೋಗಲಿರುವರೆಂದೂ ಶ್ರೀಮತಿ ಸರೋಜಿನಿ ನಾಯ್ಡುರವರು ತನಗೆ ಬೊಂಬಾಯಿಯಲ್ಲಿ ಮೊದಲೇ ನಿಶ್ಚಯವಾಗಿದ್ದ ಕಾರ್ಯವಾಹ ವಿದ್ದುದರಿಂದ ಪಾಟ್ನಾದ ಸಭೆಗೆ ಬರಲಾಗುವುದಿಲ್ಲವೆಂದು ಬರೆದಿರುವರೆಂದೂ ಸುದ್ದಿ.

ದುಡ್ಡುಕೊಟ್ಟರೆ ಆಸ್ಪತ್ರೆಯಲ್ಲಿ ಉಳಕೊಳ್ಳಲಾಗುವ ವ್ಯವಸ್ಥೆ

ಆಸ್ಪತ್ರೆಗಳಲ್ಲಿ ಸ್ಪೆಶ್ಯಲ್ ವಾರ್ಡುಗಳಲ್ಲಿ ಉಳಕೊಂಡು ಚಿಕಿತ್ಸೆ ಹೊಂದಲು ಆ ವೆಚ್ಚವನ್ನು ತಾಳಲಾರದ ಆದರೆ ಸಾಧಾರಣ ದರವನ್ನು ತೆರಲಾಪ ಮಧ್ಯಮ ವರ್ಗದವರ ಚಿಕಿತ್ಸೆಯ ಸೌಕರ್ಯಕ್ಕಾಗಿ ಮದ್ರಾಸು ಸರಕಾರವು ಆಸ್ಪತ್ರೆಗಳಲ್ಲಿ ಮೂರನೆ (ಸಿ) ತರಗತಿಯ ವಾರ್ಡುಗಳನ್ನು ತೆರೆಯಲು ಅಪ್ಪಣೆಯಿತ್ತಿದೆ. ಹದಿಮೂರು ಜಿಲ್ಲೆಗಳ ಜಿಲ್ಲಾ ಆಸ್ಪತ್ರೆಗಳಲ್ಲಿಯೂ ಮದ್ರಾಸಿನ ಕಣ್ಣಾಸ್ಪತ್ರೆ ಮುಂತಾದ ಕೆಲವು ಆಸ್ಪತ್ರೆಗಳಲ್ಲಿಯೂ ಇಂತಹ ವ್ಯವಸ್ಥೆಯು ಮಾಡಲಾಗುತ್ತದೆ.

FOR LIFE INSURANCE

CONSULT

TROPICAL

Chairman, SJT. SUBASHCHANDRA BOSE.

Founder Directors:
PANDIT MOTILAL NEHRU,
Dr. M. A. ANSARI,
HAKIM AJMAL KHAN,
Sri. SRINIVASA IYENGER.

POLICIES ISSUED EXCEED

THREE CRORES

For Agency Apply to:—

M. R. PRABHU, B.A., B.COM., C.A.I.I.B.,
Inspector of Agencies,
The Tropical Ins., Co., Ltd.,
KASARGODE,
SOUTH KANARA

OR

M. SUNDERAM SHETTY,
Branch Manager,
The Tropical Ins. Co. Ltd
HAMPANKATTA,
MANGALORE, S. K.

ಕರ್ನಾಟಕ ಏಕೀಕರಣವೂ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳೂ

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಅಲ್ಪ ಸಂಖ್ಯಾಕ ಪಂಗಡಗಳ ಹಕ್ಕು ಬಾಧ್ಯತೆಗಳ ಮತ್ತು ವಿಶೇಷ ರಕ್ಷಣೆಗಳ ಸಂಬಂಧವಾದ ಒಂದು ಗೀಳು ಇಂಡಿಯಾ ದೇಶದಲ್ಲಿ ಇತ್ತೀಚೆಗೆ ಎಲ್ಲೆಲ್ಲಿಯೂ ಪ್ರಬಲವಾಗಿ ಪಂಗಡ ಪಂಗಡಗಳೊಳಗಣ ಸೌಹಾರ್ದವು ಕೊಲಿಸಿ ಗಟ್ಟಿ ಹೋಗತೊಡಗಿದ ಇದಕ್ಕೆ ಬುದ್ಧಿ ಕುಶಲತೆಯಾಗಲಿ ಮಹಾಜನಾಭಿಪ್ರಾಯದ ಬೆಂಬಲವಾಗಲೀ ಇಲ್ಲದವರಾಗಿ ಅನ್ಯಥಾ ಮುಂದೆ ಬರಲು ಶಕ್ತರಲ್ಲದ ಮುಖಂಡ ನಾಮಧಾರಿಗಳ ಕುಟಿಲ ನೀತಿಯೇ ಕಾರಣವೆಂದು ಹೇಳಬಹುದು. ಸ್ವದೇಶೀಯರೇ ಅಧಿಕಾರ ರೂಢರಾಗಿರುವ ದೇಶಗಳಲ್ಲಿ ಇಂತಹ ಭಾವನೆಗಳು ಹುಟ್ಟಲು ಪ್ರಾಯಶಃ ಅವಕಾಶವೇ ಇರುವುದಿಲ್ಲ ಯಾವಲ್ಲಿ ಸ್ಥಾಯಿಯಾದವರಲ್ಲದ ಪರಕೀಯರು ಒಂದು ಪಂಗಡದವರು ಪ್ರಬಲವಾಗಿರುವರೋ, ಮತ್ತು ಅವರ ಬಾಲ ಹಿಡಿದ ಪಕ್ಷದಲ್ಲಿ ತಮ್ಮ ಕಾರ್ಯಸಿದ್ಧಿಯಾಗಬಹುದೆಂಬ ನಿರೀಕ್ಷಣೆಯಿರುವುದೋ ಅಲ್ಲಿ ಮಾತ್ರವೇ ಇಂತಹ ಜನರು ಗೊಂದಲವೆಬ್ಬಿಸಿ, ಪರ್ಯಾಯವಾಗಿಯಾದರೂ ದೇಶಕ್ಕೆ ದ್ರೋಹವನ್ನೂ ಪ್ರಗತಿಗೆ ಆತಂಕವನ್ನೂ ತಂದೊಡ್ಡಲು ಸನ್ನದ್ಧರಾಗುತ್ತಾರೆ. ನಿಷ್ಪಕ್ಷಪಾತವಾಗಿ ವಿವೇಚನೆ ಮಾಡಬಲ್ಲವರಿಗೆ ಈ ತತ್ವವು ತನಗೆ ತಾನಾಗಿ ಹೊಳೆಯದಿರದು. ಪ್ರಕೃತ ರಾಜಕೀಯ ವಾತಾವರಣವನ್ನು ಪರಿಶೀಲಿಸಿ ನೋಡಿದರೆ,ಬ್ರಿಟಿಷ್ ದೊರೆತನದವರ ಔದಾರ್ಯದಿಂದ ಕ್ಷಿಪ್ರದೊಳಗಾಗಿ ಸ್ವಾತಂತ್ರ್ಯದ ಬಹಳ ದೊಡ್ಡ ಭಾಗವು ಭಾರತೀಯರಿಗೆ ಲಭಿಸುವಂತಿದೆಯೆಂದು ತೋರುತ್ತದೆ. ಆಗ ಪುರಾಣ ಪ್ರಸಿದ್ಧವಾದ ಈ ನಮ್ಮ ಮಾತೃಭೂಮಿಯು ಭಾಷಾನುಗುಣವಾದ ಸ್ವತಂತ್ರ ನಾಡುಗಳಾಗಿ ಏರ್ಪಡುವುದೂ, ಆ ಆ ದೇಶದ ಜನರೇ ಅದರ ಆಡಳಿತಗಾರರಾಗುವುದೂ ಖಂಡಿತ, ಇಂತಹ ಸನ್ನಿವೇಶದಲ್ಲಿ ಯಾವುದೊಂದು ಅಲ್ಪಪಂಗಡದವರು ಬಹುಸಂಖ್ಯಾಕರಿಗೆ ಹಾನಿಕರವಾದ ಅಥವಾ ಆಗಬಹುದಾದಂಥ ವಿಶೇಷ ಸ್ವಾತಂತ್ರ್ಯಗಳನ್ನು ಅನುಭವಿಸಲು ಸಾಧ್ಯವಾಗಲಾರದೆಂಬುದು ಸ್ಪಷ್ಟವು ಹೀಗಾದುದರಿಂದ ಕಾಲಸ್ಥಿತಿಯನ್ನು ತಕ್ಕಂತೆ ಗಮನಿಸಿ, ಪರದೇಶಗಳಿಂದ ಕನ್ನಡ ನಾಡಿಗೆ ಬಂದು ಸ್ಥಾಯಿಗಳಾಗಿ ನಿಂತಿರುವ ಅನ್ಯ ಭಾಷೆಗಳನ್ನಾಡುವ ಪಂಗಡಗಳ ಜನರು ತಮ್ಮ ತಮ್ಮ ಮನೆಯಲ್ಲಿ ಯಾವ ಭಾಷೆಯನ್ನು ಆಡಿದರೂ,"ತಾವು ವಿರುದ್ಧ ಹಿತ ಸಂಬಂಧವುಳ್ಳ ಪ್ರತ್ಯೇಕ ಜನವಲ್ಲ ದೇಶಭಾಷೆಯೇ ತಮ್ಮ ಭಾಷೆ, ತಾವೂ ಕನ್ನಡಿಗರೇ, ಕನ್ನಡಿಗರ ಮತ್ತು ಕನ್ನಡ ನಾಡಿನ ಹಿತೋನ್ನತಿಗಳೇ ತಮ್ಮ ಮತ್ತು ತಮ್ಮ ಪಂಗಡದವರ ಹಿತೋನ್ನತಿಗಳೆಂದು ದೃಢವಾಗಿ ನಂಬಿ, ಅದನ್ನು ಅನುಷ್ಠಾನದಲ್ಲಿಟ್ಟುಕೊಂಡರಾದರೆ, ಅದರಿಂದ ಆ ಆ ಪಂಗಡದವರಿಗೂ ಒಟ್ಟಿನಲ್ಲಿ ದೇಶಕ್ಕೂ ತುಂಬ ಪ್ರಯೋಜನವಾಗುವಂತಿದೆಯೆಂದು ನನ್ನಲ್ಲಿ ಸಂಪೂರ್ಣವಾದ ವಿಶ್ವಾಸವಿದೆ.

ಪುಣ್ಯವಶಾತ್ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೂ ಜನರೊಳಗೆ ಮರಾಠಿ ಕೊಂಕಣಿ ಮಾತನಾಡುವವರು ಪ್ರಾಯಶಃ ಎಲ್ಲರೆಂಬಂತೆಯೂ ಉತ್ತರ ಕನ್ನಡದಲ್ಲಿ ಬಹು ಭಾಗವಾದರೂ ಈ ಉದಾರ ಭಾವನೆಯಿಂದಲೇ ಪ್ರೇರಿತರಾಗಿದ್ದಾರೆಂದು ಉದ್ಘೋಷಿಸಲು ನಾನು ತುಂಬ ಹೆಮ್ಮೆಪಡುತ್ತೇನೆ, ಮತ್ತು ಉಳಿದ ಪಂಗಡಗಳವರು ಕೂಡ ಈ ತತ್ವವನ್ನು ತಕ್ಕಂತೆ ಅರಿತುಕೊಂಡು, ಕನ್ನಡ ನಾಡಿನ, ಜನರ ಮತ್ತು ಭಾಷೆಯ ಸರ್ವಾಂಗೀಣ ಉನ್ನತಿಗೆ ತಮ್ಮ ಸಂಪೂರ್ಣವಾದ ಸಂಘಶಕ್ತಿಯನ್ನು ಸಮರ್ಪಿಸಿ ಕೀರ್ತಿಭಾಜನರಾಗುವರೆಂದು ಇದಿರುನೋಡುತ್ತಿದ್ದೇನೆ

ಲೇಖಕರು —
ಶ್ರೀ ಬೆನಗಲ್ ರಾಮರಾವ್,
ಎಂ. ಎ ಎಲ್ ಎಲ್ ಬಿ, ಮಲ್ಲೇಶ್ವರ,
ಬೆಂಗಳೂರು.

ಬೇರೆ ಯಾವ ಜಿಲ್ಲೆಗಳಿಗಿಂತ ಹೆಚ್ಚಾಗಿ, ಕರ್ನಾಟಕ ಏಕೀಕರಣದ ದೆಸೆಯಿಂದ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಿಗೆ ತುಂಬ ಪ್ರಯೋಜನವಾಗುವುದೆಂದು ನನಗೆ ನಿಚ್ಚಳವಾಗಿ ತೋರುತ್ತಿದೆ. ಇವೆರಡೂ ಮೆಚ್ಚಕ್ಕಿಂತ ಆದಾಯ ಕಡಮೆಯಾಗಿರುವ ಜಿಲ್ಲೆಗಳಲ್ಲವೆಂಬುದು ನಿಜ; ಆದರೆ ಒಟ್ಟಿನಲ್ಲಿ ನೋಡಿದರೆ, ಈ ಜಿಲ್ಲೆಗಳು ಉಳಿದ ಜಿಲ್ಲೆಗಳಷ್ಟು ಫಲವತ್ತಾದುವುಗಳೆಂದು ಹೇಳಬರುವಂತಿಲ್ಲ ಮಳೆಯ ಆಧಿಕ್ಯದಿಂದಲೂ ನೆಲದ ಇಳಿಜಾರುಸ್ವಭಾವದಿಂದಲೂ ಆ ಜಿಲ್ಲೆಗಳ ಮಣ್ಣು ನಿಸ್ಸಾರವಾಗಿದೆ. ಆ ಜಿಲ್ಲೆಗಳಲ್ಲಿಯ ನಿವಾಸಿಗಳ ಸತತೋದ್ಯೋಗ ಪ್ರಿಯತೆ ಮತ್ತು ಕಷ್ಟಸಹಿಷ್ಣುತೆಗಳ ದೆಸೆಯಿಂದ ಮಾತ್ರ ಆ ಜಿಲ್ಲೆಗಳು ಇಷ್ಟು ಮಟ್ಟಿನ ಸುಸ್ಥಿತಿಯಲ್ಲಿವೆ ಆದರೆ ಕನ್ನಡ ನಾಡಿನೊಳಗಣ ಬೇರೆ ಯಾವ ಜಿಲ್ಲೆಗಳಲ್ಲಿಯೂ ಇಲ್ಲದ ಎರಡು ವಿಶೇಷಗಳು ಆ ಜಿಲ್ಲೆಗಳಲ್ಲಿವೆ ಆ ಜಿಲ್ಲೆಗಳಿಗೆ ಸಮುದ್ರವು ಪಶ್ಚಿಮದ ಗಡಿಯಾಗಿರುವುದೊಂದು, ವಿಸ್ತಾರವೂ ದಟ್ಟವೂ ಅತ್ಯಮೌಲ್ಯವೂ ಆದ ಅರಣ್ಯ ಮಾಲೆಯು ಪೂರ್ವದ ಗಡಿಯಲ್ಲಿರುವುದು ಎರಡನೆಯದು. ಇವೆರಡೂ ಆ ಜಿಲ್ಲೆಗಳನ್ನು ಭವಿಷ್ಯತ್ಕಾಲದಲ್ಲಿ ಅಭ್ಯುದಯೋನ್ನತಿಗೆ ತರತಕ್ಕ ಅನರ್ಘ್ಯವಾದ ನಿಧಿಗಳಾಗಿವೆ. ಆದರೆ ವಿಪರೀತ ಪರಿಸ್ಥಿತಿಯ ದೆಸೆಯಿಂದ ಇವೆರಡೂ ತಕ್ಕಂತೆ ಉಪಯೋಗಿಸಿಕೊಳ್ಳಲಾಗದೆ, ಆ ಜಿಲ್ಲೆಗಳು ಕ್ರಮಕ್ರಮವಾಗಿ ಹೀನ ದೆಶೆಗೆ ಬರತೊಡಗಿವೆ. ಅಲ್ಲಿನ ವ್ಯಾಪಾರ ಉದ್ಯಮಗಳು ಕಳೆಗೆಟ್ಟಿವೆ; ನಿವಾಸಿಗಳಲ್ಲಿ ವಿದ್ಯಾವಂತರೂ, ಸಮರ್ಥರೂ ಮುಂದೆ ಬರಬೇಕೆಂಬ ಕಾಂಕ್ಷೆಯುಳ್ಳವರೂ ಆದ ಜನರು ತಮ್ಮ ಉತ್ತರಾಭಿವೃದ್ಧಿ ಸಾಧನೆಗಾಗಿ ಬೊಂಬಾಯಿ ಮದ್ರಾಸು ಮುಂತಾದ ಪರಸ್ಥಳಗಳಿಗೆ ಹೋಗಿ ಕೀರ್ತಿಯನ್ನೂ ಧನವನ್ನೂ ಗಳಿಸಿ, ಎಷ್ಟೋ ಸಂಗತಿಗಳಲ್ಲಿ ತಮ್ಮ ಸ್ವದೇಶವನ್ನೂ ಸ್ವಭಾಷೆಯನ್ನೂ ಮರೆತು ಅಲ್ಲಿಯೇ ಶಾಶ್ವತವಾಗಿ ನಿಲ್ಲುತ್ತಲಿದ್ದಾರೆ ಕನ್ನಡ ಜಿಲ್ಲೆಗಳು ಸರ್ವತೋಪರಿ ದರಿದ್ರವಾಗುತ್ತಲಿವೆ. ಇದರಿಂದ ಆ ಜಿಲ್ಲೆಗಳಿಗೆ ಮಾತ್ರವೇ ಅಲ್ಲದೆ ಒಟ್ಟಿನಲ್ಲಿ ಕನ್ನಡನಾಡಿಗೇ ಶಾಶ್ವತವಾದ ಹಾನಿಯಾಗುತ್ತಲಿದೆ ದಕ್ಷಿಣ ಕನ್ನಡವು ಮದ್ರಾಸು ಆಧಿಪತ್ಯಕ್ಕೆ ಮತ್ತು ಉತ್ತರ ಕನ್ನಡವು ಬೊಂಬಾಯಿ ಆಧಿಪತ್ಯಕ್ಕೆ ಬರೀ ಬಾಲದಂತಿವೆಯೇ ವಿನಾ ಅವುಗಳ ಪ್ರಭಾವವು ಆ ಆ ಸರ್ಕಾರಗಳ ಮೇಲೆ ಕಿಂಚಿನ್ಮಾತ್ರವೂ ಬೀಳುತ್ತಿಲ್ಲ

ಈ ಜಿಲ್ಲೆಗಳ ಸಮುದ್ರ ಮುಖವಾದ ವ್ಯಾಪಾರವು ಅಧಿಕಾಧಿಕವಾಗಿ ಬೊಂಬಾಯಿ, ಮುರಗಾಂವು, ಕೊಚ್ಚಿ, ಮದ್ರಾಸ ಮುಂತಾದ ಬಂದರುಗಳಿಗೆ ತಿರುಗಿಸಲ್ಪಡುತ್ತಲಿದೆ. ರೈಲ್ವೆಯ ಸೌಕರ್ಯಗಳು ಜಿಲ್ಲೆಗಳ ಒಳಭಾಗದಲ್ಲಿಲ್ಲದ ದೆಸೆಯಿಂದ ಅರಣ್ಯ ಸಂಪತ್ತು ನಿರರ್ಥಕವಾಗುತ್ತಲಿದೆ ಈಗಿನ ಸ್ಥಿತಿಯೇ ಈ ಮುಂದೆಯೂ ನಡೆದರೂ ಅಥವಾ (ಭಾಷಾವಾರು ಪ್ರಾಂತ್ಯಗಳು ಏರ್ಪಡುವುದು ಖಂಡಿತವಾದುದರಿಂದ) ಈ ಜಿಲ್ಲೆಗಳು ತುಂಡು ತುಂಡಾಗಿ ಮರಾಠಿ ಮತ್ತು ಮಲೆಯಾಳ ಮುಂತಾದ ರಾಷ್ಟ್ರಗಳೊಳಗೆ ಸೇರಿ ಹೋದರೂ, ಈ ಜಿಲ್ಲೆಗಳ ಅಭಿವೃದ್ಧಿಯು ಕುಂಠಿತವಾಗಿ ಕಾಲಕ್ರಮದಲ್ಲಿ ಅವು ನಿರ್ನಾಮವಾಗಿ ಹೋಗುವುವೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಈಗಿನ ಈ ದುಸ್ಥಿತಿಯಲ್ಲಿ, ಎಲ್ಲಿಯೋ ಮೂಲೆಗುಂಪಾಗಿರುವ ಈ ಜಿಲ್ಲೆಗಳ ಹಿತದ ದೃಷ್ಟಿಯಿಂದಲೇ ಇವುಗಳೊಳಗಣ ಅರಣ್ಯಗಳಾಗಲೀ ಬಂದರುಗಳಾಗಲೀ ರೈಲುದಾರಿಗಳಾಗಲೀ ಪರಿಷ್ಕರಿಸಲ್ಪಡುವುವೆಂದು ಅಥವಾ ಏರ್ಪಡಿಸಲಾಗುವುವೆಂದು ನಿರೀಕ್ಷಿಸಲು ಸಾಧ್ಯವಿಲ್ಲ ಆದೇ ಮೈಸೂರು ಸೀಮೆ ಸಹಿತವಾಗಿ ಕನ್ನಡ ನಾಡಿಗೆಲ್ಲ ಈ ಜಿಲ್ಲೆಗಳು ಮಾತ್ರ, ಸಮುದ್ರ ತೀರದ ಜಿಲ್ಲೆಗಳಾಗಿರುವುದರಿಂದಲೂ, ಅವುಗಳೊಳಗಣ ಅರಣ್ಯಗಳೇ ಸಾಂಪತ್ತಿಕ ಸಾಧನಗಳಾಗಿರುವುದರಿಂದಲೂ, ಈ ಜಿಲ್ಲೆಗಳ ಸರ್ವತೋಮುಖವಾದ ಅಭಿವೃದ್ಧಿಗೆ ಕರ್ನಾಟಕ ಏಕೀಕರಣವೇ ಮತ್ತು ಆ ಸಂಯುಕ್ತ ಕರ್ನಾಟಕದೊಳಗೆ ಈ ಜಿಲ್ಲೆಗಳು ಅಂತರ್ಗತವಾಗುವುದೊಂದೇ ಪರಮೌಷಧವಾಗಿದೆಯೆಂದು ನಾನು ಘಂಟಾಘೋಷವಾಗಿ ಹೇಳಲು ಬಯಸುತ್ತೇನೆ

ಮೇಲೆ ಹೇಳಿದ ಈ ಎಲ್ಲ ಕಾರಣಗಳಿಗಾಗಿ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ನೆಲೆಯಾಗಿ ವಾಸವಾಗಿರುವ ಎಲ್ಲ ಧರ್ಮಗಳ, ಪಂಗಡಗಳ, ಕಾಯಕಗಳ ಹಾಗೂ ಎಲ್ಲ ಭಾಷೆಗಳನ್ನಾಡುವ ಹಿರಿಯರು ಕಿರಿಯರು ಸ್ತ್ರೀಯರು ಪುರುಷರು ಸಹಿತವಾಗಿ ಸಮಸ್ತ ಜನರು ಕರ್ನಾಟಕ ಏಕೀಕರಣ ಮತ್ತು ಸ್ವತಂತ್ರ ಪ್ರಾಂತ್ಯ ನಿರ್ಮಾಣ ತತ್ವವನ್ನು ತಕ್ಕಂತೆ ಮನದಟ್ಟಾಗಿಸಿಕೊಂಡು ಅದಕ್ಕಾಗಿ ಸತತ ಪ್ರಯತ್ನ ಮಾಡುವಲ್ಲಿ ತಾವು ಇತರರಿಗಿಂತ ಸ್ವಲ್ಪವೂ ಹಿಂದಿಲ್ಲವೆಂಬುದನ್ನು ಕಾರ್ಯರೂಪವಾಗಿ ತೋರಿಸಿ ತಮಗೂ ತಮ್ಮ ತಾಯಿನಾಡಿಗೂ ಶಾಶ್ವತವಾದ ಕೀರ್ತಿಯನ್ನು ಗಳಿಸಿಕೊಳ್ಳುವರಾಗಲೆಂದು ಕೋರುವೆನು.

THE

BOMBAY LIFE ASSURANCE Company Limited.

[ESTD 1908]

COMPARE

Your Life Assurance with any other property you possess what is its guarranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs	1,44,91,000
Life Assurance Fund	Rs	1,17,69,748
Total Assets ...	Rs	1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI

Post Box No 337 Mount Road, MADRAS	Visweswarapuram Circle BANGALORE CITY	Charni Road, Girgaum, BOMBAY No. 4.
Car Street, MANGALORE.	CALICUT. Lathiyara,	Central Station Road, TRIVANDRUM

ಸಮಾಜದ ವಕ್ಷಸ್ಥಳದಲ್ಲಿ!

ನಿತ್ಯಜೀವನದ ಸತ್ಯಘಟನೆಗಳೆರಡು!!

ಮನೆಗೆ ಸೊಸೆ ಬರುವವರೆಗೂ, ಅತ್ತೆಗೆ ಸ್ವಲ್ಪವೂ ಸಮಾಧಾನವೇ ಇಲ್ಲ! ಆದರೆ ಸೊಸೆ ಬಂದ ಮೇಲೆ ಆಕೆಗೆ ಒದಗುವ ವಿಪತ್ತುಗಳೇನೆಂಬುದು ವರ್ಣನಾತೀತ! ಆಕೆಯ ಮನಸ್ಸೊಂದೇ ಅದನ್ನು ಅನುಭವಿಸಿ ತಿಳಿಯಬೇಕು! ಮಕ್ಕಳಾಗದೆ ಇದ್ದಲ್ಲಿ, ಅನೇಕ ಹರಕೆಗಳನ್ನು ಮಾಡಿಕೊಳ್ಳುವರು. ಹೆಣ್ಣು ಶಿಶುವು ಜನಿಸಿದರೆ, ಪ್ರಾರಂಭದಲ್ಲಿ ಪ್ರೀತಿಸುವರೇ ಹೊರತು, ನಂತರ ಅವಕ್ಕೆ ಯಾವ ಯಾವ ತೊಂದರೆಗಳನ್ನನುಭವಿಸಬೇಕೆಂಬುದನ್ನು ವರ್ಣಿಸಿದರೆ ಎದೆಯೊಡೆಯುವುದು. ಇಂತಹ ಘಟನೆಗಳು ನಿತ್ಯವೂ ನಮ್ಮ ಸಮಾಜದಲ್ಲಿ ನಡೆಯುತ್ತಲೇ ಇವೆ. ಪುರುಷರು ಸ್ತ್ರೀಯರ ಮೇಲೆ ಮಾಡುವ ಅತ್ಯಾಚಾರವಂತೂ ಇಷ್ಟೇ ಇದೆಯಲ್ಲ! ಆದರೆ ಸ್ತ್ರೀಯರ ಮೇಲೆ ಅತ್ಯಾಚಾರ ಮಾಡಿದರೆ? ದಯವಿಟ್ಟು ಕೇಳಿ!

ಒಂದು ಗೌರವಯುತವಾದ ಸಂಸಾರದಲ್ಲಿ ಅನೇಕ ದೇವದೇವತೆಗಳ ಪ್ರಸಾದದಿಂದ ಒಂದು ಗಂಡುಕೂಸು ಜನಿಸಿತು. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಸಂತೋಷ ಸಮಾರಂಭಗಳನ್ನು ನಡೆಸಿದರು. ಹುಡುಗನಿಗೆ ವಯಸ್ಸಾಗಲು ಆತನ ತಾಯಿಗೆ ಸೊಸೆಯನ್ನು ನೋಡಬೇಕೆಂಬ ಆಸೆಯಾಯಿತು. ಆ ಆಶೆಯು ಪೂರ್ಣವಾಯಿತು, ಸೊಸೆಯು ಬಂದಳು, ಅತ್ತೆಸೊಸೆಯರು ಕೆಲಕಾಲ ಬಹಳ ಅನ್ಯೋನ್ಯದಿಂದಿದ್ದರು. ಆದರೆ ಈ ಅನ್ಯೋನ್ಯತೆಯು ಹೆಚ್ಚು ದಿನವಿರಲಿಲ್ಲ. ಕಾರಣವಾದರೂ ಏನು? ಮಗನು ಮೊದಲಿನಂತೆ ತನ್ನನ್ನು ಕಾಣುತ್ತಿಲ್ಲವೆಂದೇ ತಾಯಿಯ ಆಕ್ಷೇಪಣೆ. ಒಂದು ದಿನ ಅತ್ತೆಗೆ ತಿಳಿಯದಂತೆ ಸೊಸೆಯು ತನ್ನ ಪತಿಯನ್ನು ಬರಹೇಳಿದಳು. ಆದರೆ ಇದು ಹೇಗೋ ಅತ್ತೆಗೆ ತಿಳಿದೇ ಹೋಯಿತು. ಸರಿ, ಮನೆಯಲ್ಲಿ ಬಿರುಗಾಳಿಗಾರಂಭವಾಯಿತು. "ಎಂತಹ ನಾಚಿಕೆಯಿಲ್ಲದ ಹುಡುಗಿಯರಪ್ಪ ಈಗಿನವರು. ಮಾನವಿಲ್ಲ, ಮರ್ಯಾದೆಯಿಲ್ಲ, ಅವಳು ಸೊಸೆಯಲ್ಲ, ವೇಶ್ಯೆ" ಮುಂತಾಗಿ ಹೇಳುತ್ತ, ಅತ್ತೆಯವರು ಮನೆಯಲ್ಲಿ ಭೂಕಂಪವನ್ನೇ ಉಂಟುಮಾಡಿ ಬಿಟ್ಟರು! ಆ ಸಮಯಕ್ಕೆ ಸರಿಯಾಗಿ ಪತಿದೇವರ ಸವಾರಿಯೂ ಅಲ್ಲಿಗೆ ಬಂದಿತು. ತಾಯಿಯ ಮನಸ್ಸಿಗೆ ಸಂಕಟವಾಗುವುದನ್ನು ನೋಡಿ ಆತನು ಅಲ್ಲೇ ಒಂದು ಮೂಲೆಯಲ್ಲಿ ನಿಂತನು. ತಾಯಿಯು ರೋಷಾವೇಷವಾದ ಮಗನನ್ನು ಕುರಿತು 'ಜೋಕೆ ಇಂದಿನಿಂದ ನೀನು ಇವಳ ಬಳಿ ಬಂದೀಯೇ!' ಎಂದು ಗರ್ಜಿಸಿದಳು. ತನ್ನ ತಾಯಿಯ ಆವೇಶಪೂರ್ಣವಾದ ಮಾತುಗಳು ಮಗನಿಗೆ ಮಹಾಮಂತ್ರವೇ ಆದುವು. ಅಂದಿನಿಂದ ಪತ್ನಿಯ ಕಡೆಗೆ ತಿರುಗಿ ನೋಡುವುದನ್ನು ಸಹ ನಿಲ್ಲಿಸಿಬಿಟ್ಟನು. ತಾಯಿಯು ಮಗನಿಗೆ ಎರಡನೇ ವಿವಾಹವಾಗುವಂತೆ ಹೇಳಿದಳು. ಮಗನು ನಗುತ್ತ ಅದನ್ನು ಸ್ವೀಕರಿಸಿದನು. ಸೊಸೆಯನ್ನು ತಾಯಿಯು ಮನೆಗೆ ಕಳಿಸಿ ಬಿಡಬೇಕೆಂದು ನಿಶ್ಚಯವಾಯಿತು. ಆದರೆ ಗಾಡಿಯವನಿಗೆ ಆಕೆಯನ್ನು ಅವರೂರಿಗೆ ಕರೆದೊಯ್ಯದೆ, ದಾರಿಯಲ್ಲೇ ಎಲ್ಲಿಯಾದರೂ ಬಿಟ್ಟುಬರಬೇಕೆಂದೂ ಆಜ್ಞೆಯಾಯಿತು. ಗಾಡಿಯವರಿಗೆ ಮೊದಲೇ ಎಲ್ಲವನ್ನೂ ಕಲಿಸಿಕೊಟ್ಟಿರುವರು. ಸರಿ, ಬಲವಂತದಿಂದ ಆಕೆಯನ್ನು ಗಾಡಿಯಲ್ಲಿ ಕೂರಿಸಿಕೊಂಡು, ಅವರ ತಾಯಿಯ ಊರಿಗೇ ಮೈಲಿ ದೂರದಲ್ಲೇ ಒಂದು ಪೇಟೆಯ ಬಳಿ ಬಿಟ್ಟುಬಿಟ್ಟರು. ಪಾಪ! ಆ ಹೆಣ್ಣು ಮಗಳು ರೋದಿಸ ತೊಡಗಿದಳು. ಅದನ್ನು ಕೇಳಿ ನೆರೆಹೊರೆಯವರು ಬಂದು ವಿಚಾರಿಸಿ ಸಂಕಟಪಟ್ಟು, ಆಕೆಯ ತಂದೆಯ ಬಳಿ ಬಿಟ್ಟು ಬಂದರು!

ಇತ್ತಕಡೆ ಮೊದಲನೆ ಸೊಸೆಯನ್ನು ಮನೆಯಿಂದ ಹೊರದೂಡಿದ ಆ ಅತ್ತೆಯು ಮಗನಿಗೆ ಎರಡನೆ ವಿವಾಹವನ್ನು ಮಾಡಿದಳು. ಬಂದವಳು ಸ್ವಲ್ಪ ಕಠಿಣ ಮನಸ್ಸಿನವಳು. ತಾಯಿ, ಮಗನಿಗೆ ಈಕೆಯ ಬಿಗಿ ಸ್ವಭಾವವು ತಿಳಿಯಿತು. ಏನು ಮಾತಾಡಲೂ ಧೈರ್ಯವೇ ಇಲ್ಲ. ಕೆಲವು ದಿನ ಈಕೆಯು ಮೊದಲನೆ ಸೊಸೆಯನ್ನು ನೋಡಬೇಕೆಂದಳು. ಸರಿ ಬಂದಳಾಕೆ, ಕೆಲವು ದಿನಗಳ ವರೆಗೆ ಎರಡನೆಯಾಕೆಯ ಕೃಪೆಯು ಆವಳ ಮೇಲಿದ್ದಿತು. ಆದರೆ ಬರಬರುತ್ತಾ ಆಕೆಯಿಂದಲೇ ತನ್ನ ಕೆಲಸಗಳೆಲ್ಲವನ್ನೂ ಮಾಡಿಸಿಕೊಳ್ಳಲಾರಂಭಿಸಿದಳು. ಬಟ್ಟೆಗಳನ್ನು ಒಗೆಯುವುದು, ಹಾಸಿಗೆ ಹಾಸುವುದು ಕೊನೆಗೆ ಪಾದಗಳನ್ನು ಒತ್ತುವ ಕೆಲಸವನ್ನೂ ಸಹ ಮಾಡಬೇಕಾಗಿ ಬಂದಿತು. ಎಲ್ಲರೂ ಆಕೆಯನ್ನು ಕಸಕ್ಕಿಂತ ಕಡೆಯಾಗಿ ಕಾಣುವವರೇ, ಎಲ್ಲರ ಸಿಟ್ಟನ್ನೂ ಆಕೆಯ ಮೇಲೆ ಇಳಿಸಿಕೊಳ್ಳುತ್ತಿದ್ದರು. ಈ ರೀತಿ ಮನೆಯವರೆಲ್ಲರ ಅಸಹನೀಯ ಅತ್ಯಾಚಾರಗಳಿಂದ ಬಹಳ ಸಂಕಟಪಟ್ಟು, ಕೊನೆಗೆ ಒಂದು ದಿನ ಆಕೆಯು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳು!

ವಿಧವಾವಿವಾಹದ ಹೆಸರನ್ನು ಕೇಳಿ ಸಿಟ್ಟಿಗೇಳುವ ನೀವು ದಯವಿಟ್ಟು ಇನ್ನೊಂದನ್ನು ಕೇಳಿ. ಒಂದು ಮನೆಯಲ್ಲಿ ಇಬ್ಬರು ಹುಡುಗಿಯರಿದ್ದರು. ವಿವಾಹವು ನಿಶ್ಚಯವಾಗಿದ್ದಿತು. ಮುಹೂರ್ತವಾದ ಕೂಡಲೆ ಇಬ್ಬರು ಅಳಿಯಂದಿರಿಗೂ ಕಾಲರಾ ತಗಲಿತು. ವಿವಾಹವಾದ ಕೆಲಕಾಲದಲ್ಲೇ ಒಬ್ಬನೂ, ಕೆಲದಿನಗಳಲ್ಲೇ ಇನ್ನೊಬ್ಬನೂ ಸ್ವರ್ಗಸ್ಥರಾದರು. ಇಬ್ಬರು ನಿರ್ದೋಷ ಬಾಲಿಕೆಯರು ತಮ್ಮ ಮಂಗಳ ಸೂತ್ರಗಳಿಂದ ವಂಚಿತರಾದರು! ವಿಧವೆಯರಾದರು! ಕಾಲ ಕಾಲ ಇವರಿಬ್ಬರೂ ಮೂಕರಂತೆ, ಸಮಾಜದ ಆಘಾತಗಳನ್ನು ಸಹಿಸುತ್ತ ಬಂದರು. ಅಂತ್ಯದಲ್ಲಿ ಒಬ್ಬಳು ಬಟ್ಟೆಗಳಿಗೆ ಸೀಮೆ ಎಣ್ಣೆಯನ್ನು ಸುರಿದುಕೊಂಡು ಬೆಂಕಿ ಹಚ್ಚಿಕೊಂಡಳು. ಇನ್ನೊಬ್ಬಳು ಯಾವನೋ ಒಬ್ಬ ಪಿಶಾಚಿಯ ಬಲೆಗೆ ಬಿದ್ದು ಅವನೊಡನೆ ಹೋದಳು. ಒಂದು ವೇಳೆ ಇವರಿಬ್ಬರ ಪುನರ್ವಿವಾಹವಾಗಿದ್ದರೆ?

ಈ ರೀತಿ ಒಂದಲ್ಲ ನೂರಾರು ಘಟನೆಗಳು ಸಮಾಜದಲ್ಲಿ ಸಂಭವಿಸುತ್ತಿವೆ. ನಿತ್ಯವೂ ನಾವು ಇಂತಹ ಸುದ್ದಿಗಳನ್ನು ಸಮಾಚಾರ ಪತ್ರಗಳಲ್ಲಿ ಓದುತ್ತಿದ್ದರೂ ನಮ್ಮ ಕಣ್ಣುಗಳು ತೆರೆಯುವುದಿಲ್ಲ. ಇಂತಹ ದುರ್ಘಟನೆಗಳಿಂದ ನಮ್ಮ ಹೃದಯವು ಕರಗಿ ನೀರಾಗುವುದಾದರೂ ನಮಗೆ ಅದರ ಲಕ್ಷ್ಯವೇ ಇಲ್ಲ. ನಾವು ನಮ್ಮ ಗತವೈಭವವನ್ನು ಕುರಿತು ಹೆಮ್ಮೆ ಪಡುವದೇ ವಿನಹ ವರ್ತಮಾನ ಸ್ಥಿತಿಯನ್ನೂ ಯೋಚಿಸುವಂತೆ ಇಲ್ಲ. ನಮ್ಮ ಅಪರಾಧಗಳಿಂದಲೇ ನಾವು ರಸಾತಳಕ್ಕೆ ಇಳಿದುಹೋಗುತ್ತಿರುವೆವೆಂಬ ಪರಿಜ್ಞಾನವೇ ಇಲ್ಲ ನಮಗೆ. ಇದೇ ಅವಸ್ಥೆಯೇ ಕೆಲವು ದಿನಗಳಿದ್ದರೆ ಜಗತ್ತಿನ ಮೇಲೆ ನಮ್ಮ ಅಸ್ತಿತ್ವವೇ ಅಳಿದುಹೋಗಿ ನಾವು ಕೇವಲ ಗ್ರಂಥಗಳ ವಸ್ತುಗಳಾಗುವೆವು. ಇನ್ನಾದರೂ ನಾವು ಯೋಚಿಸಿದ್ದೇ ಆದರೆ?

(ರಣ ವಿಜಯಸಿಂಹ)

ನೋಟೀಸು.

ಉಡುಪಿ ಡಿ. ಮು ಕೋರ್ಟಿನಲ್ಲಿ

ಕ್ರಮ ನಂ. ೩೬೬/೩೯ R. E. P. ೨೫/೩೯

ನಾಗಾ ಭಟ್ಟ—ಅರ್ಜಿದಾರ

ಮತ್ತು

ಗಣಪತಿ ಬಾಳಿಗೆ ಕೊಡಾ—ಯೆದ್ರಿದಾ

3. ಯುಫ್ರಜಿರ್ ಲೂವಿಸ್ } ದೋನಾತ
4. ನಿಕೊಲಸ್ ಲೂವಿಸ್ } ಲೂವಿಸರ ಮಕ್ಕಳು.
6. ಚಾರ್ಲಿ ಲೂವಿಸ್—ತೋಮಸ್ ಲೂವಿಸರ ಮಗ.
7. ಫಿಲಿಫಿನ್ ಲೂವಿಸ್ ಬಾಯಿ—ತೋಮಸ್ ಲೂವಿಸರ ಹೆಂಡತಿ, ಉಡುಪಿ ತಾಲೂಕು ಮೂಡು ತೋನ್ಸೆ ಗ್ರಾಮದ ಹೀನಿಕುದ್ರು ಇವರಿಗೆ—

ಅರ್ಜಿದಾರನು ಸದ್ರಿ ಡಿಕ್ರಿಯ ಅಮಲ್ ಜಾರಿ ಬಗ್ಗೆ ಸದ್ರಿ ಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದಾನೆ. ಆದುದರಿಂದ ಅಮಲ್ ಜ್ಯಾರಿಯನ್ನು ಯಾಕೆ ನಡಿಸಕೊಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ ತಾ. 11-3 1940 ರಲ್ಲು ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳತಕ್ಕದ್ದು. ಇಲ್ಲದಿದ್ದರೆ ನಿಮ್ಮನ್ನು ಕಿವಕ್ಷ್ಯ ಮಾಡಿ ಸದರಿ ಅಸ್ಸಾನ್ಮೆಂಟ್ ಜ್ಯಾರಿಯಲ್ಲಿ ಮುಂದಿನ ಹುಕುಂ ಆಗುತ್ತದೆ.

ಉಡುಪಿ, 20-1-1940 } **K Ramanath Pai,** *Pleader for Petitioner*

ನೋಟೀಸು.

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O. S. ೧೯೫/೩೫ R. I A. ೧೯೩/೩೫

ವಾದಿ—ಮುಕಾಂಬಿಕೆ ಆಮ್ಮ ಶಾಸ್ತ್ರೀ ವ ಉದ್ಧರ ವಿಧವೆ ಕಮಲ ಶಿರೂರ ಗ್ರಾಮದಲ್ಲಿರುವವಳು,

ಪ್ರತಿವಾದಿರು—1. ಮಾದಯ್ಯ ಶೆಟ್ಟಿ, ಹಕ್ಲುಮನೆ ಶೇಶಿಟ್ಟಿ ಮಗ, 2. ಮಂಜ ಆಚಾರಿ, ಎಂಕ ಆಚಾರಿ ಮಗ, 3. ಜೋಗ ಶೆಟ್ಟಿ, 4. ಕನಕಮ್ಮ ಶೆಡ್ತಿ, ಮುತ್ತಕ್ಕ ಶೆಡ್ತಿಯ ಮಕ್ಕಳು, 5. ಮಂಜಯ್ಯ ಶೆಟ್ಟಿ 6. ಚಿಕ್ಕಮ್ಮ ಶೆಡ್ತಿ, ಚೆಂದಮ್ಮ ಶೆಡ್ತಿಯ ಮಕ್ಕಳು, 7 ಸೀನ ಶೆಟ್ಟಿ 8 ಅಚ್ಚಮ್ಮ ಶೆಡ್ತಿ, 9. ಸೀನಪ್ಪ ಶೆಟ್ಟಿ, ಅಂತಮ್ಮ ಶೆಡ್ತಿಯ ಮಕ್ಕಳು, ಆಂಬಾರು ಗ್ರಾಮದಲ್ಲಿರುವವರು.

ಈ ಕೋರ್ಟಿನ O. S. 63/1918ನೇ ರಾಜಿ ಡಿಕ್ರಿಯ ಶರ್ತ ಪ್ರಕಾರ 1ನೇ ಪ್ರತಿವಾದಿಯಿಂದ ಬಾಕಿ ಕೆಳದ ಈಡ್ಪರ, ಬತ್ತಧಾನ್ಯ ಸಂಗ್ರಹಗಳ ವಸೂಲಿಗೆಗೆ ವಾದಿಳು ಮೇಲಿನ ದಾವೆಯನ್ನು ಮಾಡಿದ್ದಾಗಿರುತ್ತದೆ 2ನೇ ಬಾಗ್ಯಾತಿನ ಪ್ರತಿವಾದಿಯು ಗೇಣಿಗೆ ಕಾರಣವಾದ ಆಸ್ತಿಯನ್ನು 1ನೇ ಪ್ರತಿವಾದಿಯಿಂದ ಸ್ವಾಧೀನಕ್ಕೆ ಪಡೆದವರಾಗಿರ ಪ್ರಾರ. 2ನೇ ಬಾಗ್ಯಾತಿನ ಪ್ರತಿವಾದಿಗಳಾದ ಸ್ವಾಧೀನಗಳ ಉಡುಪ್ರ ಶಿವ ದಾವ್ಯ ನಿವೃತ್ತಿಯನ್ನು ಕೇಳಿ ಮಾಡಿದ ದಾವೆಯು ತಾರೀಕು 4-3-1940ಕ್ಕೆ ಕನ್ನಗೆಯ ಪ್ರವೆ, ಆ ದಿನ ಉದಾಹರಣೆಗಳಿದ್ದರೆ ಕೋರ್ಟ್ ಮುಂದೆ ಹಾಜರಾಗಿ ತಾಕೀತುಮಾಡತಕ್ಕದ್ದು. ಇಲ್ಲವಾದರೆ ಎಕ್ಸ್ ಪಾರ್ಟಿಯಾಗಿ ತೀರ್ಮಾನಿಸಲ್ಪಡುತ್ತವೆ ಎಂಬ ಸಂಗ್ರಿಯನ್ನು ಈ ಮೂಲಕ ತಿಳಿಯಪಡಿಸಿಯದೆ.

ಕುಂದಾಪುರ, 20-2 40 } **M. M. Urala,** ವಾದಿಯ ಕಡೆ ಎಡ್ವೋಕೇಟು.

ಇನ್ಕಮ್ ಟೇಕ್ಸ್ ಮತ್ತು ಯೋಗೆಸೊಪ್ಪುವ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4 39ರಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಈ ವಿಷಯದ ಜವಾಬ್ದಾರಿಕೆಯ ತಪ್ಪಿದ್ದರೂ ನಾಲವು, ಅದರಿಂದ ನಮೂದಿಸದ ಸಾಂಕೇತಿಕ ನಿರ್ದಿಷ್ಟ ಕೇವಲ ನಿಮಿಷಗಳಲ್ಲಿ ತನ್ನಯ ಆಫೀಸರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸುವವರಿಂದ ಅನುಭವಪಡೆದ ಆಫೀಸರಿಗೆ ಸಿಸ್ಥಿತಿಯನ್ನು ಸಮಾಧಾನಪಡಿಸಿ ಕಾಯ್ದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ವಿಶೇಷವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಪ್ಪಾಗಲಿಲ್ಲ ಟೇಕ್ಸ್ ಹಾಕುವ ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ್,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	..	Rs	1,00,000
Subscribed & Paid up Capital	....	Rs	31,340
Reserves & other Funds	...	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK

OF SUPPLY AGENCY LIMITED.

ಶ್ರೀಗೋಮಟೇಶ್ವರ ಸ್ವಾಮಿಯ ಮಸ್ತಕಾಭಿಷೇಕ !

ಭರತಖಂಡದ ಮೂಲೆಮೂಲೆಗಳಿಂದಲೂ ಯಾತ್ರಾರ್ಥಿಗಳ ಆಗಮನ !!

—• ಸಾವಿರದೆಂಟು ಕುಂಭಗಳಿಂದ ಗುಮ್ಮಟನಿಗೆ ಮಹಾಭಿಷೇಕ !!! •—

ಶ್ರೀಮನ್ ಮಹಾರಾಜರಧ್ಯಕ್ಷತೆಯಲ್ಲಿ ಅಖಿಲಭಾರತ ಜೈನ ಮಹಾ ಸಮ್ಮೇಳನ.

[ನವಯುಗದ ವಿಶೇಷ ಬಾತ್ಮೀದಾರರಿಂದ ಫೆಬ್ರವರಿ 26. ಕ್ಯಾಂಪ್ ಶ್ರವಣ ಬೆಳಗೊಳ.]

ಮೈಸೂರು ಸಂಸ್ಥಾನದ ಚರಿತ್ರೆ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯುವ ದಿನವಿಂದು ಏಕೆಂದರೆ ಹಾಸನ ತಾಲೂಕು ಶ್ರವಣಬೆಳಗೊಳದಲ್ಲಿರುವ ಪ್ರಶಂತಾಕ್ಷೀ ಪ್ರಖ್ಯಾತಿ ಪಡೆದಿರುವ ಅಜಾನ ಬಾಹು ಜೈನ ಪ್ರಖ್ಯಾತ ವಿಗ್ರಹ ಗೋಮಟೇಶ್ವರ ಸ್ವಾಮಿಗೆ ಮಹಾ ಮಸ್ತಕಾಭಿಷೇಕ ಉತ್ಸವವು ಅತ್ಯಂತ ವಿಜೃಂಭಣೆಯಿಂದ ಈ ದಿನ ನಡೆಯಿತು. ಹದಿನೈದು ವರ್ಷಕ್ಕೊಮ್ಮೆ ಬರುತ್ತಿದೆಂದು ಹೇಳಲಾಗಿರುವ ಈ ಉತ್ಸವವನ್ನು ನೋಡಲು ಇಡೀ ಭರತಖಂಡದ ಮೂಲೆ ಮೂಲೆಗಳಿಂದಲೂ ಲಕ್ಷಾಂತರ ಭಕ್ತಾದಿ ಯಾತ್ರಾರ್ಥಿಗಳು ಬಂದು ಗೊಮ್ಮಟನಿಗೆ ಪೂಜೆ ಅಭಿಷೇಕ ಸಲ್ಲಿಸಿ ಆತನ ದರ್ಶನ ಪಡೆದು ಸಂತೃಪ್ತರಾದರು.

ಹಿಂದೂ ದೇಶದಲ್ಲಿರುವ ಮೂರು ಗೊಮ್ಮಟನ ವಿಗ್ರಹಗಳಲ್ಲಿ, ದಕ್ಷಿಣಕನ್ನಡ ಜಿಲ್ಲೆಯ ವೇಣೂರು ಮತ್ತು ಕಾರ್ಕಳಗಳಲ್ಲಿರುವ ವಿಗ್ರಹಗಳು ಶ್ರವಣಬೆಳಗೊಳದಲ್ಲಿರುವ ವಿಗ್ರಹಕ್ಕಿಂತಲೂ ಚಿಕ್ಕವು. ಶ್ರವಣಬೆಳಗೊಳದಲ್ಲಿರುವ ವಿಗ್ರಹವನ್ನು ನಮ್ಮ ದೇಶದಲ್ಲಿ ರಾಜ್ಯಭಾರ ಮಾಡಿ ಪರಾಕ್ರಮಶಾಲಿ ಗಂಗದೊರೆ ನಾಲ್ಕನೇ ರಾಜಮಲ್ಲನ ಮಂತ್ರಿ ಚಾಮುಂಡರಾಯನು ಕ್ರಿ. ಶ. 983ರಲ್ಲಿ ಕೆತ್ತಿಸಿದನೆಂದೂ, ಈ ಗೊಮ್ಮಟನು ಮೊದಲನೇ ತೀರ್ಥಂಕರಪುರುಷ ದೇವನೆರಡನೇ ಮಗನೆಂದೂ, ಈತನು ತನ್ನ ಅಣ್ಣ ಭರತನನ್ನು ಯುದ್ಧದಲ್ಲಿ ಸೋಲಿಸಿ ರಾಜ್ಯ ಪಡೆದಾಗ್ಯೂ ಅದನ್ನು ತ್ಯಜಿಸಿ ದೊಡ್ಡ ಯೋಗಿಯಾದನೆಂದೂ, ಆದ್ದರಿಂದ ಇವನ ಜ್ಞಾಪಕಾರ್ಥವಾಗಿ ಭರತನು ಇದನ್ನು ಕೆತ್ತಿಸಿ ಉತ್ತರ ಇಂಡಿಯಾ ಒಂದು ಪಟ್ಟಣದಲ್ಲಿಡಬೇಕೆಂದಿರಲು ಚಾಮುಂಡರಾಯನೆಂಬುವನು ದಕ್ಷಿಣ ದೇಶದ ಶ್ರವಣಬೆಳಗೊಳದಲ್ಲಿಡಿಸಿದನೆಂದೂ ಚರಿತ್ರೆಗಳಿಂದ ತಿಳಿದು ಬರುತ್ತದೆ.

ಈ ಪ್ರತಿಮೆಯು ಏಕಶಿಲೆಯಲ್ಲಿ ಕೆತ್ತಲ್ಪಟ್ಟ 57 ಅಡಿ ಎತ್ತರವಿದೆ ಆರುವರೆ ಅಡಿ ಎತ್ತರವಿರುವ ನಗು ಮುಖದ ಪ್ರತಿಮೆಯು ಉತ್ತರ ದಿಕ್ಕಿಗೆ ತಿರುಗಿದೆ. ಗುಂಗುರು ಗುಂಗುರು ಕೂದಲು, ದೊಡ್ಡ ಕಿವಿಗಳು, ಅಗಲವಾದ ಎದೆ, ನೀಳವಾದ ಕೈ, ಚಿಕ್ಕದಾದ ಸೊಂಟ, ಅಗಲವಾದ ಪಾದದಿಂದ ಕೂಡಿರುವ ಇದು ಈಜಿಪ್ಟ್ ದೇಶದ ರಮೆಸ್ ಪ್ರತಿಮೆಗಿಂತಲೂ ದೊಡ್ಡದು. ಈ ವಿಗ್ರಹ ಕೆತ್ತನೆ ಕೆಲಸ ನೋಡಿದಲ್ಲಿ ಪೂರ್ವ ಕಾಲದಲ್ಲಿ ನಮ್ಮಲ್ಲಿ ಎಂತಹ ಶಿಲ್ಪ ಕಲೆಯ ಶ್ರೇಷ್ಠತೆಯು ಗೊತ್ತಾಗುತ್ತದೆ ಇದು ಭರತಖಂಡಕ್ಕೆ ಒಂದು ಹೆಮ್ಮೆ. ಜೈನಮತಸ್ಥರದೆಂದು ಖ್ಯಾತಿಯಿರುವುದರಿಂದ ಜೈನ ಯಾತ್ರಾರ್ಥಿಗಳು ಇಲ್ಲಿ ಬಹು ಸಂಖ್ಯೆಯಲ್ಲಿದ್ದರು. ಶ್ರವಣಬೆಳಗೊಳ ಇಂದ್ರಗಿರಿ ಪರ್ವತ ವೇಲಿರುವ ಮತ್ತು ಸುತ್ತುಮುತ್ತಲಿರುವ ಬಹು ರಮಣೀಯವಾದ ಬೆಟ್ಟ ಗುಡ್ಡಗಳ ಅಚ್ಚ ಹಸುರು ಗಿಡಗಳ, ಪಕ್ಷಿಗಳ ಇಂಪಾದ ಗಾನಗಳ ಮಧ್ಯೆ ಇರುವ ಈ ಅತಿ ಮುದ್ದಾದ ವಿಗ್ರಹವನ್ನು ಶ್ರವಣಬೆಳಗೊಳಕ್ಕೆ ಹೋಗುವ ದಾರಿಯಲ್ಲಿ ಬಹು ದೂರದಲ್ಲಿ ಕಾಣುವ ಇದನ್ನು ನೋಡಿದಲ್ಲಿ ಎಂತಹವನಿಗೂ ಮನಸ್ಸಿನ ಬೇಜಾರವು ತೊಲಗಿ ಸಂತೋಷವಾಗುತ್ತದೆ. ಇಂದ್ರಗಿರಿ ಬೆಟ್ಟಕ್ಕೆ ಹೋಗಲು ಸುಮಾರು ಐನೂರು ಮೆಟ್ಟಲುಗಳಿವೆ. ಇದನ್ನು ಹತ್ತಿದಲ್ಲಿ ಗೊಮ್ಮಟ ವಿಗ್ರಹ ಸಿಗುತ್ತದೆ.

ಮಸ್ತಕಾಭಿಷೇಕ

ಶ್ರೀಗೊಮ್ಮಟನಿಗೆ ಕಳೆದ ಹದಿನೈದು ದಿನಗಳಿಂದಲೂ, ಶಾಸ್ತ್ರೋಕ್ತವಾಗಿ ಪುರಾತನಕಾಲದಿಂದಲೂ ಬಂದಿರುವ ಸಂಪ್ರದಾಯ, ಶಾಸನದ ಬರಣೆಯಂತೆ ಶಾಂತಿ ಮತ್ತು ಅಭಿಷೇಕ ನಡೆಯಿತು ಈ ದಿನ ಕೊನೆಯ ಮತ್ತು 16ನೇ ದಿನವಾದ್ದರಿಂದ ಮಸ್ತಕಾಭಿಷೇಕವು ಪೂರ್ವಾಚಾರದಂತೆ ನಡೆಯಿತು. ಈ ಅಭಿಷೇಕವು ಕಳೆದ 1925ರಲ್ಲಿ ನಡೆದಿತ್ತು. ಇದು ಬಹಳ ಪವಿತ್ರವಾದ್ದು. ಇದನ್ನು ಏರ್ಪಡಿಸಿದವರು ಶ್ರೀ ಚಾಮುಂಡರಾಯನೆಂದೂ ಶ್ರೀ ಪಂಡಿತಾಚಾರ್ಯರೆಂಬುವವರು ಇದನ್ನು ಏಳು ಬಾರಿ ನಡೆಸಿದರಂತೆ ನಂತರ ಇತರರು ಇದನ್ನು ನಡೆಸಿಕೊಂಡು ಬಂದು ಆತನ ಆತ್ಮಕ್ಕೆ ಶಾಂತಿ ಮತ್ತು ಇಹಪರ ಸುಖವನ್ನುಂಟುಮಾಡಲು ಪೂಜಾರಿಗಳನ್ನೂ ನೇಮಿಸಲಾಗಿದೆಯಂತೆ.

ಚರಿತ್ರಾರ್ಹವಾದ ಅಭಿಷೇಕ, ಪೂಜೆ ಮತ್ತು ಮಹಾ ಮಂಗಳಾರತಿ

ಶ್ರೀ ಗೊಮ್ಮಟನ ದರ್ಶನದಿಂದ ಮುಕ್ತಿ ಪಡೆವ ಸಲುವಾಗಿ ಭಾರತದಾದಿಯಿಂದಲೂ ಬಂದಿದ್ದ ಯಾತ್ರಾರ್ಥಿಗಳು ಈ ದಿನ ಮುಂಜಾನೆ ಎದ್ದು ಬೆಟ್ಟದ ಮೇಲಿರುವ ಕಲ್ಯಾಣಿಯಲ್ಲಿ ಸ್ನಾನಮಾಡಿ ಗೊಮ್ಮಟನ ಬಳಿ ಹಾಜರಾದರು. ಇಷ್ಟು ಲಕ್ಷಾಂತರ ಜನರು ಅಲ್ಲಿ ಸೇರಿದ್ದು ನೋಡಿ 'ಮನುಷ್ಯನ ಸಮುದ್ರ" (Sea of humanity) ವೆನ್ನಬಹುದಾಗಿತ್ತು. ಪೂಜೆಗೆ ಎಲ್ಲವೂ ಸಿದ್ಧಗೊಳಿಸಿ ಆ ಪ್ರದೇಶವನ್ನು ಹಸಿರು ತೋರಣದಿಂದಲಂಕರಿಸಿ ನಿರ್ದಿಷ್ಟ ಶುಭಲಗ್ನ ಮುಹೂರ್ತಕಾಲದ ವೇಳೆಗೆ ಭಾಸ್ಕರನು ತನ್ನ ತೇಜೋಮಯವಾದ ಕಿರಣಗಳನ್ನು ಗೊಮ್ಮಟನ ಮೇಲೆ ಬೀರುವಾಗ್ಯೆ, ಮಹಾ ಪಂಡಿತರುಗಳೂ, ಶಾಸ್ತ್ರಿಗಳೂ ದಿವ್ಯ ವೇದಘೋಷಣೆ, ಮಂತ್ರ ಪಠಿಸುತ್ತಿರುವಾಗ್ಯೆ, ಶ್ರೀಮನ್ ಮಹಾರಾಜರೂ ಇತರ ರಾಜಪರಿವಾರದವರೂ ಸ್ನಾನಮಾಡಿ ಅಪ್ಯಾಯಮಾನ ಉಡುಪು ಧರಿಸಿ ಗಂಭೀರ ನಡಿಗೆಯಲ್ಲಿ ಬಂದು ಗೊಮ್ಮಟನ ಬಳಿ ಕೈಮುಗಿದು ನಿಲ್ಲಲು, ಅಲ್ಲಿ ಸೇರಿದ್ದ ಜನಸಮೂಹವು ಜೈಕಾರವಿಡುವಾಗ್ಯೆ ಮಂಗಳ ವಾದ್ಯಗಳು ಮೊಳಗರೆಯುತ್ತಿತ್ತು. ಗೊಮ್ಮಟನಿಗೆ ಸಲ್ಲುವ ವಿವಿಧ ರಾಜಮರ್ಯಾದೆಗಳೆಲ್ಲವೂ ಒಪ್ಪಗೊಂಡಿದ್ದವು. ಪದ್ಧತಿಯಂತೆ ಮಹಾರಾಜ ಹೆಂಗಸರುಗಳು ಸಂತೋಷದಿಂದ ಕುಂಭಗಳಲ್ಲಿ ಜಲ ಹಿಡಿದು ನಿಂತರು. ನಂತರ ಭಟ್ಟರ ಆಜ್ಞೆ ಮೇರೆಗೆ ಈ ಜಲವನ್ನು ವಿಗ್ರಹ ಮೇಲೆ ಸುರಿಸಲಾಯಿತು ಮತ್ತೆ ಕೆಲವರು ಬೆಣ್ಣೆ, ಹಾಲು, ತುಪ್ಪ ಇವುಗಳನ್ನು ವಿಗ್ರಹದ ಮೇಲೆ ಕೋಡಿಹರಿಸಿದರು ವಿಗ್ರಹ ಪೂಜೆಗೆ ಕೊಡಲ್ಪಡುವ ಸ್ವಾಮಿಗಳಿಗೆ ದಕ್ಕುವುದೆಂದು ಹೇಳಲಾಗುವುದರಿಂದ ಅವರ ಅಪ್ಪಣೆ ಮೇರೆ ಪುನಃ ಅನೇಕರು ಜಲ, ಹಾಲು ಮೊಸರನ್ನು ಸುರಿಸಿದರು. ನಂತರ ಪಂಚಾಮೃತ ಅಭಿಷೇಕ ನಡೆಯಿತು. ಕೊನೆಗೆ ಹೂ, ಹಣ್ಣುಹಂಪಲು, ತೆಂಗಿನಕಾಯಿ, ತುಪ್ಪ, ಸಕ್ಕರೆ, ಬಾದಾಮಿ, ಖರ್ಜೂರ, ಗಾಳು, ಗಸಗಸೆ, ಮೊಸರು, ಶ್ರೀಗಂಧ, ೧೦೦೮ ಕುಂಭಗಳಲ್ಲಿ ಜಲ, ಚಿನ್ನ ಮತ್ತು ಬೆಳ್ಳಿಯ ಹೂಗಳು, ಸುಮಾರು 500 ರೂ. ಬೆಲೆ ಬೆಳ್ಳಿ ನಾಣ್ಯಗಳು ಮತ್ತು ಒಂಭತ್ತು ತರಹ ವಸ್ತ್ರದ ಮಹಾಭಿಷೇಕ ಮಾಡಿ ಕರ್ಪೂರ ಮಹಾಮಂಗಳಾರತಿ ಶಂಖವಾದ್ಯಮೊಳಗೆ ನಡೆಯಲು ಅದನ್ನೂ ತೀರ್ಥವನ್ನೂ ಸಕಲರೂ ಸ್ವೀಕರಿಸಿ ಕಾಣಿಕೆ ಅರ್ಪಿಸಲಾಯಿತು ಯಾತ್ರಾರ್ಥಿಗಳು ಹಣ್ಣುಕಾಯಿ ಅರ್ಪಿಸಿ ಪೂಜೆ ನಡೆಸಿ ಮಂಗಳಾರತಿ ನಡೆಸಿ ಗೊಮ್ಮಟನಿಗೆ ಸುಖಶಾಂತಿ ಕೋರಿದ ಮೇಲೆ ಎಲ್ಲವೂ ಮುಗಿಯಿತು. ನಂತರ ಪ್ರಭುಗಳೂ ಇತರರೂ ತಮ್ಮ ತಮ್ಮ ಬಿಡಾರಕ್ಕೆ ತೆರಳಿದರು. ಸುಮಾರು ಹದಿನೈದು ದಿನಗಳಿಂದ ಪ್ರತಿನಿತ್ಯವೂ ಅನ್ನಸಂತರ್ಪಣೆ ನಡೆಯಿತು. ಅಭಿಷೇಕ ಮತ್ತು ಇತರ ಕಾಲಗಳಲ್ಲಿ ಯಾವ ತರಹ ಗಲಭೆಯಾಗಲೀ ನಡೆಯಲಿಲ್ಲ. ಮೈಸೂರು ಸರ್ಕಾರದವರು ಯಾತ್ರಾರ್ಥಿಗಳಿಗೆ ಸರ್ವ ಸೌಖ್ಯ ಕಲ್ಪಿಸಿದ್ದರಿಂದ ಜನಗಳಲ್ಲಿ ಉತ್ಸಾಹ ತುಂಬಿತ್ತು. ಕರ್ಣಾಟಕ ವಿವಿಧ ಪ್ರಾಂತಗಳ ಪ್ರತಿಗಳ ನೋಟ, ಇದರಿಂದ ಅಂದ ಚೆಂದ ಉಂಟಾಗಿ ಎಲ್ಲರಿಗೂ ಆನಂದ ಉಂಟುಯಿತು. ಪೋಲಿಸ್ ಬಂದೋಬಸ್ತು ಚೆನ್ನಾಗಿತ್ತು. ಮೋಟಾರ್ ಬಸ್, ಖಾಸಗಿ ಮೋಟಾರ್ ಮತ್ತು ಗಾಡಿಗಳಲ್ಲಿಯೂ, ಬೈಸಿಕಲ್ ಮೇಲೆ ಮತ್ತು ನಡೆದುಕೊಂಡು ಯಾತ್ರಾರ್ಥಿಗಳಾಗಮಿಸಿದ್ದರು. ಎಲ್ಲಿ ನೋಡಿದರೂ ಜನಸಮೂಹವೇ ಜಾಸ್ತಿಯಾಗಿತ್ತು.

ಶ್ರವಣಬೆಳಗೊಳದಲ್ಲಿ ನಡೆದ ಮಹಾ ಮಸ್ತಕಾಭಿಷೇಕ ಕಾಲದಲ್ಲಿ ಅ|| ಭಾ|| ಜೈನ ಮಹಾ ಸಮ್ಮೇಳನವೊಂದು ನಡೆಯಿತು. ಮೈಸೂರು ಶ್ರೀಮನ್‌ಮಹಾರಾಜರು ಇದರ ಅಧ್ಯಕ್ಷತೆಯನ್ನು ವಹಿಸಿ ಅನುಗ್ರಹ ಮಾಡಿದರು ಸಮ್ಮೇಳನವು ನಡೆದ ಪ್ರದೇಶವನ್ನು ಚೆನ್ನಾಗಿ ಅಲಂಕರಿಸಲಾಗಿತ್ತು. ಭಾರತವ್ಯಾಪ್ತಂತದಿಂದಲೂ ಅನೇಕ ಪ್ರಮುಖ ಜೈನ ವಿದ್ವಾಂಸರುಗಳೂ, ಅನೇಕ ಮಹನೀಯರೂ, ಮಹಿಳೆಯರೂ, ಇತರರೂ ಬಂದಿದ್ದರು ನಿರ್ದಿಷ್ಟ ಕಾಲಕ್ಕೆ ಪ್ರಭುಗಳು ಆಗಮಿಸಲು ಅವರಿಗೆ ಸ್ವಾಗತವಿತ್ತು ಒಳಕ್ಕೆ ಕರೆತರಲಾಯಿತು. ನಂತರ ದೇವತಾಪ್ರಾರ್ಥನೆ, ಸ್ವಾಗತ ಭಾಷಣ ನಡೆದ ಮೇಲೆ ಪ್ರಭುಗಳು ಅಮೋಘ ಭಾಷಣ ಮಾಡಿ ಜೈನ ಚರಿತ್ರೆ, ಅವರ ಇತಿಹಾಸ, ಅವರ ಪ್ರಖ್ಯಾತಿ, ಗೊಮ್ಮಟನ ಖ್ಯಾತಿ, ಜೈನ ತತ್ವ, ಸಾಹಿತ್ಯ ಮುಂತಾದುವನ್ನು ತಿಳಿಸಿದರು ನಂತರ ಸಭೆಯು ವಂದನಾಸಮರ್ಪಣೆಯೊಡನೆ ಮುಗಿಯಿತು.

ಗೊಮ್ಮಟನಿಗೆ ವಿಸ್ಮಯದೀಪ ಅಲಂಕಾರ ಮಾಡಿದ್ದನ್ನು ನೋಡಿಕೊಂಡು ಯಾತ್ರಾರ್ಥಿಗಳೂ, ಪ್ರೇಕ್ಷಕರುಗಳೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಹದಿನೈದು ದಿನಗಳಿಂದ ಗಾಜಗಲಿಸಿಂದ ಕೂಡಿದ್ದ ಶ್ರವಣಬೆಳಗೊಳವು ಇದು ಖಾಲಿಯಾಗುತ್ತಿದೆ ಪ್ರೇಕ್ಷಕರುಗಳೂ ಹಿಂತಿರುಗುತ್ತಿದ್ದಾರೆ ಒಟ್ಟಿನಲ್ಲಿ ಮಹಾ ಮಸ್ತಕಾಭಿಷೇಕವು ಯಶಸ್ವಿಯಾಗಿ ನಡೆಯಿತು.

ANTARANGA
YUGADI SPECIAL
(To be published on 14 - 4 - 1940)

Best Medium for Advertisement

FOR FURTHER PARTICULARS, APPLY TO:-

ADVERTISEMENT MANAGER

ANTARANGA, UDIPI.

THE VIJAYA BANK LTD.,
ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆಮಂತ್ರ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,
ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ದಿವಂಗತ ಕೌಜಲಗಿ ಶ್ರೀನಿವಾಸರಾಯರು

ಕರ್ನಾಟಕದ ಪ್ರಸಿದ್ಧ ಮುಂದಾಳುಗಳೂ ರಾಜಕಾರಣ ಧುರಂಧರರೂ ಕೆಚ್ಚೆದೆಯವರೂ ಆದ ವಿಜಾಪುರದ ಕರ್ನಾಟಕ ಭೂಷಣ ಕೌಜಲಗಿ ಶ್ರೀನಿವಾಸ ರಾಯರು ಕಳೆದ ತಾ ೨೨ನೇ ತಾರೀಖಿನ ದಿವಸ ರಾತ್ರಿ ೧೦ ಘಂಟೆಗೆ ಮೃತರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಮರಣ ಸಮಯಕ್ಕೆ ಅವರಿಗೆ ೬೭ ವರ್ಷಗಳಾಗಿದ್ದವು. ಕೌಜಲಗಿಯವರು ಮೊದಲಿನಿಂದಲೂ ರಾಷ್ಟ್ರೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು ೧೯೦೫-೬ನೇ ಇಸವಿಯ ಸ್ವದೇಶೀ ಬಹಿಷ್ಕಾರ ಚಳವಳಿಯಲ್ಲಿ ಒಳ್ಳೇ ಉತ್ಸಾಹದಿಂದ ಭಾಗವಹಿಸಿದ್ದರು. ಲೋಕಮಾನ್ಯ ಟಿಳಕರ ನೇತೃತ್ವದಲ್ಲಿ ಹೋಮರೂಲು ಚಳವಳಿಯಲ್ಲಿ ಕೆಲಸಮಾಡಿದರು. ಅನಂತರ ಮಹಾತ್ಮಾ ಗಾಂಧಿಯವರು ಅಸಹಕಾರ ಹೂಡಿದಾಗ ತಮ್ಮ ವಕೀಲಿಗೆ ಶರಣು ಹೊಡೆದು ಜಿಲ್ಲೆಯಲ್ಲಿ ಇಷ್ಟೇ ಅಲ್ಲದೆ ಅಖಂಡ ಕರ್ನಾಟಕದಲ್ಲಿ ಸಂಚರಿಸಿ ಜಾಗೃತಿಯನ್ನುಂಟು ಮಾಡಿದರು. ಕಾಂಗ್ರೆಸ್ ರಾಜಕಾರಣದಲ್ಲಿ ಕರ್ನಾಟಕಕ್ಕೆ ಸ್ವತಂತ್ರಪ್ರಾಂತವನ್ನು ಕಲ್ಪಿಸಿಕೊಟ್ಟ ಶ್ರೇಯಸ್ಸಿನಲ್ಲಿ ದಿವಂಗತರಿಗೆ ಹೆಚ್ಚಿನ ಪಾಲು ಸಿಕ್ಕುವುದು ಅಸಹಕಾರ ಚಳವಳಿಯಲ್ಲಿ ಇವರಿಗೆ ಸೆರೆಮನೆವಾಸವನ್ನನುಭವಿಸಬೇಕಾಯಿತು ಈಗೆರಡು ವರ್ಷಗಳಿಂದ ಅವರು ಹಾಸಿಗೆ ಹಿಡಿದು ಪ್ರತ್ಯಕ್ಷ ಕೆಲಸ ಮಾಡದಂತಾಗಿದ್ದರೂ ಕೊನೆಯವರೆಗೂ ಅವರು ಕಾಂಗ್ರೆಸಿನ ನಿಸ್ಸೀಮ ಭಕ್ತರಾಗಿದ್ದರು.

ಶ್ರೀನಿವಾಸರಾಯರು ಒಳ್ಳೇ ತ್ಯಾಗಿಗಳು, ದಾನಶೂರರು. ವಿಜಾಪುರದಲ್ಲಿ ಇವರ ಮನೆಯೆಂದರೆ ರಾಷ್ಟ್ರೀಯ ಕಾರ್ಯಕರ್ತರಿಗೆ ಆಶ್ರಯಸ್ಥಾನವಿದ್ದಂತೆ. ಇವರು ತಮ್ಮ ವ್ಯವಸಾಯದಲ್ಲಿ ಗಳಿಸಿದ ಹಣದಲ್ಲಿ ಬಹ್ವಂಶವು ರಾಷ್ಟ್ರ ಕಾರ್ಯಕ್ಕಾಗಿ ವಿನಿಯೋಗಿಸಲ್ಪಟ್ಟಿತು. ವಕೀಲಿಯಲ್ಲಿ ಇವರೊಳ್ಳೇ ನಿಷ್ಣಾತರು ಅಧಿಕಾರಿಗಳಿಗೆ ಎಂದಿಗೂ ಸೊಪ್ಪುಹಾಕದವರು. ಒಳ್ಳೇ ಸ್ವಾಭಿಮಾನಿಗಳು ವಕೀಲರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವಲ್ಲಿ ನಿರತರು. ಸಾಹಿತಿಗಳೂ ಸಂಗೀತ ಪ್ರಿಯರೂ ಕವಿಗಳೂ ಕುಶಾಗ್ರಬುದ್ಧಿಯವರೂ ಇವರಾಗಿದ್ದರು. ವೃದ್ಧಾಪ್ಯದಲ್ಲಿ ಕೂಡ ತರುಣರಂತೆ ಒಳ್ಳೇ ಉತ್ಸಾಹದಿಂದ ಕಾರ್ಯಮಾಡುತ್ತಿದ್ದರು.

ಗ್ಯಾರಂಟಿ ಇನಾಮುಗಳು	ನಂಬ್ರ 12

36,000 ರೂಪಾಯಿಗಳು

ಸಂಪೂರ್ಣ ಸರಿಯಾದ 16 ಇನಾಮುಗಳೊಳಗೆ ಹಂಚಲ್ಪಡುವುದು.

ಮುದ್ರೆ ಹಾಕಿ ಇಡಲ್ಪಟ್ಟಿರುವ ನಮ್ಮ ಉತ್ತರಕ್ಕೆ ಸರಿಹೋಲುವ ಅಡ್ಡಗೆರೆಗಳಲ್ಲಿಯ ಪ್ರಥಮದ ಎರಡು ಸಂಖ್ಯೆಗಳು ಸರಿಯಾದಲ್ಲಿ ಅಂಕಣಗಳಿಗೆ ರೂಪಾಯಿ ಐದರ ಇನಾಮು ಕೊಡಲಾಗುವುದು

ನಮ್ಮ ಸಾಂಕೇತಿಕ ಉತ್ತರದ ಯಾವುದಾದರೊಂದು ಸಾಲಿಗೆ ಅನುಕ್ರಮವಾಗಿ ಸರಿಯಾದ ಉತ್ತರ ಕಳುಹಿಸುವ 'ರನ್ನರ್ಸ್ ಅಪ್ಸ್' ಇವರಿಗೆ ಕಲಾ ಒಂದರ ರೂ. 20ರಂತೆ ಕೊಡಲಾಗುವುದು ಭದ್ರವಾಗಿರಿಸಲ್ಪಟ್ಟ ನಮ್ಮ ಉತ್ತರದ ಮೊದಲಿನ ಎರಡು ಸಮಾನಾಂತರ ಸಾಲುಗಳಿಗೆ ಅನುಕ್ರಮವಾಗಿ ಸರಿಯಾದ ಸಾಲುಗಳನ್ನು ಸೂಚಿಸುವವರಿಗೆ ರೂ 200ರ ಗ್ಯಾರಂಟಿ ಇದೆ ಅತಿ ಹೆಚ್ಚಿನ ಉತ್ತರ ಕಳುಹಿಸುವವರಿಗೆ ರೂ. 150 ರಿಸರ್ವ್ ಮಾಡಲಾಗಿದೆ.

ಕೊಡಲ್ಪಟ್ಟಿರುವ ಚೌಕಟ್ಟಿನಲ್ಲಿ 3ರಿಂದ 18ರ ವರೆಗಿನ ಅಂಕೆಗಳನ್ನು ಅಡ್ಡಕ್ಕೆ ಮತ್ತು ನೀಟಕ್ಕೆ ಪ್ರತಿಯೊಂದು ಸಾಲಿನ ಮತ್ತು ಮೂಲೆಗಳಿಂದ ಮೂಲೆಗಳಿಗೆ ಎರಡು ಸಾಲಿನ ಸಂಖ್ಯೆಗಳನ್ನು ಕೂಡಿಸಿದರೆ ಜುಮ್ಲಾ 42 ಆಗತಕ್ಕದ್ದು. ಪ್ರತಿಯೊಂದು ಅಂಕೆಯೂ ಒಮ್ಮೆಯೇ ಉಪಯೋಗಿಸಲ್ಪಡಬೇಕು ಉತ್ತರ ಕಳುಹಿಸುವ ಕೊನೆಯ ತಾ 11-3-40, ಫಲಿತಾಂಶ ಪ್ರಕಟಿಸುವ ತಾರೀಖು 20-3-40.

ಪ್ರತಿಯೊಂದು ಉತ್ತರಕ್ಕೆ ಪ್ರವೇಶಹಾಸಲು ರೂ. 1 ಅಥವಾ 3ಕ್ಕೆ ರೂ. 2 ಅಥವಾ 8ರ ಪ್ರತಿಯೊಂದು ಸೆಟ್ಟಿಗೆ ರೂ 5.

ಕ್ರಮಗಳು:— ಖಾಲಿ ಕಾಗದದಲ್ಲಿ ಸ್ಪಷ್ಟವಾಗಿ ಬರೆದು, ಆಗತ್ಯವಾದ ಪ್ರವೇಶ ಹಾಸಲಿನ ಸಮೇತವಾಗಿ ಎಷ್ಟು ಬೇಕಾದರೂ ಉತ್ತರಗಳನ್ನು ಕಳುಹಿಸಬಹುದು. ಪ್ರವೇಶಹಾಸಲನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸತಕ್ಕದ್ದು. ಪ್ರವೇಶಹಾಸಲು ಸಂಗ್ರಹವಾದ ಮೇರೆಗೆ ಇನಾಮುಗಳು ಬದಲಾಯಿಸಲ್ಪಡುವವು. ಆದರೆ ಬೊಂಬಾಯಿಯ ಪ್ರಸಿದ್ಧವಾದ ಬ್ಯಾಂಕೊಂದರಲ್ಲಿ ಡೆಪೋಸಿಟ್ ಇಡಲ್ಪಟ್ಟಿರುವ ಉತ್ತರವನ್ನು ಹೋಲುವ ಸರಿಯಾದ ಉತ್ತರ ಕಳುಹಿಸುವ ಪ್ರತಿಯೊಬ್ಬರಿಗೆ ರೂ. 2250ರ ವರೆಗಿನ ಇನಾಮಿನ ಗ್ಯಾರಂಟಿ ಇದೆ. ಫಲಿತಾಂಶವನ್ನು ಪಡೆಯುವುದಕ್ಕಾಗಿ ವಿಳಾಸ ಸಮೇತವಾದ ಲಕೋಟೆಯೊಂದನ್ನು ಸ್ಟಾಂಪು ಸಹಿತ ಲಗ್ತೀಕರಿಸತಕ್ಕದ್ದು ಮೆನೇಜರರ ನಿರ್ಣಯವೇ ಕೊನೆಯದೂ ನಿಂಧುವಾದುದೂ ಆಗಿರುವುದು.

ಜುಮ್ಲಾ 46ರ ಹಿಂದಿನ ಸಮಸ್ಯೆಯ ಮುದ್ರೆ ಹಾಕಿ ಇಡಲ್ಪಟ್ಟ ಉತ್ತರ.

1ನೇ ಸಾಲು	5,	13,	10,	18
2ನೇ ಸಾಲು	14,	19,	4,	9
3ನೇ ಸಾಲು	11,	8,	15,	12
4ನೇ ಸಾಲು	16,	6,	17,	7

ನಿಮ್ಮ ಉತ್ತರ ಮತ್ತು ಪ್ರವೇಶ ಹಾಸಲನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ,

ದಿ ಮೆನೇಜರ್,
ಪ್ರೆಸಿಡೆನ್ಸಿ, ಕಮರ್ಶಿಯಲ್ ಸಿಂಡಿಕೇಟ್
ಮುಂಬಾದೇವಿ, ಬೊಂಬಾಯಿ 2.

The Manager,
Presidency, Commercial Syndicate,
Mumbadevi, BOMBAY 2.

ನವಯುಗದ ವಾರಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಿ ಅಪಾರ ಲಾಭ ಪಡೆಯಿರಿ.

ಮೈಸೂರು ಪತ್ರ

ಮೈಸೂರು ಶ್ರೀಮನ್ ಮಹಾರಾಜರವರ ಚರಿತ್ರಾರ್ಹವಾದ ಪ್ರವಾಸ— ಮೈಸೂರು ಶ್ರೀಮನ್ ಮಹಾರಾಜರವರು ಶ್ರೀ ಪ್ರಿನ್ಸ್ ಜಯಚಾಮರಾಜ ಒಡೆಯರ್, ದಿವಾನ್ ಸರ್ ಮಿರ್ಜಾ ಮತ್ತು ಇತರ ಹಲವು ಪರಿವಾರದೊಡನೆ, ಇದೇ ಮಾಹೆ ತಾ 21 ಸಂಜೆ ವಿಶೇಷ ರೈಲೊಂದರಲ್ಲಿ ಮೈಸೂರಿಂದ ಪ್ರಯಾಣ ಬೆಳಸಿ ದಾವಣಗೆರೆಗೆ ಆಗಮಿಸಿದರು. ಪ್ರಭುಗಳು ದಾವಣಗೆರೆಗೆ ಆಗಮಿಸಿ ಹಲವು ಶತಮಾನಗಳ ಮೇಲಾಗಿದ್ದರಿಂದ, ಅವರ ದರ್ಶನಕ್ಕೋಸ್ಕರ ಅಧಿಕ ಸಂಖ್ಯೆಯಲ್ಲಿ ಪ್ರಜೆಗಳು ಹಾಜರಿದ್ದು ಪ್ರಭುಗಳಿಗೆ ಅಭೂತ ಪೂರ್ವ ಸ್ವಾಗತವಿತ್ತ ಮೇಲೆ ಪ್ರಭುಗಳು ಪೌರ ಸಭೆಯವರೇರ್ಪಡಿಸಿದ್ದ ಸೊಗಸಾದ ಮಂಟಪಕ್ಕೆ ಬಂದು ಪೌರ ಸಭೆ ಮತ್ತು ಸಾರ್ವಜನಿಕರು ಸುಂದರ ಬೆಳ್ಳಿ ಕ್ಯಾಸ್ಕೆಟ್ಟಿನಲ್ಲಿರಿಸಿದ ಬಿನ್ನವತ್ತಳೆ ಸ್ವೀಕರಿಸಿ ಅಮೋಘ ಭಾಷಣ ಮಾಡಿದರು ಸಂಜೆ ದಿವ್ಯಾಲಂಕೃತ ಮೋಟಾರ ಬಂಡಿಯಲ್ಲಿ ಪ್ರಿನ್ಸರೊಡನೆ ಮೆರವಣಿಗೆ ಮುಖ್ಯ ಬೀದಿಯಲ್ಲಿಹೋದ್ದನ್ನು ಲಕ್ಷಾಂತರ ಪ್ರಜೆಗಳು ನೋಡಿ ಸಂತೋಷ ಪಟ್ಟು ರಾಜಭಕ್ತಿ ಅರ್ಪಿಸಿದರು. ಪ್ರಭುಗಳು ಮಾರನೆ ಬೆಳಗ್ಗೆ ಚಿತ್ರದುರ್ಗಕ್ಕೆ ಆಗಮಿಸಲು ಅಲ್ಲಿಯ ಪ್ರಜೆಗಳೂ ಸ್ವಾಗತಕೋರಲು, ಪ್ರಭುಗಳು ಪೌರ ಸಭೆಯವರೇರ್ಪಡಿಸಿದ್ದ ಅಲಂಕೃತ ಮಂಟಪಕ್ಕೆ ಬಂದು, ಪೌರ ಸಭೆಯವರು ಬೆಳ್ಳಿ ಕರಂಡದಲ್ಲಿ ಅರ್ಪಿಸಿದ ಬಿನ್ನವತ್ತಳೆ ಸ್ವೀಕರಿಸಿ ಚಿತ್ರದುರ್ಗ ಚರಿತ್ರೆ ವಿವರಿಸಿ ಚರಿತ್ರಾರ್ಹವಾದ ಭಾಷಣ ಮಾಡಿದರು. ನಂತರ ಪ್ರಿನ್ಸ್‌ರೊಡನೆ ಪ್ರಮುಖ ಬೀದಿಗಳಲ್ಲಿ ಅಮ್ಮಯ್ಯನವರ ಉಡುಪಿನಲ್ಲಿ ಮೆರವಣಿಗೆ ಹೋಗಲು ಆ ಊರಿಗೆ ಊರೇ ಹಾಜರಿದ್ದು ಪ್ರಭುಗಳ ದರ್ಶನದಿಂದ ಆನಂದ ಪಟ್ಟು ರಾಜಭಕ್ತಿ ತೋರಿಸಿದರು. ನಂತರ ಮಾರನೆ ಬೆಳಗ್ಗೆ ಪ್ರಭುಗಳ ಪರಿವಾರದವರು, "ಪ್ರಭುಗಳ ದರ್ಶನಕ್ಕೆಂದು ಹಾತೊರೆಯುತ್ತಿದ್ದ" ಹೊಳಲ್ಕೆರೆಗೆ ಭೇಟಿ ಕೊಟ್ಟು ಅಲ್ಲಿಯ ಪೌರ ಸಭೆ ಮತ್ತು ಪ್ರಜೆಗಳ ಬಿನ್ನವತ್ತಳೆ ಸ್ವೀಕರಿಸಿ ಗಮನಾರ್ಹವಾದ ಭಾಷಣ ಮಾಡಿದ ಮೇಲೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೋಗಲು ಹೊಳಲ್ಕೆರೆ ಪ್ರಜೆಗಳ ಆನಂದ ಸಾಗರದಲ್ಲಿ ಹುರಿದುಂಬಿದರೆಂದರೆ ಅತಿಶಯೋಕ್ತಿ ಆಗಲಾರದು. ಕೊನೆಗೆ ಪ್ರಭುಗಳು ಶಿವಗಂಗೆಗೆ ಆಗಮಿಸಿ, ವೇದಾವತಿ ನದಿಗೆ ಅಡ್ಡಲಾಗಿ ಹಾಕಿರುವ ಶ್ರೀ ಕೃಷ್ಣರಾಜೇಂದ್ರ ಸೇತು ಪ್ರಾರಂಭೋತ್ಸವ ನಡೆಸಿ ದಿವ್ಯ ಭಾಷಣ ಮಾಡಲು ಪ್ರವಾಸವು ಮುಕ್ತಾಯಗೊಂಡು ಪ್ರಭುಗಳ ಪರಿವಾರದವರು ಮೈಸೂರಿಗೆ ಹಿಂತಿರುಗಿದರು. ನಂತರ ಪ್ರಭುಗಳು ಶ್ರವಣಬೆಳಗೊಳದಲ್ಲಿ ನಡೆವ ಮಹಾ ಮಸ್ತಕಾಭಿಷೇಕದಲ್ಲಿ ಭಾಗವಹಿಸಲು ಶ್ರವಣಬೆಳಗೊಳಕ್ಕೆ ಪ್ರಯಾಣ ಮಾಡಿದರು. (ಮಹಾ ಮಸ್ತಕಾಭಿಷೇಕ ವಿಚಾರವಾಗಿ ಬೇರೊಂದು ಸ್ಥಳದಲ್ಲಿ ಪ್ರಕಟವಾಗಿದೆ.)

ಹೊಸ ಅಧ್ಯಕ್ಷ ಮತ್ತು ಉಪಾಧ್ಯಕ್ಷರು.—ಬೆಂಗಳೂರು ಪೌರ ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ನಿಂತಿದ್ದ ಉಮೇದುವಾರರುಗಳ ಚುನಾವಣೆ ನಡೆದು ಡಾ|| ಎಂ ರಾಜನ್ ಮತ್ತು ಶ್ರೀ ಬಿ ಯಸ್. ವೆಂಕಟಪ್ಪ ಶೆಟ್ಟರನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳನ್ನಾಗಿ ಚುನಾಯಿಸಲಾಯಿತು. (ಇವರುಗಳಿಗೆ 'ನವಯುಗ'ದ ಅಭಿನಂದನೆಗಳನ್ನು ಈ ಮೂಲಕ ಸಲ್ಲಿಸಲಾಗಿದೆ. ಸಂ. ನ)

ಬೊಂಬಾಯಿ ಪತ್ರ

23-2-1940

ಯುದ್ಧದಿಂದಾಗಿ ಸಾಮಾನುಗಳಿಗೆ ಬೆಲೆ ಏರಿದ್ದರಿಂದ ದಿನನಿತ್ಯದ ಜೀವನವೇ ಕಷ್ಟಸಾಧ್ಯವಾಗಿದೆಯಾದ್ದರಿಂದ ಸಂಬಳವನ್ನು ಏರಿಸಬೇಕೆಂದು ಬಟ್ಟೆ ಮಿಲ್ಲುಗಳ ಕೆಲಸಗಾರರು, ತಮ್ಮ ನ್ಯಾಯವಾದ ಹಕ್ಕನ್ನು ಕೇಳುತ್ತಿದ್ದರು, ಇದರಿಂದುಂಟಾಗುವ ಹಾನಿಯನ್ನು ತಪ್ಪಿಸಬೇಕೆಂದು ಮಿಲ್ಲಧಿಕಾರಿಗಳು ಶೇಕಡಾ 8⅓% ಜಾಸ್ತಿ ಕೊಡತೊಪ್ಪಿ ಕೊನೆಗೆ ಸಂಬಳಗಾರರ ಪ್ರಯತ್ನದಿಂದಾಗಿ 10% ಕೊಡಲೊಪ್ಪಿ ಇದನ್ನು ಹಣದ ರೂಪದಲ್ಲೀ ಅಂದರೆ ದಿನ ಒಂದಕ್ಕೆ 2ಆಣೆ ಅಂದರೆ ತಿಂಗಳೊಂದರ ರೂ. 3-4-0 ಜಾಸ್ತಿ ಕೊಡಲೊಪ್ಪಿರುವರು. ಆದರೆ ಗಾರರ ಪ್ರತಿನಿಧಿಗಳು, 40% 20% ಶೇಕಡಾ ಕೇಳುತ್ತಿದ್ದವರು ಹಾನಿಯನ್ನು ಹೇಗಾದರೂ ತಡೆಯಬೇಕೆಂದು ಶೇಕಡಾ 15%ರ ಏರಿಕೆಗೆ ಒಪ್ಪಿಕೊಂಡಿರುವರು, ಹೀಗೆ ರಾಜಿ ಪಂಚಾಯಿತಿಯು ಬಿದ್ದುಹೋಗಲು, ಇಬ್ಬರಿಗೆಲ್ಲಾ ಕರಿಮೋಡ ಕವಿದಂತಾಗಿದೆ ಕೆಂಪುಧ್ವಜ ಕಾರ್ಮಿಕರ ಸಂಘದ ಸಭೆಯು 25 ತಾರೀಕಿಗೆ ಜರಗಲಿದ್ದು ಈ ವಿಷಯವನ್ನೆಲ್ಲ ಕೆಲಸಗಾರರ ಮುಂದಿಟ್ಟು, ಮಹಾಸಂಪ್ರದಾಯ ದಿವಸವನ್ನು ನಿಶ್ಚಯಿಸಲಿರುವರು ಇಷ್ಟರೊಳಗಾಗಿಯೇ ಸ್ಪಿನ್ನಿಂಗ್ ಮಿಲ್ಲಿನ 3000 ಕೆಲಸಗಾರರು ಸಂಪುಹೂಡಿರುವರು, ಕೆಲಸಗಾರರ ಪ್ರತಿನಿಧಿಗಳು ಪಂಚಾಯಿತಿಯ ಸಂಪೂರ್ಣ ಚರಿತ್ರೆಯು ಹೊರಗೆ ಬೀಳುವ ತನಕ ಹಾಡಗರೆದ ಅಶಿಸ್ತಿಗೆ ಕಾರದೆ, ಜತೆಗೆ ತಿಂಗಳ ಸಂಬಳವನ್ನು ಪ್ರತಿಯೊಬ್ಬರೂ ಸ್ವೀಕರಿಸಿ ಬರುವ ಮಹಾಸಂಪಿನ ತಾರೀಕನ್ನು ನಿರೀಕ್ಷಿಸುತ್ತಿರಬೇಕೆಂದು ಹೇಳುತ್ತಿರುವರು, ಕನ್ಸಿಲಿಯೇಷನ್ ಬೋರ್ಡಿನವರ ಅಭಿಪ್ರಾಯದ ಮೇರೆಗೆ 'Arbitration'ನಿಗೂ ಕೆಲಸಗಾರರ ಪ್ರತಿನಿಧಿಗಳು ಒಪ್ಪಿಕೊಂಡಿರುವರು, ಶೇಕಡಾ 15%ರಂತೆ ಜಾಸ್ತಿ ಸಂಬಳ ಕೇಳಿದ್ದರಲ್ಲಿ ಕೆಲಸಗಾರರ ತಪ್ಪಿಲ್ಲ.

ಮೈ. ಎಂ. ಪಿ. ಸಿ. ಸಭೆ—ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ತೃತೀಯ ಅಧಿವೇಶನವು ಮೈಸೂರು ನಗರದಲ್ಲಿರುವ "ಸಾಹುಕಾರ್ ಚೆನ್ನಯ್ಯನವರ ಸುಂದರ ವಿಶಾಲ ಬಂಗಲೆಯಲ್ಲಿ ನಿನ್ನೆ ಮತ್ತು ಮೊನ್ನೆ ನಡೆಯಿತು. ಈ ಸಭೆಗೆ ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ಪ್ರತಿನಿಧಿಗಳು ಮತ್ತು ಸ್ಥಳೀಯ ಪ್ರೇಕ್ಷಕರುಗಳು ಬಂದಿದ್ದರು. ಬೆಳಗ್ಗೆ ಕಾಂಗ್ರೆಸ್ ತ್ರಿವರ್ಣ ಧ್ವಜಾರೋಹಣ ನಡೆಯಿತು, ಮಧ್ಯಾಹ್ನ ಸಭೆಯು ಮಾಜಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕರ್ನಾಟಕ ಮುಂದಾಳು ದಿವಂಗತ ಶ್ರೀನಿವಾಸ ರಾವ್ ಕೌಜಲಗಿ ಮತ್ತು ಹೊಸಕೊಪ್ಪದ ಬಗ್ಗೆ ಸಂತಾಪ ಸೂಚಿಸಲಾಯಿತು, ಸಭೆಯಲ್ಲಿ ಅನೇಕ ವಿಷಯಗಳ ಮೇಲೆ ಚರ್ಚೆ ನಡೆಯಿತು ಕೆಲವು ಪ್ರಾಮುಖ್ಯ ಠರಾವುಗಳು ಪಾಸಾದುವು. ಸತ್ಯಾಗ್ರಹ ಮತ್ತು ಕಾನೂನು ಭಂಗ ಚಳುವಳಿಯನ್ನು ನಿಲ್ಲಿಸುವ ಠರಾವು ಪಾಸಾದುವು ಸಭೆಯು ಯಶಸ್ವಿಯಾಗಿ ನಡೆಯಿತು.

ಮಹಾತ್ಮರಿಗೆ ಬಹುಮಾನ—ಮೈಸೂರು ಶ್ರೀಮದ್ಯುವರಾಜರು ಇಂಗ್ಲೆಂಡಿನಿಂದ ನಾಲ್ಕು ಸೊಗಸಾದ ಕರಿಮೇಕೆ ತಂದಿದ್ದಾರೆಂದೂ, ಅದನ್ನು ಮಹಾತ್ಮರಿಗೆ ಬಹುಮಾನವಾಗಿ ಕೊಡುತ್ತಾರೆಂದೂ ತಿಳಿಸುವುದು

ರೈಲ್ವೇ ವರ್ಕ್ ಷಾಪ್ ಲಾಕ್ ಔಟ್—ಮುಕ್ತಾಯಗೊಂಡು ವರ್ಕ್ ಷಾಪ್ ಬಾಗಿಲು ತೆಗೆದು ಕೆಲಸಗಾರರು ಶಾಂತ ರೀತಿಯಿಂದ ಮಾಮೂಲು ಕೆಲಸ ಮಾಡುತ್ತಿದ್ದಾರೆ.

KARANTH, ACHARYA & CO.,

EXPERTS IN COMPANY SECRETARIAL WORK AND LINGUISTS

UDIPI - - - - - S. INDIA

MEMORANDUM & ARTICLES, PROSPECTUSES AND OTHER PERIODICAL RETURNS UNDER COMPANY LAW DRAFTED TRANSLATION WORK IN HINDI, KANNADA, ENGLISH, SANSKRIT, MARATI & BENGALI UNDERTAKEN

Entire Satisfaction Guaranteed.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೨೯-೨-'೪೦

ಹರಿಜನ ಸೇವಕ ಸಂಘ.

ಹಿಂದೂ ದೇಶದಲ್ಲಿ ಸಾಮಾಜಿಕ ಸಮಾನತೆಗಾಗಿ ನಡೆಸಲ್ಪಟ್ಟಿರುವ ಹೋರಾಟದ ಇತಿಹಾಸವು ಬರೆಯಲ್ಪಡುವಾಗ ಅದರಲ್ಲಿ ಹರಿಜನ ಸೇವಕ ಸಂಘವು ಅಗ್ರಗಣ್ಯ ಸ್ಥಾನ ಪಡೆಯದಿರಲಾರದು. ಗಾಂಧಿಜಿಯವರಿಂದ ಸ್ಥಾಪಿಸಲ್ಪಟ್ಟಿರುವ ಈ ಸಂಘವು ಅವರ ಆಶಯ ಮತ್ತು ನೇತೃತ್ವದಲ್ಲಿ ಒಂದೆಡೆ ದೀನದಲಿತ ಪತಿತ ವರ್ಗದ ಉದ್ಧಾರ ಕಾರ್ಯವನ್ನೂ ಇನ್ನೊಂದೆಡೆ ಅವರ ಕುರಿತು ಸವರ್ಣೀಯ ಹಿಂದುಗಳ ಹೃದಯವನ್ನೂ ಮಾರ್ಪಡಿಸುವ ಪ್ರಯತ್ನವನ್ನು ಎಡೆಬಿಡದೆ ಕಳೆದ 7 ವರ್ಷಗಳಿಂದ ನಡಿಸುತ್ತಾ ಬಂದಿರುವುದು. ಇಂದೀಗ ಶ್ರೀ. ಥಕ್ಕರ್ ಬಾಪಾರವರು ಅದರ ಸಂಚಪ್ರಾಣವಾಗಿರುವರು. ಅವರ ಪರಿಶ್ರಮದಿಂದಾಗಿ ಹರಿಜನ ಸೇವಕ ಸಂಘವು ದೇಶದ ಪ್ರತಿಪ್ರಾಂತ, ಜಿಲ್ಲೆ ಮತ್ತು ತಾಲೋಕುಗಳಲ್ಲಿ ಶಾಖೋಪಶಾಖೆಗಳನ್ನು ಪಡೆದು ಜನತೆಯ ಪ್ರೀತಿ ಮತ್ತು ವಿಶ್ವಾಸಕ್ಕೆ ಪಾತ್ರವಾಗಿರುವುದು.

ಸಂಘವು ಕೆಲವೊಂದು ವಿಶಿಷ್ಟ ಕಾರ್ಯಗಳಿಗಾಗಿ ಸರಕಾರದ ಗ್ರಾಂಟನ್ನು ಪಡೆದಿರುವುದಾದರೂ ತನ್ನ ಹೆಚ್ಚಿನ ಕೆಲಸವನ್ನೆಲ್ಲಾ ಜನತೆಯ ಉದಾರ ಸಹಾಯದಿಂದಲೇ ನಡಿಸುತ್ತಾ ಬಂದಿರುವುದು. ಪೂನಾ ಒಡಂಬಡಿಕೆಯಾದ ಮೇಲೆ ಮಹಾತ್ಮ ಗಾಂಧಿಜಿಯವರು ದೇಶದಲ್ಲೆಲ್ಲಾ ಸಂಚರಿಸಿ ಹರಿಜನ ಸೇವಾಸಂಘದ ಸ್ಥಾಪನೆಗಾಗಿ ಹಣ ಸಂಗ್ರಹಿಸಿರುವುದು ಮಾತ್ರವಲ್ಲದೆ ಅನಂತರವೂ ಸಂದರ್ಭ ದೊರೆತಾಗಲೆಲ್ಲಾ ಅವರು ಹರಿಜನೋದ್ಧಾರಕ್ಕಾಗಿ ಧನ ಶೇಖರಿಸುತ್ತಲೇ ಇದ್ದಾರೆ. ಅವರೆಲ್ಲಿಯಾದರೂ ಪ್ರಯಾಣ ಮಾಡುವಾಗ ಜನರು ಸಂದರ್ಶನಕ್ಕಾಗಿ ಅವರನ್ನು ಸುತ್ತುಗಟ್ಟಿದರೆ, ಹರಿಜನ ಫಂಡಿಗಾಗಿ ದುಡ್ಡು ಕೊಡಿರೆಂದು ಮಹಾತ್ಮರು ಕೈಗಳನ್ನು ಮುಂದೊಡ್ಡುವರು ಅವರ ಸ್ವಹಸ್ತಾಕ್ಷರದ ಸ್ಮಾರಕ ಬೇಕಾದರೆ ಹರಿಜನ ಸಂಘಕ್ಕೆ ಹಣ ಸಹಾಯ ಮಾಡಬೇಕೆಂಬ ಶರ್ತ ಹಾಕುವರು. ಹೀಗೆ ಅಲ್ಪ ಸ್ವಲ್ಪವಾಗಿ ಮಾತ್ರವಲ್ಲದೆ ಶ್ರೀಮಂತರಿಂದ ಸಹಸ್ರಗಟ್ಲೆ ಹಣ ಸಂಗ್ರಹಿಸುತ್ತಿರುವರು. ಇತ್ತಲಾಗಿ ನ್ಯೂಡೆಲ್ಲಿಯಲ್ಲಿ ನಡೆದ ಹರಿಜನ ಸೇವಕ ಸಂಘದ ವಾರ್ಷಿಕ ಸಭೆಯು ಮುಂದಿರಿಸಲ್ಪಟ್ಟ ವರದಿಯ ಪ್ರಕಾರ ಕಳೆದ ಒಂದೇ ವರ್ಷದಲ್ಲಿ ಸಂಘವು ಹರಿಜನ ಶಾಲೆ, ವಿದ್ಯಾರ್ಥಿ ಭವನ, ವೈದ್ಯಕೀಯ ಸಹಾಯ, ಬಾವಿ ಕೆರೆಗಳನ್ನು ತೋಡಿಸುವುದು ಮತ್ತು ರಿಪೇರಿ ಮಾಡಿಸುವುದು, ಹರಿಜನ ವಿದ್ಯಾರ್ಥಿ ವೇತನವೇ ಮೊದಲಾದ ಕೆಲಸಗಳಿಗಾಗಿ ರೂಪಾಯಿ 3,50,000 ವ್ಯಯಿಸಿರುವುದು. ಹರಿಜನ ಸೇವಾಸಂಘವು ಹಲವು ಶಿಕ್ಷಣ ಕೇಂದ್ರಗಳನ್ನು ನಡಿಸುತ್ತಿರುವುದು, ಕಳೆದ ವರ್ಷ ಸಂಘದ ಬೇರೆ ಬೇರೆ ಶಾಖೆಗಳು, ನೂರರ ವರೆಗಣ ವಿದ್ಯಾರ್ಥಿ ಭವನ ಮತ್ತು ಆಶ್ರಮಗಳನ್ನು ನಡಿಸಿರುತ್ತವೆ. ಇದು ಹೊರತು ಗ್ರಾಮ ಕೈಗಾರಿಕೆಗಳಲ್ಲಿ ಹರಿಜನರನ್ನು ತರಬೇತಿ ಮಾಡುವ ಕೇಂದ್ರಗಳು ದೇಶದ ಹಲವು ಭಾಗಗಳಲ್ಲಿ ಸ್ಥಾಪಿತವಾಗಿರುತ್ತವೆ.

ಅಸ್ಪೃಶ್ಯತೆಯೇ ಅಮಾನುಷ ಭೇದಗಳು ದೇಶದ ಇತರ ಭಾಗಗಳಿಗಿಂತಲೂ ಮದ್ರಾಸ್ ಪ್ರಾಂತದಲ್ಲಿ ವಿಶೇಷವಾಗಿ ಹಬ್ಬಿರುವುದು. ಹರಿಜನರನ್ನು ಸವರ್ಣೀಯ ಹಿಂದುಗಳು ಪಶು ಪ್ರಾಣಿಗಳಿಗಿಂತಲೂ ಕಳತೆಯಾಗಿ ಕಾಣುತ್ತಿರುವರು. ಹರಿಜನೋದ್ಧಾರ ಕಾರ್ಯದಲ್ಲಿ ಮದ್ರಾಸ್ ಪ್ರಾಂತವು ಗಣನೀಯ ಸ್ಥಾನ ಪಡೆದಿರುವುದು ಆಶೋದಯದ ಚಿಹ್ನೆಯಾಗಿದೆ. ಹರಿಜನೋದ್ಧಾರಕ್ಕಾಗಿ ಹಣವ್ಯಯಿಸುವುದರಲ್ಲಿಯೂ, ಅವರಿಗಾಗಿ ವಿದ್ಯಾರ್ಥಿ ಭವನಗಳನ್ನು ನಡಿಸುವುದರಲ್ಲಿಯೂ ಆಂಧ್ರ ದೇಶವು ಪ್ರಥಮ ಸ್ಥಾನ ಪಡೆದಿರುತ್ತದೆ. ತಮಿಳುನಾಡಿನಲ್ಲಿ ದೇವಸ್ಥಾನ ಪ್ರವೇಶ ಚಳವಳವು ಜಯಶೀಲವಾಗಿ ನಡಿಸಲ್ಪಟ್ಟಿದೆ. ಮಧುರೆಯ ಮೀನಾಕ್ಷಿ ದೇವಸ್ಥಾನವೇ ಮೊದಲಾದ ಪ್ರಖ್ಯಾತ ಪುಣ್ಯಕ್ಷೇತ್ರಗಳೀಗ ಹರಿಜನ ಪ್ರವೇಶಕ್ಕೆ ತೆರೆಯಲ್ಪಡುವ ಮಹತ್ತಾದ ಕ್ರಾಂತಿಯುಂಟಾಗಿದೆ.

ಹರಿಜನ ಸೇವಕ ಸಂಘವು ಈ ವರೆಗೆ ಮಾಡಿರುವ ಕೆಲಸವು ಮಹತ್ತಾದುದಾದರೂ ಮುಂದೆ ಮಾಡಬೇಕಾದುದು ಅತಿ ಹೆಚ್ಚಾಗಿರುತ್ತದೆ. ಈಗ ಗುಲಾಮರಿಗಿಂತಲೂ ಕಳತೆಯಾಗಿರುವ 60 ಮಿಲ್ಯ ಹಿಂದೀಯರು ಸಾಮಾಜಿಕವಾಗಿ ಸವರ್ಣ ಹಿಂದುಗಳೋಪಾದಿ ಪರಿಗಣಿಸಲ್ಪಡುವಂತೆ ಅವರಿಗೆ ವಿದ್ಯೆಬುದ್ಧಿಯನ್ನಿತ್ತು ಸುಧಾರಿಸಿ ಅವರ ಸಾಂಪತ್ತಿಕೋನ್ನತಿಯನ್ನು ಸಾಧಿಸಿ ಅವರು ರಾಷ್ಟ್ರದ ಅತ್ಯುಪಯುಕ್ತ ಹಾಗೂ ಗಣನೀಯ ಅಂಗವಾಗುವಂತೆ ಮಾಡುವ ಹಿರಿದಾದ ಜವಾಬ್ದಾರಿಯು ಹರಿಜನ ಸಂಘದ ಮೇಲಿದೆ. ಈ ಜವಾಬ್ದಾರಿಯನ್ನದು ತೃಪ್ತಿಕರವಾಗಿ ನಿರ್ವಹಿಸಿದರೆ ಹಿಂದೂ ಸಮಾಜದ ದೊಡ್ಡ ಕಳಂಕವೊಂದು ತೊಲಗಿಹೋದಂತಾಗಿ ಅದರಲ್ಲಿ ಮಹತ್ತಾದೊಂದು ಸುಧಾರಣೆಯನ್ನುಂಟು ಮಾಡಿದಂತಾಗುವುದು.

ಹರಿಜನೋದ್ಧಾರ ಕಾರ್ಯದ ಜವಾಬ್ದಾರಿಯನ್ನೆಲ್ಲಾ ಹರಿಜನ ಸೇವಾಸಂಘದ ತಲೆಯ ಮೇಲೆ ಹೇರಿಬಿಟ್ಟರೆ ಪ್ರಯೋಜನವಿಲ್ಲ. ಅದೊಂದರಿಂದಲೇ ಎಲ್ಲಾ ಕೆಲಸವನ್ನು ಮಾಡಲು ಸಾಧ್ಯವಿಲ್ಲ. ಅದಕ್ಕೆ ಜನತೆಯ ಉತ್ಸಾಹಪರ ಸಹಕಾರ ಬೇಕಾಗಿದೆ. ವಿಶೇಷವಾಗಿ ಧನ ಸಹಾಯವು ಅತ್ಯಗತ್ಯವಾಗಿದೆ. ಮುಖ್ಯವಾಗಿ ಸವರ್ಣ ಹಿಂದುಗಳು ತಮ್ಮ ಮನೋವೃತ್ತಿಯನ್ನು ಬದಲಾಯಿಸಿ ತಮ್ಮ ಧರ್ಮಬಂಧುಗಳು ಹಿಂದೂ ಸಮಾಜದ ಪ್ರಾಮುಖ್ಯಾಂಗವೂ ಆಗಿರುವ ಹರಿಜನರಿಗೆ ಸರಿಸಮಾನ ಸ್ಥಾನವೀಯಬೇಕು. ಸಾರ್ವಜನಿಕ ಸಂಘಗಳೂ, ಪ್ರಾಂತಿಕ ಸರಕಾರಗಳೂ, ಸ್ಥಾನಿಕ ಸಂಸ್ಥೆಗಳೂ ಹರಿಜನೋದ್ಧಾರ ಕಾರ್ಯದಲ್ಲಿ ಹೆಚ್ಚಿನ ಪಾಲು ಪಡೆಯಬೇಕು. ಅದಕ್ಕೆ ಅನುಕೂಲ ವಾತಾವರಣವುಂಟಾಗುವಂತೆ ಜನ ಜಾಗ್ರತಿಯನ್ನುಂಟುಮಾಡುವ ಕೆಲಸ ಹರಿಜನ ಸೇವಾ ಸಂಘದ್ದು. ನಿಸ್ವಾರ್ಥ ಕೆಲಸಗಾರರ ಮೂಲಕ ಈ ಕೆಲಸವನ್ನದು ಜಯಶೀಲವಾಗಿ ನಡಿಸುತ್ತಾ ಬಂದಿರುವುದು.

ಗಾಂಧಿ ಸೇವಾಸಂಘದ ಪುನರ್ಘಟನೆ

ಗಾಂಧಿ ಸೇವಾಸಂಘದ ಈ ವರ್ಷದ ಅಧಿವೇಶನವು ಬಂಗಾಳದ ಮಲಿಕಂಡ ಎಂಬಲ್ಲಿ ನಡೆದು ಅದರ ಘಟನೆಯನ್ನೇ ಮಾರ್ಪಡಿಸಲಾಗಿದೆ. ಗಾಂಧಿ ಸೇವಾ ಸಂಘದ ಸದಸ್ಯರು ರಾಜಕೀಯದಲ್ಲಿ ಭಾಗವಹಿಸಬಾರದೆಂಬ ಮೊದಲಿನ ನಿಯಮವನ್ನು ಬದಲಾಯಿಸಿ ಈಗ ಎರಡು ವರುಷಗಳಾದುವು. ಅದರ ಪ್ರಮುಖ ಮೆಂಬರರು ಕೆಲವರು ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಅಗ್ರಭಾಗ ವಹಿಸಿ ಕೆಲಸ ಮಾಡಹತ್ತಿದುದರಿಂದ ಸೇವಾಸಂಘವೇ ರಾಜಕೀಯ ಅಧಿಕಾರ ಪಡೆಯುವ ಆಶೆಯುಳ್ಳದಾಗಿರುವುದೆಂಬ ಟೀಕೆಯುಂಟಾಗಿರುವುದು. ಇದರಿಂದ ಗಾಂಧಿ ಸೇವಾ ಸಂಘದ ಕುರಿತು ಕೂಡಾ ಕೆಲವಂದಿ ಬಲಪಕ್ಷೀಯರಲ್ಲಿ ದ್ವೇಷವುಂಟಾಗಲು ಆಸ್ಪದವಾಗಿರುವುದು. ಗಾಂಧಿವಾದವನ್ನು ಕಾಂಗ್ರೆಸಿನ ಮೂಲಕ ಕಾರ್ಯಕ್ಕೆ ಹಚ್ಚಿ ಮುಂದೊತ್ತಬೇಕೆಂಬ ಉದ್ದೇಶದಿಂದ ಸೇವಾ ಸಂಘದವರು ರಾಜಕೀಯದಲ್ಲಿ ಭಾಗವಹಿಸಬಹುದೆಂಬ ನಿರ್ಣಯಮಾಡಲಾಯಿತು. ಆದರೆ ಅದರ ಪರಿಣಾಮವಾಗಿ ಅಧಿಕಾರ ಸ್ಪರ್ಧೆಯಲ್ಲಿ ಸೇವಾ ಸಂಘವು ಭಾಗವಹಿಸಿರುವದೆಂಬ ಅಪವಾದವುಂಟಾಗಿರುವುದು. ಕಾಂಗ್ರೆಸ್ಸಿನೊಳಗೆ ಬಲಪಕ್ಷೀಯರೆನಿಸುವವರ ಮೇಲೆ ಬಂದಿರುವ ಅಧಿಕಾರ ಕಾರಣದ ಆರೋಪದ ಕಳಂಕವು ಗಾಂಧಿ ಸೇವಾಸಂಘಕ್ಕೂ ತಗಲುವಂತಾಗಿರುವುದು. ಕಳೆದ 3 ವರ್ಷಗಳ ಅನುಭವದಿಂದ, ಗಾಂಧಿ ಸೇವಾ ಸಂಘವನ್ನು ಸಂಪೂರ್ಣವಾಗಿ ರಾಜಕೀಯದಿಂದ ವಿಮುಕ್ತವಾಗಿರಿಸಬೇಕೆಂಬ ನಿರ್ಧಾರವು ಗಾಂಧಿಜಿಯವರೇ ಮೊದಲಾದವರಲ್ಲುಂಟಾಗಿರುವುದು. ಆದುದರಿಂದ ಮಲಿಕಂಡದ ಪರಿಷತ್ತಿನಲ್ಲಿ ಸಂಘದ ಘಟನೆಯೇ ಬದಲಾಯಿಸಲ್ಪಟ್ಟು ಈಗ ಕಾಂಗ್ರೆಸಿನಲ್ಲಿ ಪ್ರಮುಖ ಭಾಗವಹಿಸುವ ಮುಖಂಡರಾರೂ ಗಾಂಧಿ ಸೇವಾ ಸಂಘದ ಮೆಂಬರರಾಗದಂತಾಗಿದೆ. ಇನ್ನು ಮುಂದೆ ಗಾಂಧಿ ಸೇವಾಸಂಘದ ಸದಸ್ಯರು ರಾಜಕೀಯದಲ್ಲಿ ಯಾವ ಭಾಗವನ್ನೂ ವಹಿಸದೆ ವಿಶುದ್ಧ ಗಾಂಧಿವಾದದ ಮೇರೆಗಣ ವಿಧಾಯಕ ಕಾರ್ಯಕ್ರಮವನ್ನು ನಡಿಸುವ ದೀಕ್ಷಾಬದ್ಧರಾಗುವರು ಕಠಿಣ ಅಹಿಂಸಾನಿಷ್ಠೆಯುಳ್ಳವರಾಗಿ ಸತ್ಯ ಮತ್ತು ಧರ್ಮವನ್ನು ಪಾಲಿಸಿ ಜನಹಿತ ಸಾಧನೆಯ ಕೆಲಸವನ್ನು ನಡಿಸುವರು. ಸೇವಾಸಂಘದ ಆಡಳಿತಕ್ಕಾಗಿ ಶ್ರೀ. ಕೃಷ್ಣದಾಸ್ ಜಾಜುರವರು ಅಧ್ಯಕ್ಷ ಮತ್ತು ಶ್ರೀ. ಆರ್. ಎಸ್. ಧೋತ್ರೆಯವರು ಕಾರ್ಯದರ್ಶಿಯಾಗಿ, ಶ್ರೀ. ಕಿಶೋರಿಲಾಲ್ ಮಶ್ರುವಾಲ, ಗೋಪಬಂಧು ಚೌಧುರಿ, ಸ್ವಾಮಿ ಅಭಯದೇವ್, ಸತೀಶ ಚಂದ್ರ ಗುಪ್ತ, ಎಸ್. ಪಿ ಪಟ್ವರ್ಧನ್, ದಿಲ್ಖುಶ್ ದಿವಾಂಜಿ ಮತ್ತು ರಿಷ್ಣದಾಸ್ ಗಾಂಧಿಯವರು ಸದಸ್ಯರಾಗಿ ಒಂದು ಕಾರ್ಯ ನಿರ್ವಾಹಕ ಮಂಡಲಿಯು ನೇಮಿಸಲ್ಪಟ್ಟಿರುವುದು.

ಜಾತೀಯ ಎವಾರ್ಡಿನ ಅನ್ಯಾಯ

ಬ್ರಿಟಿಷ್ ಸರಕಾರವು ದೇಶದ ಮೇಲೆ ಹೊರಿಸಿರುವ ಜಾತೀಯ ಎವಾರ್ಡಿನಿಂದಾಗಿ ಪ್ರಯೋಜನ ಪಡೆದವರು ಆಳರಸರಲ್ಲದೆ ಹಿಂದುಗಳಾಗಲಿ ಮುಸಲ್ಮಾನರಾಗಲಿ ಅಲ್ಲ. ಅವರಿಂದ ಹಿಂದು ಮುಸಲ್ಮಾನರೊಳಗಣ ಭೇದವು ಮತ್ತಷ್ಟು ಹೆಚ್ಚುವಂತಾಗಿರುವುದು. ವಿದೇಶೀಯರು ಮತ್ತು ವಿದೇಶಿ ಆಳ್ವಿಕೆಯು ಹಿಂದು ದೇಶದಲ್ಲಿ ದೀರ್ಘಕಾಲ ಸ್ಥಿರವಾಗಿರುವಂತಾಗಿರುವುದು. ಬಂಗಾಳ ಮತ್ತು ಅಸ್ಸಾಮಿಗೆ ಜಾತೀಯ ಎವಾರ್ಡಿನಿಂದ ಅತಿ ಹೆಚ್ಚಿನ ಅನ್ಯಾಯವಾಗಿದೆ ಮಹಾತ್ಮಾ ಗಾಂಧಿಯವರು ಬಂಗಾಳವನ್ನು ಸಂದರ್ಶಿಸಿದಾಗ ಹಲವರು ಈ ವಿಷಯವನ್ನವರ ಮನಗಾಣಿಸಿರುವರು. ಆದರೆ ಅವರೇನು ಮಾಡುವುದು? ಈ ಜಾತೀಯ ಎವಾರ್ಡು ಅಳಿಯದುಳಿವನಕ ಸ್ವರಾಜ್ಯವು ಅಸಾಧ್ಯವೆಂದೇ ಗಾಂಧಿಜಿಯವರ ಅಭಿಮತ. ಅದರ ಅನ್ಯಾಯವನ್ನು ಮನಗಂಡು ಒಂದೋ ಬ್ರಿಟಿಷ್ ಸರಕಾರವು ಅದನ್ನು ಬದಲಾಯಿಸಬೇಕು ಇಲ್ಲವೆ ಬಂಡಾಯದ ಮೂಲಕ ಹಿಂದೀಯರು ಮಾರ್ಪಡಿಸಬೇಕು. ಪರಾಧೀನವಾಗಿರುವ ಹಿಂದು ದೇಶದ ಮೇಲೆ ಬ್ರಿಟಿಷ್ ಸರಕಾರವು ತನ್ನಿಚ್ಛೆಯಂತೆ ಹೊರಿಸಿರುವ ಅನ್ಯಾಯವದು. ಅದನ್ನು ಸ್ವೀಕರಿಸುವ ಯಾ ನಿರಾಕರಿಸುವ ಸ್ವಾತಂತ್ರ್ಯ ಹಿಂದೀಯರಿಗೇನೂ ಇರುವುದಿಲ್ಲ. ಅದನ್ನು ಹಿಂದೀಯರೇ ಪರಸ್ಪರ ಒಪ್ಪಿಗೆಯಿಂದ ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಒಂದು ವೇಳೆ ಹಿಂದು ಮುಸಲ್ಮಾನರೊಡಂಬಡಿದರೂ, ಯುರೋಪಿಯಾನರು ಎಂದೂ ಒಪ್ಪುವದಾಗಿಲ್ಲ, ಕೇವಲ ಕೆಲವು ಸಹಸ್ರ ಮಂದಿ ಯುರೋಪಿಯಾನರು ಬಂಗಾಳದಲ್ಲಿ 26ರ ವರೆಗೂ ಎಸೆಂಬ್ಲಿ ಮೆಂಬರಿಕೆಗಳನ್ನು

ಮಿತ್ರ ರಾಷ್ಟ್ರಗಳ ಯುದ್ಧೋದ್ದೇಶ

ಮಿ. ಚೇಂಬರ್ಲೇನರ ಭಾಷಣ

ನಾಝಿ ಪಕ್ಷದ ವಾರ್ಷಿಕೋತ್ಸವದಲ್ಲಿ ಹಿಟ್ಲರರ ಭಾಷಣ.

ಇಟಲಿ, ರಶ್ಯ ಮತ್ತು ಜಾಪಾನಿನೊಡನೆ ಮೈತ್ರಿ

ಚಿಕ್ಕ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಮತ್ತು ಸುರಕ್ಷಿತತೆ

ಇದೇ ತಾರೀಕು 24ರಲ್ಲಿ ಬ್ರಿಟಿಶ್ ಪ್ರಧಾನ ಮಂತ್ರಿಗಳಾದ ಮಿ ಚೇಂಬರ್ಲೇನರು ಬರ್ಮಿಂಗ್ಹೇಮಿನಲ್ಲಿ ಭಾಷಣ ಮಾಡುತ್ತಾ, ಮಿತ್ರ ರಾಷ್ಟ್ರಗಳ ಯುದ್ಧದ ಉದ್ದೇಶವನ್ನು ಸುಸ್ಪಷ್ಟಗೊಳಿಸಿದರು "ರಾಜ್ಯಗಳನ್ನು ಗೆಲ್ಲುವುದು ಮಾತ್ರವಲ್ಲದೆ ಜನಾಂಗಗಳನ್ನು ನಾಶಪಡಿಸುವುದೂ ಜರ್ಮನಿಯ ಉದ್ದೇಶವಿರುವಂತಿದೆ. ಜರ್ಮನಿಯ ನೆರೆಕರೆಯ ರಾಷ್ಟ್ರಗಳು ನಿರಂತರವಾದ ಬೆದರಿಕೆಯಿಂದಿರಬೇಕಾಗಿದೆ ತಟಸ್ಥ ರಾಷ್ಟ್ರಗಳ ವ್ಯಾಪಾರಿ ಹಡಗುಗಳನ್ನು ಕೂಡಾ ನಾಝಿಗಳು ಇಚ್ಛಾನುಸಾರ ನಾಶಮಾಡುತ್ತಿದ್ದಾರೆ. ವ್ಯಾಪಾರಿ ಹಡಗುಗಳನ್ನು ಮುಳುಗಿಸಿ ಅವುಗಳ ನಾವಿಕರನ್ನು ಸಮುದ್ರದಲ್ಲಿ ತೇಲಿಹೋಗಬಿಡುತ್ತಾರೆ. ಜರ್ಮನಿಯು ಎಂತಹ ಅತ್ಯಾಚಾರ ಮಾಡಿದರೂ ಈ ಹೋರಾಟದ ಕಟ್ಟಕಡೆಯ ಪರಿಣಾಮವೇನೆಂಬ ವಿಷಯದಲ್ಲಿ ನಮಗೆ ಸಂಶಯವಿಲ್ಲ ಇಂದಿಗೆ ಫ್ರೆಂಚ್ ಮತ್ತು ಬ್ರಿಟಿಷ್ ಸರಕಾರಗಳು ಒಂದೇ ಸರಕಾರವೆಂಬಂತೆ ನಡೆಯುತ್ತಿವೆ ಫ್ರೆಂಚ್ ಮತ್ತು ಬ್ರಿಟಿಷ್ ಜನಾಂಗಗಳೊಳಗೂ, ಸೈನಿಕರೊಳಗೂ ಅತ್ಯಂತ ಸೌಹಾರ್ದವುಂಟಾಗಿದೆ.

ಯುದ್ಧ ಹಡಗುಗಳ ರಕ್ಷಣೆಯಿಂದ ವ್ಯಾಪಾರಿ ಹಡಗುಗಳ ಚಲನವಲನವು ಸುರಕ್ಷಿತವಾಗಿ ನಡೆಯುತ್ತಿದೆ. ಇವರ ವರೆಗೆ 9000ದ ವರೆಗೆ ಬ್ರಿಟಿಷ್ ಹಡಗುಗಳು ಸಂಚರಿಸಿರುತ್ತವೆ. ನಷ್ಟವಾದವುಗಳು ಕೇವಲ ಅಲ್ಪ. ರಾಷ್ಟ್ರಗಳನ್ನು ನಾಶಗೊಳಿಸಿ ಇಡೀ ಲೋಕದ ಮೇಲೆ ಅಧಿಕಾರ ನಡಿಸಬೇಕೆಂಬುದೇ ಜರ್ಮನಿಯ ಆಕಾಂಕ್ಷೆ ನಾವು ಜರ್ಮನಿಯ ಈ ಮಹಿಮೆಯನ್ನು ತಡೆಗಟ್ಟುವುದಕ್ಕಾಗಿ ಹೋರಾಡುತ್ತಿದ್ದೇವೆ. ಆದರೆ ನಮ್ಮ ಉದ್ದೇಶವು ಜನಾಂಗಗಳೊಳಗೆ ವೈತ್ರಿಭಾವವನ್ನುಂಟುಮಾಡುವುದಲ್ಲದೆ ಅವುಗಳನ್ನು ನಾಶಪಡಿಸುವುದಲ್ಲ ಸ್ವತಂತ್ರವಾಗಿದ್ದ ಜನಾಂಗಗಳ ಮೇಲೆ ಜರ್ಮನಿಯು ಹೊರಿಸಿದ ಅನ್ಯಾಯಗಳನ್ನು ನಿವಾರಿಸಲು ನಾವು ಹೋರಾಡುತ್ತಿದ್ದೇವೆ ಇತರರನ್ನು ಗುಲಾಮಗಿರಿಗೆಳೆಯದೆ ನಾವು ನಮ್ಮ ಉದ್ದೇಶ ಸಾಧಿಸಲೆಳಸುತ್ತೇವೆ. ವೈಯಕ್ತಿಕ ಮನಸ್ಸಾಕ್ಷಿಯ ಮತ್ತು ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಗಾಗಿ ನಾವು ಯುದ್ಧ ಹೂಡಿರುವುದಾಗಿದೆ ಹಿಂಸೆ, ಯೆಹೂದ್ಯರ ಬಲಾತ್ಕಾರ ಸಂಗ್ರಹ, ಆಕ್ರಮಣ ವಿಲಾಸಯೇ ಮೊದಲಾದ ಅನ್ಯಾಯಗಳನ್ನು ಯುರೋಪಿನಿಂದ ನಿವಾರಿಸಿ ಶಾಂತಿ ಮತ್ತು ಸುರಕ್ಷಿತತೆಯನ್ನು ನೆಲೆಗೊಳಿಸುವುದೇ ನಮ್ಮ ಆಕಾಂಕ್ಷೆ

ಶಾಂತಿಯ ಶರ್ತಗಳು

ಈ ಉದ್ದೇಶಗಳನ್ನು ಸಾಧಿಸುವುದಾದರೂ ಹೇಗೆ? ಮೊದಲಾಗಿ ಪೋಲರು ಮತ್ತು ಜೆಕ್ಕರು ಸ್ವಾತಂತ್ರ್ಯ ಪಡೆಯಬೇಕು. ಎರಡನೇದಾಗಿ, ಏನಾದರೊಂದು ವಾಗ್ದಾನ ಮತ್ತು ಆಶ್ವಾಸನೆ ಕೊಡಲ್ಪಟ್ಟರೆ ಅದು ಪಾಲಿಸಲ್ಪಡುವುದೆಂಬ ಭರವಸೆಯು ನಮಗುಂಟಾಗುವಂತಾಗಬೇಕು. ಜರ್ಮನಿಯ ಪ್ರಕೃತದ ಸರಕಾರದಲ್ಲಿ ಯುರೋಪಿನ ಭವಿಷ್ಯವೇನೂ ಸುರಕ್ಷಿತವಾಗಿರುವ ಹಾಗಿಲ್ಲ. ಇಂತಹ ಸುರಕ್ಷಿತತೆಯನ್ನುಂಟುಮಾಡುವ ಜವಾಬ್ದಾರಿಯು ಜರ್ಮನಿಯದು. ಬಲವೇ ನ್ಯಾಯವೆಂಬ ತತ್ವವನ್ನು ತಾನು ತ್ಯಜಿಸಿ ಬಿಟ್ಟಿರುವೆನೆಂದು ಲೋಕಕ್ಕೆ ಪ್ರತಗೊಳಿಸಿ ಅಭಯವನ್ನುಂಟುಮಾಡುವ ಜವಾಬ್ದಾರಿಯು ಜರ್ಮನಿಯದು ತಮ್ಮಿಚ್ಛೆಯಂತಹ ಯುರೋಪನ್ನು ರಚಿಸಬೇಕೆಂದು ಫ್ರಾನ್ಸ್ ಮತ್ತು ಇಂಗ್ಲೆಂಡುಗಳೇನೂ ಆಶಿಸುವುದಿಲ್ಲ. ಲೋಕದಲ್ಲಿ ಚಿರಶಾಂತಿಯು ನೆಲೆಗೊಳ್ಳಬೇಕಾದರೆ ರಾಷ್ಟ್ರಗಳೆಲ್ಲಾ ಶಸ್ತ್ರತ್ಯಾಗ ಮಾಡಬೇಕು ಜರ್ಮನಿಗೆ ಈ ಮನಸ್ಸಿದ್ದರೆ ಅದನ್ನದು ಕಾರ್ಯರೂಪವಾಗಿ ತೋರಿಸಬೇಕು ಯುರೋಪಿನಲ್ಲಿ ಆ ಸುರಕ್ಷಿತತೆಯನ್ನುಂಟುಮಾಡಿದುದು ಜರ್ಮನಿ ಅದನ್ನು ಪುನಹ ಸ್ಥಾಪಿಸುವ ಜವಾಬ್ದಾರಿಯನ್ನು ಕೂಡಾ ಅದೇ ವಹಿಸಬೇಕು. ಅಂತಹ ಮನಸ್ಸನ್ನದು ತೋರಿಸಿದರೆ, ಅದರ ಸಾಂಪತ್ತಿಕ ಸಂಕಷ್ಟಗಳನ್ನು ನಿವಾರಿಸಲು ಇತರ ರಾಷ್ಟ್ರಗಳು ಸಹಾಯ ಮಾಡಲು ಸಿದ್ಧವಾಗಿಯೇ ಇರುವವು." ಎಂಬುದೇ ಮಿ. ಚೇಂಬರ್ಲೇನರ ಭಾಷಣದ ಸಾರಾಂಶ.

ನಮಗೆ ಜೀವಿಸಲು ಸಾಕಷ್ಟು ಸ್ಥಳ ಬೇಕು

ತಾ. 24ರಲ್ಲಿ ನಾಝಿ ಪಕ್ಷ ಸ್ಥಾಪನೆಯ 20ನೇ ವಾರ್ಷಿಕೋತ್ಸವವು ಮ್ಯುನಿಚಿನಲ್ಲಿ ಆಚರಿಸಲ್ಪಡುವಾಗ ಹರ್. ಹಿಟ್ಲರರು ಈ ಕೆಳಗಣ ಸಾರಾಂಶದ ಭಾಷಣ ವಿತ್ತಿರುವರು. "ಕಳೆದ ಮಹಾಯುದ್ಧಾನಂತರ ಜರ್ಮನಿಯು ಪ್ರಚಂಡ ಜಾಗತಿಕ ವಂಚನೆಗೆ ಬಲಿಯಾಗಿದೆ. ಜರ್ಮನಿಯೊಂದಿಗೆ ಇಟೆಲಿಯೂ ವಂಚಿಸಲ್ಪಟ್ಟಿರುವುದು ಹಿಂದು ದೇಶವೂ ವಂಚನೆಗೊಳಗಾಗಿರುವುದು. ಅರಬರೂ ವಂಚಿಸಲ್ಪಟ್ಟಿರುವರು, ಕಳೆದ ಮಹಾಯುದ್ಧಾನಂತರ ಲೋಕದ ಹೊಸ ವ್ಯವಸ್ಥೆಯಾಗುವುದು, ಎಲ್ಲರೂ ಶಸ್ತ್ರತ್ಯಾಗಮಾಡಿ ಚಿರಶಾಂತಿ ಸ್ಥಾಪಿತವಾಗುವುದೆಂಬ ಮಿತ್ರ ರಾಷ್ಟ್ರಗಳ ವಾಗ್ದಾನವನ್ನು ನಂಬಿ ಜರ್ಮನ್ ಜನಾಂಗವು ಮೋಸಹೋಯಿತು ಇಡೀ ಹಿಂದೂ ದೇಶದಲ್ಲಿ ವಿರೋಧವೆದ್ದಿರುವಾಗ ಅರಬರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡಿಸುತ್ತಿರುವಾಗ ಮಿ ಚೇಂಬರ್ಲೇನರು ಲೋಕದ ಮೇಲೆ ಅಧಿಕಾರ ನಡಿಸುವ ಜರ್ಮನರ ಆಕಾಂಕ್ಷೆಯ ಕುರಿತು ಮಾತಾಡುತ್ತಿರುವರು. ದೇವರು ಲೋಕವನ್ನು ಬ್ರಿಟಿಷರಿಗೆಂದೇನೂ ಸೃಷ್ಟಿಸಿರುವುದಿಲ್ಲ. ಒಂದು ಜನಾಂಗವು ಲೋಕದ ಮುಕ್ಕಾಲಂಶವನ್ನಾಳಬೇಕೆಂದೇನೂ ದೇವರ ಇಚ್ಛೆ ಇರವುದಿಲ್ಲ

ಮಿ ಚರ್ಚಿಲ್ಲರು ನನ್ನನ್ನು ಗ್ರೇಷಿಸುವರೆನ್ನುವರಾದರೆ ನಾನದನ್ನು ಪ್ರಶಂಸೆಯಾಗಿ ತೆಗೆದುಕೊಂಡು ಅದಕ್ಕಾಗಿ ಅವರನ್ನು ವಂದಿಸುವೆನು. ಮಿ. ಚೇಂಬರ್ಲೇನರು, ನನ್ನನ್ನು ನಂಬಲು ಸಾಧ್ಯವಿಲ್ಲೆಂದು ಹೇಳುವರಾದರೆ ನಾನು ಅವರಿಂದ ಸಂತೋಷಗೊಳ್ಳುವೆನು, ಯಾಕೆಂದರೆ ಜರ್ಮನ್ ರಾಷ್ಟ್ರಕ್ಕೆ ದ್ರೋಹಮಾಡಿದ ಅಪರಾಧವನ್ನವರು ನನ್ನ ಮೇಲೆ ಹಾಕಲು ಸಾಧ್ಯವಿಲ್ಲ. ಏಡನ್ ಮತ್ತು ಹೋರ್‌ಬೆಲೀಶರು ನನ್ನನ್ನು ಕಪಟಿಯೆಂದರೆ ನಾನು ಆನಂದಿಸುವೆನು ಯಾಕೆಂದರೆ ನನ್ನನ್ನವರು ಸ್ನೇಹಿತನಾಗಿ ಪರಿಗಣಿಸಲು ಸಾಧ್ಯವಿಲ್ಲ.

ಜರ್ಮನಿ ಮತ್ತು ಇಟೆಲಿಗಳು ಬಾಂಧವ್ಯದೆರಕದಿಂದೊಂದಾಗೂಡಿವೆ ಇಂದೀಗ ರಶ್ಯದ ಮತ್ತು ನಮ್ಮ ಸಂಬಂಧವೂ ಬದಲಾಗಿದೆ. ರಶ್ಯ ಮತ್ತು ಜರ್ಮನಿಗಳು ಪರಸ್ಪರ ಸಹಕಾರದಿಂದ ನಡೆಯಲಿವೆ. ಜಾಪಾನ್ ಮತ್ತು ಜರ್ಮನಿಗಳೊಳಗೂ ಸ್ನೇಹಭಾವವಿದೆ. ಹೀಗೆ 3 ದೊಡ್ಡ ರಾಷ್ಟ್ರಗಳು ಒಂದಾಗಿವೆ. ನಮ್ಮ ಸೇನೆಯು ಉತ್ಕೃಷ್ಟವಾಗಿದೆ. ಜರ್ಮನಿಯ ಸಾಂಪತ್ತಿಕ ಸ್ಥಿತಿಯು ಉತ್ತಮವಾಗಿದೆ. ಸಾಂಪತ್ತಿಕ ಮುತ್ತಿಗೆಯಿಂದಾಗಲಿ, ಸೇನಾಬಲದಿಂದಾಗಲಿ ಜರ್ಮನಿಯನ್ನು ಮುರಿಯಲು ಸಾಧ್ಯವಿಲ್ಲ ನಾವು ಜಯಶೀಲರಾಗಬೇಕು. ಆಗಿಯೇ ಆಗುವೆವು ಲೋಕವು ಪಿಶಾಚಿಗಳಿಂದ ತುಂಬಿದರೂ ನಾವು ಜಯ ಹೊಂದುವೆವು."

ಗಾಂಧಿಯವರ ಭಾಷಣ

ಇದೇ ತಾ. ೨೫ರಲ್ಲಿ ಮಹಾತ್ಮ ಗಾಂಧಿಯವರು ಸರ್ದಾರ್ ವಲ್ಲಭಾಯಿಯವರು ಮಾಲಿಕೊಂಡವನ್ನು ಬಿಟ್ಟು ಹೋಗುವ ಮೊದಲು ಸಾರ್ವಜನಿಕ ಭಾಷಣ ಮಾಡಿದರು. ಸುಮಾರು 30,000 ಜನರು ನೆರೆದಿದ್ದರು ಡಾ ಪ್ರಫುಲ್ಲ ಘೋಷರು ಗಾಂಧಿಜಿ ಮತ್ತು ಸರ್ದಾರರನ್ನೂ ಸ್ವಾಗತೀಕರಿಸಿ, ಬಂಗಾಳದಲ್ಲಿ ಖಾದಿ ಪ್ರಚಾರ ಕೆಲಸಕ್ಕಾಗಿ ವಿನಿಯೋಗಿಸಲು ರೂ 18,000 ದಷ್ಟರ ಥೈಲಿಯನ್ನೊಪ್ಪಿಸಿದರು. 1920ರಲ್ಲಿ ನಾಗಪುರ ಕಾಂಗ್ರೆಸ್ಸಿನಲ್ಲಿ ನಿರ್ಣೈಸಲ್ಪಟ್ಟಂತೆ, ಹಿಂದುಮುಸಲ್ಮಾನ ಐಕ್ಯ, ಅಸ್ಪೃಶ್ಯತಾನಿವಾರಣೆ, ಮತ್ತು ಮದ್ಯಪಾನ ನಿಷೇಧವು ಸ್ವರಾಜ್ಯದ ಆಧಾರ ಸ್ತಂಭಗಳಾಗಿವೆ. ಇಷ್ಟೊಂದು ದೀರ್ಘಕಾಲದ ಪ್ರಯತ್ನದಿಂದ ಕೂಡಾ ಸಾಕಷ್ಟು ಖಾದಿ ಪ್ರಚಾರವಾಗಿರುವುದಿಲ್ಲ ಖಾದಿಯ ಬೆಲೆಯು ಕಡಿಮೆಯಾಗಿರುವುದಿಲ್ಲ. ಪ್ರತಿಯೊಬ್ಬನೂ ದಿನಕ್ಕೊಂದು ಗಂಟೆ ನೂತರೆ ಖಾದಿಯು ಅಗ್ಗವಾಗುವುದು. ವಿಶೇಷವಾಗಿ ಹಿಂದು ಮತ್ತು ಮುಸಲ್ಮಾನ ಸ್ತ್ರೀಯರು ನೂಲಬೇಕೆಂದು ಗಾಂಧಿಯವರು ವಿನಂತಿ ಮಾಡಿಕೊಂಡರು ಈ ಭಾಷಣವಾದ ಮೇಲೆ ಮಹಾತ್ಮರು ಮಾಲಿಕಂಡದಲ್ಲಿ ಹೊರಟು ಸ್ಟೀಮರ್ ಮೂಲಕ ಕಲ್ಕತ್ತಕ್ಕೆ ಒಂದಿರುವರು ಸುಮಾರು 300 ಮಂದಿ ಕಾಂಗ್ರೆಸ್ ಮುಖಂಡರು ಮಾಲಿಕಂಡಕ್ಕೆ ಬಂದಿರುವರು ಫೆಬ್ರವರಿ ತಾ 28ರಲ್ಲಿ ಪಾಟ್ನಾದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ನಡೆಯಲಿದೆ ಇದರಲ್ಲಿ ಗಾಂಧಿಜಿಯವರು ಭಾಗವಹಿಸಲಿದ್ದಾರೆ.

ತಟಸ್ಥ ರಾಷ್ಟ್ರಗಳ ಹಡಗ ನಾಶ

ಯುದ್ಧ ಆರಂಭವಾದಂದಿನಿಂದ ಫೆಬ್ರವರಿ ತಾ. ೨೦ರ ವರೆಗೆ ವೈರಿ ಮತ್ತು ತಟಸ್ಥ ರಾಷ್ಟ್ರಗಳ 456 ವ್ಯಾಪಾರಿ ಹಡಗುಗಳು ಮುಳುಗಿಸಲ್ಪಟ್ಟಿರುವವೆಂದು ಜರ್ಮನ್ ಸರಕಾರವು ಪ್ರಕಟಿಸಿರುತ್ತದೆ.

ಪ್ರೇಮ ಸಾಮ್ರಾಜ್ಯ

ಮ ಸಾ ಮ್ರಾ ಜ್ಯ

ಹಾಸ್ಯರಸ ಪ್ರಧಾನವಾದ
ಅತ್ಯುಜ್ವಲ ಸಾಮಾಜಿಕ ನಾಟಕ.

ತಾ. 9—3—40ಕ್ಕೆ ಮಂಗಳೂರಲ್ಲಿ
ತಾ. 16—3—40ಕ್ಕೆ ಉಡುಪಿಯಲ್ಲಿ

ಅಭಿನಯಿಸುವವರು
ಯಾರೆಂಬಿರಾ?

ಸಿನೆಮಾ ನಟನೆಗೆ ತಮ್ಮೋರ್ವ ನಟರನ್ನು ಕಳಿಸಿದ
ಕೀರ್ತಿಯನ್ನು ಗಳಿಸಿದ ಸುಪ್ರಸಿದ್ಧ
ನಾಟ್ಯಕಲಾಭಿಮಾನಿಗಳಾದ

ಮಂಗಳೂರು ಎಮೆಚೂರ್ಸ್ ಇವರೇ.

ನಿರೀಕ್ಷಿಸಿರಿ! ನಿರೀಕ್ಷಿಸಿರಿ!!

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ವಾತ್ಮೀದಾರರಿಂದ)

ಮಂಗಳೂರು ತಾ. 26-2-1940

ವರ್ಗ—ನಮ್ಮ ಜಿಲ್ಲಾ ಕಲೆಕ್ಟರಾದ ವಿ.ಆ. ಎ. ಸಿ. ಉಡ್‌ಹೌಸ್ ಧೊರೆಗಳಿಗೆ ಗೋದಾವರಿ ಜಿಲ್ಲೆಗೆ ವರ್ಗವಾಗಿದೆ. ಅವರ ಸ್ಥಾನಕ್ಕೆ ಶ್ರೀ. ಯಂ. ವಿ. ಸುಬ್ರಹ್ಮಣ್ಯಂ, ಐ. ಸಿ. ಎಸ್. ರವರು ಕಲೆಕ್ಟರರಾಗಿ ನೇಮಕಹೊಂದಿದ್ದಾರೆ.

ರಜೆ—ಒಂದು ತಿಂಗಳ ರಜೆ ಪಡೆದ ಜಿ. ಜಡ್ಜರಾದ ಶ್ರೀ! ಪಿ. ರಾಜಗೋಪಾಲಾಚಾರ್ಯರ ಸ್ಥಾನಕ್ಕೆ ಶ್ರೀ. ಆರ್. ಎಸ್. ಸುಬ್ರಹ್ಮಣ್ಯ ಅಯ್ಯರ್‌ರವರು ನೇಮಕಹೊಂದಿ ಉದ್ಯೋಗ ಚಾರ್ಜು ವಹಿಸಿದ್ದಾರೆ.

ಒಂದೂವರೆ ತಿಂಗಳ ರಜೆಯ ಮೇಲೆ ಹೋಗಿರುವ ಪ್ರಿನ್ಸಿಪಲ್ ಸಬ್ ಜಡ್ಜರಾದ ಶ್ರೀ! ಡಿ. ಎಸ್. ರಾಜಾರಾಯರ ಸ್ಥಾನದಲ್ಲಿ ಶ್ರೀ. ಬಿ. ಡಿ. ಕೃಷ್ಣಮೂರ್ತಿ ಪಂತಲುಗಾರುರವರು ನೇಮಕಹೊಂದಿರುವರು. ಇವರು ಹಿಂದೆ ಇಲ್ಲಿಯೇ ಸಬ್‌ಜಡ್ಜರಾಗಿದ್ದರು.

ಉಪನ್ಯಾಸ—ಕಳೆದ ತಾ. 22ನೇ ಸಾಯಂಕಾಲ ಥಿಯಸಾಫಿಕಲ್ ಲಾಜನಲ್ಲಿ ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರರು ತಮಿಳು ಸೀಮೆಯ ವೈಷ್ಣವ ಪ್ರಬಂಧಗಳು ಎಂಬ ವಿಷಯದಲ್ಲಿ ಭಾಷಣ ಮಾಡುತ್ತ ತಮಿಳು ದೇಶದ ಪ್ರಸಿದ್ಧ ವೈಷ್ಣವ ಭಕ್ತರಾದ ಆಳ್ವಾರರ ವಿಷಯವಾಗಿಯೂ ಅವರುಗಳು ಮಾಡಿದ ಕೃತಿಗಳ ವಿಷಯವಾಗಿಯೂ ಭಾಷಣ ಮಾಡಿದರು. ಮತ್ತು ಇದೇ ಸಂದರ್ಭದಲ್ಲಿ ತಾವು ಬರೆದಿದ್ದ ಗ್ರಂಥದಿಂದ ಅನೇಕ ಭಾಗಗಳನ್ನು ಓದಿದರು.

ಶ್ರೀ. ಎಸ್. ಮುಕುಂದ ರಾಯರು ಭಾಷಣಕರ್ತರ ಪರಿಚಯಮಾಡಿಕೊಟ್ಟರು. ಶ್ರೀ. ಯಮ್. ಎನ್. ಕಾಮತರು ಉಪನ್ಯಾಸವಾದ ಅನಂತರ ಧನ್ಯವಾದಗಳನ್ನರ್ಪಿಸಿದರು. ಭಾಷಣವಾಗುವದಕ್ಕಿಂತ ಮುಂಚಿತವಾಗಿ ಮಿತ್ರಮಂಡಲಿಯವರ ಉಪಹಾರ ಸತ್ಕಾರವೂ ಇತ್ತು.

ಕರ್ನಾಟಕ ಸಂಘದ ವಾರ್ಷಿಕೋತ್ಸವ—ಮೊನ್ನೆಯ ದಿನ ಸಾಯಂಕಾಲ ಡಿ. ಸಿ. ಯಂ ಶಾಲೆಯಲ್ಲಿ ಈಶ್ವರಾನಂದ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಶ್ರೀ! ಟಿ. ನಾರಾಯಣ ಭಟ್ ವಿದ್ವಾನ್ ಇವರ ಅಧ್ಯಕ್ಷತೆಯಲ್ಲಿ ಸೇರಿತು. ಪ್ರಾರ್ಥನೆ ವರದಿವಾಚನಗಳಾದ ತರುವಾಯ ಅಧ್ಯಕ್ಷರು ಸಂಘವು ಮಾಡುತ್ತಿರುವ ಕನ್ನಡ ಸೇವೆಯನ್ನು ಶ್ಲಾಘಿಸಿ ಭಾಷಣಮಾಡಿದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಬೀಡಿ ಕೆಲಸಗಾರರ ಎರಡನೆಯ ಪರಿಷತ್ತು—ಬೀಡಿ ಕೆಲಸಗಾರರ ದ್ವಿತೀಯ ಪರಿಷತ್ತು ನಿನ್ನೆಯ ದಿನ ಕೆನರಾ ಹೈಸ್ಕೂಲು ಪಠಾರದಲ್ಲಿ ಜರಗಿತು. ಮದ್ರಾಸಿನ ಪ್ರಸಿದ್ಧ ಮಜೂರ ಮುಂದಾಳುಗಳಾದ ಶಾ. ಪಿ. ರಾಮಮೂರ್ತಿಯವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರನ್ನು ರೈಲ್ವೆ ನಿಲ್ದಾಣದಲ್ಲಿ ಸ್ವಾಗತೀಕರಿಸಿ ಮೆರವಣಿಗೆಯಿಂದ ಸಭಾಸ್ಥಾನಕ್ಕೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ಶ್ರೀ. ಎನ್. ಎಸ್. ಹೊಳ್ಳರಿಂದ ಧ್ವಜವಂದನಾಕಾರ್ಯವು ನೆರವೇರಿಸಲ್ಪಟ್ಟಿತು. ಆ ಮೇಲೆ ಸ್ವಾಗತ ಭಾಷಣವಾಗಿ ಪರಿಷತ್ತಿನ ಉದ್ಘಾಟನಾ ಸಮಾರಂಭವು ಶ್ರೀ! ಎಫ್. ಎಚ್. ಒಡೆಯರಿಂದ ನೆರವೇರಿಸಲ್ಪಟ್ಟಿತು. ಅನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಜೂರರು ಜಾಗೃತರಾಗಿರುವರೆಂದೂ ಆದರೆ ಇಷ್ಟರಲ್ಲಿಯೇ ತೃಪ್ತಿಪಡದೆ ಸಂಘ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದೂ ಹೇಳಿ ಬೀಡಿ ಕೆಲಸಗಾರರು ಅನುಭವಿಸುವ ವಿಶೇಷ ಕಷ್ಟಗಳನ್ನು ತಿಳಿಸಿ ಅವುಗಳ ಪರಿಹಾರಕ್ಕೆ ತಕ್ಕ ಸೂಚನೆಗಳನ್ನಿತ್ತರು. ಅನಂತರ ಅನೇಕ ಠರಾವುಗಳು ಮಾನ್ಯಮಾದುವು. ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಉಡುಪಿ

ತಾಲೂಕು ಎಡ್ಯುಕೇಶನಲ್ ಎಡ್ವೈಸರಿ ಕಮಿಟಿ ಸಭೆ

ಉಡುಪಿ ತಾಲೂಕು ಎಡ್ಯುಕೇಶನಲ್ ಎಡ್ವೈಸರಿ ಕಮಿಟಿಯ ಸಭೆಯೊಂದು ತಾ. 25-2-'40ರಲ್ಲಿ ಚೆಯರ್‌ಮೇನ್ ಶ್ರೀ. ಕೆ. ಜಿ. ಬಲ್ಲಾಳ್, ಬಿ. ಎ. ಎಲ್. ಬಿ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ವರ್ಷಾವಧಿ ಗ್ರಾಂಟು ಶಿಫಾರಸು ಬಗ್ಗೆ ತಾ. 26 ಮತ್ತು 27ರಲ್ಲಿ ಸಹ ವಿಶೇಷ ಸಭೆಗಳು ಜರಗಿರುವುದಾಗಿ ವದಂತಿ. ಗ್ರಾಮ ಗ್ರಾಮಗಳಲ್ಲಿ ಸರಕ್ಷಣತೆಯನ್ನು ಹೋಗಲಾಡಿಸುವರೆ ವಿವಿಧ ಸಂಘ ಸಮಿತಿಗಳು ಸರ್ವದಾ ಹೋರಾಡುತ್ತಿರುವ ಈ ಸಮಯದಲ್ಲಿ ಖಾಸಗಿ ಶಾಲೆಗಳ ಸ್ಥಿತಿಗತಿಯನ್ನು ಸೂಕ್ಷ್ಮರೀತಿಯಿಂದ ಪರಿಶೋಧಿಸಿ ಕಮಿಟಿ ಸದಸ್ಯರು ನ್ಯಾಯವಾದ ಗ್ರಾಂಟನ್ನು ಶಿಫಾರಸು ಮಾಡದಿರಲಾರರೆಂದು ಊಹಿಸಲಾಗಿದೆ.

ಮೊಕ್ಕಾಂ—ಮದ್ರಾಸಿನ ಡಾಕ್ಟರ್ ಯು. ರಾಮರಾಯರು ತಾ. 26ಕ್ಕೆ ಬಂದು ಉಡುಪಿಯಲ್ಲಿ ಮೊಕ್ಕಾಂ ಮಾಡಿರುವರು.

ಆಗಮನ— ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರ್ ಮತ್ತು ಶ್ರೀ. ಡಾ. ರಾ. ಬೇಂದ್ರೆಯವರು ತಾ. 24ರಲ್ಲಿ ಉಡುಪಿಗೆ ಆಗಮಿಸಿ ಶ್ರೀಕೃಷ್ಣ ಮಠವನ್ನು ಸಂದರ್ಶಿಸಿ ಎಡ್ವೊಕೇಟ್ ಬೈಲೂರು ವಾಸುದೇವರಾಯರ ಅತಿಥಿಗಳಾಗಿದ್ದು ನವಯುಗ ಆಫೀಸನ್ನು ಕಂಡು ಬಾರ್ಕೂರಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಕಂಬಳ, ಯಕ್ಷಗಾನ, ಭಾಷಣಗಳ ವ್ಯವಸ್ಥೆ ಮಾಡಲಾಗಿತ್ತು ಎಂದು ತಿಳಿದುಬರುತ್ತದೆ.

ನಾಟಕಾಭಿನಯ—ವ್ಯಭಿಚಾರಿಣಿ ಯಾರು ಮೊದಲಾದ ನಾಟಕಗಳನ್ನು ಮಂಗಳೂರಿನಲ್ಲೂ ಉಡುಪಿಯಲ್ಲೂ ಅತ್ಯಂತ ಜಯಶೀಲವಾಗಿ ಅಭಿನಯಿಸಿ ಮಹಾಜನರ ಮೆಚ್ಚುಗೆಗೆ ಪಾತ್ರರಾದ ಮಂಗಳೂರು ಎಮೆಚ್ಯೂರ್ ಇವರು ತಾ.16-3-40ನೆ ಶನಿವಾರ ಉಡುಪಿಯಲ್ಲಿ 'ಪ್ರೇಮ ಸಾಮ್ರಾಜ್ಯ'ವೆಂಬ ಅತ್ಯುಜ್ವಲ ಸಾಮಾಜಿಕ ನಾಟಕವನ್ನು ಅಭಿನಯಿಸಲಿರುವರೆಂದು ತಿಳಿದು ಬರುತ್ತದೆ.

ವಿವಾಹ ಸಮಾರಂಭ—ಶ್ರೀ ಏಣಗು ಪಟೇಲ್ ರಾಮಯ್ಯ ಹೆಗ್ಡೆಯ ಅಳಿಯಂದಿರೂ ದಿವಂಗತ ಕೆಮ್ಮಣ್ಣು ನಂದ್ಯಪ್ಪ ಶೆಟ್ಟರ ಪುತ್ರರೂ ಆದ ಶ್ರೀಗಳಾದ ವಿಠಲ ಹೆಗ್ಡೆ ಮತ್ತು ಎಂ. ಎನ್. ಹೆಗ್ಡೆ ಇವರು ಶ್ರೀ ಹೇರೂರು ಶಾಂತಪ್ಪ ರೈಗಳ ಪುತ್ರಿ ಶ್ರೀ ಉಮಾವತಿ ಮತ್ತು ಹೇರೂರು ಪಟೇಲ್ ಶ್ರೀ. ಅಚ್ಚಣ್ಣ ಶೆಟ್ಟರ ಪುತ್ರಿ ಶ್ರೀ. ಸೀತಮ್ಮ ಇವರನ್ನು ಬೈಲೂಬಾಳೆ ಶ್ರೀ ಶಾಂತಾಳ್ವರ ಪುತ್ರ ಶ್ರೀಮಾನ್ ವಾರಣ್ಣ ಆಳ್ವರು ಬಿ. ನಂದ್ಯಪ್ಪ ಶೆಟ್ಟರ ಪುತ್ರಿ ಶ್ರೀಮತಿ ಕಲ್ಯಾಣಿಯನ್ನೂ ತಾ. 25-2-40ರಲ್ಲಿ ವಿವಾಹವಾದರು. ಈ ಸಮಾರಂಭವು ಅತಿ ವಿಜೃಂಭಣೆಯಿಂದ ಉಡುಪಿ ಬ್ರಹ್ಮಗಿರಿಯ 'ಶಾನ್ತಂಟ್‌ವ್ಯೂ' ಕಟ್ಟಡದಲ್ಲಿ ಯಥಾಸಾಂಗವಾಗಿ ಜರಗಿತು. ವಧೂವರರಿಗೆ ತಂತಿ ಮೂಲಕ ತುಂಬ ಶುಭ ಸಂದೇಶಗಳೂ ಪಾರಿತೋಷಕಗಳೂ ಬಂದಿದ್ದವು. ರಾತ್ರಿ ಶ್ರೀ ಕಿಲ್ಲೆಯವರ ಪುರಾಣ ವಾಚನವೂ ಇತ್ತು.

ಯುಕ್ತಿಮಲ್ಲಿಕಾ ಸಭೆ— ಶ್ರೀ. ಸೋದೆ ವಾದಿರಾಜ ಮಠದ ಶ್ರೀ. ವಿಶ್ವೇಂದ್ರತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಕಳೆದ ಹತ್ತು ವರುಷಗಳಿಂದ ನಡೆದು ಬಂದ ಯುಕ್ತಿಮಲ್ಲಿಕಾ ಸಭೆಯು ಧಾರ್ಮಿಕ ಉಪನ್ಯಾಸಗಳು ಈ ವರುಷವೂ ಕಳದ ಊರ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಜರಗಿತು. ಪರ್ಯಾಯ ಶ್ರೀ ಅದ್ಮಾರು, ಫಲಿಮಾರು, ಶೀರೂರು ಸ್ವಾಮಿಗಳವರು ಸಹ ಈ ಸಭೆಯಲ್ಲಿ ಭಾಗವಹಿಸಿದ್ದರು. ಸಾಹಿತ್ಯ ಶಿರೋಮಣಿ, ತರ್ಕಶಿರೋಮಣಿ, ವೇದಾಂತ ಶಿರೋಮಣಿ ಪಂಡಿತಾಚಾರ್ಯರುಗಳವರು ಪ್ರಮುಖ ಉಪನ್ಯಾಸಕರಾಗಿದ್ದರು. ಇವರೆಲ್ಲರಿಗೂ ಯಥೋಚಿತ ಸಂಭಾವನೆಗಳು ಕೊಡಲಾಗುವುದು.

ಪಂದ್ಯಾಟಗಳು—ಸ್ಥಳೀಯ ಇಗರ್ಜಿ ವಠಾರದಲ್ಲಿ ಬೆಡ್‌ಮಿಂಟನ್ ಪಂದ್ಯಾಟಗಳು ಪಡುಬಿದ್ರಿ ವಲ್ ಐಮಾನೇಕಮಿಟಿಯ ಆಶ್ರಯದಲ್ಲಿ ಆರಂಭವಾಗಿವೆ. (ಫಲಿತಾಂಶ ಹಿಂದಿನಿಂದ)

ಶಿನ್ನಿ ಕಂಬಳ— ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ವರ್ಷವರ್ಧಂತಿ ಆಚರಣೆಯು ಮಾರ್ಚ ತಾ. 1 ಮತ್ತು 2ಕ್ಕೆ ಶ್ರೀ. ಪಿ. ರಾಜಗೋಪಾಲಾಚಾರಿ, ಬಿ. ಎ., ಬಿ. ಎಲ್. ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರು, ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಎಲ್ಲರಿಗೂ ಸ್ವಾಗತ.

ಪೊಳಲಿ— ಇದೇ ತಾ. 18-2-'40ರಲ್ಲಿ ತುಳುನಾಡ್ ಆಫೀಸಿನಲ್ಲಿ ಶ್ರೀ. ಕೆಂಪ್ರೆ ಲೋಕಯ್ಯ ಪೂಜರ ಅಧ್ಯಕ್ಷತೆಯಿಂದ ತುಳುವ ಮಹಾಸಭೆಯ ಕಾರ್ಯನಿರ್ವಾಹಕ ಕಮಿಟಿ ಸಭೆಯು ಜರಗಿ ತುಳುವ ಮಹಾಸಭೆಯ ಮೆಂಬರರಿಗೆ ಪೊಳಲಿ ಜಾತ್ರೆ ಸಮಯ ಊಟ ಉಪಹಾರಗಳು, ರೀಡಿಂಗ್ ರೂಂ, ಬೆಡ್ಮಿಂಟನ್ ವಗೈರೆ ವಿನೋದಗಳ ಬಗ್ಗೆ ತುಳುವ ಮಹಾಸಭೆಯ ಉಪಶಾಖೆಯಾಗಿ ತುಳುನಾಡ್ ಕ್ಲಬ್ ಎಂಬ ಸಂಸ್ಥೆಯನ್ನು ತೆರೆಯಬೇಕೆಂದೂ ಎಪ್ರೀಲ್ ತಿಂಗಳ ಕಡೇ ವಾರದಲ್ಲಿ ಒಂದು ತುಳುವ ಸಾಹಿತ್ಯ ಪರಿಷತ್ತು ತೆರೆಯಬೇಕೆಂದೂ ಈ ಪರಿಷತ್ತಿಗೆ ಈ ವರೆಗೆ ತುಳುಭಾಷೆಯಲ್ಲಿ ಪ್ರಕಟವಾದ ಎಲ್ಲಾ ಪುಸ್ತಕಗಳನ್ನು ಆಯಾ ಗ್ರಂಥಕರ್ತರು ಒಂದೊಂದು ಪ್ರತಿ ಕಳುಹಿಸಿಕೊಡುವಂತೆಯೂ ಪ್ರಕಟವಾಗದೆ ಇರುವ ಹಸ್ತಪ್ರತಿಗಳು, ತುಳುಪದ್ಯ, ತುಳು ನಾಟಕ, ಪಾರ್ದನ ಕತೆ, ಕವನ, ಗಾದೆ ಇತ್ಯಾದಿಗಳನ್ನು ಅವುಗಳ ಸಂಗ್ರಾಹಕ ಲೇಖಕರು ಕಳುಹಿಸಿಕೊಡುವಂತೆ ಕೇಳಿಕೊಳ್ಳಬೇಕೆಂದೂ ಉತ್ತಮವಾದವುಗಳಿಗೆ ಯೋಗ್ಯತಾಪತ್ರವಿತ್ತು ಅವುಗಳನ್ನು ತುಳುವ ಸಾಹಿತ್ಯ ಮಾಲೆಯಲ್ಲಿ ಪ್ರಕಟಿಸುವಂತೆ ಕೇಳಿಕೊಳ್ಳಬೇಕೆಂದೂ ವಿಮರ್ಶೆ ಬಗ್ಗೆ ಕಳುಹುವ ಪುಸ್ತಕ, ಲೇಖನ ಇತ್ಯಾದಿಗಳನ್ನು ಇದೇ ಎಪ್ರೀಲ್ 15ರೊಳಗೆ ತುಳುವ ಮಹಾಸಭೆಯ ಕಾರ್ಯದರ್ಶಿ ಎನ್. ಎ. ಶೀನಪ್ಪ ಹೆಗ್ಡೆ ಪೊಳಲಿ, ಪಿ. ಒ. ಬೆಳ್ವಾಯಿ ಎಂಬ ವಿಳಾಸಕ್ಕೆ ಕಳುಹಿಸಬೇಕೆಂದೂ ನಿರ್ಣಯಿಸಲಾಯಿತು.

ಸಾಸ್ತಾನ—ಜನಸೇವಾಸಮಿತಿಯ ಆಶ್ರಯದಲ್ಲಿ ತಾ. 10-2-'40ನೇ ಪಾಂಡೇಶ್ವರ ಪಟೇಲ್ ಗಣಪತಿ ವೆಂಕಟ್ರಮಣ ಐತಾಳರ ಅಧ್ಯಕ್ಷತೆಯಲ್ಲಿ ಡಾ. ಪಿ. ಸುಬ್ಬರಾವ್ ಇವರು 'ಹಳ್ಳಿಯ ವೈದ್ಯಕೀಯ ಸಹಾಯ'ದ ಕುರಿತು ದೀರ್ಘಭಾಷಣವನ್ನು ಮಾಡಿದರು.

ಪುತ್ತೂರು ಹೈಸ್ಕೂಲಿನ ಅಧ್ಯಾಪಕರಾಗಿದ್ದು, ಸಾರ್ವಜನಿಕ ಕೆಲಸಗಳಲ್ಲಿ ಅತ್ಯುತ್ಸಾಹಿಗಳಾಗಿದ್ದು, ಕಾಂಗ್ರೆಸ್ಸಿಗಾಗಿ ದುಡಿದಿದ್ದ ಎಸ್. ರಾಮಣ್ಣ ಶೆಟ್ಟಿ, ಬಿ. ಎ., ಎಲ್. ಟಿ. ಇವರ ಅಕಾಲಮರಣದಿಂದ ಅಸಹನೀಯ ದುಃಖಿತರಾದ ಇವರ ತಂದೆ ತಾಯಿ ಮತ್ತು ಕೆಳದ ಪತ್ನಿಯರೊಡನೆ ಈ ಸಭೆಯು ಸಂಪೂರ್ಣ ಸಮಾನುಭೂತಿಯನ್ನು ತೋರಿಸುತ್ತದೆ. ಅಲ್ಲದೆ ಮೃತರ ಆತ್ಮಕ್ಕೆ ಶಾಂತಿಯನ್ನೀಯಬೇಕೆಂದು ಪರಮಾತ್ಮನೊಡನೆ ಪ್ರಾರ್ಥಿಸುತ್ತದೆ, ಎಂಬ ಠರಾವು ಸರ್ವಾನುಮತದಿಂದ ಪಾಸಾಯಿತು.

ಕೂಡ್ಲು (ಕಾಸ್ರಗೋಡು)—ತಾರೀಕು 19-2-1940ರಲ್ಲಿ ಬೊಂಬೈ ಕೋಓಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್ ಇದರ ಬ್ರಾಂಚ ಮ್ಯಾನೇಜರಾದ ಶ್ರೀ! ಸಿ. ಆರ್. ರಾಘವಾಚಾರ್, M. A.ರವರು ಕಾಸರಗೋಡಿಗೆ ಬಂದಾಗ ಸ್ಥಳೀಯ ಓರ್ಗನೈಸರಾದ ಜ ಅಹಮ್ಮದ್ ಬೇರಿಗೈ ಮತ್ತು ಶ್ರೀ. ಎ. ಎಸ್. ಕೃಷ್ಣರಾವ್ ಇವರು ಒಂದು ಚಾ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಅಗ್ರ ಮಹನೀಯರನೇಕರು ಬಿತ್ತೈಸಿದ್ದರು.

ಕುಂಜಾಲು—ಕುಡಿಯುವ ನೀರಿಗಾಗಿ ಅಭಾವ! ಅದರಿಂದುಂಟಾಗುವ ರೋಗರುಜಿನಗಳ ಪ್ರಭಾವ!! ಕುಂಜಾಲು ಒಂದು ಚಿಕ್ಕ ಪಟ್ಟಣವಾಗಿ ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಬರುವುದಾದರೂ, ಇಲ್ಲಿ ಕುಡಿಯುವ ನೀರಿನ ಕೊರತೆಯಿಂದ, ಅದು ತನ್ನ ಮುಪ್ಪನ್ನು ಸಮೀಪಿಸುತ್ತಿರುವುದು. ಅಲ್ಲದೆ ಇದು ಪಟ್ಟಣಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಹೊಂದಿ, ಇಡೀ ಜಿಲ್ಲೆಗೆ ಒಂದೇ ಒಂದಾದ ಜಾನುವಾರು ಸಂತೆಯನ್ನು ಕೂಡಾ ಪಡೆದು, ಹೆಚ್ಚಿನ ಜನ ವಾಸಮಾಡುಗಳು ಅನುಕೂಲವಾಗುವ ಕೇಂದ್ರವಾಗಿ ಹೆಚ್ಚಿನ ಸರಕಾರಿ ಉದ್ಯೋಗಸ್ಥರು ತಮ್ಮ ಮೊಕ್ಕಾಮನ್ನು ಮಾಡಿದಲ್ಲಿ, ಇಲ್ಲಿಯ ನಿವಾಸಿಕರ ಜೀವನಕ್ಕಾಧಾರವಾದ ಕುಡಿಯುವ ನೀರಿನ ಕೊರತೆಯನ್ನು ಮುಕ್ತಾ ಯಾಗೂ ಅರ್ಜಿ ಮುಖೇನ ಮನವಿ ಮಾಡಿಕೊಂಡರೂ, ಲೋಕಲ್ ಕಲ್ಯಾಣಕರ್ತರಾದ ಯಾವ ಲೋಕಲ್, ಹಾಗೂ ಸರಕಾರ ಅಧಿಕಾರಿಗೆ ಕೂಡಾ ಈ ಕುರಿತು ನಿಗಾ ತೆಗೆದುಕೊಳ್ಳಲು ಶ್ರೀ ದೇವರು ಬುದ್ಧಿಯನ್ನೀಯಲಿಲ್ಲವೆಂದೇ ಇಲ್ಲಿಯ ನೀರಿನ ಕೊರತೆಯು ತೀರದ್ದರಿಂದ ತಿಳಿಯಬೇಕಾಗುತ್ತದೆ. ಇಲ್ಲಿಯ ನಿಜ ಸ್ಥಿತಿಯನ್ನು ಅರಿಯಬೇಕಾದರೆ ಬೇಸಿಗೆಯ ಸಮಯ ಪರ್ಯಟನಿಸಿದಲ್ಲಿ ನೀರಿಲ್ಲದೆ ಕಂಗೆಟ್ಟು ಬಿದ್ದು ಹೊರಳಾಡುವ ಜಾನುವಾರುಗಳು, ಹಾಗೂ ನೀರಿನ ಅಭಾವದಿಂದ ನಾನಾ ಜಾಡ್ಯಗಳಿಂದ ಬೇಸಿಗೆಯಲ್ಲಿ ನರಳುತ್ತಿರುವ ಇಲ್ಲಿನ ನಿವಾಸಿಕರ ದೃಶ್ಯವನ್ನು ನೋಡಿದರೆ ಎಂಥಾ ಕಲ್ಲೆದೆಯವನ ಮನಸ್ಸಾದರೂ ಕರಗದಿರಲಾರದು! ನಿಜಸ್ಥಿತಿ ಹೀಗಿರಲು, ಇನ್ನಾದರೂ ದೇಶೋದ್ಧಾರಕರಾದ ಸರಕಾರಿ, ಯಾ ಲೋಕಲ್ ಅಧಿಕಾರಿಗಳು ಈ ಕಡೆ ಲಕ್ಷ್ಯವಿಟ್ಟು ಜನಜಾನುವಾರುಗಳ ಪ್ರಾಣ ರಕ್ಷಣಾಕಾರ್ಯವಾದ ನೀರಿನ ಅಭಾವವನ್ನು ತೀರಿಸಿ ಈಶನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಜನತಾ ಪ್ರೀತಿಯನ್ನು ಸಂಪಾದಿಸಿಯಾರೆಂದು ಈ ಮೂಲಕ ಹಾರೈಸುತ್ತೇವೆ. ಇತಿ ಅರ್ಜಿ ನಿವಾಸಿಕರು.

ಬೈಂದೂರು—ಕಳೆದ ವಾರ ಉಪ್ಪುಂದದಲ್ಲಿ ನಡೆದ ಒಂದು ಮದುವೆಯ ಸಂದರ್ಭ ಕದನಿಗೆ ಬಿಡಲಿಕ್ಕೆಂದು ತಂದಿಟ್ಟಿದ್ದ ಸಿಡಿ ಮದ್ದಿನ ಕೋಣೆಗೆ ಮೂರು ಮಕ್ಕಳು ಒಳನುಗ್ಗಿ ಬಾಗಿಲು ಹಾಕಿಕೊಂಡು ತಮಾಷೆಗಾಗಿ ಬೆಂಕಿ ಕೊಟ್ಟು ಅದನ್ನು ಸುಟ್ಟರೆಂದೂ ಅದರ ಪರಿಣಾಮವಾಗಿ ಮೂವರೂ ತುಂಬಾ ಜಖಂ ಆಗಿ ಅದೇ ದಿವಸ ಸ್ಥಳೀಯ ಆಸ್ಪತ್ರೆಗೆ ಒಯ್ಯಲ್ಪಟ್ಟು ಅವರಲ್ಲಿ ಗೋಪಾಲಯ್ಯನೆಂಬ 14 ವರ್ಷದ ಬಾಲಕನು ಅದರ ಸಂಬಂಧ ಮರಣ ಹೊಂದಿದನೆಂದೂ ಬಾಕಿಯವರು ಆರೋಗ್ಯ ಹೊಂದುತ್ತಲಿರುವರೆಂದೂ ತಿಳಿದು ಬಂದಿದೆ.

ಬೈಂದೂರು ಪಂಚ್ಸೆ ಸರ್ಕಲುಗಳಿಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಒಂದು ಸ್ಥಾನಕ್ಕೆ ಶ್ರೀ. ಬಿ. ಸುಬ್ಬಣ್ಣ ಶೆಟ್ಟಿ ಮತ್ತು ಶ್ರೀ. ಶೇಷಗಿರಿ ರಾಯರು ನಾಮಪತ್ರ ಹಾಕಿದ್ದು 2ನೇ ಯವರು ನಾಮಪತ್ರ ಹಿಂತೆಗೆಯಲಾಗಿ ಶ್ರೀ. ಬಿ. ಸುಬ್ಬಣ್ಣ ಶೆಟ್ಟರು ಅವಿರೋಧವಾಗಿ ಆರಿಸಲ್ಪಟ್ಟಿರುವರು.

ಕಟಪಾಡಿ—ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿಯು 1939ನೇ ಇಸ್ವಿಯ ಸಂಸ್ಥೆಯಲ್ಲಿ ವಿಶೇಷ ಕೆಲಸ ಮಾಡಿ ಬಹುಮಾನಕ್ಕೆ ಪಾತ್ರರಾದ ಶ್ರೀ. ಕುರ್ಕಾಲು ಗಣಪಯ್ಯ ಶೆಟ್ಟಿ ಮತ್ತು ಶ್ರೀ. ಪಿ. ತಿಮ್ಮನಾಯಕ್ ಇವರಿಗೆ ಕಂಪೆನಿಯವರು ಕೊಟ್ಟ ಬಹುಮಾನವನ್ನು ಕೊಡುವ ಸತ್ಕಾರ ಸಮಾರಂಭವು ತಾ. 22-2-40ರಲ್ಲಿ ಶ್ರೀ. ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಡಾಕ್ಟರ್ ಬೇಕಲರ ಅಧ್ಯಕ್ಷತೆಯಲ್ಲಿ ಜರಗಿತು. ಉಪಹಾರ, ಫೋಟೋ ಆದ ನಂತರ ಪ್ರಾರ್ಥನೆಯೊಂದಿಗೆ ಸಭಾರಂಭವಾಯಿತು. ಪಿ. ಬಿ. ಸೋಜರು (ಮಂಗಳೂರು ಆಫೀಸಿನ ಹೆಡ ಕ್ಲಾರ್ಕ) ಕಂಪೆನಿಯ ಚರಿತ್ರೆಯನ್ನು ವಿವರಿಸಿದರು. ಸೀನಿಯರ್ ಇನ್ಸ್‌ಪೆಕ್ಟರರಾದ ಡಾ. ಕೆ. ನಾರಾಯಣರಾಯರು ಶ್ರೀ. ಗಣಪಯ್ಯ ಶೆಟ್ಟರ ಕಾರ್ಯತತ್ಪರತೆ ಸಾಹಸಾದಿಗಳನ್ನೂ ಶ್ರೀ. ತಿಮ್ಮನಾಯಕರ ಪ್ರಯತ್ನವನ್ನೂ ವಿವರಿಸಿದರು. ಶ್ರೀ. ಗಣಪಯ್ಯ ಶೆಟ್ಟರು ತನ್ನ ಪರಿಸ್ಥಿತಿಗಳನ್ನೆಲ್ಲ ವಿವರಿಸಿ ಜನರ ಸಹಕಾರವೇ ತನ್ನ ಜಯಕ್ಕೆ ಕಾರಣವೆಂದು ದೀರ್ಘಭಾಷಣ ಮಾಡಿದರು. ಅನಂತರ ಶ್ರೀಗಳಾದ ಪಿ. ಲಕ್ಷ್ಮೀನಾರಾಯಣ ನಾಯಕ್, ವಾಸುದೇವ ಕಿಣಿ, ರತ್ನಾಕರ ಪುರ್ಟಾಡೆ ಮೊದಲಾದವರು ಸಂದರ್ಭೋಚಿತವಾಗಿ ಮಾತನಾಡಿದರು. ಅಧ್ಯಕ್ಷರ ಭಾಷಣ ಸಂಗೀತಾದಿಗಳಿಂದ ಸಭಾಂತ್ಯವಾಯಿತು.

ಕಾರ್ಕಳ— ಕೀರ್ತನ ಶಿರೋಮಣಿ ಇತ್ಯಾದಿ ಬಿರುದಾಂಕಿತರಾದ ಶ್ರೀ. ರಾಮ ಶಾಸ್ತ್ರಿ ಮುಳಗುಂದ ಕರವರ ಹರಿ ಕೀರ್ತನೆಗಳು ಇಲ್ಲಿ ಊರ ಬೇರೆ ಬೇರೆ ಭಾಗಗಳಲ್ಲಿ ಆಗ ತೊಡಗಿವೆ. ಈ ಕೀರ್ತನೆಗಳು ಸುಶ್ರಾವ್ಯವಾಗಿಯೂ ಸುಬೋಧಕವಾಗಿಯೂ ಇರುವವು.

ಬಾರ್ಕೂರು—ಬಾರ್ಕೂರು ಮತ್ತು ಶಂಕರನಾರಾಯಣ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಎರಡು ಸೀಟುಗಳಿಗೆ ಶ್ರೀ. ಬ್ರಹ್ಮಾವರ ಗೋವಿಂದ ಶೆಟ್ರು, ಮೊಳಹಳ್ಳಿ ದತ್ತಾತ್ರೇಯ ರಾವ್ ಮತ್ತು ಬಿ. ಗೋಪಾಲಕೃಷ್ಣ ಕಾಮತ್ ಇವರು ನಾಮಪತ್ರ ಹಾಕಿದ್ದರು. ಕೊನೆಯವರು ತನ್ನ ಉಮೇದ್ವಾರಿಕೆಯನ್ನು ಹಿಂತೆಗೆಯಲು ಮೊದಲಿಬ್ಬರು ಆರಿಸಲ್ಪಟ್ಟರು.

ವಿ ವಿ ಧ ಸ ಮಾ ಚಾ ರ

ಟರ್ಕಿಯಲ್ಲಿ ಮತ್ತೊಮ್ಮೆ ಭೂಕಂಪ, ನಾಲ್ಕು ಹಳ್ಳಿಗಳು ನಾಶವಾದುವು.

ಟರ್ಕಿಯ ಅಂಕಾರಾ ಸಮೀಪದ ತಾ ೨೧ರಲ್ಲಿ ಭೂಕಂಪವಾಯಿತು. ನಾಲ್ವತ್ತು ಜನರಿಗೆ ಪ್ರಾಣಹಾನಿ. ಇಪ್ಪತ್ತು ಮಂದಿಗೆ ಆಘಾತ. ನಾಲ್ಕು ಹಳ್ಳಿಗಳು ಸಂಪೂರ್ಣ ಹಾಳು.

ಮೆಡಿಕಲ್ ಡಿಗ್ರಿ ಪಡೆಯದೆ ಹೆಸರಿಗೆ ಡಿಗ್ರಿಗಳನ್ನು ಸೇರಿಸಿಕೊಳ್ಳದಂತೆ ಕಾನೂನು, ೧೯೧೬ನೇ ಇಸವಿಯ ಮೆಡಿಕಲ್ ಆಕ್ಟು ತಿದ್ದುಪಡಿಯಾಗುವುದು.

ತಾವು ಮಹಾ ಡಾಕ್ಟರರುಗಳೆಂದು ಜನರನ್ನು ವಂಚಿಸುವುದಕ್ಕಾಗಿ ತಮ್ಮ ಹೆಸರ ಹಿಂದೆ ಮುಂದೆಲ್ಲ ಡಿಗ್ರಿಗಳಂತೆ ತೋರುವ ಇಂಗ್ಲೀಷ್ ಅಕ್ಷರಗಳನ್ನು ಸೇರಿಕೊಳ್ಳುವ ಠಕ್ಕು ಡಾಕ್ಟರರುಗಳ ಸಂಖ್ಯೆ ಏರುತ್ತಿದೆಯೆಂಬುದು ಮದ್ರಾಸು ಸರಕಾರದ ಲಕ್ಷ್ಯಕ್ಕೆ (ಕಾಂಗ್ರೆಸ್ಸು ಮಂತ್ರಿತ್ವವಿರುವಾಗಲೇ) ಬಂದಿದ್ದು ಅದಕ್ಕೊಂದು ಮದ್ದರೆಯಬೇಕೆಂದು ಸಂಕಲ್ಪಮಾಡಿದೆ. ಅದಕ್ಕಾಗಿ ೧೯೧೬ನೆ ಇಸವಿಯ ಮೆಡಿಕಲ್ ಡಿಗ್ರಿ ಆಕ್ಟನ್ನು ತಿದ್ದುಪಡಿ ಮಾಡುವ ಮಸೂದೆಯೊಂದನ್ನು ಪ್ರಕಟಪಡಿಸಿಯದೆ.

ಕಾಂಗ್ರೆಸ್ ಅಧಿವೇಶನ ಸನ್ನಾಹ, ರಾಮಘರದಲ್ಲಿ ಕಾಂಗ್ರೆಸ್ ಧ್ವಜ ಸ್ತಂಭಕ್ಕೆ ಅಶೋಕನ ಶಿಲಾಸ್ತಂಭಾಕೃತಿ

ಬಿಹಾರದಲ್ಲಿರುವ ರಾಮಘರವೆಂಬ ಹಳ್ಳಿಯು ಕಾಂಗ್ರೆಸ್ಸ್ ಅಧಿವೇಶನಕ್ಕಾಗಿ ನಾಲ್ಕು ದಿನದ ಮಟ್ಟಿಗೆ ಕಲಾಪೂರ್ಣ ರಮ್ಯ ನಗರವಾಗಿ ಸೃಷ್ಟಿಸಲ್ಪಡುವುದು. ಕಾಡುಗುಡ್ಡಗಳ ಹಿನ್ನೆಲೆಯ ನೈಸರ್ಗಿಕ ಸೌಂದರ್ಯವು ಮತ್ತಷ್ಟು ಉಜ್ವಲವಾಗುವಂತೆ ಕಲಾದೃಷ್ಟಿಯಿಂದ ವಿದ್ಯುದ್ದೀಪಗಳ ಸಂಯೋಜನೆಯಾಗಿದೆ. ಬಿಹಾರಪ್ರಾಂತದ ಬೇರೆ ಬೇರೆ ಕಾಲದ ಶಿಲ್ಪ ಕಲಾ ಪ್ರದರ್ಶನವಾಗುವಂತೆ ಒಂದೊಂದು ತರದ ನಗರದ್ವಾರ ರಚನೆಯಾಗುತ್ತಿದೆ. ಕಾಂಗ್ರೆಸ್ಸ್ ಧ್ವಜಸ್ತಂಭವೇ ಅಶೋಕನ ಶಿಲಾಸ್ತಂಭದ ಮಾದರಿಯಲ್ಲಿರಬೇಕೆಂದು ಸಂಕಲ್ಪ. ಬಿಹಾರ ಇತಿಹಾಸದ ಪ್ರಾಮುಖ್ಯ ಸಂಘಟನೆಗಳ ಚಿತ್ರಾವಳಿಯಿಂದ ಸಭಾವೇದಿಕೆಯು ಶೃಂಗರಿಸಲ್ಪಡುತ್ತದೆ. ಅಲ್ಲದೆ ಅಂತಹ ಐತಿಹಾಸಿಕ ಚಿತ್ರಗಳ ಪ್ರದರ್ಶನಕ್ಕಾಗಿ ಒಂದು ಪ್ರತ್ಯೇಕ ಗಾಲರಿಯೇ ಇರುವುದು. ಈಗಾಗಲೇ ಆ ಪ್ರಾಂತದ ಮತ್ತು ಹೊರಗಿನ ಎಷ್ಟೋ ಚಿತ್ರಗಾರರು, ಶಿಲ್ಪಿಗಳು, ಕಲಾಶಾಸ್ತ್ರ ನಿಪುಣರು ವಾಸ್ತುಶಾಸ್ತ್ರಿಗಳು ಜಾಣವೇಸ್ತ್ರಿಗಳು ಅಹೋರಾತ್ರಿ ದುಡಿಯುತ್ತಿದ್ದಾರೆ. ಲಕ್ಷಗಟ್ಟಳೆಯಲ್ಲಿ ಹಣವ್ಯಯವಾಗುತ್ತಿದೆ. ನಗರವನ್ನು ಮರೆತು ಹಳ್ಳಿಗರೊಡನೆ ಬೆರೆತು ಗ್ರಾಮದ ಸರಳ ಜೀವನದ ತಿರುಳು ಹುರುಳನ್ನು ನೋಡಬೇಕೆಂಬ ಸಂಕಲ್ಪದಿಂದ ನಾಲ್ಕು ದಿನವಾದರೂ ಕಾಂಗ್ರೆಸ್ಸು ಹಳ್ಳಿಗೆಬಿಜಯಂಗೈಯಬೇಕೆಂದು ಮಾಡಿದ ಹಂಚಿಕೆಯು ಇಂದು ಲಕ್ಷಾಂತರ ಹಣವ್ಯಯದಿಂದ ವಿದ್ಯುತ್ತು, ಟೆಲಿಫೋನು, ತಂತಿಟಪ್ಪಾಲು ಮೋಟಾರು ರೈಲು ಮುಂತಾದುವುಗಳ ತತ್ಕಾಲಿಕ ಜೋಡಣೆಗಳನ್ನು ಮಾಡಿಕೊಂಡಾದರೂ ಕಟ್ಟುವ ಬಿದಿರಿನ ಗುಡಿಸಲುಗಳಿಗೆ ನಗರದ ಥಳಕಿನ ಹೊರ ಒಪ್ಪವನ್ನಿತ್ತಾದರೂ ಹೆಸರ ನಾಗರಿಕ ಜೀವನದ ಸಕಲ ಸೌಕರ್ಯಗಳನ್ನು ನಾಲ್ಕು ದಿನವಾದರೂ ಬಿಡಲಾರದ ಮನೋವೃತ್ತಿ ಕಲಾಪೂರ್ಣತೆಯೆಂಬ ಹೆಸರ ಮರೆಯಲ್ಲಿ ಅವನ್ನೆಲ್ಲ ಒದಗಿಸಿಕೊಂಡು ಹಳ್ಳಿಯನ್ನು ನಗರವನ್ನಾಗಿಸತೊಡಗಿದೆ.

ಮುಸಲ್ಮಾನನ ಮನೆಯಲ್ಲಿ ಹಿಂದು ಮಗು

ಒಬ್ಬ ಹಿಂದುವಿನ ಬಾಲ ಪ್ರಾಯದ ಹುಡುಗನು ಒಬ್ಬ ಮುಸಲ್ಮಾನನಲ್ಲಿ ಆರು ತಿಂಗಳ ವರೆಗೆ ಸಂತೋಷದಲ್ಲಿ ಜೀವಿಸುತ್ತಿದ್ದನೆಂಬ ಆಶ್ಚರ್ಯದ ಸಂಗತಿಯೊಂದು ಸವಿಸ್ತಾರವಾಗಿ ಮುಂಬಯಿಯ ಪಾದರ ಕೋರ್ಟಿನಲ್ಲಿ ಹೇಳಲ್ಪಟ್ಟಿತು. ಶಿವರಿ ಎಂಬಲ್ಲಿ ಒಂದು ಗುಡಿಸಲಿನಲ್ಲಿ ಒಬ್ಬ ಹಿಂದು, ಒಬ್ಬ ಮುಸಲ್ಮಾನ ಹೀಗೆ ಹತ್ತಿರ ಹತ್ತಿರವಾಗಿ ಇಬ್ಬರು ಸಂಸಾರಿಗಳು ಜೀವಿಸುತ್ತಿದ್ದರು. ಹಿಂದುವಿನ ಮಡದಿಯು ಎರಡು ಮೂರು ವರ್ಷಗಳ ಹಿಂದೆ ತೀರಿಹೋಗಿದ್ದಳು. ಹಿಂದುವಿಗೆ ಮೂರು ನಾಲ್ಕು ವರ್ಷದ ಸಣ್ಣ ಗಂಡುಮಗುವೊಂದಿತ್ತು ಆ ಸಣ್ಣ ಮಗುವಿನ ದುರ್ದೈವವನ್ನು ಏನೆಂದು ಹೇಳಲಿ? ಕೆಲತಿಂಗಳಲ್ಲೇ ಅದರ ತಂದೆಯೂ ತೀರಿಹೋದ. ತೀರಿಹೋಗುವ ಮುಂಚಿತವಾಗಿ ಅವನು ತನ್ನ ಹತ್ತಿರ ವಾಸಿಸುತ್ತಿದ್ದ ಮುಸಲ್ಮಾನ ಬಂಧುವನ್ನು ಕರೆದು ನನ್ನ ಜೀವನ ಅಂತ್ಯವಾಗುತ್ತಾ ಬಂದುದರಿಂದ ನನ್ನ ಹುಡುಗನ ಕುಟುಂಬದವರು ನಿನ್ನ ಹತ್ತಿರ ಬಂದು ಹುಡುಗನನ್ನು ಕೇಳುವವರೆಗೆ ಅವನ ಲಾಲನೆ ಪಾಲನೆ ನೀನೇ ಮಾಡಬೇಕು. ಎಂದು ಹೇಳಿ ವಾಗ್ದಾನ ತೆಗೆದುಕೊಂಡ ತನ್ನ ಹಿಂದು ಮಿತ್ರನ ವಿನಂತಿಯನ್ನು ಮಾನ್ಯ ಮಾಡಿ ಮುಸಲ್ಮಾನ ಗೃಹಸ್ಥನು ಹುಡುಗನನ್ನು ತನ್ನ ಮಗನಂತೆಯೇ ಸಾಕಿದ ಹುಡುಗನು ಮುಸಲ್ಮಾನನನ್ನು ಎಷ್ಟು ಪ್ರೀತಿಸುತ್ತಿದ್ದನೆಂದರೆ ಅಪ್ಪನಂತೆಯೇ ಕರೆಯುವ ವರೆಗೆ.

ಆಮೇಲೆ ಹುಡುಗನ ಕುಟುಂಬಸ್ಥನಿಗೆ, ಹುಡುಗನಿರುವ ಸ್ಥಳವು ಗೊತ್ತಾಗಿ, ಹುಡುಗನು ತನಗೆ ತಿರುಗಿ ಸಿಕ್ಕಬೇಕಾಗಿ ಬೊಂಬಾಯಿ ಪೋಲೀಸ್ ಕಮಿಶನರಿಗೆ ಅರ್ಜಿ ಮಾಡಿದ. ಆ ಪ್ರಕಾರ ಪೋಲೀಸಿನವರು ಹುಡುಗನನ್ನು ದಾದರ್ ಕೋರ್ಟಿಗೆ ದಾಖಲು ಮಾಡಿದರು, ಅಲ್ಲಿಯ ಮೆಜಿಸ್ಟ್ರೇಟರು ಮುಂದಿನ ವಿವರಣೆಗೋಸ್ಕರ ಹುಡುಗನನ್ನು 'ಚಿಲ್ಡ್ರನ್ಸ್' ಹೋಮ್‌ನಲ್ಲಿ ಇಡಲಿಕ್ಕೆ ಅಪ್ಪಣೆಕೊಟ್ಟರು. ಹುಕುಮನ್ನು ಕೇಳಿ ಮುಸಲ್ಮಾನನು ತಾನು ಆರು ತಿಂಗಳ ವರೆಗೆ ಸಾಕಿ ಸಲಹಿ ಪ್ರೀತಿಸಿದ್ದಕ್ಕೋಸ್ಕರ ಒಂದೇ ಸಮನೆ ಅಳಲಾರಂಭಿಸಿದ, ಹುಡುಗನು ಸಹ ಮುಸಲ್ಮಾನನನ್ನು 'ಅಪ್ಪಾ! ಅಪ್ಪಾ!' ಎಂದು ಕರೆ ಕರೆದು, ಅಳಲಾರಂಭಿಸಿ ಅವನನ್ನು ಅಪ್ಪಿ ಹಿಡಿದ. ಕಡೆಗೆ ಇಬ್ಬರೂ ಬಹಳ ಸಂತಾಪದಿಂದ ಒಬ್ಬರನ್ನೊಬ್ಬರು ಅಗಲಿದ ನಂತರ ಹುಡುಗನನ್ನು ಚಿಲ್ಡ್ರನ್ಸ್ ಹೋಮಿನಲ್ಲಿ ಇಡಲಾಯಿತು.

ಹಿಟ್ಲರನ ಆಜ್ಞೆ ಮೀರಿದರು

ಇಟೆಲಿಯ ಜರ್ಮನರು ಉತ್ತರ ಇಟೇಲಿಯಲ್ಲಿದ್ದ ಸುಮಾರು ನಲ್ವತ್ತೈದು ಸಾವಿರ ಜರ್ಮನರಿಗೆ ಹಿಟ್ಲರ ಕಾನೂನಿನ ಪ್ರಕಾರ ಜರ್ಮನಿಗೆ ಹಿಂತಿರುಗಿಬರಬೇಕೆಂದು ಆಜ್ಞೆಯಾಯಿತು, ಆದರೆ ಅದರಂತೆ ವರ್ತಿಸಿದವರು ಯಾರೂ ಇಲ್ಲ. ಹಿಟ್ಲರನ ಮಿತ್ರ ಮುಸ್ಸೋಲಿನಿಯ ರಾಜ್ಯದಲ್ಲೇ ಹೀಗಾಗ ಬೇಕೇ?

ಇತ್ತೀಚೆಗೆ ಗೋರಿಂಗರ ಸುದ್ದಿಯಿದ್ದಿಲ್ಲವೇಕೆ?

ಜರ್ಮನಿಯ ಸರ್ವಸೇನಾಪತಿ ಗೋರಿಂಗರನ್ನು ಕೊಲ್ಲುವ ಹಂಚಿಕೆಯನ್ನು ನಾಜಿವಾದ ವಿರೋಧಿಗಳಾದ ಕೂಟದವರು ಮಾಡಿದ್ದರು. ಆದರೆ ಅವರು ಪೂರ್ಣ ಕೃತಕೃತ್ಯರಾಗಲಿಲ್ಲ. ಗೋರಿಂಗರು ಪೊಟೋರ್ತೆಲ್ ಅರಣ್ಯದಲ್ಲಿ ಬೇಟೆಯಾಡುತ್ತಿದ್ದಾಗ ಆ ಕೂಟದವರು ಗೋರಿಂಗರ ಬೇಟೆಗೆ ಕೊಡಗಿ ಗುಂಡಿಟ್ಟರು. ಆದರೆ ಅದು ಕಾಲಿಗೆ ತಾಗಿತು. ಪರಿಣಾಮವಾಗಿ ಹಾಸಿಗೆ ಹಿಡಿಯಬೇಕಾಯಿತು. ಹಿಟ್ಲರನ ರಕ್ಷಣಾ ಶಾಖೆಯವರ ಅಸಡ್ಡೆಯಿಂದ ತನಗೆ ಅಪಾಯ ಬಂತೆಂದು ಗೋರಿಂಗರು ಹಿಟ್ಲರನಿಗೆ ದೂರುಕೊಟ್ಟಿದ್ದಾರೆ. ಹಿಟ್ಲರರು ಅದಕ್ಕೊಪ್ಪದಿದ್ದರೂ ಗೋರಿಂಗರ ಅಂಗರಕ್ಷಣೆಗೊಂದು ಪ್ರತ್ಯೇಕ ವ್ಯವಸ್ಥೆಯಾಗುವಂತೆ ಅಪ್ಪಣೆ ಕೊಟ್ಟಿದ್ದಾರೆ.

ಜರ್ಮನಿಯೊಳಗೇ ಭಯೋತ್ಪಾದಕ ತಂಡದವರ ಚಳವಳ

ನಾಜೀವಾದ ವಿರೋಧಿಗಳು ಜರ್ಮನರಲ್ಲೇ ಇದ್ದಾರೆ. ಅವರು ಗುಟ್ಟಾಗಿ ಕೂಟಗಳನ್ನು ಕಟ್ಟಿಕೊಂಡು ನಾಜೀಮುಂದಾಳುಗಳಿಗೆ ಭಯ ಪ್ರದರ್ಶನ ಮಾಡುತ್ತಿದ್ದಾರೆ-ಅಂತಹ ಸಂಘದ ಹೆಸರು ಡೈನಾಮೈಟ್ಸ್. ನಾಜಿಗಳ ಮುಖ್ಯಸ್ಥಳಗಳಲ್ಲಿ ಅನಿರೀಕ್ಷಿತವಾಗಿ ಬೋಂಬುಗಳ ಸ್ಫೋಟನ ಕೈಬಾಂಬು ಅಪಘಾತ ಮುಂತಾದುವೆಲ್ಲ ಆಗಾಗ ನಡೆಯುತ್ತಿವೆ ಆದರೆ ಈ ಸುದ್ದಿಯನ್ನು ಹೊರಗೆಡಹದಂತೆ ಪತ್ರಿಕೆಗಳಿಗೆ ಕಟ್ಟಾಜ್ಞೆಯಿದೆ

ಯುದ್ಧವು ಈ ವರ್ಷ ಸಮಾಪ್ತಿಯಾಗಬೇಕು ಸೂರ್ಯಕಲಾಶಾಸ್ತ್ರ ಆಧಾರದ ಭವಿಷ್ಯ

ಫ್ರೆಂಚ್ ಜ್ಯೋತಿಷ್ಯಗಾರನಾದ ಎಬ್ಬೆ ತೇದೂರು ಮೋರ್ ಎಂಬವನು ಯುದ್ಧವು ಈ ವರ್ಷಾಂತ್ಯದಲ್ಲಿ ಕೊನೆಗಾಣುವುದೆಂದು ದೃಢ ನಂಬಿಗೆಯುಳ್ಳವನಾಗಿದ್ದಾನೆ. ಅವನ ತತ್ವ ಪ್ರಕಾರ ಯುದ್ಧಕ್ಕೆ ಕಾರಣ ಸೂರ್ಯನಲ್ಲಿ ಕಲೆಗಳ ವೃದ್ಧಿ, ಆ ಕಲೆಗಳು ಮಾನವನನ್ನು ಉದ್ರೇಕಿಸುತ್ತವೆ. ಈಗ ಅಂತಹ ಕಲೆಗಳು ಕಡಿಮೆಯಾಗ ತೊಡಗಿವೆ. ೧೯೧೮ರಲ್ಲಿಯೂ ಹೀಗೆಯೇ ಸೂರ್ಯನ ಕಲೆಯು ಕಡಿಮೆಯಾಗತೊಡಗಿತ್ತು ಎಂದು ಅವನ ಶೋಧನೆ.

ಮೂವತ್ತೈದು ವರ್ಷದವಳು ಹದಿನೈದು ಮಕ್ಕಳ ತಾಯಿ

ದಕ್ಷಿಣ ಆಫ್ರಿಕದ ಅರಲಿಜ್ ಪ್ರೀಸ್ಟ್‌ನಲ್ಲಿ ಮಿಸೆಸ್ ಸ್ಕ್ರೋಲ್ಸ್ ಎಂಬವಳಿದ್ದಾಳೆ. ಅವಳಿಗೆ ಈಗ ಮೂವತ್ತೈದು ವರ್ಷ ಪ್ರಾಯ. ಹದಿನೈದು ಮಕ್ಕಳ ತಾಯಿ ಅವಳು. ಎಲ್ಲ ಮಕ್ಕಳೂ ಬದುಕಿರುವರು. ಹದಿನೈದನೆಯ ವರುಷದಲ್ಲಿ ಅವಳ ಮದುವೆಯಾದುದು. ಮೊದಲ ಸಲ ಅವಳಿಜವಳಿ ಮಕ್ಕಳನ್ನು ಹೆತ್ತಳು. ಅನಂತರ ಮೂರು ಸಲ ಒಂದೊಂದು ಮಗು, ಆ ಮೇಲೆ ಎರಡುಸಲ ಅವಳಿಜವಳಿ. ತದನಂತರ ಆರು ಸಲ ಒಂದೊಂದಾಗಿ ಹೀಗೆ ಹದಿನೈದು ಮಕ್ಕಳು ಹುಟ್ಟಿ ಸುಖ ಸೌಖ್ಯದಿಂದ ಇರುವರು.

ಪಟ್ಟಕಟ್ಟಿದ ಕೊಟ್ಟುವದೂ ಮಕ್ಕಳು ಹೆಚ್ಚಾಗಿ ಹುಟ್ಟುವಂತೆ ಪ್ರೋತ್ಸಾಹಿಸಬೇಕು—ಬ್ರಿಟಿಷ್ ಎಮ್. ಪಿ. ಗಳ ಅಭಿಪ್ರಾಯ

ಬ್ರಿಟಿಷ್ ಪಾರ್ಲಿಮೆಂಟಿನ ಹಲವು ಪ್ರತಿಷ್ಠಾವಂತ ಮೆಂಬರರುಗಳ ಲಕ್ಷ್ಯವು ಬ್ರಿಟನಿನಲ್ಲಿ ಹುಟ್ಟುವ ಮಕ್ಕಳ ಸಂಖ್ಯೆಯು ಕ್ಷೀಣಿಸುತ್ತಾ ಬರುವುದರ ಕಡೆಗೆ ತಿರುಗಿದೆ. ಮಕ್ಕಳು ಹುಟ್ಟಿದರೆ ಅವುಗಳ ಲಾಲನೆ ಪಾಲನೆಗಾಗಿ ನಗದಿಯಿಂದ ಏಕಗಂಟಿನಿಂದ ಬೋನಸ್ಸು ರೂಪವಾಗಿಯಾಗಲೀ ಮಾಸಾಶನರೂಪವಾಗಿಯಾಗಲೀ ಧನ ಸಹಾಯದ ವ್ಯವಸ್ಥೆಯನ್ನು ಸರಕಾರವು ಕೈಕೊಂಡು ಹೆಚ್ಚು ಹೆಚ್ಚು ಮಕ್ಕಳು ಹುಟ್ಟುವಂತೆ ಪ್ರೋತ್ಸಾಹನಕೊಡಬೇಕಾಗಿ ಪ್ರಬಲ ಅಭಿಪ್ರಾಯ ಪ್ರಚಾರ ಮಾಡತೊಡಗಿದ್ದಾರೆ.

ಬೇಕಾಗಿದ್ದಾರೆ.

ಪುತ್ತೂರು ತಾಲೂಕು ಬಲನಾಡು ಪಂಚಾಯತ ಬೋರ್ಡು ಶಾಲೆಗೆ ಯೋಗ್ಯ ಸೆಕೆಂಡರಿ ಯಾ ಹಾಯರ್ ಗ್ರೇಡ್ ಟ್ರೈನ್ಡ್ ಉಪಾಧ್ಯಾಯರೊಬ್ಬರು ಬೇಕಾಗಿದ್ದಾರೆ. ಉಮೇದ್ವಾರರು ತಾರೀಕು **10-3-1940**ರೊಳಗೆ ತಮ್ಮ ಅರ್ಜಿಗಳನ್ನು ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಕಳುಹಿಸಿಕೊಡತಕ್ಕದ್ದು. ಪಂಚಾಯತ ಸ್ಕೇಲು ಪ್ರಕಾರ ಸಂಬಳ ಕೊಡಲಾಗುವದು.

ಬಲನಾಡು } ಬಿ ಸುಬ್ಬಯ್ಯ ಶೆಟ್ಟಿ
23-2-40 } ಪ್ರೆಸಿಡೆಂಟ್.

ಬಲನಾಡು ಪಂಚಾಯತ ಬೋರ್ಡು,
ಪುತ್ತೂರು, ದ. ಕ.

SAFE: BUT USELESS

DURING a recent archaeological digging a copper pot was unearthed containing 1800 Victoria Rupees. An inscription on the pot recorded the name of the person who buried it and the date of the "burial", 1870. The money was handed over to his heirs.

If instead of being deposited in the earth, the money had been deposited in a BANK at 3½% per annum and reinvested with the interest every year, his heirs would now have come to posses Rs. 5,600/-. And also all the time in the hands of the bank, the money would have been useful to trade and industry.

RESOURCES OF A CRORE.

ESTD: 1906
CANARA BANK LIMITED.

ಈ ವಾರದ ಭವಿಷ್ಯ

ತಾರೀಕು 29-2-1940ರಿಂದ || 7-3-1940ರ ವರೆಗೆ

ಮೇಷ—ಮುಂಗೋಪ ಮತ್ತು ಕ್ಷಿಪ್ರಪ್ರಸನ್ನತೆಯೂ ಕೂಡ ನಿಮ್ಮ ರಾಶಿಯ ಸ್ವಭಾವವಾಗಿರುವುದು. ಮಾತ್ರವಲ್ಲ ಸದಾ ನಿಂತಲ್ಲಿ ನಿಲ್ಲದೆ ಅತಿ ದುಡುಕೂ, ಆತುರದ ದಣಿ ವೊಟೆನಿ ಕೆಟ್ಟಿಯಿಂದ ಬರುವಾಗಲೂ ನಿಮ್ಮ ಮನಸ್ಸು ಗತಿಗಳೂ ಓಡಿರುವಲ್ಲಿ ಈ ವಾರದಲ್ಲಿ ನಿಮಗೆ ಕೆಲಸಕ್ಕೆ ತಕ್ಕ ಫಲದೊರೆಯದಿದ್ದರೂ ಅಲ್ಪ ಸ್ವಲ್ಪ ಸಿಗಬಹುದು. ಆದರೆ ನಿಮ್ಮ ಮಿತ್ರ ಅದೃಷ್ಟದಿಂದ ಇದ್ದುದರಿಂದ ಯಾವಾಗಲೂ ವಟ್ಟಿನ ಕಚೇರಿಇರುವುದು. ವಿಷಜಂತುಗಳಿಂದ ಭಯವಿದೆ. ಹಿಡಿದ ಕಾರ್ಯದಲ್ಲಿ ಪರಾಜಯವೇ ಹೆಚ್ಚಾಗಿ ಪ್ರಾಪ್ತವಾಗುವುದರಿಂದ ಮನಸ್ಸಿಗೆ ನೆಮ್ಮದಿಯಿಲ್ಲವು. ಆರೋಗ್ಯವು ಚೆನ್ನಾಗಿರದಿದ್ದರೂ ಶಯ್ಯಾ ಸುಖಕ್ಕೆ ಕೊರತೆಯಿಲ್ಲವು. ತಾ. 5, 6, 7 ದಿನವುಗಳು ಮಿತ್ರಸಮಾಗಮಕಾರಿಗಳಾಗಿವೆ.

ವೃಷಭ—ಕಷ್ಟಸಹಿಷ್ಣುತೆಯೂ ಶೈಮಾಗುಣವೂ ನಿಮ್ಮಲ್ಲಿ ಅಧಿಕವಾಗಿರುವುದರಿಂದ ಈ ವಾರವನ್ನು ಸುಖದಿಂದ ಕಳೆಯಲಿರುವಿರಿ. ನಿಮ್ಮ ಸಮೀಪದ ಬಂಧುಗಳು ನಿಮ್ಮಿಂದ ದೂರವಾಗಿರುವವರಾದರೂ ನಿರ್ಮಲಾಂತಃಕರಣವುಳ್ಳ ಪ್ರಿಯ ಮಿತ್ರರ ಪೂರ್ಣ ಸಹಾನುಭೂತಿಯು ನಿಮಗೆ ದೊರೆಯುವುದರಿಂದ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯುವ ಪ್ರಸಂಗವೊದಗದು. ನಿಮ್ಮ ಸಾಂಪತ್ತಿಕ ಪರಿಸ್ಥಿತಿಯು ಉತ್ತಮವಾಗಿರುವುದಾದರೂ ಏಳಿವರಿ ಶನಿಯ ಪೀಡೆಯಿಂದ ಆದರಲ್ಲಿ ಕೆಲವಂಶವು ಪ್ರಯೋಜನವಿಲ್ಲದೆ ನಷ್ಟ ಹೊಂದುವುದು. ರಾಜಕೀಯ ಭಾಗದಲ್ಲೂ, ವಿದ್ಯೆ ನೌಕರಿ ವಾಣಿಜ್ಯಾದಿಗಳಲ್ಲೂ ಮನಸ್ಸಿಗೆ ತೃಪ್ತಿಯುಂಟಾಗುವದು. ತಾ. 29, 1 ಮತ್ತು 7 ಈ ದಿನಗಳು ಇಷ್ಟಾರ್ಥಸಾಧನೆಗಳಾಗಿವೆ.

ಮಿಥುನ—ನಿಮ್ಮ ದೈವವು ಈ ವಾರದಲ್ಲಿ ಉತ್ತಮಸ್ಥಿತಿಯನ್ನೈದಿರುವುದು. ನಾನಾ ವಿಧದ ಮಿತ್ರರ ಸಮಾಗಮವಾಗುವುದು. ಮಾಡಿದ ಕೆಲಸಕ್ಕೆ ತಕ್ಕುದಾದ ಫಲಪ್ರಾಪ್ತಿಯಾಗುವುದರಿಂದ ಕಾರ್ಯೋತ್ಸಾಹವು ಹೆಚ್ಚುವುದು. ಸತ್ಕರ್ಮ ಸದಾಚಾರಗಳಲ್ಲಿ ನಿಷ್ಠೆಯುಳ್ಳ ನಿಮಗೆ ಬಹು ಸುಖದಿಂದ ಧನ ಲಭಿಸಲಿದೆ. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ವಿಯಾಗುವಿರಿ. ಮಿತ್ರರಲ್ಲಿ ಸಂತೋಷಕೂಟಗಳು ಜರಗುವವು. ಆದರೆ ದೇಹಾರೋಗ್ಯ ವಿಚಾರ ಸ್ವಲ್ಪ ಕೆಡಲಿರುವುದು. ಸ್ತ್ರೀವಾದೇವಿ ಪ್ರಯುಕ್ತ ಕಲಹವಾಗುವಂತಿದೆ. ಅದಕಾರಣ ತಾ. 5, 6, 7ರಲ್ಲಿ ಸರ್ವತ್ರ ಹಿತವಿತವಾಗಿರಿ.

ಕರ್ಕಾಟಕ—ಕಾರ್ಯಸಾಧನೆಗೆ ಚತುರೋಪಾಯಗಳನ್ನು ಹೇಳುವರಾದರೂ ನಿಮ್ಮಲ್ಲಿ ಅವೆಲ್ಲವುಗಳಿಗೆ ಸ್ಥಾನವಿಲ್ಲವು. ಸಾಮಕ್ಕೆ ನೀವು ಒಲಿಯಾಗುವಿರಿ. ಇತರ ದಾನಭೇದಾದಿಗಳನ್ನು ಕಂಡರೆ ನಿಮಗೆ ಸಹಿಸದು. ನೀವೂ ಕೂಡ ಇತರರಿಂದ ಒಳ್ಳೇ ಮಾತುಗಳನ್ನಾಡಿಯೇ ಸ್ವಕಾರ್ಯವನ್ನು ಪೂರೈಸಿಕೊಳ್ಳುವಿರಿ. ಸನ್ಮದ ಗ್ರಹವರನವು ನಿಮಗೆ ಬಹಳ ಪ್ರತಿಕೂಲವಿರುವುದರಿಂದ ಗೃಹವಾಸತ್ರಯಗಳು ಜನಿತವಾಗುವವು. ಉದ್ಯೋಗದಲ್ಲಿ ತೃಪ್ತಿಯಿರದು ಗಾಳಿಯಿದ್ದ ದೀಪದಂತೆ ಸದಾ ಚಂಚಲಬುದ್ಧಿಯುಳ್ಳವರಾಗುವಿರಿ. ತಾ. 29, 1, 7 ಈ ದಿನಗಳಲ್ಲಿ ಕೆಲವು ಸಜ್ಜನರಿಗಳೂ ಆರ್ಥಿಕ ಬಿಕ್ಕಟ್ಟು ಅನಿವಾರ್ಯವಾಗುವುದು.

ಸಿಂಹ—ಆಂತರಿಕವಾಗಿ ನಿಮ್ಮಲ್ಲಿ ನಾಸ್ತಿಕ್ಯವೇ ಪ್ರಾಬಲ್ಯಹೊಂದಿರುವುದಾದರೂ ಸಮ್ಯಾದಂಬರಕ್ಕಾಗಿಯೂ ಜನಾಪವಾದದ ಭೀತಿಗಾಗಿಯೂ ಕೆಲವೊಂದು ಧರ್ಮಕಾರ್ಯಗಳನ್ನು ಮಾಡುವ ಪ್ರಸಂಗ ಬರುವುದು. ಗುರುಹಿರಿಯರಿಗೂ ನಿಮಗೂ ಸದಾ ಪೂರ್ವಪಶ್ಚಿಮದ ಅಂತರವಿರುವುದು. ಉದ್ಯೋಗ ವ್ಯಾಪಾರಾದಿ ಭಾಗಗಳಲ್ಲಿ ತಕ್ಕಮಟ್ಟಿನ ಧನಲಾಭವಿರುವುದಾದರೂ ಅತಿವ್ಯಯ ದಿಂದಲೂ ಶತ್ರುಗಳಿಂದಲೂ ಪೀಡಿತರಾದ ನಿಮಗೆ ಮನೋರೋಗವು ಅಧಿಕವಾಗಿ ತತ್ಕಾಲಕ ಅನಾರೋಗ್ಯವೂ ಉಂಟಾಗಲಿದೆ. ಪ್ರವಾಸಿಗರಿಗೆ ಕಾಲವು ಪ್ರತಿಕೂಲವಿರುವುದು. ತಾ. 2ರಿಂದ 4ರವರೆಗಿನ ದಿನಗಳು ಅನಿಷ್ಟಕಾರಿಗಳಾಗಲಿವೆ.

ಕನ್ಯಾ—ನಿಮ್ಮ ಕಾರ್ಯಗಳಲ್ಲಿ ಹೆಚ್ಚಿನಂಶ ವಿಜಯಿಗಳಾಗಲಿರುವಿರಿ. ನಾನಾರೀತಿ ತಾಪತ್ರಯಗಳಿಂದ ಮುಕ್ತರಾಗುವಿರಿ. ಆರೋಗ್ಯಭಾಗ್ಯವೂ ಕೆಂಚಿತ್ತು ಉತ್ತಮ ಸ್ಥಿತಿಗೆ ಬರಲಿದೆ. ಪ್ರತಿಸ್ಪರ್ಧಿ ಜನರು ಆದಿಯಲ್ಲಿ ನಿರ್ಮತ್ಸರಿಗಳಂತೆ ಕಂಡುಬಂದರೂ ಒಳಗಿಂದೊಳಗೆ ಅವರ ಕುತಂತ್ರವನ್ನು ಬಲಾಯಿಸುವರು. ನಿಮ್ಮ ಕಾರ್ಯಸಾಧನೆಯಲ್ಲಿ ಜನಕ್ಕಿಂತಲೂ ಉಪಾಯಕ್ಕೇನೇ ಹೆಚ್ಚಿನ ಬೆಲೆಯಿದೆ. ಆಕಸ್ಮಿಕವಾಗಿ ದೇಹಕ್ಕೆ ಪೆಟ್ಟು, ಜಗಲಿ ಗಾಯಾದಿಗಳಾಗಬಹುದು. ನೀವೆಷ್ಟೇ ಬುದ್ಧಿವಂತರಿದ್ದರೂ ವ್ಯರ್ಥ ನಿಷ್ಠುರಕ್ಕೆ ಗುರಿಯಾಗುವಿರಿ. ತಾ 2ರಿಂದ 6ರವರೆಗೆ ಹೆಚ್ಚಿನ ಜಾಗರೂಕತೆಯಿಂದ ವರ್ತಿಸಬೇಕಾಗುವುದು.

ತುಲಾ—ಕ್ರಯವಿಕ್ರಯಗಳಲ್ಲೂ ಲೋಕ ವ್ಯವಹಾರಗಳಲ್ಲೂ ನೀವು ಒಳ್ಳೇ ಕೆಲರಿದ್ದರೂ ತಾತ್ಕಾಲೀನ ಗ್ರಹಸ್ಥಿತಿಯಿಂದ ನಿಮ್ಮ ದುರ್ದೈವವು ಒಡೆದು ಕಾಣುವುದು. ಅದಕಾರಣವೇ ವ್ಯಾಪಾರದಲ್ಲಿ ಕಷ್ಟನಷ್ಟಗಳೇ ಹೆಚ್ಚುವುವು. ಸಂಧಿಗಾಗಿ ಹೋದರೆ ಅದು ಸಂಗ್ರಾಮ ರೂಪಕ್ಕೆ ಪರಿವರ್ತಿತವಾಗುವುದು. ದೇವಾಲಕ್ಕ, ಶತ್ರುಭಯ, ಸ್ತ್ರೀಮೋಹಕ ಅನಿಷ್ಟ ಸಾಂಸಾರಿಕ ದುಃಖ ಇವುಗಳಿಂದ ಆವೃತರಾದ ನಿಮಗೆ ವಿಚಾರ ಪರಂಪರೆಯಿಂದಾಗಿ ರಾತ್ರಿ ನಿದ್ರೆ ಸಹಾ ಒರದು. ತಾ. 2, 3, 4 ಈ ದಿನಗಳಲ್ಲಿ ಕೆಂಚಿದಿಷ್ಟಾರ್ಥ ಸಿದ್ಧಿಸಬಹುದು.

ವೃಶ್ಚಿಕ—ಇಷ್ಟರ ವರೆಗೆ ನೀವು ಅದಿದ್ದು ಮಾಡಿದ್ದು ನಡೆದೇ ಹೋಗುತ್ತಿತ್ತು. ಆದರೆ ಈಗ ಕಾಲವು ಸ್ವಲ್ಪ ಪರಿವರ್ತಿತವಾಗಿದೆ. ನಿಮ್ಮ ವಿಪಕ್ಷೀಯರು ಮೆಲ್ಲನೆ ತಲೆಯೆತ್ತುತ್ತಿರುವರು. ವಿಚಾರವು ಕಡಿಮೆಯಾದಲ್ಲಿ ವಿಪರೀತ ಫಲಕ್ಕೆಡೆಯಾದೀತು. ರಾಜಕೀಯ ಕಾರ್ಯದಲ್ಲಿ ಕೈಯಿಕ್ಕಿ ಮಾನಭಂಗ ಪ್ರಸಂಗವನ್ನು ತಂದುಕೊಳ್ಳದಿರಿ. ಬುದ್ಧಿವಂತಿಕೆಯಿಂದಲೇ ಸಂಸಾರ ನೌಕೆಯನ್ನು ಸಾಗಿಸಬೇಕಾಗುವುದು. ತ್ಯಾಗಭೋಗಗಳಿಗೆ ಕಡಿಮೆಯಾಗದು. ತಾ. 29, 1, 5, 6 ಇಷ್ಟದಾಯಕ.

ಧನು—ಅವಶ್ಯಗಳ ಮಧ್ಯೆ ಕೆಲವು ಸಂಕಷ್ಟಗಳನ್ನನುಭವಿಸಲಿಕ್ಕಿರುವಿರಿ. ಸಂಸಾರದಲ್ಲಿ ದಿನಗಳು ಅಲ್ಲಲ್ಲೇ ಶಾಂತವಾಗಲಿವೆ. ಉದ್ಯೋಗದಲ್ಲಾಗಲಿ ವ್ಯಾಪಾರದಲ್ಲಾಗಲಿ ಪ್ರಯತ್ನಕ್ಕೆ ತಕ್ಕ ಫಲವು ದೊರೆಯುವುದರಿಂದ ಮತ್ತಷ್ಟು ಮತ್ತೂ ಮುಂದರಿಯಬೇಕೆಂಬ ಲವಲವಿಕೆಯುಂಟಾಗುವುದು. ರಾಜಕೀಯ ವಿಚಾರಗಳಲ್ಲಿ ನಿಮ್ಮ ಪಂಥವು ಯಶಸ್ವಿಯಾಗುವುದು. ಆಯ ವ್ಯಯಗಳು ಸಮತೂಕದಲ್ಲಿರುವುದರಿಂದ ಧನ ವಿಷಯಕವಾಗಿ ಚಿಂತಿಸಬೇಕಾಗಿಲ್ಲ. ತಾ. 29, 1, 5, 6 ಈ ದಿನಗಳಲ್ಲಿ ಮಿತಿಮೀರಿ ಖರ್ಚು ಕೆಂಚಿದ್ದೇಹಾಲಸ್ಯ ತೋರಿಬಂದೀತು.

ಮಕರ—ದುರ್ಗ್ರಹ ಬಲವೇ ಕಾಲದಲ್ಲಿ ಅಧಿಕವಾಗಿರುವುದರಿಂದ, ನಿಮ್ಮಲ್ಲನೇಕ ಸದ್ಗುಣಗಳಿದ್ದರೂ ಅವು ಪ್ರಕೃತ ಆವಿಷ್ಕೃತವಾಗದೆ ದುರ್ಗುಣಗಳೇ ಪ್ರಕಟವಾಗುತ್ತವೆ. ಸ್ವಭಾವತಃ ಅಲಸ್ಯರಾದ ನಿಮಗೆ ಮತ್ತಷ್ಟು ದಿವಾನಿದ್ರೆಯು ಜೊತೆಯಲ್ಲಿ ಸೇರುವುದು. ಲಜ್ಜಾವಿಹೀನರಾಗಿ ಮಾಡಬಾರದ ಕಾರ್ಯಗಳನ್ನು ಮಾಡಲು ಒಂದಿಷ್ಟು ನಿಮ್ಮ ಮನಸ್ಸು ಹಿಂಜರಿಯದು. ಕಾರಣ ಸಾಂಸರ್ಗಿಕ ಗುಣವು ಎಂದೂ ತನ್ನ ಪ್ರಭಾವವನ್ನು ಬೀರದಿರಲಾರದು. ವಿದ್ಯಾರ್ಥಿಗಳಿಗೆ ಕೂಡಾ ಅಪಾಯಕರವಿರುವದೀಕಾಲವು. ತಾ 2, 3, 4, 7 ಈ ದಿನಗಳಲ್ಲಿ ದನಕ್ಷಯ ಮಾನಹಾನಿಗಳೂ ಸಂಭವಿಸಬಹುದು.

ಕುಂಭ—ನಿಮ್ಮ ಜನ್ಮ ರಾಶಿಯಲ್ಲಿ ರವಿಯು ಕುಳಿತಿದ್ದುದರಿಂದ ಹೊಟ್ಟೆ ನೋವು ಯಾ ತಲೆನೋವು ಪ್ರವಾಸ ಇತ್ಯಾದಿಗಳನ್ನು ದೆಂದೊಡ್ಡಲಿರುವನಾದರೂ ಇತರ ಕುಜಾದಿ ಪಂಚಗ್ರಹರು ಮತ್ತು ತಾ 5, 6 ಬಿಟ್ಟು ಇತರ ದಿನಗಳಲ್ಲಿನ ಚಂದ್ರ ಇವರ ಪರಿಪೂರ್ಣ ಅನುಗ್ರಹವು ನಿಮಗಿರುವುದರಿಂದ ನೀವು ಅಸಹಾಯ ಶೂರರಾಗಿ ಅಸಾಮಾನ್ಯ ವ್ಯಕ್ತಿಗಳಾಗಿ ಜನಮನ್ನಣೆಗೆ ಪಾತ್ರರಾಗುವಿರಿ. ಖರ್ಚಿಗೆ ಬೇಕಷ್ಟು ಧನ ಭೋಗಿಸಲಿಕ್ಕೆ ಬೇಕಾದ ಒಡವೆ ವಸ್ತುಗಳೂ ಉಪಕರಣಗಳೂ ಇದ್ದವಾಗ ನಿಮಗಾವ ಚಿಂತೆಗೂ ಆಸ್ಪದವಿರದು. ಆದ್ದರಿಂದಲೇ ನೀವು ತಾ 29, 1 2, 3, 4, 7 ಈ ದಿನಗಳಲ್ಲಿ ಸ್ವರ್ಗವನ್ನು ಸಹ ತುಚ್ಛವೆಂದು ಭಾವಿಸುವ ಮನಸ್ಸುಳ್ಳವರಾಬಹುದು.

ಮೀನ—ನೀವೆಷ್ಟೇ ಕಷ್ಟಪಟ್ಟು ದುಡಿದರು ಅದರ ಫಲಾನುಭವದ ಯೋಗ್ಯತೆಯು ನಿಮಗಿಲ್ಲದಿರುವುದರಿಂದ ಆದರಿಂದ ನಿಮಗೆ ಎಳ್ಳಷ್ಟು ಪ್ರಯೋಜನ ಸಿಗದು. ಆದ್ದರಿಂದಲೇ ನೀವು ತತ್ವಲುವಾಸಿಟ್ಟಾಗಿಳುವಿರಿ. ಸಿಟ್ಟಿಗೆ ದೃಷ್ಟಿಯಿಲ್ಲವೆಂದಂತೆ ಸಿಟ್ಟಾದಾಗ ವಿವೇಕ ಶೂನ್ಯರಂತೆ ವರ್ತಿಸಿ ನಂತರ ನಾನಾತರದ ಕಲಹ ಕಷ್ಟಗಳಿಗೀಡಾಗುವಿರಿ. ಆದರೂ ನಿಷ್ಕಪಟಿಗಳಾಗಿ ಸತ್ಯ ಧರ್ಮ ಮಾರ್ಗದಿಂದಲೇ ನೀವು ಮುಂದರಿಯುತ್ತಿದ್ದರೆ ತತ್ಫಲವು ಆಚಿರದಲ್ಲಿ ದೊರೆಯಲಿದೆ. ತಾ. 29ರಿಂದ 4ರ ವರೆಗೆ ಹೆಚ್ಚು ಅನಾರೋಗ್ಯ ಅಡಚಣೆಯಿಂದ ಪೀಡಿಸಲ್ಪಡುವಿರಿ.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿಗುಟಿ

ಆಯುರ್ವೇದ ರೂಪೀಮುಂದಿರದ ಆಧಾರಸ್ಥಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯಯೂ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ ಹೊಟ್ಟೆಯುಬ್ಬರ, ಶೂಲೆ, ಚೆಚ್ಚುವ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವದು, ಹಾಗೂ ಆಲಸ್ಯ ಯಾ ವಾಯುವೆಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0 50, 0-13-0, 100, 1-5-0, 500, 5-0-0 1000, 9-0-0.

5ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆ (ಗುಟಿಗಳನ್ನು) ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ,

(ರಿಜಿಸ್ಟರ್ಡ್) **ಕುಂಜಾಲು.**

ಪೋಸ್ಟ್—ಬ್ರಹ್ಮಾವರ, ದ. ಕ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಅಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾವುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ಜಗತ್ಪ್ರಸಿದ್ಧ

ನಕಲಿ ಮಟ್ಟುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನು ಗೊನೊಕಿಲರ್ ಹೆಸರನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ಕನ್ನಡ ನುಡಿವೆಣ್ಣಿಗೊಂದು ಕನ್ನಡಗಿತ್ತಿಯ ನಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: ೦-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.

ಬರಹಗಾರ್ತಿಯರು:—

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ

'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ಮಾರ್ಗ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ ....'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

* ಟಾರ್ಪೆಡೋ ಮತ್ತು ಸಬ್ ಮೆರೀನುಗಳು *

ಟಾರ್ಪೆಡೋದಿಂದ ದೊಡ್ಡ ಹಡಗುಗಳನ್ನು ಹೇಗೆ ನಾಶಪಡಿಸಲಾಗುತ್ತದೆ?

1914ರ ಯುದ್ಧ ಪ್ರಾರಂಭವಾದೊಡನೆಯೇ ಜರ್ಮನಿಯ ಸಬ್‌ಮೆರೀನುಗಳು ಮಿತ್ರಮಂಡಲಿಯ ವ್ಯಾಪಾರದ ಹಡಗುಗಳಿಗೆ ಬಹಳ ನಷ್ಟವನ್ನುಂಟುಮಾಡಿದ್ದುವು. ಆದರಲ್ಲಿ ಯು 'ಎಮ್‌ಡನ್' ಎಂಬುದಂತೂ ಭಯಂಕರ ನಷ್ಟವನ್ನುಂಟುಮಾಡಿತು. ಬ್ರಿಟನ್, ಫ್ರಾನ್ಸ್, ಅಮೇರಿಕ, ಇಟಲಿ ಮೊದಲಾದ ಇತರ ದೇಶಗಳಲ್ಲಿಯೂ ದೊಡ್ಡ ದೊಡ್ಡ ಸಬ್‌ಮೆರೀನುಗಳು ಇವೆ. ಯುದ್ಧಾರಂಭವಾದಂದಿನಿಂದ ಜರ್ಮನಿಯ ಸಬ್‌ಮೆರೀನುಗಳು ಇಂತಹ ಹಡಗನ್ನು ಮುಳುಗಿಸಿದುವು. ಟಾರ್ಪೆಡೋ ಹಾಕಿ ನಾಶಪಡಿಸಿದುವು ಎಂದು ಓದುತ್ತಲೇ ಇರುವೆವು. ಟಾರ್ಪೆಡೋ ಎಂದರೇನು? ಇದರಿಂದ ದೊಡ್ಡ ಹಡಗುಗಳನ್ನು ಹೇಗೆ ನಾಶಪಡಿಸಲಾಗುತ್ತದೆ? ಎಂಬ ವಿವರವನ್ನು ಈ ಕೆಳಗೆ ಕೊಡಲಾಗಿದೆ.

ವಾಸ್ತವವಾಗಿ, ಸಬ್‌ಮೇರಿನ್ನುಗಳನ್ನು ಯುದ್ಧದ ಉದ್ದೇಶಕ್ಕಾಗಿಯೇ ನಿರ್ಮಿಸುವರು. ಶತ್ರುಗಳ ಹಡಗನ್ನು ನಾಶಪಡಿಸುವುದಕ್ಕಾಗಿಯೇ ಇವುಗಳನ್ನು ನಿರ್ಮಿಸುವುದು. ಅಲ್ಲದೆ ಇದರಿಂದ ತಮ್ಮ ಹಡಗುಗಳ ರಕ್ಷಣೆಯನ್ನೂ ಮಾಡಿಕೊಳ್ಳಬಹುದಲ್ಲದೆ ಶತ್ರುಗಳನ್ನು ಬೆನ್ನಟ್ಟಿ ಸಹ ಹೋಗಬಹುದು.

ಎಲ್ಲಕ್ಕಿಂತ ಮೊದಲು ಸಬ್‌ಮೇರಿನ್ನುಗಳ ರೂಪು ರಚನೆಗಳನ್ನು ತಿಳಿಯೋಣ. ಇದರ ರೂಪು ದೊಡ್ಡ ಸಿಗಾರಿನಂತಿರುವುದು. ಆದರೆ ಮೇಲ್ಭಾಗವು ಸ್ವಲ್ಪ ಚಪ್ಪಟೆಯಾಗಿರುವುದು. ಅಧಿಕಾರಿಗಳೂ, ನಾವಿಕರೂ ನಿಲ್ಲಲು ಈ ರೀತಿ ಮಾಡಿರುವರು. ಮೇಲ್ಗಡೆಯ ಹಲಗೆಯ ಮೇಲೆ ಒಂದು ಕಂಬದಂತಿರುವುದು. ಇದರ ಮಾರ್ಗವಾಗಿ ನಾವಿಕನು ದೋಣಿಯೊಳಗೆ ಹೋಗಬಲ್ಲನು. ಈ ಕಂಭದಲ್ಲೇ ಒಂದು ದೊಡ್ಡ ಕೊಳವೆಯಿದ್ದು, ಅದರ ಬಾಯಿಯು ನೀರಿನ ಮಟ್ಟಕ್ಕೆ ಮೇಲ್ಗಡೆ ಇರುತ್ತದೆ.

ಸಬ್‌ಮೇರಿನ್ನುಗಳನ್ನು ನಡೆಯಿಸಲು ಒಳಗಡೆ ಎಂಜಿನ್ ಇರುವುದು. ಈ ಎಂಜಿನ್ ಆವಿಯಿಂದಲ್ಲ, ಪೆಟ್ರೋಲಿನಿಂದ ನಡೆಯುವುದು. ಇದು ನೀರಿನ ಮೇಲ್ಗಡೆ ಸಂಚರಿಸುವಷ್ಟು ಕಾಲವೂ ಇದರ ವೇಗವು ಬಹಳವಾಗಿರುವುದು. ಆಗ ವಿದ್ಯುಚ್ಛಕ್ತಿನಿಂದ ನಡೆಯಿಸಲ್ಪಡುವುದು ಇದು. ಏಕೆಂದರೆ ಪೆಟ್ರೋಲಿನ ಹೊಗೆಯಿಂದ ನಾವಿಕರ ಆರೋಗ್ಯವು ಕೆಡುವುದು. ಈ ಸಬ್‌ಮೇರಿನ್ನುಗಳು ಹಡಗಿನಿಂದ ದೂರ ದೂರದಲ್ಲೇ ಇರುವುವು. ಏಕೆಂದರೆ, ಹಡಗಿನ ಕೆಳಭಾಗವು ಇದಕ್ಕೆ, ಸ್ವಲ್ಪವೇ ಆಗಲಿ, ತಗಲಿದರೂ ಇದರ ಮೇಲಿನ ಹೊದಿಕೆಯು ಬಿಟ್ಟುಹೋಗುವುದು. ಸಮುದ್ರದ ನೀರು ಒಳಕ್ಕೆ ನುಗ್ಗಿ, ಹಡಗು ಮುಳುಗುವ ಸಂಭವವುಂಟಾಗುವುದು.

ಸಬ್‌ಮೇರಿನ್ನುಗಳು ಸಮುದ್ರ ಮಟ್ಟದಿಂದ ಕೆಳಗೇ ನಡೆಯಬೇಕಾಗಿರುವುದರಿಂದ, ಅದೂ ಇತರರಿಗೆ ತಿಳಿಯದಂತೆ ಗುಟ್ಟಿನಲ್ಲೇ ಸಂಚರಿಸಬೇಕಾಗಿರುವುದರಿಂದ ಇದು ಸಂಚರಿಸುವ ಶಬ್ದವು ಇತರರಿಗೆ ತಿಳಿಯದಂತಿರಬೇಕು, ಇದು ಹೋದ ಮಾರ್ಗವನ್ನು ಇತರರು ತಿಳಿಯದಂತಿರಬೇಕು. ಆದುದರಿಂದ ಇದು ನಿಶ್ಶಬ್ದವಾಗಿ ನೀರಿನಲ್ಲಿ ಸಂಚರಿಸುವುದು. ಇವುಗಳು ಮುಳುಗುವಾಗ ಇವುಗಳಲ್ಲಿನ ಭಾರವನ್ನು ಹೆಚ್ಚಿಸುವರು. ನೀರಿನೊಳಗೆ ಸುಲಭವಾಗಿ ಮುಳುಗಲೆಂದೇ ಈ ರೀತಿಮಾಡುವರು. ಇದರೊಳಗೆ 2, 3 ಟಾಂಕಿಗಳಿರುವುವು. ಇವುಗಳ ಬಾಯಿಗಳು ತೆರೆಯಲ್ಪಟ್ಟಿರುವುವು. ಸಮುದ್ರದ ನೀರು ಇವುಗಳಲ್ಲಿ ತುಂಬಿಕೊಳ್ಳುವುದಕ್ಕಾಗಿ ನೀರು ನುಚ್ಚಿಕೊಂಡ ನಂತರ ಬಾಯನ್ನು ಮುಚ್ಚುವರು. ಈ ರೀತಿ ಅನು ಭಾರವಾಗಿ ಆಳದ ವರೆಗೆ ಹೋಗಬಲ್ಲುದು. ಸಬ್‌ಮೇರಿನ್ ನೀರಿನೊಳಗೆ ವಿದ್ಯುಚ್ಛಕ್ತಿನಿಂದ ನಡೆಯುವಾಗ ಇದರ ವೇಗ ಗಂಟೆಗೆ 8 ರಿಂದ 12 ಮೈಲು ಇರಬಹುದು.

ಇವುಗಳಲ್ಲಿ 15 ರಿಂದ 30 ಮಂದಿವರೆಗೆ ಕೆಲಸಮಾಡುವರು. ಶುದ್ಧವಾದ ಗಾಳಿಯೇ ಇಲ್ಲದಿರುವಲ್ಲಿ ಇವರು ಗಂಟೆಗಳ ಕಾಲ ಕೆಲಸಮಾಡಬೇಕಾಗುತ್ತದೆ. ಆದುದರಿಂದ ಇವರ ಉಪಯೋಗಕ್ಕಾಗಿ ಒಳ್ಳೆಯ ಗಾಳಿಯನ್ನು ಪೀಪಾಯಿಗಳಲ್ಲಿ ಭರ್ತಿಮಾಡಿಟ್ಟಿರುವರು.

ಸಬ್ ಮೆರೀನ್ ಸಮುದ್ರ ಮಟ್ಟಕ್ಕೆ ಸಮನಾಗಿ ಸಂಚರಿಸುವಾಗಲೂ, ಸಹ ಇದು ಎಲ್ಲ ಕಡೆಯಲ್ಲಿಯೂ ಬಂದಾಗಿರುವುದರಿಂದ, ನಾವಿಕರಿಗೆ ಏನೇನೂ ಕಾಣಿಸುವುದಿಲ್ಲ. ಮೇಲ್ಭಾಗದಲ್ಲಿರುವ ಅಧಿಕಾರಿಯು ಆಗಿಂದಾಗ್ಗೆ ನೀರಿನಿಂದ ಹೊರಗೆ ಬಗ್ಗಿ ನೋಡುತ್ತಿರುವನು. ಆದರೆ ದೋಣಿಯು ಆಳದಲ್ಲಿ ಹೋಗುತ್ತಿರುವಾಗ, ಏನೂ ಕಾಣುವುದಿಲ್ಲ. ಅದರೆ ಈ ತೊಂದರೆಯನ್ನು ದೂರಮಾಡಿರುವರು. ಒಬ್ಬ ವಿಜ್ಞಾನಿಯು ಇದಕ್ಕೊಂದು ಕಣ್ಣನ್ನು ಸೃಷ್ಟಿಸಿರುವನು. ಇದರ ಸಹಾಯದಿಂದ ಈ ಅಧಿಕಾರಿಯು 30 ಮೈಲಿಗಳ ದೂರದ ವರೆಗಿನ ಸ್ಥಿತಿಯನ್ನೂ ನೋಡಬಲ್ಲನು. ಇದಕ್ಕೆ 'ಪ್ಯಾರಿಸ್ಕೋಪ್' ಎಂದು ಹೆಸರು. ಅಲ್ಲದೆ ಶತ್ರುಗಳ ಹಡಗು ಎಷ್ಟು ದೂರದಲ್ಲಿದೆ, ಎತ್ತ ಕಡೆ ಹೋಗುತ್ತಿದೆ ಮತ್ತು ಎಷ್ಟು ವೇಗವಾಗಿ ಹೋಗುತ್ತಿದೆ ಎಂಬುದನ್ನೂ ಈ ಅಧಿಕಾರಿಯು ತಿಳಿದುಕೊಳ್ಳಬಲ್ಲನು.

ಎಲ್ಲಕ್ಕಿಂತ ಮೊದಲು ತಾಮಸ್ ಡಾವ್ನಿ ಎಂಬುವನು ಇದನ್ನು ನಿರ್ಮಿಸಿದನಂತೆ. ಇವನು ಅಮೇರಿಕದ ಜಲ ಸೈನ್ಯದಲ್ಲಿ ಇಂಜನಿಯರಾಗಿದ್ದನು. ಅಮೇರಿಕದ ಅಂತಃಕಲಹದ ಸಮಯದಲ್ಲಿ ನದಿಗಳ ಪಕ್ಕಗಳಲ್ಲಿ ಗುಂಡುಹಾರಿಸುವವರು ಕಾದುಕೊಳ್ಳುತ್ತಿರುತ್ತಿದ್ದರು. ಕೆಳಗಡೆ ಹೋಗುತ್ತಿದ್ದ ಹಡಗಿನ ಮೇಲೆ ಗುಂಡುಹಾರಿಸುತ್ತಿದ್ದರು. ಇದರಿಂದ ತಪ್ಪಿಸಿಕೊಳ್ಳಲು ತಾಮಸನು ಸಣ್ಣದಾದ ಪ್ಯಾರಿಸ್ಕೋಪನ್ನು ತಯಾರಿಸಿದನು. ಈಗ ಅದರಲ್ಲಿ ಬಹಳ ಸುಧಾರಣೆಯಾಗಿದೆ.

ಟಾರ್ಪೆಡೋ

ನಾವು ದಿನದಿನವೂ ಅಲ್ಲಿ ಇಂತಹ ಜಹಜಿಗೆ ಟಾರ್ಪೆಡೋ ಹಾಕಿ ನಾಶಪಡಿಸಲಾಯಿತು ಎಂಬುದಾಗಿ ಓದುತ್ತಲೇ ಇದ್ದೇವೆ. ಕ್ಷಣಮಾತ್ರದಲ್ಲಿ ಇಂತಹ ದೊಡ್ಡ ದೊಡ್ಡ ಹಡಗುಗಳನ್ನು ನಿರ್ನಾಮಮಾಡುವ ಈ ಟಾರ್ಪೆಡೋ ಎಂಬುದೇನು? ಇದು ಸಬ್ ಮೆರೀನ್‌ನೊಡನೆ ಸೇರಿಸಲ್ಪಟ್ಟಿರುವಂತಹ ಒಂದು ಅತ್ಯಂತ ವಿಚಿತ್ರವಾದ ವಸ್ತು. ಇದರ ರೂಪು ಸಬ್ ಮೆರೀನಿನಂತೆಯೇ ಇರುವುದು. ಇದರಲ್ಲಿ ಎಂಜಿನ್ ಮತ್ತು ನೂಕುವ ಆಯುಧಗಳಿರುವುವು. ಸಬ್ ಮೆರೀನುಗಳಲ್ಲಿ ನಡೆಸುವ ನಾವಿಕನಿರುವನು. ಇದರಲ್ಲಿ ಯಾರೂ ಇರುವುದಿಲ್ಲ. ಸಬ್ ಮೆರೀನಿನ ಹಿಂದೆ ಇದನ್ನು ಬಿಟ್ಟರೆ ದೋಣಿಯಲ್ಲಿ ನೀರು ಬಡು

ಹೋಂ ಇಂಗ್ಲಿಷ್ ಟ್ಯೂಟರ್

ಇದರಲ್ಲಿ, ಸುಲಭ ಪಾಠಗಳು, ವ್ಯಾಕರಣ ನಿಯಮಗಳು, ಚಿಕ್ಕ ಕಥೆಗಳು, ಕನ್ನಡ ತರ್ಜುಮೆ ಕ್ರಮಗಳು, ವಾಕ್ಯರಚನಾಕ್ರಮಗಳು, ಪತ್ರವ್ಯವಹಾರ, ಅರ್ಜಿಗಳ ನಮೂನೆಗಳು, ಇಂಗ್ಲಿಷ್ ಕನ್ನಡ ಗಾದೆಗಳು, ಉಚ್ಚಾರಣೆ ಮತ್ತು ಅರ್ಥಗಳಲ್ಲಿ ವ್ಯತ್ಯಾಸವಿರುವ ಶಬ್ದಗಳು, ಇಂಗ್ಲಿಷ್ ಉಚ್ಚಾರಣೆ ಸಹಿತ ಸುಮಾರು 3000 ಶಬ್ದಗಳ ಕೋಶವೂ ಸಂಕೇತಾಕ್ಷರಗಳೂ ಅಡಗಿವೆ. ಈ ಪುಸ್ತಕವಿದ್ದರೆ ತಿಳಿದ ಉಪಾಧ್ಯಾಯರು ಮನೆಯಲ್ಲಿದ್ದಷ್ಟೇ ಸಹಾಯವಾಗುವುದು. ಸುಮಾರು 216 ಪುಟಗಳ ಪುಸ್ತಕಕ್ಕೆ ಟಪ್ಪಾಲು ಖರ್ಚು ಸೇರಿ ಬೆಲೆ ಒಂದೇ ರೂಪಾಯಿ.

ಹಣ ಮುಂಗಡ ಕಳುಹಿಸಬೇಕು. V. P. ಮಾಡಲಾಗುವುದಿಲ್ಲ,

ಉಪಾಧ್ಯಾಯ ಬುಕ್ ಡಿಪೋ, A S. Street, ಬೆಂಗಳೂರು ಸಿಟಿ.

ಟೆಂಡರ್ ನೋಟೀಸು

ಉಡುಪಿ ಮುನಿಸಿಪಾಲಿಟಿಯ 1940-1941ನೇ ವರುಷದ ಕಾಮಗಾರಿಗಳ ಬಗ್ಗೆ ತಾ. 11-3-1940ನೇ ಸೋಮವಾರ ಅಪರಾಹ್ನ ಮೂರು ಗಂಟೆ ತನಕ ಕಂಟ್ರಾಕ್ಟರರಿಂದ ಟೆಂಡರುಗಳು ಸ್ವೀಕರಿಸೋಣಾಗುವವು. ಮುನಿಸಿಪಾಲಿಟಿಯ ದಾಖಲೆಯಲ್ಲಿ ರಜಿಸ್ಟ್ರಿಯಾಗದ ಉಮೇದ್ವಾರರು ರೂಪಾಯಿ 5/-ನ್ನು ಪಾವತಿಮಾಡಿ ರಿಜಿಸ್ಟರ್ಡ್ ಕಂಟ್ರಾಕ್ಟರರಾಗಿರತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಮುನಿಸಿಪಲ್ ಆಫೀಸು ಸಮಯ ಖುದ್ದು ಬಂದು ಪಡೆಯಬಹುದು.

ಕಾಮಗಾರಿಕೆಯ ವಿಷಯ.

ರಸ್ತೆಯ ಹೆಸರು	ಅಂದಾಜು ಖರ್ಚು	ಟೆಂಡರ್ ಡಿಪೋಜಿಟ್
ಕಲ್ಸಂಕ ಮಾರ್ಗ	ರೂ. 1850/-	ರೂ. 95/-
ಮಲ್ಪೆ ಕಾರ್ಕಳ ಮಾರ್ಗ	ರೂ. 1900/-	ರೂ. 95/-
ಟೌನ್ ಮಾರ್ಗ ಪೂರ್ವ	ರೂ. 1000/-	ರೂ. 50/-
„ ಪಶ್ಚಿಮ	ರೂ. 750/-	ರೂ. 40/-

ಮುನಿಸಿಪಲ್ ಆಫೀಸು, ಉಡುಪಿ, ತಾರೀಕು 16-2-1940 (ಸಹಿ) **ಬಿ. ಸೂರ್ಯನಾರಾಯಣ ರಾವ್,** ಕಮಿಷನರ್, ಉಡುಪಿ ಮುನಿಸಿಪಾಲಿಟಿ.

ಶ್ರೀ ಭಗವದ್ಗೀತಾ

ಪಂಡಿತ ಸಾನ್ಯಂ ಸುಂದರ ಶಾಸ್ತ್ರಿಗಳು ಮತ್ತು ಪಂಡಿತ ದೊಡ್ಡ ಬೆಲೆ ನಾರಾಯಣ ಶಾಸ್ತ್ರಿಗಳು–ಮೊದಲಾದ ನಾಲ್ವರು ಮಹಾವಿದ್ವಾಂಸರಿಂದ ರಚಿಸಲ್ಪಟ್ಟ 'ಭಾವಬೋಧಿನೀ' ಎಂಬ ಟೀಕಾ ತಾತ್ಪರ್ಯ ಸಹಿತ

ಪುಟಗಳು 664 ಬೆಲೆ 3-0-0

(ಪೂರ್ಣ ಸಾಮವೇದ ಬೈಂಡು.)

ಕೆಲವು ಪ್ರತಿಗಳು ಮಾತ್ರ ಉಳಿದಿವೆ,

ಉಪಾಧ್ಯಾಯ ಬುಕ್ ಡಿಪೋ

A. S ಸ್ಟ್ರೀಟ್, ಬೆಂಗಳೂರು ಸಿಟಿ.

GET Rich & Prosperous!

Here is an authorised simple means upheld and pursued by millions of persons with great advantage. This should lead you also to Riches and Prosperity. Ask for details-go through it carefully-take advantage of it and enjoy full comforts, luxury, influence and all that go to make HAPPINESS complete.

K. S. ROW,
Worli, BOMBAY.

Degrees: Books: Medicines.

Free H. L. M S, H M. B. H. M. D. etc Free Homeo-Ayur-Unani-Naturo degrees. by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp.—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India.

NAVAYUGA
Advertisement Tariff

1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-**Navayuga UDIPI.**

ವುದಿಲ್ಲವೆ ಎಂಬ ಪ್ರಶ್ನೆಯುಂಟಾಗುವುದು. ಉತ್ತರವೇನೆಂದರೆ, ಟಾರ್ಪೆಡೋವು ಸಬ್ ಮೆರೀನಿನ ಕೊನೆ ಭಾಗಕ್ಕೆ ಸೇರಿಸಲ್ಪಟ್ಟಿರುವುದು. ಸಬ್ ಮೆರೀನುಗಳಲ್ಲಿರುವ ಕೆಲವು ರಂಧ್ರಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟಿರುವುವು. ಟಾರ್ಪೆಡೋಗೆ ಫೈಯರ್ ಮಾಡುವ ಅಗತ್ಯವುಂಟಾದಾಗ ನಾವಿಕರು ಸಬ್ ಮೆರೀನಿನ ಒಳಗಿನ ಬಾಗಿಲನ್ನು ತೆರೆದು 'ತೋಟೆ'ಯನ್ನು ಹತ್ತಿಸುವರು. ಈ ಕೆಲಸವಾದನಂತರ ಒಳಗಿನ ಬಾಗಿಲನ್ನು ಮುಚ್ಚಿ, ಹೊರ ಬಾಗಿಲನ್ನು ತೆರೆಯುವರು. ಈ ರೀತಿ ತೆರೆದ ತತ್‌ಕ್ಷಣ ಟಾರ್ಪೆಡೋವು ಹೊರಡುವುದು.

ಟಾರ್ಪೆಡೋವಿನ ವೇಗವು ಸಬ್ ಮೆರೀನಿಗಿಂತ ಹೆಚ್ಚಾಗಿರುವುದು. ಕೆಲವಂತೂ ಗಂಟೆಗೆ ೩೦–೬೦ ಮೈಲು ಹೋಗುವುವು. ಸಬ್ ಮೆರೀನಿನಿಂದ ಟಾರ್ಪೆಡೋವು ಹೊರಡುವುದೆಂದಮೇಲೆ ಶತ್ರುಗಳ ಹಡಗುಗಳಿಗೆ ತಾಗುವ ಮೊದಲು, ಸ್ವಯಂ ಏಕೆ ಒಡೆದುಹೋಗುವುದಿಲ್ಲ? ಎಂಬ ಪ್ರಶ್ನೆಯುಂಟಾಗುವುದು. ಟಾರ್ಪೆಡೋವಿನ ಮುಂಭಾಗದಲ್ಲಿ ಬೆಂಕಿಯು ತಾಗಿದ ಕೂಡಲೆ ಉರಿಯುವ ವಸ್ತುವಿದೆ. ಮೊನೆಯಲ್ಲಿ ಸೂಜಿಯಂತಹ ವಸ್ತುವಿರುವುದು. ಇದರ ಮೇಲೆ ಹೊರಗಿನ ಪೆಟ್ಟು ತಾಗಿತೆಂದರೆ, ಈ ಬೆಂಕಿಯನ್ನು ಆಕರ್ಷಿಸುವ ವಸ್ತುವು ಸ್ಫೋಟನಗೊಳ್ಳುವುದು.

ಟಾರ್ಪೆಡೋವು ಸಮುದ್ರದ ನೀರಿನ ಒತ್ತಡದಿಂದ ನಾಶವಾಗುವ ಭಯವೂ ಇದೆ. ಆದರೆ ಇದರ ನಿವಾರಣೆಗೂ ದಾರಿ ಮಾಡಿರುವರು. ಇದರಲ್ಲಿ ಒಂದು ಸಣ್ಣ ಚಕ್ರವನ್ನಿಟ್ಟಿರುವರು. ಇದು ಯಾವಾಗಲು ತಿರುಗುತ್ತಲೇ ಇರುವುದು. ಇದರಿಂದ ಮೊನೆಯಾದ ಸೂಜಿಯು ಸಡಿಲಾಗುವುದಿಲ್ಲ. ಆದರೆ ಟಾರ್ಪೆಡೋವಿನ ಪ್ರಯಾಣವು ಮುಗಿದ ನಂತರ ಈ ಚಕ್ರವು ಸ್ವಯಂ ಸಡಿಲಾಗಿ ಸೂಜಿಯ ಅಡ್ಡಿಯು ದೂರವಾಗುವುದು. ನಂತರ ಟಾರ್ಪೆಡೋವಿನ ಮೊನೆಯು ಜಹಜಿನ ಕೆಳಭಾಗಕ್ಕೆ ತಗುಲಿತೆಂದರೆ, ಆ ಬೆಂಕಿಯನ್ನೂ ಆಕರ್ಷಿಸುವ ಭಾಗವು ಹೊತ್ತಿಕೊಳ್ಳುವುದು. ಆಗ ಉಂಟಾಗುವ ಶಬ್ದಕ್ಕೇ ಅತ್ಯಂತ ದೊಡ್ಡ ಹಡಗೂ ಮುಳುಗಿ ಬಿಡುವುದು.

ಸಬ್ ಮೇರಿನ್ನುಗಳು ನೌಕಾಯುದ್ಧದಲ್ಲಿ ಬಹಳ ವಿನಾಶ ಕಾರಕಗಳೆಂದು ದೃಢಪಟ್ಟಿರುವುದರಿಂದ, ಇವುಗಳನ್ನೂ ವಿರೋಧಿಸುವಂತಹ ವಸ್ತುಗಳನ್ನು ತಯಾರಿಸುವುದೂ ಅನಿವಾರ್ಯವಾಯಿತು. ಆದುದರಿಂದ ಇವುಗಳ ಸಣ್ಣ ಸಣ್ಣ ಗುಂಪುಗಳು ಯುದ್ಧದ ಹಡಗುಗಳೊಡನೆ ಯಾವಾಗಲೂ ಇರುವುವು.

ಸಬ್ ಮೇರಿನುಗಳು

ಇವು ತೀರ ಹೊಸಬಾಗಿ ನಿರ್ಮಿತವಾದುವೆಂದು ಜನರು ಹೇಳುವರು. ಇದು ನಿಜವೇ. 1914 ರ ಯುದ್ಧಕ್ಕೆ ಮೊದಲು ಯಾರಿಗೂ ಇದರ ಹೆಸರೇ ತಿಳಿದಿರಲಿಲ್ಲ. ಆಗ ಬೇರೆ ಬೇರೆ ದೇಶಗಳಲ್ಲಿ ಈಗಿರುವಷ್ಟು ಸಂಖ್ಯೆಯಲ್ಲಿ ಇವು ಇರಲಿಲ್ಲ. ಇವುಗಳಿಲ್ಲಿ ಈಗ ಬಹಳ ಸುಧಾರಣೆಯೂ ಸಹ ಆಗಿದೆ. ಜರ್ಮನಿಯು ಯು (U Boat) ಬೋಟು ಗಳನ್ನು ಅಧಿಕ ಸಂಖ್ಯೆಯಲ್ಲಿ ತಯಾರಿಸ್ಮಾಡಿಸಿದೆ. ಇವೆಲ್ಲವನ್ನೂ ಸಮುದ್ರದಲ್ಲಿ ಬಿಟ್ಟಿರುವರು. ಈ ಯು ಬೋಟುಗಳೇ ಹಡಗುಗಳನ್ನು ಮುಳುಗಿಸುತ್ತಿವೆ. ಆದರೆ ಬ್ರಿಟನ್. ಮತ್ತು ಫ್ರಾನ್ಸುಗಳ ನೌಕಾ ದೋಣಿಗಳ ಗುಂಪು ಸಮುದ್ರದಲ್ಲಿ ಸಂಚರಿಸುತ್ತಿದ್ದು, ಇವುಗಳನ್ನು ಚೂರು ಚೂರು ಮಾಡುವ ಪ್ರಯತ್ನದಲ್ಲಿ ತೊಡಗಿವೆ. ಅಲ್ಲದೆ ವಿಮಾನಗಳು ಬೇರೆ ಈ ಕೆಲಸದಲ್ಲಿ ಮಗ್ನವಾಗಿವೆ.

ಹಿಂದಿನ ಕಾಲದಲ್ಲಿ ಜಲ ಯುದ್ಧಗಳಲ್ಲಿ ಯುದ್ಧ ಹಡಗುಗಳಿಗೇ ಬಹಳ ಪ್ರಾಶಸ್ತ್ಯವಿರುತ್ತಿತ್ತು. ಆದರೆ ಸಬ್‌ಮೇರಿನ್ ಮತ್ತು ಟಾರ್ಪೆಡೋಗಳಿಂದ ಅವುಗಳ ಮಹತ್ವವು ಕಡಿಮೆಯಾಗಿ ಹೋಯಿತು. ಇದನ್ನು 1596ರಲ್ಲಿ ಜಾನ್ ನೇಪಿಯರ್ ಎಂಬವನು ಇದರ ವಿಷಯವಾಗಿ ಒಂದು ಲೇಖನವನ್ನು ಬರೆದನು. ಅದರಲ್ಲಿ ಅವನು ನೀರಿನೊಳಗೆ ಸಂಚರಿಸುವ ಹಡಗುಗಳನ್ನು ನಡೆಸುವ ರೀತಿಯನ್ನು ಕಂಡು ಹಿಡಿಯುತ್ತಿರುವುದಾಗಿ ಬರೆದಿದ್ದನು. ಅಂದರೆ 16ನೇ ಶತಮಾನದಲ್ಲೇ ವಿಜ್ಞಾನಿಗಳು ಇದರ ಶೋಧನೆಯಲ್ಲಿ ತೊಡಗಿದ್ದಾರೆಂದು ವ್ಯಕ್ತವಾಗುವುದು. ಇಂಗ್ಲೆಂಡಿನ ಎರಡನೇ ಜೇಮ್ಸಿನ ಕಾಲದಲ್ಲಿ ಇಂತಹ ಪ್ರಯತ್ನವೊಂದು ನಡೆದಿತ್ತು. ನಂತರ 1774ರಲ್ಲಿ ಡೇಲಿ ಎಂಬವನು ಪ್ಲಿಮತ್ ರೇವಿನಲ್ಲಿ ಇಂತಹದೊಂದು ಹಡಗನ್ನು ನಡೆಸಲೆತ್ನಿಸಿದನು. ಆದರೆ ಆಗದೆ ಅವನು ಸತ್ತನು. ರಾಬರ್ಟ್ ಫಿಲ್‌ಟರ್ ಎಂಬವನು ಬಹಳ ಯತ್ನಿಸಿದನು.

ಸಮುದ್ರದಲ್ಲಿ ತಂತಿಯ ಬಲೆ

ಶತ್ರುಗಳ ಸಬ್‌ಮೇರಿನ್ನುಗಳನ್ನು ವಶಪಡಿಸಿಕೊಳ್ಳಲು ಸಮುದ್ರದಲ್ಲಿ ಬಲವಾದ ತಂತಿಗಳ ಬಲೆಯನ್ನೇ ಹಾಸುವರು. ಇದರಲ್ಲಿ ಸಿಕ್ಕಿಕೊಂಡ ನಂತರ ಹೊರಗೆ ಬರುವುದು ಕಷ್ಟವಾಗುವುದು. ಕೆಲವು ಸಬ್ ಮೇರಿನ್ನುಗಳಂತೂ ಈ ತಂತಿಗಳನ್ನು ಹರಿದು ಹೋಗುವುವು.

ಸಬ್‌ಮೇರಿನ್ನುಗಳು ನೀರಿನೊಳಗೆ ಮುಳುಗುವಾಗ, ತೀರ ಕಿವುಡಾಗುವುವು. ಆದರೆ ಅದನ್ನು ನಿವಾರಿಸಿಕೊಳ್ಳಲು, ಅವುಗಳಲ್ಲಿ ಮೈಕ್ರೋಫೋನನ್ನು ಇಡುವ ವ್ಯವಸ್ಥೆ ಇದೆ. ಇದರಿಂದ ಸಮುದ್ರದ ಯಾವ ಮಟ್ಟದಲ್ಲಿ ಸಬ್‌ಮೇರಿನ್ನು ಹೋಗುತ್ತಿರುವುದೆಂದು, ಅದರ ಅಧಿಕಾರಿಗೆ ತಿಳಿಯುವುದು.

ನವಯುಗ

ನೋಟೀಸು.

ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅದನ್ನು ದಯಮಾಡಿ ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಚಾಲ್ತಿ ವರ್ಷದ ಚಂದಾ ಹಣ ಬಾಕಿ ಇರುವವರು ಅದನ್ನು ಆದಷ್ಟು ಬೇಗನೆ ಕಳಿಸುವಂತೆಯೂ ವಿನಂತಿ.

—ಮೆನೇಜರ್.

ಓ ರಿ ಯಂ ಟ ಲ್

ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್

ಸ್ಥಾಪನೆ ವರ್ಷ 1874] ಎಶೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕ ಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್"ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲ್ಯಾಫ್ ಆಫೀಸು,
ಮೈನ್ ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರಿಟರಿ,
ಓರಿಯಂಟಲ್ ಲ್ಯಾಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ORIENTAL

GOVERNMENT SECURITY LIFE ASSURANCE CO., LTD.

THE ASIAN ASSURANCE COMPANY, LIMITED.

ASIAN BUILDINGS - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,43,40,801	9,24,965	24,50,234
1935	2,52,08,418	18,39,296	42,98,820
1938	3,61,55,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
,, **M. Shivarama Rao,** Organizer, Puttur.

Or

Sri. J. A. PUTRAN,
Branch Manager, MANGALORE.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES - - - - - MANGALORE

THE

VIJAYA BANK LTD.,

MANGALORE.

ದಿ ವಿಜಯಾ ಬೇಂಕ್ ಲಿಮಿಟೆಡ್,

ಮಂಗಳೂರು.

ಸ್ವಜಾತಿ ಗೃಹಸ್ಥರಲ್ಲಿ ವಿನಂತಿ

ಈ ಬೇಂಕು **1931**ನೇ ಇಸವಿಯಲ್ಲಿ ಬಂಟರ ಯಾನೆ ನಾಡವ ಸಮಾಜದ ಕೆಲವು ಮಂದಿ ಮುಖಂಡರ ಪ್ರಯತ್ನದಿಂದ ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟು, ಈಗ ಅದರ ಶಾಖೆಗಳು, ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳದಲ್ಲಿ ತೆರೆಯಲ್ಪಟ್ಟಿವೆ. ಬೇಂಕು ದಿನೇ ದಿನೇ ಸ್ಥಿರವಾದ ಅಭಿವೃದ್ಧಿ ಹೊಂದಿ ಜನವಿಶ್ವಾಸಕ್ಕೆ ಪಾತ್ರವಾಗಿದೆ ಸದ್ರಿ ಬೇಂಕಿನ ಪಾಲುದಾರರಿಗೆ ಹೋದ ವರ್ಷ ಶೇಕಡಾ 7ರಷ್ಟು ಡಿವಿಡೆಂಡ್ ಹಂಚಲ್ಪಟ್ಟಿದೆ.

ಬೇಂಕಿನ ಕಾರ್ಯಕ್ಷೇತ್ರವನ್ನು ಇನ್ನಷ್ಟು ವ್ಯಾಪಿಸಗೊಳಿಸಿ ಅದನ್ನು ಹೆಚ್ಚೆಚ್ಚಾಗಿ ಜನತೆಗೆ, ವಿಶೇಷವಾಗಿ ಕೃಷಿಕರಿಗೆ ಉಪಯೋಗಕರವಾಗುವಂತೆ ಮಾಡಬೇಕೆಂದು ನಮ್ಮೆಲ್ಲರ ಪ್ರಾಮುಖ್ಯ ಉದ್ದೇಶವಾಗಿರುತ್ತದೆ. ಅದಕ್ಕಾಗಿ ಅದರ ಪಾಲುಗಳನ್ನು ಬಂಟರ ಯಾನೆ ನಾಡವ ಸಮಾಜದ ಗೃಹಸ್ಥರು, ಇನ್ನೂ ಹೆಚ್ಚಾಗಿ ಪಡೆದು ಪ್ರೋತ್ಸಾಹಿಸಬೇಕಾಗಿರುವುದು ಅಗತ್ಯವಾಗಿದೆ. ಬೇಂಕಿನ ಸೆಕ್ರಿಟರಿಗಳಾಗಿದ್ದ ಶ್ರೀ. ಕೆ. ಗೋಪಾಲಕೃಷ್ಣ ಶೆಟ್ರು 4 ತಿಂಗಳ ಮಟ್ಟಿಗೆ ಪಾಲುಗಳನ್ನು ಹೊಸತಾಗಿ ಸಂಗ್ರಹಿಸುವ ಕೆಲಸಕ್ಕೇನೇ ನಿಯುಕ್ತರಾಗಿದ್ದಾರೆ. ಅವರು ತನ್ನ ಕೆಲಸವನ್ನು ಇಷ್ಟರಲ್ಲೇ ಆರಂಭಿಸಿ ಕೆಲವು ಕಡೆಗಳಲ್ಲಿ ಸಂಚರಿಸಿ, ಉದಾರ ಪ್ರೋತ್ಸಾಹ ಪಡೆದಿರುತ್ತಾರೆ. ಜಿಲ್ಲೆಯ ಉಳಿದ ಭಾಗಗಳಲ್ಲಿಯೂ ಜಿಲ್ಲೆಯ ಹೊರಗೂ ಅವರು ಸಂಚರಿಸುವ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಆದುದರಿಂದ ಸ್ವಜಾತಿ ಗೃಹಸ್ಥರೆಲ್ಲರೂ ಸಮಾಜದ ಒಂದೇ ಒಂದು ಬೇಂಕಿಂಗ್ ಸಂಸ್ಥೆಯಾದ ವಿಜಯಾಬೇಂಕಿನ ಪಾಲುಗಳನ್ನು ಹೆಚ್ಚೆಚ್ಚಾಗಿ ತೆಗೆದುಕೊಂಡು ಉದಾರಚಿತ್ರರಾಗಿ ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ.

Mangalore,
26–1–'40

(Signed by) **B. Manjaya Hegde.**
Chairman of the
Board of Directors.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚರತಿ (6 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)
ರೂ 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪ್ರತ್ಯೇಕ)
ವ್ಯಾಪಾರಿಗಳಿಗೆ ಉದಾರ ಕಮಿಶನ್.
ಪ್ರತಿಗಳಿಗೆ ಬರೆಯಿರಿ:-

ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

"ಸಾಮುದ್ರಾಯಿ"

ಸತ್ವಂಶಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಪುಂಸಕತ್ವ, ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ಹುಟ್ಟುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರಠ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4
Sorath Pharmacy,
Null Bazar, Duncan Road,
BOMBAY 4.

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು



KOPRAN
Tooth Paste

ಹಿಂದೂದೇಶದ ಜನಪ್ರೀತ ದಂತಾಂಜನ

ಜಾಲಿಗಿಡದ ತತ್ವಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ ಅತ್ಯವಶ್ಯವಾದ್ದು, ಪರಿಹಾರಕವಾದದ್ದು.

KOPRAN CHEMICAL CO., BOMBAY

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ಶೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ
ವಿಜ್ಞಾನದ ನವೀನ ಮತ್ತು
ವಿಚಿತ್ರ ಶೋಧ

ಕಿವಿ ಸೋರುವುದು, ಸೋವು, ಉರಿಯುವುದು, ಶಬ್ದ ಕೇಳಿಸುವುದು, ತುರಿಸುವುದು, ಕುರು ಅಥವಾ ನೋವೇಳುವುದು, ಕರ್ಣಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೈನು ತೆಗೆದುಕೊಂಡ ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸ ಫಲದಿಂದ ಖಾತ್ರಿಗುಣಹೊಂದುವುದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು ಬಾಟ್ಲಿ 1ರ ಬೆಲೆ ರೂ 2, 3 ಬಾಟ್ಲಿಗಳಿಗೆ ರೂ 5, ಅಂಚೆ ಖರ್ಚು ಪ್ರತ್ಯೇಕ

ವಿಳಾಸ —ಆರೋಗ್ಯಸದನ, ಮುಗ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE **MOOLKY BANK, LTD.,**
MOOLKY,
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ ಭಂಗಾರ ವ ಸರಕಿನ ಈಡಿನ ಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ನೇಕಡ 5ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M R Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್,

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಖಂಡಿತವಾಗಿಯೂ ಅಂಟಿಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು ಸೀಸೆ 1ಕ್ಕೆ 12 ಆಣೆ, ಟಪಾಲು 4 ಆಣೆ

ಎನ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ
ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ** —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು **ಸುಖಸೇವನ**. ಸುಖಸೇವನದಿಂದ ಮಧುರವೂ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಒಬ್ಬ ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ, ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ,

DAIMONDS! DAIMONDS!
K. R. K. SHET
Opposite Govt College, Hampankatte, MANGALORE
SHOW-ROOM & WORK SHOP.
SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ, ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ,

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು ಬಿಲ್ಲೆ, ಮೊನೊಗ್ರಾಮ್ ಸೀಲು ಇತ್ಯಾದಿಗಳು ತ್ವರಿತವಾಗಿ ಮಾಡಿಕೊಡಲ್ಪಡುವವು

Crown Rubber Stamp Co, 18 Balmat Road, MANGALORE
Approved Firm by the Co t of Mysore Certified by the Agent of the Gov of India in Ceylon

ಹೊಸ ಪುಸ್ತಕ ಸೆಲ್ಫ್ ಇಂಗ್ಲಿಷ್ ಸ್ಟಡಿ ಕಗದೀ ಪ್ರಿಂಟಾಗಿದೆ
SELF ENGLISH STUDY
ಇಂಗ್ಲಿಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**



ಕನ್ನಡ ಓದಲಿಕ್ಕೆ ಬಲ್ಲವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನು, ಮಾತನಾಡುವುದನ್ನು, ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನು ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇಂದಿನ ವರೆಗೆ ತಯಾರಿಸಲಿಲ್ಲ ದೊಡ್ಡ ಪುಸ್ತಕ ಸ್ವಲ್ಪ ಕ್ರಯ ಬೇಗನೇ ಪಡೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರು ಅಗಲಿ ಅಥವಾ ಮನೆಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳುವವರ ಆ ಕಾರಣಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ ಮನೆಯಲ್ಲೇ ಈ ಪುಸ್ತಕ ಓದಿ ಇಂಗ್ಲಿಷ್ ಓದುವುದು ಬಹು ಸುಲಭವಾಗಿ ಬರುತ್ತೆ ಪುಸ್ತಕದ ಕ್ರಯ ರೂ 1—8—0

Western Swiss Watch Co
Box Sale Post Box No 68
G P O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68 ಮದರಾಸ್

ಪ್ರಾಮುಖ್ಯ ಪ್ರಕಟಣೆ
ಅಮೃತಾಂಜನ
— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಷ್ಟರ ವರೆಗೂ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ಆನೆಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ,
ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ನೋಡಲು ಕೊಳ್ಳಲು ಬೇಕಷ್ಟು ಸಾಮಾನುಗಳಿವೆ.

PRINTED BY S S KARANTH AT THE THULUNAD PRESS, UDIPI. AND PUBLISHED BY K H SHETTY AT 'NAVAYUGA OFFICE, UDIPI, S INDIA

stered No. M. 3618

7-3-1940.

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— **ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.**

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ ಮಾಧವ, ಎಂ.ಎ, ಎಫ್ ಆರ್.ಎ ಎಸ್., ಎ.ಐ.ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅಕ್ಚ್ಯುಯರಿಯವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆಡಳಿತದ ವೆಚ್ಚ, ಬಡ್ಡಿಯ ಫಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ....ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅತ್ಯುತ್ತಮವಾದ ಕಾರ್ಯಕಲಾಪಗಳಿಗಾಗಿ . ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದುಕೊಳ್ಳಲಾರೆನು."

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

H. Venkataramiah, *Divisional Superintendent* } or { **R. Purniah** *Ag. General Manager.*

The Asiatic Govt. Security Life Assu. Co. Ltd.,
Asiatic Building, BANGALORE CITY.

ಝಾಂಡು ಮಲೇರಿಯಾಮಿಕ್ಶ್ಚರ್

ಶೀಘ್ರವಾಗಿ ಗುಣ (vertical)

ಮಲೇರಿಯಾ, ವಿಷವ್ರಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ ಆಣೆ 0—13—0 ಮಾತ್ರ.

ಸ್ಥಳೀಯ ಏಜಂಟರು:—ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು:—ವಿ. ವಿ. ಶೆಣೈ, ಕೆಮಿಸ್ಟ್ಸ್.

ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೆ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಬರೆಯಿರಿ:—

ದಾಮೋದರ್ ಎಂಡ್ ಕೊ,

ZANDU 78ಚೀನಾ ಬಜಾರ್ ರೋಡ್, **ಜಿ. ಟಿ. ಮದರಾಸು.**

DAMODER & CO.,
78 China Bazaar Road, **G T. MADRAS**

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

Your anxiety in finding a sound and progressive Life Office both to insure or to represent will end on consultation with:

Branch Secretary,
The New Guardian of India Life Ins. Co Ltd, Madras.
MANGALORE Branch

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟು ಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಾಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸುಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರ್‍ಹಾಯ್ಡ್ — ಆಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೀ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ತೀವ್ರ ಬರುವುದಾದರೆ, "ಹವನನ್" ಎಂಬ ಹೆಮೊರ್‍ಹಾಯ್ಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ತೀಕ್ಷ್ಣರಸಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. **1-4-0** ವಿ.ಪಿ. ಬೇರೆ.

ಲಕ್ಷೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವದು. ಮಲಬದ್ಧತೆಯ ಲಕ್ಷಣಗಳುಳ್ಳವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B. & C. I. Ry. BOMBAY PRESIDENCY.

ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA

ನವಯುಗ

ಚಂದಾ ವಿವರ:
1 ವರ್ಷಕ್ಕೆ – ರು. 3—4—0
6 ತಿಂಗಳಿಗೆ – ರೂ. 1-12-0

ಚಂದಾ ಹಣವನ್ನು ಮುಂಗಡ ಕಳಿಸತಕ್ಕದ್ದು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨೬

ಉಡುಪಿ, ಗುರುವಾರ, ೭—೩—೧೯೪೦.
UDIPI, THURSDAY, 7-3-1940.

VOL. 19
No. 26

ಲೀಗಿಗೆ ವಿದೇಶಿ ಮುಸಲ್ಮಾನರ ಎಚ್ಚರಿಕೆ

ಮೌಲಾನ ಅಜದ್ ಸೋಬಾನಿಯವರು ಯುರೋಪಿನಲ್ಲಿಯೂ ಮುಸಲ್ಮಾನ ರಾಜ್ಯಗಳಾದ ಇರಾನ್, ಪೆಲೆಸ್ತೈನ್, ಇರಾಕ್, ಇಜಿಪ್ತ್, ಸಿರಿಯ ಮತ್ತು ಅಫಘಾನಿಸ್ತಾನಗಳಲ್ಲಿಯೂ ಸಂಚರಿಸಿ ಈಗ ತಾನೆ ಹಿಂದೂದೇಶಕ್ಕೆ ಹಿಂತಿರುಗಿರುವರು. ಹಿಂದೂ ಮುಸಲ್ಮಾನರು ಒಂದೋ ತಮ್ಮ ಪರಾಧೀನತೆಯಿಂದ ವಿಮುಕ್ತರಾಗಲು ಹೆಣಗಬೇಕು, ಇಲ್ಲವೆ ಇತರ ಮುಸಲ್ಮಾನ ರಾಷ್ಟ್ರಗಳ ಸಂಬಂಧದಿಂದ ದೂರವಿರಬೇಕು. ರಾಜಕೀಯ ಗುಲಾಮಗಿರಿಯು ಯಾವ ತರದ ಪ್ರಗತಿಗೂ ದೊಡ್ಡ ಹಾನಿ. ಹಿಂದೀಯರು ಈ ವರೆಗೆ ಸ್ವಾತಂತ್ರ್ಯವನ್ನು ಗಳಿಸದಿರುವುದು ಆಶ್ಚರ್ಯಕರ. ೮೦ ಅಥವಾ ೯೦ ಮಿಲ್ಯ ಮುಸಲ್ಮಾನರು ಪರದಾಸ್ಯದಲ್ಲಿ ನರಳುತ್ತಿರಲು ಕಾರಣವೇನೋ ತಿಳಿಯದೆಂದೇ ವಿದೇಶಿ ಮುಸಲ್ಮಾನರ ಅಭಿಮತ. ಮುಸ್ಲಿಮ್‌ಲೀಗಿನ ಧೋರಣೆಯು ಅವರಿಗೆ ಅರ್ಥವಾಗುವುದಿಲ್ಲ. ಹಿಂದೀ ಮುಸಲ್ಮಾನರು ಹೊರಗಣ ಮುಸಲ್ಮಾನರೊಂದಿಗೆ ಸಂಪರ್ಕ ಬೆಳೆಸಬೇಕಾದರೆ ಮೊದಲು ಸ್ವತಂತ್ರರಾಗಬೇಕೆಂದೇ ಅವರ ಅಭಿಮತವೆಂದು ಮೌಲಾನ ಸೋಬಾನಿಯವರು ತನ್ನ ಸಂಚಾರದ ಅನುಭವವನ್ನು ಡಿಲ್ಲಿಯಲ್ಲಿ ವಿದಿತಗೊಳಿಸಿರುವರು

ಬ್ರಿಟಿಷರ ಬೆದರಿಕೆ.

ಪಂಡಿತ ನೆಹರುಗಳ ಚಟುವಟಿಕೆಗಳಿಂದ ಬ್ರಿಟಿಷರು ಬೆದರಿ ಹೋಗಿರುತ್ತಾರೆ. ಪಂಡಿತರು ಚೈನವನ್ನು ಸಂದರ್ಶಿಸಿ ಚೀನ ಮತ್ತು ಹಿಂದೂದೇಶವು ಒಂದಾಗಿ ನಡೆಯಬೇಕೆಂದು ಪ್ರತಿಪಾದಿಸಹತ್ತಿರುವುದೇ ಇದಕ್ಕೆ ಕಾರಣ. ಚೀನ ಮತ್ತು ಹಿಂದೂದೇಶಗಳೊಂದುಗೂಡಿದರೆ ಲೋಕದ ಸುಮಾರು ಅರೆವಾಸಿಯಷ್ಟರ ಜನಸಂಖ್ಯೆಯು ಒಕ್ಕಟ್ಟಾದಂತಾಗುವುದು. ಆಗ ಹಿಂದೂದೇಶದಲ್ಲಾಗಲಿ ಚೀನದಲ್ಲಾಗಲಿ ವಿದೇಶೀಯರ ಆಟ ನಡೆಯುವ ಹಾಗಿಲ್ಲ. ಆಸ್ಯಾಖಂಡದ ರಾಷ್ಟ್ರಗಳು ಪರಸ್ಪರ ಸಹಕರಿಸಿ ನಡೆಯಬೇಕೆಂದು ಪಂಡಿತ ಜವಾಹರಲಾಲರ ಆಕಾಂಕ್ಷೆ. ಅದು ಕೈಗೂಡಿದರೆ ಇತಿಹಾಸವು ಪುನರಾವರ್ತಿತವಾಗಬಹುದು. ಒಂದೊಮ್ಮೆ ನಾಗರಿಕತೆ ಮತ್ತು ಅಭಿವೃದ್ಧಿಯ ತುತ್ತ ತುದಿಯಲ್ಲಿದ್ದು ಕಾಲಚಕ್ರದ ಉರುಳಾಟದಲ್ಲಿ ಕೆಳಗೆ ಬಿದ್ದಿದ್ದ ಹಿಂದೂದೇಶ ಮತ್ತು ಚೀನಗಳು ಪುನಃ ತಲೆಯೆತ್ತಿ ಪ್ರಭಾವ ಬೀರುವಂತಾಗಬಹುದೆಂದು ಮಿ. ಜೋನ್ ಗುಂತೆರರು ಅಮೇರಿಕದ ಪತ್ರಿಕೆಯೊಂದರಲ್ಲಿ ಬರೆದಿರುವರು.

ಸಮಾಚಾರ ಸಂಗ್ರಹ

ಸಿಲೋನಿನ ಮಂತ್ರಿಗಳ ರಾಜಿನಾಮೆ.

ಸಿಲೋನಿನ ಮಂತ್ರಿಗಳಿಗೂ ಗವರ್ನರರಿಗೂ ತಿಕ್ಕಾಟವುಂಟಾಗಿ ಮಂತ್ರಿಗಳೆಲ್ಲ ರಾಜಿನಾಮೆ ಕೊಟ್ಟಿರುವರು. ಸಿಲೋನಿನ ಎಸ್ಟೇಟೊಂದರಲ್ಲಿ ಮಜೂರ ಗಲಾಟೆಯಿದ್ದು ಮುಷ್ಕರವುಂಟಾಯಿತು. ಪೋಲೀಸರು ಪ್ಲೇಂಟರುಗಳೊಂದಿಗೆ ಸೇರಿ ಈ ಮುಷ್ಕರವನ್ನಡಗಿಸಲೆತ್ನಿಸಿದರು. ಮಜೂರ ಮುಖಂಡರು ಮುಷ್ಕರವನ್ನು ಜಯಶೀಲವಾಗಿ ನಡಿಸುವ ಸಾಹಸ ಮಾಡಿ, ಹೊಸ ಕೆಲಸಗಾರರು ಬಂದು ಕೆಲಸ ಮಾಡದಂತೆ 'ಪಿಕೆಟ್' ಮಾಡಿದರು. ಇದರಿಂದ ಗಲಾಟೆಯು ಮತ್ತಷ್ಟು ಹೆಚ್ಚಿ ಪೋಲೀಸರು ಗುಂಡು ಹಾರಿಸಿ ಒಬ್ಬ ಮಜೂರನು ಕೊಲ್ಲಲ್ಪಟ್ಟನು. ಇನ್ನು ಕೆಲವರು ಗಾಯಗೊಂಡರು. ಪೋಲೀಸರು ಪ್ಲೇಂಟರರ ಪಕ್ಷ ಹಿಡಿದು ಮಜೂರರ ಮೇಲೆ ಅನ್ಯಾಯವಾಗಿ ಗುಂಡು ಹಾರಿಸಿ ಅನ್ಯಾಯ ಮಾಡಿದರೆಂದು ಮಜೂರ ಮುಖಂಡರ ಆರೋಪ. ಮಜೂರರು ಲೂಟಿ ಮಾಡಿ ಶಾಂತಿ ಭಂಗ ಮಾಡಿದಾಗ ತಾವು ಶಾಂತಿ ಸ್ಥಾಪಿಸಲು ಗೋಳಿಬಾರು ಮಾಡಿದುದೆಂದು ಪೋಲೀಸರ ಅಂಬೋಣ. ಮಜೂರ ಮುಖಂಡರು ಕೈದು ಮಾಡಲ್ಪಟ್ಟು ಖಟ್ಲೆಗೊಳಗಾದರು. ಈ ಕುರಿತು ಸಿಲೋನ್ ಎಸೆಂಬ್ಲಿಯಲ್ಲಿ ಚರ್ಚೆ ನಡೆದು ಈ ಪ್ರಕರಣದ ಕುರಿತು ವಿಚಾರಿಸಲು ನಿಷ್ಪಕ್ಷಪಾತಿ ಕಮಿಶನೊಂದನ್ನು ನೇಮಿಸಬೇಕೆಂದಾಯಿತು. ಗೃಹ ಮಂತ್ರಿಯು ಆ ಪ್ರಕಾರ ವಿಚಾರಣಾ ಕಮಿಶನೊಂದನ್ನು ಸ್ಥಾಪಿಸಿ ಅದರ ವಿಚಾರಣೆ ಮುಗಿವನಕ ಮಜೂರ ಮುಖಂಡರ ಮೇಲಿನ ಖಟ್ಲೆಯನ್ನು ಮುಂದುವರಿಸುವಂತೆ ಪೋಲೀಸರಿಗೆ ತಿಳಿಸಬೇಕೆಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲರಿಗೆ ತಿಳಿಸಿದರು. ಅವರು ಆ ಪ್ರಕಾರ ನಡೆಯದೆ ಖಟ್ಲೆಯನ್ನು ಮುಂದುವರಿಸಲು ಸಾಧ್ಯವಿಲ್ಲೆಂದು ಹೇಳಿ ಮಂತ್ರಿಗಳನ್ನು ಧಿಕ್ಕರಿಸಿ ನಡೆದರು. ಗವರ್ನರರು ಅವರ ವರ್ತನೆಯನ್ನು ಸಮರ್ಥಿಸಿದರು. ಇದರಿಂದ ಅಪಮಾನಿತರಾದ ಗೃಹ ಮಂತ್ರಿಗಳೂ ಇತರರೂ ರಾಜಿನಾಮೆ ಕೊಟ್ಟು ದೊಡ್ಡ ಬಿಕ್ಕಟ್ಟುಂಟಾಗಿರುವುದು.

ಮೊಲೊಟೋವ್ ರಿಬಂಟ್ರೊಪರ ಒಡಂಬಡಿಕೆ

ಸೋವಿಯೆಟ್ ವಿದೇಶ ಮಂತ್ರಿ ಮೊಲೊಟೋವ್ ಮತ್ತು ಜರ್ಮನ್ ವಿದೇಶ ಮಂತ್ರಿ ರಿಬ್ಬೆಂಟ್ರೊಪರು ತಮ್ಮ ನೆರೆಕರೆಯ ರಾಷ್ಟ್ರಗಳನ್ನು ತಮ್ಮೊಳಗೆ ಹಂಚಿಕೊಳ್ಳುವ ಒಪ್ಪಂದವನ್ನು ಮೊದಲೇ ಮಾಡಿಕೊಂಡಿರುವರೆಂದು ತಿಳಿದು ಬರುತ್ತದೆ. ಆ ಪ್ರಕಾರ ಯುರೋಪಿನ ನಕಾಶೆಯು ತಯಾರಿಸಲ್ಪಟ್ಟು ಜರ್ಮನಿ ಮತ್ತು ರಷ್ಯಗಳಲ್ಲಿ ಹಂಚಲ್ಪಡುತ್ತಿದೆ. ಈ ಪ್ರಕಾರ ಆಸ್ಟ್ರಿಯ, ಜೆಕೋಸ್ಲೊವೇಕಿಯ ಮತ್ತು ಪೋಲೆಂಡುಗಳು ಜರ್ಮನಿಗೆ ಸೇರಿಸಲ್ಪಡುವವು. ಡೆನ್ಮಾರ್ಕ್, ದಕ್ಷಿಣ ಸ್ವೀಡನ್ ಮತ್ತು ದಕ್ಷಿಣ ನೋರ್ವೆಗಳು ಜರ್ಮನಿಯ ಅಧೀನವಾಗುವವು. ನೋರ್ವೆ ಮತ್ತು ಸ್ವೀಡನಿನ ಉತ್ತರ ಭಾಗಗಳನ್ನು ಸ್ವೀಡನ್ ಪಡೆಯುವದು. ಉತ್ತರಧ್ರುವ ಪ್ರದೇಶದ ರಾಷ್ಟ್ರಗಳೆಲ್ಲಾ ರಷ್ಯವು ಅಧೀನ ಪಡಿಸಿಕೊಳ್ಳುವದು. ಸ್ವೀಡನಿನ ಪ್ರಾಮುಖ್ಯ ಕೋಟೆಯಾದ ಬೋಡೆನು ಜರ್ಮನಿಯ ಅಧೀನವಾಗುವದು. ಅದರ ಕಬ್ಬಿಣದ ಗನಿಯು ರಷ್ಯಕ್ಕೆ ಸೇರುವುದು. ನಾರ್ವಿಕ್ ಎಂಬ ನೋರ್ವೆಯ ಮುಖ್ಯ ಬಂದರವು ರಷ್ಯಕ್ಕೆ ಸೇರುವುದು ಈ ಉದ್ದೇಶದಿಂದಲೇ ರಷ್ಯ ಮತ್ತು ಜರ್ಮನಿಗಳು ಒಂದಾಗಿ ನಡೆಯುತ್ತಿವೆ. ಸ್ವೀಡನಿನ ಕಬ್ಬಿಣದ ಗನಿಯ ಆಶ್ರಯವು ಜರ್ಮನಿಗೆ ಸಿಕ್ಕಿದರೆ ಯುದ್ಧವು ದೀರ್ಘಕಾಲ ನಡೆಯಲು ಕಾರಣವಾಗುವುದು. ಅದನ್ನು ತಡೆಗಟ್ಟಿ ಫಿನ್ಲೆಂಡ್ ರಷ್ಯದ ವಶವಾಗದಂತೆ ಪ್ರಯತ್ನ ಮಾಡಬೇಕು. ಮನ್ನರ್‌ಹೈಮ್ ಕೋಟೆಯಿಂದ ೬೦ ಮೈಲು ದೂರ ಇರುವ ಲೆನಿನ್‌ಗ್ರಾಡಿನ ಮೇಲೆ ಧಾಳಿ ನಡೆಸಬೇಕು. ಫಿನ್ಲೆಂಡ್ ರಷ್ಯದ ವಶವಾದರೆ ಸ್ವೀಡನ್ ನೋರ್ವೆಗಳ ಸ್ವಾತಂತ್ರ್ಯವೂ ಹೋದಂತಾಗುವುದು. ಆಗ ಜರ್ಮನಿ ಮತ್ತು ರಷ್ಯಗಳು ಮತ್ತಷ್ಟು ಬಲವಾಗುವವು. ಆದುದರಿಂದ ಈಗಲೇ ರಷ್ಯದ ಮೇಲೆ ಯುದ್ಧ ಹೂಡಬೇಕೆಂದು ಇಂಗ್ಲೆಂಡಿನ ಮಾಜಿ ವಿದೇಶಿ ಮಂತ್ರಿ ಮಿ. ಹೋರ್ ಬೆಲೀಶರು ಎಚ್ಚರಿಸಿರುವರು.

ರಷ್ಯವನ್ನು ವಿರೋಧಿಸಲು ಇಟೆಲಿಯು ಸಿದ್ಧವಿದೆ.

ರಷ್ಯವು ಸುಲಭವಾಗಿ ಫಿನ್ಲೆಂಡನ್ನು ಗೆದ್ದಿದ್ದರೆ ಅವರ ದೃಷ್ಟಿಯು ಇಷ್ಟರಲ್ಲೇ ಡಾನ್ಯೂಬ್ ನದಿ ತೀರದ ಮತ್ತು ಬಾಲ್ಕನ್ ರಾಷ್ಟ್ರಗಳ ಮೇಲೆ ಬೀಳುತ್ತಿತ್ತು. ಇನ್ನು ಮುಂದಾದರೂ ಅದು ರುಮೇನಿಯ ಮೊದಲಾದ ರಾಷ್ಟ್ರಗಳ ಮೇಲೆ ಆಕ್ರಮಣ ನಡಿಸದಿರಲಾರದು. ಹಾಗೇನಾದರೂ ಆಕ್ರಮಣ ನಡೆದಾಕ್ಷಣ ಇಟೆಲಿಯು ತನ್ನ ಸಂಪೂರ್ಣ ಸೇನಾಶಕ್ತಿಯನ್ನು ಪಯೋಗಿಸಿ ಅದನ್ನು ತಡೆಗಟ್ಟುವುದು. ಸೋವಿಯೆಟ್ ಸೇನೆಯ ಬೆದರಿಕೆಯೇನೂ ಇಟೆಲಿಗಿರುವುದಿಲ್ಲ. ಮಾರ್ಚ್ ತಾ. 14ರೊಳಗೆ ರುಮೇನಿಯವು ಕೂಡ ಸೇನಾಸಂಗ್ರಹ ಮಾಡಿ ಸನ್ನದ್ಧವಾಗುವದು. ೭ ಮಿಲ್ಯ ಸೈನಿಕರು ಯುದ್ಧಸಿದ್ಧರಾಗಿರುವರು. ರಷ್ಯದ ಎಲ್ಲೆಯಲ್ಲಿ ಕೆರೊಲ್ ಕೋಟೆಗಳೆಂಬ ಮೆಗಿನಟ್ ಲೈನಿನಂತಹ ಕೋಟೆಗಳು ಕಟ್ಟಲ್ಪಟ್ಟಿವೆ.

ಟರ್ಕಿಯ ಯುದ್ಧ ಸಿದ್ಧತೆ

ಕಪ್ಪು ಸಮುದ್ರದಲ್ಲಿ ತಮ್ಮ ವ್ಯಾಪಾರವು ನಿರಾತಂಕವಾಗಿ ನಡೆಯುವಂತೆ ಕಲವಟ್ಟಿನ ವ್ಯವಸ್ಥೆಯನ್ನು ಬ್ರಿಟಿಷರು ಮಾಡಹತ್ತಿರುತ್ತಾರೆ. ಇದರಿಂದ ಸಂದೇಹಗೊಂಡ ಇಟೆಲಿಯು ಕಪ್ಪು ಸಮುದ್ರವು ತನ್ನ ಅಧೀನವಿರತಕ್ಕದೆಂದು ಪ್ರತಿವಾದಿಸಿ ಅಲ್ಲಿಗೆ ಕೆಲವು ಯುದ್ಧ ಹಡಗಗಳನ್ನು

ANTARANGA
YUGADI SPECIAL

ADVERTISEMENT RATES

Full Page	Rs. 25—0—0
Half Page	Rs. 13—0—0
Quarter Page ...	Rs. 7—0—0
⅛ Page	Rs. 4—0—0
Cover Back Page	Already Reserved.
Cover 2nd & 3rd Page	Rs. 35—0—0

FOR FURTHER PARTICULARS APPLY TO:

Advertisement Manager:—

ANTARANGA, UDIPI.

ಕಳುಹಿಸಿರುವುದೆಂದು ಸುದ್ದಿಯುಂಟಾಗಿದೆ. ರಶ್ಯವು ಮೊದಲೇ ಅದನ್ನು ತನ್ನ ಕೊಳವನ್ನಾಗಿ ಮಾಡಿಕೊಳ್ಳುವ ಪ್ರಯತ್ನ ಮಾಡಿಕೊಂಡು ಬಂದಿದೆ ಹೀಗೆ ಕಪ್ಪು ಸಮುದ್ರ ಭಾಗದಲ್ಲಿಯೂ ಬೆಂಕಿಯೇಳುವ ಭೀತಿ ಉಂಟಾಗಿದೆ. ಇದನ್ನರಿತು ಕೊಂಡಿರುವ ಟರ್ಕಿಯು ಭರದಿಂದ ಯುದ್ಧ ಸಿದ್ಧತೆ ಮಾಡಿದೆ. ಹೊರಗಿರುವ ತನ್ನ ಹಡಗಗಳನ್ನೆಲ್ಲಾ ತರಿಸಿದೆಯೆಂದು ಸುದ್ದಿಯುಂಟಾಗಿದೆ.

ಫಿನ್ಲೆಂಡಿಗೆ ಬ್ರಿಟಿಶ್ ವಲಂಟೀಯರು.

ಫಿನ್ಲೆಂಡಿನ ಪ್ರಾಮುಖ್ಯ ಹಾಗೂ ಸಂದುಕಟ್ಟಿನ ಬಂದರಾದ ವೈಪುರಿಯು ಸಂಪೂರ್ಣ ನಾಶವಾಗಿ ನಿರ್ಜನವಾಗಿರುವುದು. ಅದನ್ನು ಕಾದುಕೊಳ್ಳಲಾರದೆ ಫಿನ್ನರು ಹಿಂದೆ ಸರಿದಿರುವರು. ರಸ್ಯನರು ತಮಗಾಗುವ ನಷ್ಟವನ್ನು ಗಣಿಸದೆ ಫಿನ್ಲೆಂಡನ್ನೊಮ್ಮೆ ಗೆದ್ದೇ ಸಿದ್ಧವೆಂಬೀ ಭೀಷ್ಮ ನಿರ್ಧಾರದಿಂದ ತರಂಗ ತರಂಗವಾಗಿ ಸಹಸ್ರಗಟ್ಟಲೆ ಸೈನಿಕರನ್ನು ಮುಂದೊಡ್ಡಿ ಭೀಷಣ ಧಾಳಿ ನಡಿಸುತ್ತಿರುವರು. ಫಿನ್ನರಿಗೆ ಅದನ್ನು ತಡೆಗಟ್ಟಲು ಅಸಾಧ್ಯವಾಗಿರುವುದು. ಏದೇಶಿ ರಾಷ್ಟ್ರಗಳವರೆಲ್ಲಾ ಫಿನ್ನರಿಗೆ ಸಹಾಯವೀಯುತ್ತಿರುವವು. ಇಂಗ್ಲೆಂಡಿನಿಂದ 3000 ಮಂದಿ ವಲಂಟಿಯರರು ಫಿನ್ಲೆಂಡಿಗೆ ಹೊರಟಿರುವರು. ಫಿನ್ಲೆಂಡಿನ ಪರಿಸ್ಥಿತಿಯು ಸಂದಿಗ್ಧವಾಗಿರುವುದಾದರೂ ನಿರಾಶಾಮಯವಾಗಿರುವುದಿಲ್ಲ. ಫಿನ್ನರು ನಿರೀಕ್ಷಿಸಿಕೊಂಡಿದ್ದ ಹಿಮವು ಬಿದ್ದಿರುವುದಿಲ್ಲ ಹಿಮಗಾಳಿ ಕೂಡಾ ಬೀಸದೆ ಹವಾ ಗುಣವು ರಸ್ಯಾನರಿಗೆ ಅನುಕೂಲವಾಗಿಯೇ ಇದೆ. ವಿದೇಶಿ ರಾಷ್ಟ್ರಗಳು ಶೀಘ್ರವಾಗಿ ಸೇನಾಸಹಾಯ ಮಾಡದಿದ್ದಲ್ಲಿ ಫಿನ್ಲೆಂಡಿಗೂ ಪೋಲೆಂಡಿನ ಗತಿಯೇ ಆಗುವ ಸಂಭವ ತೋರುತ್ತದೆ.

ಬೊಂಬಾಯಿಯಲ್ಲಿ ಮುಷ್ಕರ ಸಿದ್ಧತೆ.

ಯುದ್ಧದ ನಿಮಿತ್ತ ಸಾಮಗ್ರಿಗಳ ಬೆಲೆ ಹೆಚ್ಚಿರುವುದರಿಂದ, ಈಗ ಹೆಚ್ಚಿನ ಲಾಭ ಪಡೆಯುತ್ತಿರುವ ವಸ್ತ್ರದ ಗಿರಣಿ ಮಾಲಕರು ತಮ್ಮ ಸಂಬಳ ಹೆಚ್ಚಿಸಬೇಕೆಂದು ಅಹಮ್ಮದಾಬಾದಿನ ಗಿರಣಿ ಕೆಲಸಗಾರರು ಮುಷ್ಕರ ಹಿಡಿಯುವುದರಲ್ಲಿರಲು ಕಡೆಗೆ ಮಜೂರ ಮಾಲಕರೊಳಗೆ ರಾಜಿಯಾಗಿರುವುದು. ಈಗ ಬೊಂಬಾಯಿಯ ಗಿರಣಿ

ಕೆಲಸಗಾರರು ಮುಷ್ಕರ ಹಿಡಿಯುವ ಸಿದ್ಧತೆ ಮಾಡುತ್ತಿದ್ದಾರೆ. ರಾಜಿಯಾಗುವ ಸಂಭವ ತೋರುವದಿಲ್ಲ. ಮಜೂರರು ತಮ್ಮ ಸಂಬಳವನ್ನು ಸೇಕಡ 15ರಷ್ಟು ಹೆಚ್ಚಿಸಬೇಕೆಂದು ಕೇಳುತ್ತಿದ್ದಾರೆ. ಮಾಲಕರು ಸೇಕಡ 10ಕ್ಕಿಂತ ಮಿಕ್ಕಿ ಹೆಚ್ಚಿಸಲು ಸಾಧ್ಯವಿಲ್ಲೆಂದು ಛಲ ಹಿಡಿದಿರುತ್ತಾರೆ. ಗಿರಣಿ ಕಾಮಗಾರ ಸಂಘದವರು ಮುಷ್ಕರದ ಸಿದ್ಧತೆ ಮಾಡುತ್ತಿದ್ದಾರೆ

ಹಿಟ್ಲರ್ ಮತ್ತು ವೆಲ್ಸರ ಭೇಟಿ

ಯುರೋಪಿನ ಪ್ರಾಮುಖ್ಯ ರಾಷ್ಟ್ರಗಳ ಮುಖ್ಯಾಧಿಕಾರಿಗಳೊಡನೆ ಮಾತಾಡಿ ಬರುವರೆ ಪ್ರೆಸಿಡೆಂಟ್ ರೂಸ್‌ವೆಲ್ಟರಿಂದ ಕಳುಹಿಸಲ್ಪಟ್ಟಿರುವ ಮಿ. ಸುಮ್ನರ್‌ವೆಲ್ಸರು, ಇಟೆಲಿಗೆ ಹೋಗಿ ಸಂಭ್ರಮದ ಸ್ವಾಗತ ಪಡೆದು ಮುಸಲೋನಿ ಮತ್ತು ಕೌಂಟ್ ಸಿಯಾನೋರವರೊಡನೆ ಮಾತಾಡಿ ಜರ್ಮನಿಗೆ ಹೋಗಿರುವರು. ಇದೇ ತಾ 2ರಲ್ಲಿ ಹರ್ ಹಿಟ್ಲರರೊಡನೆ ಸಾಕಷ್ಟು ದೀರ್ಘ ಕಾಲ ಮಾತುಕತೆ ನಡಿಸಿದರು. ಹರ್ ವಾನ್ ರಿಬಂಟ್ರಫರೊಡನೆ 2 ಘಂಟೆ ಮಾತಾಡಿರುವರು. ಇದೇ ತಾ. 3ರಲ್ಲಿ ಮಿ. ವೆಲ್ಸರು ಫಿಲ್ಡ್ ಮಾರ್ಶಲ್ ಗೋರಿಂಗರೊಡನೆ ಮಾತಾಡಿದರು. "ಜರ್ಮನಿಯ ನ್ಯಾಯವಾದ ಉದ್ದೇಶಗಳು ಕೈಗೂಡುವ ಮತ್ತು ಸಮುದ್ರ ವ್ಯಾಪಾರ ಸ್ವಾತಂತ್ರ್ಯವು ಸ್ಥಾಪಿತವಾಗುವ ವರೆಗೆ ಯುದ್ಧವು ನಡಿಸಲ್ಪಡುವುದು. 6 ತಿಂಗಳ ಯುದ್ಧದ ಪರಿಣಾಮದಿಂದ ಜರ್ಮನಿಯು ತೃಪ್ತಿಗೊಂಡಿರುವುದು. ಫುರಾರರು ಆಜ್ಞೆಯಿತ್ತೊಡನೆಯೇ ವೈರಿಗಳ ಮೇಲೆ ಬೀಳಲು ಜರ್ಮನ್ ಸೇನೆಯು ಕಟಿಬದ್ಧವಾಗಿರುವುದು. ಆ ಧಾಳಿಯು ಯುದ್ಧದ ಇತಿಹಾಸದ

ಲ್ಲೊಂದು ಹೊಸ ಪರಿಚ್ಛೇದವನ್ನೇ ಆರಂಭಿಸಲಿರುವುದು" ಎಂದು ಜರ್ಮನ್ ಪತ್ರಿಕೆಗಳು ಬೆದರಿಕೆ ಹಾಕಹತ್ತಿರುವವು. ಜರ್ಮನಿಯ ಉದ್ಧಟ ಧೋರಣೆಯಿಂದಾಗಿ ಯುರೋಪಿನಲ್ಲಿ ಬೇಗನೆ ಶಾಂತಿ ಸ್ಥಾಪಿತವಾಗುವ ಹಾಗೆ ತೋರುವುದಿಲ್ಲ.

ಹರಿಜನ ವೈಸ್ ಪ್ರೆಸಿಡೆಂಟರು

ಮಲಬಾರು ಜಿಲ್ಲಾ ಬೋರ್ಡಿಗೆ ಈ ಸಲ ಮಿ. ನುರುದ್ದೀನರೆಂಬವರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು. ಇವರು ಅತ್ಯಂತ ಎಳೆ ವಯಸ್ಸಿನವರಿದ್ದು ಜನಪ್ರೀತರಾಗಿರುವರು. ಹರಿಜನರಾದ ಶ್ರೀ. ಇ. ಕಣ್ಣನ್, ಎಮ್. ಎಲ್. ಎ. ಇವರು ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವುದು ಅಭಿನಂದನೀಯವಿರುತ್ತದೆ.

ಹಳ್ಳಿಗರು ಮನೆಮಾರು ಬಿಟ್ಟುಹೋದರು

ವಾಯುವ್ಯಗಡಿನಾಡಿನ ಗಲಾಟೆಯು ಇನ್ನೂ ಶಾಂತವಾಗದೆ ಯಥಾಪ್ರಕಾರ ನಡೆಯುತ್ತಲೇ ಇದೆ. ಪ್ರತಿ ದಿನವೂ ಹೋರಾಟ, ಲೂಟಿ, ದರೋಡೆಗಳು ನಡೆಯುತ್ತಿವೆ. ಡೇರ ಇಸ್ಮಯೇಲ್ ಖಾನ್ ಪಟ್ಟಣದ ನೆರೆಕರೆಯ ಹಳ್ಳಿಗಳಲ್ಲಿ ವಾಸಮಾಡಿಕೊಂಡಿದ್ದ ಹಿಂದುಗಳು, ಲೂಟಿಯ ಭೀತಿಯಿಂದ ತಮ್ಮ ಮನೆಮಾರು ಬಿಟ್ಟು ಪಟ್ಟಣಕ್ಕೆ ಬಂದಿರುವರು. ಇಪ್ಪಿಯ ಫಕೀರರ ಸಹಾಯಕರಲ್ಲಿ ಒಡಕುಂಟಾಗಿರುವುದೆಂದು ಸುದ್ದಿಯುಂಟಾಗಿದೆ, ಅವರಿಗೆ ನೆರವಾಗುತ್ತಿದ್ದ ಶಿವಾ ಮತ್ತು ಪೋಲೀಸಿನ ಫಕೀರರು ಇಪ್ಪಿಯ ಫಕೀರರ ಎದುರಾಗಿ ಬಂಡಾಯವೆಬ್ಬಿಸಿ ಬ್ರಿಟಿಷರೊಡನೆ ಶಾಂತಿಯಿಂದಿರಬೇಕೆಂದು ಪ್ರಚಾರಮಾಡಹತ್ತಿರುವರೆಂದು ತಿಳಿದುಬರುತ್ತದೆ. ಇದೇ ತಾ 2ರಲ್ಲಿ

THE

BOMBAY LIFE ASSURANCE

Company Limited.

[ESTD 1908]

COMPARE

Your Life Assurance with any other property you possess what is its guarranteed value

If you live–today–a few years more–when you are old?
If you die–to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	**Rs.**	**1,44,91,000**
Life Assurance Fund	**Rs.**	**1,17,69,748**
Total Assets	**Rs.**	**1,31,28,998**

To Insure or to represent it pays you to consult

KOCHIKAR BROTHERS LTD.,

MADRAS-BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No, 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 1.
Car Street, MANGALORE.	CALICUT. Puthiyara,	Central Station Road, TRIVANDRUM.

ಕೋಹತ್ ಜಿಲ್ಲೆಯ ಬಹದೂರುಖೆಲ್ ಎಂಬ ಸ್ಥಳದ ಬಳಿ ಗಡಿನಾಡಿನ ಪೋಲೀಸ್ ಮತ್ತು ವೈರಿಪಂಗಡಿಗರೊಡನೆ 4 ಘಂಟೆಗಳವರೆಗೆ ಕಾದಾಟ ನಡೆದು ಹಲವು ಮಂದಿ ಪಂಗಡಿಗರು ಕೊಲ್ಲಲ್ಪಟ್ಟಿರುವರು. ಕೆಲಮಂದಿ ಪೋಲೀಸರೂ ಕೊಲ್ಲಲ್ಪಟ್ಟಿರುವರು. ಬನ್ನು ಜಿಲ್ಲೆಯ ಜಾನಿಖೆಲ್ ಎಂಬ ಸ್ಥಳದ ಬಳಿ ಒಬ್ಬ ಹಿಂದುವು ಕದ್ದೊಯ್ಯಲ್ಪಟ್ಟಿರುವನು.

ಸಿಂಧ್ ಮಂತ್ರಿ ಮಂಡಲ

ಫೆಬ್ರವರಿ ತಾ. 26ರಲ್ಲಿ ಸಿಂಧ್ ಮಂತ್ರಿಮಂಡಲದ ಮೇಲೆ ತರಲ್ಪಟ್ಟ ಅವಿಶ್ವಾಸದ ಠರಾವಿನ ಕುರಿತು ಓಟು ತೆಗೆದಾಗ 29 ಅನುಕೂಲ ಮತ್ತು 29 ಪ್ರತಿಕೂಲ ಮತಗಳು ದೊರೆತುವು, ಎಸೆಂಬ್ಲಿಯ ಅಧ್ಯಕ್ಷರು ತನ್ನ ಓಟನ್ನು ಮಂತ್ರಿಮಂಡಲದ ಪರವಾಗಿ ಕೊಟ್ಟುದರಿಂದ ಅಲ್ಲಾಬಕ್ಷ್ ಮಂತ್ರಿಮಂಡಲವು ಅಧಿಕಾರದಲ್ಲಿರುವಂತಾಯಿತು. ಕಾಂಗ್ರೆಸ್ ಪಕ್ಷೀಯರು ಮಂತ್ರಿಮಂಡಲದ ವಿರೋಧವಾಗಿ ಮತವಿತ್ತಿರುವರು. ಈಗ ಖಾನ್‌ಬಹದೂರು ಅಲ್ಲಾಬಕ್ಷರು ರಾಜಿನಾಮೆಯನ್ನು ಹಿಂತೆಗೆದುಕೊಂಡಿರುವರು ಮತ್ತು ತನ್ನ ಮಂತ್ರಿಮಂಡಲವು ಸ್ಥಿರವಾಗಿ ಆಡಳಿತ ನಡಿಸುವಂತೆ ಹಿಂದೂಪಕ್ಷದ ಬೆಂಬಲಪಡೆಯ ಲೆತ್ನಿಸುತ್ತಿರುವರು. ಹಿಂದೂ ಪಕ್ಷೀಯರು ಅವರಿಗೆ ಬೆಂಬಲವೀಯುವ ಸಂಭವ ತೋರುತ್ತದೆ ಆದುದರಿಂದ ಇನ್ನುಮುಂದೆ ಅಲ್ಲಾಬಕ್ಷ್ ಮಂತ್ರಿಮಂಡಲವು ಬಿದ್ದುಹೋಗುವ ಹಾಗಿಲ್ಲ.

ನೋಟೀಸು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. $\frac{354}{39}$ R. I. A. $\frac{43}{40}$

ವಾದಿರಾಜಯ್ಯ —ವಾದಿ ಮತ್ತು

1. ಜನಾರ್ದನಯ್ಯ, 2. ಕೃಷ್ಣಯ್ಯ ಅಲ್ಲಿಕೊಡಿ ಆನೆ ನಾರಾಯಣಯ್ಯರ ಮಕ್ಕಳು, ಉಡುಪಿ ತಾಲ್ಲೂಕು ತೆಂಕಗ್ರಾಮದ ಅಲ್ಲಿಕೊಡಿ —ಪ್ರತಿವಾದಿರು,

ಸದ್ರಿ ವ್ಯವಹರಣೆಯಲ್ಲಿ ಪ್ರತಿವಾದಿ ಡಿಕ್ರಿಯ ಆಸ್ತಿಗಳು ಏಲಂ ಆಗಿ ವಾದಿಗೆ ವಸೂಲಾದ್ದು ಹೋಗಿ ಬಾಕಿ ಬರತಕ್ಕ ರೂಪಾಯಿ 914-4-0ಕ್ಕೆ ಪ್ರತಿವಾದಿ ಮೇಲೆ ಪರ್ಸನಲ್ ಡಿಕ್ರಿ ಕೊಡಬೇಕೆಂತ ವಾದಿಯು ಮೇಲ್ಕಂಡ ಅರ್ಜಿ ಕೊಟ್ಟಿರುವುದರಿಂದ ಅದನ್ನು ಕುರಿತು 1ನೇ ಪ್ರತಿವಾದಿಗೆ ಏನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಅದನ್ನು ತಾ. 19-3-40ರಲ್ಲಿ 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ 1ನೇ ಪ್ರತಿವಾದಿಯು ಖುದ್ದು ನಿಂದಾಗಲೀ ವಕೀಲು ಮುಖಾಂತರವಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಉಡುಪಿ 2-3-40. | **K. Ramanatha Pai,** *Pleader for Plaintiff.*

— ಏಜಂಟರು ಬೇಕು —

'ನವಯುಗ'ದ ಬಿಡಿ ಪ್ರತಿಗಳನ್ನು ವಿಕ್ರಯಿಸಲು ಈ ಕೆಳಗಿನ ಸ್ಥಳಗಳಲ್ಲಿ ಏಜಂಟರು ಬೇಕು. (ಮೊದಲಿನ ಏಜಂಟರನ್ನು ನಿವೃತ್ತಿಪಡಿಸಲಾಗಿದೆ.)

1. ಕುಂದಾಪುರ, 2. ಮೈಸೂರು, 3. ಹಾಸನ, 4. ದಾವಣಗೆರೆ, 5. ಶಿವಮೊಗ್ಗ.

ಕ್ರಮ ನಿಯಮಗಳಿಗೆ ಬರೆದುಕೊಳ್ಳಿರಿ.

-ಮೆನೇಜರ್.

ನಮ್ಮ ಹೊಸ ಪ್ರತಿನಿಧಿಗಳು

ಶ್ರೀ. ಕೆ. ಎಂ. ದೇಜಪ್ಪ ಶೆಟ್ಟರು 'ನವಯುಗ'ದ ಪ್ರತಿನಿಧಿಯಾಗಿ ಕೆಲಸ ಮಾಡಲು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಇವರು ಮಿತಭಾಷಿಗಳು, ವಿನಯಸಂಪನ್ನರು ಹಾಗೂ ಸರಳ ಮನೋವೃತ್ತಿಯ ಕಾಂಗ್ರೆಸ್ ಭಕ್ತರು 'ನವಯುಗ'ವನ್ನು ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂಬ ಉತ್ಕಟೇಚ್ಛೆಯಿಂದ ಇವರು ಪ್ರತಿ ಹಳ್ಳಿ, ಪೇಟೆ, ಪಟ್ಟಣಗಳಲ್ಲೂ ಕ್ರಮವಾಗಿ ಸಂಚರಿಸಲಿರುವರು. ಇವರಿಗೆ ಸಕಲರೂ ಉದಾರಾಶ್ರಯವಿತ್ತು 'ನವಯುಗ'ಕ್ಕೆ ಸರ್ವ ಪ್ರೋತ್ಸಾಹ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗುತ್ತದೆ.

—ಮೆನೇಜರ್.

ನಮ್ಮ ಈಗಿನ ಮೇಷ್ಟ್ರು

ವಿನೋದದಲ್ಲಿ—

ಮೇಷ್ಟರಲ್ಲಿಯೂ ಅನೇಕ ಜಾತಿಗಳಿವೆ ಉದಾಹರಣೆಗೆ— ಟೈಲರ್ ಮಾಸ್ಟರ್, ಮ್ಯೂಜಿಕ್ ಮಾಸ್ಟರ್, ಬ್ಯಾಂಡ್ ಮಾಸ್ಟರ್, ಮ್ಯಾಜಿಕ್ ಮಾಸ್ಟರ್ ಇತ್ಯಾದಿ. ಆದರೆ ಇಲ್ಲಿ ಬರೆಯುವುದು ಅನೇಕ ಜನರು ಬಹಳ ಗೌರವಯುತವಾದ ವ್ಯಕ್ತಿಯೆಂದು ತಿಳಿದಿರುವ ಅತ್ಯಂತ ವಿರಾಮದ ಕೆಲಸವೆಂಬ ಭಾವನೆಯಿರುವ ಭಾವಿ ಜನಾಂಗದ ನಿರ್ಮಾಣ ಶಿಲ್ಪಿಗಳೆಂದು ಕರೆಯುವ, ರಾಷ್ಟ್ರದ ಪ್ರಗತಿಗೆ ಮುಖ್ಯಜವಾಬ್ದಾರರಾಗಿರುವ ಶಾಲಾ ಮಾಸ್ಟರ ವಿಷಯ ಇಂತಹ ಮಾಸ್ಟರು ಮನಶ್ಶಾಸ್ತ್ರದಲ್ಲಿ ಪೂರ್ಣಪಂಡಿತನಾಗಿರಬೇಕು. ಇಲ್ಲದಿದ್ದರೆ ಶಿಷ್ಯರು ಕೇವಲ 'ಹೌದು''ಹೂಂ' 'ಎಸ್' ಎಂದು ಹೇಳುತ್ತ ಹೋಗುವರು, ಗುರುಗಳು ಲಂಗೋಟಿ ಒಂದನ್ನು ಕಟ್ಟಿಕೊಂಡು ದಂಡವನ್ನು ಹಿಡಿದುಕೊಂಡು, ಯಾವುದಾದರೊಂದು ನೆರಳಿನಲ್ಲಿ ಮರದಕೆಳಗೆ ಪಾಠ ಹೇಳಿಕೊಡುವ ಕಾಲವಲ್ಲ ಇದು. ಇಂದಿನಮಾಸ್ಟರು ಒಳ್ಳೆಯ ಉಡುಪಿನಲ್ಲಿ ಅಪ್‌ಟುಡೇಟ್ ಇರಬೇಕು. ಒಂದೇ ಸಾರಿಗೆ ಪಾರ್ಷಲ್ ಗೋಯಿಂಗ್ ಆಗಬೇಕು ಅನ್ನಿ! ಅಂದರೆ ಕೇವಲ ಶರೀರವೇ ೨-೩ ಮಣವಿದ್ದರೆ ಸಾಲದು. ಜೊತೆಗೆ ಚಟುವಟಿಕೆಯೂ ಇರಬೇಕು. ಹಾಕಿ, ಕ್ರಿಕೆಟ್, ಫುಟ್‌ಬಾಲ್ ಟೆನ್ನಿಸ್‌ಗಳಲ್ಲಿ ನಿಪುಣನಾಗಿರಬೇಕು ಒಟ್ಟಿನಲ್ಲಿ ಹೇಳಬೇಕಾದರೆ ಮಾಸ್ಟರು ಸೇಕಡಾ 100ರಷ್ಟು ಪರಿಪೂರ್ಣನಾದ ಮನುಷ್ಯನಾಗಿರಬೇಕು.

ಉತ್ತಮ ವಾಗ್ಮಿಯಾಗಿರಬೇಕು. ಕನಿಷ್ಠಪಕ್ಷ ಸುಸ್ಪಷ್ಟರೀತಿಯಿಂದ ಸರಸರನೆ ಮಾತನಾಡುವಂತಾದರೂ ಇರಬೇಕು. ಎಂಜಿನು ಡ್ರೈವರಿಗೆ ಹೇಗೆ ಅಗತ್ಯವೋ ಹಾಗೆ ಇದು ಅವರಿಗೆ ಜೊತೆಗೆ ನಾಟಕ, ಗಾಯನದಲ್ಲಿಯೂ ಸಹ ನಿಪುಣನಿದ್ದರೆ ಒಳ್ಳೇದೇ ಅನ್ನಿ. ಏಕೆಂದರೆ ಇವುಗಳ ಹೊರತು ಸರಿಯಾದ ಸಂಸ್ಕೃತಿ ಉಂಟಾಗುವುದಿಲ್ಲ. ಅದೆಲ್ಲ ಉತ್ತಮ ಮೇಷ್ಟ್ರುಗಳ ಗುಣಗಳ ಪೀಠಿಕೆಯಾಯಿತಷ್ಟೇ. ಇದು ಇನ್ನೂ ಚಿತ್ರದ ಚೌಕಟ್ಟು ಅಷ್ಟೇ. ನಿಜವಾದ ವಸ್ತುವನ್ನು ಮುಂದೆನೋಡಿರಿ!

ಇಂದಿನ ಮಾಸ್ಟರಿಗೆ ಮುಖ್ಯವಾದುದು ನಡತೆ, ಉತ್ತಮ ರೀತಿ-ನೀತಿಗಳು, ಏಕೆಂದರೆ ಹಿಂದಿನ ಮತ್ತು ಇಂದಿನ ನುಡಿಗಳಿಗನುಸಾರವಾಗಿ ಶಿಷ್ಯರು ಗುರುಗಳನ್ನೇ ಅನುಕರಿಸುವರಲ್ಲವೆ? ಆದರೆ ಒಂದು ಸ್ವಾರಸ್ಯವೇನೆಂದರೆ– ಅನೇಕ ಮಂದಿ ಮಾಸ್ಟರುಗಳು ಬೀಡಿ ಸಿಗರೇಟನ್ನು ಮುಟ್ಟುವುದೇ ಇಲ್ಲವಾದರೂ, ಶಿಷ್ಯರು ಸಿನಿಮಾ ಹಾಲ್‌ಗಳಲ್ಲಿ ಹೋದ ಕೂಡಲೆ ಸಿಗರೇಟನ್ನು ಸೇದಲಾರಂಭಿಸುವರು. ಒಟ್ಟಿನಲ್ಲಿ ನಮ್ಮ ಮಾಸ್ಟರು ನಡೆನುಡಿಗಳ ವಿಚಾರದಲ್ಲಿ ಹೊಸ ಚೌಕಟ್ಟಿನೊಳಗಿನ ಹಳೆಯ ಚಿತ್ರವಾಗಬೇಕು. ಅಷ್ಟಾದರೂ ಸಾಕೇ? ಇಲ್ಲ. ಸುಂದರವಾದ ಶರೀರದೊಡನೆ ಉತ್ತಮವಾದ ನಡೆನುಡಿಗಳ ಮಾದರಿಯಾದರೆಂದರೆ, ಕೇವಲ ನೋಡುವವರಿಗೆ ಮಾತ್ರ ಸುಂದರವಾದಂತಾಯಿತಷ್ಟೆ! ಅದುದರಿಂದ ಅವರು ಸರಿಯಾದ ತಿಳುವಳಿಕೆಯುಳ್ಳವರಾಗಬೇಕು. ಉತ್ತರಕೊಡುವುದರಲ್ಲಿ ಬೀರಬಲನ ಚಿಕ್ಕಪ್ಪನಾಗಿರಬೇಕು.

ಇದು ಶಿಷ್ಯರ ಮನವೊಪ್ಪುವ ಮಾಸ್ಟರ ವಿಷಯವಾಯಿತು. ಇನ್ನು ಮಾತಾಪಿತೃಗಳ ದೃಷ್ಟಿಯಲ್ಲಂತೂ ಇವರು ಕೆಲಸಕ್ಕೆ ಬಾರದ ವಸ್ತುವೇ! ಆ ಬಗ್ಗೆ ಇವರು ಆಧುನಿಕ ಕಾಲದ ವಿದ್ಯಾಪ್ರಗತಿಯ ಪರಿಚಯವುಳ್ಳವರಾಗಿರಬೇಕು. ಉದಾಹರಣೆಗೆ-ಅವರು ಭಾಷೆಯನ್ನು ಹೇಳಿಕೊಡುವರಾದರೆ ಉತ್ತಮ ಕವಿಗಳ ರಚನೆಗಳಾವುವೆಂಬುದನ್ನು ತಿಳಿದಿರಬೇಕು. ಚರಿತ್ರೆಯನ್ನು ಬೋಧಿಸುವವರಾದರೆ, ರಷ್ಯವು ಫಿನ್‌ಲೆಂಡಿನ ಯಾವ ನಗರವನ್ನು ನಾಶಪಡಿಸಿತು. ಹಿಟ್ಲರನು ತನ್ನ ಸಭೆಯಲ್ಲಿ ಭಾರತದ ಮೇಲೆ ದಂಡೆತ್ತಿ ಬರುವ ವಿಚಾರವಾಗಿ ಯಾವ ತೀರ್ಮಾನಕ್ಕೆ ಬಂದನು? ಚೇಂಬರ್ಲೇನರು ಹಾಲಿಫಾಕ್ಸ್‌ರಿಗೆ ಏನು ತಿಳುವಳಿಕೆ ಕೊಟ್ಟರು? ಪಂ ಜವಾಹರರಾಗಲಿ ಅಥವಾ ಪುರುಷೋತ್ತಮ ಟಾಂಡನ್‌ರಾಗಲಿ ಅಧ್ಯಾಪಕರ ಕರ್ತವ್ಯದ ವಿಚಾರವಾಗಿ ಏನು ಹೇಳಿದರು? ಯು. ಪಿ. ಗೌರ್ನರ್ ಹ್ಯಾರಿಹೇಗ್ ನಂತರ ಯಾರು ಗೌರ್ನರಾಗುವರು? ಮುಂತಾದುವನ್ನೆಲ್ಲಾ ಚೆನ್ನಾಗಿ ತಿಳಿದಿರಬೇಕು! ನಂತರ, ಲೆಕ್ಕ ಪತ್ರಗಳನ್ನಿಡುವುದು ಸಹ ತಿಳಿದಿರಬೇಕು! ನಂತರ ಬೇರೊಂದು ಫಾರಮ್ಮಿನಲ್ಲಿ ತನ್ನಲ್ಲಿನ ಹುಡುಗರೆಷ್ಟು, ಹುಡುಗಿಯರೆಷ್ಟು, ಎಷ್ಟು ಮಂದಿಗೆ ವಿವಾಹವಾಗಿದೆ? ಯಾರ್‍ಯಾರು ಯಾವ ಜಾತಿಯವರು, ಉದ್ಯೋಗವೇನು? ಬ್ರಾಹ್ಮಣರೆಷ್ಟು ಮಂದಿ, ಶೂದ್ರರ ಸಂಖ್ಯೆ ಏನು? ಇವೆಲ್ಲವನ್ನೂ ತಿಳಿದಿರುವುದು ಟೀಚರಿನ ಮುಖ್ಯ ಕರ್ತವ್ಯವೇ ಆಗಿದೆ ಆ ಮೇಲೆ ನೋಡಿರಿ. ಮಾಡರ್ನ್ ಮಾಸ್ಟರು ಪಾಠ ಹೇಳುವುದರಲ್ಲಿ ನಿಪುಣನಾಗಿರಬೇಕು, ಸಾಧ್ಯವಾದರೆ ಪಾಟ ಕಡಿಮೆಯಾಗಿ ಅಂದರೆ ಮಕ್ಕಳಿಗೆ ಸುಲಭವಾಗಿ ತಿಳಿಯುವಂತೆ ಹೇಳಬೇಕು. ಕಿಂಡರ್ ಗಾರ್ಟನ್ ರೀತಿ, ಅಥವಾ ಮಾಂಟೆಸೋರಿ ಪದ್ಧತಿ, ಡೈರೆಕ್ಟ ಮೆಥೆಡ್ ದೇವರಿಗೇ ಗೊತ್ತು ಇನ್ನೆಷ್ಟು ಮೆಥೆಡ್‌ಗಳಿವೆಯೋ ಇವೆಲ್ಲವನ್ನೂ ಉಪಯೋಗಿಸಬೇಕು.

ತಿಂಗಳು ತಿಂಗಳೂ ಇಂತಹ ಲಿಷ್ಟನ್ನು ತಯಾರಿಸಿ, ಅವರ ಭಾರವೇನೆಂಬುದನ್ನು ಗುರ್ತಿಸಿರಿ ಇವರ ಕಣ್ಣು, ಕಿವಿ ಮೂಗುಗಳ ಪರೀಕ್ಷೆಮಾಡಿರಿ. ಶಿಕ್ಷಣ ಶಾಖೆಯ ಹೊಸ ಆರ್ಡರುಗಳಿಗನುಸಾರವಾಗಿ ಅವರ ಹಲ್ಲುಗಳನ್ನು ಸಹ ತಿಕ್ಕಿಸಿರಿ. ವಾಚಾಳತ್ವವನ್ನು (Debating Society) ಕಲಿಸಿರಿ ಚಿತ್ರಗಳು ನಕ್ಷೆಯನ್ನು ಸ್ವಯಂ ಬರೆದು, ಶಿಷ್ಯರ ಹೆಸರಿನಲ್ಲಿ ಪ್ರದರ್ಶನಕ್ಕೆ ಕಳಿಸಿರಿ ಅವರ ಖರ್ಚಿನಲ್ಲಿ ಶಿಷ್ಯರನ್ನು ಪ್ರಸಿದ್ಧ ಯಾತ್ರಾಸ್ಥಳಗಳಿಗೆ ಕರೆದುಕೊಂಡು ಹೋಗಿರಿ, ಕ್ಲಾಸಿನಲ್ಲಿ ಬಾಲಕರು ತಪ್ಪು ಮಾಡಲಿ, ಅದರ ಜವಾಬ್ದಾರಿ ಮಾತ್ರ ಇವರು ಹೊರಲಿ ತಂದೆತಾಯಿಗಳು ಕಶ್ಮಲವಾದ ಉಡುಪನ್ನು ಧರಿಸಿ ಮಕ್ಕಳನ್ನು ಶಾಲೆಗೆ ಕಳಿಸಲಿ, ಆದರೆ ಅವರ ಆ ಕಶ್ಮಲತೆಯ ಜವಾಬ್ದಾರಿ ಮಾತ್ರ ಮಾಸ್ಟರದೇ. ಮಕ್ಕಳು ಶುದ್ಧವಾಗಿರದಿರಲು ಕಾರಣವೇನು? ಈಗಿನ ಕಾಲದ ಮಾಸ್ಟರ ಮುಖ್ಯ ಕೆಲಸವು ಅವರ ಬರವಣಿಗೆಗಳನ್ನು ಸರಿಪಡಿಸುವುದು. ನೋಡುವವರಿಗೇನೋ ಈ ಕೆಲಸವು ಕಠಿಣವಾಗಿ ತೋರುವುದಿಲ್ಲ ಆದರೆ ಬಲ್ಲವರಿಗೇ ಗೊತ್ತು ಇದರ ಗುಟ್ಟು ಸೇಕಡಾ 50 ಮಂದಿ ಮಾಸ್ಟರು ಇದರಲ್ಲೇ ಕುರುಡರಾಗಿರುವರು. ಆದುದರಿಂದ ಮಾಡರ್ನ್ ಮಾಸ್ಟರು ಸ್ಪೆಕ್ಟಿಕಲ್‌ಗಳನ್ನು (ಕನ್ನಡಕ) ಕೆಲಸವಾದ ಕೂಡಲೆ ಕೊಂಡುಕೊಳ್ಳಬೇಕಾಗಿದೆ.

ಮಾಡರ್ನ್ ಮೇಷ್ಟ್ರು ಹೆಸರಿಗೆ ಮಾತ್ರ ಡೈರಿಗಳನ್ನು ಬರೆಯಬೇಕು. ಇನ್ನೊಂದು ಮುಖ್ಯವಾದ ಅಂಶವಿದೆ. ಹೆಡ್ಮಾಸ್ಟರ್ ಆಗಬೇಕಾದಲ್ಲಿ, ಆಡಳಿತ ನಡೆಸುವುದು, ಅಧಿಕಾರಿಗಳು ಮತ್ತು ಪೋಷಕರುಗಳೊಡನೆ ಸೇರಿರುವುದು ಇವುಗಳಲ್ಲಿ ಜಾಣನಾಗಿರಬೇಕು ಕೇವಲ ಮಾಸ್ಟರೇ ಆಗಬೇಕಾದಲ್ಲಿ ಅಪ್ಪಣೆಯಂತೆ ನಡೆದುಕೊಂಡರೆ ಸಾಕು. ಇವರು ತರಗತಿಯಲ್ಲಿ ತಿಳಿಸುವ ಹೊರಗಡೆ ಕೇಳುವ ಅಭ್ಯಾಸದವರಾಗಿರಬೇಕು. ಜನರು ಮೇಷ್ಟರಿಗೇನೂ ಕೆಲಸವೇ ಇಲ್ಲ. ಬಹಳ ಮೋಜಿನ ಕೆಲಸವೆಂದರೂ ನಗುತ್ತ ಸುಮ್ಮನಾಗಬೇಕು. ರಜದಲ್ಲಿ ಸಹ ಇವರಿಗೆ ಸಾಯುವುದಕ್ಕೆ ವಿರಾಮವಿರಬಾರದು. ಮನೆಗೆ ಹೋದರೂ ಪರೀಕ್ಷೆಯ ಉತ್ತರಗಳ ಕಾಪಿಗಳ ಹೊರೆ ಹೊರೆಯೇ ಬಿದ್ದಿರಬೇಕು. ಎಲ್ಲಕ್ಕಿಂತ ಅಗತ್ಯವಾದ ವಿಚಾರವೇನೆಂದರೆ, ಮೇಷ್ಟರು ಉತ್ತಮ ವರ್ಗದ ಸಹಿಷ್ಣುವಾಗಿರಬೇಕು. ಇನ್ನೂ ಹೇಳಬೇಕೆಂದರೆ (ಮಾಸ್ಟರಲ್ಲಿ ಕ್ಷಮೆಬೇಡಿ ಹೇಳುವುದಾದರೆ) ಇವರು ನಾಚಿಕೆಯನ್ನು ಬಿಟ್ಟವರಾಗಬೇಕು. ಸಮಾಜದಲ್ಲಿನ 'ಸ್ಟೇಟಸ್' ಸ್ಥಾನ ಯಾ 'ಪೊಸಿಷನ್' (ಸ್ಥಿತಿ)ಗಳನ್ನೂ ಸ್ವಲ್ಪವೂ ಲಕ್ಷಿಸಬಾರದು ಏನೆನ್ನುವಿರಿ, ಉಪಾಧ್ಯಾಯರು ದೇವತೆಯಂತಿರಬೇಕು. ದೇವತೇ ಎಂದರೂ ಸರಿಯೆ. ದೇವರ ದರ್ಜೆಯೇನು ಗೊತ್ತೆ? ಯಾರಾದರೂ ಅವನನ್ನು ಒಪ್ಪಲಿ, ಒಪ್ಪದಿರಲಿ ಎರಡೂ ಒಂದೇ ಅವನಿಗೆ. ಮೈದಾನದಲ್ಲಿ ಕಟ್ಟಿಗೆಯ ಬಡಿತವನ್ನು ಸಹಿಸುವ ದನಗಳಂತಾಗಲಿ, ಅಥವಾ ಜಟ್ಕಾ ಗಾಡಿಯ ಕುದುರೆಯ ಚಾವಟಿ ಏಟನ್ನು ಸಹಿಸುವಂತಾಗಲಿ, ಇರಬೇಕು ಮಾಸ್ಟರ ಸಹಶೀಲತೆ– ಯಾವುದರಲ್ಲಿ? ಬೋಧನಾಕ್ರಮದಲ್ಲಿ; ಯಾರಾದರೂ ಮಾಡುವ ಟೀಕೆಯ ವಿಚಾರದಲ್ಲಿ.

> ಇಂದಿನ ಮಾಸ್ತರರ ಜೀವನವು ಆದರ್ಶವಾಗಿರಬೇಕು. ಮುಖ್ಯವಾಗಿ ನಡತೆ ಮತ್ತು ರೀತಿ ನೀತಿಗಳು ಉತ್ತಮವಾಗಿರಬೇಕು.

ಇಷ್ಟೆಲ್ಲ ಕಲ್ಯಾಣಗುಣಗಳ ಸಾಕಾರಮೂರ್ತಿಯಾದ ಮೇಲೆ, ಹಣದ ಕಡೆಗೆ ಖಂಡಿತ ಗಮನವಿಡಬಾರದು. ಏಕೆನ್ನುವಿರೋ, ಐಶ್ವರ್ಯಕ್ಕೂ, ವಿದ್ಯೆಗೂ ಹಿಂದಿನಿಂದಲೂ ಯಾವಾಗಲೂ ಸಂಬಂಧವಿಲ್ಲವೂ ಇಲ್ಲ ಮುಂದೆ ಇರಲೂ ಆರದು ಧಾರ್ಮಿಕಬುದ್ಧಿಯಿಂದ ಇವರು ತಮ್ಮ ಕೆಲಸಗಳನ್ನು ಮಾಡುತ್ತ ಹೋಗಬೇಕು ಅಷ್ಟೆ ತನ್ನ ವೇತನಗಳ ಕಡೆಗೆ (ಬೇಡಿಕೆಯೇ ಇರಬಾರದು!) ಗಮನವೇ ಇರಬಾರದು! ಕಾರಣವೇನೆಂದರೆ ಭಗವಾನ್ ಶ್ರೀಕೃಷ್ಣನು ಗೀತೆಯಲ್ಲಿ ಸಹ ಅದೇ ಉಪದೇಶವನ್ನೇ ಅಲ್ಲವೇ ಕೊಟ್ಟಿರುವುದು) ಇದೆಲ್ಲ ಗುಣಗಳಿಂದೊಡಗೂಡಿ, ಟ್ರೇನಿಂಗ್ ಆದ ನಮ್ಮ ಮಿತ್ರ ಮಾಸ್ಟರು ಯಾವುದಾದರೂ ಸರಕಾರಿ ಶಾಲೆಯಲ್ಲಿ ಸೇರುವ ಪುಣ್ಯವನ್ನಪಡೆದನ್ನೆ, ಅದು ಬಿಟ್ಟು ದುರದೃಷ್ಟವಶಾತ್ ಸಾರ್ವಜನಿಕ ಶಾಲೆಯಲ್ಲಿ, ಚಂದಾ ಎತ್ತಿ ನಡೆಯುವ ಶಾಲೆಯಲ್ಲಿ ಸೇರಿಕೊಂಡರೆಂದರೆ, "ಭಜನ ಕರೋ ರಾಧೇಶ್ಯಾಂ" ಎಂದು ಹಾಡುವುದೊಂದೇ ಉಳಿಯುವ ದಾರಿ!

The Canara Industrial & Banking Syndicate, Ltd.

Estd] HEAD OFFICE: UDIPI, (S INDIA.) [1925.

Member: RESERVE BANK OF INDIA, BANKERS' CLEARING HOUSE, BOMBAY.

Five years' Cash Certificates are issued at the price of **Rs. 8/-, Rs. 80/-, Rs. 400/- & Rs 800/-.**

repayable on maturity at

Rs 10/-, Rs 100/-, Rs 500/- &Rs. 1000/- respectively.

You can cash the Certificates at any time before maturity.

An investment which is liquid and yet very remunerative

FURTHER PARTICULARS ON APPLICATION.

GENERAL BANKING BUSINESS TRANSACTED.

ಮೌಲಾನಾ ಅಬುಲ್ ಕಲಮ್ ಅಜದರು

ಮಕ್ಕದಲ್ಲಿ ಜನನ!

ಮೌಲಾನ ಅಜದರು 1888ರಲ್ಲಿ ಮಕ್ಕದಲ್ಲಿ ಜನಿಸಿದರು. ಅರೇಬಿಯದಲ್ಲಿಯೇ ತನ್ನ ಬಾಲ್ಯವನ್ನು ಕಳೆದು ಅರೆಬಿಕ್ ಭಾಷೆಯನ್ನು ಕಲಿತರು. ಅವರ ತಾಯಿಯು ಅರಬಿ ಹೆಂಗಸು. ಅನಂತರ ಅವರು ಡಿಲ್ಲಿಗೆ ಬಂದು ವಾಸಿಸಿದರು. ಕೆಲವು ತಲಾಂತರಗಳಿಂದ ಅವರ ಹಿರಿಯರು ಡಿಲ್ಲಿಯಲ್ಲಿ ವಾಸಮಾಡಿಕೊಂಡು ಬಂದಿದ್ದರು. ಮೌಲಾನ ಅಜದರು ಶಾಲೆಗೆ ಹೋಗಿ ಕಲಿತುದೆಂದೇ ಇಲ್ಲ. ತನ್ನ ತಂದೆ ಮತ್ತು ಇತರರಿಂದ ಮನೆಯಲ್ಲೇ ವಿದ್ಯೆ ಪಡೆದರು. ಪರ್ಷಿಯನ್ ಮತ್ತು ಅರೆಬಿಕ್ ಭಾಷೆಗಳಲ್ಲಿ ಪಾಂಡಿತ್ಯ ಪಡೆದು ಖೋರಾನ್ ಮತ್ತು ಇಸ್ಲಾಮ್ ಧರ್ಮ ಶಾಸ್ತ್ರಗಳನ್ನು ಚೆನ್ನಾಗಿ ಕಲಿತರು.

ಪತ್ರಿಕಾ ವ್ಯವಸಾಯ

ಚಿಕ್ಕಂದಿನಿಂದಲೂ ಅಜದರಿಗೆ ಓದುವುದೆಂದರೆ ಬಹಳ ಪ್ರೀತಿ. ಅವರು ತನ್ನ ಹಿರಿಯರ ಸಂಪ್ರದಾಯಗಳಿಗನುಗುಣವಾಗಿ ಇಸ್ಲಾಮ್ ಧರ್ಮ ಜ್ಞಾನವನ್ನು ಸಂಪಾದಿಸಿ ಧಾರ್ಮಿಕ ಪ್ರವಚನಗಳನ್ನು ನಡಿಸ ತೊಡಗಿದರು. ಬರೆಯುವುದರಲ್ಲಿಯೂ ಮೌಲಾನರಿಗೆ ವಿಶೇಷ ಅಭಿರುಚಿಯಿತ್ತು. ಆದುದರಿಂದ ಆಗ ಶೈಶವಾವಸ್ಥೆಯಲ್ಲಿದ್ದ ಉರ್ದು ಪತ್ರಿಕಾ ವ್ಯವಸಾಯವು ಅವರ ಮನಸ್ಸನ್ನೆಳೆಯಿತು. 1987ರಲ್ಲೇ ಅವರು ಲೇಖನಗಳನ್ನು ಬರೆಯಲಾರಂಭಿಸಿ ಲಾಹೋರಿನ 'ವಕೀಲ್' ಎಂಬ ಉರ್ದು ಸಾಪ್ತಾಹಿಕವೊಂದರ ಸಂಪಾದಕರಾಗಿ ಕೆಲಸ ಮಾಡಿದರು. 1912ರಲ್ಲಿ ಅಜದರು ಅಲ್‌ಹಿಲಾಲ್ ಎಂಬ ಸಾಪ್ತಾಹಿಕವನ್ನು ಕಲ್ಕತ್ತದಿಂದ ಸ್ವತಂತ್ರವಾಗಿ ಹೊರಡಿಸಿ, ಉರ್ದು ಪತ್ರಿಕಾ ವ್ಯವಸಾಯದಲ್ಲೇ ದೊಡ್ಡ ಕ್ರಾಂತಿಯನ್ನುಂಟುಮಾಡಿದರು. ಹಿಂದೀ ಮುಸಲ್ಮಾನರಲ್ಲಿ ನವಯುಗವೊಂದರ ಮುಂಬೆಳಕಾಗಿ ನವ ಸಂಸ್ಕೃತಿ ಮತ್ತು ಮನೋವೃತ್ತಿಯ ಕೈದೀವಿಗೆಯಾದರು. ಮುಸಲ್ಮಾನರು ಅಂದಿನ ಅಂಧಾನುಕರಣೆಗೆ ಕನ್ನೆಲ್ಲಾ ಬಿಟ್ಟು ಪವಿತ್ರ ಖೋರಾನನ್ನು ಅಭ್ಯಾಸಿಸಿ ಇಸ್ಲಾಮ್ ಧರ್ಮದ ತಿರುಳನ್ನರಿತು ಅದರ ಸಂದೇಶವಾದ ಮಾನವ ಸ್ವಾತಂತ್ರ್ಯ ಸಮಾನತೆ ಮತ್ತು ಬಾಂಧವ್ಯದ ತಳಹದಿಯ ಮೇಲೆ ನವ ಮಾನವ ಸಮಾಜವನ್ನು ಕಟ್ಟಬೇಕೆಂದು ಸಾರಹತ್ತಿದರು. ಅಂತಹ ಸಮಾಜ ರಚನೆಯಾಗಬೇಕಾದರೆ ಮುಸಲ್ಮಾನರು ತಮ್ಮ ಪರಾಧೀನತೆಯಿಂದ ಬಿಡುಗಡೆ ಹೊಂದಬೇಕು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಂಧನವನ್ನು ಹರಿದೊಗೆಯಬೇಕು. ಮೌಲಾನ ಅಜದರು ಬ್ರಿಟಿಷರ ಪರಾಧೀನತೆಯನ್ನು ನಿಷೇಧಿಸ ಹತ್ತಿದರು. ಮುಸಲ್ಮಾನ ಜನಾಂಗದ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು.

ರಾಂಚಿಯಲ್ಲಿ ಸ್ಥಾನಬದ್ಧ ಕೈದಿ

ಈ ರೀತಿಯ ಪ್ರಚಾರವು ರಾಜದ್ರೋಹವಾಗಿ ಪರಿಗಣಿಸಲ್ಪಟ್ಟು ಅಲ್‌ಹಿಲಾಲ್ ಪತ್ರಿಕೆಯು ಕರಾಳ ಪತ್ರಿಕಾ ಶಾಸನಕ್ಕೆ ಬಲಿಯಾಯಿತು. ಅಜದರು ಧೃತಿಗೆಡದೆ ಅಲ್ ಬಲಘ್ ಎಂಬ ಇನ್ನೊಂದು ಪತ್ರಿಕೆಯನ್ನು ಸ್ಥಾಪಿಸಿದರು. ಆದರೆ ಅದು ಕೂಡಾ ಬೇಗನೆ ನಿಂತು ಹೋಗುವಂತಾಯಿತು. ಹಿಂದೀ ಸಂರಕ್ಷಣಾ ಆರ್ಡಿನೆನ್ಸ ಕಾನೂನಿನ ಮೇರೆಗೆ ಅಜದರು ಬಂಗಾಳದಿಂದ ಗಡಿಪಾರು ಹೊಂದಿದರು. ಇದೇ ಆರ್ಡಿನೆನ್ಸಿನ ಮೇರೆಗೆ ಡಿಲ್ಲಿ, ಪಂಜಾಬು, ಸಂಯುಕ್ತ ಪ್ರಾಂತ ಮತ್ತು ಮದ್ರಾಸಿಗೆ ಅವರ ಪ್ರವೇಶವು ಮೊದಲೇ ನಿಷೇಧಿಸಲ್ಪಟ್ಟಿತ್ತು. ಆದುದರಿಂದ ಅವರು ನೆರೆಯ ಬಿಹಾರ್ ಪ್ರಾಂತಕ್ಕೆ ಹೋಗಿ ರಾಂಚಿಯಲ್ಲಿ ವಾಸಿಸಿ ಕೆಲವು ಗ್ರಂಥಗಳನ್ನು ಬರೆಯಬೇಕೆಂದಿದ್ದರು. ಇಲ್ಲಿಯೂ ಅವರು ಸ್ವತಂತ್ರವಾಗಿರಲು ಸಾಧ್ಯವಾಗಲಿಲ್ಲ. ಸರಕಾರವು ಅವರನ್ನಲ್ಲಿ ಸ್ಥಾನಬದ್ಧ ಕೈದಿಯನ್ನಾಗಿ ಮಾಡಿತು.

ಖೋರಾನಿನ ಭಾಷಾಂತರ

1919ನೇ ದಶಂಬರ ತಾ. 27ರಲ್ಲಿ ಮೌಲನ ಅಜಾದರು ಬಿಡುಗಡೆಮಾಡಲ್ಪಟ್ಟರು. ರಾಂಚಿಯಲ್ಲಿ 3 ವರ್ಷ ನಿರ್ಬಂಧದಲ್ಲಿದ್ದಾಗ ಅಜದರು ಖೋರಾನನ್ನು ಭಾಷಾಂತರಿಸಿ ಮಹತ್ತಾದ ಹಾಗೂ ಅತ್ಯಮೂಲ್ಯವಾದ ಸೇವೆಯನ್ನು ಇಸ್ಲಾಮ್ ಸಾಹಿತ್ಯದೇವಿಗೆ ಸಲ್ಲಿಸಿ ಚಿರಸ್ಮರಣೀಯರಾದರು. ಅಜದರು ಬಿಡುಗಡೆಯಾದಾಗಲೆ ದೇಶದಲ್ಲಿ ಖಿಲಾಫತ್ತಿನ ಗಲಾಟೆ ಮತ್ತು ಅಸಹಕಾರ ಚಳವಳ ಆರಂಭವಾಯಿತು. ಮೌಲನರು ಕೂಡಲೇ ಅದರಲ್ಲಿ ಭಾಗವಹಿಸಿ 1921ನೇ ದಶಂಬರ ತಾ. 10ರಲ್ಲು ದಸ್ತಗಿರಿ ಮಾಡಲ್ಪಟ್ಟು ಒಂದುವರ್ಷ ಶಿಕ್ಷೆಗೊಳಗಾದರು. ಈ ಸಂದರ್ಭದಲ್ಲಿ ಮೌಲನರು ಕೋರ್ಟಿನಲ್ಲಿ ಮಾಡಿದ ಹೇಳಿಕೆಯು ಮಹತ್ವದ್ದಿರುವುದು.

ವಿಶೇಷ ಅಧಿವೇಶನದ ಅಧ್ಯಕ್ಷತನ

ಒಂದು ವರ್ಷದ ಶಿಕ್ಷೆಯ ಅವಧಿಯಾಗಿ ಬಿಡುಗಡೆಯಾದೊಡನೆಯೇ ಅಜದರು ಡಿಲ್ಲಿಯಲ್ಲಿ 1923ರಲ್ಲಿ ನಡೆದ ಕಾಂಗ್ರೆಸಿನ ವಿಶೇಷ ಅಧಿವೇಶನದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಂದಿನಿಂದ ಈ ವರೆಗೂ ಅಜದರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರರಾಗಿ ಕೆಲಸ ಮಾಡುತ್ತಾ ಬಂದಿರುವರು. ಅಸಹಕಾರ ಚಳವಳವು ಅಪಜಯ ಹೊಂದಿದ ಪರಿಣಾಮವಾಗಿ ಇದ್ದ ಜಾತೀಯತೆ ಬಿರುಗಾಳಿಗೆ ಹಲವು ಮಂದಿ ಮುಸಲ್ಮಾನ ಮತ್ತು ಹಿಂದು ಕಾಂಗ್ರೆಸ್ ಮುಖಂಡರು ಸಿಕ್ಕಿ ವಕ್ರಮಾರ್ಗ ಹಿಡಿದರೂ ಮೌಲಾನ ಅಜದರು ಒಂದಿಷ್ಟು ಚಂಚಲ ಚಿತ್ತರಾಗದೆ ಉಜ್ವಲ ರಾಷ್ಟ್ರೀಯ ಮಾರ್ಗವನ್ನೇ ಅನುಸರಿಸುತ್ತಾ ಮುನ್ನಡೆದರು. 1930ರ ಕ್ಯಾದೆಭಂಗ ಚಳವಳದಲ್ಲಿಯೂ ಭಾಗವಹಿಸಿ ಕಾರಾಗೃಹವಾಸಿಯಾದರು. ಆ ಮೇಲಿನ ಅವರ ಕಾರ್ಯಕಲಾಪಗಳು ಇತ್ತಲಾಗಿನ ಇತಿಹಾಸ ವಿದ್ದು ಸರ್ವವಿದಿತವಾದುದಾಗಿದೆ. ಇಂದೀಗ ಗಾಂಧಿಜಿಯವರ ಬಲ ಎಡಗೈಯಂತಿರುವ ಇಬ್ಬರು ಮುಸಲ್ಮಾನ ಮುಖಂಡರೆಂದರೆ ಮೌಲಾನ ಅಬುಲ್ ಕಲಮ್ ಅಜದರು ಮತ್ತು ಖಾನ್ ಅಬ್ದುಲ್ ಗಾಫರಖಾನರು. ಕಾಂಗ್ರೆಸಿನ ಪಾರ್ಲಿಮೆಂಟರಿ ಸಬ್ ಕಮಿಟಿಯ ಮೆಂಬರರಾಗಿ ಅಜದರು ಹೆಚ್ಚಿನ ಕೆಲಸ ಮಾಡಿರುವರು. ಕಾಂಗ್ರೆಸಿನೊಳಗೆ ದ್ದಿರುವ ಕಲಹಗಳನ್ನು ನಿವಾರಿಸಿ ಒಕ್ಕಟ್ಟನ್ನುಂಟುಮಾಡುವುದರಲ್ಲಿ ಮೌಲನರು ಅಗ್ರಗಣ್ಯ ಭಾಗವಹಿಸಿರುವರು.

ಪ್ರಥಮ ಶ್ರೇಣಿಯ ಸಾಹಿತಿ

ಮೌಲಾನರು ಕಳೆದ 25 ವರ್ಷಗಳಿಂದ ರಾಜಕೀಯ ಚಳವಳದಲ್ಲಿ ಪ್ರಾಮುಖ್ಯ ಭಾಗವಹಿಸಿರುವರಾದರೂ ಸಾಹಿತ್ಯ ಕ್ಷೇತ್ರದಲ್ಲಿಯೂ ಅದ್ವಿತೀಯ ಸ್ಥಾನ ಪಡೆಯುವ ಶ್ವರ ಗ್ರಂಥಗಳನ್ನು ಬರೆದಿರುವರು. ಉರ್ದು ಭಾಷೆಯ ಅವರ ಪಾಂಡಿತ್ಯವು ಅಪ್ರತಿಮವಿರುವುದು. ಮೂರು ದೊಡ್ಡ ದೊಡ್ಡ ಭಾಗಗಳಾಗಿ ಅವರು ಪ್ರಕಟಿಸಿರುವ ಖೋರಾನಿನ ಭಾಷಾಂತರವೊಂದೇ ಸಾಕು ಅವರ ಕೀರ್ತಿಯನ್ನು ಆಚಂದ್ರಾರ್ಕವಾಗಿರಿಸಲು. ಇನ್ನು 300 ಪುಟಕ್ಕಿಂತಲೂ ಮಿಕ್ಕಿದ ಆತ್ಮವೃತ್ತವನ್ನವರು ಪ್ರಕಟಿಸಿರುವರು. ಇದನ್ನವರು ರಾಂಚಿಯಲ್ಲಿ ಸ್ಥಾನಬದ್ಧ ಕೈದಿಯಾಗಿದ್ದಾಗ ಕೇವಲ ಸ್ಮರಣಾ ಶಕ್ತಿಯ ಮೇಲೆಯೇ ಅವಲಂಬಿಸಿಕೊಂಡು ಬರೆದರು. ಓದುವುದು ಬರೆಯುವುದೆಂದರೆ ಮೌಲಾನರ ಬಹಳ ಆಸಕ್ತಿ. ಎಲ್ಲಿಯಾದರೂ ಸ್ವಲ್ಪ ಬಿಡು ಸಿಕ್ಕಿದೊಡನೆಯೇ ಅವರು ಏನಾದರೊಂದು ಪುಸ್ತಕದ ಪುಟ ಮಗುಚಿ ಹಾಕತೊಡಗುವರು. ಪ್ರಯಾಣ ಮಾಡುವಾಗಲೂ ಅವರು ಓದುತ್ತಲೇ ಇರುವರು. ಪುಸ್ತಕ ಮತ್ತು ಲೇಖನಿ ಕಾಗದವಿದ್ದರೆ ಎಂತಹ ಸೆರೆಮನೆಯನ್ನಾದರೂ ಮೌಲಾನರು ಸಂತೋಷದಿಂದ ಕಳೆಯಬಲ್ಲರು.

ಅಜದರ ಅತಿ ದೊಡ್ಡ ನಷ್ಟ

1921ರಲ್ಲಿ ಮೌಲಾನರು ದಸ್ತಗಿರಿಯಾದ ಮೇಲೆ ಪೋಲೀಸರು ಜಪ್ತಿ ಮಾಡಿ ಕೊಂಡುಹೋದ, ಅವರ ಹಲವು ವರ್ಷಗಳ ಪರಿಶ್ರಮದ ಪರಿಣಾಮವಾದ ಕೈ ಬರವಣಿಗೆಗಳೆಲ್ಲಾ ಹೆಚ್ಚಾಗಿ ನಾಶವಾಗಿ ಅವರಿಗೆ ಪುನಃ ಸಿಗದೆ ಹೋದುದು ಅವರ ಜೀವನದ ಅತಿ ದೊಡ್ಡ ನಷ್ಟವಾಗಿರುತ್ತದೆ. ಕಾರಾಗೃಹದಿಂದ ಹೊರ ಬಂದೊಡನೆಯೇ ಅವುಗಳನ್ನೆಲ್ಲಾ ಪಡೆಯಲು ಅಜದರು ಬಹಳ ಪ್ರಯತ್ನಪಟ್ಟು ಜಯಶೀಲರಾದರು. ಆದರೆ ಅವೆಲ್ಲಾ ಹರಿದು ಚೂರಾಗಿದ್ದುವು. ಇದರಿಂದ ಮೌಲಾನರು ಹೃದಯವೇ ಒಡೆದು ಹೋಗುವಂತಾಯಿತು. ಅವರ ತಾಳ್ಮೆಯು ಪರಮಾವಧಿಯು ಮುಟ್ಟಿತು. ಈಗಲೂ ಅವರು ಆ ಕುರಿತು ಸಂತಾಪ ಪಡುತ್ತಾರೆ. ಸಾಹಿತ್ಯ ಮತ್ತು ರಾಷ್ಟ್ರ ಮಾತೆಯರ ಸೇವೆಯನ್ನು ಒಂದೇ ಸವನೆ ನಡೆಸಲೆತ್ನಿಸಿರುವರು ಮೌಲಾನ ಅಜದರು. ಅದ ತನ್ನಿಂದ ಸಾಧ್ಯವಾಗಲಿಲ್ಲೆಂದು ನಿರಾತೋಪ್ಪಾರವೆತ್ತಿರುವರು. ಅಜದರು ತಾನು ಕಳಕೊಂಡ ಬರವಣಿಗೆಗಳನ್ನೆಲ್ಲಾ ಪುನಃ ಬರೆದು ಅಸಾಧಾರಣ ತಾಳ್ಮೆ ಮತ್ತು ಪ್ರತಿಭೆಯನ್ನು ತೋರಿಸಿರುವರು.

ಸರ್ವಾದರಣೀಯ ವ್ಯಕ್ತಿ

ಮೌಲನ ಅಜದರನ್ನು ದ್ವೇಷಿಸುವವರೇ ಇರಲಾರರು. ಅಷ್ಟೊಂದು ಸಾತ್ವಿಕ, ಸರಳ ಮತ್ತು ವಿನಯಪರ ವ್ಯಕ್ತಿ ಅವರು. ಬದ್ಧವಿರೋಧಿಯಾದರೂ ಅವರ ಕುರಿತು ಆದರವುಳ್ಳವನಿರುವನು. ಆದುದರಿಂದಲೆ ಅವರು ಸರ್ವಾದರಣೀಯರಾಗಿರುವರು. ಈ ಸಲದ ಕಾಂಗ್ರೆಸ್ ಅಧ್ಯಕ್ಷತನದ ಚುನಾವಣೆಯಲ್ಲಿ ಕಾಂಗ್ರೆಸ್ ಸೋಸಿಯಲಿಸ್ಟರು ಕೂಡಾ ಅವರಿಗೆ ವೋಟುಕೊಟ್ಟರುವರು ಇಂತಹ ಸರ್ವಜನಪ್ರಿಯ ಪರಿಪಕ್ವ ಅನುಭವಶಾಲಿ ಹಾಗೂ ಮೇಧಾವಿಯು ಈ ಸಲದ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದು ಅತ್ಯಂತ ಯುಕ್ತವಾದುದೆಂಬುದರಲ್ಲಿ ಸಂದೇಹವಿಲ್ಲ.

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ.

	ರೂ. ಆ. ಪೈ.		ರೂ. ಆ. ಪೈ.
ಮೂಲಧನ		ಕಟ್ಟಡ ಮತ್ತು ಸಾಮಾನು	
ಕೆತ್ತಲ್ಪಟ್ಟ	6,00,000-0-0	ಮೊದಲಾದುವುಗಳಿಗೆ ನಿಶ್ಚಿತ	
ಪೈಡ್ ಅಪ್	3,91,342-0-0	ಮೂಲ ವ್ಯಯ	95,489-4-3
ರಿಸರ್ವ್ ಫಂಡು	4,50,000-0-0	ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ಡಿಪೋಸಿಟ್		ಬೆಟೆಯೊಳಗಿನ	
ಫಿಕ್ಸೆಡ್, ಕರೆಂಟ್		ಸೆಕ್ಯುರಿಟಿ	40,97,741-5-6
ಇತ್ಯಾದಿ	81,21,622-8-1	ಹುಂಡೀ ಪತ್ರ	
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ಮೊದಲಾದುವುಗಳು	10,30,649-2-10
ವಿವಿಧ	10,51,799-1-7	ರೇವಣಾತಿ	20,64,586-2-0
ಈ ವರ್ಷದ ಲಾಭ	55,003-0-6	ವಿವಿಧ	9,82,093-10-4
		ನಗದಿ	17,99,207-1-3
ಜುಮ್ಲಾ	1,00,69,766-10-2	ಜುಮ್ಲಾ	1,00,69,766-10-2

ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ಹರಿಜನ ಪರಿಷತ್ತು.

ಜಿಲ್ಲಾ ಹರಿಜನ ಸೇವಾ ಸಂಘದ ನೇತೃತ್ವದಲ್ಲಿ—

ಅಧ್ಯಕ್ಷ— ಶ್ರೀ ಎ. ಪಿ. ಮುನ್ನಿಸಾಮಿ ಪಿಳ್ಳೆ, M. L. A.,

ಈ ಪರಿಷತ್ತು ಮೂಲ್ಕಿ ಬಪ್ಪನಾಡು ಜಾತ್ರೆ ಸಮಯ ಮಾರ್ಚ ತಾ. 27 ವ 28ರಲ್ಲಿ ಜರಗಲಿರುವದು. ದಲಿತ ಬಂಧುಗಳ ಏಳಿಗೆಯ ಸಾಧನೆಯು ದೇಶದ ಆ ಬಾಂಧವರೆಲ್ಲರನ್ನು ಎಚ್ಚರಿಸುವಂತಾಗಬೇಕು. ಇದಕ್ಕೆ ಎಲ್ಲರ ಸಹಕಾರವನ್ನೂ ಕೋರುತ್ತಿರುವೆವು.

ಕಾರ್ಯಕ್ರಮ ಈ ರೀತಿ ಇರುವುದು.

ತಾ. 27ನೇ ಬೆಳಗ್ಗೆ 8 ಘಂಟೆಗೆ ಧ್ವಜವಂದನೆ, ಘಂಟೆ 8—10ರ ವರೆಗೆ ಊಟ, 10—2 ವಸ್ತ್ರ ತೊಳೆದು ಸ್ನಾನ, 3—4-30 ಮೆರವಣಿಗೆ (ಅಧ್ಯಕ್ಷರನ್ನು ಕೂಡಿ ಪರಿಷತ್ತು ಸ್ಥಳಕ್ಕೆ.) 4-30—6-30ಕ್ಕೆ ಪರಿಷತ್ತು, 6-30—8-30 ಊಟ, 8-30—12-30 ವಿನೋದ ಆಟಗಳು, ಬೆಳಗ್ಗೆ 10ರಿಂದ 2ರ ತನಕ ಕಾರ್ಯನಿರ್ವಾಹಕ ಕಮಿಟಿ ಸಭೆ, ತಾ. 28 ಬೆಳಗ್ಗೆ ಘಂಟೆ 8—9 ಆಟ ವ ಚಿಕ್ಕ ಭಾಷಣ, 9—11 ಪರಿಷತ್ತಿನ ಉಳಿದ ವಿಷಯಗಳು, 11—1 ಊಟ ವ ಪರಿಷತ್ತು ವಿಸರ್ಜನೆ, 3—4 ಕೆಲಸಗಾರರ ಸಭೆ, 4—5 ಇತರ ಭಾಷಣಗಳು. ಮುಂದಾಗಿ ಬಂದರೆ ತಾ. 26ರ ರಾತ್ರಿ ಊಟದ ವ್ಯವಸ್ಥೆ ಮಾಡಲಾಗುವುದು. ಅಂದು ರಾತ್ರಿ ಆರೋಗ್ಯ ಭಾಷಣ, ಸಿನೇಮ ವಗೈರೆ ವಿನೋದಗಳಿರುವವು.

ಹರಿಜನ ಪರಿಷತ್ತಿನಲ್ಲಿ ಡಾಂಭಿಕಕ್ಕಾಗಿ ಖರ್ಚು ಮಾಡುವುದು ಉಚಿತವಾಗಲಾರದು. ಆದರೂ ಹಲವು ಕಡೆಗಳಿಂದ ಹರಿಜನ ಪ್ರತಿನಿಧಿಗಳು ಬರುವರೆಂಬ ನಂಬಿಕೆಯಿರುವುದರಿಂದ ಅವರ ಊಟದ ವ್ಯವಸ್ಥೆ ಮಾಡಬೇಕಾಗಿದೆ. ಇದಕ್ಕೆ ಬೇಕಾದ ಖರ್ಚುಗಳಿಗೆ ವಂತಿಗೆಯನ್ನು ಕೇಳುವೆವು. ವಂತಿಗೆಗಳಲ್ಲಿ ಖರ್ಚು ಕಳೆದು ಉಳಿದವನ್ನೆಲ್ಲಾ ಹರಿಜನ ಸೇವಾಸಂಘದ ಕೆಲಸಕ್ಕಾಗಿ ವಿನಿಯೋಗಿಸಲ್ಪಡುವದು. ಆದುದರಿಂದ ಮಹಾತ್ಮಾಜಿಯವರಿಗೆ ರೂ. 10,000ಕ್ಕೆ ಮಿಕ್ಕಿ ಕೇಳಿಕೊಟ್ಟ ನಮ್ಮ ಜಿಲ್ಲೆಯು ಈಗಲೂ ಮುಂದೆ ಬಂದು ಹರಿಜನ ಸೇವಾಸಂಘವು ಕೆಲಸಮಾಡುತ್ತಿರುವಾಗ ಬರೇ ಪರಿಷತ್ತಿನ ಖರ್ಚು ಎಂದು ಗ್ರಹಿಸದೆ ವಂತಿಗೆಯನ್ನು ಬೇಕಷ್ಟು ಕೊಟ್ಟು ಮುಂದಿನ ಅನೇಕ ಕಾರ್ಯಗಳಿಗೆ ಸಹಾಯವನ್ನು ಕೊಡುವರೆಂದು ನಂಬಲಾಗಿದೆ. ಬಂದ ವಂತಿಗೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವೆವು.

ಪ್ರತಿನಿಧಿಗಳು— ಕಾಸರಗೋಡಿನಿಂದ ಬಾಲ್ಯುನಡೆಯಾಗಿ ಪ್ರತಿನಿಧಿ ದಳವೊಂದು ಜಿಲ್ಲಾ ಕಾಂಗ್ರೆಸ್ ಮೆಂಬರರಾದ ಶ್ರೀ. ಬಿ. ದೇವಪ್ಪಾಳ್ವ ಮತ್ತು ಜಿಲ್ಲಾ ಬೋರ್ಡು ಮೆಂಬರ ಶ್ರೀ ಕೆ. ಬಂದಾರರು ಕೂಡಿಬರುವರೆಂದು ಬರೆದಿದ್ದಾರೆ. ಬ್ರಹ್ಮಾವರ, ಉಡುಪಿ, ಶಾಂತಿನಿಕೇತನ, ಮಂಗಳೂರು ಪಿ. ಸಿ. ಮಿಶನ್ ಮತ್ತು ಗಳಿಯರ ಕೂಟದವರೂ ಬರುತ್ತಾರೆಂದೂ ತಿಳಿದುಬರುತ್ತದೆ. ಇವರು ಇನ್ನು ಆಲೋಚಿಸಿ ಬರಲಿಕ್ಕಿದ್ದವರೂ ಇಲ್ಲಿಗೆ ತಲುಪುವ ಸಮಯ ಮತ್ತು ಅಂದಾಜುಜನಸಂಖ್ಯೆಯನ್ನು ಮುಂದಾಗಿ ತಿಳಿಸುವುದು ಉತ್ತಮ.

ಕೆಲವೊಂದು ಸೂಚನೆ—(1) ಹರಿಜನ ವಿದ್ಯಾವಂತರೆಲ್ಲರೂ ತಪ್ಪದೆ ಮುಂದಾಗಿ ಬಂದು ಪರಿಷತ್ತಿನ ಯಶಸ್ಸಿಗೋಸುವುದಕ್ಕೆ ಸಹಕಾರ ಕೊಡುವುದು ಅಗತ್ಯವಿರುವುದು. (2) ಹರಿಜನರನ್ನು ಎಚ್ಚರಿಸುವ ವಿನೋದಾವಳಿಗಳಿಂದ ಯಾರಾದರೂ ಸಹಕರಿಸುವವರಿದ್ದರೆ ಸಂತೋಷವಿತ್ತು. (3) ಲೋಕಲ್ ಬೋರ್ಡುಗಳಲ್ಲಿ ಹರಿಜನ ಮೆಂಬರರಿರುವವರು ಎಲ್ಲರೂ ಬರಬೇಕಾಗಿದೆ. (4) ಪ್ರತಿ ಗ್ರಾಮದ ಪ್ರತಿನಿಧಿಗಳು ಬರುವಂತೆ ಊರವರು ಎಲ್ಲರ ವಂತಿಗೆ ಎತ್ತಿ ಕಳುಹಿಸಲೆತ್ನಿಸುವದು ಸುಲಭವಿದೆ. ಈ ರೀತಿ ಕಳುಹಿಸಿಕೊಡಲು ಯತ್ನಿಸುವರೇ? (5) ಮೂಲ್ಕಿ ಸೀಮೆಗೆ ಸೇರಿದ 36 ಗ್ರಾಮಗಳ ಹರಿಜನರು ಸಭೆಕೂಡಿ ಸಾಧ್ಯಕ್ಕನುಸಾರವಾಗುವ ಎಕ್ರೆ ಒಂದರ ಒಂದು ಸೇರು ಅಕ್ಕಿ ಯಾ ಒಂದಾವರೆ ಆಣೆಯಂತೆ ಕೇಳಿ ಎತ್ತಲು ನಿರ್ಣಯಿಸಿಕೊಂಡಿರುವರು. ಸೀಮೆಯ ಪ್ರತಿಯೊಂದು ಗ್ರಾಮಸ್ಥರು ಆ ರೀತಿ ಕೊಟ್ಟು ಸಹಕರಿಸುವರೇ? (6) ಸೀಮೆಯ ಎಲ್ಲಾ ದೇವಸ್ಥಾನದವರೊಡನೆ ಪರಿಷತ್ತು ಸಮಯ 3 ದಿವಸಗಳಲ್ಲಿ ತಾ. 26, 27, 28ನೇ ದಿವಸಗಳಲ್ಲಿ ಹರಿಜನರ 3 ವರ್ಷ ಪ್ರಾಯದೊಳಗಿನ ಮಕ್ಕಳನ್ನು ಸ್ನಾನಮಾಡಿಸಿ ಹಾಲು ಗಂಜಿ ಕೊಡಿಸುವಂತೆಯೂ, ಜಿಲ್ಲೆಯ ಇತರ ಕಡೆಗಳಲ್ಲಿಯೂ ಅದೇ ರೀತಿ ಮಾಡಿದರೆ ಉತ್ತಮವಿತ್ತೆಂದೂ, ಎಂದಲೆಲೆ ಹಾಕುವುದು, ವಿದ್ಯಾದಾನ ಕುರಿತಾಗಿ ಜನವೆಚ್ಚತ್ತು ಹರಿಜನರು ಅದನ್ನು ಬಿಡುವಂತೆ ಸಹಕರಿಸುವುದು ಸಹಾಯವಿತ್ತಂತೆಂದೂ ಈ ಕುರಿತು ಪತ್ರಿಕೆಮೂಲಕ ಸ್ವಾಗತಸಮಿತಿ ಅಧ್ಯಕ್ಷರು ಮೂಲ್ಕಿ ಸೀಮೆಯ ಹರಿಜನರ ಪರವಾಗಿ ಬರಕೊಳ್ಳಬೇಕಾಗಿ ಕೋರಿ ಅದೇ ಸಭೆಯಲ್ಲಿ ನಿರ್ಣಯಿಸುವರು. ಈ ಎಲ್ಲಾ ನಿರ್ಣಯಗಳನ್ನು ಜಿಲ್ಲೆಯವರೆಲ್ಲರ ಲಕ್ಷ್ಯದ ಮುಂದಿಟ್ಟು ಕೋರಿದ ಸಹಕಾರ ಕೇಳಿಕೊಳ್ಳುವುದಲ್ಲದೆ ಈ ವಿಷಯಗಳಲ್ಲಿ ನಡೆದ ವಿದ್ಯಮಾನಗಳನ್ನು ತಿಳಿಸುವಂತೆ ದೀನತೆಯಿಂದ ಹಾರೈಸುವೆವು. (7) ಉಪಾಧ್ಯಾಯ ವೃಂದವು ಬಹುರೀತಿ ಸಹಕರಿಸಬಹುದಾಗಿದೆ. ಜಿಲ್ಲಾ ಬೋರ್ಡು ಖದ್ದರ್ ಧಾರಣೆ, ಮದ್ಯಪಾನ ನಿಷೇಧದ ಕುರಿತು 38ರ ಸಪ್ಟಂಬರದಲ್ಲಿ ಎರಡು ನಿರ್ಣಯ ಅಂಗೀಕರಿಸಿ ಖದ್ದರ್ ಧಾರಣೆ ಕುರಿತು ಪ್ರೆಸಿಡೆಂಟರ ಕೇಳಿಕೆಯು ಎಲ್ಲರಿಗೂ ಹೋಗಿತ್ತು. 12,000 ಎಲಿಮೆಂಟರಿ ಶಾಲಾ ಮಕ್ಕಳು ಸುಮಾರು 800 ಮಂದಿ ಉಪಾಧ್ಯಾಯರೂ ಆ ಕೇಳಿಕೆಯಂತೆ ಖದ್ದರ್‌ಟೊಪ್ಪಿ ಮತ್ತು ವಸ್ತ್ರ ಧಾರಣೆಮಾಡತೊಡಗಿರುವದು ಎಲ್ಲರೂ ತಿಳಿಯಬಹುದಾದ ಸಂತೋಷದ ವಿಚಾರ. ಆದರೆ ಇನ್ನಷ್ಟು ಮಂದಿ ಮಾತ್ರವಲ್ಲ ಎಲ್ಲರೂ ಧರಿಸತೊಡಗುವವು ಹರಿಜನ ಕಾರ್ಯಕ್ಕೆ ಮತ್ತಷ್ಟು ಬೆಂಬಲ ಕೊಡುವವು. (8) ಮದ್ಯಪಾನ ನಿಷೇಧ ಪ್ರಚಾರ ಕಮಿಟಿಯು ಜಿಲ್ಲೆಯಲ್ಲಿ ಕೆಲಸಮಾಡುತ್ತಿದ್ದಾಗ ಬಹುರೀತಿ ಆ ನಿಷೇಧ ಕಾರ್ಯವನ್ನೇ ಮಾಡುತ್ತಿತ್ತು. ಅಂದು ಉಪಾಧ್ಯಾಯರೂ ಮಕ್ಕಳೂ ಮಾಡಿದ ಸಹಾಯವನ್ನು ಈ ಪರಿಷತ್ತಿನ ಮುಖದಲ್ಲಿ ಆದರದಿ ಮಾಡಿ, ಮಾಡಿದ ಕೆಲಸದ ರಿಪೋರ್ಟು ನಮ್ಮೆದೆ ಕಳುಹಿಸುವದು ಸಂತೋಷವಿತ್ತು. (9) ಪರಿಷತ್ತಿನಲ್ಲಿ ಚರ್ಚಿಸತಕ್ಕ ವಿಷಯ ವ ನಿರ್ಣಯಗಳನ್ನು ಹರಿಜನ ಉದ್ಧಾರ ಕಾರ್ಯಪ್ರೇಮಿಗಳು ಕಳುಹಿಸುವದನ್ನು ನಿರೀಕ್ಷಿಸುವೆವು. (10) ಈ ರೀತಿ ಅನೇಕ ತರದ ಒಂದೊಂದು ಸಹಾಯ ಎಲ್ಲರೂ ಮಾಡಿದ್ದಾದರೆ ಪರಿಷತ್ತು ಯಶಸ್ವಿಯಾಗಿ ಜಿಲ್ಲೆಗೆ ಕೀರ್ತಿ ಬರಲು ಸಾಧ್ಯವಿದೆ. ಎಲ್ಲರೂ ಸಹಕರಿಸುವರೆಂದು ನಿರೀಕ್ಷಿಸಲಾಗಿದೆ.

M. R. Punja,
ಅಧ್ಯಕ್ಷ— ಜಿಲ್ಲಾ ಹರಿಜನ ಪರಿಷತ್ತು,
ಸ್ವಾಗತ ಸಮಿತಿ,

ಮೂಲ್ಕಿ, ತಾ. 4-3-'40.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ಮಾರ್ಚ, 4.

ಮಹಾಮಸ್ತಕಾಭಿಷೇಕದ ಹೆಚ್ಚಿನ ವಿವರಗಳು—ಚೆಲುವ ಕನ್ನಡ ನಾಡು ಜೈನ ಕ್ಷೇತ್ರ ಶ್ರವಣಬೆಳಗೊಳದಲ್ಲಿರುವ ತ್ಯಾಗ ಮೂರ್ತಿ ಗೋಮಟೇಶ್ವರನಿಗೆ ಮಹಾಮಸ್ತಕಾಭಿಷೇಕವು ವೈಭವದಿಂದ ಆದುದರ ವಿಷಯ ನವಯುಗದ ಹಿಂದಿನ ಸಂಚಿಕೆಯಲ್ಲಿ ತಿಳಿಸಲಾಗಿದೆ. ಈ ಸಂದರ್ಭದಲ್ಲಿ ಇನ್ನು ಹೆಚ್ಚು ವಿವರಗಳು ಏನೆಂದರೆ. ಇಂದೂರು ಸಂಸ್ಥಾನದ ಶ್ರೀಮಂತ ಸೇಟರ್ ಚಂದರು 8001 ರೂ. ಕೊಟ್ಟು ಮೊದಲನೇ ಅಭಿಷೇಕದ ಕೊಡದ ಗೌರವ ಪಡೆದರು. ಇಂದೂರಿನ ಧೂಲೋಕ ಕುಟುಂಬ ಸರ್ ಹುಕುಂಚಂದ್ ಜೀರು ಒಂದು ಚಿಕ್ಕ ಓಣಿಯಲ್ಲಿ ವಾಸಿಸುತ್ತಿದ್ದರು. ಇವರನ್ನು ನೋಡಲು ಜನರು ಕಿಕ್ಕಿರಿದು ಬಿದ್ದರು. ಇಷ್ಟಲ್ಲದೆ ಅಜ್ಮೀರಿನ ಶ್ರೀಮಂತ ಮತ್ತು ಯಂ. ಎಲ್. ಎ. ರಾಯ್ ಬಹದ್ದೂರ್ ಸೇಟ್ ಬಗ್ ಚಂದರೂ, ಡೆಲ್ಲಿಯ ರತನ್‌ಸಿಂಗರೂ ಇತರ ಪ್ರಖ್ಯಾತ ಜೈನ ಮುಂದಾಳುಗಳೂ ಸೇರಿ ಸಲ್ಲಿಸಿದರು. ಈ ಸಮಯದಲ್ಲಿ ಜೈನ ಮಹಿಳೆಯರ ಸಭೆಯೊಂದು ಧರ್ಮಸ್ಥಳ ಶ್ರೀಯುತ ಮಂಜಯ್ಯ ಹೆಗ್ಗಡೆಯವರ ಪತ್ನಿ ಶ್ರೀ ಶ್ರೀಮತಿಯಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ಸರ್ಕಾರದ ಏರ್ಪಾಡು ಚೆನ್ನಾಗಿತ್ತು. ಎಲ್ಲವೂ ಸಾಂಗವಾಗಿ ನೆರವೇರಿತು. ಮತ್ತೆ 15 ವರ್ಷಕ್ಕೆ ಇದು ಬರುತ್ತೆ. ಅಷ್ಟು ಹೊತ್ತಿಗೆ ಪ್ರಪಂಚದಲ್ಲಿ ಏನು ನಡೆಯುತ್ತೋ ಹೇಳಲು ಸಾಧ್ಯವಿಲ್ಲ. ಇಂದು ಗೊಮ್ಮಟನಿಗೆ ನಡೆದ ಅಭಿಷೇಕ ಮಹಿಮೆಯಿಂದ, ಯೂರೋಪು ಯುದ್ಧ ನಿಂತು ಸತ್ಯ, ಅಹಿಂಸೆ ಶಾಂತಿ ಮತ್ತು ಸುಖ ಉಂಟಾಗಲೆಂದು ಪ್ರಖ್ಯಾತ ಜೈನ ಮುಂದಾಳುಗಳೊಬ್ಬರು, ನವಯುಗ ಪ್ರತಿನಿಧಿಗಳಿಗೆ ತಿಳಿಸಿದರು.

ವಿಶೇಷ ವಾರ್ತೆಗಳು—ಮದ್ರಾಸ್ ಸಂಸ್ಕೃತ ಕಾಲೇಜ್ ಸ್ಥಾಪಕರ ದಿನಾಚರಣೆ ಮತ್ತು ಕಲ್ಕತ್ತಾ ವಿಶ್ವ ವಿದ್ಯಾನಿಲಯ ಕಾನ್ವೊಕೇಶನ ಭಾಷಣವನ್ನು ಮೈಸೂರು ದಿವಾನ್ ಸರ್. ಮಿರ್ಜಾರವರು ಮಾಡಿದ್ದು ಮೈಸೂರಿಗೊಂದು ಹೆಮ್ಮೆ. ಹದಿನೈದು ವರ್ಷಗಳ ನಂತರ ಸರ್. ಮಿರ್ಜಾರವರು ಲೇಡಿ ಮಿರ್ಜಾರೊಂದಿಗೆ ಕಲ್ಕತ್ತೆಗೆ ಹೋಗಿರುತ್ತಾರೆ. ಮೈಸೂರು ಸಂಸ್ಥಾನದ ಹನ್ನೆರಡನೆ ವೈದ್ಯ ಸಮ್ಮೇಳನವು ಪ್ರಿನ್ಸ್ ಯುವರಾಜ ಒಡೆಯರ್‌ರಿಂದ ಪ್ರಾರಂಭೋತ್ಸವ ನಡೆದು ವೈದ್ಯ ವಿಚಾರ ಅಮೋಘ ಭಾಷಣ ನಡೆಯಿತು. ಮೈಸೂರು ರೈಲ್ವೇ ಲಾಕ್ ಔಟ್ ಸಂಬಂಧವಾಗಿ ರೈಲ್ವೇ ಕೆಲಸಗಾರರ ಸಂಘವನ್ನು ಪೋಲೀಸರು ಶೋಧ ಮಾಡಿ ಅನೇಕ ಕಾಗದ ಪತ್ರಗಳನ್ನೂ, ಒಂದು ಬೋರ್ಡನ್ನೂ ತೆಗೆದುಕೊಂಡು ಹೋಗಿದ್ದು ಈಗ ಆ ಸಂಘಕ್ಕೆ ವಾಪಸ್ ಕೊಟ್ಟಿರುತ್ತಾರೆ. ಮೈಸೂರು ಕಾಂಗ್ರೆಸ್ ತೃತೀಯ ಸಮ್ಮೇಳನವು ಏಪ್ರಿಲ್ ತಿಂಗಳಲ್ಲಿ ಶಿವಮೊಗ್ಗ ಬಳಿ ನಡೆಸಲು ತಕ್ಕ ಏರ್ಪಾಡು ಮಾಡಲಾಗುತ್ತಿದೆ. ಈ ಅಧಿವೇಶನಕ್ಕೆ ಅಧ್ಯಕ್ಷರನ್ನು ಆರಿಸಲು ಇದೇ ಮಾಹೆ ತಾ 24ರಲ್ಲಿ ಚುನಾವಣೆ ನಡೆಯುತ್ತೆ. ಮೈಸೂರು ಹೈಕೋರ್ಟಿನವರು ಅನೇಕ ವಕೀಲರ ಮೇಲೆ ನೋಟಿಸ್ ಜಾರಿ ಮಾಡಿ "ಸನ್ನದುಗಳನ್ನೇಕೆ ವಾಪಸ್ ತೆಗೆದುಕೊಳ್ಳಬಾರದೆಂದಿದ್ದಾರೆ." ಇದರ ಬಗ್ಗೆ ಈ ದಿನ ಹೈಕೋರ್ಟಿನಲ್ಲಿ ಕೇಸ್ ನಡೆಯುತ್ತೆ. ಮೈಸೂರು ವಿಶ್ವವಿದ್ಯಾನಿಲಯ ವಾರ್ಷಿಕ ಸನೇಟ್ ಸಭೆಯು ವೈಸ್ ಛಾನ್ಸಲರ ಅಧ್ಯಕ್ಷತೆಯಲ್ಲಿ ಮೈಸೂರಲ್ಲಿ ಇದೇ ಮಾಹೆ ತಾ 1ರಲ್ಲಿ ನಡೆದು, ವಿಶ್ವ ವಿದ್ಯಾನಿಲಯಕ್ಕೆ ಸೇರಿದ ಅನೇಕ ಮುಖ್ಯ ವಿಷಯಗಳನ್ನು ಚರ್ಚಿಸಲಾಯಿತು. ಮೈಸೂರು ರೆಡ್ ಕ್ರಾಸ್ ಸಂಘದಾಶ್ರಯದಲ್ಲಿ "ನರ್ಸರಿ ವಿದ್ಯಾಭ್ಯಾಸ" ವಿಚಾರವಾಗಿ ಉಪನ್ಯಾಸಗಳನ್ನು ಕೊಡಲಾಯಿತು. ಮೈಸೂರಲ್ಲಿ ಕಾಫಿ ಸಸ್ಯ ಹಕೋಟ ಶಾಸನ ಏಪ್ರಿಲ್ ಒಂದರಿಂದ ಜಾರಿಗೆ ಬರುತ್ತೆ. ದಕ್ಷಿಣ ಭಾರತದ ಸುಪ್ರಸಿದ್ಧ ಹಿಂದೀ ಪ್ರಚಾರಕರೂ, ವಾಗ್ಮಿಗಳೂ ಲೇಖಕರೂ ಆದ ಶ್ರೀ. ಸತ್ಯ ಪ್ರೇಮ ಪರಿವ್ರಾಜಕರು ಮೈಸೂರು ಸಂಸ್ಥಾನದ ಕೆಲವು ಭಾಗಗಳಲ್ಲಿ ಸಂಚರಿಸಿ ಹಿಂದೀ ಅವಶ್ಯಕತೆ ತಿಳಿಸಿ ಭಾಷಣ ಮಾಡಿದರು. ಅಖಿಲ ಮೈಸೂರು ವೀರ ಶೈವರ ಸಮ್ಮೇಳನವೊಂದನ್ನು ಗುಂಡ್ಲು ಪೇಟೆ ತಾಲ್ಲೂಕ್ಕಿನಲ್ಲಿ ಇದೇ ಮಾಹೆ ತಾ 16ರಲ್ಲಿ ನಡೆಸಲಾಗುತ್ತದೆ. ದಿವಾನರನ್ನು ಇದರ ಆರಂಭೋತ್ಸವ ನಡೆಸುವಂತೆ ಏರ್ಪಾಡು ಮಾಡಲಾಗುತ್ತಿದೆ. ಬೆಂಗಳೂರು ನಗರದಲ್ಲಿರುವಂತೆ ಮೈಸೂರು ನಗರದಲ್ಲೂ ಸಹ ಮೋಟಾರ್ ಬಸ್ ಸರ್ವಿಸನ್ನು ಒಂದು ಜಾಯಿಂಟ್ ಸ್ಟಾಕ್ ಕಂಪನಿಗೆ ಕೊಡಲಾಗುವುದೆಂದು ವದಂತಿ. ಇದೇ ಮಾಹೆ ತಾ 10ರಿಂದ ಮೈಸೂರು ಯಸ್. ಯ. ಯಲ್. ಸಿ. ಪಬ್ಲಿಕ್ ಪರೀಕ್ಷೆಯು ಸಂಸ್ಥಾನಾದ್ಯಂತದಲ್ಲೂ ನಡೆಯುತ್ತಿತ್ತು, ಆದರೆ ಹೊಸ ಸ್ಕೀಂನ ವಿದ್ಯಾರ್ಥಿಗಳ ಇಂಗ್ಲಿಷ್ ದ್ವಿತೀಯ ಪತ್ರಿಕೆಯ ಪ್ರಶ್ನೆಗಳು ಬಹಿರಂಗವಾಯಿತೆಂದು ಆ ದಿನ ಪರೀಕ್ಷೆ ನಡೆಸದೆ 12ನೇ ತಾರೀಕಿಗೆ ಮುಂದುವರಿಸಿದರು. ಮೈ. ಕಾಂಗ್ರೆಸ್ ತೃತೀಯ ಅಧಿವೇಶನವನ್ನು ಶಿವಮೊಗ್ಗಾ ತುಂಗಭದ್ರಾ ನದಿ ಬಳಿ ನಡೆಸುತ್ತಾರಂತೆ. ಗತಿಸಿದ ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವವನ್ನು ಮೈಸೂರು ನಗರದ ವಿವಿಧ ಭಾಗಗಳಲ್ಲಿ ಸಭೆ ನಡೆಸಿ ಆಚರಿಸಲಾಗುವುದಲ್ಲದೆ ಇದೇ ಮಾಹೆ ತಾ 11ರಲ್ಲಿ ರಾಮಕೃಷ್ಣಾಶ್ರಮದಲ್ಲಿ ಶ್ರೀಮನ್ ಮಹಾರಾಜರ ಪ್ರೈವೇಟ್ ಸೆಕ್ರೆಟರಿ ಸರ್. ಚಾರಲ್ಸ್ ಟಾಟೆನ್‌ಹಂಟರ್ ರವರ ಅಧ್ಯಕ್ಷತೆಯಲ್ಲಿ ಆಚರಿಸಲಾಗುತ್ತೆ.

ದಿವಂಗತ ಮಹಿಳಾ ಲೇಖಕಿಗೆ ಬಹುಮಾನ—ಮದ್ರಾಸ್ ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರು, ದಿವಂಗತ ಸೌ॥ ಗೌರಮ್ಮ (ಮಿಸೆಸ್ ಬಿ. ಟಿ. ಜಿ. ಕೃಷ್ಣ)ನವರ "ಕಂಬನಿ" ಗ್ರಂಥಕ್ಕೆ ರೂ. 25ನ್ನು ಬಹುಮಾನ ಕೊಟ್ಟಿದ್ದಾರೆಂದು ತಿಳಿಯುವುದು.

ಬೊಂಬಾಯಿ ಪತ್ರ

ದುಃಖಸೂಚಕ ಸಭೆ—ಹಲವು ವರುಷಗಳಿಂದ ಮೂಲ್ಕಿ ಬೋರ್ಡುಹಾಯರ್ ಎಲಿಮೆಂಟರಿ ಶಾಲಾ ಹೆಡ್‌ಮಾಸ್ತರರಾಗಿದ್ದು, ಜನಪ್ರೀತರೂ, ಉದಾರಿಗಳೂ ಆಗಿ, ತನ್ನ ನಿಸ್ವಾರ್ಥಮಯ ಸೇವೆ ದಿಂದಾಗಿ ವಿದ್ಯಾರ್ಥಿಗಳ ಸಹೋದ್ಯೋಗಿಗಳ ಹಾಗೂ ಊರ ಪ್ರಮುಖರಾದವರಾಗಿ ಎಲ್ಲರ ಪ್ರೀತಿ ಆದರ ಗೌರವ, ಪ್ರಶಂಸೆಗಳಿಗೆ ಪಾತ್ರರಾಗಿ ಎಲ್ಲರಿಂದಲೂ ಮೆಚ್ಚುಗೆಯನ್ನು ಪಡೆದ ಶ್ರೀಮಾನ್ ಕಾರ್ನಾಡ ಸಂಜೀವರಾಯರು ಕೆಲವು ಸಮಯದಿಂದ ದೇಹಾಲಸ್ಯದಲ್ಲಿದ್ದು ನೊನ್ನೆ ತಾ. 17-2-'40ರಲ್ಲಿ ತಮ್ಮ ಅಲ್ಪ ಪ್ರಾಯದಲ್ಲೇ ಪರಂಧಾಮವನ್ನೈದಿದ ವಿಷಾದಮಯ ವಾರ್ತೆಯನ್ನು ತಿಳಿದು ಈಗ ಬೊಂಬಾಯಿಯಲ್ಲಿರುವ ಸದರಿ ಶಾಲಾ ಹಳೆಯ ವಿದ್ಯಾರ್ಥಿಗಳು ತಾ. 24-2-'40ರಲ್ಲಿ ಮೊಗವೀರ ಧರ್ಮಾರ್ಥ ರಾತ್ರಿ ಶಾಲಾ ಮಂದಿರದಲ್ಲಿ ಒಂದು ದುಃಖ ಪ್ರದರ್ಶನ ಸಭೆಯನ್ನು ಜರಗಿಸಿದರು.

ದಿ. ಕೆನರಾ ಕುಲಾಲರ ಸುಧಾರಕ ಸಂಘ ಮುಂಬಾಯಿ — ಇದರ 10ನೇ ವಾರ್ಷಿಕ ಸಭೆಯು ತಾ 2-2-40ರಲ್ಲಿ ಪಿ (ಗ್ರಾಂಟ್ ರೋಡ್) ಶ್ರೀಯುತ ಮಂಜಪ್ಪ ಎ. ಸಾಲ್ಯಾನ್‌ರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಸಭೆಯಲ್ಲಿ ನೆರೆದಿದ್ದ ಮಹನೀಯರಲ್ಲಿ ಅನೇಕರು ಸಂಘದ ಅಭಿವೃದ್ಧಿಯ ಕುರಿತು ಭಾಷಣ ಮಾಡಿದರು.

ಅರುಣೋದಯ ಫುಟ್ ಬಾಲ್ ಕ್ಲಬ್— ಇದರ ಮಹಾಸಭೆಯು ತಾ 25-2-'40ರಲ್ಲಿ ಶ್ರೀಯುತ, ಯು. ಕೆ. ರಂಗನವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರ ಪೈಕಿ. ಶ್ರೀ. ಜೆ. ಪಿ. ಸಿಕ್ವೇರ, ಎ. ಜಿ. ಕರ್ಕೇರ, ಎ. ಯಸ್. ಕರ್ಕೇರ, ಮಹಾಬಲ ಶೆಟ್ಟಿಯವರು ಸಂಘದ ಕುರಿತು ಕೆಲ ಕೆಲವು ವಿಷಯಗಳನ್ನು ಕುರಿತು ಮಾತನಾಡಿದರು. ಬಳಿಕ ಅಧ್ಯಕ್ಷರು ಅಮೋಘ ಭಾಷಣ ಮಾಡಿದರು. ಕೊನೆಗೆ ಹಾಲಿ ವರ್ಷದ ಕಾರ್ಯಕಾರಿ ಮಂಡಳಿಯನ್ನು ರಚಿಸಲಾಯಿತು.



ರೂ. 1—8—0ಕ್ಕೆ
3 ವಾಚುಗಳೂ, 1295 ಸೋಕಿನ ಇನಾಮುಗಳೂ

ಕೀಸೆ ಒಂದರ ರೂ. 1-8-0ಯಂತೆ ಒಮ್ಮೆಯೇ 10ಕೀಸೆ ಸುವಾಸನಾ ಒಟೋರೋಸ್ ಪರಿಮಳ ದ್ರವ್ಯವನ್ನು ಕೊಂಡುಕೊಳ್ಳುವವರಿಗೆ ಗಿಲ್ಟಿನ ಬೆವ್ಹೆ ಗೋಲ್ಡ್ ರಿಸ್ಟ್‌ವಾಚ್, ಸೆಟ್ಟಿ ವಾಚು, ಬಾಂಡ್‌ವಾಚ್ ಸೆಟ್ಟು, ಕ್ರೈಸ್ಟ್‌ಟ್ಯೂಮ್, ಡಬ್ಬಿ ಪಾಕೆಟ್‌ವಾಚ್, ಸೇಫ್ಟಿರೇಜರ್, ಬಾಚಣಿಗೆ, ಸೇವಿಂಗ್ ಸೋಪು, ಸೇವಿಂಗ್ ಬ್ರಶ್, ಕನ್ನಡಿ, ಪೌಡರ್ ಪಕೇಟು, ಕೈಫು ಸಮೇತ ಪಿನ್ನಿಲು, ಸಿಗರೇಟ್ ಕೇಸ, ಸಿಗರೇಟು ಲೈಟರ್, ಅಂಗವಸ್ತ್ರ, ಉಂಗುರ, ಕತ್ತರಿ, 555 ಆದಿ ಮಾದಿ ಪ್ರಕಾರ ಕೊಡುವ ಟೋರ್ಚ್‌ಲೈಟ್ ಅಥವಾ ಐದು ವರ್ಷ ಗ್ಯಾರಂಟಿಯುಳ್ಳ ಟೈಮ್‌ಪೀಸು ಧರ್ಮಾರ್ಥವಾಗಿ ಕೊಡಲಾಗುವುದು. ಪೋಸ್ಟೇಜು ಮತ್ತು ಪ್ಯಾಕಿಂಗ್ 12ಆಣೆ ಪ್ರತ್ಯೇಕ. ಇಂದೇ ಬರೆಯಿರಿ.

THE FRENCH WATCH CO.
Post Box No. 12216 Calcutta (N. G.)

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೭-೩-'೪೦

ಕೇಂದ್ರ ಸರಕಾರದ ಆಯವ್ಯಯ ಪಟ್ಟಿ

ಇಂಡಿಯಾ ಸರಕಾರದ 1940-41ರ ಆಯವ್ಯಯ ಅಂದಾಜು ಪಟ್ಟಿಯ ಮೇರೆಗೆ ವ್ಯಯವು ಆಯಕ್ಕಿಂತ ರೂ.7,1600000 ಕಡಿಮೆಯಾಗುವುದು. ಒಟ್ಟು ಆದಾಯ ರೂ. 85,4300,000 ವೆಚ್ಚ ರೂ. 92,59,00,000, ಕಡಿಮೆ ಬಿದ್ದಿರುವ ರೂ. 7,16.00 000ವನ್ನು ಈ ಕೆಳಗಣ ರೀತಿಯಲ್ಲಿ ಭರ್ತಿ ಮಾಡಬೇಕೆಂದು ಅರ್ಥ ಸಚಿವರಾದ ಸರ್ ಜೆರ್ಮಿ ರೈಸ್ಮನರು ಸೂಚಿಸಿರುವರು. ರಿಸರ್ವ್ ಫಂಡಿನ ಉಳಿತಾಯದಿಂದ ರೂ. 91 ಲಕ್ಷವನ್ನು ತೆಗೆಯುವುದು. ಅತಿ ಲಾಭದ ಮೇಲಿನ ತೆರಿಗೆಯಿಂದ ರೂ. 3 ಕೋಟಿ ದೊರೆಯುವುದೆಂದು ಅಂದಾಜು ಮಾಡಲಾಗಿದೆ. ಸಕ್ಕರೆಯ ಮೇಲಿನ ತೆರಿಗೆಯನ್ನು ಮತ್ತು ಪರದೇಶಿ ಸಕ್ಕರೆಯ ಮೇಲಿನ ಕರವನ್ನು ಹಂಡ್ರೆಡ್ ವೇಟೊಂದರ ರೂ. 2ರಿಂದ 3ಕ್ಕೇರಿಸಲಾಗುವುದು. ಇದರಿಂದ ರೂ. 190 ಲಕ್ಷ ದೊರೆಯಬಹುದೆಂದು ಲೆಕ್ಕ ಹಿಡಿಯಲಾಗಿದೆ. ಪೆಟ್ರೋಲ್ ಗೇಸಿನ ಮೇಲಿನ ಕರವನ್ನು 10ರಿಂದ 12 ಆಣೆಗಳಿಗೇರಿಸಲಾಗುತ್ತದೆ. ಇದರಿಂದ ರೂ. 1,40,00,000 ದೊರೆಯುವುದೆಂದು ತೆಗೆದುಕೊಳ್ಳಲಾಗಿದೆ. ಇದನ್ನೆಲ್ಲಾ ಸೇರಿಸಿದರೆ ಬರುವ ವರ್ಷದಲ್ಲಿ ರೂ. 5 ಲಕ್ಷದಷ್ಟರ ಉಳಿತಾಯ ದೊರೆಯುವುದು. ಆದಾಯ ತೆರಿಗೆಯನ್ನೇನೂ ಏರಿಸಲಿಲ್ಲ. ಆದರೆ ಯುದ್ಧವು ಭರದಿಂದ ನಡೆದರೆ ಅದರ ವೆಚ್ಚಕ್ಕಾಗಿ ಹೆಚ್ಚಿನ ತೆರಿಗೆ ತೆರಲು ಹಿಂದೀಯರು ಸಿದ್ಧರಿರಬೇಕೆಂದು ಅರ್ಥಸಚಿವರು ಎಚ್ಚರವಿತ್ತಿರುವರು. ಇನ್ನೂ ಯುದ್ಧವೇನೂ ಆರಂಭವಾಗಿಲ್ಲೆಂದು ಹೇಳಬಹುದು. ಪ್ರಚಂಡ ಹೋರಾಟ ಆರಂಭವಾದರೆ ಹಿಂದೀಯರ ಮೇಲೆ ಕೆಲವೇ ತಿಂಗಳುಗಳಲ್ಲಿ ಹೊಸ ಕರವು ಹೊರಿಸಲ್ಪಡುವದು ನಿಶ್ಚಯ.

ಹಿಂದೀಯರೇಕೆ ಹಣ ತುಂಬಿಸಬೇಕು?

ಎಲ್ಲಕ್ಕಿಂತಲೂ ಮೊದಲಾಗಿ ಹಣದ ಕೊರತೆಯನ್ನು ಭರ್ತಿ ಮಾಡಲು ಹೊಸತಾಗಿ ಹೊರಿಸಲ್ಪಡುವ ತೆರಿಗೆಗಳಿಂದ ಜನತೆಯು ಸಂತಪ್ತರಾಗುವುದು ಸ್ವಾಭಾವಿಕವಾಗಿದೆ. ತೆರಿಗೆಗಳನ್ನು ಯಾವ ರೀತಿಯಲ್ಲಿ ಏರಿಸಿದರೂ ಅದು ಒಂದಲ್ಲೊಂದು ರೀತಿಯಲ್ಲಿ ಬೀಳುವುದು ಬಡಜನರ ತಲೆಯ ಮೇಲೆ. ಹಿಂದೀ ಜನಸಾಮಾನ್ಯರ ಬಡತನವು ಇಡೀ ಲೋಕದಲ್ಲೇ ಅಮೋಘ ದಾಖಲೆಯಾಗುವಷ್ಟರ ಸ್ಥಿತಿಗೆ ಮುಟ್ಟಿದೆ. ತೆರಿಗೆ ತೆರುವ ಶಕ್ತಿಯು ಪರಮಾವಧಿಯು ಮುಟ್ಟಿರುವಾಗ ಅದರ ಮೇಲೆ ಸ್ವಲ್ಪ ಹೆಚ್ಚು ಹೊರಿಸಿದರೂ ಅಸಹನೀಯವಾಗುವುದು. ಇದು ಹೊರತು 1940-41ರ ಆಯವ್ಯಯ ಪಟ್ಟಿಯಲ್ಲಿ ವೆಚ್ಚವು ಹೆಚ್ಚಾಗಲು ಯುದ್ಧವೇ ಮುಖ್ಯ ಕಾರಣ. ಈ ಯುದ್ಧಕ್ಕೂ ಹಿಂದೂ ದೇಶಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಅದರ ಪರಿಣಾಮವಾಗಿ ಹಿಂದೀಯರು ಸಂಪೂರ್ಣ ಸ್ವಾತಂತ್ರ್ಯ ಪಡೆಯುವ ಸಂಭವ ತೋರುವುದಿಲ್ಲ. ಅವರು ಅದಕ್ಕಾಗಿ ಪ್ರತ್ಯೇಕ ಹೋರಾಟ ನಡಿಸದೆ ನಿರ್ವಾಹವಿಲ್ಲೆಂಬ ಪರಿಸ್ಥಿತಿಯುಂಟಾಗಿರುವುದು. ಅಂದ ಮೇಲೆ ಯುರೋಪಿನಲ್ಲಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಅಸ್ತಿತ್ವವನ್ನು ಸ್ಥಿರಗೊಳಿಸಲು ಹೂಡಲ್ಪಟ್ಟಿರುವ ಯುದ್ಧಕ್ಕಾಗಿ ಬಡ ಹಿಂದೀಯರೇಕೆ ಹಣ ತುಂಬಿಸಬೇಕೆಂಬ ಪ್ರಶ್ನೆಯು ಅವರನ್ನು ಮತ್ತಷ್ಟು ಸಂತಪ್ತರನ್ನಾಗಿ ಮಾಡದಿರಲಾರದು.

ಎಷ್ಟೆಂದು ದೇವರೇ ಬಲ್ಲ!

ಕೇಂದ್ರ ಸರಕಾರದ ಆದಾಯದಲ್ಲಿ ಸೇಕಡ 60ರಷ್ಟನ್ನು ಸೇನಾ ಖಾತೆಯೊಂದೇ ನುಂಗುತ್ತಿತ್ತು. ಈ ಕುರಿತು ಹಿಂದೀಯರು ಎಡೆಬಿಡದೆ ಚಳವಳಿಸಿದ ಪರಿಣಾಮವಾಗಿ ಚೇಟ್‌ಫೀಲ್ಡ್ ವರದಿಯಲ್ಲಿ ಅದನ್ನು ರೂ. 45 ಕೋಟಿಗಿಂತ ಹೆಚ್ಚಿಸಲಾಗದೆಂದು ಸೂಚಿಸಲಾಗಿತ್ತು. ಆದರೆ ಸರ್ ಜೆರ್ಮಿ ರೈಸ್ಮನರು ಈ ಸೂಚನೆಯನ್ನೂ ಮೂಲೆಗೊತ್ತಿರುವರು. ಬಾಹ್ಯ ರಕ್ಷಣೆಗೆ ಹಿಂದೀ ಸೇನೆಯ ಹತ್ತನೇ ಒಂದಂಶವನ್ನು ಮಾತ್ರವೆ ಉಪಯೋಗಿಸಬೇಕೆಂದು ಮೊದಲೇ ನಿಶ್ಚೈಸಲ್ಪಟ್ಟಿರುವುದು. ಇಂದೀಗ ಹಿಂದೂದೇಶಕ್ಕೂ ಜರ್ಮನಿಗೂ ಯಾವ ಕಲಹವೂ ಇರುವುದಿಲ್ಲ. ಇಂಗ್ಲೆಂಡಿನ ಅಧೀನತೆಯಿಂದಾಗಿ ಹಿಂದೂದೇಶವು ಜರ್ಮನಿಯೊಡನೆ ಯುದ್ಧಕ್ಕೆಳೆಯಲ್ಪಟ್ಟಿದ್ದಾಗಿದೆ. ಆದುದರಿಂದ ಹಿಂದೂದೇಶದಿಂದ ಇಂಗ್ಲೆಂಡಿನ ರಕ್ಷಣೆಗಾಗಿ ಕಳುಹಿಸಲ್ಪಡುವ ಸೇನೆಯ ವೆಚ್ಚವನ್ನೆಲ್ಲಾ ಬ್ರಿಟಿಷ್ ಸರಕಾರವೇ ವಹಿಸುವುದು ನ್ಯಾಯವಾಗಿದೆ. ಅದು ಬಿಟ್ಟರೂ ಬ್ರಿಟಿಷ್ ಸರಕಾರವೇ ನಿಶ್ಚೈಸಿದ ಮೇರೆಗೆ ಹತ್ತರಲ್ಲೊಂದಂಶ ಹಿಂದೀ ಸೇನೆಯು ಮಾತ್ರ ದೇಶದ ಬಾಹ್ಯರಕ್ಷಣೆಗಾಗಿ ಕಳುಹಿಸಲ್ಪಟ್ಟ ಅದರ ವೆಚ್ಚವನ್ನಷ್ಟೇ ಹಿಂದೂದೇಶವು ವಹಿಸತಕ್ಕದ್ದು. ಅದಕ್ಕಿಂತ ಹೆಚ್ಚಾಗಿ ಕಳುಹಿಸಲ್ಪಡುವ ಹಿಂದೀ ಸೇನೆಯ ವೆಚ್ಚವನ್ನೆಲ್ಲಾ ಬ್ರಿಟಿಷ್ ಸರಕಾರವೇ ತೆರತಕ್ಕದ್ದು. ಆದರೆ ಚೆಟ್‌ಫೀಲ್ಡ್ ವರದಿಯ ನಿರ್ಣಯಗಳನ್ನೆಲ್ಲಾ ಅರ್ಥ ಸಚಿವರು ಮೂಲೆಗೊತ್ತಿರುವಂತಿದೆ. ಹಾಲ್ತಿ ವರ್ಷದಲ್ಲಿ ಯುದ್ಧಕ್ಕಾಗಿ ಹಿಂದೂ ದೇಶವು ರೂ. 3,86,00,000 ವ್ಯಯಿಸಬೇಕಾಗಿದೆ, ಬರುವ ವರ್ಷ ಇದು ರೂ. 6,59,00,000ಕ್ಕೇಳುವುದು. "ಮೂರನೆ ವರ್ಷ ಇದೆಷ್ಟಕ್ಕೇರುವುದೆಂದು ದೇವರಿಗೇ ಗೊತ್ತು! ಎಂದು ಸರ್ ಜೆರ್ಮಿ ರೈಸ್ಮನರು ಉದ್ಗಾರವೆತ್ತಿರುವರು. ಹಿಂದೂದೇಶದಿಂದ ಹೊರಗೆ ಎಷ್ಟು ಸೇನೆಯನ್ನು ಕಳುಹಿಸಿದರೂ ಅದರ ವೆಚ್ಚವನ್ನೆಲ್ಲಾ ಹಿಂದೀಯರೇ ವಹಿಸಬೇಕೆಂದು ಅರ್ಥ ಸಚಿವರ ಅಭಿಪ್ರಾಯವಿದ್ದಂತಿದೆ. ಈಗ ಹೊರಗೆ ಕಳುಹಿಸಲ್ಪಟ್ಟಿರುವ ಹಿಂದೀ ಸೇನೆಯ ಹೆಚ್ಚಿನ ವೆಚ್ಚಕ್ಕಾಗಿ ರೂ. 1 ಕೋಟಿಯನ್ನು ಹಿಂದೀ ಸರಕಾರವು ತೆರಬೇಕೆಂಬ ಅರ್ಥವಾದರೂ ಏನೆಂದು ನಮಗೆ ತಿಳಿಯದು.

ವೈಸರಾಯರು ಯುದ್ಧ ಫಂಡನ್ನು ಸ್ಥಾಪಿಸಿ ಹಳ್ಳಿ ಮೂಲೆಗಳ ಜನರಿಂದಲೂ ಜಿಲ್ಲಾ ಕಲೆಕ್ಟರರೇ ಮೊದಲಾದ ಅಧಿಕಾರಿಗಳು ಹಣ ಸಂಗ್ರಹಿಸಹತ್ತಿರುವರು. ಈ ಹಣವು ಕೆಲವು ಕೋಟಿಗಳಾಗದಿರಲಾರದು. ಇದು ಹೊರತು ಹಿಂದೂ ದೇಶದಿಂದ ಇಂಗ್ಲೆಂಡಿಗಾಗಿ ಹೊರಗೆ ಕಳುಹಿಸಲ್ಪಡುವ ಸೇನೆಯ ವೆಚ್ಚವನ್ನು ತೆರಬೇಕು. ಇದು ಕಡೆಗೆ ಎಷ್ಟಾಗುವುದೆಂದು ಈಗ ಹೇಳಲು ಸಾಧ್ಯವಿಲ್ಲ. ಆದುದರಿಂದಲೇ ಅರ್ಥಸಚಿವರು 'ದೇವರಿಗೆ ಗೊತ್ತೆಂದು' ಮಾತ್ರ ಹೇಳಿ ಮುಗಿಸಿರುವರು. ಪ್ರಾಂತಕ್ಕೆ ಸಲಬೇಕಾದ ಸೇಕಡ 50ರಷ್ಟರ ಆದಾಯ ತೆರಿಗೆಯ ಪಾಲನ್ನು ಕೇಂದ್ರ ಸರಕಾರವು ಅನ್ಯಾಯವಾಗಿ ತಾನೇ ಅಪಹರಿಸಿಕೊಂಡಿರುವುದು. ಹಿಂದೀ ನಾಣ್ಯ ವಿನಿಮಯದ ಜಾದುವಿದ್ಯೆಯಿಂದ ಹಿಂದೂ ದೇಶಕ್ಕೆ ಎಷ್ಟೊಂದು ನಷ್ಟವುಂಟಾಗುವುದೆಂದು ಹೇಳಬರುವುದಿಲ್ಲ. ಆವಶ್ಯಕತೆಯು ಯಾವ ರೀತಿ ನಿಯಮವನ್ನೂ ಅರಿಯದು ಎಂಬ ತತ್ವದಂತೆ ಸರ್. ರೈಸ್ಮನರು ನಡೆದಿರುವರೇ ಹೊರತು ಪ್ರಜಾ ಜವಾಬ್ದಾರಿಯುಳ್ಳ ಅರ್ಥಸಚಿವರಂತೆ ವರ್ತಿಸಿರುವುದಿಲ್ಲ. ಯುದ್ಧವು ಇದೇ ರೀತಿ ಮುಂದುವರಿದರೆ ಹಿಂದೀಯರ ಮೇಲೆ ಇನ್ನೆಂತಹ ಬರಾವತವು ಎರಗಲಿರುವುದೋ?

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಪಾಟ್ನದಲ್ಲಿ ಫೆಬ್ರುವರಿ ತಾ. ೨೮ ಮತ್ತು ಮಾರ್ಚಿ ತಾ. 1ರಲ್ಲಿ ನಡೆದು, ರಾಮಗಢ ಕಾಂಗ್ರೆಸಿನ ಮುಂದಿರಿಸುವ, ದೇಶದ ರಾಜಕೀಯ ಪರಿಸ್ಥಿತಿಯ ಸಂಬಂಧವಾದ ಪ್ರಮುಖ್ಯ ನಿರ್ಣಯದ ಖರಡನ್ನು ತಯಾರಿಸಿ ಪ್ರಕಟಿಸಿರುವುದು. ಈ ನಿರ್ಣಯವು, ಈ ವರೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ವಹಿಸಿದ ಧೋರಣೆಯನ್ನು ಪುಷ್ಟೀಕರಿಸುವಂತಹದಿರುವುದು. ಹಿಂದೀ ಜನತೆಯ ಸಮ್ಮತಿಯ ವಿನಹ ಹಿಂದೂ ದೇಶವನ್ನೂ ತನ್ನ ಸಾಮ್ರಾಜ್ಯಶಾಹಿಯನ್ನೂ ಬಲಗೊಳಿಸುವ ಯುದ್ಧಕ್ಕೆಳೆದು ಅದರ ಸಂಪತ್ತನ್ನು ಯುದ್ಧಕ್ಕಾಗಿ ಸೂರೆ ಮಾಡಿರುವ ಬ್ರಿಟಿಷ್ ಸರಕಾರದ ಧೋರಣೆಯು ಅನ್ಯಾಯ ಮತ್ತು ರಾಷ್ಟ್ರದ ಗೌರವಕ್ಕೆ ಹಾನಿಯಿರುವುದರಿಂದ ಅದನ್ನು ಕಾಂಗ್ರೆಸು ನಿಷೇಧಿಸುತ್ತದೆ. ಯುದ್ಧಕ್ಕಾಗಿ ಹಿಂದೂದೇಶದಿಂದ ಹೋಗುವ ಹಣ ಮತ್ತು ಜನಸಹಾಯವು ಜನತೆಯ ಇಚ್ಛಾಪೂರ್ವಕವಾದುದಲ್ಲೆಂದು ವ್ಯಕ್ತಪಡಿಸುತ್ತದೆ. ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆಯಾದುದನ್ನೇನಾದರೂ ಹಿಂದೂ ದೇಶವು ಸ್ವೀಕರಿಸಲಾರದು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅಧೀನದೊಳಗಿನ ಯಾವ ಸ್ಥಾನಕ್ಕಾದರೂ ಅದು ಒಪ್ಪಲಾರದು. ಪ್ರಾಯಸ್ಥರೆಲ್ಲರ ಮತಪಡೆದು ಆರಿಸಲ್ಪಡುವ ಜನಪ್ರತಿನಿಧಿ ಸಭೆಗೆ ಹಿಂದೂ ದೇಶದ ರಾಜಕೀಯ ಘಟನೆಯನ್ನು ತಯಾರಿಸುವ ಹಕ್ಕಿರಬೇಕು. ಅಲ್ಪಸಂಖ್ಯಾಕ ಸಮಾಜಗಳೊಡನೆ ಒಡಂಬಡಿಕೆ ಮಾಡಿಕೊಂಡು ಅವರನ್ನು ಸಮಾಧಾನ ಪಡಿಸಲು, ಕಾಂಗ್ರೆಸು ಯಾವಾಗಲೂ ಸಿದ್ಧವಿರುವುದು. ಒಡಂಬಡಿಕೆಯು ಅಸಾಧ್ಯವಾದಲ್ಲಿ ಮಧ್ಯಸ್ಥಿಕೆಯಿಂದ ಅಲ್ಪಸಂಖ್ಯಾಕ ಪ್ರಶ್ನೆಯನ್ನು ಇತ್ಯರ್ಥ ಪಡಿಸಬಹುದು. ಹಿಂದೀ ರಾಜಕೀಯ ಘಟನೆಯು ಸಂಪೂರ್ಣ ಸ್ವಾತಂತ್ರ್ಯ ಪ್ರಜಾಸತ್ತೆ ಮತ್ತು ರಾಷ್ಟ್ರೀಯ ಐಕ್ಯದ ತಳಹದಿಯ ಮೇಲೆ ರಚಿಸಲ್ಪಡತಕ್ಕದ್ದು. ಹಿಂದೂದೇಶವನ್ನು ವಿಭಾಗಿಸುವ ಅಥವಾ ಅದರ ರಾಷ್ಟ್ರೀಯತೆಯನ್ನು ಶಿಥಿಲಗೊಳಿಸುವ ಯತ್ನವನ್ನು ಕಾಂಗ್ರೆಸು ವಿರೋಧಿಸುವುದು. ವ್ಯಕ್ತಿ ಮತ್ತು ಪಂಗಡದ ಬೆಳವಣಿಗೆಗೆ ಸಂಪೂರ್ಣ ಸಂದರ್ಭ ಮತ್ತು ಸ್ವಾತಂತ್ರ್ಯವನ್ನಿತ್ತು ಈಗಣ ಸಾಮಾಜಿಕ ವೈಷಮ್ಯವನ್ನು ತೆಗೆದು ಹಾಕಿ ನ್ಯಾಯವಾದ ವ್ಯವಸ್ಥೆಯನ್ನುಂಟು ಮಾಡುವುದೇ ಕಾಂಗ್ರೆಸಿನ ಉದ್ದೇಶ. ಆಡಳಿತದ ಸರ್ವಾಧಿಕಾರವು ಹಿಂದೀ ಜನತೆಯ ಕೈವಶವಾಗಬೇಕು. ಅವರ ಹಿತವಿಘಾತುಕವಾದ ದೇಶೀಯ ಸಂಸ್ಥಾನಾಧಿಪತಿಗಳ ಮನ್ನು ಯುರೋಪಿನರೇ ಮೊದಲಾದವರ ಸ್ವಾರ್ಥವನ್ನು ಕಾಂಗ್ರೆಸು ಮನ್ನಿಸಬಾರದು. ಹಿಂದೂ ದೇಶವನ್ನು

[Cut-off column at right edge, partially visible:]
ಪರಾಧೀನತೆ… ಸಾಧಿಸ… ಮುಂದೊ… ರಾಜನಾ… ದ ಪಕ್ಷ… ವೆ. … ದೆಂದು … ಹೋರಾಟ… ಡಿದರೆ ಕಾಂ… ವನ್ನು ಹೂ… ಕಾಂಗ್ರೆಸ… ಪಾಲಿಸಿ, … ಜಯಶೀಲ… ನು ಕಾಯ… ಜವಾಬ್ದಾರಿ… ಬ ಗಾಂಧಿಜ… ಗ್ರೆಸು ಜನ… ಕಾಂಗ್ರೆಸು … ವರ್ಗ ಜನ… ಅದು ಮಾತ್ರ…

FOR THE B…

TROPICA…
COMPAN…

Head Office: "TROPIC…
Chairman: SUB…

Mangalore Branch: "N…

OTHE…
BOMBAY, MADRAS, CALCU…
LAHORE, PESHA…
DECCA,

ದರೆ ಇದೀ … ನೆಯ ಹೋ… ಮತ್ತು ವ… "ಭಾಗವಹಿಸ… ಸ್ವಾತಂತ್ರ್ಯ… ಸ್ಥಿತಿಯ… ದಲ್ಲಿ ಕಾಂಗ್ರೆ… ಚಳವಳ … ರಿಂದ ಸ್ಪಷ್ಟ… ಗಾಂಧಿಜ … ಲರು ಕೊಟ್ಟ… ಮತ್ತಷ್ಟು … ತ್ವರಿಂದಿರು… ಮುಟ್ಟಿ, ಬಿ… ಬ್ರಿಟಿನರು … ತ್ರ್ಯಕ್ಕಾಗಿ … ಬನೀಯಬ… ದೆ, ಆದರೆ … ತ್ರ್ಯವನ್ನು … ವನ್ನು ಮೊ… ತ್ತದೆ. ಆಗ … ದ ಪ್ರಜಾಸ… ನೆಲೆಗೊ… ವುಕ್ಕದಾಗಿ…

ಸ್ವಾತಂತ್ರ್ಯ
ನಿರ್ಧಾರವನ್ನು
ಮಂತ್ರಿಗಳು
ಅನಂತರ
ಭಂಗ ಚಳ
ವಾಗಿರುವು
ಮಾನಗಳು
ಗಾಗಿ ಮಾ
ಯಿದೆ ಭಂಗ

ಶಿಷ್ಯನ್ನು
ಸುರುವನ್ನು
ದಿದ್ದರೆ ೩೦
ಹೂಡುವ
ಸಿದ್ಧವಿಲ್ಲೆಂ
ವನ್ನು ಕಾಂ
ತರುತ್ತದೆ.
ಮತ್ತು
ಸಂಸ್ಥೆ
ನಮರವೆಂ

ಬೊಂಬಾಯಲ್ಲಿ 1,30,000 ಮಜೂರರ ಮುಷ್ಕರ

ವೈಪುರಿಯು ಭೀಕರ ಸ್ಮಶಾನ ಸಮವಾಗಿದೆ.

ಬೊಂಬಾಯಿ ಗಿರಣಿ ಮುಷ್ಕರ

ಇದೇ ತಾ. 4ನೇ ಬೆಳಿಗ್ಗೆ ಬೊಂಬಾಯಿಯ ಗಿರಣಿ ಮುಷ್ಕರ ಆರಂಭವಾಗಿರುವುದು. ಗಿರಣಿ ಪ್ರದೇಶವೆಲ್ಲೆಲ್ಲಾ ಪೋಲೀಸ್ ಬಂದೋಬಸ್ತನ್ನಿಡಲಾಗಿದೆ. ಪರಿಸ್ಥಿತಿಯು ಶಾಂತವಾಗಿದೆ. ಬೆದರಿಕೆ ಹಾಕಿ ಗಲಾಟೆಮಾಡಿದುದಕ್ಕಾಗಿ ಇಷ್ಟರ ವರೆಗೆ 20ಮಂದಿ ದಸ್ತಗಿರಿಮಾಡಲ್ಪಟ್ಟಿರುವರು. ಬೊಂಬಾಯಿಯಲ್ಲಿರುವ 68 ಗಿರಣಿಗಳ ಪೈಕಿ 60 ಮುಚ್ಚಲ್ಪಟ್ಟಿವೆ. ಮತ್ತು ಸುಮಾರು 1,30,000 ಮಂದಿ ಮಜೂರರು ಮುಷ್ಕರ ಹಿಡಿದಿರುತ್ತಾರೆ. ಸ್ತ್ರೀಯರ ಎರಡು ಮೆರವಣಿಗೆಗಳನ್ನು ಪೋಲೀಸರು ತಡೆದು ನಿಲ್ಲಿಸಿ ಅನೇಲೆ ಮಜೂರ ಮುಖಂಡರ ಕೇಳಿಕೆ ಮೇರೆಗೆ ಸ್ತ್ರೀಯರು ಚದರಿ ಮನೆಗೆ ತೆರಳಿದರು. ಈ ಮುಷ್ಕರದಲ್ಲಿ ಸ್ತ್ರೀಯರು ಪ್ರಾಮುಖ್ಯ ಭಾಗವಹಿಸುತ್ತಿರುವರು. ಅವರೇ ಕೆಲವು ಗಿರಣಿಗಳ ಬಳಿ ನಿಂತು ಪಹರೆ ನಡಿಸುತ್ತಿರುವರು. ಡಿಲ್ಲಿ ಎಸೆಂಬ್ಲಿಯ ಮಜೂರ ಪರವಾದ ಮೆಂಬರರಾದ ಶ್ರೀ. ಎನ್. ಎಮ್. ಜೋಶಿಯು ಮರಂತಹ ಮಂದಗಾಮಿ ಮಜೂರ ಮುಖಂಡರು ಕೂಡಾ ಈ ಮುಷ್ಕರವನ್ನು ಸಮರ್ಥಿಸಿರುವರು.

FE POLICIES

NSURANCE

LIMITED

ILDING", New Delhi.

ANDRA BOSE

ILDING" Hampankatta.

HES:

TNA, LUCKNOW, JAIPUR,

POONA, MADURA

AD (SIND).

ವಿರೋಧ
ಜಾತಿ
ತ್ಸಾಹದಿಂದ
ಸಿರಿಕ್ಷೆ
ಪರಿ
ಪಕ್ಷ
ಭಂಗ
ನಿರ್ಣಯ
ಹೊರಕು
ದ್ವಾರಲಾ
ಅದನ್ನು
ಮಹಾ
ದ್ವಾರವನ್ನು
ಮನಸ್ಸಿಲ್ಲ.
ಸ್ವಾತಂ
ಬೆಂಬ
ಪಡುತ್ತಿ
ಸ್ವಾತಂ
ಉದ್ದೇಶ
ಳ್ಳಲೆಳಸು
ಹಿಜವಾ
ತಂತ್ರ್ಯವು
ನಿರ್ಧಾರ
ಸಯಾ

ವೈಪುರಿಯು ಸಂಪೂರ್ಣ ನಾಶ

ರಸ್ಯಾನರು ವೈಪುರಿಯನ್ನು ವಶಪಡಿಸಿಕೊಳ್ಳುತ್ತಿರುವರು. ಫಿನ್ನರು ಹಿಂದೆ ಸರಿದಿರುವರು. ಕರೇಲಿಯ ಭೂಕಂಠದ ಪಶ್ಚಿಮದಲ್ಲಿ ರಸ್ಯಾನರು ಪ್ರಚಂಡ ಧಾಳಿ ನಡಿಸಿ ಮುಂದೊತ್ತುತ್ತಿರುವರು ಫಿನ್ನರು ಹೆಜ್ಜೆ ಹೆಜ್ಜೆಗೂ ವೀರಾವೇಶದಿಂದ ಕಾದಾಡಿ ಸೋವಿಯೆಟ್ ಸೇನೆಗೆ ಹೆಚ್ಚಿನ ನಷ್ಟವನ್ನುಂಟುಮಾಡುತ್ತಿರುವರು. ವೈಪುರಿಯ ಭೀಕರ ಯುದ್ಧದಲ್ಲಿ ಒಟ್ಟು 17,000 ಮಂದಿ ಫಿನ್ನರು ಹತರಾಗಿರುವರೆಂದು ನಂಬಲಾಗಿದೆ. ಫಿನ್ಲೆಂಡಿನಂತಹ ಸಣ್ಣ ರಾಷ್ಟ್ರಕ್ಕೆ ಇದು ಅತಿ ದೊಡ್ಡ ನಷ್ಟವಾಗಿರುತ್ತಿದೆ. ಹಿಂದಿನಿಂದ ಕೋಟೆಕೊತ್ತಳಗಳನ್ನು ಕಟ್ಟಿ ಭದ್ರಗೊಳಿಸುವ ವರೆಗೆ ಫಿನ್ನರು ವೈಪುರಿಯನ್ನು ರಕ್ಷಿಸಬೇಕಾದುದರಿಂದ ಇಷ್ಟೊಂದು ಪ್ರಾಣಹಾನಿಗೆ ಕಾರಣ.

ವೈಪುರಿಯು ಘೋರ ಸ್ಮಶಾನಸದೃಶವಾಗಿದೆ. ಒಂದು ತಿಂಗಳ ಮೊದಲು ಅತಿ ಸುಂದರವಾಗಿ ಜನನಿಬಿಡವಾಗಿದ್ದ ಪಟ್ಟಣವು ಈಗ ಉರಿಯುವ ಅಗ್ನಿಕುಂಡದಂತಾಗಿದೆ. ರಸ್ಯಾನರ ವಿಮಾನಧಾಳಿಯಿಂದ ಹೆಚ್ಚಿನ ಕಟ್ಟಡಗಳೆಲ್ಲಾ ನಾಶವಾಗಿವೆ. ಫಿನ್ನರು ಹಿಂದೆ ಸರಿಯುವಾಗ ಉಳಿದ ಕಟ್ಟಡಗಳನ್ನೆಲ್ಲಾ ಸ್ಫೋಟಿಸೊಳಿಸಿ ರಸ್ಯಾನರಿಗೆ ಏನೂ ಸಿಗದಂತೆ ಮಾಡುತ್ತಿದ್ದಾರೆ. ಕಡೆಯ ವರೆಗೂ ಫಿನ್ನಿಶ್ ಧ್ವಜವು ಹಾರಾಡುತ್ತಿದ್ದ ವೈಪುರಿ ಕೋಟೆಯು ಕೂಡಾ ಸಂಪೂರ್ಣ ನಾಶವಾಗಿದೆ. ರಸ್ಯಾನರ ಈ ವಿಜಯವು ಫಿನ್ನರಿಗೆ ದೊಡ್ಡ ಪೆಟ್ಟಾಗಿದೆ. ಇನ್ನು ಎರಡು ವಾರಗಳೊಳಗೆ ಯುದ್ಧದ ಅದೃಷ್ಟವು ನಿಶ್ಚಯವಾಗುವುದು. ಈ ಎರಡು ವಾರಗಳಲ್ಲಿ ಫಿನ್ನರು ಸೋವಿಯೆಟ್ ಸೇನೆಯನ್ನು ತಡೆಗಟ್ಟಲು ಶಕ್ತರಾದರೆ ಮಾರ್ಚ್ ತಿಂಗಳಲ್ಲಿ ಬೀಳುವ ಮಂಜು ಮತ್ತು ಹಿಮಗಾಳಿಯು ಮತ್ತೆ ಅವರನ್ನು ರಕ್ಷಿಸಬಹುದು.

ಮದ್ರಾಸ್ ಬಜೆಟು

ಮದ್ರಾಸ್ ಸರಕಾರದ ಆಯವ್ಯಯ.

ಮದ್ರಾಸ್ ಸರಕಾರದ 1940-41ರ ಆಯವ್ಯಯ ಅಂದಾಜು ಪಟ್ಟಿಯು ಪ್ರಕಟವಾಗಿರುವುದು. ಆ ಪ್ರಕಾರ ರೂ. 82,000ದಷ್ಟರ ಚಿಕ್ಕ ಉಳಿತಾಯ ದೊರೆಯುವುದು. ಚಾಲ್ತಿ ವರ್ಷದಂತೆ ಬರುವ ವರ್ಷವು ರೂ. 70 ಲಕ್ಷದಷ್ಟರ ಕೇಂದ್ರದ ರಿಯಾಯತಿಕೊಡಲ್ಪಡುವುದು. 4 ಜಿಲ್ಲೆಗಳ ಮದ್ಯಪಾನ ನಿಷೇಧವನ್ನು ಯಥಾಪ್ರಕಾರ ಮುನ್ನಡೆಸಲಾಗುವುದು. ಆದರೆ ಇತರ ಜಿಲ್ಲೆಗಳಿಗೆ ಅದು ವ್ಯಾಪಿಸಲ್ಪಡುವುದಿಲ್ಲ. ಸೇಲ್ಸ್ ಟ್ಯಾಕ್ಸನ್ನು ಸೇಕಡ 5ರಿಂದ 2ಕ್ಕೆ ಇಳಿಸಲಾಗುವುದು. ಒಟ್ಟು ವ್ಯಾಪಾರವು ರೂ. 20,000 ಮತ್ತು 10,000ಗಳೊಳಗಾದರೆ ಅವರ ಮೇಲಿನ ತೆರಿಗೆ ದರವನ್ನು ರೂ. 5 ರಿಂದ 4ಕ್ಕಿಳಿಸಲಾಗಿದೆ. ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ಕೊಡಲ್ಪಡುವ ಟೀಚಿಂಗ್ ಗ್ರಾಂಟನ್ನು ಹೆಚ್ಚಿಸಲಾಗುವುದು ಹಿಂದೀ, ಸ್ಪಿನ್ನಿಂಗ್, ಮೊದಲಾದ ಹಿಂದಿನ ಸರಕಾರದ ಎಲ್ಲಾ ಯೋಜನೆಗಳು ಇದ್ದಕ್ಕಿದ್ದಂತೆ ನಡಿಸಲ್ಪಡುವವು. ರೂ. ಒಂದು ಕೋಟಿಯಷ್ಟರ ಸಾಲವನ್ನು ಪಡೆಯಲಾಗುವುದು. ಬರುವ ವರ್ಷದ ಒಟ್ಟು ಆದಾಯ ರೂ. 16,76,12,000. ವ್ಯಯ ರೂ. 16,75,30,000 ಎಂದು ಅಂದಾಜುಮಾಡಲಾಗಿದೆ.

ಬ್ರಿಟಿಷ್ ಸ್ಟೀಮರಿನ ಮೇಲೆ ಬೋಂಬು

ಇದೇ ತಾ. 2ರಲ್ಲು ದೋನಾಲಿ ಎಂಬ ಬ್ರಿಟಿಷ್ ಇಂಡಿಯಾ ಸ್ಟೀಮರಿನ ಮೇಲೆ ಜರ್ಮನ್ ವಿಮಾನಗಳು ಬೋಂಬೆಸೆದು ಸ್ಟೀಮರಿನ ಕೆಪ್ಟನ್ ಮತ್ತು 20 ಮಂದಿ ಬ್ರಿಟಿಷರೂ 88 ಮಂದಿ ಹಿಂದೀಯರೂ ಕೊಲ್ಲಲ್ಪಟ್ಟಿರುವರೆಂದು ತಿಳಿದು ಬಂದಿದೆ. ಈ ಹಡಗವು ಬೆಲ್‌ಜಿಯಮಿನ ಅಂಟ್ವರ್ಪಿನಿಂದ ಇಂಗ್ಲೆಂಡಿಗೆ ಹೋಗುತ್ತಿತ್ತು. ಇದರಲ್ಲಿ ಜರ್ಮನ್ ಸರಕಾರವು ಬಿಡುಗಡೆ ಮಾಡಿದ್ದ 143 ಮಂದಿ ಹಿಂದೀಯರಿದ್ದರು.

260 ಮಂದಿ ಚೀನೀಯರ ಜಲಸಮಾಧಿ

ಚೀನದ ಸಿಂಗ್‌ವು ಎಂಬ ನದಿಯಲ್ಲಿ ಮಚುವೆಯೊಂದು ಹೋಗುತ್ತಿದ್ದಾಗ ಥಕ್ಕನೆ ವಿಮಾನ ಧಾಳಿಯ ಎಚ್ಚರ ಕೊಡಲ್ಪಟ್ಟುದರಿಂದ ಹಡಗದೊಳಗಿದ್ದವರೆಲ್ಲಾ ದಿಗಿಲುಗೊಂಡು ಗೊಂದಲವುಂಟಾಗಿ ಮುಚುವೆಯು ಮಗುಚಿ ಬಿದ್ದು 260ಮಂದಿ ಮುಳುಗಿ ಹೋಗಿರುವರು.

ಟೆಪ್ಪಾಳು ವಿಮಾನ ನಾಶ

ಕರಾಚಿಯಿಂದ ಇಂಗ್ಲೆಂಡಿಗೆ ಟಪ್ಪಾಲನ್ನು ಮತ್ತು 4ಮಂದಿ ಪ್ರಯಾಣಿಕರನ್ನೊಯ್ಯುತ್ತಿದ್ದ ಹನಿಲನ್ ಎಂಬ ವಿಮಾನವು ಪರ್ಶಿಯಾದ ಬಳಿ "ಸಮುದ್ರಕ್ಕೆ ಬಿದ್ದು ನಾಶವಾಗಿರುವುದು. ಅದರೊಳಗಿನ ಪ್ರಯಾಣಿಕರ ಗತಿಯೇನಾಗಿರುವುದೆಂದು ತಿಳಿದಿಲ್ಲ ಅವರೊಳ್ಳೊಬ್ಬರು ಇತ್ತಲಾಗಿ ಇಂಡಿಯಾ ಕೌನ್ಸಿಲ್ ಮೆಂಬರರಾಗಿ ನೇಮಿಸಲ್ಪಟ್ಟಿದ್ದ ಸರ್. ಪನ್ನೀರ್ ಸಲ್ವಮರು.

ಸಂಧಿಯ ಪ್ರಯತ್ನ

ಕಾಂಗ್ರೆಸ್ ಮತ್ತು ಬ್ರಿಟಿಷ್ ಸರಕಾರಗಳೊಳಗೆ ರಾಜಿಯಾಗುವ ಆಶೆಯು ದಿನೇ ದಿನೇ ಕಡಿಮೆಯಾಗುತ್ತಿರುವುದಾದರೂ ಕಾಂಗ್ರೆಸು ಸಂಧಾನದ ದ್ವಾರವನ್ನೇನೂ ಮುಚ್ಚಿ ಬಿಟ್ಟಿರುವುದಿಲ್ಲ. ಈಗಲೂ ಗಾಂಧಿಜಿ ಮತ್ತು ವೈಸರಾಯರೊಳಗೆ ಪತ್ರ ವ್ಯವಹಾರವು ನಡೆಯುತ್ತಿರುವುದೆಂದು ತಿಳಿದು ಬರುತ್ತದೆ. ವೈಸರಾಯರು ಪುನಃ ಗಾಂಧಿಯವರನ್ನು ಕರೆದು ಮಾತಾಡುವ ಸಂಭವವೂ ಇದೆ. ರಾಮಗಡ ಕಾಂಗ್ರೆಸ್ ಅಧಿವೇಶನದ ಮೊದಲು ಯಾವುದಾದರೊಂದು ರೀತಿಯ ನಿರ್ಧಾರವಾಗಬಹುದೆಂದು ನಂಬಲಾಗಿದೆ. ಹಿಂದೂದೇಶದ ಸ್ವಾತಂತ್ರ್ಯವನ್ನು ಬ್ರಿಟಿಷರೊಪ್ಪದೆ ಗಾಂಧಿಯವರು ಯಾವ ರಾಜಿ ಪ್ರಸ್ತಾಪಕ್ಕೂ ಸಿದ್ಧರಿಲ್ಲ. ಅದನ್ನೊಪ್ಪಿ ಕಾಂಗ್ರೆಸಿನೊಡನೆ ಒಡಂಬಡಿಕೆ ಮಾಡಿಕೊಳ್ಳಬೇಕೆಂದು ಕೆಲವು ಬ್ರಿಟಿಷ್ ಪತ್ರಿಕೆಗಳೇ ಪ್ರತಿಪಾದಿಸುತ್ತಿವೆ.

ಸಂಧಿ ವಿರೋಧ ಪರಿಷತ್ತು

ರಾಮಗಡ ಕಾಂಗ್ರೆಸಿನ ಸಂದರ್ಭದಲ್ಲಿ, ಸಂಧಿ ವಿರೋಧ ಪರಿಷತ್ತೊಂದನ್ನು ಜರಗಿಸಬೇಕೆಂದು ಶ್ರೀ. ಸುಭಾಷ ಚಂದ್ರ ಭೋಸರು ನಿರ್ಧರಿಸಿ ಅದಕ್ಕೆ ಸಿದ್ಧತೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಅಧಿವೇಶನ ನಡಿಯುವ ದಿನಗಳಲ್ಲೇ ಈ ಪರಿಷತ್ತು ಕೂಡಾ ನಡೆಯುತ್ತದೆ. ಇದಕ್ಕಾಗಿ ಕಾಂಗ್ರೆಸ್ ಚಪ್ಪರಕ್ಕಿಂತ ಸುಮಾರು ಒಂದುವರೆ ಮೈಲು ದೂರದಲ್ಲಿ ಪ್ರತ್ಯೇಕ ಚಪ್ಪರ ತಯಾರಾಗುತ್ತಿದೆ. ಈ ಪರಿಷತ್ತು ಕಾಂಗ್ರೆಸನ್ನೇ ವಿರೋಧಿಸುವ ಸ್ವರೂಪ ತಾಳಿರುವುದರಿಂದ ಅದರಲ್ಲಿ ತಾವು ಭಾಗವಹಿಸಲು ಸಿದ್ಧರಿಲ್ಲೆಂದು ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷದ ಜನರಲ್ ಸೆಕ್ರಿಟರಿಗಳಾದ ಶ್ರೀ ಜಯಪ್ರಕಾಶ ನಾರಾಯಣರು ಪ್ರಕಟಗೊಳಿಸಿರುತ್ತಾರೆ.

ರಸ್ಯವು ರಾಜಿಗೆ ಸಿದ್ಧವಿಲ್ಲ

ಈಗ ಸೋವಿಯೆಟ್ ಸೇನೆಯು ವೈಪುರಿಯನ್ನಾಕ್ರಮಿಸಿ ದೊಡ್ಡ ವಿಜಯಪಡೆದು ಕಳೆದುಕೊಂಡ ಪ್ರತಿಷ್ಠೆಯನ್ನು ಪುನಃ ಸ್ಥಾಪಿಸಿದುದರಿಂದ ಇನ್ನು ಮುಂದೆ ರಾಜಿಗೆ ಸಿದ್ಧವಿರಬಹುದೆಂಬ ಸುದ್ದಿಯುಂಟಾಗಿತ್ತು. ಜರ್ಮನಿಯ ಮಧ್ಯಸ್ತಿಕೆಯಿಂದ ಸಂಧಿಯಾಗಲಿದೆ. ಅಮೇರಿಕವು ಮಧ್ಯಸ್ತಿಕೆಯ ಯತ್ನದಲ್ಲಿದೆ. ಫಿನ್ಲೆಂಡನ್ನೆಲ್ಲಾ ಗೆದ್ದು ವಶಪಡಿಸಿಕೊಳ್ಳುವ ಉದ್ದೇಶವೇನೂ ಸ್ಟಾಲಿನರಿಗೆ ಕೂಡಾ ಇರುವುದಿಲ್ಲೆಂದೆಲ್ಲಾ ನಾನಾ ಸುದ್ದಿಗಳು ಹಬ್ಬಿದ್ದುವು. ಆದರೆ ಇದೇ ತಾ. 2ರಲ್ಲು ಮೋಸ್ಕೋ ರೇಡಿಯೋದಲ್ಲಿ ಪ್ರಕಟವಾದ ವಾರ್ತೆಯನ್ನು ನೋಡಿದರೆ, ಫಿನ್ಲೆಂಡಿನ ಈಗಣ ರಾಜ್ಯಭಾರವನ್ನು ಸಂಪೂರ್ಣವಾಗಿ ನಾಶಮಾಡಿಯೇ ಸಿದ್ಧವೆಂದು ಸೋವಿಯೆಟ್ ಸರಕಾರವು ನಿರ್ಧರಿಸುವಂತಿದೆ. "ಜನರಲ್ ಮೆನ್ನರ್‌ಹೈಮರ ಯಜಮಾನರು ಇಟ್ಟಿರುವಂತೇನೂ ಫಿನ್ನಿಶ್ ಯುದ್ಧವು ಕೊನೆಗೊಳ್ಳುವಹಾಗಿಲ್ಲ. 30ವರ್ಷಗಳ ಮೊದಲು ರಸ್ಯದಲ್ಲಿ ಕ್ರಾಂತಿಯುಂಟಾದಾಗ ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯವಾದಿಗಳು ವೈಟ್ ಗಾರ್ಡರು ಸಂಪೂರ್ಣ ನಾಶವಾಗದಂತೆ ರಕ್ಷಿಸಿದರು. ಅವರೆ ಪುನಃ ಅದು ಸಾಧ್ಯವಿಲ್ಲ" ಎಂಬುದು ಮೋಸ್ಕೋ ರೇಡಿಯೋ ಪ್ರಚಾರ. ಇದೇ ತಾ. 2ರಲ್ಲು ವೈಪುರಿಯ ಕೆಲವು ಭಾಗಗಳನ್ನು ರಸ್ಯಾನರು ವಶಪಡಿಸಿಕೊಂಡಿರುವರು. ಫಿನ್ನರು ವೀರಾವೇಶದಿಂದ ಕಾದಾಡಿ ಕ್ರಮವಾಗಿ ಹಿಂದೆಸರಿಯುತ್ತಿರುವರು. ಹೆಲ್ಸಿಂಕಿ ಮೊದಲಾದ ಪಟ್ಟಣಗಳ ಮೇಲೆ ನೂರು ನೂರೈವತ್ತು ವಿಮಾನಗಳು ಎಡೆಬಿಡದೆ ವಿಮಾನ ಧಾಳಿ ನಡಿಸುತ್ತಿರುವವು.

ವಿರದಿದ್ದರೆ, ಇಂಡಿಯಾ ಸೆಕ್ರಿಟರಿಗಳು ಬ್ರಿಟಿಷ್ ಸಾಮ್ರಾಜ್ಯಾಧಿಕಾರವನ್ನು ಚಿರಸ್ಥಾಯಿಗೊಳಿಸಲೆಳಸಿ ರಾಜಿಯ ದ್ವಾರವನ್ನೇ ಬಂದು ಮಾಡಿಬಿಟ್ಟರೆ ಕಾಂಗ್ರೆಸಿಗೆ ಹೋರಾಟ ಹೂಡದೆ ಗತ್ಯಂತರವಿಲ್ಲ. ಸರಕಾರವು ಮೌನ ಧಾರಣೆ ಮಾಡಿರುವುದನ್ನು ನೋಡಿದರೆ 1920, ಮತ್ತು '30ರಂತೆಯೇ' 40ರಲ್ಲಿಯೂ ಹೋರಾಟ ಆರಂಭವಾಗುವುದು ನಿಶ್ಚಯವೆಂಬಂತೆ ತೋರುತ್ತದೆ.

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 4-3-1940

"ಪ್ರಸ್ತುತದ ರಾಜಕೀಯ ಪರಿಸ್ಥಿತಿ"- ಮದ್ರಾಸಿನ ಪ್ರಸಿದ್ಧ ಪುಢಾರ ಮುಂದಾಳುಗಳಾದ ಶ್ರೀ. ಪಿ. ರಾಮಮೂರ್ತಿಗಳು ಕಳೆದ ಸೋಮವಾರ ಸಾಯಂಕಾಲ ಮೇಲಿನ ವಿಷಯವಾಗಿ ಭಾಷಣಮಾಡಿದರು, ಶ್ರೀ. ಬಿ. ನ್ಯಕಂಠ ರಾಳಿಗರು ಅಗ್ರಾಸನ ವಹಿಸಿದ್ದರು.

ಕದ್ರಿ ವಿದ್ಯಾಬೋಧಿನಿ ಶಾಲಾ ವರ್ಧಂತಿ—ಕದ್ರಿ ವಿದ್ಯಾಬೋಧಿನಿ ಹಾಯರ್ ಎಲಿಮೆಂಟರಿ ಶಾಲಾ ವಾರ್ಷಿಕ ವರ್ಧಂತಿಯು ನಿನ್ನೆಯ ದಿನ ಸಾಯಂಕಾಲ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಯು. ಕಣ್ಣಪ್ಪ ಯಂ. ಎ., ಎಲ್. ಟಿ.ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆಯಾದ ತರುವಾಯ ಅಧ್ಯಕ್ಷರ ಆರಂಭ ಭಾಷಣವಾಯಿತು. ಅನಂತರ ಎಡ್ವೊಕೇಟ್ ಎಮ್ಮಾಪ್ಪೋನಂ: ಶುಭಾಶಂಸನೆ ಮಾಡಿದರು. ಶಾಲಾ ಹೆಡ್ಮಾಸ್ತರಾದ ವಿದ್ವಾನ್ ಯಂ. ಆರ್. ಶಾಸ್ತ್ರಿಗಳು ಶಾಲಾ ವರದಿಯನ್ನೋದಿದರು. ಅಲ್ಪ ಸಂಖ್ಯೆಯಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆಯು ಐದಿಯ ವರ್ಷದಲ್ಲಿ ಹೇಗೆ 250ಕ್ಕೇರಿದೆಯೆಂಬುದನ್ನು ತಿಳಿಸಿ ಈ ಶಾಲೆಯಲ್ಲಿ ಬಡವರ ಮಕ್ಕಳಿಗೆ ವಿದ್ಯಾರ್ಜನೆ ಮಾಡುವುದಕ್ಕೆ ಇರುವ ವಿಶೇಷ ಸೌಕರ್ಯ ಮಕ್ಕಳಿಗೆ ಪಠ್ಯ ವಿಷಯಗಳನ್ನು ಮಾತ್ರವಲ್ಲದೆ ಇತರ ಉಪಯುಕ್ತ ಗೃಗಾಂಕೆ ವಿಷಯಗಳನ್ನು ಕಲಿಸುವ ಏರ್ಪಾಡು ಇವೇ ಮೊದಲಾದ ವಿಷಯಗಳನ್ನು ಎತ್ತಿ ಮಾತಾಡಿದರು. ಅನಂತರ ಬಹುಮಾನಗಳು ಹಂಚಲಾಯಿತು. ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ, ಶಾಲೆಯು ಪ್ರಗತಿಪಥದಲ್ಲಿ ಮುಂದಡಿಯಿಡುತ್ತಿರುವುದು ಬಹಳ ಸಂತೋಷದ ವಿಷಯವೆಂಬುದನ್ನು ಒತ್ತಿ ಹೇಳಿ, ಈ ಶಾಲೆಯ ಅಧಿಕಾರಿಗಳು ಹರಿಜನ ಉಪಾಧ್ಯಾಯರನ್ನು ನೇಮಿಸ ಇತರಶಾಲೆಗಳಿಗೂ ಒಂದು ಉಚ್ಚ ಆದರ್ಶವನ್ನು ಹಾಕಿಕೊಟ್ಟಿದ್ದಾರೆಂದರು. ಜಿಲ್ಲೆಯ ಪ್ರತಿಯೊಂದು ಶಾಲೆಯವರೂ ಹರಿಜನ ಉಪಾಧ್ಯಾಯರನ್ನು ಸೇರಿಸಿಕೊಂಡರೆ ಹರಿಜನರ ಮಕ್ಕಳ ವಿದ್ಯಾಭ್ಯಾಸವು ಸುಲಭವಾಗಿ ಆಗುವುದಲ್ಲದೆ ಹರಿಜನೋದ್ಧಾರವು ಬೇಗನೆ ಸಾಧ್ಯವಾಗುವುದರಲ್ಲಿ ಸಂಶಯವಿಲ್ಲವೆಂದರು. ಶಾಲಾ ಬಾಲಕಬಾಲಿಕೆಯರ ವಿವಿಧ ವಿನೋದಾವಳಿಗಳೂ, ನಾಟಕ ಪ್ರಹಸನಾದಿಗಳೂ ನಡೆದ ಬಳಿಕ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಉಡುಪಿ

ಔತಣ—ಸ್ಥಳೀಯ ಮುನ್ಸಿಪಾಲಿಟಿಯಲ್ಲಿ ರಿವಿಜನ್ ಆಫೀಸರರಾಗಿದ್ದ ಶ್ರೀ. ಎಂ. ನರಸಿಂಹನವರು ಇಲ್ಲಿಯ ಕೆಲಸ ಮುಗಿಸಿ ಮಂಗಳೂರಿಗೆ ಹೋಗಬೇಕಾಗಿ ಬಂದ ಪ್ರಯುಕ್ತ ಸ್ಥಳೀಯ ಶ್ರೀ ರಾಮಚಾರಿಸ್ಟ್ರೀಟಿನವರು ಅವರಿಗೊಂದು ಔತಣವಿತ್ತು ಗೌರವಿಸಿದರು. ಊಟವಾದೊಡನೆ ಮುನ್ಸಿಪಲ್ ಕಮಿಶನರಾದ ಶ್ರೀ. ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ಬಿ. ಶಾಸ್ತ್ರಿ ಮಾಧವ ಶೆಟ್ಟಿ, ಎಲ್. ಎಸ್. ನಾಯಕ್, ಸಂಜೀವ ಪೈ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು.

ದೇವಾಡಿಗರ ಸೇವಾ ಸಂಘ—ಉಡುಪಿ ದೇವಾಡಿಗರ ಸೇವಾ ಸಂಘದ ವಾರ್ಷಿಕ ಮಹಾಸಭೆಯು ತಾ. 1-3-1940ರಲ್ಲಿ ಸಂಘದ ಆಫೀಸಿನಲ್ಲಿ ಶ್ರೀ. ಎಸ್. ಎಸ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ ನಡೆದ ಬಳಿಕ್ಕ ವರುಷಕ್ಕೆ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆಯಾಯಿತು. ಶ್ರೀ. ಎಮ್. ವಿ. ಹೆಗ್ಡೆಯವರು ದೇವಾಡಿಗರ ಸೇವಾ ಸಂಘವು ಬರಿಯ ಜಾತೀಯ ಸಂಘವಲ್ಲ ಇದರ ಒಂದು ವರ್ಗದ ಕಷ್ಟದಾಯಕ ಸಂಘವಾಗಿರುವುದೆಂಬುದನ್ನು ವಿವರಿಸಿ, ಸಂಘಬರದು ಅನುಸರಿಸಬೇಕಾದ ಧೋರಣೆಯ ಕುರಿತು ಭಾಷಣವಿತ್ತರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಸಂಘ ಶಕ್ತಿ, ಅದರ ಪ್ರಯೋಜನಗಳನ್ನು ತಿಳಿಸಿ ಸಂಘಕ್ಕೆ ರೂ. 5ನ್ನು ಸಹಾಯಧನವಾಗಿ ಕೊಡುವ ವಾಗ್ದಾನವಿತ್ತರು. ಸಂಘದ ಅಧ್ಯಕ್ಷರು ಧನ್ಯವಾದಗೈಯ್ಯುತ್ತ ಮಲ್ಪೆ ಶ್ರೀ. ಅನಂತ ಶೇರಿಗಾರರ ಕೊಳಲುಗಾಯನವಾಯಿತು. ಮಂಗಳೂರು ದೇವಾಡಿಗ ಸುಧಾರಕ ಸಂಘ, ಮೊದಲಾದವರಿಂದ ಶುಭ ಸಂದೇಶಗಳು ಒಂದಿದ್ದುವು. ರಾತ್ರಿ ಸಂಘದ ಪರವಾಗಿ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಶ್ರೀ. ಕೆ. ಪದ್ಮನಾಭಾಚಾರ್ಯರಿಂದ 'ಸತ್ಯ ಹರಿಶ್ಚಂದ್ರ' ಹರಿಕಥೆ ನಡೆಯಿತು.

ಹರಿಜನ ವಿದ್ಯಾರ್ಥಿ ಭವನ ಉಡುಪಿ

ಉಡುಪಿಯ ಹರಿಜನ ವಿದ್ಯಾರ್ಥಿ ಭವನವು ದಿನೇ ದಿನೇ ಅಭಿವೃದ್ಧಿ ಹೊಂದಿ ಹೆಚ್ಚು ಬಾಗಿ ವಿದ್ಯಾರ್ಥಿಗಳಿಗೆ ಆಶ್ರಯವೀಯುವಂತಾಗಲು ಅದಕ್ಕೆ ಹೆಚ್ಚಿನ ಧನಸಹಾಯವು ಅಗತ್ಯವಾಗಿದೆ. ಮಹಾಜನರೆಲ್ಲಾ ಶಕ್ತ್ಯನುಸಾರ ಸಹಾಯವಿತ್ತು, ಉಡುಪಿಯ ಹರಿಜನೋದ್ಧಾರ ಕಾರ್ಯದಲ್ಲಿ ಎಂದಿನಂತೆ ಮುಂದುವರಿದು ಕೀರ್ತಿಯನ್ನು ಪಡೆಯುವಂತೆ ಮಹಾಜನರೆಲ್ಲರೂ ನಮಗೆ ಸಹಾಯವಿತ್ತು ವಿದ್ಯಾರ್ಥಿಭವನದ ಉದ್ದೇಶವು ಶೀಘ್ರವಾಗಿ ನೆರವೇರುವಂತೆ ನೆರವಾಗಬೇಕಾಗಿ ಕಾರ್ಯದರ್ಶಿ ಶ್ರೀ. ಬಿ. ಅನಂತಯ್ಯ ಶೆಟ್ಟರು ವಿನಂತಿಸುತ್ತಾರೆ.

ಬ್ಯಾಡ್‌ಮಿಂಟನ್ ಟೂರ್ನಮೆಂಟ್

ಉಡುಪಿ ಜಿಮ್ಖಾನಾ ಕಮಿಟಿಯ ಆಶ್ರಯದಲ್ಲಿ ನಡೆದ ಬೆಡ್‌ಮಿಂಟನ್ ಪಂದ್ಯಾಟದ ಕೊನೆಯ ಆಟವು ಉಡುಪಿ ಡಿ. ಮು. ಕೋರ್ಟ ಬಿ ಟೀಮು ಮತ್ತು ಉಡುಪಿ ಚರ್ಚ ಟೀಮುಗಳೊಳಗೆ ನಡೆದು ಮೊದಲನೆಯವರು ಜಯಶೀಲರಾಗಿ ಈ ವರ್ಷದ ಕಪ್ಪನ್ನು ಹೊಂದಲರ್ಹರಾಗಿರುವರು.

ರಾಮಕುಂಜ—ಉಡುಪಿ ಶ್ರೀ. ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ತಮ್ಮ ಪರಿವಾರ ಹಾಗೂ ಜನರಲ್ ಏಜಂಟರವರೊಡನೆ ಕಳೆದ ತಾ. 24ನೇ ರಾಮಕುಂಜ ಈ ಕಡೆ ಚಿತ್ತೈಸಿರುವರು. ಮರುದಿನ ತಾನು ಹಿಂದೆ ಕಲಿಯುತ್ತಿದ್ದ ಇಲ್ಲಿಯ ಎಡ್ವಾನ್ಸ್‌ಡ್ ಸಂಸ್ಕೃತ ಪಾಠಶಾಲೆಯ ಸಂದರ್ಶನಕ್ಕಾಗಿ ಸದ್ರಿ ಶಾಲೆಗೆ ದಯಮಾಡಿದ್ದಲ್ಲಿ ಸದ್ರಿ ಶ್ರೀಗಳವರ ಅಧ್ಯಕ್ಷತೆಯಲ್ಲೊಂದು ಮಹಾಸಭೆಯು ಜರಗಿತು. ಪ್ರಸ್ತುತ ಶಾಲೆಯ ಗೌರವ ಕಾರ್ಯದರ್ಶಿಗಳೂ ಹಾಗೂ ಕರೆಸ್ಪಾಂಡೆಂಟರೂ ಆದ ಶ್ರೀ. ವಿಷ್ಣುಮೂಳ ನರಸಿಂಹಾಚಾರ್ಯರು ಮಾತಾಡುತ್ತಾ ಈ ಶಾಲೆಯ, ಶ್ರೀಗಳವರ ಹಾಗೂ ತನ್ನ ವಿದ್ಯಾರ್ಥಿತನದ ಸ್ಮಾರಕಾರ್ಥವಾಗಿ ಪ್ರತಿವರ್ಷವೂ ಮೂಲಧನ ರೂ. 500/-ರ ಬಡ್ಡಿರೂಪದಿಂದ ರೂ. 31-4-0ನ್ನು ಮಠದಿಂದ ಸಹಾಯರೂಪವಾಗಿ ಶಾಲೆಗೆ ಕೊಡುವುದೆಂದು ವಾಗ್ದಾನಮಾಡಿ, ಪ್ರಸ್ತುತವರ್ಷದ ಬಗ್ಗೆ ರೂ. 31-4-0ನ್ನು ಸಭೆಯಲ್ಲೇ ಪ್ರಧಾನಾಧ್ಯಾಪಕರ ವಶಕೊಟ್ಟರು.

ಬೈಲೂರು—ಈ ಕೇಂದ್ರದ ಉಪಾಧ್ಯಾಯರ ಸಂಘದ ವರ್ಧಂತಿಯು ತಾ. 2-3-40ರಲ್ಲು ಶ್ರೀ. ಟಿ. ನಾಗಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಬ್ರಹ್ಮಾವರ—ಕಳೆದ ತಾ. 24ರಲ್ಲು ಕೊಸ್ಮೊಪೊಲಿಟನ್ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಕಾಲು ಪ್ರವಾಸಕ್ಕೆ ಹೋಗಿ ಬರುವಾಗ ಉದಿಯಾವರದಲ್ಲಿ ಒಂದು ಕನ್ನಡಕವು ಸಿಕ್ಕಿರುತ್ತದೆ. ಅದರ ಮಾಲೀಕರು ಸದ್ರಿ ಶಾಲೆಯ ಮುಖ್ಯೋಪಾಧ್ಯಾಯರ ಹತ್ತಿರ ಬಂದು ಅದನ್ನು ತೆಗೆದುಕೊಂಡು ಹೋಗಬಹುದೆಂದು ಈ ಮೂಲಕವಾಗಿ ತಿಳಿಸಲಾಗುತ್ತದೆ.

ಪೆರ್ಡೂರು—ತಾ. 11-3-40 ಮೊದಲ್ಗೊಂಡು 18-3-40ರ ವರೆಗೆ ಶ್ರೀ. ಅನಂತ ಪದ್ಮನಾಭ ಸ್ವಾಮಿಯ ಸನ್ನಿಧಿಯಲ್ಲಿ ಮಹಾಮೂಲ್ ನೂರಿಗೆ ಶ್ರೀಮನ್ಮಹಾರಥೋತ್ಸವದ ಕಾರ್ಯಗಳು ಜರಗಲಿರುವವು.

ಕುಂದಾಪುರ—ಕರ್ನಾಟಕ ಸಾಹಿತ್ಯಸಂಘದ ವರ್ಧಂತಿಯು ಶ್ರೀ. ಉಳ್ಳಾಳ ಮಂಗೇಶರಾವ್, ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಇದೇ ತಾ: 9 ಮತ್ತು 10ರಲ್ಲು ಕುಂದಾಪುರ ಬೋರ್ಡ ಹೈಸ್ಕೂಲಿನಲ್ಲಿ ಜರಗಲಿರುವುದು. ಕುಂದಾಪುರದ ಮುನ್ಸೀಫರಾದ ಶ್ರೀ. ಎಮ್. ವೆಂಕಪ್ಪ ಬಿ. ಎ. ಬಿ. ಎಲ್. ರವರು ತಾ. 10ರಲ್ಲು ಜರಗಲಿರುವ ಪರಿಷತ್ತಿನ ಉದ್ಘಾಟನಾ ಸಮಾರಂಭವನ್ನು ಮಾಡಲಿರುವರು.

ದಿ ವಿದ್ಯಾದಾಯಿನಿ ಸಭೆ ಬೊಂಬ್ಯಾ- ಇದರ ವಾರ್ಷಿಕೋತ್ಸವ ಸಭೆಯು ತಾರೀಕು 11-2-40ರಲ್ಲಿ ಶ್ರೀ ಸುಂದರ ಅಮೀನರ ಅಧ್ಯಕ್ಷತೆಯಲ್ಲಿ ಜರಗಿತು. ಒಂದು ವರ್ಷದ ರಿಪೋರ್ಟುಗಳನ್ನು ಕಾರ್ಯದರ್ಶಿಯವರು ವಾಚಿಸಿದ ನಂತರ ಸಭಿಕರ ಪೈಕಿ ಶ್ರೀ. ಪಿ. ಕೆ. ಸುವರ್ಣಯು, ಪಿ. ಕುಂದರ್, ಗೌಡಪ್ಪ, ಕೆ. ಅಮೀನ್, ವೈ ಸುಬ್ಬ, ಯಮ್. ಯಾಕ್. ಸುವರ್ಣ, ಮತ್ತು ಯು. ಕೆ. ಬಂಗ ಇವರು ಭಾಷಣವಿತ್ತರು. ಕಡೆಗೆ ಅಧ್ಯಕ್ಷರು ತನ್ನ ಸುರಸ ಭಾಷಣವನ್ನಿತ್ತು ಸಭೆಯನ್ನು ಸಂತೋಷಗೊಳಿಸಿದರು. ಕಡೆಗೆ ಲಘು ಫಲಹಾರದೊಂದಿಗೆ ಸಭೆ ಬರಖಾಸ್ತಾಯಿತು.

ಶಿಕ್ಷಿತ ನಟವರ್ಗ! ಶಾಸ್ತ್ರೀಯ ಗಾಯನ!!
ಪ್ರಸಿದ್ಧ ನಾಟಕ ಕಂಪೆನಿಗಳಲ್ಲಿ
ತರಬೇತಿ ಹೊಂದಿದ ಪ್ರಸಿದ್ಧ
ನಟರನ್ನೊಳಗೊಂಡು
ಜನಪ್ರಿಯರಾದ
ಮಂಗಳೂರು ಎಮೆಚೂರ್ಸ್
ಸಂಗೀತ ನಾಟಕಸಭಾ ಇವರು
ಪ್ರೇಮ
ಸಾಮ್ರಾಜ್ಯ
ಎಂಬ ಅತ್ಯಾಧುನಿಕ-ಅದ್ಭುತ
ರಮ್ಯ ಉಜ್ವಲ ಸಾಮಾಜಿಕ
ನಾಟಕವನ್ನು
ತಾ. 9—3—40ಕ್ಕೆ
ಮಂಗಳೂರಲ್ಲಿ,
ತಾ. 16—3—40ಕ್ಕೆ
ಉಡುಪಿಯಲ್ಲಿ
ಅಭಿನಯಿಸುವರು
ಪ್ರತಿಯೊಬ್ಬರೂ ನೋಡಿ
ಆನಂದಿಸತಕ್ಕ ನವೀನ
ನಾಟಕವಿದು

ಹಿಂದೂ ಧರ್ಮದ ಷೋಡಶ ವೈದಿಕ ಕರ್ಮಗಳಲ್ಲಿ ವಿವಾಹವು ಒಂದು ಪ್ರಧಾನ ಕರ್ಮ ಒಂದು ಪವಿತ್ರ ಧರ್ಮ. ಉತ್ತಮವಾದ ಗೃಹಸ್ಥಾಶ್ರಮ ಧರ್ಮ ಪರಿಪಾಲನೆ, ಹಿತಮಿತವಾದ ಇಂದ್ರಿಯ ಸುಖ, ಸಂತಾನೋತ್ಪತ್ತಿ, ಪರೋಪಕಾರ, ಪ್ರಜಾಸೇವೆ, ದೇಶಸೇವೆ ಮತ್ತು ಈಶಸೇವೆ ಇವು ಈ ವಿವಾಹಧರ್ಮದ ಮುಖ್ಯ ಉದ್ದೇಶ. ಇವುಗಳನ್ನು ಅಲಕ್ಷಿಸಿ ಇಂದಿನ ಮದುವೆಗಾರರ ಬ್ರಹ್ಮಚಾರಿಗಳಲ್ಲಿ ಕೆಲವರು ಇಹಲೋಕದ ಸುಖಸಂತೋಷಗಳಿಗೆ ಮಾತ್ರ ಬಲಿಯಾಗಿ ಸ್ವಾರ್ಥತ್ಯಾಗಮಾಡಿ ತನ್ನ ಜೀವಿತ ಕಾಲದಲ್ಲಿ ಎಲ್ಲಾ ಕಾಲದಲ್ಲಿಯೂ ಸಹಾಯ ಕೊಡುವ ಮತ್ತು ದಂಪತಿಧರ್ಮವೃದ್ಧಿಯನ್ನು ಮಾಡುವ ಕನ್ಯೆಯನ್ನು ಕೊಟ್ಟರೆ ಸಾಲದು. ಅವಳೊಂದಿಗೆ ಜನಕನಕ ವಸ್ತ್ರವಾಹನ ಧನ ಸಾಮಗ್ರಿಗಳನ್ನು ವಿಶೇಷವಾಗಿ ಕೊಟ್ಟ ಹೊರತು ಕನ್ಯೆಯನ್ನು ದಾನವಾಗಿ ಸ್ವೀಕರಿಸುವುದಿಲ್ಲವೆಂಬ ಹಟಹಿಡಿಯುವರು. ಈ ಶುಲ್ಕಗಳ ಹಾವಳಿಯನ್ನು ತೀವ್ರವಾದ ಪ್ರಚಾರದಿಂದ ನಿಲ್ಲಿಸಬೇಕಾಗಿದೆ

ಮದುವೆ

ಲೇಖಕರು:—ಶ್ರೀ ರಾ ಆಳ್ವಾರ್ಯೈಯ್ಯಂಗಾರ್, ಬಿ ಎ

ಮದುವೆಯೆಂದರೇನು—ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಮತಾನುಗುಣವಾಗಿ ಶಾಸ್ತ್ರ ಅಥವಾ ಸಂಪ್ರದಾಯವನ್ನಾಗಲಿ ಅಥವಾ ಕಟ್ಟಳೆಯನ್ನಾಗಲಿ ಅನುಸರಿಸಿ ಅಥವಾ ಇಬ್ಬರು ಇಷ್ಟಪಟ್ಟು ಸೇರಿ ಪ್ರೀತಿಯಿಂದಲೂ ಐಕಮತ್ಯದಿಂದಲೂ ಜೀವಿತ ಕಾಲದಲ್ಲಿ ಸಂಸಾರವನ್ನು ನಡೆಸಿ ಇಹಲೋಕದ ಸುಖದುಃಖಗಳಲ್ಲಿ ಸಮಭಾಗಿಗಳಾಗಿ ಪರಲೋಕದ ನಿರತಿಶಯಾನಂದವನ್ನು ಹೊಂದಲು ಪ್ರಯತ್ನಪಡುವ ಒಂದು ರೀತಿಯ ಗೊತ್ತುವಳಿ.

ಹಿಂದೂ ಮತದ ಪ್ರಕಾರ ಷೋಡಶ (೧೬) ವೈದಿಕ ಕರ್ಮಗಳಲ್ಲಿ ಇದು ಲೋಕವ್ಯವಹಾರಕ್ಕೆ ಪ್ರಧಾನವಾದ ಕರ್ಮ ಇದರಲ್ಲಿ ಕನ್ಯೆಯ ತಂದೆಯು ತನ್ನ ಸಾಲಂಕೃತಳಾದ ಕನ್ಯೆಯನ್ನು ಒಬ್ಬ ಬ್ರಹ್ಮಚಾರಿಗೆ ದಾನವಾಗಿ ಕೊಡುತ್ತಾನೆ. ಆ ಬ್ರಹ್ಮಚಾರಿಯು "ಧರ್ಮೇ ಚ ಅರ್ಥೇ ಚ ಕಾಮೇ ಚ ನಾತಿಚರಾಮಿ" ಎಂದರೆ ಇಹಪರ ಸಾಧನಸಂಪತ್ತಿಗೆ ಸಹಕಾರಿಯಾದ "ಧರ್ಮಾರ್ಥಕಾಮಗಳಲ್ಲಿ ನಿನ್ನನ್ನು ಬಿಡುವುದಿಲ್ಲ" ಎಂದು ಮೂರಾವರ್ತಿ ಅಗ್ನಿಸಾಕ್ಷಿಯಾಗಿ ದ್ವಿಜರ ಸಭೆಯಲ್ಲಿ ಪ್ರಮಾಣಮಾಡಿ ಕನ್ಯೆಯನ್ನು ಪ್ರತಿಗ್ರಹ ಮಾಡುತ್ತಾನೆ. ಆದಕಾರಣ ಇದು ಜೀವಿತ ಕಾಲದಲ್ಲಿ ಪರಿತ್ಯಾಗಮಾಡಕೂಡದಂಥ ಒಂದು ಪವಿತ್ರವಾದ ಸಂಬಂಧ ಅಥವಾ ಕಟ್ಟುಪಾಡು.

ಮದುವೆಯ ಜಾತಿಗಳೆಷ್ಟು—(೧) ಕನ್ಯಾವಿವಾಹ (೨) ಪ್ರೌಢವಿವಾಹ (೩) ಇಷ್ಟಬಂದಂತೆ ಆರಿಸಿಕೊಳ್ಳುವ ಗಾಂಧರ್ವವಿವಾಹ (೪) ಕನ್ಯಾವಿತಂತು ವಿವಾಹ. (೫) ವಿಧವಾವಿವಾಹ (೬) ಅನೇಕ ಪತ್ನಿ ವಿವಾಹ (೭) ಅನೇಕ ಪತಿ ವಿವಾಹ, (ವಿಚ್ಛೇದನಾನಂತರ) (೮) ಜಾತ್ಯಂತರ ವಿವಾಹ (೯) ಕೂಡುವಳಿ ಮುಂತಾದವು.

ಮದುವೆಯ ಉದ್ದೇಶ—(೧) ಉತ್ತಮವಾದ ಗೃಹಸ್ಥಾಶ್ರಮ ಧರ್ಮಪರಿಪಾಲನೆ (೨) ಹಿತಮಿತವಾದ ಇಂದ್ರಿಯ ಸುಖ. (೩) ಸಂತಾನೋತ್ಪತ್ತಿ (೪) ಪರೋಪಕಾರ (೫) ಪ್ರಜಾಸೇವೆ (೬) ದೇಶಸೇವೆ (೭) ಈಶಸೇವೆ ಮೊದಲಾದುವು.

ಇವು ಮೊದಲು ಎರಡು ಜಾತಿಯ ಮದುವೆಗೆ ವಿಶೇಷವಾಗಿ ಅನ್ವಯಿಸುತ್ತದೆ. ಉಳಿದ ಜಾತಿಯ ಮದುವೆಗೆ (೧) ಲಿಂಗಭೇದದಿಂದುಂಟಾಗುವ ವ್ಯಾಮೋಹ (೨) ಕಾಮ (೩) ಪ್ರೇಮ (೪) ಸೌಂದರ್ಯ (೫) ಧನ (೬) ನಾಗರಿಕತೆ (೭) ವಿದ್ಯೆ (೮) ಸಂತಾನ ಮೊದಲಾದುವು ಕಾರಣವಾಗಿವೆ

ವಧೂವರರ ಲಕ್ಷಣ— ದಂಪತಿಗಳು ಸಂಸಾರದಲ್ಲಿ ಅನ್ಯೋನ್ಯವಾಗಿ ಸಹಕರಿಸಿ ಚೆನ್ನಾಗಿ ಬಾಳಬೇಕಾದರೆ ವಧೂವರರಿಗೆ ಜಾತಿ, ಕುಲ, ಶೀಲ, ವಿದ್ಯೆ, ಧನ, ರೂಪು, ವಯಸ್ಸು ಮುಂತಾದುವುಗಳಲ್ಲಿ ಸಾಮ್ಯವಿರಬೇಕು ಅವರಿಗೆ ಆರೋಗ್ಯವೂ ಧೃಢಕಾಯವೂ ಇರಬೇಕು. ಅಂಗವಿಹೀನತ್ವವು ಇರಬಾರದು ಇದಕ್ಕಾಗಿ ಮದುವೆಗೆ ಮುಂದಾಗಿ ಅವರನ್ನು ವೈದ್ಯರು ಪರೀಕ್ಷಿಸಬೇಕು. ಇದಲ್ಲದೆ ಅವರಿಗೆ ಒಳ್ಳೆಯ ಸಹವಾಸ, ಸಾತ್ವಿಕ ಆಹಾರ, ವ್ಯಾಯಾಮ, ಕಾರ್ಯಾಸಕ್ತಿ, ಕಾರ್ಯಗೌರವ, ಸ್ನೇಹ, ವಿದ್ಯೆ, ದೈವಭಕ್ತಿ ಮುಂತಾದುವಕ್ಕೆ ವಿಶೇಷವಾದ ಅವಕಾಶವನ್ನು ಕಲ್ಪಿಸಬೇಕು

ವರಶುಲ್ಕದ ಕೊಡಕು—ಕನ್ಯಾದಾನ ಮಾಡುವಾಗ ಕನ್ಯೆಯ ತಂದೆಯು ವರನಿಗೆ ತನ್ನ ಯೋಗ್ಯತಾನುಸಾರವಾಗಿ ಕೆಲವು ವಸ್ತುಗಳನ್ನು ಕನ್ಯೆಯ ಸಂಗಡ ದಾನ ಮಾಡುವದು ಪೂರ್ವದಿಂದಲೂ ಬಂದಿರುವ ಸಂಪ್ರದಾಯವಾಗಿದೆ. ಇವುಗಳನ್ನು ತಂದೆಯು ಯೋಗ್ಯತೆಯ ಅನುಗುಣವಾಗಿ ಹಿಂದೆಯೂ ಕೊಡುತ್ತಾ ಇದ್ದರು. ಈಗಲೂ ತಂದೆಯು ಯೋಗ್ಯತೆಗೆ ಮೀರಿ ಸ್ವಲ್ಪ ಹೆಚ್ಚಾಗಿ ಕೊಡುವುದರಲ್ಲಿಯೂ ಸಿದ್ಧವಾಗಿದ್ದಾರೆ ಆದರೆ ದಾನವಾದ್ದರಿಂದ ವರನ ಕಡೆಯವರು ಹಿಂದೆ ಇಷ್ಟೇ ಕೊಡಬೇಕೆಂದು ನಿರ್ಬಂಧಪಡಿಸುತ್ತಿರಲಿಲ್ಲ. ಈಗ ಆ ನೀತಿ ಅಳಿದು ಹೋಗಿ ವರನ ಕಡೆಯವರು ಕನ್ಯೆಯ ತಂದೆಯ ಯೋಗ್ಯತೆಯನ್ನು ಗಮನಿಸದೆ ನಿರ್ದಾಕ್ಷಿಣ್ಯವಾಗಿ ಇಷ್ಟೇ ಕೊಡಬೇಕೆಂದು ನಿರ್ಬಂಧಪಡಿಸುತ್ತಾರೆ ಈ ಸಂದರ್ಭದಲ್ಲಿ ಬಡವರು ಭಾಗ್ಯವಂತರಿಗೆ ಯೋಚನೆಯಿಲ್ಲ. ಮಧ್ಯದ ಸ್ಥಿತಿಯಲ್ಲಿರುವ ಸಂಸಾರಿಗಳಿಗೆ ಕೇವಲ ಕಷ್ಟವಾಗಿದೆ. "ಕನ್ಯಾಪಿತೃತ್ವಂ ದುಃಖಾಯ" ಎಂಬ ವಚನವು ಪೂರ್ವದಿಂದ ಇದ್ದರೂ ಈಗ ಇಂಥ ತಂದೆಗಳಿಗೆ ಅತ್ಯಂತ ದುಃಖವನ್ನುಂಟುಮಾಡುತ್ತಿದೆ ಮಗಳಿಗೆ ಮದುವೆ ಮಾಡಬೇಕೆಂಬ ಉದ್ದೇಶದಿಂದ ಅನೇಕರು ವರಶುಲ್ಕವನ್ನು ಕೊಡಲು ಮನೆ, ಜಮೀನುಗಳನ್ನು ಮಾರಿ ಸಾಲಗಾರರಾಗಿ ನರಳುತ್ತಿದ್ದಾರೆ ಕೆಲವು ಕನ್ಯೆಯರೂ ಕೂಡಾ ತಂದೆಯು ಬಾಳಿನಿಂದ ಮದುವೆಗೆ ಅವಕಾಶವಿಲ್ಲವೆಂಬ ಲಜ್ಜೆಯಿಂದಲೂ ಸಂಕಟದಿಂದಲೂ ಆತ್ಮಹತ್ಯಮಾಡಿಕೊಳ್ಳುತ್ತಿದ್ದಾರೆ. ಆದಕಾರಣ ಈ ವರಶುಲ್ಕದ ಹಾವಳಿಯನ್ನು ಯಾವ ರೀತಿಯಿಂದಲಾದರೂ ತಪ್ಪಿಸಬೇಕು

ಕನ್ಯಾಶುಲ್ಕ—ಹಿಂದಣಕಾಲದಲ್ಲಿ ಕೆಲವು ಕಡೆಯಲ್ಲಿ ಹೆಣ್ಣನ್ನು ಕೊಡಬೇಕಾದರೆ ಕನ್ಯೆಯ ತಂದೆಯು 'ವೆಚ್ಚವಂಗಾರವನ್ನು' ಕೇಳುತ್ತಿದ್ದಂತೆ ಕಂಡು ಬರುತ್ತದೆ 'ವೆಚ್ಚ' ಎಂದರೆ ಹೆಣ್ಣನ್ನು ಕೊಡುವುದಕ್ಕಾಗಿ ಕನ್ಯೆಯ ತಂದೆಗೆ ಕೊಡುವ ಹಣ 'ವಂಗಾರ' ಎಂದರೆ ಹೆಣ್ಣಿಗೆ ಹಾಕುವ ಚಿನ್ನದ ಆಭರಣ ಈಗಲೂ ಕೆಲವು ಪಂಗಡದಲ್ಲಿ ಹೆಂಗಸರಿಗಿಂತ ಗಂಡಸರು ಸಂಖ್ಯೆಯಲ್ಲಿ ಹೆಚ್ಚಾಗಿರುವುದರಿಂದ ಮದುವೆಗೆ ಕನ್ಯೆಯರು ಸಿಕ್ಕುವುದು ಕಷ್ಟವಾಗಿದೆ ಅಂಥ ಪಂಗಡದಲ್ಲಿ ವರಶುಲ್ಕವನ್ನು ಕೊಡುವರುಂಟೆ? ಕನ್ಯಾಶುಲ್ಕವನ್ನು ಕೊಟ್ಟು ಕನ್ಯೆಯನ್ನು ಕೊಂಡು ಮದುವೆ ಮಾಡಿಕೊಳ್ಳಬೇಕಾಗಬಹುದು.

ಮದುವೆಯಲ್ಲಿ ದುಂದು ವೆಚ್ಚ—ಸಾಮಾನ್ಯವಾಗಿ ಮದುವೆಯಲ್ಲಿ ತಿಂಡಿ ಸಮಾರಾಧನೆ. ಸಂಗೀತ ಕಚೇರಿ, ಉಡುಗೊರೆ ಮುಂತಾದವುಗಳಿಗಾಗಿ ವಿಶೇಷ ಖರ್ಚುಮಾಡಿ ಸಾಲಗಾರರಾಗಿ ಅನೇಕ ಕಾಲ ಬಡ್ಡಿ ತೆತ್ತು ಸಾಲ ತೀರದೆ ಆಸ್ತಿಯನ್ನು ಮಾರಿಕೊಂಡು ನಿರ್ಭಾಗ್ಯರಾಗಿ ಸಂಕಟ ಪಡುತ್ತಾರೆ ಕೆಲವರು ಸಾಲವನ್ನು ತೀರಿಸುವುದಕ್ಕೆ ಅವಕಾಶವಿಲ್ಲದೆ ಮಕ್ಕಳಿಗೆ ಸಾಲವನ್ನು ಹಂಚಿಕೊಡುತ್ತಾರೆ ತನ್ನ ಯೋಗ್ಯತೆಗೆ ಅನುಗುಣವಾಗಿ ಶಾಸ್ತ್ರೋಕ್ತವಾದ ರೀತಿಯಲ್ಲಿ ಮದುವೆಯನ್ನು ನೆರವೇರಿಸುವುದು ಆತ್ಮಗೌರವವುಳ್ಳವರ ಕರ್ತವ್ಯ ಮಹಾತ್ಮಾಜೀಯವರ ಸಮಿಾಪದಲ್ಲಿ ನಡೆದ ಮದುವೆಯ ವೆಚ್ಚವನ್ನು ಗಮನಿಸಬಹುದು ಡಂಭದಿಂದ ಅಗಸರ ಕತ್ತೆಯನ್ನು ದೊಂಬರಿಗೆ ತ್ಯಾಗ ಮಾಡಿದರೆ ಗೌರವ ಬರುತ್ತದೆಯೆ? ತನ್ನ ಮಕ್ಕಳು ಮರಿಯನ್ನು ಸರಿಯಾಗಿ ಕಾಪಾಡುವುದು, ಕೊಟ್ಟವರ ಹಣವನ್ನು ವಾಪಾಸುಕೊಡುವುದು ಈ ಜವಾಬ್ದಾರಿಯನ್ನು ಚೆನ್ನಾಗಿ ಅರಿತು ಮಿತವಾದ ವ್ಯಯದಿಂದ ಪ್ರಸ್ತುತಗಳನ್ನು ನೆರವೇರಿಸುವುದು ಯೋಗ್ಯದ ಕರ್ತವ್ಯ

(ಸಂಸ್ಕೃತಿ)

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 163/37

R. I. A. No 232/33

ಬಾಬು ಸೆಟ್ಟಿ —ವಾದಿ,

N. ಶ್ರೀನಿವಾಸ ನ್ಯಾಕ —ಪ್ರತಿವಾದಿ,

ಪ್ರತಿವಾದಿ N. ಶ್ರೀನಿವಾಸ ನ್ಯಾಕ ವರ್ನಬೆಟ್ಟು ಮುತ್ತಯ್ಯ ನ್ಯಾಕರ ಅಳಿಯ, ಕಾರ್ಕಳ ತಾಲೂಕು ಕುಕ್ಕುಂದೂರು ಗ್ರಾಮದ ನಕ್ರೆ ವರ್ನಬೆಟ್ಟುಮನೆಯವರು,

ವಾದಿಗೆ ಪ್ರತಿವಾದಿಯು ತಾ 12-6-1939 ರಲ್ಲು ರೂಪಾಯಿ 300/ ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ರೂಪಾಯಿ 309 7 ನ್ನು ಬರಮಾಡಿಕೊಳ್ಳುವರೆ ದಾಖಲ್ಮಾಡಿದ ದಾವೆಯ ಮತ್ತು ಸದ್ರಿ ದಾವೆಯಲ್ಲಿ ಪ್ರತಿವಾದಿ ಹಕ್ಕಿನ ಸ್ಥಿರಾಸ್ತಿ ಮ ಸಾಲ ವಸೂಲಿ ಹಕ್ಕು ಜಡ್ಜ್‌ಮೆಂಟಿಗೆ ಮುಂಚೆ ಜಪ್ತಾಗಬೇಕಾಗಿ ಕೊಟ್ಟ ಅರ್ಜಿ ನೋಟೀಸಿನ ವ್ಯಾಧೆ ಕೊಡಾ ತಾ 25-3 1940ಕ್ಕೆ ಇಟ್ಟಿರುವುದರಿಂದ ಈ ದಿವಸ ಬೆಳಗ್ಗೆ 10ಘಂಟೆಗೆ ಈ ಕೋರ್ಟಿನ ಮುಂದೆ ಪ್ರತಿವಾದಿ ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉದಹರಿಸದಿದ್ರೆ ಪ್ರತಿವಾದಿಯನ್ನು ಶಿಮ್ಮಾಮಾಡಿ ವಾದಿ ಗಣಕ್ಕೆ ತೀರ್ಮಾನಿಸಲಾದೀತೆಂದು ಈ ಮೂಲಕ ತಿಳಿಸಲಾಗುತ್ತದೆ.

ಕಾರ್ಕಳ ತಾ. 1-3-'40 | M Mukunda Kamath ವಾದಿ ಕಡೆ ವಕೀಲ,

! HURRY UP ? ? ?. UNIQUE OPPORTUNITY.

CLEARANCE SALE OF A LARGE CONSIGNMENT OF 10,000 WATCHES, JUST ARRIVED FROM SWITZERLAND, AT OLD PRICES.



No 116 Chromium Case Rs 5—10
No 417 Golden Case Rs 6— 6
No 417 R Rolledgold 10yrs. Jewelled Mov Rs 12—8



ROUND OR CUSHION
No 401 Chromium Case Rs 5—12
No 402 Golden Case Rs 4— 8



No 1428 Chromium Cas Rs 9—0
No 1430 Rolledgold 10yrs. Rs. 15—0

LATEST ARRIVAL 1940
STRONG & DURABLE
ACCURATE TIME KEEPERS
Guaranteed Lever Movement.



No 424 Chromium Case Rs 7—6
No 425 Golden Case Rs 8—4
No 425 R Rolledgold 10yrs Rs 13—8

As 9/- Extra for Postage.
For further particulars send for our new catalogue No. 16
(Correspondance in English)

BAPALAL & CO.,
101 Abdul Rehman Street,
BOMBAY, 3.

LADIES MINIATURES



Geneva Movement.
No 460 Chromium Case Rs 10—8
No 61 Golden Case Rs 12—0
No 462 Rolledgold 10yrs Rs 16—0

ಈ ವಾರದ ಭವಿಷ್ಯ

ತಾರೀಕು 7-3-1940ರಿಂದ 14-3-1940ರ ವರೆಗೆ

ಮೇಷ— ಪೂರ್ವಾಪರ ವಿಚಾರ ಮಾಡದೆ ಆರಂಭಿಸಿದ ಯಾವೊಂದು ಕಾರ್ಯವೂ ಕೂಡ ಸುಖದಿಂದ ಕೊನೆಗೊಳ್ಳಲಾರದು. ಇದಕ್ಕೆ ನಿಮ್ಮ ಸದ್ಯದ ಕೃತಿಯೇ ಪ್ರತ್ಯಕ್ಷ ಪ್ರಮಾಣವು. ನೀವು ಮಾಡತಕ್ಕ ರಹಸ್ಯ ವಿಚಾರಗಳು ಸ್ವಗೃಹಸ್ಥರಿಂದಲೇ ಹೊರಬಿದ್ದು ಶತ್ರು ಜನರಿಗೆ ಸಹಾಯಕಾರಿಯಾಗುವವು. ಆದರೂ ನೀವು ಹಠವಾದಿಗಳಾದ ಪ್ರಯುಕ್ತ ಎಷ್ಟೇ ಕಷ್ಟ ನಷ್ಟಗಳು ಪ್ರಾಪ್ತವಾದರೂ ಮನಸ್ಸಿನ ಬಯಕೆಯನ್ನು ಪೂರ್ಣಗೊಳಿಸದಿರಲಾರಿರಿ. ದೇಶಾಟನದ ಪ್ರಸಂಗವೊದಗಿದರೂ ಪುಣ್ಯತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಲಿರುವಿರಿ. ತಾರೀಖು 10, 11, ಬಿಟ್ಟು ಇತರ ದಿನಗಳು ಸಾಕಷ್ಟು ತೃಪ್ತಿಕರವಾಗಿರುವವು.

ವೃಷಭ— ವ್ಯಯ ಸ್ಥಾನದಲ್ಲಿನ ಕುಜ ಶನಿಗಳಿಗಾಗಿ ನೀವು ಬೆದರಬೇಕಾಗಿಲ್ಲ. ಸದ್ಯದ ಗ್ರಹಸ್ಥಿತಿ ರೀತ್ಯಾ ದೈವದೊಲುಮೆಯೂ ಜನ ಧನ ಬೆಂಬಲವೂ ನಿಮಗೆ ಅತ್ಯುತ್ತಮ ರೀತಿಯಲ್ಲಿರುವವು. ನಿಮ್ಮ ಸಂಕಲ್ಪಗಳು ಕಾರ್ಯ ರೂಪಕ್ಕೆ ಬರಲಿವೆ. ವಿರೋಧಿಗಳು ಪರಾಜಿತರಾಗುವರು. ಆರ್ಥಿಕ ಭಾಗದಲ್ಲಿ ಬಹಳ ಸುಧಾರಣೆ ಹೊಂದುವಿರಿ. ಆರೋಗ್ಯ ದೃಷ್ಟಿಯಿಂದಲೂ ಕೂಡ ನಿಮಗೀವಾರವು ಚೆನ್ನಾಗಿಯೇ ಇರುವುದು. ಕೆಲವೊಮ್ಮೆ ನಿಮ್ಮ ಅದೂರದರ್ಶಿತ್ವದಿಂದ ವ್ಯರ್ಥ ಕಲಹ ನಿಮ್ಮವರಿಗೂ ಶೋಕಕ್ಕೂ ಗುರಿಯಾಗುವ ಸಂಭವವಿದೆ. ಆದ್ದರಿಂದ 12, 13, 14 ಈ ದಿನಗಳಲ್ಲಿ ಬಹು ಜಾಗರೂಕರಾಗಿರಿ.

ಮಿಥುನ— ಈ ವಾರದಲ್ಲಿ ನಿಮ್ಮ ಉದ್ಯೋಗಿಕ ಭಾಗಕ್ಕೆ ಕುಂದು ಧಕ್ಕೆಯುಂಟಾಗಲಿದೆ. ವೈದ್ಯ ವಕೀಲ ಮತ್ತು ಉಪಾಧ್ಯಾಯ ವೃತ್ತಿಯಲ್ಲಿರುವವರಿಗೆ ಆಲಸ್ಯ ನಿರುತ್ಸಾಹ ಅಡಚಣೆ ಮೊದಲಾದುವು ಹೆಚ್ಚಲಿವೆ. ಆದರೂ ಲಾಭ ಸ್ಥಾನದಲ್ಲಿ ಕುಜ ಶುಕ್ರ ಶನಿಗಳಿರುವುದರಿಂದ ದೈನಂದಿನದ ಖರ್ಚಿಗೆ ಕೊರತೆಯಾಗದು. ಆರೋಗ್ಯವು ಹೆಚ್ಚು ಸಂತೃಪ್ತಿಕರವಾಗಿರದು. ಜನಸಾಮಾನ್ಯರ ಬೆಂಬಲವೂ ಮಿತ್ರಜನರ ಸಹಾಯವೂ ಒಳ್ಳೇ ರೀತಿಯಲ್ಲಿರುವುದರಿಂದ ದಿನದ ಹೆಚ್ಚಿನ ಸಮಯವನ್ನು ಸುಖದಿಂದ ಕಳೆಯುವಿರಿ. ಸಾಂಸಾರಿಕ ಆಪತ್ತುಗಳಿಂದ ಮುಕ್ತರಾಗುವಿರಿ. ತಾ. 7, 8, 9ರಲ್ಲಿ ರಾಜಭಯ ಉದರ ರೋಗ ಮೊದಲಾದುವುಗಳಿಂದ ಪೀಡಿಸಲ್ಪಡುವಿರಿ.

ಕರ್ಕಾಟಕ— ನೀವು ಒಳ್ಳೇ ಸಮರ್ಥರೂ ಬುದ್ಧಿಶಾಲಿಗಳೂ ಆಗಿದ್ದರೂ ತಾತ್ಕಾಲಿಕವಾಗಿ ಅಜ್ಞಾನವು ಆವರಿಸುವುದರಿಂದ ಜೀವನವು ಬಹಳ ದುಸ್ತರವಾಗುವುದು. ಕಾರಣ "ಜೀವತ್ಯರ್ಥದರಿದ್ರೋಪಿ ಧೀದರಿದ್ರೋ ನ ಜೀವತಿ" ಎಂದು ಪ್ರಾಜ್ಞರೆನ್ನುವಂತೆ ಕೈಯಲ್ಲಿ ಕಾಸಿಲ್ಲದೆಯೂ ಕೂಡ ಜೀವಿಸಬಹುದು, ಬುದ್ಧಿಶೂನ್ಯನಾಗಿ ಜೀವಿಸಲು ಸಾಧ್ಯವಿಲ್ಲ. ಅಂತೆ ನೀವು ವಿವೇಕ ಶೂನ್ಯರಾಗಿ ದುಷ್ಕರ್ಮ ದುರಾಚಾರಗಳಲ್ಲಿ ಪ್ರವರ್ತಿಸಿ ಬಹು ಜನರ ನಿಂದೆಗೂ ಕಲಹಕ್ಕೂ ಅಪಹಾಸ್ಯಕ್ಕೂ ಕೂಡ ಗುರಿಯಾಗಲಿರುವಿರಿ. ಆದ್ದರಿಂದ ಗುರುಹಿರಿಯರ ಮಾತನ್ನನುಸರಿಸುವುದಾದರೆ ಹೆಚ್ಚಿನ ಈ ಅನಿಷ್ಟಗಳಿಂದ ಪಾರಾಗಲಿರುವಿರಿ. ತಾ. 7ರಿಂದ 11ರ ವರೆಗೆ ಬಹಳ ಕಷ್ಟ.

ಸಿಂಹ— ಮಾಡುವುದಕ್ಕಿಂತಲೂ ಪಡೆದ ಕರ್ಮಕ್ಕೇ ಪ್ರಾಧಾನ್ಯವಿರುವುದರಿಂದ ನೀವು ಇಹದಲ್ಲಿ ಎಷ್ಟೇ ದುಡಿಯಲಿ ಅವುಗಳೆಲ್ಲವೂ ಉಪಭೋಗಿಸಲಿಕ್ಕೆ ಸಿಗವು. ಜನ್ಮಾಂತರದಲ್ಲಿ ಮಾಡಿದ ಸುಕೃತ ದುಷ್ಕೃತ ಕರ್ಮಗಳ ಫಲವೇ ಸದ್ಯ ಅನುಭೋಗಿಸಲು ಸಿಗುವವು. ಸದ್ಯ ನೀವು ಎಷ್ಟೇ ಕಷ್ಟ ಪಟ್ಟರೂ ಸುಖವನ್ನು ಕಾಣಲಾರಿರಿ. ನಿಮ್ಮ ಕರ್ಮ ವಿಶೇಷದಿಂದ ದಿವಾರಾತ್ರಿಯೂ ದುಃಖಿತರಾಗುವ ಯೋಗವಿದೆ. ಅನಾರೋಗ್ಯ ಹಗೆಯವರ ಕಾಟ ವ್ಯರ್ಥ ಖರ್ಚಿನಿಂದಾಗಿ ಆರ್ಥಿಕ ಬಿಕ್ಕಟ್ಟು ಊರೂರು ಅಲೆಯುವಿಕೆ ಇತ್ಯಾದಿಗಳಿಂದ ಎಳ್ಳಷ್ಟೂ ಮನಸ್ಸಿಗೆ ಶಾಂತಿಯಿರದು. ಗೃಹ ಆಪತ್ತುಗಳು ದಿನೇ ದಿನೇ ಹೆಚ್ಚುತ್ತಿರುವವಾದರೂ ತಾ. 7, 8, 9 ಈ ದಿನಗಳ ಮಟ್ಟಿಗೆ ಸ್ತ್ರೀ ಸುಖ ಕಿಂಚಿದ್ಧನ ಲಾಭವಾಗುವ ಯೋಗವಿದೆ.

ಕನ್ಯಾ— ಅಷ್ಟಮ ಸ್ಥಾನದಲ್ಲಿ ಅಂಗಾರಕ ಶನಿಗಳು ಕೂಡಿರುವುದರಿಂದ ಅಕಸ್ಮಾತ್ ವಿರೋಧಿಗಳಿಂದ ಹಣಕ್ಕೂ ಮಾನಕ್ಕೂ ಹಾನಿಯೊದಗಲಿದೆ. ಅಪಘಾತಗಳಿಂದ ದೇಹಕ್ಕೆ ಅಪಾಯ ಸಂಭವಿಸಲೂ ಬಹುದು. ಆದರೂ ಇತರ ಸದ್ಗ್ರಹರನೇಕರ ಬಲವಿರುವುದರಿಂದ ನೀವೀ ಭಾಗದಲ್ಲಿ ಹೆಚ್ಚಿನ ಯೋಚನೆ ಮಾಡಬೇಕಾಗಿಲ್ಲ. ಸಜ್ಜನರ ಮೈತ್ರಿ ದೊಡ್ಡವರ ಸಹಾಯ ಇರುವುದರಿಂದಲೂ ಸ್ವಯಂ ಚತುರರಿರುವುದರಿಂದಲೂ ಹಿಡಿದ ಕಾರ್ಯದಲ್ಲಿ ವಿಜಯಿಗಳಾಗುವಿರಿ. ವಿದ್ಯಾರ್ಥಿಗಳಿಗೆ ಯಶಃಪ್ರದವಾದುದೀ ಕಾಲವು. ಉದ್ಯೋಗಿಗಳು ಇಚ್ಛಾರ್ಥವಾದ ಫಲವನ್ನು ಹೊಂದಲಿರುವರು. ತಾ. 7ರಿಂದ 11ರ ವರೆಗಿನ ದಿನಗಳು ಉತ್ತಮವಿವೆ.

ತುಲಾ— ಗಗನತಲಗತರಾದ ಲೋಕ ಪಾವನರೂ ಲೋಕೋಪಕಾರಿಗಳೂ ಆಗಿರತಕ್ಕ ಸೂರ್ಯ ಚಂದ್ರರಿಗೂ ಕೂಡ ಆಗಾಗ ರಾಹು ಕೇತುಗಳಿಂದ ಗ್ರಹಣ ರೂಪವಾದ ಅಪಾಯವು ತಪ್ಪಿದ್ದಲ್ಲ. ಹೀಗಿರುವಲ್ಲಿ ನರರಾದ ನಮ್ಮ ಪಾಡೇನು. ಈಗಿನ ಗ್ರಹಸ್ಥಾನ ರೀತ್ಯಾ ಯಾವೊಂದು ಗ್ರಹವೂ (ಕೇತುವನ್ನು ಬಿಟ್ಟು) ನಿಮಗೆ ಅನುಕೂಲವಿಲ್ಲದೆ ಪ್ರತಿಕೂಲವೇ ಆಗಿರುವಾಗ ಸುತ್ತು ಮುತ್ತಲಿಂದಲೂ ಅನಿಷ್ಟ ವಸ್ತುಗಳು ಬಂದು ಸೇರಲಿವೆ. ಕಷ್ಟಪರಂಪರೆಗಳಲ್ಲಿ ಸಿಲುಕಿದ ನಿಮಗೆ ಮುಂದಿನ ದಾರಿ ಕಾಣದಾಗುವುದು. ಆದರೂ 10ರಿಂದ 14ರ ವರೆಗೆ ಚಂದ್ರ ಬಲವಿರುವುದರಿಂದ ಈ ದಿನಗಳಲ್ಲಿ ಅನಿಷ್ಟಗಳು ಕಿಂಚಿತ್ಕಡಿಮೆಯಾಗಿ ಚಿಕ್ಕ ಚಿಕ್ಕ ಮನೋರಥಗಳು ಫಲಿಸಲಿವೆ.

ವೃಶ್ಚಿಕ— ವ್ಯಾಪಾರೀ ಭಾಗದಲ್ಲಿ ಪ್ರತಿಕೂಲಗಳೂ ಕೋರ್ಟು ಕಛೇರಿ ಕೆಲಸಗಳಲ್ಲಿ ಅಪಜಯವೂ ಪ್ರಾಪ್ತವಾಗುವ ಯೋಗವಿರುವುದರಿಂದ ಈ ಎರಡು ವಿಚಾರಗಳಲ್ಲಿ ಮುಂದರಿಯದಿರುವುದೊಳ್ಳಿತು. ಆರೋಗ್ಯದ ಮಟ್ಟಿಗೂ ಆರ್ಥಿಕ ವಿಚಾರದಲ್ಲೂ ನೀವು ಉತ್ತಮ ರೀತಿಯಲ್ಲೇ ಇರುವಿರಿ ಪುತ್ರ ಮಿತ್ರಾದಿ ಪರಿಜನರೂ ಸಾಂಸಾರಿಕ ಸುಖವೂ ಚೆನ್ನಾಗಿರುವುದು. ವಿದ್ಯಾರ್ಥಿಗಳಿಗೂ ತದುಪಜೀವಿಗಳಾದ ನೌಕರಿ ಉದ್ಯೋಗಸ್ಥರಿಗೂ ಕೂಡ ದಿನದ ಹೆಚ್ಚಿನ ಸಮಯವು ಸುಖದಿಂದ ಕಳೆಯುವುದು. ತಾ. 7ರಿಂದ 11ರ ವರೆಗೆ ಆಪ್ತರಲ್ಲಿ ಅವಿಶ್ವಾಸ ಪ್ರಸಂಗಗಳು ಕಂಡು ಬರುತ್ತದೆ.

ಧನು— ಮನಸಿನ ಭಾವನೆಗಳನ್ನು ಬಾಹ್ಯ ಹೊರಗೆಡಹದಿದ್ದರೂ ಮುಖದ ಭಾವಗಳೇ ಅವನ್ನು ವ್ಯಕ್ತ ಪಡಿಸುತ್ತವೆ. ನೀವೀ ವಾರದಲ್ಲಿ ಮನಸೊಪ್ಪದ ಕಾರ್ಯವನ್ನು ಮಾಡಿ ತದ್ವಿಷಯಕವಾದ ಅಪರಾಧವು ಎಲ್ಲಿ ಪ್ರಕಟವಾದೀತೋ ಎಂಬ ಶಂಕೆಯಿಂದ ಸದಾ ಭಯ ವಿಹ್ವಲಿತ ಚಿತ್ತರಾಗಿರುವಿರಿ. ಮಾತ್ರವಲ್ಲ ಸಂಸಾರದ ಸಲುವಾಗಿ ಹೆಚ್ಚಿನ ಕಷ್ಟ ನಷ್ಟಗಳನ್ನು ಹೊಂದುವಿರಿ. ಶೋಕಾಗ್ನಿಯಿಂದ ಸದಾ ದಹಿಸಲ್ಪಡುತ್ತಿರುವ ನಿಮಗೆ ಶಾಂತಿಯ ಮೂರು ದಿನಗಳು ಸ್ವಲ್ಪ ಮಟ್ಟಿಗೆ ಅನುಕೂಲಗಳಾಗಿರುವುದರಿಂದ ಮಿತ್ರೇಷ್ಟರ ಸಹಾಯದಿಂದಾಗಿ ರಾಜಕೀಯದಲ್ಲೂ ವಾಣಿಜ್ಯ ಭಾಗದಲ್ಲೂ ಜಯವೂ ಧನ ಲಾಭವೂ ದೊರೆಯಲಿದೆ.

ಮಕರ— ಉದ್ಯೋಗದಲ್ಲಿಯೂ ಅಧ್ಯಯನದಲ್ಲಿಯೂ ಒಂದು ವೇಳೆ ಪರಾಜಿತರಾದರೂ ನೀವು ಭಯ ಪಡಬೇಕಾಗಿಲ್ಲ. ಅಸಾಧಾರಣ ಕಾರ್ಯಶಕ್ತಿಯು ನಿಮಗಿರುವುದರಿಂದ ಅನುದಿನದ ವೆಚ್ಚಕ್ಕೆ ಬೇಕಷ್ಟು ಸಂಪಾದಿಸುವಿರಿ. ದುರ್ನೀತರ ಕಾಟದಿಂದಲೂ ಶತ್ರುಗಳ ಉಪಟಳದಿಂದಲೂ ಮನಸ್ಸಿಗೆ ಸಮಾಧಾನವಿಲ್ಲದಿದ್ದರೂ ಕಾಲಕ್ಕೆ ತಕ್ಕ ಕೋಲ ಕಟ್ಟುವುದರಲ್ಲಿ ನೀವು ಒಳ್ಳೇ ನಿಪುಣರಿರುವಿರಿ. ಆರೋಗ್ಯದ ಮಟ್ಟಿಗೆ ಈ ವಾರವು ಚೆನ್ನಾಗಿಲ್ಲವು. ಪುತ್ರ ಕಳತ್ರರ ವಿಯೋಗವು ಸಂಭವಿಸುವಂತಿದೆ. ತಾ. 10, 11 ಬಿಟ್ಟು ಇತರ ದಿನಗಳಲ್ಲಿ ಅನಿಷ್ಟವೇ ಹೆಚ್ಚು ಕಾಣಿಸಿದೆ.

ಕುಂಭ— "ಆರಂಭಶೂರಾಃ ಖಲು ದಾಕ್ಷಿಣಾತ್ಯಾಃ" ಎಂಬ ಗಾದೆಯಂತೆ ನಿಮ್ಮ ಕಾರ್ಯಕ್ರಮವು ಕಂಡು ಬರುತ್ತಿದೆ. ಆದ್ಯಂತಗಾಮಿತ್ವವು ಸತ್ಪುರುಷರ ಲಕ್ಷಣವು. ಸದ್ಯದ ನಿಮ್ಮ ಪರಿಸ್ಥಿತಿಯನ್ನು ನೋಡುವಾಗ ಆದಷ್ಟು ಬೇಗ ನಿಮ್ಮ ಕಾರ್ಯವನ್ನು ಕೊನೆಗೊಳಿಸುವುದು ಲೇಸು. ಸಮಯ ವಿಳಂಬವಾದರೆ ಕೊನೆ ಮುಟ್ಟುವಂತಿಲ್ಲ. ದೇಹದಲ್ಲಿ ಅನೇಕ ಆಲಸ್ಯಗಳು ಕಂಡು ಬರುವವು. ಸಾಂಸಾರಿಕ ಸಂಬಂಧೀ ಸುಖವೂ, ಆರ್ಥಿಕೋನ್ನತಿಯೂ ಉತ್ತಮವಾಗಿರುವುದಾದರೂ ತಾ. 10, 11ರಲ್ಲಿ ಧನ ಮಾನಗಳಿಗೆ ಚ್ಯುತಿಯೂ ಕಾರ್ಯಕ್ಕೆ ವಿಘ್ನಗಳೂ ಬರುವಂತಿದೆ.

ಮೀನ— ಕೆಲಸದ ಕಾಲಂಕಶವಾದರೂ ಪ್ರತಿಫಲ ದೊರೆಯದಿದ್ದಲ್ಲಿ ಯಾರಿಗೆ ತಾನೇ ಅದರಲ್ಲಿ ಆಸಕ್ತಿಯುಂಟಾದೀತು. ಅಂತೆಯೇ ನಿಮ್ಮ ಕಷ್ಟದ ಪ್ರತಿಫಲವು ನಿಮಗೀಗ ದೊರೆಯುವಂತಿಲ್ಲ. ಸಕಲ ಭಾಗಗಳಲ್ಲೂ ಆದಾಯಕ್ಕಿಂತ ಅಧಿಕ ವ್ಯಯವಾಗಲಿದೆ. ಆರೋಗ್ಯದ ಮಟ್ಟಿಗೂ ತೃಪ್ತಿಯಿಲ್ಲವು. ಅವಿವೇಕದಿಂದಾಗಿ ಅಕೃತ್ಯವಂಗೈದು ಸಜ್ಜನರ ಮತ್ತು ಅಧಿಕಾರಿಗಳ ಪ್ರಕೋಪಕ್ಕೆ ಗುರಿಯಾಗಲಿರುವಿರಿ. ತಾ. 7, 8, 9, 12, 13, 14 ಈ ದಿನಗಳಲ್ಲಿ ಅನಾರೋಗ್ಯ ಧನ ವ್ಯಯ, ಆರ್ಥಿಕ ಬಿಕ್ಕಟ್ಟು ಒದಗಲಿದೆ.

ನವಯುಗ

ನೋಟೀಸು.

ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅದನ್ನು ದಯಮಾಡಿ ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

—ಮೆನೇಜರ್.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕ ಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯ ಯಾ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಚುಚ್ಚುವ ಯಾ ಎಳೆಯುವ ಸರ್ವವಿಧದ ದೋಷಗಳನ್ನು ನಿವೃತ್ತಿಪಡಿಸುವದು, ಹಾಗೂ ಆಲಸ್ಯ ಯಾ ವಾಯುಗಳೆಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿವೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, 5-0-0, 1000, 9-0-0.

5ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆ (ಗುಟಿ)ಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ,
(ರಿಜಿಸ್ಟರ್ಡ್) ಕುಂಜಾಲು.
ಪೋಸ್ಟ್—ಬ್ರಹ್ಮಾವರ, ದ. ಕ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾವುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಸುರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ.

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

Sole Manufacturer DR. D. N. JASANI, Vitalbhai Patel Road, BOMBAY 4

ಮೋಸಮಾಡುವುದರಲ್ಲಿ ಸಹ ನವೀನತೆ!
ಠಕ್ಕರ ವಿಚಿತ್ರವಾದ ಮೋಸದ ವ್ಯಾಪಾರ.

(ಲೇಖಕರು:—ಶ್ರೀ R A ವಾತ್ಸಾಯನ)

ಸಾಧಾರಣವಾಗಿ ಮನುಷ್ಯನು ಎಷ್ಟು ಅಪರಾಧಗಳನ್ನು ಮಾಡುವನೋ, ಅವುಗಳಲ್ಲಿ ಮೋಸಗಾರಿಕೆಯು ಬಹಳ ಮಹತ್ವದ್ದು. ಏಕೆಂದರೆ ಇದರಲ್ಲಿಯೂ ಮುಂದಾಲೋಚನೆ, ಬುದ್ಧಿವಂತಿಕೆ ಮತ್ತು ಕುಶಲತೆಗಳು ಅಗತ್ಯ. ಕಳ್ಳತನ, ಡಕಾಯಿತಿ, ಕೊಲೆ ಮುಂತಾದ ಅಪರಾಧಮಾಡಲು ಮನಸ್ಸಿನ ಇಚ್ಛೆ ಮತ್ತು ತತ್ಕಾಲದ ಉತ್ತೇಜನ, ಶಕ್ತಿ ಇವುಗಳೇ ಸಾಕಾಗುವವು. ಆದರೆ ಮೋಸಗಾರರು ತಮ್ಮ ಬುದ್ಧಿ, ವಾಕ್ಚಾತುರ್ಯ, ಅಭಿನಯ ಕೌಶಲ್ಯಗಳನ್ನವಲಂಬಿಸಿದ್ದು, ಭಿನ್ನ ಭಿನ್ನ ಕ್ಷೇತ್ರಗಳಲ್ಲಿ, ಭಿನ್ನ ಭಿನ್ನ ಉಪಾಯಗಳನ್ನನುಸರಿಸಿ ತಮ್ಮ ಕಾರ್ಯದಲ್ಲಿ ವಿಜಯಿಗಳಾಗುವರು. ಮೋಸಗೊಳಿಸಲ್ಪಡುವ ವ್ಯಕ್ತಿಯ ಎದುರಿನಲ್ಲಿಯೇ ಮೋಸವು ನಡೆದು, ಯಾವ ಉದ್ದೇಶಗಳಿಗಾಗಿ ಈ ರೀತಿ ಆಗುತ್ತಿದೆ ಎಂಬ ಜ್ಞಾನವೇ ಅವನಿಗಿರುವುದಿಲ್ಲ. ಮೋಸಕ್ಕೆ ಒಳಗಾದವರೆಲ್ಲರೂ ದಡ್ಡರು ಎಂದು ಹೇಳುವುದು ಸರಿಯಲ್ಲ. ಏಕೆಂದರೆ ದೊಡ್ಡ ದೊಡ್ಡ ಬುದ್ಧಿವಂತರಾದವರು ಸಹ ಒಂದೊಂದು ವೇಳೆ ಈ ಠಕ್ಕರ ಮಾಯಾಜಾಲದಲ್ಲಿ ಅನಾಯಾಸವಾಗಿ ಸಿಕ್ಕಿಬೀಳುವರು. ಇದಕ್ಕೆ ಎರಡು ಮುಖ್ಯ ಕಾರಣಗಳಿವೆ. ಒಂದಂತೂ ಹಣದ ಆಸೆ, ಮತ್ತೊಂದು ಮೋಸಗಾರರ ವಿಚಾರದಲ್ಲಿ ಅನುಭವವಿಲ್ಲದಿರುವುದು. ಹಣದಾಸೆಗೆ ಸಿಕ್ಕಿ ಮನುಷ್ಯನು ಅನೇಕ ಕೆಲಸಗಳನ್ನು ಮಾಡಿಬಿಡುವನು. ಮನುಷ್ಯರಲ್ಲಿ ಸಾಧಾರಣವಾಗಿರುವ ಈ ಮನೋವೃತ್ತಿಯನ್ನು ನಿವಾರಿಸುವುದು ಕಷ್ಟ. ಆದರೆ ಎರಡನೆಯ ಕಾರಣವನ್ನು ತಡೆಯಬಹುದು. ತಾವು ಒಂದು ಸಾರಿ ಮೋಸಗೊಳಿಸಲ್ಪಟ್ಟಿರುವರೋ, ಅಥವಾ ಇನ್ನೊಬ್ಬರು ಮೋಸಹೋಗುತ್ತಿರುವುದನ್ನು ನೋಡಿರುವರೋ, ಕೇಳಿರುವರೋ, ಅಂತಹವರನ್ನು ಮೋಸಗೊಳಿಸುವುದು ಸುಲಭವಲ್ಲ. ಆದುದರಿಂದ ಈ ಕಳ್ಳರ ದುಷ್ಕೃತ್ಯಗಳನ್ನು ಜನರಿಗೆ ಹೆಚ್ಚು ಹೆಚ್ಚಾಗಿ ತಿಳಿಸಿದಷ್ಟು ಅದರಿಂದ ಪ್ರಯೋಜನವಿದ್ದೇ ಇದೆ.

ಶಿಕ್ಷಿತ ಕಳ್ಳರು

ಈಗಂತೂ ಶಿಕ್ಷಿತ ವ್ಯಕ್ತಿಗಳಲ್ಲಿ ಸಹ ಮೋಸಮಾಡುವ ರೋಗವು ದಿನದಿನಕ್ಕೂ ಹೆಚ್ಚುತ್ತಿದೆ. ಶಿಕ್ಷಿತನಾದವನು ಮೋಸಮಾಡುವಾಗ ಅವನು ತನ್ನ ಮೋಸದ ಸ್ವರೂಪವು ಇತರರಿಗೆ ತಿಳಿಯದಿರುವಂತೆ ಬಲು ಬಹಳ ಎಚ್ಚರಿಕೆಯಿಂದಿರುವನು. ತಾನು ಮೋಸಹೋದೆನೆಂಬ ವರ್ತಮಾನವನ್ನು ಕೇಳಿ ಇತರರು ನಗಬಹುದೆಂಬ ನಾಚಿಕೆಯೂ ಸಹ ಮೋಸಗೊಳಿಸಲ್ಪಡಬಹುದಾದ ಶಿಕ್ಷಿತ ವ್ಯಕ್ತಿಗಿರುವುದು. ಯಾವರೀತಿಗಳಲ್ಲಿ ಜನರನ್ನು ಮೋಸಗೊಳಿಸುವರೆಂಬುದನ್ನು ಕೆಳಗೆಕೊಡಲಾಗಿದೆ.

ಬೀಡ್ಸ್ ರೇಸಿಂಗ್

ಇವರು ದೊಡ್ಡ ಜಮೀನ್ದಾರ ಅಥವಾ ಸಾಹುಕಾರನಂತೆ ತೋರಿಕೊಂಡು ಅದಕ್ಕನುಗುಣವಾದ ಆಡಂಬರದೊಡನೆ ಯಾವುದಾದರೂ ಒಂದು (ಕಲ್ಕತ್ತ ಎನ್ನಿ)ನಗರದ ವೈಭವಯುಕ್ತವಾದ ಭವನದಲ್ಲಿರುವರು. ಅದೇ ದಳದ ಬೇರೊಬ್ಬ ವ್ಯಕ್ತಿಯು ಮೋಸಗೊಳಿಸಬೇಕೆಂದಿರುವ ವ್ಯಕ್ತಿಯೊಡನೆ ಮಾತನಾಡುತ್ತ ಅವನಿಗೆ ಕೆಲಸಕೊಡಿಸುವ, ಯಾವುದಾದರೂ ಕಂಟ್ರಾಕ್ಟ್ ಕೆಲಸವನ್ನು ಕೊಡಿಸುವ ಆಸೆಯನ್ನು ಹುಟ್ಟಿಸಿ ಕರೆದುಕೊಂಡು ಬಂದು ಮೋಸಗಾರನ ಮುಂದೆ ಪರಿಚಯಮಾಡಿಸುವನು. ಮನೆ ಸೌಂದರ್ಯ, ಅಲಂಕಾರಗಳನ್ನು ನೋಡಿ ಆ ವ್ಯಕ್ತಿಯು ಸ್ತಂಭಿತನಾಗುವನು.

ನಂತರ ಅವನೆದುರಿನಲ್ಲಿಯೇ ಆ ದಳದ 2-3 ಮಂದಿ ಅಪರಿಚಿತರಂತೆ ಬಂದು ಒಳ್ಳೊಳ್ಳೆ ಮಾತುಗಳನ್ನೇ ಆಡುವರು. ಇದರಿಂದ ಆ ವ್ಯಕ್ತಿಗೆ ಈ ಮೋಸಗಾರನು ಬಹಳ ದೊಡ್ಡ ಸಾಹುಕಾರನೆಂಬ ಅಭಿಪ್ರಾಯವುಂಟಾಗುವುದು. ಈ ರೀತಿ 2-3 ದಿನಗಳ ವರೆಗೂ ಹೋಗಿಬಂದು ಮಾಡಿದ ಮೇಲೆ ಒಂದು ದಿನ ಮೋಸಹೋಗುವ ವ್ಯಕ್ತಿಯ ಎದುರಿನಲ್ಲೇ ಜಮೀನ್ದಾರಮಹಾಶಯನು ತನ್ನ ಕಡೆಯವನೊಬ್ಬನೊಡನೆ (Beads Race) ಎಂಬ ಆಟಕ್ಕೆ ಪ್ರಾರಂಭಿಸುವನು. ಆಡುತ್ತ ಆಡುತ್ತ ಅವನು ಬಹಳ ಹಣವನ್ನು ಕಳೆದುಕೊಳ್ಳುವನು. ಮುತ್ತುಗಳಂತಿರುವ ಸಣ್ಣ ಸಣ್ಣ ಗೋಲಿಗಳಿಂದಾಡುವ ಆಟವಿದು. ಆಟ ಮುಗಿದ ನಂತರ ಜಮೀನ್ದಾರನು ಹೊರಟುಹೋಗುವನು. ಆ ಮೇಲೆ ಅವನ ಮ್ಯಾನೇಜರು ಬಂದು ಈ ಮೋಸಹೋಗುವ ವ್ಯಕ್ತಿಗೆ ಈ ರೀತಿ ಹೇಳುವನು—"ನಮ್ಮ ಸಾಹುಕಾರರಿಗೆ ಮಕ್ಕಳು ಮರಿಗಳೇನೂ ಇಲ್ಲ. ಆದುದರಿಂದಲೇ ಅವರು ಈ ರೀತಿ ಹಣವನ್ನು ನೀರಿನಂತೆ ಹಾಳುಮಾಡುವುದು. ನೀವು ನಮ್ಮ ಯಜಮಾನರ ಸಂಗಡ ಈ ರೀತಿ ಆಡುತ್ತಿದ್ದಲ್ಲಿ ನಿಮಗೆ ಬಹಳ ಹಣ ದೊರೆಯುವುದು. ನೀವು ಗೆಲ್ಲುವ ದಾರಿಯನ್ನು ನಾನು ನಿಮಗೆ ತೋರಿಸಿಕೊಡುವೆನು. ಗೆದ್ದ ಮೇಲೆ ಬೇಕಾದರೆ ನೀವು ನನಗೇನಾದರೂ ಹಣಕೊಡುವಿರಂತೆ!" ಪಾಪ, ಹಣದ ಆಸೆಗೆ ಸಿಕ್ಕಿದ ಆ ವ್ಯಕ್ತಿಯು ದಿನದಿನವೂ ಆಟದಲ್ಲಿ ಲೀನವಾಗುವನು. ಮೊದಮೊದಲಂತೂ ಅವನು ಸ್ವಲ್ಪ ಹಣವನ್ನು ಗೆಲ್ಲುವನು. ನಂತರ ಹೆಚ್ಚು ಹಣದ ಆಸೆಗೆ ಸಿಕ್ಕಿಬಿದ್ದು ಮ್ಯಾನೇಜರ ಹೇಳಿಕೆಯಂತೆ ಅವನು ಮತ್ತಷ್ಟು ಹಣವನ್ನು ತರುವನು. ಕೊನೆಗೆ ಎಲ್ಲವನ್ನೂ ಸೋತು ಕೈಹಿಸುಕಿಕೊಳ್ಳುತ್ತ ಮನೆಗೆ ಹೋಗುವನು.

ಸುಳ್ಳು ರಶೀದಿಗಳ ಮಾರಾಟ

ಕಳ್ಳರು ಯಾವುದಾದರೂ ಮ್ಯಾಲನ್ನು ರೈಲ್ವೆ ಅಥವಾ ಹಡಗುಗಳಲ್ಲಿ ಕಳುಹಿಸಿ, ಅದರ ರಶೀದಿಯಲ್ಲಿ ಮ್ಯಾಲಿನ ಪರಿಮಾಣ, ತೂಕ, ಇವುಗಳನ್ನು ಹೆಚ್ಚಾಗಿ ಬರೆಯುವರು. ಸುಳ್ಳು ರಶೀದಿಯನ್ನು ಮೋಸಹೋಗುವ ವ್ಯಕ್ತಿಗೆ ಮಾರುವರು. ತಮಗೆ

Every Policyholder is a Member
IN
The Canara Mutual
ASSURANCE COMPANY, LTD.
(Head Office:- UDIPI, S India.)

Everyday the Membership increases.

The Company issues all the well-known plans of Assurance.

Female lives accepted.

JOIN ITS EVER INCREASING MEMBERSHIP.

ಹಣದ ಅಗತ್ಯವಿರುವುದರಿಂದ, ವಸ್ತುಗಳನ್ನು ಸ್ವೀಕರಿಸುವವರಿಂದ ಹಣ ಬರುವ ವರೆಗೂ ಕಾಯಲಾಗುವುದಿಲ್ಲವೆಂದು ಕಾರಣ ಹೇಳುವರು. ಕೆಲವು ವೇಳೆಗಳಲ್ಲಂತೂ, ಈ ಕಳ್ಳರು ಯಾವ ಸಾಮಾನನ್ನೂ ಕಳುಹಿಸದೇ, ರೈಲ್ವೆ ಸ್ಟೇಶನ್ನಿನಲ್ಲಿ ರಶೀದಿ ಬುಕ್ಕುಗಳನ್ನು ಕದ್ದು ತಂದು, ಸಂಪೂರ್ಣವಾಗಿ ಕೃತಕ ರಶೀದಿಯನ್ನು ಬರೆದು ಮಾರುವುದೂ ಉಂಟು. ಇಂತಹವರು ಏನಾದರೂ ಸಿಕ್ಕಿಬಿದ್ದಲ್ಲಿ, ವಸ್ತುಗಳನ್ನು ಕೊಳ್ಳುವವರ ಹೆಸರೇ ಮೊದಲು ಬರುವುದು. ಯಾರಾದರೂ ಇಂತಹ ರಶೀದಿಗಳನ್ನು ಕೊಳ್ಳುವ ಸಂದರ್ಭ ಬಂದರೆ, ಅವರು ಸ್ಟೇಶನ್ ಮಾಸ್ಟರಿಗೆ ತೋರಿಸಿದ ನಂತರವೇ ಕೊಳ್ಳಬೇಕು. ಏಕೆಂದರೆ ಪ್ರತಿಯೊಂದು ರಶೀದಿಯ ಮತ್ತೊಂದು ನಕಲು ಅವರ ಬಳಿ ಇರುವುದು.

ಟೆಲಿಗ್ರಾಫ್ ಮನಿ ಆರ್ಡರ್

ಯಾರಾದರೂ ಧನಿಕರ ಸಂಬಂಧವುಳ್ಳಂತಹವರನ್ನು ಈ ಕಳ್ಳನು ಗುರುತು ಹಚ್ಚುವನು. ನಂತರ ಅವರೊಡನೆ ಹೆಚ್ಚು ಸಂಬಂಧವನ್ನು ಬೆಳೆಸಿಕೊಂಡು, ಅವರ ಬಂಧುಗಳ ಹೆಸರು, ವಿಳಾಸಗಳೆಲ್ಲವನ್ನೂ ತಿಳಿದುಕೊಳ್ಳುವನು. ನಂತರ ಕೆಲವು ದಿನಗಳ ಮೇಲೆ, ಅವರ ಸಂಬಂಧಿಗಳಿಗೊಬ್ಬರಿಗೆ ತಾನು ಬಹಳ ಕಷ್ಟದಲ್ಲಿರುವುದಾಗಿಯೂ, ಕೂಡಲೆ ಹಣವನ್ನು ಟೆಲಿಗ್ರಾಫ್ ಮನಿ ಆರ್ಡರ್ ಮಾಡಬೇಕೆಂಬುದಾಗಿಯೂ ತಂತಿ ಕಳುಹಿಸುವನು. ನಂತರ ಅಂಚೆ ಕಛೇರಿಯಲ್ಲಿ ಹಣ ಬಂದಿತೇ ಇಲ್ಲವೇ ಎಂಬುದನ್ನು ವಿಚಾರಿಸಿಕೊಳ್ಳುತ್ತಿರುವನು. ಬಂದಿದ್ದರೆ ಹಣವನ್ನು ತೆಗೆದುಕೊಂಡವನೇ ಅಲ್ಲಿಂದ ಪರಾರಿಯಾಗುವನು. ದೊಡ್ಡ ನಗರಗಳಲ್ಲಿನ ಅಂಚೆ ಇಲಾಖೆಯವರು, ಅಲ್ಲಿನ ನಿವಾಸಿಗಳನ್ನು ಸರಿಯಾಗಿ ಗುರ್ತಿಸಲಾಗದುದರಿಂದ, ಅಲ್ಲಿ ಈ ಮೋಸವು ಹೆಚ್ಚಾಗಿ ನಡೆಯಲವಕಾಶವಿರುವುದು. ತನ್ನ ಹತ್ತಿರದ ಬಂಧುಗಳಿಂದ ತಂತಿ ಬಂದರೆ ಯಾರಿಗಾದರೂ ಗಾಬರಿಯಾಗುವುದು ಸ್ವಾಭಾವಿಕವೇ ಅಲ್ಲವೇ?

NOTICE.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No. ೧೯೩೯

ಖಾನ್ ಸಾಹೇಬ್ C.K. ಮಹಮದಾಲಿ–ವಾದಿ ಮತ್ತು ಅಪ್ಪುಡು ಸಹ–ಪ್ರತಿವಾದಿರು ಇವರೊಳಗೆ

11ನೇ ಪ್ರತಿವಾದಿ ಅಬ್ದುಲ್ಲ ಬ್ಯಾರಿ, ಮೊಯಿದಿಂ ಕುಂಞ ಬ್ಯಾರಿ ಮಗ, 12ನೇ ಪ್ರತಿವಾದಿ ಜೈನಬಿ, ಮೊಯಿದಿಂ ಕುಂಞ ಬ್ಯಾರಿ ಹೆಂಡತಿ, 14ನೇ ಪ್ರತಿವಾದಿ ಮಂಮು, ಕಲಂದನ ಮಗ, 11-12 ಮತ್ತು 14ನೇ ಪ್ರತಿವಾದಿರು ಕಾಸರಗೋಡು ತಾಲೂಕು ಕಲನಾಡ ಗ್ರಾಮದಲ್ಲಿರುವವರು,

ಈ ಮೂರು ಜನ ಪ್ರತಿವಾದಿರಿಗೆ,

ವಾದಿಗೆ 1ನೇ ಪ್ರತಿವಾದಿಯು ತಾ. 31-5-27 ರಲ್ಲಿ ರೂಪಾಯಿ 175-0-0ಕ್ಕೆ ಬರೆಕೊಟ್ಟ ರಿಜಿಸ್ಟ್ರ ಆಧಾರ ಪತ್ರ ಪ್ರಕಾರ ಬರ ಅಸಲು ಬಡ್ಡಿ ವಸೂಲಿಗೆ ವಾದಿಯು ದಾಖಲು ಮಾಡಿದ ವ್ಯಾಜ್ಯವು ನಮ್ಮ ನೋಟೀಸು ಬಗ್ಗೆ ತಾ. 9-3-'40 ಕ್ಕೆ ಇಟ್ಟಿರುತ್ತದೆ. ಆದುದರಿಂದ ನಿಮಗೆ ಇದಕ್ಕೆ ಆಕ್ಷೇಪವಿದ್ದಲ್ಲಿ ನೀವು ಸದ್ರಿ ತಾರೀಕಿಗೆ ಈ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹೇಳತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ವ್ಯಾಜ್ಯವು ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ತೋರುವ ರೀತಿ ತೀರ್ಮಾನಿಸಲ್ಪಡುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗಿಯದೆ.

ಕಾಸರಗೋಡು | K. P. Anantha Rao,
ತಾ. 1-3-40 | *Advocate for Plaintiff.*

ಆದುದರಿಂದ ಕೂಡಲೆ ಹಣ ಕಳುಹಿಸಿಬಿಡುವರು. ಆದರೆ ಇಂತಹ ಆಕಸ್ಮಿಕ ತಂತಿಗಳು ಬಂದರೆ, ಉದ್ವಿಗ್ನರಾಗದೆ, ಧೈರ್ಯಗೊಂಡು, ವಿಚಾರ ಮಾಡಿ ಕೆಲಸ ಮಾಡಬೇಕು. ತಂತಿಯು ನಗರದಿಂದ ಬಂದಿದ್ದಲ್ಲಿ, ಮತ್ತೊಂದು ತಂತಿ ಕಳುಹಿಸಿ ಉತ್ತರವನ್ನು ಪಡೆದುಕೊಳ್ಳಲು ಅವಕಾಶವಿದೆಯೋ ಇಲ್ಲವೇ ಎಂಬುದನ್ನು ವಿವೇಚಿಸಬೇಕು.

ಕೆಲಸದ ಆಸೆ ತೋರಿಸಿ ಮೋಸ ಮಾಡುವುದು.

ನಿರುದ್ಯೋಗದ ಈ ಕಾಲದಲ್ಲಿ ಕೆಲಸ ಕೊಡಿಸುತ್ತೇನೆಂದು ಆಸೆ ತೋರಿಸಿ, ಏನೂ ಅರಿಯದವರನ್ನು ಮೋಸಗೊಳಿಸುವುದು ಬಹಳ ಸುಲಭ. ತಕ್ಕರು ಮೊದಲು, ಕಲ್ಲಿದ್ದಲಿನ ಗಣಿ ಮುಂತಾದ ಕಡೆಗಳಲ್ಲಿ ಉಚ್ಚ ಪದವಿಗಳಲ್ಲಿರುವವರ ಸಂಬಂಧಿಗಳ ಪೈಕಿ ಯಾರ್‍ಯಾರು ನಿರುದ್ಯೋಗಿಗಳಾಗಿರುವರೆಂಬುದನ್ನು ಗೊತ್ತು ಮಾಡಿಕೊಳ್ಳುವರು. ನಂತರ ಅವರು ಆ ಆತ್ಮೀಯರೊಬ್ಬರ ಬಳಿ ಬಂದು ಇಂತಹ ಅಧಿಕಾರಿಯು ತಮ್ಮನ್ನು ಇಲ್ಲಿಗೆ ಕಳುಹಿಸಿರುವರೆಂದೂ, ಕೆಲಸ ಕೊಡಿಸುವ ವಿಚಾರದಲ್ಲಿ ಏನೇನು ವ್ಯವಸ್ಥೆಯಾಗಬೇಕಾಗಿದೆಯೆಂಬುದನ್ನೂ ತಿಳಿಸುವರು. ಕೆಲವು ಸಂದರ್ಭದಲ್ಲಿ ಆ ಆಫೀಸಿನ ಮುದ್ರೆಯೊತ್ತಿದ ಪತ್ರವನ್ನೂ ಸಹ ತೋರಿಸುವರು. ತನ್ನ ಹತ್ತಿರ ಸಂಬಂಧಿಗಳ ವಿಷಯವನ್ನು ಕೇಳಿ ಯಾರೂ ಅವರ ಮಾತಿನಲ್ಲಿ ಅವಿಶ್ವಾಸವನ್ನು ಮಾಡುವುದೂ ಇಲ್ಲ. ಮೋಸ ಹೋಗುವ ವ್ಯಕ್ತಿಯು ಕೆಲಸ ದೊರೆಯುವುದೆಂಬ ಲೋಭಕ್ಕೆ ಒಳಗಾಗಿ, ಸಂಪೂರ್ಣವಾಗಿ ಈ ಕಳ್ಳರ ವಶವಾಗುವನು. ಕೆಲವು ವೇಳೆ ಒಬ್ಬ ಅಧಿಕಾರಿಗೆ ಲಂಚ ಕೊಡಬೇಕಾಗಿದೆಯೆಂದು ಹೇಳಿ, ಹಣ ತೆಗೆಯಿಸಿಕೊಂಡು ಹೋಗಿ, ಒಂದು ಮನೆಯ ಬಳಿ ಸೇರಿ, ಹೊರಗೆ ನಿಂತಿರುವಂತೆ ಹೇಳುವನು. ಅಲ್ಲಿ ಆತನ ಬಳಿಯಲ್ಲಿನ ಹಣವನ್ನು ತೆಗೆದುಕೊಂಡು ಲಂಚ ಕೊಟ್ಟು ಬರುವುದಾಗಿ ಹೇಳಿ ಹೋದವನು ಹಿಂದಿರುಗಿ ಬರುವುದೇ ಇಲ್ಲ!

ಚಂದಾ ವಸೂಲಿ

ಸಾಧು ಸನ್ಯಾಸಿಗಳ ವೇಷವನ್ನೂ ಧರಿಸಿ ದೇವಾಲಯಗಳ ಜೀರ್ಣೋದ್ಧಾರ, ಗೋಶಾಲೆಗಳ ನಿರ್ಮಾಣ, ಕ್ಷಾಮ ಪೀಡಿತರಾದವರಿಗೆ ಸಹಾಯ ಮುಂತಾದ ನೆವನಗಳನ್ನು ಹೇಳಿ ಚಂದಾ ಕೇಳುವವರೂ ಇರುವರು. ಮತ್ತೆ ಕೆಲವರು ಪಯಸ್ಸಾದ ತಮ್ಮ ಹುಡುಗಿಯೊಡನೆ ಹೊರಟು ಆಕೆಯ ವಿವಾಹಕ್ಕೆಂದು ಚಂದಾ ಕೇಳುವರು.

ಮತ್ತೊಬ್ಬರ ವೇಷದಲ್ಲಿ

ಇವರು ಸರ್ಕಾರಿ ನೌಕರರ ವೇಷದಲ್ಲಿ ತಿರುಗುವರು. ಕೆಲವರು ಪೋಲೀಸ್ ಉಡುಪನ್ನು ಧರಿಸಿ, ಯಾರನ್ನಾದರೂ ಬಂಧಿಸಿ ಲಂಚ ತೆಗೆದುಕೊಂಡು ಬಿಟ್ಟು ಬಿಡುವರು. ಕೆಲವರು ವರಮಾನ ತೆರಿಗೆ ಅಧಿಕಾರಿಯಾಗಿ ಅಂಗಡಿಗೆ ಹೋಗಿ ಲೆಕ್ಕ ತೆಗೆಯಿಸಿ ಹಣವಸೂಲು ಮಾಡಿಕೊಂಡು ಹೋಗುವರು. ಮತ್ತೆ ಕೆಲವರು ಇನ್‌ಶೂರೆನ್ಸ್ ಏಜಂಟರಂತೆ ಬಂದು ವಿಮೆಮಾಡಿಸಲು ಪ್ರಾರಂಭ ಮಾಡಿಸಿ ಮೊದಲನೆ ಕಂತಿಗೆಂದು ಹಣ ವಸೂಲು ಮಾಡಿಕೊಂಡು ಪರಾರಿಯಾಗುವರು.

ಈ ರೀತಿಯಾಗಿ ಎಷ್ಟೋ ಮಂದಿ ತಕ್ಕರು ಅನೇಕ ತಿಳಿಯದವರನ್ನು ಸುಲಿಗೆ ಮಾಡುವರು. ಇವರ ಈ ಆಟಗಳನ್ನು ತಿಳಿಯದೆ ಅನೇಕರು ಇವರ ಬಲೆಗೆ ಬೀಳುವರು. ವಿದ್ಯಾವಂತರಾದವರೇನೋ ಇವರಿಂದ ರಕ್ಷಿಸಿಕೊಳ್ಳುವರು. ಆದರೆ ಅವಿದ್ಯಾವಂತರು ಅಥವಾ ಅರ್ಧವಿದ್ಯಾವಂತರಿಗೆ ಆ ರೀತಿಮಾಡುವುದು ಸುಲಭವಲ್ಲ. ಆದುದರಿಂದ ಪ್ರಾಯಶಃ ಇಂತಹವರು ಅವರ ಮೋಸಕ್ಕೆ ತುತ್ತಾಗುವುದೇ ಹೆಚ್ಚು. ಶಿಕ್ಷಿತರಾದವರು ಅವಿದ್ಯಾವಂತರಿಗೆ ಈ ಕ್ರೂರ ಕರ್ಮಿಗಳ ಮೋಸ ಕೃತ್ಯವನ್ನು ತಿಳಿಸಿ ಅವರಿಂದ ದೂರವಿರಲು ಉಚಿತವಾದ ಉಪದೇಶಕೊಟ್ಟಲ್ಲಿ ಜನಸಾಮಾನ್ಯರಿಗೆ ಇದರಿಂದ ಬಹಳ ಉಪಕಾರವಾಗುವುದರಲ್ಲಿ ಸಂದೇಹವೇ ಇಲ್ಲ.

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	....	Rs 1,00,000
Subscribed & Paid up Capital	....	Rs 31,340
Reserves & other Funds	....	Rs 22,052

ನಿರಖು ಠೇವಣಾತಿಗಳು ರಿಯಾಯುತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK
OF SUPPLY AGENCY LIMITED,

ಹೋಂ ಇಂಗ್ಲಿಷ್ ಟ್ಯೂಟರ್

ಇದರಲ್ಲಿ, ಸುಲಭ ಪಾಠಗಳು, ವ್ಯಾಕರಣ ನಿಯಮಗಳು, ಚಿಕ್ಕ ಕಥೆಗಳು, ಕನ್ನಡ ಪರ್ಯಾಯ ಶಬ್ದಗಳು, ವಾಕ್ಯರಚನಾಕ್ರಮಗಳು, ಪತ್ರವ್ಯವಹಾರ, ಅರ್ಜಿಗಳ ನಮೂನೆಗಳು, ಇಂಗ್ಲಿಷ್ ಕನ್ನಡ ಗಾದೆಗಳು, ಉಚ್ಚಾರಣೆ ಮತ್ತು ಅರ್ಥಗಳಲ್ಲಿ ವ್ಯತ್ಯಾಸವಿರುವ ಶಬ್ದಗಳು, ಇಂಗ್ಲಿಷ್ ಉಚ್ಚಾರಣೆ ಸಹಿತ ಸುಮಾರು 3000 ಶಬ್ದಗಳ ಕೋಶವೂ ಸಂಕೇತಾಕ್ಷರಗಳೂ ಅಡಗಿವೆ. ಈ ಪುಸ್ತಕವಿದ್ದರೆ ತಿಳಿದ ಉಪಾಧ್ಯಾಯರು ಮನೆಯಲ್ಲಿದ್ದಷ್ಟೇ ಸಹಾಯವಾಗುವುದು. ಸುಮಾರು 216 ಪುಟಗಳ ಪುಸ್ತಕಕ್ಕೆ ಟಪ್ಪಾಲು ಖರ್ಚು ಸೇರಿ ಬೆಲೆ ಒಂದೇ ರೂಪಾಯಿ.

ಹಣ ಮುಂಗಡ ಕಳುಹಿಸಬೇಕು. V. P. ಮಾಡಲಾಗುವುದಿಲ್ಲ.

ಉಪಾಧ್ಯಾಯ ಬುಕ್ ಡಿಪ್ಪೋ, A S. Street, ಬೆಂಗಳೂರು ಸಿಟಿ.

ಕನ್ನಡ ನುಡಿವೆಣ್ಣಿಗೊಂದು ಕನ್ನಡಗಿತ್ತಿಯ ಕಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: ೦-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.

ಬರಹಗಾರ್ತಿಯರು:–

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಜ್ಞನೂ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವರ್ಧಕ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ.

'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ನೀತಿ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ.......'

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು, ಅದರಿಂದ ತಯಾರಿಸಿದ ಸಾರಾಂಶದ ನಿಜತ್ವವು ಕೆಲವೇ ನಿಮಿಷಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಳಿಯಾಗಿ ಹೋಗಿದ್ದರೂ ತಡವಾಗಲಿಲ್ಲ. ಲೆಕ್ಕ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ,

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

THE ASIAN ASSURANCE COMPANY, LIMITED.

ASIAN BUILDINGS - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,57,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc.

Sri. B. Narayan Shetty, Organizer, Brahmavar
" M. Shivarama Rao, Organizer, Puttur.
Or
Sri. J. A. PUTRAN,
Branch Manager, MANGALORE.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಾಪಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಆವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯಾಪಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,
ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

THE
PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

ಸೀರೆಗಳು ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.
ಸಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES - - - - - MANGALORE

ಭಾರತೀ ಗ್ರಂಥಮಾಲೆಯ
ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)
ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)
ರೂ 1-8-0 ಕಳಿಸಿದ್ದರೆ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪ್ರತ್ಯೇಕ)
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪ್ರತಿಗಳಿಗೆ ಬರೆಯಿರಿ:-
ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸನೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಸ್ಸರೋಗಗಳನ್ನು ಒಮ್ಮೆಯೇ ಸೇವನೆಯಿಂದಲೇ ನಿಗ್ರಹಿಸುತ್ತದೆ.

"ಸವಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ಹುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿತ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4
Sorath Pharmacy,
Null Bazzar, Duncan Road,
BOMBAY 4.

ಶ್ರೀ ಭಗವದ್ಗೀತಾ

ಪಂಡಿತ ಪಾನ್ಯಂ ಸುಂದರ ಶಾಸ್ತ್ರಿಗಳು ಮತ್ತು ಪಂಡಿತ ದೊಡ್ಡ ಬೆಲೆ ನಾರಾಯಣ ಶಾಸ್ತ್ರಿಗಳು-ಮೊದಲಾದ ನಾಲ್ವರು ಮಹಾವಿದ್ವಾಂಸರಿಂದ ರಚಿಸಲ್ಪಟ್ಟ 'ಭಾವಬೋಧಿನೀ' ಎಂಬ ಟೀಕಾ ತಾತ್ಪರ್ಯ ಸಹಿತ
ಪುಟಗಳು 664 ಬೆಲೆ 3-0-0
(ಪೂರ್ಣ ಸ್ವಾರುಮಾಡಿ ಬೈಂಡು)
ಕೆಲವು ಪ್ರತಿಗಳು ಮಾತ್ರ ಉಳಿದಿವೆ.
ಉಪಾಧ್ಯಾಯ ಬುಕ್ ಡಿಪೋ
A. S. ಸ್ಟ್ರೀಟ್, ಬೆಂಗಳೂರು ಸಿಟಿ.

Degrees: Books: Medicines.

Free H. L. M. S. H. M. B. H. M. D. etc Free Homeo-Ayur-Unani-Naturo degrees by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

ಸದ್ವೈದ್ಯಶಾಲಾ ನಂಜನಗೂಡು ಇವರ
"ಸುಬಲಾ" ಪಿತ್ತ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.
ಬ್ರಾಂಚ್:-ರಥಬೀದಿ ಮಂಗಳೂರು.

KOPRAN
Tooth Paste
ಹಿಂದೂದೇಶದ ಜನಪ್ರಿಯ ದಂತಾಂಜನ
ಜಾಣಿಗಿದು ತಕ್ಕಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ. ಶೀಘ್ರಸತ್ವವುಳ್ಳದ್ದು, ವಿಷಹಾರಕವೂ ಇದು.
KOPRAN CHEMICAL CO. BOMBAY

NAVAYUGA
Advertisement Tariff

1 Page	Rs. 25/-	per insertion
1/2 "	Rs. 15/-	" "
1/4 "	Rs. 8/-	" "
1/8 "	Rs. 5/-	" "
Per Single inch col.	Re. 1	"

Contract rates on application
Manager-**Navayuga UDIPI.**

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟಿದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಮೂಲವ್ಯಾಧಿ

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಅರ್ಶಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಹಳೆಯ ಅಥವಾ ಹೊಸ ತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲವ್ಯಾಧಿಯು 'ಅರ್ಶಮಾರಾ'ವನ್ನು ಒಂದೊವ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುತ್ತದೆ. ನೋವು ತುರಿಕೆ, ಉರಿಯುವಿಕೆ, ಕೀವು, ರಕ್ತಸ್ರಾವವಾಗುತ್ತದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಒಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯ ಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ **4**

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು, ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು ಸೀಸೆ1ಕ್ಕೆ12ಆಣೆ, ಟ.ಖ.೯ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು **ಚಿರಸ್ಮರಣೀಯಗಳಾಗಿವೆ. ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರವೂ ಸೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬ ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎನ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲ್ಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲ್ಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು ಬವಾಸರ ಬೇಜು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.

Approved firm by the Govt. of Mysore. Certified by the Agent of the Govt. of India in Ceylon

---

ಹೊಸ ಪುಸ್ತಕ! ಸೆಲ್ಫ್ ಇಂಗ್ಲಿಷ್ ಸ್ಟಡಿ ಈಗಲೇ ಪ್ರಿಂಟಾಗಿದೆ !!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳಬಹುದು. ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ. 1—8—0

Western Swiss Watch Co.
Book-Sellers, Post Box No. 68
G. P. O. MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್, ಬಾಕ್ಸ್ ನಂ. 68, ಮದರಾಸ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI, AND PUBLISHED BY K. H. SHETTY AT "NAVAYUGA OFFICE, UDIPI, S. INDIA"

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಚೇರಿ:— **ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.**

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ ಮಾಧವ, ಎಂ ಎ, ಎಫ್ ಆರ್ ಎ ಎಸ್., ಎ ಐ ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅವರ್ಕಳವರ ಅಭಿಪ್ರಾಯ ಸಾರಾಂಶ

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಸ್ಥೆಯು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆಡಳಿತದ ವೆಚ್ಚ, ಬಡ್ಡಿಯ ಫಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ . . . ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ತಿಳಿಸ ಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H Venkataramiah, *Divisional Superintendent* or **R Purniah** *Ag General Manager*

The Asiatic Govt. Security Life Assu Co. Ltd.,

Asiatic Building, BANGALORE CITY

ಝಂಡು ಮಲೇರಿಯಾಮಿಕ್ಶ್ಚರ್

ಝಂಡು ಔಷಧ

ಮಲೇರಿಯಾ, ವಿಷಜ್ವರಗಳಿಂದುಂಟಾಗುವ ಎಲ್ಲಾ ತರದ

ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು.— ಪಿ. ಎ. ಪೈ ಬ್ರದರ್ಸ್.

ಕಾರ್ಕಳದ ಏಜಂಟರು – ವಿ. ಸಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ—

ದಾಮೋದರ್ ಎಂಡ್ ಕೊ,

ಮುಖ್ಯ ಏಜಂಟರು,

ZANDU 78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು.

DAMODER & CO.,

78 China Bazaar Road, **G T MADRAS**

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ, ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು

ಕ್ರಯ:- 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1—0 -0

ಮದನಮಂಜರಿ ಫಾರ್ಮಸಿ, 164 ಚೈನಾಬಜಾರ್ ಮದ್ರಾಸ್

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯುಳ್ಳರುವ ಜೀವ ವಿಮಾ ಸಂಸ್ಥೆಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ.—

ರಾಯಿ ಕಾರ್ಯದರ್ಶಿ,

ದಿ ನ್ಯೂ ಗಾರ್ಡಿಯನ್ ಒವ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕಂ. ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟೆಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಸ್ತ್ರೀಪುರುಷರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಸ್ತ್ರಕಾರವಾಗಿ ಸರ್ವರೋಗಗಳ ಒಗ್ಗೆ "ದೇವ ಸಮ್ಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟೆಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟೆಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟೆಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣ, ವಾನಿಂಗ್ ಟೆಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಹಿಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಗುವದಕ್ಕೆ ನೂರಾರು ಸಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟೆಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ ಈ ವಾನಿಂಗ್ ಟೆಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ ವಾನಿಂಗ್ ಟೆಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ, ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ

ವಾನಿಂಗ್ ಟೆಲ್ಲಿ ಹಾರ್ಲೆಮ್ ಆಯಿಲ್‌ನ ಕಸ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟೆಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರೋಯ್ಡ್ – ಒಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹಂದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹವನನ್" ಎಂಬ ಹೆಮೊರೋಯ್ಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಲ್ಗರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ 1-4-0 ಎ ಪಿ ಬೇರೆ

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು.

ಮಲಬದ್ಧತೆಯು ಪ್ರವಣತೆಯುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3–4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳನ್ನು ಸರಿಯಾಗಿ ಸಾಗಿಸಿ ನಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಆಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ 1-0 0 ಎ ಪಿ ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರ

The Eclipse Distributing Agency,

Dahanu Road, B. B & C I Ry BOMBAY PRESIDENCY.

ದಯವಿಟ್ಟು ವಿಳಾಸ ಇಂಗ್ಲೀಷಿನಲ್ಲಿಯೇ ಬರೆಯಿರಿ.

ESTD. 1921 ಸ್ಥಾಪನೆ

FOUNDER
SRI. A B SHETTY, M. L. A,
ಸಂಸ್ಥಾಪಕರು
ಶ್ರೀ. ಎ. ಬಿ. ಶೆಟ್ಟರು, ಎಂ ಎಲ್ ಎ

ಸಂಪಾದಕ
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ 3—4—0
6 ತಿಂಗಳಿಗೆ - ರೂ. 1-12- 0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨೭

ಉಡುಪಿ, ಗುರುವಾರ, ೧೪—೩—೧೯೪೦.
UDIPI, THURSDAY, 14-3-1940.

VOL 19
No. 27

ಜಾಪಾನರ ಕಡೆಯ ಚೀನೀ ಸೇನೆ

ಜಾಪಾನರು ಗೆದ್ದಿರುವ ಚೈನದ ಪ್ರದೇಶಗಳಲ್ಲಿ ಅರ್ಧ ಮಿಲ್ಯ ಚೀನೀ ಸೇನೆಯನ್ನವರು ತರಬೇತಿಮಾಡಿರುತ್ತಾರೆ. ಕಳೆದ ವರ್ಷ ಅದರಲ್ಲಿ 1,50,000 ಮಂದಿ ಸೈನಿಕರು ದಂಗೆಯೆದ್ದು ಚೀನೀ ರಾಷ್ಟ್ರೀಯ ಸೇನೆಯೊಂದಿಗೆ ಸೇರಿರುತ್ತಾರೆ

ವಕೀಲರು ಕದ್ದೊಯ್ಯಲ್ಪಟ್ಟರು

ಬೆಂಗಳೂರಿನ ಪ್ರಮುಖ ವಕೀಲರಲ್ಲೊಬ್ಬರೂ ಸರ್. ವಿಶ್ವೇಶ್ವರಯ್ಯನವರ ಅಳಿಯಂದಿರೂ ಆದ ಶ್ರೀ ಮೋಕ್ಷಗುಂಡಮ್ ಕೃಷ್ಣಮೂರ್ತಿಯವರು ಇದೇ ತಾ 2ನೇ ಶನಿವಾರ ರಾತ್ರಿ ತಿರುಗಾಡ ಹೋದವರು ಹಿಂದೆ ಬರುವಾಗ ನೆಶನಲ್ ಹ್ಯಾಸ್ಕೂಲಿನ ಬಳಿ ಯಾರೋ ಕೆಲವರು ಟೇಕ್ಸಿಯಲ್ಲಿ ಧಾವಿಸಿ ಬಂದು ಅವರನ್ನು ಹಿಡಿದು ಬಲಾತ್ಕಾರದಿಂದ ಕದ್ದೊಯ್ದರು ಆಮೇಲೆ ತಾ. 5ರವರೆಗೆ ಅವರ ಪತ್ತೆಯೇ ಇಲ್ಲ. ತಾ. 5ರಲ್ಲಿ ಬೆಂಗಳೂರಿಂದ 30 ಮೈಲು ದೂರದ ಘಾಟಿ ಸುಬ್ರಮಣ್ಯನ್ ಎಂಬಲ್ಲಿ ಒಂದು ಗವಿಯೊಳಗೆ ಕೈಕಾಲು ಕಟ್ಟಲ್ಪಟ್ಟು ವಿಕೃತವಾಗಿ ಬಿದ್ದಿದ್ದ ಅವರ ಶವವು ಕಂಡುಹಿಡಿಯಲ್ಪಟ್ಟಿತು ಜನನಿಬಿಡವಾದ ನಡುರಸ್ತೆಯಲ್ಲಿ ನಡೆದ ಈ ವಿದ್ಯಮಾನವು ಪಟ್ಟಣದ ಜನರನ್ನು ದಿಗಿಲುಗೊಳಿಸಿರುವುದು. ಪೋಲೀಸರು ಈ ಕೊಲೆಯ ಸಂಬಂಧವಾದ 5 ಮಂದಿಯನ್ನು ಕೈದುಮಾಡಿರುವರು. ಟೇಕ್ಸಿಯ ಗುರುತು ಕೂಡಾ ಹಿಡಿಯಲಾಗಿದೆ. ಶ್ರೀ ಕೃಷ್ಣಮೂರ್ತಿಯವರ ಮರಣಸಂಬಂದವಾಗಿ ಇದೇ ತಾ 6ರಲ್ಲಿ ಬೆಂಗಳೂರು ಜಿಲ್ಲಾ ಮತ್ತು ಮುನ್ಸಿಫ್ ಕೋರ್ಟುಗಳು ಮುಚ್ಚಲ್ಪಟ್ಟಿದ್ದುವು.

ಲೋರ್ಡ್ ಅರ್ಸ್ಕಿನರ ಪ್ರಶಂಸೆ

ಇದೇ ತಾ. 8ರಲ್ಲಿ ತನ್ನ ಅಧಿಕಾರದ ಅವಧಿ ಮುಗಿದು ಮದ್ರಾಸ್ ಬಿಟ್ಟು ಹೋಗುವ ಲೋರ್ಡ್ ಅರ್ಸ್ಕಿನರನ್ನು ಇದೇ ತಾ 6ರಲ್ಲಿ ಮದ್ರಾಸಿನ ಪಟ್ಟಣಿಗರು ಗಾರ್ಡನ್ ಪಾರ್ಟಿ ಇತ್ತು ಸತ್ಕರಿಸಿ ಅವರಿಗೆ ವಿದಾಯ ಪತ್ರವನ್ನಿತ್ತು ಅವರ ಆಡಳಿತವನ್ನು ಪ್ರಶಂಸಿಸಿದರು. ಮದ್ರಾಸಿನ ಜನರು ತನ್ನ ಕುರಿತು ತೋರಿಸಿದ ಸಹಾನುಭೂತಿಗಾಗಿ ಅಭಾರ ಸೂಚಿಸಿ, ಪ್ರಾಂತಿಕ ಆಡಳಿತದ ಈಗಣ ಬದಲಾವಣೆಯು ಕೇವಲ ತಾತ್ಕಾಲಿಕ ಸ್ವರೂಪವಿರುವುದೆಂಬ ಆಶೆಯನ್ನು ಸೂಚಿಸಿದರು. ಇದೇ 8ನೇ ಬೆಳಿಗ್ಗೆ ಗವರ್ನರರು ಪತ್ನೀಪುತ್ರರೊಂದಿಗೆ ಮದ್ರಾಸ್ ಬಿಟ್ಟುಹೋಗುವಾಗ ಜನರು ರಸ್ತೆಬದಿಗಳಲ್ಲಿ ಸಾಲುಗಟ್ಟಿ ನೆರೆದು ಅವರಿಗೆ ಉತ್ಸಾಹಪರ ವಿದಾಯವಿತ್ತರು.

ಸಮಾಚಾರ ಸಂಗ್ರಹ

ಚೈನದಲ್ಲಿ ಜಾಪಾನ ಕೈಗೊಂಬೆ ಸರಕಾರ

ತಾವು ಗೆದ್ದ ಪ್ರದೇಶವನ್ನೆಲ್ಲಾ ಒಂದು ಕೇಂದ್ರ ಸರಕಾರದ ಅಧೀನಗೊಳಿಸಿ ರಾಜ್ಯಭಾರ ವ್ಯವಸ್ಥೆ ಮಾಡುವ ಜಾಪಾನರ ಪ್ರಯತ್ನವು ಈ ತಿಂಗಳ ಅಂತ್ಯದಲ್ಲಿ ಅಥವಾ ಎಪ್ರಿಲ್ ತಿಂಗಳ ಆದಿಯಲ್ಲಿ ಕೈಗೂಡಲಿರುವುದು ಚೀನೀ ರಾಷ್ಟ್ರೀಯ ಸರಕಾರದ ಮುಖ್ಯಾಧಿಕಾರಿಗಳಲ್ಲೊಬ್ಬರಾಗಿದ್ದು ಜಾಪಾನರ ಕಡೆಗೆ ಸೇರಿರುವ ಜನರಲ್ ವಾಂಗ್‌ಚಿಂಗ್ ವೈಯವರು ಈ ಕೇಂದ್ರ ಸರಕಾರದ ಅಧ್ಯಕ್ಷರಾಗಲಿರುವರು ನಾಂಕಿಂಗು ಪ್ರಧಾನ ಪಟ್ಟಣವಾಗುವುದು ಮಂಚೂರಿ ಮತ್ತು ಉತ್ತರ ಚೈನವು ಬಹುತೇಕ ಜಾಪಾನರ ಅಧೀನವಾಗಿಯೇ ಇರುವುದು ಒಳಮಂಗೋರಿಯದಲ್ಲಿ ಜಾಪಾನರು ಒಂದು ಲಕ್ಷ ಸೇನೆಯನ್ನಿರಿಸಿರುವರು. ಶಾಂಘಾಯಿ ಮತ್ತು ಹೇಂಕೋ ಪಟ್ಟಣಗಳಲ್ಲಿಯೂ ಜಪಾನ ಸೇನೆಯು ಇರಿಸಲ್ಪಡುವುದು. ದೇಶದಲ್ಲಿ ಶಾಶ್ವತ ಶಾಂತಿಯು ನೆಲೆಗೊಂಡಾಗ ಇತರ ಕಡೆಗಳಲ್ಲಿನ ಜಪಾನ ಸೇನೆಯನ್ನೆಲ್ಲಾ ಹಿಂದೆ ಕರೆಯಲಾಗುವುದು. ಚೀನದ ಎಲ್ಲಾ ವ್ಯಾಪಾರೋದ್ಯಮಗಳಲ್ಲಿಯೂ ಜಾಪಾನರಿಗೆ ಹೆಚ್ಚು ಕಡಿಮೆ ಅರೆವಾಸಿ ಪಾಲು ಇದ್ದೇ ಇರುವುದು ಪರದೇಶೀಯರ ವಿಶಿಷ್ಟ ಹಕ್ಕುಬಾಧ್ಯತೆಗಳು ತೆಗೆದು ಹಾಕಲ್ಪಡುವವು.

ಲೋಕದ ಅತಿ ದೊಡ್ಡ ಹಡಗ

ಲೋಕದ ಅತಿ ದೊಡ್ಡ ಹಡಗವಾದ 85,000 ಟನ್ ಘನ ತೂಕದ ಕ್ವೀನ್ ಎಲಿಜಬೆತು ಫೆಬ್ರವರಿ ತಾ. 26ರಲ್ಲು ಲಂಡನಿನಿಂದ ಹೊರಟು ತಾ. 6ರಲ್ಲು ನ್ಯೂಯೋರ್ಕ್ ಪಟ್ಟಣಕ್ಕೆ ಸುರಕ್ಷಿತವಾಗಿ ಮುಟ್ಟಿರುವುದು ಈ ಹಡಗದ ಚಾಲಕ ಯಂತ್ರವು 200,000 ಅಶ್ವ ಶಕ್ತಿಯುಳ್ಳದ್ದಾಗಿದೆ. ಗಂಟೆಗೆ 33 ಮೈಲು ವೇಗವುಳ್ಳದ್ದಾಗಿದೆ 2400 ಮಂದಿ ಪ್ರಯಾಣಿಕರ ಸಂಚಾರಾನುಕೂಲತೆಯಿದೆ. ಈ ಹಡಗದೊಳಗೆ 1 ಸಿನೆಮ, ಮತ್ತು ಒಂದು ನಾಟಕಗೃಹವಿದೆ ಅಂಗಡಿ, ಬೇಂಕು, ಟೆಲಿಫೋನ್, ಟೆಲಿಗ್ರಾಫ್ ಆಫೀಸು, ಮೊದಲಾದುವುಗಳೆಲ್ಲಾ ಇವೆ ಈ ಹಡಗವನ್ನು ಕೆಲಸಮಯ ನ್ಯೂಯೋರ್ಕಿನಲ್ಲೇ ಇರಿಸಲಾಗುವುದು ಇದರ ಸಹೋದರಿ ಹಡಗವಾದ ಕ್ವೀನ್‌ಮೇರಿಯೂ ಫ್ರಾನ್ಸಿನ ಅತಿ ದೊಡ್ಡ ಹಡಗ ನೋರ್ಮಂಡಿಯೂ ಅಮೇರಿಕದಲ್ಲೇ ಇರುವುವು ಕ್ವೀನ್ ಎಲಿಜಬೆತನ್ನು ನ್ಯೂಯೋರ್ಕಿನಲ್ಲಿರಿಸಲು ಅದರ ಮಾಲಕರಿಗೆ ದಿನವೊಂದಕ್ಕೆ 6000 ಪವನು ಖರ್ಚು ತಗಲುವುದು.

ಜರ್ಮನಿಯ ಇದ್ದಲು ರಪ್ತಿಗೆ ತಡೆ

ಇಷ್ಟರ ವರೆಗೆ ಜರ್ಮನಿಯು ಇಟೆಲಿಯಾನ ಸ್ಟೀಮರುಗಳ ಮೂಲಕ ಇದ್ದಲನ್ನು ಇಟೆಲಿಗೆ ಕಳುಹಿಸುತ್ತಿದ್ದಿತು ಈಗ ಬ್ರಿಟಿಷರು ಇದನ್ನು ತಡೆಗಟ್ಟಿರುವರು. ಸುಮಾರು 100,000 ಟನ್ನು ಜರ್ಮನ್ ಇದ್ದಲನ್ನು ತರುತ್ತಿದ್ದ 8 ಇಟೆಲಿಯಾನ ಹಡಗಗಳು ಇಂಗ್ಲೆಂಡಿನ ಡೌನ್ಸ್ ಎಂಬಲ್ಲಿ ನಿಲ್ಲಿಸಲ್ಪಟ್ಟಿವೆ ಇದರಿಂದ ಜರ್ಮನಿ ಮತ್ತು ಇಟೆಲಿಯಲ್ಲಿ ಕ್ರೋಧವುಂಟಾಗಿದೆ ಜರ್ಮನಿಯು ಈಗ ಭೂಮಾರ್ಗವಾಗಿ ಇದ್ದಲನ್ನು ಇಟೆಲಿಗೆ ಕಳುಹಿಸಹತ್ತಿದೆ

ಮದ್ರಾಸ್ ಕಾಂಗ್ರೆಸ್ ಭವನ ಫಂಡು

ಮದ್ರಾಸಿನ ಕಾಂಗ್ರೆಸ್ ಭವನವು ಸುಟ್ಟು ಹೋಗಿರುವುದಷ್ಟೆ ಅದನ್ನು ಪುನಃ ಕಟ್ಟುವುದಕ್ಕಾಗಿ ಹಿಂದು ಪತ್ರಿಕೆಯು ಆರಂಭಿಸಿದ ಫಂಡು ರೂ 10,000ಕ್ಕೆ ಮಿಕ್ಕಿರುವುದು. ಮಲಯ ದ್ವೀಪವಾಸಿಗಳಾಗಿರುವ ತಮಿಳರೇ ಮೊದಲಾದವರು ತಮಿಳು ನೇಶನ್ ಎಂಬ ಪತ್ರಿಕೆಯ ಮೂಲಕ ರೂ. 4000ವನ್ನು ಕೇಬಲಿಸಿ ಕಳುಹಿಸಿರುವರು

ಜಾಪಾನ ಯುದ್ಧ ಹಡಗಗಳ ನಾಶ

ಯಾಂಗ್‌ಟ್ಸೆ ನದಿಯ ಕೆಳಭಾಗದಲ್ಲಿ ಚೀನೀ ಬಟ್ಟರಿಗಳು ಕಳೆದ ಕೆಲವು ದಿನಗಳಲ್ಲಿ ಕಡಿಮೆ ಪಕ್ಷ 10 ಜಾಪಾನ ಯುದ್ಧ ಹಡಗಗಳನ್ನು ಮುಳುಗಿಸಿರುವವೆಂದು ತಿಳಿದು ಬಂದಿದೆ ಒಂದು ಹಡಗವೊಂದಿಗೆ ಅದರೊಳಗಿದ್ದ 200 ಮಂದಿ ಅಧಿಕಾರಿಗಳು ಮತ್ತು ನಾವಿಕರು ಮುಳುಗಿ ಹೋಗಿರುವರು. ಇದರಿಂದ ಉದ್ರೇಕಗೊಂಡ ಜಾಪಾನರು ಹತ್ತಿರದ ಹಳ್ಳಿಗಳನ್ನು

FOR THE BEST IN LIFE POLICIES

THE
TROPICAL INSURANCE
COMPANY, LIMITED

Head Office: "TROPICAL BUILDING", New Delhi.

Chairman. SUBHAS CHANDRA BOSE

Mangalore Branch: "NIVAS BUILDING" Hampankatta.

OTHER BRANCHES:
BOMBAY, MADRAS, CALCUTTA, PATNA, LUCKNOW, JAIPUR,
LAHORE, PESHAWAR, POONA, MADURA
DECCA, HYDERABAD (SIND).

ಸುಟ್ಟು ಹಾಕಿ ಜನರನ್ನು ಕೊಂದುಹಾಕಿರುವರು.

ಜರ್ಮನಿಗೆ ಪೋಲಿಶ್ ಕೆಲಸಗಾರರು

ಇಷ್ಟರ ವರೆಗೆ 140,000 ಮಂದಿ ಪೋಲರನ್ನು ಜರ್ಮನಿಯಲ್ಲಿ ಬೇಸಾಯ ಕೆಲಸಕ್ಕಾಗಿ ತರಲಾಗಿದೆ ಇನ್ನೂ ಒಂದು ಲಕ್ಷ ಮಂದಿಯನ್ನು ಕರೆತರಲಾಗುವುದು. ಇವರು ಸ್ವಇಚ್ಛಾಪೂರ್ವಕವಾಗಿಯೇ ಬಂದಿರುವರೆಂದು ಸರಕಾರದ ಪ್ರಕಟಣೆ ಇದರ ಹೊರತು 3 ಲಕ್ಷ ಮಂದಿ ಪೋಲಿಶ್ ಕೈದಿಗಳು ಭೂಮಿಯ ಕೆಲಸಕ್ಕಾಗಿ ಉಪಯೋಗಿಸಲ್ಪಡುತ್ತಿದ್ದಾರೆ

ಹಡಗಗಳ ನಾಶ

ಇದೇ ತಾ. ೩ಕ್ಕೆ ಅಂತ್ಯವಾಗುವ ವಾರದಲ್ಲಿ 21,231 ಟನ್ ತೂಕದ 8 ಹಡಗಗಳು ಮುಳುಗಿಸಲ್ಪಟ್ಟಿವೆ 6 ತಿಂಗಳ ಯುದ್ಧದಲ್ಲಿ ಒಟ್ಟು 6,20,000 ಟನ್ ತೂಕದಷ್ಟರ ಹಡಗಗಳು ಮುಳುಗಿಸಲ್ಪಟ್ಟಿರುತ್ತವೆ ಇದರಲ್ಲಿ ⅓ ರಷ್ಟನ್ನು ಹೊಸತಾಗಿ ಕಟ್ಟಲಾಗಿದೆ ಜರ್ಮನಿಯ ನಷ್ಟವು ಒಟ್ಟು 2,71,000 ಟನ್ ತೂಕವಾಗಿದೆ. ಇದರಲ್ಲಿ ಹಿಡಿಯಲ್ಪಟ್ಟ 22 ಮತ್ತು ಆತ್ಮಘಾತಮಾಡಿಕೊಂಡಿರುವ 25 ಹಡಗುಗಳು ಕೂಡಾ ಸೇರಿರುತ್ತವೆ.

300 ಮಿಲಿಯ ಪವನು ಯುದ್ಧ ಸಾಲ

ಯುದ್ಧ ವೆಚ್ಚಕ್ಕಾಗಿ ಬ್ರಿಟಿಷ್ ಸರಕಾರವು ನಾಲಿಯಾನ ಸೇಕಡ ३ರ ಬಡ್ಡಿಯಿಂದ 300 ಮಿಲ್ಯ ಪವನು ಸಾಲ ಪಡೆಯುವ ನಿರ್ಧಾರಮಾಡಿರುತ್ತದೆ ಈ ಸಾಲವನ್ನು 15ರಿಂದ 18 ವರ್ಷಗಳೊಳಗೆ ಹಿಂದೆ ಕೊಡಲಾಗುವುದು

ಶ್ರೀ। ಜಯಪ್ರಕಾಶ ನಾರಾಯಣರ ದಸ್ತಗಿರಿ

ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷದ ಜನರಲ್ ಸಕ್ರೆಟರಿಗಳಾದ ಶ್ರೀ ಜಯಪ್ರಕಾಶ ನಾರಾಯಣರು ಕೆಲವು ದಿನಗಳ ಮೊದಲು ಜಮ್ಷೆಡ್ ಪುರದಲ್ಲಿ ಹಿಂದೂ ದೇಶದ ಸಂರಕ್ಷಣಾ ಕಾನೂನಿಗೆ ವಿರೋಧವಾಗಿ ಕೊಟ್ಟ ಭಾಷಣಕ್ಕಾಗಿ ಇದೇ ತಾ. 7ರಲ್ಲಿ ಪಟ್ನದಲ್ಲಿ ದಸ್ತಗಿರಿಮಾಡಲ್ಪಟ್ಟಿರುವರು ಕಾಂಗ್ರೆಸ್ಸಿನೊಳಗಣ ಎಡಪಕ್ಷೀಯರೆಲ್ಲಾ ತಮ್ಮೊಳಗಣ ಭಿನ್ನಭೇದಗಳನ್ನು ಮರೆತು ಒಂದುಗೂಡಿ ಕಾಂಗ್ರೆಸ್ಸನ್ನು ಬಲಪಡಿಸಬೆಕೆಂದು ಶ್ರೀ ಜಯಪ್ರಕಾಶ ನಾರಾಯಣರು ತಮ್ಮ ದಸ್ತಗಿರಿಯ ಸಂದರ್ಭದಲ್ಲಿ ವಿನಂತಿಮಾಡಿಕೊಂಡಿರುವರು

ರಾಮಗಡವು ಉತ್ತರ ಕೊಡುವುದು

"ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆಯಿತ್ತಂದಿನಿಂದ ಕಳೆದ ಕೆಲವು ತಿಂಗಳಲ್ಲಿ ಪ್ರಾಂತಿಕ ಸರಕಾರಗಳು ಹಲವು ಮಂದಿ ಕಾಂಗ್ರೆಸ್ ವಾದಿಗಳನ್ನು ಹಿಡಿದು ಜೈಲಿಗೆ ಹಾಕಿರುವುದು. ಪಂಜಾಬು ಮತ್ತು ಬಂಗಾಳದಲ್ಲಿ ಈ ದಬ್ಬಾಳಿಕೆಯು ಎಡೆಬಿಡದ ನಡೆದಿರುವುದು. ಇದನ್ನೆಲ್ಲಾ ತಾಳಿಕೊಂಡು ನಾವು ತಟ್ಟಯಿಂದಿದ್ದೆವು ಆದರೆ ಇದರಿಂದ ಸರಕಾರವು ಎಷ್ಟು ಮಂದಿಯನ್ನು ಬಂಧನದಲ್ಲಿ ಹಾಕಿದರೂ ಕಾಂಗ್ರೆಸು ತಾಳ್ಮೆಯಿಂದಿರುವುದೆಂದು ಎಣಿಸಲು ಸಾಧ್ಯವಿಲ್ಲ ಇಂದೀಗ ಶ್ರೀ ಜಯಪ್ರಕಾಶ ನಾರಾಯಣರು ದಸ್ತಗಿರಿ ಮಾಡಲ್ಪಟ್ಟಿರುವರು ಅವರು ನಮ್ಮ ಅತ್ಯಂತ ಪ್ರೀತಿಯ ಮತ್ತು ಅತ್ಯಮೂಲ್ಯ ಬಂಧುವು ಅಂಥವರ ದಸ್ತಗಿರಿಯು ಮಹತ್ವದ್ದಾಗಿದ ಕಾಂಗ್ರೆಸಿನ ಎದುರಾಗಿ ಯುದ್ಧಹೂಡಲು ಸರಕಾರವು ನಿರ್ಧಾರಮಾಡಿರುವುದೆಂಬುದನ್ನದು ಸೂಚಿಸುತ್ತದ ಅದಕ್ಕೆ ಕಾಂಗ್ರೆಸು ಕೂಡಾ ಸಿದ್ಧವಾಗಿದೆ ಕಾಂಗ್ರೆಸ್ ಅಧಿವೇಶನ ನಡೆಯುವ ಪ್ರಾಂತದಲ್ಲೇ ಈ ದಸ್ತಗಿರಿ ನಡೆದುದು ಯುಕ್ತವಾದುದೇ ಸರಿ ಇದಕ್ಕೆ ತಕ್ಕ ಉತ್ತರವನ್ನು ರಾಮಗಡ ಕಾಂಗ್ರೆಸು ಕೊಡದಿರಲಾರದು." ಎಂದು ಪಂಡಿತ ಜವಾಹರಲಾಲರು ಶ್ರೀ ಜಯಪ್ರಕಾಶರ ದಸ್ತಗಿರಿಯಿಂದ ಉದ್ವೇಗಗೊಂಡಿರುವರು ಪಟ್ನದ ಕಾಂಗ್ರೆಸ್ ಪಕ್ಷೀಯರಲ್ಲಿಯೂ ಈ ದಸ್ತಗಿರಿಯ ಕುರಿತು ಕ್ಷೋಭೆವುಂಟಾಗಿದೆ

ಸಿಂಧ್ ಮಂತ್ರಿಮಂಡಲ

ಸಿಂಧಿನ ಪ್ರಧಾನ ಮಂತ್ರಿಗಳೂ ಇತರ ಪಕ್ಷಗಳ ಮುಖಂಡರೂ ಸರ್ದಾರ್ ವಲ್ಲಭಾಯಿ ಯವರೊಡನೆ ಟೆಲಿಫೋನ್ ಮೂಲಕ ಮಾತಾಡಿದ ಪರಿಣಾಮವಾಗಿ ಸಿಂಧಿನ ಕಾಂಗ್ರೆಸ್ ಪಕ್ಷೀಯರು ರಾಮಗಡ ಕಾಂಗ್ರೆಸ್ ಅಧಿವೇಶನದ ವರೆಗೆ ಅಲ್ಲಾಬಕ್ಷ್ ಮಂತ್ರಿಮಂಡಲವನ್ನು ವಿರೋಧಿಸದ ತಟಸ್ಥವಿರುವ ನಿರ್ಧಾರಮಾಡಿರುವರು ಸರ್ದಾರ್ ವಲ್ಲಭ ಬಾಯಿಯವರ ಈ ರೀತಿ ಅನುಜ್ಞೆಯಿತ್ತಿರುವರು ಅಲ್ಲಾಬಕ್ಷರು ರಾಮಗಡ ಕಾಂಗ್ರೆಸಿಗೆ ಹೋಗಿ ಸಿಂಧಿನ ಪರಿಸ್ಥಿತಿಯ ಕುರಿತು ಕಾಂಗ್ರೆಸ್ ಮುಖಂಡರೊಡನೆ ಮಾತಾಡಲಿರುವರು

— ಏಜಂಟರು ಬೇಕು —

'ನವಯುಗ'ದ ಬಿಡಿ ಪ್ರತಿಗಳನ್ನು ವಿಕ್ರಯಿಸಲು ಈ ಕೆಳಗಿನ ಸ್ಥಳಗಳಲ್ಲಿ ಏಜಂಟರು ಬೇಕು. (ಮೊದಲಿನ ಏಜಂಟರನ್ನು ನಿವೃತ್ತಿಪಡಿಸಲಾಗಿದೆ)

1 ಕುಂದಾಪುರ, 2 ಮೈಸೂರು, 3 ಹಾಸನ, 4 ದಾವಣಗೆರೆ, 5. ಶಿವಮೊಗ್ಗ.

ಕ್ರಮ ನಿಯಮಗಳಿಗೆ ಬರೆದುಕೊಳ್ಳಿರಿ

ಮೆನೇಜರ್

ಕನ್ನಡ ನುಡಿಹೆಣ್ಣಿಗೊಂದು ಕನ್ನಡಗಿತ್ತಿಯ ಕಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ

ಬೆಲೆ: ೦-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು

ಬರಹಗಾರ್ತಿಯರು –

ಶ್ರೀಮತಿ ಮಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ಣಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M. A., M. R. A. S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ಧರ್ಮಪ್ರಚಾರಕವಾಗಿಯೂ ಇದೆ ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ'

ಪ್ರತಿಗಳು ಸಿಗುವ ಸ್ಥಳ

ನವಭಾರತ ಪುಸ್ತಕ ಭಂಡಾರ,

ಉಡುಪಿ

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗನ ಜೀವನಕ್ಕೆ ತಕ್ಕ ಏರ್ಪಾಡುಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ

ಓರಿಯಂಟಲ್‌ನಲ್ಲಿ ಪಡೆಯಿರಿ.

— ಮಕ್ಕಳ ಮುಂದುವರಿಸಲ್ಪಡುವ ವಿಮೆಯು —

ನವೀನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಪಾವತಿಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇದೇ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿದೆ ಇದರಲ್ಲಿ **22**ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ್" ಆರಂಭವಾಗುವುದು

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ: —

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ

ಅಥವಾ ದಿ ಬ್ರಾಂಚ್ ಸೆಕ್ರೆಟರಿ,

ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,

ಸೌತ್‌ಪೆರೇಡ್ ಬೆಂಗಳೂರು.

—ORIENTAL—

GOVERNMENT SECURITY LIFE ASSURANCE CO., LTD.

ಕೃತ್ರಿಮ ಜಗತ್ತು

ನುಡಿ ಪುರಾತನ! ನಡೆ ಕಿರಾತನ!!

ನಿರಕ್ಷರ ಕುಕ್ಷಿಯಾದರೂ ಪೆನ್ನುಗಳ ಸಾಲು ಜೇಬಿನಲ್ಲಿ ಪತ್ರಿಕೆಗಳ ಕಟ್ಟು ಕೈಯಲ್ಲಿ! ಎಲ್ಲಾ 'ಡೋಂಗಿ'

ಇಂದಿನದು ನಾಗರೀಕತೆಯ ಕಾಲವೆಂದೆನ್ನುತ್ತಾರೆ. ಯಂತ್ರ ಸಾಮಗ್ರಿಗಳ ದೃಷ್ಟಿಯಿಂದಾಗಲೀ ನವನಾಗರೀಕತೆಯ ವಿವೇಚನೆಯಿಂದಾಗಲೀ, ಅಥವಾ ಇನ್ನಾವ ಕಲಾಕೌಶಲದ ವಿಚಾರದಿಂದಲಾಗಲೀ ನವನಾಗರೀಕತೆಯ ವಿವೇಚನೆಯಿಂದಾಗಲೀ, ಅಥವಾ ಇನ್ನಾವ ಕಲಾಕೌಶಲದ ವಿಚಾರದಿಂದಲಾಗಲೀ ಇಂದಿನ ಯುಗವು ವಿವಿಧ ಸಂಸ್ಕೃತಿಗಳ ಉಚ್ಚಶಿಖರವನ್ನೇರಿದೆ ಎಂದು ಹೇಳುತ್ತಾರೆ. ಈ ನಾಗರೀಕತೆಯೊಂದಿಗೆ ಮಾನವನ ಆಚಾರ ವಿಚಾರವಾಗಲೀ, ನೀತಿವ್ಯವಹಾರವಾಗಲೀ ಬೆಳೆಯದೇ ಇಲ್ಲ. ಮಾನವನ ಜೀವನದಲ್ಲೇ ಸುಧಾರಣೆಯಿಲ್ಲ; ಅಥವಾ ಆತನ ದಿನಚರಿ ವ್ಯವಹಾರದಲ್ಲಿ ಅಭಿವೃದ್ಧಿಯಿಲ್ಲ; ಆತನ ಉಡಿಗೆ, ತೊಡಿಗೆ ನಡತೆ, ನೀತಿ, ತಿಂಡಿ, ತಿನಸು, ಯಾಕೆ? ಮಾನವನ ವಿವಿಧ ಕ್ಷೇತ್ರಗಳಲ್ಲೆಲ್ಲಾ ಸುಧಾರಣಾಕ್ರಾಂತಿಯು ನಡೆದಿದೆ ಎನ್ನುತ್ತಾರೆ. ನಿಜವಿರಬಹುದು! ಆದರೆ ಸತ್ಪಥದಲ್ಲ ಹೇಗೋ ಹಾಗೇ ದುರ್ಮಾರ್ಗದಲ್ಲೂ ಸುಧಾರಣೆ (?) ಗಳಾಗುತ್ತಿವೆ. ನವೀನ ರೀತಿಯ ಕಳವುಗಳು, ವಿಚಿತ್ರ ಮೋಸಗಳು, ದಂಗುಬಡಿಸುವ ಕೃತ್ರಿಮ ಸೋಗುಗಳು, ಇವು ತಡೆಯಿಲ್ಲದೆ ಮುಂದರಿದಿವೆ. ಇದರೊಂದಿಗೆಯೇ ಮಾನವನ ಅನುಕರಣಶಕ್ತಿಯು ಬೆಳೆದಿದೆಯೆಂದು ಬೇರೆ ಹೇಳಬೇಕಿಲ್ಲ. ಪೂರ್ವಾಪರವಿವೇಚನೆಯಿಲ್ಲದೆ, ಬೇಕು ಬೇಡಗಳ ಪರಿವೆಯಿಲ್ಲದೆ ಅನುಕರಣವು ನಡೆದಿದೆ. ಶೀತ ದೇಶದವರು ಚಳಿಗಾಗಿ ಉಣ್ಣೆ ಬಟ್ಟೆ ಧರಿಸುವರೆಂದರೆ ಉಷ್ಣ ದೇಶದವರು ಅದರ ವಿಚಾರವಿಲ್ಲದೆ ಶೋಕಿಗಾಗಿ ಅದನ್ನು ಧರಿಸಿ ಬೆವರಿಳಿಸಿಕೊಂಡು ಓಡಾಡುವರು. ಇದೀಗ ಅಂಧಾನುಕರಣೆಯೆಂದೆನಿಸುವದು. ಇರಲಿ, ಇಂದು ಯಾವನೊಬ್ಬನಾದರೂ ಜನತೆಯ ಬಾಹ್ಯವ್ಯಾಪಾರವನ್ನು ಗಮನಿಸಿದರೆ ಅವರಲ್ಲಿ ಸ್ವಾತಂತ್ರ್ಯದಾಹವು ಹುಟ್ಟಿ ಜೀವನದ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯ ಸಂಪಾದನೆಗೇ ಜೀವಮಾನವನ್ನು ನಿಕ್ಷೇಪಿಸಿಟ್ಟಂತೆ ಕಾಣುವುದು. ಬಾಯಲ್ಲಿ ಬರುವ ಸ್ವಾತಂತ್ರ್ಯಕಣಗಳಿಂದ ಕೂಡಿದ ವಾಕ್ಸರಣಿ ಹೊರಗೆ ತೋರಿಸುತ್ತಿರುವ ಅವನ ತ್ಯಾಗಬುದ್ಧಿಯನ್ನು ನೋಡಿದರೆ ಅವನಲ್ಲಿ ರಾಷ್ಟ್ರೀಯ ಜಾಗೃತಿ ಎಷ್ಟು ಉಚ್ಚಮಟ್ಟಕ್ಕೇರಿದೆಯೋ ಎಂಬ ಶಂಕೆಯುಂಟಾಗುವದು. ಆದರೆ ಪರಿಸ್ಥಿತಿಯನ್ನು ಕೂಲಂಕಷ ನಿಜಾರಿಸಿದರೆ ಅದರೊಳಗಿನ ಟೊಳ್ಳುತನ ಒಡೆದು ಕಾಣುವದು. ವಾಚಕರು ತಾಳ್ಮೆಗೆಡದಿದ್ದರೆ ಮೇಲ್ಕಂಡ ನನ್ನ ಉದ್ಗಾರದ ಪುಷ್ಟೀಕರಣದ ಬಗ್ಗೆ ನಮ್ಮೂರಲ್ಲಿ ಆಗಾಗ್ಯೆ ನಡೆಯುತ್ತಿರುವ ಅನೇಕ ಕಾರ್ಯಗಳಲ್ಲಿ ಒಂದು ಸ್ಯಾಂಪಲನ್ನು ಎತ್ತಿ ಹೇಳುವೆನು. 'ನಮ್ಮೂರು ಎಂದ ಮೇಲೆ ಅದರ ಪರಿಚಯ ಒಂದಿಷ್ಟು ನಿಮಗೆ ಬೇಡವೇ? ಒಂದೇ ವಾಕ್ಯದಲ್ಲಿ ನಿಮಗೆ ಹೇಳುವುದಾದರೆ ಪ್ರಕೃತಿ ಸೌಂದರ್ಯದ ನೆಲೆವೀಡು ಅದು. ಜನತೆಯ ಪರಿಚಯವೆಂದರೆ ಎಲ್ಲರೂ ಬಾಯಲ್ಲಿ ಸ್ವಾತಂತ್ರ್ಯ ಶಬ್ದ ಧರಿಸಿದವರೇ ಅ; ಸ್ವಾತಂತ್ರ್ಯದ ಮೂರ್ತಿಗಳು. ಪ್ರಗತಿ ಪ್ರತಿಷ್ಠೆಗಳನ್ನು ಪಡೆದು ತಾನೇ ತಾನಾಗಿ ಮೆರೆಯಬೇಕೆಂಬ ಮಹತ್ವಾಕಾಂಕ್ಷಿಗಳು. ಮೇಲಾಗಿ ಎಲ್ಲರೂ ಓಡಿದ ಧ್ಯೇಯಕ್ಕಾಗಿ ಪ್ರಾಣ ಕೊಡಲೂ ತಯಾರಿರುವ ಖಂಡಿತವಾದಿಗಳು. ಇಂಥಾ ನಮ್ಮ ನಾಡಿಗೆ ಪರಊರಿನ ಸಂಗೀತಗಾರರೊಬ್ಬರು ಬಂದರು ಒಂದು ಖಚೇರಿ ನಡೆಸುವ ಏರ್ಪಾಡು ಮಾಡಲು ಒಬ್ಬರ ಆಶ್ರಯವನ್ನು ಹಿಡಿದು ಕಾರ್ಯ ಮಾಡತೊಡಗಿದರು. ಆಶ್ರಯದಾತರು ದೇಶೀಯನೆಂಬ ಆ ಮಮತೆಯಿಂದ ಕಷ್ಟಗಳನ್ನು ಸಹಿಸಿ ಸಂಗೀತ ಕಚೇರಿಯ ಏರ್ಪಾಡು ಮಾಡಲು ಪ್ರಯತ್ನಿಸಿದರು. ಅದೋ! ಅದಾಗಲೇ ಅದೊಬ್ಬ ಪ್ರತಿಷ್ಠಾಕಾಂಕ್ಷಿಯಲ್ಲಿ ಸೇಡಿನ ಬೀಜ ಉದ್ಭವವಾಯಿತು 'ಸಂಗೀತವನ್ನು ನನ್ನ ಆಶ್ರಯ ಪಡೆದು ಕಾರ್ಯ ಮಾಡದೆ ಇತರರನ್ನು ಆಶ್ರಯಿಸಿರುವನಲ್ಲಾ; ಊರಿನಲ್ಲಿ ನನ್ನ ಪ್ರತಿಷ್ಠೆಗೆ ಕುಂದು ತಂದನಲ್ಲಾ; ಇರಲಿ, ಸಾಧಿಸಿಯೇ ನೋಡಬೇಕೆ'ಂದು ಪ್ರತೀಕಾರದ ಬಾಂಬಿನಲ್ಲಿ ಪ್ರಯೋಗಕ್ಕೆ ಕೈಹಾಕಿದರು. ಸಂಗೀತ ಖಚೇರಿಗೆ ಜನರು ಬರಬಾರದೆಂದೂ ಪ್ರಚಾರ ಕೈಕೊಂಡರು. ಇದರಿಂದ ಸಂಗೀತ ಖಚೇರಿಯ ಯಶಸ್ವಿತೆಗೆ ಸ್ವಲ್ಪ ಧಕ್ಕೆ ಬಂದರೂ ಹೇಗೂ ಸಂಗೀತಗಾರರ ಅದೃಷ್ಟದಿಂದಲೊ, ಯಾ ಪ್ರೋತ್ಸಾಹಕರ ಶ್ರಮದಿಂದಲೋ ಖಚೇರಿಯು ಸಾಂಗವಾಗಿ ನಡೆಯಿತು. ದೇಶಪ್ರೇಮ, ದೇಶೀಯರ ಉನ್ನತಿಯ ಹಾರೈಕೆ ಈ ಸೋಗುಗಳಿಂದ ವರ್ತಿಸುವ ಹಾಗೂ ಮುಂದಿನ ಪೀಳಿಗೆಗೆ ಮಾರ್ಗದರ್ಶಿಗಳೆಂದುಕೊಳ್ಳುವ ಮಹನೀಯರ ಈ ರೀತಿಯ ಬೆಳಕಿನಲ್ಲಿ ಸಭ್ಯರಂತೆ ವರ್ತಿಸಿ ಕತ್ತಲೆಯಲ್ಲಿ ಕತ್ತಿ ಬೀಸುವ ಕಾರ್ಯಗಳೂ ನಾಗರೀಕತೆಯ ಹೊಸ ವಿಧಾನಗಳೇ. ಇದು ಒಂದು ಮಾದರಿ.

ತನ್ನಲ್ಲಿ ಅರ್ಹತೆ ಇಲ್ಲದಿದ್ದರೂ ಇತರರ ವಸ್ತುಗಳಿಂದ ಜನತೆಯ ಕಣ್ಣುಕಟ್ಟಿ ತನ್ನ ಮೇಲ್ಮೆಯನ್ನು ಸಾಧಿಸಿಕೊಳ್ಳುವ ಮಹನೀಯರಿಗೂ ನಮ್ಮೂರು ಆಶ್ರಯ ಕೊಟ್ಟಿದೆ. ಮೊನ್ನೆ ಮೊನ್ನೆ ನಮ್ಮ ಊರಿನಲ್ಲಿ ಒಂದು ಪ್ರದರ್ಶನ ನಡೆಯಿತು. ಅನೇಕರು ಕಷ್ಟಪಟ್ಟು ಬೆಳೆಸಿದ ತರಕಾರಿ, ಹಣ್ಣು ಹಂಪಲುಗಳನ್ನೂ ಪ್ರದರ್ಶಿಸಿದ್ದರು. ಆ ಮಧ್ಯೆ ಸಂತೆಗೆ ಮಾರಲು ಬಂದ ತರಕಾರಿಯನ್ನು ಕ್ರಯಕ್ಕೆ ಪಡೆದು ಪ್ರದರ್ಶನದಲ್ಲಿ ಇಟ್ಟು ತಾನು ವ್ಯವಸಾಯ ಚತುರನೆಂದು, ತನ್ನ ಹೆಗ್ಗಳಿಕೆಯನ್ನು ಜನತೆಯಲ್ಲಿ, ಕೊಚ್ಚಿಕೊಂಡು ಬಹುಮಾನ ಪಡಕೊಂಡ ನಮ್ಮ ಊರಿನ ಅನಾಥಭೂತಿಗಳ ಕುಟಿಲ ನೀತಿಯು ನಾಗರೀಕತೆಯ ಮುನ್ನಡೆಯ ಚಿಹ್ನೆಯೇ. ಕೃತ್ರಿಮ ಜಗತ್ತಿನ ಅನುಭವಬೇಕಿದ್ದರೆ ಮುಂದೆ 'ಬಕ ದೃಷ್ಟಿ'ಗೆ ಬರೆಯಿರಿ. ಅಂತೂ ಕೊನೆಯದಾಗಿ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ ಮೊನ್ನೆ ನಮ್ಮೂರಿನಲ್ಲಿ ಚುನಾವಣೆಯ ಪ್ರಸಂಗ ಒಂದು ಬಂದಿತು. ಚುನಾವಣೆಯಿಂದ ಮುಂಚೆ ಓಟಿನ ಬೇಟೆ, ವಾಕ್ಜಾಲದ ಮಂಕುಬೂದಿಯ ಪ್ರಯೋಗ, ಉಮೇದ್ವಾರರ ಕಣ್ಣು ಕಟ್ಟುವ ಯೋಗ್ಯತಾ ಪ್ರದರ್ಶನ ಇವುಗಳ ಪ್ರತ್ಯೇಕ ವಿವರಣೆಯಗತ್ಯವಿಲ್ಲ

ಇವು ಒಂದು ಕಡೆ ಮತ್ತೊಂದೆಡೆ ನಿಮಗೆ ನನ್ನ ಅಮೂಲ್ಯ ಓಟನ್ನು ಕೊಡುವೆನೆಂದು ಒಬ್ಬ ಉಮೇದ್ವಾರನಲ್ಲಿಯೂ, ಆತನಿಗೆ ಕೊಡುವೆನೆಂದು ಇನ್ನೊಬ್ಬನಲ್ಲಿಯೂ ಹೇಳುತ್ತಿ, ವಿವಿಧ ಪಾತ್ರಗಳನ್ನು ವಹಿಸಿ ಎಲ್ಲರಿಗೂ ಸಭ್ಯನಾಗಿ ವರ್ತಿಸಬೇಕೆಂದು ಪ್ರಯತ್ನಿಸುತ್ತಿದ್ದ ಮತದಾರನನ್ನು ನೋಡಿ ಮನ ಕರಗಿತು, ತಮ್ಮ ವ್ಯಕ್ತಿತ್ವವನ್ನು ಮಾಂಕೊಂಡು ತಮ್ಮ ವಿವೇಚನಾ ಶಕ್ತಿಯನ್ನುಪಯೋಗಿಸದೆ ವರ್ತಿಸುತ್ತಿದ್ದ ನಾಗರೀಕ ಜನತೆಯು ವರ್ತನೆಯು ಸೊಗಸಿತ್ತು. ಕಾಂಗ್ರೆಸಿಗರು ಬಂದು ಓಟು ಕೊಡಬೇಕೆಂದಾಗ ಅಪ್ಪಟ ಕಾಂಗ್ರೆಸಿಗನಂತೆ ಮಹಾತ್ಮರ ದಿವ್ಯ ಸಂದೇಶಗಳನ್ನು ಸಾರುವ ಪೈಖರಿ ಒಂದೆಡೆ, ವಿರೋಧಪಕ್ಷದವರು ಬಂದಾಗ ಕಾಂಗ್ರೆಸ್ಸನ್ನು ತುಚ್ಛೀಕರಿಸಿ ಅದನ್ನು ರಸಾತಳಕ್ಕೆ ತುಳಿಯುವ ಔದ್ಧ್ಯಾವೇಶವಿನ್ನೊಂದೆಡೆ, ಎಂಥಾ ವಿಚಿತ್ರ ನಟನೆ! ಕೃತ್ರಿಮ ಜಗತ್ತಿನ ವಿಲಾಸವಿದು.

ನಿರಕ್ಷರ ಕುಕ್ಷಿಗಳಾದರೂ ಜೇಬಿನಲ್ಲಿ ಲೇಖನಿ (ಪೆನ್)ಗಳನ್ನು ಸಾಲಾಗಿ ಸಿಕ್ಕಿಸಿ ಮೆರೆಯುವ ವೈಖರಿ! ಓದಲು ಬರದಿದ್ದರೂ ಕೈಯಲ್ಲಿ ಪತ್ರಿಕೆ ಹಿಡಿದು ತಿರುಗುವ ಭರ್ಜರಿ, ಸಾರ್ವಜನಿಕ ಸಭೆಗಳಲ್ಲಿ ಸಭಾ ಕಂಪದ ಚಳಿಯಿಂದ ನಡುಗಿ ಬಾಯಿ ಬಿಡಲಾಗದವರೂ ಅಖಂಡ ಮುಖಂಡರಂತೆ ವರ್ತಿಸುವ ಮಾದರಿ ಇದೆಲ್ಲಾ ಕೃತ್ರಿಮ ಜಗತಿನ ಸೋಗುಗಳು. ಈ ಕೃತ್ರಿಮ ಜಗತ್ತಿನಲ್ಲಿ ಸ್ತ್ರೀ ಪ್ರಪಂಚದ ವರ್ಣನೆಯ ಹವ್ಯಾಸಕ್ಕೆ ಈ ಲೇಖನದಲ್ಲಿ ನಾನು ಕೈಯಿಕ್ಕಲಾರೆ ಅದು ಪ್ರತ್ಯೇಕ ರಾಮಾಯಣವೇ ಆದೀತು. ಒಟ್ಟಾರೆ ಇಂದಿನ ಕೃತ್ರಿಮ ಜಗತ್ತಿನ ಮಾದರಿಯನ್ನು ವಿವರಿಸುತ್ತಾ ನಡೆದರೆ ಪುರಾತನ ಕಾಲಗಳಲ್ಲಿ ರಾಕ್ಷಸರು ಮಾಡುತ್ತಿದ್ದ ಮಾಯಾ ಜಾಲದ ಕೃತ್ಯಗಳು ಯೋಚನೆಗೆ ಬರುತ್ತವೆ. ಹೊರಗೆ ನೋಟಕ್ಕೆ ಶೀಲವಂತರು, ಸುಗುಣಶಾಲಿಗಳು ಪರಮಪವಿತ್ರರು, ದೈವೀ ಪುರುಷರು! ಆದರೆ ಒಳಗೆ? ಕ್ರೂರಾಚಾರ, ಮೋಸ, ಡಂಭ, ಸುಳ್ಳು, ಮಿಥ್ಯಾಚರ್ಯ, ಇವುಗಳ ಗಣಿಗಳು. ಹೊರಗೆ ಕಾಲು ಹಿಡಿದು ಪೂಜಿಸುವ ಮಹಾ ಮಹಿಮರು. ಒಳಗೆ ಕತ್ತು ಹಿಸುಕಲು ಹಿಂಜರಿಯದ ಪಾಷಾಣ ಹೃದಯರು ಎಲ್ಲಾ ಕೃತ್ರಿಮ ಜಗತ್ತಿನ ಲೀಲಾಜಾಲವಿದು! ಈರಾಮಿ ಪ್ರಪಂಚದ ವೈಶಿಷ್ಟ್ಯವಿದು!! ಆಧುನಿಕ ನಾಗರೀಕತೆಯು ಟೊಳ್ಳುತನವಿದು!!! ನಿಸರ್ಗವನ್ನು ಬಿಟ್ಟು ಬಹು ದೂರ ಮುಂದರಿದಿರುವೆವೆಂದೆನ್ನುವ ನಾಗರೀಕರ ಮಾತಿನ ವಿಧ್ಯಾಚರ್ಯೆಯಿದು!!!!

(ಕೊಡಗು) (ಬಕದೃಷ್ಟಿ)

HURRY UP ? ? ?. UNIQUE OPPORTUNITY.

CLEARANCE SALE OF A LARGE CONSIGNMENT OF 10,000 WATCHES, JUST ARRIVED FROM SWITZERLAND, AT OLD PRICES.



No. 416 Chromium Case Rs 5—10
No 417 Golden Case Rs 6— 6
No 417 R Rolledgold 10yrs. Jewelled Mov. Rs. 12—8



ROUND OR CUSHION
No 401 Chromium Case Rs. 2—12
No 402 Golden Case Rs. 4— 8



No 424 Chromium Case Rs 7—8
No 425 Golden Case Rs 8—4
No 423 R Rolledgold 10yrs. 13—8

LATEST ARRIVAL 1940
STRONG & DURABLE
ACCURATE TIME-KEEPERS
Guaranteed Lever Movement

As. 9/- Extra for Postage.

For further particulars send for our new catalogue No. 16.

(Correspondance in English)

BAPALAL & CO.,
101 Abdul Rehman Street,
BOMBAY, 3.



No. 1428 Chromium Cas. Rs. 9—0
No. 1430 Rolledgold 10yrs. Rs 15—0

LADIES MINIATURES.



Geneva Movement.
No 460 Chromium Case Rs 10—8
No 461 Golden Case Rs 12—0
No. 162 Rolledgold 10yrs. Rs. 15—0

ವಿವಿಧ ಸಮಾಚಾರ

ರಸ್ಯಾ ಫಿನ್ಲೆಂಡುಗಳೊಳಗೆ ಸಂಧಿಯಾಗುವುದೇ?

ಫಿನ್ಲೆಂಡಿನಲ್ಲಿ ಯುದ್ಧವು ಈ ಮಾಪ್ರಕಾರ ನಡೆಯುತ್ತಿರುವುದ ವೈಪುರಿ ಪಟ್ಟಣವನ್ನು ಸೋವಿಯೆಟ್ ಸೇನೆಯು ಆವರಿಸಿರುವುದ ವರೆಗೂ ಅವರ ಕೆಲವು ಭಾಗಗಳು ಫಿನ್ನರ ಅಧೀನವಿರುತ್ತವೆ. ಇಲ್ಲಿ ಭೀಕರ ಕದನ ನಡೆದು ರಸ್ಯಾನರು ಹೆಚ್ಚಿನ ನಷ್ಟ ಹೊಂದಿದ್ದಾರೆ. ಆದರೂ ಫಿನ್ಲೆಂಡು ಇನ್ನು ಮುಂದೆ ದೀರ್ಘಕಾಲ ರಸ್ಯವನ್ನು ವಿರೋಧಿಸಲು ಸಾಧ್ಯವಿಲ್ಲ. ಅದರ ಪರಿಸ್ಥಿತಿಯು ಆಶಾಜನಕವಿರುವುದಿಲ್ಲ. ಈ ನಡುವೆ ಸ್ವೀಡನಿನ ಮಧ್ಯಸ್ತಿಕೆ ಮತ್ತು ಒತ್ತಾಯದಿಂದ ಸಂಧಿಯ ಪ್ರಯತ್ನ ನಡೆಯುತ್ತಿದೆ. ಇವರಲ್ಲಿ ಜರ್ಮನಿಯ ಒಳಕೈಯೂ ಇರುವಂತಿದೆ. ಸೋವಿಯೆಟ್ ಸರಕಾರವು ತನ್ನ ಕೇಳಿಕೆಗಳನ್ನು ಮೊದಲಿಗಿಂತಲೂ ಸ್ವಲ್ಪ ಹೆಚ್ಚಿಸಿದೆ. ಅವುಗಳಿಗೆ ಫಿನ್ಲೆಂಡು ಒಪ್ಪದೆ ಹೋರಾಟವನ್ನು ನಿಲ್ಲಿಸಲು ಸಮ್ಮತಿಸುವುದಿಲ್ಲ. ಉತ್ತರದ ಪೆಟ್ಸಾಮೋ ಬಂದರ ಅದರ ಬಳಿಯ ನಿಕ್ಕೆಲ್ ಗಣಿ ಮತ್ತು ವಿಮಾನ ಹಡಿಯವ ಹಕ್ಕನ್ನು ಬಿಟ್ಟುಕೊಡಬೇಕು. ಫಿನ್ಲೆಂಡಿನ ಕರಾವಳಿಯ ಕೋಟೆಗಳನ್ನೆಲ್ಲಾ ತೆಗೆದು ಹಾಕಬೇಕು. ವೈಪುರಿ ಮತ್ತು ಲಡೋಗ ಸರೋವರ ಪ್ರದೇಶಗಳನ್ನು ಬಿಟ್ಟುಕೊಡಬೇಕೆಂಬುದೇ ಸೋವಿಯೆಟ ಸರಕಾರದ ಕೇಳಿಕೆಯೆಂದು ಸುದ್ದಿಯುಂಟಾಗಿದೆ. ಈಗ ವಿದ್ಯಮಾನಗಳನ್ನು ನೋಡಿದರೆ ರಸ್ಯಾ ಮತ್ತು ಫಿನ್ಲೆಂಡ ಗಳೊಳಗೆ ಸಂಧಿ ನಿಶ್ಚಯವೆಂಬಂತೆ ತೋರುತ್ತದೆ. ಸಂಧಿ ಪ್ರಸ್ತಾಪಮಾಡಲು ಫಿನ್ನಿಶ್ ಸರಕಾರದ ಅಧಿಕಾರಿಗಳು ಸ್ಟಾಕ್ಹೋಲ್ಮಿಗೆ ಹೋಗಿರುತ್ತಾರೆ.

ರಿಬೆಂಟ್ರಾಪರು ರೋಮಿಗೆ

ಜರ್ಮನ್ ವಿದೇಶ ಮಂತ್ರಿಗಳಾದ ರಿಬೆಂಟ್ರಾಪರು ಇದೇ ತಾ 10ರಲ್ಲಿ ರೋಮ್ ಪಟ್ಟಣಕ್ಕೆ ಹೋಗಿ ಕೌಂಟ್ ಸಿಯಾನೋ ಮತ್ತು ಮುಸಲೋನಿಯವರೊಡನೆ ಮಾತುಕತೆ ನಡೆಸುತ್ತಿರುವರು. ರಿಬೆಂಟ್ರಾಪರು ಮುಸಲೋನಿಗಳಿಗೆ ಯುರೋಪಿನ ಪರಿಸ್ಥಿತಿಯನ್ನು ಸರಿಯಾಗಿ ತಿಳಿಸಿ, ಈ ತಿಂಗಳ ಅಂತ್ಯದೊಳಗೆ ಜರ್ಮನಿಯು ನಡಿಸಲಿರುವ ಪ್ರಚಂಡ ಧಾಳಿಯಲ್ಲಿ ಇಟಲಿಯ ಸಹಾಯವನ್ನು ಪಡೆಯಲೆತ್ನಿಸುವರೆಂದು ನಂಬಲಾಗಿದೆ.

ಮೆಗ್ನೆಟಿಕ್ ತೋಟೆಗಳಿಂದ ರಕ್ಷಣೆ

ಜರ್ಮನಿಯ ಮೆಗ್ನೆಟಿಕ್ ತೋಟೆಗಳ ಹಾವಳಿಯಿಂದ ಬ್ರಿಟಿಷ್ ಹಡಗಗಳನ್ನು ರಕ್ಷಿಸುವ ಉಪಾಯವೊಂದನ್ನು ಬ್ರಿಟಿಷ್ ನೌಕಾ ಖಾತೆಯವರು ಕಂಡು ಹಿಡಿದಿರುವರು. ಹಡಗುಗಳು ಈ ತೋಟೆಗಳನ್ನು ಆಕರ್ಷಿಸದಂತೆ, ಅವುಗಳ ಹೊರ ಭಾಗದಲ್ಲಿ ಸುತ್ತಲೂ ಆ ಕಾಂತ ಶಕ್ತಿಯನ್ನು ಪ್ರತಿಘಟಿಸುವ ವಿದ್ಯುತ್ ತಂತಿಗಳನ್ನು ಸುತ್ತಲಾಗುವುದು.

ನೆಗಾಂವಿನ ಹೆಸರು ಬದಲಾವಣೆ

ವಾರ್ಧದಿಂದ 132 ಮೈಲು ಪಶ್ಚಿಮದಲ್ಲಿ ಶೇಗಾಂವ್ ಎಂಬ ರೈಲ್ವೇ ಸ್ಟೇಶನಿದ್ದು ಆಗಾಂವಿನ ಪಕ್ಕದಲ್ಲಿ ಬರಬೇಕಾದ ಕಾಗದ ಪತ್ರಗಳು ಅಲ್ಲಿಗೆ ಹೋಗುತ್ತಿರುವುದರಿಂದ ಸೆಗಾಂವಿನ ಹೆಸರನ್ನು ಸೇವಾಗ್ರಾಮ್ ಎಂದು ಬದಲಾಯಿಸಲಾಗಿದೆ.

ಕಾಂಗ್ರೆಸ್ ವಾದಿಗಳಿಗೆ ಗಾಂಧಿಯವರ ಎಚ್ಚರಿಕೆ

ಕಾಯಿದೆ ಭಂಗವನ್ನು ಯಾವಾಗ ಹೂಡಲಾಗುವುದೆಂಬ ಕುರಿತು ಗಾಂಧಿಜಿಯವರು ಹರಿಜನ ಪತ್ರಿಕೆಯಲ್ಲಿ ಬರೆದಿರುವ ಲೇಖನವೊಂದು ಅವರ ಭಾವನೆಗಳನ್ನು ವ್ಯಕ್ತಗೊಳಿಸುವುದು. "ಕಾಯಿದೆ ಭಂಗ ಯಾವಾಗ ಹೂಡಲ್ಪಡುವುದೆಂದು ಪ್ರತಿಯೊಬ್ಬರೂ ನನ್ನನ್ನು ಪ್ರಶ್ನಿಸುತ್ತಿದ್ದಾರೆ. ಕಾಯಿದೆ ಭಂಗಕ್ಕೆ ಇನ್ನು ಮೆಚ್ಚು ದಿನವಿರಲಾರದೆಂಬುದನ್ನು ಪಟ್ನದ ನಿರ್ಣಯವು ಪ್ರತಪಡಿಸುವುದು. ದೇಶ ಇನ್ನು ಮುಂದೆ ಕಣ್ಣಿಗೆ ಕೂಡಿರುವ ತಾಳ್ಮೆಯಿರಲಾರದು. ಆದರೆ ಮುಂದಿನ ಹೋರಾಟದ ವಿಷಯದಲ್ಲಿ ಯಾರೂ ಅಸಹಿಷ್ಣುತೆಯುಳ್ಳವರಾಗಬಾರದು. ಕಾಂಗ್ರೆಸಿನಲ್ಲಿ ಹಿಂಸ, ಬೇಶಿಸ್ತುಗಳು ತುಂಬಿರುವಾಗ ಒಮ್ಮೆಯೇ ಕಾಯಿದೆ ಭಂಗ ಹೂಡುವುದು ಆತ್ಮಘಾತುಕವಿದೆ. ಕಾಂಗ್ರೆಸ್ ಪಕ್ಷೀಯರಲ್ಲಿ ಸಾಕಷ್ಟು ಅಹಿಂಸೆ ಮತ್ತು ಶಿಸ್ತು ಇರುವುದೆಂದು ಖಾತ್ರಿಯಾಗದೆ ನಾನು ಕಾಯಿದೆ ಭಂಗ ಹೂಡಲಾರೆ. ವಿಧಾಯಕ ಕಾರ್ಯಕ್ರಮದ ಕುರಿತು ಅನಾಸಕ್ತಿಯು ಅವಿಶ್ವಾಸದ ಚಿನ್ಹೆಯೆಂದು ನಾನು ತಿಳಿದುಕೊಳ್ಳುತ್ತೇನೆ. ಹಾಗೆ ಅವಿಶ್ವಾಸವಿರುವವರಿಗೆ ಬೇಕಾದವನು ನಾನಲ್ಲ. ಕಾಂಗ್ರೆಸಿನೊಟ್ಟಿಗೆ ಸಾಕಷ್ಟು ಅಹಿಂಸ ಮತ್ತು ಶಿಸ್ತು ನೆಲೆಗೊಳ್ಳುವ ಆಶೆ ತೋರಿಬಾರದ ಪಕ್ಷದಲ್ಲಿ ನಾನು ನಾಯಕತ್ವದಿಂದ ನಿವೃತ್ತನಾಗುವುದೇ ಲೇಸು. ಕಾಂಗ್ರೆಸಿನೊಳಗೆ ಎಡ ಬಲ ಪಕ್ಷಗಳೆಂಬ ಭೇದವನ್ನೇನನು ಮಾಡುವುದಿಲ್ಲ. ಲೆಫ್ಟಿಸ್ಟರೆನಿಸುವವರು ಎಷ್ಟೊಂದು ಬೊಬ್ಬೆ ಎಬ್ಬಿಸಿದರೂ ನಾನು ಅಪಸರವಾಡಲಾರೆ. ಕಾಯಿದೆಭಂಗ ಹೂಡುವ ಸಂದರ್ಭಬಂದಾಗ ಇಡೀ ದೇಶವೇ ವಿರೋಧಿಸಿದರೂ ನಾನು ಕೇಳಲಾರೆ. ಅಂತರಿಕ ಒತ್ತಾಯವುಂಟಾದಾಗ ನಾನು ಹೋರಾಟ ಹೂಡಿಯೇ ಹೂಡುವೆನು. ಆದರೆ ಅದಕ್ಕೊಂದು ಕಾಲಾವಧಿಯೆಂಬುದೇನೂ ಇರುವುದಿಲ್ಲ. ಒಳಗಿನ ಕರೆಯು ಯಾವಾಗ ಬರುವುದೆಂದು ಹೇಳಬರುವುದಿಲ್ಲ. ಆದರೆ ಕಾಂಗ್ರೆಸು ನನ್ನನ್ನು ನನ್ನಷ್ಟಕ್ಕೆ ಬಿಟ್ಟುಬಿಡುವುದು ಲೇಸೆಂದು ಕೆಲವು ವೇಳೆ ನನಗನಿಸುತ್ತದೆ. ನನ್ನ ವಿಚಿತ್ರ ಅಭಿಪ್ರಾಯಗಳಿಂದ ಕಾಂಗ್ರೆಸಿನೊಳಗಿರಲು ನಾನು ಅನರ್ಹನೆಂಬಂತೆ ತೋರುತ್ತದೆ. ಇವನ್ನೆಲ್ಲಾ ಕಾಂಗ್ರೆಸ್ ವಾದಿಗಳು ಮನಗಂಡುಕೊಳ್ಳಬೇಕು. ನಾನು ನಿರ್ದೇಶಿಸಿರುವ ಶರ್ತಗಳು ನೆರವೇರಿಸಲ್ಪಡದೆ ಕಾಯಿದೆಭಂಗ ಹೂಡುವ ಹಾಗಿಲ್ಲ."

WANTED

A D com or Higher Grade passed teacher for a well established Commercial School, Udipi

For particulars apply to

C/o Navayuga Udipi

ದಕ್ಷಿಣ ಕನ್ನಡ ಜಿಲ್ಲಾ ಗಜೇಟ್ ಎಕ್ಸ್ಟ್ರಾರ್ಡಿನರಿ

ಅಧಿಕಾರದಿಂದ ಪ್ರಕಟಿಸಲ್ಪಟ್ಟಿದೆ

ಉಡುಪಿ ಮುನಿಸಿಪಾಲಿಟಿ

ಪ್ರಕಟಣೆ.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ —

ತಿದ್ದುಪಡಿಯಾದ ಮದ್ರಾಸ್ ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಗಳ 1920ನೇ ಇಸವಿ 5ನೇ ಆಕ್ಟಿನ IVನೇ ಶೆಡ್ಯೂಲಿನ 9ನೇ ಕ್ರಮಾಂಕ್ಕನುಗುಣವಾಗಿ ಸ್ವತ್ತಿನ ತೆರಿಗೆ ಪುಸ್ತಕಗಳು ಪುನರ್ವಿಮರ್ಶಿಸಲ್ಪಟ್ಟಿವೆ. ಈ ವಿಷಯದಲ್ಲಿ ರಿವಿಜನ್ ಅರ್ಜಿಗಳು ಈ ಪ್ರಕಟಣೆಯ ತಾರೀಕಿನಿಂದ ಸರಕಾರ ಮತ್ತು ಕಂಪೆನಿಗಳಿಂದ ಅರುವತ್ತು ದಿನಗಳೊಳಗೂ ಇನ್ನುಳಿದವರಿಂದ ಮೂವತ್ತು ದಿನಗಳೊಳಗೂ ಮುನಿಸಿಪಲ್ ಆಫೀಸಿನಲ್ಲಿ ದಾಖಲುಮಾಡಲ್ಪಟ್ಟರೆ ಅವುಗಳು ಪರ್ಯಾಲೋಚಿಸಲ್ಪಡುವವು. ತೆರಿಗೆಯು ಏರಿಸಲ್ಪಟ್ಟು ಆ ಬಗ್ಗೆ ಸ್ಪೆಶ್ಯಲ್ ನೋಟೀಸು ಹೊರಡಿಸಲ್ಪಟ್ಟ ಬಾಬ್ತುಗಳಲ್ಲಿ ಮೇಲೆ ಹೇಳಿದ 60 ದಿವಸ ಮತ್ತು 30 ದಿವಸಗಳ ಅವಧಿಯು ತೆರಿಗೆ ಏರಿಸೋಣಾದ ಬಗ್ಗೆ ಸ್ವತ್ತಿನ ಮಾಲೀಕನ ಮತ್ತು ಭೋಗೋಟಿದಾರನ ಮೇಲೆ ಸ್ಪೆಶ್ಯಲ್ ನೋಟೀಸು ಜ್ಯಾರಿಯಾದ ತಾರೀಕಿನಿಂದ ಎಣಿಸಲ್ಪಡುವುದು. ಪುನರ್ವಿಮರ್ಶಿಸಲ್ಪಟ್ಟ ತೆರಿಗೆಯು ತಾ 1-4-1940ರಿಂದ ಜ್ಯಾರಿಗೆ ಬರುವುದು.

ತೆರಿಗೆ ತೆರುವವರು ಯಾ ಅವರಿಂದ ಅಧಿಕಾರಹೊಂದಿದ ಏಜಂಟರು ಮುನಿಸಿಪಲ್ ಖಚೇರಿಯಲ್ಲಿ ಖಚೇರಿ ಇರುವಾಗ ಪುನರ್ವಿಮರ್ಶಿಸಲ್ಪಟ್ಟ ತೆರಿಗೆ ಪುಸ್ತಕಗಳನ್ನು ಸಂದರ್ಶಿಸಬಹುದು. ಈ ಕೆಳಗೆ ನಮೂದಿಸಿದ ಕ್ರಮದಲ್ಲಿ, ದಾಖಲು ಮಾಡಿದ ರಿವಿಜನ್ ಅರ್ಜಿಗಳನ್ನು ಮುನಿಸಿಪಲ್ ಖಚೇರಿಯಲ್ಲಿ ಅಪರಾಹ್ನ 1 ಘಂಟೆಯಿಂದ 5 ಘಂಟೆಯ ವರೆಗೆ ತನಿಖೆ ಮಾಡಲಾಗುವದು.

1 ಗುಂಡಿಬೈಲ್ ವಾರ್ಡ್—ಸೋಮವಾರ 6ನೇ ಮೇ '40, 2. ಬನ್ನಂಜೆ ವಾರ್ಡ್—ಮಂಗಳವಾರ 7ನೇ ಮೇ '40, 3 ಅಂಬ್ಲಪಾಡಿ ವಾರ್ಡ್—ಬುಧವಾರ 8ನೇ ಮೇ '40 4 ಬೈಲೂರು ವಾರ್ಡ್—ಗುರುವಾರ 9ನೇ ಮೇ '40, 5 ವಳಕಾಡು ವಾರ್ಡ್—ಶುಕ್ರವಾರ 10ನೇ ಮೇ '40, 6 ಕಣಿಯಾಡಿ ವಾರ್ಡ್—ಶನಿವಾರ 11ನೇ ಮೇ '40, 7. ಕುಂಜಿಬೆಟ್ಟು ವಾರ್ಡ್—ಸೋಮವಾರ 13ನೇ ಮೇ '40, 8. ತೆಂಕಪೇಟೆ ವಾರ್ಡ್—ಮಂಗಳವಾರ 14ನೇ ಮೇ '40, 9 ಸೆಂಟ್ರಲ್ ವಾರ್ಡ್—ಬುಧವಾರ 15ನೇ ಮೇ '40, 10 ಮೂಡನಿಡಂಬೂರು ವಾರ್ಡ್—ಗುರುವಾರ 16ನೇ ಮೇ '40, 11 ಕಾಡಬೆಟ್ಟು ವಾರ್ಡ್, 12 ಅಜ್ಜರಕಾಡು ವಾರ್ಡ್—ಶುಕ್ರವಾರ 17ನೇ ಮೇ '40

ಸರಕಾರಿ ಮತ್ತು ಕಂಪೆನಿಯವರ ಕಟ್ಟೋಣ ಇತ್ಯಾದಿಗಳ ಬಗ್ಗೆ —

1ರಿಂದ 6ನೇ ವಾರ್ಡಿನ ವರೆಗೆ ಸೋಮವಾರ 20ನೇ ಮೇ '40

7ರಿಂದ 12ನೇ ವಾರ್ಡಿನ ವರೆಗೆ ಮಂಗಳವಾರ 21ನೇ ಮೇ '40

ಕಾನೂನು ಪ್ರಕಾರ ಸ್ಪೆಶ್ಯಲ್ ನೋಟೀಸು ಕೊಡತಕ್ಕದ್ದೆಂತ ವಿಧಿಯಿರುವ ಸಂಗತಿಗಳಲ್ಲಿ ವಿನಹಾ ಮಿಕ್ಕ ಸಂಗತಿಗಳಲ್ಲಿ ತೆರಿಗೆಯು ಪುನರ್ವಿಮರ್ಶಿಸಲ್ಪಟ್ಟದ್ದರ ಕುರಿತು ಪ್ರತಿಯೊಬ್ಬನಿಗೆ ಪ್ರತ್ಯೇಕ ನೋಟೀಸು ಕಳುಹಿಸೋಣಾಗಲಿಕ್ಕಿಲ್ಲ. ಅಂದಾ ಸ್ಪೆಶ್ಯಲ್ ನೋಟೀಸುಗಳು ಕೂಡಾ ತೆರಿಗೆದಾರರ ಮತ್ತು ಭೋಗೋಟಿದಾರರ ಮೇಲೆ ಜ್ಯಾರಿಯಾಗಬಹುದಾದ್ದರಿಂದ ಪ್ರತಿ ಒಬ್ಬರೂ ಎಲ್ಲಾ ಸಂಗತಿಗಳಲ್ಲಿಯೂ ತೆರಿಗೆ ಪುಸ್ತಕಗಳನ್ನು ನೋಡಿಕೊಂಡು ಅಸಮಾಧಾನ ತೋರಿದ್ದಲ್ಲಿ ರಿವಿಜನ ಅರ್ಜಿಗಳನ್ನು ದಾಖಲುಮಾಡಬಹುದು. ಒಂದು ರಿವಿಜನ್ ಅರ್ಜಿಯಲ್ಲಿ ಒಂದೇ ವಾರ್ಡಿನ ತೆರಿಗೆಯ ಆಕ್ಷೇಪಣೆಗಳನ್ನು ತೋರಿಸಬೇಕು. ನಿರ್ಣಯಿಸಿದ ತಾರೀಕಿನ ನಂತರ ತಲ್ಪಿದ ರಿವಿಜನ್ ಅರ್ಜಿಗಳು ತಿರಸ್ಕರಿಸಲ್ಪಡುವುವು. ರಿವಿಜನ್ ಅರ್ಜಿಗಳನ್ನು ತನಿಖೆಮಾಡುವ ಸಮಯದಲ್ಲಿ ಅರ್ಜಿದಾರರ ಪರವಾಗಿ ಅಧಿಕಾರಗೊಳಿಸಲ್ಪಟ್ಟ ಏಜಂಟರು ಬರುವುದಾದರೆ ಅಧಿಕಾರ ಪತ್ರವನ್ನು ಹಾಜರ ಮಾಡತಕ್ಕದ್ದು.

ಮುನಿಸಿಪಲ್ ಖಚೇರಿ, ಉಡುಪಿ, 13 3 '40 — ಬಿ ಸೂರ್ಯನಾರಾಯಣ ರಾವ್, ಎಮ್ ಎ, ಕಮಿಶನರ್, ಉಡುಪಿ, ಮುನಿಸಿಪಾಲಿಟಿ

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	Rs	1,00,000
Subscribed & Paid up Capital	Rs	31,340
Reserves & other Funds	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ. ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK

OF SUPPLY AGENCY LIMITED,

ಸ್ಟ್ಯಾಲಿನ್ - ಮುಸೋಲಿನಿ

[ಪ್ರಸಿದ್ಧ ಪತ್ರಿಕಾ ವ್ಯವಸಾಯಿ ಪೆಟ್ರಿಕ್ ಥೋಮಸ್ ಇವರಿಂದ]

ಸ್ಟ್ಯಾಲಿನ್‌ನೊಡನೆ ಮಾತನಾಡಿರುವ ಎಲ್ಲ ಯುರೋಪಿಯನ್ ಮತ್ತು ಅಮೇರಿಕನರ ಅಭಿಪ್ರಾಯದಲ್ಲಿ ಅವನೊಬ್ಬ ಬುದ್ಧಿವಂತ ಮತ್ತು ತಿಳುವಳಿಕೆಯುಳ್ಳವನೆಂದೇ ಇದೆ. ಅವನಿಗೆ ಆತ್ಮವಿಶ್ವಾಸವಿದೆ. ಪ್ರತಿಯೊಂದು ವಿಚಾರದಲ್ಲಿಯೂ ತನ್ನ ಅಭಿಪ್ರಾಯವನ್ನು ಪ್ರಕಟಪಡಿಸಬೇಕೆಂಬ ಉದ್ದೇಶವಿಲ್ಲ ಆದರೆ ಅವನಲ್ಲಿ ಸಭ್ಯತೆಯ ಕೊರತೆಯಿದೆ. ತಾವು ಬಂದ ವಿಚಾರವನ್ನು ಮಾತ್ರ ಮರೆಯಲಾಗದು. ಜಾರ್‌ಶಾಹಿಯ ಕಾಲದ ಅವ್ಯವಸ್ಥೆಯನ್ನು ದೂರ ಮಾಡಿದವನು ಇವನೇ. ಆರುಸಾರಿ ಬಂಧಿತನಾಗಿ ದೇಶದಿಂದ ಹೊರಗಟ್ಟಲ್ಪಟ್ಟು ವೀರ ವಿರೋಧಿಗಳ ಮುಂದೆ ಜೀವಸಹಿತ ಉಳಿದುಕೊಂಡವನೀತ.

ಇವನಲ್ಲಿ ವಿವೇಚನಾಶಕ್ತಿ ಇಲ್ಲದೇ ಇಲ್ಲ. ಇವನೊಬ್ಬ ಕ್ರಾಂತಿಕಾರಕ. ಇಂತಹ ವ್ಯಕ್ತಿಯು ಸದಾಕಾಲದಲ್ಲೂ ಕದನಕ್ಕೆ ಸಿದ್ಧನಾಗಿಯೇ ಇರುವನು. ಈಗ ಇವನಿಗೆ ೬೦ ಕ್ಕಿಂತ ಹೆಚ್ಚು ವಯಸ್ಸಾಗಿದೆ. ಆದರೂ ಪ್ರತಿದಿನವೂ 15 ರಿಂದ 17 ಘಂಟೆಗಳ ಕಾಲ ಕೆಲಸಮಾಡುವನು ಪ್ರತಿದಿನವೂ ಅವನಿಗೆಯುದ್ಧವೇ ಬ್ಯಲವನ್ನು ಬಲವಾಗಿ ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುವನು.

ಇವನ ಜೀವನವು ಇದುವರೆಗೂ ಒಂದು ಸೈನ್ಯದ ಮುಖಂಡನ ಜೀವನದಂತಿದೆ. ಯುದ್ಧದ ಪ್ರಾರಂಭದಲ್ಲಿ ಇವನೊಡನೆ ಸಹಕರಿಸಿ ಕಾದಿದ ಎಲ್ಲಾ ವೃದ್ಧ ವೀರರನ್ನು ಇವನು ಆದರಿಸುತ್ತಿದ್ದಾನೆ. ಕಳೆದ ವರ್ಷ ಇವನ ಒಬ್ಬ ಜೊತೆಗಾರನು ಮೋಟಾರಿಗೆ ಸಿಕ್ಕಿ ಸತ್ತನು. ಈ ವರ್ತಮಾನವು ಸ್ಟ್ಯಾಲಿನ್‌ನಿಗೆ ಮುಟ್ಟಿತು. ಒಂದು ನಿಮಿಷ ಸುಮ್ಮನಿದ್ದು ಸೈನ್ಯದ ದಳಪತಿಗೆ ಈ ರೀತಿ ತಂತಿಯನ್ನು ಕಳುಹಿಸಿದನು. "ನನ್ನ ಜೊತೆಗಾರನನ್ನು ಕೊಂದ ಮೋಟಾರು ಡ್ರೈವರನನ್ನು ಕೂಡಲೇ ಗುಂಡಿನಿಂದ ಕೊಂದು ಬಿಡತಕ್ಕದ್ದು."

ಸ್ಟ್ಯಾಲಿನ್‌ನನ ಎರಡನೆ ಹೆಂಡತಿಯು ಕೆಲವು ದಿನಗಳ ಹಿಂದೆ ಸತ್ತಳು. ಮೊದಲನೆಯವಳನ್ನು ಮೊದಲೇ ಬಿಟ್ಟುಬಿಟ್ಟಿದ್ದನು. ಇವರಿಬ್ಬರಲ್ಲಿ ಯಾರೂ ಇವನೊಡನೆ ಸಭೆಗಳಿಗೆ ಬರುತ್ತಿರಲಿಲ್ಲ. ಮೊದಲನೇ ಹೆಂಡತಿಯ ಒಬ್ಬ ಮಗನಿರುವನು. ಆದರೆ ಅವನಿಗೆ ಹನ್ನೊಂದು ವಯಸ್ಸಿನ ತನ್ನ ಮಗಳ ಮೇಲೆ ಬಹಳ ಪ್ರೀತಿ. ಇವಳು ಎರಡನೆ ಹೆಂಡತಿಯ ಮಗಳು.

ಕಪ್ಪುಸಮುದ್ರದ ತೀರದಲ್ಲಿ ಒಂದು ಪ್ರದೇಶವಿದೆ. ಅಲ್ಲಿ ಇವನ ಮನೆ ಇದೆ ಇವನು ತನ್ನ ರಜಾದಿನಗಳನ್ನು ಕಳೆಯುವುದು ಅಲ್ಲೇ. ಅದು ಹಸುರುಬಣ್ಣದ ಮನೆಯಾಗಿದ್ದು ಫಲವೃಕ್ಷಗಳ ಗುಂಪಿನ ಮಧ್ಯದಲ್ಲಿದೆ. ಈ ಮರಗಳನ್ನು ಕಂಡರೆ ಇವನಿಗೆ ಬಹಳ ಆಸೆ. ತನ್ನ ಬಳಿಗೆ ಬರುವ ಅತಿಥಿಗಳಿಗೆ ಇದನ್ನು ತೋರಿಸಿ ಆ ಹಣ್ಣುಗಳನ್ನು ತಿನ್ನಿಸುವನು. ಅವನ ಆತಿಥ್ಯವನ್ನು ಹೊಂದಿರುವ ಎಲ್ಲರೂ ಸ್ಟ್ಯಾಲಿನ್‌ನನ್ನು ಬಹಳ ಸರಳ ಸ್ವಭಾವದವನೂ ಬಹಳ ಕಷ್ಟಪಟ್ಟು ಕೆಲಸ ಮಾಡುವವನೂ ಎಂದೇ ಅಭಿಪ್ರಾಯಕೊಡುತ್ತಾರೆ.

ಮುಸೋಲಿನಿ

ಇವನು ಸರಳಜೀವಿ, ಹಸನ್ಮುಖಿ. ಚೆನ್ನಾಗಿ ಮಾತಾಡುತ್ತಾನೆ. ತಮಾಷೆಯಾಗಿ ಸಹ ಮಾತನಾಡುವನು. ಇವನ ಸಹವಾಸದಲ್ಲಿ ಉಲ್ಲಾಸವುಂಟಾಗುತ್ತದೆ. ಒಂದು ಸಾರಿ ಬ್ರಿಟಿಷ್ ರಾಯಭಾರಿಯ ಸಂಗಡ ಆವನೇ ಈ ರೀತಿ ಹೇಳಿದ್ದನು. "ಸಲಿಗೆಯಿಂದಿರಲು ನೆಚ್ಚವೇ ಆಗುವುದಿಲ್ಲ. ಜನರು ಇದರಿಂದ ಮಿತ್ರರಾಗುವರು." ಇವನ ಮುಗುಳು ನಗೆಯು ಜನರನ್ನು ತನ್ನ ಕಡೆಗೆ ಒಲಿಸಿಕೊಳ್ಳುವುದು. ಒಂದು ಸಾರಿ ಒಬ್ಬ ಪರದೇಶದ ಹೆಂಗಸು ಇವನೊಡನೆ ಖಾಸಗಿ ರೀತಿಯಿಂದ ಭೇಟಿಯಾಗಲು ಅಪ್ಪಣೆ ಕೇಳಿದಳು. ಭೇಟಿಗೆಂದು ಹೋಗಿ ವೇಟಿಂಗ್ ರೂಮಿನಲ್ಲಿ ಕುಳಿತಿದ್ದಳು. ಮಂತ್ರಿಯು ಆಕೆಯನ್ನು ಒಳಗೆ ಕರೆದುಕೊಂಡು ಹೋದನು. ಅವಳು ನಡುಗಲಾರಂಭಿಸಿದಳು. ಕೆಲಸದಲ್ಲಿದ್ದ ಮುಸೋಲಿನಿಯು ತಲೆಯನ್ನೆತ್ತಿ ನಿಮಗೇನು ಬೇಕೆಂದು ಕೇಳಿದನು. ಆಕೆಯು ಇಟಲಿ ಭಾಷೆಯಲ್ಲಿ ತನ್ನ ಅಭಿಪ್ರಾಯವನ್ನು ತಿಳಿಸಿದಳು. ಕೇಳುತ್ತಿದ್ದವನು ಕತ್ತನ್ನು ಅಲ್ಲಾಡಿಸುತ್ತ ಒಳಗೆ ಹೋಗಿ ತನ್ನ ಫೋಟೋ ತಂದು ಅದರ ಮೇಲೆ ತನ್ನ ರುಜು ಮಾಡಿ ಆಕೆಯ ವಶಕ್ಕೆ ಕೊಟ್ಟು ಅವಳನ್ನು ಹೊರ ಬಾಗಿಲಿನ ಹೊರಗೆ ಕಳುಹಿಸಿ ಬಂದು ತನ್ನ ಮಂತ್ರಿಗೆ ಈ ರೀತಿ ಹೇಳಿದನು "ಈ ಸ್ತ್ರೀಯು ಯಾವುದಕ್ಕಾಗಿ ಬಂದಿದ್ದಳೋ ನನಗೆ ತಿಳಿಯದು. ಆದರೂ ಅವಳಿಗೆ ಬೇಕಾದ ವಸ್ತುವು ದೊರೆಯಿತೆಂದು ಹೇಳಬಲ್ಲೆ" ಈ ಶಬ್ದಗಳನ್ನು ಆಕೆಯೂ ಕೇಳಿದಳು

ಅಬಿಸೀನಿಯ ಯುದ್ಧಕ್ಕೆ ಮೊದಲು ಇವನು ಇಷ್ಟು ಗಣನೆಗೆ ಬಂದಿರಲಿಲ್ಲ. ಕಳೆದ ಚಳಿಗಾಲದ ಸುದ್ದಿ. ಒಂದು ರಾತ್ರಿ ಪರದೇಶಿಯ ಒಬ್ಬ ಡಿಪ್ಲೋಮೆಸ್ಟನು ತನ್ನ ಪತ್ನಿಯೊಡನೆ ಸಿನಿಮಾಕ್ಕೆ ಹೋದನು. ಅವನ ಮುಂದಿದ್ದ ಪೆಟ್ಟಿಗೆಯಲ್ಲಿ ದಪ್ಪ ದೇಹದ ಒಂದು ವ್ಯಕ್ತಿ ಬಂದು ಕುಳಿತುಕೊಂಡಿತು ಅವನೇ ಮುಸಲೋನಿ. ಅದನ್ನು ತಿಳಿದ ಇವರು ಅವನಿಗೆ ನಮಸ್ಕಾರಮಾಡಿ ಮಾತುಕತೆಗೆ ಆರಂಭಮಾಡಿದರು. ಮುಸಲೋನಿಯು ಕಿಸೆಗಳಲ್ಲಿ ಏನೋ ತುಂಬಿದ್ದುದನ್ನು ಆಕೆಯು ನೋಡುತ್ತಿರಲು ಆಕೆಯ ದೃಷ್ಟಿಯನ್ನು ಗಮನಿಸಿದ ಮುಸೋಲಿನಿಯು ಕೂಡಲೇ ಒಂದು ಕಿತ್ತಳೇ ಹಣ್ಣು ತೆಗೆದು ನಗುತ್ತಾ ಆಕೆಯ ಕೈಗೆ ಕೊಟ್ಟನು.

ಬೊಂಬಾಯಿ ಪತ್ರ

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ. ಮುದವೀಡು ಕೃಷ್ಣರಾಯರು ಮುಂಬಯಿಗೆ ಬಂದಿದ್ದು ಹಲವು ಕನ್ನಡ ಸಂಘಗಳನ್ನೂ ರಾತ್ರಿ ಶಾಲೆಗಳನ್ನೂ ಸಂದರ್ಶಿಸಿ ಕನ್ನಡನಾಡಿನ ಗತವೈಭವವನ್ನು ಮುಂಬಯಿ ಕನ್ನಡಿಗರಿಗೆ ವಿವರಿಸಿ, ಕನ್ನಡನಾಡಿನ, ಭಾಷೆಯ, ಜನರ ಉನ್ನತಿಗಾಗಿ ಪ್ರತಿಯೊಬ್ಬನೂ ಪ್ರಯತ್ನಿಸಬೇಕೆಂದು ಹೇಳಿದರು. ಶಾರದಾ ವಿಜಯ ರಾತ್ರಿ ಶಾಲೆಯನ್ನು ಸಂದರ್ಶಿಸಿ ವಿದ್ಯಾರ್ಥಿಗಳಿಗೆ ಬುದ್ಧಿವಾದವನ್ನಿತ್ತರು.

ಕರ್ನಾಟಕದ ಯುವಕ ಸಂಘದ ವಾರ್ಷಿಕ ಚುನಾವಣೆಯಲ್ಲಿ ಶ್ರೀ. ಎನ್. ಕೆ. ಉಪಾಧ್ಯಾಯರು ಅಧ್ಯಕ್ಷರಾಗಿಯೂ, ಯು. ನಾಗೇಶರಾಯರವರು ಉಪಾಧ್ಯಕ್ಷರಾಗಿಯೂ, ನಾಯಕರವರು ಕಾರ್ಯದರ್ಶಿಗಳಾಗಿಯೂ, ಶ್ರೀ. ಭೋಜರಾವ್ ಮತ್ತು ಪ್ರಭುಗಳವರು ಕೋಶಾಧಿಕಾರಿಗಳಾಗಿಯೂ ಆಯ್ಕೆಯಾಗಿದ್ದಾರೆ.

ದಿ ಯಂಗ್ ಮೆನ್ಸ್ ಬೋವಿ ಎಸೋಸಿಯೇಶನ್— ಈ ಸಂಘದ ಚತುರ್ಥ ವಾರ್ಷಿಕೋತ್ಸವವು ತಾ. 3-3-40ರಲ್ಲಿ ಶ್ರೀ. ಎಂ. ಉಚ್ಚಿಲ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯು. ಬಿ ನಾರಾಯಣ (ಅಧ್ಯಕ್ಷ) ಯಮ್. ಬಿ. ಸಾಲಿಯಾನ್ ಮತ್ತು ಸಿ. ಯಚ್. ಉಚ್ಚಿಲ್ (ಗೌರವ ಕಾರ್ಯದರ್ಶಿಗಳು) ಯಮ್. ಬಿ. ಉದ್ಯಾವರ್ ಮತ್ತು ಯನ್. ಬಿ. ಕೋಟ್ಯಾನ್ (ಗೌರವ ಜತೆ ಕೋಶಾಧಿಕಾರಿಗಳು) ಆಗಿ ಆರಿಸಲ್ಪಟ್ಟರು.

ಮೈಸೂರು ಪತ್ರ

ಬೇಲೂರಿನಲ್ಲಿರುವ ಶ್ರೀರಾಮಕೃಷ್ಣ ಪರಮಹಂಸರ ಮಠ

[ಬರೆದವರು:— ಎಸ್. ಗುಂಡೂರಾವ್]

ಇದೇ ಮಾಹೆ ತಾ. 11ನೇ ಸೋಮವಾರ ದಿನ ಗತಿಸಿದ ಪೂಜ್ಯ ಶ್ರೀ. ಪರಮಹಂಸರ ಜನ್ಮದಿನೋತ್ಸವವನ್ನು ಇಡೀ ಭಾರತದಲ್ಲೆಲ್ಲಾ ಆಚರಿಸಲಾಯಿತು. ಪ್ರಪಂಚದ ಮೂಲೆ ಮೂಲೆಗಳಲ್ಲೂ ಗತಿಸಿದ ಪೂಜ್ಯ ಶ್ರೀ. ಪರಮಹಂಸರ ಹೆಸರು ಈಗಲೂ ಚಿರಸ್ಥಾಯಿಯಾಗಿದೆ. ಇದಕ್ಕೆ ಈತನಂತ ವ್ಯಕ್ತಿಗಳು ಅಗಾಧ ಸೇವೆಮಾಡಿ ಕಟ್ಟಿರುವ ಉಪಯೋಗಕರವಾದ ರಾಮಕೃಷ್ಣ ಮಠಗಳೇ ಸಾಕ್ಷಿ. ಇಂಥಹ ಮಹನೀಯರು ವಾಸಮಾಡಿ ದಿವಂಗತರಾದ್ದನ್ನು ನಿಜ ಪ್ರಸಿದ್ಧ ಕಲ್ಕತ್ತಾ ನಗರದ ಬಳಿ ಬೇಲೂರಿನಲ್ಲಿ ಕಟ್ಟಿರುವ ಮಠವನ್ನು ನೋಡಿ ಬಂದಿರುವ ಈ ಲೇಖನ ಬರೆದ ನವಯುಗ ಮೈಸೂರು ವಾರ್ತಾಹರರಿಗಲ್ಲದೆ ನವಗೂ ಒಂದು ಹೆಮ್ಮೆ. ಇವರು ಕಳೆದ ವರ್ಷ ಉತ್ತರ ಇಂಡಿಯಾ ಪ್ರವಾಸ ಹೋಗಿದ್ದಾಗ್ಯೆ ಕಲ್ಕತ್ತೆಯಲ್ಲಿ ಬಿಡಾರ ಮಾಡಿದ್ದ ಕಾಲದಲ್ಲಿ ಬೇಲೂರಿಗೆ ಪ್ರಯಾಣ ಬೆಳೆಸಿ ರಾಮಕೃಷ್ಣ ಮಠ ಮತ್ತು ಇದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನು ತಿಳಿದು ಬಂದರು. (ಸಂ. ನ.)

ಬೇಲೂರು ಎಂಬ ಚಿಕ್ಕ ಪಟ್ಟಣವು ಕಲ್ಕತ್ತೆಗೆ ಕೇವಲ ಐದಾರು ಮೈಲುಗಳಲ್ಲಿಂಟು. ಅಲ್ಲಿ ದಿವಂಗತ ರಾಮಕೃಷ್ಣ ಪರಮಹಂಸರ ಬಸ್ತಿ ಮತ್ತು ಒಂದು ಮಠವನ್ನು ಕಟ್ಟಲಾಗಿದೆ. ಈ ಮಠದಲ್ಲಿ ಪರಮಹಂಸರ ಶಿಷ್ಯರುಗಳು, ಪ್ರಚಾರಕರುಗಳೂ ವಾಸಿಸುತ್ತಾರೆ.

ಇದಕ್ಕೆ ಹೋಗಲು ದಾರಿ—ಬೇಲೂರು ಮಠ ನೋಡಲು ಹೋಗುವವರು ಕಲ್ಕತ್ತೆಯ ವಿವಿಧ ಎಕ್ಸ್‌ಟೆನ್ಷನ್‌ಗಳಿಂದ ಬಸ್ ಅಥವಾ ಟ್ಯಾಕ್ಸಿಗಳಲ್ಲಿ ಶ್ಯಾಂಬಜಾರ್ ಎಂಬಲ್ಲಿಗೆ ಬಂದು ಅಲ್ಲಿಂದ ದಕ್ಷಿಣೇಶ್ವರ ಎಂಬಲ್ಲಿಗೆ ಹೋಗಬಹುದು. ದಕ್ಷಿಣೇಶ್ವರದಲ್ಲಿ ಇಳಿದು ಒಂದು ಫರ್ಲಾಂಗ್ ದೂರ ನಡೆದುಹೋದಲ್ಲಿ ರಾಮಕೃಷ್ಣ ಪರಮಹಂಸರು ವಾಸಮಾಡುತ್ತಿದ್ದ ಹಳೆಯ ಕಟ್ಟಡವು ಸಿಗುತ್ತೆ. ಈ ಕಟ್ಟಡವು ಗೋಪುರದಿಂದಲೂ ಮತ್ತು ಚಿಕ್ಕ ಚಿಕ್ಕ ದೇವ ವಿಗ್ರಹಗಳಿಂದ ಕೂಡಿದೆ. ಈ ಕಟ್ಟಡದ ಒಳಭಾಗದಲ್ಲಿ ದಿವ್ಯ ಅಂಗಳವಿದೆ, ಕಟ್ಟಡದ ಮೊಗಸಾಲೆಯಲ್ಲಿ ಸೊಗಸಾದ ಸುಣ್ಣದಿಂದ ಕೂಡಿದ ಕೈತೋಟದ ಹೂಗಿಡಗಳೂ ಇದರ ಮುಂಭಾಗದಲ್ಲಿ ಪವಿತ್ರ ಗಂಗಾನದಿಯು ಹರಿಯುತ್ತೆ. ಇದನ್ನು ನೋಡಿ ಕಟ್ಟಡದ ಬಲಭಾಗಕ್ಕೆ ಬಂದಲ್ಲಿ ಒಂದು ಚರಿತ್ರಾರ್ಹವಾದ ಕೊಠಡಿಯುಂಟು, ಈ ಕೊಠಡಿಯಲ್ಲಿ ರಾಮಕೃಷ್ಣ ಪರಮಹಂಸರೂ, ಅವರ ಕುಟುಂಬ ಶ್ರೀ. ಶಾರದಾಮಣಿ ದೇವಿಯವರೂ ವಾಸಿಸುತ್ತಿದ್ದರೆಂದು ಗೊತ್ತಾಯಿತು. ಇವರುಗಳು ಉಪಯೋಗಿಸುತ್ತಿದ್ದ ಕುರ್ಚಿ ಮೇಜುಗಳೂ ಮಲಗುತ್ತಿದ್ದ ಮಂಚಗಳೂ ಮತ್ತು ಇತರ ವಸ್ತುಗಳನ್ನು ಈಗಲೂ ಜೋಪಾನವಾಗಿ ಕಾಪಾಡುತ್ತಿದ್ದುದಲ್ಲದೆ ಗೋಡೆಯ ಮೇಲೆಲ್ಲಾ ಪರಮಾತ್ಮನ ಮತ್ತು ಪರಮಹಂಸರ ಪಟ್ಟಶಿಷ್ಯರಾಗಿದ್ದ ಶ್ರೀ. ಸ್ವಾಮಿ ವಿವೇಕಾನಂದರ ವಿವಿಧ ಚಿತ್ರಗಳುಂಟು, ಇಷ್ಟು ಹಳೆಯ ಕಟ್ಟಡದಲ್ಲಿ ನೋಡ ತಕ್ಕ ವಿಷಯವು ಮುಗಿದು ಇನ್ನು ನೂತನ ಕಟ್ಟಡವನ್ನು ನೋಡೋಣ. ಹಳೆಯ ಕಟ್ಟಡದಿಂದ ನೂತನ ಕಟ್ಟಡಕ್ಕೆ ಹೋಗುವವರು ದೋಣಿಯಲ್ಲಿ ಕೂತು ಗಂಗಾನದಿಯ ಮೇಲೆ ಪ್ರಯಾಣಮಾಡಿದರೆ ನೂತನ ಕಟ್ಟಡದ ಬಳಿ ಬರಬಹುದು. ಅಥವಾ ದಕ್ಷಿಣೇಶ್ವರಕ್ಕೆ ಕಾಲುನಡಿಗೆಯಲ್ಲಿ ಹಿಂತಿರುಗಿ ಬಂದು ಸ್ವಲ್ಪ ದೂರ ನಡೆದು ಗಂಗಾನದಿಗೆ ಅಡ್ಡಲಾಗಿ ಹೊಸದಾಗಿ ಕಟ್ಟಿರುವ "ವಿಲ್ಲಿಂಗ್‌ಡನ್" ಸೇತುವೆ ಮೇಲೆ ಹೋಗಿ ಪುನಃ ಸ್ವಲ್ಪ ದೂರ ನಡೆದರೆ ರಾಮಕೃಷ್ಣಮಠವು ಸಿಗುವುದು.

COONDAPOOR BANK LIMITED,

COONDAPOOR.

ಪ್ರಕಟಣೆ.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣದ ಅಡವಿನ ಮೇಲೆ ಪಡೆದ ಸಾಲಗಳ ಅಸಲು ಬಡ್ಡಿ ಮೊಬಲಗುಗಳನ್ನು ಪೂರ್ತಿ ಪಾವತಿ ಮಾಡದೆ ಇರುವುದರಿಂದ ಈ ಸದ್ರಿಯವರಿಗೆ ಬಟ್ಟೆ ನೋಟೀಸು ಜ್ಯಾರಿಯಾಗದೆ ವಾಪಸ್ಸು ಬಂದಿರುವುದರಿಂದಲೂ ಈ ನೋಟೀಸು ಮೂಲಕ ತಿಳಿಯಪಡಿಸುವದೇನೆಂದ್ರೆ ಸದ್ರಿ ಸಾಲಗಳ ಬಾಬಿನಲ್ಲಿ ಬೇಂಕಿಗೆ ಸಲುವ ಅಸಲು ಬಡ್ಡಿ ವ ಇತರ ಖರ್ಚುಗಳನ್ನು ಸಂಬಂಧಪಟ್ಟ ಸಾಲಗಾರರು ಇದೇ ಬರುವ ತಾ. 16-3-40ನೇ ಶನಿವಾರದ ವಳಗೆ ಬೇಂಕಿಗೆ ತೆತ್ತು ಅಡವಿನ ನಗಗಳನ್ನು ಬಿಡ್ಸಿಕೊಂಡು ಹೋಗುವರೇ ತಪ್ಪಿದಲ್ಲಿ ಸದ್ರಿ ನಗಗಳನ್ನು ಇದೇ ತಾ. 18-3-40 ನೇ ಸೋಮವಾರ ಮಧ್ಯಾಹ್ನ ಘಂಟೆ 3ಕ್ಕೆ ಸದ್ರಿ ಬೇಂಕಿನ ಹೆಡ್ಡಾಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಸದ್ರಿ ಏಲಂನಲ್ಲಿ ಹುಟ್ಟಿಬಂದ ಏನೇದನ್ನು ಸದ್ರಿ ಇವರ ಲೆಕ್ಕಕ್ಕೆ ಜಮೆ ಹಿಡಿದು ಇನ್ನೂ ಬೇಂಕಿಗೆ ಬಾಕಿಯಾಗಬಹುದಾದಲ್ಲಿ ಸದ್ರಿ ಹಣವನ್ನು ಬರಮಾಡಿಕೊಳ್ಳುವರೇ ಅಗತ್ಯವುಳ್ಳ ವ್ಯವಹಾರ ನಡೆಸಲಾದೀತು. ತತ್ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟ ತೆರಲಿಕ್ಕೆ ಅವರೇ ಜವಾಬ್ದಾರರಾಗಿರುತ್ತಾರೆ.

ಸಾಲದ ವಿವರ

ಲೋನ್ ನಂಬ್ರ	ಹೆಸರು ವ ವಿಳಾಸ	ಅಸಲು ಮೊಬಲಗು
		ರೂ. ಆ. ಪೈ.
H. O. 42/1937	ಜಿ. ಎಸ್. ಮಂಜುನಾಥ, ಟೀಚರ್ ಸೈಂಟ್ ಮೇರೀಸ್ ಸ್ಕೂಲ್ ಕುಂದಾಪುರ.	7—0—0
S. N. 34/1938	ಪಾಂಡುರಂಗ ಭುಜಂಗ ಶೇಟ್ ಮರ್ಚೆಂಟ್, ಶಂಕರನಾರಾಯಣ.	25—0—0
S. N. 11/1938	ನಾಗಪ್ಪ ಉಪಾಧ್ಯ, ಹಾಲಾಡಿ ಶಂಕರನಾರಾಯಣ.	7—0—0
	ಜಮ್ಲಾ	39—0—0

Office of the Coondapoor Bank, Ltd, Coondapoor. 8th March, '40.

A. Laxminarayana Alse,
Secretary.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೧೪-೩-'೪೦

ಯುದ್ಧದ ಹಿನ್ನೋಟ ಮತ್ತು ಮುನ್ನೋಟ

ಯುರೋಪಿನಲ್ಲಿ ಯುದ್ಧಾರಂಭವಾಗಿ 6 ತಿಂಗಳು ಸಂದು ಹೋದವು. ಇನ್ನೂ ಹೋರಾಟವೇ ಆರಂಭವಾಗಿರುವಂತಿಲ್ಲ. ಎದುರ ಕಡೆಯವರು ಪ್ರಥಮವಾಗಿ ಧಾಳಿನಡಿಸಬೇಕೆಂದು ಇಕ್ಕಡೆಯವರೂ ದುರ್ಭೇದ್ಯ ಕೋಟೆಗಳ ಹಿಂದೆ ಕಾದು ನಿಂತಿರುತ್ತಾರೆ. ಮಿತ್ರರಾಷ್ಟ್ರಗಳು ಜರ್ಮನಿಯ ಮೇಲೆ ಸಾಂಪತ್ತಿಕ ಮುತ್ತಿಗೆ ಹಾಕಿ, ಸಮಯವು ತಮ್ಮ ಕಡೆಯಿದ್ದು ಜರ್ಮನಿಯನ್ನು ಕಂಗೆಡಿಸುವುದೆಂದು ಬಗೆದು ಕಾದು ನೋಡುವ ಯುಕ್ತಿ ಹೂಡಿರುತ್ತವೆ. ಜರ್ಮನಿಯಾದರೂ ಧಾಳಿನಡಿಸುವ ನಟನೆ ಹೂಡಿ ವೈರಿಗಳ ಸಮುದ್ರ ಮುತ್ತಿಗೆಯನ್ನು ಪ್ರತಿಭಟಿಸಿ ತನ್ನ ಶಕ್ತಿಯನ್ನು ಹೆಚ್ಚಿಸುವ ಪ್ರಯತ್ನದಲ್ಲಿರುತ್ತದೆ. ಮಿತ್ರ ರಾಷ್ಟ್ರಗಳ ನೌಕಾಮುತ್ತಿಗೆಯಿಂದಾಗಿ ಜರ್ಮನಿಯ ಸಮುದ್ರವ್ಯಾಪಾರವೇ ಬಹ ಮಟ್ಟಿಗೆ ನಿಂತು ಹೋಗಿರುವುದರಿಂದ ಮೊದಲೇ ಅತೃಪ್ತಿಕರವಿದ್ದ ಅದರ ಸಾಂಪತ್ತಿಕ ಸ್ಥಿತಿಯು ಮತ್ತಷ್ಟು ಕೆಟ್ಟುಹೋಗಿ ಕಾಲಕ್ರಮೇಣ ಅದು ತೀವ್ರಮುಗ್ಗಟ್ಟು ಉಂಟಾಗಿ ಆಂತರಿಕ ಬಂಡಾಯವೆದ್ದು ಹಿಟ್ಲರ್ ಶಾಹಿಯು ನಾಶಗೊಳ್ಳುವಂತಾಗುವುದೆಂದು ಮಿತ್ರ ರಾಷ್ಟ್ರಗಳ ನಿರೀಕ್ಷೆ. ಆದುದರಿಂದ ದಿನವೊಂದರ ಅವುಗಳ ಸೇನಾವೆಚ್ಚವು 10 ಮಿಲ್ಯ ಪವನಿಗಿಂತಲೂ ಹೆಚ್ಚಾಗಿದ್ದರೂ ಭೀಕರ ಕದನ ಹೂಡಿ ಅಪಾರ ಪ್ರಾಣಹಾನಿಯನ್ನುಂಟುಮಾಡುವ ಬದಲಿಗೆ ದೀರ್ಘಕಾಲವಾದರೂ ಕಾದು ವೈರಿಯನ್ನು ಬಗ್ಗುಬಡಿಯುವುದು ಎಷ್ಟೋ ಮೇಲಾದುದೆಂಬ ಧೋರಣೆ ವಹಿಸಿವೆ. ಅವು ಜರ್ಮನಿಯು ಕೂಡ ಒಳಗಿಂದೊಳಗೆ ಇದೇ ರೀತಿ ಬಗೆದು ನಡೆಯುತ್ತಿದೆ. ಹಿಟ್ಲರರು ಮೇಗಿನಟ್ ಕೋಟೆಯನ್ನು ಮುರಿಯುವ ಪ್ರಚಂಡ ಧಾಳಿನಡಿಸುವವರಿದ್ದಾರೆ. ಹೊಲ್ಲೆಂಡಿನ ಮಾರ್ಗವಾಗಿ ಧಾಳಿನಡಿಸಲು ಪ್ರಬಲ ಸೇನಾ ಸಂಗ್ರಹ ನಡೆದಿದೆ. ಬೆಲ್ಜಿಯಂ ಸ್ವಿಟ್ಸರ್ಲೆಂಡ್‌ಗಳ ಮೂಲಕ ಫ್ರಾನ್ಸಿನ ಮೇಲೇರಿ ಹೋಗುವ ಯತ್ನ ನಡೆಯುತ್ತಿವೆ. ಇಂಗ್ಲೆಂಡಿನ ಮೇಲೆ ಪ್ರಚಂಡ ವಿಮಾನ ಪಡೆಯು ಒಮ್ಮೆಯೇ ಏರಿಹೋಗಿ ಭೀಕರ ಧಾಳಿನಡಿಸಲಿದೆ, ಎಂದೆಲ್ಲಾ ನಾನಾ ಸುದ್ದಿಗಳ ಗಾಳಿಪಟಗಳು ಹಾರಾಡಹತ್ತಿದರೂ ಜರ್ಮನಿಯು ಕೂಡಾ ವೈರಿಗಳ ಧಾಳಿಯನ್ನೇ ನಿರೀಕ್ಷಿಸಿಕೊಂಡು ಕಾಲಯಾಪನೆ ಮಾಡುತ್ತಿರುವಂತಿದೆ. ಮಿತ್ರರಾಷ್ಟ್ರಗಳ ಮತ್ತು ತಟಸ್ಥರಾಜ್ಯಗಳ ಅನೇಕ ಹಡಗುಗಳನ್ನು ಜರ್ಮನರು ಮುಳುಗಿಸಿರುತ್ತಾರೆ. ಇಕ್ಕಡೆಯಲ್ಲಿಯೂ ಕೆಲವು ವಿಮಾನಗಳು ನಾಶವಾಗಿರುತ್ತವೆ. ಪಶ್ಚಿಮರಣರಂಗದಲ್ಲಿ ಪಹರೆಗಾರ ದಳಗಳೊಳಗೆ ಚಿಕ್ಕಪುಟ್ಟ ಹೋರಾಟಗಳು ನಡೆಯುತ್ತಿವೆ. ಈ ವರೆಗೆ ನಡೆದಿರುವ ಯುದ್ಧವೆಂದರೆ ಇಷ್ಟೆ.

ಕಾಲವು ಯಾರಿಗೆ ಸಹಾಯಕವಾಗಿದೆ?

ಕಾಲವು ತಮ್ಮ ಸಹಕಾರಿಯಾದುದೆಂದು ನೆನಸಿ ಮಿತ್ರರಾಷ್ಟ್ರಗಳು ಜರ್ಮನಿಯ ಮೇಲೆ ಧಾಳಿ ನಡಿಸುವ ಆಲೋಚನೆಯನ್ನೇ ಬಿಟ್ಟು ಆತ್ಮರಕ್ಷಣೆಯ ಸಿದ್ಧತೆಯಲ್ಲೇ ನಿರತವಾಗಿ ಅದಕ್ಕಾಗಿ ಅಪಾರ ಹಣ ವ್ಯಯಿಸಿಕೊಂಡುಬಂದಿವೆ. ಇಂಗ್ಲೆಂಡೊಂದರ ಸೇನಾವೆಚ್ಚವೇ ದಿನಕ್ಕೆ ಆರೇಳು ಮಿಲ್ಯ ಪವನಾಗುತ್ತದೆ. ಇಷ್ಟೊಂದು ವೆಚ್ಚವನ್ನು ವೃಥಾ ಎಷ್ಟು ಕಾಲ ನಡಿಸಬಹುದೋ ತಿಳಿಯದು! ಇಂಗ್ಲೆಂಡಿನ ಮಾಜಿ ಯುದ್ಧಮಂತ್ರಿ ಮಿ. ಬೆಲೀಶರವರ ಅಭಿಪ್ರಾಯದಂತೆ ಕಾಯುವ ಈ ಯುಕ್ತಿಯಿಂದೇನೂ ಫಲವಿಲ್ಲ. ಧಾಳಿ ನಡಿಸುವ ಯೋಜನೆಯು ಜರ್ಮನಿಗಿದ್ದರೆ, ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ಸೇನೆಯನ್ನು ಸಂಗ್ರಹಿಸಿ ಯುದ್ಧ ಸಾಮಗ್ರಿಗಳನ್ನು ಅಣಿಗೊಳಿಸುವ ವರೆಗೆ ಅದು ಕಾಯುತ್ತಿದ್ದಿಲ್ಲ. ಆರಂಭದಲ್ಲೇ ಪ್ರಚಂಡ ಧಾಳಿ ನಡಿಸುವ ಸಾಹಸ ಮಾಡುತ್ತಿತ್ತು. ಆದರೆ ಅದು ಹಾಗೇನೂ ಮಾಡಿರುವುದಿಲ್ಲ. ತಾನೇನೂ ಮೊದಲಾಗಿ ಯುದ್ಧ ಹೂಡಿಲ್ಲ. ಯುದ್ಧಹೂಡಿದುದು ಮಿತ್ರರಾಷ್ಟ್ರಗಳು. ಆದುದರಿಂದ ಅವುಗಳೇ ಮೊದಲಾಗಿ ತನ್ನ ಮೇಲೇರಿ ಬಂದು ಜೈಸಬೇಕೆಂದು ಜರ್ಮನಿಯು ನಿಶ್ಚಯಿಸಿರುವಂತಿದೆ. ಕಾಲವು ಜರ್ಮನಿಯ ಪರಿಸ್ಥಿತಿಯನ್ನು ಧ್ವಂಸಗೆಡಿಸುವುದೆಂಬುದಕ್ಕೆ ಆಧಾರವೇನೂ ತೋರುವುದಿಲ್ಲ. ಅದರ ಬದಲಿಗೆ ದಿನೇದಿನೇ ಜರ್ಮನಿಯ ಶಕ್ತಿಯು ಹೆಚ್ಚುವ ಸಂಭವವೇ ತೋರುತ್ತದೆ. ಆಹಾರಸಾಮಗ್ರಿಗಳ ವಿಷಯದಲ್ಲಿ ಜರ್ಮನಿಯು ಸೇಕಡ 83ರಷ್ಟು ಸ್ವಾವಲಂಬಿಯಾಗಿದೆ. ಉಳಿದಂಶವನ್ನದು ನೆರೆಕರೆ ರಾಷ್ಟ್ರಗಳಿಂದ ಪಡೆಯಬಲ್ಲುದು. ಬ್ರಿಟನು ಸೇಕಡ 67 ರಷ್ಟರ ಆಹಾರವಸ್ತುಗಳನ್ನು ಹೊರಗಿಂದ ತರಿಸಿಕೊಳ್ಳಬೇಕಾಗಿದೆ. ಇದ್ದಲು ಜರ್ಮನಿಯಲ್ಲಿ ಹೇರಳ ದೊರೆಯುತ್ತದೆ. ಲಕ್ಷಗಟ್ಲೆ ಟನ್ನು ಇದ್ದಲನ್ನದು ಹೊರಗೆ ಕಳುಹಿಸಬಲ್ಲುದು. ಮೆಗ್ನಿಷ್ ಮತ್ತು ಪೊಟೇಶ್‌ಗಳು ಜರ್ಮನಿಯಷ್ಟು ಇನ್ನೆಲ್ಲಿಯೂ ಸಿಗಲಾರವು. ಜೆಕೋಸ್ಲೋವೇಕಿಯ ಮತ್ತು ಆಸ್ಟ್ರಿಯದಿಂದ ಮಿಂಟೆಮನಿಯನೂ ಪೋಲೆಂಡಿನಿಂದ ಸರುವನ್ನೂ ಅದು ಪಡೆಯುತ್ತದೆ. ಕಬ್ಬಿಣ ಪದುರನ್ನು ಸ್ವೀಡನಿನಿಂದ ಸುಲಭವಾಗಿ ಪಡಕೊಳ್ಳುವುದು. ಹಂಗೇರಿ ಮತ್ತು ಯುಗೋಸ್ಲಾವಿಯದಿಂದ ಬೋಕ್ಸೈಟನ್ನೂ, ಬಾಲ್ಕನ್ ರಾಷ್ಟ್ರಗಳಿಂದ ಕ್ರೋಮಿಯಮನ್ನೂ, ಪಾದರಸ ಮತ್ತು ಗಂಧಕವನ್ನು ಇಟೆಲಿಯಿಂದಲೂ, ಪೈರೈಟನ್ನು ಸ್ಕಾಂಡಿನೇವಿಯದಿಂದಲೂ ಪಡೆಯುವುದು. ಇದು ಹೊರತು ತನಗೆ ಸುಲಭವಾಗಿ ಪಡೆಯಲು ಅನಾನುಕೂಲವಾಗಿ ಯುದ್ಧಕ್ಕೆ ಅಗತ್ಯ ಬೇಕಾಗುವ ತಾಮ್ರ, ತವರ ಮತ್ತು ನಿಕಲ್‌ಗಳನ್ನು ಮೊದಲೇ ಹೇರಳವಾಗಿ ಸಂಗ್ರಹಿಸಿಟ್ಟುಕೊಂಡಿರುವುದು. ರಬ್ಬರಿನ ಬದಲಾಗಿ ಬೂನ ಎಂಬುದನ್ನು ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಿಕೊಂಡಿದೆ. ಶಾಂತಿಯ ಕಾಲದಲ್ಲಿಯೇ ಜರ್ಮನಿಯು ಕಠಿಣ ಮಿತವ್ಯಯದ ನಿರ್ಬಂಧ ಹಾಕಿ ಆಹಾರ ಸಾಮಗ್ರಿಗಳನ್ನು ಕೂಡಾ ಸಂಗ್ರಹಿಸಿಟ್ಟುಕೊಂಡಿದೆ.

ಜರ್ಮನಿಯ ಬಲ ಹೆಚ್ಚುತ್ತಿರುವುದು

ಮಿತ್ರ ರಾಷ್ಟ್ರಗಳ ಸಾಂಪತ್ತಿಕ ಮುತ್ತಿಗೆಯಿಂದೇನೂ ಪರಿಣಾಮವಾಗದಂತೆ ಪ್ರಯತ್ನಮಾಡಲು ಜರ್ಮನಿಗೆ ಈಗ ಸಾಕಷ್ಟು ಅವಕಾಶ ದೊರೆತಿರುವುದು. ಇಟೆಲಿಯು ತಟಸ್ಥವಾಗಿರುವುದರಿಂದ ಜರ್ಮನಿಗೆ ಬಹಳ ಅನುಕೂಲವಾಗಿದೆ. ಇಟೆಲಿಯೊಡನೆ ಅದು ಒಪ್ಪಂಬಡಿಕೆ ಮಾಡಿಕೊಂಡು ತನಗೆ ಬೇಕಾದ ಹಲವು ಸಾಮಾನುಗಳನ್ನು ಪಡೆಯುತ್ತಿದೆ. ಮಾತ್ರವಲ್ಲದೆ, ಇಟೆಲಿ, ಜರ್ಮನಿ ಮತ್ತು ರಶ್ಯಗಳೊಂದುಗೂಡಿ ಬ್ರಿಟಿಷ್ ಮತ್ತು ಫ್ರೆಂಚರ ಸಾಮ್ರಾಜ್ಯ ಬಲವನ್ನು ಮುರಿಯಬೇಕೆಂದು ಪ್ರಯತ್ನ ನಡೆದಿದೆ. ಈ ಉದ್ದೇಶದಿಂದಲೇ ಹರ್ ವಾನ್‌ರಿಬೆಂಟ್ರಾಪರು ಇದೇ ತಾ. 10ರಲ್ಲು ಇಟೆಲಿಯನ್ನು ಸಂದರ್ಶಿಸಿರುವರೆಂದು ನಂಬಲಾಗಿದೆ. ಜರ್ಮನಿಯ ಪ್ರಯತ್ನದಿಂದಲೇ ಫಿನ್ಲೆಂಡ್ ರಶ್ಯಗಳೊಳಗೆ ಸಂಧಿಯಾಗುವುದು ನಿಶ್ಚಯವೆಂಬಂತೆ ತೋರುತ್ತದೆ. ಹಾಗಾದರೆ ಫಿನ್ಲೆಂಡು ಸ್ವೀಡನು, ನೋರ್ವೆ ಮೊದಲಾದ ರಾಷ್ಟ್ರಗಳೆಲ್ಲಾ ಜರ್ಮನಿ ರಶ್ಯಗಳ ಆಜ್ಞೆಯಂತೆ ನಡೆಯುವವು. ಅವುಗಳೊಂದಿಗೆ ಇಟೆಲಿಯು ಸೇರಿದರೆ ಬಾಲ್ಕನ್ ರಾಷ್ಟ್ರಗಳು ಕೂಡಾ ಈ ಕೂಟದ ಪಕ್ಷಗೊಳ್ಳಬೇಕಾಗುವುದು. ಹಿಟ್ಲರರು ಹೇಗೆಯೇನೂ ರಶ್ಯದೊಂದಿಗೆ ಪಕ್ಕಾ ಮೈತ್ರಿ ಬೆಳೆಸಿರುವರಲ್ಲ. ರಶ್ಯದಿಂದ ಶಾಂತಿಷ್ಟೇ ಸಹಾಯ ದೊರೆತೀತೆಂದು ಹೇಳಲು ಸಾಧ್ಯವಿಲ್ಲ. ಗೋಧಿ, ಮೋಪು, ಮೆಂಗನೀಸ್ ಮತ್ತು ಪೆಟ್ರೋಲ್ ಮೊದಲಾದ ಹಲವು ವಸ್ತುಗಳನ್ನು ರಶ್ಯವು ಒದಗಿಸಬಲ್ಲುದು. ಇದ್ದಲು, ಕಬ್ಬಿಣ, ಹತ್ತಿ, ಸತುವು, ತಾಮ್ರ, ಸೀಸ ಮತ್ತು ಕ್ರೋಮಿಯಂಗಳನ್ನು ಅದಕ್ಕೆ ರಫ್ತು ಮಾಡಲು ಸಾಧ್ಯವಿದೆ. ಅದರ ವ್ಲಾಡಿವಾಸ್ಟೋಕ್ ಬಂದರದ ಮೇಲೆ ಯಾವ ಮುತ್ತಿಗೆಯೂ ಇರುವುದಿಲ್ಲ. ಆ ಮೂಲಕ ಅದು ಹೊರ ದೇಶಗಳಿಂದ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳಬಹುದು. ಇದನ್ನೆಲ್ಲಾ ನೋಡಿದರೆ ಜರ್ಮನಿಯ ಸಾಂಪತ್ತಿಕ ಶಕ್ತಿಯು ದಿನೇ ದಿನೇ ಕುಂದುತ್ತಿರುವುದೆಂದು ಹೇಳಲು ಸಾಧ್ಯವಿಲ್ಲ. ಅದರ ಸೇನಾ ಬಲವಂತೂ ಹೆಚ್ಚುತ್ತಲೇ ಇದೆ. ಮಿತ್ರ ರಾಷ್ಟ್ರಗಳ ಸಾಂಪತ್ತಿಕ ಮುತ್ತಿಗೆಯಿಂದ ಜರ್ಮನಿಯು ತೀವ್ರ ಸಂಕಷ್ಟಕ್ಕೊಳಗಾಗುವುದೆಂದು ನಂಬಲು ಹೆಚ್ಚಿನ ಆಧಾರವೇನೂ ತೋರುವುದಿಲ್ಲ. ಕಳೆದ ಮಹಾ ಯುದ್ಧದಲ್ಲಿ 4 ವರ್ಷಗಳ ತನಕ ಅದು ಬಗ್ಗಲಿಲ್ಲ. ಆಗ ರಶ್ಯ ಮತ್ತು ಇಟೆಲಿಗಳು ಅದಕ್ಕೆ ವಿರೋಧವಿದ್ದವು. ಜಪಾನು ಮತ್ತು ಅಮೆರಿಕಗಳು ಮಿತ್ರ ರಾಷ್ಟ್ರಗಳ ಸಹಾಯಕ್ಕೆ ನಿಂತಿದ್ದವು. ಅದರ ಜಲ ಮತ್ತು ನೆಲ ಮಾರ್ಗಗಳು ಬಂದಾಗಿದ್ದವು. ಈಗಲಾದರೋ ನೆಲಮಾರ್ಗವು ಸಂಪೂರ್ಣ ತೆರೆದಿದೆ. ಜಲಮಾರ್ಗವು ಸಂಪೂರ್ಣ ಬಂದಾಗಿರುವುದೆನ್ನಲಾಗುವುದಿಲ್ಲ.

ಸಾಂಪತ್ತಿಕ ಮುತ್ತಿಗೆಯೊಂದೇ ಸಾಲದು.

ಯುದ್ಧವನ್ನು ನಡಿಸುವುದಕ್ಕೆ ಮುಖ್ಯವಾಗಿ ಬೇಕಾದುದೆಂದರೆ ಪೆಟ್ರೋಲ್ ಮತ್ತು ಕಬ್ಬಿಣ. ಸ್ವೀಡನಿನ ಕಬ್ಬಿಣದ ಪದರನ್ನು ಮಿತ್ರ ರಾಷ್ಟ್ರಗಳು ಜರ್ಮನಿಗೆ ಹೋಗಗೊಡುವ ತನಕ ಅದರ ಯಂತ್ರ ಕಾರ್ಖಾನೆಗಳು ಯಥಾಪ್ರಕಾರ ನಡೆಸಲ್ಪಡುವವು. ಯುದ್ಧಾರಂಭವಾಗುವಾಗ ಜರ್ಮನಿಯು 8 ಮಿಲ್ಯ ಟನ್ನು ಪೆಟ್ರೋಲನ್ನು ಸಂಗ್ರಹಿಸಿದ್ದಿತೆಂದು ನಂಬಲಾಗಿದೆ. ಜರ್ಮನಿಯಲ್ಲೇ 3½ ಮಿಲ್ಯ ಟನ್ನು ಎಣ್ಣೆ ಸಿಗುತ್ತದೆ. 2 ಮಿಲ್ಯ ಟನ್ನನ್ನದು ರುಮಾನಿಯದಿಂದ ಪಡೆಯತಕ್ಕ ಕಂಟ್ರಾಕ್ಟಿದೆ. ಇಟೆಲಿಯು ಕೂಡಾ ಜರ್ಮನಿ ರಶ್ಯಗಳೊಂದಿಗೆ ಸೇರಿದರೆ ರುಮಾನಿಯವು ತನ್ನ ಎಣ್ಣೆಯನ್ನೆಲ್ಲಾ ಜರ್ಮನಿಗೆ ಕೊಡದೆ ನಿರ್ವಾಹವಿಲ್ಲವಾಗುವ ಪರಿಸ್ಥಿತಿಯುಂಟಾಗಬಹುದು. ರಶ್ಯವು ಕೆಲಮಟ್ಟಿಗೆ ಎಣ್ಣೆಯನ್ನೊದಗಿಸಲು ಸಾಧ್ಯವಿದೆ. ಆದುದರಿಂದ ಈಗಣ ತಟಸ್ಥ್ಯದ ಪರಿಸ್ಥಿತಿಯಲ್ಲಿ ಜರ್ಮನಿಗೆ ಪೆಟ್ರೋಲಿನ ಕೊರತೆಯುಂಟಾಗಲಾರದು; ಮಾತ್ರವಲ್ಲ ಮುಂದೆ ಸದ್ಯದ ಸ್ಥಿತಿಯು ಮತ್ತು ಒಳ್ಳೆದಾಗಲಿದೆ. ಇನ್ನು ಒಂದೆರಡು ವರ್ಷಗಳಲ್ಲಿ ಅದು ತಾನೇ 5½ ಮಿಲ್ಯ ಟನ್ನು ಎಣ್ಣೆಯನ್ನು ಉತ್ಪಾದಿಸಿಕೊಳ್ಳಬಲ್ಲುದು. ರಶ್ಯದ ಎಣ್ಣೆಯ ಉತ್ಪತ್ತಿಯು ಬೇಗನೇ 30 ಮಿಲ್ಯ ಟನ್ನುಗಳಿಂದ 48ಕ್ಕೇರುವ ಸಂಭವವಿದೆ. ಆದುದರಿಂದಲೇ ಜರ್ಮನಿಯು ಕಾಲವು ತನ್ನ ಕಡೆಗಿದೆಯೆಂದು ನಿರ್ಧರಿಸಿ ಯಾವ ಧಾಳಿಯನ್ನೂ ನಡಿಸದೆ ಕಾಲಯಾಪನೆ ಮಾಡುತ್ತಿದೆ. ಇನ್ನೂ ಕೆಲ ಸಮಯ ಹೋರಾಟವೇನೂ ನಡೆಯದಿದ್ದರೆ ಅದರ ಸ್ಥಿತಿಯು ಮತ್ತಷ್ಟು ಸುಧಾರಿಸಲಿದೆ. ಇದರಿಂದ ಮಿತ್ರರಾಷ್ಟ್ರಗಳು ಎಚ್ಚರಗೊಳ್ಳಬೇಕು. ಕೇವಲ ಸಾಂಪತ್ತಿಕ ಮುತ್ತಿಗೆಯಿಂದ ಜರ್ಮನಿಯನ್ನು ಬಗ್ಗು

ಬಡಿಯ...
ಗುವ ಸ...
ನಿಗೆ ಸ...
ಹೋಗು...
ನಿಯ ಮ...
ಪೆಟ್ರೋ...
ಅದರ ಜ...
ಇನ್ನು ಬ...
ಮುಳುಗ...
ಮುಂಜು...
ಯು ಕಬ್ಬಿ...
ಆನೇಲಿ...
ಚಳಿಗಾಲ...
ಆದುದರಿಂ...
ವಳಿಯನ್ನು...
ತ್ರವಲ್ಲದೆ...
ಸಂಧಿಯಿಂ...
ವಂತಾದರೆ...
ಜನವಾಗು...
ಸಹಾಯ...
ರಾಷ್ಟ್ರಗಳು...
ಬೇಕು. ಇ...
ಕಳಕೊಳ್ಳ...
ತೊಡಗಿ ನ...
ನ್ನೆಂದಿಗ...
ಬೇಕೆಂದೇ...
ತ ಈಗಣ...
ವರೆ ಅವ...
ತೋರುತ್ತ...
ವಾಗಿ ಇಟೆ...
ದಿಗೆ ಸೇರು...
ಮತ್ತಷ್ಟು...
ತೆ ಜರ್ಮ...
ತೋರುತ್ತ...
ತ್ತು ಕೂ...
ಸಂಭವ...
ಮಾತ್ರ...
ಪರಿಹಾರ...
ಪ್ರೆಸಿಡೆಂಟ...
ಮಿ. ವೆಲ್ಸ...
ಒಂದು ತಿ...
ಸಂಧಿಯ...
ದ್ವಿಯ ಸ...

ಪುತ್ತೂ...
R.

ಬೆಳಗ...
ಸುಬ್ರಾ...
ಭಟ್ರ ಮಗ...

ಸದ್ರಿ ಆ...
ನ್ನು ಏಲು...
ಳನ್ನು ನಿ...
ದ ಜನ ಕಡ...
ರನು ಬಗ್ಗೆ...
ಅರ್ಜಿಗಳ...
ಕ್ಕೆ ನೋಟಿ...
ತ್ತದೆ. ಆದ್ದ...
ಆಕ್ಷೇಪಗ...
ಟ-ಗೆ 11ನೆ...
ವಕೀಲರ...
ತಪ್ಪಿದರೆ ಆ...
ಯನ್ನು ತನ್ನ...
ದಾರನ ಕಡ...
ನೇ ಆರ್ಡ...
ಯಿದೆ.
PUTTUR
9-3-40.

...ಯಶಸ್ವಿಯಾ
...ದಿಲ್ಲ ಜರ್ಮ
...ಪೂರ್ಣವಾಗಿ
...ವನ್ನು ರುವೇ
...ಕ್ಕೆ ಹೋಗುವ
...ಗೊಳಿಸಿದ್ದರೆ
...ಬೇಕಾಗುವುದು.
...ಮತ್ತು ಗ್ರೀಷ್ಮ
... ಕೊಲ್ಲಿಯು
...ಲಕ ಜರ್ಮನಿ
... ತರಿಸುವುದು.
...ದರೆ ಪುನಃ
...ಬೇಕಾಗುವುದು.
...ರ್ಣೆಯ ಕರಾ
...ಬೇಕು. ಮಾ
...ದ್ಧದಿಂದಾಗಲಿ
... ಅಧೀನವಾಗು
...ಗಳ ಪ್ರಯೋ
...ವ ಫಿನ್ಲೆಂಡಿಗೆ
...ಕಡಿಂದ ಮಿತ್ರ
... ಥಾಳ ನಡಿಸ
...ಸಂದರ್ಭವನ್ನು
...ತ ಕಾರ್ಯಕ್ಕೆ
... ಮತ್ತು ಫಿ
...ವನ್ನು ವ್ಯಾಪಿಸ
...ರವರ ಅಭಿಮ
...ವನ್ನು ನೋಡಿ
...ಮುದೆಂದು
...ರಷ್ಯದ ಅಧೀನ
... ರಷ್ಯಗಳೊಂ
... ರಾಷ್ಟ್ರಗಳಿಗೆ
... ದಿನ ನೋಡಂ
...ಟ್ಟದ ಸಂಭವ
...ಗಳು ತಂಕಿಸು
...ವನ್ನು ಗೆಲ್ಲುವ
... ಸಂಧಿಯಿಂದ
... ಸಮಸ್ಯೆಯು
... ತೋರುತ್ತದೆ.
...ಪ್ರತಿನಿಧಿಯಾದ
...ಪರಿಣಾಮ ವಾಗಿ
... ನಿಲ್ಲಿಸಲ್ಪಟ್ಟು
...ಲ್ಪಡುವ ಸು
...ದೆ.

...ಮ.
...ಕೋರ್ಟಿನಲ್ಲಿ
... S 77
...
...Petitioner
...ಡಿ ರಾವ ಕೃಷ್ಣ
...ಬಂಬಲ ಗ್ರಾಮ
...Respondent
...ನ್ಕ ಸ್ಥಿರ ಆಸ್ತಿಯ
...ಕ್ಕಾರು ಶರ್ತಗ
...ನ ದು ಅರ್ಜಿ
...ನ್ನುವರೆ ನರ್ಮ
...57/40ಗೆ ಕೂಡಾ
...ತ 27 3 1940
... ಕ ನ್ನಿಡಯುಸರು
...ದ್ದಯ ಮಾನಾದರೂ
... ವ್ಯಾದಗೆ ಕೇಳ
...ಯಾಗಿ ನ್ನತ್ತ ಯಾ
...ಕೊಳ್ಳತಕ್ಕದ್ದು.
...ರಿ ವ್ಯವಹಂಣೆ
...ರಿಲಿದ್ದು. ಅರ್ಜಿ
...E A 282/40
...ಚಿಟುಸು ವಾಡಿ

...andra Rau.

:: ಮೋಸ್ಕೋದಲ್ಲಿ ಸಂಧಿ ಪ್ರಸ್ತಾಪ ::

ರಷ್ಯ ಮತ್ತು ಫಿನ್ಲೆಂಡುಗಳೊಳಗೆ ರಾಜಿಪ್ರಸ್ತಾಪ

ಸ್ವೀಡನಿನ ಮಧ್ಯಸ್ತಿಕೆಯಿಂದ ಫಿನ್ಲೆಂಡ್ ಮತ್ತು ರಷ್ಯಗಳೊಳಗೆ ಉಂಟಾಗಿರುವ ರಾಜಿಪ್ರಸ್ತಾಪವು ಜಯಶೀಲನಾಗುವ ಸಂಭವ ತೋರುತ್ತದೆ. ಆದರೆ ಈ ರಾಜಿ ಮಾತುಕತೆ ನಡೆಯುವ ಸಂದರ್ಭದಲ್ಲಿ ಯುದ್ಧವನ್ನು ನಿಲ್ಲಿಸಲು ರಷ್ಯವು ಒಪ್ಪಿದುವುದಿಲ್ಲ. ಮೊದಲು ಸ್ಟೋಖೋಲ್ಮಿನಲ್ಲಿ ಸಂಧಿಪ್ರಸ್ತಾಪ ನಡೆಯಿತು. ಆ ಮೇಲೆ ಫಿನ್ಲೆಂಡಿನ ಪ್ರಧಾನ ಮಂತ್ರಿಗಳಾದ ಎಮ್. ರಿಟಿ, ಎಮ್. ಪಸಿಕಿವಿ, ಮಾರ್ಶಲ್ ಮೆನ್ನರ್ ಹೈಮರ ಪ್ರತಿನಿಧಿಯಾದ ಜನರಲ್ ವಾಲ್ಡನ್ ಮತ್ತು ಡಿಪ್ಯೂಟಿ ವಿಯನ್ನಾರವರು ಸೋವಿಯೆಟ್ ಸರಕಾರದಿಂದ ಆಮಂತ್ರಿಸಲ್ಪಟ್ಟು ಇದೇ ತಾ 6 ರಲ್ಲು ಮೋಸ್ಕೋ ಪಟ್ಟಣಕ್ಕೆ ಹೋಗಿ ರಷ್ಯದ ಪ್ರತಿನಿಧಿಗಳೊಡನೆ ಮಾತುಕತೆ ನಡಿಸಿರುವರು. ತಾ 10ರ ವರೆಗೆ ಯಾವ ನಿರ್ಧಾರವೂ ಆಗಿರುವುದಿಲ್ಲ ಫಿನ್ಲೆಂಡು ರಷ್ಯದೊಡನೆ ರಾಜಿಗೆ ಯಾವಾಗಲೂ ಸಿದ್ಧವಿದ್ದಿತು. ಆದರೆ ಅದರ ಸ್ವಾತಂತ್ರ್ಯಕ್ಕೆ ಹಾನಿಯನ್ನುಂಟುಮಾಡುವ ಶರ್ತಗಳಿಗದು ಒಪ್ಪಲು ಸಿದ್ಧವಿರುವುದಿಲ್ಲ ಸೋವಿಯೆಟ್ ಸರಕಾರವು ಇನ್ನಾದರೂ ಅಂತಹ ಶರ್ತಗಳನ್ನೇ ಹಾಕಿದರೆ ಫಿನ್ನರು ಇನ್ನಷ್ಟು ಧೈರ್ಯ ಮತ್ತು ಸ್ಥೈರ್ಯದಿಂದ ಹೋರಾಡುವರೇ ಹೊರತು ಆತ್ಮಘಾತುಕವಾದ ಸಂಧಿಗೊಪ್ಪಲಾರರೆಂದು ಫಿನ್ನಿಶ್ ವಿದೇಶ ಮಂತ್ರಿ ಎಮ್. ಟನ್ನರರು ಅಭಿಪ್ರಾಯಪಿತ್ತಿರುವರು.

10 ದಿನಗಳ ಮೊದಲು ಕರೇಲಿಯ ಭೂಕಂಠದಲ್ಲಿ ಸೋವಿಯೆಟ್ ಸೇನೆಯು ಭರದಿಂದ ಮುಂದೊತ್ತುತ್ತಿದ್ದಾರೆ. ಸ್ಟೋಖೋಲ್ಮಿನಲ್ಲಿದ್ದ ಎಮ್. ಉಕೋ ಮತ್ತು ಮೋಸ್ಕೋದಲ್ಲಿನ ಸ್ವೀಡಿಶ್ ರಾಯಭಾರಿಯ ಮೂಲಕ ಪ್ರಥಮತಃ ಸಂಧಿಪ್ರಸ್ತಾಪ ನಡೆಯಿತು. ಆದರೆ ರಷ್ಯನರು ಯುದ್ಧ ನಿಲ್ಲಿಸಲೊಪ್ಪಲಿಲ್ಲ ಫಿನ್ನಿಶ್ ಪ್ರತಿನಿಧಿಗಳೊಡನೆ ಮಾತುಕತೆ ನಡಿಸಲೊಪ್ಪಿದರು ಆ ಪ್ರಕಾರ ಮೇಲಿನ ಫಿನ್ನಿಶ್ ಪ್ರತಿನಿಧಿಗಳು ಸ್ಟೋಖೋಲ್ಮಿಗೆ ಹೋಗಿ ಅಲ್ಲಿಂದ ವಿಮಾನ ಮೂಲಕ ಮೋಸ್ಕೋವಿಗೆ ತೆರಳಿದರು. ರಷ್ಯನರು ಕೊಟ್ಟಿರುವ ಸಂಧಿಯ ಅವಧಿಯು ತಾ 12ಕ್ಕೆ ಮುಗಿಯುವುದೆಂದು ತಿಳಿಸುಬರುತ್ತದೆ.

ಈ ಸಂಧಿಪ್ರಸ್ತಾಪದಿಂದ ಇಂಗ್ಲೆಂಡು ಮತ್ತು ಫ್ರಾನ್ಸಿನಲ್ಲಿ ಅಸಮಾಧಾನವುಂಟಾಗಿದೆ. ಸ್ವೀಡನಿನ ಒತ್ತಾಯವೇ ಅದಕ್ಕೆ ಕಾರಣವೆಂದು ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳ ಅಭಿಮತ. ತಾನು ಯಾವ ರೀತಿಯಲ್ಲಿಯೂ ಒತ್ತಾಯಪಡಿಸಲಿಲ್ಲೆಂದು ಸ್ವೀಡಿಶ್ ಸರಕಾರವು ಪದಿತಗೊಳಿಸಿರುತ್ತದೆ. ಸಂಧಿಮಾಡಬೇಕೋ ಯುದ್ಧವನ್ನು ಮುಂದುವರಿಸಬೇಕೋ ಎಂದು ನಿಶ್ಚೈಸುವ ಸ್ವಾತಂತ್ರ್ಯ ಫಿನ್ಲೆಂಡಿನದು. ಫಿನ್ಲೆಂಡಿನ ಯುದ್ಧದಲ್ಲಿ ತಾವು ಕೈಹಾಕಿ ಯುದ್ಧ ಉತ್ತರ ಯುರೋಪಿಗೂ ವ್ಯಾಪಿಸುವಂತೆ ಮಾಡುವ ಇಚ್ಛೆ ಮಿತ್ರರಾಷ್ಟ್ರಗಳಿರಬಹುದು. ಫಿನ್ಲೆಂಡು ಅದಕ್ಕೆ ಆಸ್ಪದವೀಯಕೂಡದು. ಸ್ವತಂತ್ರವಾಗಿ ತನ್ನ ಧೋರಣೆಯನ್ನು ನಿಶ್ಚೈಸಬೇಕೆಂದೇ ಇಟೆಲಿಯ ಅಭಿಮತ.

ವೈಪುರಿಗಾಗಿ ಭೀಷಣ ಕದನ

ಮೈಸೂರು ಯುವರಾಜರ ಮರಣ

ಲಡೋಗ ಸರೋವರದ ಉತ್ತರದ ಪ್ರದೇಶ ಮತ್ತು ಹೇಂಕೋ ದ್ವೀಪಗಳನ್ನು ಬಿಟ್ಟುಕೊಡುವ ಕುರಿತು ಫಿನ್ಲೆಂಡ್ ರಷ್ಯಗಳೊಳಗೆ ಚರ್ಚೆಯುಂಟಾಗಿದೆ. ತಾ 12 ರೊಳಗೆ ಯಾವುದಾದರೊಂದು ನಿರ್ಧಾರವಾಗುವುದೆಂದು ನಂಬಲಾಗಿದೆ. ಸೋವಿಯೆಟ್ ಸರಕಾರದ ಕೈಗೊಂಬೆಯಾದ ಎಮ್. ಕುಸಿನೆನ್ ಸರಕಾರವು ಈ ಸಂಧಿಪ್ರಸ್ತಾಪವನ್ನು ಟೀಕಿಸಿದುದರಿಂದ ಸ್ಥಾನಬದ್ಧ ನಿರ್ಬಂಧಕ್ಕೊಳಗಾಗಿರುವುದೆಂದು ಸುದ್ದಿಯುಂಟಾಗಿದೆ.

ಫಿನ್ನರ ಉತ್ಕೃಷ್ಟ ಶಿಸ್ತು

ಸಂಧಿಪ್ರಸ್ತಾಪ ನಡೆಯುತ್ತಿರುವುದಾದರೂ ಫಿನ್ನರು ಉತ್ಕೃಷ್ಟ ಶಿಸ್ತಿನಿಂದ ಹೋರಾಟವನ್ನು ಮುನ್ನಡೆಸುತ್ತಿರುವರು ವೈಪುರಿಯ ಪಶ್ಚಿಮಕರಾವಳಿಯ ಪ್ರದೇಶವನ್ನು ಗೆಲ್ಲಲು ಸೋವಿಯೆಟ್ ಸೈನಿಕರು ತರಂಗತರಂಗವಾಗಿ ಮುಂದೊತ್ತಿ ಎಡೆಬಿಡದೆ ಪ್ರಯತ್ನಿಸುತ್ತಿರುವರು. ಫಿನ್ನರು ಅವರನ್ನು ಇಷ್ಟರವರೆಗೆ ಜಯಶೀಲವಾಗಿ ತಡೆಗಟ್ಟಿರುವರು. ಲಡೋಗ ಸರೋವರದ ಈಶಾನ್ಯ ಭಾಗದಲ್ಲಿ ಭೀಕರ ಹೋರಾಟ ನಡೆಯುತ್ತಿದೆ. ಎರಡು ದಿನಗಳ ಮೊದಲು ಇಲ್ಲಿ 2000 ಸೋವಿಯೆಟ್ ಸೈನಿಕರು ಕೊಲ್ಲಲ್ಪಟ್ಟಿದ್ದರು ವೈಪುರಿ ಕೊಲ್ಲಿಯ ಪಶ್ಚಿಮಕರಾವಳಿಯಲ್ಲಿ ಎರಡು ದ್ವೀಪಗಳನ್ನು ಕರಪ್ಪಿಟಿ ಮತ್ತು ರಹೇಲ ಎಂಬ ಪಟ್ಟಣಗಳನ್ನೂ ಸೋವಿಯೆಟ್ ಸೇನೆಯು ವಶಪಡಿಸಿಕೊಂಡಿರುವುದೆಂದು ಮೋಸ್ಕೋ ವಾರ್ತೆ.

ಮೈಸೂರು ಯುವರಾಜರ ನಿಧನ.

ಮೈಸೂರಿನ ಯುವರಾಜರಾದ ಸರ್. ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದೂರು, ಜಿ. ಸಿ ಐ ಇ, ಇವರು ಇದೇ ತಾ 11ರಲ್ಲು ಬೊಂಬಾಯಿಯಲ್ಲಿ ಡಬ್ಲ್ ನ್ಯೂಮೋನಿಯದಿಂದ ಮೃತರಾಗಿರುವರೆಂಬುದು ವಿಷಾದಕರವಿದೆ. ಇವರು ಜನವರಿ ತಾ. 2ರಲ್ಲು ಯುರೋಪಿನಿಂದ ಬೊಂಬಾಯಿಗೆ ಬಂದವರು ಮೈಸೂರಿಗೆ ಹೋಗಲೇ ಇಲ್ಲ ಇತ್ತಲಾಗಿ ಅವರ ಆರೋಗ್ಯವು ನೆಟ್ಟಗಿದ್ದಿರಲಿಲ್ಲ. ಅವರ ಶವಸಂಸ್ಕಾರವು ಬೊಂಬಾಯಿಯ ಹಿಂದು ಸ್ಮಶಾನದಲ್ಲಿ ನಡೆಯಿತು ಈ ಸಂದರ್ಭದಲ್ಲಿ ಮೈಸೂರಿನ ೦ ಜನನೇತನದವರಾರೂ ಬಂದಿರಲಿಲ್ಲ ಯುವರಾಜರ ನಿಧನ ದುಃಖಸೂಚಕಾರ್ಥವಾಗಿ ಮೈಸೂರು ಬೆಂಗಳೂರು ಮೊದಲಾದ ಪಟ್ಟಣಗಳ ಸರಕಾರಿ ಆಫೀಸುಗಳೆಲ್ಲಾ ಮುಚ್ಚಲ್ಪಟ್ಟಿದ್ದುವು. ಯುವರಾಜರು 1888ನೇ ಇಸ್ವಿ ಜೂನ್ ತಾ. 5ರಲ್ಲು ಹುಟ್ಟಿ ಖಾಸಗಿಯಾಗಿಯೇ ವಿದ್ಯಾಭ್ಯಾಸ ಪಡೆದು ಜಪಾನು ಮತ್ತು ಯುರೋಪು ಖಂಡದಲ್ಲೆಲ್ಲಾ ಸಂಚರಿಸಿ ಅನುಭವ ಪಡೆದವರು ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲಿನ ವಿಶಿಷ್ಟ ಸದಸ್ಯರಾಗಿ ಯೂ ವಿಶ್ವವಿದ್ಯಾಲಯದ ಪ್ರೊ. ಚಾನ್ಸಲರಾಗಿಯೂ ಕೆಲಸ ಮಾಡಿದ್ದರು. ಸಾಮಾಜಿಕ ಸುಧಾರಣೆ, ಸಹಕಾರ ಮತ್ತು ಸ್ಕೌಟ್ ಚಳವಳಿಗಳಲ್ಲಿ ಯುವರಾಜರು ಆಸಕ್ತರಿದ್ದರು.

ಬೆಂಗಳೂರು ಎಡ್ವಕೇಟರ ಕೊಲೆ.

ಬೆಂಗಳೂರಿನ ಎಡ್ವಕೇಟರಾದ ಶ್ರೀ. ಮೋಕ್ಷಗುಂಡಮ್ ಕೃಷ್ಣಮೂರ್ತಿಯವರ ಕೊಲೆಯ ಸಂಬಂಧವಾಗಿ ಶ್ರೀನಂತರೂ ಮೈಸೂರು ಕೌನ್ಸಿಲ್ ಮೆಂಬರರೂ ಶ್ರೀ. ನಾರಾಯಣ ರೆಡ್ಡಿ ಮತ್ತು ಅವರ ಕೆಲಸಗಾರರಾದ ಇನ್ನು 4 ಮಂದಿ ಕೈದು ಮಾಡಲ್ಪಟ್ಟಿರುವವರಷ್ಟೆ. ಇದೇ ತಾ. 10ನೇ ಸಂಜೆ ಪೋಲೀಸರು ಬೆಂಗಳೂರಿನ ಪ್ರಮುಖ ವಕೀಲರಲ್ಲೊಬ್ಬರಾದ ಶ್ರೀ ಎಸ್ ಕೆ. ವೆಂಕಟ್ರಂಗ ಐಯ್ಯಂಗಾರರನ್ನು ಪೋಲೀಸರು ದಸ್ತಗಿರಿ ಮಾಡಿ ಅವರ ಮನೆ ಮತ್ತು ಆಫೀಸಿನ ಜಡ್ತಿ ನಡಿಸಿರುವರು. ಶ್ರೀ ನಾರಾಯಣ ರೆಡ್ಡಿಯವರು ಸಿಟಿ ಮೆಜಿಸ್ಟ್ರೇಟರ ಬಳಿ ಈ ಕೊಲೆಯ ಸಂಗತಿಯನ್ನೆಲ್ಲಾ ತಿಳಿಸಿ ಪಶ್ಚಾತ್ತಾಪ ಸೂಚಿಸಿರುವರೆಂದು ತಿಳಿದು ಬಂದಿದೆ. ಹೆಬ್ಬಾಲ್ ಸರೋವರಕ್ಕೆ ಎಸೆಯಲ್ಪಟ್ಟಿದ್ದ ಶ್ರೀ. ಕೃಷ್ಣಮೂರ್ತಿಯವರ ಮುಂಡಾಸು, ಟೋಪಿ ಮತ್ತು ಮೆಟ್ಟು ಜೋಡಿಗಳನ್ನು ಪೋಲೀಸರು ಪತ್ತೆ ಮಾಡಿರುವರು. ಕೃಷ್ಣಮೂರ್ತಿಯವರನ್ನೊಯ್ದ ಮೋಟಾರ್ ಕಾರು ಕೂಡಾ ಹಿಡಿಯಲ್ಪಟ್ಟಿದೆ.

ರಿಬಂಟ್ರಾಪ್ ಮುಸಲೋನಿ ಭೇಟಿ

ಹರ್, ವಾನ್ ರಿಬಂಟ್ರಾಪರು ಇದೇ ತಾ 10ರಲ್ಲು ರೋಮ್ ಪಟ್ಟಣಕ್ಕೆ ಬಂದಾಗ ಕೌಂಟ್ ಸಿಯಾನೋರವರೇ ಮೊದಲಾದವರು ಅವರಿಗೆ ಸಂಭ್ರಮದ ಸ್ವಾಗತವಿತ್ತರು. ಆ ಮೇಲೆ ರಿಬಂಟ್ರಪರು ಮುಸಲೋನಿಯವರೊಡನೆ $1\frac{1}{4}$ ಘಂಟೆಯವರೆಗೆ ಅಂತರರಾಷ್ಟ್ರೀಯ ಪರಿಸ್ಥಿತಿಯ ಕುರಿತು ಮಾತಾಡಿದರು. ತಾ 11ರಲ್ಲು ಪುನಃ ಮಾತಾಡಿದರು ರಾತ್ರಿ ಕೌಂಟ್ ಸಿಯಾನೋರವರು ಔತಣವಿತ್ತು ರಿಬಂಟ್ರಪರನ್ನು ಸತ್ಕರಿಸಿದರು. ತಾ 11ರಲ್ಲು ರಿಬಂಟ್ರಾಪರು ಕೆಥೋಲಿಕರ ಜಗದ್ಗುರು ಪೋಪ್ ಸಾಹೇಬರನ್ನು ಕಂಡರು.

ಹಿಟ್ಲರರ ಭಾಷಣ

ಇದೇ ತಾ. 10ರಲ್ಲು ಹರ್. ಹಿಟ್ಲರರು ಮೃತಪಟ್ಟ ಜರ್ಮನ್ ಸೈನಿಕರನ್ನು ಗೌರವಿಸುವ ಸಮಾರಂಭದಲ್ಲಿ 15 ನಿಮಿಷಗಳ ವರೆಗೆ ಮಾತಾಡಿ, ಜರ್ಮನಿಯ ಶ್ರೇಷ್ಠತೆ, ಒಗ್ಗಟ್ಟು ಮತ್ತು ತ್ಯಾಗವನ್ನು ಬಹಳವಾಗಿ ಪ್ರಶಂಸಿಸಿದರು "ಪೋಲಂಡಿನ ವಿಜಯವು ಇತಿಹಾಸದಲ್ಲೇ ಅಪ್ರತಿಮವಾದುದು. ಇಂದೀಗ ಜರ್ಮನ್ ಸೈನಿಕರು, ನಾವಿಕರು ಮತ್ತು ವೈಮಾನಿಕರು ಜರ್ಮನಿಯನ್ನು ಪಶ್ಚಿಮ ಹಳೆಯ ವೈರಿಗಳಿಂದ ರಕ್ಷಿಸಲು ಕಟಿಬದ್ಧರಾಗಿ ನಿಂತಿದ್ದಾರೆ. ಅವರ ಹಿಂದೆ ದೇಶವು ಒಕ್ಕಟ್ಟಾಗಿ ನಿಂತಿದೆ. ಇತಿಹಾಸದಲ್ಲಿ ಇಂದೀಗ ಪ್ರಥಮವಾಗಿ ಬೃಹದ್ ಜರ್ಮನಿಯು ಒಂದಾಗಿ ತನ್ನ ಅಸ್ತಿತ್ವಕ್ಕಾಗಿ ಹೋರಾಡಲು ದೇವರ ಕಣ್ಣೆದುರಿನಲ್ಲಿ ಎದ್ದು ನಿಂತಿದೆ ಜರ್ಮನಿಯ ವೀರರಷ್ಟು ಕೀರ್ತಿಪಡೆದವರು ಇಡೀ ಜಗತ್ತಿನಲ್ಲಾರೂ ಇರಲಾರರು. ಕಳೆದ 2000 ವರ್ಷಗಳಿಂದ ಜರ್ಮನಿಯು ಇತಿಹಾಸದಲ್ಲಿ ಅಗ್ರಗಣ್ಯರಾಗಿರುವರಾದರೆ ಸಮಾಜಕ್ಕಾಗಿ ಜರ್ಮನರು ಮಾಡಿರುವ ತ್ಯಾಗವೇ ಕಾರಣ. ನಾವು ನಮ್ಮ ಹಿರಿಯರಷ್ಟೇ ಧೈರ್ಯ ಸ್ಥೈರ್ಯವುಳ್ಳವರಿರಬೇಕು ಧಂಡವಾಳಶಾಹಿ ಪ್ರಜಾಸತ್ತೆಗಳು ಇಂದು ಜರ್ಮನಿಯನ್ನು ನಾಶಮಾಡುವ ಉದ್ದೇಶದಿಂದ ಯುದ್ಧ ಹೂಡಿರುವವು. ಜರ್ಮನಿಯು ಅವುಗಳ ದೊಡ್ಡ ವೈರಿಯಾಗಿದೆ.

In the Court of the District Munsif of Karkal

O S No 538 of 1937

R E P. No $\frac{69}{1940}$

R. E A No. $\frac{61}{1940}$

K. P. Seshagiri Prabhu, Son of K. P. Subraya Prabhu, residing in Karkala —*Petitioner*

VERSUS

Venkatramana Kamath and others —*Respondents*.

To, (2) Devanna alias Annappa Kamath, son of Madhava Kamath, 78 Ummer Mansion, Clerk Road, Jacob Circle, Bombay.

(4) Krishnaraya Kamath son of Madhava Kamath, living in Sooda Sanjiva Nayak s Tea shop Kata im Makanji Chawl, Yens Road, Agrapada, Byculla, Bombay.

Whereas the above named petitioner has made application to this Court for sale of the mortgaged property and also for permission to bid and set off at the time of sale, you are hereby warned to appear in this Court in person or by a pleader duly instructed on 3-4-1940 at 10 A M before this Court failing which the said application will be heard and determined in your absence

((By order of the Court)

Karkala, 4th March 1940 — **K L Kudva**, *Pleader for Petitioner*.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತಾಹರರಿಂದ)

ಮಂಗಳೂರು ತಾ. 4-3-1940

ಪ್ರೇಮಸಾಮ್ರಾಜ್ಯ ನಾಟಕ ಪ್ರದರ್ಶನ— ಮಂಗಳೂರು ಎಮೆಚೂರ್ಸ್ ಸಂಗೀತ ನಾಟಕ ಸಭಾ ಇವರು ತಾ 9-3-40ನೇ ರಾತ್ರಿ ಮಂಗಳೂರು ಸ್ಕೂಲ್ ಓಫ್ ಕೋಮರ್ಸ್ ಇದರ ಸಹಾಯಾರ್ಥವಾಗಿ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ 'ಪ್ರೇಮಸಾಮ್ರಾಜ್ಯ' ಎಂಬ ಸಾಮಾಜಿಕ ಸಂಗೀತ ನಾಟಕವನ್ನು ಜಿಲ್ಲಾ ಮತ್ತು ಸೆಶ್ಶನ್ಸ್ ಜಡ್ಜರಾದ ಶ್ರೀ. ಆರ್. ಎಸ್. ಸುಬ್ರಹ್ಮಣ್ಯ ಅಯ್ಯರ್, ಬಿ. ಎ. ಬಿ ಎಲ್ ಇವರ ಅಧ್ಯಕ್ಷತೆಯಲ್ಲಿ ಮನೋರಂಜಕವಾಗಿ, ಬಹು ಯಶಸ್ವಿಯಾಗಿ ಅಭಿನಯಿಸಿದರು. ನಾಟಕ ಮಧ್ಯದಲ್ಲಿ ಶ್ರೀ. ವಕೀಲ್ ವ್ಯಾಸರಾಯಾಚಾರ್ಯರು ಎಮೆಚೂರ್ ಸಂಘದ ಕಾರ್ಯದರ್ಶಿಗಳಾದ ಶ್ರೀ. ಎಂ. ಎ. ದೇವಡಿಗರ ಉತ್ಸಾಹ, ಅವರ ಸಾಹಸದಿಂದ ಸಂಘವು ಉತ್ಕೃಷ್ಟ ನಟರನ್ನೊಳಗೊಂಡು ಮಾಡುತ್ತಿರುವ ಕರ್ನಾಟಕ ರಂಗಭೂಮಿಯ ಸೇವೆ, ಸಮಾಜಸೇವೆ ಮೊದಲಾದುವನ್ನು ವಿವರಿಸಿ ಸಂಘಕ್ಕೆ ಉತ್ತಮ ಭವಿಷ್ಯವನ್ನು ಹಾರೈಸಿ ಬೆಳ್ಳಿಯ ಕಪ್ಪೊಂದನ್ನು ಸಂಘಕ್ಕೆ ಪ್ರೋತ್ಸಾಹ ರೂಪವಾಗಿ ಅಧ್ಯಕ್ಷರ ಕೈಯಿಂದ ಕೊಡಿಸಿದ್ರಿ. ಅಧ್ಯಕ್ಷರು ಮಾತನಾಡುತ್ತ ನಟರ ಚತುರತೆ, ಅಭಿನಯ, ಕೌಶಲ್ಯ, ಸಂಗೀತ ಶರಚಿತ್ರ ಮೊದಲಾದುವನ್ನು ಶ್ಲಾಘಿಸಿ ಸಂಘವು ಇನ್ನಷ್ಟು ಅಭಿವೃದ್ಧಿ ಹೊಂದಿ ಆದರ್ಶ ಕಲಾಸಂಘವಾಗಲೆಂದು ಹರಸಿದರು. ಇಂದಿನ ನಾಟಕವು ಸರ್ವ ವಿಧದಿಂದಲೂ ಕಂಪೆನಿಯ ನಾಟಕಗಳಷ್ಟೇ ಉತ್ಕೃಷ್ಟವಾಗಿತ್ತೆಂಬ ಅಭಿಪ್ರಾಯ ಪಟ್ಟರು. ನಾಟಕಾಂತ್ಯದಲ್ಲಿ ಶ್ರೀ. ದೇವಡಿಗರು ನಾಟಕ ಪ್ರದರ್ಶನಕ್ಕೆ ನೆರವಾದವರೆಲ್ಲರಿಗೂ ನಟವರ್ಗಕ್ಕೂ ವಂದನೆಯನ್ನರ್ಪಿಸಿ ಇದೇ ನಾಟಕವು ತಾ. 16-3-40ನೇ ಶನಿವಾರ ಉಡುಪಿಯಲ್ಲಿ ಅಭಿನಯಿಸಲ್ಪಡುವುದೆಂದರು. ಶ್ರೀ. ಪಿ. ರಾಮರಾಯರು ತಮ್ಮ ಶಾಲೆಗೆ ಈ ನಾಟಕವನ್ನು ಬೆನಿಫಿಟಾಗಿ ಅಭಿನಯಿಸುವುದಕ್ಕೆ ಧನ್ಯವಾದಗಳನ್ನಿತ್ತರು. ನಾಟಕಕ್ಕೆ ಸರಕಾರಿ ನೌಕರರು, ಡಾಕ್ಟರರು, ವಕೀಲರೇ ಮೊದಲಾದ ವಿದ್ಯಾವಂತರನೇಕರೂ ಬಂದಿದ್ದರು. ಪ್ರೇಕ್ಷಕ ವರ್ಗವು ಕಿಕ್ಕಿರಿದಿತ್ತು. ಶ್ರೀ. ನರಸಿಂಹನವರ ತಿಮ್ಮಣ್ಣನ ಪಾತ್ರವು ಅತ್ಯಂತ ಸ್ವಾಭಾವಿಕ ಹಾಸ್ಯದಿಂದ ಕೂಡಿದ್ದು, ಜನರನ್ನು ಎಡೆಬಿಡದೆ ನಗಿಸುವಂತಿತ್ತು. ಶ್ರೀಯುತರು ತನ್ನನ್ನು ತಾನು ಮರೆತು ಉತ್ತಮವಾಗಿ ಅಭಿನಯಿಸಿದರು. ಮಾಸ್ಟರ್ ನಾರಾಯಣ ಶೈಗಳ ಪ್ರೇಮಲತೆಯ ಪಾತ್ರವಂತೂ ಮನಮುಗ್ಧಕರವಾಗಿತ್ತು. ಕವಿತೆ ಹುಡುಗಿಯ ಅಪ್ ಟು-ಡೇಟ್ ಫ್ಯಾಶನಿನಿಂದ ನಾಟಕ ಕಂಪೆನಿಯವರಿಗೆ ಸರಿಮಿಗಿಲೆನಿಸುವಂತೆ ಅಭಿನಯಿಸಿದರು. ಶ್ರೀ. ಬಿ. ರಾಮಚಂದ್ರರಾಯರ ಸುಹಾಸಿನಿಯ ಪಾತ್ರವು ನಿಜವಾದ ಸ್ತ್ರೀಯಂತೆಯೇ ಇದ್ದು ಅತ್ಯಂತ ಪರಿಣಾಮಕಾರಿಯಾಗಿತ್ತು. ಅವರ ದುಃಖದ ದೃಶ್ಯಗಳು ಇನ್ನೂ ಕಣ್ಣೆದುರಿಗಿರುವಂತಿದೆ. ಶ್ರೀ. ಗುರುರಾಜ ಭಟ್ಟರ ದೇಶಭಕ್ತನ ಪಾತ್ರವೂ ಉತ್ತಮವಾಗಿತ್ತು. ಇತರ ಎಲ್ಲಾ ಪಾತ್ರಗಳೂ ಸಾಕಷ್ಟು ತೃಪ್ತಿಕರವಾಗಿದ್ದವು. ಆದರೂ ನಾಟಕವು ಕೆಲವೊಂದು ದೃಶ್ಯಗಳ ದೀರ್ಘವಾಗಿ ಎಳೆಯುತ್ತಿದ್ದರೆ ಸರ್ವಸಾಮಾನ್ಯವಾದ ಕೆಲ ದೃಶ್ಯಗಳನ್ನು ಬಿಡುತ್ತಿದ್ದರೆ ಇನ್ನಷ್ಟು ಪರಿಣಾಮಕಾರಿಯಾಗುವುದೆಂಬುದರಲ್ಲಿ ಸಂಶಯವಿಲ್ಲ.

ಮಂಗಳೂರು—ಇಂಡಿಯ ಕಾಸ್ಮೊಪೊಲಿಟನ್ ಕ್ಲಬ್ಬಿನ ಆಶ್ರಯದಲ್ಲಿ ಟೆನಿಸ್ ಪಂದ್ಯಾಟವೊಂದು ಈ ತಿಂಗಳ ತಾ. 24ರಲ್ಲು ಜರಗಲಿರುವುದು. ದಕ್ಷಿಣ ಭಾರತದ ಗೃಹಸ್ಥ ಗೃಹಿಣಿಯರು ಇದರಲ್ಲಿ ಭಾಗ ವಹಿಸಬಹುದು. ಜಂಟಲ್ ಮೆನ್ಸ್ ಸಿಂಗಲ್ಸ್ ಮತ್ತು ಡಬ್ಬಲ್ಸ್ ಲೇಡೀಸ್ ಸಿಂಗಲ್ಸ್ ಮತ್ತು ಮಿಕ್ಸೆಡ್ ಡಬಲ್ಸ್ ಸ್ಪರ್ಧೆಗಳಿವೆ. ಸಿಂಗಲ್ಸ್‌ಗಳಿಗೆ ರೂ. 3, ಡಬಲ್ಸ್ ಮತ್ತು ಮಿಕ್ಸೆಡ್‌ಗಳಿಗೆ ರೂ. 5 ರಂತೆ ಪ್ರವೇಶ ಫೀಸನ್ನು ಇದೇ ತಾ. 18ರೊಳಗಾಗಿ ಟೂರ್ನಮೆಂಟಿನ ಕಾರ್ಯದರ್ಶಿಯವರಿಗೆ ಕಳುಹಿಸಿದರು ಹೆಚ್ಚಿನ ವಿವರಗಳಿಗಾಗಿ ಸ್ಪರ್ಧೆಗಳು ಗೆದ್ದವರಿಗೆ ಬೆಳ್ಳಿ ಕಪ್ಪುಗಳ ಬಹುಮಾನವಿದೆ. ಹೆಚ್ಚಿನ ಮಾಹಿತಿಯನ್ನಪೇಕ್ಷಿಸುವವರು ಕಾರ್ಯದರ್ಶಿಯವರಿಗೆ ಬರೆದು ತಿಳಕೊಳ್ಳಬಹುದು.

ಲಾರಿಯಿಂದ ಅನಾಹುತ—ತಾ. 6ನೇ ಬುಧವಾರ ಅಪರಾಹ್ನ ಸುಮಾರು ಎರಡು ಘಂಟೆ ಸಮಯ ಗವರ್ನಮೆಂಟ್ (ಸ್ತ್ರೀಯರ) ಟ್ರೈನಿಂಗ್ ಶಾಲೆಯ ಮುಂಭಾಗದಲ್ಲಿ ಅದೇ ಶಾಲೆಯ ಸುಮಾರು 7-8 ವರ್ಷ ಪ್ರಾಯದ ಎಳೆ ಬಾಲಕಿಯೋರ್ವಳ ಮೇಲೆ ಒಂದು ಲಾರಿಯು ಹಾದು ಹೋಗಿ ಆಕೆಯು ಕೂಡಲೆ ಮೃತಿ ಹೊಂದಿದಳು. ಇತ್ತೀಚೆಗೆ ಲಾರಿಯಿಂದ ಅನಾಹುತಗಳು ಬಹಳ ಹೆಚ್ಚುತ್ತಿವೆ. ಲಾರಿ ಡ್ರೈವರರುಗಳು ಬಹಳ ಜತನದಿಂದ ವಾಹನಗಳನ್ನೋಡಿಸುವುದು ಬಹಳ ಅಗತ್ಯವಿದೆ.

ಋಷಿಬೋಧೋತ್ಸವ—ತಾ. 7ರಲ್ಲಿ ಸ್ಥಳೀಯ ಆರ್ಯ ಸಮಾಜದಲ್ಲಿ ಋಷಿಬೋಧೋತ್ಸವವು ಬ್ರ। ಶ್ರೀ। ಸಜ್ಜೋಡಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ।ಗಳಾದ ರಂಜಾಳ ಮಂಜನಾಥ ಶೆಣೈ (ಆರ್ಯ ಉಪದೇಶಕ) ಡಾ। ಯಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ಮತ್ತು ಶ್ರೀ। ಮೋಹನಪ್ಪ ತಿಂಗಳಾಯರು ಸ್ವಾಮಿ ದಯಾನಂದರ ಚರಿತ್ರೆ, ಅವರು ಸನ್ಯಾಸದೀಕ್ಷೆಯನ್ನು ಕೈಕೊಳ್ಳಲು ಕಾರಣ ಇವೇ ಮೊದಲಾದ ವಿಷಯಗಳನ್ನೆತ್ತಿಕೊಂಡು ಭಾಷಣ ಮಾಡಿದರು.

ಆರ್ತ ಚಿಕಿತ್ಸಾ ಭವನ—ಡಾ। ಎಸ್. ಡಿ. ಸುವರ್ಣರು ಕಳೆದ 22 ವರ್ಷಗಳಿಂದ ನಡಿಸಿಕೊಂಡು ಬರುತ್ತಿರುವ ಧರ್ಮಾರ್ಥ ವೈದ್ಯಶಾಲೆಯ ವಾರ್ಷಿಕೋತ್ಸವವು ನಿನ್ನೆಯ ದಿನ ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ। ಸುವರ್ಣರ ತ್ಯಾಗಬುದ್ಧಿಯನ್ನೂ, ಅವರಿಗೆ ಮಹಾಜನರ ಬೆಂಬಲವು ಸಿಕ್ಕಬೇಕೆಂಬುದನ್ನೂ ಶ್ರೀನಿವಾಸರಾವ್ ಬಹದ್ದೂರರು ಯು, ಆನಂದರಾಯರು ಶ್ರೀ. ಬಿ. ಅಪ್ಪಯ್ಯನವರು, ಶ್ರೀ ಎ. ವಿ. ರಾಮರಾಯರು ಮತ್ತು ಡಾ। ಎಫ್. ಎಚ್ ಒಡೆಯರು ಭಾಷಣ ಮಾಡಿದರು. ಡಾ। ಸುವರ್ಣರು ಚಿಕಿತ್ಸಾ ಭವನದ ವರದಿಯನ್ನೋದಿದರು. ಅಧ್ಯಕ್ಷರು, ಡಾ। ಸುವರ್ಣರು ಮಾಡುತ್ತಿರುವ ದೀನ ಸೇವೆಯನ್ನು ಪ್ರಶಂಸಿಸಿ ಭಾಷಣವಿತ್ತರು. ರಾ. ಬ. ಯು. ಆನಂದರಾಯರು ಧನ್ಯವಾದಗಳನ್ನರ್ಪಿಸದ ತರುವಾಯ ಸಭಾಂತ್ಯವಾಯಿತು.

ಜಿಲ್ಲಾ ಕಾಂಗ್ರೆಸ್ ಸಮಿತಿ— ನೂತನವಾಗಿ ಆರಿಸಲ್ಪಟ್ಟ ಜಿಲ್ಲಾ ಕಾಂಗ್ರೆಸ್ ಸದಸ್ಯರ ಸಭೆಯೊಂದು ಕಳೆದ ತಾ. 6ರಲ್ಲಿ ಶ್ರೀ. ಯು. ಎಸ್. ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿ ದಿವಂಗತ ಶ್ರೀನಿವಾಸರಾವ್ ಕೌಜಲಗಿಯವರ ನಿಧನಕ್ಕಾಗಿ ಸಂತಾಪ ಸೂಚಿಸಿ ರಿಸಾಲ್ವೇಶನ್ ಮಾಡಲಾಯಿತು. ಅನಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯು ಗತ ವರ್ಷದ ವರದಿಯೂ, ಲೆಕ್ಕ ಪರಿಶೋಧಕರ ವರದಿಯೂ ಓದಲ್ಪಟ್ಟು, ಮಂಜೂರಾದುವು ಹೊಸ ವರ್ಷದ ಕಾರ್ಯಕಾರಿ ಅಧಿಕಾರಿಗಳ ಚುನಾವಣೆ ನಡೆದು ಶ್ರೀ. ಯು. ಎಸ್. ಮಲ್ಯರು ಅಧ್ಯಕ್ಷರಾಗಿಯೂ, ಶ್ರೀಗಳಾದ ಎಲ್. ಎಸ್. ನಾಯಕರು ಮತ್ತು ಧರ್ಮರಾಜ ಅಧಿಕಾರಿಗಳು ಉಪಾಧ್ಯಕ್ಷರುಗಳಾಗಿಯೂ, ಕುಡ್ಪಿ ವಾಸುದೇವ ಶೆಣೈಯವರು ಪ್ರಧಾನ ಕಾರ್ಯದರ್ಶಿಗಳಾಗಿಯೂ, ಬಿ. ಸಟ್ಟಣ್ಣ ಶೆಟ್ಟಿ ಮತ್ತು ಕೆ. ಪಿ. ಜನಾರ್ದನ ಪ್ರಭುಗಳು ಜತೆ ಕಾರ್ಯದರ್ಶಿಗಳಾಗಿಯೂ, ಕೆ ಮಾಧವ ಕಿಣಿಯವರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟುದಲ್ಲದೆ ಇನ್ನು ಎಂಟು ಮಂದಿ ಸದಸ್ಯರು ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟರು.

ಫೂಟ್ ಬಾಲ್ ಮೇಚ್— ಮುನ್ಸಿಪಲ್ ಜಮ್ಖಾನ ಕಮಿಟಿಯವರು ಏರ್ಪಡಿಸಿದ ಫೂಟ್‌ಬಾಲ್ ಮೇಚಿನ ಫೈನಲ್ಲಿ ಉಡುಪಿ ಟೀಮು ಮತ್ತು ಹಿರಿಯಡ್ಕ ಪರ್ಕಳ ಕಂಬೈಂಡು ಟೀಮುಗಳೊಳಗೆ ಆಟ ನಡೆದು ಎರಡನೆಯವರು ಗೆದ್ದು ಕಪ್ಪು ಪಡೆಯಲು ಅರ್ಹರಾಗಿರುವರು.

ಶ್ರೀ. ಕೆ. ನಾರಾಯಣ ಶೆಟ್ಟಿ— ಕಳೆದ ದಿಸಂಬರ ತಿಂಗಳಲ್ಲಿ ಜರಗಿದ ಪೋಸ್ಟಲ್ ಇನ್ಸ್‌ಪೆಕ್ಟರ್ಸ್ ಕಾಂಪೆಟಿಟಿವ್ ಪರೀಕ್ಷೆಯಲ್ಲಿ ನಮ್ಮ ಊರಿನವರಾದ ಶ್ರೀ. ಕೆ. ನಾರಾಯಣ ಶೆಟ್ಟಿ, ಬಿ. ಎ. ಯವರು ಪಾಸಾಗಿರುವರೆಂದೂ ಅಲ್ಲದೆ ಪ್ರೆಸಿಡೆನ್ಸಿಯಲ್ಲಿ ಪ್ರಥಮಸ್ಥಾನವಪಡೆದಿರುವರೆಂದೂ ತಿಳಿಸಲು ಸಂತೋಷವಾಗುತ್ತದೆ. ಶ್ರೀಯುತರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಉಡುಪಿ

ಹರಿಜನ ವಿದ್ಯಾರ್ಥಿ ಭವನ— ತಾ. 27-11-39ರಲ್ಲಿ ಸ್ಥಾಪನೆಯಾದ ಹರಿಜನ ವಿದ್ಯಾರ್ಥಿಭವನಕ್ಕೆ ತಾ. 1-3-40ರಿಂದ ತಾ. 10-3-40 ರವರೆಗೆ ಉದಾರ ಸಹಾಯವಿತ್ತವರು. ಶ್ರೀ ಅಧಮಾರು ಮಠ ಮತ್ತು ಶ್ರೀ ಫಲಿಮಾರು ಮಠದವರು 4½ ಮುಡಿ ಅಕ್ಕಿಯಂತೆ, ಶ್ರೀ ಪೇಜಾವರ ಮಠ ರೂ. 12-0-0; ಶ್ರೀ. ಬಿ. ವಾಸುದೇವ ರಾವ್, ವಕೀಲ್ ಮತ್ತು ಡಾ. ಸುಂದರರಾಮ ಶೈಗಳು ತಿಂಗಳಿಗೆ ರೂ 1-0-0ರಂತೆ (ಡಾ. ಸುಂದರರಾಮ ಶೈಗಳು ಭವನದ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಚಿಕಿತ್ಸೆಮಾಡಲೊಪ್ಪಿ ತಾ. 6-3-40ರಲ್ಲಿ ಭವನವನ್ನು ಸಂದರ್ಶಿಸಿ ನಿವಾಸಿಕರನ್ನು ಪರೀಕ್ಷಿಸಿದ್ದಾರೆ ಶ್ರೀಗಳಾದ ಕೆ. ವಾಸುದೇವ ಶೆಣೈ, ಹಾವಂಜೆ ಅಪ್ಪಯ್ಯ ಶ್ಯಾನುಭಾಗ, ಅಮ್ಮುಂಜೆ ನಾರಾಯಣ ನಾಯ್ಕ, ತೋನ್ಸೆ ರಾಮಕೃಷ್ಣ ಪೈ, ಕೆ. ಶಿವರಾಯ ಬಾಳಿಗ, ಇವರು ರೂ. 1-4-0ರಂತೆ; ಶ್ರೀಗಳಾದ ರಾಘವೇಂದ್ರ ನಾಯ್ಕರ. 0-2-0; ಯು. ರಾಘವೇಂದ್ರ ಪಡಿಯಾರ 1-0-0; ರಾಮಪ್ಪ ತಿಮ್ಮಪ್ಪ 0-8-0; ಕೆ. ಸಬ್ರಾಯ ಶೆಣೈ 0-8-0; ರಘುನಾಥ ರಾಯರ 1-0-0 ಜುಮ್ಲಾ 12ಮುಡಿ ಅಕ್ಕಿ, ನಗದಿ ರೂ. 22-6-0. ಸಹಾಯವಿತ್ತ ಸಕಲರಿಗೂ ಧನ್ಯವಾದಗಳೆಂದೂ; ಇತರರೂ ಇದೇ ರೀತಿ ಪ್ರೋತ್ಸಾಹಿಸಬೇಕೆಂದೂ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಗಾಡಿಯಾಳುಗಳ ಗೋಳು— ಈ ಶಿರೋನಾಮೆಯ ಒಂದು ಪತ್ರ ಗಾಡಿಯಾಳಿನಿಂದ ಬಾತ್ಮಿಯೆಂದು ನಮ್ಮ ಕಡೆಗೆ ಬಂದಿದೆ. 'ಜಟ್ಕಾ ಮೋಟರುಗಳ ದೆಸೆಯಿಂದ ನಮಗೆ ಬಾಡಿಗೆ ಸಿಗುವುದೇ ದುರ್ಲಭ, ಒಂದು ವೇಳೆ ಅಪರೂಪವಾಗಿ ಸಿಕ್ಕಿ ಮುನ್ಸಿಪಾಲಿಟಿಯ ಗಡಿಯೊಳಗೆ ಪ್ರವೇಶಿಸಿದರೆ ಅಲ್ಲಿಂದ ಒಂದಂತೆ ಹಿಂದೆ ಹೋಗುವುದು ಕಷ್ಟವಾಗಿದೆ, ಜನರನ್ನು ಯಾ ಸಾಮಾನನ್ನು ಇಳಿಸಲು ರಸ್ತೆಯ ಬದಿಯಲ್ಲಿ ಎಲ್ಲಿಯಾದರೂ ನಿಂತರೆ ಬಂತು ಪೋಲೀಸನವರ ದೃಷ್ಟಿ ಬಡವರಾದ ನಮ್ಮ ಮೇಲೆ, ನಾವು ಗಾಡಿ ನಿಲ್ಲಿಸದೆ ಸಾಮಾನು ಇಳಿಸುವುದು ಹೇಗೋ ತಿಳಿಯದು. ನಮ್ಮ ಮೇಲೆ ಪೋಲೀಸು ಚಾರ್ಜು ಆಗಿ ಬೆಂಚ್ ಕೋರ್ಟಿಗೆ ಹೋಗುತ್ತದೆ, ಅಲ್ಲಿಂದ ನಮಗೆ ನೋಟೀಸು ದೊರೆಯುತ್ತದೆ. ಜೀವನಾಧಾರವಾದ ನಮ್ಮ ಕೆಲಸ ಬಿಟ್ಟು ಅನೇಕ ವೇಳೆ ಅಲ್ಲಿಗೆ ಸರಬರಾಗುತ್ತದೆ. ಕೊನೆಗೆ ನಮಗೆ ಜುಲ್ಮಾನೆಯನ್ನು ವಿಧಿಸುತ್ತಾರೆ. ದಿನದೂಡುವುದು ಕಷ್ಟವಾದರೂ ನಾವದನ್ನು ಕೊಟ್ಟೇ ತೀರಬೇಕು. ಇನ್ನು ಟೇಕ್ಸುಗಳ ಉಪದ್ರವ ಪ್ರತ್ಯೇಕ ಉಂಟು. ಸಂಪಾದನೆಯೇ ಇಲ್ಲದಾಗ ನಮ್ಮನ್ನು ಈ ಎಲ್ಲಾ ಕಷ್ಟಸಂಕಷ್ಟಗಳಿಂದ ಪಾರುಮಾಡುವವರಾರೋ ತಿಳಿಯದಾಗಿದೆ. ಯಾರೊಡನೆ ದೂರಿಡುವುದೇ ತಿಳಿಯದು, ಅಧಿಕಾರಿವರ್ಗದವರಿಗೆ ಇನ್ನಾದರೂ ಬಡವರಾದ ನಮ್ಮ ಮೇಲೆ ದಯೆ ಬಾರದೇ' ಎಂಬುದೇ ಅದರ ಸಾರಾಂಶವಾಗಿದೆ. ಈ ಕುರಿತು ಸಂಬಂಧಪಟ್ಟವರು ತುಸು ವಿಚಾರಿಸುವರೇ ?

ಉಡುಪಿ ಮುನ್ಸಿಪಾಲಿಟಿಯ ಸ್ವತ್ತಿನ ತೆರಿಗೆ—ಯು ಪುನಃ ವಿಮರ್ಶಿಸಲ್ಪಟ್ಟದ್ದು, ಅದು ತಾ. 1-4-40ರಿಂದ ಜಾರಿಗೆ ಬರಲಿರುವುದೆಂಬ ಪ್ರಕಟಣೆಯೊಂದನ್ನು 6ನೇ ಪುಟದಲ್ಲಿ ಕೊಡಲಾಗಿದೆ. ತೆರಿಗೆಯು ಪುನರ್ವಿಮರ್ಶಿಸಲ್ಪಟ್ಟು ಎಷ್ಟಕ್ಕೆ ಬಂದಿದೆಯೆಂಬ ವಿವರವನ್ನು ಮುನ್ಸಿಪಲ್ ಆಫೀಸಿನಲ್ಲಿ ಪುನರ್ವಿಮರ್ಶಿಸಲ್ಪಟ್ಟ ತೆರಿಗೆ ಪುಸ್ತಕಗಳಿಂದ ತಿಳಿಯಬಹುದಾಗಿದೆ. ಈ ಬಗ್ಗೆ ಏನಾದರೂ ಆಕ್ಷೇಪವಿದ್ದರೆ ರಿವಿಶನ್ ಬಗ್ಗೆ ನಿಶ್ಚಿತ ಅವಧಿಯೊಳಗೆ ಅರ್ಜಿಗಳನ್ನು ದಾಖಲುಮಾಡಬಹುದಾಗಿದೆ. ಕೊನೆಗೆ ಪಶ್ಚಾತ್ತಾಪಪಡುವುದಕ್ಕಿಂತ ಸಕಾಲದಲ್ಲಿ ಆಕ್ಷೇಪಣಾ ಅರ್ಜಿಗಳನ್ನು ದಾಖಲುಮಾಡುವುದು ವಿಹಿತವಾಗಿದೆ.

ಕಾರ್ಕಳ—ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯ ಸಂಘದ ವಾರ್ಷಿಕೋತ್ಸವವು ತಾ. 9-3-40ರ ದಿನ ಶ್ರೀ. ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜನಾಬ್ ಯಚ್. ಯನ್. ಹುಸ್ಸೇನ್, ಬಿ. ಎ. ಬಿ. ಯಲ್, ಯಂ. ಯಲ್. ಎ.ರವರ ಅಧ್ಯಕ್ಷತೆಯಲ್ಲಿ ಕೇಂದ್ರಕ್ಕೆ ಸೇರಿದ 19 ಶಾಲೆಗಳ ಮಕ್ಕಳ ಮೆರವಣಿಗೆ, ಸ್ಪರ್ಧೆ, ವಿನೋದ ಪ್ರದರ್ಶನಗಳು, ಭಾಷಣ ಇತ್ಯಾದಿ ಮನೋರಂಜಕ ಮತ್ತು ಬೋಧಪ್ರದ ಕಾರ್ಯಕ್ರಮದಿಂದ ಯಶಸ್ವಿಯಾಗಿ ಜರಗಿತು. ಅಧ್ಯಕ್ಷರು ಭಾಷಣಮಾಡುತ್ತಾ ಸಂಘದ ನಾನಾಬಗೆಯ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಶಂಸಿಸಿ, ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸ್ಥಿತಿಗತಿಗಳನ್ನು ಸುಧಾರಿಸುವ ವಿಷಯದಲ್ಲಿ ಕಾರ್ಕಳ ತಾಲೂಕು ಎಜ್ಯುಕೇಶನ್ ಕಮಿಟಿಯ ಅಧ್ಯಕ್ಷ, ಮತ್ತು ಮದ್ರಾಸು ಎಸೆಂಬ್ಲಿಯ ಸದಸ್ಯನಾಗಿ ತಾನು ಮಾಡಬಹುದಾದುದನ್ನೆಲ್ಲ ಮಾಡುವೆನೆಂದು ಭರವಸೆ ಕೊಟ್ಟು ಕಾರ್ಕಳದ ಉಪಾಧ್ಯಾಯ ಸಂಘವು ಅಂಥ ಇತರ ಸಂಘಗಳಿಗೆ ಮಾರ್ಗದರ್ಶಕವಾಗಿರುವದು ಸ್ತುತ್ಯವೆಂದರು. ಸಂಘದ ಚಟುವಟಿಕೆಗಳಿಗೆ ಮುಖ್ಯ ಕಾರಣವಾಗಿರುವ ಇಲ್ಲಿಯ ಉತ್ಸಾಹೀ ಡಿಪ್ಟಿ ಇನ್ಸ್‌ಪೆಕ್ಟರ ಶ್ರೀ. ಪಿ. ವಿ. ರಮಣ ಮೋರಾದವರಿಗೆ ಧನ್ಯವಾದ ಸಮರ್ಪಣೆ ಆದ ಬಳಿಕ ಉತ್ಸವ ಕಾರ್ಯಕ್ರಮವು ಕೊನೆಗೊಂಡಿತು.

ಮೂಲ್ಕಿ—ಸ್ಥಳೀಕ ಬಪ್ಪನಾಡು ದೇವಸ್ಥಾನದಲ್ಲಿ ಜರಗತಕ್ಕ ಕಾಲಾವಧಿ ಜಾತ್ರೆಯು ಈ ವರ್ಷದ ತಾ. 22-3-40ರಿಂದ 26-3-40ರ ತನಕ ಜರಗಲಿರುವುದು. ಭಕ್ತಾದಿಗಳು ಎಂದಿನಂತೆ ಬಂದು ಶ್ರೀ ಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸಿ ಶ್ರೀದೇವಿಯ ಕೃಪಾಪಾತ್ರರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ.

ಭಾಗವತ ಶಿರೋಮಣಿಗಳಾದ ಕುತ್ಯಾರು ಗೋವಿಂದ ದಾಸರ ವರ್ಷಾಂತಿಕ ಪುಣ್ಯ ದಿನ.

"ಗೋವಿಂದ ಭವನದಲ್ಲಿ 2000 ಜನ ಬ್ರಾಹ್ಮಣರ ಸಂತರ್ಪಣೆಯೂ, ಇತರ ಸುಮಾರು ಬಡ ಜನರಿಗೆ ಅನ್ನದಾನವೂ ನಡೆಯಿತು. ಇವರ ಸ್ಮಾರಕವಾಗಿ ಅವರ ಮಕ್ಕಳು 6-3-'40ರಲ್ಲು ಉಡುಪಿ ಶ್ರೀ ಕೃಷ್ಣ ಸನ್ನಿಧಿಯಲ್ಲಿ ಮಹಾ ಪೂಜೆ; ಶ್ರೀಮಧ್ವ ನಂತಾಸನ ದೇವರ ಸನ್ನಿಧಿಯಲ್ಲಿ ಬ್ರಾಹ್ಮಣ ಸಂತರ್ಪಣೆ ನಡಿಸಿದರು. ಈ ಪುಣ್ಯ ಪುರುಷರ ಸ್ಮರಣಾರ್ಥವಾಗಿ ಮಕ್ಕಳಿಗೆ 1ವರ್ಷದ ಗೇಣಿ ಮಾಫಿ, ಊರ ವಿದ್ಯಾರ್ಥಿಗಳಿಗೆ ಉಚಿತ ಸಹಾ ಕೊಟ್ಟಿರುವರು.

ಜಿಲ್ಲಾ ಹರಿಜನ ಪರಿಷತ್ತು— ಇದೇ ತಿಂಗಳ ತಾ. 27 ಮ 28ಕ್ಕೆ ಜಿಲ್ಲಾ ಹರಿಜನ ಸಂಘದ ನೇತೃತ್ವದಲ್ಲಿ ಮೂಲ್ಕಿಯಲ್ಲಿ ಜರಗಲಿರುವ ಈ ಪರಿಷತ್ತಿಗೆ ಎಲ್ಲರಿಗೂ ಸ್ವಾಗತವಿದೆ.

ಜಿಲ್ಲಾ ಬೋರ್ಡು 1938 ಮತ್ತು 39ರಲ್ಲಿ ಮದ್ಯಪಾನ ನಿಷೇಧಕ್ಕೆ ಜಿಲ್ಲೆಯಲ್ಲಿ ಅಭಿಪ್ರಾಯ ಹುಟ್ಟುವಂತೆ ಅಗತ್ಯವುಳ್ಳ ಪ್ರಚಾರ ಮಾಡಬೇಕಾಗಿ ನಿರ್ಣಯಿಸಿತ್ತು. ಮದ್ಯಪಾನ ಕಾನೂನು 4 ಜಿಲ್ಲೆಯಲ್ಲಿ ಕೊಂಗ್ರೆಸು ಮಂತ್ರಿಮಂಡಲವು ಮಾಡಿದ್ದನ್ನು, ಈಗಿನ ಸರಕಾರವು ಮನ್ನಿಸಿ ಕಾಯಂ ಇಟ್ಟಿರುತ್ತದೆಂದು ಈ ವರ್ಷದ ಬಜೆಟಿನಿಂದ ತಿಳಿಯುವುದು. ಹರಿಜನ ಉದ್ಧಾರವು ಸರಕಾರದ ಧ್ಯೇಯವಾಗಿರುವುದು. ಕೊಂಗ್ರೆಸಿನ 4 ಮುಖ್ಯ ಧ್ಯೇಯಗಳಲ್ಲಿ ಹರಿಜನ ಉದ್ಧಾರ ಮತ್ತು ಮದ್ಯಪಾನ ನಿಷೇಧ ಎರಡಾಗಿರುವವು. ಆದುದರಿಂದ ಪರಿಷತ್ತನ್ನು ಕೂಡಿಸುವ ಈ ಸಂದರ್ಭ ಜಿಲ್ಲೆಯಲ್ಲಿ ಮುಖ್ಯವಾಗಿ ಹರಿಜನ ಹಿಂದುಗಳ ನಡುವೆ ಮದ್ಯಪಾನ ಕುರಿತಾದ ಭಾಷಣ, ಎಚ್ಚರಿಕೆಗಳನ್ನು ಹುಟ್ಟಿಸುವುದು, ಅವರ ಮನೆ ಮಠಗಳನ್ನು ಸಂದರ್ಶಿಸಿ ನಿರ್ಮಲ ಇಡಿಸುವುದು, ಅಲ್ಲಲ್ಲಿ ಮಾಡಬಹುದಾದ ಸಂಭವವಾದ ಕೆಲಸ, ಶಾಲೆ ಉಪಾಧ್ಯಾಯರನ್ನು ಆರಿಸುವುದಕ್ಕೆ ಆಗ ಅನುಕೂಲವಾದ ಕಾರ್ಯ, ದೇಶದ ಏಳಿಗೆಯು ಅವರ ಕೈಯಲ್ಲಿದೆ. ಭಾವೀ ಜನಾಂಗವು ಅವರು ತರ್ಪೀತು ಮಾಡಿದಂತೆ, ಹೀಗಿರುತ್ತಾ ಸೇವಾ ತತ್ಪರರಾದ ಆವರೊಡನೆ ಈ ಕುರಿತು ಸಹಾಯ, ಸಹಕಾರ ಕೇಳಿಕೊಳ್ಳುವೆವು. ಅವರು ಕೈಕೊಂಡ ಕೆಲಸದ ರಿಪೋರ್ಟನ್ನು ಕಾಯುವೆವು.

ಮಹಾತ್ಮಾಜಿಯವರು ಹರಿಜನ ಪರವಾಗಿ ವಿರಾಮದಲ್ಲಿ ಉಪವಾಸ ಕೈಕೊಂಡು 7 ವರ್ಷಗಳಾದವು. ನಮ್ಮ ಊರಲ್ಲಿ ಎಂಜಲೆಲೆಯನ್ನು ಬಿಸಡುವ ಪದ್ಧತಿಯನ್ನು ಕೂಡ ಇನ್ನು ಬಿಡಲಿಲ್ಲ. ಹೊಟ್ಟೆಯ ಪಾಡಿಗಾಗಿ ಬಂದು ಬಾಳುವ ಅವರಿಗೆ ನೂಲುವುದನ್ನು ಕಲಿಸಿ ಕಾಯಂದುಡಿಯುವಂತೆ ಮಾಡಬಹುದಾಗಿದೆ. ಪರಿಷತ್ತು ಕಟಿಸಿ ಕಳೆದು ಉಳಿದ ಹಣವನ್ನು ಈ ಕುರಿತು ಒಂದು ಫಂಡಾಗಿ ಮಾಡಿ ಯತ್ನಿಸಲು ಅನುಕೂಲಿಸಿದೆ. ಮಹಾಜನರು ಪೂರ್ಣ ಸಹಾಯ ಮಾಡಿದುದಾದರೆ ಈ ಕಾರ್ಯವನ್ನು ಕೈಕೊಳ್ಳುವ ವಿಚಾರದು ಮಾಡಬಹುದಾಗಿದೆ.

8-3-'40
ಮೂಲ್ಕಿ

M. R. Punja
ಅಧ್ಯಕ್ಷ, ಸ್ವಾಗತ ಸಮಿತಿ,
1ನೇ ಜಿಲ್ಲಾ ಹರಿಜನ ಪರಿಷತ್ತು

ಮಹಾತ್ಮ ಗಾಂಧಿಯವರೂ ಯಂತ್ರಗಳೂ

ಕೇವಲ ಕೆಲವು ಜನರು ಧನಿಕರಾಗುವುದು ಭಾರತಕ್ಕೆ ಬೇಕಾಗಿಲ್ಲ; ಭಂಡವಾಳವು ಸರಿಯಾಗಿ ಹಂಚಲ್ಪಟ್ಟ ದೇಶದ ಹಳ್ಳಿ ಹಳ್ಳಿಗೂ ಮುಟ್ಟಬೇಕದು.

ನಮ್ಮಲ್ಲಿ ಬಹಳ ಮಂದಿ ಮಹಾತ್ಮ ಗಾಂಧಿಯವರ ಅಭಿಪ್ರಾಯದಲ್ಲಿ ಸಂಶಯಾಸ್ಪದವಾದ ವಿಚಾರಗಳನ್ನಿಟ್ಟುಕೊಂಡಿರುವರು. ಉದಾಹರಣೆಗೆ – ಕೆಲವರು ಚರಿತ್ರೆಯ ಪ್ರಾರಂಭದಿಂದಲೂ ಯಂತ್ರಗಳ ಮತ್ತು ಆಧುನಿಕ ನಾಗರಿಕತೆಯ ವಿರೋಧವಾಗಿಯೇ ಇರುವರೆಂದು ತಿಳಿಸಿರುವರು. ಮತ್ತೆ ಕೆಲವರ ಮತವೇನೆಂದರೆ, ಯಂತ್ರಗಳ ಉಪಯೋಗವು, ಮಾನವನ ಪ್ರಗತಿಗೆ ಸಹಾಯವಾಗುವಂತಾದರೆ, ಮನುಷ್ಯನ ಹೊರೆಯನ್ನು ಕಡಿಮೆ ಮಾಡುವಂತಾದರೆ ಮಾತ್ರ ಸಫಲವಾಗುವವೆಂದು ಮಹಾತ್ಮರ ಅಭಿಪ್ರಾಯ. ಈ ರೀತಿ ಬೇರೆ ಬೇರೆ ಗುಂಪಿನವರು ತಮ್ಮ ಸಿದ್ಧಾಂತಗಳ ಸಮರ್ಥನೆಗೆ ಮಹಾತ್ಮರ ಶಬ್ದಗಳನ್ನೇ ಮುಂದಿಡುತ್ತಾ ಬಂದಿರುವರು.

ಆದರೆ ಈ ರೀತಿಯು ಸರಿಯಾದುದಲ್ಲ. ನಾವು ಮಹಾತ್ಮರ ಎಲ್ಲಾ ಅಭಿಪ್ರಾಯಗಳ ನಿಜವಾದ ತತ್ವಗಳನ್ನು ತಿಳಿಯುವುದಕ್ಕಾಗಿ, ಅವರ ಹೇಳಿಕೆಗಳನ್ನು ಕಾಲಕ್ರಮವಾದ ತಾರೀಕುಗಳಿಗನುಗುಣವಾಗಿ ಜೋಡಿಸುತ್ತಾ ಬರಬೇಕು. ಉದಾಹರಣೆಗೆ– ಸೋಮಾರಿಗಳಾಗಿ ಕುಳಿತಿರುವವರಿಗೆ ಶಾರೀರಿಕ ಶ್ರಮವನ್ನು ಉಪದೇಶಿಸುವುದಾದರೆ, ಆ ಉಪದೇಶವು ಎಲ್ಲರಿಗೂ ಅನ್ವಯಿಸುವುದಿಲ್ಲ. ಬೆಳಗಿನಿಂದ ಸಂಜೆಯ ವರೆಗೆ ತಮ್ಮ ಬೆವರನ್ನು ಸುರಿಸಿ ದುಡಿದು, ಬಹಳ ಕಷ್ಟದಿಂದ ತಮ್ಮ ಪರಿವಾರವನ್ನು ಪೋಷಿಸುವಂತಹವರಿಗೆ, ಶಾರೀರಿಕ ಶ್ರಮದ ಉಪದೇಶವು ಹಾಸ್ಯಾಸ್ಪದವಾಗುವುದಲ್ಲವೇ?

ಆದುದರಿಂದ ಮಹಾತ್ಮ ಗಾಂಧಿಯವರ ಎಲ್ಲ ವಚನಗಳನ್ನು ದೇಶಕಾಲ ಪರಿಸ್ಥಿತಿಗಳ ಬೆಳಕಿನಲ್ಲಿ ನೋಡಬೇಕು. ಆಗಲೇ ನಮಗೆ ಅವರ ವಚನಗಳು, ಹೇಳಿಕೆಗಳು ಬದಲಾಯಿಸಿರುವುದರ ನಿಜವಾದ ಕಾರಣವು ತಿಳಿಯುವುದು. ಕೆಲವು ವಿಷಯಗಳಲ್ಲಂತೂ ಅವರ ತತ್ವಗಳಲ್ಲಿ ಯಾವುದೇ ವಿಧವಾದ ಬದಲಾವಣೆಯೂ ಆಗದಿರುವುದು ಕಂಡು ಬರುವುದು. ಈ ಆಧಾರದ ಮೇಲೆ ನಾವು ಯಂತ್ರಗಳು (Machinery) ಕೈಗಾರಿಕೆ (Industrialism)ಗಳ ವಿಚಾರವಾಗಿ ಮಹಾತ್ಮರ ಅಭಿಪ್ರಾಯವೇನೆಂಬುದನ್ನು ನೋಡೋಣ.

ಯಂತ್ರಗಳ ವಿಚಾರವಾಗಿ

1908ರಲ್ಲಿ ಮಹಾತ್ಮಾ ಗಾಂಧಿಯವರು ದಕ್ಷಿಣ ಆಫ್ರಿಕದಲ್ಲಿದ್ದಾಗ, ಗುಜರಾತಿ ಭಾಷೆಯಲ್ಲಿ ಸಣ್ಣದೊಂದು ಪುಸ್ತಕವನ್ನು ಬರೆದಿದ್ದರು. ಅದನ್ನೇ ಈಗ "ಹಿಂದೂ ದೇಶದ ಸ್ವರಾಜ್ಯ" ಅಥವಾ (Indian Home Rule)ಎಂಬ ಹೆಸರಿನಿಂದ ಅನುವಾದಿಸಲಾಗಿದೆ. ಈ ಪುಸ್ತಕದಲ್ಲಿ ಆಧುನಿಕ ನಾಗರಿಕತೆಯನ್ನು ವಿರೋಧಿಸಿದ್ದರು. ತಮ್ಮ ಅಭಿಪ್ರಾಯಗಳನ್ನು ವಿವರಿಸುತ್ತ ಮಹಾತ್ಮರು ಭಾರತೀಯರ ಜೀವನದ ಮೇಲೆ ರೈಲ್ವೆಗಳಿಂದ ಮತ್ತು ಯಂತ್ರಗಳಿಂದಾದ ಪದಾರ್ಥಗಳಿಂದಲೂ ಉಂಟಾಗಿರುವ ಪ್ರಭಾವವನ್ನು ಕುರಿತು ಚರ್ಚಿಸಿ, ಅವುಗಳಿಂದ ಬಹಳ ಹಾನಿಯುಂಟಾಗಿವೆ ಎಂಬ ನಿರ್ಣಯಕ್ಕೆ ಬಂದಿದ್ದರು. ಅವರ ಹೇಳಿಕೆ ಈ ರೀತಿ ಇವೆ "ಯಂತ್ರಗಳು ಯೂರೋಪನ್ನು ನಾಶಮಾಡಲಾರಂಭಿಸಿವೆ ಯುರೋಪ್ ಜನಾಂಗಗಳ ಮನೆಗಳ ಮುಂದೆ ಪ್ರಳಯವು ನಾಟ್ಯವಾಡುತ್ತಿದೆ. ಯಂತ್ರಗಳೇ ಆಧುನಿಕ ಸಭ್ಯತೆಯ ಚಿಹ್ನೆಯಾಗಿವೆ ಇವು ದೊಡ್ಡದೊಂದು ಪಾಪದ ಅಪರಾಧದ ಮುಂದಾಳುತನವನ್ನೂ ವಹಿಸಿವೆ. ಮುಂಬಯಿಯ ಗಿರಣಿಗಳಲ್ಲಿ ಕೆಲಸ ಮಾಡುವ ಕೂಲಿಯವರು ಗುಲಾಮರಾಗಿ ಹೋಗಿರುವರು. ಆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಸ್ತ್ರೀಯರ ಸ್ಥಿತಿಯಂತೂ ತೀರ ಶೋಚನೀಯವಾಗಿದೆ. ಗಿರಣಿಗಳು ಬರುವುದಕ್ಕೆ ಮೊದಲು ಈ ಹೆಂಗಸರು ಹಸಿವಿನಿಂದ ಸಾಯುತ್ತಿರಲಿಲ್ಲ. ನಮ್ಮ ದೇಶದಲ್ಲಿ ಈ ಯಂತ್ರಗಳ ವ್ಯಾಪಕತೆಯು ಹೆಚ್ಚಾದಲ್ಲಿ ನಮ್ಮ ದೇಶದ ಶಾಂತಿ, ಆನಂದಗಳು, ನಮ್ಮಿಂದ ಓಡಿಹೋಗುವುವು. ಮ್ಯಾಂಚೆಸ್ಟರಿನ ಬಟ್ಟೆಗಳನ್ನು ಧರಿಸಿ, ನಾವು ನಮ್ಮ ಹಣವನ್ನು ಹಾಳು ಮಾಡಿಕೊಳ್ಳುವೆವು. ಒಂದುವೇಳೆ ಭಾರತದಲ್ಲೇ ನಾವು ಮ್ಯಾಂಚೆಸ್ಟರನ್ನು ನಿರ್ಮಿಸಿಕೊಳ್ಳುವುದಾದರೆ ನಮ್ಮ ನೈತಿಕ ಬಲದ ಅಸ್ತಿತ್ವವೇ ಸಂಪೂರ್ಣವಾಗಿ ಅಳಿದು ಹೋಗುವುದು. ಈ ಉದಾಹರಣೆಯನ್ನೂ ಸಮರ್ಥಿಸುವುದಕ್ಕೆ ನಮ್ಮ ಗಿರಣಿಗಳಲ್ಲಿ ಕೆಲಸ ಮಾಡುವ ಕೂಲಿಯವರೇ ಸಾಕು. ಕಾರ್ಖಾನೆಗಳನ್ನಿಟ್ಟು, ಐಶ್ವರ್ಯವನ್ನು ಗಳಿಸಿದ ಧನಿಕರೂ ಸಹ ಇತರ ಐಶ್ವರ್ಯವಂತರಿಗಿಂತೇನೂ ಉತ್ತಮರಾಗಿಲ್ಲ.....ಈ ಧನಿಕರೇ ಬ್ರಿಟಿಷ್ ಸಾಮ್ರಾಜ್ಯವನ್ನು ಪೋಷಿಸುತ್ತಿರುವರೆಂಬುವದನ್ನು ನಾವು ಮರೆಯಬಾರದು. ಬಡಭಾರತವು ಸ್ವಾತಂತ್ರ್ಯವನ್ನು ಗಳಿಸಬಲ್ಲದು, ಆದರೆ ಅನೈತಿಕತೆಯಿಂದ, ಹಿಂಸೆಯಿಂದ ಶಾಸಕರ ಮೂಲಕ ಅದು ಸಂಪತ್ಸಮೃದ್ಧವಾಗುವುದಾದರೂ, ಸ್ವಾತಂತ್ರ್ಯವನ್ನು ಗಳಿಸುವುದು ಕಠಿಣವಾಗುವುದು. ಯಂತ್ರಗಳು ಭಾರತವನ್ನು ದರಿದ್ರರ ನಾಡನ್ನಾಗಿ ಮಾಡಿದೆ. ಯಂತ್ರಗಳಲ್ಲಿ ಯಾವುದೇ ಒಂದು ಒಳ್ಳೆಯ ವಿಚಾರವೂ ನನಗೆ ಕಂಡುಬರುವುದೇ ಇಲ್ಲ."

ಮೇಲ್ಕಂಡ ಶಬ್ದಗಳಲ್ಲಿ ಮಹಾತ್ಮರು ಯಾವ ಕಾರಣದಿಂದ ಯಂತ್ರಗಳನ್ನು ವಿರೋಧಿಸಿರುವರೆಂಬುದನ್ನು ನಾವು ತಿಳಿಯಬೇಕು. ಅವರ ಅಭಿಪ್ರಾಯದಲ್ಲಿ ಯಂತ್ರಗಳಿಂದಲೇ ಮನುಷ್ಯನು ಪರಾಧೀನನಾಗಿರುವನು. ಮಾನವನ ನಾಶದ ಕಾರಣದಿಂದ ಅದನ್ನು ವಿರೋಧಿಸುತ್ತಿರುವರೇ ವಿನಹ ವೈಯಕ್ತಿಕವಾಗಿ ಯಂತ್ರಗಳನ್ನಲ್ಲ.

ಮಹಾತ್ಮರು ಇನ್ನೂ ಈ ಸ್ಥಾನದಿಂದ ಕದಲಿರುವುದಿಲ್ಲ. ಅವರು ಅಸತ್ಯ, ಪಾಪ, ಮತ್ತು ಪರಾಧೀನತೆಗಳನ್ನು ಈಗಲೂ ವಿರೋಧಿಸುತ್ತಿರುವರು. ಆದರೆ "ಯಂತ್ರಗಳು" (ಮೆಷಿನರಿ) ಎಂಬ ಶಬ್ದದ ಅರ್ಥದಲ್ಲಿ ಬಹಳ ಬದಲಾವಣೆಯಾಗಿದೆ 1908ರಲ್ಲಿ ಮೆಷಿನರಿ ಎಂದರೆ ಕೈಗಾರಿಕೆಯ ಪದ್ಧತಿ Industrial system ಎಂದೇ ಅವರ ಅಭಿಪ್ರಾಯವಾಗಿದ್ದಿತು. ಇದು ಮಾನವನ ಆತ್ಮಶಕ್ತಿ ಮತ್ತು ನೈತಿಕಶಕ್ತಿಗಳನ್ನು ನಾಶ ಮಾಡಿದ್ದಿತು ಆಗ ಮಹಾತ್ಮರು ಮೆಷಿನರಿ ಮತ್ತು 'Industrialism'ಗಳ ನಡುವೆ ಯಾವ ಅಂತರವನ್ನೂ ವ್ಯಕ್ತಗೊಳಿಸಿರಲಿಲ್ಲ. ರಾಟೆಯೂ ಸಹ ಒಂದು ಯಂತ್ರವೇ ಎಂಬುದನ್ನು ತಿಳಿಯದವರಾರು? ಆದುದರಿಂದ ಮೆಷಿನರಿಗೆ ಗಾಂಧಿಯವರು ವ್ಯಕ್ತಿಶಃ ವಿರೋಧವಾಗಿಲ್ಲವೆಂಬುದು ಇದರಿಂದ ಗೊತ್ತಾಗುವುದು. ಅವರು ವಿರೋಧಿಸುವುದು Industrial system, ಮನುಷ್ಯನನ್ನು ಪರಾಧೀನ ಮಾಡುವ ಕೈಗಾರಿಕೆಯ ಪದ್ಧತಿಯನ್ನು.

ಯಂತ್ರಗಳ ಅನುಭವ

ನಂತರ ಮಹಾತ್ಮರೇ ಈ ರೀತಿ ಬರೆದಿರುವರು. (ಇದೊಂದು ಸ್ವಾರಸ್ಯವಾದ ಸತ್ಯ) 1908ರಲ್ಲಿ ಇವರಿಗೆ ಯಂತ್ರಗಳ ವಿಚಾರದಲ್ಲಿ ತಿಳುವಳಿಕೆ ಇರಲಿಲ್ಲವಂತೆ. ಅವರ ಶಬ್ದಗಳು ಈ ರೀತಿ ಇವೆ. 1908ಕ್ಕೆ ಮೊದಲು ನಾನು ಯಾವುದೇ ಒಂದು ರಾಟೆಯನ್ನಾಗಲಿ, ಅಥವಾ ನೇಕಾರರು ಕುಳಿತುಕೊಳ್ಳುವ ಕಗ್ಗಿನ ಜಾಗವನ್ನಾಗಲಿ, ನೋಡಿದ್ದಂತೆ ನನಗೆ ನೆನಪಿಲ್ಲ. 1915ರಲ್ಲಿ ಸಹ ನಾನು ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಬಂದಾಗಲೂ, ನಾನು ಯಾವ ರಾಟೆಯನ್ನೂ ಗಮನಿಸಿ ನೋಡಿರಲಿಲ್ಲ. ಸಬರಮತಿಯಲ್ಲಿ ಸತ್ಯಾಗ್ರಹಾಶ್ರಮವನ್ನೂ ತೆರೆದಾಗ, ಕೆಲವು ರಾಟೆಗಳು ಅಲ್ಲಿಗೆ ತರಲ್ಪಟ್ಟವು ಕೂಡಲೆ ನಮಗೆ ತೊಂದರೆಗಳುಂಟಾದುವು. ನಮ್ಮಲ್ಲಿ ಯಾರಿಗೂ ಯಾವ ಕೈಗಾರಿಕೆಯೂ ತಿಳಿದಿರಲಿಲ್ಲ"

ಉತ್ಪತ್ತಿ ಮತ್ತು ಹಂಚಿಕೆ

1919–20ರ ಅಸಹಕಾರ ಚಳವಳಿಯ ಕಾಲದಲ್ಲಿ ಆರ್ಥಿಕ ಸಮಸ್ಯೆಗಳ ಬಗ್ಗೆ ಮಹಾತ್ಮರ ವಿಚಾರಗಳು ಗೊತ್ತಾದ ಒಂದು ಸ್ಥಿರ್ಯರಕ್ಕೆ ಬಂದಿದ್ದುವೆಂದು ತಿಳಿಯುತ್ತದೆ. ಬರಬರುತ್ತ ಅವರು ಕೈಗಾರಿಕೆಗಳ ಉತ್ಪತ್ತಿ ಮತ್ತು ಹಂಚಿಕೆಯ ವಿಚಾರವಾಗಿ ವೈಯಕ್ತಿಕವಾದ ವಿಶೇಷ ಅಭಿಪ್ರಾಯಗಳನ್ನೂ ಪ್ರಕಟಿಸಲಾರಂಭಿಸಿದರು. ಒಂದು ಸಾರಿ ಮಹಾತ್ಮರು ಈ ರೀತಿ ಅಪ್ಪಣೆ ಕೊಡಿಸಿರುವರು– "ಗಿರಣಿಗಳ ಸಂಖ್ಯೆಯು ವೃದ್ಧಿಯಾದರೆ, ನಮ್ಮ ಸಮಸ್ಯೆಯು ಬಗೆಹರಿದಂತಾಗಲಿಲ್ಲ ಇದರಿಂದ ಹಣ ಮತ್ತು ಶ್ರಮಗಳು ಒಂದು ಕೇಂದ್ರದ ಕಡೆಗೆ ಒಲಿಯುವುವು. ಇದರಿಂದ ಮತ್ತಷ್ಟು ಅಶಾಂತಿಯು ಸ್ಥಾಪಿತವಾಗುವುದು."

ನಂತರ ಮತ್ತೊಂದು ಸಾರಿ ಈ ರೀತಿ ಬರೆದಿರುವರು—"ನಾವು ನಮ್ಮ ರಾಷ್ಟ್ರೀಯ ಸಂಘಟನೆಯನ್ನು ಮಾಡಬೇಕು. ಕೇವಲ ಉತ್ಪತ್ತಿಯ ರೀತಿಯಿಂದ ಮಾತ್ರವಲ್ಲದೆ ಉತ್ಪತ್ತಿ ಮತ್ತು ಹಂಚಿಕೆಗಳೆರಡು ದೃಷ್ಟಿಯಿಂದಲೂ ಇದನ್ನು ಮಾಡಬೇಕಾಗಿದೆ. . . . .ಕೇವಲ ಕೆಲವು ಮಂದಿಗಳು ಧನಿಕರಾಗುವುದು ಭಾರತಕ್ಕೆ ಬೇಕಾಗಿಲ್ಲ ಬಂಡವಾಳವು ಸರಿಯಾದ ರೀತಿಯಲ್ಲಿ ಹಂಚಲ್ಪಟ್ಟು ಅದು ಈ ದೇಶದ 7½ ಲಕ್ಷ ಹಳ್ಳಿಗಳ ವರೆಗೂ ಮುಟ್ಟಬೇಕು." ಈ ಕಾಲದಲ್ಲೇ ಮಿಲ್ಲಿನ ವಿಚಾರವಾಗಿ ಅವರ ವಚನಗಳನ್ನು ನಂತರ ಆಗಾಗ್ಗೆ ಹೇಳಿಕೊಟ್ಟ ಹೇಳಿಕೆಗಳೂ ಈ ಮಾತನ್ನೇ ಪುಷ್ಟೀಕರಿಸುವವು. ಯಂತ್ರಗಳ ಮೂಲಕ ಕೇವಲ ಸ್ವಲ್ಪ ಮಂದಿಯ ಕೈಯಲ್ಲೇ ಐಶ್ವರ್ಯವೆಲ್ಲವೂ ಸೇರಿಹೋಗುವುದರಿಂದ ಮಹಾತ್ಮರು ಗಿರಣಿಗಳನ್ನು ವಿರೋಧಿಸುವುದು ಆ ಧನಿಕರ ವಿನಹ ಉಳಿದವರೆಲ್ಲರೂ ಬಡವರಾಗುವುದರಿಂದ ಅವರು ಅದಕ್ಕೆ ವಿರೋಧಿಗಳಾಗಿರುವುದು. ಆದುದರಿಂದ ಮಹಾತ್ಮರು ಅವುಗಳ ಆರ್ಥಿಕಪದ್ಧತಿಯನ್ನು ಮಾತ್ರ ವಿರೋಧಿಸುವರೆಂಬುದು ಗೊತ್ತಾಗುವುದು. 1908ರಲ್ಲಿ ಮಹಾತ್ಮರು ಯಾವ ಸ್ಥಾನದಲ್ಲಿದ್ದರೂ ಅದು 1921ರಲ್ಲಿ ಸ್ವಲ್ಪವೂ ಉಳಿದಿರಲಿಲ್ಲ. ಅಂದರೆ, ಅವರ ತತ್ವಗಳಲ್ಲಿ ಯಾವ ವ್ಯತ್ಯಾಸವಾಗಿರದಿದ್ದರೂ, ದೃಷ್ಟಿಕೋಣವು ಬದಲಾಯಿಸಿದ್ದಿತು.

ಚರಕದ ಕೈಗಾರಿಕೆ

ಹಳ್ಳಿಗರ ವಿರಾಮ ಕಾಲಗಳಲ್ಲಿ ಅವರಿಗೆ ಕೆಲಸ ದೊರಕಿಸುವಂತಹ ವಸ್ತು ಈ ರಾಟೆ, ಇದರಿಂದಲೇ ಹಳ್ಳಿಯವರ ನಿರುದ್ಯೋಗವು ದೂರವಾಗುವುದೆಂದು ಮಹಾತ್ಮರ ಮತ. 1931ನೇ ಫೆಬ್ರವರಿಯಲ್ಲಿ ಮಹಾತ್ಮರು ಈ ರೀತಿ ಹೇಳಿದರು.— "ಇಂದು ನಮ್ಮ ಗಿರಣಿಗಳು ನಮ್ಮ ಆವಶ್ಯಕತೆಗನುಸಾರವಾಗಿ ಸಾಕಷ್ಟು ದಾರವನ್ನು ಉತ್ಪತ್ತಿಮಾಡಲಾರವು.

ನೋಟೀಸು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S $\frac{204}{16}$ R. E O $\frac{21}{40}$

ಕೋದಂಡರಾಮ ಹೊಳ್ಳ –ಅರ್ಜಿದಾರ ಮತ್ತು

ಪಕೀರ ಸಾಹೇಬ ಮಹಮ್ಮದ್ ಬಂಸುದ್ದಿನ್ ಸ್ಸಾಬರ ಮಗ, ಉಡುಪಿ ತಾಲ್ಲೂಕು ಪಡುತೋನ್ಸೆ ಗ್ರಾಮದ ಹೂಡೆಯಲ್ಲಿರುವರು –ವಾದಿ ಇವರೊಳಗೆ,

ಮೇಲ್ಕಂಡ ಸದ್ರಿ ಅನಲ್ಲಾರಿಯಲ್ಲಿ ವಾದಿಗೆ ಆಗತಕ್ಕ ಇಷ್ತಿಹಾರು ನೋಟೀಸು ತಾ 28-3-40 ಕ್ಕೆ ತಸ್ಕಿಗೆ ಇಟ್ಟಿರುವದ್ರಿಂದ ಆಕ್ಷೇಪ ಏನ್ನಾರೆ ಇದ್ದರೆ ಸದ್ರಿ ವಾದಿಯು ಸ್ವತಹವಾಗಲಿ, ವಕೀಲರ ಮುಖಾಂತರವಾಗಲೀ ಹಾಜ್ರಾಗಿ ಆ ದಿವ್ಸ ಬೆಳಿಗ್ಗೆ 10ಘಂಟೆಗೆ ಈ ಕೋರ್ಟಿನ ಮುಂದೆ ಜಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ ಅದನ್ನು ಎಕ್ಸ್‌ಪಾರ್ಟಿ ಮಾಡಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

Udipi 9-3-40. **P. Padmanbha Rao,** B. A. B. L. Vakil, *Vakil for Petitioner.*

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೋಗಿಮಂದಿರದ ಆಧಾರಸ್ತಂಭವಾಗಿರುವ ಧರ್ಮವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿ, ಗೋರೋಚನ ಮೊದಲಾದ ಅಮೂಲ್ಯ ದ್ರವ್ಯಗಳೂ ಇನ್ನಿತರ ಅನುಭವಸಿದ್ಧ ವನಸ್ಪತಿಗಳ ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಳಿಗೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಚಳಿ, ತಲೆ ನೋವು ಯಾ ಎಳೆಯವರ ಸರ್ವ ಜ್ವರ ರೋಗಗಳನ್ನು ನಿವೃತ್ತಿಪಡಿಸುವವು. ಹಾಗೂ ಆಲಸ್ಯ ಯಾ ವಾಯುವಿನಿಂದುಂಟಾದ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500 ? 0-0, 1000, 9-0-0.

5ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆ (ಗುಟಿ)ಗಳನ್ನು ಕಳುಹಿಸುತ್ತೇವೆ

ಸ್ವದೇಶೀ ಔಷಧಿ ಭಂಡಾರ,

(ರಿಜಿಸ್ಟರ್ಡ್) ಕುಂಜಾರು.

ಪೋಸ್ಟ್–ಬ್ರಹ್ಮಾವರ, ದ. ಕ.

ಈ ವಾರದ ಭವಿಷ್ಯ

ತಾರೀಖು 14-3-1940ರಿಂದ 21-3-1940ರ ವರೆಗೆ

ಮೇಷ—ಕಳೆದ ವಾರಕ್ಕಿಂತ ಈ ವಾರವು ನಿಮಗೆ ಸ್ವಲ್ಪ ಕಷ್ಟದಾಯಕವಾಗಿದೆ. ಆದಾಯದ ಭಾಗವು ಕಡಿಮೆಯಾಗುತ್ತಾ ಬಂಧು ಖರ್ಚಿನ ಮಾರ್ಗವು ವೃದ್ಧಿಗೊಳ್ಳುತ್ತಲಿದೆ. ಆದ್ದರಿಂದ ಧನಕ್ಕಾಗಿ ಬಹಳ ತೊಂದರೆಗೊಳಗಾಗುವಿರಿ. ಬಂಧು-ಮಿತ್ರರಿಂದ ವಿಯೋಗವುಂಟಾಗುವುದು. ಶತೃಪೀಡಾ ನಿಮಿತ್ತದಿಂದ ಮನೋವ್ಯಥೆಯೂ, ಪ್ರವಾಸದಲ್ಲಿನ ಕಷ್ಟನಷ್ಟಗಳೂ ಹೆಚ್ಚಿ ನಿಮ್ಮನ್ನು ಸದಾ ವ್ಯಸನಗಳನ್ನಾಗಿ ಮಾಡುವವು. ಆರೋಗ್ಯವೂ ಚನ್ನಾಗಿರದು. ವಿದ್ಯಾರ್ಥಿಗಳಿಗೂ ವ್ಯಾಪಾರಿಗಳಿಗೂ ನೌಕರಿ ವರ್ಗದವರಿಗೂ ಕಿಂಚಿದಿಷ್ಟಾರ್ಥಗಳು ಸಿದ್ಧಿಸಲಿರುವುದರಿಂದ ಹೆಚ್ಚಿನ ಸಮಯವನ್ನು ನಿಶ್ಚಿಂತೆಯಿಂದ ಕಳೆವರು. ತಾ. 15, 16, 19, 20 ಈ ದಿನಗಳು ಕಾರ್ಯವಿಘ್ನ ಭಯ-ಚಿಂತಾದಾಯಕಗಳಾಗಿವೆ.

ವೃಷಭ—ಸದ್ಯ ನಿಮ್ಮ ಗೃಹಸ್ಥಿತಿಯು ಉತ್ತಮವಿರುವುದರಿಂದ ಮನದಿಚ್ಛೆಯು ಫಲಿಸಲಿದೆ. ಸರಕಾರಿ ಕೆಲಸಗಳಲ್ಲಾಗಲಿ ವ ಸಾಮಾಜಿಕ ಕಾರ್ಯಗಳಲ್ಲಾಗಲಿ ವಿಜಯಶ್ರೀಯು ನಿಮ್ಮ ಹಸ್ತಗತವಾಗಿರುವುದು. ಶಾರೀರಕಷ್ಟದಿಂದ ಜೀವಿಸತಕ್ಕ ಕಿಂಕರ ವರ್ಗದವರಿಗೆ ಆರ್ಥಿಕ ದುರವಸ್ಥೆ ಶೋಕಗಳು ಹೆಚ್ಚುವವಾದರೂ ಇತರ ಜನರಿಗೆ ಸ್ವಸ್ವವೃತ್ತಿಯಲ್ಲಿ ತಕ್ಕಷ್ಟು ತೃಪ್ತಿಯಿರುವುದು. ಸಮಾಜದಲ್ಲಿ ಸ್ಥಾನಮಾನಗಳು ದೊರಕುವವು. ಪ್ರಕೃತಿವಶ್ಯವಾದ ಪಿತ್ತಪ್ರಕೋಪವು ಶಾಂತವಾಗುವುದು. ತಾ. 14-17-18 ಈ ದಿನಗಳಲ್ಲಿ ನಿಮ್ಮ ಇಚ್ಛೆಗಿಂತ ಅಧಿಕವಾಗಿ ಖರ್ಚು, ಆಕಸ್ಮಿಕ ತೊಂದರೆಗಳೂ ಪ್ರಾಪ್ತವಾಗಬಹುದು.

ಮಿಥುನ—ಪ್ರಕೃತದಲ್ಲಿ ನಿಮ್ಮ ಅವಸ್ಥೆಯು ಬಹಳ ಉತ್ತಮವಾಗಿರುವುದೆಂದರೂ ತಪ್ಪಾಗದು. ಶಾರೀರ ಅಲ್ಪಾಯಾಸದ ಮಹತ್ಫಲವನ್ನು ಹೊಂದತಕ್ಕ ಯೋಗ್ಯತೆಯು ನಿಮ್ಮಲ್ಲಿದೆ. ನಿಮ್ಮ ಕೆಲಸಕ್ಕಿಂತ ದ್ವಿಗುಣವಾಗಿ ಫಲ ದೊರೆಯುವುದರಲ್ಲಿ ಸಂಶಯವಿಲ್ಲ. ಬಂಧುಗಳೂ ಮಿತ್ರರೂ ನಿಮಗೆ ಮನೋವಾಕ್ಕಾಯಗಳಿಂದಲೂ ಸಹಾಯಮಾಡಲು ಸಿದ್ಧರಿರುವರು. ನಾನಾವಿಧದಿಂದ ನಿಮ್ಮ ಸಂಪದ್ಭಾಗವು ವೃದ್ಧಿಹೊಂದಲಿದೆ. ನೌಕರಿ ವರ್ಗದವರಿಗೆ ವಿರೋಧಿಗಳ ಪೀಡೆಯಿಂದಲೂ ವಿದ್ಯಾರ್ಥಿಗಳಿಗೆ ಇತರ ಶಾಪತ್ರಯಗಳಿಂದಲೂ ಮನಸ್ಸಮಾಧಾನವಿರದು. ತಾ. 14-17-18-21 ಇವು ಅತ್ಯುತ್ತಮವಾಗಿದೆ.

ಕರ್ಕಾಟಕ—ನೀವು ಮಾಡತಕ್ಕ ಕಾರ್ಯಗಳಿಗೆ ಯಾರೂ ಸಹಾಯಮಾಡಲಿಕ್ಕಿಲ್ಲರು. ಕಾರಣ ದಯಾ, ದಾಕ್ಷಿಣ್ಯ ವಿನಯಾದಿ ಸದ್ಗುಣಗಳು ನಿಮ್ಮಲ್ಲಿ ಹುಡುಕಿದರೂ ಸಿಗಲೊಲ್ಲವು ಮಾತ್ರವಲ್ಲ ಸದಾ ವಕ್ರಮಾರ್ಗಗಳೇ ಆಗಿರುವಿರಿ ಈ ರೀತಿಯ ವರ್ತನೆಯುಳ್ಳ ನಿಮಗೆ ಜನಾಪವಾದವೂ ನಿಷ್ಕಾರಣ ಕಲಹಗಳೂ ತಪ್ಪುವಂತಿಲ್ಲವು ಆದರೆ ಗುರು ನಾ ಗ್ರಹವು ನಿಮಗೆ ಪೂರ್ಣ ಇರುವುದರಿಂದ ಅಸಹಾಯರಾಗಿ ನೀವು ಕಾರ್ಯವನ್ನು ಪೂರೈಸಲು ಶಕ್ತರಿರುವಿರಿ. ಕಾರ್ಯಕ್ಕೆ ತಕ್ಕದಲ್ಲವಾದರೂ ಫಲವು ದೊರೆಯಲಿದೆ. ಕೋರ್ಟು ಕಛೇರಿಗಳಿಗೆ ಹೋಗುವ ಪ್ರಸಕ್ತಿ ಬರಲಿದೆ. ತಾ. 17, 18, 21 ಈ ದಿನಗಳು ಉತ್ತಮವಾಗಿಲ್ಲವು.

ಸಿಂಹ—ಸಮುದ್ರದಲ್ಲಿನ ಅಲೆಗಳಂತೆ ದುಃಖಪರಂಪರೆಗಳು ಒಂದರಹಿಂದೊಂದೊಂದೆಂಬಂತೆ ನಿಮ್ಮನ್ನು ಬೆನ್ನಟ್ಟಿ ಬರುತ್ತಿವೆ. ದಿನಗಳನ್ನು ಕಳೆವುದೆಂದರೆ ವರ್ಷವನ್ನು ಕಳೆದಷ್ಟು ಕಷ್ಟವಾಗುವುದು. ದೈಹಿಕ ಆಲಸ್ಯ, ಕಾರ್ಯದಲ್ಲಿನ ಪರಾಜಯ, ಸಹೋದರರಲ್ಲಿ ಕಲಹ ಇತ್ಯಾದಿಗಳಿಂದ ಮನಸ್ಸಿನ ಅಶಾಂತತೆಯು ಕ್ಷಣೇ ಕ್ಷಣೇ ಹೆಚ್ಚುವುದು. ಸಟ್ಟಾ ಗಾಯಕ ಇತ್ಯಾದಿ ಜನರಿಗೆ ಹೆಚ್ಚಿನ ಅನಿಷ್ಟಗಳು ಒದಗುವಂತಿಲ್ಲ. ವಿಚಕ್ಷಣರು ವಿಪರೀತವಾಗಿ ಸಂಭವಿಸಿ ಆರ್ಥಿಕ ಬಿಕ್ಕಟ್ಟಿನಲ್ಲಿ ಮುಳುಗೇಳುವ ನಿಮಗೆ ತಾ. 14, 19, 20 ಈ ಮೂರು ದಿನಗಳು ಹೊರತು ಇತರ ದಿನಗಳು ಹೆಚ್ಚಿನ ಕಷ್ಟದಾಯಕಗಳಾಗಲಾರವು.

ಕನ್ಯಾ—ನ್ಯಾಯಶೀಲರಿಗೂ ಸತ್ಯಾನ್ವೇಷಿಗಳಿಗೂ ಸದಾಚಾರಸಂಪನ್ನರಿಗೂ ಈ ವಾರವು ಬಹುಮಟ್ಟಿಗೆ ಸಹಾಯಕಾರಿಯಾಗಿದೆ. ಸ್ಥಾನಮಾನಗಳ ಪ್ರಾಪ್ತಿ ಕಾರ್ಯದಲ್ಲಿ ವಿಜಯ ಸ್ತ್ರೀಮೂಲಕವಾಗಿ ಧನಪ್ರಾಪ್ತಿ ಸತ್ಸಂತಾನ ಪ್ರಾಪ್ತಿಯೂ ಕೂಡ ಆಗಲಿದೆ. ವಿದ್ಯಾರ್ಥಿಗಳು ಯಶಸ್ಸಂಪಾದಿಸುವರು. ಆದರೂ ನಿಮ್ಮ ಆರೋಗ್ಯವು ಉತ್ತಮವಾಗಿರದು. ಚರ್ಮರೋಗಗಳೂ ಕೂಡ ಕಂಡ ಬರಲಿವೆ. ಆಕಸ್ಮಾತ್ ಶತೃಜನರ ಕೃತ್ರಿಮ ಬಲೆಗೆ ಸಿಲುಕಿ ಧನಮಾನಗಳಿಗೆ ಹಾನಿಯನ್ನು ತಂದುಕೊಳ್ಳಲಿರುವಿರಿ. ತಾ 17ರಿಂದ 20ರ ವರೆಗಿನ ದಿನಗಳಲ್ಲಿ ಇಷ್ಟಸಿದ್ಧಿಯಿಂದಾಗಿ ಲಾಭವನ್ನೂ ಸಂತೋಷವನ್ನೂ ಹೊಂದಲಿರುವಿರಿ. ಮಿತ್ರರ ಭೆಟ್ಟಿಯಾದೀತು.

ತುಲಾ—ದುರ್ದೈವದ ಪರಮಾವಧಿಯನ್ನು ಮುಟ್ಟಿರುವ ನೀವು ಮೆಲ್ಲನೆ ಒಂದೊಂದೇ ಮೆಟ್ಟಿಲನ್ನು ಕೆಳಗಿಳಿಯಲಾರಂಭಿಸಿರುವಿರಿ. ಸದ್ಯ ನಿಮಗೆ ಮಿಥುನದಲ್ಲಿರುವ ರವಿಕೇತುಗಳನ್ನುಳಿದು ಮಿಕ್ಕವರಾರೂ ಅನುಗ್ರಹಿಸುವಂತಿಲ್ಲ. ಮನೋವ್ಯಥೆಯಿಂದ ದಿಙ್ಮೂಢರಾಗಿದ್ದ ನಿಮಗೆ ತತ್ಪರಿಹಾರದ ಸೂಚನೆಗಳು ಹೊಳೆಯುವವು. ಆರೋಗ್ಯವೂ ಸ್ವಲ್ಪಮಟ್ಟಿಗೆ ಕಡಿಮೆಯಾಗಿ ದೇಹದಲ್ಲಿ ಕಾರ್ಯೋತ್ಸಾಹವುಂಟಾಗುವುದು. ನಿಮ್ಮಾಕೆಯು ವಿಶೇಷತಃ ಸ್ತ್ರೀಯರೇ ನಿಮ್ಮನ್ನು ಕಡು ವೈರಿಗಳಂತೆ ಕಾಣುವರು. ಗೃಹದಲ್ಲಿ ಕಲಹವಿಲ್ಲದ ದಿನವಿರದು. ಇಷ್ಟಾದರೂ ನೀವು ಹಣದ ಬಿಕ್ಕಟ್ಟಿನಿಂದ ಮುಕ್ತರಿರುವಿರಿ. ಇದೇ ನಿಮ್ಮ ಭಾಗ್ಯವೆನಬೇಕು.

ವೃಶ್ಚಿಕ—ನೀವು ಒಳ್ಳೆಯ ಕಾರ್ಯಕುಶಲರಾಗಿದ್ದರೂ ಕೋರ್ಟು ವಗೈರೆ ರಾಜಕೀಯ ಕ್ಷೇತ್ರದಲ್ಲಿ ನಿಮ್ಮ ಬೇಳೆ ಬೇಯುವಂತಿಲ್ಲ. ಮಾತ್ರವಲ್ಲ ವ್ಯಾಪಾರದಲ್ಲಿಯೂ ಕೂಡ ಅನೇಕ ರೀತಿಯ ನಷ್ಟಗಳೊದಗುವ ಪ್ರಸಂಗವಿದೆ. ಧನಸಂಪತ್ತು ಆರೋಗ್ಯಭಾಗ್ಯವೂ ನಿಮಗೆ ಚೆನ್ನಾಗಿರವುದು. ಸಕಲ ಗೃಹಪರಿವಾರದಿಂದ ವಿರಾಜಿಸುತ್ತಿರುವ ಸಂಸಾರದಲ್ಲಿ ಸುಖದಿಂದ ಕಾಲ ಕಳೆಯುವಿರಿ. ನೌಕರಿಗಳಿಗೂ ವಿದ್ಯಾರ್ಥಿಗಳಿಗೂ ತುಂಬಾ ಸಹಾಯಕವಾಗಿರುವುದೀವಾರವು. ಅಧರಸುಧೆಯ ಐದು ಪುತ್ರರಾದ ನಿಮಗೆ ತಾ. 14, 15, 16, 21 ಈ ದಿನಗಳು ಗಣನೆಗೇ ಸಿಗಲೊಲ್ಲವು.

ಧನು—ಅಸತ್ಯೆಯಿಂದಲೂ ಅವಿಚಾರದಿಂದಲೂ ಮಾಡಿದ ಕರ್ಮಫಲವನ್ನು ಅಚಿರದಲ್ಲೇ ಭೋಗಿಸಲಿರುವಿರಿ. ಆಪ್ತಜನರಿಂದ ಅವಮಾನ ಅನಿಷ್ಟಗಳೊದಗುವವು. ಸಾಮಾಜಿಕ ವ ರಾಜಕೀಯ ಕ್ಷೇತ್ರಗಳಲ್ಲಿ ವಿಜಯವು ದೊರೆಯದು. ಗುರುಹಿರಿಯರ ಆಗ್ರಹ ಸಂಸಾರದ ಚಿಂತೆ ಇವುಗಳಿಂದ ಸದಾ ವ್ಯಸನಿಗಳಾಗುವಿರಿ. ಆದರೂ ಬಾಲ್ಯಸ್ನೇಹಿತರ ಸಹವಾಸದಿಂದ ಸ್ವಲ್ಪ ಸಂತೋಷದಿಂದ ಸಮಯ ಕಳೆಯುವಿರಿ. ತಾ. 15ರಿಂದ 18ರ ವರೆಗೆ ಶತೃಪ್ರತೀಕಾರದಿಂದಾಗಿ ಸಂತೋಷ, ಶಯ್ಯಾಸುಖ, ಸ್ತ್ರೀಮೂಲಕ ಧನವನ್ನು ಹೊಂದುವಿರಾದರೂ ಇತರ ದಿನಗಳು ಬಹಳೇ ಅನಿಷ್ಟಕಾರಿಗಳಾಗಿವೆ.

ಮಕರ—ಸಹವಾಸ ದೋಷದಿಂದಲೂ ಸ್ವತೀಯ ಅಸ್ಥಿರ ಮತಿಯಿಂದಲೂ ನಿಮ್ಮ ಸ್ಥಾನಮಾನಗಳಿಗೆ ಕುಂದು ಬರಲಿದೆ. ಸಂಧಿಗೊಂಪುಗಳಲ್ಲಿ ನೋವು ಉದರರೋಗ ಇತ್ಯಾದಿಗಳಿಂದ ದೇಹಾಲಸ್ಯವು ತಪ್ಪುವಂತಿಲ್ಲ. ಆದರೂ ಕಷ್ಟಸಹಿಷ್ಣುಗಳೂ ಕಾರ್ಯಶೀಲರೂ ಆದ ನಿಮಗೆ ಪ್ರಯತ್ನಕ್ಕೆ ತಕ್ಕ ಫಲ ದೊರೆಯದಿರದು. ಆಯವ್ಯಯಗಳು ಏಕಮಟ್ಟದಲ್ಲಿ ನಿಲ್ಲುವುದರಿಂದ ಹಣದ ಚಿಂತೆಯಿರದು. ನೌಕರಿ ವರ್ಗದವರಿಗೂ ವ್ಯಾಪಾರೀ ವೃತ್ತಿಯವರಿಗೂ ಗ್ರಹಮಾನವು ಚೆನ್ನಾಗಿಯೇ ಇರುವುದು. ತಾ. 14, 15, 16, 21 ಈ ದಿನಗಳಲ್ಲಿ ಪ್ರಯಾಣ, ದೇಹಾಲಸ್ಯ, ಮಿತ್ರರಿಂದ ಮನಸ್ತಾಪಗಳುಂಟಾದಾವು.

ಕುಂಭ—ಅಪಾತ್ರದಾನ ಒಂದು ತರನಾದ ಭಯವು ನಿಮ್ಮ ಹೃದಯಕ್ಕೆ ಅಂಟಿಕೊಂಡಿರುವುದರಿಂದ ನಿಮಗಾವ ಕಾರ್ಯದಲ್ಲೂ ಮುಂದರಿಯಲು ಧೈರ್ಯ ಬರಲೊಲ್ಲದು. ವ್ಯರ್ಥ ಕಲಹ ನಿಮಿತ್ತ ಧನ ವ್ಯಯಿಸುವಿರಲ್ಲದೆ ಹಿರಿಯರ ತಿರಸ್ಕಾರಕ್ಕೂ ಗುರಿಯಾಗುವಿರಿ. ಆದರೂ ನಿಮ್ಮ ಅದೃಷ್ಟದ ಬಲದಿಂದ ನಿಮಗಾವ ಭೋಗ ಭಾಗ್ಯದಲ್ಲೂ ಕೊರತೆಯುಂಟಾಗದು. ಕೈತಪ್ಪಿಹೋದ ಒಡವೆಗಳೂ ಪುನಃ ನಿಮ್ಮ ಕೈಸೇರಲಿವೆ. ಶತೃಪ್ರತಿಕ್ರಿಯೆಯರೂಪವಾದ ಮನದಿಚ್ಛೆಯನ್ನು ಪೂರೈಸಿಕೊಳ್ಳುವಿರಿ. ಅನ್ಯೋನ್ಯಾನುರಕ್ತವಾದ ಸಂಸಾರದಲ್ಲಿ ಸುಖಾಸೀನರಾಗಿ ಕಾಲಯಾಪನೆ ಮಾಡುವಿರಿ. ತಾ. 14, 19, 20, 21 ಈ ದಿನಗಳು ಇಷ್ಟಾರ್ಥಸಾಧಕಗಳಾಗಿವೆ.

ಮೀನ—"ದುರ್ದೈವಃ ಪುರುಷೋ ಯತ್ರ ಯಾತಿ ತತ್ರೈವ ಚಾಪದಃ" ಎಂದೆ ಪರೀಕ್ಷಿದ್ದಾರದ [illegible] ಮುನಿಶಾಪದಿಂದುಂಟಾದ ಸರ್ಪಭಯದಿಂದ ಸಮುದ್ರ ಮಧ್ಯಕ್ಕೆ ಹೋಗಿ ವಾಸಿಸಿದರೂ ಅವನ ಮೃತ್ಯುವು ಕೂಡ ಬೆಂಬಿಡಲಿಲ್ಲವು. ಹಾಗೆಯೇ ದೈವಬಲದಿಂದ ಮುಕ್ತನಾದ ನರನು ಎಲ್ಲಿಗೆ ಹೋದರೂ ಅವನ ಹಿಂಗಡೆಯಿಂದಲೇ ಆಪತ್ತುಗಳೂ ಕೂಡ ಹಿಂಬಾಲಿಸುವವು. ಸದ್ಯ ನಿಮಗೆ ಬುಧಶುಕ್ರರೊಳಗುಳಿದು ಇತರ ಎಲ್ಲಾ ಗ್ರಹರೂ ಪ್ರತಿಕೂಲರಿರುವುದರಿಂದ ಗೃಹಕೃತ್ಯ ವಿಚಾರವಾಗಿ ಏನೊಂದೂ ಚಿಂತೆಯಿರದು. ಬಾಕಿ ಎಲ್ಲಾ ಭಾಗಗಳಲ್ಲೂ ಕಷ್ಟನಷ್ಟಗಳೇ ಕಾಣುವವು. ನಿರುತ್ಸಾಹ, ಶರೀರಾಲಸ್ಯ, ಕಾರ್ಯಹಾನಿ, ಶತೃಭಯ, ಆರ್ಥಿಕ ದುರವಸ್ಥೆ ಇತ್ಯಾದಿಗಳಿಂದ ಸದಾ ಪೀಡಿತರಾದ ನಿಮಗೆ ತಾ. 14, 17, 18, 19, 20 ಈ ದಿನಗಳು ಬಹಳ ಅನಿಷ್ಟಕಾರಿಗಳಾಗಿವೆ.

GET
Rich & Prosperous!

Here is an authorised simple means upheld and pursued by millions of persons with great advantage. This should lead you also to Riches and Prosperity. Ask for details-go through it carefully-take advantage of it and enjoyfull comforts, luxury, influence and all that go to make HAPPINESS complete.

K. S. ROW,
Worli, BOMBAY.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1 4 39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕೇವಲ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು, ಅದರಿಂದ ತಯಾರಿಸಿದ ಸಾರಾಂಶದ ನಿಜತ್ವವು ಕೆಲವೇ ನಿಮಿಷಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯ್ದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಪ್ಪಸಾಗಲಿಲ್ಲ ಲೆಖ್ಖ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾಧೆಗಳಿಗೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3. ವಿ. ಪಿ. ಖರ್ಚು 0-5-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

ಸ್ಟೈಲಿನರ ಬದ್ಧ ದ್ವೇಷಿ ಲಿಯೋನ್ ಟ್ರೋಟ್ಸ್ಕಿ

ಉಕ್ಕುಗಣ್ಣಿನ ಸ್ಟೈಲಿನರ ಕುರಿತು ಲೆನಿನರೇ ಎಚ್ಚರಿಸಿದ್ದರು.

ಟ್ರೋಟ್ಸ್ಕಿಯವರು ಲೆನಿನ್‌ಶಾಹಿಯನ್ನು ನಾಶಮಾಡಲೆತ್ನಿಸುತ್ತಿರುವರು.

ಇಂದೀಗ ರಶ್ಯದಲ್ಲಿರುವುದು ಸರ್ವಜನಹಿತಸಾಧಕ, ಮತ್ತು ಲೋಕಕಲ್ಯಾಣಕಾರಕವೆಂದು ಆಶೋದಯವನ್ನುಂಟುಮಾಡಿರುವ ನವನಿರ್ಮಾಣವಾದ! ಸಮಾಜವಾದವಲ್ಲ; ಸ್ಟೈಲಿನವಾದ ಸ್ಟೈಲಿನರು ಇಂದು ಝಾರ್ ಶಾಹಿಯಂತೆಯೇ ಸೋವಿಯೆಟ್ ಸಾಮ್ರಾಜ್ಯವನ್ನು ಕಟ್ಟಬಯಸುವಂತಿದೆ. ಫಿನ್ಲೆಂಡಿನ ಮೇಲಿನ ರಶ್ಯನರ ಅಕ್ರಮಣ ಮತ್ತು ಅತ್ಯಾಚಾರಗಳು ಸೋವಿಯೆಟ್ ಸರಕಾರವನ್ನು ನಾಝಿಗಳ ಸಾಲಿಗೇನೆ ತಂದಿರುವುದು. ಇಂದೀಗ ಸ್ಟೈಲಿನರು ಸಮಾಜವಾದದ ತತ್ವಗಳನ್ನು ಮೂಲೆಗೊತ್ತಿ, ಇಡೀ ಲೋಕದಲ್ಲಿ ಸಮತಾವಾದಪರವಾದ ಜನಮತ ಮತ್ತು ಕ್ರಾಂತಿಯನ್ನುಂಟುಮಾಡುವ ಆಕಾಂಕ್ಷೆಯನ್ನು ಮಣ್ಣುಗೂಡಿಸಿ, ರಶ್ಯದಲ್ಲಿ ಕ್ರಾಂತಿಯ ಸ್ಥಾಪನಾಚಾರ್ಯರಾದ ಲೆನಿನರ ಆದರ್ಶ ಮತ್ತು ಉದ್ದೇಶಗಳಿಗೆ ಪ್ರತಿಕೂಲವಾಗಿ ನಡೆದು ಹಿಟ್ಲರರೊಂದಿಗೆ ಸೇರಿ ಡಿಕ್ಟೇಟರ್ ಶಾಹಿಯನ್ನು ಬಲಗೊಳಿಸುವ ಧೋರಣೆ ವಹಿಸಿರುವರು.

ಸ್ಟೈಲಿನರ ಧೋರಣೆ ಮತ್ತು ವರ್ತನೆಯಿಂದ ರಶ್ಯದಲ್ಲಿ ಹಲವರಲ್ಲಿ ಅತೃಪ್ತಿಯುಂಟಾಗಿರುವುದೆಂದು ಸುದ್ದಿಯುಂಟಾಗಿದೆ. ಈ ಅತೃಪ್ತಿಯನ್ನು ಮತ್ತಷ್ಟು ಹೆಚ್ಚಿಸಿ ಸಂದರ್ಭನೋಡಿ ಸ್ಟೈಲಿನರ ವಿರೋಧವಾಗಿ ಬಂಡಾಯವೆಬ್ಬಿಸಿ ಅವರನ್ನು ಸದೆಬಡಿಯಬೇಕೆಂದು ಹೊಂಚುಹಾಕಿಕೊಂಡಿರುವಂತಿದೆ. ಅವರ ಬದ್ಧ ದ್ವೇಷಿ ಲಿಯೋನ್ ಟ್ರೋಟ್ಸ್ಕಿಯವರು ಹೇಗಾದರೂ ಗುಪ್ತದ್ವಾರದ ಮೂಲಕ ಟ್ರೋಟ್ಸ್ಕಿಯವರನ್ನು ರಶ್ಯದೊಳಗೆ ಪ್ರವೇಶಮಾಡಿಸಿ ಸ್ಟೈಲಿನರ ಪತನವನ್ನು ಸಾಧಿಸಬೇಕೆಂದು ಸ್ಕಾಂಡಿನೇವಿಯ ದೇಶಗಳಲ್ಲಿ ಕೆಲವರು ಚಳವಳ ಹೂಡಿರುತ್ತಾರೆ. ಟ್ರೋಟ್ಸ್ಕಿಯವರು ಮುದುಕರಾಗಿ ಮೆಕ್ಸಿಕೋದಲ್ಲಿ ಗಡಿಪಾರಾಗಿದ್ದರೂ ಈಗಲೂ ಸ್ಟೈಲಿನರೆಂದರೆ ಉರಿದುಬೀಳುವರು. ಅವರ ಕಣ್ಣುಗಳು ಕೆಂಡದಂತಾಗುವವು. ಝಾರ್ ಚಕ್ರವರ್ತಿಗಳ ಸರಕಾರಕ್ಕಿಂತಲೂ ಉಗ್ರವಾಗಿ ದ್ವೇಷಿಸುತ್ತಾರವರು ಸ್ಟೈಲಿನ್ ಶಾಹಿಯನ್ನು. ಒಂದು ಕಾಲದಲ್ಲಿ ಇಡೀ ಲೋಕದ ದ್ವೇಷ ಮತ್ತು ತಿರಸ್ಕಾರಕ್ಕೊಳಗಾಗಿದ್ದ ಟ್ರೋಟ್ಸ್ಕಿಯವರನ್ನು ಇಂದೀಗ ಎಲ್ಲರೂ ಮನ್ನಿಸುತ್ತಿದ್ದಾರೆ. ಅವರಷ್ಟು ಪ್ರತಿಭಾಶಾಲಿ ಲೇಖಕರು ಲೋಕದಲ್ಲೇ ಅಪರೂಪ. ಇಂದೀಗ ಟ್ರೋಟ್ಸ್ಕಿಯವರಿಗೆ ಸ್ಟೈಲಿನರನ್ನು ಪದಚ್ಯುತರನ್ನಾಗಿ ಮಾಡಲು ಸಾಧ್ಯವಾದರೆ ಬಹುಶಃ ಇಡೀ ಲೋಕವೇ ಹರ್ಷೋದ್ಗಾರವೆತ್ತಿ ಲೋಕದ ಇತಿಹಾಸದ ಗತಿಯು ಬದಲಾಗದಿರಲಾರದು.

ಇಂದೀಗ ಟ್ರೋಟ್ಸ್ಕಿಯವರು ಮೆಕ್ಸಿಕೋ ದೇಶದ ಪರ್ವತಪ್ರದೇಶದ ನಡುವಿನ ವಿಲ್ಲ ಸಮೋರೇಸ ಎಂಬ ಹಳ್ಳಿಯ ಏಕಾಂತ ನಿವಾಸದಲ್ಲಿ 12 ಮಂದಿ ಗುಪ್ತ ಪೋಲೀಸರ ಪಹರೆಯಲ್ಲಿ ಪುಸ್ತಕಗಳಿಂದ ತುಂಬಿದ ಡೆಸ್ಕಿನ ಬಳಿ ಕೂತು ಕಾಲಕಳೆಯುತ್ತಿರುವರು. ಅವರ ಕೂದಲು ಮತ್ತು ಗಡ್ಡವೆಲ್ಲಾ ಸಂಪೂರ್ಣ ನರೆತುಹೋಗಿರುವುದು. ಟ್ರೋಟ್ಸ್ಕಿಯವರು ರಶ್ಯದ ಕ್ರಾಂತಿಯ ಇತಿಹಾಸವನ್ನು ಬರೆದಿರುವರು. ಅತಿ ಮಹತ್ವದ ಗ್ರಂಥವದು. ಅದಕ್ಕೆ ಇನ್ನೂ ಪರಿಚ್ಛೇದಗಳನ್ನು ಸೇರಿಸುತ್ತಾ ತನ್ನ ಹೆಚ್ಚಿನ ಸಮಯವನ್ನು ಈಗಲೂ ಕಳೆಯುತ್ತಿರುವರು. ಈ ಪರಿಚ್ಛೇದಗಳು ಇಂದೀಗ ರಶ್ಯವನ್ನಾಳುವ ಉಕ್ಕಿನ ಮನುಷ್ಯ ಸ್ಟೈಲಿನನು ಹೇಗೆ ಅಧಿಕಾರಕ್ಕೆ ಬಂದು ತನ್ನ ಸಹವ್ಯವಸಾಯಿಗಳನ್ನೆಲ್ಲಾ ನಿರ್ಧಯವಾಗಿ ಕೊಂದು ತನ್ನ ಸ್ಥಾನವನ್ನು ಬಲಪಡಿಸಿಕೊಂಡಿರುವನೆಂಬುದನ್ನು ವಿವರಿಸುವಂಥವುಗಳಾಗಿವೆ.

"ಉಕ್ಕುಗಣ್ಣಿನ ಜೋಸೆಫ್ ಸ್ಟೈಲಿನರ ಕುರಿತು ಜಾಗರೂಕತೆಯಿಂದಿರಬೇಕು." ಎಂದು ಎಚ್ಚರಿಸಿದ್ದರು ಲೆನಿನರು ಮೃತ್ಯುಶಯ್ಯೆಯಲ್ಲಿ. ಮರಣಕ್ಕಿಂತಲೂ ಹೆಚ್ಚಾಗಿ ಸ್ಟೈಲಿನರೆಂದರೆ ಅವರು ಭೀತಿಗೊಳ್ಳುತ್ತಿದ್ದರು. ಅವರೇನು ಮಾಡಿಬಿಡುವರೋ ಎಂದು ತಳಮಳ ಪಡುತ್ತಿದ್ದರು. ಈ ಉಕ್ಕಿನ ಮನುಷ್ಯನು ರಶ್ಯದ ಕ್ರಾಂತಿಯ ನಾಯಕರನ್ನೆಲ್ಲಾ ತುಳಿದು ಮೇಲಕ್ಕೇರಲೆತ್ನಿಸಬಹುದೆಂದು ಟ್ರೋಟ್ಸ್ಕಿಯವರಿಗೆ ಮುಂಜಾಗ್ರತೆ ಹೇಳಿದ್ದರು. ಸ್ಟೈಲಿನರನ್ನು ಲೋಕದ ಜನತೆಯ ದ್ವೇಷದ ತಿಲುಬಿಗೇರಿಸುವುದು ಮಾತ್ರವಲ್ಲದೆ ಸಾಧ್ಯವಾದರೆ ಅಧಿಕಾರದಿಂದ ದಬ್ಬಿ ಹಾಕಿ ಪ್ರತೀಕಾರ ಮಾಡಬೇಕೆಂದು ಸಂಚು ನಡೆಸುತ್ತಿದ್ದಾರೆ ಟ್ರೋಟ್ಸ್ಕಿಯವರು. ಫೋರ್ತ್ ಇಂಟರ್‌ನೇಶನಲ್ ಸಂಘವು ಅವರು ನಿರ್ದೇಶಿಸಿದಂತೆ ಕೆಲಸ ಮಾಡುತ್ತಿದೆ. ಈ ಸಂಘವು ಲೋಕವ್ಯಾಪಕವಾಗಿದೆ. ರಶ್ಯದಲ್ಲಿ ಒಡಕುಂಟಾಗಬಹುದೆಂದೂ ಆಗ ಟ್ರೋಟ್ಸ್ಕಿಯವರು ಸ್ಟೈಲಿನರನ್ನು ತಳ್ಳಿ ಹಾಕಿ ಅಧಿಕಾರಕ್ಕೆ ಬರುವಂತಾಗಬಹುದೆಂದು ಟ್ರೋಟ್ಸ್ಕಿವಾದಿಗಳ ಹಲವರ ಕಲ್ಪನೆ.

ಟ್ರೋಟ್ಸ್ಕಿಯವರು ಇಡೀ ಸೋವಿಯೆಟ್ ಸೇನೆಯನ್ನು ನವೀನ ಕ್ರಮದಲ್ಲಿ ಸಂಘಟಿಸಿ ಕಟ್ಟಿದ ಯುದ್ಧ ಕಲಾಕೋವಿದರು. ಲೋಕಪ್ರಸಿದ್ಧ ವಾಗ್ಮಿ ಮತ್ತು ಮುತ್ಸದ್ದಿಯು ಇಡೀ ಲೋಕದಲ್ಲೇ ಸಮಾಜವಾದಿ ಕ್ರಾಂತಿಯನ್ನುಂಟುಮಾಡುವ ಆಕಾಂಕ್ಷೆಯಿಂದ ಪರಿಶ್ರಮಿಸಿದವರು. ಸ್ಟೈಲಿನರಿಗೂ ಇವರಿಗೂ ಭಿನ್ನಾಭಿಪ್ರಾಯವುಂಟಾಯಿತು. ಕುತಂತ್ರಿ ಸ್ಟೈಲಿನರು ಟ್ರೋಟ್ಸ್ಕಿಯವರನ್ನು ದೇಶಭ್ರಷ್ಟರನ್ನಾಗಿ ಮಾಡಿದರು. ಉಗ್ರ ಕ್ರಾಂತಿಕಾರರಾದ ಅವರಿಗೆ ಯಾವ ರಾಜ್ಯವಾದರೂ ಆಶ್ರಯಕೊಡದೆ ಅವರು ಒಂದು ದೇಶದಿಂದ ಇನ್ನೊಂದಕ್ಕೆ ಅಲೆಯಬೇಕಾಯಿತು. ಸ್ಟೈಲಿನರ ಗುಪ್ತಚರರು ಹೋದಲ್ಲೆಲ್ಲಾ ಅವರ ಬೆನ್ನು ಹಿಡಿದು ಅವರನ್ನು ಕೊಲೆಮಾಡಲೆತ್ನಿಸಿದರು. ಅವರ ಏಕ ಮಾತ್ರ ಪುತ್ರನಾದ ಸೆಡೋವರು ಫ್ರಾನ್ಸಿನಲ್ಲಿ ಸತ್ತರು. ಅವರನ್ನು ಕೊಲ್ಲಿಸಿದುದೆಂದು ಟ್ರೋಟ್ಸ್ಕಿಯವರ ಸಂದೇಹ. ಹಲವು ದೇಶಗಳಲ್ಲಿ ಅಲೆದ ಮೇಲೆ ಮೆಕ್ಸಿಕೋ ದೇಶದ ಪ್ರೆಸಿಡೆಂಟ್ ಕಾರ್ಡಿನಸರು ಅವರಿಗೆ ಕಾಯಮ್ ವಾಸ್ತವ್ಯವನ್ನಿತ್ತರು. ಇಲ್ಲಿಂದ ಟ್ರೋಟ್ಸ್ಕಿಯವರು ಅಮೇರಿಕಾದ ಪತ್ರಿಕೆಗಳಿಗೆ ಲೇಖನ ಬರೆಯುತ್ತಿರುವರು. ಗ್ರಂಥಗಳನ್ನು ಬರೆಯುತ್ತಿರುವರು. ಅವರ ಲೇಖನಗಳಿಗೆ ಅಮೇರಿಕದಲ್ಲಿ ಅತಿ ಹೆಚ್ಚಿನ ಬೆಲೆ ದೊರೆಯುವುದು. ಪ್ರತಿದಿನವೂ ವಿಮಾನ ಮೂಲಕ ಅವರಿಗೆ ಕಾಗದ, ಪತ್ರ ಇತ್ಯಾದಿಗಳು ಬರುವವು. 3 ಮಂದಿ ಕಾರ್ಯದರ್ಶಿಗಳು ಅವುಗಳನ್ನೆಲ್ಲಾ ನೋಡುವರು. ಲೋಕದ ಎಲ್ಲಾ ಕಡೆಗಳಿಂದಲೂ ಪತ್ರಗಳು ಟ್ರೋಟ್ಸ್ಕಿಯವರಿಗೆ ಬರುತ್ತಿರುವವು. ಅವರನ್ನು ನೋಡಿ ಮಾತಾಡ ಬಂದವರನ್ನೆಲ್ಲಾ ಪೋಲೀಸರು ಎಚ್ಚರದಿಂದ ಪರೀಕ್ಷಿಸುವರು. ಫಿನ್ಲೆಂಡಿನ ಮೇಲಿನ ರಶ್ಯದ ಧಾಳಿಯನ್ನು ಟ್ರೋಟ್ಸ್ಕಿಯವರು ಉಗ್ರವಾಗಿ ಟೀಕಿಸಿ ಸ್ಟೈಲಿನರ ಅಂತ್ಯಕಾಲವು ಸಮೀಪಿಸುತ್ತಿರುವುದೆಂದಿರುವರು. ಆದರೆ ಫಿನ್ಲೆಂಡಿನ ಯುದ್ಧದಲ್ಲಿ ಸ್ಟೈಲಿನರು ಗೆದ್ದ ಪಕ್ಷದಲ್ಲಿ ಅವರ ಸ್ಥಾನಕ್ಕೇನೂ ತೊಂದರೆ ಬರುವ ಸಂಭವವಿಲ್ಲ. ಆದರೆ ಅವರ ಮತ್ತು ಸೋವಿಯೆಟ್ ರಾಜ್ಯಭಾರದ ಕುರಿತು ಲೋಕದ ಹಲವು ಮಂದಿ ಸಮತಾವಾದಿಗಳಿಗೆ, ವಿಚಾರಿಗಳಿಗಿದ್ದ ಮಾನ್ಯತೆಯು ಮಾಯವಾಗಿ ಜನರು ಹಿಟ್ಲರರಂತೆಯೇ ಅವರ ಕುರಿತು ಕೂಡಾ ತಿರಸ್ಕಾರ ಭಾವ ಪ್ರಕಟಪಡಿಸುವರು.

NOTICE

ಕಾಸರಗೋಡು ಡಿ ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 286/37 I A 64
R E. P. 874/39

ರಾಮಕೃಷ್ಣ ಭಟ್ರು—ಕಮಲಾಕ್ಷ [illegible] ಭಟ್ರರ ವಗೈರೆ [illegible] —ಅರ್ಜಿದಾರ್.

ಮತ್ತು

ಮಹಮ್ಮದ ಬ್ಯಾರಿ [illegible]—ರೆಸ್ಪೊಂಡೆಂಟರು 12ನೇ ರೆಸ್ಪೊಂಡೆಂಟ್— [illegible] ಭಟ್ಟ— [illegible]

[illegible] 21 3-'40 [illegible] 12ನೇ ರೆಸ್ಪೊಂಡೆಂಟರಿಗೆ ಈ ಮೂಲಕ ತಿಳಿಸಲಾಗಿದೆ

K Devadas Shenai,
ಅರ್ಜಿದಾರನ ಕಡೆ ವಕೀಲ.
ಕಾಸರಗೋಡು 6-3 1940.

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯುವ್ಯಯದ ಸಾರಾಂಶ ಪಟ್ಟಿ.

	ರೂ ಆ ಪೈ		ರೂ ಆ ಪೈ
ಮೂಲಧನ		ಕಟ್ಟಡ ಮತ್ತು ಸಾಮಾನು	
ತೆತ್ತಲ್ಪಟ್ಟ	6,00,000 0 0	ಮೊದಲಾದವುಗಳಿಗೆ ಸ್ಥಿರ ಮೂಲ ವ್ಯಯ	95,489-4-3
ಪೈಡ್ ಅಫ್	3,91,342-0-0	**ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು**	
ರಿಸರ್ವ್ ಫಂಡು	4,50,000 0 0	ಚಲಿಯಾಗುವ ಸೆಕ್ಯೂರಿಟಿ	40,97,741-5-6
ಡಿಪೋಸಿಟ್		ಹುಂಡಿ ಪತ್ರ ಮೊದಲಾದವುಗಳು	10,30,649 2 10
ಫಿಕ್ಸೆಡ್, ಕರೆಂಟ್ ಇತ್ಯಾದಿ	81,21,622-8-1	ಬೇಲಾಸಾತಿ	20,64,586-2-0
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ವಿವಿಧ	9,82,093-10 4
ವಿವಿಧ	10,51,799-1-7	ನಗದಿ	17,99,207-1 3
ಈ ವರ್ಷದ ಲಾಭ	55,003-0-6		
ಜುಮ್ಲಾ	1,00 69,766-10-2	ಜುಮ್ಲಾ	1,00,69 766-10-2

ANTARANGA
YUGADI SPECIAL

ADVERTISEMENT RATES

Full Page	Rs 25—0—0
Half Page	Rs. 13—0—0
Quarter Page . .	Rs 7—0—0
⅛ Page	Rs. 4—0—0
Cover Back Page	Already Reserved.
Cover 2nd & 3rd Page	Rs 35—0—0

FOR FURTHER PARTICULARS APPLY TO

Advertisement Manager.—

ANTARANGA, UDIPI.

ಇಂಗ್ಲೆಂಡಿನ ಎದೆಯ ಪಿಸ್ತೂಲು — ಜರ್ಮನಿಯ ಯುದ್ಧ ಸಿದ್ಧತೆಗೆ ಅವಕಾಶ.

ಮಿತ್ರ ರಾಷ್ಟ್ರಗಳು ರಷ್ಯದ ಮೇಲೆ ಯುದ್ಧ ಹೂಡಬೇಕು. — ಫಿನ್ಲೆಂಡಿಗೆ ಸೇನಾ ಸಹಾಯವೀಯಬೇಕು. — ನೋರ್ವೆ, ಸ್ವೀಡನುಗಳಿಂದ ಜರ್ಮನಿಗೆ ಸಹಾಯ ದೊರೆಯದಂತೆ ತಡೆಗಟ್ಟಬೇಕು.

ಮಾಜಿ ಯುದ್ಧ ಮಂತ್ರಿ ಹೋರ್ ಬೆಲೀಶರವರ ಅಭಿಮತ.

ಇಂಗ್ಲೆಂಡಿನ ಮಾಜಿ ಪ್ರಧಾನ ಮಂತ್ರಿ ಮಿ. ಹೋರ್ ಬೆಲೀಶರವರು ತನ್ನ ಸ್ಥಾನಕ್ಕೆ ರಾಜಿನಾಮೆ ಕೊಡಬೇಕಾಗಿ ಬಂದುದೇಕೆಂಬ ಕಾರಣಗಳು ಅಧಿಕಾರಿಕವಾಗಿ ಪ್ರಕಟಿಸಲ್ಪಡದಿದ್ದರೂ ಈಗ ಅವರು ಪ್ರಕಟಿಸುತ್ತಿರುವ ಲೇಖನಗಳಿಂದ ಊಹಿಸಬಹುದಾಗಿದೆ. ಯುದ್ಧವನ್ನು ನಡಿಸುವ ವಿಚಾರದಲ್ಲಿ ಅವರಿಗೂ ಸೇನಾನಾಯಕರುಗಳಿಗೂ ಭಿನ್ನಾಭಿಪ್ರಾಯವುಂಟಾಗಿರಬೇಕು. ಮಿತ್ರರಾಷ್ಟ್ರಗಳು ಸುಮ್ಮನೆ ಕಾಯುತ್ತಾ ಸಮಯ ಕಳೆಯಬಾರದು. ಅದರಿಂದ ಜರ್ಮನಿಗೆ ಯುದ್ಧ ಸಿದ್ಧತೆಯನ್ನು ಮತ್ತಷ್ಟು ಹೆಚ್ಚಿಸಲು ಅವಕಾಶವಿತ್ತಂತಾಗುವುದು. ಜರ್ಮನಿಯು ಕಳೆದ 6 ತಿಂಗಳುಗಳಲ್ಲಿ ಸೈನ್ಯಾಧಿಕಾರಿಗಳನ್ನು ಭರದಿಂದ ತರಬೇತಿಮಾಡುತ್ತಾ ಬಂದಿದೆ. ಇಂದೀಗ ರಷ್ಯ ಜರ್ಮನಿಗಳೊಂದುಗೂಡಿ ಮಿತ್ರರಾಷ್ಟ್ರಗಳನ್ನು ಸದೆಬಡಿಯಲೆತ್ನಿಸುತ್ತಿವೆ. ಪೋಲಂಡನ್ನವು ಹಂಚಿಕೊಂಡಾಯಿತು. ಬಾಲ್ಟಿಕ್ ರಾಷ್ಟ್ರಗಳನ್ನು ಅಧೀನಪಡಿಸಿದುದಾಯಿತು. ರಷ್ಯವು ಜರ್ಮನಿಯ ಪ್ರೋತ್ಸಾಹದಿಂದ ಫಿನ್ಲೆಂಡನ್ನು ನಾಶಮಾಡಲೆತ್ನಿಸುತ್ತಿದೆ. ಫಿನ್ಲೆಂಡು ಹೋಯಿತೆಂದರೆ ಮತ್ತೆ ಸ್ವೀಡನ್ ನೋರ್ವೆ ಮೊದಲಾದ ಸ್ಕಾಂಡಿನೇವಿಯ ರಾಷ್ಟ್ರಗಳು ರಷ್ಯ ಜರ್ಮನಿಗಳು ಹೇಳಿದಂತೆ ನಡೆಯಲೇ ಬೇಕಾಗುವುದು. ಆಗ ಜರ್ಮನಿಯ ಯುದ್ಧಾನುಕೂಲತೆಗಳು ಬಹಳವಾಗಿ ಹೆಚ್ಚುವವು. ಬಾಲ್ಟಿಕ್ ಮತ್ತು ಸ್ಕಾಂಡಿನೇವಿಯ ರಾಷ್ಟ್ರಗಳ ಮೇಲೆ ಅಧಿಕಾರ ಸ್ಥಾಪಿಸಿದ ಮೇಲೆ ಬಾಲ್ಕನ್ ರಾಷ್ಟ್ರಗಳನ್ನು ಬಗ್ಗುಬಡಿಯುವ ಯತ್ನ ನಡೆಯಬಹುದು. ಇದಕ್ಕೆ ಜರ್ಮನಿಯು ಇಟಲಿಯ ಸಹಾಯವನ್ನೂ ಪಡೆಯಬಹುದು. ಆದುದರಿಂದ ಈಗಲೇ ಫಿನ್ಲೇಂಡಿನ ಮೇಲಿನ ರಷ್ಯದ ಆಕ್ರಮಣವನ್ನು ತಡೆಗಟ್ಟಿ ಫಿನ್ಲಂಡಿಗೆ ಸೇನಾ ಸಹಾಯವೀಯಬೇಕು. ರಷ್ಯದ ಲೆನಿನ್‌ಗ್ರಾಡ್ ಪಟ್ಟಣದ ಮೇಲೆ ಧಾಳಿ ಇಡಬೇಕು. ಸ್ವೀಡನಿನಿಂದ ಕಬ್ಬಿಣದ ಅದುರು ಜರ್ಮನಿಗೆ ಹೋಗದಂತೆ ತಡೆಯಬೇಕು. ನೋರ್ವೆಯ ಕರಾವಳಿಯನ್ನು ಜರ್ಮನಿಯು ತನ್ನ ಹಡಗು ಪಡೆಯ ಆಶ್ರಯವಾಗಿ ಉಪಯೋಗಿಸದಂತೆ ಆತಂಕಿಸಬೇಕು. ದಿನಕ್ಕೆ 6 ಮಿಲ್ಯ ಪವನುಗಳನ್ನು ಸೇನೆಗಾಗಿ ವೆಚ್ಚಮಾಡುತ್ತಾ ಜರ್ಮನಿಯು ಯಾವಾಗ ಧಾಳಿನಡಿಸುವುದೆಂದು ನಿರೀಕ್ಷಿಸಿಕೊಂಡು ಇಂಗ್ಲೆಂಡು ಕುಳಿತುಕೊಳ್ಳಬಾರದು. ಆದರಿಂದ ಜರ್ಮನಿಯು ತನ್ನ ಬಲವನ್ನು ಹೆಚ್ಚಿಸಿಕೊಳ್ಳುವರೆ ಅವಕಾಶವನ್ನೊದಗಿಸಿದಂತಾಗುವುದು. ಮಿತ್ರ ರಾಷ್ಟ್ರಗಳು ನೌಕಾಮುತ್ತಿಗೆಯಿಂದ ಮಾತ್ರ ತೃಪ್ತಿಗೊಳ್ಳದೆ ನೆಲ ಮತ್ತು ಆಕಾಶಧಾಳಿ ನಡಿಸಬೇಕು. ಯುದ್ಧವು ಇಡೀ ಯುರೋಪ್ ಖಂಡಕ್ಕೆ ವ್ಯಾಪಿಸುವಂತಾದರೂ ಬೆದರದೆ ಧೈರ್ಯದಿಂದ ಮುಂದೊತ್ತಬೇಕೆಂದೇ ಹೋರ್ ಬೆಲೀಶರವರ ಅಭಿಪ್ರಾಯ. ಯುದ್ಧಮಂತ್ರಿಯಾಗಿರುವಾಗ ಅವರು ತನ್ನ ಅಭಿಪ್ರಾಯವನ್ನು ಕಾರ್ಯರೂಪಕ್ಕೆ ತರಲೆತ್ನಿಸಿರಬೇಕು. ಅಂತಹ ಸಾಹಸಕ್ಕೆ ಸೈನ್ಯಾಧಿಕಾರಿಗಳೂ ಪ್ರಧಾನ ಮಂತ್ರಿಗಳೂ ಒಪ್ಪದೆ ಬೆಲೀಶರು ರಾಜಿನಾಮೆ ಕೊಡುವಂತಾಗಿರಬೇಕು.

ಸ್ವೀಡನಿನ ಕಬ್ಬಿಣದ ಅದುರು

ಲೋಕದಲ್ಲಿ ಸ್ವೀಡನಿನಷ್ಟು ಕಬ್ಬಿಣದ ಅದುರನ್ನು ರಫ್ತು ಮಾಡುವ ರಾಷ್ಟ್ರ ಇನ್ನೊಂದಿಲ್ಲ. ಈ ಅದುರು ಹೆಚ್ಚಾಗಿ ಫಿನ್ಲೆಂಡಿನ ಪಶ್ಚಿಮ ಕರಾವಳಿಯ ಬಳಿಯಲ್ಲಿರುವ ಗಲ್ಲಿವೇರ್ ಗನಿಗಳಲ್ಲಿ ದೊರೆಯುತ್ತವೆ. ಈ ಅದುರುಗಳಲ್ಲಿ ಹೆಚ್ಚಿನ ಗಂಧಕಾಂಶವಿರುವುದರಿಂದ ಜರ್ಮನಿಯ ಉಕ್ಕಿನ ಕಾರ್ಖಾನೆಗಳಿಗೆ ಅವು ಅತ್ಯುಪಯುಕ್ತವಾಗಿವೆ ಜರ್ಮನಿಯು ತನಗೆ ಬೇಕಾದ ಅರೆವಾಸಿಯಷ್ಟು ಕಬ್ಬಿಣದ ಅದರನ್ನು ತರಿಸುವುದು ಸ್ವೀಡನಿನಿಂದ. ಸ್ವೀಡನಿನಿಂದ 9ಮಿಲ್ಯ ಟನ್ನು ಕಬ್ಬಿಣದ ಅದುರು ದೊರೆಯುವಂತಾದರೆ ಜರ್ಮನಿಯು ಅದರಿಂದ ತನಗೆ ಬೇಕಾದಷ್ಟು ಉಕ್ಕನ್ನು ತಯಾರಿಸಿಕೊಳ್ಳಬಹುದು. ಸ್ವೀಡನಿನಿಂದ ಕಬ್ಬಿಣ ಅದುರು ದೊರೆಯದಂತಾದರೆ ಜರ್ಮನಿಗೆ ದೀರ್ಘಕಾಲ ಯುದ್ಧ ನಡಿಸಲು ಸಾಧ್ಯವಾಗಲಾರದು. ಫಿನ್ಲೆಂಡನ್ನು ರಷ್ಯವು ಗೆದ್ದರೆ ಸ್ವೀಡನು ಜರ್ಮನಿ ಮತ್ತು ರಷ್ಯಗಳ ಆಜ್ಞಾನುಸಾರ ನಡೆಯಲೇ ಬೇಕಾಗುವುದು. ಮಿತ್ರ ರಾಷ್ಟ್ರಗಳು ಫಿನ್ಲೆಂಡಿಗೆ ಸೇನಾಸಹಾಯವಿತ್ತು ಅದನ್ನು ರಕ್ಷಿಸಿದ ಪಕ್ಷದಲ್ಲಿ ಉತ್ತರ ಯುರೋಪಿನ ಇತರ ರಾಷ್ಟ್ರಗಳಿಗೆ ಧೈರ್ಯವುಂಟಾಗುವುದು. ಅವು ಜರ್ಮನಿ ಮತ್ತು ರಷ್ಯಗಳಿಗೆ ಬೆದರದಂತಾಗುವುವು.

ಬ್ರಿಟನ್ ಮತ್ತು ಫ್ರಾನ್ಸುಗಳು ಈ ಸಂದರ್ಭವನ್ನು ಕಳಕೊಂಡು ಫಿನ್ಲೇಂಡಿನ ಸ್ವಾತಂತ್ರ್ಯವು ನಾಶವಾಗುವಂತಾದರೆ ಮತ್ತೆ ಯುರೋಪಿನ ಚಿಕ್ಕ ಪುಟ್ಟ ರಾಷ್ಟ್ರಗಳಿಗೆ ಅವುಗಳ ಮೇಲೆ ವಿಶ್ವಾಸವೇ ಇಲ್ಲದಾಗುವುದು. ಇಂದೀಗ ಯುರೋಪಿನ ಭೂಗಡಿಗಳೇ ಬದಲಾಯಿಸಲ್ಪಡುತ್ತಿವೆ. ತಲಾಂತರಗಳಿಂದ ಭೂಪ್ರದೇಶಗಳಲ್ಲಿ ನೆಲಸಿಕೊಂಡು ಬಂದಿದ್ದ ಜನಾಂಗಗಳೆಲ್ಲಾ ಒಂದೆಡೆಯಿಂದ ಕಿತ್ತು ಜಾನುವಾರುಗಳಂತೆ ಇನ್ನೊಂದೆಡೆಗೆ ಅಟ್ಟಲ್ಪಡುತ್ತಿವೆ. ಇತಿಹಾಸವನ್ನೇ ಮಾರ್ಪಡಿಸುವ ವಿದ್ಯಮಾನಗಳು ಒಂದರ ಹಿಂದೊಂದು ಮಿಂಚಿನ ವೇಗದಿಂದ ನಡಿಯುತ್ತಿವೆ. ಇಂತಹ ಉದ್ವೇಗಕರ ಸನ್ನಿವೇಶದಲ್ಲಿ ಮಿತ್ರ ರಾಷ್ಟ್ರಗಳು ತಣ್ಣಗೆ ಕೂತು ಆತ್ಮರಕ್ಷಣೆಯ ಸಿದ್ಧತೆಯಲ್ಲಿ ತೊಡಗಿವೆ.

ನೋರ್ವೆಯಿಂದ ಇಂಗ್ಲೆಂಡಿಗೆ ಗಂಡಾಂತರ

ಇಂಗ್ಲೆಂಡಿನ ಎದೆಯ ಪಿಸ್ತೂಲೆಂದರೆ ನೋರ್ವೆ. ನೋರ್ವೆಯ ಕರಾವಳಿಯ ಆಶ್ರಯ ಪಡೆದುಕೊಂಡು ಜರ್ಮನಿಯು ಮಿತ್ರರಾಷ್ಟ್ರಗಳ ನೌಕಾ ಧಾಳಿಯನ್ನು ಭೇದಿಸಲೆತ್ನಿಸುತ್ತಿದೆ. ನೋರ್ವೆಯ ಕರಾವಳಿಯಿಂದ ಪೆಟ್ರೋಲು, ಇದ್ದಲು ಮತ್ತು ಆಹಾರ ಸಾಮಗ್ರಿಗಳನ್ನು ತುಂಬಿಸಿಕೊಂಡು ಜರ್ಮನ್ ಯುದ್ಧ ಹಡಗು, ಸಬ್‌ಮೆರೀನ್ ಮತ್ತು ವಿಮಾನಗಳು ಗುಪ್ತವಾಗಿ ಹೊರಟು ಹಾವಳಿ ಮಾಡುತ್ತಿವೆ. ನೋರ್ವೆಯು ಸಂಪೂರ್ಣವಾಗಿ ಜರ್ಮನಿ ರಷ್ಯಗಳ ಅಧೀನವಾಯಿತೆಂದರೆ ಬ್ರಿಟಿಷಿಗೆ ಅದರಿಂದ ದೊಡ್ಡ ಗಂಡಾಂತರವಿದೆ. ಡ್ಯುಟ್ಲೆಂಡ್ ಎಂಬ ಜರ್ಮನ್ ಯುದ್ಧ ಹಡಗವು ಸಮುದ್ರ ಧಾಳಿಗೆ ಹೊರಟು ಹೋದುದು ನೋರ್ವೆಯ ಕರಾವಳಿಯ ಸಮುದ್ರದಿಂದ. ಗ್ರೇಫ್ ಸ್ಪೀಯು ಹೊರಟು ಹೋದುದೂ ಇಲ್ಲಿಂದಲೇ; ಬ್ರಿಟಿಷ್ ವಿಮಾನ ಮತ್ತು ಸಬ್‌ಮೆರೀನುಗಳಿಂದ ಕಂಡು ಹಿಡಿಯಲ್ಪಟ್ಟ ಬ್ರೆಮೆನ್ ಯುದ್ಧ ಹಡಗವು ಆಶ್ರಯ ಪಡೆದುದು ನೋರ್ವೆಯ ಕರಾವಳಿಯಲ್ಲಿ. ಸ್ವೀಡನಿನ ಕಬ್ಬಿಣದದುರನ್ನು ಜರ್ಮನಿಯು ಆಮದು ಮಾಡುವುದು ನೋರ್ವೆ ಸಮುದ್ರ ಕರಾವಳಿಯ ಮಾರ್ಗವಾಗಿ. ಅದಕ್ಕೆ ಆಹಾರ ಸಾಮಗ್ರಿಗಳು ಕೂಡಾ ಈ ಮಾರ್ಗವಾಗಿಯೇ ಬರುತ್ತಿವೆ. ಕೈದಿಗಳನ್ನೊಯ್ಯುತ್ತಿದ್ದ ಅಲ್ಟ್‌ಮಾರ್ಕ್ ಹಡಗವು ಜರ್ಮನಿಯನ್ನು ಸೇರಲೆತ್ನಿಸಿದುದು ನೋರ್ವೆಯ ಸಮುದ್ರ ಮೂಲಕವಾಗಿ. ಆಗ ಬ್ರಿಟಿಷ್ ಯುದ್ಧ ಹಡಗಗಳು ತಡೆದು ಬಲಾತ್ಕಾರದಿಂದ ಕೈದಿಗಳನ್ನು ರಕ್ಷಿಸಿದುದು. ನೋರ್ವೆಯ ತಟಸ್ಥ ಸಮುದ್ರ ಭಾಗವನ್ನು ಜರ್ಮನಿಯು ದುರುಪಯೋಗಗೊಳಿಸುತ್ತಿದೆ. ಜರ್ಮನಿಯ ಬೆದರಿಕೆಯಿಂದ ನೋರ್ವೆಯು ಅದನ್ನು ಇಚ್ಛಾನುಸಾರ ನಡೆಯ ಬಿಡುತ್ತಿದೆ. ಆದುದರಿಂದ ನೋರ್ವೆ ಸಮುದ್ರವನ್ನು ಮಿತ್ರರಾಷ್ಟ್ರಗಳು ತಟಸ್ಥ ಜಲ ಪ್ರದೇಶವೆಂದು ಭಾವಿಸದೆ ಇತರ ಸಮುದ್ರ ಭಾಗದಂತೆಯೇ ಪರಿಗಣಿಸಬೇಕಾಗುವುದೆಂದೇ ಹೋರ್ ಬೆಲೀಶರ ಅಭಿಮತ.

THE

BOMBAY LIFE ASSURANCE

Company Limited.

[ESTD. 1908]

COMPARE

Your Life Assurance with any other property you possess what is its guarranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	...	...	Rs. 1,44,91,000
Life Assurance Fund	...	...	Rs. 1,17,69,748
Total Assets	...	...	Rs. 1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS.	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	CALICUT. Puthiyara.	Central Station Road, TRIVANDRUM.

ನವಯುಗ

ನೋಟೀಸು.

ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅದನ್ನು ದಯವಿಟ್ಟು ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಚಂದಾದಾರರು ಪತ್ರವ್ಯವಹಾರ ಮಾಡುವಾಗ ನಿಮ್ಮ ಚಂದಾ ನಂಬ್ರ ಬರೆಯಬೇಕು. —ಮೆನೇಜರ್.

THE ASIAN ASSURANCE COMPANY, LIMITED.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,55,761	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
„ M Shivarama Rao, Organizer, Puttur.

Or

Sri J. A. PUTRAN,
Branch Manager, MANGALORE.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರ ವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)
ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ (ಅಂಚೆವೆಚ್ಚ 0-0 6 ಪ್ರತ್ಯೇಕ)
ರೂ 1 8 0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪ್ರತಿಗಳಿಗೆ ಬರೆಯಿರಿ:-
ಮೇನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸ್ವಪ್ನದೋಷ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ

"ನಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಕ
ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Null Bazar, Duncan Road
BOMBAY 4

ನಮ್ಮ ಹೊಸ ಪ್ರತಿನಿಧಿಗಳು

ಶ್ರೀ. ಕೆ. ಎಂ. ದೇಜಪ್ಪ ಶೆಟ್ಟಿಯರು 'ನವಯುಗ'ದ ಪ್ರತಿನಿಧಿಯಾಗಿ ಕೆಲಸ ಮಾಡಲು ಉತ್ಸಾಹದಿಂದ ಮುಂದ ಬಂದಿದ್ದಾರೆ. ಇವರು ಮಿತಭಾಷಿಗಳು, ವಿನಯಸಂಪನ್ನರು ಹಾಗೂ ಸರಳ ಮನೋವೃತ್ತಿಯ ಕಾಂಗ್ರೆಸ್ ಭಕ್ತರು 'ನವಯುಗ'ವನ್ನು ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂಬ ಉತ್ಕಟೇಚ್ಛೆಯಿಂದ ಇವರು ಪ್ರತಿ ಹಳ್ಳಿ, ಪೇಟೆ, ಪಟ್ಟಣಗಳಲ್ಲೂ ಕ್ರಮಶಃ ಸಂಚರಿಸಲಿರುವರು. ಇವರಿಗೆ ಸಕಲರೂ ಉದಾರಾಶ್ರಯವಿತ್ತು 'ನವಯುಗ'ಕ್ಕೆ ಸರ್ವ ಪ್ರೋತ್ಸಾಹ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗುತ್ತದೆ. -ಮೇನೇಜರ್

Degrees Books Medicines.

Free H L M S, H M B H M D etc Free Homeo-Ayur-Unani-Naturo degrees by post also—Practioners also get soons Homeo Materiamedica, Rs 3, Homeo-Practice book Rs 4, Insanity Cure Pills Rs. 10 Enclose 2 annas stamp.—

Principal, Indian Homeopathic Institute and Society (Govt Regd)
P O MAHUVA, (Kathiawar Dt, India.

NAVAYUGA
Advertisement Tariff

1 Page Rs. 25/ per insertion
½ „ Rs 15/- „ „
¼ „ Rs. 8/- „ „
⅛ „ Rs 5/- „ „
Per Single inch col. Re. 1 „
Contract rates on application
Manager-**Navayuga UDIPI.**

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ"

ಪಿತ್ತ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ವೃದ್ಧಿಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು

ಕೋಲ್ಗೇಟ್ ನ ಬಿಳೀ ಟೂಥಪೇಸ್ಟು ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡುತ್ತದೆ.



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೇಮಿಕಲ್ ಕಂ. (ಮಾಲಕರು —ಮಗನಲಾಲ್ ಅನ್ ಲಂಡ್ ಕಂಪೆನಿ ಮುಂಬಯಿ,

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ

ವಿಜ್ಞಾನದ ನವೀನ ಮತ್ತು
ವಿಚಿತ್ರ ಶೋಧ

ಕಿವಿ ಸೋರುವುದು, ನೋವು, ಉರಿಯುವುದು, ಶಬ್ದ ಕೇಳುವುದು, ತುರಿಸುವುದು, ಕೆರು ಅಥವಾ ಮೊರೆಯೇಳುವುದು, ಕರ್ಣಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೈನ ತೆಗೆದುಕೊಂಡ ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಖಾತ್ರಿ ಗುಣಹೊಂದುವಿರಿ. ಈ ಸಿದ್ಧೌಷಧಿಯಿಂದ ನೂರಾರು ಮಂದಿ ತಿರುಗಿ ಚೆನ್ನಾಗಿ ಶ್ರವಣಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು. ಬಾಟ್ಲಿ 1ರ ಬೆಲೆ ರೂ. 2, 3 ಬಾಟ್ಲಿಗಳಿಗೆ ರೂ. 5, ಅಂಚೆ ಖರ್ಚು ಪ್ರತ್ಯೇಕ.

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರದ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, — ಯಂ. ಆರ್. ಪೂಂಜ,
President & Manager, — ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು. ಸೀಸೆ1ಕ್ಕೆ 12 ಆಣೆ, ಟ.ಖ.ಪ್ರತ್ಯೇಕ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಲ್ಲಿ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! DAIMONDS!

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಖೆಯೊಂದನ್ನು ಗವರ್ನ್ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ: [illegible] ರಬ್ಬರ್ ಸ್ಟಾಂಪ್ ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್‌ಬೋರ್ಡು, ವಾಸನರ ಬೇಜು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.
Approved firm by the Govt. of Mysore. Certified by the Agent of the Govt. of India in Ceylon

---

ಹೊಸ ಪುಸ್ತಕ! ಸೆಲ್ಫ್ ಇಂಗ್ಲಿಷ್ ಸ್ಟಡಿ ಈಗಲೇ ಪ್ರಿಂಟಾಗಿದೆ!!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲಿಷ್ ಕಲಿತುಕೊಳ್ಳಬಹುದು, ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದು ಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಕ್ರಯ ರೂ. 1—8—0.

Western Swiss Watch Co.
Book-Sellers, Post Box No. 68
G. P. O. MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ ನಂ 68. ಮದರಾಸ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಸ್ವರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ,
ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿ
ಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

PRINTED BY S. S. KARANTH AT THE THULUNAD PRESS, UDIPI, AND PUBLISHED BY K. H. SHETTY AT "NAVAYUGA OFFICE, UDIPI, S. INDIA"

ired No M. 3618 21-3-1940.

ನವಯುಗ

NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— **ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.**

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ ಮಾಧವ, ಎಂ ಎ, ಎಫ್ ಆರ್ ಎ ಎಸ್., ಎ ಐ.ಎ (ಲಂಡನ್)
ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಅಕ್ಚ್ಯುಯರಿಯವರ
ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹುವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ನಾಲ್ಕು ವರ್ಷಗಳಿಂದ ಆಪೇಕ್ಷಿತ ವೆಚ್ಚ, ಬಡ್ಡಿಯ ಫಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ... ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಕ್ತ್ರಿತಪ್ರಶವಾದ ಕಾರ್ಯಕಲಾಪಗಳಿಗಾಗಿ ... ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದುಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H Venkataramiah, *Divisional Superintendent* or **R Purniah** *Ag. General Manager*

The Asiatic Govt. Security Life Assu Co. Ltd.,
Asiatic Building, BANGALORE CITY

ಝಂಡು ಮಲೇರಿಯಾ ಮಿಕ್ಶ್ಚರ್

ಚಳಿಜ್ವರ ಉಚ್ಚಾಟ

ಮಲೇರಿಯಾ, ವಿಷಪ್ರಣಗಳಿಂದುಂಟಾಗುವ ಎಲ್ಲಾ ತರದ
ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು:— **ಪಿ. ಎ. ಪೈ ಬ್ರದರ್ಸ್.**
ಕಾರ್ಕಳದ ಏಜಂಟರು.— **ವಿ. ವಿ. ಶೆಣೈ, ಕೆಮಿಸ್ಟ್ಸ್.**
ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.
ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—
ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,
78 ಚೈನಾ ಬಜಾರ್ ರೋಡ್, **ಜಿ. ಟಿ. ಮದರಾಸು.**

ZANDU

DAMODER & CO.,
78 China Bazaar Road, **G T MADRAS**

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯವನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು

ಕ್ರಯ:— 40 ಮಾತ್ರೆಗಳ ಡಬ್ಬಿಗೆ ರೂ. 1—0—0

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್
ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.
ಮೈಸೂರು
ಸ್ಯಾಂಡಲ್ ಸೋಪು
ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸ್ಯಾಂಡಲ್ ಸೋಪು

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು

Your anxiety in finding a sound and progressive Life Office both to insure or to represent will end on consultation with.

Branch Secretary
The New Guardian of India Life Ins. Co Ltd, Madras.
MANGALORE Branch

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವದು ಅವಶ್ಯಕವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಒಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷದವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ ಸಿಂಮೂತ್ರ ಅನ್ನಕೋಶ ಇಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಬುದಕ್ಕ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕಪ್ಸಲುಗಳ

ಕೆಲವು ಸೀಸಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ

ವಿಳಂಬ ಮಾಡಿದರೆ ದೊರೆಯುವುದು ಕಷ್ಟ



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್ ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರ್‍ರ್ಯೊಡ್ – ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹೆವನನ್" ಎಂಬ ಹೆಮೊರ್‍ರ್ಯೊಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. **ಸೀಸೆ 1ಕ್ಕೆ ರೂ 1-4 0 ವಿ ಪಿ ಬೇರೆ**

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು



ಮಲಬದ್ಧತೆಯ ವ್ಯವಹಿತ್ಸವಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಪ್ರತಿ ರಾತ್ರಿ ಮಲಗುವಾಗ 3–4ರಂತೆ ಸೇವಿಸಿದರೆ ಸುವಿರೇಚನೆಯಾಗುವದು ಈ ಗುಳಿಗೆಗಳು ಕರುಳ ಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ, **ಸೀಸೆ 1ಕ್ಕೆ ರೂ 1-0-0 ವಿ. ಪಿ ಬೇರೆ**

ಹಿಂದುಸ್ಥಾನದ ಪ್ರಮುಖ ಏಜಂಟರು

The Eclipse Distributing Agency,

Dahanu Road, B. B & C I Ry BOMBAY PRESIDENCY.

ದಯವಿಟ್ಟು ಪತ್ರ ಬರೆಯುವಾಗ ನವಯುಗದ ಹೆಸರಿನಲ್ಲಿಯೇ ಬರೆಯಿರಿ

ESTD. 1921 ಸ್ಥಾಪನೆ

FOUNDER,
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12 0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨೮

ಉಡುಪಿ, ಗುರುವಾರ, ೨೧—೩—೧೯೪೦.
UDIPI, THURSDAY, 21-3-1940.

VOL. 19
No. 28

ಮುಂದಿನ ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಬರುವ ವರ್ಷ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಪುನಃ ಘಟಿತವಾಗಲಿದೆಯೆಂದು ತಿಳಿದು ಬರುತ್ತದೆ ಪಂಡಿತ ನೆಹರುಗಳು ಅಗ್ರಭಾಗ ವಹಿಸಿ ಜನರಲ್ ಸೆಕ್ರೆಟರಿ ಅಥವಾ ಪ್ರಚಾರ ಕಾರ್ಯದರ್ಶಿತ್ವವನ್ನು ತೆಗೆದುಕೊಳ್ಳಬಹುದು. ಆಚಾರ್ಯ ಕೃಪಲಾನಿಯವರು ಇನ್ನೊಬ್ಬ ಕಾರ್ಯದರ್ಶಿಯಾಗಲಿರುವರು. ಸೋಸಿಯಲಿಸ್ಟರು ಈಗ ಕಾಂಗ್ರೆಸ್ ಹೈಕಮಾಂಡಿನೊಂದಿಗೆ ಸಹಕರಿಸುತ್ತಿರುವುದರಿಂದ ಅವರ ಮುಖಂಡರಲ್ಲಿ ಒಬ್ಬರಿಬ್ಬರು ವರ್ಕಿಂಗ್ ಕಮಿಟಿ ಮೆಂಬರರಾಗಿ ಆರಿಸಲ್ಪಡಬಹುದು. ಡಾಕ್ಟರ್ ಕಿಚಲು ಅಥವಾ ಮಿ. ರಾಫಿ ಅಹಮ್ಮದ್ ಕಿದ್ವಾಯಿಯವರು ಮೂರನೇ ಮುಸಲ್ಮಾನ ಮೆಂಬರರಾಗಿ ವರ್ಕಿಂಗ್ ಕಮಿಟಿಗೆ ಸೇರಿಸಲ್ಪಡಬಹುದು.

ಚೀನೀ ಜಪಾನ ಯುದ್ಧವು

ಬೇಗನೆ ಕೊನೆ ಹೊಂದುವ ಸಂಭವ ತೋರುವುದಿಲ್ಲ. ಜಪಾನು ತಾನು ಗೆದ್ದ ಚೀನದ ಪ್ರದೇಶವನ್ನೆಲ್ಲಾ ತನ್ನ ಕೈಗೊಂಬೆಯಾದ ಕೇಂದ್ರ ಸರಕಾರದ ಅಧೀನಗೊಳಿಸುವುದಾದರೂ ಮಾರ್ಶಲ್ ಚ್ಯಾಂಗರ ರಾಷ್ಟ್ರೀಯ ಸರಕಾರವನ್ನು ನಾಶಗೊಳಿಸಲು ಸರ್ವ ವಿಧದಿಂದಲೂ ಪ್ರಯತ್ನಿಸುವುದು. ಇನ್ನೂ 3 ವರ್ಷಗಳ ವರೆಗೆ ಯುದ್ಧವು ಕೊನೆಗೊಳ್ಳುವ ಸಂಭವ ತೋರುವುದಿಲ್ಲೆಂದು ರಾಷ್ಟ್ರೀಯ ಸರಕಾರದ ಉಚ್ಚ ಅಧಿಕಾರಿಯೋರ್ವರ ಅಭಿಮತ. ಚೀನೀ ರಾಷ್ಟ್ರೀಯ ಸರಕಾರವು ಪ್ರಚಂಡ ಸೇನೆಯನ್ನು ಸಿದ್ಧಪಡಿಸುತ್ತಿರುವುದು. ಆದುದರಿಂದ ಬೇಗನೆ ಜಪಾನರೊಡನೆ ದೊಡ್ಡ ಯುದ್ಧ ಹೂಡಲು ಹಾತೊರೆಯುತ್ತಿರುವುದಿಲ್ಲ. ಜಪಾನರು ಇನ್ನು ಮುಂದೆ ಅವರ ಹಸ್ತಕರಾದ ವಾಂಗ್‌ಚಿಂಗ್ ವೈಯವರಿಗೆ ಮಾತ್ರ ಸಹಾಯ ಮಾಡುವರೇ ಹೊರತು ತಾವಾಗಿ ಧಾಳಿ ನಡಿಸಲಾರರೆಂದು ನಂಬಲಾಗಿದೆ

ಮದ್ರಾಸಿನ ಹೊಸ ಗವರ್ನರರು

ಮದ್ರಾಸಿನ ಹೊಸ ಗವರ್ನರರಾದ ಕೆಪ್ಟನ್ ಸರ್ ಆರ್ಥರ್ ಹೋಪರು ಇದೇ ತಾ. 12ರಲ್ಲು ಮದ್ರಾಸಿಗೆ ಬಂದು ಅಧಿಕಾರ ವಹಿಸಿರುವರು. ಹೊಸ ಗವರ್ನರರು ತಮ್ಮ ಪತ್ನಿ ಮತ್ತು 4 ಮಂದಿ ಹೆಮ್ಮಕ್ಕಳೊಂದಿಗೆ ಮದ್ರಾಸಿಗೆ ಬಂದಾಗ ಪಟ್ಟಣಿಗರು ಅವರಿಗೆ ಉತ್ಸಾಹಪರ ಸ್ವಾಗತವಿತ್ತರು.

ಸರ್ ಮೈಕಲ್ ಒಡ್ವಯರರ ಕೊಲೆ

ಪಂಜಾಬು ಅತ್ಯಾಚಾರದ ಸಂದರ್ಭದಲ್ಲಿ ಗವರ್ನರರಾಗಿದ್ದ ಸರ್ ಮೈಕಲ್ ಒಡ್ವಾಯರರನ್ನು ಇದೇ ತಾ 13ರಲ್ಲು ಮಹಮ್ಮದ್ ಸಿಂಘ್ ಆಜದ' ಎಂಬವನೊಬ್ಬನು ಲಂಡನಿನಲ್ಲಿ ಕೆಕ್ಸ್‌ಸ್ಟನ್ ಹೋಲಿನಲ್ಲಿ ನಡೆದ ಈಸ್ಟ್ ಇಂಡಿಯಾ ಎಸೋಸಿಯೇಶನಿನ ಸಭೆಯಲ್ಲೇ ಗುಂಡು ಹೊಡೆದು ಕೊಂದಿರುವನು. ಈ ಕೊಲೆಗಾರನ ತಮ್ಮನು ಪಂಜಾಬಿನ ಅತ್ಯಾಚಾರದ ಸಂದರ್ಭದಲ್ಲಿ ಕೊಲೆಮಾಡಲ್ಪಟ್ಟಿದ್ದನೆಂದು ತಿಳಿದು ಬಂದಿದೆ ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರಿಗೂ ಆಜದನು ಗುಂಡು ಹೊಡೆದಿರುವನಾದರೂ ದೊಡ್ಡ ಪೆಟ್ಟೇನೂ ಆಗಿರುವುದಿಲ್ಲ ಅವರು ಗುಂಡು ತಾಗಿ ಒಡನೆಯೇ ಕೆಳಗೆ ಬಿದ್ದು ಬಿಟ್ಟರು. ಅವರೀಗ ಚೆನ್ನಾಗಿದ್ದಾರೆ. ಪಂಜಾಬಿನ ಮಾಜಿ ಲೆಪ್ಟನೆಂಟ್ ಗವರ್ನರರಾದ ಸರ್. ಲೂಯಿಸ್ ಡೇನರಿಗೂ ಗುಂಡು ಹೊಡೆಯಲ್ಪಟ್ಟು ಅವರ ಬಲ ತೋಳು ಮುರಿದು ಹೋಗಿರುವುದು ಬೊಂಬಾಯಿಯ ಮಾಜಿ ಗವರ್ನರರಾದ ಲೋರ್ಡ್ ಲೆಮಿಂಗ್ಟನರಿಗೂ ಸ್ವಲ್ಪ ಪೆಟ್ಟಾಗಿರುವುದು ಲೋರ್ಡ್ ಜೆಟ್ಲೆಂಡರು ಆ ಸಭೆಯ ಅಧ್ಯಕ್ಷರಿದ್ದರು. ಆಜದನು ಎಡೆಬಿಡದೆ 4 ಬಾರಿ ಗುಂಡಿಸೆದು ಸಭಿಕರ ನಡುವೆ ಧುಮುಕಿ 'ದಾರಿ ಬಿಡಿ, ದಾರಿ ಬಿಡಿ' ಎನ್ನುತ್ತಾ ಹೊರ ಹೋಗುವುದರಲ್ಲಿರಲು ಸಭಿಕರಲ್ಲಿ ಕೆಲವರು ಅವನನ್ನು ಹಿಡಿದು ಪೋಲೀಸರ ವಶಕ್ಕೊಪ್ಪಿಸಿದರು. ಈ ಕೊಲೆಗಾರನ ಜೀವನದ ವಿವರಗಳೇನೂ ತಿಳಿದಿರುವುದಿಲ್ಲ ಆತನು 6 ತಿಂಗಳ ಮೊದಲು ಲಂಡನಿಗೆ ಬಂದಿದ್ದನೆಂದು ನಂಬಲಾಗಿದೆ. ಇವನು ಪತ್ರಿಕೆಯ ರಿಪೋರ್ಟರನಾಗಿ ಸಭೆಗೆ ಪ್ರವೇಶಿಸಿದ್ದನು. 31 ವರ್ಷದ ನಡು ವಯಸ್ಸಿನವನಿದ್ದು ದಷ್ಟ ಪುಷ್ಟನಾಗಿರುವನು ಬೋಡ್‌ಸ್ಟ್ರೀಟಿನ ಮೆಜಿಸ್ಟ್ರೇಟರ ಬಳಿ ಆತನ ವಿಚಾರಣೆ ನಡೆದಾಗಲೂ ಪೋಲೀಸರೊಂದಿಗೆ ನಗುತ್ತಾ ಮಾತಾಡುತ್ತಾ ಹರ್ಷಚಿತ್ತನಾಗಿರುವನು. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಈತನ ಹೆಸರನ್ನು ಉದ್ದಾಮ ಹಿಂಸಕನೆಂದು ಕೊಡಲಾಗಿದೆ. ಈ ಅತ್ಯಾಚಾರವನ್ನು ಮಹಾತ್ಮಾ ಗಾಂಧಿಯವರೇ ಮೊದಲಾದ ಹಿಂದೀ ಮುಖಂಡರೂ, ಲಂಡನಿನಲ್ಲಿನ ಹಿಂದೀಯರೂ, ಸಂಪೂರ್ಣವಾಗಿ ನಿಷೇಧಿಸಿರುವರು.

ಸಮಾಚಾರ ಸಂಗ್ರಹ

ಫಿನ್ನಿಶ್ ಯುದ್ಧ ನಿಂತಿತು.

ಫಿನ್ಲೆಂಡ್ ಮತ್ತು ರಶ್ಯಗಳೊಳಗಾಗಿರುವ ಸಂಧಿಯನ್ನು ಫಿನ್ನಿಶ್ ಪಾರ್ಲಿಮೆಂಟಿನವರು ಪ್ರಚಂಡ ಬಹುಮತದಿಂದ ಮಂಜೂರುಮಾಡಿ ಇದೇ ತಾ. 13ರಲ್ಲು ಫೀಲ್ಡ್ ಮಾರ್ಶಲ್ ಮೆನ್ನರ್‌ಹೈಮರು ಹೋರಾಟವನ್ನು ನಿಲ್ಲಿಸಿರುವರು. ಒಪ್ಪಂದದ ಮೇರೆಗೆ ಫಿನ್ಲೆಂಡ್ 1,60,000 ಚದರ ಮೈಲು ಪ್ರದೇಶವನ್ನು ರಶ್ಯಕ್ಕೆ ಬಿಟ್ಟುಕೊಡಬೇಕಾಗಿದೆ ಸುಮಾರು ಅರ್ಧ ಮಿಲ್ಯ ಫಿನ್ನರು ಸ್ಥಾನಾಂತರ ಹೊಂದಬೇಕಾಗಿರುವುದು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಫಿನ್ಲೆಂಡಿಗೆ ಸೇನಾ ಸಹಾಯ ಕೊಡಲು ಸಿದ್ಧವಿದ್ದವು 50,000 ಫ್ರೆಂಚ್ ಸೈನಿಕರು ಫಿನ್ಲೆಂಡ್ ಕೇಳಿಕೊಂಡೊಡನೆಯೇ ಹೊರಡಲು ತಯಾರಿದ್ದರು ಆದರೆ ಫಿನ್ಲೆಂಡು ಕಡೆಗೆ ಸಹಾಯಕ್ಕಾಗಿ ವಿನಂತಿ ಮಾಡಿಕೊಂಡುದೇ ಇಲ್ಲ ಯಾಕೆಂದರೆ ಅದರಿಂದ ಅನಿಷ್ಟವೇ ಹೆಚ್ಚಾಗುತ್ತಿತ್ತು. ಬ್ರಿಟಿಷ್ ಮತ್ತು ಫ್ರೆಂಚ್ ಸೇನಾ ಸಹಾಯವು ಹೆಚ್ಚಾಗಿ ಸ್ವೀಡನ್ ಮತ್ತು ನೋರ್ವೆಗಳ ಮೂಲಕ ಹೋಗಬೇಕು. ಆದರೆ ಜರ್ಮನಿಯ ಬೆದರಿಕೆಯಿಂದಾಗಿ ಆ ರಾಷ್ಟ್ರಗಳು ತಮ್ಮ ಮೂಲಕ ಫಿನ್ಲೆಂಡಿಗೆ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಗಳನ್ನು ಹೋಗಬಿಡಲು ಸಿದ್ಧವಿರಲಿಲ್ಲ. ಬಿಡುತ್ತಿದ್ದರೆ ಪಶ್ಚಿಮ ರಣರಂಗದ ಯುದ್ಧವು ಸ್ಕ್ಯಾಂಡಿನೇವಿಯಕ್ಕೂ ಹಬ್ಬುವಂತಾಗುತ್ತಿತ್ತು ಆ ಪ್ರದೇಶದ ಚಿಕ್ಕರಾಷ್ಟ್ರಗಳೆಲ್ಲಾ ಧ್ವಂಸವಾಗುತ್ತಿದ್ದವು. ಆದುದರಿಂದಲೇ ಮಿತ್ರರಾಷ್ಟ್ರಗಳು ಕೂಡಲೇ ಸೇನಾ ಸಹಾಯವೀಯಲು ಸಿದ್ಧವಿದ್ದರೂ ಫಿನ್ಲೆಂಡು ಸ್ವೀಡನ್ ಮತ್ತು ನೋರ್ವೆಗಳ ಸಲಹೆ ಮೇರೆಗೆ ಸಂಧಿಮಾಡಿ ಕೊಂಡಿತು. ಫಿನ್ನರಿಗೆ ಮುಂದೆ ದೀರ್ಘಕಾಲ ರಶ್ಯನರನ್ನು ವಿರೋಧಿಸಲು ಸಾಧ್ಯವಾಗುತ್ತಿದ್ದಿಲ್ಲ. ಆರಂಭದಲ್ಲೇ ಮಿತ್ರರಾಷ್ಟ್ರಗಳು ಸೇನಾ ಸಹಾಯ ವೀಯುತ್ತಿದ್ದರೆ ಪರಿಸ್ಥಿತಿಯು ಬೇರೆ ಸ್ವರೂಪ ತಾಳುತ್ತಿತ್ತು. ಈಗ ವಿಳಂಬವಾದುದರಿಂದ ಪ್ರಯೋಜನವಾಗಲಿಲ್ಲ. ಸಂಧಿಯಿಂದ ಫಿನ್ಲೆಂಡು ರಶ್ಯದೊಂದಿಗೆ ಯಾವಾಗಲೂ ರಾಜಿಯಿಂದಿರುವಂತಾಗಿರುವುದಾದರೂ ಅದರ ರಾಜಕೀಯ ಸ್ವಾತಂತ್ರ್ಯಕ್ಕೇನೂ ಹಾನಿಯುಂಟಾಗಿರುವುದಿಲ್ಲ ಫಿನ್ನರು ಇನ್ನು ಮುಂದೆ ತಮ್ಮ ರಾಷ್ಟ್ರವನ್ನು ಪುನರ್ಘಟಿಸುವ ಕುರಿತು ಗಮನ ಕೊಡಬೇಕೆಂದು ಫಿನ್ಲೆಂಡಿನ ಪ್ರೆಸಿಡೆಂಟ್ ಕಲ್ಲಿಯೋಸರು ವಿನಂತಿಮಾಡಿಕೊಂಡಿರುವರು. ಫಿನ್ನರು ತಮ್ಮ ಧೈರ್ಯ ಮತ್ತು ಸ್ಥೈರ್ಯದಿಂದ ಇಡೀ ಲೋಕದ ಮೆಚ್ಚಿಗೆ ಪಡೆದಿರುವರು. ಫಿನ್ಲೆಂಡಿನ ಯುದ್ಧದಲ್ಲಿ 3,00,000 ಮಂದಿ ರಶ್ಯನರು ಕೊಲ್ಲಲ್ಪಟ್ಟು ಅವರ 1000 ಟಾಂಕಿಗಳು ಮತ್ತು 700 ವಿಮಾನಗಳು ನಾಶಮಾಡಲ್ಪಟ್ಟಿರುವವೆಂದು ಫಿನ್ನರ ಹೇಳಿಕೆ.

'ಮಹಾತ್ಮ ಗಾಂಧಿ' ಚಲಚಿತ್ರ

ಲೋಕದ 21 ಭಾಷೆಗಳಲ್ಲಿ ಅದರ ಪ್ರದರ್ಶನ

ಗಾಂಧಿಜಿಯವರ ಜೀವನ ಚರಿತ್ರೆಯನ್ನು ಸಂಪೂರ್ಣವಾಗಿ ತೋರಿಸುವ 'ಮಹಾತ್ಮ ಗಾಂಧಿ' ಎಂಬ ಹೆಸರಿನ ಪ್ರಥಮ ಚಲಚಿತ್ರವು ಸದ್ಯದಲ್ಲೇ ಹಿಂದೂದೇಶದಲ್ಲೂ ಹೊರಗೂ ಪ್ರದರ್ಶಿಸಲ್ಪಡಲಿರುವುದು 'ಡೊಕ್ಯುಮೆಂಟರಿ ಫಿಲ್ಮ್ ಲಿಮಿಟೆಡ್' ಎಂಬೀ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ಎ. ಕೆ. ಚೆಟ್ಟಿಯಾರರು ಈ ಚಲಚಿತ್ರದ ನಿಮಿತ್ತ ದಕ್ಷಿಣ ಆಫ್ರಿಕ ಮತ್ತು ಯುರೋಪಿನಲ್ಲಿ ಎರಡು ವರ್ಷ ತಿರುಗಾಡಿ ಗಾಂಧಿಜಿಯವರ ಚಲನವಲನಗಳ ಸಂಬಂಧವಾದ ನ್ಯೂಸ್ ರೀಲ್ಸ್‌ಗಳನ್ನು ಸಂಗ್ರಹಿಸಿರುವರು, ಅವುಗಳಲ್ಲಿ ಹಲವಕ್ಕೆ ಹೆಚ್ಚಿನ ಬೆಲೆಕೊಟ್ಟಿರುವರು. ಅನಂತರ ಶ್ರೀ ಚೆಟ್ಟಿಯಾರರು ಸೆಗಾಂವಿನಲ್ಲಿ ವಾಸಿಸಿ ಗಾಂಧಿಜಿಯವರ ನಿತ್ಯಜೀವನದ ಚಲಚಿತ್ರ ತೆಗೆದಿರುವರು. ಕಳೆದ 15 ವರ್ಷಗಳ ಕಾಂಗ್ರೆಸ್ ಅಧಿವೇಶನಗಳು, ದಂಡಿ ಮಾರ್ಚ್, ಸ್ವಯಂಸೇವಕರ ಪ್ರದರ್ಶನ ಮತ್ತು ಗ್ರಾಮ ಕೈಗಾರಿಕೆಗಳ ದೃಶ್ಯಗಳು ಈ ಚಲಚಿತ್ರದಲ್ಲಿ ತೋರಿಸಲ್ಪಡುವವು. ಇದು ಹೊರತು ಶ್ರೀ ಗೋಖಲೆಯವರ ದಕ್ಷಿಣ ಆಫ್ರಿಕದ ಜೊಹನ್ಸ್‌ಬರ್ಗ ಪಟ್ಟಣ ಸಂದರ್ಶನ, ಲೋಕಮಾನ್ಯ ತಿಲಕರ ಶವಸಂಸ್ಕಾರ, ರೌಂಡ್‌ಟೇಬಲ್ ಪರಿಷತ್ತಿಗೆ ಗಾಂಧಿ

(೬ನೇ ಪುಟಕ್ಕೆ ಮುಂದುವರಿಯುವುದು.)

NOTICE

The Services of Mr K. Jagannatha Shetty, Junior Inspector, under Mangalore Branch, have been terminated since 12-3-'40 Our Policy Holders are requested not to make any payments of premiums to the above gentleman, who has never been authorised to collect on the Company's behalf, and the Company will not be responsible for any such payments made to him.

For: THE TROPICAL INSURANCE CO., LTD.,
K. S. RAMAMURTHI, M. A., *Secretary.*

ಜಾಗ್ರತಗೊಂಡಿರುವ ಸ್ತ್ರೀಯರು !

ಅಮೇರಿಕದ ಸ್ತ್ರೀಯರೂ ಮತ್ತು ಸಮಾಜವೂ

ಅಲ್ಲಿಯ ಸ್ತ್ರೀ ಪ್ರಧಾನ ಸಂಸ್ಕೃತಿ

ಮಧ್ಯಕಾಲದ ಪರಾಧೀನತೆಯ ವಾತಾವರಣವಿಲ್ಲದಿರುವ, ಮತ್ತು ಪುರುಷ ಜಾತಿಯಿಂದ ತೊಂದರೆಗೀಡಾಗುವ, ಭಾರತದ ಸ್ತ್ರೀಯರಿಗೆ ಅಮೇರಿಕದ ಸ್ತ್ರೀಯರ ಸಾಮಾಜಿಕ ಸ್ಥಿತಿಯು ಅನೇಕ ವಿಚಾರಗಳಲ್ಲಿ ಆದರ್ಶವೂ ಅನುಕರಣೀಯವೂ ಆಗಿದೆ. ಸಾಮಾಜಿಕ ಕ್ಷೇತ್ರಗಳಲ್ಲಿ ಕ್ರಮವಾಗಿ ಉನ್ನತಿಯನ್ನೈದುತ್ತಾ ಅಮೇರಿಕದ ಸ್ತ್ರೀಯರ, ಪ್ರಗತಿಯ ಚರಮ-ಸೀಮೆಯನ್ನು ಮುಟ್ಟಿರುವರು. ಇಂಗ್ಲೆಂಡಿನ ಸ್ತ್ರೀಯರೂ ಸಹ ಇವರಿಗಿಂತ ಹಿಂದೆ ಬಿದ್ದಿರುವರು. ಅಮೇರಿಕದ ಸಮಾಜದಲ್ಲಿ ಅಲ್ಲಿನ ಸ್ತ್ರೀಯರಿಗೆ ಪ್ರಮುಖ ಸ್ಥಾನವುಂಟಾಗಿದೆ. ಅವರ ಅಧಿಕಾರದಲ್ಲಿ ದೇಶದ ಅರ್ಧಕ್ಕಿಂತ ಹೆಚ್ಚಾದ ಸಂಪತ್ತು ಇದೆ. ಅವರು ಸೇ 40ರಷ್ಟು ಭೂಸಂಪತ್ತಿಗೆ ಯಜಮಾನಿಯರು. ಇದೇ ರೀತಿ ಸಾರ್ವಜನಿಕವಾಗಿ ಉಪಯೋಗಿಯಾದ ವಸ್ತುಗಳಲ್ಲಿ ಸಹ ಸೇ 40ರ ಮೇಲೆ ಅವರ ಅಧಿಕಾರವಿದೆ ರೈಲು, ರೋಡ್", ಕಾರ್ಪೋರೇಶನ್ನಿನ ಸ್ಟಾಕುಗಳ ಸೇ 48 ಭಾಗವು ಅವರ ಕೈಯಲ್ಲಿವೆ. ಅಲ್ಲದೆ ಪತಿಗಳ ಮರಣದ ನಂತರ ಸೇ. 70ರಷ್ಟು ಸ್ತ್ರೀಯರು ಅವುಗಳ ಉತ್ತರಾಧಿಕಾರಿಣಿಯರಾಗುವರು. ಅಲ್ಲಿ ಮಾರಾಟವಾಗುವ ಮೋಟಾರುಗಳ ಪೈಕಿ ಅರ್ಧಕ್ಕಿಂತ ಅಧಿಕವಾಗಿ ಸ್ತ್ರೀಯರೇ ಕೊಳ್ಳುವರು. ಸರಕಾರಿ ಕೆಲಸಗಳಲ್ಲಿ ಸೇ. 25ನ್ನೂ ಅವರು ತಮ್ಮದನ್ನಾಗಿ ಮಾಡಿಕೊಂಡಿರುವರು. ಈ ಅಂಕೆಗಳನ್ನು ನೋಡಿ ಭಾರತೀಯರ ಪುರುಷರೂ ಸಹ ಹೆಮ್ಮೆ ಪಡಬೇಕು.

ಅಮೇರಿಕದಲ್ಲಿ ಸ್ತ್ರೀಯರ ಆರ್ಥಿಕ ಉನ್ನತಿಯ ಮುಖ್ಯ ಕಾರಣವು ಅಲ್ಲಿನ ಪುರುಷರ ಅಧಿಕ ಸಂಖ್ಯೆಯಲ್ಲಿರುವುದೇ. ಇದರಿಂದ ಅವರು ವಿವಾಹವಾಗಲು, ಇಂಗ್ಲೆಂಡ್ ಫ್ರಾನ್ಸಿನ ಸ್ತ್ರೀಯರಿಗಿಂತ ಹೆಚ್ಚು ಅನುಕೂಲವುಂಟು. ಹುಡುಗಿಯ ಮನಸ್ಸಿನಲ್ಲಿ ವಿವಾಹವಾಗಬೇಕೆಂಬ ಮನಸ್ಸುಂಟಾದರೆ, ಆಕೆಗೆ ಪತಿಯನ್ನರಸುವುದು ಕಠಿಣವಾಗುವುದಿಲ್ಲ. ಸಂಪನ್ನ ಜೀವನಕ್ಕೆ ವಿವಾಹವು ಒಂದು ಸಾಧನೆಯಾಗಿದೆ. ಅಲ್ಲಿ ಪುರುಷರು ಸಂಪಾದಿಸುವರು, ಸ್ತ್ರೀಯರು ಮೋಜಿನಿಂದ ತಿನ್ನುವರು. ಇಂಗ್ಲೆಂಡಿನ ಸಂಸ್ಕೃತಿಯು ಪುರುಷಪ್ರಧಾನವಾಗಿದ್ದರೆ ಅಮೇರಿಕದ್ದು ಸ್ತ್ರೀಪ್ರಧಾನವಾಗಿದೆ. ಎಲ್ಲೆಲ್ಲಿಯೂ ಅವರ ಪ್ರಭಾವವೇ ಹೆಚ್ಚು, ನಾಟಕ ಶಾಲೆಗಳು, ಚಿತ್ರಗೃಹಗಳು, ಸಭೆ ಸಂಸ್ಥೆಗಳು ಇವುಗಳಲ್ಲಿ ಸ್ತ್ರೀಯರೇ ಪ್ರಧಾನರಾಗಿರುವರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಾಸಂಸ್ಥೆಗಳಲ್ಲಿ ಸ್ತ್ರೀ ಅಧ್ಯಾಪಕಿಯರೇ ಬಹಳವಾಗಿರುವರು. 16-17 ವರ್ಷಗಳ ವರೆಗೆ ಮಕ್ಕಳ ಪೋಷಣೆ ಮತ್ತು ಶಿಕ್ಷಣವು ಪ್ರಾಯಶಃ ಕೇವಲ ಸ್ತ್ರೀಯರ ಅಧಿಕಾರದಲ್ಲೇ ಇರುವುವು. ಆದುದರಿಂದ ಹುಡುಗರು ಅವರನ್ನು ಕಂಡರೆ ಧಿಕ್ಕರಿಸುವ ಸ್ವಭಾವದವರಾಗಿರುವರು. ಇದೇನೂ ಶುಭ ಚಿಹ್ನೆಯಲ್ಲ ಆದರೆ ಇದಕ್ಕೆ ಬೇರೆ ಚಿಕಿತ್ಸೆಯೂ ಇಲ್ಲ. ಏಕೆಂದರೆ ಬಹಳ ಕಡಿಮೆ ವೇತನ ದೊರೆಯುವುದರಿಂದ, ಉಪಾಧ್ಯಾಯರ ವೃತ್ತಿಗೆ ಪುರುಷರು ಬಹಳ ಕಡಿಮೆ ಸಂಖ್ಯೆಯಲ್ಲಿ ಆಕರ್ಷಿತರಾಗುವರು. ಸ್ತ್ರೀಯರಾದರೂ ಈ ವೃತ್ತಿಯ ಶ್ರೇಷ್ಠತೆಯಿಂದ ಅದನ್ನು ಸ್ವೀಕರಿಸುತ್ತಿಲ್ಲ ಅವರು ವಿದ್ಯಾರ್ಥಿ ಜೀವನ ಮತ್ತು ವೈವಾಹಿಕ ಜೀವನಗಳ ಮಧ್ಯದ ಕಾಲವನ್ನು ಕಳೆಯುವುದಕ್ಕೆ ಮಾತ್ರ ಇದನ್ನು ಒಂದು ಒಳ್ಳೆಯ ಸಾಧನೆಯೆಂದು ತಿಳಿದಿರುವರು.

ಅಮೇರಿಕದಲ್ಲಿ ಶಿಕ್ಷಣ ಮತ್ತು ಸಂಸ್ಕೃತಿಯ ಮೇಲೆ ಸ್ತ್ರೀಯರ ಪ್ರಭಾವವಿರುವುದಕ್ಕೆ ಎರಡು ಕಾರಣಗಳಿವೆ. ಒಂದನೆಯದಾಗಿ ಮೊದಲೇ ಹೇಳಿದಂತೆ ವೇತನ ಕಡಿಮೆಯಾಗಿರುವುದರಿಂದ ಪುರುಷರು ಶಿಕ್ಷಣ ವಿಭಾಗಕ್ಕೆ ಬರದೆ ಇರುವುದು, ಎರಡನೆಯದಾಗಿ ಪತಿಗಳಿಗೆ ಕಡಿಮೆ ಅವಕಾಶವಿರುವುದು. ಅಮೇರಿಕದಲ್ಲಿ ಜನನದ ಸರಾಸರಿಯು ಕಡಿಮೆಯಾಗುತ್ತಿರುವುದರಿಂದ, ಪ್ರಸವ ಸಂಬಂಧಿಯಾದ ಉಪದ್ರವಗಳ ಭಯವು ಬಹಳ ಕಡಿಮೆ, ಅವರ ಜೀವನ ನಿಶ್ಚಿಂತವಾದುದಾಗಿದೆ. ಆದುದರಿಂದ ಸ್ತ್ರೀಯರು ಬಹಳ ಕಾಲ ಜೀವಿಸಿದ್ದು, ಕೌಟುಂಬಿಕ ಸಂಪತ್ತಿನ ಉತ್ತರಾಧಿಕಾರಿಣಿಯರಾಗುವರು.

ಆದರೆ ಅಲ್ಲಿ ಸ್ತ್ರೀಯರಿಗೆ ಒಂದು ವಿಧದ ತೊಂದರೆಯೂ ಇದೆ. ಅಮೇರಿಕದ ಪತಿಯು ತನ್ನ ಪತ್ನಿಗೆ 'ಸಮಯ ಮತ್ತು ಗಮನ'ಗಳ ವಿನಹ ಸಮಸ್ತವನ್ನೂ ಕೊಡುವನು. ಅಲ್ಲಿನ ಸ್ತ್ರೀಯರು ತಮ್ಮ ಪತಿಗಳ ವೃತ್ತಿಗಳ ವಿಷಯದಲ್ಲಿ ಏನನ್ನೂ ಅರಿಯರು ಆದುದರಿಂದ ಅಲ್ಲಿನ ಜೀವನದಲ್ಲಿ ಕುಟುಂಬದ ಸಾಮಂಜಸ್ಯವಾಗಲಿ, ಮತ್ತು ಗೃಹಜೀವನದ ಅನುರಾಗವಾಗಲಿ ಇರುವುದಿಲ್ಲ. ಮನೋ ವಿಜ್ಞಾನಿಗಳ ಮತಾನುಸಾರವಾಗಿ ಜಗತ್ತಿನ ಸ್ತ್ರೀಯರಲ್ಲೆಲ್ಲಾ ಅಮೇರಿಕದ ಸ್ತ್ರೀಯರಲ್ಲೇ ಹೆಚ್ಚು ಅಸಂತೋಷವು ಇರುವುದಕ್ಕೆ ಪ್ರಾಯಶಃ ಇದೇ ಕಾರಣವಿರಬಹುದು.

110 ಲಕ್ಷ ಸ್ತ್ರೀಯರು, ಅಥವಾ ಅಲ್ಲಿನ ಸ್ತ್ರೀಯರ ¼ ಭಾಗದವರು ಕೂಲಿ ಮಾಡಿ ಜೀವಿಸುವರು. ಕೂಲಿಗಾರ ಸ್ತ್ರೀಯರು ಎಲ್ಲಕ್ಕಿಂತ ಹೆಚ್ಚಾಗಿ, ಇಂದಿಗೂ ಗೃಹಕಾರ್ಯಗಳಲ್ಲಿ ನೌಕರಿಮಾಡುವರು. ನಂತರ ಅಧ್ಯಾಪಿಕೆಯರ ಸಂಖ್ಯೆ ಅಮೇರಿಕದ ಸ್ತ್ರೀಯರ ಅಧಿಕಾರವು ಕೆಳಗೆ ಕಂಡ ಕೈಗಾರಿಕೆಗಳ ಮೇಲಿದೆ. ನೂಲುವುದು ನೇಯುವುದು, ಸಕ್ಕರೆಯನ್ನು ಮಾಡುವುದು. ಸಿಗರೇಟನ್ನು ಮಾಡುವುದು.

ಆದರೆ ಶೃಂಗಾರ ಅಲಂಕಾರಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ಪುರುಷಸಂಖ್ಯೆಯೇ ಹೆಚ್ಚಾಗಿದೆ. ಕಾಫಿಕ್ಲಬ್‌ಗಳು ಮತ್ತು ಹೋಟೆಲುಗಳಲ್ಲಿ ಆ ಪುರುಷ ಅಡಿಗೆಯವರಿಗೇ ಹೆಚ್ಚು ವೇತನ. ಸ್ತ್ರೀಯರು "ಸ್ಟೆನೋಗ್ರಾಫರ್" 'ಟೆಲಿಫೋನ್ ಆಪರೇಟರ್' ಮೊದಲಾದ ಕೆಲಸಗಳನ್ನು ಮಾಡುವರು. ಏಕೆಂದರೆ ಅನುಭವದಿಂದ ಅವರು ಈ ಕಾರ್ಯಕ್ಕೆ ಹೆಚ್ಚು ಉಪಯುಕ್ತರೆಂದು ಸಿದ್ಧವಾಗಿದೆ.

ಅಮೇರಿಕದ ಸ್ತ್ರೀಯರ ಸರಾಸರಿ ಕೂಲಿಯು (11 ಡಾಲರ್) ಪ್ರತಿವಾರ 32 ರೂ. ಇದೆ. ಅಲ್ಲಿನ ಜೀವನದ ಮಟ್ಟವನ್ನು ನೋಡಿದರೆ, ಈ ಮೊಬಲಗು ಬಹಳ ತುಚ್ಛವಾದುದು. ಏನು ಮಾಡುವುದು. ಈ ಹೆಂಗಸರು ವಿಧಿ ಇಲ್ಲದೆ ಇದನ್ನು ಮಾಡುವರು. ಕೆಲವು ಉದ್ಯೋಗಗಳಲ್ಲಿ ಬಹಳ ಕಡಿಮೆ ಕೂಲಿ ಕೊಟ್ಟು, ಬಹಳ ಹೆಚ್ಚು ಕೆಲಸ ಮಾಡಿಸುವರು. ಕೆಲವು ಉದ್ಯೋಗಗಳಲ್ಲಂತೂ ಅವರ ಸ್ಥಿತಿಯು ತೀರ ಭಯಾನಕವಾಗಿರುವುದು. ಒಗೆಯುವುದರಲ್ಲಿ ಅವರಿಗೆ ಹೆಸರಿಗೆ ಮಾತ್ರ ಕೂಲಿಕೊಟ್ಟು ಅತ್ಯಂತ ನಿರ್ದಯತೆಯಿಂದ ಕೆಲಸ ತೆಗೆದುಕೊಳ್ಳುವರು. ವ್ಯಾಪಾರಿಕ ಕ್ಷೇತ್ರಗಳಲ್ಲಿ ಸ್ತ್ರೀಯರಿಗೆ ಸಫಲತೆಯುಂಟಾಗಿಲ್ಲ.

ಅಮೇರಿಕದ ಸ್ತ್ರೀ ಆಂದೋಳನದಲ್ಲಿ ಬಹಳ ಬದಲಾವಣೆಯುಂಟಾಗುತ್ತಿದೆ. ಮೊದಲು ಅವರು ಪುರುಷರ ಮೂಲಕವಾಗಿ ಸಂಘಟಿತರಾಗಿ ಸಮಾಜದಲ್ಲಿ ಸ್ಥಾನಪಡೆಯಲೆತ್ನಿಸುತ್ತಿದ್ದರು. ಆದರೆ ಈಗ ಅಲ್ಲವರು ಒಂದು ವಿಚಾರಕ್ಕಾಗಿ ಚಿಂತಿಸುತ್ತಿರುವರು! ಯಾವ ವಿಶ್ವದಲ್ಲಿ ಸ್ತ್ರೀ ಮತ್ತು ಪುರುಷರು ಸಮಶಕ್ತಿಗಳೂ ಸಮಸಾಧನಾ ಸಂಪನ್ನರಾಗಿರುವರೋ, ಅಂತಹ ವಿಶ್ವವೇ ಸಭ್ಯ ಮನುಷ್ಯರು ಇರಲು ಯೋಗ್ಯವಾಗುವುದೋ ಇಲ್ಲವೋ? ಎಂದು.

ಶ್ರೀಮತಿ ವಿದ್ಯುತ್ತ ಮಾ ವಿ...

ಕನ್ನಡ ನುಡಿಮಣ್ಣಗೊಂದು
ಕನ್ನಡಗಿತ್ತಿಯ ಕಿರುಗಾಣಿಕೆ
ನಾಡ ಸೋದರಿಯರ ನೈಜ ಜೀವನದ
ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ
ಹೃದಯಗಳ ಆಳವನ್ನೂ ಹೃದಯಂಗ
ಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ
ಬೆಲೆ: ೦-೭-೩.
0—8—0 ಸ್ಟಾಂಪು ಕಳುಹಿಸಿದರೆ
1 ಪ್ರತಿಯನ್ನು ಕಳಿಸಬಹುದು.
ಬರೆದಗಾರ್ತಿಯರು:-
ಶ್ರೀಮತಿ ಮಟ್ಟಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಸಿದ್ಧ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M.A., M.R.A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯರಂಜಕವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ನೀತಿ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ ......'

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

THE
BOMBAY LIFE ASSURANCE
Company Limited.
[ESTD. 1908]

COMPARE

Your Life Assurance with any other property you possess what is its guarranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age. If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	**Rs.**	**1,44,91,000**
Life Assurance Fund	**Rs.**	**1,17,69,748**
Total Assets	**Rs.**	**1,31,23,993**

To Insure or to represent it pays you to consult

KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

ನಿಮ್ಮ ಜಾಹೀರಾತನ್ನು
"ನವಯುಗ ವಾರಪತ್ರಿಕೆ"
ಇದರಲ್ಲಿ
ಪ್ರಕಟಿಸಿ ನಿಮ್ಮ ನಿಮ್ಮ ವ್ಯಾಪಾರ
ವಹಿವಾಟನ್ನು ಅಭಿವೃದ್ಧಿ
ಪಡಿಸಿರಿ.

ಸರ್ವಾಧಿಕಾರಿಗಳ ಪ್ರೇಮ ಕತೆ

ಹಿಟ್ಲರನ ಪ್ರೇಮಲೀಲೆ! ಸ್ಟ್ಯಾಲಿನ್ನನ ಪ್ರೇಮಜೀವನ!! ಮುಸಲೋನಿ ಪ್ರೇಮಕಥೆ!!!

[ಚಂದ್ರಮಾಧವ ವರ್ಮಾ]

ಯೂರೋಪಿನ ಸರ್ವಾಧಿಕಾರಿಗಳ ಕಾರ್ಯಗಳನ್ನು ನೋಡಿದರೆ ಅವರೆಲ್ಲರೂ ಬಹಳ ನಿಷ್ಠುರರೂ ನೀರಸರೂ, ಅವರ ಹೃದಯಗಳು ಕಲ್ಲುಹೃದಯಗಳೆಂದೂ ತೋರುತ್ತದೆ. ಆದರೆ ಈ ಲೇಖನದಲ್ಲಿ ಅವರು ರಾಜಕೀಯದಲ್ಲಿ ಮಗ್ನರಾಗಿದ್ದರೂ ಸುಂದರಿಯರೊಡನೆ ಪ್ರೇಮವಿಟ್ಟು ತಮ್ಮ ಸರಸ ಹೃದಯವನ್ನೂ ತೋರಿಸುತ್ತಿರುವರೆಂಬುದು ವರ್ಣಿತವಾಗಿದೆ.

ಹಿಟ್ಲರನಿಗೆ ಈಗ 50 ವರ್ಷ. ಇದುವರೆಗೆ ಅವನು ಎಷ್ಟೋ ಮಂದಿ ಸುಂದರಿಯರನ್ನು ಪ್ರೀತಿಸಿರುವನು. ಎಲ್ಲಕ್ಕಿಂತ ಮೊದಲು ಅವನ ದೃಷ್ಟಿ ಬಿದ್ದುದು ಜೇಲಿ ರೊಬೆಲ್ಸಳ ಮೇಲೆ. ಇವಳು ಬಹಳ ಸುಂದರವಾಗಿದ್ದಳು ಇವಳ ಮಲತಾಯಿಯ ಮಗಳಿಂದ ಉತ್ಪನ್ನಳಾಗಿದ್ದವಳೊಬ್ಬಳು ಬೇರೆ ಇದ್ದಳು ಜೇಲಿಯ ಅಭಿಭಾವಕರಿಗೆ ಈ ಸಂಬಂಧವು ಒಪ್ಪಿಗೆಯಾಗಲಿಲ್ಲ ಆದರೆ ಹಿಟ್ಲರನಂತೂ ತನ್ನ ಹೃದಯವನ್ನು ಕಳೆದು ಕುಳಿತಿದ್ದನು. ಅವನು ವಿವಾಹವಾಗಲು ಎಷ್ಟು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಇದರಿಂದ ಅವನಿಗೆ ಬಹಳ ಯಾತನೆಯಾಯಿತು. ಜೇಲಿಯೂ ಆತ್ಮಹತ್ಯ ಮಾಡಿಕೊಂಡಳು. ನಂತರ ಇನ್ನೊಬ್ಬಳನ್ನು ಪ್ರೀತಿಸಿದನು, ಆಕೆಯೊಡನೆಯೂ ವಿವಾಹವಾಗಲಿಲ್ಲ. ಅವಳು ಸಹ ಪ್ರತಿದ್ವಂದಿಗಳಿಂದ ಕೊಲ್ಲಲ್ಪಟ್ಟಳು. ಇದು ಹಿಟ್ಲರರ ಎರಡನೇ ಸೋಲು.

ಹಿಟ್ಲರನ ಯೌವನ ಕಾಲದಲ್ಲಿ ಒಬ್ಬ ಯಹೂದಿ ವರ್ತಕನ ಮಗಳಲ್ಲಿ ಮನಸ್ಸಿಟ್ಟಿದ್ದನಂತೆ. ಆಕೆಯೂ ಪ್ರೀತಿಸಿದ್ದಳು. ವಿಯನ್ನಾದಲ್ಲಿ ಪ್ರಥಮ ಭೇಟಿಯಾಗಿತ್ತು. ಇನ್ನೇನು ? ವಿವಾಹವಾಗುವುದರಲ್ಲಿತ್ತು. ಆದರೆ ಕನ್ಯೆಯ ತಂದೆಯು ಒಪ್ಪಲಿಲ್ಲ. ಇದು ಹಿಟ್ಲರನು ಹೆಸರುವಾಸಿಗೆ ಬರುವುದಕ್ಕೆ ಹಿಂದಿನ ಸುದ್ದಿ.

1922ರಲ್ಲಿ ಜರ್ಮನಿಯ ಮ್ಯೂನಿಚ್ ನಗರದಲ್ಲಿ 23 ವರ್ಷದ ಒಬ್ಬ ಅತ್ಯಂತ ಸುಂದರಿಯ ಮೇಲೆ ಹಿಟ್ಲರನ ಗೃಧ್ರ ದೃಷ್ಟಿ ಬಿತ್ತು. ಆಕೆಯ ಹೆಸರು ಜೇನಿಸೇಗ್. ಅವಳಣ್ಣನು ಟ್ಯಾಕ್ಸಿ ನಡಿಸುತ್ತಿದ್ದನು ಹಿಟ್ಲರನು ಎಷ್ಟೋ ಸಾರಿ ಉಪವನದಲ್ಲಿ ಬೆಳದಿಂಗಳ ರಾತ್ರಿಯಲ್ಲಿ ಆಕೆಯೊಡನೆ ತಿರುಗುತ್ತಿದ್ದನು. ಇವರಿಬ್ಬರ ಪ್ರೇಮವನ್ನೂ ನೋಡಿದರೆ ಹೊಸದಾಗಿ ರೋಮಿಯೋ ಜ್ಯೂಲಿಯಟ್ ಆಗಿ ಹುಟ್ಟಿದಂತೆ ತೋರುತ್ತಿತ್ತು. ಆದರೂ ಇವರಿಬ್ಬರೂ ವಿವಾಹವಾಗಲಿಲ್ಲ.

ಕೆಲವು ವರ್ಷದ ಮಾತು ಹಿಟ್ಲರನು ಒಬ್ಬ ಸುಂದರ ಅಭಿನೇತ್ರಿಯ ನಯನ ಬಾಣಕ್ಕೆ ಸಿಕ್ಕಿ ಬಿದ್ದಿದ್ದನು. ವಿವಾಹವಾಗುವಂತೆ ಆಕೆಯನ್ನು ಬಹಳವಾಗಿ ಪ್ರಾರ್ಥಿಸಿದನು. ವಿಧಿವಿಲಾಸ! ಈ ಸಾರಿ ಆಕೆಯೇ ವಿವಾಹವಾಗಲೊಪ್ಪಲಿಲ್ಲ

ಯುವತಿಯರ ಮನಸ್ಸು ಬಹಳ ಕಠಿಣವೆಂದು ತಿಳಿದು ಹಿಟ್ಲರನು ಪ್ರೌಢ ಸ್ತ್ರೀಯರ ಕಡೆಗೆ ಮನವಿಟ್ಟನು. ಮೊಟ್ಟಮೊದಲು ಆತನ ಗಮನಕ್ಕೆ ಬಿದ್ದವಳೆಂದರೆ ಸೀಗ್‌ಫ್ರೀಡ್ ವೇಗ್ನರ್‌ನ ವಿಧವೆಯಾದ ಫ್ರಾ ಕಾಸಿಮಾ ಇವಳು. ಬಹಳ ಧನಿಕಳೂ ಸನ್ಮಾನ್ಯಳೂ ಆಗಿದ್ದಳು. ಆಕೆಯೇ ಮೊಟ್ಟಮೊದಲು ಹಿಟ್ಲರನನ್ನು ಗಾನವಿದ್ಯೆಯನ್ನು ಕಲಿಯಲು ವೇಗ್ನರ್ ಮಂದಿರದಲ್ಲಿ ಸೇರಿಸಿದಳು ಇಬ್ಬರೂ ಪ್ರೇಮವನ್ನು ಕುರಿತು ಚರ್ಚಿಸುತ್ತಿದ್ದರು, ವಿವಾಹವಾಗಿಯೇ ಹೋಯಿತೋ ಎನ್ನುವ ಮಟ್ಟಿಗೆ ಆಗಿದ್ದಿತು ಆದರೆ ಅದು ಸುಳ್ಳಾಗಿ ಕೇವಲ ಸಂಗೀತಾಲಯದ ಸಂಗಡಿಗರಾಗಿಯೇ ಉಳಿದರು ಆಕೆಯೇ ಹಿಟ್ಲರನ ಉನ್ನತಿಯ ಕಾರಣವೆಂದೂ ಕೆಲವರ ಮತ. 1923ರಲ್ಲಿ ಹಿಟ್ಲರನಿಗೆ ಸೆರೆಮನೆ ಶಿಕ್ಷೆ ಆಗಿತ್ತು. ಅವನ ಬಳಿ ನಾಜಿಪಕ್ಷದ ಸಂಘಟನೆಗಾಗಿ ಹಣವೂ ಇರಲಿಲ್ಲ ಆದರೆ ಸೆರೆಯಿಂದ ಮುಕ್ತನಾದ ಕೂಡಲೇ, ಮೇಲ್ಕಂಡ ವಿಧವೆಯು ಗಂಟು ಬಿದ್ದಳು. ಹಿಟ್ಲರನ ರೊಟ್ಟಿಯು ತುಪ್ಪದಲ್ಲಿ ಬಿದ್ದಿತು, ಆಕೆಯು ಅವನಿಗೆ ಹೇರಳವಾಗಿ ಹಣ ಕೊಡಲಾರಂಭಿಸಿದಳು, ಆದರೆ ಮುಂದೆ ಸಾಧಾರಣವಾದೊಂದು ಮಾತಿನಿಂದ ಮತಭೇದವುಂಟಾಯಿತು. ಹಿಟ್ಲರನು ಆಕೆಯನ್ನೂ ಹೊರದೂಡಿದನು.

ಈಕೆಯೇ ಹಿಟ್ಲರನ ಬಳಿಗೆ ರಾಜಕುಮಾರಿ ಪಡಿಲೆಟಳನ್ನೂ ಕಳಿಸಿದ್ದಳು ಈಕೆಯು ಬಹಳ ಸುಂದರಿಯಾಗಿದ್ದು, ಮಧ್ಯವಯಸ್ಸಿನವಳಾಗಿದ್ದಳು, ಆಕೆಗಾಗಲೇ 3 ವಿವಾಹಗಳಾಗಿದ್ದುವು ತನ್ನ ವಂಶದ ಅವಮಾನಕ್ಕೆ ಪ್ರತೀಕಾರ ಮಾಡುವ ಅಗ್ನಿಯು ಆಕೆಯ ಹೃದಯದಲ್ಲಿ ಧಗಧಗಿಸುತ್ತಿತ್ತು. ಇದರಿಂದ ಆಕೆಯು ಹಿಟ್ಲರನಿಗೆ ತನುಮನ ಧನಗಳಿಂದ ಸಹಾಯಮಾಡಿದ್ದಳು.

ಸುಂದರಿಯರನ್ನು ಆಕರ್ಷಿಸುವುದರಲ್ಲಿ ಹಿಟ್ಲರನು ಬಹುಚತುರ ಹಿಟ್ಲರನು ಪೋಲಿಷ ಫಿಲ್ಮ್ ಸ್ಟಾರ್ ಪೋಲಾನೇಗ್ರಿಯಳನ್ನು ವಿವಾಹವಾಗುವನೆಂಬ ಸುದ್ದಿ ಹರಡಿತ್ತು ಈಗ ಹಿಟ್ಲರನು ಮಿಸ್ ಮೇರಿಯನ್ ಡೆನಿಯಲ್‌ಳನ್ನೂ ಪ್ರೀತಿಸುವನೆಂದು ಕೆಲವರು ಹೇಳುತ್ತಿದ್ದಾರೆ. ಈಕೆಯು ಕ್ಯಾಲಿಫೋರ್ನಿಯದ 22 ವರ್ಷದ ಯುವತಿ

ಸ್ಟ್ಯಾಲಿನ್ನನ ಪ್ರೇಮ ಜೀವನ

ರಷ್ಯದ ಸ್ಟ್ಯಾಲಿನ್ನನ ಜೀವನವು ಹಿಟ್ಲರನದಕ್ಕಿಂತ ರಹಸ್ಯಮಯವಾಗಿದೆ. ಅವನು ತನ್ನ ನಿವಾಸ ಸ್ಥಾನವಾದ ಕ್ರೆಮ್ಲಿನ್ನಿಂದ ಹೊರಗೆ ಬರುವುದೇ ಅಪರೂಪ.

ಒಂದು ದಿನ ಅವನ ಈ ನಿಯಮಕ್ಕೆ ತೊಂದರೆಯಾಗುವಂತಹ ಸಂದರ್ಭವುಂಟಾಯಿತು ಒಂದು ಸಲ ಅವನು ಸುಂದರಿಯೊಬ್ಬಳ ಸಂಗಡ ಆಪೇರಾಕ್ಕೆ ನುಗ್ಗಿದನು. ಜನರು ಗುಸು ಗುಸು ಎನ್ನಲಾರಂಭಿಸಿದರು. ಅವರಿಗೆ ಈ ಆಕಸ್ಮಿಕ ಪರಿವರ್ತನೆಯು ಆಶ್ಚರ್ಯವನ್ನುಂಟುಮಾಡಿತು. ಈ ಸುದ್ದಿಯು ಕಾಳ್ಗಿಚ್ಚಿನಂತೆ ನಗರದಲ್ಲೆಲ್ಲ ಹರಡಿತು.

ಸ್ಟ್ಯಾಲಿನ್ನನು ಕೃಷಿಯ ಉನ್ನತಿಯ ಬಗ್ಗೆ ಎಲ್ಲಕ್ಕಿಂತ ಉತ್ತಮ ವಸ್ತುವನ್ನು ಬೆಳೆಯುವವರಿಗೆ ಪಾರಿತೋಷಕವನ್ನು ಕೊಡುವಂತೆ ಪ್ರಕಟಿಸಿದ್ದನು ಯೂಕ್ರೇನಿನಲ್ಲಿ ಒಬ್ಬ ರೈತನ ಮಗಳಿದ್ದಳು, ಆಕೆಗೆ ಇನಾಮನ್ನು ಹೊಂದಲು ಬಹಳ ಆತುರತೆಯಿದ್ದಿತು, ಆಕೆಯ ಹೊಲದ ಬೆಳೆಯು ಒಂದು ವರ್ಷ ಬಹಳ ಚೆನ್ನಾಗಿದ್ದಿತು, ಆಕೆಗೆ ಆ ಸಾರಿಯ ಇನಾಂ ದೊರೆಯುವುದೆಂದು ನಿಶ್ಚಯವಾಯಿತು. ಸ್ವಯಂ ಸ್ಟ್ಯಾಲಿನ್ನನೇ ಇನಾಮು ಕೊಟ್ಟನು. ಆದರೆ ಇನಾಮಿನೊಡನೆ ಅವನು ತನ್ನ ಹೃದಯವನ್ನು ಸಹ ಆಕೆಗೆ ಅರ್ಪಿಸಿದನು. ಆಕೆಯ ಮೇಲೆ ಮೋಹಗೊಂಡು "ನಿನಗೆ ಮತ್ತೇನು ಬೇಕು"? ಎಂದು ಕೇಳಿದನು. "ಓದು ಬರಹ" ಎಂದುತ್ತರವಿತ್ತಳು. ಕೂಡಲೆ ಆಕೆಯು ಶಾಲೆಗೆ ಸೇರಿಸಲ್ಪಟ್ಟಳು. ಆಕೆಯು ವಿದ್ಯಾರ್ಥಿನಿಯಾಗಿದ್ದವರ ಜೊತೆಗೆ ಸ್ಟ್ಯಾಲಿನ್ನನ ಸಂಗಾತಿಯೂ ಆದಳು. ಅತನೊಡನೆ ಉತ್ಸವ, ಊಟಗಳಲ್ಲಿ ಭಾಗವಹಿಸುತ್ತಿದ್ದಳು. ಅವಳೆ ಮೇರಿಯಾ ಡೆಮ್ ಚೆಂಕೋ. ಆದರೆ ವಿವಾಹವಾದನೋ ಇಲ್ಲವೋ ತಿಳಿಯಲಿಲ್ಲ.

ಸ್ಟ್ಯಾಲಿನ್ನನು ಜಗತ್ತಿನ ದೃಷ್ಟಿಗೆ ಬೀಳುವ ಮೊದಲೇ ಜಾರ್ಜಿಯಾದ ಒಬ್ಬಳನ್ನು ಪ್ರೀತಿಸುತ್ತಿದ್ದನು. ನಂತರ ಒಬ್ಬ ಸುಂದರಿಯಾದ ರೈತನ ಮಗಳನ್ನು ಮೋಹಿಸಿದನು. ಆಕೆಯ ವಯಸ್ಸು 16 ಇದ್ದಾಗ, ಸ್ಟ್ಯಾಲಿನ್ನನು ತನ್ನ 40ನೆ ವಯಸ್ಸಿನಲ್ಲಿ ವಿವಾಹವಾದನು.

1933ರಲ್ಲಿ ಸ್ಟ್ಯಾಲಿನ್ನನು 24 ವರ್ಷದ ಸಿಮಿಯಾನ್ನೆಚ್ಕ ಎಂಬವಳಲ್ಲಿ ಮೋಹಗೊಂಡನು. ಆದರೆ ಜಾರ್ಜಿಯದವಳು ಇದನ್ನು ಕೇಳಿ ಅವಳ ಎದೆಯೊಡೆದು ಹೋಯಿತು.

ನಂತರ ಟಾಯಿಲ್ಸಿನ ಒಬ್ಬ ಹುಡುಗಿ ಸ್ಟೆಲಿನನ ಕೃಪೆಗೆ ಪಾತ್ರಳಾದಳು. ಇಬ್ಬರ ಜನ್ಮಸ್ಥಳವೂ ಒಂದೇ. ಅವಳ ಹೆಸರು ದೋರಾ ಚಾರ್ಜ.

ಈರೀತಿ ಪ್ರೇಮದ ಮಾರ್ಕೆಟಿನಲ್ಲಿ ಸ್ಟ್ಯಾಲಿನ್ನನು ಹಿಟ್ಲರನಿಗಿಂತ ಕಡಿಮೆ ಏನೂ ಅಲ್ಲ. ಒಬ್ಬಳ ಮೇಲೊಬ್ಬಳಂತೆ ಅವನು ಅನೇಕ ಸುಂದರಿಯರಿಂದ ತನ್ನ ಕಾಮಲಾಲಸೆಯನ್ನು ತೃಪ್ತಿಪಡಿಸಿಕೊಂಡಿರುವನು. ಆದರೆ ಅವನು ಯಾವ ವೇಶ್ಯೆ ಅಥವಾ ಸಿನೇಮಾನಟಿಯ ಮುಖವನ್ನೂ ನೋಡಿಲ್ಲ. ಅವನು ಪ್ರೀತಿಸಿರುವುದೆಲ್ಲ. ರೈತರ ಮಕ್ಕಳನ್ನೇ.

ಮುಸೋಲಿನಿ

ಎಲ್ಲರಿಗಿಂತ ಕಡಿಮೆ ಕೆಟ್ಟ ಹೆಸರು ಹೊತ್ತಿರುವವನೇ ಮುಸಲೋನಿ. ಯೌವನದಲ್ಲಿ ಸಾಮ್ಯವಾದಿಯಾಗಿ ರಷ್ಯದಲ್ಲಿದ್ದು ಪೋಲೀಸರ ಭಯದಿಂದ ಮೈಮರೆಸಿಕೊಂಡಿದ್ದನು ಆಗ ಹೆಲೆನ್ ಎಂಬವಳ ಸ್ನೇಹವಾಯಿತು. ಆಕೆಯು ಇವನ ವಾಚಾಳತ್ವವನು ನೋಡಿ ಮೋಹಿತಳಾದಳು, ನದಿಯ ಬಳಿ ಕರೆದೊಯ್ದು ತನ್ನ ತನು ಸಮರ್ಪಿಸಿಕೊಂಡಳು.

ನಂತರ ಇವನು ರೈಚೆಲ್ ಗಾಯಿಡೋಳೊಡನಿದ್ದನು. ಇವನು ಅಧಿಕಾರಕ್ಕೆ ಬಂದ ಮೇಲೆ ಒಂದು ಚರ್ಚಿಗೆ ಹೋಗಿ ಅವಳನ್ನು ವರಿಸಿದನು. ಅದುವರೆವಿಗೆ ನ್ಯಾಯಬದ್ಧವಾದ ವಿವಾಹ ನಡೆದಿರಲಿಲ್ಲ. ಇವನು ಮೊದಲಿನಿಂದಲೂ ಸೌಂದರ್ಯೋಪಾಸಕನೇ ಆಗಿದ್ದಾನೆ. ಇವನು ಯಾವ ಸಿನೆಮಾ ಅಭಿನೇತ್ರಿಯೊಡನೆಯೂ ಸಂಬಂಧವನ್ನು ಇಟ್ಟುಕೊಂಡಿಲ್ಲವೆಂದು ಜನರು ಹೇಳಿಕೊಳ್ಳುವರು. ಆದರೆ ಮ್ಯಾಗ್ಡ-ಡೀ-ಫೌಂಟೆಂಜೇಲ್ ಎಂಬ ನಟಿಯೊಡನೆ ಅವನ ಜೀವನದ ಎರಡನೆ ಅಧ್ಯಾಯವಾರಂಭವಾಗಿದೆ. ಒಂದುವೇಳೆ ಇದು ನಿಜವಾಗಿದ್ದರೆ ಅವನ ಜೀವನದಲ್ಲಿ ಇದು ಮೊದಲನೆಯ ಪ್ರಸಂಗವೆನ್ನಬಹುದು.

ANTARANGA
YUGADI SPECIAL

ADVERTISEMENT RATES

Full Page	... ...	Rs. 25—0—0
Half Page	... ...	Rs. 13—0—0
Quarter Page	.. ...	Rs. 7—0—0
⅛ Page	... ...	Rs. 4—0—0
Cover Back Page		Already Reserved.
Cover 2nd & 3rd Page		Rs. 35—0—0

FOR FURHLR PARTICULARS APPLY TO:

Advertisement Manager:—

ANTARANGA, UDIPI.

ವಿವಿಧ ಸಮಾಚಾರ

(೩ನೇ ಪುಟದಿಂದ ಮುಂದರಿಸಿದ್ದು)

ಯವರಪ್ರಯಾಣ, ಚಕ್ರವರ್ತಿಗಳ ಗಾರ್ಡನ್ ಪಾರ್ಟಿಯಲ್ಲಿ ಮಹಾತ್ಮರು, ಮತ್ತು ಅವರ ಚಾರ್ಲಿಚಾಪ್ಲಿನರ ಭೇಟಿಯ ಚಿತ್ರಗಳಿರುವವು. ಈ ಚಿತ್ರದ ಹಿಂದೀಪ್ರತಿಯು 12,000 ಅಡಿ ಉದ್ದವಿರುವುದು. 21 ಭಾಷೆಗಳಲ್ಲಿ ಈ ಚಲಚಿತ್ರವು ಪ್ರದರ್ಶಿಸಲ್ಪಡುವುದು. ಮಹಾತ್ಮರು ಇಟೆಲಿಯಾನ ವಿದೇಶ ಮಂತ್ರಿಗಳೊಂದಿಗೆ ಫೆಸಿಸ್ಟ್ ಸೇನೆಯನ್ನವಲೋಕಿಸುವ ರೋಮ ರೋಲರವರಿಗೂ ದಿವಂಗತ ವಿ. ಜೆ. ಪಟೇಲರಿಗೂ ಗಾಂಧಿಜಿಯವರ ಕುರಿತು ಮಾತುಕತೆಯು, ಅವರ ಜೋನ್ಸ್ ಬರ್ಗಿನ ಮತ್ತು ಸಬರ್ಮತಿ ಆಶ್ರಮದ ಜೀವನ, ಇಂಗ್ಲೆಂಡಿನ ಪ್ರವಾಸ ಮತ್ತು ಯೆರ್ವಾಡ ಜೈಲುವಾಸದ, ಮತ್ತು ಇತ್ತಲಾಗಿನ ಗಾಂಧಿಜಿ ಕವಿರವೀಂದ್ರರ ಭೇಟಿ ದೇಖಾವೆಗಳನ್ನೊಳಗೊಂಡು ಈ ಚಲಚಿತ್ರವು ಮಹತ್ವದ್ದಾಗಿದೆ.

ಈಗ ಚೆಟ್ಟಿಯಾರರು ಮಹಾತ್ಮ ಗಾಂಧಿಯವರೊಂದಿಗೆ ರಾಮಘಡ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ ಈ ಚಲಚಿತ್ರವನ್ನು ಸಂಪೂರ್ಣಗೊಳಿಸುತ್ತಿರುವರು. ಆ ಮೇಲೆ ಮಹಾತ್ಮರ ಸಮ್ಮತಿ ಪಡೆದು ಅದನ್ನು ಲೋಕದಲ್ಲೆಲ್ಲಾ ಪ್ರದರ್ಶಿಸುವ ಏರ್ಪಾಡುಮಾಡುವರು. ತಮಿಳು ತೆಲುಗು ಮತ್ತು ಹಿಂದುಸ್ಥಾನಿ ಭಾಷೆಗಳಲ್ಲಿ ಹಿಂದೂದೇಶದಲ್ಲಿ ಪ್ರಥಮವಾಗಿ ಪ್ರದರ್ಶಿಸಲ್ಪಡುವುದು. ಶ್ರೀ. ಸತ್ಯಮೂರ್ತಿಯವರು ಈ ಚಿತ್ರಕ್ಕೆ ತಮಿಳು ಭಾಷ್ಯದನ್ನು ಬರೆಯುವರು. 3000 ಅಡಿ ಉದ್ದದ ಎರಡು ಇಂಗ್ಲಿಷ್ ಪ್ರತಿಗಳು ತಯಾರಿಸಲ್ಪಟ್ಟಿವೆ. ಅಮೇರಿಕದ ಯುನೈಟೆಡ್ ಸ್ಟೇಟ್ಸಿಗಾಗಿ ಮಿ. ಲೋವೆಲ್ ಥೋಮಸರು ಭಾಷ್ಯ ಬರೆಯುವರು. ಶ್ರೀ. ಚೆಟ್ಟಿಯಾರರು ಅಮೇರಿಕಕ್ಕೆ ವಿಮಾನ ಮೂಲಕ ಹೋಗಿ ಪ್ರೆಸಿಡೆಂಟ್ ರೂಸವೆಲ್ಟರಿಗೇನೇ ಈ ಚಿತ್ರವನ್ನು ಪ್ರಥಮವಾಗಿ ತೋರಿಸುವ ಏರ್ಪಾಡು ಮಾಡುತ್ತಿರುವರು. ಇಟೆಲಿ, ಫಿನ್ಲೆಂಡ್, ಸ್ವೀಡನ್ ಮೊದಲಾದ ದೇಶಗಳಲ್ಲಿ ಈ ಚಿತ್ರವನ್ನು ಪ್ರದರ್ಶಿಸಬೇಕೆಂದು ಇಷ್ಟರಲ್ಲೇ ಕೇಳಿಕೆಗಳು ಬಂದಿರುವವೆಂದು ತಿಳಿದುಬಂದಿದೆ. ಶ್ರೀ. ಚೆಟ್ಟಿಯಾರರ ಈ ಪರಿಶ್ರಮ ಮತ್ತು ಉತ್ಸಾಹವು ಅತ್ಯಂತ ಪ್ರಶಂಸನೀಯವಾದುದು ಮತ್ತು ಅದರಿಂದ ಇಡೀ ಲೋಕದ ಜನರೆಲ್ಲಾ ಹಿಂದೂದೇಶದ ವಿಭೂತಿ ಪುರುಷರಾದ ಮಹಾತ್ಮರ ಜೀವನಚರಿತ್ರೆಯನ್ನು ಚಿತ್ರದಲ್ಲಿ ಕಂಡು ತಿಳಿಯುವಂತಾಗುವುದು. ಹಿಂದೂದೇಶದ ಕೀರ್ತಿಯು ಜಗತ್ತಿನಲ್ಲೆಲ್ಲಾ ಹಬ್ಬಿ ಬೆಳಗುವಂತಾಗುವುದು. ಶ್ರೀ. ಚೆಟ್ಟಿಯಾರರು ಮಹತ್ತಾದ ಮತ್ತು ಅತ್ಯಮೂಲ್ಯವಾದ ದೇಶಸೇವೆಯನ್ನು ಮಾಡಿರುವರೆಂದು ಹೇಳಬಹುದು.

ವೈಸರಾಯರ ಕುರಿತು ಅವಿಶ್ವಾಸವಿಲ್ಲ.

ಪಾಟ್ನದ ವರ್ಕಿಂಗ್ ಕಮಿಟಿಯ ನಿರ್ಣಯವು ವೈಸರಾಯರ ಕುರಿತು ಅವಿಶ್ವಾಸ ಸೂಚಿಸಿದಂತಾಗುವುದಿಲ್ಲವೇ ಎಂದು ಗಾಂಧಿಜಿಯವರಿಗೊಬ್ಬರು ಪ್ರಶ್ನೆ ಹಾಕಿದುದಕ್ಕೆ ಉತ್ತರವೀಯುವಾಗ ಅವರು, "ವೈಸರಾಯರು ಶಬ್ದಗಳನ್ನು ಸರಿಯಾಗಿ ತೂಕ ಮಾಡಿ ಮಾತಾಡುವವರು. ಅವರ ಯಥಾರ್ಥತೆಯ ವಿಷಯದಲ್ಲಿ ಯಾವ ಸಂಶಯವೂ ಇರುವುದಿಲ್ಲ. ತಾನು ಇನ್ನು ಮುಂಡೆ ಹಲವು ಸಲ ಅವರನ್ನು ಕಾಣುವ ನಿರೀಕ್ಷೆಯಿಂದಿರುವೆನು. ಮೇಲಿನವರ ಹುಕುಮಿಗಿಂತ ಮುಂದುವರಿಯಲು ಅವರಿಗೆ ಸಾಧ್ಯವಾಗಲಿಲ್ಲ ಅದುದರಿಂದ ತಮ್ಮೊಳಗಿನ ಮಾತುಕತೆಯು ಬೇಗನೆ ಮುಗಿಯುವಂತಾಯಿತು. ಕಾಂಗ್ರೆಸು ತನ್ನ ಧೋರಣೆಯನ್ನು ಸ್ಪಷ್ಟಪಡಿಸಿದೆ. ಬ್ರಿಟಿಷ್ ಸಾಮ್ರಾಜ್ಯದಿಂದ ಬೇರೆಯಾಗುವ ಸ್ವಾತಂತ್ರ್ಯವಿರುವ ಸಂಪೂರ್ಣ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನೀಯಲು ಬ್ರಿಟಿಷ್ ಸರಕಾರಕ್ಕೆ ಮನಸ್ಸಿದ್ದರೆ ಕಾಂಗ್ರೆಸಿನ ಧೋರಣೆಯಂತೆ ನಡೆಯಲು ಅದಕ್ಕೇನೂ ತೊಂದರೆಯಾಗಲಾರದು ಆದರೆ ಲೋರ್ಡ್ ಜೆಟ್ಲೆಂಡರು ಅದಕ್ಕೆ ಸಿದ್ಧರಿಲ್ಲ. ಹಿಂದೂದೇಶದ ಭವಿಷ್ಯವನ್ನು ನಿರ್ಣೈಸುವ ಹಕ್ಕು ಬ್ರಿಟನಿನದ್ದೆಂದು ಅವರ ಅಂಬೋಣ ಇದು ಯಾವ ರೀತಿಯ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೂ ಅಲ್ಲ. ಹಿಂದೂದೇಶವನ್ನು ಬ್ರಿಟಿಷರಿಗೆ ಇನ್ನು ಮುಂದೆ ಅಧೀನದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲೆಂಬಂತಾದೊಡನೆಯೇ ಈಗ ಅವರು ದೇಶದ ಸ್ವಾತಂತ್ರ್ಯದ ಕುರಿತು ಮುಂದೊಡ್ಡುತ್ತಿರುವ ತೊಡಕುಗಳೆಲ್ಲಾ ಸೂರ್ಯೋದಯವಾದೊಡನೆ ಕತ್ತಲು ಮಾಯವಾಗುವಂತೆ ಅದೃಶ್ಯವಾಗುವ್ವವೆಂ"ದು ಹೇಳಿರುವರು.

ರಶ್ಯದ ಉದ್ದೇಶ

ಫಿನ್ಲೆಂಡಿನೊಡನೆ ಸಂಧಿಯುಂಟಾದುದರಿಂದ ರಸ್ಯಾನರೆಲ್ಲಾ ಅತಿ ಆನಂದ ತುಂದಿಲಾಂತರಂಗರಾಗಿರುವರು. ಜರ್ಮನಿಯೂ ಸಂತೋಷಗೊಂಡಿರುವುದು. ಇಟೆಲಿಯೂ ಸಮಾಧಾನ ಸೂಚಿಸಿರುವುದು. ರಶ್ಯವು ಕರೇಲಿಯನ್ ಭೂಖಂಡದಲ್ಲಿ ಹೊಸ ರಿಪಬ್ಲಿಕೊಂದನ್ನುಸ್ಥಾಪಿಸಿ ವೈಪುರಿಯನ್ನು ಪ್ರಧಾನ ಪಟ್ಟಣವನ್ನಾಗಿ ಮಾಡುವುದೆಂದು ನಂಬಲಾಗಿದೆ ಈಗ ರಶ್ಯದಲ್ಲಿ ವಾಸಿಸುತ್ತಿರುವ ಫಿನ್ನಿಶ್ ಕಮ್ಯೂನಿಸ್ಟರಿಗೆ ಈ ರಿಪಬ್ಲಿಕಿನಲ್ಲಿ ಪ್ರಾಮುಖ್ಯಾಧಿಕಾರಗಳನ್ನು ಕೊಡಲಾಗುವುದೆಂದು ತಿಳಿದು ಬರುತ್ತದೆ. ಯುದ್ಧ ನಿಮಿತ್ತ ಫಿನ್ಲೆಂಡನ್ನು ಬಿಟ್ಟು ಹೋಗಿದ್ದ ಫಿನ್ನರೆಲ್ಲಾ ಹಿಂದೆ ಬರುತ್ತಿರುವರು. ಫಿನ್ನಿಶ್ ಸೇನೆಯು 200 ಮೈಲು ವಿಸ್ತಾರದ ಕರೇಲಿಯ ಭೂಖಂಡದ ಗಡಿಯಿಂದ ಹಿಂದೆ ಸರಿಯುತ್ತಿದೆ. ರಸ್ಯಾನ ಸೇನೆಯು ಮುಂದೊತ್ತುತ್ತಿದೆ. ರಶ್ಯಕ್ಕೆ ಬಿಟ್ಟುಕೊಡಲ್ಪಡುವ ಪ್ರದೇಶವನ್ನು ಬಿಟ್ಟು 4,00,000 ಫಿನ್ನರು ಬೇರೆ ಕಡೆಗಳಿಗೆ ಹೋಗುತ್ತಿರುವರು. ವೈಪುರಿ ಪಟ್ಟಣವು ನಿರ್ಜನವಾಗಿದೆ. ಕರೇಲಿಯ ಭೂಖಂಡದಲ್ಲಿ ನೇಕಡ 1ರಷ್ಟರ ಫಿನ್ನರು ಮಾತ್ರ ರಶ್ಯದ ಕೈಕೆಳಗೆ ವಾಸಿಸಲು ಸಿದ್ಧರಿರುತ್ತಾರೆ. ಉಳಿದವರೆಲ್ಲಾ ದನ ಮೊದಲಾದ ತಮ್ಮ ಪ್ರಾಣಿಗಳು ಮತ್ತು ಸರಕು ಸಾಮಾನುಗಳೊಂದಿಗೆ ಮನೆಮಾರು ಬಿಟ್ಟು ಹೋಗುತ್ತಿರುವರು.

ಮುಸ್ಲಿಮ್ ಲೀಗಿಗೆ ಅಪಜಯ

ಡಿಲ್ಲಿಯ ಮುನಿಸಿಪಲ್ ಬೋರ್ಡಿಗೆ ನಡೆದ ಚುನಾವಣೆಯಲ್ಲಿ ನೇಶನಲಿಸ್ಟ್ ಮುಸಲ್ಮಾನ ಉಮೇದ್ವಾರಗಳಾದ ಮಿ. ಆಸಫ್ ಅಲಿಯವರು ಮತ್ತು ಮಿ. ಆರ್ಟೆಚ್ ವಾಹಿದಿಯವರು ಮುಸ್ಲಿಮ್ ಲೀಗಿನ ಪ್ರತಿ ಸ್ಪರ್ಧಿಗಳನ್ನು ಜೈಸಿರುವರೆಂಬುದು ಅಭಿನಂದನೀಯವಿದೆ. ಇದರಿಂದ ಮುಸಲ್ಮಾನರು ಸಂಪೂರ್ಣವಾಗಿ ಮುಸ್ಲಿಮ್ ಲೀಗನ್ನು ಸಮರ್ಥಿಸುವರೆಂಬ ಮಾತು ಟೊಳ್ಳೆಂಬುದು ವ್ಯಕ್ತವಾಗುವುದು.

ಸಿಂಧ್ ಮಂತ್ರಿಮಂಡಲ.

ಇದೇ ತಾ. 14ರಲ್ಲು ಸಿಂಧ್ ಎಸೆಂಬ್ಲಿಯಲ್ಲಿ ಸಿವಿಲ್ ವರ್ಕ್ ಖಾತೆಗೆ ಹಣ ಮಂಜೂರು ಮಾಡುವ ಪ್ರಶ್ನೆಯು ಬಂದಾಗ ಅಲ್ಲಾಬಕ್ಸ್ ಮಂತ್ರಿಮಂಡಲವು ಅಪಜಯ ಪಡೆದು ಪುನಃ ಅವರ ರಾಜಿನಾಮೆ ಮತ್ತು ಹೊಸ ಮಂತ್ರಿಮಂಡಲದ ಸ್ಥಾಪನೆಯ ಗಲಾಟೆಯೆದ್ದಿದೆ. ಅಲ್ಲಾಬಕ್ಸ್ ಮಂತ್ರಿಮಂಡಲದ ಪರವಾಗಿ 27 ಮತ್ತು ವಿರೋಧವಾಗಿ 30 ಮತಗಳು ದೊರೆತಿರುವವು. ಸಿಂಧ್ ಎಸೆಂಬ್ಲಿಯ ಮುಸ್ಲಿಮ್ ಲೀಗ್ ಮತ್ತು ಹಿಂದು ಪಕ್ಷದ ಮೆಂಬರರು ಒಟ್ಟು ಸೇರಿ ನೇಶನಲಿಸ್ಟ್ ಪಕ್ಷವೊಂದನ್ನು ಸ್ಥಾಪಿಸಿರುವರು. ಇದಕ್ಕೆ ಕಾಂಗ್ರೆಸ್ ಪಕ್ಷೀಯರೂ ಬೆಂಬಲವಿತ್ತಿರುವರು. ಸಿಂಧ್ ಎಸೆಂಬ್ಲಿಯ ಸ್ವತಂತ್ರ ಹಿಂದು ಮೆಂಬರರೂ, ಅಲ್ಲಾಬಕ್ಸ್ ಮಂತ್ರಿಮಂಡಲದ ಸಮರ್ಥಕರೂ ಆದ ಶ್ರೀ. ಜಮ್ಶೆದ್ ಮೇಹ್ತಾರವರು ತನ್ನ ಎಸೆಂಬ್ಲಿ ಮೆಂಬರಿಕೆಗೇನೇ ರಾಜಿನಾಮೆ ಕೊಟ್ಟಿರುವರು. ಅಲ್ಲಾಬಕ್ಸ್ ಮಂತ್ರಿಮಂಡಲದ ಮಂತ್ರಿಗಳಲ್ಲೊಬ್ಬರಾದ ಮಿರಾನ್ ಬಂಡೇಹಲಿ ಖಾನರು ತನ್ನ ಅನುಯಾಯಿಗಳೊಂದಿಗೆ ಹೊಸತಾಗಿ ಸ್ಥಾಪಿಸಲ್ಪಟ್ಟಿರುವ ನೇಶನಲಿಸ್ಟ್ ಪಕ್ಷಕ್ಕೆ ಸೇರಿ ಅದರ ನಾಯಕರಾಗಿ ಆರಿಸಲ್ಪಟ್ಟಿರುವರು. ಇನ್ನೊಬ್ಬ ಮಂತ್ರಿಗಳಾಗಿದ್ದ ಸೀರ್ ಇಲಾಹಿಯವರೂ ನೇಶನಲಿಸ್ಟ್ ಪಕ್ಷಕ್ಕೆ ಸೇರಿರುವರು. ಗವರ್ನರರು ಮಿರಾನ್ ಬಂಡೇಹಲಿ ಖಾನರನ್ನು ಆಮಂತ್ರಿಸಿ ಹೊಸ ಮಂಡಲಿಯನ್ನು ರಚಿಸುವ ಕುರಿತು ಆಲೋಚಿಸಿದಾಗ ಅವರು ಅದಕ್ಕೊಪ್ಪಿ ತಾ. 18ರ ವರೆಗೆ ಸಮಯ ಕೇಳಿರುವರು. ತನ್ನ ಪ್ರತಿ ಪಕ್ಷೀಯರಿಗೆ ಹೊಸ ಮಂತ್ರಿಮಂಡಲವನ್ನು ಸ್ಥಾಪಿಸಲು ಸಾಧ್ಯವಾಗಲಾರದು. ತನಗೆ ಬಹು ಪಕ್ಷದ ಎಸೆಂಬ್ಲಿ ಮೆಂಬರರ ಬೆಂಬಲವಿದೆಯೆಂದು ಅಲ್ಲಾಬಕ್ಷರು ಹೇಳಿಕೆ ಕೊಟ್ಟಿರುವರು. ಒಟ್ಟು 59 ಮಂದಿ ಎಸೆಂಬ್ಲಿ ಮೆಂಬರರ ಪೈಕಿ 31 ಮಂದಿಯ ಬೆಂಬಲ ಅಲ್ಲಾಬಕ್ಷರಿಗಿರುವುದಂತೆ.

ಮದ್ರಾಸ್ ಕಾಂಗ್ರೆಸ್ ಹೌಸ್ ಫಂಡು.

ಈಗ ರೂ. 30,000 ಮಿಕ್ಕಿರುವುದು. ಮಲಯದ ತಮಿಳರೇ ಮೊದಲಾದವರು ಮೊದಲೊಮ್ಮೆ ರೂ. 4000 ಕಳುಹಿಸಿರುವುದಲ್ಲದೆ ಪುನಃ ರೂ. 5000 ಕಳುಹಿಸಿರುವರು. ಈ ಹಣ ಕಳುಹಿಸಿದುದಕ್ಕಾಗಿ ಮಲಯದ ಹಿಂದೀಯರಿಗೆ ಶ್ರೀ. ರಾಜಗೋಪಾಲಾಚಾರ್ಯರು ಆಭಾರ ಸೂಚಿಸಿರುವರು.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಂದ ಬಹಳ ವ್ಯತ್ಯಾಸಗಳಾಗಿವೆ. ಹೊಗೆಸೊಪ್ಪಿನ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕೇವಲವಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು, ಅದರಿಂದ ತಯಾರಿಸಿದ ಸಾರಾಂಶದ ನಕಲ್ಪತ್ರ ಕೆಲವೇ ನಿಮಿಷಗಳಲ್ಲಿ ತಕ್ಕ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಲೆಖ್ಖ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

USE "CAFFERINA"
the I T C product
the infallible cure
For all aches & pains
WANTED destributing agents stockists in South Kanara including Mysore & Coorg.
For particulars apply to:
Mr. V. T. Hegde, (on camp) C/o
Mr. B. S. Hegde, *Advocate*, Udipi or
INDIA TRADING CORPORATION,
BABOO BUILDING,
375 Lamington Road, BOMBAY.

ಒಂದನೇ ಜಿಲ್ಲಾ ಹರಿಜನ ಪರಿಷತ್ತು

ಮೂಲ್ಕಿ—ಶ್ರೀ. ಆರ್. ಸೂರ್ಯನಾರಾಯಣ ರಾವ್, ಬಿ. ಎ., (ಫಸ್ಟ್ ಮೆಂಬರ್ ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿ) ಇವರು ಪರಿಷತ್ತನ್ನು ತೆರೆಯಲಿರುವರು.

ಹರಿಜನ ಬಂಧುಗಳಲ್ಲಿ ಬೇನು ಸಾಕ್ಷರತೆಯನ್ನು ಜಿಲ್ಲಾ ಹರಿಜನ ಸಂಘವು ಸಾಧಿಸುವುದಾದರೆ ರೂ. 100/- ರ ಸಹಾಯಮಾಡುವುದಾಗಿ ಜಿಲ್ಲಾ ಎಡ್ಯುಕೇಶನಲ್ ಎಸೋಸಿಯೇಶನಿನವರು ಒಪ್ಪಿರುವ ರೆಂದು ತಿಳಿಸಲು ಸಂತೋಷಪಡುತ್ತೇವೆ.

ವಸೂಲಾದ ವಂತಿಗೆ—ಕಳೆದ ಸಲ ಪ್ರಕಟಿಸಿದಂತೆ ಅಕ್ಕಿ ಸೇರು 15½ ನಗದಿ ರೂಪಾಯಿ 14-11-0 ಅನಂತರ ಬಂದವುಗಳು—ಶ್ರೀ. ಸೋಂತಾಡಿ ರಾವಣ್ಣ ಶೈಗಳು (Agricutural Demonstrator, Udipi) ಅವರ ದೈವಾಧೀನರಾದ ಮಗ ಉಮಾನಾಥ ಶೈಗಳ ಸ್ಮರಣಾರ್ಥವಾಗಿ ಪರಿಷತ್ತಿನ ಸಮಯ ಪ್ರತ್ಯೇಕ ಒಂದು ಖರ್ಚಿಗಾಗಿ ರೂ. 10/- ನ್ನು ಕಳುಹಿಸಿರುವರು. ಕಾರ್ಯಕ್ರಮ ಪ್ರಕಾರ ಮೆರವಣಿಗೆಯಾಗಿ ಪರಿಷತ್ತು ಸ್ಥಳ ಸೇರಿದೊಡನೆ ಪಾನಕವನ್ನು ಹಂಚಲಾಗುವುದು. ರೂಪಾಯಿ 3ರಂತೆ ಶ್ರೀಗಳಾದ ಬಿ. ವಾಮನ ರಾವ್ (ಮುಂಬೈ) ಮೂಡಬಿದ್ರೆ ಗೋಪಾಲ ಪೈ ಬಿ. ಡಾಕ್ಟರ್ ಎಂ. ಆರ್. ಕಾಮತ್, ಎ. ಕೆ. ಒಸಪ್ಪ, ಶ್ರೀಮತಿ ಅತ್ತಾವರ ಲಲಿತಾಬಾಯಿ ಮಂಜನಾಥ ಶೈಯವರೂ, ರೂಪಾಯಿ 2ರಂತೆ ಶ್ರೀ. ಅತ್ತಾವರ ವಿಟ್ಠಲ ಪೂಂಜರೂ, ರೂ. 1ರಂತೆ ಶ್ರೀಯುತರುಗಳಾದ ಸುಳ್ಯ ಐತಪ್ಪ ರೈ, ಸಂಪಾಜೆ ಲಿಂಗಪ್ಪ ಗೌಡ, ಮೂಲ್ಕಿ ಬಂಗ್ಲೆ ಸೀತಾರಾಮ ರಾವ್, ಮೂಲ್ಕಿ ಪಾದೆಮನೆ ಮಂಜು ಶೆಟ್ಟಿಯವರೂ ಹೀಗೆ ಜುಮ್ಲಾ ರೂಪಾಯಿ 45-11-0, ಅಕ್ಕಿ ಸೇರು 65½ ಜಮೆಯಾಗಿದೆ. ಕೆಲವು ವಾಗ್ದಾನಗಳು, ಗ್ರಾಮದ ವಂತಿಗೆಗಳು ವ ಬರಲಿರುವ ಇತರ ವಂತಿಗೆ ಬಂದ ಹಾಗೆ ಪ್ರಕಟಿಸುವೆವು.

ಪರಿಷತ್ತಿಗೆ ಇನ್ನು ಬರೇ 8 ದಿನಗಳು ಮಾತ್ರ ಉಳಿದಿವೆ. ಹೆಚ್ಚಿಗೆ ಪತ್ರಿಕೆಗಳ ಮೂಲಕ ಬರೆದು ಕೊಳ್ಳಲು ಸಾಧ್ಯವಿಲ್ಲ. ಪ್ರಚಾರವು ಸಾಲದೆಂದು ತೋರಲೂ ಕಷ್ಟವಾಗಬಹುದು. ಆದರೂ ಪ್ರೋತ್ಸಾಹ ಬಂದುದು ಸಾಕಾಗದು, ಜಿಲ್ಲೆಯ ಮಹಾಜನರು ಎಷ್ಟೆತ್ತು ಸಹಾಯ ಕಳುಹಿಸಿಕೊಡಲಿರುವರೆಂಬ ನಿರೀಕ್ಷಣೆಯಲ್ಲಿರುವೆವು.

ಹರಿಜನ ಉದ್ಧಾರವು ಹಳ್ಳಿಗಳಲ್ಲಿ ಅತ್ಯಾವಶ್ಯಕ. ಪಟ್ಟಣಿಗರ ಕೆಲಸವೆಂದು ಊಹಿಸತಕ್ಕುದಲ್ಲ. ಹಳ್ಳಿಯ ಒಗ್ಗಟ್ಟು ದೇಶದ ಉದ್ಧಾರಸಾಧನೆ. ಈ ರೀತಿ ನೆನಸಿ ಆದಕ್ಕೆ ಧ್ಯವರೆಲ್ಲಾ ಸಹಕರಿಸಬೇಕಾಗಿ ...

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ಮಾರ್ಚ್ 18.

ಮುಂಬೈನಲ್ಲಿ ಗತಿಸಿದ ಮೈಸೂರು ಶ್ರೀಮದ್ ದ್ಯುವರಾಜರ ಮೃತ ದೇಹ ದಹನಸಂಸ್ಕಾರ ನಡೆದು ಬೂದಿಯನ್ನು ಅಲಹಾಬಾದಿನಲ್ಲಿ ತ್ರಿವೇಣಿ ಸಂಗಮದಲ್ಲಿ ಅದ್ದುವಂತೆ ಕಳುಹಿಸಿ ಅಸ್ಥಿಯನ್ನು ಮೈಸೂರಿಗೆ ತಂದ. ಮುಂದಿನ ಕರ್ಮಾಂತರವನ್ನು ಆರಂಭಿಸಲಾಗಿದೆ.

ವಿಶೇಷ ಸುದ್ದಿಗಳು—ವಕೀಲರುಗಳಾದ ಶ್ರೀಯುತರುಗಳಾದ ಬಿ. ರಾಮಾಚಾರ್, ಕೆ. ಪಿ. ರಾಮನ್, ಕೆ. ಸಂಪಂಗಿ ರಾಮಯ್ಯನವರು ಮತ್ತು ಕೆ. ಟಿ. ಭಾಷ್ಯಂರವರುಗಳು ವಕೀಲ ವೃತ್ತಿಯಲ್ಲಿರಲು ಅನರ್ಹರೆಂದೂ, ಅವರ ಹೆಸರುಗಳನ್ನು ವಕೀಲರುಗಳ ಪಟ್ಟಿಯಿಂದ ವಜಾ ಮಾಡಿ, ಇನ್ನು ಮುಂದೆ ಇವರುಗಳು ಮೈಸೂರು ಯಾವ ಕೋರ್ಟಿನಲ್ಲೂ ವಕೀಲಿ ನಡೆಸಕೂಡದೆಂದೂ ಮೈ॥ ಮೈ॥ ಛೀಫ್ ಜಸ್ಟಿಸ್‌ರು, ಶ್ರೀಯುತರುಗಳ ಮೇಲೆ ಬಂದಿದ್ದ ಮುಕದ್ದಮೆಯಲ್ಲಿ ತೀರ್ಪಿತ್ತು, ಅವರುಗಳ ಹೆಸರುಗಳನ್ನು ವಕೀಲ್ ಪಟ್ಟಿಯಿಂದ ವಜಾ ಮಾಡಿಸಿರುತ್ತಾರೆ. ಇದರಂತೆ ಇನ್ನು ಅನೇಕ ವಕೀಲರ ಬಗ್ಗೆ ಕೇಸ್ ನಡೆಯುತ್ತಾಯಿದೆ. ತಿರುವಾಂಕೂರ್ ದಿವಾನ್, ಸರ್, ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು, ಶೃಂಗೇರಿಗೆ ದಯಮಾಡಿಸಿ ಸ್ವಾಮಿಗಳಿಗೆ ಪಾದ ಪೂಜೆ ನಡೆಸಿ ಭೇಟಿ ಮಾಡಿ ಗೌರವಿಸಿ ಹಿಂತಿರುಗಿದರು. ಶ್ರೀಮೋಕ್ಷಗುಂಡಂ ಕೃಷ್ಣಮೂರ್ತಿ ಕೊಲೆ ಸಂಬಂಧದಲ್ಲಿ ಶ್ರೀ ನಂಜುಂಡ ರೆಡ್ಡಿಯವರಿಂದ ಮುಚ್ಚಳಿಕೆ ನೋಟೀಸನ್ನು ಪೋಲೀಸರು ಜಾರಿಮಾಡಿರುತ್ತಾರೆ. ಮತ್ತು ಶ್ರೀಯುತರು ಸಿಟಿ. ಮ್ಯಾ॥ ಕೋರ್ಟಿನಲ್ಲಿ ಕನ್‌ಫಶನ್ ಹೇಳಿಕೆಯನ್ನು ಕೊಟ್ಟಿದ್ದಾರೆ. ಮ್ಯಾ॥ ಮುಂದೆ ವಿಚಾರಣೆಯು ಇಂದು ಅಥವಾ ನಾಳೆ ಪ್ರಾರಂಭವಾಗುತ್ತೆಂದೂ, ಶ್ರೀಯುತರ ಮೇಲೆ ಇಷ್ಟರಲ್ಲೇ ಪೋಲೀಸರು ಚಾರ್ಜ್ ಷೀಟು ದಾಖಲು ಮಾಡುತ್ತಾರೆಂದೂ ಗೊತ್ತಾಗಿದೆ.

ಕೇಳುವುದು ನಾವು ಕರ್ತವ್ಯವಾಗಿಟ್ಟುಕೊಂಡಿರುವೆವು ಕೊಡುವುದು—ಕೊಡದಿರುವುದು— ಅವರವರ ಇಚ್ಛೆಗೆ ಬಿಟ್ಟದ್ದೆಂದು ಗ್ರಹಿಸುವೆವು.

ಮೂಲ್ಕಿ 18-3-40	ಯು. ಆರ್. ಪೂಂಜ, ಅಧ್ಯಕ್ಷ, ಸ್ವಾಗತಸಮಿತಿ

'ಸ್ವಾಸ್ಥ್ಯ ಸಂಘ'ದ ಏಳನೇ ವ್ಯಾಯಾಮ ಶಿಕ್ಷಣ ಶಿಬಿರ, ಮಂಗಳೂರು-

ಎಂದಿನಂತೆ ಈ ವರ್ಷವೂ ಮೇಲಿನ ಸಂಸ್ಥೆಯ ವ್ಯಾಯಾಮ ಶಿಕ್ಷಣ ಶಿಬಿರವು ಮಂಗಳೂರಲ್ಲಿ ನಡೆಯಲಿರುವುದು. ಈ ಸಲ ನಮ್ಮ ಜಿಲ್ಲೆಯ ಹಲವು ಸಂಸ್ಥೆಗಳು, ಹಾಗೂ ಶಾಲೆಗಳ ಅಧಿಕಾರಿಗಳು ಎರಡು ತಿಂಗಳ ಶಿಬಿರವನ್ನು ನಡೆಯಿಸಿ ಹೆಚ್ಚಿನ ವಿಷಯಗಳನ್ನು ಕಲಿಸುವ ಹಾಗೆ ಕೇಳಿಕೊಂಡಿದ್ದರಿಂದಲೂ, ಕಳೆದ ಆರು ವರ್ಷಗಳಿಂದ ಹೆಣ್ಣುಮಕ್ಕಳ ಶಾಲೆಯ ಅಧಿಕಾರಿಗಳ ಮತ್ತು ಸ್ತ್ರೀ ಅಧ್ಯಾಪಕಿಯರಿಂದ ಅವರಿಗೋಸ್ಕರ ವ್ಯಾಯಾಮ ತರಬೇತಿಯ ಶಿಬಿರಗಳನ್ನು ನಡೆಸುವ ಹಾಗೆ ವಿನಂತಿಮಾಡಿಕೊಂಡದ್ದರಿಂದಲೂ ಈ ಸಲ ಎರಡು ಶಿಬಿರಗಳ ವ್ಯವಸ್ಥೆಯನ್ನು ಮಾಡಿರುತ್ತೇವೆ.

ಸ್ತ್ರೀ ಅಧ್ಯಾಪಕಿಯರ ಶಿಬಿರವು ಬರುವ ಎಪ್ರಿಲ್ ತಿಂಗಳ 15ನೇ ತಾರೀಕಿಗೆ ಪ್ರಾರಂಭವಾಗಿ ಅದೇ ತಿಂಗಳ 29ನೇ ತಾರೀಕಿಗೆ ಅಂತ್ಯವಾಗುವುದು. ಅಧ್ಯಾಪಕರ ಶಿಬಿರವು 22ನೇ ತಾರೀಕಿಗೆ ಪ್ರಾರಂಭಿಸಿ ಮೇ 20ನೇ ತಾರೀಕಿಗೆ ಸಮಾಪ್ತವಾಗುವುದು. ಅಧ್ಯಾಪಕಿಯರ ಶಿಬಿರವು ಇಲ್ಲಿಯ ಮಹಿಳಾ ಸೇವಾಶ್ರಮದ ಅಧಿಕಾರಿಗಳ ಅನುಮತಿ ಮೇರೆಗೆ ಅಲ್ಲಿಯೇ ನಡೆಸಲ್ಪಡುವುದು. ಅವರ ವಸತಿ ಹಾಗೂ ಮೇಲ್ವಿಚಾರವನ್ನು ಆಶ್ರಮದ ಸುಪರಿಂಟೆಂಡೆಂಟರಾದ K. ಗಂಗಾಬಾಯಿಯವರು ನೋಡಿಕೊಳ್ಳಲು ಒಪ್ಪಿಕೊಂಡಿರುವರು. (ಊಟದ ಖರ್ಚನ್ನು ಮಾತ್ರ ತೆರತಕ್ಕದ್ದು.) ಈ ಕೆಳಗಿನ ವಿಷಯಗಳನ್ನು ಅಧ್ಯಾಪಕಿಯರಿಗೆ ಕಲಿಸಲಾಗುವುದು. ಲೇಜಿಮ್, ಲಾಠಿ, ಝುಂಬಿಯಾ, ಜನಪದ ಡೇನ್ಸ್, ಗ್ರೂಪ ಡೇನ್ಸ್, ಕುಮ್ಮಿ ಡೇನ್ಸ್, ಟಿಪ್ರಿಯಾ ಕೋಲಾಟ, ಖೇಳ, (ಇಂಡಿಯನ್ ಕ್ಲಬ್ಸ್) ಸ್ಕಿಪ್ಪಿಂಗ್, ಸ್ವೀಡಿಶ್ ಡ್ರಿಲ್, ಆಸನ, ಸೂರ್ಯ ನಮಸ್ಕಾರ, ಗೇಮ್ಸ್, ಗರ್ಲ್ ಗೈಡಿಂಗ್, ಪ್ರಥಮ ಚಿಕಿತ್ಸೆ ಇತ್ಯಾದಿ.

ಅಧ್ಯಾಪಕರ ಶಿಬಿರವು ಗಣಪತಿ ಹೈಸ್ಕೂಲಿನಲ್ಲಿ ನಡೆಸಲ್ಪಡುವುದು. ಮತ್ತು ಈ ಕೆಳಗಿನ ವಿಷಯಗಳಲ್ಲಿ ಶಿಕ್ಷಣ ಕೊಡಲಾಗುವುದು. ಮಿಲಿಟರಿ ಡ್ರಿಲ್, ಲಾಠಿ, ಲೇಜಿಮ್, ಭಾಲಾ (ವ್ಯಕ್ತಿಗತ ಕವಾಯತು) ಡಂಬೆಲ್ಸ್, ಸ್ವೀಡಿಶ್ ಡ್ರಿಲ್, ಜೋಡಿ, ದಂಡ್, ಬೈಠಕ್, ವೈಟ್ ಲಿಫ್ಟಿಂಗ್, ಝುಂಬಿಯಾ, ಲಕಡಿ, ತಲವಾರ್, ಗದ್ದಾಫರಿ, ಮಲ್ಲಖಾಂಬ, ಕುಸ್ತಿ, ಜುಜುಟ್ಸು, ಬೋಕ್ಸಿಂಗ್, ಆಸನ, ಸೂರ್ಯ ನಮಸ್ಕಾರ ಬಸೇಟು, ಗೇಮ್ಸ್, ಸ್ಕೌಟಿಂಗ್, ಪ್ರಥಮ ಚಿಕಿತ್ಸೆ, ಮಸಾಜ್, ಸ್ವಯಂ ಸೇವಕತನ ಅಲ್ಲದೆ ಮದ್ರಾಸ್ ಗವರ್ನಮೆಂಟಿನ ಈಗಿನ ಸಿಲೆಬಸ್ ಪ್ರಕಾರ ಶಿಕ್ಷಣವೂ ಕೊಡಲ್ಪಡುವುದು.

ತರಬೇತಿ ಫೀಸು ಎಲ್ಲರಿಗೂ ಅನುಕೂಲವಾಗುವಂತೆ ಕೇವಲ 5 ರೂಪಾಯಿ ಇಟ್ಟಿರುತ್ತೇವೆ. ಪ್ರವೇಶ ಅರ್ಜಿಗಳನ್ನು ಎಪ್ರಿಲ್ ತಾ. 10ರೊಳಗೆ ಕಳುಹಿಸತಕ್ಕದ್ದು. ಅರ್ಜಿ ಪತ್ರ ಮತ್ತು ವಿಶೇಷ ಮಾಹಿತಿಗೆ ಈ ವಿಳಾಸಕ್ಕೆ ಬರೆಯಿರಿ.

ವಿ. ಸೂ.—ಈ ಮುಂದೆ ತರಬೇತಿ ಹೊಂದಿದ ಅಧ್ಯಾಪಕರಿಗೆ ಇಂಟರ್ ಮಿಡಿಯೆಟ್ ಟ್ರೈನಿಂಗ್ ಕೊಡುವ ವ್ಯವಸ್ಥೆ ಕೂಡಾ ಮಾಡಿರುತ್ತೇವೆ. ಸಂಘ ಭಾಗದ ಸಾವ ಸ್ಥಳವನ್ನು ಜವಾಬ್ದಾರಿಯುತವಾಗಿ ವಹಿಸಿಕೊಳ್ಳುವುದು.

The Organiser,
Swasthya Sangha,
Ganapathy Temple Road,
MANGALORE.

ಶಿರ್ವ— 1940-41 ವರ್ಷದ ಬಗ್ಗೆ ಶಿರ್ವ ಪಂಚಾಯತ್ ಬೋರ್ಡಿನ ಪ್ರಾಜೆಕ್ಟನ್ನು ಪಂಚಾಯತ ಬೋರ್ಡಿನವರು ತಾ 6-3-40ರಲ್ಲಿ ಬಹಿರಂಗ ಸಭೆ ಮಾಡಿ ಚರ್ಚಿಸಿ ಪಾಸು ಮಾಡಿದರು. ಒಂದು ಸ್ಥಳೀಯ ವ್ಯಕ್ತಿಗಳ ಹೆಸರಲ್ಲಿ ಮಂಜೂರು ಮಾಡಿದರು. ಒಂದು ಕಡೆ ಡಿ| ಬೋರ್ಡಿನ ಸ್ಕೂಲು ದುಸ್ಥಿತಿಯಲ್ಲಿದ್ದು, ಇನ್ನೊಂದೆಡೆ ಜಾತಿ ಭೇದ ಇರುವ ದುಃಸ್ಥಿತಿ, ಹಳ್ಳಿ ತೋಡುಗಳ ಸಂಕಗಳ ಕೇಸು, ಮತ್ತೊಂದೆಡೆ ಡಿ| ಬೋ| ಆಸ್ಪತ್ರೆ ಬಾವಿ ಕೆಲಸ ಮತ್ತು ನೀರು ಕೊಡುವುದು ಜನಸ್ವಾಯತ್ತ ಹಾದಿಯ ಕಟ್ಟೋಣದ ತಳಪಾಯದ ಕೆಲಸಗಳು ಇತ್ಯಾದಿಗಳಿಂದ ಇಡೀ ಗ್ರಾಮವು ತುಂಬಾ 'ಏಳೇರಿ'ಗೊಳ್ಳುವಂತೆ ತೋರುತ್ತಿದೆ. ಇಲ್ಲಿಯ ಡಾಕ್ಟರ ಶ್ರೀ| ಯು. ಯಸ್ ನಾಯ್ಕರಿಗೆ ಮಲ್ಕಿಗೂ, ಬೈಂದೂರಿನ ಡಾಕ್ಟರ್ ಶ್ರೀ| ಶಾಂತಪ್ಪ ಶೆಟ್ಟಿಗಳಿಗೆ ಇಲ್ಲಿಗೂ ವರ್ಗವಾಗಿರುತ್ತದೆ.

ಸೂಡಾ ದೇವಸ್ಥಾನದ ಜೀರ್ಣೋದ್ಧಾರದ ಸಹಾಯಾರ್ಥವಾಗಿ ಹೊರಟ ಸ್ಥಳೀಯ ಭಜನಾಮಂಡಳಿಯ ಮಂಗಳೋತ್ಸವವು ಕಳೆದ ತಾ 6-3-40 ಬುಧವಾರ ನಡೆಯಿತು. ಅನಂತರ ಊರ ಪರವೂರುಗಳ ಸಜ್ಜನರ ವ ದಾನಿಗಳಿಂದು ಶಿರ್ವ ಎಂ ಸಂಕಪ್ಪ ಹೆಗ್ಗಡೆ ಅಧ್ಯಕ್ಷತೆಯಲ್ಲಿ ಸೇರಿದ ವಸೂಲಾದ ರೂ. 400 0-0ರ ವರೆಗಿನ ಕೂಲಂಕುಶ ವಿವರಗಳನ್ನು, ಪರಾಮರ್ಶಿಸಿ, ಕೆಲಸಗಾರರಿಗೆಲ್ಲಾ ದಯವಿಟ್ಟು ನಮಸ್ಕರಿಸಲಾಯಿತು, ಕೆಲಸವು ಪ್ರಾರಂಭವಾದದ್ದನ್ನು, ಪ್ರವಂಚಿಸುವುದಲ್ಲದೆ ಬಲು ಸಾಕ್ಷ್ಯರೀತಿಯಲ್ಲಿ ಇದಲ್ಲಿಟ್ಟ ಬಿಲ್ಲು ಪತ್ರಾದಿಗಳನ್ನು ಕಂಡ. ಎಲ್ಲರೂ ಸ್ವಸ್ತ ದಾವ, ಆದಲ್ಲದೆ ದರ ನಿಸ್ವಾರ್ಥ ಕ್ರಮವು ಸ್ಪರ್ಧೆ ಕವಾಗಲೆಂದು ಹರಸಿದ ಬಳಿಕ ಸಭಾಂತ್ಯವಾಯಿತು.

THE COONDAPOOR BANK LIMITED,
BRAHMAVAR.
ಪ್ರ ಕ ಟ ಣೆ

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣದ ಅಡವಿನ ಮೇಲೆ ಪಡೆದ ಸಾಲಗಳ ಅಸಲು ಬಡ್ಡಿ ಮೊಬಲಗುಗಳನ್ನು ಪಾವ್ತಿ ಮಾಡದೆ ಇರುವುದರಿಂದ ಈ ಪೈಕಿ 1ನೇ ಸಾಲಗಾರನಿಗೆ ಬಿಟ್ಟರೆ, ನೋಟೀಸು ಜಾರಿಯಾಗದೆ ಮರಳಿ ಬಂದಿರುವುದರಿಂದಲೂ ಈ ನೋಟೀಸು ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿ ಸಾಲಗಳ ಬಾಬಿನಲ್ಲ ಬೇಂಕಿಗೆ ಬರಬೇಕಾದ ಅಸಲು ಬಡ್ಡಿ ವ ಈ ತರ ಖರ್ಚುಗಳನ್ನು ಸಮ್ಮಂಧಪಟ್ಟ ಸಾಲಗಾರರು ಇದೇ ಬರುವ ತಾ. 28-3-'40ನೇ ಗುರುವಾರದ ಒಳಗೆ ಬೇಂಕಿಗೆ ಕೊಟ್ಟು ಅಡವಿನ ನಗಗಳನ್ನು ಬಿಡಿಸಿಕೊಂಡುಹೋಗುವರೇ ತಪ್ಪಿದಲ್ಲಿ ಜಂಜ್ರಾನಂಬ್ರ 1, 2ನೇ ನಗಗಳನ್ನು ತಾ. 29-3-40ನೇ ಶುಕ್ರವಾರ ಮೂರು ಘಂಟೆಗೂ ಜಂಜ್ರಾನಂಬ್ರ 3ನೇ ಬಾಬ್ತು ನಗಗಳನ್ನು ತಾ 30-3-'40ನೇ ಶನಿವಾರ 2 ಘಂಟೆಗೂ ಸದ್ರಿ ಬೇಂಕಿನ ಬ್ರಹ್ಮಾವರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಸದ್ರಿ ಏಲಂನಲ್ಲಿ ಹುಟ್ಟಿಬಂದ ಹಣವನ್ನು ಸದ್ರಿಯವರ ಲೆಕ್ಕಕ್ಕೆ ಜಮಾ ಹಿಡಿದು ಇನ್ನು ಬೇಂಕಿಗೆ ಬಾಕಿ ಆಗಬಹುದಾದಲ್ಲಿ ಸದ್ರಿ ಹಣವನ್ನು ಬರಮಾಡಿಕೊಳ್ಳುವಲ್ಲಿ ಆಗತಕ್ಕ ವ್ಯವಹಾರ ನಡೆಸಲಾದೀತು.

ತತ್ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟ ತೆರಲಿಕ್ಕೆ ಅವರೇ ಜವಾಬ್ದಾರರಾಗುತ್ತಾರೆ.

ಸಾಲದ ವಿವರ.

ಜಂಜ್ರಾ ನಂಬ್ರ		ಹೆಸರು ವ ವಿಳಾಸ	ಅಸಲು ಮೊಬಲಗು ರೂ ಆ. ಪೈ
1	B. 23/39	ಕೆ. ಸುಬ್ರಾಯ ಉಡ್ಪ, ಕೃಷ್ಣ ಉಡ್ಪರ ಮಗ ಕುಕ್ಕೆಹಳ್ಳಿ ಗ್ರಾಮ, ಪೆಡಾರು ಪೋಸ್ಟು.	75—0—0.
2	B. 11/39	ಬಿ. ಗುಂಡಪ್ಪ ಆಚಾರಿ, ಕೊಗ್ಗ ಆಚಾರಿಯ ಮಗ, ಚಾಂತಾರು, ಬ್ರಹ್ಮಾವರ.	13—0—0.
3	B. 18/38	ರುಕಾರಿ ಪೋಜಾ, ಇಬಾಕಿ ಸೋಜರ ಮಗ, ಹಂದಾಡಿ ಬ್ರಹ್ಮಾವರ.	25—0—0.

ದಿ ಕುಂದಾಪುರ ಬೇಂಕ್ ಲಿಮಿಟೆಡ್
ಬ್ರಾಂಚ್, ಬ್ರಹ್ಮಾವರ, ತಾ. 14-3-'40

K. Surendranath Kamath,
Agent, **Brahmavara.**

ಹೋಂ ಇಂಗ್ಲಿಷ್ ಟ್ಯೂಟರ್

ಇದರಲ್ಲಿ, ಸುಲಭ ಪಾಠಗಳು, ವ್ಯಾಕರಣ ನಿಯಮಗಳು, ಚಿಕ್ಕ ಕಥೆಗಳು, ಕನ್ನಡ ಶಬ್ದಗಳ ಕ್ರಮಗಳು, ವಾಕ್ಯರಚನಾಕ್ರಮಗಳು, ಪತ್ರವ್ಯವಹಾರ, ಅರ್ಜಿಗಳ ನಮೂನೆಗಳು, ಇಂಗ್ಲಿಷ್ ಕನ್ನಡ ಗಾದೆಗಳು, ಉಚ್ಚಾರಣೆ ಮತ್ತು ಅರ್ಥಗಳಲ್ಲಿ ವ್ಯತ್ಯಾಸವಿರುವ ಶಬ್ದಗಳು, ಇಂಗ್ಲಿಷ್ ಉಚ್ಚಾರಣೆ ಸಹಿತ ಸುಮಾರು 3000 ಶಬ್ದಗಳ ಕೋಶವೂ ಸಂಕೇತಾಕ್ಷರಗಳೂ ಅಡಗಿವೆ. ಈ ಪುಸ್ತಕವಿದ್ದರೆ ತಿಳಿಸಿ ಉಪಾಧ್ಯಾಯರು ಮನೆಯಲ್ಲಿದ್ದಷ್ಟೇ ಸಹಾಯವಾಗುವುದು. ಸುಮಾರು 216 ಪುಟಗಳ ಪುಸ್ತಕಕ್ಕೆ ಟಪ್ಪಾಲು ಖರ್ಚು ಸೇರಿ ಬೆಲೆ ಒಂದೇ ರೂಪಾಯಿ.

ಹಣ ಮುಂಗಡ ಕಳುಹಿಸಬೇಕು. V. P. ಮಾಡಲಾಗುವುದಿಲ್ಲ.

ಉಪಾಧ್ಯಾಯ ಬುಕ್ ಡಿಪ್ಪೋ. A S. Street, ಬೆಂಗಳೂರು ಸಿಟಿ.

ಬಾಲಕರು ಆರೋಗ್ಯವಂತರಾಗಲು **ಪ್ರಭೂಸ್—ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಮನೀಯವಾದ ಕೇಶಕಲಾಪ ತಂಪಾದ ಮೆದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ

ವಾಯುಮಾತ್ರೆಗಳೆಂಬ — **ಧಾನ್ವಂತರಿ ಗುಟಿಕಾ** — ಇವುಗಳನ್ನು

ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ.

ಮಾತ್ರೆ-12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13 0, 100ಕ್ಕೆ 1-5-0

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕೊಂಡಿಕಾನು, ಬ್ರಹ್ಮಾವರ, ದ. ಕ.

ನಮ್ಮ ಏಜೆಂಟರು:—

ನವಭಾರತ ಬುಕ್ ಡಿಪೋ, ಉಡುಪಿ, ದ. ಕನ್ನಡ, ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ ಪೋಸ್ಟು ದ. ಭಾರತ, ಕೆನರಾ ನ್ಯೂಸ್ ಏಜನ್ಸಿ, ವಿ. ಆರ್ ಪ್ರಭು, ಒಟಂಟಾವಾಲಾ ಮೆನ್ಶನ್, ಲಾಲ್ ಭಾಗ್ ಮುಂಬೈ ನಂಬ್ರ 12, ಗಣಪಯ್ಯ ಲಕ್ಷ್ಮಣ ನಾಯಕ್ ಎಂಡ ಬ್ರದರ್ಸ್, ಕೋಟ, ದ. ಕನ್ನಡ.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೨೧-೩-'೪೦

ಪುನಃ ಸಂಧಿಯ ಪ್ರಯತ್ನ

ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟ್ ರೂಸ್‌ವೆಲ್ಟರ ಪ್ರತಿನಿಧಿಯಾದ ಮಿ. ಸಮ್ನರ್ ವೆಲ್ಸರು ಇಂದೀಗ ಇಟಲಿ, ಸ್ವಿಟ್ಸರ್ಲೆಂಡ್, ಜರ್ಮನಿ, ಫ್ರಾನ್ಸ್ ಮತ್ತು ಇಂಗ್ಲೆಂಡುಗಳನ್ನು ಸಂದರ್ಶಿಸಿ ಅಲ್ಲಿಯ ಮುತ್ಸದ್ದಿಗಳೊಡನೆಲ್ಲಾ ಮಾತಾಡಿ ಪುನಃ ಇಟಲಿಗೆ ಹಿಂತಿರುಗಿರುವರು. ಯುರೋಪಿನ ನಿಜವಾದ ಪರಿಸ್ಥಿತಿಯನ್ನು ಪರೀಕ್ಷಿಸಿ ಪ್ರೆಸಿಡೆಂಟ್ ರೂಸವೆಲ್ಟರಿಗೆ ವರದಿಯನ್ನೊಪ್ಪಿಸುವುದೇ ತನ್ನ ಉದ್ದೇಶವೆಂದು ಮಿ ವೆಲ್ಸರು ಹೇಳಿರುವರೇ ಹೊರತು ತನ್ನ ಸಂದರ್ಶನದ ಉದ್ದೇಶವನ್ನಾಗಲೀ, ತಾನು ನಡಿಸಿದ ಮಾತುಕತೆಗಳ ವಿಷಯವನ್ನಾಗಲೀ ಒಂದಿಷ್ಟಾದರೂ ತಿಳಿಸಿರುವುದಿಲ್ಲ. ಆದರೆ ಭಯಂಕರ ಯುದ್ಧದಲ್ಲಿ ನಿರತವಾಗಿರುವ ಯುರೋಪಿನ ಪರಿಸ್ಥಿತಿಯನ್ನು ತಿಳಿಯಲು ಪ್ರೆಸಿಡೆಂಟ್ ರೂಸವೆಲ್ಟರ ಅಧಿಕಾರಿಕ ಪ್ರತಿನಿಧಿಗಳು ಜಾಹೀರಾಗಿ ಸಂಚರಿಸಬೇಕಾಗಿಲ್ಲ. ಅವರು ಮೊದಲಾಗಿ ಬಂದು ಮಾತಾಡಿದುದು ತಟಸ್ಥರಿರುವ ಮುಸಲೋನಿಯವರೊಡನೆ. ಅನಂತರ ಕಡೆಗೀಗ ಮಾತಾಡಬಂದಿರುವುದೂ ಅವರೊಡನೆಯೇ, ಅಷ್ಟುಮಾತ್ರವಲ್ಲದೆ ಅಕಸ್ಮಾತ್ತಾಗಿ ಮುಸಲೋನಿ ಹಿಟ್ಲರರ ಭೇಟಿನಡೆದಿದೆ. ಆದರ ಪರಿಣಾಮವನ್ನು ನಿರೀಕ್ಷಿಸಿ ಮಿ. ವೆಲ್ಸರು ತನ್ನ ಅಮೇರಿಕದ ಪ್ರಯಾಣವನ್ನು ಮುಂದುವರಿಸಿರುತ್ತಾರೆ. ಇದರಿಂದ ಒಳಗಿಂದೊಳಗೆ ಮುಸಲೋನಿಯವರೇ ಸಂಧಿಗಾಗಿ ಪ್ರಯತ್ನನಡಿಸುತ್ತಿರುವರೆಂದೂ, ಅವರ ಸಲಹೆ ಮೇರೆಗೇನೇ ಪ್ರೆಸಿಡೆಂಟ್ ರೂಸವೆಲ್ಟರು, ಹೋರಾಡುವ ರಾಷ್ಟ್ರಗಳವರ ಮನೋವೃತ್ತಿಯನ್ನು ತಿಳಿದುಕೊಳ್ಳಲು ಮಿ. ವೆಲ್ಸರನ್ನು ಕಳುಹಿಸಿರುವರೆಂದೂ, ಹರ್ ಹಿಟ್ಲರರು ಒಮ್ಮೊಂದು ರೀತಿಯ ಸಂಧಿಗೊಪ್ಪುವಂತೆ ಒತ್ತಾಯಪಡಿಸಲು ಮುಸಲೋನಿಯವರು ಅಕಸ್ಮಾತ್ತಾಗಿ ಅವರ ಭೆಟ್ಟಿಯಾದುದೆಂದೂ ಊಹಿಸಿದರೆ ತಪ್ಪಾಗಲಾರದು. ಮಿ. ವೆಲ್ಸರು ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರದ ಅಧಿಕಾರಿಗಳೊಡನೆ ಮಾತಾಡಿ ಅವರ ಸಂಧಿಯ ಶರ್ತಗಳನ್ನು ಪಡೆದಿರಬೇಕು. ಆ ಕುರಿತು ಮುಸಲೋನಿಯವರೂ ಮಿ. ವೆಲ್ಸರೂ ಪುನಃ ಆಲೋಚಿಸಿ, ತಮಗೆ ಯುಕ್ತತೋರುವ ಸೂಚನೆಗಳಿಗೆ ಹಿಟ್ಲರರನ್ನೊಪ್ಪಿಸುವ ಪ್ರಯತ್ನ ನಡಿಸುತ್ತಿರಬೇಕು.

ಹಿಟ್ಲರರು ಪೋಲೆಂಡ್ ಮತ್ತು ಜೆಕೊಸ್ಲೋವೇಕಿಯಗಳನ್ನು ಕೆಲವು ಶರ್ತಗಳಿಂದ ಸ್ವತಂತ್ರವನ್ನಾಗಿ ಮಾಡಲು ಸಿದ್ಧರಿರುವರೆಂಬ ಸುದ್ದಿಯು ಈ ಸಂದರ್ಭದಲ್ಲಿ ಗಾಳಿ ಎತ್ತ ಬೀಸುತ್ತದೆಂಬುದನ್ನು ಸೂಚಿಸುತ್ತದೆ. ಮುಸಲೋನಿಯವರ ಅಭಿಮತದಂತೆ ಹಿಟ್ಲರರು ನಡೆಯುವಂತಾದರೆ, ಪ್ರೆಸಿಡೆಂಟ್ ರೂಸವೆಲ್ಟರು ಸಂಧಿಯ ಪ್ರಯತ್ನವನ್ನು ಮುಂದುವರಿಸಿ ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ರಾಜಿಗೊಪ್ಪುವಂತೆ ಒತ್ತಾಯ ನಡಿಸುವರು. ಇಲ್ಲವಾದರೆ ಇಟಲಿ ಜರ್ಮನಿಗಳೊಳಗಣ ಮೊದಲಿನ ಮೈತ್ರಿಗೆ ಧಕ್ಕೆ ತಗಲಬಹುದು. ಮುಸಲೋನಿಯವರು ಕಠಿಣ ತಾಟಸ್ಥ್ಯದ ಧೋರಣೆ ವಹಿಸಿ ತಣ್ಣಗಿರಬಹುದು. ಒಂದು ವೇಳೆ ರಾಜಿಗೆ ಮಿತ್ರರಾಷ್ಟ್ರಗಳೇ ಒಪ್ಪದಂತಹ ಪರಿಸ್ಥಿತಿಯುಂಟಾದಲ್ಲಿ ಅವುಗಳು ಅಮೆರಿಕದ ಯುನೈಟೆಡ್ ಸ್ಟೇಟ್ಸಿನ ಸಹಾನುಭೂತಿ ಮತ್ತು ಸಹಾಯವನ್ನು ಕಳಕೊಳ್ಳುವವು. ಮಾತ್ರವಲ್ಲದೆ ಇಟಲಿಯು ಜರ್ಮನಿ ಮತ್ತು ರಶ್ಯಗಳೊಂದಿಗೆ ಸೇರಿ ಉತ್ತರ, ಪೂರ್ವ ಮತ್ತು ದಕ್ಷಿಣ ಯುರೋಪಿನಲ್ಲಿ ಮಿತ್ರರಾಷ್ಟ್ರಗಳ ಆಟವೇನೂನಡೆಯದಂತೆ ಮಾಡಬಹುದು. ಇಟಲಿಯು ಸೇನಾ ಸಿದ್ಧತೆಯನ್ನು ಮೊದಲಿಂದಲೇ ಮಾಡುತ್ತಾ ಬಂದಿರುವುದು. ಇತ್ತಲಾಗಿ ರಿಸರ್ವ್ ಸೇನೆಯನ್ನೆಲ್ಲಾ ಕರೆದಿರುವುದು. ಸುಮಾರು ಒಂದು ಮಿಲ್ಯದಷ್ಟು ಸೇನೆಯು ಈಗಲೇ ಸಿದ್ಧವಾಗಿ ನಿಂತಿರುವುದು. ಆದುದರಿಂದ ಇಟಲಿಯನ್ನು ಒಲಿಸಿಕೊಳ್ಳಲು ಮಿತ್ರರಾಷ್ಟ್ರಗಳು ಸಾಧ್ಯವಾದಷ್ಟು ಪ್ರಯತ್ನಮಾಡಲೇಬೇಕು. ಜರ್ಮನಿಯಿಂದ ಇದ್ದಲು ತರುತ್ತಿದ್ದ ಇಟಲಿಯಾನ ಹಡಗುಗಳನ್ನು ಒಮ್ಮೆ ಹಿಡಿದು ಮತ್ತೆ ಬಿಟ್ಟುಬಿಡಲು ಇದೇ ಕಾರಣ. ಸಂಧಿಯ ಮತ್ತು ಯುದ್ಧದ ಭವಿಷ್ಯವು ಡಿಕ್ಟೇಟರುಗಳ ತಾ. 18ರ ಭೇಟಿಯ ಮೇಲೆ ಹೊಂದಿಕೊಂಡಿರುವುದೆಂದರೆ ಅತಿಶಯೋಕ್ತಿಯಾಗಲಾರದು.

ದ. ಕ. ಜಿಲ್ಲಾ ಹರಿಜನ ಪರಿಷತ್ತು

ಇದೇ ತಾ. 27 ಮತ್ತು 28ರಲ್ಲಿ ಮೂಲ್ಕಿಯಲ್ಲಿ ನಡೆಯಲಿರುವುದು ಪರಿಷತ್ತಿನ ಸ್ವಾಗತಕಮಿಟಿಯ ಅಧ್ಯಕ್ಷರಾದ ಶ್ರೀ. ಎಸ್. ಆರ್. ಪೂಂಜರು ಹರಿಜನೋದ್ಧಾರ ಕಾರ್ಯದಲ್ಲಿ ನುರಿತ ಪರಿಪಕ್ವಾನುಭವಿಯು. ಅವರ ಪ್ರಕಟಣೆಗಳು ಹರಿಜನೋದ್ಧಾರ ಕಾರ್ಯದ ಕ್ರಮವಿಧಾನಗಳನ್ನು ಮನಗೊಳಿಸುತ್ತವೆ. ಕಾರ್ಯಪಟುವೂ ವ್ಯವಹಾರ ಕುಶಲರೂ ಆದ ಅವರ ನೇತೃತ್ವದಲ್ಲಿ ಪರಿಷತ್ತು ಜಯಶೀಲವಾಗುವುದೆಂಬುದರಲ್ಲಿ ನಮಗೆ ಸಂದೇಹವಿಲ್ಲ. ಇನ್ನು ಮುಂದೆ ಇಂತಹ ಹರಿಜನ ಪರಿಷತ್ತುಗಳಲ್ಲಿ ಹರಿಜನರೇ ಮುಂದೆ ಬಂದು ಕೆಲಸಮಾಡುವಂತಾಗಬೇಕು. ಅವರಲ್ಲೀಗ ಬೇಕಷ್ಟು ಮಂದಿ ವಿದ್ಯಾವಂತರಿದ್ದಾರೆ; ಸಾಕಷ್ಟು ಜಾಗ್ರತಿಯುಂಟಾಗಿದೆ. ಆದುದರಿಂದ ಅವರು ಮೇಲ್ಜಾತಿಯವರೆನಿಸುವವರ ಸಹಾನುಭೂತಿ ಮತ್ತು ಸಹಾಯಪಡೆದು ತಮ್ಮ ಕಾಲಲ್ಲೇ ನಿಂತು ಕೆಲಸಮಾಡಕಲಿಯಬೇಕು. ಮೂಲ್ಕಿಯ ಪರಿಷತ್ತಿನಲ್ಲಿ ಅವರೇ ಮುಖ್ಯ ಭಾಗವಹಿಸಬೇಕು. ಅದಕ್ಕೆ ಬೇಕಾದ ಪ್ರೋತ್ಸಾಹ ಮತ್ತು ಆಶ್ರಯವನ್ನು ಶ್ರೀ. ಪೂಂಜರೂ ಸ್ವಾಗತಸಮಿತಿಯವರೂ ಕೊಡದಿರಲಾರರು. ಆದುದರಿಂದ ಜಿಲ್ಲೆಯ ಹರಿಜನರೆಲ್ಲಾ ಈ ಪರಿಷತ್ತಿಗೆ ಉತ್ಸಾಹದಿಂದ ಹೋಗಬೇಕು. ತಮ್ಮೊಳಗಣ ಜಾತಿಭೇದವನ್ನು ಮರೆತು ಕೊರಗರೊಂದಿಗೆ ಕೂಡಾ ಬಂಧುತ್ವದಿಂದ ಕಲೆತು ಕೆಲಸಮಾಡಬೇಕು. ಶಿಕ್ಷಿತ ಮುಖಂಡರೆನಿಸುವವರು ತಮ್ಮೊಳಗಣ ವೈಯಕ್ತಿಕ ಭೇದಗಳನ್ನು ಮರೆತು ಜನಸಾಮಾನ್ಯರ ಹಿತಸಾಧನೆಯ ವ್ಯಾಪಕ ದೃಷ್ಟಿಯಿಂದ ಪರಸ್ಪರ ಸಹಕಾರ ಮತ್ತು ಸೌಹಾರ್ದದಿಂದ ಒಂದುಗೂಡಿ ಕೆಲಸಮಾಡಬೇಕು. ಪ್ರತಿವರ್ಷವೂ ಒಂದೊಂದು ತಾಲೂಕಿನವರು ಯಾವುದಾದರೊಂದು ಹರಿಜನ ಹಳ್ಳಿಯಲ್ಲಿ ಜಿಲ್ಲಾ ಪರಿಷತ್ತುಗಳನ್ನು ನಡೆಸುವ ವ್ಯವಸ್ಥೆಯಾಗಬೇಕು.

ಹರಿಜನರ ಸಾಂಪತ್ತಿಕಸ್ಥಿತಿಯು ಸುಧಾರಿತವಾಗದೆ, ಅವರ ಜೀವನದ ರೀತಿನೀತಿಗಳು ಬದಲಾವಣೆಯಾಗದೆ, ಅವರು ಸ್ವಾವಲಂಬಿಗಳಾಗಿ ಸ್ವಾಭಿಮಾನಿಗಳಾಗಿ, ಸ್ವಗೌರವದಿಂದ ತಲೆಯೆತ್ತಿ ನಿಲ್ಲುವಂತಾಗದೆ ಅವರ ನಿಜವಾದ ಉದ್ಧಾರವಾಗಲಾರದು. ಎಷ್ಟೊಂದು ಉದಾರಿಗಳಾದರೂ ಮೇಲುವರ್ಗದವರ ಆಶ್ರಯದ ಕಡೆಗೇನೇ ಅವರು ಕತ್ತು ನೀಡಿಕೊಂಡಿರುವುದರಲ್ಲಿ ಪ್ರಯೋಜನವಿಲ್ಲ. ಮೂಲ್ಕಿಯ ಪರಿಷತ್ತು ನಿಜವಾದ ಹರಿಜನ ಪರಿಷತ್ತಾಗಿ ಹರಿಜನರೇ ಅದರಲ್ಲಿ ಮುಖ್ಯ ಭಾಗವಹಿಸುವಂತಾಗುವುದೆಂದು ನಾವು ನೆನಸುತ್ತೇವೆ. ಇಂತಹ ಪರಿಷತ್ತು ನಡಿಸಲು ಮುಖ್ಯವಾಗಿ ಹಣ ಸಹಾಯವು ಅತ್ಯಗತ್ಯವಾಗಿದೆ. ಹರಿಜನೋದ್ಧಾರ ಕಾರ್ಯೋತ್ಸಾಹಿಗಳಾದವರೆಲ್ಲರೂ ಅಲ್ಲಲ್ಲಿಯ ಜನರಿಂದ ಹಣ ಸಂಗ್ರಹಿಸಿ ಕಳುಹಿಸಿದರೆ ಪರಿಷತ್ತಿಗೆ ಬೇಕಷ್ಟು ಹಣ ದೊರೆಯಬಹುದು. ಪರಿಷತ್ತಿಗೆ ಪ್ರತಿ ತಾಲೂಕಿನಿಂದ ಇಂತಿಷ್ಟೇ ವಂತಿಗೆ ಕೊಡಬೇಕೆಂಬ ನಿಯಮ ಮಾಡಿದರೆ ಹಣದ ಕೊರತಿನ ಪ್ರಶ್ನೆಯೇ ಬರಲಾರದು. ಈ ಪರಿಷತ್ತಿನ ಪರಿಣಾಮವಾಗಿ ಇಡೀ ಜಿಲ್ಲೆಯ ಹರಿಜನ ಕಾರ್ಯವು ಸಂಘಟಿತವಾಗಿ ಕೇಂದ್ರೀಕೃತವಾಗಿ ನಡೆಯುವಂತಾಗುವುದೆಂದು ನಿರೀಕ್ಷಿಸುತ್ತೇವೆ. ಈ ಪರಿಷತ್ತಿನಲ್ಲೇ ಪ್ರತಿ ತಾಲೂಕಿನ ಹರಿಜನ ಪ್ರತಿನಿಧಿಗಳು ಮತ್ತು ನಿಜವಾದ ಕೆಲಸಗಾರರಿಂದ ಕೂಡಿದ ಜಿಲ್ಲಾ ಕಮಿಟಿಯೊಂದು ಚುನಾಯಿತವಾಗಿ ಜಿಲ್ಲೆಯ ಹರಿಜನೋದ್ಧಾರ ಕಾರ್ಯವು ಇನ್ನಷ್ಟು ವ್ಯವಸ್ಥಿತವಾಗಿಯೂ ಪ್ರಾತಿನಿಧ್ಯವುಳ್ಳದಾಗಿಯೂ ನಡೆಯುವಂತಾಗುವುದು ಉಚಿತವೆಂದು ನಮಗನಿಸುತ್ತದೆ.

ಗಾಂಧಿಜಿಯವರು ಚರ್ಚೆಯಲ್ಲಿ ಮುಖ್ಯ ಭಾಗವಹಿಸುತ್ತಿರುವರು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ಇದೇ ತಾ. 15ನೇ ಅಪರಾಹ್ನ ಘಂಟೆ 2.30ರಿಂದ 7 50ರ ವರೆಗೆ ನಡೆಯಿತು. ಗಾಂಧಿಜಿಯವರು ಇದರಲ್ಲಿ ಭಾಗವಹಿಸಿ ಎರಡು ಘಂಟೆಗಳಿಗಿಂತಲೂ ಮಿಕ್ಕ ಹೊತ್ತು ಠರಾವನ್ನು ಮೆಂಬರರಿಗೆ ವಿವರಿಸಿ ಹೇಳಿದರು. ಯಾವ ತರದ ಬದಲಾವಣೆಯೂ ಇಲ್ಲದೆ ಈ ಠರಾವೇ ಕಾಂಗ್ರೆಸ್ ಅಧಿವೇಶನದಲ್ಲಿ ಮಂಜೂರಾಗುವುದೆಂದು ನಿರೀಕ್ಷಿಸಲಾಗಿದೆ. ಇದೊಂದೇ ಅಫಿಶಿಯಲ್ ಠರಾವು ಕಾಂಗ್ರೆಸಿನ ಮುಂದಿರಿಸಲ್ಪಡುವುದು. ಕಾಂಗ್ರೆಸಿನ ವಿದೇಶಾಂಗ ಧೋರಣೆಯನ್ನು ಸ್ಪಷ್ಟಪಡಿಸುವ ವಾಕ್ಯಗಳನ್ನು ಸೇರಿಸಬೇಕೆಂಬ ಶ್ರೀ ಜಯಪ್ರಕಾಶ ನಾರಾಯಣರ ಸೂಚನೆಯ ಕುರಿತು ಚರ್ಚೆ ನಡೆದು ಅದು ಸ್ವೀಕರಿಸಲ್ಪಡಲಿಲ್ಲ. ಶ್ರೀ ಜಯಪ್ರಕಾಶರೇ ಮೊದಲಾದವರ ದಸ್ತಗಿರಿಯ ವಿಷಯವನ್ನು ವರ್ಕಿಂಗ್ ಕಮಿಟಿಯವರು ಪರಿಶೀಲಿಸಿದರೂ ಆ ಕುರಿತೇನೂ ಠರಾವು ಮಾಡಲಿಲ್ಲ. ಡಾಕ್ಟರ್ ರಾಜೇಂದ್ರ ಪ್ರಸಾದರು ಈ ಸಭೆಯ ಅಧ್ಯಕ್ಷತೆ ವಹಿಸಿದರು. ಶ್ರೀ ಜೈರಾಮದಾಸ್ ದೌಲತ್ ರಾಮ್ ಮತ್ತು ಡಾಕ್ಟರ್. ಬಿ. ಸಿ. ರೊಯ್ಯಗಳ ಹೊರತು ಇತರ ವರ್ಕಿಂಗ್ ಕಮಿಟಿ ಮೆಂಬರರೆಲ್ಲಾ ಹಾಜರಿದ್ದರು. ಹಿಂದೀದೇಶೀಯ ಸಂಸ್ಥಾನಗಳ ಪ್ರಶ್ನೆ, ಹೊಸ ರಾಷ್ಟ್ರಗೀತೆ, ವರ್ಕಿಂಗ್ ಕಮಿಟಿ ಮೆಂಬರರ ಸಂಖ್ಯೆಯನ್ನು ಹೆಚ್ಚಿಸುವಿಕೆ, ಸುಕ್ಕೂರಿನ ಲೂಟಿ, ವಾಯುವ್ಯ ಗಡಿನಾಡಿನ ಸಂಗಡಿಗರ ಧಾಳಿ, ಶ್ರೀ ಸುಭಾಸಚಂದ್ರರ ಮೇಲಿನ ಶಿಸ್ತು ಜ್ಯಾರಿಯೇ ಮೊದಲಾದ ಬೇರೆ ಬೇರೆ ವಿಷಯಗಳ ಕುರಿತು ಅನಧಿಕಾರಿ ನಿರ್ಣಯಗಳು ಬಂದಿರುವವಾದರೂ, ಪ್ರಕೃತದ ವಿಶಿಷ್ಟ ಪರಿಸ್ಥಿತಿಯಲ್ಲಿ ಅವನ್ನೇನೂ ಚರ್ಚಿಸದೆ ಒಂದೇ ಅಫಿಶಿಯಲ್ ಠರಾವನ್ನು ಕಾಂಗ್ರೆಸು ಮಂಜೂರು ಮಾಡಿದರೆ ಸಾಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಭಿಪ್ರಾಯವಿರುತ್ತದೆ.

ಸಂಪೂರ್ಣ ಸ್ವಾತಂತ್ರ್ಯ ಬೇಕು

ವೆಸ್ಟ್ ಮಿನಿಸ್ಟರ್ ರೀತಿಯ ಡೊಮಿನಿಯನ್ ಸ್ಟೇಟಸಿನಿಂದ ಕೂಡಾ ಕಾಂಗ್ರೆಸ್ ತೃಪ್ತಿಗೊಳ್ಳಲಾರದು. 1920ರಲ್ಲಿ ಕಾಂಗ್ರೆಸು ಸಂಪೂರ್ಣ ಸ್ವಾತಂತ್ರ್ಯದ ನಿರ್ಧಾರವಮಾಡಿದಂದಿನಿಂದ ಒಮ್ಮೆಯಾದರೂ ಡೊಮಿನಿಯನ್ ಸ್ಟೇಟಸನ್ನು ಸ್ವೀಕರಿಸಲೊಪ್ಪಿರುವುದಿಲ್ಲ. ತಾನು 1927ರಲ್ಲಿ

ಟ್ಲರ್ ಮುಸಲೋನಿಗಳ ಭೇಟಿ.

ಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆ

ಬ್ರಿಟಿಷ್ ನೌಕಾನಿಲಯದ ಮೇಲೆ ಜರ್ಮನಿಯ ಧಾಳಿ

ದಾಗ, ಡೊ
ಕು ಒಪ್ಪಿಗೆ
ಮೇಲೆ ತನ್ನ
ಕೆಯಾಗಿದೆ.
ತ್ತದ ರಾಷ್ಟ್ರ
ಚ್ಛೆಯಂತೆ
ಸ್ವಾತಂತ್ರ್ಯವಿರ
ರಿಗೆ ಮುಂದಿ
ನಿರ್ಣೈಸು
ಕು ಕನ್
ದರೆ ಎಲ್ಲಾ
ಈ ಸಭೆಯ
ಕೀಯ ಘಟ
ಕ್ಕಬಹುದು.
ಮಾಡೇಶದಲ್ಲಿ
ಬಿಟ್ಟುಹೋ
ಲ್ಲಿಲ್ಲ ಅವ
ಜನವು ತನ
ಶ್ಯರು ಹರಿ
ಖನ ಬರೆದಿ

ಾಂಗ್ರೆಸ್
ಮು.

ಾಹ್ನ ಬಾಬು
ಧ್ಯಕ್ಷತೆಯಲ್ಲಿ
ಸ್ವೀಕರಿಸಲ್ಪ
ಹಾಜರಿದ್ದರು.
ಗೆ ಬರಲಿಲ್ಲ.
ಬಾಬುರಾಜೇಂ
ಶನವನ್ನು ಪ್ರ
ಂಡಿತ ಜವ್ಹಾ
ು ಸರ್ದಾರ್
ು. ಬಾಬು
ಬಗ್ಗೆ ಅಭಿಪ್ರಾ
ು ಅಧ್ಯಕ್ಷತನ
ಅಧ್ಯಕ್ಷತನದ
ಕ್ಕೆ ಸಿಕ್ಕಿಸಿದ
ಅಧ್ಯಕ್ಷತನದ
ಗಿ ಕೃತಜ್ಞ
ತ್ತಾದ ಜವಾ
ಲು ಪಡೆದು
ಂಡರು. ಅ
ಸಾದರು ಪಾ
ಸುವರು ಎಂ
ಲ್ಲಿ ಸಮರ್ಥಿಸಿ
ು ಮುಂದಿಟ್ಟು
ರಿಸ್ಥಿತಿಯಲ್ಲಿ
ಗಿ ಗಾಂಧಿಜಿ
ಕೀಕರಿಸಿ ಸ್ವಾ
ಕೆಂದು ಕೇ
ಗಳು ಬಾಬು
ಅನುಮೋ
ಕೆ ಹೋರಾಟ
ುತ್ತಿರುವರು.
ರಾಡಲಾರಂ

ಭಿಸಲಾರದೇಕೆ? ಕಾಂಗ್ರೆಸಿನ ನಾಯಕತ್ವವನ್ನು ಸ್ವೀಕರಿಸಿರುವವರು ಅದರ ಕಾರ್ಯವಿಧಾನದಂತೆ ಶಿಸ್ತಿನಿಂದ ನಡೆಯಬೇಕು. ದೇಶವನ್ನು ಹೋರಾಟಕ್ಕೆ ಸಿದ್ಧಗೊಳಿಸಲು ಕಾಂಗ್ರೆಸನ್ನು ದೂರುವ ಈ ಜನರು ಏನು ಮಾಡಿರುವರು? ಈಗಣ ಪರಿಸ್ಥಿತಿಯಲ್ಲಿ ಕಾಂಗ್ರೆಸು ಹೋರಾಟ ಹೂಡದೆ ನಿರ್ವಾಹವಿಲ್ಲದಾಗಿರುವುದು. ಸರಕಾರವು ಹೋರಾಟಕ್ಕದನ್ನು ದೂಡುತ್ತಿರುವುದು. ಅದಕ್ಕೆ ಇಡೀ ದೇಶವು ಸಿದ್ಧವಾಗಬೇಕು. ಸರಕಾರದ ದಬ್ಬಾಳಿಕೆಯನ್ನು ಪ್ರತಿಭಟಿಸಲು ಇಡೀ ದೇಶವು ಒಕ್ಕಟ್ಟಾಗಿ ಎದ್ದು ನಿಲ್ಲಬೇಕೆಂದು ಕೇಳಿಕೊಂಡರು.

ಅಧ್ಯಕ್ಷರು ಸಭೆಯನ್ನು ಮುಂದುವರಿಸುವ ಮೊದಲು, ವರ್ಕಿಂಗ್ ಕಮಿಟಿಯು ಆಳವಾಗಿ ವಿಚಾರಿಸಿ ತಯಾರಿಸಿರುವ ನಿರ್ಣಯವನ್ನು, ಹೆಚ್ಚಿನ ಚರ್ಚೆಯೇನೂ ಇಲ್ಲದೆ ಇದ್ದಂತೆಯೇ ಸ್ವೀಕರಿಸಬೇಕೆಂದು ವಿನಂತಿ ಮಾಡಿಕೊಂಡರು. ವರ್ಕಿಂಗ್ ಕಮಿಟಿಯ ನಿರ್ಣಯದ ಕುರಿತು 30ಕ್ಕಿಂತಲೂ ಮಿಕ್ಕಿದ ತಿದ್ದುಪಡಿ ಸೂಚನೆಗಳು ಬಂದಿರುವವು. ಇದೇ ತಾ. 18ನೇ ಬೆಳಗ್ಗೆ ನಡೆದ ವರ್ಕಿಂಗ್ ಕಮಿಟಿ ಸಭೆಯಲ್ಲಿ ಈ ತಿದ್ದುಪಡಿ ಸೂಚನೆಗಳನ್ನೆಲ್ಲಾ ವಿರೋಧಿಸಬೇಕೆಂದು ನಿರ್ಧರಿಸಿರುವರು. ತಾ. 18ನೇ ಅಪರಾಹ್ನ ಮಹಾತ್ಮ ಗಾಂಧಿಯವರು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಭಾಷಣ ಮಾಡಿ ಪಾಟ್ನ ನಿರ್ಣಯವನ್ನು ವಿವರಿಸಿ ಹೇಳಲಿರುವರೆಂದು ತಿಳಿದುಬರುತ್ತದೆ. ಜಾಹೀರು ಅಧಿವೇಶನದಲ್ಲೂ ಮಹಾತ್ಮರು ಭಾಷಣ ಕೊಡಲಿದ್ದಾರೆ. ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದವರು ವರ್ಕಿಂಗ್ ಕಮಿಟಿಯ ನಿರ್ಣಯವನ್ನು ವಿರೋಧಿಸುವುದಿಲ್ಲವಾದರೂ ತಾವೇ ಪ್ರತ್ಯೇಕವಾಗಿ ಒಂದು ನಿರ್ಣಯ ತರಲಿರುವರೆಂದು ತಿಳಿದುಬರುತ್ತದೆ.

ಮುಂದಿನ ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಈ ಸಲದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಕೆಲಮಟ್ಟಿನ ಬದಲಾವಣೆಯಾಗಲಿರುವುದೆಂದು ನಂಬಲಾಗಿದೆ. ಸರ್ದಾರ್ ವಲ್ಲಭಾಯಿ ಪಟೇಲ್, ಡಾಕ್ಟರ್ ರಾಜೇಂದ್ರ ಪ್ರಸಾದ್, ಶ್ರೀ ಭೂಲಭಾಯಿ ದೇಸಾಯಿ, ಆಚಾರ್ಯ ಕ್ರಪಲಾನಿ, ಸೇಟ್ ಜಮುನಾಲಾಲ್ ಬಜಾಜ್, ಖಾನ್ ಅಬ್ದುಲ್ ಗಾಫರ್ ಖಾನ್, ಮತ್ತು ಶ್ರೀಮತಿ ಸರೋಜಿನಿ ದೇವಿಯರು ಯಥಾಪ್ರಕಾರ ಮೆಂಬರರಾಗುವರು. ಪಂಡಿತ ನೆಹರುಗಳು ಜನರಲ್ ಸೆಕ್ರಿಟರಿಗಳಾಗಲಿರುವರೆಂದು ನಂಬಲಾಗಿದೆ. ಮುಸಲ್ಮಾನ ಮೆಂಬರರ ಸಂಖ್ಯೆಯನ್ನೇರಿಸಿ ಡಾಕ್ಟರ್ ಸೈಯದ್ ಮಹಮ್ಮದ್, ಮಿ. ರಾಫಿ ಅಹಮ್ಮದ್ ಕಿದ್ವೈ ಅಥವಾ ಮಿ. ಆಸಫ್ ಅಲಿಯವರನ್ನು ಹೊಸತಾಗಿ ಸೇರಿಸಿಕೊಳ್ಳಲಾಗುವುದೆಂದು ಸುದ್ದಿಯುಂಟಾಗಿದೆ. ಶ್ರೀ. ಸಿ. ರಾಜಗೋಪಾಲಾಚಾರ್ಯರೊಬ್ಬ ಮೆಂಬರರಾಗುವುದು ನಿಶ್ಚಯ. ಪಂಡಿತ ಗೋವಿಂದ ವಲ್ಲಭ ಪಂತರೂ ಮೆಂಬರರಾಗಬಹುದು. ಡಾಕ್ಟರ್ ಬಿ. ಸಿ. ರ್‍ಯಾಯವರು ಈ ಸಲ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಮೆಂಬರರಲ್ಲದಿರುವುದರಿಂದ ಅವರ ಬದಲಿಗೆ ಶ್ರೀ. ಕಿರಣ ಶಂಕರ ರ್‍ಯಾಯವರು ಆರಿಸಲ್ಪಡಬಹುದು.

ಇಟೆಲಿ ಮತ್ತು ಜರ್ಮನಿಗಳ ಸಂಧಿಯ ಪ್ಲೇನು

ಇದೇ ತಾ 18ರಲ್ಲಿ ಹರ್ ಹಿಟ್ಲರರು ಹರ್ ವಾನ್ ರಿಬಂಟ್ರಪರೊಂದಿಗೆ ಜರ್ಮನಿ ಮತ್ತು ಇಟೆಲಿಯ ಗಡಿಯಾದ ಬ್ರೆನ್ನರ್ ಕಣಿವೆಯ ಪ್ರದೇಶಕ್ಕೆ ಬೆಳಗ್ಗೆ 10 ಘಂಟೆಗ ಬಂದು ಮುಟ್ಟಿದರು. ಇದಕ್ಕಿಂತ 40 ನಿಮಿಷಗಳ ಮೊದಲೇ ಮುಸಲೋನಿಯವರೂ ಕೌಂಟ್ ಸಿಯಾನೋರವರೂ ಅಲ್ಲಿಗೆ ಬಂದು ಕಾಯುತ್ತಿದ್ದರು. ಹಿಟ್ಲರರು ನಿಲ್ದಾಣಕ್ಕಿಳಿದೊಡನೆಯೇ ಅಲ್ಲಿ ಕಾಯುತ್ತಿದ್ದ ಮುಸಲೋನಿಯವರ ಬಳಿಗೆ ಹೋಗಿ ಹಸ್ತಲಾಘವ ಮಾಡಿದರು. ರೈಲ್ವೇಸ್ಟೇಶನು ಇಟೆಲಿಯಾನ ಮತ್ತು ಜರ್ಮನ್ ಧ್ವಜಗಳಿಂದ ಅಲಂಕೃತವಾಗಿದ್ದಿತು. ಸ್ಟೇಶನಿನ ಸುತ್ತಲೆಲ್ಲಾ ಸೈನಿಕರ ಕಾವಲಿತ್ತು. ಕೂಡಲೆ ಹಿಟ್ಲರ್ ಮತ್ತು ಮುಸಲೋನಿಯವರು ಟ್ರೈನಿನೊಳಗೇನೇ ಮಾತುಕತೆ ನಡಿಸಹತ್ತಿದರು.

ಯುರೋಪಿನ ಯುದ್ಧದಲ್ಲಿ ಮುಸಲೋನಿಯವರು ಕೈಹಾಕುವ ಸಮಯವೀಗ ಬಂದಿರುವುದೆಂದೂ, ಅವರು ಹಿಟ್ಲರರೊಡನೆ ಮಾತಾಡಿ ಸಂಧಿಯ ಸೂಚನೆಗಳನ್ನು ಆಗ ರೋಮ್ ಪಟ್ಟಣದಲ್ಲಿರುವ ಮಿ. ವೆಲ್ಸರ ಮೂಲಕ ಪ್ರೆಸಿಡೆಂಟ್ ರೂಸವೆಲ್ಟರಿಗೆ ಕಳುಹಿಸಲಿರುವರೆಂದೂ ನಂಬಲಾಗಿದೆ. ಯುದ್ಧವು ಭೂಮಧ್ಯಸಾಗರಕ್ಕೆ ಮತ್ತು ಅದರ ಪೂರ್ವಕ್ಕೆ ವ್ಯಾಪಿಸಲ್ಪಡದಂತೆ ತಡೆಗಟ್ಟಲಾಗುವುದು, ಆಗ್ನೇಯ ಯುರೋಪಿನಿಂದ ಆಹಾರ ಮತ್ತು ಇತರ ಸಾಮಗ್ರಿಗಳನ್ನು ಪಡೆಯುವ ಕುರಿತು ಇಟೆಲಿ ಮತ್ತು ಜರ್ಮನಿಗಳು ಒಡಂಬಡಿಕೆ ಮಾಡಿಕೊಳ್ಳುವವು. ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳಿದುರಾಗಿ, ಸಾಮ್ರಾಜ್ಯರಹಿತ ಇತರ ರಾಷ್ಟ್ರಗಳನ್ನೆಲ್ಲಾ ಒಂದುಗೂಡಿಸಲೆತ್ನಿಸಲಾಗುವುದು. ಯುರೋಪಿನ ನವರಚನೆಯ ಕುರಿತು ಒಡಂಬಡಿಕೆ ಮಾಡಿಕೊಳ್ಳಲಾಗುವುದು. ಇಟೆಲಿ ಮತ್ತು ಜರ್ಮನ್‌ಗಳೊಂದುಗೂಡಿ ಮಾಡಿರುವ ಸಂಧಿಸೂಚನೆಗಳಿಗೆ ಮಿತ್ರರಾಷ್ಟ್ರಗಳು ಒಪ್ಪದಿದ್ದ ಪಕ್ಷದಲ್ಲಿ ಜರ್ಮನಿಯು ಬಾಲ್ಕನ್ ರಾಷ್ಟ್ರಗಳ ಮೇಲೆ ಅಧಿಕಾರ ವ್ಯಾಪಿಸಲೆತ್ನಿಸಿ ತನ್ನ ಸ್ಥಾನವನ್ನು ಬಲಪಡಿಸುವುದು.

ಹಿಟ್ಲರ್ ಮುಸಲೋನಿಯರ ಭೇಟಿಯ ದಿನವು ಯುರೋಪಿನ ಇತಿಹಾಸದಲ್ಲೇ ನವ ಪರಿಚ್ಛೇದವೊಂದನ್ನಾರಂಭಿಸಲಿರುವುದು. ಇಟೆಲಿ ಜರ್ಮನಿಗಳೊಳಗೆ ವೈಷಮ್ಯದ ಬದಲಿಗೆ ಮತ್ತಷ್ಟು ಸ್ನೇಹವುಂಟಾಗುವಂತಾಗುವುದು. ಅವುಗಳೊಂದಾಗಿ ಯುರೋಪಿನ ಭವಿಷ್ಯದ ಕುರಿತು ತಮ್ಮ ಸೂಚನೆಗಳನ್ನೀಯುವವು. ಇದರಿಂದ ಸಂಧಿಯುಂಟಾಗುವುದೋ ಇಲ್ಲವೋ ಎಂದು ನೋಡಬೇಕೆಂದು ಜರ್ಮನಿಯ ಅಭಿಪ್ರಾಯವಾಗಿದೆ.

ಇದೇ ತಾ 17ರಲ್ಲಿ ರೋಮ್ ಪಟ್ಟಣವನ್ನು ಬಿಟ್ಟುಹೋಗಲಿದ್ದ ಮಿ. ಸಮ್ನರ್ ವೆಲ್ಸರು ತನ್ನ ಪ್ರಯಾಣವನ್ನು ಮುಂದುವರಿಸಿರುವರು. ಹಿಟ್ಲರ್ ಮತ್ತು ಮುಸಲೋನಿಯವರ ಮಾತುಕತೆಯ ಫಲಿತಾಂಶವನ್ನವರು ನಿರೀಕ್ಷಿಸುತ್ತಿದ್ದಾರೆಂದು ನಂಬಲಾಗಿದೆ.

ಸ್ಕಾಪಾಫ್ಲೋವಿನ ಮೇಲೆ ವಿಮಾನ ಧಾಳಿ

ಇಂಗ್ಲೆಂಡಿನ ನೌಕಾನಿಲಯಗಳಲ್ಲೊಂದಾದ ಸ್ಕಾಪಾಫ್ಲೋ ಎಂಬ ಸ್ಥಳದ ಮೇಲೆ ಈ ಮೊದಲು ಜರ್ಮನ್ ವಿಮಾನಗಳು ಮೂರು ನಾಲ್ಕು ಸಲ ಧಾಳಿ ನಡಿಸಿದ್ದುವು. ಇದೇ ತಾ. 16ರಲ್ಲಿ 14 ಜರ್ಮನ್ ವಿಮಾನಗಳು ಸ್ಕಾಪಾಫ್ಲೋವಿನ ಮೇಲೇರಿ ಬಂದು ಹಲವು ಬೋಂಬುಗಳನ್ನೆಸೆದವು. ಒಂದು ಯುದ್ಧ ಹಡಗಕ್ಕೆ ಬೋಂಬು ತಾಗಿ ಸ್ವಲ್ಪ ಜಖಂ ಆಗಿರುವುದೆಂದು ಪ್ರಕಟವಾಗಿದೆ. ನೆಲದ ಮೇಲೆಯೂ ಬೋಂಬೆಸೆಯಲ್ಪಟ್ಟು ಒಬ್ಬನು ಕೊಲ್ಲಲ್ಪಟ್ಟ 7 ಮಂದಿ ಗಾಯಗೊಂಡಿರುವರು. ವಾರ್ತೆ ಸೇತುವೆ ಮತ್ತು 5 ಗುಡಿಸಲುಗಳಿಗೆ ಹಾನಿಯಾಗಿದೆ. ಒಂದು ಜರ್ಮನ್ ವಿಮಾನವು ನಾಶ ಮಾಡಲ್ಪಟ್ಟಿದೆ. ಇನ್ನು ಕೆಲವಕ್ಕೆ ಜಖಂ ಆಗಿದೆ. ಈ ವಿಮಾನ ಧಾಳಿಯಿಂದ ಕಡಿಮೆ ಎಂದರೆ 4 ಯುದ್ಧ ಹಡಗ, 3 ಬೆಟ್ಲಶಿಪ್ ಮತ್ತು ಒಂದು ಕ್ರ್ಯೂಸರ್ ಹಡಗಗಳಿಗೆ ಬಹಳ ಜಖಂ ಆಗಿದೆಯೆಂದು ಜರ್ಮನರ ವಾರ್ತೆ. ಇನ್ನು ಮುಂದೆ ಜರ್ಮನಿಯು ಇಂಗ್ಲೆಂಡಿನ ಮೇಲೆ ಪ್ರಬಲ ವಿಮಾನ ಧಾಳಿ ನಡಿಸುವುದೆಂದು ಜರ್ಮನರ ರೇಡಿಯೋ ಪ್ರಕಟಣೆ. ಬ್ರಿಟಿಷ್ ವಿಮಾನಗಳೂ ಜರ್ಮನಿಯ ಬೇರೆ ಬೇರೆ ಪಟ್ಟಣಗಳ ಮೇಲೆ ಹಾರಾಡಿ ಕರಪತ್ರಗಳನ್ನು ಚೆಲ್ಲುತ್ತಿವೆ. ಪೋಲೆಂಡಿನ ಮೇಲೆ ಕೂಡಾ ಹಾರಾಡಿರುತ್ತಿವೆ.

ಒಂದನೇ ಜಿಲ್ಲಾ ಹರಿಜನ ಪರಿಷತ್ತು
ಮಾರ್ಚ್ ತಾ. 22 ಮತ್ತು 23.

ಪರಿಷತ್ತಿಗೆ ಬರುವ ಪ್ರತಿನಿಧಿ ಮಹಾಯಕರಿಗೆ ಸಾವಂತ ಕಡನಿನವರು ಫೀಸು ಇಲ್ಲದೆ ಪಡುವಾದ ಪರಾಗಿ ತಿಳಿಸಿರುವರು. ಕೋಟಾರು, ಮುಲ್ಕಿ, ಉಡ್ಯಾವರ, ಕಲ್ಯಾಣಪುರ, ಗಂಗೊಳ್ಳಿ, ಮೊಬುರಳ ಕಡವಿನವರಿಗೂ ಬರೆಕೊಂಡದೆ.

M. R. Punja,
ಅಧ್ಯಕ್ಷ, ಸ್ವಾಗತ ಸಮಿತಿ.

ತಾ. 19-3-'40

ಸಿಂಧಿನ ಹೊಸಮಂತ್ರಿ ಮಂಡಲ

ಸಿಂಧಿನ ಗವರ್ನರರು ಇದೇ ತಾ. 18ರಲ್ಲಿ ಅಲ್ಲಾಬಕ್ಸ್ ಮಂತ್ರಿಮಂಡಲದ ರಾಜಿನಾಮೆಯನ್ನು ಸ್ವೀಕರಿಸಿ ನೇಶನಲಿಸ್ಟ್ ಪಕ್ಷದ ನಾಯಕರಾದ ಮಿರ್ ಬಂಡೆ ಅಲಿಖಾನ್ ತಾಲ್ಪುರವರನ್ನು ಹೊಸಮಂತ್ರಿ ಮಂಡಲವನ್ನು ರಚಿಸಲು ಆಮಂತ್ರಿಸಿರುವರು. ಮಿರ್ ಬಂಡೆ ಅಲಿಯವರು ಈ ಆಮಂತ್ರಣವನ್ನು ಸ್ವೀಕರಿಸಿ ಖಾನ್ ಬಹದೂರು ಖುಹ್ರೋ ಮತ್ತು ಮಿ. ನಿಜಲ್ದಾಸ್ ವಿಜರಾನಿಯವರ ಹೆಸರನ್ನು ಸೂಚಿಸಿ ಅವರಿಬ್ಬರೂ ಮಂತ್ರಿಗಳಾಗಿ ಪ್ರತಿಜ್ಞೆ ತೆಗೆದುಕೊಂಡಿರುವರು. ಶೈಕ್ ಅಬ್ದುಲ್ ಮಜಿದ್, ಮಿ. ಜಿ. ಎಮ್. ಸೈಯದ್ ಪೈಸಾಹೇಬ್ ಗೋಕಲ್ದಾಸರು ಇತರ ಮಂತ್ರಿಗಳಾಗಿ ನೇಮಿಸಲ್ಪಡುವರೆಂದು ನಂಬಲಾಗಿದೆ. ಖಾನ್ ಬಹದೂರ್ ಅಲ್ಲಾಬಕ್ಷರು ಇಂದು ಸಂಜೆ ಗ್ರಾಮಕ್ಕೆ ಹೊರಟು ಹೋಗಿರುವರು. ಕಾಂಗ್ರೆಸ್ ಪ್ರಾಕಮಾಂಡಿನ ಸಹಾಯದಿಂದ ಅವರು ಸಿಂಧಾ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷವನ್ನು ಒಲಿಸಿಕೊಳ್ಳಲೆತ್ನಿಸುವರೆಂದು ನಂಬಲಾಗಿದೆ.

ಮದ್ರಾಸ್ ಕೌನ್ಸಿಲ್ ಚುನಾವಣೆ ಕಾಂಗ್ರೆಸಿನ ವಿಜಯ

ಮದ್ರಾಸ್ ಕೌನ್ಸಿಲಿಗೆ ಈ ಸಲ ನಡೆದ ಚುನಾವಣೆಯಲ್ಲಿ 13 ಜನರಲ್ ಸೀಟುಗಳಲ್ಲಿ 11ನ್ನು ಕಾಂಗ್ರೆಸು ಪಡೆದು ಪ್ರಬಲ ವಿಜಯ ಹೊಂದಿರುವುದು. ಶ್ರೀ. ಸಿ ಎನ್. ಮತ್ತು ರಂಗ ಮುದಲಿಯಾರರು ದಿವಾನ್ ಬಹದೂರ್ ಕೆ. ದೈವಶಿಖಾಮಣಿ ಮುದಲಿಯಾರರನ್ನು 14 ಓಟುಗಳ ಬಹುಮತದಿಂದ ಗೆದ್ದಿರುವರು ಇದು ಅತಿ ದೊಡ್ಡ ವಿಜಯವಾಗಿದೆ.

ಬೊಂಬಾಯಿ ಗಿರಣಿ ಮುಷ್ಕರವು

ಇನ್ನೂ ಕೊನೆಗೊಂಡಿರುವುದಿಲ್ಲ. ಬೊಂಬಾಯಿಯ ಮೇಯರು ರಾಜಿ ಮಾಡಲು ಪ್ರಯತ್ನ ನಡಿಸುತ್ತಿರುವರು. ಅವರು ಗಿರಣಿ ಮಾಲಕರೊಡನೆ ಮಾತಾಡಿ ಇದೇ ತಾ 18ರಲ್ಲಿ ಮಜೂರ ಪ್ರತಿನಿಧಿಗಳನ್ನು ಮಾತಾಡಲು ಕರೆದಿರುವರು. ಇದೇ ತಾ. 17ನೇ ಸಂಜೆ ಮಜೂರರ ಪ್ರದರ್ಶನವೊಂದು ನಡೆದು ಮಜೂರ ಮುಖಂಡರು ರಾಜಿಗಾಗಿ ಕಳೆದ ವಾರ ನಡೆದ ಪ್ರಯತ್ನಗಳನ್ನು ವಿವರಿಸಿ ಹೇಳಿದರು. ಮಜೂರ ಮುಖಂಡರ ದಸ್ತಗಿರಿಯ ನಿಷೇಧಾರ್ಥವಾಗಿ ಇದೇ ತಾ. 18ರಲ್ಲಿ 24 ಘಂಟೆಗಳ ಮುಷ್ಕರ ನಡೆಯಿತು. ಅನೇಕ ಅಂಗಡಿ ಮತ್ತು ಚಿತ್ರ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದವು. ಈ ಸಂಬಂಧವಾಗಿ ಪಹರೆಮಾಡುತ್ತಿದ್ದ 24 ಮಂದಿ ಕೈದು ಮಾಡಲ್ಪಟ್ಟಿರುವರು. ಇವರಲ್ಲಿ 10 ಮಂದಿ ಸ್ತ್ರೀಯರು. ಕೇಂದ್ರ ಎಸೆಂಬ್ಲಿಯ ಮಜೂರ ಪ್ರತಿನಿಧಿ ಶ್ರೀ. ಎನ್. ಎಮ್. ಜೋಶಿಯವರು ಇದೇ ತಾ. 18ರಲ್ಲಿ ಬೊಂಬಾಯಿಗೆ ಬಂದು ಮಜೂರ ಮುಖಂಡರು ಮತ್ತು ಮೇಯರರೊಡನೆ ಮಾತಾಡಿರುವರು. ಅವರು ಕೆಲದಿನ ಬೊಂಬಾಯಿಯಲ್ಲಿ ನಿಂತು ಮುಷ್ಕರವನ್ನು ಕಡಿಸಲಿರುವರೆಂದು ತಿಳಿದುಬರುತ್ತದೆ.

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)
ಮಂಗಳೂರು, ತಾ 18-3-'40.

ನಗರಸಭೆ—ಕಳೆದ ತಾ 11ರಲ್ಲಿ ಮಂಗಳೂರು ನಗರಸಭೆಯು ಶ್ರೀ. ಬಿ. ಪಿ. ಬಾಂಗರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆಲವು ನಿಚ್ಚಗಳಿಗೆ ಹಣ ಮಂಜೂರಾದ ಮೇಲೆ ಅನೇಕ ಸರಕಾರಿ ಹುಕುಮು ಗಳು ಓದಲ್ಪಟ್ಟು ಮಂಜೂರಾದುವು. ಮಹಾಲಗೇಣಿದಾರರಿಂದ ಭೂತೆರಿಗೆ ವಸೂಲುಮಾಡುವ ವಿಷಯದಲ್ಲಿ ಆಲೋಚನೆ ಮಾಡಲು ಮುಂದಿನ ಸಭೆಗೆ ಆ ಪ್ರಶ್ನೆಯನ್ನು ಮುಂದರಿಸಿದರು. ಯುದ್ಧದ ಸಮಿತಿಗೆ ಸದಸ್ಯರಾಗಲು ಕಮಿಷನರಿಗೆ ಅನುಮತಿ ದೊರೆಯಲಿಲ್ಲ.

ಜಿಲ್ಲಾ ಬೋರ್ಡು ಸಭೆ—ದ. ಕ. ಜಿಲ್ಲಾ ಬೋರ್ಡಿನ ಸಭೆಯು ಕಳೆದ ತಾ. 14ರಲ್ಲಿ ಜರಗಿತು. ಡಾ. ಕೆ. ವಿಟ್ಠಲ ಶೆಟ್ಟಿಯವರು 1939-40ನೇ ರಿವೈಸ್ಡ್ ಬಜೆಟನ್ನು 1939-40ರ ಬಜೆಟ್ ಅಂದಾಜನ್ನೂ ಸಭೆಯ ಮುಂದಿರಿಸುತ್ತಾ ಒಂದು ಸುದೀರ್ಘವೂ ಯುಕ್ತಿಯುಕ್ತವೂ ಆದ ಭಾಷಣವನ್ನು ಮಾಡಿದರು. ಅದರಲ್ಲಿ 1939ರ ಅನಂತರದ ಆಯವ್ಯಯದ ಪರಿಸ್ಥಿತಿಯನ್ನು ವಿವರಿಸಿದರು. 1939-40 ಬಜೆಟ್ ಅಂದಾಜ 6,68,770 ರಿವೈಸ್ಡ್ ಎಸ್ಟಿಮೇಟು 672170. 1940-41ಕ್ಕೆ ಅಂದಾಜು ರೂ. 6,66,560. ಈ ವರ್ಷ ಭೂತೆರಿಗೆ (ಲೋಕಲ್ ಸೆಸ್)ಯಲ್ಲಿಯೂ ಇನ್ನು ಕೆಲ ಬಾಬುಗಳಲ್ಲಿಯೂ ಉತ್ಪತ್ತಿಯು ಕಡಿಮೆಯಾಗಿದೆ. ಆದರೆ ಇತರ ಕೆಲ ಉತ್ಪತ್ತಿಯ ದಾರಿಗಳೂ ಇವೆ. ಆದರೆ ಪ್ರಾಥಮಿಕ ವಿದ್ಯಾಭ್ಯಾಸದ ಮತ್ತೆ ಆರಂಭದ ಶಿಲ್ಕಿನಿಂದಲೂ ಮತ್ತು ಬೇರೆ ಹಣವನ್ನು ತರುವ ಕಾರಣದಿಂದಲೂ ಉಳಿತಾಯವು ಕಡಿಮೆಯಾಗಿದೆ. ಬೋರ್ಡಿನ ಆರ್ಥಿಕ ಸ್ಥಿತಿಗೆ ಪ್ರಾಥಮಿಕ ವಿದ್ಯಾ ಖಾತೆಯಿಂದ ತುಂಬ ನಷ್ಟವಾಗಿದೆ. ಈ ಸಂಗತಿಗಳನ್ನೆಲ್ಲಾ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವ್ಯಕ್ತಮಾಡಿದ್ದಾರೆ. ಆದರೂ ಅಗತ್ಯವಾದ ಖರ್ಚುಗಳಿಗೆ ಹಣವನ್ನು ಕಡಿಮೆಮಾಡಲಿಲ್ಲ. ಸಾರ್ವಜನಿಕ ಆರೋಗ್ಯ ಖಾತೆಗೂ, ದೊಡ್ಡ ಕಾಮಗಾರಿಗಳಿಗೂ ಹಣವನ್ನು ಇಟ್ಟಿದ್ದಾರೆ. ಕೆಲವು ಮೂರನೇ ತರಗತಿಯ ರಸ್ತೆಗಳು ಎರಡನೆಯ ತರಗತಿಯ ರಸ್ತೆಗಳಾಗಿ ಮಾರ್ಪಡುವುವು. ಎರಡು ದೊಡ್ಡ ಸೇತುವೆಗಳನ್ನು ಕಟ್ಟಿಸುವ ಬಗ್ಗೆ ಹಣ ಮಂಜೂರುಮಾಡಿದರು. ಈ ವರ್ಷದ ಬಜೆಟಿನಲ್ಲಿ ಒಂದು ವಿಶೇಷ ಸಂಗತಿಯೆಂದರೆ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಬಳದಲ್ಲಿದ್ದ ರೂಪಾಯಿಗೆ 2 ಆಣೆಯ ಕಡಿತದಲ್ಲಿ ಅರ್ಧಾಣೆಯನ್ನು ಕಡಿಮೆಮಾಡಿದ್ದಾರೆ ಎಂದರೆ ಸಂಬಳದಲ್ಲಿ ಇನ್ನು ಮೇಲೆ 2ಆಣೆಯ ಸ್ಥಾನದಲ್ಲಿ ಒಂದೂವರೆ ಆಣೆ ಕಡಿತ ಮಾತ್ರ ಇರುವುದು. ಈ ತಿದ್ದುಪಡಿಯೊಡನೆ ಬಜೆಟ್ ಮಂಜೂರಾಯಿತು. ಖಾನ್ ಬಹದೂರ್ ಬೆಪ್ಪನ್ನಾಡರೂ, ಶ್ರೀ. ಬಿ. ವೈಕುಂಠ ಬಾಳಿಗರೂ ಅಧ್ಯಕ್ಷರನ್ನು ಅಭಿನಂದಿಸಿದರು. ಡಾ. ಶೆಟ್ಟಿಯವರು ಸದಸ್ಯರನ್ನೂ, ಇಲಾಖಾ ಅಧಿಕಾರಿಗಳನ್ನೂ ವಂದಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು.

ಬೋರ್ಡಿನವರು ಮಂಗಳೂರು ಚಾರ್ಮಾಡಿ ಬಸ್ ಲೈನನ್ನು ನಡೆಸಬೇಕೆಂಬ ಆಲೋಚನೆಯನ್ನು ಮಾಡಿದ್ದಾರೆ. ಆದರೆ ಅದು ಯಾವಾಗ ಜಾರಿಗೆ ಬರುವುದೆಂಬುದು ಗೊತ್ತಾಗಲಿಲ್ಲ. ವಸ್ತುಗಳಿಗೆ ಅಧಿಕವಾಗಿ ಬೆಲೆ ಏರುತ್ತಿರುವ ಈ ಕಾಲದಲ್ಲಿ ಮೋಟರ್ ಬಸ್ ಸರ್ವೀಸನ್ನು ನಡೆಸುವ ಆಲೋಚನೆಯನ್ನು ನಿಲ್ಲಿಸಬೇಕು ಎಂದು ಉತ್ತಮ ಸಲಹೆ ಸೂಚಿಸಿದರು.

ಸರ್. ಸಿ. ಪಿ. ರಾಮಸ್ವಾಮಿ ಅಯ್ಯರು—ತಿರುವಾಂಕೂರಿನ ದಿವಾನರಾದ ಸಚಿವೋತ್ತಮ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ಕಳೆದ ತಾ 14ರಲ್ಲಿ ಸ್ಪೆಶಲ್ ಸಲೂನಿನಲ್ಲಿ ಮಂಗಳೂರಿಗೆ ಬಂದರು. ಅಂದೇ ಅವರು ಶೃಂಗೇರಿಗೆ ಮೋಟರು ಕಾರಿನಲ್ಲಿ ಹೊರಟರು. ತಾ. 16ರಲ್ಲಿ ಅವರು ಹಿಂತಿರುಗಿದರು. ತಾ 16ನೇ ಸಾಯಂಕಾಲ ಅವರು ಪ್ರಸಿದ್ಧ ಕಾಲೇಜು ವಿದ್ಯಾರ್ಥಿಗಳ ಸಂಘದ

ಉಡುಪಿ

ನಾಟಕ ಪ್ರದರ್ಶನ—ತಾ. 16-3-'40 ನೇ ಶನಿವಾರ ರಾತ್ರಿ ಮಂಗಳೂರು ಎವೆ ಚಂರ್ಸ್ ಸಂಗೀತ ನಾಟಕ ಸಭಾ ಇವರು ಸ್ಥಳೀಯ ಕಿರಿಯರ ಪ್ರಪಂಚದ ಸಹಾಯಾರ್ಥವಾಗಿ 'ಪ್ರೇಮ ಸಾಮ್ರಾಜ್ಯ' ಎಂಬ ಸಾಮಾಜಿಕ ನಾಟಕವನ್ನು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ, ಮಂಗಳೂರು ಮುನ್ಸಿಪಲ್ ಚೆಯರ್‌ಮ್ಯಾನರಾದ ಶ್ರೀ. ಬಿ. ವೆಂಕಟ್ರಾಯ ಬಾಳಿಗ, ಬಿ. ಎ. ಬಿ. ಎಲ್. ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಅಭಿನಯಿಸಿದರು. ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು ಕಿರಿಯರ ಪ್ರಪಂಚದ ಧ್ಯೇಯ, ಕಾರ್ಯಕಲಾಪಗಳನ್ನು ವಿವರಿಸಿ, ಶ್ರೀ. ಬಾಳಿಗರು ಅಧ್ಯಕ್ಷಸ್ಥಾನ ವಹಿಸುವಂತೆ ಕೇಳಿಕೊಂಡರು. ಶ್ರೀ. ಕೆ. ಕೆ. ಶೆಟ್ಟರು, ನಾಟಕ ಪ್ರದರ್ಶನದ ಕಷ್ಟನಷ್ಟ ನಿಷ್ಠುರಗಳನ್ನು ವಿವರಿಸಿ, ಮಂಗಳೂರು ಎವೆ ಚೇರ್ಸ್ರು ಅತಿ ಸಾಹಸದಿಂದ ಕರ್ನಾಟಕ ರಂಗ ಭೂಮಿಯ ಸೇವೆ ಮಾಡುತ್ತಿರುವುದರಿಂದ ಅವರನ್ನು ಅಭಿನಂದಿಸಿ, ಕಿರಿಯರ ಪ್ರಪಂಚದವರು ಅವರಿಗೆ ಕೊಡಬೇಕೆಂದು ನಿಶ್ಚಯಿಸಿದ್ದ ಬೆಳ್ಳಿಯ ತಟ್ಟೆಯನ್ನು ಅಧ್ಯಕ್ಷರು ಕೊಡಬೇಕಾಗಿ ನಿವೇದಿಸಿಕೊಂಡರು. ಅಧ್ಯಕ್ಷರು ತಟ್ಟೆಯನ್ನು ಎವೆಚೂರ್ ಸಂಘದ ಕಾರ್ಯದರ್ಶಿಗಳಿಗಿತ್ತು ಅಧ್ಯಕ್ಷ ಭಾಷಣ ಮಾಡುತ್ತ, 'ಇಂದಿನ ನಾಟಕವು ಸವರಸಭರಿತವಿದ್ದು ಸರ್ವಜನ ಪ್ರಿಯ ವಾದುದಾಗಿದೆ. ಈ ಸಂಘವು ಇನ್ನಷ್ಟು ಅಭಿವೃದ್ಧಿಗೆ ಬಂದು ಇದೇ ರೀತಿ ರಂಗಭೂಮಿಯ ಸೇವೆ ಮಾಡುವಂತಾಗಲೆಂದು ಹರಸಿದರು. ಕೊನೆಯಲ್ಲಿ ಕಿರಿಯರ ಪ್ರಪಂಚದ ಕಾರ್ಯದರ್ಶಿಗಳಾದ ಶ್ರೀ. ಕೆ. ಹೊನ್ನಯ್ಯ ಶೆಟ್ಟರು ಧನ್ಯವಾದಗಳನ್ನಿತ್ತರು. ಎವೆ ಚೂರ್ ಸಂಘದ ಕಾರ್ಯದರ್ಶಿ ಶ್ರೀ. ಎ. ಎ. ದೇವಾಡಿಗರು ತಮ್ಮ ಸಂಘದ ಕಡೆಯಿಂದ ಕೃತಜ್ಞತೆಯನ್ನು ಹೇಳಿದರು. ನಾಟಕಕ್ಕೆ ಜನರು ಕಿಕ್ಕಿರಿದು ಬಂದಿದ್ದು ಕಡೆಗೆ 0 4 0, 0 8-0 ಟಿಕೇಟುಗಳೇ ಇಲ್ಲದೆ ಹಲವರು ನಿರಾಶೆಯಿಂದ ಹಿಂತಿರುಗಬೇಕಾಯಿತು. ಮಹಾಜನರ ಅಪೇಕ್ಷೆ ಮೇರೆಗೆ ಈ ನಾಟಕವು ಮರುದಿನವೂ ಅಭಿನಯಿಸಲ್ಪಟ್ಟಿತು. ಈ ದಿನ ಶ್ರೀಗಳಾದ ಎಂ. ಬಿ. ನರಸಪ್ಪ, ನಾರಾಯಣ ಪೈ. ಬಿ. ರಾಮಚಂದ್ರರಾವ, ಟಿ. ಗುರುರಾಜ ಭಟ್ ಈ ನಾಲ್ವರು ನಟರಿಗೆ ಕಿರಿಯರ ಪ್ರಪಂಚದವರು ಪಾರಿತೋಷಕಗಳನ್ನಿತ್ತು ಗೌರವಿಸಿದರು. ಪಾರಿತೋಷಕಗಳನ್ನು ಸ್ಥಳೀಯ ಮುನ್ಸೀಫರಾದ ಶ್ರೀ ಕೃಷ್ಣಯ್ಯ ಚೆಟ್ಟಿಯಾರರು ಕೊಡುತ್ತ, ಸಕಲ ನಟರನ್ನೂ, ಸ್ಥಳೀಯ ಒರ್ಗ್ಯಾನೈಸರರನ್ನೂ ಅಭಿವಂದಿಸಿ, ನಾಟಕವು ಬೋಧಪ್ರದವಿದ್ದು ಉತ್ತಮವಾಗಿದ್ದುದೆಂದು ಅಭಿಪ್ರಾಯಪಟ್ಟರು. ಶ್ರೀ. ಕೆ. ಕೆ. ಶೆಟ್ಟರು ಧನ್ಯವಾದಗಳನ್ನಿತ್ತರು. ಎವೆಚೂರ್ಸರ ಕಡೆಯಿಂದ ಶ್ರೀ. ಎಂ. ಬಿ. ನರಸಪ್ಪನವರು ಧನ್ಯವಾದಗಳನ್ನರ್ಪಿಸಿದರು.

ಸಾರ್ವಜನಿಕರ ಅವಗಾಹನೆ ಬಗ್ಗೆ—ಉಡುಪಿ ಶಹರಿನ ಎಲ್ಲಾ ಜವುಳಿ ಅಂಗಡಿಗಳಿಗೆ ಪ್ರತಿ ತಿಂಗಳ ಕಡೇ ಆದಿತ್ಯವಾರ ದಿನ ರಜಾ ಇದ್ದು ಅಂಗಡಿಗಳು ಇಡೀ ದಿವಸ ಸಂಪೂರ್ಣವಾಗಿ ಮುಚ್ಚಲ್ಪಡುವವೆಂದು ಈ ಮೂಲಕ ತಿಳಿಸಲಾಗುತ್ತದೆ ಎಂದು ರಜಾದಿನ ಕಮಿಟಿಯವರು ತಿಳಿಸುತ್ತಾರೆ.

ಮಣಿಪಾಲ—ಕಳೆದ ವರ್ಷ(ತಾ.20-2-39) ರಲ್ಲಿ ವೈಭವದಿಂದ ದಿವಾನರಾದ ಆನರಬಲ್ ಖುಲಾಮು ಲ್ಕ್ ಸರ್ ಮಿರ್ಜಾ ಎಮ್. ಇಸ್ಮಾಯಿಲ್ ಕೆ. ಸಿ. ಐ. ಓ. ಬಿ. ಇ. ಇವರು ಶಿಲಾಸ್ಥಾಪನೆ ಮಾಡಿದ ಮಣಿಪಾಲ ಅನಾಥಾಲಯದ (Orphanage) ಕಟ್ಟಡವು ಈಗ ಪೂರ್ತಿಗೊಳಿಸಲ್ಪಟ್ಟು ಅದರ ಉದ್ಘಾಟನಾ ಸಮಾರಂಭವನ್ನು ಜನಸೇವಾ ಪ್ರಿಯರಾದ ಮುಂಬೈಯ ಶ್ರೀಯುತ ಲಕ್ಷ್ಮೀಕಾಂತ ತಿಂತಾರಾಮ ದಾಭೋಳಕರ ಇವರ ಕೈಯಿಂದ ತಾ. 25 3-40ರಲ್ಲು ನೆರವೇರಿಸುವದೆಂತ ನಿಶ್ಚಯಿಸಿದೆ.

ವರು ಅವರಿಗೊಂದು ಟೀಪಾರ್ಟಿಯನ್ನಿತ್ತರು. ತಿರುವಾಂಕೂರಿನ ದೇವಸ್ಥಾನ ಪ್ರವೇಶ ಸುಧಾರಣೆಯ ವಿಷಯವಾಗಿ ದಿವಾನರು ಒಂದು ಭಾಷಣವಾಡಿದರು.

ಡಿಫೆನ್ಸ್ ಆಫ್ ಇಂಡಿಯಾ ಮುಕದ್ದಮೆ—ಈ ಮುಕದ್ದಮೆಗನುಸಾರವಾಗಿ ಮಂಗಳೂರಿನ ಪ್ರಸಿದ್ಧ ಕಮ್ಯೂನಿಸ್ಟ್ ಮುಖಂಡರಾದ ಶ್ರೀ ಎಚ್. ಎ. ಫ್ರಾಟೆಯವರನ್ನು ದಸ್ತಗಿರಿಮಾಡಿ ವೆಲ್ಲೂರು ಜೈಲಿಗೆ ಕೊಂಡುಹೋಗಿರುವರು. ಶ್ರೀ. ಎ. ಫ್ರಾಟೆಯವರನ್ನು ದಸ್ತಗಿರಿಮಾಡಿದ ಬಗ್ಗೆ ಮಂಗಳೂರಲ್ಲಿ ಒಂದು ನಿಷೇಧ ಸಭೆಯು ಜರಗಿತು.

ಕುಮಾರಪರ್ವತ ಆರೋಹಣ—ಕುಮಾರಪರ್ವತವು ಸಮುದ್ರ ಮಟ್ಟದಿಂದ ಸುಮಾರು 4000 ಅಡಿ ಎತ್ತರವಿದ್ದು, ಅಲ್ಲಿಂದ ಕಾಣುವ ಸೃಷ್ಟಿಸೌಂದರ್ಯವು ಚಿತ್ತಾಕರ್ಷಕವಾಗಿದೆ. ಪರ್ವತದ ಅಗ್ರಭಾಗವು ಸುಬ್ರಹ್ಮಣ್ಯ ದೇವಸ್ಥಾನದಿಂದ ಸುಮಾರು 12 ಮೈಲು ದೂರದಲ್ಲಿದೆ. ಸುಬ್ರಹ್ಮಣ್ಯ ದೇವಸ್ಥಾನದಿಂದ ಮುಂದೆ ಅಲ್ಲಿ ತನಕವೂ ಯಾವಾಗಲೀ, ಮನೆಗಳಾಗಲೀ ಯಾ ಸರಿಯಾದ ದಾರಿ ಕೂಡಾ ಇರುವುದಿಲ್ಲ. ಕಾಡುಗಳನ್ನೂ ಬೆಟ್ಟಗಳನ್ನೂ ದಾಟಿ ಕೆಲವು ಕಾಡುಜನರ ಸಹಾಯದಿಂದ ಅಲ್ಲಿಗೆ ಹೋಗಬೇಕಾಗಿದೆ. ಈ ರೀತಿ ಪ್ರಸಿದ್ಧವಾದ ಕುಮಾರ ಪರ್ವತಕ್ಕೆ ಅನೇಕ ಮಹನೀಯರು ಹೋಗಲು ಇಷ್ಟಪಟ್ಟು ದೇವಸ್ಥಾನದ ಅಧಿಕಾರಿಗಳೊಡನೆ ಸೂಚಿಸಿದ್ದರಿಂದ ಅದಕ್ಕೆ ಬೇಕಾಗುವ ವ್ಯವಸ್ಥೆಗಳನ್ನು ದೇವಸ್ಥಾನದ ಕಡೆಯಿಂದ ಇದ್ದ ತಾ. 5-4-40ಕ್ಕೆ ಸುಬ್ರಹ್ಮಣ್ಯದಿಂದ ಒಂದು ತಂಗಡವು ಹೊರಡುವದಾಗಿ ನಿರ್ಧರಿಸಿರುತ್ತಾರೆ. ತಾ. 3ನೇ ಬೆಳಗ್ಗೆ ಕೂಟ ಕೀರ್ತಿ ಸುಬ್ರಹ್ಮಣ್ಯದಿಂದ ಹೊರಟಲ್ಲಿ ತಾ. 7ನೇ ಮಧ್ಯಾಹ್ನ ಯಾ ಸಾಯಂಕಾಲದೊಳಗೆ ಸುಬ್ರಹ್ಮಣ್ಯಕ್ಕೆ ಹಿಂತಿರುಗಿ ಬರಬಹುದು. ಈ ಅವಧಿಯಲ್ಲಿ ಬೇಕಾದ ಆಹಾರ ವ್ಯವಸ್ಥೆಯನ್ನು ಪ್ರಯಾಣಿಕರು ತಾವೇ ಮಾಡಿಕೊಂಡುಹೋಗಬೇಕಾಗಿದೆ. ಒಟ್ಟೆ ಬರೆಗಳನ್ನೂ ಆಹಾರ ಪದಾರ್ಥಗಳನ್ನೂ ಹಿಡಿದುಕೊಂಡುಹೋಗಲು ಕೂಲಿ ಆಳುಗಳ ಸರಬರಾಯಿಯನ್ನು ದೇವಸ್ಥಾನದಿಂದ ಮಾಡಲಾಗುವುದು. ಸುಬ್ರಹ್ಮಣ್ಯದಿಂದ ಕುಮಾರ ಪರ್ವತಕ್ಕೆ ಹೋಗಿ ಬರುವ ಖರ್ಚು ಎಂಬುದು ಪ್ರತಿಯೊಬ್ಬನಿಗೆ ರೂ. 1-8-0ಕ್ಕಿಂತ ಜಾಸ್ತಿ ಆಗಲಾರದು. ಹೋಗ ಬಯಸುವ ಮಹನೀಯರು ಮುಂದಾಗಿ ದೇವಸ್ಥಾನದ ಅಧಿಕಾರಿಗಳಿಗೆ ತಿಳಿಸಬೇಕಾಗಿ ಅಪೇಕ್ಷಿಸಲಾಗಿದೆ.

ಬೆಜವಾಡಿ—ಇಲ್ಲಿಯ ಶಾಲಾ ಕಟ್ಟಡದ ಕೆಲಸದ ಭರದಿಂದ ಸಾಗುತ್ತಿದೆ. ಹೊಸತಾಗಿ ಹಾಯರ್ ತರಗತಿಗಳನ್ನು ತೆರೆಯುವರೆ ಅಪ್ಪಣೆಯೂ ದೊರೆತಿದೆ. ವಿದ್ಯಾರ್ಥಿಗಳ ಸಂಖ್ಯೆಯು ಒಂದಕ್ಕೆ ಎರಡರಷ್ಟು ಏರುವಂತೆಯೂ, ಮೂರು ನಾಲ್ಕು ಉಪಾಧ್ಯಾಯರು ಹೆಚ್ಚಿಗೆ ಬರುವಂತೆಯೂ, ಹಾಯರ್ ಕ್ಲಾಸುಗಳು ತೆರೆಯುವರೆ ಹುಕುಂ ದೊರೆಯುವಂತೆಯೂ, ಸರ್ವಸಾಧ್ಯವಮಾಡಿದ ಬಗ್ಗೆ ಗೌರವವು ಮುಖ್ಯ ಅಧ್ಯಾಪಕರಾದ ಶ್ರೀ. ಎಂ. ವರದರಾಯರಿಗೆ ನೇ ಸಲ್ಲತಕ್ಕದ್ದಾಗಿದೆ. ಅಂತಹ ಮಹನೀಯರನ್ನು ಅಭಿನಂದಿಸುವುದಕ್ಕಾಗಿ ಈ ಶಾಲೆಯಿಂದಲೇ ಯಾವ ಹಾಗೆ ಮಾತೇಯೊಂದು ಕೇಳಿಬರುತ್ತಿದೆ. ಒಂದು ವೇಳೆ ಹಾಗೇನೇ ಆಗಿಹೋದರೆ "ಎಣ್ಣೆ ಬರುವಾಗ ಗಾಣ ಮುರಿಯಿತು" ಎಂಬ ನಾಣ್ಣುಡಿಗೆ ಸರಿಹೋಗುವುದಲ್ಲದೆ ಈ ಪ್ರಾಂತ್ಯದ ಬಡಮಕ್ಕಳ ಏಳಿಗೆಗೆ ಕುಂದನ್ನು ತಂದೊಡ್ಡಿದಂತೆಯೂ ಆಗುವುದೆಂಬುದು ಸ್ವತಃ ಸಿದ್ಧ. ಸಂಬಂಧಪಟ್ಟವರು ಯಾರವರ ಈ ಮೊರೆಗೆ ಕಿವಿಗೊಡಬಹುದೇ? ಎಂಬ ಬಾತ್ಮಿ.

ಮೂಲ್ಕಿ—ಸ್ಥಳೀಯ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಸಭೆಯು ತಾ. 9-3-40ರಲ್ಲಿ ಬಿಜಮಾಡಿಕೋಡಿ ಫಿಶರೀಸ್ ಎಲಿಮೆಂಟರಿ ಶಾಲೆಯಲ್ಲಿ ಮಿ। ಸಿ. ಎಚ್. ಜತ್ತನ್ನನವರ ಸಭಾಧ್ಯಕ್ಷತೆಯಲ್ಲಿ ಜರಗಿತು.

ಮೂಲ್ಕಿ ಫೋಟರ್ ಕಮಿಟಿ (ಮುಂಬೈ) ಇದರ ಅಧ್ಯಕ್ಷರಾದ ಶ್ರೀ. ಬಿ. ವಾಮನರಾಯರು ಸ್ವಲ್ಪ ಸಮಯದ ರಜೆಯ ಮೇಲೆ ಇಲ್ಲಿಗೆ ಬಂದಿರುವರು.

ಇಲ್ಲಿ ನೂತನವಾಗಿ ಕಟ್ಟಲ್ಪಡುತ್ತಿರುವ ಸ್ಕೂಲ್ ಕಟ್ಟಡದ ಬಾಬುವಿಗೆ ಜಿಲ್ಲಾ ಬೋರ್ಡಿನವರು ರೂ. 8500ನ್ನು ಸೆಂಕ್ಷನ್ ಮಾಡಿರುತ್ತಾರೆಂಗಿ ತಿಳಿದುಬಂದಿದೆ.

ವಿದ್ಯಮಾನಗಳು ಮಿತ್ರರಾಷ್ಟ್ರಗಳಿಗೆ ಪ್ರತಿಕೂಲವಾಗಿರುವವೆಂಬುದರಲ್ಲಿ ಸಂದೇಹವೇ ಇಲ್ಲ

ಮಿತ್ರರಾಷ್ಟ್ರಗಳಿಗೆ ಪ್ರತಿಕೂಲ ವಿದ್ಯಮಾನಗಳು

ಫಿನ್ಲೆಂಡು ರಷ್ಯಗಳೊಳಗಣ ಸಂಧಿಯು ವಿಜಯಿಯು ಪರಾಜಿತನ ಮೇಲೆ ಹೊರಿಸುವಂತಹುದಿರುವುದೇ ಹೊರತು ಗೌರವಪೂರ್ಣಕವಾದುದಿರುವುದಿಲ್ಲ. ಫಿನ್ಲೆಂಡು ಇನ್ನು ಮುಂದೆ ಸದಾ ರಷ್ಯದ ಅಧೀನವಿರುವಂತಾಗಿದೆ. ಮಾತ್ರವಲ್ಲದೆ ಸ್ವೀಡನ್ ಮತ್ತು ನೋರ್ವೆಗಳು ಕೂಡಾ ರಷ್ಯವು ಹೇಳಿದಂತೆ ಕೇಳಬೇಕಾಗುವ ಪರಿಸ್ಥಿತಿಯುಂಟಾಗಿರುತ್ತದೆ. ಅವುಗಳ ಪಶ್ಚಿಮದ ಎರಡು ಬಂದರುಗಳನ್ನು ರಷ್ಯವು ಕೇಳಲಿರುವುದೆಂದು ಇಷ್ಟರಲ್ಲೇ ಸುದ್ದಿಯುಂಟಾಗಿದೆ. ಇಂದೀಗ ಬಾಲ್ಟಿಕ್ ಸಮುದ್ರವು ನಿಜವಾಗಿಯೂ ರಷ್ಯದ ಸರೋವರದಂತಾಗಿದೆ. ಪೋಲಂಡಿನ ಮೇಲೆ ಧಾಳಿ ನಡೆಸುವ ಮೊದಲು ರಷ್ಯವನ್ನು ಬಗ್ಗುಬಡೆಯಲು ಅದರ ಸಹಕಾರವನ್ನು ಕೇಳಿದ್ದ ಜರ್ಮನಿಯು ಇಂದು ಮಿತ್ರರಾಷ್ಟ್ರಗಳ ಮೇಲಿನ ದ್ವೇಷದಿಂದ ರಷ್ಯದೊಡನೆ ಒಪ್ಪಂದಮಾಡಿಕೊಂಡು ಯುದ್ಧದಲ್ಲಿ ರಷ್ಯದ ಸಹಕಾರ ಪಡೆಯುವುದಕ್ಕಾಗಿ ಉತ್ತರ ಮತ್ತು ಈಶಾನ್ಯ ಯುರೋಪಿನ ಮೇಲೆ ಅಧಿಕಾರ ನಡೆಸಬೇಕೆಂಬ ಆಕಾಂಕ್ಷೆಯನ್ನೆಲ್ಲಾ ಬಿಟ್ಟುಬಿಟ್ಟಿದೆ. ಮಾತ್ರವಲ್ಲದೆ ಇಟೆಲಿಯೂ ತಮ್ಮ ಕುಟುಂಬದೊಂದಿಗೆ ಸೇರಿ ತಮ್ಮೊಂದಿಗೆ ಸಹಕರಿಸುವಂತೆ ಒಳಗಿಂದೊಳಗೆ ಬಹಳ ಪ್ರಯತ್ನ ನಡೆಸುತ್ತಿದೆ. ಫಿನ್ಲೆಂಡಿನ ಕುರಿತಾದ ಇಟೆಲಿಯ ಧೋರಣೆಯು ಥಕ್ಕನೆ ಮಾರ್ಪಟ್ಟುದನ್ನು ನೋಡಿದರೆ ರಷ್ಯದ ಕುರಿತು ಇಟೆಲಿಯ ಹೃದಯವೂ ಮಾರ್ಪಾಟವಾದಂತಿದೆ. ಫಿನ್ಲೆಂಡಿನ ಯುದ್ಧಾರಂಭದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಸರಕಾರಗಳು ಸೇನಾ ಸಹಾಯವೀಯಲು ಅಂಜಿದರೂ ಫಿನ್ಲೆಂಡು ಸೋತರೆ ವೈರಿಗಳ ಬಲ ಹೆಚ್ಚುವುದೆಂಬುದನ್ನು ಮನಗಂಡು ಕಡೆಗೆ ಯಾವ ರೀತಿಯ ಸಹಾಯವೀಯುವುದಕ್ಕಾದರೂ ಸಿದ್ಧವಿದ್ದುವು. ಆದರೆ ಅದು ಬಹಳ ವಿಳಂಬವಾಗಿ ಹೋಯಿತು. ಜರ್ಮನಿಯು ತನ್ನ ಕೆಲಸವನ್ನು ಮುಂದುವರಿಸಿ ರಾಜಿ ಮಾಡಿಸಿ ಬಿಟ್ಟಿತು. ಇದರಿಂದ ಸ್ಕ್ಯಾಂಡಿನೇವಿಯ ರಾಷ್ಟ್ರಗಳಿಂದ ಮಿತ್ರರಾಷ್ಟ್ರಗಳಿಗೆ ಯಾವ ಸಹಾಯವೂ ದೊರೆಯದಂತಾಗಿರುವುದು ಮಾತ್ರವಲ್ಲದೆ ಜರ್ಮನಿಗೆ ಬೇಕಾದ ಸಹಾಯ ದೊರೆಯಲನುಕೂಲವಾಗಿದೆ. ಉತ್ತರ ಮತ್ತು ಈಶಾನ್ಯ ಯುರೋಪಿನ ರಾಜ್ಯಗಳೆಲ್ಲಾ ಅವರೊಂದಿಗೆ ಸಹಕರಿಸುವಂತಾಗಿದೆ. ಈಗ ಜರ್ಮನಿಯು ರುಮೇನಿಯದ ಸಹಕಾರಪಡೆಯಲೆಳಸುತ್ತಿದೆ. ಅದರ ಸ್ವಾತಂತ್ರ್ಯಕ್ಕೆ ರಷ್ಯದಿಂದ ಯಾವ ಬಾಧಕವೂ ಉಂಟಾಗದಂತೆ ಮಾಡಿ, ಇಟೆಲಿಯ ಸಹಾಯದಿಂದ ರುಮೇನಿಯವನ್ನು ಸಂಪೂರ್ಣವಾಗಿ ತನ್ನ ಕಡೆಗೆ ಒಲಿಸಿಕೊಳ್ಳುವ ಯತ್ನದಲ್ಲೀಗ ಜರ್ಮನಿಯು ನಿರತವಾಗಿದೆ. ಅಮೇಲೆ ಅದು ತನ್ನ ದೃಷ್ಟಿಯನ್ನು ಬಾಲ್ಕನ್ ರಾಷ್ಟ್ರಗಳ ಮೇಲೆ ಹರಿಸಲಿದೆ. ಇಟೆಲಿಯ ಸಹಾಯ ದೊರೆತರೆ ಹೆಚ್ಚಿನ ಬಾಲ್ಕನ್ ರಾಷ್ಟ್ರಗಳೂ ಡಿಕ್ಟೇಟರುಗಳ ಸಾಲಿಗೇನೇ ಸೇರಿದವರಾದವು. ಟರ್ಕಿ ಮತ್ತು ಗ್ರೀಸಿನಂತಹ ರಾಷ್ಟ್ರಗಳೂ ಕಡೆಗೆ ಜರ್ಮನಿ, ರಷ್ಯ ಮತ್ತು ಇಟೆಲಿಗಳ ಕೂಟಕ್ಕೆ ಸೇರಲೇ ಬೇಕಾಗುವ ಪರಿಸ್ಥಿತಿಯುಂಟಾಗಲೂಬಹುದು. ಯುರೋಪಿನ ಈಗಣ

ರಾಮಗಡ ಕಾಂಗ್ರೆಸ್ ಅಧಿವೇಶನ

ಅಧ್ಯಕ್ಷರಿಗೆ ಉತ್ಸಾಹಪರ ಸ್ವಾಗತ! ಃ ಃ ಃ ಃ ಖಾದಿ ಪ್ರದರ್ಶನದ ಉದ್ಘಾಟನೆ !!

ಅಧ್ಯಕ್ಷರ ಮೆರವಣಿಗೆ

ಇದೇ ತಾ. 15ರಿಂದ ರಾಮಗಡದಲ್ಲಿ ಕಾಂಗ್ರೆಸ್ ಅಧಿವೇಶನ ಸಪ್ತಾಹವು ಆರಂಭವಾಗಿರುವುದು. ಅಧ್ಯಕ್ಷರಾದ ಮೌಲಾನ ಅಬುಲ್ ಕಲಮ್ ಅಜದರು ತಾ. 15ನೇ ಬೆಳಗ್ಗೆ ಘಂಟೆ 9ಕ್ಕೆ ರಾಂಚಿ ರೈಲ್ವೇ ಸ್ಟೇಶನಿನಲ್ಲಿ ಬಂದಿಳಿದ ಕೂಡಲೆ ಅವರನ್ನು ಸ್ವಾಗತೀಕರಿಸಿ ಪುಷ್ಪಗಳಿಂದ ಅಲಂಕೃತವಾದ ಮಯೂರರಥದಲ್ಲಿ ಅವರನ್ನು ಕುಳ್ಳಿರಿಸಿ 3 ಮೈಲುಗಳ ವರೆಗೆ ಮೆರವಣಿಗೆ ನಡೆಯಿತು. ಬಾಬು ರಾಜೇಂದ್ರ ಪ್ರಸಾದರು ಅವರೊಂದಿಗೆ ಕುಳಿತಿದ್ದರು. ಆದಿವಾಸಿಗಳು ಮತ್ತು ಇತರ ಹಳ್ಳಿಗರೆಲ್ಲಾ ಸಹಸ್ರಗಟ್ಲೆಯಲ್ಲಿ ನೆರೆದುಬಂದು ಈ ಮೆರವಣಿಗೆಯಲ್ಲಿ ಭಾಗವಹಿಸಿದರು. ಸುಮಾರು 50,000ದಷ್ಟರ ಜನಸ್ತೋಮವನ್ನು ಸ್ವಯಂಸೇವಕರು ಕ್ರಮದಿಂದ ಹತೋಟಿಯಲ್ಲಿರಿಸಿದ್ದರು. ಜನತೆಯ ಜಯಕಾರ ಮತ್ತು ವಂದನೆಗಳನ್ನು ಅಧ್ಯಕ್ಷರು ಕರಜೋಡಿಸಿ ಸ್ವೀಕರಿಸುತ್ತಿದ್ದರು. ಈ ಮೆರವಣಿಗೆಯು ಕಾಂಗ್ರೆಸ್ ನಗರಕ್ಕೆ ಮುಟ್ಟಲು 1½ ಘಂಟೆಗಿಂತಲೂ ಹೆಚ್ಚು ಸಮಯ ಹಿಡಿಯಿತು. ಕಾಂಗ್ರೆಸ್ ನಗರ ಪ್ರವೇಶ ದ್ವಾರದಲ್ಲಿ ಸ್ವಯಂಸೇವಕಿಯರ ದಳದ ಮುಖ್ಯ ನಾಯಕಿಯಾದ ಶ್ರೀ. ಜಯಪ್ರಕಾಶ ನಾರಾಯಣರ ಪತ್ನಿ ಶ್ರೀಮತಿ ಪ್ರಭಾದೇವಿಯರು ಅಧ್ಯಕ್ಷರಿಗೆ ಆರತಿಯೆತ್ತಿ ಪುಷ್ಪಗಳನ್ನರ್ಪಿಸಿ ಸ್ವಾಗತೀಕರಿಸಿದರು. ಇಬ್ಬರು ಜಪಾನಿ ಸನ್ಯಾಸಿಗಳು ಮಂಗಳಗೀತೆ ಹಾಡಿದರು.

ಮೌಲಾನ ಅಜಾದರು ಕಾಂಗ್ರೆಸ್ ನಗರದಲ್ಲಿನ ಅಧ್ಯಕ್ಷ ಶಿಬಿರಕ್ಕೆ ಹೋದ ಸ್ವಲ್ಪ ಸಮಯದಲ್ಲಿಯೇ ಅಲ್ಲಿಂದ ಹೊರಟು ಗಾಂಧಿಯವರ ಗುಡಿಸಲಿಗೆ ಹೋಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರು ಹಲವರನ್ನು ಕಂಡು ಮಾತಾಡಿದರು. ಮೌಲಾನರು ಕಲ್ಕತ್ತದಿಂದ ಸ್ಪೆಶ್ಯಲ್ ಬಂಡಿಯೊಂದರಲ್ಲಿ ಬಂದಿದ್ದರು ಈ ಗಾಡಿಯು ರಾಷ್ಟ್ರೀಯ ಧ್ವಜಗಳಿಂದ ಶೃಂಗರಿಸಲ್ಪಟ್ಟಿದ್ದಿತು. ರಾಂಚಿ ರೈಲ್ವೇಸ್ಟೇಶನು ಕೂಡಾ ತ್ರೈವರ್ಣ ಧ್ವಜಗಳಿಂದಲಂಕೃತವಾಗಿದ್ದಿತು. ಅಧ್ಯಕ್ಷರಿದ್ದ ಟ್ರೈನು ಸ್ಟೇಶನಿಗೆ ಮುಟ್ಟಿದೊಡನೆಯೇ ಪ್ರಚಂಡ ಜಯಕಾರವೆದ್ದಿತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಜನರಲ್ ಸಕ್ರೆಟರಿಗಳಾದ ಶ್ರೀ ಅನುಗ್ರಹ ನಾರಾಯಣ ಸಿಂಹರೇ ಮೊದಲಾದವರು ಅಧ್ಯಕ್ಷರಿಗೆ ಹೂಮಾಲೆ ಹಾಕಿ ಸ್ವಾಗತೀಕರಿಸಿದರು. ಪುರುಷ ಮತ್ತು ಸ್ತ್ರೀ ಸ್ವಯಂಸೇವಕ ದಳವು 'ಗಾರ್ಡ್ ಆಫ್ ಓನರ್' ಕೊಟ್ಟಿತು ಶ್ರೀ ರಾಜಗೋಪಾಲಾಚಾರ್ಯರೂ, ಡಾಕ್ಟರ್ ಪ್ರಫುಲ್ಲಚಂದ್ರ ಘೋಷರೂ ಅಧ್ಯಕ್ಷರ ಟ್ರೈನಿನಲ್ಲೇ ಬಂದಿದ್ದರು ಮೆರವಣಿಗೆ ನಡೆದ ರಸ್ತೆಯ ಇಕ್ಕಡೆಗಳಲ್ಲಿಯೂ ಸ್ವಯಂಸೇವಕರು ಸಾಲುಗಟ್ಟಿ ನಿಂತಿದ್ದರು.

ಖಾದಿ ಮತ್ತು ಗ್ರಾಮಕೈಗಾರಿಕೆಗಳ ಪ್ರದರ್ಶನ

ಈ ಪ್ರದರ್ಶನವನ್ನು ಮಹಾತ್ಮ ಗಾಂಧಿಯವರು ಇದೇ ತಾ 14ರಲ್ಲು ತೆರೆದರು. ಸುಮಾರು 10,000 ಮಂದಿ ಆದಿವಾಸಿಗಳು ಮತ್ತು ಇತರ ಜನರು ಈ ಸಂದರ್ಭದಲ್ಲಿ ನೆರೆದು ಬಂದಿದ್ದರು. ಪ್ರದರ್ಶನ ತೆರೆಯುವ ಮೊದಲು ಮಹಾತ್ಮರೊಮ್ಮೆ ಸ್ಟಾಲುಗಳನ್ನೆಲ್ಲಾ ನೋಡಿಕೊಂಡು ಬಂದಿದ್ದರು. ಈ ಸಲದ ಪ್ರದರ್ಶನವು ಅತ್ಯಂತ ಜಯಶೀಲವಾಗಿದ್ದಿತು. "ಇಂತಹ ಪ್ರದರ್ಶನಗಳು ಬರೇ ತಮಾಷೆಗಳೇನೂ ಅಲ್ಲ ತಿಳುವಳಿಕೆಯ ನಿಲಯಗಳು. ಹಿಂದೂದೇಶದ ಬಲ, ವೈಭವ ಮತ್ತು ನಾಗರಿಕತೆಯು ತಳಹದಿಯಾಗಿರುವ ಗ್ರಾಮ ಕೈಗಾರಿಕೆಗಳು ಹೇಗೆ ನಡೆಸಲ್ಪಡುವವೆಂಬುದನ್ನಿಲ್ಲಿ ಕಂಡು ತಿಳಕೊಂಡು ಹಳ್ಳಿಗಳಲ್ಲಿ ಅವನ್ನು ಸ್ಥಾಪಿಸಬಹುದು. ಹಿಂದೀ ಹಳ್ಳಿ ಕೈಗಾರಿಕೆಗಳು ಪುನರುಜ್ಜೀವಿಸಲ್ಪಟ್ಟರೆ ಹಳ್ಳಿಗರ ಜೀವನ ಸ್ಥಿತಿಯು ಸುಧಾರಿತವಾಗಿ ಅದರ ಮಟ್ಟವು ಏರುವುದು. ಹಳ್ಳಿಗರು ತಮ್ಮ ಅಜ್ಞಾನ ಮತ್ತು ಅಸಹಾಯಕ ಸ್ಥಿತಿಯಿಂದ ವಿಮುಕ್ತರಾಗುವಂತೆ ನೆರವಾಗುವುದು ಶಿಕ್ಷಿತರ ಕರ್ತವ್ಯವಿರುತ್ತದೆ ಹಿಂದೀ ಹಳ್ಳಿಗಳು ಪುನರ್ಘಟಿತವಾದರೆ ಮಾತ್ರ ದೇಶದ ಪುನರ್ಘಟನೆಯು ಸಾಧ್ಯವಾಗುವುದು. ಕೆಲವೇ ಬೊಂಬಾಯಿ ಮತ್ತು ಕಲ್ಕತ್ತಗಳು ನಿಜವಾದ ಹಿಂದೂದೇಶದ ಚಿತ್ರವಾಗಿರಲಾರವು. 7 ಲಕ್ಷ ಹಳ್ಳಿಗಳಲ್ಲಿದೆ ನಿಜವಾದ ಹಿಂದುಸ್ಥಾನವಿದ್ದು ಹಿಂದೀ ಹಳ್ಳಿಗರಲ್ಲಿ ನವಜಾಗ್ರತಿಯುಂಟಾಗಬೇಕು ಅವರು ತಮ್ಮ ಶಕ್ತಿ ಮತ್ತು ಪ್ರಾಮುಖ್ಯತೆಯನ್ನು ಮನಗಂಡು ಸ್ವಾವಲಂಬಿಗಳಾಗುವಂತಾಗಬೇಕು. ಹಳ್ಳಿಗರ ಉದ್ಧಾರ ಮತ್ತು ಹಳ್ಳಿ ಕೈಗಾರಿಕೆಗಳ ಪುನರುಜ್ಜೀವನದಲ್ಲೇ ದೇಶದ ಸ್ವಾತಂತ್ರ್ಯದ ಬೀಗದ ಕೈಯಿದೆ" ಎಂಬುದೇ ಗಾಂಧಿಜಿಯವರ ಭಾಷಣದ ಸಾರಾಂಶ.

ಡಾಕ್ಟರ್ ರಾಜೇಂದ್ರ ಪ್ರಸಾದ್, ಸೇಟ್ ಜಮುನಾಲಾಲ್ ಬಜಜ್, ಶ್ರೀ ಭೂಲಭಾಯಿ ದೇಸಾಯಿ, ಖಾನ್ ಅಬ್ದುಲ್ ಗಫರ್ ಖಾನರೇ ಮೊದಲಾದ ಮುಖಂಡರ ಜನತೆಯ ಜಯಕಾರ ಪಡೆದು ಪ್ರದರ್ಶನವನ್ನು ತೆರೆಯುವ ಸಮಾರಂಭದಲ್ಲಿ ಭಾಗವಹಿಸಿದರು. ಪ್ರದರ್ಶನ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ ಲಕ್ಷ್ಮೀ ನಾರಾಯಣರು ಪ್ರದರ್ಶನ ತೆರೆವಂತೆ ಗಾಂಧಿಯವರನ್ನು ಕೇಳಿಕೊಂಡರು. ಪ್ರದರ್ಶನ ಚಪ್ಪರವು ಕಾಂಗ್ರೆಸ್ ನಗರದ ಬಳಿಯಿದ್ದು 9ನೇ ಶತಮಾನದ ಬಿಹಾರ್ ಶಿಲ್ಪಕಲೆಯ ಮಹಾದ್ವಾರವುಳ್ಳದ್ದಾಗಿರುವುದು. ಈ ದ್ವಾರದ ಬಳಿಯೇ ಹತ್ತಿಯಿಂದ ಖಾದಿತಯಾರಿಸುವ ಎಲ್ಲಾ ವಿಧಾನಗಳನ್ನೂ ತೋರಿಸುವ 6 ಗುಡಿಸಲುಗಳಿರುವವು ಮಾದರಿಯ ಸುಂದರ ಗೃಹವೊಂದರ ಪ್ರದರ್ಶನವು ಎಲ್ಲರನ್ನು ಆಕರ್ಷಿಸುತ್ತಿತ್ತು. ಈ ಗೃಹದ ಪ್ರತಿಯೊಂದು ಸಾಮಾನೂ ಕೈಯಲ್ಲಿ ಮಾಡಲ್ಪಟ್ಟುದಾಗಿದೆ ಸುಂದರವಾದ ಮನೆಗೆ ಬೇಕಾದ ಎಲ್ಲಾ ಸಾಮಾನುಗಳನ್ನೂ ಕೈಯಿಂದ ಮಾಡಿಯೇ ಹೇಗೆ ಒದಗಿಸಿಕೊಳ್ಳಬಹುದೆಂಬುದನ್ನಿದು ಮನಗೊಳಿಸುತ್ತಿತ್ತು. ಇದರ ಬಳಿ ಬೇರೆ ಬೇರೆ ನಮೂನೆಯ ಚರ್ಕಗಳ ಮತ್ತು ಅವುಗಳಿಂದ 300ರಿಂದ 400 ಕೌಂಟಿನ ವರೆಗೆ ನೂಲನ್ನು ತೆಗೆಯುವ ಪ್ರದರ್ಶನವಿದ್ದಿತು. ಚರ್ಮ ಹದಮಾಡುವುದು, ಪಾದರಕ್ಷೆ ತಯಾರಿಸುವುದು, ಕಾಗದ ಮಾಡುವುದು, ಜೇನು ನೊಣ ಸಾಕುವುದು, ಬೆಲ್ಲಮಾಡುವುದು, ಎಣ್ಣೆ ತೆಗೆಯುವದೇ ಮೊದಲಾದ ಹಳ್ಳಿ ಕೈಗಾರಿಕೆಗಳೆಲ್ಲಾ ಪ್ರದರ್ಶಿಸಲ್ಪಟ್ಟಿದ್ದವು. ನೇಪಾಳ ಸರಕಾರವು ಈಗಲೂ ಉಪಯೋಗಿಸುತ್ತಿರುವ ಕೈಯಿಂದ ಮಾಡುವ ಕಾಗದವನ್ನು ತಯಾರಿಸುವ ರೀತಿಯು ಪ್ರದರ್ಶಿಸಲ್ಪಟ್ಟಿತು. ಆಯುರ್ವೇದ ಭವನ, ಕಲಾಭವನ, ವಾರ್ಧಾಶಿಕ್ಷಣಕ್ರಮವನ್ನು ತೋರಿಸುವ ಹಿಂದುಸ್ಥಾನ ತಾಲಿಮ ಸಂಘ ಮೊದಲಾದುವುಗಳ ಏರ್ಪಾಡು ನಡೆದಿರುವುದು. ಈಸ್ಟಾಲುಗಳ ನಡುವೆ ಹಳ್ಳಿಗಳ ವಿನೋದ ಮತ್ತು ಸಂಜೆ ಗಾಂಧಿಯವರಿಗೆ ಪ್ರಾರ್ಥನೆ ನಡಿಸಲು ಖಾಲಿ ಸ್ಥಳವಿರುವುದು.

ತುಳುನಾಡ್ ಬೇಂಕ್

ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	**Rs**	**1,00,000**
Subscribed & Paid up Capital	...	**Rs**	**31,340**
Reserves & other Funds	...	**Rs.**	**22,052**

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK

OF SUPPLY AGENCY LIMITED.

ನೋಟೀಸು.

The Vijaya Bank Limited, Kaup.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಈ ಕೆಳಗೆ ಹೆಸರು ತಿಳಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳನ್ನು ಕರಾರಿನಂತೆ ಮಾಡದೆ ಬಡ್ಡಿ ಸಹ ಹಲವು ಸಮಯ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸಾಲ್ಯರುಗಳಿಗೆ ಬಿಟ್ಟ ರಿಜಿಸ್ಟ್ರ ನೋಟೀಸುಗಳು ಹಾಗೆ ಅವರ ವಾಪಾಸು ಬಂದಿರುವುದರಿಂದ ಈ ಮೂಲಕ ಜಾಹೀರು ಪಡಿಸುವದೇನೆಂದರೆ —

ಸದರಿ ನಗಗಳನ್ನು 30-3-40ನೇ ಶನಿವಾರ ಮಧ್ಯಾಹ್ನ ಘಂಟೆ 2ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಆದೇ ದಿವಸ ಸಂಪೂರ್ಣ ಆದರೆ ಇಲ್ಲದಿದ್ದರೆ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುತ್ತದು. ತಿಳಿದಿರುವದು.

ಸಾಲದ ನಂಬ್ರ	ಆಸಾಮಿಗಳ ಹೆಸರು.	ಸಾಲದ ಮೊಬಲಗು
109/36	ರಾಮಸೆಟ್ಟಿ, ದೇವಪ್ಪ ಸೆಟ್ಟಿಯ ಅಳಿಯ, ಬೆಳಪು ಗುತ್ತು, ಬೆಳಪು ಗ್ರಾಮ,	25—0—0
429/36	ರಾಮಣ್ಣ ಸೆಟ್ಟಿ, ಮಹಾಲಿಂಗ ಶೆಟ್ರ ಅಳಿಯ, ಮಕ್ಕಲ್ಲಿ ಮನೆ, ಮುಲೂರು ಗ್ರಾಮ.	5—0—0
117/37	ವೈ. ಶಿವರಾಮ ಸೆಟ್ಟಿ, ಬೊಮ್ಮಯ್ಯ ಶೆಟ್ರ ಮಗ, ಕಾಂಗಾಳ ಗುಡ್ಡೆ, ಪಡುಮನೆ, ಉಡುಪಿ ತಾಲೂಕು.	12—0—0
163/37	ಶೇಕ್ ಹಸನ್ ಸಾಹೇಬ್, ಉಮ್ಮರ್ ಸಾಹೇಬರ ಮಗ, ಕಲೀಸ್, ಮೂಳೂರು ಗ್ರಾಮ.	4—0—0
535/37	ಬೋಳಯ್ಯ ಪೂಜಾರಿ, ದಾಡು ಪೂಜಾರಿ ಮಗ, ಮೂಳೂರು ಗ್ರಾಮ	18—0—0
620/37	ತೋಮ ಪೂಜಾರಿ, ಕಾಳು ಪೂಜಾರಿ ಮಗ, ಕಾನದ ಮನೆ, ಪಡುಗ್ರಾಮ.	4—0—0

Office of the Bank KAUP.

Nandiappa Shetty, *Agent.*

ಈ ವಾರದ ಭವಿಷ್ಯ

ತಾರೀಕು 21-3-1940ರಿಂದ 28-3-1940ರ ವರೆಗೆ

ಮೇಷ— ಸದ್ಯದ ವಾತಾವರಣದಿಂದಾಗಿ ನಿಮ್ಮ ಶರೀರದಲ್ಲಿ ಉಷ್ಣ ಮತ್ತು ಪಿತ್ಥ ಇವೆರಡರ ಪ್ರಕೋಪವು ಕಂಡು ಬರುವುದು. ಇದರಿಂದ ಶರೀರದಲ್ಲಿ ದೌರ್ಬಲ್ಯವೂ ಪೀಡೆಯೂ ನಿದ್ರಾರಾಹಿತ್ಯವೂ ಉಂಟಾಗುವುದಲ್ಲದೆ ಅನೇಕ ದುಃಸ್ವಪ್ನಗಳೂ ಬೀಳುವವು. ಆದಾಯಕ್ಕಿಂತ ಖರ್ಚೇ ಅಧಿಕವಾಗಿ ಹಣದ ತಾಪತ್ರಯಕ್ಕೆ ಸಿಲುಕುವಿರಿ. ಆದರೂ ಸತ್ಸಂಧರೂ ಧರ್ಮನಿಷ್ಠರೂ ಆಗಿರತಕ್ಕವರಿಗೆ ಸುಖದುಃಖಗಳೂ ಲಾಭ ನಷ್ಟಗಳೂ ಸಮಾನವಾಗಿರುವುವು. ವಿದ್ಯಾರ್ಥಿ, ನಟ, ಗಾಯಕ, ವ್ಯಾಪಾರಿ, ನೌಕರಿ ಇತ್ಯಾದಿ ವರ್ಗಸ್ಥರಿಗೆ ಪ್ರವೃತ್ತಿಯಲ್ಲಿ ಅನಿಷ್ಟಕ್ಕಿಂತ ಇಷ್ಟವೇ ಅಧಿಕವಾಗಿ ಪ್ರಾಪ್ತವಾಗುವುದು. ತಾ. 23ರಿಂದ 26ರ ವರೆಗಿನ ದಿನಗಳು ಕಾರ್ಯಸಿದ್ಧಿಗೂ ಶತ್ರು ಜಯಕ್ಕೂ ಅನುಕೂಲಗಳಾಗಿವೆ.

ವೃಷಭ— ನಿಮಗೀವಾರವು ಬಹಳ ಅನುಕೂಲಕಾರಿಯಾಗಿದ್ದರೂ ಹುಟ್ಟಿನ ಶ್ರೀಮಸ್ತು ಕಾಣುತ್ತದಿಲ್ಲವೆ, ಕಾರಣ ಅನಿಷ್ಟಾಶಂಕೆಯು ಹುಟ್ಟುತ್ತಿರುವುದರಿಂದ ಏನನರ್ಥವಾದೀತೋ ಎಂಥ ಅಪಾಯಕ್ಕೆ ಗುರಿಯಾಗುವೆನೋ ಎಂಬೀ ಭಾವನೆಯು ನಿಮ್ಮ ಮನದಲ್ಲಿ ನೆಟ್ಟಿರುವುದರಿಂದ ಧೈರ್ಯದ ಸ್ಥಾನವನ್ನು ಭಯವು ಆವರಿಸಿರುವುದು. ವಿಜಯಿಯಾಗಿ ಮುಂದರಿಯತಕ್ಕವರಿಗೆ ಎಂತಹ ಮಹತ್ಕಾರ್ಯವೂ ತೃಣಪ್ರಾಯವಾಗುವದು. ಆರೋಗ್ಯವೂ ಚೆನ್ನಾಗಿರುವುದು. ಕಾರ್ಯದಲ್ಲಿ ವಿಜಯ, ಜನಮನ್ನಣೆ, ಧನಲಾಭ, ಗೃಹಸುಖ ಇತ್ಯಾದಿಗಳೆಲ್ಲವೂ ಅನಾಯಾಸದಿಂದ ದೊರೆಯುವವು. ತಾ. 25ರಿಂದ ವಾರಾಂತ್ಯದ ವರೆಗೂ ಉತ್ತಮವಿರುವುದು.

ಮಿಥುನ— ನೌಕರಿ ಭಾಗದಲ್ಲಿ ದಿನೇ ದಿನೇ ಅಸಂತೃಪ್ತಿಯು ಹೆಚ್ಚುವದು. ಮಹಾತ್ಮರ ಕೂಡ ಮನಸ್ತಾಪ, ಸ್ತ್ರೀಯರೊಡನೆ ಇಲ್ಲಸಲ್ಲದ ಕಲಹ ನಿಷ್ಠುರಗಳಿಗೆ ಗುರಿಯಾಗುವಿರಿ. ಕಣ್ಣು ನೋವು ತಲೆ ತಿರುಗು ಇತ್ಯಾದಿ ಕ್ಷುದ್ರ ರೋಗಗಳೂ ಬಾಧಿಸಿಕೊಳ್ಳುವವು. ಮುಂಚಿಗಿಂತ ಖರ್ಚು ಈಗ ಹೆಚ್ಚುತ್ತಿರುವುದಾದರೂ ಅದಕ್ಕೆ ತಕ್ಕದಾಗಿ ಆದಾಯವೂ ಇರುವುದು. ವಿಶೇಷತಃ ಮಿತ್ರರ ಸಹಾಯವು ಇರುವುದರಿಂದ ರಾಜಕೀಯ ರಂಗದಲ್ಲಿ ಕೃತಕೃತ್ಯರಾಗುವಿರಿ. ವ್ಯಾಪಾರಿಗಳಿಗೆ ದಿನೇ ದಿನೇ ಅಭಿವೃದ್ಧಿಯಾಗುವುದು. ತಾ. 21, 22, 27, 28 ಈ ದಿನಗಳು ಇಷ್ಟಸಿದ್ಧಿಕರಗಳಾಗಿರುವವು.

ಕರ್ಕಾಟಕ— ನೀವು ಒಳ್ಳೇ ಕುಶಲಿಗಳಾದರೇನು ಜನರನ್ನು ಮೋಹಿಸುವ ಶಕ್ತಿಯು ನಿಮ್ಮಲ್ಲಿಲ್ಲವೆ. ಮಾತ್ರವಲ್ಲ, ಕಠಿಣ ಮತ್ತು ಅವಾಚ್ಯ ಶಬ್ದಗಳಿಂದ ಹಲವರಲ್ಲಿ ಕಲಹಗಂಟಿಕ್ಕುವಿರಿ. ಬೇಕಾದಷ್ಟು ಧನಾದಿಗಳನ್ನು ದುಡಿಯುವಿರಾದರೂ ಭೋಗಿಸುವ ಯೋಗ್ಯತೆಯು ಇಲ್ಲವೆ. ಸ್ವಶಕ್ತಿಯಿಂದಲೂ ಬೌದ್ಧಿಕ ಶಕ್ತಿಯಿಂದಲೂ ಲಾಟರಿ ಜೂಜು ಇವುಗಳ ಮೂಲಕವಾಗಿಯೂ ಧನವನ್ನು ಗಳಿಸುವಿರಿ. ಆದರೂ ದೇಹಾಲಸ್ಯ, ಮಾನಹಾನಿ ಇತ್ಯಾದಿಗಳಿಂದ ಮನಸ್ಸಿಗೆ ಎಂದೂ ಸಮಾಧಾನವಿರದು. ತಾ. 23, 24 ಈ ದಿನಗಳ ಮಟ್ಟಿಗೆ ಸ್ವೇಚ್ಛೆಯಾಗಿ ವಿಹರಿಸುವಿರಿ, ಗೃಹಸುಖವೂ ಚೆನ್ನಾಗಿದ್ದೀತು.

ಸಿಂಹ— ಕುರುವಿನ ಮೇಲೊಂದು ಬೊಕ್ಕೆ ಎದ್ದಂತೆ ದಿನೇ ದಿನೇ ನಿಮ್ಮ ಅದೃಷ್ಟವು ಕೀಳ್ನಡೆಗಿಳಿಯುತ್ತಾ ಬರುತ್ತಿದೆ. ಮುಟ್ಟಿದಲ್ಲಿ ನಷ್ಟ, ಹೋದಲ್ಲಿ ಕಷ್ಟವೆಂಬಂತೆ ಸರ್ವತ್ರ ಅವನತಿಯ ಚಿಹ್ನೆಗಳೇ ಕಾಣುವವಲ್ಲದೆ ಉನ್ನತಿ ಸಾಧಕವಾದುದೊಂದು ಕಾರ್ಯವೂ ಜರಗಲಾರದು. ಸಂಕಟ ಬಂದಾಗ ವೆಂಕಟರಮಣನೆನ್ನುವ ಗಾದೆಯಂತೆ ಈ ಕಷ್ಟಕಾಲದಲ್ಲಿ ಆಗಾಗ ದೇವರ ಸ್ಮರಣೆಯಾಗುವುದು. ಕುಟುಂಬ ಕಲಹ, ಆರ್ಥಿಕ ಸಮಸ್ಯೆ, ದೇಹಾಲಸ್ಯ, ಪ್ರವಾಸ ಇತ್ಯಾದಿಗಳಿಂದ ಕಿಂಚಿತ್ತೂ ಸುಖ ಸಿಗುವಂತಿಲ್ಲವೆ. ತಾ. 21, 22, 25, 26 ಈ ದಿನಗಳಲ್ಲಿ ಉದ್ಯೋಗಶೀಲರಿಗೆ ಜಯವು ಲಭಿಸುವಂತಿದೆ.

ಕನ್ಯಾ— ಒಂದು ಕಾರ್ಯದಲ್ಲಿ ವಿಜಯಿಗಳಾಗಿ ತುಂಬಾ ಲಾಭ ಹೊಂದಿದೆನೆಂದೆನಿಸಿಕೊಂಡಿರುವಾಗ ಮತ್ತೊಂದು ಭಾಗದಲ್ಲಿ ಪರಾಭವ ಸಂಭವಿಸಿ ನಷ್ಟವಾದೀತು. ಅಂತೂ ಆಯವ್ಯಯಗಳೂ ಸುಖದುಃಖಗಳೂ ಸಮತೂಕದಲ್ಲಿ ನಿಲ್ಲುವ ಚಿಹ್ನೆಗಳಿವೆ. ಬಂಧು ಮಿತ್ರರ ಸಹಕಾರ ಗುರುಹಿರಿಯರ ಸಹಾನುಭೂತಿ, ಅಧಿಕಾರಿಗಳ ಕೃಪೆ ಇತ್ಯಾದಿಗಳಿಂದ ಕೂಡಿರತಕ್ಕ ನಿಮಗೆ ಹೆಚ್ಚಿನ ಕಷ್ಟಗಳಲ್ಲಿ ಅಧಿಕೋಪಚಾರಗಳೂ ಸ್ಥಾನಪ್ರಾಪ್ತಿಯೂ ಆಗುವಂತಿದ್ದರೂ ದಾಯಾದಿಗಳ ಮತ್ತು ಶತ್ರುಜನರ ಅಸೂಯೆಯ ಪರಿಣಾಮವಾಗಿ ಧನನಾಶ, ವ್ಯಸನ, ಸೋಲುಗಳುಂಟಾದಾವು. ತಾ. 23, 24, 27, 28 ದಿನಗಳು ಸಿದ್ಧಿಕಾರಕಗಳಾಗಿವೆ

ತುಲಾ— ಒಂದು ರೂಪಾಯಿ ಸಿಗುವಂತಿದ್ದರೆ ಅದಕ್ಕಾಗಿ ನಾಲ್ಕು ರೂಪಾಯಿ ವ್ಯಯಿಸಬೇಕಾಗುತ್ತದೆ, ಆ ರೀತಿ ಇದೆ ನಿಮ್ಮ ಪರಿಸ್ಥಿತಿ. ಕೋರ್ಟು ಕಾರ್ಯಗಳಲ್ಲಿ ನಿಮಗೆ ಅನುಕೂಲವಾಗಿ ಫಲವು ಸಿಗುವಂತಿದ್ದರೆ ಇತರ ಸಾಮಾಜಿಕ ವ್ಯಾವಹಾರಿಕ ಕೆಲಸಗಳಲ್ಲಿ ಪೂರ್ಣ ವೈರಿತ್ವವೇ. ವ್ಯಾಪಾರ ನೌಕರಿ ಭಾಗಗಳಲ್ಲಂತೂ ತುಂಬಾ ನಷ್ಟ ಸಂಭವಿಸೀತು. ಕ್ಷುದ್ರ ಕಾರಣಗಳಿಂದಾಗಿ ಸ್ತ್ರೀಯರೊಡನೆ ಜಗಳ [illegible] ಮಾನಹಾನಿಯಾಗಲಿದೆ. ಗೃಹಚ್ಛಿದ್ರಗಳು ದಿನೇ ದಿನೇ ಪ್ರಬಲವಾಗುತ್ತಾ ಬರುತ್ತಿರುವುದರಿಂದ ಸಂಸಾರದಲ್ಲಿ ವಿರಕ್ತಿಯುಂಟಾಗುವುದು. ತಾ. 23, 24, 27, 28 ಈ ದಿನಗಳಲ್ಲಿ ಅತಿವ್ಯಯ, ಕಾರ್ಯವಿಘ್ನ ಅಪಾಯಗಳು ಪ್ರಾಪ್ತವಾದಾವು.

ವೃಶ್ಚಿಕ— ಉಷ್ಣಜ್ವರ, ನೇತ್ರರೋಗ, ಜಠರರೋಗ ಇತ್ಯಾದಿಗಳಿಂದ ಸದಾ ಪೀಡಿತರಾಗಿದ್ದ ನಿಮಗೆ ಶತ್ರುಜನರಿಂದಲೂ ಕೈಹಿಡಿದಾಕೆಯಿಂದಲೂ ಮನನೋಯುವಂತಹ ಕಾರ್ಯಗಳು ಜರಗಲಿವೆ. ಆದರೂ ನಿಮಗೆ ಬಂಧು-ಮಿತ್ರರ ಸಹಾಯವು ತುಂಬಾ ಇರುವುದರಿಂದ ಪ್ರತಿಕ್ರಿಯೆಯಿಂದಾಗಿ ಮನಶ್ಶಾಂತಿ ಹೊಂದುವಿರಿ. ಉದ್ಯೋಗದಲ್ಲಿ ಆದಾಯವು ತೃಪ್ತಿಕರವಿರುವುದರಿಂದಲೂ ಅನಾವಶ್ಯಕವಾದ ಖರ್ಚುಗಳೇನೂ ನಿಮ್ಮನ್ನು ಬಾಧಿಸದಿರುವುದರಿಂದಲೂ ಕೈಯಲ್ಲಿ ನಾಲ್ಕು ಕಾಸು ಯಾವಾಗಲೂ ಇರುವುದು. ವಿದ್ಯಾಭಿಲಾಷಿಗಳು ಪೂರ್ಣಮನಸ್ಕರಾಗುವರು. ತಾ 25-26 ಮಾತ್ರ ಅನಿಷ್ಟಕಾರಿಯಾದೀತು.

ಧನು— ಬಂಧುಮಿತ್ರರ ಮೂಲಕವಾಗಿ ನಾನಾವಿಧ ಚತುರೋಪಾಯಗಳನ್ನುಪಯೋಗಿಸಿ ಶತ್ರುಜನಗಳನ್ನು ವಶೀಕರಿಸಿಕೊಳ್ಳುವಿರಿ. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ವಿಯಾಗುವಿರಿ. ವ್ಯಾಪಾರ ವ್ಯವಹಾರಾದಿಗಳಲ್ಲಿ ತಕ್ಕಮಟ್ಟಿನ ಇಷ್ಟವು ಸಿದ್ಧಿಸುವದು. ಅಸ್ವತಂತ್ರ ಜೀವಿಯು ಅಧಿಕಾರಿ ಜನರ ಪೀಡೆಗೊಳಗಾಗುವನಲ್ಲದೆ ಸದಾ ಅಸಮಾಧಾನದಿಂದಿರುವನು. ಅಶ್ರೇಯಸ್ಸಿನಿಂದಲೇ ಕೆಲವೊಮ್ಮೆ ವಿಶೇಷ ಚಿಂತೆಗೀಡಾಗುವಿರಿ. ರಾಜಕೀಯ ರಂಗಸ್ಥಳಿಯಲ್ಲಿ ಇದು ಸವೆಯುವಲ್ಲ. ಸೇವಕರೂ ಪುತ್ರರೂ ಸ್ವೇಚ್ಛಾಚಾರಿಗಳಾಗುವರು. ತಾ. 23ರಿಂದ 26ರ ವರೆಗೆ ಹೆಚ್ಚಿನ ಅಭೀಷ್ಟಗಳು ಫಲಕಾರಿಯಾಗಲಿವೆ.

ಮಕರ— ದೇಹಾಲಸ್ಯವೂ ಜಡತ್ವವೂ ಕೊಂಚ ಮಟ್ಟಿಗೆ ನಿವೃತ್ತಿಯಾಗಿ ಕಾರ್ಯೋತ್ಸುಕ್ಯವು ಉಂಟಾಗುವುದು. ಉದ್ಯೋಗ ವ್ಯಾಪಾರಾದಿಗಳಲ್ಲೂ ಬಹುತೇಕ ಜನಾದರಣೆಗೆ ಪಾತ್ರರಾಗುವಿರಿ. ಕೈಗೊಂಡ ಕಾರ್ಯಗಳು ಉಚಿತವಾಗಿ ಕೊನೆಗೊಂಡು ಇಷ್ಟಿತಾರ್ಥವನ್ನು ಹೊಂದುವಿರಾದರೂ ಆಯಾಧಿಕ ವ್ಯಯದಿಂದಾಗಿ ಮನಸ್ಸಿಗೆ ಸುಖವಿಲ್ಲವೆ. ಮಿತ್ರವಿಯೋಗ, ಭಾರ್ಯಾಪೀಡೆ, ಮಕ್ಕಳು ಮರಿಗಳ ಕಾಹಿಲೆ ಇತ್ಯಾದಿ ಅನಿರೀಕ್ಷಿತ ಘಟನೆಗಳಿಂದ ಸದಾ ಶೋಕಾಕುಲಿತರಾಗುವಿರಿ. ಜನನೇಂದ್ರಿಯದ ಚಾಪಲ್ಯದಿಂದಾಗಿ ಅನಾರೋಗ್ಯಕ್ಕೆ ಗುರಿಯಾಗುವ ಸಂಭವವೂ ಇದೆ. ವಾರಾಂತ್ಯದ ನಾಲ್ಕು ದಿನಗಳು ಕಷ್ಟದಾಯಕಗಳಾದರೂ ಮುಂದಿನ ದಿನಗಳು ಶುಭಕಾರಿಗಳಾಗಿವೆ.

ಕುಂಭ— "ದಶಾನನೋಽಹರತ್ ಸೀತಾಂ ಬಂಧನಂ ಪ್ರಾಪ್ತವಾನ್ ಮಹೋದಧಿಃ" ದುಷ್ಟ ರಾವಣನು ಸೀತೆಯನ್ನು ಅಪಹರಿಸಿದ ಫಲವಾಗಿ ನಿರ್ದೋಷಿಯಾದ ಸಮುದ್ರಕ್ಕೆ ಬಂಧನವು ಪ್ರಾಪ್ತವಾಯಿತು. ಆದಕಾರಣ ದುರ್ಜನರ ಸಹವಾಸದಿಂದ ಸಜ್ಜನರೂ ಕೂಡ ಕಷ್ಟಕ್ಕೆ ಗುರಿಯಾಗುತ್ತಾರೆ. ಇಂತಹ ಪ್ರಕರಣವೂ ಸದ್ಯ ನಿಮಗುಂಟಾಗಲಿದೆ. ಆದಕಾರಣ ಕುಜನರ ಸಂಸರ್ಗವನ್ನು ಬಿಟ್ಟು ಆದಷ್ಟು ಸನ್ಮಾರ್ಗಿಯಾಗಿರುವುದೊಳ್ಳಿತು. ವೈದ್ಯ ವಿದ್ಯಾರ್ಥಿಗಳಿಗೆ ಅನಿಷ್ಟವೇ ಅಧಿಕವಾಗಲಿದೆ. ನಿಮ್ಮ ಗೃಹಪರಿವಾರವೂ ಆರ್ಥಿಕಭಾಗವೂ ಉತ್ತಮವಿರುವುದರಿಂದ ತಾಪತ್ರಯಗಳಿಗೆ ಸಿಲುಕದೆ ಹೆಚ್ಚಿನಂಶ ಸುಖದಿಂದ ದಿನ ಕಳೆವಿರಿ. ತಾ. 23ರಿಂದ 26ರ ವರೆಗೆ ಸ್ವಲ್ಪ ಜಾಗರೂಕರಾಗಿರಿ.

ಮೀನ— ಯಾರೆಷ್ಟೇ ಬೆದರಿಕೆಯನ್ನು ಹಾಕಿದರೂ ಒಂದು ಕೈನೋಡಿಬಿಡೋಣ ಎಂಬ ಧೈರ್ಯವು ನಿಮ್ಮಲ್ಲಿ ಕಂಡುಬರುತ್ತಿದೆ. ಪುತ್ರ ಮುಖದಿಂದಲೂ ಭೂಮುಖಾಂತರವಾಗಿಯೂ ಸಾಕಷ್ಟು ಧನ ಲಭಿಸಲಿದೆ. ವಕೀಲ ವೃತ್ತಿಯವರು ಕ್ರಿಮಿನಲ್ ವ್ಯವಹಾರದ ಮೂಲಕ ಧನ ಸಂಪಾದಿಸುವರು. ವಿರೋಧಿಗಳ ಉಪಟಳವು ದಿನೇ ದಿನೇ ವೃದ್ಧಿಹೊಂದುತ್ತಿರುವುದರಿಂದಲೂ, ವಿಶೇಷ ವಿಸ್ತಾರದ ಪ್ರವಾಸಾದಿಗಳಿಂದ ಕಾಲಕ್ಕೆ ಸರಿಯಾಗಿ ನಿದ್ರಾಹಾರಗಳು ದೊರಕದಿರುವುದರಿಂದಲೂ ಅನಾರೋಗ್ಯವು ತಲೆದೋರುವುದು. ಹಲವರಲ್ಲಿ ಕಲಹಕ್ಕೆಯ್ಯಲಿರುವಿರಿ. ತಾ. 21ರಿಂದ 24ರ ವರೆಗೆ ಸ್ವಲ್ಪ ಅನುಕೂಲ.

ನೋಟೀಸು

ಕಾರ್ಕಳ

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮಸಂಖ್ಯೆ [illegible] R I A. NO [illegible]

ಕಾರ್ಕಳ ಮೊಗವೀರ ವಿಲೇಜರ್ಸ್ ಫಂಡ್ ಎಂಬ ಸಂಸ್ಥೆ—ಇದರ ಗುರಿಕಾರ ಚೆಂಗ ಗುರಿಕಾರ, ಪಂಚೆ ಗುರಿಕಾರನ ಅಳಿಯ, ಉಡುಪಿ ತಾಲ್ಲೂಕು ಪಡುಬೈಲ ಗ್ರಾಮದ ಕಾಪಿ ಪಟ್ಣದಲ್ಲಿರುವವ —ವಾದಿ

ರಂಗು ಹೆಂಗ್ಸು ಸಹಾ —ಪ್ರತಿವಾದಿಯು

ವಾದಿ ಫಂಡಿಗೆ ಪ್ರತಿವಾದಿರಿಂದ (ಬಾಕಿ) ಹುಟ್ಟಿದ್ದ ಸಾಲ ಸ್ವಾಧೀನತೆಬಗ್ಗೆ ಕೊಡ ಸದ್ರಿದಾವೆಯಲ್ಲಿ ವಾದಿ ಸಂಸ್ಥೆಯ ಗುರಿಕಾರ ಯಾನೆ ಮೆನೇಜರ ಚೆಂಗ ಗುರಿಕಾರನು ಸದ್ರಿ ಸಂಸ್ಥೆ ಕಡೆಯಿಂದ ಈ ದಾವೆಯನ್ನು ನಡೆಸುವ ಪರ್ಮಿಶನ್ ಕೊಡಬೇಕಾಗಿ ಕೊಟ್ಟ ಸದ್ರಿ R. I. A. No. 345/1940ನೇ (ಅರ್ಜಿಯು) ನೋಟೀಸ್ ಪ್ರಕಾರ; ಆ ಸದ್ರಿ ದಾವೆ ಕೂಡಾ ಇವೇ ಬರುವ ತಾರೀಕು 9-4-1940ಕ್ಕೆ ಇಟ್ಟಿರುವುದ್ರಿಂದ ಈ ಕುರಿತು ಏನಾದರೂ ಆಕ್ಷೇಪ ಹೇಳುವಂದಾದ್ದಿದ್ದರೆ ಸದ್ರಿ ಸಂಸ್ಥೆಗೆ ಸಂಬಂಧಪಟ್ಟವರು ಸದ್ರಿ ತಾ. 9-4-1940ನೇ ದಿವ್ಸ ಹಗಲು 10 ಗಂಟೆಗೆ ಈ ಕೋರ್ಟು ಮುಂದೆ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ವ್ಯವಹರಿಸತಕ್ಕದ್ದು, ಇಲ್ಲವಾದ್ರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ.

ಕಾರ್ಕಳ 13-3-40 | M. Mukunda Kamath
ವಾದಿ ಕಡೆ ವಕೀಲ.

ನವಯುಗ

ನೋಟೀಸು.

ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅದನ್ನು ದಯಮಾಡಿ ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಚಂದಾದಾರರು ಪತ್ರವ್ಯವಹಾರ ಮಾಡುವಾಗ ತಮ್ಮ ಚಂದಾ ನಂಬ್ರ ಬರೆಯಬೇಕು. —ಮೆನೇಜರ್.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾಪುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತಿ ಡಿಸ್‌ಪೆನ್ಸರಿ.

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೋಕಿಲರ್" ಹೆಸರನ್ನೂ ಗಮನಿಸಿರಿ

Sole Manufacturer DR. D. N. JASANI, Vitalbhai Patel Road, BOMBAY 4

ದಾರಿ ಕಾಣದ ಸಂಸಾರಿಗಳ ಮಾರ್ಗದರ್ಶಿ!

ಭಗವದ್ಗೀತೆಯ ಕರ್ಮ ಪ್ರಾಧಾನ್ಯತೆ.

"ಅರ್ಜುನನ ಮನಸ್ಸಿನಲ್ಲಿ ಉಂಟಾದ ಶಂಕೆಗಳೇ ನಮ್ಮ ಮನಸ್ಸಿನಲ್ಲಿಯೂ ಉಂಟಾಗುತ್ತಿರುವುವು."

(ಲೇಖಕರು:—ಶ್ರೀ. ಅರವಿಂದ ಘೋಷ್‌ರವರು.)

ಚೈತನ್ಯತೆಯಲ್ಲಿ ಜನ್ಮತಾಳಿದ ದೇವೀಶಕ್ತಿಯು ಉದ್ದೀಪಿತ ಉಪದೇಶವೇ ಗೀತೆಯದು. ಪ್ರಾಣಿಮಾತ್ರಗಳ ಹೃದಯಗಳಲ್ಲಿ ವಿರಾಜಮಾನನಾಗಿರುವ ಪರಮಾತ್ಮನೇ ಪರದೆ ಹಿಂದೆ ಇದ್ದುಕೊಂಡು ನಮ್ಮ ಎಲ್ಲ ವಿಚಾರಗಳ, ಕರ್ಮಗಳ ಮುಂದಾಳುತನವನ್ನೂ ವಹಿಸಿರುವನು. ಆ ಶಕ್ತಿಯೇ ಪ್ರಕೃತಿ ಮತ್ತು ಶಕ್ತಿಯ ರೂಪದಲ್ಲಿ ಮನೋವೃತ್ತಿ ಮತ್ತು ಶಕ್ತಿಯ ಹಿಂದಿನಿಂದ ಪ್ರಕೃತಿ ವಿಶ್ವಚಕ್ರವನ್ನು ನಡೆಸುತ್ತಿದೆ. ನಮ್ಮಲ್ಲಿರುವ ಉಚ್ಚ ಭಾವನೆಗಳೂ ಮತ್ತು ಆಸೆಗಳೂ ಈ ಶಕ್ತಿಯಲ್ಲಿ ಪೂರ್ಣವಾಗಿ ಶಾಂತಿಪೂರ್ವಕವಾದ ಸಮಾಪ್ತಿಯನ್ನು ಹೊಂದುವುವು. ನಾವು ಈ ಪರದೆಯನ್ನು ದೂರಮಾಡಿ ನಮ್ಮ ಬಾಹ್ಯ ಅಸ್ತಿತ್ವದ ಹಿಂದೆ ಹೋಗಿ ಮುಟ್ಟಿದೆವೆಂದರೆ ನಮ್ಮ ಅಸ್ತಿತ್ವದ ನಿಜವಾದ ಒಡೆಯರಾಗುವೆವು. ನಮ್ಮ ಅಸ್ತಿತ್ವದ ಅನುಭವವನ್ನು ಮಾಡಿಕೊಳ್ಳಬಲ್ಲೆವು ನಮ್ಮಲ್ಲಿನ ಮಾನಸಿಕ ಚಂಚಲತೆಯನ್ನೂ, ಇದರ ಜ್ಯೋತಿಯಲ್ಲಿ ನಿರೋಧಿಸಬಲ್ಲವರಾಗುವೆವು. ಹತೋಟಿಯಿಂದ ದೂರವಾಗಿರುವ ನಮ್ಮ ಇಚ್ಛಾಶಕ್ತಿಯು ಇದರ ವಿಶಾಲ ಜ್ಯೋತಿಯಲ್ಲಿ ಮತ್ತು ವಿಂಗಡಿಸಲಸದಳವಾದ ಇಚ್ಛಾಶಕ್ತಿಯ ಮೇಲೆ ಸವಾರಿಮಾಡುವುದು

ರಣಭೂಮಿಯಲ್ಲಿ ಗುರುಮಂತ್ರವನ್ನು ಪಡೆದಂತಹ ಶಿಷ್ಯ ಅರ್ಜುನ. ಅವನು ಭಾವನೆಗಳ ಒಂದು ಪ್ರತಿಬಿಂಬ. ಹೋರಾಡುತ್ತಿರುವ ಮನುಷ್ಯನ ಆತ್ಮದ ಒಂದು ನಮೂನೆ ಅರ್ಜುನ. ಆದರೆ ಅವನಿಗೆ ಈ ಜಗತ್ತಿನಲ್ಲಿ ಕರ್ಮಮಾಡಿ ಮನುಷ್ಯ ಜೀವನದಲ್ಲಿಯೇ ಉಚ್ಚ ರೀತಿಯ ದೈವೀ ಶಕ್ತಿಯ ಹತ್ತಿರದ ಮೈತ್ರೀ ಭಾವದ ಮೂಲಕ ಜ್ಞಾನವನ್ನು ಪಡೆಯುವ ಲಭ್ಯ ದೊರೆಯಿತು. ಮಹಾಭಾರತದ ಕೇವಲ ಒಂದು ಘಟನೆ ಮಾತ್ರವಲ್ಲ ಗೀತೆ. ಅದು ಅಂತರಿಕ ಜೀವನದ ಒಂದು ಅಲಂಕಾರವಾಗಿ ಬಿಡುವುದು. ಇದಕ್ಕೂ ನಮ್ಮ ಹೊರಗಿನ ಜೀವನ ಮತ್ತು ಕರ್ಮಗಳಿಗೂ ಯಾವ ಸಂಬಂಧವೂ ಇಲ್ಲ. ಅದರೆ ಸಂಬಂಧವಿರುವುದು ನಮ್ಮೊಳಗಿನ ಆತ್ಮಶಕ್ತಿಯೊಡನೆ. ವೇದ ಮತ್ತು ಪುರಾಣಗಳ ಕೆಲವು ಭಾಗದ ಭಾಷೆಯು ಅಲಂಕಾರ ರೂಪಿನಲ್ಲೇ ಇದೆ ಆದರೆ ಗೀತೆಯ ವಿಚಾರವು ಹಾಗಲ್ಲ ಮನುಷ್ಯ ಜೀವನದ ಬಹಳ ಗಂಭೀರದಿಂದ ಆತ್ಮಕ್ಕೆ ಸಂಬಂಧಪಟ್ಟ ತೊಂದರೆಗಳನ್ನು ದೂರಮಾಡುವ ಶಕ್ತಿ ಗೀತೆಗಿದೆ. ನಾವು ಈ ವಿಚಾರಪೂರ್ಣವಾದ ಭಾಷೆಯಲ್ಲಿರುವ ಇದನ್ನು ನಮ್ಮ ಮನಸ್ಸಿಗೆ ಬಂದ ರೀತಿ ಅರ್ಥಮಾಡುವುದು ಸರಿಯಲ್ಲ. ಆದರೆ ತತ್ವಗಳನ್ನು ಕುರಿತು ಚರ್ಚಿಸುವುದು ಅಲಂಕಾರರೂಪವಾಗದೇ ಆದರ್ಶರೂಪಿನಿಂದ ಚರ್ಚಿಸಿದಂತಾಗುವುದು.

ವಿಶ್ವವ್ಯಾಪೀ ಆಂದೋಲನ ಮತ್ತು ದೈಹಿಕ ಮುಖಂಡತ್ವಗಳ ಸಾಮೂಹಿಕ ಮತ್ತು ವೈಯಕ್ತಿಕ ಚಳುವಳಿಯಲ್ಲಿ ಅರ್ಜುನನು ಒಬ್ಬ ಪ್ರಮುಖ ವ್ಯಕ್ತಿಯಾಗಿರುವನು. ಗೀತೆಯಲ್ಲಿ ಅವನು ಒಬ್ಬ ಕರ್ಮಪರಾಯಣನಾದ ಮನುಷ್ಯನ ಮಾದರಿಯಾಗಿದ್ದಾನೆ. ಅವನು ಈ ಕರ್ಮದ ಮೂಲಕ ಬಹಳ ದಾರುಣವಾದ ಸಂಕಟದಿಂದ ಈ ಮಾನವ ಜೀವನದ ತೊಡಕುಗಳಿಂದ ದೂರವಾಗುತ್ತಾನೆ.

ರಥದ ಮೇಲಿರುವ ಯೋಧನು ಅರ್ಜುನನು. ಭಗವಾನ್ ಶ್ರೀಕೃಷ್ಣನೇ ಸಾರಥಿಯಾಗಿದ್ದಾನೆ. ಆತ್ಮ ಮತ್ತು ದೈವೀ ಶಕ್ತಿಗಳು ಒಂದೇ ರಥದಲ್ಲಿವೆ. ಮತ್ತು ಒಂದು ಉಚ್ಚ ಆದರ್ಶದ ಪ್ರಾಪ್ತಿಗಾಗಿ ಘೋರಯುದ್ಧವು ನಡೆಯುತ್ತಿದೆ. ಜ್ಯೋತಿ ಮತ್ತು ಜೀವನದ ಒಡೆಯನಾದ ದೈವೀಶಕ್ತಿಯು ಒಳಗಿದೆ, ಜಿಜ್ಞಾಸುವಾದ ಮನುಷ್ಯನ ಸಹಾಯಕ್ಕೆಂದು ಇಳಿದು ಬಂದಿರುವ ದೈವೀಶಕ್ತಿ ಅದು.

ಗೀತೆಯ ಪ್ರಾರಂಭದಿಂದಲೇ ಶಿಷ್ಯನ ಸ್ವಭಾವದ ಸ್ಪಷ್ಟವಾದ ವರ್ಣನೆ ಇದೆ. ತನ್ನ ಕೆಲಸದ ಕಲ್ಪನೆಯು ಅವನಿಗೆ ಆಗುವಂತೆ ವರ್ಣಿತವಾಗಿದೆ. ನಾನೊಬ್ಬ ಮಹತ್ತರವಾದ ನರಯಜ್ಞಕ್ಕೆ ಆಯುಧವಾಗಿ ನಿಂತಿರುವೆನು ಎಂಬ ಭಾವನೆಯು ಅವನಲ್ಲಿ ವಿಚಾರತರಂಗಗಳನ್ನು ಎಬ್ಬಿಸುತ್ತಿದೆ. ಇದನ್ನು ಯೋಚಿಸಿ ಮುಂದಿನ ಮಹಾ ವಿಪತ್ತನ್ನು ಕಲ್ಪಿಸುವನು ವಿಚಾರಶೀಲನಾದ ಪುರುಷನಂತೆ ಅವನ ಮನಸ್ಸು ಆಗುವುದಿಲ್ಲ. ಸಾಧಾರಣರೀತಿಯ ಲೌಕಿಕ ಪ್ರವೃತ್ತಿಯ ಮಾನವನ ವಿಚಾರಗಳು ಅವನಲ್ಲಿ ಹುಟ್ಟುವವು. ಜೀವನದ ವಿಲಕ್ಷತೆಗಳ ಭಯವು ಅವನೆದುರು ನಿಲ್ಲುವವು. ತನ್ನ ಮುಂದಿನ ಕರ್ತವ್ಯವೇನೆಂಬುದೇ ತಿಳಿಯುವುದಿಲ್ಲ. ಇದೇ ಅರ್ಜುನನು ಎದುರಿಸಬೇಕಾಗಿ ಬಂದ ಘೋರ ಸಂಕಟ. ಗೀತೆಯ ಪಾರಿಭಾಷೆಯಲ್ಲಿ ಅರ್ಜುನನು ತ್ರಿಗುಣಾತ್ಮಕ ವ್ಯಕ್ತಿಯು. ಜನಸಾಧಾರಣರ ಚಲನವಲನಗಳಂತೆಯೇ ಇವನದೂ ಸಹ ಇರುತ್ತದೆ ತುಸು ಪವಿತ್ರ ಸಿದ್ಧಾಂತಗಳ ಆಧಾರದ ಮೇಲೇ ಕೆಲಸಮಾಡುವೆನೆಂಬ ಭಾವನೆಯು ಅವನಲ್ಲಿ ಹುಟ್ಟುವುದು. ತರಬಿಯತ್ತನ್ನು ಹೊಂದಿ ತನ್ನ ಜಿತೇಂದ್ರಿಯತೆಗೆ ಒಳಪಟ್ಟ ಯಶಸ್ಸುಳ್ಳವನು ತಾನೆಂಬ ಕಲ್ಪನೆ ಅವನಿಗಿದೆ. ಇತರರಂತೇ ತನಗೆ ಅಹಂಕಾರವೂ ಇದೆ. ಆದರೆ ಈ ಅಹಂಕಾರವು ಪವಿತ್ರವೂ ಸಾತ್ವಿಕವೂ ಆದುದು. ಇವನು ತನ್ನ ಜೀವನಕ್ಕೆ ಶಾಸ್ತ್ರಗಳ ಆಧಾರವನ್ನು ತೆಗೆದುಕೊಂಡಿರುವನು. ಅವನ ವಿಚಾರಧಾರೆಗಳನ್ನು ಹಿಡಿತದಲ್ಲಿಟ್ಟುಕೊಂಡಿರುವುದು ಅವನಿಗೆ ಧರ್ಮದಲ್ಲಿರುವ ವಿಶ್ವಾಸವೇ. ಭರತಖಂಡಕ್ಕೆ ಧರ್ಮವು, ಜಾತಿ ಮತ, ಸಮಾಜ ಮತ್ತು ನೈತಿಕ ಕಾನೂನುಗಳ ಒಂದು ಸಮಾವೇಶ. ತಾನೊಬ್ಬ ವಿಚಾರಶೀಲನೂ ಸಂಯಮಿಯೂ ಆದ ರಾಜಕುಮಾರನೆಂಬುವ ಹೆಮ್ಮೆ ಇದೆ ಆದರೂ ಮಹಾ ಭಯಂಕರವಾದ ಮತ್ತು ಅಸಂಭವವಾದ ಕೊಲೆಗೆ ಕಾರಣನಾಗುವೆನೆಂಬ ಭೀತಿಯು ಅವನನ್ನು ಬಾಧಿಸುತ್ತಿದೆ. ರಣರಂಗದಲ್ಲಿ ಸಮಸ್ತ ದೇಶದ ಸುಸಭ್ಯಜನಾಂಗಗಳು ಸೇರಿವೆ. ಇದರಲ್ಲಿ ಅತ್ಯಂತ ಗಣನೀಯವಾದ ವ್ಯಕ್ತಿಗಳು ಧ್ವಂಸರಾಗುವರಾಗಿದ್ದಾರೆ. ಒಂದು ಸುವ್ಯವಸ್ಥಿತವಾದ ಸಭ್ಯತೆಯು ನಾಶವಾಗಿ ಜೀವನವು ಅಸ್ತವ್ಯಸ್ತವಾಗುವುದೆಂಬ ಶಂಕೆ ಇದೆ.

ತನ್ನ ಭಾವನೆಗಳ ಮೂಲಕ ತನ್ನ ಕರ್ತವ್ಯದ ಅರ್ಥವನ್ನು ತಿಳಿಯಬೇಕೆಂಬ ಉತ್ಸಾಹವು ಅವನಲ್ಲಿ ಉಂಟಾಗುತ್ತದೆ ಅವನು ತನ್ನ ಸಾರಥಿಯೂ ಮಿತ್ರನೂ ಆದವನೊಡನೆ ಈ ರೀತಿ ಹೇಳುತ್ತಾನೆ "ಎರಡೂ ಸೈನ್ಯಗಳ ಮಧ್ಯೆ ನನ್ನನ್ನು ನಿಲ್ಲಿಸು." ಅವನ ವಿಚಾರ ಸರಣಿಯು ಉಚ್ಚವಾದುದಾಗಿಲ್ಲ. ತೀರ ವಿನಯ ರೀತಿಯಿಂದ ಅಲ್ಲಿನ ಲಕ್ಷಾಂತರ ಸೈನ್ಯವನ್ನೂ ನೋಡಬೇಕೆನ್ನುತ್ತಾನೆ. ಆದರ ಅವರ ಕಡೆ ನೋಡಿದ ಕೂಡಲೆ ಗೃಹಯುದ್ಧದ ಭಾವನೆಗಳು ಅವನಲ್ಲಿ ಮೂಡುವವು. ಒಂದೇ ದೇಶದ, ಒಂದೇ ಜನಾಂಗದ, ಒಂದೇ ವರ್ಣದ ಒಂದೇ ಗೋತ್ರದ, ಒಂದೇ ವಂಶದ ಜನರು ಎರಡು ಗುಂಪಾಗಿ ನಿಂತಿರುವುದು ಕಾಣುವುದು. ಕೇವಲ ಸಾಧಾರಣ ಮನುಷ್ಯನು ಸಹ ಯಾರನ್ನು ಪ್ರೀತಿ ಮತ್ತು ವಿಶ್ವಾಸಗಳಿಂದ ನೋಡುವನೋ, ಅಂತಹರನ್ನು ಇವನು ದ್ವೇಷಿಸಿ ಅವರ ಕೊಲೆಗೆ ಸಿದ್ಧನಾಗಬೇಕಾಗಿದೆ. ಗುರು, ಉಪಾಧ್ಯಾಯರು, ಹಿಂದಿನ ಹಳೆ ಮಿತ್ರರು, ಸಂಗಡಿಗರು, ಅಣ್ಣತಮ್ಮಂದಿರು, ಚಿಕ್ಕಪ್ಪಂದಿರು, ಅವನ ಹೆಂಡತಿಯ ಸಂಬಂಧದವರು, ಮಕ್ಕಳು, ಮೊಮ್ಮಕ್ಕಳು ಮೊದಲಾದ ಎಲ್ಲರ ಸಾಮಾಜಿಕ ಸಂಬಂಧವನ್ನು ತನ್ನ ಖಡ್ಗದಿಂದ ಕತ್ತರಿಸಬೇಕಾಗಿದೆ. ಇದೆಲ್ಲವನ್ನೂ ಅವನು ಮೊದಲು ತಿಳಿದಿರಲಿಲ್ಲವೆಂದು ಭಾವಿಸಬಾರದು. ಆದರೆ ಅವನು ತನ್ನ ಅಧಿಕಾರದ ಮುಂದೆ ತನ್ನ ಜೀವನದ ಸಿದ್ಧಾಂತಗಳ ಮುಂದೆ, ಸತ್ಯಕ್ಕಾಗಿ ಕಾದುವವರ ಮುಂದೆ ಕೊನೆಯಲ್ಲಿ ತನ್ನ ಕ್ಷತ್ರಿಯ ಧರ್ಮದ ಎದುರಿನಲ್ಲಿ ಗಂಭೀರವಾಗಿ ವಿಚಾರಮಾಡಲಿಲ್ಲ. ಈಗ ದೈವಿಕ ಸಾರಥಿಯು ಈ ದೃಶ್ಯವೆಲ್ಲವನ್ನೂ ಅವನ ಮುಂದೆ ತಂದು ನಿಲ್ಲಿಸುವನು ಎಲ್ಲವನ್ನೂ ನೋಡಿ ಅವನಿಗೆ ವಜ್ರಾಘಾತವಾದಂತಾಗುವುದು ಇದರ ಪರಿಣಾಮವೇನೆಂದರೆ ಶರೀರದಲ್ಲಿ ದೌರ್ಬಲ್ಯವುಂಟಾಗುವುದು. ಇದರಿಂದ ಕರ್ಮ, ಕರ್ಮದ ಫಲ ಮತ್ತು ಕೊನೆಗೆ ಜೀವನಗಳ ಮೇಲೆ ತಿರಸ್ಕಾರವುಂಟಾಗುವುದು. ಅವನು ಅಹಂಕಾರ ಮತ್ತು ಮೋಹ ಪರವಶನಾಗಿ ಜೀವನದ ಸುಖ ಆನಂದಗಳನ್ನು ತ್ಯಜಿಸುವನು. ಈ ಯುದ್ಧದಿಂದ ಸ್ವಲ್ಪವೂ ನ್ಯಾಯ ದೊರೆಯುವುದಿಲ್ಲವೆಂದು ಯೋಚಿಸುವನು. ಅನ್ಯೋನ್ಯ ಬಂಧು ಬಾಂಧವರನ್ನು ವಧಿಸಿ ರಾಜ್ಯವನ್ನು ಹೊಂದುವುದರ ಅನೌಚಿತ್ಯವು ಅವನನ್ನು ಚಿಂತೆಗೀಡು ಮಾಡುವುದು. ಮೂರು ಲೋಕಗಳ ಪ್ರಭುತ್ವವೇ ದೊರೆಯುವುದಾದರೂ, ಅವನಿಗೆ ಈ ವಧೆಯು ಭಯಂಕರವಾಗಿ ತೋರುವುದು ಇದೆಲ್ಲ ಮಹಾಪಾಪಕ್ಕೆ ಕಾರಣವಾಗುವುದೆಂದು ಹೆದರುವನು. ಆಗ ಅವನು ಈ ರೀತಿ ಪ್ರಲಾಪಿಸುವನು:— "ನನ್ನ ಸಮಸ್ತ ಅಸ್ತಿತ್ವವೂ, ಮಾನಸಿಕ ಮಾತ್ರವಲ್ಲ ದೈಹಿಕವೂ ಸಹ ಚಂಚಲವಾಗಿದೆ. ನನಗೆ ಧರ್ಮದ ಮಾರ್ಗವೇ ತೋರುತ್ತಿಲ್ಲ" ಈ ರೀತಿ ಹೇಳಿ ಶಿಷ್ಯನ ದೃಷ್ಟಿಯಿಂದ ಭಗವಂತನನ್ನು ಶರಣು ಹೋಗುವನು. ಕಳೆದುಕೊಂಡಿರುವ ನಿಜವಾದ ಧರ್ಮವನ್ನು ತೋರಿಸೆಂದು ಬೇಡುವನು. ಸರಿಯಾದ ಧರ್ಮ, ಸರಿಯಾದ ಕರ್ಮ ಮತ್ತು ಸರಿಯಾದ ಮಾರ್ಗವನ್ನು ತೋರಿಸಬೇಕೆಂದು ಅಂಗಲಾಚುವನು.

ತನಗೆ ಜಗತ್ತಿನ, ಜೀವನದ ಗುಟ್ಟುಗಳನ್ನು ತಿಳಿಯಬೇಕೆಂಬ ಆಸೆ ಏನೂ ಇಲ್ಲವೆಂದೂ ಆದರೆ ತನ್ನ ಧರ್ಮವನ್ನು

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ.

ಮೂಲಧನ	ರೂ. ಆ. ಪೈ		ರೂ. ಆ. ಪೈ
ತೆತ್ತಲ್ಪಟ್ಟ	6,00,000-0-0	ಕಟ್ಟಡ ಮತ್ತು ಸಾಮಾನು ಮೊದಲಾದವುಗಳಿಗೆ ನಿಶ್ಚಿತ ಮೂಲ ವ್ಯಯ	95,489-4-3
ಪೈಡ್ ಅಫ್	3,91,342-0-0	ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ರಿಸರ್ವ್ ಫಂಡು	4,50,000-0 0	ಬೆಲೆಬಾಳುವ ಸೆಕ್ಯೂರಿಟಿ	40,97,741-5 6
ಡಿಪೋಸಿಟ್ ಫಿಕ್ಸೆಡ್, ಕರೆಂಟ್ ಇತ್ಯಾದಿ	81,21,622-8-1	ಹುಂಡೀ ಪತ್ರ ಮೊದಲಾದವುಗಳು	10,30,549 2 10
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	[illegible]	20,64,586-2-0
ವಿವಿಧ	10,51,799-1-7	ವಿವಿಧ	9,82,093 10-4
ಈ ವರ್ಷದ ಲಾಭ	55,003 0-6	ನಗದು	17,99,207-1-3
ಜುಮ್ಲಾ	1,00,69,766-10-2	ಜುಮ್ಲಾ	1,00,69,766-10-2

GET
Rich & Prosperous!

Here is an authorised simple means upheld and pursued by millions of persons with great advantage This should lead you also to Riches and Prosperity. Ask for details-go through it carefully-take advantage of it and enjoyfull comforts, luxury, influence and all that go to make HAPPINESS complete.

K. S. ROW,
Worli, BOMBAY

ಮಾತ್ರ ತಿಳಿದು ಕೊಳ್ಳಬೇಕೆಂಬ ಆತುರವಿದೆ ಎಂದೂ ಪ್ರಾರ್ಥಿಸಿದನು. ತನ್ನನ್ನು ಉತ್ತಮನನ್ನಾಗಿ ಮಾಡುವ ಜ್ಞಾನವನ್ನು ಪ್ರಾರ್ಥಿಸುತ್ತಿಲ್ಲ. ಭಗವದ್ಗುರುವು ಆವನಿಗೆ ಸರ್ವಧರ್ಮಗಳನ್ನು ತ್ಯಜಿಸಿ ಬ್ರಹ್ಮಾನಂದದ ಜೀವನವನ್ನು ನಡೆಸುವಂತೆ ಉಪದೇಶಿಸುವನು. ಅದಕ್ಕಾಗಿಯೇ ಆವನಿಗೆ ಆತ್ಮದ ಸ್ಥಿತಿಯನ್ನು ಕುರಿತು ಉಪದೇಶಮಾಡುತ್ತಾನೆ. ಆತ್ಮಸಮರ್ಪಣೆ, ಕರ್ಮಫಲತ್ಯಾಗ, ಪಾಪ ಪುಣ್ಯಗಳಿಂದ ದೂರವಾಗಿಯೂ ಯೋಗಿಗಳ ಕರ್ಮಗಳನ್ನು ಮಾಡುವ ಮನಸ್ಸನ್ನೂ ಸಮಭಾವವಾಗಿ ಮಾಡಿಕೊಳ್ಳುವ, ಕೇವಲ ಬ್ರಹ್ಮನಲ್ಲೇ ಲೀನವಾಗುವ ಉಪದೇಶವನ್ನೂ ಕೊಡುತ್ತಾನೆ. ಇದರಿಂದ ಅರ್ಜುನನಿಗೆ ಸಮಾಧಾನವಾಗುವುದಿಲ್ಲ. "ಒಬ್ಬ ಕರ್ಮ ಸಂನ್ಯಾಸಿಯಾದ ಮನುಷ್ಯನಲ್ಲಿ ಯಾವ ಪರಿವರ್ತನೆಯಾಗಬೇಕು?" ಎಂದು ಕೇಳುತ್ತಾನೆ. ಶ್ರೀ ಕೃಷ್ಣನು ಹೀಗೆ ಸಮಾಧಾನ ಮಾಡುವನು "ಮನೋವೃತ್ತಿ ಕಾಮನೆಗಳನ್ನು ನಿಗ್ರಹಿಸಬೇಕು." ಅರ್ಜುನನು ತನಗೆ ಕರ್ಮವಾಗಬೇಕೆಂದನು. ಕರ್ಮಫಲತ್ಯಾಗದ ಉಪದೇಶ ಮಾಡಿರುವುದರಿಂದ, ಕರ್ಮಕ್ಕಿಂತ ಜ್ಞಾನವೇ ಉತ್ತಮವಾಗಿರುವುದರಿಂದ ಇಂತಹ ಭಯಂಕರ ಕರ್ಮ ಮಾಡುವಂತೆ ಹೇಳುವ ಕಾರಣವೇನೆಂದು ಪ್ರಶ್ನಿಸಿದನು.

ಅರ್ಜುನನ ಪ್ರಶ್ನೆಗಳೆಲ್ಲವೂ ಇದೇ ರೀತಿಯಲ್ಲೇ ಇವೆ. ಆವನಿಗೆ ತನ್ನ ಪ್ರಕೃತಿಯ ಅನುಸಾರವಾಗಿ ಕೆಲಸ ಮಾಡಬೇಕೆಂಬ ಇಚ್ಛೆ. ನಂತರ ಕೃಷ್ಣನು ಅವತಾರವಾದವನ್ನು ವಿವರಿಸಿ, ಅವತಾರಕ್ಕೆ ಕಾರಣಗಳನ್ನೂ ತಿಳಿಸಿದನು.

ಈ ರೀತಿ ಅರ್ಜುನನ ಶಂಕೆಗಳು ದೂರವಾಗಲು, ದೈವಿಕ ಶಕ್ತಿಯಿಂದಲೇ ತನ್ನ ನಿಯಮವಾಗಬೇಕೆಂದು ತಿಳಿಯಲು, ವಿವೇಕ ಬುದ್ಧಿ ಮತ್ತು ಸಾಹಸದ ಕಡೆ ಮನ ಪ್ರೋಲಿಸುವನು. ಇದರಿಂದ ಅವನ ಮುಂದಿನ ಕಾರ್ಯವು ನಿಯಮಿತ ರೂಪಕ್ಕೆ ಬರುವುದು. ನಮ್ಮ ನಿತ್ಯ ಜೀವನದಲ್ಲಿ, ನಮ್ಮ ದಿನ ದಿನದ ಅನುಭವಗಳಲ್ಲಿ ದೈವಿಕ ಶಕ್ತಿಯನ್ನು ಗುರುತಿಸಲಾಗುತ್ತದೆ? ಆತ್ಮಶಕ್ತಿಯ ಬಾಹ್ಯ ಚಿಹ್ನೆಗಳೇನು? ಈಗಲೇ ಅಂತಹ ದೈವಿಕವೂ ಅಲೌಕಿಕವೂ ಆದ ರೂಪವನ್ನು ನೋಡಬೇಕೆಂಬ ಆಸೆ ತನಗುಂಟೆಂದು ಹೇಳಿದನು. ಪುರುಷ ಪ್ರಕೃತಿಯ ವ್ಯತ್ಯಾಸವನ್ನು ತಿಳಿಯಬೇಕೆಂದನು.

ಇಂತಹ ಶಿಷ್ಯನಿಗೆ ಗೀತಾಕಾರರ ಗುರುವು ಉಪದೇಶಮಾಡುವನು. ಆವನು ಅಹಂಕಾರ ಯುಕ್ತನಾಗಿ, ಕರ್ಮದ ಮೂಲಕ, ಸ್ವಾರ್ಥದ ಬಳಿ ಸೇರಿದ್ದಾಗ ಈ ಉಪದೇಶವಾದದು. ಎಲ್ಲಿ ಕರ್ತೃವು ಉಪಶಮವಾಗುವುದೋ, ಎಲ್ಲಿ ಅಹಂಕಾರವು ದೂರವಾಗುವುದೋ, ಮನವು ಉತ್ತಮ ಅವಸ್ಥೆಯನ್ನು ಸೇರುವುದೋ ಅಲ್ಲಿ ಬ್ರಹ್ಮಾನಂದವು ದೊರೆಯುವುದೆಂದು ಉಪದೇಶಿಸಿದನು. ಇದಕ್ಕಾಗಿ, ತನ್ನಲ್ಲೇ ಮಾರ್ಗದರ್ಶಿಯನ್ನು ಹುಡುಕುವಂತೆ ಹೇಳಿದನು.

(S L. S)

ಮೈಸೂರು ಪತ್ರ

ಮೈಸೂರು ಶ್ರೀಮನ್ಮಹಾರಾಜರು ಅವರ ಸೂಕ್ಷ್ಮ ಪರಿಚಯ

[ಶ್ರೀ ಎನ. ಗುಂಡೂರಾವ್, 'ನವಯುಗ' ಮೈಸೂರ ಸಂಸ್ಥಾನ ಬಾತ್ಮೀದಾರರು]

ಮೈಸೂರು ಶ್ರೀಮನ್ಮಹಾರಾಜ ಶ್ರೀ|| ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್, ಜಿ. ಸಿ. ಐ. ಇ ರವರು ಇದೇ ಮಾಹೆ ತಾ|| 11ನೇ ಸೋಮವಾರ ದಿನ ಮುಂಬೈನಲ್ಲಿರುವ "ಅಂಕರೀಜ " ಹೊಟೇಲದಲ್ಲಿ ವೈಕುಂಠವಾಸಿಗಳಾದರೆಂಬ ಸುದಿಯನ್ನು ಕೇಳಿದಾಗ ನವಯುಗದಲ್ಲಿ ಕೊಡಲಾಗಿದೆ. ಆಳಿದ ಮಹಾಸ್ವಾಮಿ ಶ್ರೀ|| ಚಾಮರಾಜೇಂದ್ರ ಒಡೆಯರ್ ಧರ್ಮಪತ್ನಿ ಶ್ರೀ|| ಮಾತುಶ್ರೀ ವಾಣಿವಿಲಾಸ ಸನ್ನಿಧಾನದ ಮಹಾರಾಣಿಯವರ ದ್ವಿತೀಯ ಪುತ್ರರೇ ಇವರು. (ಶ್ರೀಮದ್ಯುವರಾಜರು) 1888ನೇ ಜೂನ್ ೫ರಲ್ಲಿ ಜನ್ಮವೆತ್ತಿದರು. ಇವರಿಗೆ 5ನೇ ವರ್ಷದಲ್ಲಿ ಅಕ್ಷರಾಭ್ಯಾಸ ನಡೆದು 1895ರಲ್ಲಿ ಕ್ರಮವಾಗಿ ಶಿಕ್ಷಣ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಲಾಯಿತು. ಶಿಕ್ಷಣವು ನಡೆಯುತ್ತಿರಬೇಕಾದರೆ 1901ರಲ್ಲಿ ಶ್ರೀಮನ್ ಮಹಾರಾಜರೊಂದಿಗೆ ಮೊಟ್ಟಮೊದಲು ಸಮುದ್ರಯಾನಮಾಡಿ ಬರ್ಮಾದೇಶವೆಲ್ಲೆಲ್ಲಾ ಪ್ರವಾಸಮಾಡಿ ಜ್ಞಾನಸಂಪಾದಿಸಿ ಬಂದರು. ನಂತರ ಇನ್ನೂ ಹೆಚ್ಚು ಶಿಕ್ಷಣಕೊಡುವ ಸಲುವಾಗಿ ಅಜ್ಮೀರದಲ್ಲಿರುವ ಮೇಯೋ ಕಾಲೇಜಿಗೆ ಕಳುಹಿಸಿ ಕೊಡಲಾಯಿತು. ಆದರೆ ಶ್ರೀಯವರು ಮೈಸೂರಿನಿಂದ ಕೇವಲ ತಿಂಗಳ ನಂತರ ಹಿಂತಿರುಗಿದರು. 1903ರಲ್ಲಿ ಅಜ್ಮೀರ್ ಮೇಯೋ ಕಾಲೇಜ್ ಶಿಕ್ಷಣ ತೃಪ್ತಿಯಾಗಲಿಲ್ಲವಾಗಿ ಮೈಸೂರಿನಲ್ಲಿ ರಾಯಲ್ ಸ್ಕೂಲನ್ನು ಸ್ಥಾಪಿಸಿ ಪಂಡಿತ್ಯ ಪೂರ್ಣ ಉಪಾಧ್ಯಾಯರುಗಳ ಮೂಲಕ ಹೆಚ್ಚು ಶಿಕ್ಷಣ ಪಡೆಯಲಾಯಿತು. 1908ನೇ ಇಸ್ವಿಯಲ್ಲಿ ಅಂದರೆ ತಮ್ಮ 20ನೇ ವರ್ಷದಲ್ಲಿ ಕಾಶ್ಮೀರ್ ಶ್ರೀ ನಗರಗಳಲ್ಲಿ ಪ್ರವಾಸಮಾಡಿ ಬಂದರು. 1909ನೇ ಡಿಸೆಂಬರ್ ಮಾಹೆಯಲ್ಲಿ ಜಪಾನ್ ದೇಶದಲ್ಲಿ ಪ್ರವಾಸಮಾಡಿ ಅನೇಕ ದೊಡ್ಡ ದೊಡ್ಡ ಮನುಷ್ಯರ ಭೇಟಿಮಾಡಿದರು. ಇಷ್ಟಲ್ಲದೆ ಜಪಾನ ಸಾಮ್ರಾಜ್ಯ ಮಂತ್ರಿಗಳಾಗಿದ್ದ ಕೌಂಟ ಒಕೂಮ ರವರು ಇವರನ್ನು ಸತ್ಕರಿಸಿ ಗೌರವಿಸಿದರು. ಇವರು ಶ್ರೀಮನ್ ಮಹಾರಾಜರವರ ಕಾರ್ಯದರ್ಶಿಗಳಾಗಿದ್ದ ಕಳೆದ ಮಹಾಯುದ್ಧದಲ್ಲಿ ಭಾರತೀಯ ಸೈನಿಕರ ಸಹಾಯನಿಧಿಸ್ಥಾಪಿಸಿ ಹೆಚ್ಚು ಸಹಾಯಮಾಡಿದರು. ಜಪಾನ್ ಪ್ರವಾಸ ಮುಗಿಸಿಕೊಂಡು ಹಿಂತಿರುಗಿದ ವೇಳೆ 1910ನೇ ಮಾರ್ಚಿ 11ರಲ್ಲಿ, ಶ್ರೀಮದ್ಯುವರಾಜ ಅರಸ ಎಂಬುವರ ಪುತ್ರಿ ರಾಣಿ ಕೆಂಪುಚಲುವಾಜಮ್ಮಣ್ಣಿಯವರನ್ನು ವಿವಾಹವಾದರು. 1913ರಲ್ಲಿ ಮೊಟ್ಟಮೊದಲು ಐರೋಪ್ಯ ದೇಶದಲ್ಲಿ ಸಂಚಾರ ಮಾಡಿದಾಗ ಇವರು ಹೋದೆಡೆಯಲ್ಲೆಲ್ಲಾ ಅಭೂತಪೂರ್ವ ಸ್ವಾಗತ ಹೊಂದಿ ಎಲ್ಲರ ಮನ್ನಣೆಗೂ ಪಾತ್ರರಾದರು.

ಇಂಗ್ಲೆಂಡಿನಿಂದ ಹಿಂತಿರುಗಿದ ವೇಳೆ ಮೈಸೂರು ಮಂತ್ರಿಮಂಡಳದಲ್ಲಿ ಒಂದು ಜವಾಬ್ದಾರಿಯುಕ್ತವಾದ ಹುದ್ದೆಯಲ್ಲಿದ್ದರು. ಪುನಃ 1936ರಲ್ಲಿ ಶ್ರೀಮನ್ಮಹಾರಾಜರೊಂದಿಗೆ ಇಂಗ್ಲೆಂಡ್ ಮುಂತಾದ ಕಡೆಗಳಲ್ಲಿ ಸಂಚರಿಸಿ ಬಂದರು. ಕೊನೆಗೆ 1939ನೇ ಜೂನ ತಿಂಗಳಲ್ಲಿ ಸಂಸಾರ ಸಮೇತರಾಗಿ ಯುರೋಪ ಖಂಡದಲ್ಲಿ ಪ್ರವಾಸ ಮಾಡಿ, ರೋಮಿನಲ್ಲಿರುವ ಕ್ರೈಸ್ತ ಗುರುಗಳ ಆಶೀರ್ವಾದ ಪಡೆದು ಪ್ರವಾಸವನ್ನು ಮುಗಿಸಿ ಕೆಲವು ತಿಂಗಳ ಕೆಳಗೆ ಮುಂಬೈಗೆ ಬಂದು, ತಾಜ್‌ಮಹಲ್ ಹೋಟೆಲ್ ಪಕ್ಕದಲ್ಲಿರುವ ಮೈಸೂರು ಕಟ್ಟಡ 'ಅಂಕರೀಜ' ಎಂಬಲ್ಲಿ ಶಾಂತಿಯುಕ್ತವಾಗಿ ಪರಮಾತ್ಮನ ಸನ್ನಿಧಿಗೆ ಸೇರಿದರೆಂದು ಕೇಳಿ ಈಡೀ ಮೈಸೂರು ವ್ಯಸನ ಪಡುತ್ತಿದೆಂದರೆ ಅತಿಶಯೋಕ್ತಿ ಮಾತಲ್ಲ.

Every Policyholder is a Member

IN

The Canara Mutual

ASSURANCE COMPANY, LTD.

(Head Office:- UDIPI, S India.)

Everyday the Membership increases.

The Company issues all the well-known plans of Assurance.

Female lives accepted.

JOIN ITS EVER INCREASING MEMBERSHIP.

THE ASIAN ASSURANCE COMPANY, LIMITED.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
„ M. Shivarama Rao, Organizer, Puttur.

Or

Sri. J. A. PUTRAN,
Branch Manager, MANGALORE.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ.)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಹಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)
ರೂ 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ಪ್ರತಿಗಳಿಗೆ ಬರೆಯಿರಿ:—

ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಜೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
Null Bazzar, Duncan Road,
BOMBAY 4.

ನಮ್ಮ ಹೊಸ ಪ್ರತಿನಿಧಿಗಳು

ಶ್ರೀ. ಕೆ. ಎಂ. ದೇಜಪ್ಪ ಶೆಟ್ಟರು 'ನವಯುಗ'ದ ಪ್ರತಿನಿಧಿಯಾಗಿ ಕೆಲಸ ಮಾಡಲು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಇವರು ಮಿತಭಾಷಿಗಳು, ವಿನಯಸಂಪನ್ನರು ಹಾಗೂ ಸರಳ ಮನೋವೃತ್ತಿಯ ಕಾಂಗ್ರೆಸ್ ಭಕ್ತರು. 'ನವಯುಗ'ವನ್ನು ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂಬ ಉತ್ಸಾಹೇಚ್ಛೆಯಿಂದ ಇವರು ಪ್ರತಿ ಹಳ್ಳಿ, ಪೇಟೆ, ಪಟ್ಟಣಗಳಲ್ಲೂ ಕ್ರಮಶಃ ಸಂಚರಿಸಲಿರುವರು. ಇವರಿಗೆ ಸಕಲರೂ ಉದಾರಪ್ರಿಯವಿತ್ತು 'ನವಯುಗ'ಕ್ಕೆ ಸರ್ವ ಪ್ರೋತ್ಸಾಹ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗುತ್ತದೆ. —ಮೆನೇಜರ್.

Degrees: Books. Medicines.

Free H L M S, H M B, H. M. D. etc Free Homeo-Ayur-Unani-Naturo degrees. by post also—Practioners also get soons Homeo Materiamedica, Rs. 5. Homeo-Practice book Rs 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd)
P O MAHUVA, (Kathiawar Dt, India.

NAVAYUGA
Advertisement Tariff

1 Page	Rs. 25/-	per insertion	
½ „	Rs. 15/-	„	„
¼ „	Rs. 8/-	„	„
⅛ „	Rs. 5/-	„	„

Per Single inch col. Re. 1 „
Contract rates on application
Manager-**Navayuga UDIPI.**

ಸದ್ವೈದ್ಯಶಾಲಾ ನಂಜನಗೂಡು ಇವರ "ಸುಬಲಾ"

ಪಿತ್ತಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯಾಗಿರುತ್ತದೆ.

ಬ್ರಾಂಚ್:—ರಥಬೀದಿ ಮಂಗಳೂರು

KOPRAN
Tooth Paste

ಹಿಂದೂದೇಶದ ಜನಪ್ರಿಯ ದಂತಾಂಜನ

ಆರೋಗ್ಯದ ತತ್ವಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ ಅತ್ಯಂತ ಸ್ವಚ್ಛವಾದದ್ದು, ವಿಷಹಾರಕವಾದದ್ದು.

KOPRAN CHEMICAL CO. BOMBAY

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರಪಟ್ಟಿ ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE**.

ಮೂಲವ್ಯಾಧಿ

ನಾಫ-ಪ್ರೊಸ್ಟ್ಸನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಆರ್ಶಮಾರಾ (ರಿಜಿಸ್ಟರ್ಡ್)

ರಕ್ತ [illegible] ಅಥವಾ [illegible] ಅಥವಾ [illegible] ಯಾವಸ್ಥಿತಿಯ [illegible] 'ಆರ್ಶಮಾರಾ'ವನ್ನು ಒಂದೊವ್ಕೆ [illegible] ಕೇವಲ 3 ದಿನ [illegible] ಈ ಔಷಧಿಯಿಂದ [illegible] ಗುಣಹೊಂದಿ [illegible] ಬೆಲೆ ರೂ. 2-0-0

ಆರೋಗ್ಯ ಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆಸಿ ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು ಸೀಸೆ 1ಕ್ಕೆ 12 ಆಣೆ, ಟ. ಖ. 7 ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲಪೆಂಬ

ಸೂತಿಕಾ ರಸಾಯನ

ಇದರ ಶೋಧನ, ಬಲದಾಯಕ, ಪ್ರಸವಾನಂತರ [illegible] ಮೂರು ಗುಣಗಳು ಪರಸ್ಪರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಜಸನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರವೂ, ಸೋಹವೂ ರಸಾಯನವು ಬಾಣಂತಿಯ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬ ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ, ಕ.
ಮೈಸೂರು ಸ್ಟೇಟಿನ ಏಜೆಂಟರು.— **ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.**

DAIMONDS! DAIMONDS!

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪನಿ** 1926

18 ಬಲ್ಮರ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡ್, ನಾನಾ ನಮೂನೆ ಬೇಡು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co , 18 Balmat Road, MANGALORE.
Approved firm by the Govt of Mysore Certified by the Agent of the Govt of India in Ceylon

ಹೊಸ ಪುಸ್ತಕ! **ಸೆಲ್ಫ್ ಇಂಗ್ಲಿಷ್ ಸ್ಟಡಿ** ಈಗಲೇ ಪ್ರಿಂಟಾಗಿದೆ!!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ ಓದುವದನ್ನೂ, ಮಾತನಾಡುವದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಯಾರೂ ತಯಾರಿಸಲಿಲ್ಲ. ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅವರವರು ಅವರವರ ಮನೆಗಳಲ್ಲಿ ಇಂಗ್ಲಿಷ ಕಲಿತುಕೊಳ್ಳಬಹುದು, ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿ, ಇಂಗ್ಲೀಷ್ ಓದುವುದು ಎಲ್ಲರಿಗೂ ಸುಲಭವಾಗಿ ಬರತ್ತೆ. ಪುಸ್ತಕದ ಕ್ರಯ ರೂ. 1—8—0

Western Swiss Watch Co. | ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
Book Sellers, Post Box No 68 | ಪೋಸ್ಟ್, ಬಾಕ್ಸ್ ನಂ 68. ಮದರಾಸ್.
G. P. O. MADRAS

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು 4 ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತೆ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕೆಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT NAVAYUGA OFFICE, UDIPI, S. INDIA.

istered No. M 3618 — 28-3-1940.

ನವಯುಗ
NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ:— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ. ಬಿ ಮಾಧವ, ಎಂ ಎ, ಎಫ್ ಆರ್ ಎ ಎಸ್., ಎ ಐ ಎ (ಲಂಡನ್) ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಆಕ್ಚ್ಯುಯರಿಯವರ ಅಭಿಪ್ರಾಯ ಸಾರಾಂಶ.

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆದಾಯದ ವೆಚ್ಚ, ಬಡ್ಡಿಯ ಫಲ, ರದ್ದಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ... ...ನೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗಾಗಿ . .ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಹೇಳಿ-ಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H. Venkataramiah, *Divisional Superintendent* or R Purniah *Ag General Manager*

The Asiatic Govt. Security Life Assu Co. Ld.,
Asiatic Building, BANGALORE CITY.

ಝಾಂಡು ಮಲೇರಿಯಾ ಮಿಕ್ಶ್ಚರ್

ಕೆಟಲಾಗು ಉಚಿತ

ಮಲೇರಿಯಾ, ವಿಷಮ್ರಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0-14-0 ಮಾತ್ರ.

ಸ್ಥಳೀಯ ಏಜಂಟರು:- ಪಿ. ಎ. ಪೈ ಬ್ರದರ್ಸ್.
ಕಾರ್ಕಳದ ಏಜಂಟರು:- ವಿ. ವಿ. ಶೆಣೈ, ಕೆಮಿಸ್ಟ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ:—

ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,

ZANDU

78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು.

DAMODER & CO.,
78 China Bazaar Road, G T MADRAS

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು.

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ನೀತಿಯುಳ್ಳ ಯಾವ ಜೀವ ವಿಮಾ ಸಂಘವಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ:—

ಶಾಖಾ ಕಾರ್ಯದರ್ಶಿ,
ದಿ ನ್ಯು ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು
ಮಂಗಳೂರು ಬ್ರಾಂಚ್

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯು, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಸೋಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಗುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ. ಈ ವಾನಿಂಗ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರೈಡ್ – ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹೆವನನ್" ಎಂಬ ಹೆಮೊರೈಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ 1-4-0 ವಿ ಪಿ ಬೇರೆ.

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಸ್ವಭಾವವುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು ಮಲಬದ್ಧತೆಯ ಲಕ್ಷಣಗಳುಳ್ಳವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು;

The Eclipse Distributing Agency,

Dahanu Road, B. B. & C. I. Ry BOMBAY PRESIDENCY.

ದಯವಿಟ್ಟು ಪತ್ರ ಇಂಗ್ಲಿಷಿನಲ್ಲಿಯೇ ಬರೆಯಿರಿ.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA

ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ 3–4–0
6 ತಿಂಗಳಿಗೆ – ರೂ 1–12–0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹ ಸಂಪಾದಕ.
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨೯

ಉಡುಪಿ, ಗುರುವಾರ, ೨೮–೩–೧೯೪೦.
UDIPI, THURSDAY, 28-3-1940.

VOL. 19
No. 29

ವಾರದ ಟೀಕೆ

ಮಿ. ಚೇಂಬರ್ಲೇನರ ಸ್ಪಷ್ಟೀಕರಣ.

ಇದೇ ತಾ. 19ರಲ್ಲು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಗಳು ಮಾಡಿದ ಹೇಳಿಕೆಯಿಂದ, ಬ್ರಿಟಿಷ್ ಸರಕಾರವು ಫಿನ್ಲೆಂಡು ಕೇಳಿದಷ್ಟು ಯುದ್ಧೋಪಕರಣ ಸಹಾಯವಿತ್ತಿರುವುದು. ಮಾತ್ರವಲ್ಲದೆ, ಮಾರ್ಶಲ್ ಮೆನ್ನರ್ ಹೈಮರ ಕೇಳಿಕೆಯಂತೆ ಮೇ ತಿಂಗಳಿಗಿಂತ ಎಷ್ಟೋ ಮೊದಲು, ಅಂದರೆ ಮಾರ್ಚಿ ತಿಂಗಳಲ್ಲೇ 1,50,000ದಷ್ಟರ ಸೇನೆಯನ್ನು ಕಳುಹಿಸಲು ಸಿದ್ಧವಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಒಂದು ವೇಳೆ ಸ್ವೀಡನಿನ ಮೇಲೆ ಜರ್ಮನಿ ಮತ್ತು ರಶ್ಯಗಳು ಆಕ್ರಮಣ ನಡಿಸುತ್ತಿದ್ದರೂ ಅದಕ್ಕೆ ಸಹಾಯಮಾಡುವುದಕ್ಕೂ ಬ್ರಿಟಿಷ್ ಸರಕಾರವು ಸಿದ್ಧವೇ ಇದ್ದು ಅದಕ್ಕೆ ತಕ್ಕ ತಯಾರಿಮಾಡುತ್ತಿತ್ತು. ಆದರೆ ಇಷ್ಟು ಬೇಗ ಫಿನ್ನರ ಪತನವಾಗುವುದೆಂದು ಮಿತ್ರರಾಷ್ಟ್ರಗಳು ನೆನಸಲಿಲ್ಲ. ಸ್ವೀಡನ್ ನೋರ್ವೆಗಳು ಫಿನ್ಲೆಂಡಿಗೆ ವಿರೋಧವಾದ ಧೋರಣೆ ವಹಿಸುವವೆಂದು ಕೂಡಾ ಅವು ಭಾವಿಸಲಿಲ್ಲ. ಮಿತ್ರರಾಷ್ಟ್ರಗಳು ಯೋಚನೆಮಾಡುವಷ್ಟರಲ್ಲಿ ಜರ್ಮನಿಯು ತನ್ನ ಕೆಲಸಮಾಡಿಬಿಟ್ಟಿತು. ಸ್ವೀಡನ್ ನೋರ್ವೆಗಳನ್ನು ಬೆದರಿಸಿ, ಫಿನ್ಲೆಂಡನ್ನು ಒತ್ತಾಯಪಡಿಸಿ ಸಂಧಿಗೊಪ್ಪಿಸಿಬಿಟ್ಟಿತು. ಫಿನ್ನಿಶ್ ರಶ್ಯಾಯುದ್ಧವು ಇನ್ನೂ ಕೆಲ ಸಮಯ ನಡೆಯುತ್ತಿದ್ದರೆ ಸ್ಕ್ಯಾಂಡಿನೇವಿಯವೇ ಭಯಂಕರ ಯುದ್ಧಕ್ಷೇತ್ರವಾಗಿ ಮಾರ್ಪಡುತ್ತಿತ್ತು. ಅದಕ್ಕೆ ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ಸಿದ್ಧವಿದ್ದವೆಂಬುದು ಮಿ. ಚೇಂಬರ್ಲೇನರ ಭಾಷಣದಿಂದ ಸ್ಪಷ್ಟವಾಗುತ್ತದೆ. ಸ್ವೀಡನ್ ನೋರ್ವೆಗಳೇ ಆ ಅನಾಹುತಕ್ಕೆ ಹೆದರಿ ಹಿಂದೆ ಸರಿದುದು. ಹೇಗಾದರೂ ತಾವು ಬದುಕಿಕೊಂಡರೆ ಸಾಕೆಂಬೇ ಅವುಗಳ ಹಂಬಲು.

ಫ್ರೆಂಚ್ ಮಂತ್ರಿಮಂಡಲದ ಮಾರ್ಪಾಟು

ನಾಟಕದ ದೃಶ್ಯಗಳಂತೆ ಫ್ರಾನ್ಸಿನ ಎಮ್. ಡೆಲಾಡಿಯರರ ಮಂತ್ರಿಮಂಡಲವು ರಾಜಿನಾಮೆಯಿತ್ತು ಎಮ್. ರೈನೋಡರ ಸಚಿವಮಂಡಲಿಯು ಅಧಿಕಾರಕ್ಕೆ ಬಂದಿರುವುದು. ಮಿ. ಡೆಲಾಡಿಯರರ ಏಕತಂತ್ರ ಅಧಿಕಾರ, ಯುದ್ಧದ ಮಂದಗತಿ, ಯುದ್ಧದ ವೆಚ್ಚಕ್ಕಾಗಿ ಶ್ರೀಮಂತ ವರ್ಗದ ಮೇಲೆ ತೆರಿಗೆ ಹಾಕುವ ಕುರಿತು ಅವರಿಗೂ ಅರ್ಥ ಸಚಿವ ರೈನೋಡರಿಗೂ ಉಂಟಾಗಿದ್ದ ಭಿನ್ನಾಭಿಪ್ರಾಯವೇ ಅವರ ಪತನಕ್ಕೆ ಕಾರಣವೆನ್ನಬಹುದು. ಡೆಲಾಡಿಯಾರರು ಎರಡು ವರ್ಷಗಳ ವರೆಗಾದರೂ ಅಧಿಕಾರದಲ್ಲಿದ್ದುದು ದೀರ್ಘಕಾಲವೆಂದೆನ್ನಬಹುದು. ಫ್ರಾನ್ಸಿನ ಮಂತ್ರಿ ಮಂಡಲವು ಒಂದೆರಡು ವರ್ಷ ಅಧಿಕಾರದಲ್ಲಿರುವುದೂ ಕಷ್ಟ. ಡೆಲಾಡಿಯರರ ಕಾಲದಲ್ಲಿ ಬಲಬದಿಗೆ ವಾಲುತ್ತಿದ್ದ ಆಡಳಿತ ಸೂತ್ರ ಇಂದೀಗ ರೈನೋಡರ ಅಧಿಕಾರದಲ್ಲಿ ಎಡಕ್ಕೆ ವಾಲಿದೆ ರೈನೋಡರು 3ಮಂದಿ ಸೋಶಿಯಲಿಸ್ಟರನ್ನೂ ತನ್ನ ಮಂತ್ರಿಮಂಡಲದಲ್ಲಿ ಸೇರಿಸಿಕೊಂಡಿದ್ದಾರೆ. ಇದರಿಂದ ಶ್ರೀಮಂತ ಪಕ್ಷಪಾತಿಗಳಾದ ಬಲಪಕ್ಷೀಯರು ಕ್ರೋಧಗೊಂಡಿದ್ದಾರೆ. 15ದಿವಸಗಳ ಮೊದಲು 534 ಅನುಕೂಲ ಮತ್ತು ಕೇವಲ ಒಂದು ಓಟಿನ ವಿರೋಧದಿಂದ ಫ್ರೆಂಚ್ ಪ್ರಜಾ ಪ್ರತಿನಿಧಿ ಸಭೆಯ ವಿಶ್ವಾಸ ಪಡೆದ ಡೆಲಾಡಿಯರರು ಇಂದೀಗ ಬಹುಪಕ್ಷದ ಬೆಂಬಲವಿಲ್ಲದೆ ತನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದ್ದಾರೆ. ಇಂದಿನ ಪ್ರಧಾನ ಮಂತ್ರಿಗಳಾದ ಎಮ್. ರೈನೋಡರು ಇನ್ನೆಷ್ಟು ಕಾಲ ಅಧಿಕಾರ ನಡಿಸುವರೋ? ಯಾಕೆಂದರೆ ಇದೇ ತಾ. 22ರಲ್ಲು ಫ್ರೆಂಚ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಅವರಿಗೆ ಅನುಕೂಲವಾಗಿ 268 ಮತ್ತು ಪ್ರತಿಕೂಲ 156 ಓಟು ದೊರಿತರೂ 110ಮಂದಿ ಸಭೆಗೆ ಬರಲೇ ಇಲ್ಲ. ಅವರು ಬರುತ್ತಿದ್ದರೆ ರೈನೋಡರ ಗತಿ ಏನಾಗುತ್ತಿತ್ತೋ? ರೈನೋಡರು ಫ್ರಾನ್ಸಿನ ಚರ್ಚಿಲ್ಲರೆಂದು ಹೆಸರು ಪಡೆದವರು. ಇದು ಹೊರತು ಎಮ್. ಡೆಲಾಡಿಯರರೇ ಯುದ್ಧಮಂತ್ರಿಗಳಾಗಿ ಇವರೊಂದಿಗೆ ಸೇರಿರುವರು. ಇಂಗ್ಲೆಂಡಿನ ನಿಕಟ ಬಾಂಧವ್ಯದ ಪ್ರಬಲ ಪ್ರತಿಪಾದಕರು. ಯುದ್ಧವನ್ನು ಇನ್ನಷ್ಟು ತೀವ್ರಗತಿಯಿಂದ ನಡಿಸಿ ವೈರಿಯನ್ನು ಮುರಿಯಬೇಕೆಂಬ ನಿರ್ಧಾರವುಳ್ಳವರು. ಮುಂದಿನ ಯುದ್ಧದ ಗತಿಯ ಮೇಲೆ ಇವರ ಗತಿಯು ಹೊಂದಿಕೊಂಡಿದೆ.

ಮುಂದೆ ತೀವ್ರಗತಿಯಿಂದ ಯುದ್ಧ

ಜರ್ಮನಿಯು ಧಾಳಿ ನಡಿಸುತ್ತಿದೆ. ಅದನ್ನು ತಡೆಗಟ್ಟಲು ಸಿದ್ಧರಾಗಬೇಕೆಂದು ಈ ವರೆಗೆ ಮಿತ್ರ ರಾಷ್ಟ್ರಗಳು ಉದ್ಘೋಷಿಸಿ ಜನ ಬೆಂಬಲ ಪಡೆಯುತ್ತಿದ್ದುವು ಆದರೆ ಈಗ ಹಿಟ್ಲರರು ಧಾಳಿ ನಡಿಸುವ ಆಲೋಚನೆಯನ್ನೇ ಬಿಟ್ಟು ಬಿಟ್ಟು ತನ್ನ ಸ್ಥಾನವನ್ನು ಬಲಪಡಿಸುವುದರಲ್ಲೇ ನಿರತರಾಗಿದ್ದಾರೆ. ಇದರಿಂದ ಬ್ರಿಟಿಷ್ ಮತ್ತು ಫ್ರೆಂಚ್ ಪ್ರಜಾ ಪ್ರತಿನಿಧಿಗಳಲ್ಲಿ ಅತೃಪ್ತಿಯುದ್ದಿದೆ. ವೈರಿಯ ಬಲ ಹೆಚ್ಚುತ್ತಿರುವಾಗ ಎಷ್ಟು ಕಾಲದ ವರೆಗೆ ತಣ್ಣಗೆ ಕೂತುಕೊಳ್ಳುವುದೆಂಬ ಅಸಹನೀಯತೆಯುಂಟಾಗಿದೆ ಹಲವರಲ್ಲಿ. ಇನ್ನು ಕಾಯುತ್ತಾ ಕೂತುಕೊಳ್ಳದೆ ವೈರಿಯ ಮೇಲೆ ಏರಿಹೋಗಿ ಹೋರಾಟ ನಡಿಸಬೇಕೆಂಬ ಅಭಿಪ್ರಾಯವು ಬಲಗೊಳ್ಳುತ್ತಿದೆ. ಫ್ರೆಂಚ್ ಮಂತ್ರಿಮಂಡಲದ ಪತನಕ್ಕೆ ಇದೊಂದು ಮುಖ್ಯ ಕಾರಣ. ಬ್ರಿಟಿಷ್ ಪಾರ್ಲಿಮಂಟಿನಲ್ಲಿಯೂ ಈ ಅತೃಪ್ತಿಯು ಗುಡುಗುತ್ತಿದೆ. ಮಂತ್ರಿ ಮಂಡಲದಲ್ಲಿ ಬದಲಾವಣೆಯಾಗುವ ಸುದ್ದಿಯು ಹುಟ್ಟುತ್ತಿದೆ. ಲೋರ್ಡ ಚೇಟ್‌ಫೀಲ್ಡರ ಬದಲಾಗಿ ಮಿ. ಚರ್ಚಿಲ್ಲರು ಸೇನಾ ಕೇಂದ್ರೀಕರಣ ಮಂತ್ರಿಗಳಾಗಬಹುದೆಂದು ನಂಬಲಾಗಿದೆ. ಜರ್ಮನಿಯ ಸಿಲ್ಟ್ ನೌಕಾ ನಿಲಯದ ಮೇಲೆ ಬ್ರಿಟಿಷ್ ವಿಮಾನಗಳು ಪ್ರಬಲ ವಿಮಾನ ಧಾಳಿ ನಡಿಸಿ ಹೆಚ್ಚಿನ ಹಾವಳಿಮಾಡಿವೆ. ಇನ್ನು ಮುಂದೆ ಯುದ್ಧವು ತೀವ್ರಗತಿಯಲ್ಲಿ ನಡೆಸಲ್ಪಡುವುದೆಂಬುವುದರಲ್ಲಿ ಸಂದೇಹವಿಲ್ಲ. ರಶ್ಯವನ್ನು ವಿರೋಧಿಸಲಿಕ್ಕೆ ಕೂಡಾ ಒಳಗಿಂದೊಳಗೆ ಮಿತ್ರ ರಾಷ್ಟ್ರಗಳು ತಯಾರು ಮಾಡುತ್ತಿರುವಂತಿದೆ.

ಕಾಕ್ಸಾರರ ಮೇಲೆ ಗೋಳಿಬಾರು

ಇದೇ ತಾ. 19ರಲ್ಲು ಲಾಹೋರಿನಲ್ಲಿ ಪೋಲೀಸರಿಗೂ ಕಾಕ್ಸಾರರಿಗೂ ಜಗಳವಾಗಿ ಪೋಲೀಸರು ಗೋಳಿಬಾರು ಮಾಡಿ 29 ಮಂದಿ ಕಾಕ್ಸಾರರು ಕೊಲ್ಲಲ್ಪಟ್ಟರು ವರೆಂಬ ವಾರ್ತೆಯಲ್ಲಿ ಆಶ್ಚರ್ಯವೇನೂ ಇಲ್ಲ. ಈ ಕಾಕ್ಸಾರರು ಫೆಸಿಸ್ಟ್ ಅಥವಾ ನಾಝಿ ರೀತಿ ನೀತಿಯವರು. ಮುಸ್ಲಿಮರ ಸೇನೆಯೊಂದನ್ನು ಸಂಘಟಿಸಿ ಹಿಂದುಸ್ಥಾನದಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಬೇಕೆಂಬ ಆಂತರಿಕ ಉದ್ದೇಶವುಳ್ಳವರು. ಹೈದರಾಬಾದಿನ ನೈಜಾಮರೇ ಮೊದಲಾದವರು ಈ ಕಾಕ್ಸಾರರಿಗೆ ಸಹಾಯವೀಯುತ್ತಿರುವರು. ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಮಂತ್ರಿಗಳು ಅಧಿಕಾರದಲ್ಲಿದ್ದಾಗಲೇ ಈ ಕಾಕ್ಸಾರರ ಉಪಟಳವು ವಿಪರೀತವಾಗಿ

(೭ನೇ ಪುಟಕ್ಕೆ ಮುಂದುವರಿಯುವುದು)

ತುಳುನಾಡ್ ಬೇಂಕ್
ಆಫ್ ಸಪ್ಲೈಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	Rs	1,00,000
Subscribed & Paid up Capital	....	Rs	31,340
Reserves & other Funds	...	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.
ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.
ಹೆಚ್ಚಿನ ವಿವರಗಳಿಗೆ ಬರೆಯಿರಿ.
THULUNAD BANK
OF SUPPLY AGENCY LIMITED.

ನೋಟೀಸು

ಉಡುಪಿ ತಾಲೂಕು ನಂ. 91ನೇ ಶಿರ್ವ ಗ್ರಾಮದ ಪಟೇಲ ಗಿರಿಯಂಣ ಹೆಗಡೆಯು ಈ ಮೂಲಕ ಸರ್ವರಿಗೂ ತಿಳಿಸುವದೇನೆಂದರೆ ಶಿರ್ವ ಗ್ರಾಮದ ನಂ. 17ನೇ ಖಾತೆದಾರ ಮಂಗಾಳ ಗೋಪಾಲ ನಾಯ್ಕರು ಮಾರ್ಚ ಕಿಸ್ತಿನ ತೀರ್ವೆ ಬಾಬ್ತಿನಲ್ಲಿ ತಾ. 11–3–'40 ರಲ್ಲು ರೂಪಾಯಿ 198–10–0 ಕ್ಕೆ ನನ್ನ ಹೆಸರಿಗೆ ದಿ. ಕರ್ನಾಟಕ ಬೇಂಕ್ ಲಿಮಿಟೆಡ್ ಉಡುಪಿ ಬ್ರೇಂಚಿಗೆ ಕೊಟ್ಟಿರುವ ನಂ. 15057ನೇ ಚೆಕ್ಕು ಅಂಗಿ ಕಿಸೆಯಲ್ಲಿಟ್ಟಿದ್ದು ಕಳವು ಮಾಡಿದ್ದಲ್ಲಿ ಈ ವರೇಗೆ ಸಿಕ್ಕಲಿಲ್ಲ. ಆ ಬೇಂಕಿಗೆ ತಲ್ಪಲಿಲ್ಲ. ಆದ್ದರಿಂದ ಅದನ್ನು ಯಾರಾದರೂ ಪಡೆದರೆ ಯಾ ಬೇಂಕಿಗೆ ಹಾಜರು ಪಡಿಸಿದರೆ ಕ್ರಿಮಿನಲ್ ಶಿಕ್ಷೆಗೆ ಗುರಿಯಾಗುವಿರೆಂದು ತಿಳಿಸಿರುತ್ತೇನೆ.

ಶಿರ್ವ
ತಾ 25–3–'40 } ಗಿರಿಯಂಣ ಹೆಗಡೆ

ಮಿತ್ರರಾಷ್ಟ್ರಗಳು ತಪ್ಪಿಬಿದ್ದುದೆಲ್ಲಿ - - - - ?

ರಶ್ಯದಿಂದ ಜರ್ಮನಿಗುಂಟಾಗಿರುವ ಸಹಾಯ

ಜರ್ಮನಿಯು ಒಂದೇ ಸಮನೆ ಎರಡು ರಣರಂಗಗಳ ಹೋರಾಟಕ್ಕೆ ಹೆದರುತ್ತಿದ್ದಿತು. ಕಳೆದ ಯುದ್ಧದಲ್ಲಿ ಕೂಡಾ ರಶ್ಯದೊಡನೆ ಹೋರಾಡಬೇಕಾದುದರಿಂದ ಪಶ್ಚಿಮ ರಣರಂಗದ ಧಾಳಿಗೆ ಅದಕ್ಕೆ ಬಹಳ ತೊಡಕುಂಟಾಯಿತು. ಇಂದೀಗ ರಶ್ಯವು ಜರ್ಮನಿಯೊಂದಿಗೆ ಸೇರಿರುವುದರಿಂದ ಈ ಅಪಾಯವು ತಪ್ಪಿತು. ಎರಡು ರಣರಂಗಗಳಲ್ಲಿ ಯುದ್ಧ ಮಾಡುವುದೆಂದರೆ ಇಡೀ ಸೇನೆಯನ್ನು ಎರಡು ಪಾಲಾಗಿ ವಿಂಗಡಿಸಬೇಕು. ಸಂದರ್ಭ ಬಂದಂತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಆಗಾಗ ಸೇನೆಯನ್ನೊಯ್ಯಬೇಕು ರೈಲ್ವೆಗಳೆಲ್ಲಾ ಎಡೆಬಿಡದೆ ಸೈನಿಕರನ್ನೊಯ್ಯುತ್ತಿರಬೇಕು. ಇದರಿಂದ ಹೆಚ್ಚಿನ ಪೆಟ್ರೋಲ್, ಅಪಾರಶ್ರಮ ಮತ್ತು ಧನ ವ್ಯಯಕ್ಕೆ ಕಾರಣವಾಗುತ್ತದೆ. ಪೂರ್ವದಲ್ಲಿ ಯುದ್ಧದ ಚಿಂತೆಯೇ ಇಲ್ಲದ ಜರ್ಮನಿಯು ಇಂದೀಗ ಪಶ್ಚಿಮದಲ್ಲೇ ತನ್ನ ಸಂಪೂರ್ಣ ಶಕ್ತಿಯನ್ನುಪಯೋಗಿಸಿ ಏಕಾಗ್ರವಾಗಿ ಯುದ್ಧ ನಡಿಸುವಂತಾಗಿರುವುದು. ಮಿತ್ರ ರಾಷ್ಟ್ರಗಳು ಫಿನ್ಲೇಂಡ್, ಸ್ವೀಡನ್ ಮತ್ತು ನಾರ್ವೆಗಳಿಗೆ ಯುದ್ಧವನ್ನು ವ್ಯಾಪಿಸದಂತೆ ಜರ್ಮನಿಯು ಕಡೆಗೆ ಫಿನ್ಲೆಂಡು ರಶ್ಯಗಳೊಳಗೆ ಸಂಧಿಯುಂಟಾಗುವಂತೆ ಮಾಡಿದುದು. ಎರಡು ರಣರಂಗಗಳ ಹೋರಾಟವನ್ನು ನಿವಾರಿಸುವುದಕ್ಕಾಗಿ, ಮಿತ್ರ ರಾಷ್ಟ್ರಗಳು ಆರಂಭದಲ್ಲೇ ತಪ್ಪಿ ಬಿದ್ದುದರಿಂದ ರಶ್ಯ ಜರ್ಮನಿಗಳೊಂದಾಗಬಿಟ್ಟವು.

ಜರ್ಮನಿಯು ಎರಡು ರಣರಂಗಗಳಲ್ಲಿ ಯುದ್ಧ ಹೂಡುವಂತಾಗಿದ್ದರೆ ಅದು ಪೋಲೆಂಡಿನ ಮೇಲೆ ಧಾಳಿನಡಿಸಲೆದೆಗೊಳ್ಳುತ್ತಿದ್ದಿತೇ ಎಂಬುದು ಸಂಶಯಾಸ್ಪದವಾಗಿದೆ. ರಶ್ಯದೊಡನೆ ಮಿತ್ರರಾಷ್ಟ್ರಗಳು ಶೀಘ್ರವಾಗಿ ಒಪ್ಪಂದಮಾಡಿಕೊಳ್ಳುವಷ್ಟರ ಚಾತುರ್ಯ ಮತ್ತು ವಿವೇಕಹೀನರಾದುದೇ ಈ ಯುದ್ಧಕ್ಕೆ ಮೂಲಕಾರಣವೆನ್ನಬಹುದು. ಮಿತ್ರರಾಷ್ಟ್ರಗಳು ತಮ್ಮ ಗೌರವ ಪ್ರತಿಷ್ಠೆಗಳನ್ನು ಕಟ್ಟಿಕೊಂಡು, ಜರ್ಮನಿ ರಶ್ಯಗಳು ಎಂದೂ ಒಂದಾಗಲಾರವೆಂಬ ಭ್ರಾಂತಿಯಿಂದ ರಶ್ಯದೊಡನೆ ಚರ್ಚೆಗೆ ತೊಡಗಿ, ಯಥಾರ್ಥತೆಯಿಲ್ಲದೆ ನಟನೆ ನಡಿಸುತ್ತಿದ್ದಾಗ ಹಿಟ್ಲರರು ಸಂದರ್ಭ ನೋಡಿ ಸ್ಟಾಲಿನರನ್ನು ತನ್ನ ಬಗಲೊಳಗೆ ಹಾಕಿಬಿಟ್ಟರು. ರಶ್ಯಕ್ಕಾದರೂ ಇದರಿಂದ ಬಹಳ ಪ್ರಯೋಜನ. ಅತಿದೂರದ ಇಂಗ್ಲೇಂಡ್ ಫ್ರಾನ್ಸ್‌ಗಳೊಡನೆ ಮೈತ್ರಿಯಿಂದಿದ್ದು ನೆರೆಯ ಜರ್ಮನಿಯೊಡನೆ ವೈರಕಟ್ಟಿಕೊಂಡಿರುವುದು ಯಾವಾಗಲೂ ಅಪಾಯಕರ. ಆದುದರಿಂದ ಸ್ಟಾಲಿನರೂ ಹಿಟ್ಲರರೊಡನೆ ಗೆಳೆತನಕ್ಕೊಪ್ಪಿಬಿಟ್ಟರು.

ಇಂಗ್ಲೇಂಡ್ ಮತ್ತು ಫ್ರಾನ್ಸ್‌ಗಳ ಧೋರಣೆಯಿಂದ ರಶ್ಯವು ಜುಗುಪ್ಸೆಗೊಂಡಿದ್ದಿತು.

ಜರ್ಮನಿಗೆ ಎರಡು ರಣರಂಗಗಳ ಭೀತಿ.

ಮ್ಯುನಿಚ್ ಒಪ್ಪಂದದಿಂದ ಅದು ಸಂಪೂರ್ಣವಾಗಿ ಕಣ್ಣು ತೆರೆದಿದ್ದಿತು ಸಂದರ್ಭ ಬಂದರೆ ರಶ್ಯವನ್ನು ಮೂಲೆಗೊತ್ತಿ ಡಿಕ್ಟೇಟರರೊಂದಿಗೆ ಸೇರಿ ಬಗ್ಗುಬಡಿಯುವುದಕ್ಕೂ ಬ್ರಿಟಿಷ್ ಮತ್ತು ಫ್ರೆಂಚ್ ರಾಷ್ಟ್ರಗಳು ಸಿದ್ಧವಿರುವವೆಂಬುದನ್ನು ಅದು ಮನಗಂಡಿದ್ದಿತು. ಜೆಕೋಸ್ಲೊವೇಕಿಯವನ್ನು ಹಿಟ್ಲರರು ಆಕ್ರಮಿಸಿದಾಗ ಜರ್ಮನಿಯೊಡನೆ ಯುದ್ಧಕ್ಕೆ ಮುಂದಾಗಿದ್ದ ರಶ್ಯವು ಪೋಲೆಂಡಿನ ಆಕ್ರಮಣದ ಗಂಡಾಂತರದಲ್ಲಿ ಜರ್ಮನಿಯೊಂದಿಗೆ ಸೇರಿ ಕೊಳ್ಳೆಯಲ್ಲಿ ಪಾಲು ಸೆಳೆಯಲು ಮುಖ್ಯ ಕಾರಣವೆಂದರೆ ಮಿತ್ರರಾಷ್ಟ್ರಗಳ ಧೋರಣೆ. ತಮ್ಮ ತಪ್ಪಿನ ಫಲವನ್ನೀಗ ಅವರು ತಿನ್ನುತ್ತಿರುವುದೆಂದರೆ ತಪ್ಪಾಗಲಾರದು.

ಕಳೆದ ಮಹಾಯುದ್ಧದಂತೆಯೇ ಈ ಸಲವೂ ಜರ್ಮನಿಯು ಎರಡು ರಣರಂಗಗಳಲ್ಲಿ ಯುದ್ಧಮಾಡುವಂತಾಗಿದ್ದರೆ ಬ್ರಿಟಿಷರ ಸಮುದ್ರಮುತ್ತಿಗೆಯೂ ಜಯಶೀಲವಾಗುತ್ತಿತ್ತು. ಯುದ್ಧಕ್ಕಾಗಿ ಅಪಾರವಾಗಿ ವ್ಯಯಿಸುತ್ತಿದ್ದ ವಸ್ತುಗಳನ್ನು ಒದಗಿಸಿಕೊಳ್ಳಲು ಜರ್ಮನಿಗೆ ಆಸ್ಪದವೇ ಇರುತ್ತಿದ್ದಿಲ್ಲ. ಜರ್ಮನಿಯು ಇಷ್ಟರವರೆಗೇನೇ ಹೆಚ್ಚಿನ ಸಾಮಗ್ರಿಗಳನ್ನು ಉಪಯೋಗಿಸುವಂತೆ ಮಿತ್ರರಾಷ್ಟ್ರಗಳು ಮಾಡಿರುವುದಿಲ್ಲ. ಇನ್ನು ಮುಂದೆ ಹಾಗೆ ಮಾಡಿದ ಪಕ್ಷದಲ್ಲಿ ಅದು ರಶ್ಯದಿಂದ ಬೇಕಾದ ಸಾಮಾನುಗಳನ್ನು ಪಡೆಯಬಲ್ಲುದು. ರಶ್ಯ ಮತ್ತು ಜರ್ಮನಿಗಳೊಂದಾದುದರಿಂದ ಬಾಲ್ಟಿಕ್ ರಾಷ್ಟ್ರಗಳು ಹೆಬ್ಬುಲಿ ಹೆಬ್ಬಾವುಗಳ ನಡುವೆ ಸಿಕ್ಕಿದಂತಾಗಿ ನಿರ್ವಾಹವಿಲ್ಲದೆ ಅವುಗಳು ಹೇಳಿದಂತೆ ಕೇಳಬೇಕಾಗಿದೆ. ಅವು ತೋರುವಿಕೆಗೆ ತಟಸ್ಥವಾಗಿರುವವಾದರೂ ಒಳಗಿಂದೊಳಗೆ ಜರ್ಮನಿಗೆ ಸಹಾಯಮಾಡಲೇ ಬೇಕಾಗಿದೆ. ಇಲ್ಲವಾದರೆ ಅವುಗಳ ಅಸ್ತಿತ್ವಕ್ಕೇನೇ ಬರುವುದು ಗಂಡಾಂತರ. ಮಿತ್ರರಾಷ್ಟ್ರಗಳ ಆಶಯವನ್ನು ನಂಬಿಕೊಂಡಿದ್ದರೆ ತಮಗೆ ಕೇಡೇ ಸರಿಯೆಂದು ಈ ಚಿಕ್ಕ ರಾಷ್ಟ್ರಗಳೀಗ ಹೆದರಿ ರಶ್ಯ ಜರ್ಮನಿಗಳು ಹೇಳಿದಂತೆ ಕೇಳುತ್ತಿರುತ್ತವೆ.

ಇಂದೀಗ ಜರ್ಮನಿಯು ರಶ್ಯ ಮತ್ತು ಬಾಲ್ಟಿಕ್ ರಾಷ್ಟ್ರಗಳನ್ನು ತನ್ನ ಕಡೆಗೆಳೆದುಕೊಂಡು, ಇಟಲಿ ರಶ್ಯಗಳನ್ನೊಂದುಗೂಡಿಸಿ ಬಾಲ್ಕನ್ ರಾಷ್ಟ್ರಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನ ನಡಿಸುತ್ತಿದೆ. ಮುಖ್ಯವಾಗಿ ರುಮೇನಿಯದ ಮೇಲೆ ಅದರ ದೃಷ್ಟಿ ಬಿದ್ದಿದೆ ಈಗ. ಸ್ವೀಡನಿನ ಕಬ್ಬಿಣ ಅದುರು ನಿರಾತಂಕವಾಗಿ ದೊರೆಯುವಂತಾಯಿತು ಅದಕ್ಕೆ ಇನ್ನು ರುಮೇನಿಯದ ಪೆಟ್ರೋಲು ಪಡೆಯುವ ತಂತ್ರ ನಡಿಸುತ್ತಿದೆ. ಬಾಲ್ಟಿಕ್, ಉತ್ತರ ಧ್ರುವ ಮತ್ತು ಬ್ಲೇಕ್ ಸಮುದ್ರಗಳ ಮೂಲಕ ಜರ್ಮನಿಗೆ ಸಾಮಾನುಗಳು ಬರುವುದಕ್ಕೆ ತಡೆಯಿಲ್ಲವಾಯಿತು. ಇಟಲಿಯು ಜರ್ಮನಿ ರಶ್ಯಗಳ ಕೂಟಕ್ಕೆ ಸೇರಿತೆಂದರೆ ಭೂಮಧ್ಯ ಸಾಗರದ ಮೂಲಕವೂ ಸಾಮಾನುಗಳು ಹೋಗಲು ತೊಂದರೆ ಇಲ್ಲದಾಗುವುದು. ಚಿಕ್ಕ ರಾಷ್ಟ್ರವಾದ ಟರ್ಕಿಗೆ ಬ್ರಿಟಿಷರೆಷ್ಟು ಸಹಾಯಮಾಡಿದರೂ ಇಟಲಿಯನ್ನು ತಡೆಗಟ್ಟಲು ಅದಕ್ಕೆ ಸಾಧ್ಯವಾಗಲಾರದು. ಇಟಲಿಯ ವಿರೋಧವನ್ನುಂಟುಮಾಡಲು ಮಿತ್ರ ರಾಷ್ಟ್ರಗಳೂ ಸಿದ್ಧವಿರಲಾರವು.

ಜರ್ಮನಿಯ ಸೇನಾಬಲವು ಪ್ರಚಂಡವಾದುದು. ಆದರ ಆಕಾಶಪಡೆಯೂ ಅದ್ವಿತೀಯವಾದುದು. ಮಿತ್ರರಾಷ್ಟ್ರಗಳು ಇದೇ ರೀತಿ ರಣರಂಗದಲ್ಲಿ ಕಾಯುತ್ತಾ ಕೂತಪಕ್ಷದಲ್ಲಿ ಜರ್ಮನಿಯೂ ಧಾಳಿಯ ಗೊಡವೆಗ ಹೋಗದೆ ತಾನು ನುಂಗಿರುವ ರಾಷ್ಟ್ರಗಳನ್ನು ಚೆನ್ನಾಗಿ ಜೀರ್ಣಿಸಿಕೊಂಡು ತನ್ನ ಬಲವನ್ನು ಹೆಚ್ಚಿಸುವುದು. ಅದಕ್ಕೆ ಮೊದಲಾಗಿ ಧಾಳಿನಡಿಸುವ ಆವಶ್ಯಕತೆಯೇ ಇರುವುದಿಲ್ಲ. ಇಟಲಿ ಮತ್ತು ರಶ್ಯಗಳು ತಟಸ್ಥವಾಗಿಯೇ ಇದ್ದು ಅದಕ್ಕೆ ಬೇಕಾದ ಸಹಾಯಮಾಡುತ್ತಿವೆ. ರಶ್ಯದ ಅತಿ ಪೂರ್ವದ ವ್ಲಾಡಿವಾಸ್ಟಕ್ ಬಂದರದಿಂದ ಕೂಡಾ ಜರ್ಮನಿಗೆ ಬೇಕಾದ ಹತ್ತಿ ಮೊದಲಾದ ಸಾಮಾನುಗಳು ಬರುತ್ತಿವೆಯೆಂದು ತಿಳಿದುಬರುತ್ತದೆ. ಆದುದರಿಂದ ತಾವು ಜರ್ಮನಿಯ ಧಾಳಿಯನ್ನು ನಿರೀಕ್ಷಿಸುತ್ತ ಕಾದಿದ್ದು ಸಾಂಪತ್ತಿಕ ಮುತ್ತಿಗೆಯಿಂದದನ್ನು ಬಗ್ಗುಬಡಿಯುವ ಮಿತ್ರರಾಷ್ಟ್ರಗಳ ಯುಕ್ತಿಯು ಜಯಶೀಲವಾಗಲಾರದು. ಆದರಿಂದ ಜರ್ಮನಿಯ ಬಲವು ಮತ್ತಷ್ಟು ಹೆಚ್ಚುವಂತಾಗುವುದು. ಆದುದರಿಂದ ಅವುಗಳೀಗ ತಮ್ಮ ಯುದ್ಧತಂತ್ರವನ್ನೇ ಬದಲಾಯಿಸಿ ಜರ್ಮನಿಯ ಮೇಲೆ ಬೇಗನೆ ಧಾಳಿನಡಿಸಿ ಹೋರಾಟ ಆರಂಭಿಸಬೇಕೆಂಬ ಅಭಿಪ್ರಾಯವು ಬಲಗೊಳ್ಳುತ್ತಿರುವುದು.

THE

BOMBAY LIFE ASSUARNCE Company Limited.

[ESTD. 1908]

COMPARE

Your Life Assurance with any other property you possess what is its guarranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	**Rs.**	**1,44,91,000**
Life Assurance Fund	**Rs.**	**1,17,69,748**
Total Assets	**Rs.**	**1,31,28,998**

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No, 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4,
Car Street, MANGALORE.	Puthiyara, CALICUT.	Central Station Road, TRIVANDRUM.

ನವಯುಗ

ನೋಟೀಸು.

ಇನ್ನೂ ನವಯುಗದ ಚಂದಾಹಣ ಬಾಕಿ ಮಾಡಿಕೊಂಡವರು ಅದನ್ನು ದಯಮಾಡಿ ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಚಂದಾದಾರರು ಪತ್ರವ್ಯವಹಾರ ಮಾಡುವಾಗ ದಯಮಾಡಿ ತಮ್ಮ ಚಂದಾ ನಂಬ್ರ ಬರೆಯಬೇಕು. —ಮೆನೇಜರ್.

ಪಾಶ್ಚಾತ್ಯರನ್ನು ಬೆರಗುಗೊಳಿಸಿರುವ ವಿದ್ಯೆ!

ನಮ್ಮವರ ಬೆಂಕಿಯ ಮೇಲೆ ನಡೆಯುವಿಕೆ

ವಿಜ್ಞಾನಿಗಳು ಇದರ ರಹಸ್ಯವನ್ನರಿಯುತ್ತಿರುವರು !

ಕಳೆದ ವರ್ಷದ ಮೇ ತಿಂಗಳಿನ ಬೇಸಿಗೆ ರಜದಲ್ಲಿ ನಾನು ರಾಂಚಿಯಲ್ಲಿದ್ದೆನು. ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದರೂ ಅಲ್ಲಿದ್ದರು. ಅಲ್ಲಿ ಉರಾವ ಮತ್ತು ಮುಂಡಾ ಜಾತಿಯ ಕೆಲವು ಮಂದಿಗಳು ಅವರನ್ನು ಕರೆದು ಬೆಂಕಿಯ ಮೇಲೆ ನಡೆದು ತೋರಿಸಿದರಂತೆ. ಇದನ್ನು ಕುರಿತು ರಾಷ್ಟ್ರಪತಿಗಳು ನನ್ನೊಡನೆ ಈ ರೀತಿ ಹೇಳಿದ್ದರು.

ಈ ಜನರು 12 ಅಡಿ ಉದ್ದ 1½ ಅಡಿ ಅಗಲವಾದ ಒಂದು ಗುಂಡಿಯನ್ನು ಮಾಡಿದ್ದರು. ಇದರಲ್ಲಿ ಕಟ್ಟಿಗೆಯನ್ನು ಹಾಕಿ ಉರಿಸಿ ಬಹಳ ದೊಡ್ಡದಾದ ಬೆಂಕಿಯನ್ನು ಸಿದ್ಧಮಾಡಿದ್ದರು. ಅದರ ಮೇಲೆ ನಡೆಯುವುದಕ್ಕೆ ಮೊದಲು ಬೆಂಕಿಯನ್ನು ಊದುಕೊಳವೆಯಿಂದ ಊದಿ ಬೂದಿಯನ್ನು ದೂರಮಾಡಿ, ಹೆಚ್ಚಾಗಿ ಪ್ರಜ್ವಲಗೊಳಿಸಿದರು. ನಂತರ ಪೂಜೆಮಾಡಿ, ಮಂತ್ರಗಳನ್ನುಚ್ಚರಿಸಿ ಅದರ ಮೇಲೆ ಅನೇಕರು ನಡೆದುಹೋದರು. ಅವರ ಕಾಲುಗಳು ಸುಡಲೂ ಇಲ್ಲ; ಅವುಗಳಲ್ಲಿ ಗುಳ್ಳೆಗಳು ಉಂಟಾಗಲೂ ಇಲ್ಲ. ಡಾ. ಪ್ರಸಾದರ ಒಬ್ಬ ಸೇವಕನೂ ಸಹ ಆ ರೀತಿ ಮಾಡಿದನು. ಅವನಿಗೂ ಸಹ ಏನೂ ಅಪಾಯವಾಗಲಿಲ್ಲವಂತೆ.

ಇದು ಹೇಗೆ ಸಾಧ್ಯ? ಎಂಬ ಪ್ರಶ್ನೆಯು ಸಹಜವಾಗಿ ಹುಟ್ಟುತ್ತದೆ. ಇದರ ವೈಜ್ಞಾನಿಕವಾದ ಕಾರಣವೇನೆಂಬ ಪ್ರಶ್ನೆಯು ವಿಜ್ಞಾನಿಗಳಿಗೆ ಸಹ ಹುಟ್ಟುವುದು. ಡಾ. ರಾಜೇಂದ್ರ ಪ್ರಸಾದರೂ ಸಹ ಇದೇ ರೀತಿ ಪ್ರಶ್ನಿಸಿದ್ದರಂತೆ. ವಿಜ್ಞಾನಿಗಳು ಅನೇಕ ವರ್ಷಗಳಿಂದ ಇದರ ಗುಟ್ಟನ್ನರಿಯಲು ಯತ್ನಿಸಿ, ತಾವು ಯಾವ ನಿರ್ಣಯಕ್ಕೆ ಬಂದಿರುವರೆಂಬುದನ್ನು ಈ ಲೇಖನದಲ್ಲಿ ಕೊಡಲಾಗಿದೆ.

ಬೆಂಕಿಯ ಮೇಲೆ ನಡೆಯುವ ಪದ್ಧತಿಯು ಈ ದೇಶದಲ್ಲಿ ಬಹಳ ಹಿಂದಿನದು. ಅಲ್ಲದೆ ಭಾರತೀಯರು ಹೋಗಿರುವ ವಿದೇಶಗಳಲ್ಲಿ ಸಹ, ದಕ್ಷಿಣ ಆಫ್ರಿಕ, ನೆಟಾಲ್, ಮಾರಿಷಸ್ ಆದಿಗಳಲ್ಲಿ, ಈ ಪದ್ಧತಿ ಇದೆ. ಫಿಜಿಯಲ್ಲಿ ಬೆಂಕಿಯಲ್ಲಿ ಕೆಂಪಗೆ ಕಾಯ್ದ ಕಲ್ಲಿನ ಮೇಲೆ ನಡೆಯುವ ಪದ್ಧತಿ ಇದೆ. ಜಪಾನಿನಲ್ಲಿ ಸಹ ಈ ಪದ್ಧತಿ ಇದೆ.

ಯುರೋಪ್ ಮತ್ತು ಅಮೇರಿಕದವರು ಈ ದೃಶ್ಯಗಳನ್ನು ಅನೇಕ ಸಾರಿ ನೋಡಿರುವರು. ಅಲ್ಲಿನ ವೃತ್ತಪತ್ರಿಕೆಗಳಲ್ಲಿ ಸಹ ಇದರ ವಿಚಾರವಾಗಿ ಚರ್ಚೆ ನಡೆದಿದೆ. ಆದುದರಿಂದಲೇ ಅಲ್ಲಿನ ವಿಜ್ಞಾನಿಗಳು ಇದರ ರಹಸ್ಯವನ್ನು ಕಂಡುಹಿಡಿಯುವುದರಲ್ಲಿ ಮಗ್ನರಾಗಿ ಒಂದು ನಿರ್ಣಯಕ್ಕೆ ಬಂದಿರುವರು. ಬೆಂಕಿಯ ಮೇಲೆ ನಡೆಯುವುದಕ್ಕೆ ಸಾಧಾರಣವಾಗಿ 6 ಅಡಿಯಿಂದ 17 ಅಡಿವರೆಗಿನ ಗುಂಡಿಯನ್ನು ಅಗೆಯುವರು. ಇದರ ಅಗಲವು ಸಾಮಾನ್ಯವಾಗಿ 1½ ಅಡಿಯಿದ್ದು ಆಳವೂ ಅಷ್ಟೇ ಇರುವುದು. ಇದರಲ್ಲಿ ಕಟ್ಟಿಗೆಯನ್ನುರಿಸುವರು. ಕಟ್ಟಿಗೆಯು ಉರಿದುಹೋದ ನಂತರ ಅದರ ಉರಿಯು ಕಡಿಮೆಯಾಗಿ ಕೆಂಪಾದ ಕೆಂಡವಾದ ನಂತರವೇ ಜನರು ಅದರ ಮೇಲೆ ನಿಧಾನವಾಗಿ ನಡೆಯುವುದು. ಇದರಿಂದ ಅವರಿಗೆ ಯಾವ ವಿಧವಾದ ತೊಂದರೆಯೂ ಆಗುವುದಿಲ್ಲ. ಹಾಗಾದರೆ ಈ ಮನುಷ್ಯರಲ್ಲಿ ಯಾವುದಾದರೂ ದೈವಿಕ ಶಕ್ತಿ ಇದೆಯೇ?

ಅಮೇರಿಕದ ಪ್ರೊಫೆಸರ್ * ಲಂಗ್ಲೆಯವರು ಕಾದ ಕಲ್ಲಿನ ಮೇಲೆ ನಡೆಯುವುದನ್ನು ರೇಟಾ ದ್ವೀಪದಲ್ಲಿ ನೋಡಿದ್ದರು. 21 ಅಡಿ ಉದ್ದ 9 ಅಡಿ ಅಗಲ ಮತ್ತು 1½ ಅಡಿ ಆಳವಾದ ಒಂದು ಹಳ್ಳವನ್ನು ಅಗೆಯಲಾಯಿತು. ಅದರಲ್ಲಿ ಕಟ್ಟಿಗೆಯನ್ನು ಹಾಕಿ ಅದರ ಮೇಲೆ ಪ್ರತಿಯೊಂದೂ 40 ಸೇರು ತೂಕವುಳ್ಳ 300 ಕಲ್ಲುತುಂಡುಗಳನ್ನು ಹಾಕಿ ಕಟ್ಟಿಗೆಯನ್ನು ಉರಿಸಿದರು. 4 ಘಂಟೆಯಲ್ಲಿ ಕಲ್ಲುಗಳೆಲ್ಲವೂ ಕಾದು ಕೆಂಪಾದುವು. ಅಂತಹ ಕಲ್ಲುಗಳ ಮೇಲೆ ಸಹ ನಡೆದರೂ, ಅವರ ಕಾಲಿಗೇನೂ ಆಗಲಿಲ್ಲ. ಮೇಲ್ಕಂಡ ಪ್ರೊಫೆಸರರು ಈ ಕಲ್ಲುಗಳ ಪೈಕಿ ಒಂದನ್ನು ತೆಗೆದು ಒಂದು ತೊಟ್ಟಿಯಲ್ಲಿ ಹಾಕಿದರು. ಆ ನೀರು 12 ನಿಮಿಷಗಳ ತನಕ ಕುದಿಯುತ್ತಿತ್ತು. ಈ ಕಲ್ಲನ್ನು ಅವರು ತಮ್ಮೊಡನೆ ವಾಷಿಂಗ್ಟನ್ನಿಗೆ ತೆಗೆದುಕೊಂಡು ಹೋದರು. ಅಲ್ಲಿಯೂ ಅದೇ ರೀತಿ ಕಾಯಿಸಿ ಅದರ ಉಷ್ಣಾಂಶವನ್ನು ನೋಡಲು ಅದು 200 ಫ್ಯಾರನ್‌ಹೀಟ್ ಇದ್ದಿತು.

ಭಾರತದಿಂದ ಒಬ್ಬ ಇಂಗ್ಲಿಷಿನವನು ಬೆಂಕಿಯ ಮೇಲೆ ನಡೆಯುವ ವಿಚಾರವನ್ನು ಇಂಗ್ಲಿಷ್ ಪತ್ರಿಕೆಗಳಿಗೆ ಬರೆದಿದ್ದನು. ಅದು ಚೆಂಗಲ್‌ಪೇಟೆ ಜಿಲ್ಲೆಯ ವಾಲಾವರಂ ಗ್ರಾಮದಲ್ಲಿ ನಡೆದದ್ದು. ಇದರಲ್ಲಿ 18 ವರ್ಷದಿಂದ 65 ವರ್ಷದ ವರೆಗಿನ 18 ಮಂದಿ ಸೇರಿದ್ದರು. 18 ಅಡಿ ಉದ್ದ 12 ಅಡಿ ಅಗಲ 4 ಅಡಿ ಆಳದ ಗುಂಡಿಯಲ್ಲಿ 6 ಘಂಟೆ ಕಾಲ ಕಟ್ಟಿಗೆಯನ್ನುರಿಸಿ ಬೆಂಕಿಯನ್ನು ಸಿದ್ಧ ಮಾಡಿದ್ದರು. ಈ 18 ಮಂದಿಯೂ ಕೇವಲ ಕೌಪೀನವನ್ನು ಧರಿಸಿದ್ದರು. ಬೆಂಕಿಯ ಮೇಲೆ ನಡೆಯುವ ಮೊದಲು ಇವರು ಸ್ನಾನ ಮಾಡಿ ಒದ್ದೆಯಾದ ಕೌಪೀನಗಳನ್ನು ಧರಿಸಿಕೊಂಡೇ ಏನೇನೋ ಮಂತ್ರಗಳನ್ನುಚ್ಚರಿಸುತ್ತ ಬೆಂಕಿಯ ಮೇಲೆ ನಡೆದರು.

ಎರಡನೆ ಸಾರಿ 55 ಮಂದಿ ಬೆಂಕಿಯ ಮೇಲೆ ನಡೆದರು. ಅವರ ಪೈಕಿ ಒಬ್ಬನಿಗೆ ಮಾತ್ರ ಕಾಲಿನಲ್ಲಿ ಗಾಯವಾಯಿತು. ಇದೆಲ್ಲವೂ ಮೋಸವಾಗಿದ್ದಿದ್ದರೆ, ಒಬ್ಬನೇ ಒಬ್ಬನ ಕಾಲು ಮಾತ್ರ ಯಾಕೆ ಸುಟ್ಟು ಹೋಗಬೇಕಾಗಿತ್ತು? ಈ ಇಂಗ್ಲಿನ ಅಭಿಪ್ರಾಯದಲ್ಲಿ ಇವರೆಲ್ಲರೂ ಅನೇಕ ದಿನಗಳ ಮೊದಲಿಂದಲೂ ತಮ್ಮ ಕಾಲುಗಳಿಗೆ ಏನೋ ಒಂದು ರಸವನ್ನು ಲೇಪಿಸಿಕೊಳ್ಳಬಹುದೆಂದಿತ್ತು. ಬೆಂಕಿಯ ಮೇಲೆ ನಡೆಯುವುದಕ್ಕೆ ಮುಂಚೆ ಸ್ನಾನ ಮಾಡುವುದರ ಉದ್ದೇಶವು ಇತರರಿಗೆ ತಾವು ಕಾಲನ್ನು ಚೆನ್ನಾಗಿ ತೊಳೆದುಕೊಂಡಿರುವುದನ್ನು ತೋರಿಸುವುದಕ್ಕಂತೆ.

ಸಾನ್ ಫ್ರಾನ್ಸಿಸ್ಕೋದಿನ ರಿಚರ್ಡ್ ಮಾರ್ಟಿ ಎಂಬುವನು ತಾನು ಕಂಡುದನ್ನು ಬರೆದಿರುವನು. ಅವನ ಅಭಿಪ್ರಾಯದಲ್ಲಿ ಇದೇನೂ ಮಹತ್ವವಾದುದಲ್ಲವಂತೆ! ಪೆಸಿಫಿಕ್ ಸಾಗರದ ಟಾಹಿಟಿ ಎಂಬ ದೇಶದ ಘಟನೆ ಇದು. 18 ಅಡಿ ಉದ್ದ 12 ಅಗಲ 3 ಅಡಿ ಆಳದ ಒಂದು ಗುಂಡಿಯನ್ನು ಅಗೆದಿದ್ದರು. ಕಟ್ಟಿಗೆಯ ಉರಿಯು 6 ಅಡಿ ಎತ್ತರಕ್ಕೆ ಹೋಗುತ್ತಿತ್ತು. ಇದು ನಿಂತ ಮೇಲೆ ಆ ಜನರು ಕೆಂಡಗಳ ಕೆಂಪು ದೂರವಾಗುವಂತೆ ಬಡಿದರು. ಅಲ್ಲಿನ 6 ಮಂದಿ ಜನರು ಗಂಟೆಗಳ ಕಾಲ ಪತ್ರಿಯ ಬಟ್ಟೆಗಳನ್ನು ಧರಿಸಿ ಅಲ್ಲಿಗೆ ಬಂದರು. ಅವರ ಕೈಯಲ್ಲಿ ಎಲೆಗಳ ಗುಚ್ಛವಿತ್ತು. ಕೆಲವರು ಹಳ್ಳವನ್ನು ಅದರಿಂದ ಮುಟ್ಟಿದರು. ಆಕಾಶದ ಕಡೆ ಮುಖಮಾಡಿ, 24 ಸಾರಿ ಜಯಕಾರಮಾಡಿದರು. ನಂತರ ಬರೀ ಕಾಲಿನಲ್ಲಿ ಬೆಂಕಿ ಮೇಲೆ ನಡೆದುಹೋದರು. ಮತ್ತೊಂದು ಕೊನೆಯಿಂದ ಪುನಃ ಹಿಂದಿರುಗಿ ಬಂದರು. ಇದನ್ನು ನೋಡಿ ಮಾರ್ಟಿನ್ನನೂ ನಡೆಯಲು ಹೊರಟನು. ಒಂದು ಕೆಂಡದ ಮೇಲೆ ಕಾಲಿಟ್ಟವನೇ, ಕೂಡ್ಲೆ ಅದನ್ನು ಹಿಂದಕ್ಕೆಳೆದುಕೊಂಡು ಬಿಟ್ಟನು. ಕಾಲಿಗೇನೂ ತೊಂದರೆಯಾಗಲಿಲ್ಲ. ನಂತರ 18 ಅಡಿಯನ್ನು ದಾಟಿ ಹೋದನು. ಕಾಲಿಗೇನೂ ಅಪಾಯವಾಗಲಿಲ್ಲ.

ಲಂಡನ್ ವಿಶ್ವವಿದ್ಯಾನಿಲಯದ ಕೆಲವು ವಿಜ್ಞಾನಿಗಳು ಇದರ ರಹಸ್ಯವನ್ನರಿಯುವುದರಲ್ಲಿ ತೊಡಗಿರುವರು. 10 ಮಂದಿ ಸದಸ್ಯರದೊಂದು ಸಮಿತಿಯ ರಚನೆಯೂ ಆಯಿತು. ಇವರಲ್ಲಿ ನಾಲ್ವರು ಪ್ರೊಫೆಸರುಗಳು. ಬೆಂಕಿ ಮೇಲೆ ನಡೆಯುವವರು ಬರುವಂತೆ ಪ್ರಕಟಣೆ ಹೊರಡಿಸಿದರು. ಅಂತಹ ಘಟನೆಗಳನ್ನು ಕಣ್ಣಾರೆ ಕಂಡವರು ಕೆಲವರು ಬಂದಿದ್ದರು. ಆದರೆ ಯಾರೂ ನಡೆಯುವ ಸಾಹಸಮಾಡಲಿಲ್ಲ. ಕೊನೆಗೆ ಭಾರತದ ಖುದಾಬಕ್ಷ್ ಎಂಬುವನೊಬ್ಬನು ಲಂಡನಿಗೆ ಹೋಗಿ, ಬೆಂಕಿಮೇಲೆ ನಡೆಯಲು ಸಿದ್ಧನಾದನು.

ಈ ದೃಶ್ಯಕ್ಕಾಗಿ ಲಂಡನಿನಲ್ಲಿ ವಿಶೇಷ ಸಿದ್ಧತೆಗಳಾದುವು. ಈ ದೃಶ್ಯದ ಉದ್ದೇಶವು ಬೆಂಕಿಮೇಲೆ ನಡೆದರೂ ಕಾಲು ಸುಡದಿರಲು ಕಾರಣವೇನೆಂಬುದನ್ನು ತಿಳಿಯುವುದೇ ಆಗಿದ್ದಿತು. ಖುದಾಬಕ್ಷನು ಇದು ಕೇವಲ ನಂಬಿಕೆಯಿಂದ ನಡೆಯುವುದೆಂದೂ, ಬೇಕಾದರೆ ಇತರರನ್ನೂ ಸಹ ಬೆಂಕಿಯ ಮೇಲೆ ನಡೆಯಿಸಬಲ್ಲೆನೆಂದೂ ಹೇಳಿದನು.

ಲಂಡನಿನಲ್ಲಿ 25 ಅಡಿ ಉದ್ದ 3 ಅಡಿ ಅಗಲ 1½ ಅಡಿ ಆಳದ ಗುಂಡಿಯನ್ನು ಅಗೆದರು. ಇದರಲ್ಲಿ 3 ಟನ್ (1 ಟನ್=21 ಮಣ) ಗಳಷ್ಟು ಕಟ್ಟಿಗೆಯನ್ನು ಹಾಕಿ ಬೆಂಕಿಮಾಡಿದರು. 1½ ಗಂಟೆಯ ಮೇಲೆ ಅದರಲ್ಲಿ ಇದ್ದಲನ್ನು ಹಾಕಿದರು. ಏಕೆಂದರೆ ಇನ್ನೂ ಹೆಚ್ಚು ಕಾವು ಬರಲೆಂದು. 5½ ಗಂಟೆಯಲ್ಲಿ ಹಾಕಿದ್ದ ಕಟ್ಟಿಗೆಯೆಲ್ಲಾ ಉರಿದು ಬಹಳ ದೊಡ್ಡ ಉರಿಯೆದ್ದಿತು. ಇದು ಸುಮಾರು 3 ಇಂಚು ದಪ್ಪವಾಗಿತ್ತು. ಖುದಾಬಕ್ಷನು ಹೇಳುವಂತೆ ಉರಿಯ ಮಂದವು ಕನಿಷ್ಠ 9 ಇಂಚಿರಬೇಕಂತೆ. ಕಾರಣವೇನೆಂದು ಕೇಳಲು ಅವರು ಹೇಳಲಿಲ್ಲ. ನಡೆಯುವುದಕ್ಕೆ ಮೊದಲು ಆಕ್ಸ್‌ಫರ್ಡಿನ ಡಾಕ್ಟರ್ ವಿಲಿಯಂರವರು ಖುದಾಬಕ್ಷನ ಕಾಲುಗಳ ಪರೀಕ್ಷೆಮಾಡಿದರು. ಯಾವ ವಿಶೇಷವೂ ಇರಲಿಲ್ಲ. ಗುಂಡಿಯ ಒಂದು ಕಡೆ ನಿಂತು ಖುದಾಬಕ್ಷನು ಏನೋ ಮಂತ್ರಗಳನ್ನುಚ್ಚರಿಸಿದನು. ನಂತರ ಅವನು ಬೆಂಕಿಯ ಮೇಲೆ ಕಾಲಿಟ್ಟು–ಪ್ರತಿ ಹೆಜ್ಜೆಗೂ 2 ಸಾರಿ ಬೆಂಕಿಯನ್ನು ಮುಟ್ಟುತ್ತಾ ಹೋದನು. ಯಾವಾಗಲೂ ಓಡಿಹೋಗಲಿಲ್ಲ. ಬೆಂಕಿಯ ಮಂದವು ಕಡಿಮೆಯಾಗಿದೆ ಎಂದು ಹೇಳಿದನು. 3 ಸಾರಿ ಈ ರೀತಿ ನಡೆದ ಮೇಲೆ ಕಾಲನ್ನು ಪರೀಕ್ಷಿಸಿದರು. ಏನೂ ಆಗಲಿಲ್ಲ. ಪುನಃ ನಡೆಯಲು ಒಪ್ಪಲಿಲ್ಲ. ನಂತರ ಯಾರೋ ವಿಜ್ಞಾನಿಯು ಹೇಳಲು, ಕಟ್ಟಿಗೆಯ ಪಾದರಕ್ಷೆಗೆ ಬಟ್ಟೆಯನ್ನು ಕಟ್ಟಿ ಅದನ್ನು ಬೆಂಕಿಯ ಮೇಲೆ ನಡೆಯಿಸಿದರು. ಆದರೆ ಅದು ಕೇವಲ ಕೆಲವು ಸೆಕೆಂಡುಗಳಲ್ಲಿಯೇ ಸುಟ್ಟು ಭಸ್ಮವಾಯಿತು.

ಸೇಂಟ್ ಆರ್ಥರ್ ಲ್ಯೋನೆಲ್ ಆಸ್ಪತ್ರೆಯ ಜರ್ನಲಿನ ಸಂಪಾದಕರು ತಾವೂ ಈ ರೀತಿಮಾಡಬೇಕೆಂದು ಕೆಂಡದ ಮೇಲೆ ಕಾಲಿಟ್ಟರು. ಸ್ವಲ್ಪ ಹೊತ್ತು ಹೇಗೋ ಆಗಿ, ನಂತರ ಅವರು ನಡೆದೇ ಹೋದರು. “ಸ್ವಲ್ಪ ಬಿಸಿ ಎನ್ನುತ್ತ ಇದ್ದರು, ಅಷ್ಟೆ!

(೧೩ನೇ ಪುಟಕ್ಕೆ ಮುಂದುವರಿಯುವುದು.)

ANTARANGA
YUGADI SPECIAL

ADVERTISEMENT RATES

Full Page	Rs. 25–0–0
Half Page	Rs. 15–0–0
Quarter Page	Rs. 7–0–0
⅛ Page	Rs. 4–0–0
Cover Back Page	Already Reserved.
Cover 2nd & 3rd Page	Rs. 35–0–0

FOR FURTHER PARTICULARS APPLY TO:

Advertisement Manager:—

ANTARANGA, UDIPI.

ವಾರದ ಟೀಕೆ.

(೩ನೇ ಪುಟದಿಂದ ಮುಂದುವರಿದುದು)

ದ್ದಿತು. ಅವರನ್ನಲ್ಲಿ ಗುಂಡುಹಾರಿಸಿ ಅಣಗಿಸದಿರಲು ಅದಕ್ಕೆ ಕಾಂಗ್ರೆಸ್ ಮಂತ್ರಿಮಂಡಲದ ತಾಳ್ಮೆಯೇ ಕಾರಣವೆನ್ನಬಹುದು. ಕಾಂಗ್ರೆಸ್ ಮಂತ್ರಿಗಳ ಕಾಲದಲ್ಲಿ ಅವರ ಆಳ್ವಿಕೆಯಲ್ಲಿ ಇಂತಹ ಘಟನೆ ನಡೆಯುತ್ತಿದ್ದರೆ ಮುಸ್ಲಿಮ್ ಲೀಗಿನವರು ದೇಶದಲ್ಲೆಲ್ಲಾ ದೊಡ್ಡ ಕೂಗೆಬ್ಬಿಸುತ್ತಿದ್ದರು. ಪಂಜಾಬಿನಲ್ಲಿ ಸರ್ ಸಿಕಂದರ್ ಹಾಯತ್ ಖಾನರ ಆಳ್ವಿಕೆಯಲ್ಲಿ ಈ ಗೋಳಿಬಾರು ನಡೆದುದರಿಂದ ಉಭಯ ಸಂಕಟದಲ್ಲಿ ಬಿದ್ದಿದ್ದಾರೆ ಲೀಗಿನವರು. ಖಾಕ್ಸಾರ್ ಚಳವಳದಂತಹ ಉಗ್ರ ಹಿಂಸಾತ್ಮಕ ಚಳವಳದ ಗತಿಯೇನಾಗುವುದೆಂದು ಸುವಿಚಾರಿಗಳೆಲ್ಲರೂ ಮೊದಲೇ ತಿಳಿದ ವಿಷಯ. ಆದರೆ ಇಷ್ಟು ಬೇಗ ಅದು ಕೂಡಾ ಪಂಜಾಬಿನಲ್ಲಿ ಅದಕ್ಕಿಂತಹ ಉಗ್ರ ಬಾಲಗ್ರಹವುಂಟಾಗುವುದೆಂದು ಯಾರೂ ನಿರೀಕ್ಷಿಸಲಿಲ್ಲ.

ಹಿಂದು ಮತ್ತು ಮುಸಲ್ಮಾನ ಹಿಂದುಸ್ಥಾನ!

ಹಿಂದೂದೇಶದಂತಹ ಉಪಭೂಖಂಡವನ್ನು ಎರಡು ಪ್ರತ್ಯಪ್ರತ್ಯೇಕ ರಾಜ್ಯಗಳನ್ನಾಗಿ ವಿಂಗಡಿಸಬೇಕು. ಹಿಂದುಗಳು ಮತ್ತು ಮುಸಲ್ಮಾನರು ಎರಡು ಬೇರೆ ಬೇರೆ ಜನಾಂಗ. ಕಳೆದ 12 ಶತಮಾನಗಳಿಂದ ಅವರು ಒಟ್ಟಿಗಿದ್ದರೂ ಒಂದು ಜನಾಂಗವಾಗಿರುವುದಿಲ್ಲ. ಹಿಂದು ಮತ್ತು ಇಸ್ಲಾಂ ಧರ್ಮಗಳು ಎರಡು ಬೇರೆ ಬೇರೆ ಸಮಾಜ ವ್ಯವಸ್ಥೆಗಳು. ಆದುದರಿಂದ ಹಿಂದು ಮುಸಲ್ಮಾನರೊಂದಾಗಲು ಸಾಧ್ಯವೇ ಇಲ್ಲ. ಕಾಂಗ್ರೆಸು ಹಿಂದು ಸಂಸ್ಥೆ. ಹಿಂದುಗಳ ಪ್ರತಿನಿಧಿಯಾಗಿ ಮಹಾತ್ಮ ಗಾಂಧಿಯವರು ಮುಸಲ್ಮಾನರ ಏಕಮಾತ್ರ ಪ್ರತಿನಿಧಿ ಸಂಸ್ಥೆಯಾದ ಲೀಗಿನೊಡನೆ ಸಂಧಾನಕ್ಕೆ ಬರಬೇಕು. ಹಿಂದು ಬಹುಪಕ್ಷೀಯರ ಸಾಮ್ರಾಜ್ಯಭಾರಕ್ಕೆ ಮುಸಲ್ಮಾನರು ಎಂದೂ ಒಪ್ಪಲಿಕ್ಕಿಲ್ಲ. ಅವರು ತಯಾರಿಸುವ ರಾಜಕೀಯ ಘಟನೆಯನ್ನೂ ಅಂಗೀಕರಿಸಲಿಕ್ಕಿಲ್ಲ. ಹಿಂದೂದೇಶದಲ್ಲಿ ಶಾಂತಿಯು ನೆಲೆಗೊಳ್ಳಬೇಕಾದರೆ ಹಿಮಾಲಯದ ತಪ್ಪಲಿನ ಪ್ರದೇಶಗಳನ್ನು ಮುಸಲ್ಮಾನ ಹಿಂದುಸ್ಥಾನವಾಗಿ ಪ್ರತ್ಯೇಕಿಸಬೇಕು. ಆ ಮೇಲೆ ಮುಸಲ್ಮಾನ ರಾಜ್ಯಗಳು ಹಿಂದು ರಾಜ್ಯಗಳೊಂದಿಗೆ ಒಪ್ಪಂದ ಮಾಡಿಕೊಂಡು ಸ್ನೇಹ ಭಾವದಿಂದಿರಬಹುದೆಂದು ಮಿ. ಜಿನ್ನಾರವರು ಲಾಹೋರಿನಲ್ಲಿ ನಡೆದ ಮುಸ್ಲಿಮ್ ಲೀಗಿನ ಮಹಾಸಭೆಯ ಅಧ್ಯಕ್ಷರಾಗಿ ಅತಿ ದರ್ಪದಿಂದ ಉದ್ಘೋಷಿಸಿರುವರು. ಹಿಂದೂಸ್ಥಾನದಲ್ಲಿ ಮುಸಲ್ಮಾನರಿಗೊಂದು ಪ್ರತ್ಯೇಕ ಸ್ಥಾನ ಸ್ಥಾಪನೆಯ ಅಭಿಪ್ರಾಯವು ಹೆಚ್ಚಿನ ಮುಸಲ್ಮಾನರಿಗೊಮ್ಮೆ ಆಕರ್ಷಣೀಯವಾಗದಿರಲಾರದು. ಆಳವಾಗಿ ವಿಚಾರ ಮಾಡದ ಜನಸಾಮಾನ್ಯರು ಅದರಿಂದ ಉಬ್ಬಿ ಉತ್ಸಾಹಗೊಳ್ಳಬಹುದು. ಅದುದರಿಂದಲೇ ಮಿ. ಜಿನ್ನಾರೀಗ ಹೆಚ್ಚಿನ ಬೆಂಬಲ ಪಡೆಯುತ್ತಿರುವರು. ಅರೇಬಿಯಾ ಪರ್ಷಿಯಾ, ಅಫಘಾನಿಸ್ಥಾನವೇ ಮೊದಲಾದ ಮುಸಲ್ಮಾನ ರಾಜ್ಯಗಳೊಂದಿಗೆ ವಾಯುವ್ಯ ಗಡಿನಾಡು ಪ್ರಾಂತ, ಪಂಜಾಬು, ಸಂಯುಕ್ತ ಪ್ರಾಂತ ಬಂಗಾಳ ಮೊದಲಾದುವುಗಳು ಸೇರುವ ಕಲ್ಪನೆಯು ಮುಸಲ್ಮಾನರಲ್ಲಿ ಸ್ವಾಭಾವಿಕವಾಗಿ ಒಮ್ಮೆ ಉತ್ಸಾಹವನ್ನುಂಟುಮಾಡದಿರಲಾರದು. ಆದರೆ ಮಿ. ಜಿನ್ನರು ಹಿಂದು ದೇಶದ ಹಿಟ್ಲರರಾಗದೆ ಅದು ವ್ಯವಹಾರ್ಯವಾಗಲಾರದು. ಬ್ರಿಟಿಷ್ ಪ್ರಭುತ್ವವನ್ನು ಮೊದಲು ಹಿಂದೂದೇಶದಿಂದ ಹೊರಹಾಕಿ, ಇಡೀ ರಾಷ್ಟ್ರದ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸಿನ ಬಲವನ್ನು ಮುರಿದು, ಹಿಂದೂ ಮಹಾಸಭೆಯನ್ನು ಪ್ರತಿಭಟಿಸಿ ಹಿಂದೂದೇಶದ ಡಿಕ್ಟೇಟರ ಸ್ಥಾನಕ್ಕೇರುವಷ್ಟರ ಸಾಮರ್ಥ್ಯವಾಗಲಿ ಆಯುಷ್ಯವಾಗಲಿ ಮಿ. ಜಿನ್ನರಿಗೆ ಎಂದು ಬರುವುದೋ?

ರಾಮಗಡ ಕಾಂಗ್ರೆಸು ಮತ್ತು ಶ್ರೀ ಭೋಸರು

ರಾಮಗಡ ಕಾಂಗ್ರೆಸ್ ಅಧಿವೇಶನವು ಗಾಂಧಿಜಿಯವರ ನಾಯಕತ್ವದ ವಿಜಯಪತಾಕೆಯನ್ನು ಅಪ್ರತಿಹತವಾಗಿ ಹಾರಿಸಿರುವುದು. ದೇಶದ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸು ಒಬ್ಬ ನಾಯಕನ ಕೈಕೆಳಗೆ ಒಂದು ಕಾರ್ಯಕ್ರಮವನ್ನನುಸರಿಸಿ ಒಕ್ಕಟ್ಟಿನಿಂದ ಮುಂದುವರಿಯಬೇಕಾದುದು ಅತ್ಯಾವಶ್ಯಕ. ಆದುದರಿಂದಲೇ ಗಾಂಧಿಜಿಯವರ ಸಲಹೆ ಮೇರೆಗೆ ತಯಾರಿಸಲ್ಪಟ್ಟಿರುವ ಒಂದೇ ಒಂದು ನಿರ್ಣಯವನ್ನು ರಾಮಗಡ ಕಾಂಗ್ರೆಸು ಬಹುತೇಕ ಸರ್ವ ಸಮ್ಮತಿಯಿಂದೊಪ್ಪಿರುವುದು. ಕೇವಲ ಬೆರಳೆಣಿಕೆಯ ರೋಯಿಸ್ಟ್ ಮತ್ತು ಕಮ್ಯೂನಿಸ್ಟರ ಕೂಗು ಅರಣ್ಯರೋದನವಾಗಿರುವುದು. ರಾಮಗಡದ ಬಳಿ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲೇ ಶ್ರೀ ಸುಭಾಸ್ ಭೋಸರು ಸಂಧಾನ ವಿರುದ್ಧ ಪರಿಷತ್ತೊಂದನ್ನು ನಡಿಸಿದ್ದರು. ಅವರ ಫೋರ್ವರ್ಡ್ ಬ್ಲೋಕಿನವರೆಲ್ಲಾ ಅಲ್ಲಿ ನೆರೆದಿದ್ದರು. ಕಾಂಗ್ರೆಸಿನ ಈಗಣ ನಾಯಕತ್ವವನ್ನು ತೀವ್ರವಾಗಿ ನಿಷೇಧಿಸಿ, ಬರುವ ಎಪ್ರಿಲ್ ತಾ 6ರಲ್ಲಿ ರಾಷ್ಟ್ರೀಯವಾರವು ಆರಂಭವಾಗುವಾಗ ಸರಕಾರದ ವಿರೋಧವಾಗಿ ಹೋರಾಟವನ್ನಾರಂಭಿಸಬೇಕೆಂದು ಈ ಪರಿಷತ್ತಿನಲ್ಲಿ ನಿರ್ಣೈಸಲಾಯಿತು. ಶ್ರೀ ಭೋಸರ ಈ ಘೋಷಣೆಯು ಅವಿವೇಕಪರವಾದುದು ಮತ್ತು ಅರ್ಥರಹಿತವಾದುದು. ಇಂಥವರು ಬಂಡಾಯಗಾರರು ಮತ್ತು ಕ್ರಾಂತಿ ನಿರೋಧಕರೆಂದು ಪಂಡಿತ ಜವಾಹರಲಾಲರು ಕಟುವಾಗಿ ಟೀಕಿಸಿದುದರಲ್ಲಿ ತಪ್ಪೇನೂ ಇರಲಾರದು. ಯಾಕೆಂದರೆ ಈಗಣ ಪರಿಸ್ಥಿತಿ ನೋಡಿದರೆ ಕಾಂಗ್ರೆಸು ಅದಷ್ಟು ಬೇಗನೆ ಕಾಯಿದೆ ಭಂಗ ಚಳವಳ ಹೂಡುವುದು ನಿಶ್ಚಯವೆಂಬಂತೆ ತೋರುತ್ತದೆ. ಇಂದೋ ನಾಳೆಯೋ ಕಾಯಿದೆ ಭಂಗ ಹೂಡದೆ ನಿರ್ವಾಹವಿಲ್ಲೆಂಬ ಪರಿಸ್ಥಿತಿಯುಂಟಾಗಿರುವಾಗ ಶ್ರೀ ಭೋಸರು ಎಪ್ರಿಲ್ ತಾ. 6 ಕ್ಕೇನೇ ಹೋರಾಟ ಆರಂಭಿಸಬೇಕೆಂದು ನಿರ್ಣೈಸಿದುದರಲ್ಲಿ ಅರ್ಥವೇನಿದೆ? ಶ್ರೀ ಭೋಸರು ಕೇವಲ ಪ್ರತೀಕಾರ ಬುದ್ಧಿಯಿಂದ ಕಾಂಗ್ರೆಸಿನೊಳಗೆ ಒಡಕುಂಟುಮಾಡಲು ಹೊರಟಿರುವಂತಿದೆ. ಇಂತಹ ಅವಿವೇಕಪರ ಘೋಷಣೆಯು ಆತ್ಮಘಾತುಕವಿದ್ದು ಅವರ ಯಶಸ್ಸಿಗೇನೇ ದೊಡ್ಡ ತೊಡಕೆಯಾಗಿದೆ.

USE "CAFFERINA"

the I T C product
the infallible cure

For all aches & pains

WANTED destributing agents stockists in South Kanara including Myeore & Coorg.

For particulars apply to.

Mr. V T. Hegde, (on camp) C/o
Mr. B. S. Hegde, *Advocate,* Udipi or

INDIA TRADING CORPORATION,
BABOO BUILDING,
375 Lamington Road, BOMBAY.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ರೀತಿ ನೀತಿ.

[ಬಾರ್ಕೂರು ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಶ್ರೀಮಾನ್ ಎ. ಬಿ ಶೆಟ್ಟಿ ಮಾಡಿದ ಬೋಧಪರ ಭಾಷಣದ ಮುಖ್ಯಾಂಶಗಳು]

ಸಾಮುದಾಯಿಕ ಶಿಕ್ಷಣದ ಪ್ರಾಮುಖ್ಯತೆ ಮತ್ತು ಅದಕ್ಕೆ ತಕ್ಕ ಏರ್ಪಾಡು ಮಾಡುವ ಸರಕಾರದ ಕರ್ತವ್ಯವು ಈಗ ಲೋಕದಲ್ಲೆಲ್ಲಾ ಚೆನ್ನಾಗಿ ಅಂಗೀಕೃತವಾಗಿದೆ. 14 ವರ್ಷ ಪ್ರಾಯದ ವರೆಗಣ ವಿದ್ಯಾರ್ಥಿಗಳಿಗೆ ಇಂಗ್ಲೆಂಡಿನಲ್ಲಿ ಶಿಕ್ಷಣವು ಕಡ್ಡಾಯವಾಗಿದೆ. ಮತ್ತು 18ನೇ ವಯಸ್ಸಿನ ವರೆಗೆ ಕಡ್ಡಾಯವಾಗಿ 'ಪಾರ್ಟ್ ಟೈಮ್' (ಕೆಲಕಾಲ) ಶಿಕ್ಷಣವು ಕೊಡಲ್ಪಡುವುದು ಸೋವಿಯೆಟ್ ರಷ್ಯದಲ್ಲಿ 17 ಅಥವಾ 18 ವರ್ಷ ಪ್ರಾಯದ ವರೆಗೆ ಎಲ್ಲಾ ಮಕ್ಕಳೂ ಶಾಲೆಗೆ ಹೋಗಲೇ ಬೇಕಾಗಿದೆ. ಅಮೇರಿಕದಲ್ಲಿ ಇಪ್ಪತ್ತೊಂದು ಪ್ರಾಯದ ವರೆಗೆಲ್ಲ ಸೆಕೆಂಡರಿ ಶಿಕ್ಷಣವು ಧರ್ಮಾರ್ಥವಾಗಿ ಕೊಡಲ್ಪಡುತ್ತದೆ.

ಪ್ರಾಥಮಿಕ ಶಿಕ್ಷಣದಲ್ಲಾಗುವ ದುರ್ವ್ಯಯ

ಹಿಂದು ದೇಶದಲ್ಲಿ ಪ್ರಾಥಮಿಕ ಶಿಕ್ಷಣವು ಕೂಡಾ ಧರ್ಮಾರ್ಥವಾಗಿ ಮತ್ತು ಕಡ್ಡಾಯವಾಗಿ ಕೊಡಲ್ಪಡದಿರುವುದು ದುರ್ದೈವವೇ ಸರಿ. ಮದ್ರಾಸ್ ಪ್ರಾಂತದಲ್ಲಿ ಹುಡುಗರಿಗೆ ಮಾತ್ರ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಕೊಡಲ್ಪಡಬೇಕಾದರೆ ಇದಕ್ಕಿಂತ ಮೂರುಪಾಲು ಹೆಚ್ಚು ಹಣ ಬೇಕಾಗುವುದು ಆ ಮೇಲೆ ಕಟ್ಟೋಣ ನೊದಲಾದುವುಗಳಿಗೆ ವೆಚ್ಚ ಬೇರೆ ಬೇಕು. ಈಗಣ ಸರಕಾರ ಪದ್ಧತಿಯಲ್ಲಿ ಇಷ್ಟೊಂದು ವೆಚ್ಚವು ಅಸಾಧ್ಯವಾಗಿದೆ

ಮದ್ರಾಸ್ ಪ್ರಾಂತದಲ್ಲಿ 500ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಶಾಲೆ ಇಲ್ಲದ ಕೇಂದ್ರಗಳು 2877 ಇರುತ್ತವೆ. ಇವುಗಳಲ್ಲಿ 192 ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿವೆ. ಶಾಲೆಗೆ ಹೋಗುವ ಪ್ರಾಯದ ನೇಕಡ 60 ರಷ್ಟರ ಮಕ್ಕಳು ಶಾಲೆಗಳಿಗೆ ಹೋಗುವುದೇ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಎಲಿಮೆಂಟರಿ ಶಾಲೆಗಳಲ್ಲಿರುವ 10,2812 ಮಕ್ಕಳಲ್ಲಿ ಕೇವಲ 14201 ಮಂದಿ ಮಾತ್ರ ಕಳೆದ ವರ್ಷ 4ನೇ ತರಗತಿಗಿಂತ ಮೇಲೆ ಹೋಗಿರುತ್ತಾರೆ 5ನೇ ತರಗತಿಯ ವರೆಗಾದರೂ ಕಲಿಯದ ವಿದ್ಯಾರ್ಥಿಯು ಕಾಯಮಾಗಿ ಅಕ್ಷರಜ್ಞನಾಗಿರಲು ಸಾಧ್ಯವಿಲ್ಲ ಅಕ್ಷರಜ್ಞತೆಯಾದರೂ ಉಂಟಾಗದಿದ್ದರೆ ಪ್ರಾಥಮಿಕ ಶಿಕ್ಷಣಕ್ಕಾಗಿ ವ್ಯಯಿಸಲ್ಪಡುವ ಧನ ಮತ್ತು ಶ್ರಮವು ನಿರ್ದರ್ಥಕವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರಾಥಮಿಕ ಶಿಕ್ಷಣಕ್ಕಾಗಿ ರೂ 5 ಲಕ್ಷಕ್ಕಿಂತಲೂ ಮಿಕ್ಕಿ ವ್ಯಯ ಮಾಡುತ್ತದೆ ಅಕ್ಷರಜ್ಞತೆಯ ಒರೆಗಲ್ಲಿಂದ ಪರೀಕ್ಷಿಸಿದರೆ ಇದರಿಂದ ದೊರೆಯುವ ಪ್ರತಿಫಲವಾದರೂ ಏನು? ಕಳೆದ ವರ್ಷದ ಅಂಕಸಂಖ್ಯೆಗಳ ಮೇರೆಗೆ ಬೋರ್ಡು ಎಲಿಮೆಂಟರಿ ಶಾಲೆಗಳಲ್ಲಿರುವ 46,441 ಮಕ್ಕಳಲ್ಲಿ ಕೇವಲ 5266 ಮಂದಿ ಮಾತ್ರ 4ನೇಗಿಂತ ಮೇಲಿನ ತರಗತಿಗಳಲ್ಲಿರುತ್ತಾರೆ

ಕಳೆದ 3 ವರ್ಷಗಳಲ್ಲಿನ ಸಾಕ್ಷರತಾ ಪ್ರಚಾರ ಚಳವಳ

ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಬಂದ ಮೇಲೆ ಕಳೆದ 3 ವರ್ಷಗಳಿಂದ ಸಾಕ್ಷರತಾ ಪ್ರಚಾರಕ್ಕಾಗಿ ನಡಿಸಲ್ಪಡುವ ಪ್ರಯತ್ನದಿಂದಾಗಿ ಈ ಶೋಚನೀಯ ಪರಿಸ್ಥಿತಿಯು ಬಹಳವಾಗಿ ಸುಧಾರಿಸಹತ್ತಿರುವುದೆಂಬುದು ಸಂತೋಷಕರವಿದೆ. ಸರಿಪೂರ್ಣ ಲೋವರ್ ಎಲಿಮೆಂಟರಿ ಶಾಲೆಗಳ ಸಂಖ್ಯೆಯು ಮದ್ರಾಸ್ ಪ್ರಾಂತದಲ್ಲಿ 4 ಪಾಲು ಅಧಿಕವಾಗಿರುವುದು. 5ನೇ ತರಗತಿಯ ಮಕ್ಕಳ ಸಂಖ್ಯೆಯು ಸುಮಾರು ಎರಡರಷ್ಟು ಹೆಚ್ಚಿರುವುದು. ಮತ್ತು ಒಂದನೇ ತರಗತಿಗಿಂತ ಮೇಲಿರುವ ಹುಡುಗಿಯರ ಸಂಖ್ಯೆ ಕೂಡಾ ಗಣನೀಯವಾಗಿ ಬೆಳೆದಿರುವುದು. ದಕ್ಷಿಣ ಕನ್ನಡದಲ್ಲಿಯೂ 5ನೇ ತರಗತಿಯುಳ್ಳ ಶಾಲೆಗಳು ತೀವ್ರವಾಗಿ ಅಭಿವೃದ್ಧಿಹೊಂದುತ್ತಿವೆ ಕಳೆದ ವರ್ಷ ಸಂಪೂರ್ಣ ಬೋರ್ಡು ಎಲಿಮೆಂಟರಿ ಶಾಲೆಗಳ ಸಂಖ್ಯೆಯು 316ರಿಂದ 334ಕ್ಕೇರಿದೆ ಈ ಜಿಲ್ಲೆಯಲ್ಲಿ ಬೇರೆ ಬೇರೆ ಏಜೆನ್ಸಿಗಳು ನಡಿಸುವ 1169 ಎಲಿಮೆಂಟರಿ ಶಾಲೆಗಳಲ್ಲಿ 1938–39ರಲ್ಲಿ 648 ಶಾಲೆಗಳು 5ನೇ ತರಗತಿಯ ವರೆಗೆ ಕಲಿಸುತ್ತಿವೆ. ಇದು ತೃಪ್ತಿಕರ ಪ್ರಗತಿಯಾಗಿದೆ.

ಹೆಚ್ಚು ಹಾಯರ್ ಎಲಿಮೆಂಟರಿ ಶಾಲೆಗಳು ಬೇಕು.

ಲೋಕದ ಪ್ರಕೃತದ ಪರಿಸ್ಥಿತಿಯಲ್ಲಿ ಮಕ್ಕಳನ್ನು ಜೀವನಕ್ಕೆ ಅಣಿಗೊಳಿಸುವ 6ನೇ ತರಗತಿಯ ವರೆಗಣ ವಿದ್ಯೆಯು ಸಾಲದು ಪ್ರಾಥಮಿಕ ಶಿಕ್ಷಣಕ್ಕಿಂತಲೂ ಹೆಚ್ಚಿನ ವಿದ್ಯೆಯನ್ನೀಯಲು ಪಾಶ್ಚಾತ್ಯ ರಾಷ್ಟ್ರಗಳಲ್ಲೆಲ್ಲಾ ವ್ಯಾಪಕವಾದ ಪ್ರಯತ್ನ ನಡೆದಿರುತ್ತದೆ. ವಾರ್ಧಾ ಶಿಕ್ಷಣ ಪದ್ಧತಿಯು ಮೇರೆಗೆ ವಿದ್ಯಾರ್ಥಿಗೆ 7 ವರ್ಷ ಪ್ರಾಯದಿಂದ 14ರ ವರೆಗೆ ಶಿಕ್ಷಣ ಕೊಡಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 101 ಹಾಯರ್ ಎಲಿಮೆಂಟರಿ ಶಾಲೆಗಳಿವೆ ಇವುಗಳಲ್ಲಿ 41ನ್ನು ಜಿಲ್ಲಾ ಬೋರ್ಡು ನಡಿಸುತ್ತಿದೆ ಬೋರ್ಡಿನವರು ಅನಾವಶ್ಯಕವೆನ್ನಿಸಿದ ಶಾಲೆಗಳಿಗೆ ಕಡಿತಹಾಕಿ,ಹುಡುಗ ಹುಡುಗಿಯರ ಬೇರೆ ಬೇರೆ ಶಾಲೆಗಳನ್ನು ಒಂದುಗೂಡಿಸಿ ಉಳಿದ ಹಣವನ್ನು ಹಾಯರ್ ಎಲಿಮೆಂಟರಿ ಶಾಲೆಗಳನ್ನು ಹೆಚ್ಚಿಸುವುದಕ್ಕೂ, ಉಪಾಧ್ಯಾಯರ ಸಂಬಳ ಕಡಿತವನ್ನು ತೆಗೆದು ಹಾಕಲಿಕ್ಕೂ ಉಪಯೋಗಿಸುವುದು ಹಿತವೆಂದು ನನಗೆ ತೋರುತ್ತಿದೆ ಪ್ರಾಥಮಿಕ ಶಿಕ್ಷಣ ಖಾತೆಯ ಬಜೆಟಿನ ಆಯವ್ಯಯ ಬಾಯಿ ಗೂಡಿಸಲು ಬೋರ್ಡಿನವರು ಹಣ ಸಾಲಪಡೆಯುತ್ತಾ ಹೋಗಲು ಸಾಧ್ಯವಿಲ್ಲ.

ಹಾಯರ್ ಎಲಿಮೆಂಟರಿ ಶಾಲೆಗಳ ಪುನರ್ಘಟನೆ

ಹೆಚ್ಚಿನ ಹಾಯರ್ ಎಲಿಮೆಂಟರಿ ಶಾಲೆಗಳು ಹೈಸ್ಕೂಲುಗಳ ಪ್ರತಿಸ್ಪರ್ಧಿಗಳಾಗಿ ನಡಿಸಲ್ಪಡುತ್ತಿವೆ. ಈ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಕೊಡಲ್ಪಡುವ ಶಿಕ್ಷಣ ಕ್ರಮವು ಹಳ್ಳಿ ಜೀವನಕ್ಕೆ ಅನುಕೂಲವಾದುವೆಂಬ ಅತೃಪ್ತಿಯು ಬೆಳೆಯಹತ್ತಿದೆ ಆದುದರಿಂದ, ವಿದ್ಯಾರ್ಥಿಗಳಿಗೆ ವೃತ್ತಿ ತರಬೇತಿ ಕೊಟ್ಟು ಕಾರ್ಯಶೀಲರನ್ನಾಗಿ ಮಾಡುವಂತೆ ಹೊಸ ಪಾಠಕ್ರಮವನ್ನು ಜ್ಯಾರಿಗೆ ತರುವ ಆಲೋಚನೆ ಇದೆ ಇದಕ್ಕಾಗಿ ಹಳ್ಳಿ ಜೀವನದ ರೀತಿ ನೀತಿಗಳಲ್ಲಿ ಹುಡುಗರನ್ನು ತರಬೇತಿ ಮಾಡುವ ಹೊಸ ಮಾದರಿಯ ಅಧ್ಯಾಪಕರು ಬೇಕಾಗಿದ್ದಾರೆ.

ಪಂಜಾಬಿನಲ್ಲೇನು ಮಾಡಿರುವರು?

ಪಂಜಾಬಿನಲ್ಲಿ 300 ಮಿಡ್ಲ್ ಸ್ಕೂಲುಗಳಿರುತ್ತವೆ. ಇಂತಹ ಶಾಲೆಗಳನ್ನು ಜಯಶೀಲವಾಗಿ ಮಾಡಲು ಇತರ ಪ್ರಾಂತಗಳಲ್ಲವುಗಳಿಗಿಂತಲೂ ಹೆಚ್ಚಿನ ಪ್ರಯತ್ನ ನಡೆದಿದೆ. ಪ್ರಖ್ಯಾತವಾದ ಅಲ್ಲಿಯ ಮೋಗ ಎಂಬ ಸ್ಥಳದಲ್ಲಿರುವ ಶಾಲೆಯು, ಟ್ರೈನಿಂಗ್ ಶಾಲೆಯೊಂದನ್ನು ಜತೆಗೊಂಡು ಹಳ್ಳಿ ಶಿಕ್ಷಣ ಸುಧಾರಣೆಯ ವಿಷಯದಲ್ಲಿ ಮಾರ್ಗದರ್ಶಕವಾಗಿ ಕೆಲಸ ಮಾಡಿರುತ್ತದೆ. ಈ ಸಂಸ್ಥೆಯಿಂದ ಕಲಿತು ಹೋದವರು ಹಳ್ಳಿ ಜೀವನ ಮತ್ತು ಕಾರ್ಯಕಲಾಪಗಳು ನೇರಿ ಸಮ್ಪೂರ್ಣ ಪ್ರೋತ್ಸಾಹ ಪೂರ್ಣವಾದ ಹಳ್ಳಿ ಶಿಕ್ಷಣ ಕ್ರಮದ ಪ್ರಚಾರಕ್ಕಾಗಿ ಹೆಚ್ಚಿನ ಕೆಲಸ ಮಾಡಿರುತ್ತಾರೆ.

ಪುನಃ ಹಳ್ಳಿಗೆ ಹೋಗಿರೆಂಬ ಕೂಗು!

ಯುಕ್ತ ರೀತಿಯ ನಾಯಕತ್ವದ ಅಭಾವವೇ ನಮ್ಮ ಹಳ್ಳಿ ಜೀವನದ ಕೊರತೆ ನಮ್ಮ ಉತ್ಕೃಷ್ಟ ಹುಡುಗರು ಪಟ್ಟಣಗಳಿಗೆ ಹೋಗಿ ಪ್ರೌಢ ಶಿಕ್ಷಣ ಪಡೆದ ಅನಂತರ ತಮ್ಮ ಹಳ್ಳಿಗೆ ಅವರು ಹಿಂತಿರುಗುವುದೇ ಇಲ್ಲ. ಶಿಕ್ಷಿತ ಜನರು ಹಳ್ಳಿಗಳಲ್ಲಿ ವಾಸಿಸಿ ಅವುಗಳ ಜೀವನದ ಮಟ್ಟವನ್ನು ಮೇಲಕ್ಕೇರಿಸುವ ಅವಶ್ಯಕತೆಯು ಈಗ ಹೆಚ್ಚಾಗಿ ಕಂಡು ಬಂದುದರಿಂದ 'ಹಳ್ಳಿಗೆ ಹಿಂದೆ ಸರಿಯುವ' ಕೂಗೆದ್ದಿದೆ ನೇಕಡ 90ರಷ್ಟರ ಜನತೆಯು ಹಳ್ಳಿಗಳಲ್ಲಿ ವಾಸಮಾಡುತ್ತಿರುವ ದೇಶದಲ್ಲಿ ಹಾಯರ್ ಎಲಿಮೆಂಟರಿ ಶಾಲೆಯು ಅತ್ಯಾವಶ್ಯಕವಾದ ಶಿಕ್ಷಣ ಸಂಸ್ಥೆಯೆಂದು ಪರಿಗಣಿಸಲ್ಪಡುವುದು ನ್ಯಾಯವಾದುದೇ ಸರಿ. ಇಂತಹ ಶಾಲೆಗಳಿಂದ ಹೊರಗಿ ತಮ್ಮ ಹಳ್ಳಿಗಳಲ್ಲಿ ಜೀವಿಸಿ ಅವುಗಳ ಅಭಿವೃದ್ಧಿಗಾಗಿ ಕೆಲಸ ಮಾಡುವವರ ಮೇಲೆ ಗ್ರಾಮವಾಸ್ತವ್ಯದ ಮುಖ್ಯ ಆಶೆಯು ಅವಲಂಬಿಸಿರುತ್ತದೆ.

ಶಾಲೆಗಳು ಸಾಮಾಜಿಕ ಕೇಂದ್ರಗಳಾಗಬೇಕು.

ಶಾಲೆಗಳಿಗೆ ಬರುವ ಮಕ್ಕಳಿಗೆ ವಿದ್ಯೆ ಕೊಡುವುದರಿಂದ ಮಾತ್ರವೇ ವಿದ್ಯಾ ಕೆಲಸವು ಪರಿಸಮಾಪ್ತಿಹೊಂದಬಾರದು ಶಾಲೆಯು ಹಳ್ಳಿ ಜೀವನದ ಮುಖ್ಯ ಕೇಂದ್ರವಾಗಿ ಇಡೀ ಹಳ್ಳಿ ಜನಸಮೂಹದ ಅಭಿವೃದ್ಧಿ ಸಾಧಿಸುವ ಉದ್ದೇಶವುಳ್ಳದಾಗಬೇಕೆಂಬ ಅಭಿಪ್ರಾಯವು ಈಗ ಬಲಗೊಳ್ಳುತ್ತಿದೆ. ಅಧ್ಯಾಪಕರೂ ವಿದ್ಯಾರ್ಥಿಗಳೂ ಒಟ್ಟಿಗೆ ಶಾಲೆಯ ಹಿತಕ್ಕಾಗಿಯೂ ಹಳ್ಳಿಯ ಕ್ಷೇಮಕ್ಕಾಗಿಯೂ ದುಡಿಯಬೇಕು. ಶಾಲಾ ಸಮಯದ ನಂತರ ಮತ್ತು ರಜಾ ದಿನಗಳಲ್ಲಿ ಹಳ್ಳಿಯ ಯುವಕರು ಮತ್ತು ವೃದ್ಧರು ಶಾಲೆಗೆ ಪತ್ರಿಕೆ ಪುಸ್ತಕಗಳನ್ನೋದಲು, ಭಾಷಣಗಳನ್ನು ಕೇಳಲು, ಆಟವಾಡಲು ಮತ್ತು ವಿನೋದಗಳನ್ನು ನೋಡಲು ಬರುವಂತಾಗಬೇಕು. ಈ ರೀತಿ ಕೆಲಸ ಮಾಡುವ ಶಾಲೆಯು, ಮಕ್ಕಳ ಶಿಕ್ಷಣ ತರಬೇತಿಯಲ್ಲಿಯೂ, ಇಡೀ ಹಳ್ಳಿಯಲ್ಲಿ ಜ್ಞಾನ ಮತ್ತು ಸಂಸ್ಕೃತಿಯ ಬೆಳಕನ್ನು ಹಬ್ಬಿಸುವುದರಲ್ಲೂ ಹಳ್ಳಿಗರ ಸೌಹಾರ್ದಪರ ಸಹಕಾರವನ್ನು ಪಡೆಯದಿರಲಾರದು.

ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ.

	ರೂ. ಆ. ಪೈ		ರೂ. ಆ. ಪೈ.
ಮೂಲಧನ		ಕಟ್ಟಡ ಮತ್ತು ಸಾಮಾನು	
ತೆತ್ತಲ್ಪಟ್ಟ	6,00,000 0-0	ಮೊದಲಾದ ವುಗಳಿಗೆ ನಿಶ್ಚಿತ	
ಪೈಡ್ ಅಪ್	3,91,312-0-0	ಮೂಲ ವ್ಯಯ	93,489-4-3
ರಿಸರ್ವ್ ಫಂಡು	4,50,000-0-0	ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ಡಿಪೋಸಿಟ್		ಚಲಿಸಾಳುವ	
ಫಿಕ್ಸೆಡ, ಕರೆಂಟ್		ಸೆಕ್ಯೂರಿಟಿ	40 97,741-5-6
ಇತ್ಯಾದಿ	81,21,622-8-1	ಹುಂಡೀ ಪತ್ರ	
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ಮೊದಲಾದ ವುಗಳು	10,30,649-2 10
ವಿವಿಧ	10,51,799-1-7	ಠೇವಣಾತಿ	20,64,585-2-0
ಈ ವರ್ಷದ ಲಾಭ	55,003-0-6	ವಿವಿಧ	9,82,093-10 4
		ನಗದು	17,99,207-1-3
ಜುಮ್ಲಾ	1,00,69,766-10-2	ಜುಮ್ಲಾ	1,00,69,766-10-2

NOTICE

ಕುಂದಾಪುರ ಡಿ ಮು. ಕೋರ್ಟಿನಲ್ಲಿ.

O P. 19

ಅರ್ಜಿದಾರರು—

1. ನಾರಾಯಣ ಉಪಾಧ್ಯ,} ಸುಬ್ರಾಯ ಉಪಾ
2. ವಾಸುದೇವ ಉಪಾಧ್ಯ.} ಧ್ಯರ ಮಕ್ಕಳು.
3. ಭಾಗೀರಥಿ ಅಮ್ಮ, ಕೃಷ್ಣದೇವರು ಉಪಾಧ್ಯರ ವಿಧವೆ,

ಉಪ್ಪಿನಕುದ್ರು ಕಾರ್ಕಡ ಗ್ರಾಮದಲ್ಲಿರುವವರು,

ಎದ್ರು—ಪದ್ಮಾವತಿ ಅಮ್ಮ, ಸುಬ್ರಾಯ ಉಪಾಧ್ಯರ ವಿಧವೆ,

ಉಪ್ಪಿನಕುದ್ರು ಕಾರ್ಕಡ ಗ್ರಾಮದಲ್ಲಿರುವವಳ ಸಹಿತ ಎದ್ರುಗಳಿಗೆ ಮತ್ತು ಇತರ ಸಮಸ್ತರಿಗೆ ಸಹಾ ಈ ಮೂಲಕ ತಿಳಿಯಪಡಿಸುವದೇನೆಂದ್ರೆ —

1–2ನೇ ಅರ್ಜಿದಾರರ ಅಣ್ಣ ವ 3ನೇ ಅರ್ಜಿದಾರಳ ಗಂಡ ಹಾಲಿ ಮೃತಪಟ್ಟಿರುವ ಕೃಷ್ಣದೇವರು ಉಪಾಧ್ಯರು ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಇದರ ಕುಂದಾಪುರ ಬ್ರ್ಯಾಂಚಿನಲ್ಲಿ ಇಟ್ಟಿದ್ದ ಹಣಗಳನ್ನು ವಾಪಸ್ಸು ಪಡೆಯುವರೆ ಸಲುವಾಗಿ ತಮಗೆ ಸಕ್ಸೆಷನ್ ಸರ್ಟಿಫಿಕೇಟು ಕೊಡಿಸಬೇಕೆಂತ ವಿನಂತಿ ಕಾಣ್ಸಿ ಅರ್ಜಿದಾರರು ದಾಖಲ್ಮಾಡಿದ ಮೇಲಿನ ಅರ್ಜಿಯು ಮೇಲ್ಕಾಣುವ ಕೋರ್ಟಿನಲ್ಲಿ ತಾ 4-4-'40ಕ್ಕೆ ತನಿಖೆಗೆ ಇಟ್ಟಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ

Y. Tejappa Shetty,

Advocate.

ಅರ್ಜಿದಾರ್ರ ಕಡೆಯ ವಕೀಲ್,

ಕುಂದಾಪುರ, ತಾ 22-3-'40.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೨೮ ೩-'೪೦

ರಾಮಗಡ ಕಾಂಗ್ರೆಸ್ ಅಧಿವೇಶನ

ಈ ಅಧಿವೇಶನದ ಪ್ರಾಮುಖ್ಯತೆಯೆಂದರೆ ಪುನಃ ಗಾಂಧಿಯವರು ಕಾಂಗ್ರೆಸಿನ ನಾಯಕತ್ವವನ್ನು ವಹಿಸಿ ಹಿಂದೀ ಸ್ವಾತಂತ್ರ್ಯ ಸಮರದ ಸೇನಾನಿಯಾಗುವ ಜವಾಬ್ದಾರಿಯನ್ನು ವಹಿಸಿದುದು. ರಾಮಗಡ ಕಾಂಗ್ರೆಸು ಫೈಜ್‌ಪುರ, ಹರಿಪುರ ಮತ್ತು ತ್ರಿಪುರಿಗಳಷ್ಟು ಜಯಶೀಲವಾಗಿ ನಡೆದಿರುವುದೆಂದು ಹೇಳಬರುವುದಿಲ್ಲ ಈ ಅಧಿವೇಶನದ ಮೊದಲೂ ಆ ಸಂದರ್ಭದಲ್ಲೂ ಭಾರಿ ಮಳೆ ಬಂದು ಕಾಂಗ್ರೆಸ್ಸಿನ ಸುವ್ಯವಸ್ಥೆಗೆ ದೊಡ್ಡ ತೊಡಕಾಗಿದ್ದಿತು. ಆದರೂ ಬಾಬು ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ಸ್ವಾಗತಸಮಿತಿಯವರು ಎಡೆಬಿಡದೆ ರಾತ್ರಿ ಹಗಲು ದುಡಿದು ಪ್ರತಿನಿಧಿ ಪ್ರೇಕ್ಷಕ ವೃಂದಕ್ಕೆ ಸಾಧ್ಯವಾದಷ್ಟು ಅನುಕೂಲತೆಗಳನ್ನೊದಗಿಸಲೆತ್ನಿಸಿರುವರು. ವಿಶೇಷವಾಗಿ ಸ್ವಯಂಸೇವಕರ ಕೆಲಸವು ಅತಿ ಪ್ರಶಂಸನೀಯವಾಗಿದ್ದಿತು. ಎಡೆಬಿಡದೆ ಜಡಿಮಳೆ ಹೊಡೆಯುತ್ತಿದ್ದಾಗಲೂ ಕಾಲಡಿಯ ಚಾಪೆಗಳನ್ನು ತಲೆಯ ಮೇಲೆ ಹಿಡಕೊಂಡು ಮೊಣಕಾಲ ವರೆಗೆ ನೀರೇ ಬಂದರೂ ಜನತೆಯು ಗಲಿಬಿಲಿಗೊಂಡು ಅತ್ತಿತ್ತ ಕದಲದೆ ಜನತೆಯು ಜಾಹೀರು ಅಧಿವೇಶನದಲ್ಲಿ ತೋರಿಸಿದ ತಾಳ್ಮೆ ಮತ್ತು ಶಿಸ್ತು ಆಶ್ಚರ್ಯಕರವಾಗುತ್ತದೆ. ಎಂತಹ ತೊಡಕುಂಟಾದರೂ ಜಾಹೀರ್ ಅಧಿವೇಶನವನ್ನು ಕಟ್ಟುಕಟ್ಟಳೆಯಂತೆ ನಡೆಸಿಯೇ ಸಿದ್ಧವೆಂಬ ನಿರ್ಧಾರದಿಂದ ಕಾಂಗ್ರೆಸು ಮುಖಂಡರುಗಳು ಕೂಡಾ ಪರ್ಜನ್ಯನ ಕೋಪಾಟೋಪವನ್ನು ಲಕ್ಷಿಸದೆ ಕೈಕೊಂಡ ಕಾರ್ಯವನ್ನು ಮುನ್ನಡೆಸಿ ಕೊನೆಮುಟ್ಟಿಸಿರುವರು. ಕಾಂಗ್ರೆಸ್ ನಗರವನ್ನೇ ಜಲಪ್ರವಾಹಮಯವನ್ನಾಗಿ ಮಾಡಿದ ಜಡಿಮಳೆಯ ವಿಘ್ನ ಮತ್ತು ಅದನ್ನು ಅಚಲನಿರ್ಧಾರ, ಸ್ಥಿರಚಿತ್ತ ಅವಿಶ್ರಾಂತ ಶ್ರಮಗಳಿಂದ ಕಡೆಹಾಯ್ದು ಕಾಂಗ್ರೆಸು ತನ್ನ ಕಾರ್ಯವನ್ನು ಜಯಶೀಲವಾಗಿ ಸಾಧಿಸಿ ಗುರಿಮುಟ್ಟಿದ ವಿಷಯವು ಮುಂದಿನ ಪರಿಸ್ಥಿತಿಯ ಮುಂಗುರುತಾಗಿರುವುದೆನ್ನಬಹುದು. ಎಂತಹ ವಿಘ್ನಪರಂಪರೆಗಳನ್ನಾದರೂ ಧೈರ್ಯಸ್ಥೈರ್ಯದಿಂದಿರಿಸಿ ಕಾಂಗ್ರೆಸು ತನ್ನ ಉದ್ದೇಶ ಸಾಧಿಸಲು ಕಟಿಬದ್ಧವಾಗಿರುವುದೆಂಬುದನ್ನು ರಾಮಗಡ ಕಾಂಗ್ರೆಸು ಅಧಿವೇಶನವು ಲೋಕವಿಶ್ರುತಗೊಳಿಸಿರುವುದು.

ಈ ಸಲದ ಪ್ರದರ್ಶನವು ಅತ್ಯಂತ ಜಯಶೀಲವಾಗಿರುವುದು ಹಿಂದೀಯರು ಎಷ್ಟೊಂದು ಆಧುನಿಕ ಜೀವನಾವಶ್ಯಕವಸ್ತುಗಳನ್ನಾದರೂ ಗ್ರಾಮಗಾರಿಕೆಗಳಿಂದಲೇ ಒದಗಿಸಬಹುದೆಂಬುದನ್ನದು ವಿದಿತಗೊಳಿಸಿರುವುದು. ಆಸೇತು ಹಿಮಾಲಯ ಪರ್ಯಂತದ ಹಳ್ಳಿ ಕೈಗಾರಿಕೆಗಳನ್ನೆಲ್ಲಾ ಒಂದೆಡೆ ಕಂಡು ಆನಂದಿಸುವ ಸುಯೋಗವನ್ನು ಈ ಪ್ರದರ್ಶನವು ಒದಗಿಸಿ ಕೊಟ್ಟಿರುವುದು ಪ್ರದರ್ಶನವನ್ನು ಗಾಂಧಿಜಿಯವರೇ ತೆರೆದು ಪ್ರತಿದಿನ ಸಂಜೆ ಅಲ್ಲಿಯೇ ಪ್ರಾರ್ಥನೆ ಭಾಷಣಗಳನ್ನು ನಡೆಸುತ್ತಿದ್ದುದರಿಂದ ಅದು ಮತ್ತಷ್ಟು ಜನಾಕರ್ಷಣೀಯವಾಗಿದ್ದಿತು.

ರಾಮಗಡ ಕಾಂಗ್ರೆಸಿನ ಸ್ವಾಗತಾಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರ ಭಾಷಣವು ಬಿಹಾರಿನ ಸಂಕ್ಷೇಪವಾದೊಂದು ಇತಿಹಾಸವೇ ಆಗಿರುವುದು. ಭಾರತದ ಕಾಲದಲ್ಲಿ ಮಗಧ ರಾಜ್ಯವಾಗಿ ವೈಭವ ಪಡೆದು ಆ ಮೇಲೆ ಬೌದ್ಧ ಧರ್ಮದ ಪವಿತ್ರ ಜನ್ಮಸ್ಥಾನವಾಗಿ ಅಶೋಕ ಚಕ್ರವರ್ತಿಯ ಚಿರಸ್ಮರಣೀಯ ರಾಜ್ಯವಾದ ಬಿಹಾರು ಹಿಂದು ದೇಶದಲ್ಲೆಲ್ಲಾ ಅಗ್ರಗಣ್ಯಸ್ಥಾನ ಪಡೆಯಲರ್ಹವಾದ ಪೂರ್ವ ವೈಭವವುಳ್ಳದಾಗಿರುವುದು. ಪ್ರಾಕೃತಿಕ ಸೌಂದರ್ಯ ಮತ್ತು ಸಂಪತ್ತಿನಲ್ಲಿಯೂ ಬಿಹಾರು ಪ್ರಥಮ ಶ್ರೇಣಿಯಲ್ಲೇ ಇರುವುದು. ಮಹಾತ್ಮಾ ಗಾಂಧಿಯವರು ಅಹಿಂಸಾತ್ಮಕ ಚಳವಳವನ್ನು ಹಿಂದೂದೇಶದಲ್ಲಿ ಪ್ರಥಮವಾಗಿ ಪ್ರಯೋಗಿಸಿದುದು ಬಿಹಾರಿನಲ್ಲಿ, ಇಂದೀಗ ಬಿಹಾರು ಗಾಂಧಿ ವಾದದ ಪ್ರಬಲ ಆಶ್ರಯವಾಗಿರುವುದು. ಬಾಬು ರಾಜೇಂದ್ರ ಪ್ರಸಾದರಂತಹ ಸರ್ವಮಾನ್ಯ ಅಖಂಡ ಮುಖಂಡರ ನಾಯಕತ್ವದಲ್ಲಿ ದೇಶದ ಸ್ವಾತಂತ್ರ್ಯ ಸಮರದಲ್ಲಿಯೂ ಗಣನೀಯ ಸ್ಥಾನ ಪಡೆಯಲು ಮುಂದಾಗಿರುವುದು. ಬಾಬು ರಾಜೇಂದ್ರ ಪ್ರಸಾದರು ತನ್ನ ಭಾಷಣದಲ್ಲಿ ಕಾಂಗ್ರೆಸಿನ ಕಾರ್ಯಕ್ರಮದ ರೂಪು ರೇಷೆಯನ್ನೇನೂ ಪ್ರಸ್ತಾಪಿಸದೆ ಕೇವಲ ಸ್ವಾಗತದ ಭಾಷಣವನ್ನಷ್ಟೇ ಮಾಡಿರುವರು.

ರಾಷ್ಟ್ರಪತಿಗಳಾದ ಮೌಲಾನ ಅಬುಲ್ ಕಲಮ್ ಆಜಾದರಂತೂ ರಾಮಗಡದ ಕಾಂಗ್ರೆಸಿಗೆ ತಕ್ಕ ಅಧ್ಯಕ್ಷರಾಗಿರುವರು. ಅವರ ಭಾಷಣದ ಮೊದಲಿನ ಅಂಶವು ಕಾಂಗ್ರೆಸಿನ ಪ್ರಕೃತದ ಧೋರಣೆಯನ್ನು ವಿವರಿಸುವ ಟಿಪ್ಪಣಿಯಾಗಿರುವುದು. ಕೊನೆಯ ಅಂಶವು ಮಿ. ಜಿನ್ನರ ಲಾಹೋರಿನ ಭಾಷಣಕ್ಕೆ ತಕ್ಕ ಉತ್ತರವಾಗಿರುವುದು. ರಾಷ್ಟ್ರೀಯವಾದಿ ಹಿಂದೀ ಮುಸಲ್ಮಾನ ಮುಖಂಡರೊಬ್ಬರ ಹೃದಯದ ಆಶಯ ಆಕಾಂಕ್ಷೆ ಮತ್ತು ಉದ್ದೇಶವನ್ನದು ಉಜ್ವಲವಾಗಿ ಚಿತ್ರಿಸಿ ಇಂದು ದೇಶವನ್ನಾವರಿಸುವ ಹಿಂದು ಮುಸಲ್ಮಾನ ವೈಷಮ್ಯದ ಕಗ್ಗತ್ತಲಿನಲ್ಲಿ ಕೈದೀವಿಗೆಯಾಗಿ ಬೆಳಗುವುದು. ರಾಷ್ಟ್ರಾಭಿಮಾನಿ ಹಿಂದೀಯನ ಹೃದಯವನ್ನು ಆಶೋತ್ಸಾಹದಿಂದ ತುಂಬುವ ಮೌಲಾನಾರ ಭಾಷಣದ ಕೆಲವು ಅಂಶಗಳನ್ನೆತ್ತಿ ಬರೆಯುವೆವು.

"ನಾನು ಮುಸಲ್ಮಾನನು, ಅದಕ್ಕಾಗಿ ನನಗೆ ಅಭಿಮಾನವೆನಿಸುತ್ತದೆ. ನಾನು ಹಿಂದೀಯನಾಗಿರುವುದರಲ್ಲಿ ನನಗೆ ತುಂಬಾ ಹೆಮ್ಮೆಯಿದೆ. ಹಿಂದೀ ರಾಷ್ಟ್ರೀಯತ್ವವೆಂಬ ದುರ್ಭೇದ್ಯ ಘಟನದ ಪ್ರಾಮುಖ್ಯವಾದೊಂದು ಅವಯವವಾಗಿದ್ದೇನೆ ನಾನು. ಈ ಭವ್ಯ ಮಂದಿರದ ಕಟ್ಟಡಕ್ಕೆ ನನ್ನ ಅಗತ್ಯವಿದೆ ನನ್ನ ಹೊರತು ಭಾರತದ ಈ ಭವ್ಯ ಮಂದಿರವು ಪೂರ್ಣವಾಗಲಾರದು, ಭಾರತದ ರಚನೆಗೆ ಕಾರಣವಾಗುವ ನನ್ನ ಹಕ್ಕನ್ನು ನಾನೆಂದಿಗೂ ಬಿಟ್ಟುಕೊಡಲಾರೆ. ಇಸ್ಲಾಮ್ ಧರ್ಮವು ಹಿಂದೂದೇಶಕ್ಕೆ ಬಂದು ನೆಲೆಸಿ ತನ್ನ ಕಲ್ಯಾಣ ಸಾಧಿಸಿತು. ಅದರಿಂದ ಉಭಯ ಸಂಸ್ಕೃತಿಗಳ ಸಂಗಮವಾಯಿತು, ಗಂಗಾಯಮುನೆಯಂತೆ ಅವು ಕೆಲಕಾಲ ಪ್ರತ್ಯೇಕವಾಗಿ ಹರಿದುವು. ಆ ಮೇಲೆ ನಿಸರ್ಗ ಧರ್ಮಕ್ಕನುಗುಣವಾಗಿ ಈ ಉಭಯ ಸಂಸ್ಕೃತಿಗಳೂ ಸಂಗಮವಾಗಿ ಒಂದನ್ನೊಂದು ಅಪ್ಪಿಕೊಂಡವು. ಈ ಸಮ್ಮಿಶ್ರಣವು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹದಾಯ್ತು. ಹಿಂದುಸ್ಥಾನದ ಮೇಲೆ ಹಿಂದೂಧರ್ಮಕ್ಕೆ ಎಷ್ಟು ಹಕ್ಕುಬಾಧ್ಯತೆಗಳಿರುವವೋ ಅಷ್ಟೇ ಇಸ್ಲಾಮ್ ಧರ್ಮಕ್ಕೂ ಇರುವುದು. ಹಿಂದೀಯನೆಂದು ಹೇಳುವುದರಲ್ಲಿ ಹಿಂದುವಿಗೆಷ್ಟು ಅಭಿಮಾನವೆನಿಸುವುದೋ ಅಷ್ಟೇ ಮುಸಲ್ಮಾನರಿಗೂ ಅನ್ನಿಸುವುದು. [1] ಶತಮಾನಗಳ ನಮ್ಮ ಸಂಯುಕ್ತ ಇತಿಹಾಸ ಕಾಲದಲ್ಲಿ ನಮ್ಮ ಸಂಯುಕ್ತ ಸಂಪತ್ತು ಹೇರಳ ಅಭಿವೃದ್ಧಿಗೊಂಡಿದೆ ನಮ್ಮ ಭಾಷೆ, ಸಂಸ್ಕೃತಿ, ಕಲೆ, ಕೈಗಾರಿಕೆ, ನಡೆವಳಿ ಮತ್ತು ರೂಢಿಗಳಲ್ಲಿ ನಮ್ಮ ಸಂಯುಕ್ತ ಪ್ರಯತ್ನಗಳು ಒಡೆದು ಕಾಣುತ್ತಿವೆ. ಈ ಮುದ್ರೆಯಿಲ್ಲದ ಹಿಂದೀ ಜೀವನ ವ್ಯವಹಾರವೇ ದೊರೆಯಲಾರದು. ಈ ಸಂಯುಕ್ತ ಸಂಪತ್ತು ನಮ್ಮ ಸಂಯುಕ್ತ ರಾಷ್ಟ್ರೀಯ ಸೊತ್ತು; ಅದನ್ನು ಬಿಟ್ಟುಕೊಟ್ಟೆವೆನ್ನುವ ಒಬ್ಬಂಟಿಗರಾಗಿ ಉಳಿಯ ಲಾರೆವು. ನಮ್ಮ ಸಂಯುಕ್ತ ಜೀವನದ ಈ ಸಹಸ್ರ ವರ್ಷಗಳು ನಮ್ಮನ್ನು ಏಕರಾಷ್ಟ್ರೀಯತ್ವದಲ್ಲಿ ರೂಪಾಂತರಿಸಿವೆ. ಅನೇಕ ಶತಮಾನಗಳಿಂದ ನಿಸರ್ಗವು ಈ ರೂಪಾಂತರವನ್ನು ಗುಪ್ತವಾಗಿ ತನಗುಚಿತವಾದ ರೀತಿಯಲ್ಲಿ ನಡೆಸಿದೆ. ನಾವೀಗ ಹಿಂದೀ ರಾಷ್ಟ್ರವಾಗಿದ್ದೇವೆ. ಅಖಂಡ ಅವಿಭಾಜ್ಯ ರಾಷ್ಟ್ರವಾಗಿರುತ್ತೇವೆ. ಕ್ರಮಪ್ರಾಪ್ತವಾದುದನ್ನು ನಾವು ಸ್ವೀಕರಿಸಿ ನಮ್ಮ ಭವಿತವ್ಯ ನಿರ್ಮಾಣಕಾರ್ಯಕ್ಕೆ ತೊಡಗಬೇಕು."

ರಾಮಗಡ ಕಾಂಗ್ರೆಸ್ ಅಧಿವೇಶನದಲ್ಲಿ ಜನರೆಲ್ಲರ ಮನಸ್ಸನ್ನು ಪ್ರಾಮುಖ್ಯವಾಗಿ ಆಕರ್ಷಿಸಿ ಉತ್ತೇಜಿಸಿದ ಇಬ್ಬರು ಮಹಾವ್ಯಕ್ತಿಗಳೆಂದರೆ ಮಹಾತ್ಮ ಗಾಂಧಿಯವರು ಮತ್ತು ಪಂಡಿತ ಜವಾಹರಲಾಲರು. ಒಬ್ಬರು ಹಿರಿಯರ ವಿವೇಕ, ಸೈರಣೆ ಸಂಯಮ ಶಾಂತಿಗಳ ಪ್ರತಿಮೂರ್ತಿಯಾಗಿ ಸಂಪೂಜ್ಯರಾಗಿರುವರೆಂದರೆ ಇನ್ನೊಬ್ಬರು ಕಿರಿಯರ ಉತ್ಸಾಹ, ಚಟುವಟಿಕೆ, ಉದ್ವೇಗ, ಕಾರ್ಯೋತ್ಸಾಹ ಮತ್ತು ಸಾಹಸದ ಮುದ್ದೆಯಾಗಿ ಸರ್ವರ ಮನಸ್ಸನ್ನೂ ಆಕರ್ಷಿಸಿ ರಮಿಸಿರುವರು. ಮಹಾತ್ಮರು ಸಾರಥಿಯಾಗಿ ರಥನಡೆಸುವ ಶಾಂತಮೂರ್ತಿಯಾಗಿರುವಾಗ ಪಂಡಿತರು ಮಹಾರಥಿಯಾಗಿ ಹೋರಾಡುವ ವೀರಮೂರ್ತಿಯಾಗಿರುವರು. ಇಬ್ಬರ ಭಾಷಣಗಳಲ್ಲಿಯೂ ಅದೇ ರೀತಿಯ ತಾರತಮ್ಯವು ತೋರಿಬರುತ್ತಿತ್ತು ಜಾಗರೂಕತೆಯಿಂದ ನಡೆಯಿರಿ. ಶಿಸ್ತು ಸಂಯಮವುಳ್ಳವರಾಗಿರಿ. ಕಡಿದಿಟ್ಟ ನೆಟ್ಟಗಿನ ನಿಶ್ಚಿತ ಮಾರ್ಗವನ್ನು ಬಿಟ್ಟು ಹೋಗಬೇಡಿರೆಂದು ಗಾಂಧಿಜಿಯವರೆಚ್ಚರಿಸುವಾಗ, ಕೊನೆಯ ಸತ್ವ ಪರೀಕ್ಷೆಯ ಕಾಲವು ಸನ್ನಿಹಿತವಾಗಿದೆ, ವೀರಾಗ್ರಣಿಗಳಾಗಿ ಹೋರಾಡಲು ಕಟಿಬದ್ಧರಾಗಿರಿ. ದೇಶಕ್ಕಾಗಿ ಯಾವ ತ್ಯಾಗವೂ ಹೆಚ್ಚಿನದಲ್ಲೆಂದು ಪ್ರಾಣದ ಹಂಗು ತೊರೆದು ಕೊನೆಯದಾದ ಈ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಲು ಸಿದ್ಧರಾಗಿರೆಂಬ ಆವೇಶಪರ ಕರೆ ಪಂಡಿತಜವಾಹರಲಾಲರದು.

ಇಂದೀಗ ಕಾಂಗ್ರೆಸು ಸಂಪೂರ್ಣವಾಗಿ ಗಾಂಧಿಯವರ ನಾಯಕತ್ವವನ್ನೊಪ್ಪಿ ಅವರ ಅನುಜ್ಞೆಯಂತೆ ನಡೆಯಲು ಸಿದ್ಧವಿರುವುದು. ತಾನು ಸೇನಾನಾಯಕನೆಂದ ಮೇಲೆ ಇಡೀ ಸೇನೆಯು ತಾನು ಹೇಳಿದಂತೆ

FOR THE BES
TROPICAL
COMPAN
Head Office: "TROPICA
Chairman: SUBHA
Mangalore Branch: "NIV
OTHER
BOMBAY, MADRAS, CALCUT
LAHORE, PESHAW
DECCA, H

ಕೇಳಿನಡೆಯಲು ಸಿದ್ಧವಿರಬೇಕೆಂಬ ಮಹಾತ್ಮರ ಅಪೇಕ್ಷೆಯನ್ನು ಇಂದೀಗ ರಾಮಗಡ ಕಾಂಗ್ರೆಸ್ ಅಧಿವೇಶನವು ನೆರವೇರಿಸಿರುವುದೆನ್ನಬಹುದು. ಗಾಂಧಿಜಿಯವರಾದರೋ ಯಾವಾಗ ಸಂಗ್ರಾಮವನ್ನಾರಂಭಿಸುವರೆಂದು ಹೇಳಬರುವುದಿಲ್ಲ. ಪ್ರಚಂಡವಾಗಿ ಮತ್ತು ಹಿಂದಿಗಿಂತಲೂ ಬಹಳ ವ್ಯಾಪಕ ಹಾಗೂ ಉಗ್ರವಾಗಿ ಹೂಡಲ್ಪಡುವ ಕೊನೆಯ ಈ ಸ್ವಾತಂತ್ರ್ಯಯುದ್ಧದಲ್ಲಿ ಜನತೆಯು ಅಪಾರ ಕಷ್ಟ ನಷ್ಟಕ್ಕೊಳಗಾಗಬೇಕಾಗುವುದು. ದೇಶವು ಎಂತಹ ಕಠಿನ ಅಗ್ನಿ ಪರೀಕ್ಷೆಗೊಳಗಾಗಬೇಕಾಗುವುದೆಂದು ಈಗ ಕಲ್ಪಿಸಲು ಕೂಡಾ ಸಾಧ್ಯವಿಲ್ಲ. ಆದುದರಿಂದಲೇ ಗಾಂಧಿಜಿಯವರು ಅದನ್ನು ನಿವಾರಿಸಲು ಸಾಧ್ಯವಾದ ಪ್ರಯತ್ನ ನಡೆಸುತ್ತಿರುವರು. ತನ್ನೀರನ್ನಾದರೂ ತಣಿಸಿ ಕುಡಿಯುವ ಧೋರಣೆ ವಹಿಸಿರುವರು. ಕಾಂಗ್ರೆಸಿನ ದೋಷ ದುರ್ಬಲತೆಗಳನ್ನವರು ಚೆನ್ನಾಗಿ ಮನಗಂಡಿರುವರು. ಅದನ್ನು ಆದಷ್ಟು ಶುದ್ಧೀಕರಿಸಿ ಸಂಘಟಿಸಿ, ರಾಜಿಯು ಎಷ್ಟಕ್ಕೂ ಸಾಧ್ಯವಾಗದಿದ್ದರೆ ಮಾತ್ರ ಹೋರಾಟ ಹೂಡುವ ನಿರ್ಧಾರವುಳ್ಳವರಿರುವರು. ಲಕ್ಷಾಂತರ ಜನರ ಜೀವನ ಮರಣ ಪ್ರಶ್ನೆಯು ಇರುತವರು ಅವಸರದ ನಿರ್ಧಾರ

ಓ
ಇಟಲಿ ...
ಹಿಟ್ಲರು ...
ಜೆನ್ನರಿನಲ್ಲಿ ...
ಕಂಡುದೆಂದ...
ದೊಂದಿಗೆ ...
ಒಂದಾಗಿ ...
ನಿಯಮದೊಳ...
ಎಂಬುದರಲ್ಲಿ ...
ಗಿಯೇ ಪ್ರಥ...
ಟ್ರಿಪರು ...
ಆಮೇಲೆ ...
ಕ್ಕೆ ಬರಲಾ...
ಸತ್ಯಾಗ್ರಹ...
ಅದನ್ನು ...
ವಿಧಾನವನ್ನು ...
ಗಾಂಧಿ ವ...
ಮತ್ತು ...
ರ ಯಶಸ್ಸು ...
ಮೇಲೆಯೇ ...
ಲೇ ಅವರು ...
ಯಾಗಿ ...
ಯಶನಾಗಿ ...
ಬಾರೆನೆಂದು ...
ಹೀಗೆ ಒಂದೆ...
ಗೊಳಿಸುತ್ತ...
ಪ್ ಸರಕಾರ...
ಕಮತವನ್ನು ...
ತ್ತಿಸಿರುವರು ...
ಗದ ಕಟ್ಟಗೆ ...
ಸಿನ ಕೊನೆಯ ...
ಸು ಇನ್ನು ...
ಸಂಧಾನ ...
ನಿಶ್ಚೈಸುವ ...
ರದ್ದು.

...ಜರ್ಮನಿ ಮತ್ತು ರಷ್ಯಗಳ ಮೈತ್ರಿ
...ಗನೆ ಪ್ರಬಲ ಹೋರಾಟ ನಡೆಯುವುದು.

...ಕ್ಷೊಂದಿಗೆ

...ತ್ರಿ
...ವಸರದಿಂದ
...ನಿಯವರನ್ನು
...ನಿಗಳ ಕೋಟೆ
...ಸ್ಥಿರಸಿಕೊಂಡು
...ತ್ರ ಮುಸಲೋ
...ಸುವುದಕ್ಕಾಗಿ
...ಲ್ಲಿ. ಆದಕ್ಕಾ
...ವಾನ್ ರಿಬಂ
...ರ್ಶಿಸಿದುದು.
...ಲೋನಿ ಮಾತು

ಮೌಲಾನ ಯಾಕೂಬ್ ಹಸನರ ಆಕಸ್ಮಿಕ ನಿಧನ.

ಕತೆ ನಡೆದುದು ರಷ್ಯದ ಕುರಿತಾದ ಇಟೆಲಿಯ ಮನೋಭಾವನೆಯು ಇಂದು ಬಹಳ ಬದಲಾವಣೆಯಾಗಿದೆ. ಫಿನ್ಲೆಂಡಿನ ಮೇಲಿನ ರಷ್ಯದ ಧಾಳಿಯನ್ನು ಮೊದಲು ಉಗ್ರವಾಗಿ ವಿರೋಧಿಸಿದ ಇಟೆಲಿಯು ಕಡೆಗೆ ತಣ್ಣಗಾಗಿ ಫಿನ್ಲೆಂಡ್ ರಷ್ಯದೊಂದಿಗೆ ಸಂಧಿಮಾಡಿಕೊಳ್ಳುವುದೇ ಒಳ್ಳೆಯದೆಂಬಷ್ಟರ ಮಾರ್ಪಾಟ ಹೊಂದಿರುವುದು. ಮೊದಲು ದಂಡೆಯ ಮೇಲೆ ಕುಳಿತಿದ್ದ ಇಟೆಲಿಯು ಈಗ ಸ್ಪಷ್ಟವಾಗಿ ಜರ್ಮನಿಯ ಪಕ್ಷ ಹಿಡಿದಿರುವುದೆಂಬುದರ ದುದರ ಪರಿಣಾಮವನ್ನವು ಅನುಭವಿಸಬೇಕಾಗಿದೆ. ಜರ್ಮನಿಯ ಶಕ್ತಿಯು ದಿನೇ ದಿನೇ ಬೆಳೆಯಹತ್ತಿರುವುದರಿಂದ ಬ್ರಿಟಿಷ್ ಮತ್ತು ಫ್ರೆಂಚ್ ಜನತೆಯಲ್ಲಿ ತಳಮಳವುಂಟಾಗಿದೆ. ಹೀಗೆಯೇ ರಣರಂಗದಲ್ಲಿ ಕಾದುನಿಲ್ಲುವ ಯುಕ್ತಿಯಿಂದಿನ್ನು ಫಲವಿಲ್ಲೆಂಬುದು ಸಿದ್ಧವಾಗಿದೆ. ಸಾಂಪತ್ತಿಕ ಮುತ್ತಿಗೆಯಿಂದ ಜರ್ಮನಿಯ ಮೇಲೆ ಪ್ರಬಲ ಪರಿಣಾಮವೇನೂ ಆಗಲಾರದೆಂಬುದು ವಿಶದವಾಗಿದೆ. ರಷ್ಯ, ಇಟೆಲಿ, ಮತ್ತು ಇನ್ನಿತರ ಚಿಕ್ಕ ರಾಷ್ಟ್ರಗಳಿಂದ ಜರ್ಮನಿಯು ಅಪ್ರತ್ಯಕ್ಷವಾಗಿ ಸಹಾಯ ಪಡೆಯುತ್ತಿದೆ. ಇದು ಹೊರತು ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಬಲವನ್ನೇ ಮುರಿಯುವ ಉದ್ದೇಶದಿಂದ ಇಟೆಲಿ ಜರ್ಮನಿ ಮತ್ತು ರಷ್ಯಗಳೊಂದುಗೂಡಿ ಪ್ರಯತ್ನ ನಡೆಸುತ್ತಿವೆಯೆಂಬುದೀಗ ಸ್ಪಷ್ಟವಾಗಿದೆ. ಆದುದರಿಂದಲೇ ಇಂದೀಗ ಮಿತ್ರರಾಷ್ಟ್ರಗಳು ಅಗತ್ಯಬಂದರೆ ರಷ್ಯ ಮತ್ತು ಇಟೆಲಿಗಳೊಡನೆ ಯುದ್ಧ ಹೂಡಲು ಸಿದ್ಧತೆಗಳನ್ನು ಮಾಡುತ್ತಿವೆ. ಟರ್ಕಿಯ ಸಹಾಯದಿಂದ ಭೂಮಧ್ಯಸಾಗರದ ಸಂದು ಕಟ್ಟಿನ ಪ್ರದೇಶಗಳನ್ನು ಬ್ರಿಟನಿನ ಪ್ರಬಲ ನೌಕಾ ಮತ್ತು ವಿಮಾನಪಡೆಗಳಿಂದ ಬಲಪಡಿಸುತ್ತಿದೆ. ಜರ್ಮನಿಯ ಸಿಲ್ಟ್ ನೌಕಾ ಮತ್ತು ವಿಮಾನನಿಲಯಗಳ ಮೇಲೆ ಬ್ರಿಟಿಷ್ ವಿಮಾನಗಳು ನಡಿಸಿರುವ ಪ್ರಬಲ ವಿಮಾನಧಾಳಿಯು ಗಾಳಿಯು ಎತ್ತ ಕಡೆ ಬೀಸುತ್ತಿರುವುದೆಂಬುದನ್ನು ಸೂಚಿಸುತ್ತದೆ. ಬೇಗನೆ ಜರ್ಮನಿಯ ಮೇಲೆ ಪ್ರಬಲ ವಿಮಾನಧಾಳಿಗಳು ನಡೆಸಲ್ಪಡುವವೆಂಬುದರಲ್ಲಿ ಸಂದೇಹವಿಲ್ಲ ಮಾತ್ರವಲ್ಲದೆ ಪಶ್ಚಿಮ ರಣರಂಗದಲ್ಲಿಯೂ ಮಿತ್ರರಾಷ್ಟ್ರಗಳೇ ಎಪ್ರಿಲ್ ತಿಂಗಳೊಳಗೆ ಪ್ರಬಲ ಹೋರಾಟ ನಡಿಸುವ ಸಂಭವತೋರುತ್ತದೆ. ಬ್ರಿಟಿಷ್ ಮತ್ತು ಫ್ರೆಂಚ್ ಜನಮತವೂ ಪ್ರಬಲ ಹೋರಾಟವನ್ನಾಶಿಸುತ್ತದೆ. ಪ್ರಚಂಡ ಸೇನೆಗಳು ದೀರ್ಘ ಕಾಲದ ವರೆಗೆ ಕಾದು ಕೂತುಕೊಳ್ಳುವ ಕುರಿತು ಜನತೆಯಲ್ಲಿ ಅಸಹಿಷ್ಣುತೆಯುಂಟಾಗಿದೆ.

...FE POLICIES

...E

...NSURANCE

LIMITED

...UILDING", New Delhi.

...HANDRA BOSE

...UILDING" Hampankatta.

...CHES:

PATNA, LUCKNOW, JAIPUR,
POONA, MADURA
...ABAD (SIND).

...ರಾದ ಅವರೇ
...ವರ್ಭ ಮತ್ತು
...ಗಿದೆ. ಅದು
...ಮ ಪ್ರಯೋಗ
...ರುವುದು. ಆದ
... ಹೋರಾಟದ
... ಆದುದರಿಂದ
...ಕಾಂಗ್ರೆಸು ಸರಿ
...ದೆ ತಾನು ನಾ
...ನ್ನು ಆರಂಭಿಸ
... ಹೇಳಿಗುವರು.
...ಶವನ್ನು ಸಿದ್ಧ
...ಂದೆಡೆ ಬ್ರಿಟಿ
...ಲ್ಲಿ ಹಾಕಿ ಲೋ
...ಒಲಿಸಿಕೊಳ್ಳಲೆ
...ಯಾಗಿ ರಣರಂ
...ತ್ತಿರುವ ಕಾಂಗ್ರೆ
...ಮಗಢ ಕಾಂಗ್ರೆ
...ಹೆಜ್ಜೆಯೆಂದರೆ
...ಮ ಅವನ್ನಿನ್ನು
...ಬ್ರಿಟಿಷ್ ಸರಕಾ

ಲ್ಲಿ ಯಾವ ಸಂದೇಹವೂ ಇಲ್ಲ ಮಾತ್ರವಲ್ಲದೆ ಜರ್ಮನಿ ಇಟೆಲಿ ಮತ್ತು ರಷ್ಯಗಳೊಂದುಗೂಡಿ ಮಿತ್ರರಾಷ್ಟ್ರಗಳನ್ನು ವಿರೋಧಿಸುವ ಒಳಸಂಚು ನಡೆದಿರುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಮುಸಲೋನಿಯವರ ಬಾಯಿಯಾದ ಸೀನರ್ ಗೈಡಾರವರು ಫ್ರೆಂಚ್ ಮತ್ತು ಬ್ರಿಟಿಷ್ ಪ್ರಜಾಸತ್ತೆಗಳನ್ನು ಖಂಡಿಸಿ ಟೀಕಿಸ ಹತ್ತಿರುವರು. ಜರ್ಮನಿಯಲ್ಲೀಗ ವಿಜಯದ ವಿಶ್ವಾಸವು ತೋರಿಬರುತ್ತಿರುವುದು. ಜನತೆಯಲ್ಲಿ ನವಉತ್ಸಾಹ ಮತ್ತು ಆಶೋದಯ ಉಂಟಾದಂತೆ ತೋರುವುದು. ಇದಕ್ಕೆ ಹಿಟ್ಲರರ ರಾಜನೈತಿಕ ವಿಜಯಗಳೇ ಕಾರಣ. ಅವರು ಸದ್ಯದಲ್ಲೇ ಪ್ರಾಮುಖ್ಯವಾದೊಂದು ಭಾಷಣಮಾಡಿ, ಜರ್ಮನಿಯ ಅಜೇಯತೆಯನ್ನು ಸಾರುವರೆಂದು ತಿಳಿದುಬರುತ್ತದೆ. ಇಟೆಲಿ ಜರ್ಮನಿ ಮತ್ತು ರಷ್ಯಗಳ ಒಕ್ಕಟ್ಟಿನ ಕುರಿತು ಕೂಡಾ ಈ ಭಾಷಣದಲ್ಲಿ ಪ್ರಸ್ತಾಪಿಸಲಿರುವರೆಂದು ನಂಬಲಾಗಿದೆ.

ಎಪ್ರಿಲ್ ತಿಂಗಳೊಳಗೆ ಪ್ರಬಲ ಹೋರಾಟ ನಿಶ್ಚಯ

ಇಂದೀಗ ಮಿತ್ರರಾಷ್ಟ್ರಗಳು ತಮ್ಮ ತಪ್ಪನ್ನು ಮನಗಂಡುಕೊಂಡಿವೆ. ಸಕಾಲದಲ್ಲಿ ಧೈರ್ಯದಿಂದ ಹೊಡೆಯದೆ ಹಿಂಜರಿ...

ಮೌಲಾನ ಯಾಕೂಬ್ ಹಸನರ ಶೋಚನೀಯ ನಿಧನ

ಮದ್ರಾಸ್ ಪ್ರಾಂತದ ಅಗ್ರಗಾಮಿ ರಾಷ್ಟ್ರೀಯ ವಾದಿ ಮುಸಲ್ಮಾನ ಮುಖಂಡರೂ, ಕಾಂಗ್ರೆಸ್ ಮಂತ್ರಿಗಳಲ್ಲೊಬ್ಬರೂ ಆದ ಮೌಲಾನ ಯಾಕೂಬ್ ಹಸನರು ಇದೇ ತಾ. 24ರಲ್ಲು ಮದ್ರಾಸಿನ ನುಂಗಬಾಕ್ಕಮಿನಲ್ಲಿ ಆಕಸ್ಮಿಕವಾಗಿ ಹೃದ್ರೋಗದಿಂದ ಮೃತರಾಗಿರುವರೆಂಬುದು ಅತ್ಯಂತ ವಿಷಾದಕರವಿದೆ. ಮಿ. ಯಾಕೂಬ್ ಹಸನರು ರಾಮಗಡ ಕಾಂಗ್ರೆಸ್ ಅಧಿವೇಶನದಿಂದ ತಾ. 23ರಲ್ಲು ಹಿಂದಿರುಗಿದ್ದರು. ತಾ. 24ನೇ ಸಂಜೆ ಘಂಟೆ 6-30ರ ಸುಮಾರಕ್ಕೆ ಅವರಿಗೆ ಎದೆಯಲ್ಲೊಂದು ನೋವುಂಟಾಯಿತು. ಕೆಲವು ಮಿನಿಟುಗಳ ನಂ

ಮೌಲಾನ ಯಾಕೂಬ್ ಹಸನರು.

ತರ ಅದು ಕಡಿಮೆಯಾಯಿತು. ಆ ಮೇಲೆ ಪುನಃ ವೇದನೆಯೆದ್ದು ಕೂಡಲೇ ಚಿಕಿತ್ಸೆ ನಡೆಸಲ್ಪಟ್ಟರೂ ಅರ್ಧ ಘಂಟೆಯೊಳಗೆ ನಿಧನ ಹೊಂದಿದರು.

ಮಿ. ಯಾಕೂಬ್ ಹಸನರು 1876ರಲ್ಲಿ ನಾಗಪುರದಲ್ಲಿ ಹುಟ್ಟಿ ಅಲಿಘಡದ ಮುಸ್ಲಿಮ್ ಕೋಲೇಜಿನಲ್ಲಿ ವಿದ್ಯೆ ಪಡೆದವರು. ಅವರ ಅಣ್ಣಂದಿರಾದ ಮಹಮದ್ ಹಸನರೊಂದಿಗೆ ಸುಮಾರು 40 ವರ್ಷಗಳ ಹಿಂದೆ ಮದ್ರಾಸಿಗೆ ಬಂದು ವ್ಯಾಪಾರವನ್ನಾರಂಭಿಸಿದರು. ಮುಸಲ್ಮಾನ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಒಂದು ಸಂಘವನ್ನು ಸ್ಥಾಪಿಸಿ ಹಣ ಸಂಗ್ರಹಿಸಿ ವೇತನ ಕೊಡಲು ಬಹಳ ಶ್ರಮ ವಹಿಸಿದ್ದರು. ವ್ಯಾಪಾರದ ನಿಮಿತ್ತ 1912ರಲ್ಲಿ ಇಂಗ್ಲೆಂಡಿಗೆ ಹೋಗಿದ್ದರು. ಮಿ. ಯಾಕೂಬ್ ಹಾಸನರು ಪರ್ಶಿಯನ್ ಅರೆಬಿಯನ್ ಭಾಷೆಗಳಲ್ಲಿ ದೊಡ್ಡ ವಿದ್ವಾಂಸರಿದ್ದು ಇಸ್ಲಾಮ್ ಧರ್ಮ ಸಂಬಂಧವಾಗಿ ಹಲವು ಪುಸ್ತಕ ಬರೆದಿರುವರು. ಖೋರಾನಿನ ಕುರಿತು ಭಾಷ್ಯವೊಂದನ್ನು ಪ್ರಕಟಿಸಿರುವರು. ಉರ್ದು ಮತ್ತು ಇಂಗ್ಲಿಷ್ ಸಾಪ್ತಾಹಿಕಗಳೆರಡನ್ನು ನಡಿಸಿದ್ದರು, ಹಲವು ಸಾರ್ವಜನಿಕ ಸಂಸ್ಥೆಗಳ ಕಾರ್ಯಕಲಾಪಗಳಲ್ಲಿ ಭಾಗ ವಹಿಸುತ್ತಿದ್ದರು. ಕೋರ್ಪರೇಶನ್ ಮತ್ತು ಮದ್ರಾಸ್ ಕೌನ್ಸಿಲ್ ಸದಸ್ಯರಾಗಿದ್ದರು. ಈ ಸಲ ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳಾಗಿ ತುಂಗಭದ್ರಾ ಯೋಜನೆಯ ಕುರಿತು ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಿದ್ದರು.

ಹಿಂದು ಮುಸಲ್ಮಾನ ಐಕ್ಯವನ್ನುಂಟುಮಾಡಲು ಬಹಳವಾಗಿ ಪ್ರಯತ್ನ ಮಾಡಿ ಆ ಸಂಬಂಧವಾದ ಬೊಂಬಾಯಿ ಮತ್ತು ಲಕ್ನೋ ಒಡಂಬಡಿಕೆಗಳಲ್ಲಿ ಪ್ರಾಮುಖ್ಯ ಭಾಗ ವಹಿಸಿದ್ದರು. ಖಿಲಾಫತ್ ಚಳವಳದ ಅಗ್ರ ಭಾಗವಹಿಸಿ 1919ರಲ್ಲಿ ಇಂಗ್ಲೆಂಡಿಗೆ ಹೋಗಿ ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿಯವರು ಇಂಡಿಯಾ ಸೆಕ್ರೆಟರಿಗಳೇ ಮೊದಲಾದವರ ಮುಂದೆ ಹೇಳಿಕೆಗಳನ್ನಿತ್ತಿದ್ದರು. 1921ರಲ್ಲಿ ಕಲ್ಲಿಕೋಟೆಗೆ ಹೋಗಿದ್ದಾಗ ಅವರ ಮೇಲೆ 144 ಸೆಕ್ಷನ್ ಜ್ಯಾರಿ ಮಾಡಲ್ಪಟ್ಟಿತು. ಅದನ್ನವರು ಉಲ್ಲಂಘಿಸಿ 6 ತಿಂಗಳ ಶಿಕ್ಷೆಗೊಳಗಾದರು. ಆ ವೇಳೆ ತಂಜಾವೂರು ರಾಜಕೀಯ ಪರಿಷತ್ತಿನಲ್ಲಿ ರಾಜ ದ್ರೋಹಕರ ಭಾಷಣವಿತ್ತುದಕ್ಕಾಗಿ 2 ವರ್ಷಗಳ ಕಠಿಣ ಶಿಕ್ಷೆಗೊಳಗಾದರು. ಮಿ. ಯಾಕೂಬ್ ಹಸನರ ಪತ್ನಿಯಾದ ಮಿಸೆಸ್ ಕದಿಜಾ ಯಾಕೂಬ್ ಹಾಸನರು ಕೂಡಾ ಎಸೆಂಬ್ಲಿ ಮೆಂಬರರು. ಟರ್ಕಿಯ ಮಹಿಳೆಯಿದ್ದು ವಿದ್ಯಾವಂತೆ ಮತ್ತು ಸಧಾರಣಾಸಕ್ತರು. ಇವರ 10 ವರ್ಷದ ಪುತ್ರನು ಹೈದರಾಬಾದಿನ ಉಸ್ಮಾನಿಯಾ ವಿಶ್ವ ವಿದ್ಯಾಲಯದಲ್ಲಿ ಕಲಿಯುತ್ತಿರುವನು.

ದಿ ಕೆನರಾ ಬೇಂಕಿಂಗ್ ಕೊರ್ಪರೇಶನ್ ಲಿಮಿಟೆಡ್, ಉಡುಪಿ.

ಇದರ 1939ನೇ ಇಸವಿ ದಶಂಬ್ರ 31ನೇ ತಾರೀಕಿಗೆ ಅಂತ್ಯವಾಗುವ 34ನೇ ವರ್ಷದ ಆಡಳಿತ ಮಂಡಳಿಯ ರಿಪೋರ್ಟ, ಸಾಲಮೂಲಗಳ ಮತ್ತು ಲಾಭ-ನಷ್ಟದ ತಖ್ತೆ ಮತ್ತು ಲೆಖ್ಖ ಪರಿಶೋಧಕರ ರಿಪೋರ್ಟ ನಮ್ಮ ಕೈಸೇರಿವೆ. ಈ ಬೇಂಕು 1906ನೇ ಇಸವಿಯಲ್ಲಿ ಜನಿಸಿದ ತನ್ನ 35ನೇ ವಯಸ್ಸಿಗೆ ಕಾಲಿಟ್ಟಿದೆ. ಜನತಾವಿಶ್ವಾಸಕ್ಕೆ ಪಾತ್ರವಾದ ಆಡಳಿತ ಮಂಡಳಿ, ದಿನದಿಂದ ದಿನಕ್ಕೆ ಏರುತ್ತಿರುವ ಪಾಲು, ಭಂಡವಾಳ ವ ಕ್ಷೇಮನಿಧಿ, ಹೊರಗೆ ಕೊಡಲ್ಪಟ್ಟ ಸಾಲಗಳ ಭದ್ರತೆ, ಇವೇ ಸಭದ್ರವಾದ ಬ್ಯಾಂಕುಗಳ ಕೆಲವು ಮುಖ್ಯ ಲಕ್ಷಣಗಳು. ಈ ಪ್ರಾಮುಖ್ಯ ಲಕ್ಷಣಗಳಲ್ಲಿ ಒಂದೊಂದನ್ನೇ ಎತ್ತಿ ಪರಿಶೀಲಿಸಿ ನೋಡಿದರೆ ಯಾವ ವಿಷಯದಲ್ಲೂ ಈ ಬ್ಯಾಂಕು ಹಿಂದೆ ಬಿದ್ದಿಲ್ಲ. ವಸೂಲಾದ ಪಾಲು ಮೊಬಲಗು ರೂ 3,03,415ರಿಂದ ರೂ. 3,80,715ಕ್ಕೂ ಕ್ಷೇಮನಿಧಿಗಳು ರೂ. 3,83,407-11-0ರಿಂದ ರೂ. 390,000ಕ್ಕೂ ಬರೇ ಒಂದು ವರ್ಷದೊಳಗೆ ಏರಿವೆ, ಅಂತ ಮೇಲೆ ಠೇವಣಿದಾರರಿಗೆ ಭದ್ರತೆಯನ್ನು ಕಲ್ಪಿಸಿಕೊಡುವುದೇ ಬ್ಯಾಂಕು ತನ್ನ ಧ್ಯೇಯವನ್ನಾಗಿ ಮಾಡಿಕೊಂಡು ಒಡೆಮು ನಡೆಸುತ್ತಿದೆ. ಗಿರಾಕಿಗಳ ಮೇಲೆ ಹೊರ ಬಾಕಿಯಿರುವ ಒಟ್ಟು ರೂಪಾಯಿ 19,17,772-1-4 ಸಾಲಗಳಲ್ಲಿ ರೂಪಾಯಿ 12,85,856-6-10 ಅಂದರೆ ಸೇಕಡಾ 67ರಷ್ಟಂತಲೂ ಜಾಸ್ತಿಯಾಗಿ ಚಿನ್ನಾಭರಣಗಳು, ದವಸ ಧಾನ್ಯಗಳು, ಸರಕಾರಿ ಭದ್ರತೆ ಪತ್ರಗಳು ಸ್ಥಿರಾಸ್ತಿಯೇ ಮೊದಲಾದ ಸಂಪೂರ್ಣ ಭದ್ರತೆಯ ಮೇಲೆ ಕೊಟ್ಟ ಸಾಲಗಳಾಗಿವೆ.

ದೇಶದ ವಿದ್ಯಮಾನಿಕ್ಯ ಕೈಗಾರಿಕೆಗಳ ಬೆಳವಣಿಗೆಗಳಿಗೆ ಸುಭದ್ರವಾದ ಬ್ಯಾಂಕುಗಳು ಅತ್ಯಗತ್ಯವಾದ ಒಂದು ಅಂಗವಾಗಿವೆ. ಈ ಬ್ಯಾಂಕು ಈ 35 ವರ್ಷಗಳಲ್ಲಿ ತನ್ನ ಕೈಲಾದಷ್ಟು ಸೇವೆಯನ್ನು ಮಾಡಿರುತ್ತದೆ. ಪಾಲು ಮಾಲಕರಿಗೆ ಇಂಥಹ ಅರ್ಥಿಕ ದುಸ್ಥಿತಿಯ ಪರಿಸ್ಥಿತಿಯಲ್ಲಿಯೂ ಕೂಡಾ ಸೇಕಡಾ 9ರಂತೆ ಲಾಭಾಂಶವನ್ನು ಹಂಚುವಷ್ಟು ಮುನ್ನಡೆಯನ್ನು ಒಟ್ಟುಗೂಡಿಸಿದೆ ಎಂದಮೇಲೆ ಈ ಬ್ಯಾಂಕುವ ಇದರ ಆಡಳಿತ ಮಂಡಳಿಯು ಠೇವಣಿದಾರರಿಗೂ ಸ್ತೀರವಿಶ್ವಾಸಕ್ಕೂ ಪಾತ್ರವಾದುದಕ್ಕೆ ಪ್ರತ್ಯೇಕ ನಿದರ್ಶನವು ಬೇಕಾಗಿಲ್ಲ. ಇನ್ನು ಮುಂದೆ ಕೂಡಾ ಬ್ಯಾಂಕು ಪ್ರಗತಿಯನ್ನು ಹೊಂದಿ ಏಳಿಗೆಯನ್ನು ಮಾಡಲೆಂದೇ ನಮ್ಮ ಕೋರಿಕೆ.

ಸದ್ವೈದ್ಯಶಾಲಾ ನಂಜನಗೂಡು ಇವರ

"ಸುಬಲಾ" ಪಿತ್ತ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ ಬಹಳ ರುಚಿಯೂಗಿರುತ್ತದೆ.

ಬ್ರಾಂಚ್:-ರಥಬೀದಿ ಮಂಗಳೂರು

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ವಾರ್ತಾಹರರಿಂದ)

ಮಂಗಳೂರು, ತಾ 25-3-'40.

ಪಂಡಿತರ ಸಂಘ — ದ. ಕನ್ನಡ ಪಂಡಿತರ ಸಂಘದ ಚತುರ್ಥ ವಾರ್ಷಿಕ ವರ್ಧಂತಿಯು ಕಳೆದ ತಾ. 17ರಲ್ಲಿ ರಾ| ಯಂ. ವಿ ಶಿನ್ನಗಳ ಅಧ್ಯಕ್ಷತೆಯಲ್ಲಿ ಸೇರಿತು. ಕಾರ್ಯದರ್ಶಿಗಳು ಗತವರ್ಷದ ವರದಿಯನ್ನೋದಿದರು. ಪ್ರೊ. ಎಸ್. ರಾಮಚಂದ್ರ ಅಯ್ಯರ್‌ರವರೂ ಶ್ರೀ. ಎಚ್ ಭೀಮರಾಯರೂ ಹಿತಚಿಂತಕರ ಭಾಷಣಮಾಡಿದರು. ಅನಂತರ ಕಾವ್ಯ ವಾಚನವೇ ಮೊದಲಾದ ಕಾರ್ಯಕ್ರಮಗಳು ಕ್ರಮವಾಗಿ ನಡೆದುವು. ಅನಂತರದಲ್ಲಿ ಗತವರ್ಷದ ಅಧಿಕಾರಿಗಳನ್ನೇ ಪುನರಾವರ್ತಿ ಅಧಿಕಾರಿಗಳನ್ನಾಗಿ ಚುನಾಯಿಸಲಾಯಿತು. ಕಾರ್ಯಕಾರಿ ಮಂಡಲಿಗೆ ಕೆಲ ಸದಸ್ಯರನ್ನು ಆರಿಸಿದ ಮೇಲೆ ಅಧ್ಯಕ್ಷರು ಪಂಡಿತರ ವರ್ಗಕ್ಕಿರುವ ಕುಂದುಕೊರತೆಗಳನ್ನು ಸವಿಸ್ತಾರವಾಗಿ ತಿಳಿಸಿ ಪಂಡಿತರಿಗೆ ಅಧ್ಯಾಪಕ ವರ್ಗದಲ್ಲಿ ಬಹಳ ಕೀಳಿನ ಸ್ಥಾನವು ದೊರಕಿರುವುದು ಅವರ ಆರ್ಥಿಕ ದುಸ್ಥಿತಿಯಿಂದಲೇ ಎಂದು ತಿಳಿಸಿದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಕಾರ್ಯಾರಂಭವಾಗುವ ಮೊದಲು ಉಪಾಹಾರಾದಿ ಸತ್ಕಾರವೂ ನಡೆಯಿತು.

ಪ್ರಗತಿ ನಾಟಕ ಸಂಘ— ಈ ಸಂಘದ ಸಾಮಾನ್ಯ ಸಭೆಯೊಂದು ತಾ 17ನೇ ಬೆಳಿಗ್ಗೆ ಶ್ರೀ. ಪೀತಾಂಬರ ರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಪ್ರತಿ ತಿಂಗಳಿಗೆ ಒಂದೊಂದು ಹೊಸ ನಾಟಕವನು ಅಭಿನಯಿಸಬೇಕೆಂದು ನಿರ್ಧಾರವಾಯಿತು. ಅಖಿಲ ಕರ್ನಾಟಕ ವಿದ್ಯಾರ್ಥಿ ಕೂಟದ ಸಹಾಯಾರ್ಥವಾಗಿ ಸದ್ಯದಲ್ಲಿಯೇ 'ಭಾಸ್ಕರ' ಎಂಬ ನಾಟಕವನ್ನು ಅಭಿನಯಿಸಲು ನಿರ್ಧರಿಸಿದರು.

ಉಡುಪಿ

ಶ್ರೀ ವಾದಿರಾಜ ಸ್ವಾಮಿಗಳ ಜನ್ಮೋತ್ಸವ

ತಾ. 26 3-40ರಲ್ಲಿ ಶ್ರೀಪರ್ಯಾಯ ಶ್ರೀ ಅದಮಾರ ಮಠದ ಕಡೆಯಿಂದ ಅತಿ ವಿಜೃಂಭಣೆಯಿಂ ಜರಗಿತು. ರಾತ್ರಿ ರಥೋತ್ಸವವೂ ಇತ್ತು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O S. No 190/1939

ಟಿ. ವಾಸುದೇವಾಚಾರ್ಯ, ರಾಮಕುಂಜ ಗ್ರಾಮ, —ವಾದಿ.

ಕೆ. ಪದ್ಮನಾಭಾಚಾರ್ಯ ನಗರಿ ಕೇಶವಾಚಾರ್ಯರ ಮಗ ರಾಮಕುಂಜ ಗ್ರಾಮ ಹಾಲಿ ಮೈಸೂರಲ್ಲಿ, —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ವಾದಿಗೆ ಕಳೆದ 1938ನೇ ಇಸ್ವಿ ನವಂಬರ ತಿಂಗಳ ಆಖೈರಿಗೆ ಗ್ರಹಸ್ತರ ಸಮಕ್ಷಮ ಲೆಕ್ಕಾಚೆಕ್ಕ ಮಾಡಿ ಕೊಡಲೊಪ್ಪಿಕೊಂಡ (ಕಳೆದ 1937ನೇ ಇಸ್ವಿಯಲ್ಲಿ ವ್ಯಾಪಾರದ ಬಗ್ಗೆ ಆನಾಗ್ಯೆ ಸಾಲವಾಗಿ ಪಡೆದ) ಅಸಲು ರೂ. 300 ಮತ್ತು ಅಲ ಗ್ಯಾತಿನ 13 12-39ವರೆಗಿನ ಬಡ್ಡಿ ರೂ 19 8 0 ಕೂಡಾ ರೂ. 319 8 0ನ್ನು ಬರಮಾಡಿಕೊಳ್ಳುವರೆ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ದಾಖಲ್ಮಾಡಿದ ಮೇಲಿನ ವ್ಯಾಜ್ಯದ ತನಿಖೆ ಮ್ಯಾದೆಯು ತಾ. 29 3 '40ಕ್ಕೆ ಇರುತ್ತದೆ. ಮತ್ತು ಸದ್ರಿ ದಾವೆಯಲ್ಲಿ R. I A. 1563/39ರ ಪ್ರಕಾರ ನಿಮ್ಮ ಆಸ್ತಿ ಜಪ್ತು ಮಾಡ್ಸಿದಬೇಕೆಂತ ಕೊಡಾ ವಾದಿ ಅರ್ಜಿ ಬರಕೊಂಡು ಅಸ್ತ ಪನವಿ ಮ್ಯಾದೆ ಕೂಡಾ ಸದ್ರಿ ದಿನ್ನವೇ ಇರುತ್ತದೆ. ಅದ್ದರಿಂದ ಆ ಕುರಿತ ನಿಮಗೇನಾದರೂ ಆಕ್ಷೇಪಣೆ ಇದ್ದರೆ ಸದ್ರಿ ತಾರೀಕಿನಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ನೀವು ಮುದ್ದಾಂ ಯಾ ವಕೀಲ ದ್ವಾರಾ ಉಪಸ್ಥಿತಿಕೊಳ್ಳತಕ್ಕದ್ದು ನಿಮ್ಮ ಗೈರ ಹಾಜರಿಯಿಂದ ತೀರ್ಮಾನಿಸಲಾಗುವುದು.

ಪುತ್ತೂರು 24-3 '40 — **N V Kolathaya**, *Vakil, Puttur*

ಉಡುಪಿ

ಮಣಿಪಾಲದಲ್ಲಿ ಹಿಂದೂ ಅನಾಥಾಶ್ರಮ ಉದ್ಘಾಟನಾ ಸಮಾರಂಭ— ಮುಂಬಯಿಯ ಶ್ರೀ ಲಕ್ಷ್ಮೀಕಾಂತ ತಿಂತಿಣಿ ದಾಬೋಳ್ಕರ್ ಅವರು ತಾ. 25-3-'40ನೇ ಸೋಮವಾರ ಸಂಜೆ 5-45ಕ್ಕೆ ಮಣಿಪಾಲದ ಹಿಂದೂ ಅನಾಥಾಶ್ರಮದ ಉದ್ಘಾಟನಾ ಸಮಾರಂಭವನ್ನು ಜಯಶೀಲವಾಗಿ ಪೂರೈಸಿದರು. ಕಮಿಟಿಯ ಪ್ರೆಸಿಡೆಂಟರಾದ ಶ್ರೀ ಅಣ್ಣಾರ ಲಕ್ಷ್ಮೀನಾರಾಯಣರಾಯರು ವರದಿವಾಚನ ಮಾಡಿದರು. ಶ್ರೀಗಳಾದ ಎಸ್.ಆರ್. ಹಳದೀಪುರ್ ಕರ್, ಕೆ. ಕೆ ಶೆಟ್ಟಿ, ಎಂ ಸಿ ಯು. ಪಣಿಯಾಡಿ ಅನಂತ ಪೈ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು. ಕಮಿಟಿಯ ಕಜಾನ್ಜಿಯರಾದ ಶ್ರೀ. ದಾಮೋದರ ಕಾಮತರು ಧನ್ಯವಾದಗಳನ್ನರ್ಪಿಸಿದರು. ಶ್ರೀ ಲಕ್ಷ್ಮೀಕಾಂತರು ನೂರು ರೂಪಾಯಿಗಳ ಧನಸಹಾಯವನ್ನಿತ್ತರು. ಆಶ್ರಮಕ್ಕೆ ಇನ್ನೂ ಹೆಚ್ಚು ವಿದ್ಯಾರ್ಥಿಗಳು ಸೇರಿದ್ದಲ್ಲಿ ನಾನೂರು ರೂಪಾಯಿಗಳ ಹೆಚ್ಚಿನ ಧನಸಹಾಯ ಮಾಡುವೆನಾಗಿ ವಾಗ್ದಾನವಿತ್ತರು.

ಅಭಿವಂದನೆ— ತಾ. 25-3-40ರಲ್ಲಿ ಶ್ರೀ ಗಡಿಯಾರ್ ಅನಂತಕೃಷ್ಣರಾಯರು 12 ಮಂದಿ ಹರಿಜನ ವಿದ್ಯಾರ್ಥಿಗಳಿಗೆ ಊಟಕೊಟ್ಟರು. ಶ್ರೀ ಬಿ ರಂಗರಾಯರು ತನ್ನ ಮನೆಯಲ್ಲಿ 15 ಮಂದಿ ಹರಿಜನರಿಗೆ ಮೃಷ್ಟಾನ್ನ ಭೋಜನ ಕೊಟ್ಟು ಪ್ರೋತ್ಸಾಹಿಸಿದ್ದಾರೆ. ಇದಕ್ಕಾಗಿ ಹರಿಜನ ಲೀಗಿನ ಅಧ್ಯಕ್ಷರು ಇವರಿಗೆ ಅಭಿವಂದನೆಯನ್ನರ್ಪಿಸುತ್ತಾರೆ.

ಬಯಲಾಟ— ಇಲ್ಲಿಯ ಕಲ್ಸಂಕ ಬೈಲಲ್ಲಿ ತಾ 23-3 1.40ರ ಶನಿವಾರ ರಾತ್ರಿ ಸಾಕೂರು ಮೇಳದವರ ಯಕ್ಷಗಾನ ಬಯಲಾಟವು ವಿಶೇಷವಾಗಿ ನಡೆಯಿತು. ಪಾತ್ರವಲ್ಲದೆ ವಿದ್ಯುದ್ದೀಪಗಳಿಂದ ಅಲಂಕರಿಸಲ್ಪಟ್ಟ ರಂಗಸ್ಥಳವು ನೋಡಲು ಮನೋರಂಜಕವಾಗಿದ್ದಿತ್ತು. ಮತ್ತು ಇಲ್ಲಿ ಶ್ರೀ ಆರ್. ಆರ್ ಕುಂಜೂರು ಇವರು ಪಾತ್ರಗಳ ಆರೋಗ್ಯ ಕ್ರಮದ ವಿಚಾರವಾಗಿ ಪ್ರಶಂಸಿಸಿ ಸಾಕಲ್ಪಟ್ಟ ಇಬ್ಬರಿಗೆ ಬೆಳ್ಳಿಯ ಪಾರಿತೋಷಕವನ್ನು ಕೊಟ್ಟರು.

ಹಂಗಾರಕಟ್ಟೆ— ಕಳೆದ ಡಿಸಂಬರ ತಿಂಗಳಲ್ಲಿ ನಡೆದ ಪೋಸ್ಟಲ ಇನ್ಸ್‌ಪೆಕ್ಟರರ ಕಾಂಪಿಟೇಟಿವ್ ಪರೀಕ್ಷೆಯಲ್ಲಿ ಇಲ್ಲಿ ಪೋಸ್ಟಮಾಸ್ಟರರಾಗಿದ್ದ ಶ್ರೀ ನಾರಾಯಣ ಪ್ರಭುಗಳು 10ನೇ ಸ್ಥಾನವನ್ನು ಪಡೆದು ಪಾಸಾಗಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ.

ಸುಬ್ರಹ್ಮಣ್ಯ— ಇಲ್ಲಿಯ ಕೆಲವು ಉತ್ಸಾಹಿತರು ಇದು ರಾಷ್ಟ್ರೀಯ ಸಪ್ತಾಹ ಸಂದರ್ಭದಲ್ಲಿ ಖಾದಿ ಮಾರಾಟಮಾಡುವಗೋಸ್ಕರ ತಾ. 6 4-'40ರಿಂದ 14-4-'40ರ ವರೆಗೆ ಸುತ್ತುಮುತ್ತಲಿನ ಅನೇಕ ಗ್ರಾಮಗಳಲ್ಲಿ ಸಂಚರಿಸಲಿರುವರು. ಎಲ್ಲಾ ಸ್ಥಳದ ಅಭಿಮಾನಿಗಳೂ ಖಾದಿಯನ್ನು ಪಡೆದುಕೊಂಡು ಪ್ರೋತ್ಸಾಹಿಸುವರೆಂದು ನಂಬಲಾಗಿದೆ.

ಬಾರಕೂರು— ಸ್ಥಳೀಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ತಾ. 24-3-1940ರಲ್ಲಿ ಶ್ರೀ. ಎ. ಬಿ ಶೆಟ್ಟಿ, ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ ಇನಾಮು ಹಂಚುವಿಕೆಗಳಾದ ನಂತರ ಭಾಷಣಕ್ಕೆ ಪ್ರಾರಂಭ. ಉಪಾಧ್ಯಾಯರನ್ನು ಉತ್ಸಾಹಿಗಳಾಗಿ ಭಾಗವಹಿಸಿದ ಪುರವಾಸಿಗಳನ್ನೂ ಪ್ರಶಂಸಿಸಿ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಕಾಂಗ್ರೆಸ್ ಮಂತ್ರಿಗಳು ಮಾಡಿದ ಪ್ರಯತ್ನಗಳನ್ನು ಸವಿವರವಾಗಿ ವಿವರಿಸಿ ಬಾರಕೂರು ಬೋರ್ಡು ಶಾಲೆಯಲ್ಲಿ ಈಗ ಹಾಜರಿರುವ ವಿದ್ಯಾರ್ಥಿಗಳಿಗೆ ಸ್ಥಳಸಂಕೋಚದ ವಿಚಾರವಾಗಿ ಮಾತನಾಡುತ್ತಾ ಜಿಲ್ಲಾಬೋರ್ಡು ಅಧ್ಯಕ್ಷರ ಆ ವಿಚಾರದ ಅಭಿಪ್ರಾಯ ಸೂಚಿಸಬೇಕೆಂದು ಕೇಳಿಕೊಂಡರು. ಜಿಲ್ಲಾಬೋರ್ಡು ಅಧ್ಯಕ್ಷರಾದ ಡಾ. ವಿಟ್ಠಲ ಶೆಟ್ಟರು ಸಭಿಕರಿಗೆ ತೃಪ್ತಿಕರವಾದ ರೀತಿಯಲ್ಲಿ ಬಾರಕೂರಿನಲ್ಲಿರುವ ಅನಾನುಕೂಲತೆಗಳನ್ನು ದೂರಮಾಡಿ ಅಭಿವೃದ್ಧಿಯ ಮಾರ್ಗವನ್ನು ತೋರಿಸಿ ಭಾಷಣಮಾಡಿದರು. ರಾತ್ರಿ ಮಕ್ಕಳ ವಿನೋದ ಪ್ರದರ್ಶನಗಳಿದ್ದುವು.

ಪೊಳಲಿ— ಇಲ್ಲಿಯ ಶ್ರೀ ರಾಜರಾಜೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ತಾ. 13 3 '40ರಿಂದ ಒಂದು ತಿಂಗಳ ಜನಕೆ ಉತ್ಸವವಿರುತ್ತದೆ. ತಾ 5 4-'40ನೇ ಶುಕ್ರವಾರ ದಿನ ಚೆಂಡು ಉತ್ಸವ ಪ್ರಾರಂಭ, ತಾ. 8-4 '40ನೇ ಸೋಮವಾರ ಚಂದ್ರಮಂಡಲ ಮಹೋತ್ಸವ, ತಾ 9-4 '40ನೇ ಮಂಗಳವಾರ ಕಡೇ ಚೆಂಡು ಮಹಾಮಹೋತ್ಸವ, ಮರು ದಿನ ರಥೋತ್ಸವ, ಅನಂತರ ತಾ. 11 4-'40ನೇ ಗುರುವಾರ ಅವಭೃತ, ಭಕ್ತಜನಾದಿಗಳೆಲ್ಲರೂ ಸನ್ನಿಧಿಗೆ ಚಿತ್ತೈಸಬೇಕಾಗಿ ವಿನಂತಿ.

"ಪದ್ಮಶಾಲಿಗರ ಸಾಮಾಜಿಕ ಸಂಘ, ಮುಂಬಯಿ"— ಈ ಮೇಲ್ಕಾಣಿಸಿದ ಸಂಘದ 1940ನೇ ಇಸವಿಯ ಕಾರ್ಯನಿರ್ವಾಹಕ ಸಮಿತಿಗೆ ಶ್ರೀಗಳಾದ ಎ ಬಿ ಶೆಟ್ಟಿಗಾರ, (ಅಧ್ಯಕ್ಷ) ಕೆ. ಸಿ. ಶೆಟ್ಟಿಗಾರ, (ಕಾರ್ಯದರ್ಶಿ) ಜಿ ಎ. ಶೆಟ್ಟಿಗಾರ, (ಕೋಶಾಧಿಕಾರಿ) ಆರ್. ಡಿ ಶೆಟ್ಟಿಗಾರ, ಸಿ ಬಿ ಶೆಟ್ಟಿಗಾರ, ಸಿ. ಯ ಸ್ ಶೆಟ್ಟಿಗಾರ, ಜೆ. ಬಿ. ಶೆಟ್ಟಿಗಾರ, ಯ ಸ ಟಿ ಶೆಟ್ಟಿಗಾರ, ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ.

ಬೆಟ್ಟಂಪಾಡಿ— ಇರ್ದೆ, ಬೆಟ್ಟಂಪಾಡಿ, ಪಾಣಾಜೆ, ನಿಡಪಳ್ಳಿ, ಈ ನಾಲ್ಕು ಗ್ರಾಮಗಳ ಬಗ್ಗೆ ಪೋಸ್ಟ್ ಆಫೀಸು ಅಗತ್ಯವಾಗಿ ಗ್ರಾಮಸ್ಥರು ಕೇಳಿಕೊಂಡ ಮೇರೆಗೆ ಕಳೆದ ಫೆಬ್ರವರಿ ತಿಂಗಳಲ್ಲಿ ನಿಡಪಳ್ಳಿ ಗ್ರಾಮದಲ್ಲಿರುವ ಇರ್ದೆಯ ಸವಿಾಪ ಇರುವ ಛತ್ರದ ಕಟ್ಟೋಣದಲ್ಲಿ ಎಕ್ಸ್‌ಪೆರಿಮೆಂಟಲ್ ಪೋಸ್ಟಾಫೀಸು ತೆರೆದಿರುತ್ತಾರೆ. ಈ ವಿಷಯ ಪೋಸ್ಟಲ್ ಇಲಾಖೆಯವರು ಮಾಡಿದ ದಯೆಯನ್ನು ಮರೆಯಲಾಗದ್ದಾಗಿರುತ್ತದೆ. ಅಲ್ಲದೆ ಈ ಪೋಸ್ಟಾಫೀಸಿನ ವಿಷಯದಲ್ಲಿ ಈಗಿನ ಸದ್ರಿ ಇರ್ದೆಯ ಗುರುಗಳು ಮೇನೇಜರರಾಗಿ ಪ್ರಯತ್ನಪಟ್ಟಿರುತ್ತಾರೆ.

NOTICE.

ಉಡುಪಿ ಡಿ. ಮು. ಕೋರ್ಟಿನಲ್ಲಿ

O S. 296/1936 R. E. P. 1/1940 R. E. A 64/1937

ಉಡುಪಿ ಶ್ರೀ ಶಿರೂರು ಮಠದ ಶ್ರೀ ವಿಠಲ ದೇವರ ಭಂಡಾರದ ಅಧಿಪತಿಗಳು ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಗಳು ವಾದಿಯು —ಅರ್ಜಿದಾರರು.

ಮತ್ತು

1. ಹೊಂನು ಪೂಜಾರ್ತಿ, ಶಿದ್ದು ಪೂಜಾರ್ತಿ ಮಗಳು, 2. ಟಿ. ಜಲ್ಲಪ್ಪ ಜತೆಂನ, ಪೊಕ್ರ ಪೂಜಾರಿ ಮಗ ಮ 1ನೇ ಎದ್ರಿಲ ಮಗ ಉಡುಪಿ ತಾಲ್ಲೂಕು ಮೂಡುತೋನ್ಸೆ ಗ್ರಾಮದಲ್ಲಿರುವವರು. —ಎದ್ರಿರು.

ಇವರೊಳಗೆ

ಸದ್ರಿ ಎದ್ರಿಲೀಗೆ,

ಸದ್ರಿ R E. P. 1/1940ರಲ್ಲಿ ನೀವು ಕೊಡೋಣಾದ ಅತಂಕವಿಚಾರಣೆಯಾದ ಡಿಕ್ರಿಯಿಂದ ಕಾಣುವ ಆಸ್ತಿಗಳನ್ನು ಬಿಡಿಸಿಕೊಡಬೇಕಾಗಿ ಅರ್ಜಿದಾರರು ಅರ್ಜಿ ದಾಖಲು ಮಾಡಿರುವುದರಿಂದ ಅದನ್ನು ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಅದನ್ನು 1940ನೇ ಇಸ್ವಿ ಎಪ್ರೀಲು ತಿಂಗಳು 11ನೇ ತಾರೀಕು ಹಗಲು 10ಗಂಟೆಗೆ ಈ ಕೋರ್ಟಿನಲ್ಲಿ ನೀವು ಮುದ್ದಾಂಗಲೀ ವಕೀಲ್ ದ್ವಾರವಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

ಉಡುಪಿ 25 3 '40 — **V. R Kidiyur,** *Counsel for Petitioner.*

ನಮ್ಮ ಪೊಲಿಸಿದಾರರ ಸೇವಾದೀಕ್ಷೆ ಮತ್ತು ನಮ್ಮ ಕುರಿತಾದ ಕ್ಲೈಮುಗಳ ಕುರಿತು ಸಂಪೂರ್ಣ ಸಮಾಧಾನವೇ ಇಂದೀಗ 25 ವರ್ಷಗಳಿಂದ ನಮ್ಮ ಧೋರಣೆಯಾಗಿದೆ.

ಎಲ್ಲಾ ತರದ ಅಪಾಯುಗಳ ಕುರಿತು ಭದ್ರತೆ ಪಡೆಯುವ ಅಭೂತಪೂರ್ವ ಅನುಕೂಲತೆಗಳನ್ನು ನಾವು ಕೊಡುತ್ತೇವೆ.

ಜ್ಯಾರಿಯಲ್ಲಿರುವ ಪಹಿಪಾಟು ರೂ. 1,75,000,00

ಒಟ್ಟು ಮೂಲಧನ ರೂ. 24,000,00

ದಿ ಈಸ್ಟ್ ಎಂಡ್ ವೆಸ್ಟ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

(1913ರಲ್ಲಿ ಸ್ಥಾಪಿತವಾದುದು.)

55 ಅಪೊಲ್ಲೋ ಸ್ಟ್ರೀಟ್, ಫೋರ್ಟ್,

ಬೊಂಬಾಯಿ.

ಏಜಂಟ್ಸ್ ಮತ್ತು ಓರ್ಗನೈಜರ್ ಬೇಕಾಗಿದ್ದಾರೆ

ರೂಪಾಯಿ 200 ಧರ್ಮಾರ್ಥ!

ಮಹಾತ್ಮಾ ಸಿದ್ಧಕವಚ



ಅತ್ಯದ್ಭುತ ಶಕ್ತಿಯುಕ್ತವಾದ ಮಹಾತ್ಮಾ ಸಿದ್ಧಕವಚ ವೊಂದು ನಿಮ್ಮೊಡನಿದ್ದರೆ ಎಂತಹ ಕಷ್ಟಸಾಧ್ಯವಾದ ಯೋಜನೆಯೂ ಕ್ಷಿಪ್ರ ಫಲಕಾರಿಯಾಗುವುದು. ಈ ಯಂತ್ರಧಾರಣೆಗೆ ಮಂತ್ರ ತಂತ್ರಗಳ ಸಹಾಯ ಬೇಕಾಗಿಲ್ಲ ಇದನ್ನು ಧರಿಸಿದ ಮಾತ್ರದಿಂದ ನಿಮಗೆ ಬೇಕಾಗುವ ಹೆಂಗ ಸಾಗಲೀ ಗಂಡಸಾಗಲೀ ನಿಮ್ಮ ಹತೋಟಿಯಲ್ಲಿ ಸಿಕ್ಕುವರು. ತಾಮ್ರದ ಕವಚಕ್ಕೆ ರೂ. 2; ಮೂರಕ್ಕೆ ರೂ. 5-1-0; ಬೆಳ್ಳಿ ಕವಚಕ್ಕೆ ರೂ.2-14-0; ಬಂಗಾರದಕ್ಕೆ ರೂ. 6-4-0.

ಮಹಾಲಕ್ಷ್ಮೀ ಯಂತ್ರ

ದುಷ್ಟಗ್ರಹರ ವಕ್ರದೃಷ್ಟಿ, ವೈರಿಗಳು ಪಾಪಕಿಂಕರರಾಗು ವುದು, ಪರೀಕ್ಷೆ, ವ್ಯಾಪಾರ, ಕೋರ್ಟಿನ ವ್ಯಾಜ್ಯಗಳು, ನೌಕರಿ, ಪುತ್ರ ಸಂತಾನಪ್ರಾಪ್ತಿ, ಅಪಾರದ್ರವ್ಯ ದೊರೆಯು ವಿಕೆ, ಸಾಲದಿಂದ ಮುಕ್ತಿ, ಸ್ವಾತಂತ್ರ್ಯಲಾಭ, ಭಯಾನಕ ಕಾಯಿಲೆಗಳಿಂದ ಪಾರಾಗುವುದು. ಇತ್ಯಾದಿ ಸರ್ವಸಿದ್ಧಿಯಾಗ ಬೇಕೆಂದಿದ್ದರೆ ಒಡನೆಯೇ ಮಹಾಲಕ್ಷ್ಮೀಯಂತ್ರವನ್ನು ಧರಿಸಿರಿ. ತಾಮ್ರದ ಕವಚಕ್ಕೆ ರೂ. 2,(ಮೂರಕ್ಕೆ ರೂ 5-4-0)ಬೆಳ್ಳಿಯದಕ್ಕೆ ರೂ 3-14-0;ಚಿನ್ನದ ಕವಚವುಳ್ಳದುದಕ್ಕೆ ರೂ. 6-4-0, ನಾಲ್ಕು ಉದ್ದೇಶಗಳನ್ನು ಸಾಧಿಸುವರೆ ನಂಬ್ರ 4ನೇ ವಿಶೇಷ ಕವಚವನ್ನು ರೂ. 5-8-0ಕೊಟ್ಟು ಇಂದೇ ಪಡೆಯಿರಿ. ಏವಕ್ಕೂ ಮಿಕ್ಕಿದ ಯೋಜನೆಗಳನ್ನು ಒಮ್ಮೆಯೇ ಪೂರೈಸಬೇಕೆಂದಿದ್ದರೆ ಅತ್ಯಾಧಿಕ್ಯ ತೇಜೋ ಮಯವಾದ ನಂಬ್ರ 5ನೇ ಕವಚವನ್ನು 7-10-0 ಕೊಟ್ಟು ಪಡೆಯಿರಿ. ಟಪ್ಪಾಲು ಚಾರ್ಜು ಪ್ರತ್ಯೇಕ.

ಸೂಚನೆ—ಮೇಲೆ ನಮೂದಿಸಿದ ಕವಚಗಳು ನಿಷ್ಪ್ರಯೋಜಕವೆಂದು ರುಜುಪಡಿಸುವವರಿಗೆ ರೂಪಾ 200 ಇನಾಮು ಕೊಡಲಾಗುವದು. ಕವಚದ ಮೌಲ್ಯ ಸಹ ವಾಪಸು ಸಲ್ಲುವದು.

SHRI MAHATMA ASHRAM, Post Box No 12 (N.Y.A.) AMRITSAR.

ಸಮಾಚಾರ ಸಂಗ್ರಹ

ಕಾಕ್ಸಾರರ ಮೇಲೆ ಗೋಳಿಬಾರು

ಸೈನಿಕ ಕ್ರಮದಲ್ಲಿ ಯಾರೂ ಚಲಿಸಬಾರದೆಂದು ಪಂಜಾಬು ಸರಕಾರವು ನಿಷೇಧಿಸಿರುವುದು. ಕಾಕ್ಸಸಾರ್ ದಳವನ್ನು ನಿಷೇಧಿಸುವುದಕ್ಕೇನೇ ಈ ಹುಕುಮು ಕೊಡಲ್ಪಟ್ಟಿದೆಂದು ಕಾಕ್ಸಾರರು ಸಿಟ್ಟುಗೊಂಡು ಸದ್ರಿ ಹುಕುಮನ್ನು ಉಲ್ಲಂಘಿಸುವ ನಿರ್ಧಾರ ಮಾಡಿದ್ದರು. ಇದೇ ತಾ. 19ರಲ್ಲು ಸುಮಾರು 200 ಮಂದಿ ಕಾಕ್ಸಾರರು, ಹೆಚ್ಚಿನವರು ವಾಯುವ್ಯ ಗಡಿನಾಡಿನವರು, ಲಾಹೋರಿನಲ್ಲಿ ನೆರೆದು ಸೈನಿಕ ರೋಪಾದಿ ಲಾಹೋರಿನಲ್ಲಿ ಮೆರವಣಿಗೆ ನಡಿಸುವ ಸಿದ್ಧತೆ ಮಾಡಿದ್ದರು. ಈ ವರ್ತಮಾನ ಕೇಳಿದ ಕೂಡಲೇ ಜಿಲ್ಲಾ ಮೆಜಿಸ್ಟ್ರೇಟರೂ, ಪೋಲೀಸ್ ಸುಪರಿಂಟೆಂಡೆಂಟರೂ ಅವರಿದ್ದಲ್ಲಿಗೆ ಹೋಗಿ ಅವರು ಮೆರವಣಿಗೆ ಹೋಗಬಾರದೆಂದು ಎಚ್ಚರಿಸಿರುವರು. ಕಾಕ್ಸಾರರು ಕೇಳಲಿಲ್ಲ. ಆಗ ಪೋಲೀಸರು ಅವರನ್ನು ತಡೆಗಟ್ಟಿದರು. ಆಗ ಕಾಕ್ಸಾರರು ಉದ್ರೇಕಗೊಂಡು ಹಾರೆ ಪಿಕ್ಕಾಸುಗಳಿಂದ ಪೋಲೀಸರಿಗೆ ಹೊಡೆದು ಗಾಯಗೊಳಿಸಿದರು, ಸೀನಿಯರ್ ಮತ್ತು ಡಿಪ್ಯೂಟಿ ಪೋಲೀಸ್ ಸುಪರಿಂಟೆಂಡೆಂಟರಿಗೂ ಹೆಚ್ಚಿನ ಗಾಯವಾಗಿರುವುದು. ಪುನಃ ಹೆಚ್ಚು ಮಂದಿ ಪೋಲೀಸರು ಬಂದು ತಡೆದಾಗಲೂ ಕಾಕ್ಸಾರರು ಅವರಿಗೂ ಹೊಡೆದಾಗ ಪೋಲೀಸರು ಗೋಳಿಬಾರು ಮಾಡಿ 26 ಮಂದಿ ಕಾಕ್ಸಾರರು ಕೊಲ್ಲಲ್ಪಟ್ಟಿರುವರು. ಕಾಕ್ಸಾರರಿಂದ ಇಬ್ಬರು ಪೋಲೀಸರು ಕೊಲ್ಲಲ್ಪಟ್ಟಿರುವರು. 39 ಮಂದಿಗೆ ಪೆಟ್ಟಾಗಿರುವುದು ಲಾಹೋರು ಪಟ್ಟಣದಲ್ಲಿ 144 ಸೆಕ್ಷನ್ ಜ್ಯಾರಿ ಮಾಡಲ್ಪಟ್ಟಿದೆ. ಪೋಲೀಸರು ಮತ್ತು ಸೈನಿಕರು ಪಹರೆ ನಡಿಸುತ್ತಿದ್ದಾರೆ. ಆಸ್ಪತ್ರೆಯಲ್ಲಿ 3 ಮಂದಿ ಕಾಕ್ಸಾರರು ಮೃತರಾಗಿರುವರು. ಪೋಲೀಸರು ಲಾಹೋರಿನ ಬಳಿಯ ಇಛ್ರಾ ಎಂಬ ಹಳ್ಳಿಯಲ್ಲಿರುವ ಖಾಕ್ಸಾರರ ಮುಖ್ಯ ಕೇಂದ್ರವನ್ನು ಪಶಪಡಿಸಿ 100 ಮಂದಿ ಕಾಕ್ಸಾರರನ್ನು ದಸ್ತಗಿರಿ ಮಾಡಿರುವರು.

ಕಾಕ್ಸಾರರ ದಸ್ತಗಿರಿ

ಪಂಜಾಬು ಸರಕಾರವು ಕಾಕ್ಸಾರದಳವನ್ನೇ ಬೇಕಾಯಿದೆಶೀರ ಸಂಸ್ಥೆಯಾಗಿ ಮಾಡಿರುವುದು. ಈ ದಳದ ಮುಖ್ಯ ನಾಯಕರಾದ ಅಲ್ಲಮ ಮಶ್ರಕಿಯವರನ್ನು ಡಿಲ್ಲಿಯ ಬಳಿ ಡಿಲ್ಲಿ ಪೋಲೀಸರು ಹಿಡಿದು ಬಂಧನದಲ್ಲಿರಿಸಿರುವರು. ಕಾಕ್ಸಾರರು ಲಾಹೋರಿನಲ್ಲಿ ಸೇರುವುದಕ್ಕೆ ತಾನು ವಿರೋಧಪಡಿದ್ದೆನೆಂದೂ, ಅಂತೆಯೇ ತಾನು ಹುಕುಮು ಕೊಟ್ಟಿರುತ್ತಾ ಕಾಕ್ಸಾರರು ಲಾಹೋರಿನಲ್ಲಿ ಸೇರಿದುದು ಆಶ್ಚರ್ಯಕರವೆಂದೂ ಅಲ್ಲಮ ಮಶ್ರಕಿಯವರ ಹೇಳಿಕೆ. ಈ ಅನಾಹುತದ ಕುರಿತು ಮಿ. ಜಿನ್ನರೇ ಮೊದಲಾದವರು ಅತ್ಯಂತ ವಿಷಾದ ಸೂಚಿಸಿರುವರು. ಈ ಸಂಬಂಧವಾಗಿ ಲಾಹೋರಿನಲ್ಲಿ ನಡೆಯಲಿದ್ದ ಮುಸ್ಲಿಮ್ ಲೀಗಿನ ಅಧ್ಯಕ್ಷ ಮೆರವಣಿಗೆಯೂ ನಿಷೇಧಿಸಲ್ಪಟ್ಟಿದೆ. ತಾ. 20ರ ವರೆಗೆ ಲಾಹೋರಿನಲ್ಲಿ ಒಟ್ಟು 217 ಮಂದಿ ಕಾಕ್ಸರರು ಕೈದುಮಾಡಲ್ಪಟ್ಟಿರುವರು. ಇಛ್ರಾದಲ್ಲಿದ್ದ ಕಾಕ್ಸರರು ತಮ್ಮ ಡೇರೆಯ ಬಳಿ ಎರಡು ಸಾಲಲ್ಲಿ ನಿಂತು ಚದರಲೊಪ್ಪದಿದ್ದಾಗ ಪೋಲೀಸರು ಅವರ ಮೇಲೆ ಟೀಯರ್‌ಗ್ಯಾಸ್ ಎಂಬ ಗ್ಯಾಸನ್ನು ಉಪಯೋಗಿಸಿ ಚದರಿಸಿ ದಸ್ತಗಿರಿಮಾಡಿದರು. ರಾವಳಪಿಂಡಿ, ಕ್ಯಾಲಪುರ, ಅಂಬಲ ಮೊದಲಾದ ಸ್ಥಳಗಳಲ್ಲಿ ಕಾಕ್ಸಾರರ ನಿವಾಸವಾಗಿದ್ದ ಮನೆ ಅಂಗಡಿಗಳು ಜಪ್ತಿ ಮಾಡಲ್ಪಟ್ಟು, ಹಲವು ಮಂದಿ ಕಾಕ್ಸಾರರು ಕೈದುಮಾಡಲ್ಪಟ್ಟಿರುವರು.

ಕಾಕ್ಸಾರ್ ಚಳವಳದ ಸ್ಥಾಪಕರು

ಮಿ. ಇನಯತುಲ್ಲಾ ಖಾನರೆಂಬ ಸರದಾರರು ಈಗ ಅವರಿಗೆ 50 ವರ್ಷ ಪ್ರಾಯ. ಹಿಂದೀ ಶಿಕ್ಷಣ ಖಾತೆಯ ಮೆಂಬರರಾಗಿದ್ದು ವಾಯುವ್ಯ ಗಡಿನಾಡಿನಲ್ಲಿ ಕೆಲಸಮಾಡುತ್ತಿದ್ದು ಆ ಮೇಲೆ ಸ್ವಲ್ಪ ಸಮಯ ಇಂಡಿಯಾ ಸರಕಾರದ ಅಸಿಸ್ಟಾಂಟ್ ಸೆಕ್ರೆಟರಿಗಳಾಗಿದ್ದರು. 1920ರಿಂದ 31ರ ವರೆಗೆ ಪೇಶಾವರದ ಇಸ್ಲಾಮಿಯ ಕೊಲೆಜಿನಲ್ಲಿ ಲೆಕ್ಚರ ಪ್ರೊಫೆಸರರಾಗಿದ್ದರು. ಅನಂತರ ಪೇಶಾವರದ ಗವರ್ನ್‌ಮೆಂಟ್ ಹ್ಯಾಸ್ಕೂಲಿನ ಹೆಡ್‌ಮಾಸ್ತರರಾಗಿದ್ದರು. ಇವರು ಅಲ್ಲಮ ಮಶ್ರಕಿ ಎಂಬ ಹೆಸರಿನಿಂದ 1931 ರಲ್ಲಿ 'ಕಾಕ್ಸರ್' ಚಳವಳವನ್ನಾರಂಭಿಸಿ ಅಲ್ ಇಸ್ಲಾಂ ಎಂಬ ಸಾಪ್ತಾಹಿಕ ಪತ್ರಿಕೆಯೊಂದನ್ನು ಪ್ರಕಟಿಸಹತ್ತಿದರು. ಅಲ್ ಇಸ್ಲಾಂ ಪತ್ರಿಕೆ ಮತ್ತು ಅದನ್ನು ಛಾಪಿಸುವ ಛಾಪಖಾನೆಯಿಂದ ಸರಕಾರವು ರೂ. 3000 ಮತ್ತು ರೂ. 2000 ಜಾಮೀನು ಕೇಳಿರುವುದು. ಲಾಹೋರಿನಲ್ಲಿ ಪೋಲೀಸರು ಕಾಕ್ಸಾರರ ಮೇಲೆ ಗೋಳಿಬಾರು ಮಾಡಿದ ವಿಷಯದಲ್ಲಿ ಪಂಜಾಬು ಸರಕಾರವು ಇಬ್ಬರು ಹ್ಯಾಕೋರ್ಟು ಜಡ್ಜರಿಂದ ವಿಚಾರಣೆ ನಡಿಸುವ ನಿರ್ಧಾರಮಾಡಿರುವರು. ಇದೇ ತಾ. 21ರಲ್ಲು ಪುನಃ 7 ಮಂದಿ ಕಾಕ್ಸಾರರು ಪ್ರದರ್ಶನ ನಡಿಸಿದಾಗ ಪೋಲೀಸರು ತಡೆದು ಚದರಿಸಲೆತ್ನಿಸಿದರು. ಕಾಕ್ಸಾರರು ಕೇಳದಾಗ ಪೋಲೀಸರು ಅವರ ಮೇಲೆ ಟೀಯರ್ಸ್ ಗ್ಯಾಸ್ ಉಪಯೋಗಿಸಿ ಚದರಿಸಿದರು. ಪಿಸ್ತೂಲನ್ನು ಹಿಡಕೊಂಡಿದ್ದ ಕಾಕ್ಸಾರನೊಬ್ಬನು ಇಂದು ಕೈದು ಮಾಡಲ್ಪಟ್ಟಿರುವನು.

ಸಿಂಧುದೇಶದ ಹೊಸ ಮಂತ್ರಿ ಮಂಡಲ

ಮಿರ್ ಬಂಡೇ ಅಲಿಖಾನ ತಾಲ್ಪೂರರು ಮುಖ್ಯ ಮಂತ್ರಿಗಳಾಗಿ ಸಿಂಧಿನಲ್ಲಿ ಹೊಸ ಮಂತ್ರಿಮಂಡಲವನ್ನು ರಚಿಸಿರುವರು. ಖಾನ್‌ಬಹದೂರು ಮಿ. ಖುಹ್ರೊ, ಶೈಕ್ ಅಬ್ದುಲ್ ಮಜಿದ್, ಮಿ. ಜಿ. ಎಮ್ ಸೈಯದ್, ಮಿ. ನಿಚಾಲ್ದಾಸ್ ವಜಿರಾನಿ ಮತ್ತು ರೈ ಸಾಹೇಬ್ ಗೋಕುಲ್ದಾಸರು ಇತರ ಮಂತ್ರಿಗಳಾಗಿ ಆರಿಸಲ್ಪಟ್ಟಿರುವರು. ಸಿಂಧ್ ಎಸೆಂಬ್ಲಿಯ 59 ಸಂದಿ ಮೆಂಬರರಲ್ಲಿ 35 ಮಂದಿ ಈಗಣ ಮಂತ್ರಿ ಮಂಡಲವನ್ನು ಸಮರ್ಥಿಸುವರೆಂದು ನಿರೀಕ್ಷಿಸಲಾಗಿದೆ. ಖಾನ್ ಬಹದೂರು ಅಲ್ಲಾಭಕ್ಷರು ರಾಮಗಡಕ್ಕೆ ಹೋಗಿ ಸರ್ದಾರ್ ವಲ್ಲಭಾಯಿಯವರೇ ಮೊದಲಾದವರೊಡನೆ ಮಾತಾಡಿ ಅಲಹಾಬಾದಿಗೆ ತೆರಳಿ ಪಂಡಿತ ಜವಹರಲಾಲರೊಡನೆ ಮಾತುಕತೆ ನಡಿಸಿ ಕರಾಚಿಗೆ ಹಿಂತಿರುಗಿರುವರು. ಇವರು ಕಾಂಗ್ರೆಸ್ ಪಕ್ಷದ ಬೆಂಬಲವನ್ನು ಪಡೆಯುವ ಪ್ರಯತ್ನದಲ್ಲಿದ್ದಾರೆ.

ಮೊಲೊಟೊವರು ಬರ್ಲಿನಿಗೆ

ರಶ್ಯದ ವಿದೇಶ ಮಂತ್ರಿಗಳಾದ ಮಿ. ಮೊಲೊಟೊವರು ಇದೇ ತಾ. 22ರಲ್ಲು ಬರ್ಲಿನಿಗೆ ಹೋಗಿ ಅಲ್ಲಿ ಎರಡು ದಿವಸ ಕಳೆಯಲಿರುವರೆಂದು ಇಟಲಿಯ ರೇಡಿಯೋ ಸುದ್ದಿ. ಅವರೊಂದಿಗೆ ಅನೇಕ ಮಂದಿ ರಾಜನೈತಿಕ ಮತ್ತು ಸೈನಿಕ ಸಲಹೆಗಾರರು ಹೋಗಲಿರುವರು. ಬರ್ಲಿನಿನಲ್ಲಿ ಮುಸಲೋನಿ ಹಿಟ್ಲರರ ಭೇಟಿ ಮತ್ತು ಮೊಲೊಟೊವರ ಬರ್ಲಿನಿನ ಸಂದರ್ಶನದ ಪರಿಣಾಮವಾಗಿ ವಿಶೇಷ ಸಂಗತಿಗಳು ನಡೆಯಲಿರುವವೆಂದು ಸುದ್ದಿಯುಂಟಾಗಿದೆ.

ಈ ವಾರದ ಭವಿಷ್ಯ

ತಾರೀಕು 28-3-1940ರಿಂದ 4-4-1940ರ ವರೆಗೆ

ಮೇಷ—ನಿಮ್ಮ ಮನೆಯಲ್ಲಿ ಹೊಸತರಕ್ಕೆ ಕನ್ನೆಷ್ಟರ ವ್ಯಹಾರಾಯನಿಂದಾಗಿ ನಿಮ್ಮ ಶರೀರದಲ್ಲಿ ಒಂದಲ್ಲೊಂದು ತೊಂದರೆ ಕಾಣಿಸಿಯು ಯಾವಾಗಲೂ ತಪ್ಪುವಂತಿಲ್ಲ. ಕೆಲಸಕ್ಕೆ ತಕ್ಕುದಾಗಿ ಫಲ ದೊರೆಯುವುದಾದರೂ ಯೋಗ್ಯತೆಗಿಂತಲೂ ಹೆಚ್ಚಾಗಿ ಖರ್ಚು ಮಾಡುವುದರಿಂದ ನಿತ್ಯ ಅಡಚಣೆ ತಪ್ಪಲಾರದು. ಕೋರ್ಟು ವಗ್ಗೈರೆ ಕಾರ್ಯಗಳಲ್ಲಿ ಹೆಚ್ಚಿನ ಹಣ ವ್ಯಯವಾಗ ಹೊರತಲ್ಲದೆ ಫಲವೂ ನಿಮ್ಮಿಚ್ಛೆಯಂತೆ ದೊರಕಲಾರದು. ಧರ್ಮಾಭಿಮಾನಿಗಳಿಗೂ ಸದ್ವರ್ಮಚಾರಿಗಳಿಗೂ ಮನೋರಥವು, ಪೂರ್ಣವಾಗದಾದರೂ ಹೆಚ್ಚಿನ ಅನಿಷ್ಟಗಳು ಬಾಧಿಸುವಂತಿಲ್ಲ. ಸಮಯದಲ್ಲಿ ಹೆಚ್ಚಿನ ಕಾಲವು ವ್ಯರ್ಥವಲ್ಲೇ ಕಳೆಯುವುದು. ತಾ 28ರಿಂದ 31ರ ವರೆಗೂ ಮನಸ್ಸು ಸಮಾಧಾನವಿರದು.

ವೃಷಭ—ಕಾಲು ಜಾರಿದಾಗ ಆನೆಯೂ ಸಹ ಮುಗ್ಗರಿಸಿ ಬೀಳುವುದಿಲ್ಲವೆ? ಅಂತೆಯೇ ನೀವು ಸನ್ಮ ಉತ್ತಮ ರೀತಿಯಲ್ಲಿರುವುದಾದರೂ ಎಚ್ಚರಿಕೆ ತಪ್ಪಿ ನಡೆದಲ್ಲಿ ಮಹಾ ಅನರ್ಥಕ್ಕೆ ಗುರಿಯಾಗಲಿರುವಿರಿ. ವಿದ್ಯಾಬುದ್ಧಿಗಳಲ್ಲೂ ಧನಧಾನ್ಯಗಳಲ್ಲೂ ನಿಮಗೇನೂ ಕೊರತೆಯಿಲ್ಲದಿದ್ದರೂ ಶತ್ರು ಜನರ ಮತ್ತು ಅಪಘಾತಾದಿಗಳ ಭಯವು ಇದೆ. ವಿದ್ಯಾರ್ಥಿಗಳು ಮನದಿಚ್ಛೆಯನ್ನು ಸುಲಭವಾಗಿ ಹೊಂದುವರು. ಗೃಹ ತಾಪತ್ರಯಗಳು ನಿವೃತ್ತಿ ಹೊಂದಿ ಸಂಸಾರ ರಥವು ಸರಿದಾರಿಯಲ್ಲಿ ಮುಂದುವರಿಯಲಿದೆ. ಭೋಗ್ಯವಸ್ತುಗಳೂ ವೈವಾಹಿಕ ಸುಖವೂ ಸುಲಭವಾಗಿ ದೊರೆಯುವುದು ತಾ. 26, 3, 4 ಉತ್ತಮವಾಗಿವೆ.

ಮಿಥುನ—ಈ ವಾರದಲ್ಲಿ ನಿಮ್ಮ ಅದೃಷ್ಟವು ಕಳೆದ ವಾರಕ್ಕಿಂತ ಯಾವ ಭಾಗದಲ್ಲೂ ಮಿಕ್ಕಿ ಹೋಗಲಾರದು ತ್ರಿದೋಷಗಳಲ್ಲೊಂದಾದ ಪಿತ್ಥ ಪ್ರಕೋಪದಿಂದ ದೇಹದಲ್ಲಿ ಒಂದಲ್ಲೊಂದು ಪೀಡೆಯು ಸದಾ ಇದ್ದೇ ಇರುವುದು. ಸ್ತ್ರೀ ನಿಮಿತ್ತ ಕಲಹದಿಂದ ಶೋಕಕ್ಕೆ ಗುರಿಯಾಗಲಿರುವಿರಿ ಪ್ರತಿಸ್ಪರ್ಧಿಗಳಿಂದ ಕಾರ್ಯಕ್ಕೆ ವಿಘ್ನಗಳೊದಗುವುದಾದರೂ ನೀವು ಎದೆಗುಂದದೆ ಕಾರ್ಯವನ್ನು ಮುಂದರಿಸಿ ಕೊನೆಗಾಣಿಸುವಿರಿ. ಅಂತೂ ಆಯುಷ್ಯವು ಸರಿಸಮಾನವಾಗಿ ನಿಲ್ಲುವುದು. ಕೋಪದ ಭರದಿಂದ ಕೆಲವೇಳೆ ವ್ಯರ್ಥ ಖರ್ಚಿಗೆ ದಾರಿ ಮಾಡುವಿರಿ. ತಾ. 28ರಿಂದ ತಿಂಗಳಾಂತ್ಯದ ವರೆಗೂ ದಿನಗಳನುಕೂಲವಿವೆ.

ಕರ್ಕಾಟಕ—ದೈವ ಬಲವು ಬಹಳ ನಿಮಗೆ ಲಭಿಸಿರುವುದು. ಆದಕಾರಣದಿಂದಲೇ ಪ್ರತಿಯೊಂದು ಕಾರ್ಯವೂ ನಿಮ್ಮಿಚ್ಛೆಯಂತೆ ಕೊನೆಗಾಣುವುದರಲ್ಲಿ ಎರಡಭಿಪ್ರಾಯವಿಲ್ಲ. ಆದಕ್ಕೆ ಬೇಕಾದ ಜನಬಲವೂ ಸಾಕಷ್ಟು ವಿವೇಕವೂ ಇರುವುದರಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಲಾಭಗಳಿಸುವಿರಿ. ಆದರೂ ಕರ್ಮಸ್ಥಾನದಲ್ಲಿ ಕುಳಿತಿರುವ ನೀಚ ಶನಿಯು ದುಷ್ಕರ್ಮದಲ್ಲಿ ಪ್ರವರ್ತಿಸುವಂತೆ ಪ್ರೇರೇಪಿಸಿ ಜನರಿಂದ ಅಪವಾದ ಹೊರಿಸಲಿರುವನು. ಶಿವಾದೇವಿಯಲ್ಲಿ ಜಾಗರೂಕರಾಗಿರಿ. ತಾ. 29, 3, 4 ಈ ದಿನಗಳಲ್ಲಿ ವ್ಯರ್ಥ ಧನ ವ್ಯಯದಿಂದ ವ್ಯಸನವಾಗಲಿದೆ.

ಸಿಂಹ—ಸಕಲ ಗ್ರಹಮಂಡಲವೇ ಪ್ರತಿಕೂಲವಾಗಿರುತಕ್ಕ ಈ ಕಾಲದಲ್ಲಿ ದೈವ ಬಲದಿಂದ ಮುಕ್ತರಾಗಿದ್ದ ನಿಮಗೆ ಎಷ್ಟು ಪೌರುಷವಿದ್ದರೇನು, ಎಲ್ಲವೂ ನೀರಿನಲ್ಲಿ ಮಾಡಿದ ಹೋಮದಂತಾದೀತೇ! ವಿನಾ ಏನೂ ಫಲಕಾರಿಯಾಗಲಾರದು, ಶತ್ರು ಜನರಿಂದಲೂ ರಾಜಕೀಯ ಅಧಿಕಾರಗಳಿಂದಲೂ ಕೂಡ ಮಾನಹಾನಿಯ ಪ್ರಸಕ್ತಿ ಸಂಭವಿಸೀತು. ಹಲವರಲ್ಲಿ ಕಲಹವಾಗಲಿದೆ. ಆರೋಗ್ಯವು ಸರ್ವಥಾ ಸರಿಯಾಗಿರುವಂತಿಲ್ಲ. ಕುಕರ್ಮ ಅನಾಚಾರಗಳಲ್ಲಿ ಆಸಕ್ತರಾದ ನಿಮಗೆ ಕೈ ಹಿಡಿದಾಕೆಯೂ ಕೂಡ ಶತ್ರು ಸ್ಥಾನದಲ್ಲಿ ನಿಲ್ಲುವಳು. ಆದರೂ ತಾ 1ರಿಂದ 4ರ ವರೆಗೆ ಕಿಂಚಿದ್ವ್ಯಮಾನ ಗ್ರಹವಿರುವುದರಿಂದ ಹೆಚ್ಚಿನ ಕಷ್ಟಕ್ಕೆ ಸಿಲುಕಲಾರಿರಿ.

ಕನ್ಯಾ—ಶುಭಾಶುಭ ಗ್ರಹರ ಪೈಕಿ ಸ್ವಭಾವತಃ ಸೌಮ್ಯರಾಗಿರತಕ್ಕ ಬುಧ ಗುರು ಶುಕ್ರರು ನಿಮಗೆ ಶುಭಕಾರಿಗಳಾಗಿಯೂ ಇತರ ದುಷ್ಟ ಗ್ರಹರು ಅನಿಷ್ಟಕಾರಿಗಳಾಗಿಯೂ ಇರುವುದರಿಂದ ಸಜ್ಜನವೃಂದಕ್ಕೆ ಸ್ವಲ್ಪಾಂಶ ಇಷ್ಟವೂ ಅಸಜ್ಜನರಿಗೆ ಸ್ವಲ್ಪಾಂಶ ಅನಿಷ್ಟವೂ ಅಧಿಕವಾಗಿ ಲಭಿಸಲಿವೆ. ಉದ್ಯೋಗ ವ್ಯಾಪಾರ ಇತ್ಯಾದಿಗಳಲ್ಲಿ ಒಳ್ಳೇ ಲಾಭವಿರುವುದು, ಜನಮನ್ನಣೆಯು ದೊರೆಯುವುದು. ವಿದ್ಯಾರ್ಥಿಗಳು ಕೃತಕೃತ್ಯರಾಗುವರು. ದೇಹಾಲಸ್ಯ ಪ್ರಹಾರ ಶತ್ರು ಜನರ ಕಾಟದಿಂದ ಸದಾ ನಿಮಗೆ ಖರ್ಚ ಸಂಭವಿಸುವುದು. ಮನಸ್ಸು ನೆಮ್ಮದಿಯಿಂದಿರದು. ತಾ. 28, 3, 4 ಉತ್ತಮವಿವೆ.

ತುಲಾ—'ಕ್ಷಣಂ ವಿತ್ತಂ ಕ್ಷಣಂ ಚಿತ್ತಂ' ಎಂದು ರೀತಿ ಶಾಸ್ತ್ರದಲ್ಲಿರುವಂತೆ ಮನುಷ್ಯನಿಗೆ ಸಂಪತ್ತುಗಳೂ ಮನಸ್ಸೂ ಕೂಡ ನೀರಿನ ಮೇಲಿನ ಗುಳ್ಳೆಯಂತೆ ಕ್ಷಣಕಾಲದಲ್ಲೇ ಪರಿವರ್ತನಹೊಂದುವವು, ಕೆಲವೊಮ್ಮೆ ಸ್ವಲ್ಪ ದೀರ್ಘ ಸಮಯವೂ ಇರುವವು. ಅದರ ಇಯತ್ತಾವನ್ನು ಹೇಳಬರುವಂತಿಲ್ಲ. ಸದ್ಯ ನಿಮ್ಮ ಜೀವನದಲ್ಲಿ ಆದಾಯಕ್ಕಿಂತ ದ್ವಿಗುಣಿತವಾಗಿ ಖರ್ಚು ಕಾಣುವುದರಿಂದ ಜೀವನವು ಬಹುಕಷ್ಟದಿಂದ ಸಾಗೀತು. ಗೃಹಕಲಹದಿಂದ ಮನಸ್ಸು ಚಂಚಲವಾಗಿರುವುದು. ವಿರೋಧಿಗಳ ಪೀಡೆಯು ಕ್ಷಣೇಕ್ಷಣೇ ಹೆಚ್ಚುತ್ತಿದ್ದು ಮಾನಕ್ಕೆ ಕೂಡ ಧಕ್ಕೆಯನ್ನು ತರಲಿದೆ. ತಾ. 29, 30, 31 ಈ ದಿನಗಳಲ್ಲಿ ಅಲ್ಪಕಾರ್ಯಗಳು ಸಿದ್ಧಿಸುವವು. ಸ್ತ್ರೀಮೂಲಕ ಲಾಭವಿದೆ.

ವೃಶ್ಚಿಕ—ತುಲನಾಮಾಡಿ ನೋಡಿದರೆ ಸುಖದುಃಖಗಳೂ ಕಷ್ಟನಷ್ಟಗಳೂ ನಿಮಗೆ ಏಕಪ್ರಕಾರವಾಗಿರುವವು. ಬಲ್ಲವರ ಮಾತು ಬೆಲ್ಲಕ್ಕಿಂತ ಸವಿಯೆಂಬ ಲೋಕೋಕ್ತಿಯು ನಿಮ್ಮ ಕೂಡ ವ್ಯವಹಾರದಿಂದ ತಿಳಿದುಬರಲಿದೆ. ಸಂಸಾರದಲ್ಲಿ ಸುಖಶಾಂತಿಯೂ ಸನ್ನಿಧಿಸರಿಜನರ ನೋಟವೂ ಚೆನ್ನಾಗಿರುವುದು. ಆದರೆ ರಾಜಕೀಯ ವಿಚಾರದಲ್ಲಿ ಕೀರ್ತಿಯು ಸದ್ಯ ದೊರೆಯುವಂತಿಲ್ಲ. ಶರೀರಾಲಸ್ಯ ಮತ್ತು ಸ್ತ್ರೀಜನರಿಂದ ಅಪವಾದವೂ ಉಂಟಾಗುವಂತಿವೆ ಗಂಡಹೆಂಡಿರಲ್ಲಿ ನಿತ್ಯ ಕಲಹವೂ ಆದೀತು. ತಾ. 28, 1, 2 ಅನುಕೂಲಗಳಾಗಿವೆ.

ಧನು—ಜಡಭರತರಂತೆ ಆಲಸರಾಗಿ ಕುಳ್ಳಿರತಕ್ಕವರಿಗೆ ಈ ವಾರದಲ್ಲಿ ಮೇಲಿಂದ ಮೇಲೆ ಆಪತ್ತುಗಳು ಬೆಳೆಯುತ್ತಾ ಹೋಗುವವು. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಹೊಂದಿರಲಿ ಎಂದು ಧೈರ್ಯದಿಂದ ಮುಂದಾಗತಕ್ಕವರಿಗೆ ಮಾತ್ರ ಕೆಲವು ಕಾರ್ಯಗಳು ಸಿದ್ಧಿಸಲಿವೆ. ಶತ್ರುಗಳಿಂದ ವಿಘ್ನವೂ ಬರಲಾರದು. ನೌಕರಿ ವ್ಯಾಪಾರಾದಿಗಳಲ್ಲಿ ಅಸಂತೃಪ್ತಿಯು ತಲೆದೋರುವದು, ಆತ್ಮಪ್ರತಿಷ್ಠೆಯಿಂದ ಮಾನಭಾವವು ಇದೀಗಲೇ ವಿರೋಧಿಗಳ ಸ್ಥಾನಕ್ಕೆ ಸೇರಿಸಲ್ಪಡುವದು. ನಿಮ್ಮಾಧೀನದಲ್ಲಿರುವವರೂ ಕೂಡ ನಿಮ್ಮ ಮಾತನ್ನ ತಿರಸ್ಕರಿಸಿ ವರ್ತಿಸುವುದರಿಂದ ಮನಸ್ಸಿಗೆ ತುಂಬಾ ವ್ಯಥೆಯಾದೀತು. ತಾ. 28, 1 2ರಲ್ಲಿ ಅತಿವ್ಯಯ, ರೋಗಭಯ.

ಮಕರ—ಅರ್ಥವ್ಯಯಕ್ಕೆ ಕಾರಣಗಳಾದ ಅನರ್ಥಪಾತಗಳನ್ನು ನೀವಾಗಿಯೇ ಸಂಪಾದಿಸಿದ್ದರುವುದರಿಂದ ನಿಮ್ಮ ದುಡಿಮೆಯ ಫಲವು ಸಾಕಾಗದೆ ಇತರರ ಕೂಡ ಸಾಲಕೇಳುವ ಪ್ರಸಂಗವೂ ಬರಬಹುದು. ಸ್ವಕೀಯ ದೇಹಾಲಸ್ಯ ಸಾಂಸಾರಿಕ ತಾಪತ್ರಯ ಇವುಗಳಿಂದ ಮನಸ್ಸು ವಿಶೇಷ ಚಂಚಲವಾಗುವುದು. ಕೋರ್ಟು ವಗ್ಗೈರೆ ರಾಜಕೀಯ ವ್ಯವಹಾರಗಳಲ್ಲಿ ನಿಮ್ಮಿಚ್ಛೆಯು ಸಫಲವಾಗುವುದು. ಶತ್ರುಜನರಿಂದ ವಿಘ್ನಗಳೊದಗುವಂತಿದ್ದರೂ ಇತರ ಮಹಾಜನರ ಸಹಾಯದಿಂದ ನಿರ್ವಿಘ್ನದಿಂದ ಕಾರ್ಯವನ್ನು ಪೂರೈಸುವಿರಿ ತಾ. 28, 1, 2ರಲ್ಲಿ ವೃಷ್ಟಾನ್ನ ಭೋಜನ, ಸಂತೋಷ, ಮಿತ್ರಭೇಟಿಯಾಗಲಿದೆ.

ಕುಂಭ—ಆಪ್ತಜನರಲ್ಲಿನ ಅವಿಶ್ವಾಸದಿಂದಲೂ ಪರಕೀಯಜನರ ಬೆದರಿಕೆಯಿಂದಲೂ ನಿಮ್ಮ ಮನಸ್ಥೈರ್ಯವು ನಾಶವಾಗಿರುವುದರಿಂದ ಯಾವ ಕೆಲಸವನ್ನೂ ಮುಂದುವರಿಸಬು ಬೆದರುವಿರಿ. ಹೆಂಡಂ ಮೇಲಿನ ವಿಶ್ವಾಸವಂತಿರಲಿ, ನಿಮ್ಮ ಕೃತಿವಚನಗಳಲ್ಲೇ ನಿಮಗೆ ಸದ್ಯ ವಿಶ್ವಾಸವಿಲ್ಲದಾಗಿದೆ. ಆದರೂ ಗುರುಹಿರಿಯರ ಅನುಗ್ರಹದಿಂದಾಗಿ ನಿಮ್ಮ ಖರ್ಚುವೆಚ್ಚಗಳಿಗೆ ಬೇಕಾದಷ್ಟು ಧನವು ದೊರೆಯುವುದು. ಸಂಸಾರವು ಅನ್ಯೋನ್ಯವಾಗಿರುವುದು ಆದಾವ ಭಾಗದಲ್ಲೂ ಗೃಹಸುಖಕ್ಕ ಹಾನಿಯಾಗದು, ತಾ. 1, 2 ಮಾತ್ರ ಇಷ್ಟಸಾಧಕವಾಗಲಾರದು.

ಮೀನ—ನಿಮಗೆ ದೈವಬಲವು ಸಾಕಷ್ಟಿಲ್ಲದಿದ್ದರೂ ನಿಮ್ಮ ಪೌರುಷಕ್ಕೆ ತುಂಬಾ ಶಕ್ತಿಯಿರುವುದರಿಂದ ಧೈರ್ಯದಿಂದ ಮುನ್ನುಗ್ಗಿರಿ. ಆದಾವ ಕಾರ್ಯವೂ ನಿಮಗೆ ಕ್ಲೇಶಪ್ರಾಯವಾಗಿ ತೋರಬರುವುದು. ಆದರೊಂದು ಯಾವುದಕ್ಕೂ ನೀವು ಮಾಡಲಿರುವ ಕಾರ್ಯದ ಪೂರ್ವಾಪರ ಗುಣದೋಷ ಕಷ್ಟನಷ್ಟಗಳನ್ನು ಚೆನ್ನಾಗಿ ವಿಮರ್ಶಿಸಿರಿ. ಪ್ರಥಮದಲ್ಲಿ ಅಧಿಕ ಖರ್ಚು ತೋರಿಬಂದರೂ ಮುಂದೆ ಫಲವು ಅನ್ಯೂನವಾಗಿ ಸಿಗುವುದು. ದೇಹಾಲಸ್ಯದಿಂದ ಸ್ವಲ್ಪ ಶಕ್ತಿ ಕುಂದಿರುವುದು. ವಿದ್ಯಾರ್ಥಿಗಳಿಗೆ ಬಹಳೇ ಹಾನಿಕರವಿರುವುದೀವಾರ. ತಾ. 28, 3, 4, ಬಿಟ್ಟು ಇತರ ದಿನಗಳಲ್ಲಿ ಮನದಾಸೆಯು ಪೂರೈಸುವವು.

ಕನ್ನಡ ನುಡಿವೆಣ್ಣಿಗೊಂದು
ಕನ್ನಡಗಿತ್ತಿಯ ಕಿರುಗಾಣಿಕೆ
ನಾಡ ಸೋದರಿಯರ ನೈಜ ಜೀವನದ
ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ
ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ

ಸಾಮಾಜಿಕ ಕಾದಂಬರಿ
ಬೆಲೆ: ೦-೭-೩.
0—8—0 ಸ್ಟಾಂಪು ಕಳುಹಿಸಿದರೆ
1 ಪ್ರತಿಯನ್ನು ಕಳಿಸಬಹುದು,
ಬರಹಗಾರ್ತಿ:—

ಶ್ರೀಮತಿ ಮುಟ್ಪಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಾಜ್ಞ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M A, M.R A.S. ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯಂಗಮವಾಗಿಯೂ ಇದೆ. ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ಮತಿ ನಿವಾರಕವಾಗಿಯೂ ಇದೆ. ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ.........'

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇನ್ಕಮ್ ಟ್ಯಾಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟ್ಯಾಕ್ಸ್‌ಗಳು.

ಇನ್ಕಮ್ ಟ್ಯಾಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸದಾದ ವಿಕ್ರಯ ಟ್ಯಾಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಹೊಸತಿನ ವಿಷಯಗಳು ಅನೇಕ ಇವೆ. ಕೇವಲ ಲೆಕ್ಕ ಪತ್ರ ಖರ್ಚಿನ ಲೆಕ್ಕವಿದ್ದರೂ ಸಾಲದು. ಆದರಿಂದ ತಯಾರಿಸಿದ ಸಾರಾಂಶದ ನಿಜತ್ವವು ಕೆಲವೇ ವಿಷಯಗಳಲ್ಲಿ ಟ್ಯಾಕ್ಸ ಆಫೀಸರರಿಗೆ ಒಪ್ಪಿಗೆಯಾಗಬೇಕು ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟ್ಯಾಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅವಶ್ಯಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟ್ಯಾಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟ್ಯಾಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಳಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಲೆಕ್ಕ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟ್ಯಾಕ್ಸ್ ಪ್ರಾಕ್ಟೀಷನರ್,
ಕುಂದಾಪುರ ಪೋಸ್ಟ್.

HURRY UP ? ? ?. UNIQUE OPPORTUNITY.
CLEARANCE SALE OF A LARGE CONSIGNMENT OF 10,000 WATCHES, JUST ARRIVED FROM SWITZERLAND, AT OLD PRICES.

LATEST ARRIVAL 1940
STRONG & DURABLE
ACCURATE- TIME-KEEPERS.
Guaranteed Lever Movement.



No. 416 Chromium Case Rs. 5—10
No 417 Golden Case Rs 6— 6
No. 417 R Rolledgold 10yrs. Jewelled Mov. Rs. 12—8



ROUND OR CUSHION
No. 401 Chromium Case Rs. 3—12
No. 402 Golden Case Rs. 4— 8



No. 424 Chromium Case Rs. 7—8
No. 425 Golden Case Rs. 8—4
No. 425 R Rolledgold 10yrs. 13—8



No. 428 Chromium Case. Rs. 9—0
No. 430 Rolledgoid 10yrs. Rs. 15—0

As. 9/- Extra for Postage.
For further particulars send for our new catalogue No. 16.
(Correspondance in English)

BAPALAL & CO.,
101 Abdul Rehman Street,
BOMBAY, 3.

LADIES MINIATURES.

Geneva Movement.
No 460 Chromium Case Rs. 10—8
No. 461 Golden Case Rs. 12—0
No. 462 Rolledgold 10yrs. Rs 15—0

ಭಾರತದ ನೂತನ ಅಸ್ತ್ರ!

ದೇಶದಲ್ಲಿ ಸಾರ್ವತ್ರಿಕ ಶಿಕ್ಷಣ ಪ್ರಸಾರದ ಪ್ರಯತ್ನ!

ನಾವು ತಲೆ ತಗ್ಗಿಸುವ ವಿಚಾರ!

ಜಗತ್ತಿನೆದುರಿನಲ್ಲಿ ಭಾರತೀಯರೆನಿಸಿಕೊಳ್ಳುವುದೇ ಒಂದು ಅತ್ಯಂತ ನಾಚಿಕೆಗೇಡಿನ ಪ್ರಸಂಗವಾಗಿದೆ. ಅಷ್ಟು ಭಯಂಕರವಾಗಿದೆ ನಮ್ಮ ಶಿಕ್ಷಣದ ಸ್ಥಿತಿ. ಕೆಲವು ದಿನಗಳಿಂದ ಜನರು ಇದನ್ನು ಮನಗಾಣುತ್ತಿರುವರು. ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದ ಮೇಲೆ ಶಿಕ್ಷಣ ಪ್ರಸಾರದಲ್ಲಿ ಹುರುಪಿನಿಂದ ಕೆಲಸ ಮಾಡಿ, ಎಲ್ಲರ ಮೆಚ್ಚುಗೆಗೂ ಪಾತ್ರರಾದರು.

1918ರಿಂದ ಇದುವರೆಗೂ ಭಾರತದ ಸ್ಥಳೀಯ ಸಂಸ್ಥೆಗಳೇ ಬೇಕಾದ ಶಿಕ್ಷಣ ಕಾರ್ಯವನ್ನು ಕೈಕೊಳ್ಳಬಹುದೆಂಬ ವಿಚಿತ್ರ ಕಾನೂನು ಜಾರಿಯಲ್ಲಿದೆ. ಆದರೂ ಇದುವರೆಗೆ ಬಲಾತ್ಕಾರದ ಶಿಕ್ಷಣ ಪ್ರಸ್ತಾರವು ಜಾರಿಯಲ್ಲಿ ಬರಲೇ ಇಲ್ಲ.

ಅಂಕಿ ಅಂಶಗಳು

ಇಂದು ನಮ್ಮಲ್ಲಿ ಸೇ 90 ಮಂದಿ ಅವಿದ್ಯಾವಂತರಿರುವರು. 1931ರ ಲೆಕ್ಕದಂತೆ ಇಲ್ಲಿನ ವಿದ್ಯಾವಂತರ ಸಂಖ್ಯೆಯು 2,39,62,279. ಇದರಲ್ಲಿ ಕೇವಲ ರುಜು ಮಾಡಬಲ್ಲವರೂ ಸೇರಿರುವರು. ಉಳಿದ 32½ ಕೋಟಿ ಜನರಿಗೆ ವಿದ್ಯೆ ಬರುವುದಿಲ್ಲವೆಂದಾಯಿತು. ಜಗತ್ತಿನ ಉಳಿದ ದೇಶಗಳೊಡನೆ ಭಾರತದ ವಿದ್ಯಾವಂತರನ್ನು ಹೋಲಿಸಿ ನೋಡಿ

ಭಾರತ ವಿದ್ಯಾವಂತರು ಕೇವಲ ಸೇ		8
ಇಂಗ್ಲೆಂಡ್	,,	94
ಅಮೆರಿಕ	,,	94.4
ರಷ್ಯ	,,	98
ಜರ್ಮನಿ	,,	99 7
ಜಪಾನ್	,,	99 7

1881ರಲ್ಲಿ ಮೊಟ್ಟಮೊದಲು ಜನಗಣನೆಯಾದಾಗ, ಈ ಲೆಕ್ಕವು ಕೇವಲ ಸೇ 3 ಮಾತ್ರವಿತ್ತು. ಅಂದರೆ 50 ವರ್ಷಗಳಲ್ಲಿ ಸೇ 3ರಿಂದ 8ರ ವರೆಗೆ ಮಾತ್ರ ವೃದ್ಧಿಯಾದಂತಾಯಿತು! ಬ್ರಿಟಿಷ್ ಪ್ರಭುತ್ವದ ಪ್ರಶಂಸಾರ್ಹವಾದ 'ರಿಕಾರ್ಡ್' ಇದು! ವಿದ್ಯಾಪ್ರಚಾರವು ಇದೇ ವೇಗದಲ್ಲಿ ನಡೆದರೆ, ಎಲ್ಲರೂ ವಿದ್ಯಾವಂತರಾಗಲು ಇನ್ನು 920 ವರ್ಷಗಳಾಗಬೇಕಾಗುವುದು! ಜನಸಂಖ್ಯೆಯು ಹೆಚ್ಚದೆ ಹಾಗೇ ಇದ್ದರೆ ಮಾತ್ರ! ಆದರೆ ಇದಂತೂ ಸಾಧ್ಯವಾಗದ ವಿಚಾರ.

ಇದು ಸರಾಸರಿ ಲೆಕ್ಕವಾಯಿತು. ದೇಶದಲ್ಲಿ ಅಕ್ಷರದ ಹೆಸರನ್ನೇ ಕೇಳರಿಯದ ಅನೇಕ ಭಾಗಗಳಿವೆ. ನಿಜಾಂ ಸರ್ಕಾರದವರು ವರ್ಷಕ್ಕೆ 1 ಕೋಟಿ ರೂ ವ್ಯಯ ಮಾಡಿದರೂ ಅಲ್ಲಿ ಸುಮಾರು ಸೇ 4ರಷ್ಟು ಮಂದಿ ಮಾತ್ರ ಓದುಬರಹ ಬಲ್ಲವರಾಗಿರುವರು.

1929–30ರಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಕೇವಲ 12516126 ಇತ್ತು. ರೆವಿನ್ಯೂ ಆದಾಯವು 2,27,26,18000 ರೂ. ಇತ್ತು. ಇದರಲ್ಲಿ ಸರ್ಕಾರವು ಸೇ. 26 ಭಾಗವನ್ನು ಸೈನ್ಯಕ್ಕೂ ಸೇ 10ರಷ್ಟು ಪೋಲಿಸರಿಗೂ ಮತ್ತು ಸೇ 6ರಷ್ಟು ಮಾತ್ರ ಶಿಕ್ಷಣಕ್ಕೂ ವ್ಯಯಮಾಡಿತು. ಇಂದು ಸರ್ಕಾರವು ಪ್ರತಿ ಮನುಷ್ಯನಿಗೆ ಸರಾಸರಿ ಕೇವಲ 8 ಆಣೆಯನ್ನು ವರ್ಷಕ್ಕೆ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದೆ. ಆದರೆ ಇತರ ದೇಶದವರ ಖರ್ಚಿನೊಡನೆ ಇದನ್ನು ಹೋಲಿಸಿ ನೋಡಿ.

ಭಾರತದಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ		
ಒಬ್ಬನಿಗೆ		8 ರೂ.
ಇಂಗ್ಲೆಂಡಿನಲ್ಲಿ	,,	109 ರೂ.
ಸ್ಕಾಟ್ಲೆಂಡಿನಲ್ಲಿ	,,	150 ರೂ.
ಐರ್ಲೆಂಡಿನಲ್ಲಿ	,,	113 ರೂ.
ಡೆನ್ಮಾರ್ಕಿನಲ್ಲಿ	,,	168 ರೂ.
ನಾರ್ವೆಯಲ್ಲಿ	,,	150 ರೂ.
ದಕ್ಷಿಣ ಆಫ್ರಿಕದಲ್ಲಿ		166 ರೂ.

ಮೊದಲು ಸಾರ್ವತ್ರಿಕ ವಿದ್ಯಾಪ್ರಸಾರದ ಆಂದೋಳನಕ್ಕೆ ಪ್ರಾರಂಭಿಸಿದವರು ಶ್ರೀ. ಗೋಖಲೆಯವರು. ಆದರೆ ಇದರಿಂದ ಕೆಲವು ಕಾಲೇಜುಗಳೂ, ಸ್ಕೂಲುಗಳೂ ತೆರೆಯಲ್ಪಟ್ಟುವೇ ವಿನಹ ಏನೂ ಆಗಲಿಲ್ಲ.

ಬಿಹಾರದಲ್ಲಿ ಚಳವಳಿ.

ಈಗ ಕಾಲವು ಬದಲಾಯಿಸಿದೆ. ಕಾಂಗ್ರೆಸ್ ಸರ್ಕಾರಗಳು ಈ ಕಾರ್ಯವನ್ನು ಕೂಡಲೇ ಕೈಗೊಂಡುವು. ಬಿಹಾರಿನ ಶಿಕ್ಷಣ ಮಂತ್ರಿಗಳಾಗಿದ್ದ ಡಾ। ಸೈಯ್ಯದ ಮಹಮೂದರ ಮಾತನ್ನು ಕೇಳಿ: "ನಾಗರಿಕ ಸ್ವಾತಂತ್ರ್ಯ ಮತ್ತು ರಾಜಕೀಯ ಸ್ವಾತಂತ್ರ್ಯಗಳ ದಾರಿಯಲ್ಲಿ, ಭಾರತವು ಪ್ರಜಾತಂತ್ರವನ್ನೂ ಆರಿಸಿಕೊಂಡಿದೆ. ನಾವು ಭಾರತೀಯರೆಲ್ಲರಲ್ಲಿ ಪ್ರಚಾರಮಾಡಬೇಕಾಗಿದೆ. ಈ ಪ್ರಜಾತಂತ್ರಾತ್ಮಕ ರಾಜ್ಯಭಾರವು ನಿರ್ಮಲವಾಗಿರಬೇಕೆಂದರೆ ಸಾರ್ವಜನಿಕರ ಟೀಕೆಟಿಪ್ಪಣಿಗಳು ಅಗತ್ಯ."

1938ನೇ ನವಂಬರ್ ಮತ್ತು 39 ನೇ ಮಾರ್ಚಿ ಈ ಅಂತರದಲ್ಲಿ ವಿದ್ಯಪ್ರಸಾರ ಕಮಿಟಿಯು ಈ ಪ್ರಾಂತ್ಯದಲ್ಲಿ 8479 ತರಗತಿಗಳನ್ನು ನಡೆಸಿತು. ಓದುಬರಹ ಕಲಿತವರಸಂಖ್ಯೆ 3,19,693. ಈ ಸಂಬಂಧದಲ್ಲಿ 10693 ಅಧ್ಯಾಪಕರೂ, 6331 ಸ್ವಯಂಸೇವಕರೂ ಕೆಲಸಮಾಡಿದರು. "ಇದರಿಂದ 4 ಸಾವಿರ ಹಳ್ಳಿಗಳ ಅಜ್ಞಾನವು ದೂರವಾಯಿತಲ್ಲದೆ, ಸೆರೆಮನೆಗಳ ಬಂದಿಗಳ ಮಾನಸಿಕ ಸ್ಥಿತಿಯೂ ಬಹಳ ಪರಿವರ್ತನಹೊಂದಿತು" ಎಂದು ಡಾ। ಸೈಯದ್ ಮಹಮುದರವರು ಹೇಳಿರುವರು.

ಮುಂಬಯಿ

ಡಾ. 1939ನೇ ಮೇಯಲ್ಲಿ ಶಿಕ್ಷಣ ಪ್ರಚಾರಪ್ರಾರಂಭವಾಯಿತು ಮುಂಬಯಿ ನಗರದ ಸೋಶಿಯಲ್ ಸರ್ವಿಸ್ ಲೀಗಿನವರು 673 ತರಗತಿಗಳನ್ನು ನಡೆಸಿ, 10 ಲಕ್ಷ ವಿದ್ಯಾರ್ಥಿಗಳಿಗೆ ಕಲಿಸಿದರು, ಕೆಲವು ತರಗತಿಗಳು ಸ್ತ್ರೀಯರಿಗಾಗೇ ನಡೆದುವು. ಈಗ ಮುಂಬಯಿ ಸರಕಾರವು ಈ ಕಾರ್ಯಕ್ಕಾಗಿಯೇ ಒಬ್ಬ ಅಧಿಕಾರಿಯನ್ನೂ ನಿಯಮಿಸಿದೆ

ಪರಿಣಾಮದಿಂದ ಪ್ರಯೋಜನ

ಒಬ್ಬನಿಗೆ ಓದುಬರಹವನ್ನು ಕಲಿಸುವುದೇ ಬೇರೆ, 2–3 ತಿಂಗಳಲ್ಲಿ ಕಲಿತ ವಿದ್ಯೆಯು ತೀರ ಸ್ವಲ್ಪವಾಗಿದ್ದು, ಅದನ್ನು ವೃದ್ಧಿಪಡಿಸಿಕೊಳ್ಳದೇ ಹೋದಲ್ಲಿ ಅದನ್ನು ಮರೆಯಲೇಬೇಕಾಗುವುದು

ಬಿಹಾರ ಸರ್ಕಾರವು ಇದನ್ನು ಗಮನದಲ್ಲಿಟ್ಟುಕೊಂಡೇ "ಜ್ಯೋತಿ" (ರೋಷ್ನಿ) ಎಂಬ ಮಾಸಪತ್ರಿಕೆಯನ್ನು ಹೊರಡಿಸಿದೆ. ಹೊಸದಾಗಿ ಶಿಕ್ಷಣ ಹೊಂದಿದವರಿಗೆ ಇದನ್ನು ಉಚಿತವಾಗಿ ಕೊಡುವರು ಕಲಿತುದನ್ನು ಜನರು ಮರೆಯದಿರಲೆಂಬುದೇ ಇದರ ಉದ್ದೇಶ.

ಈ ಕೆಲಸವು ಕಷ್ಟಸಾಧ್ಯವಾದುದೆಂಬುದೂ ಇದಕ್ಕಾಗಿ ಅಪಾರಹಣ ಬೇಕೆಂಬುದೂ ನಿರ್ವಿವಾದವಾದ ವಿಚಾರ. ಆದರೆ ಜಗತ್ತಿನಲ್ಲಿ ದೃಢಮನಸ್ಸು, ಸತತ ಪ್ರಯತ್ನ ಮತ್ತು ಸರಿಯಾದ ಮಾರ್ಗ ಇವುಗಳಿಂದ ಯಾವುದನ್ನು ಬೇಕಾದರೂ ಸಾಧಿಸಲೇಬಹುದು. (ಹರಹರ)

(೫ನೇ ಪುಟದಿಂದ ಮುಂದುವರಿದುದು)

ಪಾಶ್ಚಾತ್ಯರನ್ನು ಬೆರಗುಗೊಳಿಸಿರುವ ವಿದ್ಯೆ!

2 ನಿಮಿಷಗಳ ನಂತರ ಅವರ ಕಾಲಿನಲ್ಲಿ ಗುಳ್ಳೆಗಳೆದ್ದುವು. ಖುದಾಬಖ್ಷ ನಿಗಿಂತ ವೇಗವಾಗಿ ನಡೆದಿದ್ದರು. ಅವನ ತೂಕವು 120 ಪೌಂಡ್. ಇವರದು 168 ಪೌಂಡು ಇತ್ತು. ಹಗುರವಾದವರು ಸ್ವಾಯತ್ತ ಸುಲಭವಾಗಿ ನಡೆಯಬಲ್ಲರೋ ಏನೋ?

ಇದಾದ ಕೆಲವು ವರ್ಷಗಳ ನಂತರ ಪುನಃ ಇದರ ಅನುಭವವನ್ನು ಮಾಡಲಾಯಿತು. ಈ ಸಾರಿ ಅಹಮ್ಮದ್ ಹುಸೇನ್ ಎಂಬ ಭಾರತದ ದಕ್ಷಿಣೆಕಾರನು ಬಂದನು. ಇವನು ತಾನು ನಡೆಯುವುದಲ್ಲದೆ ಒಬ್ಬ ಇಂಗ್ಲಿಷಿನವನನ್ನು ಕರೆದುಕೊಂಡು ಹೋಗುವಂತೆ ಹೇಳಿದನು. 400 ಜನರು ಇದಕ್ಕಾಗಿ ಸಿದ್ಧರಾಗಿ ಬಂದರು. ಎಲ್ಲರ ಕಾಲುಗಳೂ ತೊಳೆಯಲ್ಪಟ್ಟವು. ಅಹಮ್ಮದ್ ಹುಸೇನನ ಆದೇಶದಂತೆ 12½ ಅ. ಉದ್ದ 4 ಅ. ಅಗಲ 4 ಇಂಚ್ ಆಳದ ಗುಂಡಿಯನ್ನು ತೆಗೆದರು. ಅದು ಬೆಂಕಿಯ ತಾಪದ ಪ್ರಮಾಣವು 1067° ಇತ್ತು. ಬೆಂಕಿಯೊಳಗಿನ ಪ್ರಮಾಣವು 700° ಇತ್ತು.

ಅಹಮದನು ¼ ಸೆಕುಂಡಿನಲ್ಲಿ 3 ಹೆಜ್ಜೆ ಹೋದನು. ನಂತರ ಇನ್ನೊಬ್ಬನನ್ನು ಕರೆದನು. ಮಾರ್ಷಲ್ ಬೋಲ್ಟ್ ಕ್ರೇಗಿಯವರು ಬಂದು ಸಾಲಿನಲ್ಲಿನಿಂತು ಅಹಮದನ ಹಿಂದೆ ಹೊರಟು 1½ ಸೆಕೆಂಡಿನಲ್ಲಿ ದಾಟಿದರು. ಹೆಜ್ಜೆಗಳನ್ನು ಸರಿಯಾಗಿ ಹಾಕದೆ ಹೋದರೆ ಕಾಲು ಸುಡುವುದೆಂದು ಗೊತ್ತಾಯಿತು.

ಇದರಿಂದ ಬೆಂಕಿ ಮೇಲೆ ನಡೆಯಲು ನಂಬಿಕೆಯೇ ಮುಖ್ಯವಾದ ಕಾರಣವಲ್ಲವೆ ಬೆಂಕಿಯ ತಾಪವು ಕಾಲ ಕೆಳಗೆ ಯಾವ ವೇಗದಲ್ಲಿ ಪ್ರವೇಶಿಸುವುದೋ ಎಂಬುದು ತಿಳಿದು ಬಂದಂತಾಯಿತು ಉಷ್ಣವು ಬೇಗ ಪ್ರವೇಶಿಸಬೇಕಲ್ಲದೆ, ನಿಧಾನವಾಗಿ ಪ್ರವೇಶಿಸಿದಲ್ಲಿ, ತಣ್ಣಗಿರುವ ವಸ್ತುಗಳ ಉಷ್ಣಾಂಶವು ಹೆಚ್ಚಿ, ಪಾದದ ಚರ್ಮವು ಸುಟ್ಟು ಹೋಗುತ್ತದೆ.

ಸಾಧಾರಣವಾಗಿ ಬೆಂಕಿ ಮತ್ತು ಕಾಲಿನ ಸಂಬಂಧವು ½ ಸೆಕೆಂಡಿಗಿಂತ ಹೆಚ್ಚಿಗೆ ಇರುವುದಿಲ್ಲ ಇದರಿಂದ ತಿಳಿದು ಬಂದ ವಿಷಯವೇನೆಂದರೆ, ಬೆಂಕಿಯ ಮೇಲೆ ನಡೆಯುವುದೇನೂ ವಿಚಿತ್ರ ವಿಚಾರವಲ್ಲ. ಬಹಳ ಸ್ವಲ್ಪ ಕಾಲದ ವರೆಗೆ, ಬೆಂಕಿ, ಕಾಲಿನ ಸಂಬಂಧ, ಕೇವಲ ಕೆಲವು ಹೆಜ್ಜೆ ಹೋಗುವುದು, ಬೆಂಕಿಯ ತಾಪ ನಿಧಾನವಾಗಿ ಕಾಲನ್ನು ಸೇರುವುದು, ಇವೇ ಮುಂತಾದುವು, ಕಾಲನ್ನು ಅಪಾಯದಿಂದ ರಕ್ಷಿಸುವವು

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾಧೆಗಳಿಗೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವುದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ತೀವ್ರ ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡೆಕೊಳ್ಳುವ ಮೊದಲು ಕೆಳಗಿನ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿ

ಮಂಗಳೂರಲ್ಲಿ ಸ್ಟಾಕಿಸ್ಟರು:— ಮೆಸರ್ಸ್ ಇಲೆಕ್ಟ್ರೋ ಹೋಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ನಾನು ನನ್ನ ದೇಶದ ಕುರಿತು ಕರ್ತವ್ಯ ಮಾಡಿದ್ದೆ.

"ನಿಷೇಧ ಸೂಚಿಸಲು ಗುಂಡುಹಾರಿಸಿದೆ"

—: ಶ್ರೀ. ಉದ್ಧಾಮಸಿಂಘನ ಹೇಳಿಕೆ :—

ಕಳೆದ ತಾ. 13ರಲ್ಲಿ ಲಂಡನಿನ ಕೇಕ್ಸ್‌ಟನ್ ಹೋಲಿನಲ್ಲಿ ಸರ್ ಮೈಕಲ್ ಓಡ್ವಾಯರರೇ ಮೊದಲಾದವರಿಗೆ ಗುಂಡು ಹಾರಿಸಿದವನು ಉದ್ಧಾಮಸಿಂಘನೆಂಬ ಸಿಖ್ಖನೆಂದು ತಿಳಿದು ಬಂದಿದೆ. ಲೋರ್ಡ್ ಜೆಟ್ಲೆಂಡರಿಗೂ ಎರಡು ಗುಂಡು ತಾಗಿತ್ತು. ಆದರೆ ಅವರಿಗೆ ಸ್ವಲ್ಪ ದೂರದಿಂದ ಗುಂಡೆಸೆದುದರಿಂದ ಪ್ರಾಣ ಹಾನಿಯಿಂದವರು ಪಾರಾದರು. ಈ ಅತ್ಯಾಚಾರದ ಮೊದಲು ಉದ್ಧಾಮಸಿಂಘನು, ತನ್ನ ಪಾಸ್ ಪೋರ್ಟನ್ನು ಸಿಂಧುವಾಗಿ ಮಾಡಲು ಇಂಡಿಯಾ ಹೈಕಮಿಶನರಾದ ಸರ್ ಸುಹ್ರವರ್ದಿಯವರ ದಸ್ಕತು ಪಡೆಯಲು ಇಂಡಿಯಾ ಆಫೀಸಿಗೆ ಹೋಗಿದ್ದನು. ಅವರಲ್ಲಿ ಸಿಕ್ಕಲಿಲ್ಲ. ಆದರೆ ಅಲ್ಲಿ ಕೇಕ್ಸ್‌ಟನ್ ಹೋಲಿನ ಸಭೆಯ ನೋಟೀಸನ್ನು ಕಂಡು ಮರುದಿನ ಆ ಸಭೆಗೆ ಹೋದನು. "ಓಡ್ವಾಯರ ಮೇಲೆ ಸೇಡು ತೀರಿಸಲಿಕ್ಕಾಗಿ ನಾನು ಅವರಿಗೆ ಗುಂಡು ಹಾರಿಸಿದುದು. ಅದೇ ಅವರಿಗೆ ತಕ್ಕದಾದುದು. ನಾನು ಯಾವ ಸಂಘ ಸಂಸ್ಥೆಗಳಿಗೂ ಸೇರಿದವನಲ್ಲ. ಲೋರ್ಡ್ ಜೆಟ್ಲೆಂಡರು ಸತ್ತಿರುವರೇ? ಅವರಿಗೂ ನಾನು ಎರಡು ಗುಂಡು ಹೊಡೆದಿರುವೆನು ಒಬ್ಬನು ಮಾತ್ರ ಸತ್ತುದಲ್ಲವೆ? ಹೆಚ್ಚು ಜನರು ಸಿಕ್ಕುವರೆಂದು ನಂಬಿದ್ದೆ. ನಾನು ಬಹಳ ನಿಧಾನದಿಂದ ಕೆಲಸಮಾಡಿರಬೇಕು" ಎಂದು ಉದ್ಧಾಮಸಿಂಘನೊಮ್ಮೆ ಹೇಳಿ ಮತ್ತೊಮ್ಮೆ "ನಾನು ಕೇಕ್ಸ್‌ಟನ್ ಹೋಲಿನ ಸಭೆಯ ಕುರಿತು ನಿಷೇಧ ಸೂಚಿಸಲು ಗುಂಡು ಹಾರಿಸಿದ್ದು. ಕೊಲೆ ಮಾಡಲಿಕ್ಕಲ್ಲ ಬ್ರಿಟಿಷ ಸಾಮ್ರಾಜ್ಯಶಾಹಿಯ ಆಳ್ವಿಕೆಯಲ್ಲಿ ಜನರು ಉಪವಾಸ ಬಿದ್ದಿರುವುದನ್ನು ನಾನು ಕಂಡಿರುವೆನು ಈ ರೀತಿ ನಿಷೇಧ ಸೂಚಿಸಿದುದಕ್ಕಾಗಿ ನಾನೇನೂ ವಿಷಾದಪಡುವುದಿಲ್ಲ. ನನ್ನ ದೇಶಕ್ಕಾಗಿ ಅದು ನನ್ನ ಕರ್ತವ್ಯವಾಗಿತ್ತು. ನನಗೆ ಎಂತಹ ಶಿಕ್ಷೆ ಕೊಟ್ಟರೂ ಅದರ ಗೊಡವೆ ನನಗಿಲ್ಲ. 10, 15, 20 ವರ್ಷಗಳ ಶಿಕ್ಷೆ ಕೊಡಲಿ. ಬೇಕಾದರೆ ಗಲ್ಲಿಗೇರಿಸಲಿ. ನಾನು ನನ್ನ ಕರ್ತವ್ಯ ಮಾಡಿರುವೆನು. ನನಗೆ ಯಾರ ಪ್ರಾಣ ತೆಗೆಯುವ ಮನಸ್ಸೇನೂ ಇರಲಿಲ್ಲ. ನಿಷೇಧ ವ್ಯಕ್ತಪಡಿಸಬೇಕೆಂದಿದ್ದಿತ." ಎಂದಿರುವನು ಯಾರನ್ನೂ ಕೊಲ್ಲುವ ಉದ್ದೇಶ ತನಗಿರಲಿಲ್ಲೆಂದು ಕೋರ್ಟಿನ ಮುಂದೆ ಹಲವು ಸಲ ಹೇಳಿರುವನು.

ಲಂಡನಿನ ಬೋಸ್ಟ್ರೀಟಿನ ಪೋಲೀಸ್ ಕೋರ್ಟಿನಲ್ಲಿ ಎರಡು ಸಲ ವಿಚಾರಣೆ ನಡೆದಾಗ ಉದ್ಧಾಮ ಸಿಂಘನು ಮಾಡಿದ ಹೇಳಿಕೆಗಳಿವು. ಎಪ್ರಿಲ್ ತಾ. 1ರ ವರೆಗೆ ಅವನನ್ನೀಗ ರಿಮಾಂಡಿನಲ್ಲಿರಿಸಲಾಗಿದೆ. ಮಿ. ಲಿಂಡರ್ ಎಂಬವರು ಅಪಾದಿತನ ಕಡೆಯಲ್ಲಿ ವಕಾಲತು ವಹಿಸಿರುವರು. ಉದ್ಧಾಮ ಸಿಂಘನು ಕೋರ್ಟಿಗೆ ತರಲ್ಪಟ್ಟೊಡನೆಯೇ ಮೆಜಿಸ್ಟ್ರೇಟರನ್ನು ನೋಡಿ ನಗಾಡಿದನು, ಆ ಮೇಲೆ ನಸುನಗುತ್ತಾ ಇದ್ದನು. ತನಗೆ ಹೊಸ ಬೂಟ್ಸ ಮತ್ತು ಸಿಗರೇಟುಗಳನ್ನು ಕೊಡಬೇಕೆಂದು ಮೆಜಿಸ್ಟ್ರೇಟರೊಡನೆ ಕೇಳಿದನು.

ಆರು ತೋಟೆಗಳ ರಿವಾಲ್ವರನ್ನು ತಾನೊಬ್ಬ ಸೈನಿಕನಿಂದ ತೆಗೆದುಕೊಂಡುದೆಂದು ಉದ್ಧಾಮ ಸಿಂಘನೇ ಹೇಳಿರುವನು. ಅವನೊಡನೊಂದು ಚೂರಿ ಕೂಡಾ ಇತ್ತಂತೆ. ಮುಂಚಿನ ರಾತ್ರಿ ಯಾರೋ ಅವನ ಮೇಲೆ ಕೈಮಾಡಿದ್ದರಂತೆ ಅವನು 6 ಸಲ ಗುಂಡು ಹಾರಿಸಿ ರಿವಾಲ್ವರನ್ನು ಖಾಲಿ ಮಾಡಿದನು. ಅವನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಜನರ ನಡುವಿನಿಂದ ನುಗ್ಗುತ್ತಿದ್ದಾಗ ಇಬ್ಬರು ಅವನ ಮೇಲೆ ಬಿದ್ದು ಅತನನ್ನು ನೆಲಕ್ಕಪ್ಪಳಿಸಿದರು. ಪ್ರಥಮವಾಗಿ ಸಿಂಘನನ್ನು ಹಿಡಿದು ಜಗ್ಗಿದವಳು ಮಿಸ್. ಹೆರಿಂಗ್ ಬರ್ಡ ಎಂಬ ಸ್ತ್ರೀಯು. ಪೋಲೀಸರು ಸಿಂಘನ ದೇಹವನ್ನು ಪರೀಕ್ಷಿಸಿದಾಗ ಅವನ ಒಂದು ಕಿಸೆಯೊಳಗೆ 17 ಮತ್ತು ಇನ್ನೊಂದರಲ್ಲಿ 7 ತೋಟೆಗಳಿದ್ದುವು. ಮೇಲಿನ ನಿಲುವಂಗಿಯಲ್ಲೊಂದು ಚೂರಿ ಇದ್ದಿತು. ಇದರಿಂದ ಸಿಂಘನು ಇನ್ನೂ ಹೆಚ್ಚು ಸಲ ಗುಂಡು ಹಾರಿಸಲು ಸಿದ್ಧನಿದ್ದನೆಂಬುದು ವ್ಯಕ್ತವಾಗುವುದು. ಅವನು ಸರ್ ಮೈಕೆಲ್ ಓಡ್ವಾಯರರಿಗೆ ಎರಡು ಸಲ ಗುಂಡು ಹೊಡೆಯುವಾಗ ಅವರಿಂದ 9 ಇಂಚು ಮಾತ್ರ ದೂರವಿದ್ದನು. ಸರ್. ಮೈಕೇಲರು ಕೂಡಲೆ ಮೃತರಾದರು.

ನಿಮ್ಮ ಜಾಹೀರಾತನ್ನು
"ನವಯುಗ ವಾರಪತ್ರಿಕೆ"
ಇದರಲ್ಲಿ
ಪ್ರಕಟಿಸಿ ನಿಮ್ಮ ನಿಮ್ಮ ವ್ಯಾಪಾರ
ವಹಿವಾಟನ್ನು ಅಭಿವೃದ್ಧಿ
ಪಡಿಸಿರಿ.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್

ಸ್ಥಾಪನೆ ವರ್ಷ 1874] ಎಶೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯೆಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲ್ಯಾಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲ್ಯಾಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ORIENTAL
GOVERNMENT SECURITY LIFE ASSURANCE CO., LTD.

THE

PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರು ಆರೋಗ್ಯಶಾಲಿಗಳಾಗಲು **ಪ್ರಭೂಸ್–ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಮನೀಯವಾದ ಕೇಶಕಲಾಪ ತಂಪಾದ ಮೆದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ ವಾಯುಮಾತ್ರೆಗಳೆಂಬ — **ಧಾನ್ವಂತರಿ ಗುಟಿಕಾ** — ಇವುಗಳನ್ನು ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ.

ಮಾತ್ರೆ–12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0.

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು, ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು:–

ನವಭಾರತ ಬುಕ್ ಡಿಪೋ, ಉಡುಪಿ, ದ. ಕನ್ನಡ. ಜನರಲ್ ಸಪ್ಲೈಯರ್ಸ್ ಲಿಮಿಟೆಡ್, ಉಡುಪಿ ಪೋಸ್ಟ್, ದ. ಭಾರತ, ಕೆನರಾ ಸ್ಟೋರ್ಸ್ ಏಜನ್ಸಿ, ವಿ. ಆರ್ ಪ್ರಭು, ಓಟಿ ಬೋಮಾಲಿ ವ ನ್ಸನ್, ಕಾಲ್‌ಬಾಗ್ ಮುಂಬೈ ನಂಬ್ರ 12, ಗಣಪಯ್ಯ ಲಕ್ಷ್ಮಣ ನಾಯಕ್ ಎಂಡ ಬ್ರದರ್ಸ್, ಕೋಟ, ದ. ಕನ್ನಡ.

ಸೀರೆಗಳು ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಜೀವನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Null Bazzar, Duncan Road,
BOMBAY 4

ಭಾರತೀ ಗ್ರಂಥಮಾಲೆಯ ಪುಸ್ತಕಗಳು.

ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ಚಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ
(ಅಂಚೆವೆಚ್ಚ 0-0-6 ಪ್ರತ್ಯೇಕ)

ರೂ 1-8-0 ಕಳಿಸಿದ್ದಲ್ಲಿ ಆರು ಪುಸ್ತಕಗಳನ್ನು ಕಳಿಸಲಾಗುವದು. (ಅಂಚೆವೆಚ್ಚ ಪ್ರತ್ಯೇಕ)

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಪ್ರತಿಗಳಿಗೆ ಬರೆಯಿರಿ:–

ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

ಕೋಪ್ರಾನದ ಬಿಳೀ ಟೂಥಪೇಸ್ಟ್ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡುತ್ತದೆ



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ. (ಮಾಲಕರು:—ಮಗನಭಾಯಿ ಅಮೀನ್ ಅಂಡ್ ಕಂಪೆನಿ ಮುಂಬಯಿ.

ಹೋಂ ಇಂಗ್ಲಿಷ್ ಟ್ಯೂಟರ್

ಇದರಲ್ಲಿ, ಸುಲಭ ಪಾಠಗಳು, ವ್ಯಾಕರಣ ನಿಯಮಗಳು, ಚಿಕ್ಕ ಕಥೆಗಳು, ಕನ್ನಡ ಶಬ್ದಗಳ ಕ್ರಮಗಳು, ವಾಕ್ಯರಚನಾಕ್ರಮಗಳು, ಪತ್ರವ್ಯವಹಾರ, ಅರ್ಜಿಗಳ ನಮೂನೆಗಳು, ಇಂಗ್ಲಿಷ್ ಕನ್ನಡ ಗಾದೆಗಳು, ಉಚ್ಚಾರಣೆ ಮತ್ತು ಅರ್ಥಗಳಲ್ಲಿ ವ್ಯತ್ಯಾಸವಿರುವ ಶಬ್ದಗಳು, ಇಂಗ್ಲಿಷ್ ಉಚ್ಚಾರಣೆ ಸಹಿತ ಸುಮಾರು 3000 ಶಬ್ದಗಳ ಕೋಶವೂ ಸಂಕೇತಾಕ್ಷರಗಳೂ ಅಡಗಿವೆ. ಈ ಪುಸ್ತಕವಿದ್ದರೆ ಶಿಕ್ಷಕ ಉಪಾಧ್ಯಾಯರು ಮನೆಯಲ್ಲಿದ್ದಷ್ಟೇ ಸಹಾಯವಾಗುವದು. ಸುಮಾರು 216 ಪುಟಗಳ ಪುಸ್ತಕಕ್ಕೆ ಟಪ್ಪಾಲು ಖರ್ಚು ಸಹ ಬೆಲೆ ಒಂದೇ ರೂಪಾಯಿ

ಹಣ ಮುಂಗಡ ಕಳುಹಿಸಬೇಕು. *V. P.* ಮಾಡಲಾಗುವದಿಲ್ಲ.

ಉಪಾಧ್ಯಾಯ ಬುಕ್ ಡಿಪ್ಪೋ, **A S. Street,** ಬೆಂಗಳೂರು ಸಿಟಿ.

ನಮ್ಮ ಹೊಸ ಪ್ರತಿನಿಧಿಗಳು

ಶ್ರೀ. ಕೆ. ಎಂ. ದೇವಪ್ಪ ಶೆಟ್ಟರು 'ನವಯುಗ'ದ ಪ್ರತಿನಿಧಿಯಾಗಿ ಕೆಲಸ ಮಾಡಲು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಇವರು ಮಿತಭಾಷಿಗಳು, ವಿನಯಸಂಪನ್ನರು ಹಾಗೂ ಸರಳ ಮನೋವೃತ್ತಿಯ ಕಾಂಗ್ರೆಸ್ ಭಕ್ತರು 'ನವಯುಗ'ವನ್ನು ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂಬ ಉತ್ಸಾಹೇಚ್ಛೆಯಿಂದ ಇವರು ಪ್ರತಿ ಹಳ್ಳಿ, ಪೇಟೆ, ಪಟ್ಟಣಗಳಲ್ಲೂ ಕ್ರಮಶಃ ಸಂಚರಿಸಲಿರುವರು. ಇವರಿಗೆ ಸಕಲರೂ ಉದಾರಾಶ್ರಯವಿತ್ತು 'ನವಯುಗ'ಕ್ಕೆ ಸರ್ವ ಪ್ರೋತ್ಸಾಹ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗುತ್ತದೆ. —ಮನೇಜರ್.

Degrees. Books: Medicines.

Free H. L. M S. H M B. H. M. D. etc Free Homeo-Ayur-Unani-Naturo degrees by post also—Practioners also get soons Homeo Materiamedica, Rs 5 Homeo-Practice book Rs 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd)

P. O MAHUVA, (Kathiawar Dt. India.

NAVAYUGA
Advertisement Tariff

1 Page	Rs. 25/-	per insertion	
½ ,,	Rs. 15/-	,,	,,
¼ ,,	Rs. 8/-	,,	,,
⅛ ,,	Rs. 5/-	,,	,,
Per Single inch col.	Re. 1	,,	

Contract rates on application
Manager-**Navayuga UDIPI.**

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ಸಾಜೂತಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,

Hampankatte, **MANGALORE**

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿ ಸೋರುವುದು, ನೋವು, ಉರಿ ... ಕಿವುಡು ... ಸಂಪೂರ್ಣ ... 'ಬಧಿರತಾಹರಣ' ... ಬಾಟ್ಲಿ 1ರ ಬೆಲೆ ರೂ 2, 3 ಬಾಟ್ಲಿಗಳಿಗೆ ರೂ 5, ಅಂಚೆ ಖರ್ಚು ಪ್ರತ್ಯೇಕ

ವಿಳಾಸ:—ಆರೋಗ್ಯಸದನ, ದುಗ್ಗಾ ದೇವಿ ಸ್ಟ್ರೀಟ್, ಮುಂಬಾಯಿ 4

THE MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ಸಹಾಯ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ನೇಕಡಾ 7 ರ ದರದಲ್ಲಿ ಸಾಲಕೊಡಲಾಗುವುದು ಸಿರಿಯು ಠೇವಣಾತಿ ನೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು ಸೀಸೆ 1ಕ್ಕೆ 12 ಅಣೆ, ಟಪಾಲು ಬೇರೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು.- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು **ತಿರಸ್ಕರಣೀಯಗಳಾಗಿವೆ. ಶೋಧನ ಗುಣ**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಬಂಧವನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವುದು **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು **ಸುಖಸೇವನ** ಸುಖಸೇವನದಿಂದ ಮಧುರವಾದ ಹವಾ ... ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವುದು.

ಒಟ್ಟು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.3-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು - ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! DAIMONDS!

K R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUE RFINE UP TO DATE CUTTINGI **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಬುನ್ಯಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರು ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಪಯೊಂದನ್ನು ಗವರ್ನಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕಾಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಬೇಕಾಗುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ... ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co, 18 Balmat Road, MANGALORE

Approved from by the Govt. of My sore. Certified by the Agent of the Govt. of India in Ceylon

ಹೊಸ ಪುಸ್ತಕ! **ಸೆಲ್ಫ್ ಇಂಗ್ಲಿಷ್ ಸ್ಟಡಿ** ಈಗಲೇ ಕೊಂಡಿರಿ!!

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಬೇರೆ ಸಹಾಯವಿಲ್ಲದೆ ಇಂಗ್ಲೀಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ಶೀಘ್ರದಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ಇದುವರೆಗೆ ಕನ್ನಡ ಭಾಷೆಯಲ್ಲಿಲ್ಲ. ... ಕನ್ನಡ ಓದಬಲ್ಲವರೆಲ್ಲರೂ ... ಇಂಗ್ಲೀಷ್ ಕಲಿತುಕೊಳ್ಳಬಹುದು ... ಪುಸ್ತಕದ ಕ್ರಯ ರೂ 1—8—0.

Western Swiss Watch Co

Book Sellers Post Box No 68

G P O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ 68 ಮದರಾಸ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಮಾರ್ಕ್ ಮುಲಾಮು —

ಇಪ್ಪತ್ತು ವರ್ಷಗಳ ನಮ್ಮ ವಿಲಿಯಮ್ ಎಂಜ್ ಕೋ ರವರ ರಿಜಿಸ್ಟರ್ ಮಾಡಲ್ಪಟ್ಟ ಟ್ರೇಡ್‌ಮಾರ್ಕು ರಿಂಗ್‌ಮಾರ್ಕ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸವಾಗಿದೆ

ಅಮೃತಾಂಜನ ಡಿಪೋವಿನ ಟ್ರೇಡ್‌ಮಾರ್ಕ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂದು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಆರ್ಡರು ಕೊಟ್ಟಲ್ಲಿ ಕೆಲಸ ಮಾಡಿ ಕೊಡಲಾಗುವುದು

PRINTED BY S. S. KARANTH AT THE ... PRESS UDIPI AND PUBLISHED BY K. H. SHETTY AT NAVAYUGA OFFICE ...

[Regi]stered No M 3618 — 4-4-1940

ನವಯುಗ
NAVAYUGA

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಛೇರಿ— ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

ಭದ್ರತೆಯಿಂದಲೂ, ಖಾತ್ರಿಯುಳ್ಳ ನಫೆ ಹಂಚಿಕೆಯಿಂದಲೂ, ಜಾಗ್ರತೆಯಾಗಿ ಹಕ್ಕುಗಳನ್ನು ಕೊಡುವುದರಿಂದಲೂ ಮತ್ತು ಉದಾರವಾದ ಜೀವವಿಮೆಯ ನಿಯಮಗಳಿಂದಲೂ ಈ ಸಂಸ್ಥೆಯು ಪ್ರಖ್ಯಾತಿಪಡೆದಿರುತ್ತದೆ.

ಪ್ರೊಫೆಸರ್ ಕೆ ಬಿ ಮಾಧವ, ಎಂ ಎ, ಎಫ್ ಆರ್ ಎ ಎಸ್, ಎ ಐ ಎ (ಲಂಡನ್)
ಪ್ರೊಫೆಸರ್, ಮಹಾರಾಜ ಕಾಲೇಜು, ಮೈಸೂರು ಇವರ್ಕ್ರದ ರಿಯವರ ಅಭಿಪ್ರಾಯ ಸಾರಾಂಶ

"ಕಳೆದ ೧೦ ವರ್ಷಗಳಿಂದ ನಿಮ್ಮ ಸಂಘವು ಬಹಳವಾಗಿ ಮುಂದುವರಿಯುತ್ತಿರುವುದಲ್ಲದೆ ಕಳೆದ ಮೂರು ವರ್ಷಗಳಿಂದ ಆಡಳಿತದ ವೆಚ್ಚ, ಬಡ್ಡಿಯ ಫಲ, ದಸ್ತಾದ ಪಾಲಿಸಿಗಳ ಸಂಖ್ಯೆ ಇವೇ ಮೊದಲಾದ ಜೀವವಿಮೆಯ ನಿಯಮಗಳನ್ನು ಉತ್ತಮಗೊಳಿಸಲು ಸಹಕಾರಿಯಾಗುವ ವಿಷಯಗಳಲ್ಲಿ ಹೊಂದಿರುವ ಅಭಿವೃದ್ಧಿಯು ತೃಪ್ತಿಕರವಾಗಿದೆ ... ಸೌಕರ್ಯ ಸಹಿತವಾದ ಅಭಿವೃದ್ಧಿಗೆ ಉದಾಹರಣೆಯಾಗಿರುವ ಏಷ್ಯಾಟಿಕ್ಕಿನ ಅಪ್ರತಿಹತವಾದ ಕಾರ್ಯಕಲಾಪಗಳಿಗಾಗಿ ... ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲು ಉಂಟಾಗುವ ಸಂತೋಷವನ್ನು ಕಳೆದುಕೊಳ್ಳಲಾರೆನು"

ಕೊಟ್ಟಿರುವ ವಿಮಾ ಹಕ್ಕಿನ ಹಣಗಳು: ೫,೦೦,೦೦೦—೦—೦.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

H Venkataramiah, Divisional Superintendent — or — R Purniah, Ag General Manager

The Asiatic Govt. Security Life Assu Co. Ltd.,
Asiatic Building, BANGALORE CITY

ಝಂಡು ಮಲೇರಿಯಾ ಮಿಕ್ಶ್ಚರ್

ಮಲೇರಿಯಾ, ವಿಷಮ್ಯಣಗಳಿಂದುಂಟಾಗುವ ಎಲ್ಲಾ ತರದ ಕಠಿಣ ಜ್ವರಗಳಿಗೆ

ಖಾತ್ರಿಯಾದ ಸಿದ್ಧೌಷಧ

ಕ್ರಯ: ಆಣೆ 0—14—0 ಮಾತ್ರ.

ಸ್ಥಳೀಯ ಏಜಂಟರು – ಪಿ. ಎ. ಪೈ ಬ್ರದರ್ಸ್.
ಕಾರ್ಕಳದ ಏಜಂಟರು.– ವಿ. ವಿ. ಶೆಣೈ, ಕಮಿಸ್ಟ್ರ್ಸ್.

ಮಂಗಳೂರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಇತರ ಮುಖ್ಯ ಸ್ಥಳಗಳಿಗೂ ಏಜಂಟರು ಬೇಕಾಗಿದ್ದಾರೆ.

ಶರ್ತಗಳಿಗೂ ಏಜನ್ಸಿಗಳಿಗೂ ಮುಖ್ಯ ಏಜಂಟರಿಗೆ ಬರೆಯಿರಿ —

ದಾಮೋದರ್ ಎಂಡ್ ಕೊ,
ಮುಖ್ಯ ಏಜಂಟರು,
78 ಚೀನಾ ಬಜಾರ್ ರೋಡ್, ಜಿ. ಟಿ. ಮದರಾಸು

ಶಿಬಿರಾಸು ಅಷ್ಟ

ZANDU

DAMODER & CO,
75 China Bazaar Road, G T MADRAS

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಶೀಘ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು

ಕ್ರಯ:- 40 ಮಾತ್ರೆಗಳ ಡಬ್ಬಿ 1ಕ್ಕೆ ರೂ 1—0—0

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

Your anxiety in finding a sound and progressive Life Office both to insure or to represent will end on consultation with

Branch Secretary
The New Guardian of India Life Ins Co Ltd, Madras.
MANGALORE Branch

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ “ಸಂಜೀವನ” ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ “ದೇವಾನುಮೋದಿತ” ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯು, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾಲಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಗುವದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು “ದೇವಾನುಮೋದಿತ ಔಷಧಿ” ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಆಶ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್”ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್ ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯ ತರಿಸಿಕೊಳ್ಳಿರಿ.

‘ಹವನನ್’ ಹೆಮೊರೈಡ್ – ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇವಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, “ಹೆವನನ್” ಎಂಬ ಹೆಮೊರೈಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4-0 ವಿ ಪಿ ಬೇರೆ.

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಸರಿಯಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B & C. I. Ry. BOMBAY PRESIDENCY.

ಜಯಪಿಟ್ಟು, ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

ESTD. 1921 ಸ್ಥಾಪನೆ

FOUNDER
SRI. A B SHETTY, M. L. A.,
ಸಂಸ್ಥಾಪಕರು
ಶ್ರೀ. ಎ. ಬಿ. ಶೆಟ್ಟರು, ಎಂ ಎಲ್ ಎ

ಸಂಪಾದಕ
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ 3-4-0
6 ತಿಂಗಳಿಗೆ - ರೂ. 1-12-0
ಚಂದಾ ಮುಂಗಡವಾಗಿ ಕಳುಹಿಸಬೇಕು.

ಸಹ ಸಂಪಾದಕ
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೩೦

ಉಡುಪಿ, ಗುರುವಾರ, ೪-೪-೧೯೪೦.
UDIPI, THURSDAY, 4-4-1940.

VOL. 19
No. 30

ಜರ್ಮನಿಗೆ ರಶ್ಯದ ಅಗತ್ಯವಿದೆ

ರಶ್ಯದ ವಿದೇಶ ಮಂತ್ರಿ ಎಮ್. ಮೊಲೊಟೊವರು ಈಸ್ಟರ್ ರಜೆಯಲ್ಲಿ ಬರ್ಲಿನಿಗೆ ಹೋಗಲಿರುವರೆಂಬ ಸುದ್ದಿಯು ಸುಳ್ಳಾಗಿರುತ್ತದೆ. ಯುದ್ಧದಲ್ಲಿ ಜರ್ಮನಿಗೆ ರಶ್ಯವು ನಿರಂತರ ಸಹಾಯ ನೀಯುವುದು ನಿಶ್ಚಯವೆಂದು ಹೇಳಬರುವುದಿಲ್ಲ. ಹರ್ ವಾನ್ ರಿಬೆಂಟ್ರೋಫರೇ ಮೂರನೇ ಸಲ ಮೋಸ್ಕೋವಿಗೆ ಹೋಗುವುದೆಂದರೆ ಜರ್ಮನಿಯ ಪ್ರತಿಷ್ಠೆಗೆ ಕುಂದೆಂದು ನಂಬಲಾಗಿದೆ. ಆದುದರಿಂದ ಎಮ್. ಮೊಲೊಟೊವರು ಜರ್ಮನಿಯನ್ನು ಅಥವಾ ಪೋಲಂಡನ್ನು ಸಂದರ್ಶಿಸುವಂತೆ ಜರ್ಮನರು ಬಹಳ ಪ್ರಯತ್ನ ಮಾಡಿದರೆಂದೂ, ಆದರೆ ಸೋವಿಯೆಟ್ ಸರಕಾರವು ನಿರಾಕರಿಸಿ ಬಿಟ್ಟಿತೆಂದೂ ತಿಳಿದು ಬರುತ್ತದೆ. ಜರ್ಮನಿಗೆ ರಶ್ಯವು ಅತ್ಯಗತ್ಯವಾಗಿ ಬೇಕಾಗಿದೆ. ಆದರೆ ರಶ್ಯಕ್ಕೆ ಜರ್ಮನಿಯು ಬೇಕಾಗಿರುವುದಿಲ್ಲ. ಆದುದರಿಂದ ಹರ್. ವಾನ್ ರಿಬೆಂಟ್ರೋಫರು ಪುನಃ ಮೋಸ್ಕೋವಿಗೆ ಹೋಗತಕ್ಕದೆಂದು ಸೋವಿಯೆಟ್ ಸರಕಾರದ ಅಭಿಪ್ರಾಯವಿರುವಂತಿದೆ

ಸ್ಕಾಂಡಿನೇವಿಯದಲ್ಲಿ ಬ್ರಿಟಿಷ್ ನೌಕಾಪಡೆ

ಮುಖ್ಯವಾಗಿ ಜರ್ಮನಿಗೆ ಸ್ವೀಡನಿನಿಂದ ಹೋಗುವ ಕಬ್ಬಿಣವನ್ನು ತಡೆಗಟ್ಟುವ ಉದ್ದೇಶದಿಂದ ಬ್ರಿಟಿಷ್ ನೌಕಾಪಡೆಯು ಸ್ಕಾಂಡಿನೇವಿಯ ಸಮುದ್ರ ಕರಾವಳಿಯತ್ತ ಹೋಗಿರುವುದೆಂದು ತಿಳಿದು ಬರುತ್ತದೆ. ಇನ್ನು ಮಿತ್ರರಾಷ್ಟ್ರಗಳು ಜರ್ಮನಿಯ ಮೇಲಿನ ಸಮುದ್ರ ಮುತ್ತಿಗೆಯನ್ನು ಮತ್ತಷ್ಟು ಬಲಗೊಳಿಸಿ ನೆಲಮಾರ್ಗವಾಗಿಯೂ ಅದಕ್ಕೆ ಸಾಮಾನುಗಳು ಬಾರದಂತೆ ತಡೆಗಟ್ಟುವ ಕುರಿತು ಆಲೋಚಿಸುತ್ತಿದ್ದಾರೆ ಸ್ಕಾಂಡಿನೇವಿಯ ಸಮುದ್ರ ಕರಾವಳಿಯಲ್ಲಿ ಜರ್ಮನ್ ಮತ್ತು ಮಿತ್ರ ರಾಷ್ಟ್ರಗಳ ನೌಕಾಪಡೆಗೆ ಬೇಗನೆ ಯುದ್ಧವಾಗುವ ಸಂಭವ ತೋರುತ್ತದೆ

ಇಟಲಿ ಹಂಗೇರಿಗಳ ಮೈತ್ರಿ

ಇಟಲಿ ಮತ್ತು ಹಂಗೇರಿಗಳೊಳಗೀಗ ಬಹಳ ಸ್ನೇಹವುಂಟಾಗಿದೆ. ಹಂಗೇರಿಯ ಪ್ರಧಾನ ಮಂತ್ರಿಗಳಾದ ಕೌಂಟ್ ಟೆಲೆಕಿಯವರು ಮಾರ್ಚ ತಾ. ೨೫ರಲ್ಲು ರೋಮ್ ಪಟ್ಟಣಕ್ಕೆ ಹೋಗಿ ಕೌಂಟ್ ಸಿಯಾನೋರಿಂದ ಸ್ವಾಗತೀಕರಿಸಲ್ಪಟ್ಟು ಅವರೊಡನೆ ದೀರ್ಘ ಸಮಯ ಮಾತುಕತೆ ನಡಿಸಿದರು ತಾ. ೨೬ರಲ್ಲು ಮುಸಲೋನಿಯವರನ್ನು ಕಂಡು ಮಾತಾಡಿದರು. ಈಗಿನ್ನು ಯುರೋಪಿನ ರಾಷ್ಟ್ರಗಳಿಗೆ ರಶ್ಯ ಜರ್ಮನಿ ಮತ್ತು ಇಟಲಿಗಳೊಂದುಗೂಡಿ ರಕ್ಷಣೆಯ ಭರವಸೆಕೊಡುವುದೇ ಈ ಮಾತುಕತೆಯ ಮುಖ್ಯ ವಿಷಯವಿದ್ದಿತೆಂದು

ಸಮಾಚಾರ ಸಂಗ್ರಹ

ನಂಬಲಾಗಿದೆ.

ಫಿನ್ಲೆಂಡಿನ ಪುನರ್ಘಟನೆ.

ಫಿನ್ಲೆಂಡಿನ ಎಮ್. ರೈಟಿಯವರ ಮಂತ್ರಿ ಮಂಡಲವು ಒಮ್ಮೆ ರಾಜಿನಾಮೆ ಕೊಟ್ಟು ಪುನಃ ರೈಟಿಯವರೇ ಪ್ರಧಾನರಾಗಿ ಮಂತ್ರಿ ಮಂಡಲವನ್ನೇರ್ಪಡಿಸಿರುವರು ಫಿನ್ಲೆಂಡಿನ ಪುನರ್ಘಟನೆಯಲ್ಲಿ ನಿರತವಾಗಿರುವ ಸರಕಾರಕ್ಕೆ ಲೀಗ್ ಆಫ್ ನೇಶನ್ಸಿನವರು ಸಹಾಯಮಾಡಬೇಕೆಂದು ವಿನಂತಿಮಾಡಿಕೊಳ್ಳಲಾಗಿದೆ. ಈಗ ಫಿನ್ನಿಶ್ ಸರಕಾರವು ರಶ್ಯದೊಡನೆ ಮಾಡಿಕೊಂಡ ಒಪ್ಪಂದದ ಮೇರೆಗಿನ ಪ್ರದೇಶವನ್ನೆಲ್ಲಾ ಬಿಟ್ಟುಕೊಟ್ಟಿರುವುದು. ಹೇಂಗೋ ಪಟ್ಟಣವನ್ನು ರಶ್ಯನರು ಪ್ರವೇಶಿಸಿದಾಗ ಒಬ್ಬನೇ ಒಬ್ಬ ಫಿನ್ನನಾದರೂ ಅಲ್ಲಿರಲಿಲ್ಲ ಫಿನ್ನಿಶ್ ಸರಕಾರದ ಪ್ರತಿನಿಧಿಗಳು ಮೋಸ್ಕೋ ಪಟ್ಟಣಕ್ಕೆ ಹೋಗಿ ರಶ್ಯದೊಡನೆ ವ್ಯಾಪಾರ ಸಂಬಂಧವಾಗಿ ನಡಿಸುತ್ತಿದ್ದ ಮಾತುಕತೆಯು ಇನ್ನೂ ಮುಗಿದಿರುವುದಿಲ್ಲ.

ಗುಜರಾಥಿನಲ್ಲಿ ಗೀತಾಮಂದಿರ ಸ್ಥಾಪನೆ.

ಗೀತಾಬೋಧಕರಾಗಿ ಜನಮೆಚ್ಚಿಗೆ ಪಡೆದಿರುವ ಸ್ವಾಮಿ ವಿದ್ಯಾನಂದಜಿ ಮಹಾರಾಜರವರು ಗುಜರಾಥಿನಲ್ಲಿ ಗೀತಾಮಂದಿರಗಳನ್ನು ಸ್ಥಾಪಿಸುವ ಚಳವಳ ಹೂಡಿರುವರು. ರೂ 25,000 ವ್ಯಯಿಸಿ ಬರೋಡದ ಕನಾಲಿ ಎಂಬಲ್ಲೊಂದು ಮಂದಿರವನ್ನು ಇಷ್ಟರಲ್ಲೇ ಸ್ಥಾಪಿಸಿರುವರು ರೂ 35,000 ವ್ಯಯಿಸಿ ಸೆನಿಟೋರಿಯಂವೊಂದನ್ನು ಕೂಡಾ ಅದಕ್ಕೆ ತಾಗಿ ಕಟ್ಟಿಸಿರುವರು ರೂ 60,000 ವ್ಯಯಿಸಿ ಬರೋಡದಲ್ಲಿ ಇನ್ನೊಂದು ಮತ್ತು ರೂ. 2,00,000 ವ್ಯಯಿಸಿ ಅಹಮ್ಮದಾಬಾದಿನಲ್ಲೊಂದು ಗೀತಾಮಂದಿರ ಸ್ಥಾಪಿಸಲಿರುವರು. ಇಲ್ಲಿ ಗೀತಾ ಸಂಬಂಧವಾದ ಸಾಹಿತ್ಯವನ್ನೆಲ್ಲಾ ಸಂಗ್ರಹಿಸಿ ವ್ಯಾಖ್ಯಾನ ನಡಿಸಲ್ಪಡುವವು

ಶ್ರೀ ಜಯಪ್ರಕಾಶರಿಗೆ 9 ತಿಂಗಳ ಶಿಕ್ಷೆ.

ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಮಾಜಿ ಜನರಲ್ ಸೆಕ್ರಿಟರಿಗಳಾದ ಶ್ರೀ ಜಯಪ್ರಕಾಶ ನಾರಾಯಣರಿಗೆ ಇಂಡಿಯಾ ಡಿಫೆನ್ಸ್ ಆಕ್ಟಿನಮೇರೆಗೆ 9 ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ. ಇವರನ್ನು ಬಿ ಕ್ಲಾಸ್ ಕೈದಿಯಾಗಿ ಪರಿಗಣಿಸಲಾಗುವುದು.

ಕೆನಡ ದೇಶದ ಚುನಾವಣೆ.

ಮಾರ್ಚ ತಾ 26ರಲ್ಲಿ ಕೆನಡಾ ದೇಶದಲ್ಲಿ ನಡೆದ ಚುನಾವಣೆಯಲ್ಲಿ ಲಿಬರಲ್ ಪಕ್ಷದವರೇ ಪ್ರಬಲ ವಿಜಯ ಪಡೆದು ಆರಿಸಿ ಬಂದಿರುತ್ತಾರೆ. ಕೆನಡದ ಕನ್ಸರ್ವೇಟಿವ ಪಕ್ಷದ ನಾಯಕರಾದ ಮಿ ಮೇನಿಯನರೇ ಪರಾಜಿತರಾಗಿರುತ್ತಾರೆ ಒಟ್ಟು 245 ಸೀಟುಗಳ ಪೈಕಿ ಲಿಬರಲ್ ಪಕ್ಷದವರು 172 ಸೀಟುಗಳನ್ನು ಪಡೆದಿರುತ್ತಾರೆ.

ಅಮೆರಿಕದಲ್ಲಿ ಗಾಂಧಿಜಿಯವರ ಕುರಿತು ಮಾನ್ಯತೆ

ಮದ್ರಾಸಿನ ಆರ್ಚಬಿಶೊಪರಾದ ಡಾಕ್ಟರ್ ಎಲ್. ಮಥಾಯಸ್ ಮತ್ತು ರೈಟ್ ರೆವರೆಂಡ್ ಮಾರ್ಗರೆಟ್ ಥೋಮಸರು ಕಳೆದ ಸೆಪ್ಟಂಬರ ತಿಂಗಳಲ್ಲಿ ಅಮೇರಿಕಕ್ಕೆ ಹೋಗಿ ಅಲ್ಲಿ 5 ತಿಂಗಳು ಸಂಚರಿಸಿ ಪಡೆದ ಅನುಭವವನ್ನು ಪ್ರಕಟಿಸಿರುವರು. ಅಮೇರಿಕದಲ್ಲಿ ಹಿಂದು ದೇಶದ ಕುರಿತು ತುಂಬಾ ಅಭಿಮಾನವಿರುವುದು. ಅಲ್ಲಿಯ ಪತ್ರಿಕೆಗಳು ಹಿಂದೀ ವಿಷಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತವೆ ಗಾಂಧಿಜಿಯವರ ಕುರಿತು ಅಮೇರಿಕಾದವರಿಗೆ ಬಹಳ ಮಾನ್ಯತೆಯಿದೆ. ಅವರ ಜೀವನ ಮತ್ತು ತತ್ವಗಳ ಕುರಿತು ಎಲ್ಲೆಲ್ಲಿಯೂ ಜನರು ಆರ್ಚಬಿಶಪರೊಡನೆ ಪ್ರಶ್ನಿಸುತ್ತಿದ್ದರು. ಗಾಂಧಿಜಿಯವರ ಭಾಷಣ ಮತ್ತು ಲೇಖನಗಳನ್ನು ಅಮೆರಿಕಾದ ಪತ್ರಿಕೆಗಳು ಹೆಚ್ಚಾಗಿ ಪ್ರಕಟಿಸುತ್ತಿವೆ. ನ್ಯೂಯೋರ್ಕಿನಲ್ಲೊಂದು ಹಿಂದಿ ಹೋಟೆಲಿದೆ. ಅದರಲ್ಲಿ ಕೆಲಸಮಾಡುವ ಹಿಂದುಗಳು, ಮುಸಲ್ಮಾನರು ಮತ್ತು ಕ್ರೈಸ್ತರು, ಪಾರ್ಸಿಗಳೇ ಮೊದಲಾದವರು ಹಿಂದು ಮಾತೆಯ ಪುತ್ರರೆಂಬ ಬಂಧುಭಾವನೆಯಿಂದ ನಡೆಯುತ್ತಿದ್ದಾರೆ. ಹಿಂದೀಯರು ತಮ್ಮೊಳಗೇಕೆ ಕಚ್ಚಾಡಿಕೊಳ್ಳಬೇಕೆಂದೇ ಅವರ ಪ್ರಶ್ನೆ. ಬೊಂಬಾಯಿಗೆ ಇಳಿದೊಡನೆಯೇ ಭಾರತ ಮಾತೆಗೆ ತನ್ನ ವಂದನೆಯನ್ನರ್ಪಿಸಿರೆಂದು ಈ ಹೋಟೆಲಿನ ಮ್ಯಾನೇಜರು ಆರ್ಚಬಿಶೋಪರೊಡನೆ ಕೇಳಿಕೊಂಡರಂತೆ.

ಮುಸ್ಲಿಮ್ ಲೀಗ್ ಮಂತ್ರಿ ಮಂಡಳವಲ್ಲ

ಸಿಂಧಿನ ಪ್ರಧಾನ ಮಂತ್ರಿಗಳಾದ ಮಿಸ್ಟರ್ ಬಂಡೆಹಲಿ ಖಾನರು, ಮುಸ್ಲಿಮ್ ಲೀಗ್ ಮತ್ತು ಹಿಂದು ಸ್ವತಂತ್ರ ಪಕ್ಷಗಳು ಒಟ್ಟು ಸೇರಿ ನ್ಯಾಶನಲಿಸ್ಟ ಪಕ್ಷವನ್ನು ಸ್ಥಾಪಿಸಿ, ರಾಷ್ಟ್ರೀಯ ಧೋರಣೆ, ಕಾರ್ಯಕ್ರಮ ಮತ್ತು ಮನೋವೃತ್ತಿಯಿಂದ ಹೊಸ ಮಂತ್ರಿ ಮಂಡಲವನ್ನು ಸ್ಥಾಪಿಸಿರುವುದಾಗಿದೆ. ಮುನಿಸಿಪಾಲಿಟಿಗಳಲ್ಲಿ ಸಂಯುಕ್ತ ಮತದಾನವನ್ನು ಜಾರಿಗೆ ತರುವ ಮಸೂದೆಯು ಎಸೆಂಬ್ಲಿ ಮುಂದೆ ತರಲ್ಪಟ್ಟಿದೆ. ರಾಷ್ಟ್ರೀಯ ಐಕ್ಯ, ಹಿಂದು ಮುಸಲ್ಮಾನ ಸೌಹಾರ್ದ, ಹಿಂದುಗಳ ಸುರಕ್ಷಿತತೆಯೇ ತನ್ನ ಮಂತ್ರಿ ಮಂಡಲದ ಉದ್ದೇಶವಾಗಿದೆ ಆದುದರಿಂದ ಆ ಕುರಿತು ತಪ್ಪು ಅಭಿಪ್ರಾಯವನ್ನೇನೂ ಮಾಡಿಕೊಳ್ಳಬಾರದೆಂದು ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನ ಆಜಾದ್, ಸರ್ದಾರ್ ವಲ್ಲಭಾಯಿ, ಆಚಾರ್ಯ ಕೃಪಲಾನಿ, ಬಾಬು ರಾಜೇಂದ್ರ ಪ್ರಸಾದ್ ಮತ್ತು ಪಂಡಿತ ಜವಾಹರಲಾಲರಿಗೆ ತಂತಿಬಿಟ್ಟಿರುವರು ಸಿಂಧಿನ ಕಾಂಗ್ರೆಸ್ ಪಕ್ಷೀಯರು ಉಭಯ ಸಂಕಟದಲ್ಲಿ ಬಿದ್ದಿದ್ದಾರೆ. ಹೊಸ ಮಂತ್ರಿ ಮಂಡಲವನ್ನು ವಿರೋಧಿಸಬೇಕೋ ಬೇಡವೋ ಎಂಬುದು ಅವರಿಗೊಂದು ಸಮಸ್ಯೆಯಾಗಿದೆ.

ತುಳುನಾಡ್ ಬೇಂಕ್
ಆಫ್ ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ

Authorised & Issued Capital	...	Rs	1,00,000
Subscribed & Paid up Capital	...	Rs	31,340
Reserves & other Funds	...	Rs	22,052

ನಿರಖು ಠೇವಣಾತಿಗಳು ರಿಯಾಯತಿ ದರದ
ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.
ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳೂ ಮಾಡಲ್ಪಡುತ್ತವೆ.
ಹೆಚ್ಚಿನ ವಿವರಗಳಿಗೆ ಬರೆಯಿರಿ.

THULUNAD BANK
OF SUPPLY AGENCY LIMITED.

ರುಮೇನಿಯದ ಈಗಿನ ರಾಜ ಕೈರೋಲ್!

ತನ್ನ ದೇಶಕ್ಕಾಗಿ ಮಾಡಿದ ಅಪಾರ ಸೇವೆ

ಇಂದು ಯೂರೋಪಿನ ಸರ್ವಾಧಿಕಾರಿಗಳ ದೃಷ್ಟಿಯು ರುಮೇನಿಯಾದ ಮೇಲೆ ಬಿದ್ದಿದೆ. ಇದರ ರಾಜನಾದ ಕೈರೋಲನು ತುಂಬ ರಾಜಕಾರಣ ಪಟುವು. ಅವನು ಒಬ್ಬ ಯುವತಿಯ ಪ್ರೇಮಕ್ಕಾಗಿ ತನ್ನ ಉತ್ತರಾಧಿಕಾರತ್ವವನ್ನೇ ತ್ಯಜಿಸಿ ಪುನಃ ಯಾವ ರೀತಿ ರಾಜ್ಯವನ್ನು ಹೊಂದಿದನು ಮತ್ತು ಹೇಗೆ ರೈತರನ್ನು ತೃಪ್ತಿಗೊಳಿಸಿದನು ಎಂಬುದನ್ನು ಈ ಲೇಖನದಲ್ಲಿ ಸ್ವಾರಸ್ಯವಾಗಿ ವರ್ಣಿಸಲ್ಪಟ್ಟಿದೆ

ಕೆಲವು ದಿನಗಳಿಂದೀಚೆಗೆ ರುಮೇನಿಯವು ಯೂರೋಪಿನ ರಾಜಕಾರಣದ ಕೇಂದ್ರವಾಗಿದೆ. ದಕ್ಷಿಣ ಪೂರ್ವ ಯೂರೋಪಿನಲ್ಲಿ ಇದು ಪ್ರಧಾನವಾದ ದೇಶವಾಗಿದೆ ಈ ಪ್ರಧಾನತೆಗೆ ಇದರ ಪ್ರಾಕೃತಿಕ ಸಂಪತ್ತು ಮತ್ತು ಭೌಗೋಳಿಕ ಸ್ಥಿತಿಯೇ ಕಾರಣ. ಇದು ತನ್ನಲ್ಲಿರುವ ಎಣ್ಣೆ ಮತ್ತು ಗೋಧಿಗಳಿಂದ, ಶಕ್ತಿಪಿಪಾಸುಗಳಾದ ಸರ್ವಾಧಿಕಾರಿಗಳ ಕಣ್ಣಿಗೆ ಮುಳ್ಳಾಗಿ ಕುಳಿತಿದೆ. ಪೂರ್ವದಲ್ಲಿ ರಷ್ಯ, ಪಶ್ಚಿಮದಲ್ಲಿ ಜರ್ಮನಿಗಳು ಈ ದೇಶವನ್ನು ನುಂಗುವ ಯತ್ನಮಾಡುತ್ತಿವೆ. ಚಿಕ್ಕದಾದ ಹಂಗೇರಿಯು ಸಹ ಸುಮ್ಮನಿಲ್ಲ. ದಕ್ಷಿಣದಲ್ಲಿ ಬಲ್ಗೇರಿಯವು ಕಾದಿದೆ ಆದರೆ ರುಮೇನಿಯವು ಇದುವರೆಗೂ ತನ್ನ ಅಸಮ ಸಾಹಸ ಮತ್ತು ದೃಢತೆಗಳಿಂದ ತನ್ನ ಶತ್ರುಗಳನ್ನು ವಿರೋಧಿಸುತ್ತಿದೆ. ಇದೆಲ್ಲ ಶ್ರೇಯಸ್ಸಿಗೂ ಆಲ್ಲಿನ ರಾಜನಾದ ಕೈರೋಲನೇ ಕಾರಣ.

೧೯೩೬ರಲ್ಲಿ ಸಮಗ್ರ ವಿಶ್ವವು ಸಮ್ರಾಟ್ ೮ನೇ ಎಡ್ವರ್ಡರ ಸಿಂಹಾಸನ ತ್ಯಾಗದಿಂದ ಆಶ್ಚರ್ಯಚಕಿತವಾಗಿದ್ದಿತು. ಪ್ರೇಮದ ವೇಗವು ಇಷ್ಟೊಂದು ಪ್ರಬಲವಾಗಿರುವುದೆಂಬುದು ವಿಶ್ವಕ್ಕೆ ನೆನಪಿಗೆ ಬಂದಿತು. ಆದರೆ ಇದು ಹೊಸ ವಿಷಯವಲ್ಲ. ಅದಕ್ಕಿಂತ ೧೦ ವರ್ಷ ಮೊದಲು ರುಮೇನಿಯದ ಈಗಿನ ರಾಜ ಕೈರೋಲನು ಪ್ರೇಮ ಮತ್ತು ಸ್ವಾತಂತ್ರ್ಯಗಳನ್ನು ತನ್ನ ಉತ್ತರಾಧಿಕಾರಕ್ಕಿಂತ ಹೆಚ್ಚು ಬೆಲೆಯುಳ್ಳವೆಂದು ತಿಳಿದನು. ಅವನೂ ಸಹ ಒಬ್ಬ ರಮಣಿಗಾಗಿ ತನ್ನ ಉತ್ತರಾಧಿಕಾರವನ್ನು ತ್ಯಾಗಮಾಡಿದ್ದನು. ಆದರೆ ೮ನೇ ಎಡ್ವರ್ಡರ ಸಿಂಹಾಸನ ತ್ಯಾಗಕ್ಕೆ ಒಬ್ಬ ರಮಣಿಯು ಕಾರಣಳಾದಂತೆ ಇವನ ತ್ಯಾಗಕ್ಕೆ ಕಾರಣಳಾದವಳ ಹೆಸರು ಇನ್ನೂ ತಿಳಿದಿರುವುದಿಲ್ಲ.

ಸ್ವಚ್ಛಂದ ಕೈರೋಲ್

ಕೈರೋಲನು ಜನ್ಮದಿಂದಲೇ ಉದ್ದಂಡ ಸ್ವಭಾವದವನು ತನ್ನ ತಾಯಿಗೆ ಒಪ್ಪಿಗೆಯಾಗಿದ್ದ ಹುಡುಗಿಯನ್ನು ವಿವಾಹವಾಗಲು ಒಪ್ಪದೆ ಆಕೆಯ ತಂಗಿಯನ್ನು ಪ್ರೀತಿಸಲಾರಂಭಿಸಿದನು. ಸಸೇಜಾರ್ ಮತ್ತು ರುಮೇನಿಯದ ರಾಜಮಾತೆಯರಿಬ್ಬರೂ ಕೈರೋಲನಿಗೆ ವಿರೋಧವಾದರು. ೨೭ರಲ್ಲಿ ಅವನು ಗ್ರೀಸ್ ರಾಜಕುಮಾರಿಯನ್ನು ವಿವಾಹವಾದನು. ಆಗ ಇವನು ದಾರಿಗೆ ಬಂದನೆಂದೇ ಎಲ್ಲರೂ ತಿಳಿದಿದ್ದರು. ಆಗ ವಗಳ ರಾತ್ರಿಗಳಿಗೆ ರುಜುಮಾಡುವುದು ಅವನಿಗೆ ಸರಿಬೀಳಲಿಲ್ಲ. ಅವನು ಪ್ರೇಮವನ್ನು ಅರಮನೆಯಲ್ಲಿಯೇ ಇಟ್ಟು ಗಂಭೀರತೆಯಿಂದ ರಾಜಕಾರಣವನ್ನು ನಡೆಯಿಸಬಲ್ಲವನಾಗಿದ್ದನು. ಸಂಗೀತದ ಸುಮಧುರ ಗಾನವು ಅವನ ಕಿವಿಗಳಿಗೆ ಸ್ವರ್ಗಸುಖವನ್ನು ಕೊಡುತ್ತಿದ್ದಂತೆಯೇ ಬಡವರ ಆರ್ತನಾದವೂ ಅವನ ಕಿವಿಗೆ ಬೀಳುತ್ತಿತ್ತು. ಬಾಳುವ ವಸ್ತ್ರಗಳನ್ನು ಧರಿಸಿದ್ದ ಕೈರೋಲನು ಉದ್ವಿಗ್ನ ರೈತರ ವಸ್ತ್ರಹೀನರಾದ ಬಾಲಕರನ್ನು ಕಂಡು ಸ್ವಯಂ ನಾಚಿಗೆಪಡುತ್ತಿದ್ದನು. ಆದರೆ ಅವನಿನ್ನೂ ಆಗ ಯುವರಾಜನಾಗಿದ್ದನು.

ಪ್ರೇಮಕ್ಕಾಗಿ ರಾಜ್ಯತ್ಯಾಗ

ಕೈರೋಲನು ಯುವರಾಜನಾಗಿದ್ದಾಗಿನಿಂದಲೂ ಅವನ ಜನರಲ್ ಆದ ಬ್ರೆಟಿಯಾನುನೊಡನೆ ವಿರೋಧದಿಂದಿದ್ದನು. ಒಂದು ಸಾರಿ ಯುವಕ ಕೈರೋಲನು ಒಬ್ಬ ಯಹೂದ್ಯಳೊಡನೆ ಪ್ರೇಮ ಸಂಬಂಧವಾಡಿದ್ದನು. ಇದು ಪ್ರಜೆಗಳಿಗೂ ತಿಳಿಯಿತು. ಪ್ರಜೆಗಳು ವಿರೋಧಿಗಳಾದರು. ಮಂತ್ರಿಯ ಪ್ರಭಾವವೇ ಪ್ರಜೆಗಳ ಮೇಲಿತ್ತಾಗಿ, ಕೈರೋಲನ ಯತ್ನವೆಲ್ಲ ವಿಫಲವಾಯಿತು.

ಕೈರೋಲನು ತನ್ನ, ತನ್ನ ಪ್ರೇಯಸಿಯ, ತನ್ನ ದೇಶದ ನಿಂದೆಯಾಗುತ್ತಿದ್ದುದನ್ನು ನೋಡಿ, ಒಂದು ಕಠೋರ ಪ್ರತಿಜ್ಞೆ ಮಾಡಿದನು. ಅವನು ತನ್ನ ಉತ್ತರಾಧಿಕಾರಕ್ಕೆ ತ್ಯಾಗಪತ್ರವನ್ನು ಬರೆದು ಮಂತ್ರಿಗೆ ಕೊಟ್ಟು, ವಿದೇಶ ಸಂಚಾರಕ್ಕೆ ಹೊರಟನು ಕೈರೋಲನ ಸಣ್ಣ ಮಗುವಾದ ಮಾಯಿಕೇಲನಿಗೆ ಆ ಉತ್ತರಾಧಿಕಾರವು ದೊರಕಿಯಿತು. ೨೭ರಲ್ಲಿ ಫರ್ಡಿನೆಂಡಿನ ಮರಣವಾಗಿ, ಅದಾದ ೫ ತಿಂಗಳಲ್ಲಿಯೇ ಪ್ರಧಾನನೂ ಸತ್ತನು. ಆಗ ರಾಷ್ಟ್ರೀಯ ರೈತರು ಬಲಯುತರಾಗಿದ್ದು, ಕೈರೋಲನೇ ರಾಜನಾಗಬೇಕೆಂದು ತೀರ್ಮಾನಿಸಿದರು.

ಸ್ವದೇಶಾಗಮನ

ಕೈರೋಲನು ಸಿಂಹಾಸನವನ್ನೇರಿದ ಕೂಡಲೆ, ತನ್ನ ಉದ್ದಂಡತನದಿಂದ ಕೆಟ್ಟ ಹೆಸರನ್ನು ಹೊರಬೇಕಾಯಿತು ತನ್ನ ಪ್ರೇಯಸಿಯನ್ನು ಬಿಡಲಾರದೆ ಕರೆಸಿಕೊಂಡನು. ಮೇಡಂ ಲುಪ್ಸೆಕೂಳು ರಾಜನೊಡನೆ ಇರುತ್ತಿದ್ದಳು. ಜರ್ಮನಿಯಂತೆ ಇಲ್ಲಿಯೂ ಶಕ್ತಿಶಾಲಿ ದಳದ ಸ್ಥಾಪನೆಯಾಯಿತು.

ತನ್ನ ಸರ್ವಾಧಿಕಾರವನ್ನು ರಕ್ಷಿಸಿಕೊಳ್ಳಲು ಇವನು ಉತ್ತಮವಾದ ಕಾರ್ಯಗಳನ್ನು ಮಾಡಿದ್ದನು. ಯುವಕರ ಚಳವಳಿಯು ಜನ್ಮಧಾರಣೆಮಾಡಿತು. ವಿಶ್ವವಿದ್ಯಾಲಯದ ಯುವಕ ಯುವತಿಯರು ಬೇರೆ ದಳಗಳನ್ನು ಮಾಡಿಕೊಂಡರು. ಎಲ್ಲರೂ ರೈತರ ಬಳಿಗೆ ಹೋಗಿ ಉಪನ್ಯಾಸಮಾಡುವುದು, ಗ್ರಾಮ ಸುಧಾರಣೆಗೆ ಸಲಹೆಕೊಡುವುದು ಮುಂತಾದ ಕೆಲಸಗಳಿಂದ ಕೈರೋಲನ ಹೆಸರು ಪ್ರಸಿದ್ಧಿಗೆ ಬಂದಿತು.

ಕೈರೋಲನು ತನ್ನ ದೇಶವನ್ನೇನೋ ಸುಧಾರಿಸಿರುವನಾದರೂ, ತನ್ನ ಪ್ರಜೆಗಳಿಗೆ ರಾಜಕೀಯ ಶಿಕ್ಷಣವನ್ನು ಕೊಡುತ್ತಿಲ್ಲ. ತಾನೇ ಸರ್ವಾಧಿಕಾರಿಯಾಗಿರುವನು. ಇವನಾದ ಮೇಲೆ ದೇಶದ ನಾವೆಯನ್ನು ಸುರಕ್ಷಿತವಾಗಿ ನಡೆಸಬಲ್ಲವರು ದೊರೆಯುವುದುದು ದುರ್ಲಭ. **S.**

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ಎಕ್ಸೈಜ್ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ಎಕ್ಸೈಜ್ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕೇವಲ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು, ಆದರಿಂದ ತಯಾರಿಸಿದ ಸಾರಾಂಶದ ನಿಜಕ್ಕವು ಕೇಲವೇ ನಿಮಿಷಗಳಲ್ಲಿ ತಕ್ಕ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತನಿಖೆಯಾಗಲಿಲ್ಲವೆಂದಾದರೆ ಹಾಜರು ವಾಗುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸಕಾಣಿಸಿದವರೊಡನೆ ಪತ್ರ ವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

THE

BOMBAY LIFE ASSURANCE Company Limited.

[ESTD. 1908]

COMPARE

Your Life Assurance with any other property you possess what is its guarranteed value

If you live–today -a few years more–when you are old?
If you die–to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	**Rs. 1,44,91,000**
Life Assurance Fund	**Rs. 1,17,69,748**
Total Assets	**Rs. 1,31,28,998**

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS.	Visweswarapuram Circle, BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

NOTICE.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 15/1940

ರಾಮಯ್ಯ ಪೂಜಾರಿ ಮುಂತ ಪೂಜಾರಿಗಳ ವ.ಗ ಮಂಗಳೂರು ತಾಲ್ಲೂಕು ಕರ್ನಿರೆ ಗ್ರಾಮದಲ್ಲಿರುವವ } ವಾದಿ

ಮತ್ತು

ಯು. ಸೋಮಯ್ಯ ಉದ್ಯಾವರ ಗ್ರಾಮದ ಅಣ್ಣಯ್ಯ ಪೂಜಾರಿಗಳ ಮಗ ಕ್ಲಾರ್ಕ ಪಾಲಿ ಮಂಗಳೂರು ತಾಲ್ಲೂಕು ಕಂಕನಾಡಿ ಪೋಸ್ಟಾಫೀಸ ನಲ್ಲಿಯವರು. } ಪ್ರತಿವಾದಿ

ಇವರೊಳಗೆ

ಮೇಲಿನ ದಾವೆಯಲ್ಲಿ ವಾದಿಯು ಪ್ರತಿವಾದಿಯ ಮೇಲೆ ಆತನು ತಾರೀಕು 10-7-1938ರಲ್ಲು ರೂಪಾಯಿ 175ಕ್ಕೆ ಬರ್ಸಿಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಮೇಲೆ ರೂಪಾಯಿ 191-12-6ಕ್ಕೆ ದಾವೆಮಾಡಿ ಇದ್ದ, ದಾವೆಯು ತಾರೀಕು 15-4-40 ಕ್ಕೆ ಇಟ್ಟಿರುತ್ತದೆ. ಆ ದಿವಸ ಬೆಳಗ್ಗೆ 10 ಘಂಟೆಗೆ ಈ ಕೋರ್ಟಿನ ಮುಂದೆ ಪ್ರತಿವಾದಿಯು ಹಾಜರಾಗದಿದ್ದರೆ ಆವನನ್ನು ಏಕಪಕ್ಷವಾಗಿ ದಾವಾ ತೀರ್ಮಾನ ಮಾಡಲ್ಪಡುವುದು.

ಕೋರ್ಟು ಹುಕುಂ ಪ್ರಕಾರ,
I. S. Rao, ***Advocate.***

ಲೇಖಕರ ಆದಾಯ

ನಮ್ಮ ದೇಶದ ಲೇಖಕರ ಗತಿ

ನಮ್ಮಲ್ಲಿ ಓದುವವರಿಗೆ ಕೊಳ್ಳುವ ಶಕ್ತಿ ಇಲ್ಲ! ಶಕ್ತಿಯಿರುವವರು ಪುಸ್ತಕಗಳನ್ನು ಕೊಳ್ಳುವುದೇ ಇಲ್ಲ !!

ನಮ್ಮ ದೇಶದಲ್ಲಿ ಯಾವ ಲೇಖಕರಿಗೆ ಎಷ್ಟು ಉತ್ಪತ್ತಿ ಇದೆ ಎಂಬುದನ್ನು ತಿಳಿಯುವುದು ಬಹಳ ಕಠಿಣ ಯಾವ ಗ್ರಂಥಕರ್ತರಿಗೆ ಎಷ್ಟು ಹಣ ದೊರೆಯಿತೆಂಬುದು ಸಹ ತಿಳಿಯುವಂತಿಲ್ಲ ಹಿಂದಿನ ಕಾಲದಲ್ಲಿ ಗ್ರಂಥಗಳನ್ನು ರಚಿಸುವುದು, ಕವಿತೆಗಳನ್ನು ಬರೆಯುವುದು, ಲೋಕಸೇವೆಯ ಅಂಗವೆಂದು ಭಾವಿಸಲ್ಪಡುತ್ತಿತ್ತು. ಸೂರದಾಸರು, ತುಳಸೀದಾಸರೇ ಮುಂತಾದ ಮಹಾಕವಿಗಳು ಈ ವಿಧವಾದ ಪುನೀತ ಭಾವನೆಗಳಿಂದ ಪ್ರೇರಿತರಾಗಿಯೇ ತಮ್ಮ ಗ್ರಂಥಗಳನ್ನು ಬರೆದರು. ಅವರ ಉದ್ದೇಶವು ತಮ್ಮ ಈ ಗ್ರಂಥರಚನೆಗಳಿಂದ ಧನಾರ್ಜನೆಮಾಡುವುದಾಗಿರಲಿಲ್ಲ ಕೆಲವು ಕವಿಗಳು ರಾಜಮಹಾರಾಜರ ಪ್ರಶಂಸೆಮಾಡಿ ಕವಿತೆಗಳನ್ನು ಬರೆದು, ಹೇರಳ ಧನಸಂಪಾದಿಸುತ್ತಿದ್ದರು ಆದರೆ ಆ ಕಾಲದಲ್ಲಿ ಸಹ ಸತ್ಸಾಹಿತಿಗಳು ಈ ಪ್ರವೃತ್ತಿಯನ್ನು ನಿಂದಿಸದೆ ಇರುತ್ತಿರಲಿಲ್ಲ

ಈಗಿನ ಕಾಲದಲ್ಲಂತೂ, ಲೇಖನಗಳನ್ನೂ, ಪುಸ್ತಕಗಳನ್ನೂ ಬರೆಯುವುದು ಅರ್ಥೋಪಾರ್ಜನೆಯ ಒಂದು ನಿಯಮಿತ ಸಾಧನೆಯೇ ಆಗಿಬಿಟ್ಟಿದೆ, ಜನರು ಈ ವೃತ್ತಿಯನ್ನು ವಕೀಲವೃತ್ತಿ, ವೈದ್ಯವೃತ್ತಿಗಳಂತೆ, ಒಂದು ಸ್ವತಂತ್ರ ವೃತ್ತಿಯೆಂದೇ ಭಾವಿಸಿರುವರು ಆದರೆ ನಮ್ಮ ದೇಶದಲ್ಲಿ ಈ ವೃತ್ತಿಯು ಉನ್ನತಿಯನ್ನು ಹೊಂದಿರುವುದಿಲ್ಲ ಯುರೋಪ್, ಅಮೇರಿಕಾಗಳಲ್ಲಿ ಈ ವೃತ್ತಿಯಿಂದ ಲೇಖಕರಿಗೆ ಬಹಳ ಆದಾಯವುಂಟಾಗುತ್ತಿದೆ ಒಂದು ಇಂಗ್ಲಿಷ್ ಪತ್ರಿಕೆಯಲ್ಲಿ ಅಲ್ಲಿ ಪ್ರಾಚೀನ ಮತ್ತು ನವೀನ ಸಾಹಿತಿಗಳ ಉತ್ಪತ್ತಿಯ ವಿವರಣೆಯು ಪ್ರಕಟವಾಗಿದೆ.

ಆದರಿಂದ ನಮ್ಮ ದೇಶದ ಲೇಖಕರು, ಪ್ರಕಾಶಕರು ಮತ್ತು ಓದುಗರು ತಮ್ಮ ಸ್ಥಿತಿಯನ್ನು ಸುಲಭವಾಗಿ ತಿಳಿದುಕೊಳ್ಳಲು ಬಹಳ ಸಹಾಯವಾಗುವುದು. ಇಂಗ್ಲಿಷ್ ಪುಸ್ತಕಗಳನ್ನು ಓದುವವರು ಪ್ರಾಯಶಃ ವಿಶ್ವದ ಎಲ್ಲ ಭಾಗಗಳಲ್ಲಿಯೂ ದೊರೆಯುವರೆಂಬುದನ್ನು ನಾವು ಗಮನದಲ್ಲಿಡಬೇಕು ಲಕ್ಷಾಂತರ ಜನರು ಆ ಗ್ರಂಥಗಳನ್ನು ಕೊಂಡು ಓದುವರು ಆದರೆ ನಮ್ಮ ದೇಶಭಾಷೆಯ ಗ್ರಂಥಗಳ ಅವಸ್ಥೆಯೇ ಬೇರೆ ನಮ್ಮಲ್ಲಿ ಓದುವವರಿಗೆ ಕೊಳ್ಳುವ ಶಕ್ತಿಯಿಲ್ಲ, ಶಕ್ತಿಯಿರುವವರು ಪುಸ್ತಕಗಳನ್ನು ಕೊಳ್ಳುವುದೇ ಇಲ್ಲ

ಅಮೇರಿಕದ ಒಬ್ಬ ಪ್ರಕಾಶಕರು ಸುಪ್ರಸಿದ್ಧ ಆಂಗ್ಲಲೇಖಕರಾದ ಹಾಲ್ಕೇನ್‌ನ 'ಲೈಫ್ ಆಫ್ ಕ್ರಿಸ್ಟ್' (Life of christ) ಎಂಬುದನ್ನು ಪ್ರಕಾಶಪಡಿಸಲು 60ಸಾವಿರ ಪೌಂಡ್ ಅರ್ಥಾತ್ 9ಲಕ್ಷ ರೂ ಗಳನ್ನು ಕೊಟ್ಟರು. ಇದುವರೆಗೆ ಯಾವ ಗ್ರಂಥಕ್ಕೂ ಇಷ್ಟು ನಗದು ಹಣವನ್ನು ಯಾವ ಪ್ರಕಾಶಕರೂ ಕೊಟ್ಟಿಲ್ಲ ಆದರೆ ಇಂಗ್ಲೆಂಡಿನ ಹಿಂದಿನ ಪ್ರಧಾನರಾಗಿದ್ದ ಲಾಯಿಡ್ ಜಾರ್ಜರು ಕಳೆದ ವಿಶ್ವಯುದ್ಧದ ಸ್ಮೃತಿಯನ್ನು ಬರೆದು 15 ಲಕ್ಷ ರೂ ಗಳನ್ನು ಸಂಪಾದಿಸಿದ್ದಾರಂತೆ! Supper ಎಂಬ ಲೇಖಕನಿಗೆ ಆತನ Bulldog Drummond ಎಂಬ ಗ್ರಂಥಕ್ಕೆ ಇಷ್ಟೇ ಹಣ ದೊರೆತಿದೆ.

ಯಾವುದೇ ಗ್ರಂಥ ಅಥವಾ ಲೇಖನದ ಮೌಲ್ಯವು ಲೇಖಕರ ಸಾಹಸ ಮತ್ತು ಆತ್ಮವಿಶ್ವಾಸವನ್ನವಲಂಬಿಸಿರುತ್ತದೆ ಕೆಲವು ಲೇಖಕರು ಎಷ್ಟು ದೊರೆತರೂ ಸಂತುಷ್ಟರಾಗುವರು. ಜೇನ್ ಆಸ್ಟಿನ್ ಎಂಬವನು ತನ್ನ Sense & Sensibility ಎಂಬ ಪುಸ್ತಕಕ್ಕೆ 2250 ರೂ ಗಳನ್ನು ಹೊಂದಿ "ಇದು ಬಹಳವಾಯಿತು! ಸ್ವಲ್ಪವೂ ಖರ್ಚಿಲ್ಲದೆ ಇಷ್ಟೊಂದು ಹಣ ನನಗೆ ದೊರೆಯಿತಲ್ಲ" ಎಂದಿದ್ದನಂತೆ

ಆದರೆ ಯಾವಾಗಲೂ ಸಾಮಯಿಕ ಧನ ಪ್ರಾಪ್ತಿಯ ಸಫಲತೆಯ ಮೂಲಕ, ಒಂದು ಗ್ರಂಥದ ಉತ್ಕೃಷ್ಟತೆಯನ್ನು ನಿರ್ಣಯಿಸಲಾಗುವುದಿಲ್ಲ ಬಿಕ್ಕಿಂ ಎಂಬ ಲೇಖಕನಿಗೆ Grand Hotel ಎಂಬ ಗ್ರಂಥಕ್ಕೆ 6 ಸಾವಿರ ಪೌಂಡುಗಳ ಲಾಭದೊರೆತಿತ್ತು. ಮಿಲ್ಟನ್ನಿನ ಅಮರ ಕಾವ್ಯವಾದ Paradise Lost ಎಂಬುದಕ್ಕೆ ಕೇವಲ 150 ರೂ ದೊರೆತಿದ್ದುವು! ಮಹಾಕವಿ ಶೇಕ್ಸ್‌ಪಿಯರ್‌ನು ತನ್ನ ನಾಟಕಗಳ ಕ್ರಯ ಮತ್ತು ಅಭಿನಯಗಳ ಮೂಲಕ ಪ್ರತಿ ವರ್ಷವೂ ಪ್ರಾಯಶಃ 200 ಪೌಂಡುಗಳನ್ನು ಗಳಿಸುತ್ತಿದ್ದನು.

ಎಡ್ಗರ್ ವಾಲೆಸ್‌ನು ತನ್ನ ಪುಸ್ತಕಗಳಿಂದ ಅನೇಕ ಲಕ್ಷಪೌಂಡುಗಳನ್ನು ಗಳಿಸಿದ್ದನು ಆದರೆ ಮರಣಕಾಲದಲ್ಲಿ, 1 ಲಕ್ಷ ಪೌಂಡುಗಳ ಸಾಲವಿತ್ತು ಟೆನಿಸನ್ನನು ತನ್ನ ಕವಿತೆಯ ಪುಸ್ತಕಗಳನ್ನು ಕೇವಲ 10 ಪೌಂಡಿಗೇ ಮಾರಿದ್ದನು,

ಕೆಲವು ಲೇಖಕರು ತಮ್ಮ ರಚನೆಗಳ ಖ್ಯಾತಿಯ ಬಗ್ಗೆ ಒಳ್ಳೆಯ ಯೋಗವನ್ನು ನಿರೀಕ್ಷಿಸಬೇಕಾಗುವುದು ಒಬ್ಬ ವ್ಯಕ್ತಿ ರಾಜಕುಮಾರನ ಸಂಬಂಧವಾಗಿ 8 ಪಂಕ್ತಿಗಳ ಕವಿತೆಯನ್ನು ರಚಿಸಿದ್ದಕ್ಕೆ ಬಹಳ ಎಂದರೆ ಕವಿಗೆ ಪ್ರತಿ ಶಬ್ದಕ್ಕೂ 28 ಶಿಲಿಂಗುಗಳಂತೆ ದೊರೆತುವು

ಉಪನ್ಯಾಸದ ಜೊತೆಗೆ, ಇತರ ವಿಷಯಗಳ ಪುಸ್ತಕಗಳು ಈಗ ಹೆಚ್ಚಾಗಿ ಮಾರಾಟವಾಗುತ್ತಿವೆ ಲೇಡಿಸ್ಮಿಥ್ ಮತ್ತು ಆಕ್ಸ್‌ಫರ್ಡಿಗೆ ತಮ್ಮ ಆತ್ಮ ಚರಿತ್ರೆಗಾಗಿ 12 ಸಾವಿರ ಪೌಂಡು ದೊರೆತಿತ್ತು. ಇಂಗ್ಲೆಂಡಿನ ಇತಿಹಾಸವನ್ನು ಮಕಾಲೆಯು 5 ವರ್ಷಗಳಲ್ಲಿ ಬರೆದರು. ಅದಕ್ಕಾಗಿ ಅವರಿಗೆ 20 ಸಾವಿರ ಪೌಂ ಸಿಕ್ಕಿದ್ದುವು.

ಮೇಲಿನ ವಿವರಣೆಯಿಂದ ನಮ್ಮ ದೇಶದ ಲೇಖಕರು ಪ್ರಕಾಶಕರು ವಿಚಾರಮಾಡಲು ಯಥೇಷ್ಟವಾದ ಸಾಮಗ್ರಿಯು ದೊರೆಯುವುದೆಂಬ ಆಶೆ ಇದೆ S

Every Policyholder is a Member
IN
The Canara Mutual
ASSURANCE COMPANY, LTD.
(Head Office:- UDIPI, S India.)
Everyday the Membership increases.
The Company issues all the well-known plans of Assurance.
Female lives accepted.
JOIN ITS EVER INCREASING MEMBERSHIP.

ಬಾಲ್ಕನಿನಲ್ಲಿ ಸೂತ್ರಚಾಲನೆ

ಬಾಲ್ಟಿಕ್ ರಾಷ್ಟ್ರಗಳ ಗಲಾಟೆಯು ಇಂದೀಗ ಬಹುಮಟ್ಟಿಗೆ ಶಾಂತವಾಗಿ ಅಲ್ಲಿ ರಷ್ಯದ ಪ್ರಭಾವವು ಸ್ಥಿರವಾಗಿ ನೆಲೆಗೊಳ್ಳುವಂತಾಗಿರುವುದು, ಇಂಗ್ಲೆಂಡ್ ಮತ್ತು ಫ್ರಾನ್ಸುಗಳ ಆಟವೇ ಅಲ್ಲಿನ್ನು ನಡೆಯುವ ಹಾಗಿಲ್ಲ. ಈಗ ಬಾಲ್ಕನಿನ ವಾತಾವರಣವು ಕ್ಷೋಭೆಗೊಳ್ಳಹತ್ತಿರುವುದು. ಬಾಲ್ಕನಿನ ಅದೃಷ್ಟವು ಈಗ ಇಟಲಿಯ ಕೈಯಲ್ಲಿರುವುದೆನ್ನಬಹುದು. ಅಲ್ಲಿ ಯುದ್ಧವಾಗುವುದಾಗಲೀ ಆಗದಿರುವುದಾಗಲೀ ಇಟಲಿಯ ಧೋರಣೆಯ ಮೇಲೆ ಅವಲಂಬಿಸಿದೆ. ಇಟಲಿಯ ಸಹಾಯಪಡೆದು ಬಾಲ್ಕನ್ ರಾಷ್ಟ್ರಗಳನ್ನು ಸ್ವಾಧೀನಪಡಿಸಿಕೊಳ್ಳುವ ಹಿಟ್ಲರರ ಪ್ರಯತ್ನವು ಫಲಕಾರಿಯಾಗಿರುವುದಿಲ್ಲ. ಹಂಗೇರಿಯು ಸಂಪೂರ್ಣವಾಗಿ ಇಟಲಿಯ ಮರೆಹೊಕ್ಕಿರುವಂತಿದೆ. ಟರ್ಕಿ ಮತ್ತು ಗ್ರೀಸ್ ದೇಶಗಳು ಮಿತ್ರರಾಷ್ಟ್ರಗಳ ಆಶ್ರಯಪಡೆದಿವೆ. ಬುಲ್ಗೇರಿಯವು ರಷ್ಯದ ಕಡೆಗೆ ಒಲಿದಿದೆ. ಯುಗೋಸ್ಲಾವಿಯವು ಸ್ವತಂತ್ರವಾಗಿ ನಡೆಯುತ್ತಿದೆ. ರುಮೇನಿಯದ ಮೇಲೆ ಜರ್ಮನಿ ಮತ್ತು ರಷ್ಯಗಳ ದೃಷ್ಟಿಬಿದ್ದಿದೆ. ಅದು ತಮ್ಮೊಡನೆ ಒಪ್ಪಂದಮಾಡಿಕೊಳ್ಳುವಂತೆ ಎರಡು ರಾಷ್ಟ್ರಗಳೂ ಒತ್ತಾಯಪಡಿಸುತ್ತಿವೆ. ಇಟಲಿಯ ತಾಟಸ್ಥ್ಯದಿಂದಾಗಿ ಜರ್ಮನಿ ಮತ್ತು ರಷ್ಯಗಳ ಬಲಾತ್ಕಾರ ಮತ್ತು ಆಕ್ರಮಣಗಳು ಅಸಾಧ್ಯವಾಗಿದೆ. ಆದುದರಿಂದ ಒಳಗಿಂದೊಳಗಣ ಒತ್ತಾಟವು ನಡೆದು ಬಾಲ್ಕನ್ ಪ್ರದೇಶವು ಇಂದು ನಾನಾ ರೀತಿಯ ಸೂತ್ರಚಾಲನೆಯ ಕಳವಾಗಿ ಪರಿಣಮಿಸಿದೆ.

ಮುತ್ತಿಗೆಯನ್ನು ಇನ್ನಷ್ಟು ಕಠಿನಗೊಳಿಸುವ ನಿರ್ಧಾರ

ಬ್ರಿಟಿಷ್ ಮತ್ತು ಫ್ರೆಂಚ್ ಸುಪ್ರೀಮ್ ಕೌನ್ಸಿಲುಗಳು ಸೇರಿ ಯುದ್ಧವನ್ನು ಭರದಿಂದ ಮುಂದೊತ್ತುವ ಮತ್ತು ಜರ್ಮನಿಯ ಮೇಲಿನ ಸಾಂಪತ್ತಿಕ ಮುತ್ತಿಗೆಯನ್ನು ಇನ್ನಷ್ಟು ಕಠಿಣಗೊಳಿಸುವ ನಿರ್ಧಾರಮಾಡಿರುವರು. ಸ್ವೀಡನ್ ಮತ್ತು ನೋರ್ವೆಗಳಿಂದ ಕಬ್ಬಿಣದ ಸದುರು ಜರ್ಮನಿಗೆ ಹೋಗದಂತೆ ತಡೆಯುವ ಮತ್ತು ನೋರ್ವೆಯ ಸಮುದ್ರಕರಾವಳಿಯನ್ನು ಜರ್ಮನಿಯು ಉಪಯೋಗಿಸಿಕೊಳ್ಳದಂತೆ ಮಾಡುವ ಪ್ರಯತ್ನ ನಡೆಯಲಿದೆ. ನೋರ್ವೆ ಸಮುದ್ರಕರಾವಳಿಯ ಮೇಲೆ ಬ್ರಿಟಿಷರು ನೌಕಾಪಹರೆಯನ್ನಿರಿಸಿದರೆ ಜರ್ಮನಿ ಮತ್ತು ಬ್ರಿಟಿಷ್ ನೌಕೆಗಳೊಳಗೆ ದೊಡ್ಡ ಯುದ್ಧವೊಂದು ನಿಶ್ಚಯವೆಂದು ಹೇಳಬಹುದು. ಜಲಮುತ್ತಿಗೆ ಮಾತ್ರವಲ್ಲದೆ ಸಾಧ್ಯವಾದ ಮಟ್ಟಿಗೆ ನೆಲಮುತ್ತಿಗೆ ಕೂಡಾ ಹಾಕಬೇಕೆಂದು ಸುಪ್ರೀಮ್ ಕೌನ್ಸಿಲಿನವರು ನಿರ್ಧರಿಸಿರುತ್ತಾರೆ. ಜಲಮಾರ್ಗವಾಗಿ ಕೂಡಾ ಜರ್ಮನಿಗೆ ಸಾಮಾನುಗಳು ಹೋಗದಂತೆ ತಡೆಹಾಕಲಾಗುವುದು. ಇಟಲಿ ಮತ್ತು ರಷ್ಯಗಳು ಜರ್ಮನಿಯೊಂದಿಗೆ ನಡಿಸುವ ವ್ಯಾಪಾರವಹಿವಾಟನ್ನು ಮಿತ್ರರಾಷ್ಟ್ರಗಳು ತಡೆಗಟ್ಟಲೆತ್ನಿಸದರೆ ಅವುಗಳೊಡನೆಯೂ ವೈರತ್ವವು ಅಧಿಕವಾಗಿ ಬೆಳೆದು ಕಡೆಗೆ ಜರ್ಮನಿಯೊಂದಿಗೆ ಅವು ಕೂಡಾ ಸೇರಿ ಹೋರಾಡುವಂತಾಗಬಹುದು. ಅಂತಹ ಪರಿಸ್ಥಿತಿಯನ್ನು ಇದಿರಿಸಲು ಬೇಕಾದ ಸೇನಾಸಿದ್ಧತೆಯನ್ನು ಮಿತ್ರರಾಷ್ಟ್ರಗಳು ಭರದಿಂದ ನಡಿಸುತ್ತಿವೆ.

ವಾರದ ಟೀಕೆ

ಜಿನ್ನಾ ಸಾವರ್ಕರರ ನವೀನ ಭಾವನೆಗಳು

ಒಂದು ರಾಷ್ಟ್ರವನ್ನು ಅದರಲ್ಲಿರುವ ಧರ್ಮಗಳಿಗನುಗುಣವಾಗಿ ವಿಭಾಗಿಸುವುದು ಅಯುಕ್ತವೆಂಬ ಟೀಕೆಗೆ ಆಸ್ಪದ ದೊರೆಯದಂತೆ ಜಾತೀಯವಾದಿ ಮುಖಂಡರುಗಳಾದ ಮಿ. ಜಿನ್ನ ಮತ್ತು ಶ್ರೀ ಸಾವರ್ಕರರು ಸುಪ್ರಸಿದ್ಧವಾದ ಕೆಲವು ಶಬ್ದಗಳಿಗೆ ನವೀನ ಅರ್ಥಗಳನ್ನು ಕಲ್ಪಿಸಿ ವಿವರಿಸತೊಡಗಿದ್ದಾರೆ. ಇಸ್ಲಾಮ್ ಮತ್ತು ಹಿಂದು ಧರ್ಮಗಳು ಎರಡು ಧರ್ಮಗಳಲ್ಲ. ಎರಡು ಸಾಮಾಜಿಕ ಪದ್ಧತಿಗಳೆಂದು ಮಿ. ಜಿನ್ನರ ಹೊಸ ಶೋಧ. ತನ್ನ ಧರ್ಮವೇನೇ ಇರಲಿ; ಹಿಂದುಸ್ಥಾನವನ್ನು ತನ್ನ ಜನ್ಮಭೂಮಿಯಾಗಿ ಪರಿಗಣಿಸುವವರೆಲ್ಲರೂ ಹಿಂದುಗಳೆಂದು ಶ್ರೀ. ಸಾವರ್ಕರರ ನೂತನ ಅಭಿಪ್ರಾಯ. ಸಾಮಾಜಿಕ ಪದ್ಧತಿಯೆಂದರೇನೆಂಬುದರ ಸರಿಯಾದ ವ್ಯಾಖ್ಯೆಯನ್ನು ಮಿ. ಜಿನ್ನರೇನೂ ಕೊಟ್ಟಿರುವುದಿಲ್ಲ ಬೇರೆ ಬೇರೆ ವೇಷ, ಭಾಷೆ, ರೀತಿ ನೀತಿಗಳೇ ಪ್ರತ್ಯೇಕವಾದೊಂದು ಸಾಮಾಜಿಕ ಪದ್ಧತಿಯೆಂದಾದರೆ ಹಿಂದುದೇಶದ ಅಸಂಖ್ಯಾಕ ಹಳ್ಳಿಗಳಲ್ಲಿ ಅಂತಹ ಭೇದವೇನೂ ಇಲ್ಲದೆ ಹಿಂದುಗಳಂತೆಯೇ ಇರುವ ಮುಸಲ್ಮಾನರಿರುತ್ತಾರೆ. ಹಿಂದು ಧರ್ಮಾನುಯಾಯಿಗಳೆಲ್ಲಾ ಹಿಂದುಗಳೆಂಬ ಅರ್ಥವು ಚಾಲ್ತಿಯಲ್ಲಿರುವಾಗ ಹಿಂದುಸ್ಥಾನವಾಸಿಗಳೆಲ್ಲರೂ ಹಿಂದುಗಳಾಗುವುದಾದರೂ ಹೇಗೆ? ಹಿಂದುದೇಶವು ಕೇವಲ ಹಿಂದುಗಳ ಸ್ಥಾನವೆಂಬುದರ ಬದಲಿಗೆ ಹಿಂದೀಯರ ಸ್ಥಾನವೆಂದರೆ ಆಗುವ ತೊಡಕಾದರೂ ಏನು? ಜಾತೀಯತೆಗೆ ವ್ಯಾಪಕ ಸ್ವರೂಪವನ್ನಿತ್ತಾಕ್ಷಣ ಅದರ ಅಂತರ್ಯವು ಬದಲಾಗಿ ಬಿಡುವುದೆ?

ರಷ್ಯದ ಮುಂದಿನ ಧೋರಣೆ

ಮಾರ್ಚ್ ತಾ 29ರಲ್ಲು ರಷ್ಯದ ವಿದೇಶ ಮಂತ್ರಿ ಎಮ್. ಮೊಲೊಟೋವರು ಸೋವಿಯೆಟ್ ಪಾರ್ಲಿಮೆಂಟಿನಲ್ಲಿ ಭಾಷಣವೊಂದನ್ನಿತ್ತು ರಷ್ಯದ ಮುಂದಿನ ಧೋರಣೆಯೇನೆಂಬುದನ್ನು ಸ್ಪಷ್ಟಪಡಿಸಿರುವರು. ರಷ್ಯವು ಎಂದಿಗೂ ವಿದೇಶಿ ರಾಷ್ಟ್ರಗಳ ಕೈಗೊಂಬೆಯಾಗದೆ ಸ್ವತಂತ್ರ ಧೋರಣೆ ವಹಿಸುವುದು. ಫಿನ್ಲೆಂಡನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲು ರಷ್ಯಕ್ಕೆ ಸಾಧ್ಯವಿತ್ತು. ಆದರೆ ಅದು ಹಾಗೇನೂ ಮಾಡಿರುವುದಿಲ್ಲ ಫಿನ್ಲೆಂಡ್, ಸ್ವೀಡನ್ ಮತ್ತು ನೋರ್ವೆಗಳು ಪರಸ್ಪರ ಒಪ್ಪಂದ ಮಾಡಿಕೊಳ್ಳುವ ಹಂಚಿಕೆಗೆ ರಷ್ಯವು ಒಪ್ಪಲಾರದು. ಯಾಕೆಂದರೆ ಅದು ರಷ್ಯವನ್ನು ವಿರೋಧಿಸುವ ಉದ್ದೇಶವುಳ್ಳದಾಗಿದೆ. ರುಮೇನಿಯವು ಅನ್ಯಾಯವಾಗಿ ಬೆಸರೇಬಿಯವನ್ನು ಆಕ್ರಮಿಸಿ ವಶಪಡಿಸಿಕೊಂಡುದನ್ನು ರಷ್ಯವು ಎಂದೂ ಒಪ್ಪಿರುವುದಿಲ್ಲವಾದರೂ, ಯುದ್ಧದಿಂದ ಅದನ್ನು ಪಡೆಯುವ ಉದ್ದೇಶವು ರಷ್ಯಕ್ಕಿರುವುದಿಲ್ಲ. ಫಿನ್ಲೆಂಡನ್ನು ತಮ್ಮ ಯುದ್ಧಕ್ಷೇತ್ರವನ್ನಾಗಿ ಮಾಡಿ ರಷ್ಯವನ್ನು ಸಮರಕಳಕ್ಕೆಳೆಯುವ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಕುತಂತ್ರವು ನಡೆಯದಾಯಿತು. ಅನ್ನಾದರೂ ಆ ಪ್ರಯತ್ನ ನಡದೇ ಇದೆ. ಸ್ವೀಡನ್ ಮತ್ತು ನೋರ್ವೆಗಳಿಂದ ರಷ್ಯವು ಬಂದರನ್ನು ಕೇಳುತ್ತಿದೆ. ಅಫಘಾನಿಸ್ಥಾನದ ಮೂಲಕ ಹಿಂದೂಸ್ಥಾನದ ಮೇಲೆ ಧಾಳಿ ನಡಿಸುವ ಸಂಚು ನಡೆಸುತ್ತಿದೆ. ಟರ್ಕಿ ಮತ್ತು ರುಮೇನಿಯಗಳನ್ನು ಬಗ್ಗು ಬಡಿಯಲೆತ್ನಿಸುತ್ತದೆ. ಎಂಬ ನಾನಾ ಕಾಲ್ಪನಿಕ ಸುದ್ದಿಗಳು ಉದ್ದೇಶಪೂರ್ವಕವಾಗಿ ಹಬ್ಬಲ್ಪಡುತ್ತಿವೆ. ಫ್ರಾನ್ಸ್ ಮತ್ತು ಬ್ರಿಟನುಗಳು ಹಾರೈಸುತ್ತಿರುವುದು ಜರ್ಮನಿಯ ನಾಶವನ್ನಲ್ಲದೆ ಪೋಲಂಡಿನ ಸ್ವಾತಂತ್ರ್ಯವನ್ನಲ್ಲ. ರಷ್ಯದ ಬಲವನ್ನು ಕೂಡಾ ಮುರಿಯಬೇಕೆಂದು ಈ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಹಾರೈಸುತ್ತಿವೆ. ಫಿನ್ಲೆಂಡಿನಲ್ಲವು ನಿರಾಶೆಗೊಂಡರೂ ಮುಂದಾದರೂ ಸಂದರ್ಭ ಹುಡುಕುತ್ತಿವೆ. ಸಿರಿಯ ಮತ್ತು ಅದರ ಬಳಿಯ ಪೂರ್ವ ದೇಶಗಳಲ್ಲಿ ಜನರಲ್ ವೈಗಾಂಡರ ನಾಯಕತ್ವದಲ್ಲಿ ದೊಡ್ಡ ಬ್ರಿಟಿಷ್ ಸೇನೆಯು ಸಿದ್ಧವಾಗಿದೆ. ಈ ಸೇನೆಯು ರಷ್ಯದ ಹಿತವಿಘಾತುಕವಾಗಿ ಉಪಯೋಗಿಸಲ್ಪಡದಂತೆ ಎಚ್ಚರದಿಂದಿರಬೇಕು. ರಷ್ಯವು ತಟಸ್ಥವಿರುವುದೇ ಹೊರತು ಸಾಮ್ರಾಜ್ಯಶಾಹಿ ರಾಷ್ಟ್ರಗಳ ಈ ಯುದ್ಧದಲ್ಲಿ ಭಾಗವಹಿಸಲಾರದೆಂಬುದೇ ಎಮ್. ಮೊಲೊಟೋವರ ಭಾಷಣದ ಸಾರ. ರಷ್ಯವು ಜರ್ಮನಿಯ ತಾಳಕ್ಕೆ ತಕ್ಕ ಹೆಜ್ಜೆ ಹಾಕಲೂ ಸಿದ್ಧವಿಲ್ಲ. ಅದು ತನಗೆ ಉಚಿತವೆಂದು ತೋರಿದ ಧೋರಣೆಯನನುಸರಿಸಿ ಮುನ್ನಡೆಯುವುದು.

ಬೇಗನೆ ಶಾಂತಿಯುಂಟಾಗುವ ಹಾಗಿಲ್ಲ

ಯುರೋಪಿನ ವಾಸ್ತವಿಕ ಪರಿಸ್ಥಿತಿಯನ್ನು ಸ್ವತಹ ತಿಳಿದು ಹಿಂದಿರುಗಿರುವ ಮಿ. ಸಮ್ನರ್ ವೆಲ್ಸರೊಡನೆ ಪ್ರೆಸಿಡೆಂಟ್ ರೂಸವೆಲ್ಟರು ಮಾತಾಡಿ, ಬೇಗನೆ ಶಾಂತಿಯುಂಟಾಗುವ ಸಂಭವವಿಲ್ಲೆಂದು ಅಭಿಪ್ರಾಯಪಟ್ಟಿರುವರು. ಮಿ. ವೆಲ್ಸರು ಸಂಧಿಯ ಪ್ರಯತ್ನಕ್ಕಾಗಿ ಯುರೋಪಿಗೆ ಹೋದುದಲ್ಲ. ಹೋರಾಡುವ ರಾಷ್ಟ್ರಗಳಿಂದ ಸಂಧಿಯ ಶರ್ತಗಳನ್ನು ಕೂಡಾ ಅವರು ಪಡೆದಿರುವುದಿಲ್ಲ. ಯುದ್ಧವು ಮುಗಿದ ಮೇಲೆ ಯುರೋಪಿನ ನವ ವ್ಯವಸ್ಥೆಯು ಯಾವ ರೀತಿ ನಡೆಯಬೇಕೆಂಬ ಕುರಿತು ಮಿ. ವೆಲ್ಸರು ಅಮೂಲ್ಯ ಅಭಿಪ್ರಾಯಗಳನ್ನು ಸಂಗ್ರಹಿಸಿರುವರು. ಸಂದರ್ಭ ಬಂದಾಗ ಮಧ್ಯಸ್ಥಿಕೆಮಾಡಿ ಯುರೋಪಿನಲ್ಲಿ ಶಾಂತಿ ಸ್ಥಾಪಿಸಲು ಅರ್ಹತೆಯುಳ್ಳವರೆಂದರೆ ಅಮೆರಿಕದ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟರು. ಅಂದಮೇಲೆ ಯುರೋಪಿನ ಸ್ಥಿತಿಗತಿ ಮತ್ತು ಯುದ್ಧನಿರತ ರಾಷ್ಟ್ರಗಳ ಅಂತರ್ಯವನ್ನು ಪ್ರತ್ಯಕ್ಷವಾಗಿ ವಿಚಾರಿಸಿ ತಿಳಿದುಕೊಳ್ಳಲು ಪ್ರೆಸಿಡೆಂಟ್ ರೂಸವೆಲ್ಟರು ತನ್ನ ವಿಶ್ವಾಸನೀಯ ಪ್ರತಿನಿಧಿಯನ್ನು ಕಳುಹಿಸಿದುದು ಸ್ತುತ್ಯವಿರುತ್ತದೆ. ಮುಂದೆ ಇದರಿಂದ ಮಹತ್ತಾದ ಪ್ರಯೋಜನವಾಗದಿರಲಾರದು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದಿನ ಸಭೆಯು ಇದೇ ತಾ. 16ರಲ್ಲು ವಾರ್ಧದಲ್ಲಿ ನಡೆಯಲಿರುವುದು. ರಾಮಘಡ ಕಾಂಗ್ರೆಸ್ ಅಧಿವೇಶನದ ನಂತರ ಇದೀಗ ಪ್ರಥಮ ಸಲ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ ಸೇರುವುದರಿಂದ ಮಹತ್ವದ ನಿರ್ಣಯಗಳಾಗಬಹುದೆಂದು ನಂಬಲಾಗಿದೆ.

ಕಾಯಿದೆಭಂಗ ನಿಶ್ಚಯ

ಕಾಂಗ್ರೆಸು ಕಾಯಿದೆಭಂಗ ಚಳವಳಿ ಹೂಡುವುದು ಇಂದೀಗ ನಿಶ್ಚಯವೆಂದು ಹೇಳಬಹುದು. ಬರುವ ವರ್ಕಿಂಗ್ ಕಮಿಟಿ ಸಭೆಯಲ್ಲಿಯೇ ಆ ನಿರ್ಧಾರವಾದರೂ ಆಶ್ಚರ್ಯವಾಗಲಾರದು. ದಿನೇ ದಿನೇ ಸರಕಾರದ ದಬ್ಬಾಳಿಕೆಯು ಹೆಚ್ಚುತ್ತಿರುವುದು. ಅನೇಕ ಮಂದಿ ಮಜೂರ ಮತ್ತು ಕಮ್ಯೂನಿಸ್ಟ್ ಮುಖಂಡರೂ ಕಾಂಗ್ರೆಸ್ ಕೆಲಸಗಾರರೂ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ದಸ್ತಗಿರಿಮಾಡಲ್ಪಟ್ಟಿದ್ದಾರೆ. ಕಾಂಗ್ರೆಸ್ ಮಂತ್ರಿಗಳ ಆಡಳಿತ ಧೋರಣೆಯು ಹಲವು ಕಡೆ ಬದಲಾಯಿಸಲ್ಪಟ್ಟಿದೆ. ತಾನು ಶಾಂತಿಗಾಗಿ ಹಾತೊರೆಯುತ್ತಿದ್ದೇನೆ. ಗೌರವಪೂರ್ವಕವಾದ ಸಂಧಿಗಾಗಿ ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡುವವನಿದ್ದೇನೆ. ಅದಕ್ಕಾಗಿ 10 ಸಲ ಬೇಕಾದರೂ ವೈಸರಾಯರನ್ನು ಕಾಣಲು ಸಿದ್ಧನಿದ್ದೇನೆಂದು ಗಾಂಧಿಜಿಯರು ಹೇಳಿದರೂ ಸರಕಾರವು ಅಂತಹ ಮನೋವೃತ್ತಿಯುಳ್ಳದಿರುವುದಿಲ್ಲ. ಆದುದರಿಂದ ಕಾಯಿದೆಭಂಗ ಹೂಡಲ್ಪಡುವುದು ನಿಶ್ಚಯ. ಅದಕ್ಕಾಗಿ ಬೇಕಾದ ಪೂರ್ವಸಿದ್ಧತೆಯನ್ನು ದೇಶದ ಭರದಿಂದ ಮಾಡಬೇಕೆಂದು ಕಾಂಗ್ರೆಸಿನ ಜನರಲ್ ಸೆಕ್ರೆಟರಿಗಳಾದ ಆಚಾರ್ಯ ಕೃಪಾಲಾನಿಯವರು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೆಲ್ಲಾ ಸರ್ಕ್ಯುಲರ್ ಕೊಟ್ಟಿರುವರು. ತಾನು ಸತ್ಯಾಗ್ರಹ ಹೂಡಬೇಕಾದರೆ ಜನರು ಯಾವ ರೀತಿ ನಡೆಯಬೇಕೆಂಬ ಕುರಿತು ಗಾಂಧಿಜಿಯವರು ಸೂಚನೆಕೊಡಹತ್ತಿರುವರು.

ನಿಜವಾದ ಶಿಸ್ತಿನ ಆವಶ್ಯಕತೆ

"ಪ್ರತಿಯೊಂದು ಕಾಂಗ್ರೆಸ್ ಕಮಿಟಿಯೂ ಸತ್ಯಾಗ್ರಹ ಕಮಿಟಿಯಾಗಬೇಕು. ಸತ್ಯಾಗ್ರಹ ಸೇನೆಗೆ ಸೇರಲಿರುವವರೆಲ್ಲರೂ ನಾನು ಕೊಡುವ ಸೂಚನೆ ಮತ್ತು ನಿಯಮಗಳನ್ನು ತ್ರಿಕರಣಶುದ್ಧವಾಗಿ ಪಾಲಿಸುವವರಾಗಬೇಕು. ಅರೆಮನಸ್ಸಿನ ಬೆಂಬಲದಿಂದ ಫಲವಿಲ್ಲ. ಸಂಶಯವಾದಿಗಳಾಗಿ ಸರಿಯಾದ ಸಿದ್ಧತೆಯಿಲ್ಲದ ಸೈನಿಕರನ್ನು ನಡೆಸುವ ಸೇನಾನಾಯಕನು ಎಂದಿಗೂ ಜಯಶೀಲನಾಗಲಾರನು. ನಾನು ಅಂತಹ ಭಯಂಕರ ತಪ್ಪನ್ನು ಮಾಡಲಾರೆ. ನನ್ನ ಮೇಲೆ ಮತ್ತು ಚರ್ಕದ ಕುರಿತು ವಿಶ್ವಾಸವಿಲ್ಲದಿದ್ದರೂ ಶಿಸ್ತಿಗಾಗಿ ತಾವು ನೂಲುಮಾಡುತ್ತಿರುವೆವೆಂದು ಕೆಲವರು ನನಗೆ ಬರೆದಿರುತ್ತಾರೆ. ನನಗೆ ಇದರ ಅರ್ಥವಾಗುವುದಿಲ್ಲ ನಾನು ನಾಯಕನಾಗಿ ಕಾಯಿದೆಭಂಗ ಹೂಡಬೇಕೆಂದು ಅವರು ಆಶಿಸುತ್ತಾರೆ. ಆದರೆ ನನ್ನ ಕಾರ್ಯಕ್ರಮದಲ್ಲಿ ಅವರಿಗೆ ವಿಶ್ವಾಸವಿಲ್ಲ. ವಿಚಾರಕ್ಕೆ ಸರಿತೋರದಿದ್ದರೂ ನಾಯಕನು ಕೊಟ್ಟ ಆಜ್ಞೆಯನ್ನು ಉತ್ಸಾಹದಿಂದ ಅನುಸರಿಸುವುದೇ ನಿಜವಾದ ಶಿಸ್ತು. ಸ್ವಯಂಸೇವಕನು ತನ್ನ ನಾಯಕನನ್ನು ಆರಿಸುವಾಗ ಸರಿಯಾಗಿ ವಿಚಾರಿಸಿಕೊಳ್ಳುವನು. ಆದರೆ ಆ ಮೇಲೆ ವಿಚಾರ ಪ್ರಶ್ನೆಗಳ ಗೊಡವೆಗೆ ಹೋಗದೆ ವಿಧೇಯವಾಗಿ ನಡೆಯುವನು.

ಸತ್ಯಾಗ್ರಹಿಗಳ ಶಿಬಿರ(?)

ಪ್ರತಿಯೊಂದು ಕಾಂಗ್ರೆಸ್ ಕಮಿಟಿಯೂ ಸತ್ಯಾಗ್ರಹ ಕಮಿಟಿಯಾಗಿ, ಸರ್ವರಲ್ಲಿ

ಯೂ ಸೌಹಾರ್ದವನ್ನು ಬೆಳೆಸುವ, ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ತ್ಯಜಿಸಿರುವ, ಕ್ರಮವಾಗಿ ನೂಲು ಮಾಡುವ ಮತ್ತು ಖಾದಿಯನ್ನೇ ಉಪಯೋಗಿಸುವ ಜನರ ಹೆಸರನ್ನು ರಿಜಿಸ್ಟ್ರಿ ಮಾಡಬೇಕು. ಹೀಗೆ ತಮ್ಮ ಹೆಸರನ್ನು ರಿಜಿಸ್ಟ್ರಿ ಮಾಡಿದವರು ತಮ್ಮ ಬಿಡುವಿನ ಸಮಯವನ್ನೆಲ್ಲಾ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಲು ಉಪಯೋಗಿಸಬೇಕು. ಈ ಸತ್ಯಾಗ್ರಹ ಕಮಿಟಿಗಳು ನೂಲುವ ಕೇಂದ್ರಗಳಾಗಿ ಅಖಿಲ ಭಾರತ ನೂಲುವ ಸಂಘದ ಶಾಖೆಗಳ ಕೈಕೆಳಗೆ ಕೆಲಸಮಾಡಬೇಕು. ಸದಾ ಖಾದಿ ಧರಿಸದವರು ಈ ಕಮಿಟಿಗಳಲ್ಲಿ ಇರಲೇ ಬಾರದು. ಹೀಗೆ ಸತ್ಯಾಗ್ರಹ ಸೇನೆಗೆ ಸೇರುವ ಮತ್ತು ಸೇರದಿರುವ ಕಾಂಗ್ರೆಸ್ ವಾದಿಗಳೆಷ್ಟೆಂಬ ಕುರಿತು ವರದಿಯನ್ನು ಪ್ರಾಂತಿಕ ಕಮಿಟಿಗಳು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೊಪ್ಪಿಸತಕ್ಕದ್ದು. ತಮ್ಮ ಹೆಸರನ್ನು ರಿಜಿಸ್ಟ್ರಿ ಮಾಡಿದ ಸತ್ಯಾಗ್ರಹಿಗಳು ತಮ್ಮ ಅನುನಿತ್ಯದ ಕೆಲಸದ ಧೈರ್ಯವನ್ನಿಟ್ಟುಕೊಳ್ಳಬೇಕು. ಇವರು ಕಾಂಗ್ರೆಸಿನ ಪ್ರಾಥಮಿಕ ಮೆಂಬರರ ಸಂಪರ್ಕ ಬೆಳೆಸಿ ಅವರು ಖಾದಿ ಧರಿಸಿ ಸತ್ಯಾಗ್ರಹ ಸೇನೆಗೆ ಸೇರುವಂತೆ ಪ್ರಚಾರ ಮಾಡಬೇಕು. ಹರಿಜನರ ನಿವಾಸಗಳಿಗೆ ಹೋಗಿ ಅವರ ಸಂಕಷ್ಟಗಳನ್ನು ನಿವಾರಿಸಬೇಕು. ಸತ್ಯಾಗ್ರಹ ಸೇನೆಗೆ ಸೇರುವವರೆಲ್ಲಾ ಜೈಲಿಗೆ ಹೋಗಲು ಸಿದ್ಧರಿರಬೇಕು, ಅವರಿಗಾಗಲಿ ಅವರ ಕುಟುಂಬದವರಿಗಾಗಲಿ ಹಣ ಸಹಾಯವನ್ನು ನಿರೀಕ್ಷಿಸಬಾರದು.

ಹೀಗೆ ಸತ್ಯಾಗ್ರಹಿಗಳಾಗಿ ಸೇರಲು ಸಾಧ್ಯವಾಗದಿದ್ದರೂ ವಿಧಾಯಕ ಕಾರ್ಯಕ್ರಮದಲ್ಲಿ ವಿಶ್ವಾಸವಿದ್ದು ಸತ್ಯಾಗ್ರಹದ ಯಶಸ್ಸನ್ನು ಬಯಸುವ ಜನರಿರುತ್ತಾರೆ. ಇವರನ್ನು ಶಾಂತ ಸತ್ಯಾಗ್ರಹಿಗಳೆಂದು ಕರೆಯಬಹುದು ಇವರು ತಾವಾಗಿ ಜೈಲಿಗೆ ಹೋಗಕೂಡದು. ಮಜೂರರು, ವಿದ್ಯಾರ್ಥಿಗಳೇ ಮೊದಲಾದವರ ಮುಷ್ಕರಗಳನ್ನೆಬ್ಬಿಸಿ ಪ್ರೋತ್ಸಾಹಿಸಕೂಡದು. ಇಡೀ ಲೋಕದಲ್ಲಿ ಹಿಂಸೆಯ ತಾಂಡವವು ನಡೆಯುತ್ತಿರುವಾಗ, ಅತ್ಯಂತ ನಾಗರಿಕವೆನಿಸುವ ರಾಷ್ಟ್ರಗಳು ಕೂಡಾ ತಮ್ಮೊಳಗಣ ಕಲಹವನ್ನು ಶಸ್ತ್ರದ ಮೂಲಕವೇ ಇತ್ಯರ್ಥಪಡಿಸಲು ಮುಂದಾಗಿರುವಾಗ ಹಿಂದೂದೇಶವು ತನ್ನ ಸ್ವಾತಂತ್ರ್ಯವನ್ನು ಶಾಂತ ರೀತಿಯಿಂದ ಸಾಧಿಸುವ ಯಶಸ್ಸು ಪಡೆಯುವಂತಾಗುವುದೆಂದು ನಾನು ನಂಬುತ್ತೇನೆ. ಆದರೆ ನಮ್ಮ ಹೃದಯವು ಹಿಂಸೆಯಿಂದ ಸಂಪೂರ್ಣ ಮುಕ್ತವಾಗಿರುವುದಿಲ್ಲ. ಹಿಂಸೆಯಲ್ಲಿ ತ್ರಿಕರಣಪೂರ್ವಕ ವಿಶ್ವಾಸವಿರಬೇಕು. ಆದಿಲ್ಲದಿದ್ದರೆ ನನಗೆ ಹೋರಾಟ ನಡಿಸಲು ಸಾಧ್ಯವಿಲ್ಲ. ಹಿಂಸಾತ್ಮಕ ಮನೋವೃತ್ತಿಯು ತೋರಿಬಂದರೆ ನಾನು ಚಳವಳ ಹೂಡಿದ ಮೇಲೂ ಅದನ್ನು ನಿಲ್ಲಿಸಿ ಬಿಡುವೆನು. ಹಿಂಸೆಯಿಂದ ಲೋಕವು ಜುಗುಪ್ಸೆಗೊಂಡು ಹಿಂದೂದೇಶದ ಕಡೆಗೆ ವಿಚಾರಿಗಳನೇಕರು ದೃಷ್ಟಿ ಹರಿಸಿದ್ದಾರೆ. ಪ್ರಾಮಾಣಿಕರಾದ ಸತ್ಯಾಗ್ರಹಿಗಳ ಅತಿ ಚಿಕ್ಕ ಸೇನೆಯು ನನಗೆ ಸಾಕು. ಅಪ್ರಾಮಾಣಿಕವಾದ ಅತಿ ದೊಡ್ಡ ಸೇನೆಯಿಂದ ತೊಡಕೇ ಹೊರತು ಪ್ರಯೋಜನವಿಲ್ಲ. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಸತ್ಯಾಗ್ರಹ ಕಮಿಟಿಗಳನ್ನು ಸ್ಥಾಪಿಸಿ, ಕೆಲಸದ ವರದಿಯನ್ನು ಆಗಾಗ ನನಗೆ ತಿಳಿಸಬೇಕು. ಒಂದು ತಿಂಗಳೊಳಗೆ ಉತ್ಸಾಹಪರ ಬೆಂಬಲ ದೊರೆತಲ್ಲಿ ಈ ಸತ್ಯಾಗ್ರಹ ಕಮಿಟಿಗಳನ್ನೆಲ್ಲಾ ಸಂಘಟಿಸಿ ಕೆಲಸವನ್ನಾರಂಭಿಸಲು ಎಷ್ಟು ಸಮಯ ಕಾಗುವುದೆಂದು ಹೇಳಲು ಸಾಧ್ಯವಾಗಬಹುದು" ಎಂಬುದೇ ಗಾಂಧಿಜಿಯವರು ಹರಿಜನದಲ್ಲಿ ಪ್ರಕಟಿಸಿರುವ ಲೇಖನದ ಮುಖ್ಯಾಂಶ.

ಆಚಾರ್ಯ ಕೃಪಲಾನಿಯವರು

ಗಾಂಧಿಜಿಯವರ ಮೇಲಿನ ಲೇಖನವನ್ನೊಳಗೊಂಡ ಸರ್ಕ್ಯುಲರುಗಳನ್ನು ಕಾಂಗ್ರೆಸ್ ಕಮಿಟಿಗಳಿಗೆ ಕಳುಹಿಸಿರುವರು. ಒಂದು ಕಾಂಗ್ರೆಸ್ ಕಮಿಟಿಯಲ್ಲಿ ಹೆಚ್ಚಿನ ಮೆಂಬರರು ಶಾಂತ ಸತ್ಯಾಗ್ರಹಿಗಳಾಗಿದ್ದ ಪಕ್ಷದಲ್ಲಿ ಪ್ರತ್ಯೇಕ ಸತ್ಯಾಗ್ರಹ ಕಮಿಟಿಯನ್ನು ಸ್ಥಾಪಿಸಬಹುದು. ಚರ್ಕ, ಅಲ್ಪಸಂಖ್ಯಾಕ, ಹರಿಜನ ಮತ್ತು ಖಾದಿಪ್ರಚಾರ ಕಾರ್ಯಗಳಿಗಾಗಿ4 ಖಾತೆಗಳನ್ನು ಪ್ರಾಂತಿಕ ಕಮಿಟಿಗಳು ಮಾಡಿಕೊಂಡು ಕೆಲಸ ಮಾಡಬೇಕು. ಸ್ತ್ರೀ ಪುರುಷರೆಲ್ಲರೂ ಗಾಂಧಿಜಯವರ ಅನುಜ್ಞೆಯನ್ನು ಶಿರಸಾವಹಿಸಿ ಉಗ್ರ ಸತ್ಯಾಗ್ರಹಿಗಳಾಗಲು ಮುಂದೆ ಬರಬೇಕು. ಅಲ್ಲಲ್ಲಿ ಆಶ್ರಮ, ಶಿಬಿರ, ಮತ್ತು ಕ್ಯಾಂಪುಗಳನ್ನು ಸ್ಥಾಪಿಸಿ ಪ್ರಚಾರ ಮಾಡಿ, ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಬೇಕು. ಹೀಗೆ ಸತ್ಯಾಗ್ರಹಿಗಳು ತಯಾರಾದ ಪಕ್ಷದಲ್ಲಿ ಒಂದು ತಿಂಗಳೊಳಗೆ ಹೋರಾಟಕ್ಕೆ ಆಜ್ಞೆ ಬರಬಹುದೆಂದು ಶ್ರೀ ಕೃಪಲಾನಿಯವರು ಸೂಚಿಸಿ ಸತ್ಯಾಗ್ರಹಿಗಳು ತೆಗೆದುಕೊಳ್ಳಬೇಕಾದ ಪ್ರತಿಜ್ಞೆಯನ್ನು ಕೊಟ್ಟಿರುವರು. "ನಾನು ಸತ್ಯಾಗ್ರಹಿಯಾಗಿರುವನಕ ತ್ರಿಕರಣ ಪೂರ್ವಕವಾಗಿ ಅಹಿಂಸಾವಾದಿಯಾಗಿದ್ದು ಹಿಂದೂದೇಶದ ಎಲ್ಲಾ ಜಾತಿ ಮತಗಳೊಳಗೆ ಐಕ್ಯವನ್ನು ಸ್ಥಾಪಿಸಲೆತ್ನಿಸುತ್ತೇನೆ. ಅಸ್ಪೃಶ್ಯತೆಯನ್ನು ನಿವಾರಿಸಿ ಹರಿಜನೋದ್ಧಾರವನ್ನು ಸಾಧಿಸುತ್ತೇನೆ. ಯಾವಾಗಲೂ ಖಾದಿಯನ್ನೇ ಉಪಯೋಗಿಸಿ ಸಾಧ್ಯವಾದಷ್ಟು ಸ್ವದೇಶಿ ಸಾಮಾನುಗಳನ್ನೇ ಉಪಯೋಗಿಸುತ್ತೇನೆ ಸದಾ ನೂಲು ತೆಗೆಯುತ್ತೇನೆ. ನನ್ನ ಮೇಲಧಿಕಾರಿಯ ಅನುಜ್ಞೆ ಮೇರೆಗೆ ನಡೆಯುತ್ತೇನೆ. ದೇಶಕ್ಕಾಗಿ ಜೈಲಿಗೆ ಹೋಗುವುದಕ್ಕೂ ಪ್ರಾಣವನ್ನರ್ಪಿಸುವುದಕ್ಕೂ ಸಿದ್ಧನಿದ್ದೇನೆ. ಜೈಲಿಗೆ ಹೋದಾಗ ನನ್ನ ಅಥವಾ ನನ್ನ ಕುಟುಂಬದ ಪೋಷಣೆಗಾಗಿ ಹಣ ಸಹಾಯ ನಿರೀಕ್ಷಿಸಲಾರೆ" ಎಂಬುದೇ ಈ ಪ್ರತಿಜ್ಞೆಯ ಸಾರಾಂಶ,

---

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ಎಪ್ರಿಲ್. 1.

ಶ್ರೀ ಪ್ರಿನ್ಸ್ ಜಯಚಾಮರಾಜ ವೊಡೆಯರು ಶ್ರೀಮದ್ಯುವರಾಜರಾದರು— ಮೈಸೂರು ಶ್ರೀಮದ್ಯುವರಾಜ ಶ್ರೀ ಕಂಠೀರವ ನರಸಿಂಹರಾಜ ವೊಡೆಯರು ಮೃತರಾದರಿಂದ ಅವರ ಪುತ್ರ ಶ್ರೀ ಪ್ರಿನ್ಸ್ ಜಯಚಾಮರಾಜ ವೊಡೆಯರಿಗೆ ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರೆಂಬ ಅಭಿಧಾನಾಂಕಿತವನ್ನೂ ಯುವರಾಜರ ಪದವಿ ಸ್ಥಾನಗಳನ್ನೂ ದಯ ಪಾಲಿಸಿ ಯುವರಾಜರನ್ನಾಗಿ ಮಾಡುತ್ತಾರೆ. ಇದನ್ನು ಒಂದು ವಿಶೇಷ ಗೆಜೆಟ್ ಮೂಲಕ ಪ್ರಕಟಿಸುತ್ತಾರೆ (ಶ್ರೀ ಪ್ರಿನ್ಸ್ ಜಯಚಾಮರಾಜ ವೊಡೆಯರು ಈ ಪದವಿಗೇರಿದುದಕ್ಕಾಗಿ ನಮಗೆ ಕಂಡ ಸಂತೋಷವಲ್ಲದೆ ನವಯುಗದ ಪರವಾಗಿ ನಮ್ಮ ಅಭಿವಂದನೆಗಳನ್ನು ಸಲ್ಲಿಸಲಾಗಿದೆ ಸಂ. ನ.)

ವಿಶೇಷ ವಾರ್ತೆಗಳು—ವಕೀಲ್ ಶ್ರೀ. ಕೆ. ಹೆಂಜಾರಪ್ಪನವರನ್ನು ವಕೀಲ ವೃತ್ತಿಯಿಂದ 1 ವರ್ಷ ಮಾತ್ರ ಸರ್ಕಾರದವರು ವಜಾ ಮಾಡುವಾಗ್ಗ ಶ್ರೀ ಗೋವಿಂದ ರೆಡ್ಡಿಗಳನ್ನು ಆ ವೃತ್ತಿಯಿಂದ ತೆಗೆದು ಹಾಕಿರುತ್ತಾರೆ. ಶ್ರೀ ಗೋವಿಂದ ರೆಡ್ಡಿಗಳು ಕೋರ್ಟಿಗೆ ಬಂದಾಗ ಬಿಳಿ ಖಾದಿ ಲುಂಗಿ, ಜುಬ್ಬ ಮತ್ತು ಟೋಪಿ ಮಾತ್ರ ಧರಿಸಿ ಸರಿಯಾದ ವಕೀಲ್ ಉಡುಪಿನಲ್ಲಿ ಬಂದಿರಲಿಲ್ಲವೆಂದು, ಚೀಫ್ ಜಸ್ಟಿಸರು ಕಠಿಣವಾಗಿ ಟೀಕಿಸಲು ಶ್ರೀಯುತರಿಗೂ, ಜಡ್ಜಿಗಳಿಗೂ ಸ್ವಲ್ಪ ವಾದ ವಿವಾದ ನಡೆಯಿತು. ಶ್ರೀ ಸೋಸಲೆ ಗರಡಿ ಕೃಷ್ಣ ಮೂರ್ತಿ ಕೊಲೆ ಸಂಬಂಧ ದಸ್ತಗಿರಿ ಮಾಡಿರುವ ವಕೀಲ್ ಶ್ರೀ. ಯಸ್. ವೆಂಕಟಸ್ವಾಮಿ ಯ್ಯಂಗಾರರನ್ನು ಜಾಮೀನಿನ ಮೇಲೆ ಬಿಡಲು ಸಾಧ್ಯವಿಲ್ಲವೆಂದು ಜಡ್ಜರು ತೀರ್ಪಿತ್ತರು, ಇವರುಗಳ ಮೇಲೆ ಮುಕದ್ದಮೆ ಇಂದು ಪ್ರಾರಂಭವಾಗಿದೆ. ಮೈಸೂರಿನಲ್ಲಿರುವ ಶ್ರೀ|| ಮೈ ಜಿ' ಕೃಷ್ಣಮೂರ್ತಿಗಳು ಬರೆಯುತ್ತಿರುವ" ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿ ಮತ್ತು ಇಂಡಿಯನ್ ಫೆಡರೇಶನ್" ಎಂಬ ದ್ವಿತೀಯ ಭಾಗಕ್ಕೆ ಮಹಾತ್ಮ ಗಾಂಧಿಯವರು ಮುನ್ನುಡಿ ಬರೆಯುತ್ತಾರೆಂದು ತಿಳಿಸುತ್ತಾರೆ. ಮೈ. ಕಾಂ, ವ. ಕಮಿಟಿ ಸಭೆಯು ಈ ದಿನ ನಡೆದು ಅನೇಕ ವಿಷಯ ಚರ್ಚಿಸಿವರಂತೆ. ಮೈ. ಕಾಂ. ಸದಸ್ಯರನೇಕರುಗಳು ಸಂಸ್ಥಾನದ ವಿವಿಧ ಜಿಲ್ಲಾ ಬೋರ್ಡ್ ಉಮೇದುವಾರರಾಗಿ ನಿಂತಿರುತ್ತಾರೆ, ಅನೇಕ ಸ್ಥಳಗಳಲ್ಲಿ ಈಗಾಗಲೇ ಪ್ರತಿಸ್ಪರ್ಧಿಗಳಿಲ್ಲದೆ ಕಾಂ|| ಉಮೇದುವಾರರು ವಿಜಯ ಪಡೆದಿರುತ್ತಾರೆ, ಇದನ್ನು ನೋಡಿದಲ್ಲಿ ಕಾಂ|| ವಿಜಯ ಖಂಡಿತ. ಧ|| ಶ್ರೀ|| ಸಜ್ಜನರಾಯರು ತಮ್ಮ ಮಹಾತ್ಮಗಳ ಸುವರ್ಣಾಂಕಿತದಲ್ಲಿ ಕಟ್ಟಿಸಿ ಕೊಟ್ಟಿರುವ ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆ ಪ್ರಾರಂಭೋತ್ಸವವನ್ನು ದಿವಾನ್ ಸರ್ ಮಿರ್ಜಾರವರು ನೆರವೇರಿಸಿ ಭಾಷಣ ಮಾಡಿದರು. ಸೆಂಟ್ ಜಾನ್ ಸಂಘದ ಸ್ಪರ್ಧೆಯಲ್ಲಿ ಗೆದ್ದವರಿಗೆ ದಿವಾನರು ಬಹುಮಾನ ಹಂಚಿ ಭಾಷಣ ಮಾಡಿದರು ಮೈಸೂರಿನಲ್ಲಿರುವ ಪ್ರಜೆಗಳ ಸ್ನೇಹಿ ಕೇ. 50ರಷ್ಟು ಮಂದಿಗೆ ಮೈ|| ಮ್ಯುನಿಸಿಪಾಲಿಟಿ ಹೆತ್ತ ತಾಯಿಯವರು ಶಿಶು ಬಾ ಹಾಕಿ ಶಿಶುಬು ಉಪದ್ರವವನ್ನು ತಡೆದಂತೆ ಹತೋಟಿಗೆ ತಂದಿರುವುದು ಪ್ರಶಂಸನೀಯವಾಗಿದೆ. ಪ್ರಾಣಿ ದಯಾ ಸಂಘದವರು ಪ್ರಾಣಿಗಳ ಗೃಹ ಕಟ್ಟಿಸಿರುವುದನ್ನು ದಿವಾನರು ಪ್ರಾರಂಭೋತ್ಸವ ನಡೆಸಿ ಭಾಷಣ ಮಾಡಿದರು ಮೈ|| ಜಿಲ್ಲೆ, ಹೆಗ್ಗಡದೇವನ ಕೋಟೆ ವೀರಶೈವ ಸಮ್ಮೇಳನವು ಮೈ|| ಜಿಲ್ಲಾ ಬೋರ್ಡ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯಿತು, ಮೈ|| ಜಿಲ್ಲಾಧಿಕಾರಿಗಳು ಇವರ ಆರಂಭೋತ್ಸವ ನಡೆಸಿ ಭಾಷಣ ಮಾಡಿದರು, ಬೆಂಗಳೂರು ಬಸ್ಸೀಯು ಘಟ್ಟದ ಬಳಿ ಒಂದು ಮೋಟಾರು ಅಪಘಾತದಿಂದ ಓರ್ವರು ಮೃತರಾದರು, ಅ|| ಕ|| ಹುದ್ದೆಗೆ ಇಬ್ಬರನ್ನು ಚುನಾಯಿಸಲು ಈ ವರ್ಷದ ಅಂತ್ಯದಲ್ಲಿ ಒಂದು ಸಾರ್ವಜನಿಕ ಸ್ಪರ್ಧಾ ಪರೀಕ್ಷೆಯನ್ನು ಸರ್ಕಾರದವರು ನಡೆಸುತ್ತಾರೆ. ಮೈ|| ಸಂಸ್ಥಾನದ 1938-39ನೇ ಸಾಲಿನ ವರದಿಯು ಹೊರಬಿದ್ದಿದೆ, ಇದರಲ್ಲಿ ಅನೇಕ ಪ್ರಾಮುಖ್ಯ ವಿಷಯಗಳು, ಅಂಕೆಗಳು ಅಡಗಿವೆ, ಈ ಬಾರಿ ತಯಾರಿಸಿರುವ ವರದಿಯು ಬಹಳ ಮಾದರಿಯಾಗಿದೆ.

ಶ್ರೀಮಾನ್. ಎ. ಬಿ. ಲಠ್ಠೆಯವರು— ಮುಂಬೈ ಕಾಂಗ್ರೆಸ್ ಮಂತ್ರಿ ಮಂಡಳದಲ್ಲಿದ್ದ ಹಣಕಾಸಿನ ಸಚಿವರಾದ ಶ್ರೀಮಾನ್, ಎ. ಬಿ ಲಠ್ಠೆಯವರು ಮೈಸೂರಿಗೆ ಬಂದು ಅವರ ಅಳಿಯಂದಿರ ಗೃಹದಲ್ಲಿ ಬಿಡಾರ ಮಾಡಿದ್ದರು. ಶ್ರೀಯುತರು ಅನೇಕ ಪ್ರೇಕ್ಷಣೀಯ ಸ್ಥಳಗಳಿಗೂ ವಿವಿಧ ಸಂಸ್ಥೆಗಳಿಗೂ ಭೇಟಿಯಿತ್ತರು,

ಮುಂಬಯಿಯಲ್ಲಿ ಬಿಲ್ಲವರ ಸಂಘ ಸಂಸ್ಥೆಗಳು—ಇತ್ತೀಚೆಗೆ ಮುಂಬಾಯಿ ಬಿಲ್ಲವರಲ್ಲಿ ಸಂಘ ಸ್ಥಾಪನೆಯ ಹುಚ್ಚು ಹೆಚ್ಚುತ್ತ ಬರುತ್ತಿದೆ, ಫಕ್ಕನೆ ಚಾ ಹೋಟೇಲುಗಳಲ್ಲಿ ಯಾ ಒಂದು ಬಿಡಾರದಲ್ಲಿ ನಾಲ್ಕು ಜನರು ಕೂಡಿ ಒಂದು ಸಂಘ ಸ್ಥಾಪಿಸುವುದು ಚಾ ಕುಡಿಯುವ ಸಂತೋಷದ ಭರದಲ್ಲಿ ಇದರಿಂದ ಸಮಾಜಕ್ಕಾಗುವ ಒಳಿತು ಹೀನತೆಯ ಗೊಡವೆಯೇ ಇರುವುದಿಲ್ಲ. ಸಂಬಳದ ಸ್ಥಿತಿಗತಿಯನ್ನು ನೋಡದೆ ಕೆಲವರನ್ನು ಕೇನ್ವಾಸ್ ಮಾಡಿ ಹಣ ಸಂಗ್ರಹಿಸುವುದು, ಆ ವೇಳೆ ಚಂದವನ್ನು ಮತ್ಸರವನ್ನು ಕಟ್ಟಿಕೊಂಡು ಸಮಾಜವನ್ನು ಇನ್ನಿತರರಿಗೆ ದೂರಲು ದಾರಿ ಮಾಡಿಕೊಡುವುದು, ಒಬ್ಬನ ಸ್ವಾರ್ಥದಿಂದ ಇಡಿ ಸಮಾಜದಲ್ಲಿ ಕಚ್ಚಾಟ ಮಾಡಿಕೊಳ್ಳುವುದು. ಈ ವಿಷಯಗಳನ್ನು ಸಹಿಸಲಾರದೆ ಯಾರಾದರೂ ವ್ಯಕ್ತಿ ಕೆಗೆ ಬಂದರೆ ಅವರ ವಿಷಯವಾಗಿ ಪತ್ರಿಕ್ಕೆ ವ್ಯವಹಾರ ಮಾಡಲು ದ್ವೇಷ ಕಟ್ಟಿಕೊಳ್ಳುವುದು. ಅಂಥಾ ಸಂಸ್ಥೆಗಳಿಂದ ಅವನೇ ಅರಿಸಿದ ಪ್ರತಿನಿಧಿಗಳಿಗೆ ಮಾನ ಕೊಡದಿರುವುದು. ತಾವು ಮಾಡಿದ ತಪ್ಪನ್ನು ಗಮನಕ್ಕೆ ತಾರದೆ ಕೆಲವು ನಂಬಿಕೆ ಮಾತ್ರಗಳ ಮಾತಿಗೆ ಮರುಳಾಗಿ ಅವರ ತಾಳಕ್ಕೆ ತಕ್ಕಂತೆ ಕುಣಿಯುವುದು, ಖರ್ಚಿನಲ್ಲಿ ವಿಪರೀತ ತೋರಿಸಿ ತಾನೊಬ್ಬ ಸಂಭಾವಿತನೆಂದು ತೋರಿಸಿಕೊಳ್ಳುವುದು, ಮೆಂಬರರ ಅಭಿಪ್ರಾಯವನ್ನು ಕಡೆಗಣಿಸುವುದು. ಜಂಬವನ್ನು ಮತ್ಸರವನ್ನು ಸಮಾಜದಲ್ಲಿ ತೋರಿಸುವುದು, ಸಮಾಜಕ್ಕೆ ಬೇಕಾದ ಕೆಲಸಕ್ಕೆ ತೊಡಗಿದನೆಂದರೆ ಅವನನ್ನು ಹಿಂದಿನಿಂದ ದೂರುವುದು, ಅಧ್ಯಕ್ಷ ಕಾರ್ಯದರ್ಶಿ, ಕಾರ್ಯಕಾರಿ ಸಮಿತಿಯನ್ನು ಸ್ವಯಂ ಸೇವಕರಂತೆ ಕಾಣುವುದು, ಇವೆಲ್ಲ ಸಮಾಜಸೇವೆಗೆಯನ್ನು ಸೂಚಿಸುವವೇ? ನಮ್ಮವರ ಮೇಲೆ ನಾವೇ ಜಗುಪ್ಸೆ ಮಾಡಿದರೆ ಇತರರು ನಮ್ಮನ್ನೆಷ್ಟು ಪ್ರೀತಿಸ್ಯಾರು? ನಮ್ಮ ಜಾತಿಯ ಏಳಿಗೆಯಾಗ ಬೇಕಾದರೆ ಈ ಭಾವನೆಯನ್ನು ನಾವು ಬಿಟ್ಟುಬಿಡಬೇಕು, ಯಾವಾತನು ನಿಜವಾದ ಸಮಾಜ ಸೇವೆ ಮಾಡತ್ತಾನೋ ಆತನು ಸಮಾಜವನ್ನು ಟೀಕಿಸುವುದಿಲ್ಲ. ಯಾರು ಸಮಾಜ ಪ್ರೇಮಿಯೋ ಆತನು ಸ್ವಾರ್ಥವನ್ನು ನೋಡುವುದಿಲ್ಲ. ಯಾವಾತನು ಸಮಾಜದ ಏಳಿಗೆಯನ್ನು ಹಾರೈಸುತ್ತಾನೋ ಆತನು ದೊಡ್ಡ ಪದವಿಯನ್ನು ಆಶಿಸುವುದಿಲ್ಲ. ದೀನ ಸೇವಕನಾಗಿ ಕೆಲಸ ಮಾಡುವವನೇ ಸಮಾಜ ಸೇವಕನು, ತನ್ನ ಒಂದೇಒಂದು ಸ್ವಾರ್ಥದಿಂದ ಸಮಾಜವನ್ನು ವಿಷಮಾವಸ್ಥೆಗೆ ತರುವವನು ಸಮಾಜದ ಬದ್ಧ ವಿರೋಧಿಯೆಂದು ತಿಳಿಯಬೇಕು. ನಮ್ಮಾ ಸಮಾಜದಲ್ಲಿ ಮಾಟಂಗು ವಗೈರೆಗಳಿದ್ದರೆ ಅದನ್ನು ಬಿಟ್ಟು ಬೇರೆ ಕಡೆಗೆ ತೆರಳಿದರೆ ಇಲ್ಲಿ ಬರಿ ಕಾರ್ಯನಿರ್ವಾಹಕ ಸಮಿತಿಯವರೇನು ಮಾಡಿಯಾರು? ಅವರಿಗೆಷ್ಟು ಉತ್ಸಾಹ ಬಂದೀತ? ಕಾಲಚಕ್ರವು ಮಗುಚಿದಂತೆ ಪ್ರತಿ ಒಂದು ಸಮಾಜವೂ ಸ ಧಾರಿಸಿಕೊಳ್ಳುವಾಗ ನಾವೇಕೆ ಕಣ್ಣು ಮುಚ್ಚಿಕೊಳ್ಳುವುದು.' ಲೋಕ ಕಲ್ಯಾಣಕ್ಕಾಗಿ ಜನ್ಮಿಸಿದ ಶ್ರೀ ಮಹಾಮಹಿಮ ಬ್ರಹ್ಮಗುರು ನಾರಾಯಣ ಸ್ವಾಮಿಯ ದಿನಾಚರಣೆಯನ್ನು ಮುಂಬಾಯಿಯಲ್ಲಿ ನಾವು ಒಮ್ಮತದಿಂದ ಒಂದೇ ದಿನ ಆಚರಿಸಬೇಕೆಂದು ಠರಾವು ತಂದ ಮಹನೀಯರುಗಳೇ ಆ ದಿವಸ ಬಾರದೆ ಬೇರೆ ಸಮಾಜದ ಸಭೆಗಳಿಗೆ ಹೋಗಿ ವಿರುದ್ಧ ಭಾಷಣ ಮಾಡಿದರೆ ಯಾರು ಏನು ಬೆಲೆ ಕೊಟ್ಟಾರು? ಇವರನ್ನು ಯಾರು ಸಮಾಜ ಪ್ರೇಮಿಯೆಂದಾರು? ಇನ್ನು ಸಂಘಗಳ ಪರಿಣಾಮ ನೋಡುವ. ಸಂಸ್ಥೆಗಳು ಹೆಚ್ಚುತ್ತಿದ್ದಂತೆ ನಮ್ಮಾ ಸಮಾಜದ ಜನರಿಗಾಗುವ ತೊಂದರೆಯನ್ನು ನೋಡಿ ತೀರದು. ಒಂದು ಗೇಣಿನ ಹೊಟ್ಟೆಗಾಗಿ ನಮ್ಮ ಜನ್ಮ ಸ್ಥಾನವನ್ನು ಬಿಟ್ಟು ಸಮಾಜ ಪ್ರೇಮದಿಂದ ತಮ್ಮ ಆಯುಷ್ಯವನ್ನೆ ಹಾಳು ಮಾಡಿಕೊಳ್ಳುವ ಸಂದರ್ಭ ನೋಡಿ, ಚಂದಾ ವಸೂಲಿಗ ಬರುವವರು ಆತನ ಸಂಬಳದ ಯೋಗ್ಯತೆಯನ್ನು ಕೇಳುವುದಿಲ್ಲ, ಅಥವಾ ಆತನು ಯಾವ ಸಂಸ್ಥೆಯಲ್ಲಿದ್ದಾನೆಂದು ಕೇಳದೆ ಅವನು ನಿಜಸ್ಥಿತಿ ಹೇಳಿದರೂ ಕಿವಿಕೊಡದೆ ಅವನನ್ನು ಒತ್ತಾಯದ ಮೇಲೆ ಸಿಕ್ಕಿಸಿ ಬಿಡುತ್ತಾರೆ, ಹೀಗೆ ಕೆಲವರು ಸಮಾಜ ಪ್ರೇಮದಿಂದಲೂ, ಹಲವರು ದಾಕ್ಷಿಣ್ಯದಿಂದಲೂ, ಇನ್ನು ಕೆಲವರು ಅವರ ಕೆನ್ವಾಸಿಗೆ ಮರುಳಾಗಿಯೂ ಕೆಲವರು ತಮ್ಮ ಹೆಸರಿಗಾಗಿಯೂ ಹಣ ಕೊಡುತ್ತಾರೆ, ಕೊಡುವವರು ತಮ್ಮ ಹಣದಿಂದ ಆಗುವ ಪ್ರಯೋಜನವನ್ನು ಕೇಳುವುದಿಲ್ಲ, ಯಾರಾದರೂ ಕೇಳಿದರೆ ಉತ್ತರ ಕೊಡುವವರು ವಿರಳ. ಇನ್ನುಳಿದ ನನ್ನ ಬಂಧುಗಳು ಜನರ ಮಾತಿಗೆ ಮಾರುಹೋಗ ಬಾರದಾಗಿ ವಿನಂತಿ, ಯು. ಕೆ. ಬಂಗ,

ಸದ್ವೈದ್ಯಶಾಲಾ ನಂಜನಗೂಡು ಇವರ
"ಸುಬಲಾ" ಪಿತ್ತ ಸಂಕಟ, ಮಲಬದ್ಧತೆ ಇವುಗಳನ್ನು ಹೋಗಲಾಡಿಸಿ, ರಕ್ತ ಶುದ್ಧಿ ಪಡಿಸಿ, ಶರೀರಕ್ಕೆ ಬಲವನ್ನು ಕೊಡುತ್ತದೆ. ಬಹಳ ರುಚಿಯಾಗಿರುತ್ತದೆ,
ಬ್ರಾಂಚ್:-ರಥಬೀದಿ ಮಂಗಳೂರು.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೪-೪-'೪೦

ಮಿ. ಜಿನ್ನರ ಬಯಲು ಭ್ರಾಂತಿ

ಹಿಂದೂದೇಶವನ್ನು ಮುಸಲ್ಮಾನ ಮತ್ತು ಹಿಂದುಸ್ಥಾನಗಳಾಗಿ ವಿಭಾಗಿಸಬೇಕೆಂದು ಮಿ. ಜಿನ್ನರು ಲಾಹೋರಿನ ಮುಸ್ಲಿಮ್ ಲೀಗಿನ ಮಹಾಸಭೆಯಲ್ಲಿ ಮಾಡಿದ ಭಾಷಣವು ದೇಶದ ಹಲವು ಕಡೆಗಳಲ್ಲಿ ಉದ್ವೇಗವನ್ನುಂಟುಮಾಡಿದೆ. ವಿಚಾರಶಾಲಿಗಳಾದ ಹಿಂದು, ಮುಸಲ್ಮಾನ, ಸಿಖ್ಖ ಮುಖಂಡರುಗಳು ಅದನ್ನು ಸಂಪೂರ್ಣವಾಗಿ ನಿಷೇಧಿಸಿರುತ್ತಾರೆ. ಮುಸ್ಲಿಮ್ ಲೀಗಿನೊಳಗೇನೇ ಆ ಕುರಿತು ಒಮ್ಮತವಿರುವಂತೆ ತೋರುವುದಿಲ್ಲ. ಮಿ. ಜಿನ್ನರಿಗೆ ಈ ಮುದಿಪ್ರಾಯದಲ್ಲಿ ಮುಸಲ್ಮಾನ ರಾಜ್ಯವೊಂದನ್ನು ಪ್ರತ್ಯೇಕವಾಗಿ ಕಟ್ಟುವ ಭ್ರಾಂತಿ ಹಿಡಿದಿದೆ. ಅದಕ್ಕಾಗಿ ಅವರು ದೇಶದ ಸ್ವಾತಂತ್ರ್ಯಕ್ಕಾದರೂ ಎರವಾಗಲು ಸಿದ್ಧರಿರುವಂತಿದೆ. ರೌಂಡ್ ಟೇಬ್ಲು ಪರಿಷತ್ತಿನಲ್ಲಿ ಮಿ. ಜಿನ್ನರು ತನ್ನ 14 ಪಾಯಿಂಟುಗಳನ್ನು ಮುಂದೊತ್ತಿ ಹಿಂದೂ ಮುಸಲ್ಮಾನ ಐಕ್ಯಕ್ಕೆ ವಿಘಾತವನ್ನುಂಟುಮಾಡಿ ಹಿಂದೀಯರು ಒಮ್ಮತದ ಕೇಳಿಕೆಯನ್ನು ಬ್ರಿಟಿಷ್ ಸರಕಾರದ ಮುಂದಿಡದಂತೆ ತೊಡಕನ್ನುಂಟುಮಾಡಿದರು. ಇಂದೀಗ ದೇಶದ ಸ್ವಾತಂತ್ರ್ಯವನ್ನು ಒಕ್ಕಟ್ಟಿನಿಂದ ಸಾಧಿಸಬೇಕಾದ ಸಂದಿಗ್ಧ ಸಮಯದಲ್ಲಿ, ಮುಸಲ್ಮಾನರದೇ ಆದ ಪ್ರತ್ಯೇಕವಾದೊಂದು ರಾಜ್ಯವನ್ನು ಕಟ್ಟುವ ಅಭಿಪ್ರಾಯವನ್ನು ಮುಂದೊಡ್ಡಿ ಮುಸಲ್ಮಾನ ಜಾತೀಯ ಭಾವವನ್ನು ಉದ್ದೀಪನಗೊಳಿಸಿ ದೇಶದ ಸ್ವಾತಂತ್ರ್ಯಸಾಧನೆಯ ಗೊಡವೆಯೇ ಇಲ್ಲದೆ 'ಬೆಕ್ಕಿನ ಬಿಡಾರವೇ ಬೇರೆ' ಎಂಬಂತಹ ಧೋರಣೆ ವಹಿಸಿರುವರು.

ಹಿಂದೂದೇಶದಲ್ಲಿ ಮುಸಲ್ಮಾನ ರಾಜ್ಯ ಕಟ್ಟಿ, ಅಫಘಾನಿಸ್ಥಾನ, ಪರ್ಶಿಯಾ, ಅರೇಬಿಯ ಮೊದಲಾದ ಮುಸಲ್ಮಾನ ರಾಜ್ಯಗಳೊಂದಿಗೆ ಸೇರುವ ಪಾಕಿಸ್ಥಾನ ಚಳವಳವನ್ನೇ ಮಿ. ಜಿನ್ನರು ಎತ್ತಿ ಹಿಡಿದು ಪ್ರತಿಪಾದಿಸಿರುವರೆಂದು ಹೇಳಬಹುದು. ಇದರಿಂದ ಪಂಜಾಬಿನ ಹಿಂದುಗಳು, ಸಿಖ್ಖರು, ಜಾಟರೇ ಮೊದಲಾದವರಲ್ಲಿ ದಿಗಿಲುಂಟಾಗಿರುವುದು. ಮಿ. ಜಿನ್ನರ ಮುಸಲ್ಮಾನ ರಾಜ್ಯದ ಭಾವನೆಗೆ ಮುಸಲ್ಮಾನರು ಬೆಂಬಲವಿತ್ತ ಪಕ್ಷದಲ್ಲಿ, ಹಿಂದುಸ್ಥಾನವು ಹಿಂದುಗಳ ಸ್ಥಾನವೆಂಬ ಶ್ರೀ ಸಾವರ್ಕರರ ಅಭಿಪ್ರಾಯವು ಹೆಚ್ಚೆಚ್ಚಾಗಿ ಹಿಂದುಗಳನ್ನು ಆಕರ್ಷಿಸದಿರಲಾರದು. ಪಂಜಾಬು ತಮ್ಮ ಮಾತೃಭೂಮಿ ಮತ್ತು ಪುಣ್ಯಭೂಮಿಯೆಂದು ಸಿಖ್ಖರು ಇಷ್ಟರಲ್ಲೇ ಘೋಷಿಸಹತ್ತಿದ್ದಾರೆ. ಹೀಗೆ ಸಂಕುಚಿತ ಜಾತೀಯತೆಯ ಕೂಗು ಬಲಗೊಂಡು ಜನಬೆಂಬಲ ಪಡೆಯುತ್ತೆಂದರೆ ಇಡೀ ಹಿಂದುಸ್ಥಾನವು ಅಂತಃಕಲಹದ ಕಳವಾಗಿ ಪರಿಣಮಿಸದಿರಲಾರದು. ಆದರೆ ಸುದೈವದಿಂದ ಮಿ. ಜಿನ್ನರ ಮುಸಲ್ಮಾನ ರಾಜ್ಯ ಸ್ಥಾಪನೆಯ ಭಾವನೆಯು ಬಯಲುಭ್ರಾಂತಿಯಾಗಿದೆ. ಹೆಚ್ಚಿನ ಮುಸಲ್ಮಾನರೇ ಅದಕ್ಕೆ ಬದ್ಧವಿರೋಧವಿದ್ದಾರೆ. ಮುಸಲ್ಮಾನ ಹಿತಕ್ಕೇನೇ ಅದು ವಿಘಾತುಕವಾಗಿದೆಯೆಂದು ಹಲವು ಮುಸಲ್ಮಾನ ಮುಖಂಡರೇ ಅದನ್ನು ಉಗ್ರವಾಗಿ ನಿಷೇಧಿಸಿರುತ್ತಾರೆ. ಮತ್ತು ಅದು ಅತ್ಯಂತ ಅವ್ಯವಹಾರ್ಯವಾದುದಾಗಿದೆ. ಬ್ರಿಟಿಷ್ ಸರಕಾರವೂ ಅದಕ್ಕೆ ವಿರೋಧವಿದೆಯೆಂದು ಲಂಡನಿನ ಟೈಮ್ಸ್ ಪತ್ರಿಕೆಯು ಮಾಡಿರುವ ಟೀಕೆಯಿಂದ ಸಿದ್ಧವಾಗುತ್ತದೆ. ಕೇವಲ ಅಪ್ರಾಗತಿಕರಿಂದ ತುಂಬಿರುವ ಮುಸ್ಲಿಮ್ ಲೀಗಿನ ಅಭಿಪ್ರಾಯಕ್ಕೆ ಸಂಪೂರ್ಣವಾಗಿ ಮುಸಲ್ಮಾನ ಪ್ರಾಂತವಾಗಿರುವ ವಾಯುವ್ಯ ಗಡಿನಾಡು ಬದ್ಧ ವಿರೋಧವಿರುವುದು. ಅದೆಂದಿಗೂ ಲೀಗಿನೊಂದಿಗೆ ಸೇರಲಾರದು. ಸೇಕಡ 75ಕ್ಕಿಂತಲೂ ಮಿಕ್ಕಿ ಮುಸಲ್ಮಾನ ಜನಸಂಖ್ಯೆಯಿರುವ ಕಾಶ್ಮೀರದಲ್ಲಿ ಮುಸಲ್ಮಾನ ಮುಖಂಡರಾದ ಮಿ. ಅಬ್ದುಲ್ಲಾರವರೇ ರಾಷ್ಟ್ರೀಯಪಕ್ಷ ಸ್ಥಾಪಿಸಿ ಚಳವಳಿಸುತ್ತಿರುವರು. ಬಲೂಚಿಸ್ಥಾನದಲ್ಲಿಯೂ ಕಾಶ್ಮೀರದಂತಹ ಚಳವಳವೇ ಪ್ರಬಲವಾಗಿ ಹಬ್ಬಿರುವುದು. ಸಿಂಧುದೇಶದಲ್ಲಿ ಮುಸ್ಲಿಮ್ ಲೀಗಿನವರೇ ತಮ್ಮ ಪಕ್ಷವನ್ನು ಕೊನೆಗೊಳಿಸಿ ಹಿಂದುಗಳೊಂದಿಗೆ ಸೇರಿ ಸಂಯುಕ್ತ ರಾಷ್ಟ್ರೀಯ ಪಕ್ಷಸ್ಥಾಪಿಸಿ ಹೊಸತಾಗಿ ಮಂತ್ರಿಮಂಡಲವನ್ನು ರಚಿಸಿರುತ್ತಾರೆ. ಪಂಜಾಬಿನ ಮಂತ್ರಿಮಂಡಲವು ಮುಸ್ಲಿಮ್ ಲೀಗಿನಲ್ಲಿ ಸರ್ ಸಿಕಂದರರು ಕೇವಲ ಮುಸ್ಲಿಮ್ ಲೀಗ್ ಪಕ್ಷ ಸ್ಥಾಪಿಸಲು ಬದ್ಧ ವಿರೋಧವಿದ್ದಾರೆ. ಹಿಂದು ಮತ್ತು ಮುಸಲ್ಮಾನ ಜನಸಂಖ್ಯೆಯು ಹೆಚ್ಚುಕಡಿಮೆ ಸಮಸಮವಾಗಿದೆ. ಸಂಯುಕ್ತ ಪ್ರಾಂತ ಬಂಗಾಳ ಮತ್ತು ಅಸ್ಸಾಮುಗಳಲ್ಲಿ. ಇದು ಹೊರತು ಹಿಂದೂ ಸಂಸ್ಕೃತಿಯ ಉಗಮಸ್ಥಾನವಾದ ಅವರ ಪುಣ್ಯಸ್ಥಳಗಳ ನಾಡಾದ ಪವಿತ್ರ ಗಂಗಾ ಯಮುನಾ ನದಿಗಳು ಹರಿಯುವ ಸಮಭೂಮಿಯನ್ನು ಹಿಂದುಗಳು ಎಷ್ಟಕ್ಕೂ ಬಿಟ್ಟುಕೊಡಲೊಪ್ಪಲಾರರು. ಪಂಜಾಬಿನಲ್ಲಿ ಮುಸಲ್ಮಾನ ರಾಜ್ಯಭಾರ ಸ್ಥಾಪಿತವಾಗಲು ವೀರ ಸಿಖ್ಖರು ಮತ್ತು ಜಾಟರು ಎಂದಿಗೂ ಬಿಡಲಾರರು. ಜಾತೀಯತೆಯ ಕಾಡ್ಗಿಚ್ಚು ಹಬ್ಬಿತೆಂದರೆ ಮಧ್ಯ ಮತ್ತು ದಕ್ಷಿಣ ಹಿಂದುಸ್ಥಾನದಲ್ಲಿ ಮುಸಲ್ಮಾನರಿಗೆ ಇರಲಿಕ್ಕೇನೇ ಸಾಧ್ಯವಿಲ್ಲ. ಹೈದರಾಬಾದಿನಂತಹ ಮುಸಲ್ಮಾನ ರಾಜ್ಯಗಳು ದಕ್ಷಿಣದಲ್ಲಿ ಇರುವುದೇ ಅಸಾಧ್ಯವಾಗುವುದು. ಒಂದು ನಾಡಿನಲ್ಲಿ ಹುಟ್ಟಿ ಬೆಳೆದು ಒಟ್ಟಿಗೆ ವಾಸಿಸುವವರೆಲ್ಲ ಬಂಧುಗಳಾಗಿ ಒಂದುಗೂಡಿ ನಡೆಯಬೇಕೆಂಬ ರಾಷ್ಟ್ರೀಯ ಭಾವನೆಯಲ್ಲಿಯೇ ಹಿಂದುಗೇಶದ ಉದ್ಧಾರ ಮತ್ತು ಅಭ್ಯುದಯವಿದೆ. ಮಿ. ಜಿನ್ನರ ಮುದಿ ಭ್ರಾಂತಿಯು ನಿಜವಾದ ರಾಷ್ಟ್ರಹಿತಘಾತುಕವಿದ್ದು, ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ನಿರಾಕರಿಸಲು ಆಳರಸರಿಗೆ ಬಹಳ ಅನುಕೂಲ ಕಾರಣವಾಗಿದೆ. ಆದುದರಿಂದಲೇ ಅವರು ಮಿ. ಜಿನ್ನರ ಬೆನ್ನು ಚಪ್ಪರಿಸುವ ನಟನೆ ನಡಿಸುತ್ತಿರುವಂತಿದೆ. ಪ್ರಕೃತದ ಪರಿಸ್ಥಿತಿಯಲ್ಲಿ ಕಾಂಗ್ರೆಸು ಮಂತ್ರಿಗಳು ಅಧಿಕಾರದಲ್ಲಿದು ಸರಕಾರದೊಂದಿಗೆ ಸಹಕರಿಸುತ್ತಿದ್ದರೆ ಮಿ. ಜಿನ್ನರನ್ನು ಆಳರಸರೇ ವಕ್ರದೃಷ್ಟಿಯಿಂದ ಕಾಣುತ್ತಿದ್ದರೆಂಬುದಕ್ಕೆ ಸಂದೇಹವೇ ಇಲ್ಲ. ಇದನ್ನು ಮಿ. ಜಿನ್ನರು ಆಲೋಚಿಸಿಕೊಳ್ಳದೆ ಮುಖದ ಮೇಲೆ ಪ್ರತೀಕಾರಮಾಡಲು ಮೂಗುಮುರಿದುಕೊಂಡಂತೆ ಕಾಂಗ್ರೆಸಿನ ಮೇಲೆ ದ್ವೇಷಸಾಧಿಸಲು ಹಿಂದೂ ದೇಶದ ಸ್ವಾತಂತ್ರ್ಯಸಾಧನೆಗೇ ದೊಡ್ಡ ವಿಘ್ನವನ್ನೊಡ್ಡಿರುತ್ತಾರೆ.

FOR LIFE INSURANCE

CONSULT

TROPICAL

Chairman: SJT. SUBASHCHANDRA BOSE.

Founder Directors:
PANDIT MOTILAL NEHRU,
Dr. M. A. ANSARI,
HAKIM AJMAL KHAN,
Sri. SRINIVASA IYENGER.

POLICIES ISSUED EXCEED

THREE CRORES

For Agency Apply to:—

M. R. PRABHU, B.A., B.COM., C.A.I.I.B.,
Inspector of Agencies,
The Tropical Ins., Co., Ltd.,
KASARCODE,
SOUTH KANARA,

OR

M. SUNDERAM SHETTY,
Branch Manager,
The Tropical Ins. Co. Ltd.
HAMPANKATTA,
MANGALORE, S. K.

ಖಾಸಗಿ ಶಾಲೆಯವರ ಗೋಳು

ಈ ವರುಷ ಜಿಲ್ಲೆಯ ಹಲವು ಖಾಸಗಿ ಶಾಲೆಗಳವರ ಗ್ರಾಂಟಿನಲ್ಲಿ ಅತಿಹೆಚ್ಚಿನ ಕಡಿತವಾಗಿದೆಯೆಂದು ಕೆಲವು ಶಾಲೆಗಳ ಗ್ರಾಂಟನ್ನು ಸೇಕಡಾ 83½ರಷ್ಟು ಇಳಿಸಲಾಗಿದೆಯೆಂದೂ ಜಿಲ್ಲೆಯ ಹಲವು ಕಡೆಗಳಲ್ಲಿ ದೊಡ್ಡ ಗೋಳಿದ್ದಿದೆ. ಈ ಗ್ರಾಂಟಿನ ಮೇರೆಗೆ ಕೆಲವು ಶಾಲೆಗಳನ್ನು ನಡಿಸುವುದೇ ಅಸಾಧ್ಯವಾಗಿದೆ. ಶಾಲಾಗ್ರಾಂಟು ಯಾವುದಾದರೊಂದು ನಿಶ್ಚಿತ ನೀತಿ ನಿಯಮದ ಮೇರೆಗೆ ಕೊಡಲ್ಪಡುವುದೆಂದು ಹೇಳಬರುವುದಿಲ್ಲ. ಕೆಲವರಿಗೆ ಸಾಕಷ್ಟು ಅನ್ನಹಾಕಿ ಇನ್ನೂ ಕೆಲವರನ್ನು ಉಪವಾಸ ಕಳುಹಿಸುವ ಧೋರಣೆ ವಹಿಸಿರುವಂತಿದೆ. ಉಪಲ ಸರಕಾರವು ಗ್ರಾಂಟುಕೊಡುವಾಗ ಶಿಕ್ಷಣಾಧಿಕಾರಿಗಳಿಗೆ ಅಯೋಗ್ಯವೆಂದು ತೋರುವ ಖಾಸಗಿಶಾಲೆಗಳಿಗೆ ಸಂಪೂರ್ಣವಾಗಿ ಗ್ರಾಂಟನ್ನು ನಿರಾಕರಿಸಿ ಅವುಗಳ ಮಂಜೂರಾತಿಯನ್ನು ರದ್ದುಮಾಡಿ ಅವು ಮುಚ್ಚಲ್ಪಡುವಂತೆ ಮಾಡುವುದರಲ್ಲಿ ಅರ್ಥವಿದೆ. ಆದರೆ ಯಾವ ಶಾಲೆಯಾದರೂ ಜೀವನ್ಮೃತಾವಸ್ಥೆಯಲ್ಲಿರುವ ಪ್ರಮಾಣದಲ್ಲಿ ಗ್ರಾಂಟು ಕೊಡುವುದರಲ್ಲಿ ಏನೂ ಅರ್ಥವಿಲ್ಲ.

ಸರಕಾರಕ್ಕೆ ಹಣದ ಅಡಚಣೆ ಇರುವುದಾದರೆ ಇನ್ನು ಮುಂದೆ ಕೆಲವು ವರುಷ ಖಾಸಗಿ ಶಾಲೆಗಳಿಗೆ ಮಂಜೂರಾತಿ ಕೊಡುವುದನ್ನೇ ನಿಲ್ಲಿಸಿ ಬಿಡಬಹುದು. ಆದರೆ ನಡೆಯುತ್ತಿರುವ ಶಾಲೆಗಳು ಸರಿಯಾಗಿ ಬದುಕಿರಲು ಸಾಕಾಗುವಷ್ಟರ ಗ್ರಾಂಟು ಕೊಡುವುದು ಸರಕಾರದ ಕರ್ತವ್ಯವಿದೆ. ಅವುಗಳನ್ನು ಜೀವನ್ಮೃತಾವಸ್ಥೆಯಲ್ಲಿ ನರಳಿಸುವುದು ದೊಡ್ಡ ಅನ್ಯಾಯ. ಸೇ.

೨೦ ...

83½ರಷ್ಟು ...
ಳು ಬದುಕಿ...
ಕಡಿತವೆನ್ನು...
ವಿಕೆಯೆಂದರೆ ...
ಒಮ್ಮೆ ನೇ...
ಸರಿಯಾಗಿ ...
ಕತ್ತು ಹಿಸು...
ನ್ನು ಹುಟ್ಟಿ...
ಮೇಲೆ ಅದನ್ನು ...
ವಂತಾಗಿದೆ, ...
ದಲ್ಲಿ ಇದೇ ...
ಜಿಲ್ಲೆಯ ಹ...
ಮುಚ್ಚಲ್ಪಡ...
ಖಾಸಗಿ ಶಾಲೆ...
ರುವಹಲವ...
ಅಲ್ಲ ನಡಿಸಲಿ...
ಸಂಕಟಪಟ್ಟ ...
ಕಟ್ಟಿದ ...
ವ್ಯಯಿಸಿ ಹ...
ನ್ನೊಂದು ಜಿ...
ಯೇ ಮಾತಿ...
ಅದನ್ನೀಗ ಬಿ...
ಳಗೊಳಗಾಗ...
ಗ್ರಾಂಟಿನಿಂದ...
ಸಾಧ್ಯವೇ ಇ...
ಪರಿಸ್ಥಿತಿಯನ್ನು...
ನಿವಾರಿಸಬೇಕ...
ಜೂರಾತಿ ಪ...
ನಡಿಸಲ್ಪಡು...
ನಡೆಯುವಂತೆ...
ಬೇಕು. ಅವು...
ಕೆಲಸ ನಡಿ...
ನ್ನು ಕಠಿಣಗೊ...
ವಾಗಿ ಗ್ರಾಂಟ...
ನಿಲ್ಲಿಸಬೇಕು ...
ಗಿ ನಡೆಸಲ್ಪಡು...
ಸಾಮಾನ್ಯ ...
ನಿಶ್ಚೈಸಿ ಎಷ್ಟ...
ಬಾಂದು ...
ವ ಶಾಲೆಗಳಿಗೆ...
ಮಾಣಕ್ಕಿಂತ ...
ಬೇಕು. ಈಗ...
ಟನ್ನು ಇಳಿಸು...
ಡ್ಡಾಯವಾಗಿ ...

ದಕ್ಷಿಣ... ಪರಿ...

ಇದರ ಪ್ರ...
ತಾ. 27ರಲ್ಲಿ ...
ದಾನಿನಲ್ಲಿ ಪ...
ಎ. ಮುನ...
ತೆಯಲ್ಲಿ ಜಯ...
ಲ್ಲೆಯ ಬೇರೆ ...
ಜಾತಿಗಳ ಹ...
ದ್ದರು. ಹರಿಜ...
ಯವರೆನಿಸುವ...
ದು ಇಂತಹ ...
ದುದು ಇದು ...
ಬಹುದು. ಸ...
ಟ್ಟಿಗೆ ಕೂಡು...
ಲ್ಪಾತಿಯವರ...

...ದೇಶದ ವಿಭಜನೆಯು ಅರ್ಥಶೂನ್ಯವಾದುದು !

ನಡೆದ ಶಾಲೆಗ
ಕೇಗೆ? ಆದಕ್ಕೆ
ಕತ್ತುಹಿಸಲು
?
ಗೇಕ್ಯತವಾಗಿ
ಶಾಲೆಗಳ
ಯು, ಶಿವನ
೦ ವಹಿಸಿ ಅ
ಜಾಕಿ ಕೊಲ್ಲಾ
ಟ್ಟಿನ ವಿಷಯ
ತ್ತೆ ವಹಿಸಿದರೆ
ನ ಶಾಲೆಗಳು
ಸವಿಲ್ಲದಾಗಿದೆ.
ಸಿ ನಡಿಸುತ್ತಿ
ಮುಚ್ಚಲಿಕ್ಕೂ
ಬ ಉಭಯ
ಗೆಟ್ಟಿರುತ್ತಾರೆ.
ಗಳಿಗೆ ಹಣ
ಮಡಿದು ಅವ
ಕ್ಯಾಗವನ್ನಾಗಿ
ಯ ಸಂದವರು
ರಸ್ಪ ನಪ್ಪಗ
ಈ ಗ ಣ
ನ್ನು ನಡಿಸಲು
ಂಬಚನೆಯ
ರವು ಕೂಡಲೆ
ಾರಾದ ಮಂ
ವರ್ಷಗಳಿಂದ
ಗಳು ಜಿನ್ನಾಗಿ
ಪ್ರಾಂತ್ಯವನ್ನೀಯ
ಂದ ತಮ್ಮ
ಲ್ಲಿವಾರಣೆಯ
ಧ್ಯಾನುಸಾರ
ನಡುವುದನ್ನು
ಸರಿಯಾ
ವಾದ ಸರ್ವ
ವಾಣವನ್ನು
ಕಡಿಮೆಮಾಡ
ನಡೆಸಲ್ಪಡು
ನ್ನು ಪ್ರ
ಟು ಕೊಡ
ಕಾರ ಗ್ರಾಂ
ಲೆಗಳನ್ನು ಕ
ಡು ಲೇಸು.

ಜಿಲ್ಲಾ
ತ್ತು
ನವು ಇದೇ
ಗಾಂಧಿ ನ್ಯೆ
ಾದ ಶ್ರೀ. ಬಿ.
ನರ ಅಧ್ಯಕ್ಷ
ವಿಯಿತು, ಜಿ
ಂದ ಜೇರಿ
ಳಿಗೆ ಬಂದಿ
ಕೆಳಜಾತಿ
ತ್ತಿಗೆ ಬಂ
ಭಾಗವಹಿಸಿ
ಂದು ಹೇಳ
ಇವರೊ
ಾಗ ನೋ
ಂದಿ ಹರಿಜ

ದಕ್ಷಿಣಕನ್ನಡ ಜಿಲ್ಲಾ ಹರಿಜನ ಪರಿಷತ್ತು

ದೇಶದಲ್ಲೆಲ್ಲಾ ಸತ್ಯಾಗ್ರಹ ಸಿದ್ಧತೆ.

ನರೇ ಹಾಗೆ ಮಾಡಲೊಪ್ಪದುದು ಅತ್ಯಂತ ವಿಷಾದಕರವಿದೆ.

ತಾ, 27ನೇ ಬೆಳಗ್ಗೆ ಶ್ರೀ ಸುಕ್ಯ ಐತಪ್ಪ ಗೈಗಳು ರಾಷ್ಟ್ರೀಯ ಧ್ವಜಾರೋಹಣ ಮಾಡಿದರು. ಶ್ರೀ ಮುನಿಸ್ವಾಮಿ ಪಿಳ್ಳೆಯವರು ಶ್ರೀ. ವಿ. ಬಿ. ಶೆಟ್ರು ಡಾಕ್ಟರ್ ಕೆ. ವಿತಲ ಶೆಟ್ರು, ಶ್ರೀ ಈಶ್ವರನವರೇ ಮೊದಲಾದವರೊಂದಿಗೆ ಮೂಲ್ಕಿಗೆ ಬಂದೊಡನೆಯೇ ಮೂಲ್ಕಿ ಯೂನಿಯನ್ ಕ್ಲಬ್ಬಿನವರು ಅವರಿಗೆ ಟೀಪಾರ್ಟಿ ಕೊಟ್ಟು ಸತ್ಕರಿಸಿದರು. ಅನಂತರ ಅಧ್ಯಕ್ಷರನ್ನು ಮೆರವಣಿಗೆಯಿಂದ ಪರಿಷತ್ತಿನ ಸ್ಥಳಕ್ಕೆ ಕರದೊಯ್ಯಲಾಯಿತು. ಪರಿಷತ್ತಿನ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀ. ಎಮ್. ಆರ್. ಪೂಂಜರು ಅಧ್ಯಕ್ಷರನ್ನು ಸ್ವಾಗತೀಕರಿಸಿ, ಮೂಲ್ಕಿಯಲ್ಲಿ ನಡೆಸಲ್ಪಟ್ಟಿರುವ ಹರಿಜನೋದ್ಧಾರ ಕೆಲಸಗಳನ್ನೆತ್ತಿ ಹೇಳಿ ಮೂಲ್ಕಿಯ ಆಸುಪಾಸಿನ 36 ಹಳ್ಳಿಗಳ ಬೇರೆ ಬೇರೆ ಜಾತಿಗಳ ಹರಿಜನರು ಈ ಪರಿಷತ್ತಿನ ವ್ಯವಸ್ಥೆಯಲ್ಲಿ ಪ್ರಮುಖ ಭಾಗವಹಿಸಿರುವರೆಂದು ಸೂಚಿಸಿದರು. ಮತ್ತು ಹರಿಜನರ ಉದ್ಧಾರಕ್ಕಾಗಿ ಕೈಕೊಳ್ಳಬೇಕಾದ ಕಾರ್ಯಕ್ರಮದ ರೂಪುರೇಷೆಯನ್ನು ಚಿತ್ರಿಸಿ, ಹರಿಜನ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣವನ್ನಾದರೂ ಕಡ್ಡಾಯವಾಗಿ ಕೊಡುವ ಏರ್ಪಾಡು ಪಡೆಯಬೇಕೆಂದು ಹೇಳಿದರು. ಪಂಚಾಯತ ಬೋರ್ಡು ಮತ್ತು ಮೂಲ್ಕಿಯ ಜನತೆಯ ಪರವಾಗಿ ಪಂಚಾಯತ ಬೋರ್ಡು ಪ್ರೆಸಿಡೆಂಟರಾದ ಶ್ರೀ ಬೋಳ ವಾಸುದೇವ ರಾಯರು ಶ್ರೀ ಪಿಳ್ಳೆಯವರಿಗೆ ವಂದನೆಯನ್ನರ್ಪಿಸಿದರು.

ಆ ವೇಳೆ ಶ್ರೀ ಪಿಳ್ಳೆಯವರು ಅಧ್ಯಕ್ಷ ಭಾಷಣವಿತ್ತು, ಬೇರೆ ಬೇರೆ ತಂಡಗಳವರಾದ ಹರಿಜನರೆಲ್ಲರೂ ಒಕ್ಕಟ್ಟಾಗಿ, ಹರಿಜನ ಸೇವಕ ಸಂಘ, ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಮೊದಲಾದ ಸಂಸ್ಥೆಗಳೊಂದಿಗೆ ಉತ್ಸಾಹದಿಂದ ಸಹಕರಿಸಬೇಕೆಂದು ವಿನಂತಿ ಮಾಡಿಕೊಂಡರು. ಕಾಂಗ್ರೆಸ್ ಮಂತ್ರಿಗಳು ಹರಿಜನೋದ್ಧಾರಕ್ಕಾಗಿ ಮಾಡಿರುವ ಕೆಲಸವನ್ನು ವಿವರಿಸಿ, ಈಗಣ ಸರಕಾರವು ಕಾಂಗ್ರೆಸ್ ಮಂತ್ರಿಗಳಿತ್ತಿದ್ದ ಅನುಕೂಲತೆಗಳನ್ನೀಯದುದಕ್ಕಾಗಿ ಮತ್ತು ಮದ್ಯಪಾನ ನಿಷೇಧವನ್ನು ವ್ಯಾಪಿಸದುದಕ್ಕಾಗಿ ಖಂಡಿಸಿದರು.

ಪರಿಷತ್ತಿಗೆ ಬಂದಿದ್ದ 10 ಮಂದಿ ಕೊರಗರು ತಾವಿನ್ನು ಮುಂದೆ ಮದ್ಯಪಾನ ಮತ್ತು ಸತ್ತ ದನದ ಮಾಂಸ ತಿನ್ನುವುದನ್ನು ತ್ಯಜಿಸುವ ಪ್ರತಿಜ್ಞೆ ಮಾಡಿದರು. ಸಂಜೆ ಲೇಬರ್ ಮತ್ತು ಇತರ ಶಾಲೆಗಳ ವಿದ್ಯಾರ್ಥಿಗಳ ವಿನೋದ ಪ್ರದರ್ಶನ ಮತ್ತು ಕೊರಗರ ಯಕ್ಷಗಾನ ಆಟವಿದ್ದಿತು. ಶ್ರೀ. ಯು. ಎಸ್. ಕೃಷ್ಣರಾಯರ ಕಾಲ್ಪನಿಕ ಉರಿಯ ಭಾಷೆಯು ಹರಿಜನ ದೇವಸ್ಥಾನ ಪ್ರವೇಶ ಸಂಬಂಧವಾದ ಭಾಷಣವು ಅತ್ಯಂತ ಮನೋರಂಜಕವಾಗಿತ್ತು. ಪರಿಷತ್ತಿನ ಸಂದರ್ಭದಲ್ಲಿ ಮಕ್ಕಳ ಕೈಗಾರಿಕೆ ವಸ್ತುಪ್ರದರ್ಶನ ಮತ್ತು ಜಿಲ್ಲಾ ಬೋರ್ಡು ಆರೋಗ್ಯ ಖಾತೆಯ ಆರೋಗ್ಯ ಸಂಬಂಧವಾದ ಚಿತ್ರ ಮತ್ತು ಸಿನಮ ದೇಖಾವೆ ಇದ್ದಿತು.

ಮಂಜೂರಾದ ಠರಾವುಗಳು

ತಾ 28ನೇ ಬೆಳಗ್ಗೆ ಹರಿಜನ ಪರಿಷತ್ತು ಶ್ರೀ. ಎಮ್.ಎಸ್. ಮಾಧವ ರಾಯರ ಅಧ್ಯಕ್ಷತೆಯಲ್ಲಿ ನಡೆದು ಈ ಕೆಳಗಣ ಠರಾವುಗಳು ಮಂಜೂರಾದುವು. ಗಾಂಧಿಜಿಯವರು ಹರಿಜನರಿಗಾಗಿ ಮಾಡಿರುವ ಕೆಲಸಕ್ಕಾಗಿ ಕೃತಜ್ಞತೆಯನ್ನೊಪ್ಪಿಸಿ ಅವರಲ್ಲಿ ಸಂಪೂರ್ಣ ವಿಶ್ವಾಸ ಸೂಚಿತವಾಯಿತು. ಹರಿಜನ ವಿದ್ಯಾರ್ಥಿ ವೇತನಗಳನ್ನು ಹೆಚ್ಚಿಸಬೇಕೆಂದೂ ಹರಿಜನರಿಗಾಗಿ ಕೈಗಾರಿಕೆ ಶಾಲೆಯೊಂದನ್ನು ತೆರೆಯಲು ಮಂಗಳೂರಿನ ಡಿಪ್ರೆಸ್ಡ್ ಕ್ಲಾಸಸ್ ಮಿಶನಿಗೆ ಸರಕಾರವು ಸಹಾಯಮಾಡಬೇಕೆಂದೂ, ಗ್ರಾಮಕೋರ್ಟು, ಗ್ರಾಮಪಂಚಾಯತ ಮತ್ತು ಇತರ ಸ್ಥಾನಿಕ ಸಂಸ್ಥೆಗಳಲ್ಲಿ ಕಡಿಮೆ ಪಕ್ಷ ಸೇಕಡ 10ರಷ್ಟರ ನೌಕರಿಗಳನ್ನು ಹರಿಜನರಿಗೀಯಬೇಕೆಂದು ಸರಕಾರದೊಡನೆ ಕೇಳಿಕೊಳ್ಳುವ ನಿರ್ಣಯಗಳಾದುವು. ಶಾಲೆಗೆ ಹೋಗುವ ಪ್ರಾಯದ ಎಲ್ಲಾ ಹರಿಜನ ಮಕ್ಕಳಿಗೆ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವೀಯುವ ಏರ್ಪಾಡು ಮಾಡಬೇಕೆಂದು ಸರಕಾರದೊಡನೆ ಅಗ್ರಹಪೂರ್ವಕವಾಗಿ ಕೇಳಿಕೊಳ್ಳಲಾಯಿತು. ಹರಿಜನರು ಎಂಜಲು ತಿನ್ನುವುದನ್ನ ಬಿಟ್ಟುಬಿಡಬೇಕೆಂದು ನಿರ್ಧಾರವಾಯಿತು. ದೇವಸ್ಥಾನಾಧಿಕಾರಿಗಳು ಮತ್ತು ಇತರ ಸವರ್ಣ ಹಿಂದುಗಳು ಹರಿಜನರಿಗೆ ಎಂಜಲು ಕೊಡದೆ ಶುದ್ಧವಾದ ಆಹಾರವನ್ನೇ ಕೊಡಬೇಕೆಂದು ಕೇಳಿಕೊಳ್ಳುವ ನಿರ್ಣಯವಾಯಿತು. 6 ವರ್ಷ ಪ್ರಾಯವಾಗುವ ವರೆಗೆ ಹರಿಜನ ಮಕ್ಕಳಿಗೆ ಅನ್ನ ಕೊಡುವರೆ ದೇವಸ್ಥಾನಗಳ ಹಣವನ್ನೊದಗಿಸಬೇಕೆಂದು ವಿನಂತಿಮಾಡಿಕೊಳ್ಳಲಾಯಿತು.

ಬೇರೆ ಬೇರೆ ಸ್ಥಾನಿಕ ಸಂಸ್ಥೆಗಳಲ್ಲಿ ಹರಿಜನರಿಗೆ ಪೂನಾ ಒಪ್ಪಂದದ ಮೇರೆಗೆ ಪ್ರಾತಿನಿಧ್ಯವೀಯಬೇಕೆಂದು ಸರಕಾರದೊಡನೆ ಕೇಳಿಕೊಳ್ಳಬೇಕೆಂದು ನಿಶ್ಚೈಲಾಯಿತು. ಘಟ್ಟಕ್ಕೆ ತೋಟಗಳಿಗೆ ಆಳುಗಳನ್ನು ಲೇಬರ್ ಡಿಪಾರ್ಟ್‌ಮೆಂಟಿನ ಮೂಲಕ ಕಳುಹಿಸುವ ಏರ್ಪಾಡು ಮಾಡಿ ಖಾಸಗಿಯಾಗಿ ಮೇಸ್ತ್ರಿಗಳ ಮೂಲಕ ಕಳುಹಿಸುವುದನ್ನು ನಿಷೇಧಿಸುವ ಕಾನೂನು ಮಾಡಬೇಕೆಂದು ಸರಕಾರವನ್ನು ಒತ್ತಾಯಪಡಿಸುವ ನಿರ್ಣಯವಾಡಲಾಯಿತು. ಜಿಲ್ಲೆಯ ಕಾಡುಗಳ ಅಪಾರ ಸಂಪತ್ತಿನ ಉಪಯೋಗ ಪಡೆದು ಕೈಗಾರಿಕೆಗಳನ್ನು ಸ್ಥಾಪಿಸಿ ಹರಿಜನರಿಗೆ ಉದ್ಯೋಗಗಳನ್ನೊದಗಿಸಿಕೊಡುವಂತೆ ಸರಕಾರವನ್ನು ಕೇಳಿಕೊಳ್ಳಬೇಕೆಂದಾಯಿತು.

ಮಂಗಳೂರಿನ ಕೃಷಿ ಇಲಾಖಾ ಇನ್ಸ್ಪೆಕ್ಟರರಾದ ಶ್ರೀ ಭಂಡಾರಿಗಳು ಜೇನು ನೊಣ ಮತ್ತು ಕೋಳಿಗಳ ವ್ಯವಸಾಯದ ಕುರಿತು ಪ್ರದರ್ಶನ ಮೂಲಕ ಭಾಷಣವಿತ್ತರು. ಶ್ರೀ. ಮುನಿಸ್ವಾಮಿ ಪಿಳ್ಳೆಯವರು ತಾ. 28ನೇ ಬೆಳಗ್ಗೆ ಮೂಲ್ಕಿ ಲೇಬರ್ ಸ್ಕೂಲನ್ನು ಸಂದರ್ಶಿಸಿ ಮೂಲ್ಕಿ ಕಾಂಗ್ರೆಸ್ ಕಮಿಟಿಯಿಂದ ಟೀಪಾರ್ಟಿ ಸತ್ಕಾರ ನಡೆದು ಮಂಗಳೂರಿಗೆ ತೆರಳಿದರು.

ಸತ್ಯಾಗ್ರಹ ಸಿದ್ಧತೆ

ಮಹಾತ್ಮ ಗಾಂಧಿಯವರ ಅಭಿಪ್ರಾಯ ಮತ್ತು ಕಾಂಗ್ರೆಸ್ ಜನರಲ್ ಸೆಕ್ರೆಟರಿಗಳ ಪತ್ರ್ಯಾಲರಿನ ಮೇರೆಗೆ ದೇಶವಲ್ಲೇ ಸತ್ಯಾಗ್ರಹ ಸಿದ್ಧತೆಯು ಭರದಿಂದ ನಡೆಯುತ್ತಿರುವುದು. ಸಂಯುಕ್ತ ಪ್ರಾಂತದ ನೈನಿತಾಲಿನಲ್ಲಿ ಕಾಂಗ್ರೆಸ್ ಮುಖಂಡರನ್ನು ತರಬೇತಿ ಮಾಡುವ ಶಿಬಿರವೊಂದನ್ನು ಪಂಡಿತ ಜವಾಹರಲಾಲರು ತೆರೆದಿರುತ್ತಾರೆ. ಇಲ್ಲಿ ತರಬೇತಾದವರು ಪ್ರಾಂತಿಕ ಬೇರೆ ಬೇರೆ ಕಡೆಗಳಿಗೆ ಹೋಗಿ ಇತರರನ್ನು ತರಬೇತಿ ಮಾಡುತ್ತಾರೆ. ಕಾಂಗ್ರೆಸ್ ಪ್ರೆಸಿಡೆಂಟರು ಮಾರ್ಚಿ ತಾ. 31ರಲ್ಲಿ ಈ ಶಿಬಿರವನ್ನು ಸಂದರ್ಶಿಸಿದರು. ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಎಗ್ಸಿಕ್ಯೂಟಿವ್ ಕಮಿಟಿಯವರು ಸಭೆ ಸೇರಿ ಸತ್ಯಾಗ್ರಹ ಕಮಿಟಿಯನ್ನು ಸ್ಥಾಪಿಸಿರುವರು. ಮತ್ತು ಪ್ರಾಂತದ ಬೇರೆ ಬೇರೆ ಕಡೆಗಳಲ್ಲಿ ಈ ಕಮಿಟಿಗಳನ್ನು ಸ್ಥಾಪಿಸಿ ಸತ್ಯಾಗ್ರಹಿಗಳನ್ನು ಸೇರಿಸಿ ಶ್ರೀ ಶಂಕರರಾವ್ ದೇವರನ್ನು ನೇಮಿಸಿರುವರು. ಕರಾಚಿ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು, ಸಿಂಧಿ ಪ್ರಮುಖ ಕಾಂಗ್ರೆಸ್ ಮುಖಂಡರುಗಳನ್ನೊಳಗೊಂಡ 16 ಮಂದಿಯ ಕಮಿಟಿಯೊಂದನ್ನು ಆರಿಸಿ ಈ ಕಮಿಟಿಯವರು ಸ್ವಯಂಸೇವಕರನ್ನು ಸೇರಿಸಿ ಗಾಂಧಿಜಿಯವರು ಸೂಚಿಸಿರುವ ಕಾರ್ಯಕ್ರಮವನ್ನು ಜ್ಯಾರಿಗೆ ತರಬೇಕೆಂದು ನಿರ್ಧರಿಸಿರುವರು. ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕಮಿಟಿಯ ಕಾರ್ಯ ನಿರ್ವಾಹಕ ಮಂಡಲಿಯವರು ಸಭೆ ಸೇರಿ ಸತ್ಯಾಗ್ರಹ ಕಮಿಟಿಗಳನ್ನು ಶೀಘ್ರವಾಗಿ ಸ್ಥಾಪಿಸುವ ನಿರ್ಧಾರ ಮಾಡಿರುವರು.

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 31/1939

ವಾಸ್ತೇವಭಟ್ಟ ಕೂಡಾ— ವಾದಿರು.

ಮತ್ತು

ಅಚ್ಯುತಭಟ್ಟ ಕೂಡಾ— ಪ್ರತಿವಾದಿರು.

ಇವರೊಳಗೆ—

ಸದ್ರಿ ವ್ಯಾಜ್ಯದ ಬೇಮ್ರೋಡ ಅಪ್ಪಾಜಿ ಗೋವಿಂದಭಟ್ಟರ ಮಗ ಕುಂಬಳಾಜೆ ಗ್ರಾಮದಲ್ಲಿರುವ 4ನೇ ಪ್ರತಿವಾದಿ ಪದ್ಮನಾಭ ಭಟ್ಟ 1. ಬದ್ಯೆಕರಿ ಗೋವಿಂದಭಟ್ಟರ ಮಕ್ಕಳು, ಕಾಟಕ್ಕ ಗ್ರಾಮದಲ್ಲಿರುವ 7ನೇ ಪ್ರತಿವಾದಿ ವಿಷ್ಣು ಭಟ್ಟ, 1-8ನೇ ಪ್ರತಿವಾದಿ ವೆಂಕ್ಟೇಶ ಭಟ್ಟ, 1-9ನೇ ಪ್ರತಿವಾದಿ ಮಾಧವಭಟ್ಟ 1 ಕೂಡಾ 4 ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ದಾವಾ ಆಸ್ತಿಗಳ ಮೂಲಿಕಕ್ಕನ ವಿಲವಿನಿಂದಗೇಣ ಬಾಕಿ ರೂಪಾಯಿ 930-8-4 ವ ಮುಂದಿನ ಹುಟ್ಟುವಳಿ ಸಮೇತ ಅಸ್ತಿ ಸ್ವಾಧೀನತೆ ಬಗ್ಗೆ ದಾಖಲಾದ ಮೇಲ್ಕಂಡ ವ್ಯಾಜ್ಯವು ತಾರೀಕು 12-4-40ಕ್ಕೆ ಅಪ್ಪರು ತನ್ನ ಬಗ್ಗೆ ಇಟ್ಟಿರುವುದರಿಂದ ಸದ್ರಿ ವ್ಯಾಜ್ಯದಲ್ಲಿ ನಮಗೆ ಸ್ಟೇಟುಮೆಂಟು ವಗೈರೆ ಕೊಟ್ಟು ಉದಹರಿಸಲಿಕ್ಕಿದ್ದರೆ ಸದ್ರಿ ತಾರೀಕಿಗೆ ಕೋರ್ಟು ಮುಂದೆ ಉದಾಹರಣೆ ವರುಜುವಾತು ಸಮೇತ ಹಾಜರಾಗತಕ್ಕದ್ದು. ಇಲ್ಲವಾದರೆ ಸದ್ರಿ ನಿಮ್ಮ ಗೈರಹಾಜರಿಯಲ್ಲಿ ಎಕ್ಸ್‌ಪಾರ್ಟೆಯಾಗಿ ತೀರ್ಮಾನಿಸಲಾದೀತು.

S. Lakshman Rao,
ವಾದಿರ ಕಡೆ ವಕೀಲ,
ಕಾಸರಗೋಡು, ತಾ. 2-4-1940.

ಫಿನ್ನಿಶ್ ಯುದ್ಧದಿಂದಾದ ಸೈನಿಕರ ನಾಶ

ಫಿನ್ಲೆಂಡ್ ಮತ್ತು ರಷ್ಯಗಳೊಳಗೆ ಸುಮಾರು 3 ತಿಂಗಳುಗಳ ವರೆಗೆ ಭೀಕರವಾಗಿ ನಡೆದ ಕದನದಲ್ಲಿ 48,795 ಸೋವಿಯೆಟ್ ಸೈನಿಕರು ಕೊಲ್ಲಲ್ಪಟ್ಟು 158,863 ಮಂದಿ ಗಾಯಗೊಂಡಿರುವರು, ಈ ಯುದ್ಧದಲ್ಲಿ ಹತರಾದ ಫಿನ್ನಿಶ್ ಸೈನಿಕರ ಸಂಖ್ಯೆಯು 60,000ಕ್ಕಿಂತ ಮಿಕ್ಕಿರುವುದೆಂದೂ 250,000 ಮಂದಿ ಗಾಯಗೊಂಡಿರುವರೆಂದೂ ಅಂದಾಜುಮಾಡಲಾಗಿದೆ. ಕೇವಲ 16,000 ಫಿನ್ನರು ಮಾತ್ರ ಕೊಲ್ಲಲ್ಪಟ್ಟರೆಂಬ ಫಿನ್ನರ ಹೇಳಿಕೆಯನ್ನು ನಂಬಲು ಸಾಧ್ಯವಿಲ್ಲ.

ಚೈನದಲ್ಲಿ ಗೊಂಬೆ ರಾಜ್ಯಭಾರ

ಮಾರ್ಚಿ ತಾ. 30ರಲ್ಲು ನಾನ್ಕಿಂಗಿನಲ್ಲಿ ಜಪಾನು ಚೈನದಲ್ಲಿ ಸ್ಥಾಪಿಸಿರುವ ವಾಂಗ್ ಚಿಂಗ್ ವೈಯವರ ರಾಜ್ಯಭಾರವು ಈಗ ಆಡಳಿತವನ್ನಾರಂಭಿಸಿರುವುದು. ಅದನ್ನು ಲೋಕದ ಇತರ ರಾಷ್ಟ್ರಗಳು ಅಂಗೀಕರಿಸುವಂತೆ ಜಪಾನು ಒತ್ತಾಯ ಪಡಿಸುತ್ತಿರುವುದು. ಜಪಾನ ಕೈಗೊಂಬೆಯಾಗಿ ಚೀನೀ ರಾಷ್ಟ್ರ ವಿಘಾತುಕವಾದ ಈ ರಾಜ್ಯಭಾರವನ್ನು ಅಂಗೀಕರಿಸಬಾರದೆಂದು ಚೀನೀ ರಾಷ್ಟ್ರೀಯ ಸರಕಾರವು ಇತರ ರಾಷ್ಟ್ರಗಳೊಡನೆ ವಿನಂತಿ ಮಾಡಿಕೊಂಡಿರುವುದು. ಅಮೇರಿಕ ಮತ್ತು ಇಂಗ್ಲೆಂಡುಗಳು ವಾಂಗ್ ಚಿಂಗರ ಸರಕಾರವನ್ನು ಅಂಗೀಕರಿಸಲು ಸಾಧ್ಯವಿಲ್ಲೆಂದು ತಿಳಿಸಿರುವವು.

NOTICE.

In the Court of District Munsiff, Puttur.

O. P. 13/1940

Bipathumma ... *Petitioner.*

Khatiza, wife of Henthar Ibrayi Beary and daughter of Batladka Hammade Beary. Bundar Village, Puttur Taluk. } *Respondent.*

Please take notice that the above petition for grant of a "Succession certificate" under section 372 of Act 39/25 filed by petitioner to collect the amounts due to her deceased husband Batladka Hammade Beary stands posted for hearing to 1—6—40 at 10 A. M. If persons interested in objecting to the grant fail to appear and contest on the said date orders will be passed exparte.

(*Sd*) **H. Pundarik Bhat,**
Pleader for Petitioner
Puttur, 30—3—40.

ದಕ್ಷಿಣಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 1-4-1940.

ಮಣ್ಣಗುಡ್ಡೆ ಮ್ಯುನಿಸಿಪಲ್ ಶಾಲೆಗೆ ಹೊಸ ಕಟ್ಟಡ— ಮಂಗಳೂರು ಶಹರಿಗೆ ಸೇರಿದ ಮಣ್ಣಗುಡ್ಡೆ ಮ್ಯುನಿಸಿಪಲ್ ಶಾಲೆಗೆ ಶ್ರೀ. ಪುತ್ತು ವೈಕುಂಠ ಶೇಟ್‌ರವರು ತಮ್ಮ ಖರ್ಚಿನಿಂದ ಕಟ್ಟಿಸಿಕೊಟ್ಟ ಹೊಸ ಕಟ್ಟಡದ ಪ್ರವೇಶೋತ್ಸವವು ಕಳೆದ ತಾ. 25ನೇ ಸಾಯಂಕಾಲ ನಗರಸಭೆಯ ಆರೋಗ್ಯಖಾತೆಯ ಅಧಿಕಾರಿಗಳಾದ ಡಾ. ಸುಬ್ರಾಯ ಬಾಳಿಗರವರಿಂದ ನೆರವೇರಿಸಲ್ಪಟ್ಟಿತು. ನಗರಸಭಾಧ್ಯಕ್ಷರಾದ ಶ್ರೀ. ಬಿ. ವಿ. ಬಾಳಿಗ ಯಂ. ಎಲ್. ಎ. ಯವರು ಅಧ್ಯಕ್ಷತೆ ವಹಿಸಿದ್ದರು. ಸಭಾಧ್ಯಕ್ಷರು ಶ್ರೀ. ಶೇಟ್‌ರವರ ಧರ್ಮಬುದ್ಧಿಯನ್ನು ಬಹಳವಾಗಿ ಪ್ರಶಂಸಿಸಿ ಮಾತಾಡಿದರು. ಮತ್ತು ಅವರ ಉಚ್ಚ ಮೇಲ್ಪಂಕ್ತಿಯನ್ನು ಇತರರೂ ಅನುಸರಿಸಬೇಕೆಂದರು. ಸಭಿಕರ ಪೈಕಿ ಹಲವರು ಇದೇ ಅಭಿಪ್ರಾಯಗಳನ್ನು ಸೂಚಿಸಿ ಭಾಷಣಮಾಡಿದರು. ಅನಂತರ ಡಾ. ಸುಬ್ರಾಯ ಬಾಳಿಗರು ಶ್ರೀಮಾನ್ ಶೇಟ್‌ರವರು ತಮ್ಮ ಧನವನ್ನು ಲೋಕೋಪಕಾರದ ಕೆಲಸಗಳಿಗೆ ಉಪಯೋಗಿಸುತ್ತಿರುವರೆಂದೂ, ತಾವು ಹಿರಿಯರಿರುವ ಪುತ್ತು ವೈಕುಂಠ ಶೇಟ್ ಹಾಲ್ ಎಂಬ ಕಟ್ಟಡವೇ ಇದಕ್ಕೆ ಸಾಕ್ಷಿಯೆಂದೂ, ಶ್ರೀ. ಶೇಟ್‌ರವರ ಕೀರ್ತಿಯು ಅಚಂದ್ರಾರ್ಕವಾಗಿ ವೃದ್ಧಿಸಲೆಂದೂ ಹೇಳಿ, ಸಭಿಕರ ಜಯಕಾರದೊಡನೆ ಕಟ್ಟಡದ ಪ್ರವೇಶೋತ್ಸವವನ್ನು ನೆರವೇರಿಸಿದರು. ಅನಂತರ ಬಂದಿದ್ದ ಅಧಿಕಾರಿಗಳಿಗೂ ಅನಧಿಕಾರಿಗಳಿಗೂ ಮತ್ತು ಪುರಜನರಿಗೂ ಟೀಪಾರ್ಟಿಸತ್ಕಾರವು ನಡೆದು ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ರಾಮಗಡ ಕಾಂಗ್ರೆಸಿನ ವಿಷಯ ಉಪನ್ಯಾಸ—ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿ ರಾಮಘಡ ರಾಷ್ಟ್ರಾಧಿವೇಶನಕ್ಕೆ ಚಿತ್ತೈಸಿದ್ದ ಶ್ರೀ| ಯಂ. ಧರ್ಮರಾಜ ಅಧಿಕಾರಿಗಳು ಕಳೆದ ತಾ. 26ರಲ್ಲಿ ಕಾಂಗ್ರೆಸಿನಲ್ಲಿ ತಾವು ನಡೆದ ಅನುಭವಗಳನ್ನು ಮಂಗಳೂರು ಪುರಜನರಿಗೆ ತಿಳಿಸಿದರು. ಶ್ರೀ| ಕೋಟಿಯಾ ಕೇಶವ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಸಭೆಯು ಆರಂಭವಾಗುವ ಮುಂಚಿತವಾಗಿ ದಿವಂಗತ ಯಾಕೂಬ್ ಹಸನರ ವಿಷಯದಲ್ಲಿ ದುಃಖಸೂಚಕ ಠರಾವನ್ನು ಅಧ್ಯಕ್ಷರು ಸೂಚಿಸಿದರು. ಶ್ರೀ| ಎಸ್. ಎನ್. ಹೊಳ್ಳರು ಮಿ| ಯಾಕೂಬ್ ಹಸನರ ಜೀವನ ಚರಿತ್ರೆಯನ್ನು ಸಂಕ್ಷೇಪವಾಗಿ ಮಹಾಜನರ ಮುಂದಿರಿಸಿದರು. ಠರಾವು ಸರ್ವಾನುಮತದಿಂದ ಮಂಜೂರಾಯಿತು. ಆ ಮೇಲೆ ಶ್ರೀ| ಧರ್ಮರಾಜ ಅಧಿಕಾರಿಗಳು ಒಂದುವರೆ ತಾಸಿಗಳ ವರೆಗೆ ಭಾಷಣ ಮಾಡುತ್ತಾ ರಾಮಘಡದಲ್ಲಿ ತಾವು ಹೊಂದಿದ ಅನುಭವಗಳನ್ನು ಸೂಚಿಸಿ, ಸದ್ಯದಲ್ಲಿಯೇ ಮಹಾತ್ಮರು ಸ್ವಾತಂತ್ರ್ಯಸಮರವನ್ನು ಹೂಡಲು ನಿರ್ಧರಿಸುವರೆಂದು ತಮಗೆ ತೋರಿದೆಯೆಂದೂ, ಪ್ರತಿಯೊಂದು ಕಡೆಯಲ್ಲಿಯೂ ಕಾಂಗ್ರೆಸ್ ಪಕ್ಷದವರು ತಮ್ಮ ಒಳಜಗಳವನ್ನು ಬಿಟ್ಟು ದೇಶದ ಸ್ವಾತಂತ್ರ್ಯಸಮರದಲ್ಲಿ ಸಕಲರೂ ಒಂದಾಗಿ ಸೇರುವುದು ಅಗತ್ಯವೆಂದೂ ಹೇಳಿದರು. ಶ್ರೀ. ಎಸ್. ಎನ್. ಹೊಳ್ಳರು ರಾಮಗಡ ಕಾಂಗ್ರೆಸಿನಲ್ಲಾದ ಠರಾವನ್ನು ಜನರಿಗೆ ವಿವರಿಸಿ ಹೇಳಿದರು. ಬೇರೆ ಕೆಲವರು ಮಾತಾಡಿದ ಮೇಲೆ ಅಧ್ಯಕ್ಷರ ಸಮಯೋಚಿತ ಭಾಷಣದೊಂದಿಗೆ ಸಭಾಂತ್ಯವಾಯಿತು.

ಆಗಮನ—ಕಳೆದ ಮಂಗಳವಾರ ಸಾಯಂಕಾಲ ಮೂಲ್ಕಿ ಪರಿಷತ್ತಿನ ಪರಿಷತ್ತಿನ ನಿಯೋಜಿತ ಅಧ್ಯಕ್ಷರಾದ ಶ್ರೀ. ವಿ. ಎ. ಮುನಿಸ್ವಾಮಿ ಪಿಳ್ಳೆಯವರು ಮಂಗಳೂರಿಗೆ ಚಿತ್ತೈಸಿದರು. ಶ್ರೀಗಳಾದ ಎ. ಬಿ. ಶೆಟ್ಟಿ, ಯಂ. ಎಲ್. ಎ.; ಡಾ. ಕೆ. ವಿಟ್ಠಲ ಶೆಟ್ಟಿ, ಕೆ. ಈಶ್ವರ ಯಂ. ಎಲ್. ಎ.; ಡಾ. ಎಚ್. ವಿ. ಆಚಾರ ಇವರೇ ಮೊದಲಾದ ಮಹನೀಯರು ಅವರನ್ನು ಸ್ವಾಗತೀಕರಿಸಿದರು. ಶ್ರೀ. ಈಶ್ವರನವರು ಶ್ರೀ. ಪಿಳ್ಳೆಯವರಿಗೆ ಹೂವಿನ ಹಾರವನ್ನು ಹಾಕಿ ಸತ್ಕರಿಸಿದರು.

ಬಿಶೋಪರ ಉಪದೇಶ—ಕಳೆದ ತಾ. 29ರಲ್ಲಿ ಲೇಡಿ ಹಿಲ್ ಸೆಕೆಂಡರಿ ಶಾಲೆಯ ವಾರ್ಷಿಕೋತ್ಸವವು ಮಂಗಳೂರಿನ ಪೂಜ್ಯ ಬಿಶೋಪರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರ್ದಿವಾಚನಗಳಾದ ತರುವಾಯ ಮಕ್ಕಳಿಗೆ ಇನಾಮು ಹಂಚಲಾಯಿತು. ಅನಂತರ ಅಧ್ಯಕ್ಷರು ಭಾಷಣಮಾಡುತ್ತಾ, ಕೆಥೋಲಿಕರ ಮಕ್ಕಳಿಗೆ ಕೆಥೊಲಿಕ ವಿದ್ಯಾಭ್ಯಾಸವನ್ನು ಕೆಥೊಲಿಕ ವಾತಾವರಣದಲ್ಲಿ, ಕೆಥೊಲಿಕ ಶಾಲೆಯಲ್ಲಿ ಕೆಥೊಲಿಕರಿಂದಲೇ ವಿದ್ಯೆಯನ್ನು ಕೊಡಿಸಬೇಕೆಂದೂ, ಇತರ ಶಾಲೆಗಳಲ್ಲಿ ಕೆಥೊಲಿಕರಿಗೆ ಬೇಕಾದ ವಿದ್ಯೆ ದೊರೆಯಲಾರದೆಂದೂ, ಆದ್ದರಿಂದ ಇತರ ಶಾಲೆಗಳಿಗೆ ಮಕ್ಕಳನ್ನು ಕಳುಹಿಸದೆ, ಕೆಥೊಲಿಕರ ಹುಡುಗಿಯರನ್ನು ಲೇಡಿ ಹಿಲ್ ಶಾಲೆಗೆ, ಇಲ್ಲವೆ ಸೈ. ಅಗ್ನೇಸ್ ಕಾಲೇಜಿಗೆ ಸೇರಿಸಬೇಕೆಂದೂ ಹಿತಬೋಧೆ ಮಾಡಿದರು. ಮಕ್ಕಳ ವಿವಿಧ ಚಟುವಟಿಕೆಗಳಾಗಿ ಧನ್ಯವಾದಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಶ್ರೀ ಸುಬ್ರಹ್ಮಣ್ಯ ಮಠದ ಗುರುಗಳು—ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿಶ್ವಜ್ಞತೀರ್ಥ ಶ್ರೀಪಾದಂಗಳವರು ಮಂಗಳೂರಲ್ಲಿಯೇ ಇರುವರು. ಇವರನ್ನು ಶಿಷ್ಯವೃಂದದವರು ಅತ್ಯಂತ ಆದರದಿಂದ ಬರಮಾಡಿಕೊಂಡು ಪಾದಪೂಜೆಮಾಡಿ, ಭಿಕ್ಷೆ ಇಗಳನ್ನು ಕೊಟ್ಟು ಗುರುಕಟಾಕ್ಷಕ್ಕೆ ಪಾತ್ರರಾಗುತ್ತಿರುವರು.

ಮಂಗಳೂರು ನಗರಸಭೆ—ಮಂಗಳೂರು ನಗರಸಭೆಯ ಸಾಮಾನ್ಯ ಸಭೆಯೊಂದು. ಕಳೆದ ಶನಿವಾರ (ತಾ. 30) ಸಾಯಂಕಾಲ ನಡೆಯಿತು. ಚೇರ್‌ಮೇನರಾದ ಶ್ರೀ. ಬಿ. ವಿ. ಬಾಳಿಗ ಯಂ. ಎಲ್. ಎ. ಇವರು ಆಗ್ರಾಸನ ವಹಿಸಿದ್ದರು. ಸಾಮಾನ್ಯ ವಿಷಯಗಳನ್ನು ತೀರ್ಮಾನಿಸಿದ ಅನಂತರ ಸರಕಾರಿ ಟ್ರೇಡ್ ಸ್ಕೂಲಿನಲ್ಲಿ ಕಲಿಯುವ ಆರು ಮಂದಿ ವಿದ್ಯಾರ್ಥಿಗಳಿಗೆ ವೇತನಕೊಡಲು ರೂ. 66/-ನ್ನು ಮಂಜೂರು ಮಾಡಿದರು. ಆಬಾದಮೇಲೆ ಒಂದು ಮನೆಯ ಗೋಡೆಯನ್ನು ತೆಗೆದು ಒಂದು ಕಿಟಿಕಿಯನ್ನೋ ಅಥವಾ ಗೋಡೆಯನ್ನೋ ಇಡಿಸಿದರೆ ಅದು ಹೊಸ ಕಟ್ಟಡವಾಗಿ ಪರಿಗಣಿಸಬಹುದೇ? ಎಂಬ ವಿಷಯದಲ್ಲಿ ಚರ್ಚೆ ನಡೆಯಿತು. ಶ್ರೀ. ಯಂ. ಮಾಧವರಾಯರು ಮಾತಾಡುತ್ತಾ, ನಗರಸಭೆಯು ಇಂತಹ ಪ್ರಶ್ನೆಯನ್ನು ಮೊದಲೇ ನಿರ್ಧಾರ ಮಾಡಿದೆಯೆಂದೂ, ಒಂದು ಕಿಟಿಕಿ ಅಥವಾ ಬಾಗಿಲನ್ನು ಇಡಿಸಿದರೆ, ಅಥವಾ ಬದಿರಿನ ಜಂತಿಗಳನ್ನು ತೆಗೆದು, ಮರದತುಗಳನ್ನು ಹಾಕಿಸಿದರೆ ಅವು ದುರಸ್ತಿಯಾಗಿ ಪರಿಗಣಿಸಬೇಕೆಂದರು. ಮಿ. ಶಿ. ಎಲ್. ಲೋಬೋರವರು ಈ ಪ್ರಶ್ನೆಯನ್ನು ಇನ್ನೂ ಚೆನ್ನಾಗಿ ವಿಚಾರಿಸಿ ತಿಳಿಯುವ ಬಗ್ಗೆ ಸಮಯ ಬೇಕೆಂದರು. ಚೇರ್‌ಮೇನರು ಉತ್ತರಕೊಡುತ್ತಾ ಈ ಪ್ರಶ್ನೆಯಲ್ಲಿ ವಿಶೇಷವಾಗಿ ತಿಳಿಯತಕ್ಕ ವಿಚಾರವೇನೂ ಇಲ್ಲವೆಂದೂ, ಕಿಟಿಕಿ, ಬಾಗಿಲುಗಳನ್ನಿಡುವುದು ಸಾಮಾನ್ಯ ರಿಪೇರಿ ಎಂದು ನಗರಸಭೆಯು ಈ ಮೊದಲೇ ನಿರ್ಧಾರಮಾಡಿದೆಯೆಂದೂ, ಆದರಲ್ಲಿಯೂ ಕೂಡ ರಸ್ತೆಯ ಬದಿಯಲ್ಲಿಲ್ಲದ ಕಟ್ಟಡಗಳಲ್ಲಿ ಯಾವ ಬಗೆಯ ಮಾರ್ಪಾಟನ್ನು ಮಾಡುವುದಕ್ಕೂ ಅಭ್ಯಂತರವಿಲ್ಲವೆಂದೂ, ರಸ್ತೆಯ ಬದಿಯಲ್ಲಿರುವ ಕಟ್ಟಡಗಳಲ್ಲಿಯೂ ಕೂಡ ಮೇಲೆ ಹೇಳಿದ ರೀತಿಯ ಚಿಲ್ಲರೆ ರಿಪೇರಿಯನ್ನು ಪ್ರತ್ಯೇಕ ಕಟ್ಟಡಕಟ್ಟುವ ಹಾಗೆ ಎಣಿಸುವುದು ಸಮಂಜಸವಲ್ಲವೆಂದೂ ಹೇಳಿದರು. ಅಲ್ಲಿಗೆ ಚರ್ಚೆಯು ಮುಗಿಯಿತು. ಸಭಾರಂಭದಲ್ಲಿ ಚೇರ್‌ಮೇನರು ದಿವಂಗತ ಯಾಕೊಬ್ ಹಸನರ ವಿಷಯದಲ್ಲಿ ಸಂತಾಪ ಸೂಚಿಸಿ ತಂದ ಠರಾವು ಮಂಜೂರಾಯಿತು. ಸಭಾಂತ್ಯದಲ್ಲಿ ಅಧ್ಯಕ್ಷರು, ನಗರಸಭೆಯವರು ವಿದ್ಯಾರ್ಥಿಗೆ

ಉಡುಪಿ

ತಿದ್ದುಪಡಿ—ಕಳೆದ ವಾರದ ನವಯುಗದಲ್ಲಿ ಶ್ರೀ ವಾದಿರಾಜ ಸ್ವಾಮಿಗಳ ಜನ್ಮೋತ್ಸವವು ತಾರೀಕು 26-3-'40ರಲ್ಲಿ ಜರಗಿತೆಂದು ಪ್ರಕಟವಾಗಿದೆ, ಇದು ಶ್ರೀ ವಾದಿರಾಜರ ಪುಣ್ಯತಿಥಿಯೆಂದಾಗಬೇಕು.

ಶ್ರೀ. ದಾಬೋಲ್ಕರರಿಗೆ ಸತ್ಕಾರಕೂಟ— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಡೈರೆಕ್ಟರರ ಮಂಡಳಿಯು ತಾ. 27-3-'40 ರಲ್ಲಿ ಬೇಂಕಿನ ವಠಾರದಲ್ಲಿ ಬೊಂಬಾಯಿಯ ಶ್ರೀ ಲಕ್ಷ್ಮೀಕಾಂತ ನಿಂತಾರಾಮ ದಾಬೋಲ್ಕರರಿಗೆ ಸುಸ್ವಾಗತವನ್ನು ಬಯಸಿ ಟೀಪಾರ್ಟಿ ಸತ್ಕಾರವನ್ನಿತ್ತು ಗೌರವಿಸಿತು. ಊರ ಪ್ರಮುಖರನೇಕರು ಈ ಸಮಾರಂಭಕ್ಕೆ ಆಮಂತ್ರಿತರಾಗಿದ್ದರು. ಬೇಂಕಿನ ಮೇನೇಜಿಂಗ್ ಡೈರೆಕ್ಟರರಾದ ಡಾ| ನಾಥ ಪೈಗಳು ಜಿಲ್ಲೆಯ ಬೇಂಕುಗಳ ಮುಖ್ಯತಃ ಸಿಂಡಿಕೇಟ ಬೇಂಕಿನ ಕಾರ್ಯಕಲಾಪಗಳ ಕುರಿತು ವಿವರವಾದ ವರದಿಯನ್ನೋದಿದ ಬಳಿಕ ಸನ್ಮಾನ್ಯ ಅತಿಥಿಗಳು ಹಾಜರಿದ್ದವರ ಪಂಚಯಮಾಡಿಕೊಂಡು, ಭಾಷಣಕೊಡುತ್ತ ಸಿಂಡಿಕೇಟ್ ಬೇಂಕಿನ ಪ್ರಶಂಸನೀಯ ಕಲಾಪಗಳ ಕುರಿತು ಬೊಂಬಾಯಿಯ ತನ್ನ ಮಿತ್ರಮಂಡಳಿಗೆ ತಿಳಿಸುವನಾಗಿ ಸೂಚನೆಯಿತ್ತರು. ಆಮಂತ್ರಿತ ಸಜ್ಜನರ ಪರವಾಗಿ ಶ್ರೀ. ಎ. ಲಕ್ಷ್ಮೀನಾರಾಯಣ ರಾಯರು ಚಿಕ್ಕ ಭಾಷಣವಿತ್ತ ಬಳಿಕ ಡಾ| ಮಾಧವ ಪೈಗಳವರ ಧನ್ಯವಾದಾರ್ಪಣೆಯೊಂದಿಗೆ ಸತ್ಕಾರಕೂಟವು ಕೊನೆಗೊಂಡಿತು.

ಹಿಂದುಸ್ಥಾನ ಸ್ಕೌಟ್ ಎಶೋಸಿಯೇಶನ್— ಇದರ ಶಾಖೆಯೊಂದನ್ನು ಉಡುಪಿಯಲ್ಲಿ ಸ್ಥಾಪಿಸುವರೆ ತಾ. 30-3-1940ರಲ್ಲಿ ಬೋರ್ಡು ಹೈಸ್ಕೂಲಿನಲ್ಲಿ ಒಂದು ಸಭೆ ಸೇರಿತು. ವಕೀಲ್ ಶ್ರೀ. ವಿಠಲ ಕಾಮತರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕಾರೀ ಮಂಡಳಿಗೆ ಶ್ರೀಗಳಾದ ವಿಠಲಕಾಮತ್ (ಪ್ರೆಸಿಡೆಂಟ್) ಡಾ| ಸುಂದರ ರಾಮ ಪೈ ಮತ್ತು ನಗರ್ ರಾಮರಾವ್ (ವೈಸ್ ಪ್ರೆಸಿಡೆಂಟರು) ಲಕ್ಷ್ಮೀನಿಧಿರಾವ್ (ಕಾರ್ಯದರ್ಶಿ) ಮೊದಲಾದವರನ್ನು ಆರಿಸಲಾಯಿತು. ಹಾಜಿ ಅಬ್ದುಲ್ಲಾ ಸಾಹೇಬರ ಸ್ಮರಣಾರ್ಥವಾಗಿ 'ರೋವರ್ ಕ್ರೂ' ಸ್ಥಾಪಿಸಲಾಯಿತು. ಶ್ರೀ. ಬಿ. ಎಮ್. ಬಾಳಿಗರನ್ನು ಅಸಿಸ್ಟೆಂಟ್ ಸ್ಕೌಟ್ ಕಮಿಶನರರ ಸ್ಥಳಕ್ಕೆ ಸೂಚಿಸಲಾಯಿತು. ಮಂಗಳೂರಿನ ಶ್ರೀ. ಎಮ್. ಎಸ್. ಮಾಧವರಾಯರು ಸಹ ಹಾಜರಿದ್ದರು.

ಉಡುಪಿ ಮುನಿಸಿಪಲ್ ಕೌನ್ಸಿಲು ಸಭೆ—ತಾ. 30-3-'40ರಲ್ಲು ಚೆಯರ್‌ಮೇನ್ ಶ್ರೀ. ಎ. ಎಲ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮೌಲಾನಾ ಯಾಕೊಬ್ ಹಸನರ ನಿಧನದ ಕುರಿತು ದುಃಖಸೂಚಕ ಠರಾವಾಯಿತು. ಮದ್ಯಪಾನ ನಿಷೇಧ ಪ್ರಸ್ತಾಪವನ್ನು ಪ್ರಕೃತ ಮುಂದರಿಸಲಾಯಿತು. ಸಂತೆಕಟ್ಟೆ ಅಶ್ವತ್ಥ ಮರವನ್ನು ಕಡಿಯುವ ವಿಷಯದಲ್ಲಿ ಹೆಚ್ಚು ಮಂದಿ ಪ್ರತಿಕೂಲ ಅಭಿಪ್ರಾಯವಿತ್ತುದರಿಂದ ಚೆಯರ್‌ಮೇನರು ಸಹ ಹಾಗೆಯೇ ಆಗಲೆಂದರು.

ಪ್ರಖ್ಯಾತ ದಂತವೈದ್ಯ, ಶ್ರೀ. ಕೆಂಚಣಗಾರ್, ಬೇಜ ಆಮಿನಾನರು

ಇವರು ಕೆಲವು ಸಮಯದ ಮೊದಲು ಮುಂಬಾಯಿಗೆ ಬಂದಿದ್ದು ಪುನಃ ಊರಿಗೆ ತೆರಳಿರುವರು. ಇವರು ದಂತವಿಜ್ಞಾನದಲ್ಲಿ ನಿಪುಣರು ಮತ್ತು ಪ್ರಖ್ಯಾತ ವೈದ್ಯರಾಗಿ ಮುಂಬಾಯಿ ಕನ್ನಡಿಗರ ಸೇವೆಯನ್ನು ಇಂದಿಗೆ ಮೂವತ್ತು ವರುಷಗಳಿಂದ ಮಾಡುತ್ತಿದ್ದು, ಹಲ್ಲಿನ ಯಾವತ್ತು ರೋಗವನ್ನು ನಾಶಮಾಡಿ ತಿದ್ದಿ ಕೃತಕ ದಂತಗಳನ್ನು ನಿರ್ಮಿಸುವುದು. ಪಿಂಗಾಣಿ ಹಲ್ಲು ಮೂಲಿಯನ್ನಿಡುವುದು, ಹಲ್ಲುಗಳನ್ನು ಶುಚಿಮಾಡುವುದು ಮೊದಲಾದ ಯಾವತ್ತು ದಂತಚಿಕಿತ್ಸೆಯಲ್ಲಿ ಹೆಸರು ಪಡೆದವರು. ಇವರಿಗೆ ಸ್ವಪೂರದಲ್ಲಿ ಸಹ ಕನ್ನಡ ಬಾಂಧವರು ಹೆಚ್ಚಿನ ಪ್ರೋತ್ಸಾಹವೀಯುವರೆಂದು ನಂಬಲಾಗಿದೆ.

ಹಾಕಲು ಕೇಳಿದ ಅನುಮತಿಯನ್ನು ಸರಕಾರದವರು ದಯಪಾಲಿಸಿರುತ್ತಾರೆಂದು ತಿಳಿಸಿದರು.

ವ್ಯಾಪಾರಿಗಳಿಗೆ ಜುಲುಮಾನೆ—ಬೆಬ್ಸ್ ಸ್ಟ್ ಮಾರ್ಕೇಟಿನಲ್ಲಿ ಕಟ್ಟಿದದಿಂದ ಹೊರಗೆ ವಸ್ತುಗಳನ್ನು ಮಾರಿದಂಬ ಕಾರಣದಿಂದ ಕೆಲ ವ್ಯಾಪಾರಿಗಳ ಮೇಲೆ ನಗರಸಭೆಯವರು ಬೆಂಚ್‌ಕೋರ್ಟಿನಲ್ಲಿ ಹೂಡಿದ ದಾವೆಯ ತೀರ್ಪು ತಾ. 30ರಲ್ಲಿ ಕೊಡಲ್ಪಟ್ಟಿತು. ವ್ಯಾಪಾರಿಗಳಿಗೆ ತಲಾ ಒಂದು ರೂಪಾಯಿಯಂತೆ ಜುಲುಮಾನೆ ವಿಧಿಸಿದ್ದಾರೆ.

ಎಲ್ಲೂರು—ಇದೇ ತಾ. 5-4-40ರಿಂದ ತಾ. 18-4-40ರ ವರೆಗೆ ಸ್ಥಳೀಯ ಶ್ರೀ ವಿಶ್ವನಾಥ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗತಕ್ಕ ಸಂಜೆ ಬಲಿಯಿಂದಾರಂಭಿಸಿ, ಕ್ರಮವಾಗಿ ನಿಯಮಿತ ದಿವಸಗಳಲ್ಲಿ ಧ್ವಜಾರೋಹಣ, ರಥೋತ್ಸವ, ಅವಭೃತಾದಿ ಮಹೋತ್ಸವಗಳು ಸಾಂಗವಾಗಿ ನೆರವೇರಲಿರುವುದಾಗಿಯೂ, ಭಕ್ತವೃಂದವು ಎಂದಿನಂತೆ ಬಂದು ಶ್ರೀ ದೇವರ ಕೃಪಾಪಾತ್ರರಾಗಲಿರುವರಾಗಿಯೂ ಹಾರೈಸೋಣಾಗುತ್ತದೆ.

ಕುಂದಾಪುರಿನ ಬಡ ನಿವಾಸಿಕರ ಗೋಳು—ಕುಂದಾಪುರ ಕಡವಿನ ಬಾಗಿಲಿನಿಂದ 3 ಫರ್ಲಾಂಗ್ ವರೆಗೆ ಇರುವ ರಾಜರಸ್ತೆಯು ಬಹಳ ಸಪೂರವಾಗಿಯೂ ಇಕ್ಕಟ್ಟಾಗಿಯೂ ಇರುತ್ತದೆ. ಸದ್ರಿ ರಸ್ತೆಯಲ್ಲಿ ಮೈಸೂರು ಜಿಲ್ಲೆಯಿಂದ ಆರು ಚಕ್ರಗಳುಳ್ಳ 13 ಮೋಟಾರ್ ಲಾರಿಗಳನ್ನು ಯಾವಾಗಲೂ ಹಗಲೂ ರಾತ್ರಿ ಅತಿ ಸ್ಪೀಡಿನಿಂದ ಬಿಡುತ್ತಾರೆ. ಅನೇಕಸಲ ಸಣ್ಣ ಸಣ್ಣ ಅಪಾಯಗಳೂ ಆಗುತ್ತಲಿರುತ್ತವೆ. ಸದ್ರಿ ರಸ್ತೆಯಲ್ಲಿ ಯಾವಾಗಲೂ ಎತ್ತಿನ ಗಾಡಿಯವರು ಸಹಾ ಗಾಡಿ ನಿಲ್ಲಿಸಿಕೊಂಡು ಸಾಮಾನು ಕಳುಹಿಸುವುದು ಇಳಿಸುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ. ಆ ಸಂಬಂಧ ಮನುಷ್ಯರಿಗೆ ರಸ್ತೆಯಲ್ಲಿ ತಿರುಗಾಡಲಿಕ್ಕೂ ವ ಸೈಕಲು ವಗೈರೆ ವಾಹನ ಬಿಡಲಿಕ್ಕೂ ಅತೀ ಕಷ್ಟವಾಗಿಯದೆ. ಇದರ ವಿಷಯ ಈ ವರೆಗೆ ಯಾರೂ ನಿಗಾ ತೆಗೆದುಕೊಂಡವರಿಲ್ಲ. ಈ ಎಲ್ಲಾ ಸಂಕಷ್ಟಗಳಿಂದ ಪಾರುಮಾಡುವವರಾರೆಂದೇ ತಿಳಿಯದಾಗಿದೆ. ಅಧಿಕಾರಿ ವರ್ಗದವರಿಗೆ ಇನ್ನಾದರೂ ಬಡವರಾದ ನಮ್ಮ ಮೇಲೆ ದಯ ಬಾರದೆ? ಎಂದೊಂದು ಬಾತ್ಮಿ.

ಕಾರ್ಕಳ—ಸ್ಥಳೀಯ ಶ್ರೀ. ವೆಂಕಟರಮಣ ಪಾಯಿಸ್ ಎಲಿಮೆಂಟರಿ ಮತ್ತು ಹಿಂದೂ ಬಾಲಿಕಾ ಪಾಠಶಾಲೆಗಳ ವಾರ್ಷಿಕ ಉತ್ಸವವು ಈ ರೇಂಜ ಡಿಪ್ಟಿ ಇನ್ಸ್‌ಪೆಕ್ಟರ ಶ್ರೀ. ಬಿ. ವಿ. ರಮಣ ಬಿ. ಎ., ಯಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಯಚ್. ಯನ್. ಉಪಾಧ್ಯಾಯರು ಸ್ವಸ್ತಿವಾಚನಮಾಡಿದರು. ಸಂದರ್ಭೋಚಿತ ಭಾಷಣ, ಸ್ಪರ್ಧೆ ಬಹುಮಾನ ವಿತರಣ, ಕನ್ನಡ, ಹಿಂದಿ, ತುಳು, ಸಂಸ್ಕೃತ ನಾಟಕಪ್ರಹಸನಾದಿಗಳ ಅಭಿನಯ ಇತ್ಯಾದಿ ಬೋಧಪ್ರದ ಮತ್ತು ಮನೋರಂಜಕ ಕಾರ್ಯಕ್ರಮವಿದ್ದಿತು.

ಬೊಂಬಾಯಿಯ ಶ್ರೀಮಂತ ಶ್ರೀ. ಲಕ್ಷ್ಮೀಕಾಂತನಿಂತಾರಾಮ ದಾಬೋಲಕರರವರು ತಾರೀಕು 28-3-40ರ ದಿನ ಇಲ್ಲಿ ಶ್ರೀ. ಕೆ. ಪಿ. ಶೇಷಗಿರಿ ಪ್ರಭುಗಳವರ ಸನ್ಮಾನ್ಯ ಅತಿಥಿಗಳಾಗಿ ಸಾರ್ವಜನಿಕ ಸಂಘ ಸಂಸ್ಥೆಗಳಿಗೆ ಸಂದರ್ಶನವನ್ನಿತ್ತು ಅವುಗಳ ಕಾರ್ಯಕಲಾಪಗಳ ಕುರಿತು ತಮ್ಮ ಸಂತೋಷವನ್ನು ತೃಪ್ತಿಯನ್ನೂ ವ್ಯಕ್ತಪಡಿಸಿ, ಸಾಯಂಕಾಲ ಶ್ರೀ ವೆಂಕಟ್ರಮಣ ಪಾಯಿಸ್ ಎಲಿಮೆಂಟರಿ ಶಾಲೆಯಲ್ಲಿ ಅವರ ಸನ್ಮಾನಾರ್ಥ ಕೂಡಿದ ಉಪಾಹಾರಕೂಟದಲ್ಲಿ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಪರವಾಗಿ ಶ್ರೀ. ವಕೀಲ ಕೆ. ವೆಂಕಟೇಶ ಪೈಯವರು ಅರ್ಪಿಸಿದ ಅಭಿನಂದನ ಪತ್ರಕ್ಕೆ ಸಂದರ್ಭೋಚಿತ ಸದುತ್ತರವನ್ನಿತ್ತು, ಕಾರ್ಕಳ ಶ್ರೀ ವೆಂಕಟ್ರಮಣ ದೇವಾಲಯವು ತನ್ನ ಮಿಗತೆ ಆದಾಯವನ್ನು ಶಿಕ್ಷಣ ಪ್ರಚಾರದಂಥ ಪರೋಪಕಾರ್ಯಗಳಿಗೆ ವಿನಿಯೋಗಿಸಿ ಮಾರ್ಗದರ್ಶಕವಾಗಿರುವುದು ಆನಂದಕರವಾಗಿದೆ ಎಂದರು. ದೇವದರ್ಶನ ಇತ್ಯಾದಿ ಪಡೆದು ಮರುದಿನ ಶ್ರೀ ದಾಬೋಳಕರರು ಧರ್ಮಸ್ಥಳಕ್ಕೆ ತೆರಳಿದರು.

ಕಳೆದ ಫೆಬ್ರುವರಿ ತಿಂಗಳಲ್ಲಿ ಈ ಕೇಂದ್ರದಲ್ಲಾದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾರಂಭಿಕ ಪರೀಕ್ಷೆಗಳನ್ನು ಕೊಟ್ಟ 31 ಮಂದಿಯಲ್ಲಿ ಪ್ರಾಥಮಿಕದಲ್ಲಿ 6ರಲ್ಲಿ 5, ಮಧ್ಯಮದಲ್ಲಿ 14ರಲ್ಲಿ 8 ಮತ್ತು ರಾಷ್ಟ್ರಭಾಷೆಯಲ್ಲಿ 11ರಲ್ಲಿ 10 ಒಟ್ಟು 23 ಮಂದಿ ಉತ್ತೀರ್ಣರಾಗಿದ್ದಾರೆ. ಅವರ ಪೈಕಿ ಶ್ರೀಮತಿ ಸೀತಾದೇವಿಯವರು ಪ್ರಾಥಮಿಕದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರೆಂದು ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ.

ಎಡ್ವರ್ಡ ಕೊರೊನೇಶನ ಕ್ಲಬ್ಬಿನಲ್ಲಿ ಕಳೆದ ವಾರ ಕೂಡಿದ ಸಾರ್ವಜನಿಕ ಸಭೆಯಲ್ಲಿ ಶ್ರೀ. ಎ. ಬಿ. ಶೆಟ್ಟಿ ಯಂ. ಯಲ್. ಎ. ರವರು 'ಪ್ರಪಂಚ ಸ್ಥಿತಿ ಮತ್ತು ಅದನ್ನು ಸುಧಾರಿಸುವ ಉಪಾಯಗಳು' ಎಂಬ ಕುರಿತು ಇಂಗ್ಲಿಷಿನಲ್ಲಿ ಒಂದು ಅಮೋಘವಾದ ಭಾಷಣವನ್ನು ಕೊಟ್ಟರು.

ವಿವಿಧ ಸಮಾಚಾರ

ರಷ್ಯವು ಪೆಟ್ರೋಲ್ ಸಂಗ್ರಹಿಸುತ್ತಿದೆ.

ರಷ್ಯದ ಸೋವಿಯೆಟ್ ಸರಕಾರವು ಪೂರ್ವದ ವ್ಲಾಡಿವೊಸ್ಟಕ್ ಬಂದರದ ಮೂಲಕ ಹೆಚ್ಚಿನ ಪೆಟ್ರೋಲನ್ನು ಭರದಿಂದ ತರಿಸಿ ಸಂಗ್ರಹಿಸುತ್ತಿದೆಯೆಂದು ಜಪಾನು ಪ್ರಕಟಿಸಿರುವುದು. ತನ್ನ ಪೂರ್ವ ಪ್ರದೇಶದ ಪೆಟ್ರೋಲ್ ಉತ್ಪತ್ತಿಯನ್ನು ಕೂಡಾ ಹೆಚ್ಚಿಸಲು ರಷ್ಯವು ಪ್ರಯತ್ನಿಸುತ್ತಿರುವುದು.

ದೊಡ್ಡ ಚೀನೀ ವಿಜಯ

ಚೀನೀಯರು ಇಂಡೋ ಚೈನಾ ವ್ಯಾಪಾರ ಮಾರ್ಗದಲ್ಲಿರುವ ಲಿಂಗ್‌ಶಾನ್ ಎಂಬ ಸಂದುಕಟ್ಟಿನ ಸ್ಥಳವನ್ನು ಜಪಾನರಿಂದ ಗೆದ್ದು ಈ ಯುದ್ಧದಲ್ಲಿ ಸುಮಾರು 5000 ಮಂದಿ ಜಪಾನ ಸೈನಿಕರು ಕೊಲ್ಲಲ್ಪಟ್ಟಿರುವರಷ್ಟೆ. ಈಗ ಯೆಲ್ಲೋನದಿಯ ಉತ್ತರದಲ್ಲಿರುವ ವಾಯುವನ್ ಎಂಬ ಪಟ್ಟಣವನ್ನು ಜಪಾನರಿಂದ ವಶಪಡಿಸಿಕೊಂಡಿರುವರು. ಇದು ಹೊರತು ವಾಯುವನಿಗಿಂತ 40ಮೈಲು ಉತ್ತರದಲ್ಲಿ ಸಂದುಕಟ್ಟಿನಲ್ಲಿರುವ ಪರ್ವತ ಕಣಿವೆಯನ್ನು ಗೆದ್ದು ತಮ್ಮ ಸ್ಥಾನವನ್ನು ಬಲಪಡಿಸಿರುವರು.

ಮಿತ್ರ ರಾಷ್ಟ್ರಗಳಿಗೆ ಅಮೇರಿಕಾದ ವಿಮಾನಗಳು

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ಮಿತ್ರ ರಾಷ್ಟ್ರಗಳಿಗೆ ಅತ್ಯಾಧುನಿಕ ರೀತಿಯ ಯುದ್ಧ ವಿಮಾನಗಳನ್ನೊದಗಿಸಲು ಒಪ್ಪಿಗೆಕೊಟ್ಟಿರುವುದು. ಇಷ್ಟರಲ್ಲೇ ಇಂಗ್ಲೆಂಡ್ ಮತ್ತು ಫ್ರಾನ್ಸುಗಳು 150 ಮಿಲ್ಯ ಪವನುಗಳಿಗಿಂತಲೂ ಮಿಕ್ಕಿದ ಕ್ರಯದ ವಿಮಾನಗಳಿಗೆ ಓರ್ಡರ್ ಕೊಟ್ಟಿರುತ್ತವೆ. ಜರ್ಮನಿಯು ಈಗ ತಿಂಗಳಿಗೆ 3000 ಯುದ್ಧ ಹಡಗಗಳನ್ನು ತಯಾರಿಸುತ್ತಿರುವುದೆಂದೂ, ಇನ್ನು ಮುಂದೆ ತಿಂಗಳಿಗೆ 3000 ತಯಾರಿಸಲಾಗುವುದೆಂದೂ ಅಮೇರಿಕದಲ್ಲಿ ಸುದ್ದಿಯುಂಟಾಗಿದೆ.

೪೦,೦೦೦ ವಿಮಾನ ತಯಾರಿ

ಲೋಕದ ಇತರ ರಾಷ್ಟ್ರಗಳ ವಿಮಾನಗಳಿಗಿಂತ ಶ್ರೇಷ್ಠ ತರಗತಿಯ 6 ತರದ ಯುದ್ಧ ವಿಮಾನಗಳನ್ನು ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ತಯಾರಿಸಿಕೊಂಡಿರುವುದು. 1940ರೊಳಗೆ ಯುನೈಟೆಡ್ ಸ್ಟೇಟ್ಸು ಪ್ರತಿ ವರ್ಷ 30,000ದಿಂದ 40ಸಾವಿರದ ವರೆಗೆ ಯುದ್ಧ ವಿಮಾನಗಳನ್ನು ತಯಾರಿಸುವುದು.

೧೨೮ ಜರ್ಮನ್ ವಿಮಾನಗಳ ನಾಶ

6ತಿಂಗಳ ವಿಮಾನ ಹೋರಾಟದ ಪರಿಣಾಮವಾಗಿ ಬ್ರಿಟಿಷ್ ವಿಮಾನ ಪಡೆಯವರು ಮತ್ತು ವಿಮಾನ ಭೇದಕ ತೋಪುಗಳು 128 ಜರ್ಮನ್ ವಿಮಾನಗಳನ್ನು ನಾಶಗೊಳಿಸಿರುವವು. ಇದು ಹೊರತು 44 ವಿಮಾನಗಳು ಹೆಚ್ಚಿನ ಜಖಮ್ ಪಡೆದು ಜರ್ಮನಿಗೆ ಪ್ರಾಯಶಃ ಹಿಂತಿರುಗಿರುವುದಿಲ್ಲ. ಮಾರ್ಚ ತಾ. 26ರಲ್ಲು ಜರ್ಮನ್ ವಿಮಾನಗಳು ಮೂರು, ಏಳು ಹದಿಮೂರರ ಸಾಲಿನಲ್ಲಿ ಮೆಗಿನೆಟ್ ಸೋಟಿ ದಾಟಿ ಫ್ರಾನ್ಸಿನ ಮೇಲೇರಿ ಹೋದಾಗ ಬ್ರಿಟಿಷ್ ವಿಮಾನಗಳು ಅವುಗಳನ್ನು ತಡೆದು 3ಕಡೆಗಳಲ್ಲಿ ಹೋರಾಟ ನಡೆದು 5ಜರ್ಮನ್ ವಿಮಾನಗಳು ನಾಶ ಮಾಡಲ್ಪಟ್ಟಿರುವವು.

ಇಂಡಿಯಾ ಸೆಕ್ರೆಟರಿಗಳ ಹೊಸ ಸಲಹೆಗಾರರು

ಮೊದಲೊಮ್ಮೆ ಇಂಡಿಯಾ ಸೆಕ್ರೆಟರಿಗಳ ಸಲಹೆಗಾರರಾಗಿ ನೇಮಿಸಲ್ಪಟ್ಟಿದ್ದ ಸರ್. ಪನ್ನೀರ್‌ಸೆಲ್ವಮರು ವಿಮಾನ ಮೂಲಕ ಲಂಡನಿಗೆ ಹೋಗುತ್ತಿದ್ದಾಗ ವಿಮಾನವು ಸಮುದ್ರಕ್ಕೆ ಬಿದ್ದು ಮುಳುಗಿ ಕೊಲ್ಲಲ್ಪಟ್ಟಿರುವರಷ್ಟೆ. ಈಗ ಮದ್ರಾಸ್ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರಾಗಿರುವ ಮಿ. ಎಸ್. ಇ. ರಂಗನಾಥನರು ಈ ಸ್ಥಾನಕ್ಕೆ ಆರಿಸಲ್ಪಟ್ಟಿರುವರು. ಇವರು ಎಪ್ರಿಲ್ ಎರಡನೇ ವಾರದಲ್ಲಿ ಪತ್ನಿ ಮತ್ತು ಪುತ್ರಿಯೊಂದಿಗೆ ಇಂಗ್ಲೆಂಡಿಗೆ ತೆರಳಲಿರುವರು.

ಜೆಕೊಸ್ಲೊವೇಕಿಯದಲ್ಲಿ ಹಿಟ್ಲರನ ಭಾವಚಿತ್ರ

ಈಗ ಜರ್ಮನಿಯ ಆಧೀನವಾಗಿರುವ ಮೊದಲಿನ ಜೆಕೊಸ್ಲೊವೇಕಿಯದಲ್ಲಿ ಸರಕಾರದ ಎಲ್ಲಾ ಆಫೀಸುಗಳಲ್ಲಿಯೂ ಹೆರ್ ಹಿಟ್ಲರರ ಭಾವಚಿತ್ರವನ್ನಿಡಬೇಕೆಂದು ಈಗಣ ಸರಕಾರವು ಆಜ್ಞೆ ಹೊರಡಿಸಿರುವುದು. ಹಿಟ್ಲರರ ಚಿತ್ರದ ಎಡಭಾಗದಲ್ಲಿ ಸರಕಾರದ ಈಗಣ ಪ್ರೆಸಿಡೆಂಟರ ಚಿತ್ರವನ್ನಿರಿಸಬೇಕಾಗಿದೆ.

ಜರ್ಮನ್ ಯುದ್ಧ ಹಡಗಗಳ ಚಲನ

ಜರ್ಮನಿಯ ಯುದ್ಧ ಹಡಗುಗಳು ವಿಲ್ ಹೆಲ್ಮ್ ಶೇವನಿನ ನೌಕಾ ನಿಲಯದಿಂದ ಹೊರಟು ಜರ್ಮನ್ ವ್ಯಾಪಾರಿ ಹಡಗುಗಳನ್ನು ತಡೆಗಟ್ಟುವ ಬ್ರಿಟಿಷ್ ನೌಕಾ ಪಡೆಯನ್ನೆದುರಿಸಲು ಸಿದ್ಧವಾಗಿನಿಂತಿವೆಯೆಂದು ರೋಮ್ ರೇಡಿಯೋ ಸುದ್ದಿ. ಸ್ಕಾಂಡಿನೇವಿಯದ ಕರಾವಳಿಯಲ್ಲಿ ಸಂಚರಿಸುವ ಜರ್ಮನ್ ವ್ಯಾಪಾರಿ ಹಡಗುಗಳೆಲ್ಲಾ ಹತ್ತಿರದ ಬಂದರುಗಳಲ್ಲಿ ಆಶ್ರಯ ಪಡೆಯಬೇಕೆಂದು ಅಜ್ಞಾಪಿಸಲಾಗಿದೆ

ಸ್ವೀಕಾರ-ವಿಮರ್ಶೆ

ಮುಂದರಿದ ಮೈಸೂರು— ಕೈಗಾರಿಕೆ ಮತ್ತು ಗ್ರಾಮಾಭಿವೃದ್ಧಿ ಕಾರ್ಯ ಬಗ್ಗೆ ಮೈಸೂರು ಸರಕಾರ ಪ್ರಕಟಣಾ ಶಾಖಾಧಿಕಾರಿಗಳು ಕಳುಹಿಸಿಕೊಟ್ಟಿರುವ 1. Mysore and Modern Industrise (ಮೈಸೂರು ಮತ್ತು ಅಧುನಿಕ ಕೈಗಾರಿಕೆ) 2 (Village uplift in Mysoie) (ಮೈಸೂರಲ್ಲಿ ಗ್ರಾಮಾಭಿವೃದ್ಧಿ) ಮತ್ತು 3. ಶ್ರವಣ ಬೆಳಗೊಳವೆಂಬ ಮೂರು ಅಮೋಘ ಪುಸ್ತಕಗಳನ್ನು ಆದರಪೂರ್ವಕ ಸ್ವೀಕರಿಸಲಾಗಿದೆ. ಈ ಪುಸ್ತಕಗಳನ್ನು ನಯವಾದ ಕಾಗದದ ಮೇಲೆ ಮುದ್ರಾಗಿ ಅಚ್ಚು ಹಾಕಲಾಗಿದೆ. ಲೆಖ್ಖವಿಲ್ಲದಷ್ಟು ಸುಂದರ ಚಿತ್ರಗಳಿವೆ. ಮೈಸೂರು ಕೈಗಾರಿಕೆಗಳು ಎಷ್ಟು ಮುಂದೆ ಹೋಗಿ ನಿರುದ್ಯೋಗವನ್ನು ಕಡಿಮೆಮಾಡಲೆತ್ನಿಸುತ್ತಿವೆಂಬುದನ್ನು ತಿಳಿಯಬೇಕಾದರೆ ಮೈಸೂರು ಮತ್ತು ಆಧುನಿಕ ಕೈಗಾರಿಕೆ ಎಂಬ ಪುಸ್ತಕ ಸರ್ವರೂ ಓದಬೇಕು. ಸಚಿತ್ರ ಲೇಖನವೊಡನೆ ಕೂಡಿರುವ ಈ ಪುಸ್ತಕದ ಮೊದಲನೇ ಪುಟ ತನೆದಲ್ಲಿ ಮೈಸೂರು ಮಾನ್ಯ ಸಚಿವರಾದ ಸರ್. ಮಿರ್ಜಾ ಎಂ. ಇಸ್ಮಾಯಿಲ್‌ರವರು ಕೆಲವು ತಿಂಗಳ ಕೆಳಗೆ ಮದ್ರಾಸ್ ಆಕಾಶವಾಣಿ ರೇಡಿಯೋನಲ್ಲಿ ಮೈಸೂರು ಬಗ್ಗೆ ಪ್ರಕೃತಿಸೌಂದರ್ಯದಿಂದ ಹಿಡಿದು ಸರ್ವವೂ ಮೈಸೂರು ವಸ್ತುಗಳಿಂದ ತುಂಬುವುದು ಒಂದು ಹೆಮ್ಮೆ ಎಂದು ಹೇಳಿರುವುದನ್ನು ಉಲ್ಲೇಖಿಸಿರುತ್ತಾರೆ. ಇದನ್ನು ನಮ್ಮ ಯುವಕ ಯುವತಿಯರು ಮನನಮಾಡಿ ಕಲಿತು ದೊಡ್ಡ ಸಭೆಗಳಲ್ಲಿ ಸಾರಿದರೆ ಮೈಸೂರಿಗೆ ಇನ್ನೂ ಕೀರ್ತಿ ಬರುವಂತಾಗುವುದು. ಮೈಸೂರು ಕೈಗಾರಿಕೆಯ ಪ್ರತಿ ಇಲಾಖೆಗೂ ಸೇರಿದ ರಸಭರಿತ ಲೇಖನ ಮತ್ತು ಚಿತ್ರಗಳಿಂದ ಈ ಪುಸ್ತಕವು ತುಂಬಿದೆ. ಮೈಸೂರಲ್ಲಿ ಗ್ರಾಮಾಭಿವೃದ್ಧಿ ಬೆಳವಣಿಗೆ ಹೇಗೆ ನಡೆಯುತ್ತಿದೆಂಬುದು ಎರಡನೇ ಪುಸ್ತಕದಿಂದ ಗೊತ್ತಾಗುತ್ತದೆ. ಪುಸ್ತಕವು ಅಂದವಾಗಿದೆ. ಮುಖಪತ್ರದಲ್ಲಿ ಓರ್ವ ರೈತನು ತನ್ನ ನೇಗಿಲನ್ನು ಮಾಡಿಕೊಳ್ಳುವ ಚಿತ್ರವಿದೆ. ಇದರಿಂದ ರೈತರಿಗೊಂದು ಹೆಮ್ಮೆ. ಶ್ರವಣ ಬೆಳಗೊಳ ಚರಿತ್ರೆ ತಿಳಿಸಲು ಗೊಮ್ಮಟನಿಗೆ ಮಹಾಮಸ್ತಕಾಭಿಷೇಕ ನಡೆದ ಕಾಲದಲ್ಲಿ ಸರಕಾರದ ಶಾಸನ ಇಲಾಖೆಯವರು ಪ್ರಕಟಣಾ ಶಾಖಾಧಿಕಾರಿಗಳ ಮೂಲಕ ಪ್ರಕಟಿಸಿ ಸರ್ವರಿಗೂ ಉಪಯೋಗವಾಗುವಂತೆ ಮಾಡಿದರು. ವಿಚಾರ ಪರಿಪೂರ್ಣತೆ ಸಮಾಚಾರ ಮತ್ತು ಚರಿತ್ರಾರ್ಹವಾದ ಚಿತ್ರಗಳಿರುವ ಈ ಪುಸ್ತಕವು ಮನೋಹರವಾಗಿದೆ.

ಮೈಸೂರು ಸರಕಾರದ ಉತ್ಸಾಹೀ ಪ್ರಕಟಣಾ ಶಾಖಾಧಿಕಾರಿಗಳೂ ಅವರ ಸಹೋದ್ಯೋಗಿಗಳೂ ಶ್ರಮವಹಿಸಿ ವಿಚಾರಗಳನ್ನು ಶೇಖರಿಸಿ ಪ್ರಕಟಿಸಿರುವುದರಿಂದ ಮೈಸೂರನ್ನು ಮತ್ತೊಂದು ಹೆಜ್ಜೆ ಮುಂದೆ ಹೋಗುವಂತೆ ಮಾಡಿರುವರು.

ಆರು ಕತೆಗಳು — ಕಥಾಸಂಜ್ಞ ಗ್ರಂಥಮಾಲೆಯ ೧ನೆಯ ಹೂ, ಸಂಪಾದಕರು—ಶ್ರೀ ಪ್ಯಾಟಿ ಶ್ಯಾಮರಾಯರು ಬೆಲೆ ೦-೧೨-೦.

ಭಾರತೀಯ ಆರೋಗ್ಯ ಸೂತ್ರಗಳು ಲೇಖಕರು—ಆಯುರ್ವೇದ ವಿಶಾರದ ಸುಬ್ರಹ್ಮಣ್ಯ ಭಟ್ಟ ಬಿ. ಕೆ. ಎ. ಕನ್ನಾರ್, ಎ. ಯಂ. ಎ. ಸಿ, ಮಂಗಳೂರು, ಪ್ರಕಾಶಕರು ಶ್ರೀ. ಟಿ. ರಾಮದಾಸ ಶೆಣೈ, ರಾಮದಾಸ ಆಯುರ್ವೇದಿಕ ಫಾರ್ಮಸಿ, ಮಂಗಳೂರು, ಬೆಲೆ ೦-೨-೦.

ಹಿಂದುಸ್ಥಾನದ ಹೊಸ ಘಟನೆ— ಲೇಖಕರು—ಶ್ರೀ. ವೆಂಕಟೇಶ ಭೀಮರಾವ ನಾಯಕ್, ಎಂ. ಎ. ಎಲ್. ಎಲ್. ಬಿ. ಸಂಪಾದಕ—ಕರ್ನಾಟಕ ವೈಭವ, ವಿಜಯಪುರ. ಬೆಲೆ ರೂ. 1-8-0

ವಿದ್ಯೆದ ಕಾದಿ? (ತುಳು ನಾಟಕ) — ಬರೆದವರು ಶ್ರೀ. ಕೆ. ಶಿವಪ್ಪ ಹೆಗ್ಡೆ, ಪ್ರಕಾಶಕರು—ಪ್ರಭೂಸ್ ಸ್ಟೇಶನರಿ ಮಾರ್ಟ್, ಪಡುಬಿದ್ರಿ. ಕ್ರಯ 0-5-0.

ಶ್ರೀ ಬಸವೇಶ್ವರ— ಲೇಖಕರು—ಶ್ರೀ ಎಸ್. ಎಸ್. ಕೃಷ್ಣ ಮೂರ್ತಿ, ಚಾಮರಾಜಪೇಟೆ. ಪ್ರಕಾಶಕರು—ಶ್ರೀ ವೀರ ಶೈವ ತರುಣ ಸಂಘ.

ಹೊನ್ನಮ್ಮ— ಲೇಖಕ—ದಿವಂಗತ ಶ್ರೀ. ಗೌರಮ್ಮನವರು. (ಮಿಸೆಸ್. ಬಿ. ಟಿ. ಜಿ. ಕೃಷ್ಣ) ಪ್ರಕಾಶಕರು—ಮನೋಹರ ಗ್ರಂಥ ಭಾಂಡಾರ, ಧಾರವಾಡ, ಬೆಲೆ 0-1-6.

ಇಷ್ಟೇ ಅಲ್ಲದೆ ಬೊಂಬಾಯಿಯ ಬಿಲ್ಲವರ ಎಸೋಸಿಯೇಶನಿನ 8ನೇ ವರ್ಷದ ವರದಿ, ಬೆಳಗಾಂವಿ ರೇಲ್ವೆ ಮಂಡಳದವರ ರೇಲ್ವೆ ಪ್ರವಾಸಿಕರ ಮಿತ್ರ, ಮಂಗಳೂರು ಡಿಸ್ಟ್ರಿಕ್ಟ್ ಕ್ಲಾಸ್ ಮಿಷನಿನ 38-39ರ ವರದಿ ನಮ್ಮ ಕೈ ಸೇರಿವೆ. ಎಲ್ಲವನ್ನು ಅತ್ಯಾದರದಿಂದ ಸ್ವೀಕರಿಸಿದ್ದೇವೆ. ವಿಮರ್ಶೆಯನ್ನು ಯಥಾವಕಾಶವಾಗಿ ಕೊಡಲಾಗುವುದು.

ಬ್ರಿಟಿಷ್ ರಾಯಭಾರಿಗಳು ಲಂಡನಿಗೆ

ಬ್ರಿಟಿಷ್ ಸರಕಾರದ ಪರರಾಷ್ಟ್ರ ಮಂತ್ರಿಗಳಾದ ಲೋರ್ಡ್ ಹೆಲಿಫೆಕ್ಸರು, ಟರ್ಕಿ, ಗ್ರೀಸ್, ರುಮೇನಿಯ, ಯುಗೊಸ್ಲಾವಿಯ, ಬಲ್ಗೇರಿಯ, ಹಂಗೇರಿ ಮತ್ತು ಇಟೆಲಿಯ ರಾಯಭಾರಿಗಳನ್ನು ಲಂಡನಿಗೆ ಕರೆದಿರುವರೆಂದು ತಿಳಿದುಬರುತ್ತದೆ. ಇಂದೀಗ ಬಾಲ್ಕನ್ ರಾಷ್ಟ್ರಗಳ ಪರಿಸ್ಥಿತಿಯ ವಿಷಯ ಹೊಂದುತ್ತಿರುವುದರಿಂದ ಆ ಕುರಿತು ತಮ್ಮ ರಾಯಭಾರಿಗಳ ಅಭಿಪ್ರಾಯವನ್ನು ಪಡೆಯುವುದಕ್ಕಾಗಿ ಬ್ರಿಟಿಷ್ ಸರಕಾರವು ಅವರನ್ನು ಕರೆದದಾಗಿದೆ.

HURRY UP ? ? ?. UNIQUE OPPORTUNITY.

CLEARANCE SALE OF A LARGE CONSIGNMENT OF 10,000 WATCHES, JUST ARRIVED FROM SWITZERLAND, AT OLD PRICES.



No. 416 Chromium Case Rs. 8—10
No. 417 Golden Case Rs. 6— 6
No. 417 R Rolledgold 10yrs. Jewelled Mov. Rs. 12—8



ROUND OR CUSHION
No 401 Chromium Case Rs 3—12
No. 402 Golden Case Rs. 4— 8



LATEST ARRIVAL 1940
STRONG & DURABLE
ACCURATE TIME-KEEPERS.
Guaranteed Lever Movement.

No. 424 Chromium Case Rs 7—8
No 425 Golden Case Rs. 8—4
No. 425 R Rolledgold 10yrs. 13—8



No. 428 Chromium Case. Rs. 9—0
No. 430 Rolledgold 10yrs. Rs. 15—0

As. [9/-] Extra for Postage.
For further particulars send for our new catalogue No. 16.
(Correspondance in English)

BAPALAL & CO.,
101 Abdul Rehman Street,
BOMBAY, 3.

LADIES MINIATURES.

Geneva Movement.
No 460 Chromium Case Rs. 10—8
No 461 Golden Case Rs. 12—0
No. 462 Rolledgold 10yrs. Rs 18—0

ಈ ವಾರದ ಭವಿಷ್ಯ

ತಾರೀಕು **4-4-1940**ರಿಂದ **11-4-1940**ರ ವರೆಗೆ

ಮೇಷ—ರಾಹು ಶುಕ್ರರನ್ನುಳಿದು ಸಕಲ ಗ್ರಹರೂ ಅತೀವ ದುಷ್ಟರಾಗಿರುವುದರಿಂದ ಕಷ್ಟ ನಷ್ಟಗಳು ನಿಮಗೆ ಅತಿಯಾಗಿ ಕಂಡುಬರಲಿವೆ. ಆದರೂ, ವಿಪದಿ "ಧೈರ್ಯಮಥಾಭ್ಯುದಯೇ ಕ್ಷಮಾ" ಎಂದು ಶಾಸ್ತ್ರಕಾರರನ್ನುವಂತೆ ಕಷ್ಟಕಾಲದಲ್ಲಿ ಎದೆಗುಂದದೆ ಧೈರ್ಯವಾಗಿಯೂ ಸುದಿನಸಮಯದಲ್ಲಿ ಮತ್ತರಾಗದೆ ಶಾಂತರಾಗಿಯೂ ಇರುವುದು ಸಜ್ಜನರ ಸ್ವಭಾವವು. ಸದ್ಯ ನಿಮಗೆ ಆರ್ಥಿಕ ದುರವಸ್ಥೆಯು ಬಹುವಾಗಿ ಪೀಡಿಸಲಿದೆ. ಮಾತ್ರವಲ್ಲ ತಲೆನೋವು ನಿದ್ರಾನಾಶ ಇತ್ಯಾದಿಗಳಿಂದ ದೇಹಕ್ಕೆ ಸ್ವಲ್ಪವೂ ಸುಖ ದೊರೆಯದು. ನೌಕರಿ ಭಾಗದಲ್ಲಿ ಅತೃಪ್ತಿ ಮಾರ್ಗಾಯಾಸ ಇತ್ಯಾದಿಗಳಿಂದ ತಾ. 6-7-11 ಈ ದಿನಗಳಲ್ಲಿ ಬಹಳೇ ದುಃಖಿಸುವಿರಿ.

ವೃಷಭ—ಸಂಪಾದನೆಯು ಉತ್ತಮವಿರುವುದಾದರೂ ಖರ್ಚಿನ ಭಾಗದಲ್ಲಿ ಬಹಳ ಜಾಗರೂಕರಾಗಿರಿ. ಅವಿಚಾರದಿಂದಾಗಿ ಕೆಲವೊಮ್ಮೆ ಅನರ್ಥಗಳಿಗೆ ಸಿಲುಕಿ ವ್ಯರ್ಥ ಅರ್ಥವ್ಯಯಕ್ಕೂ ಶೋಕಕ್ಕೂ ಗುರಿಯಾಗಬೇಕಾದೀತು. ಸಂಚಾರ ಕ್ರಮದಲ್ಲಿ ಜಾಗ್ರತರಾಗಿದ್ದಷ್ಟೂ ಒಳ್ಳೆತು. ವಿದ್ಯಾರ್ಥಿಗಳಿಗೆ ಯಶಸ್ಸೂ ನೌಕರಿಗಳಿಗೂ ವ್ಯಾಪಾರಿಗಳಿಗೂ ಇಚ್ಛಾಧಿಕವಾಗಿ ಫಲಪ್ರಾಪ್ತಿಯೂ ಲಭಿಸಲಿವೆ. ಸಾಮಾಜಿಕ ಮತ್ತು ರಾಜಕೀಯ ಕಾರ್ಯಗಳಲ್ಲಿ ವಿಜಯಿಗಳಾಗಿ ಜನರ ಆದರಕ್ಕೂ ವಿಶೇಷತಃ ಬಂಧುಮಿತ್ರರ ಕೃಪೆಗೂ ಒಳಗಾಗುವಿರಿ. ಗೃಹಕುಟುಂಬ ತೃಪ್ತಿಕರವಾಗಿರುವುದಾದರೂ ತಾ. 8, 9, 10 ಈ ದಿನಗಳಲ್ಲಿ ಅನಾರೋಗ್ಯದ ಭಯವಿದೆ.

ಮಿಥುನ— ನವನವೋದ್ಯಮಗಳಲ್ಲಿ ಕೈಯಿಕ್ಕುವ ನೂತನ ಸಾಹಸವನ್ನು ಮಾಡುವಿರಿ. ಮಾತ್ರವಲ್ಲ ಅವರಲ್ಲಿ ವಿಜಯಿಗಳಾಗಿ ಮತ್ತು ಪ್ರಗತಿಯ ಪಥದಲ್ಲಿ ಮುಂದರಿಯುವಿರಿ. ಸಿಟ್ಟಿನ ಆವೇಶದಿಂದ ಕೆಲವೊತ್ತು ನಿಷ್ಠುರೋಕ್ತಿಗಳನ್ನಾಡಿದರೂ ತತ್‌ಕ್ಷಣವೇ ಅದನ್ನು ಮರೆತು ಸೌಹಾರ್ದಭಾವದಿಂದ ವರ್ತಿಸುವಿರಿ. ಸನ್ಮಿತ್ರರ ಮತ್ತು ಬಂಧು ಬಳಗದವರ ಬೆಂಬಲವು ಚೆನ್ನಾಗಿರುವುದರಿಂದ ಯಾವ ಭಾಗದಲ್ಲೂ ನಿಮಗೆ ಕೊರತೆಯುಂಟಾಗದು. ಧಾರಾಳವಾಗಿ ಖರ್ಚುಮಾಡುವಿರಿ. ತಾ. 4, 5, ಮತ್ತು 11 ಈ ದಿನಗಳಲ್ಲ ಸ್ತ್ರೀಕಲಹ, ನೇತ್ರವೇದನೆಗಳು ತಲೆದೋರುವಂತಿವೆ.

ಕರ್ಕಾಟಕ—ಇದು ಸರಿ, ಇದು ತಪ್ಪು ಎಂಬೀ ವಿಚಾರ ನಿಮಗೆ ತಿಳಿದಿದ್ದರೂ ಕೂಡ ನೀವು ಅಕೃತ್ಯಗಳನ್ನು ಮಾಡಿ ಅಪರಾಧಿಗಳಾಗಲಿರುವಿರಿ. ನಿಮ್ಮ ಸಾಂಪತ್ತಿಕ ಭಾಗವು ಉತ್ತಮವಾಗಿದ್ದರೂ ಅದನ್ನು ರಕ್ಷಿಸಿಕೊಂಡು ಹೋಗುವ ರೀತಿ ನೀತಿ ತಿಳಿಯದೆ ಅಪವ್ಯಯಮಾಡುವಿರಿ. ರಾಜಕೀಯ ವಿಚಾರದಲ್ಲಿ ನೀವು ಬಹಳ ನೊಂದವರಿರುವಿರಿ. ಸದ್ಯದಲ್ಲೇ ನಿಮ್ಮ ಮನದಿಚ್ಛೆಯು ಫಲಿಸಲಿದೆ. ಪರರ ಉತ್ಕರ್ಷವನ್ನು ಸಹಿಸದಿರುವ ಕುಜನರು ನಿಮ್ಮ ಮೇಲೆ ಸದಾ ವಕ್ರದೃಷ್ಟಿಯನ್ನಿಟ್ಟರೂ ನೀವೇನೂ ಬೆದರುವ ಕಾರಣವಿಲ್ಲ. ವಾರಾದಿಯ ನಾಲ್ಕು ದಿನಗಳಲ್ಲಿ ಕಾರ್ಯೋತ್ಸಾಹವು ಕುಂಠಿತವಾಗಿದ್ದೀತು.

ಸಿಂಹ—"ಉದ್ಯಮೇನ ಹಿ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ" ಕೇವಲ ಇಚ್ಛಾಮಾತ್ರದಿಂದಲೇ ಕಾರ್ಯವು ಸಿದ್ಧಿಸುವದಾಗಿದ್ದರೆ ಯಾವನೊಬ್ಬನೂ ಕಾರ್ಯದಲ್ಲಿ ಪ್ರವರ್ತಿಸುತ್ತಿದ್ದಿಲ್ಲ. ನಿರುದ್ಯೋಗಿಗಳ ಸಂಖ್ಯೆಯೇ ಲೋಕದಲ್ಲಿ ಹೆಚ್ಚುತ್ತಿತ್ತು. ಈ ವಿಚಾರವನ್ನು ನೀವು ತಿಳಿದಿದ್ದು ಸ್ಪಷ್ಟ ಸುಮ್ಮನಿರಲು ನಿಮ್ಮಲ್ಲಿರತಕ್ಕ ದೇಹದೌರ್ಬಲ್ಯ ಮತ್ತು ಧನಾಭಾವವೇ ಕಾರಣವಾಗಿತ್ತು. ಸದ್ಯದಲ್ಲೇ ನೀವೀ ಗಂಡಾಂತರಗಳಿಂದ ಮುಕ್ತರಾಗಲಿರುವಿರಿ. ಗೃಹ ಕಲಹದಿಂದಾಗಿ ನಿಕ್ಕವೂ ನಿಮ್ಮಲ್ಲಿ ಜಗಳ ತಪ್ಪದು. ಆಕಸ್ಮಿಕ ಪ್ರಯಾಣದಿಂದ ದೇಹಾಲಸ್ಯವೂ ಚಿತ್ತಶಾಂತಿಗೆ ಭಂಗವೂ ಉಂಟಾಗಲಿದೆ. ವ್ಯಾಪಾರಿಗಳಿಗೆ ಸರ್ವತ್ರ ನಷ್ಟವೇ ಹೆಚ್ಚಲಿರುವುದಾದರೂ ತಾ. 4, 5, 11 ಈ ದಿನಗಳು ಹೆಚ್ಚಿನ ಕಷ್ಟದಾಯಕಗಳಾಗಲಿರುವು.

ಕನ್ಯಾ—"ಲಕ್ಷದೋಷಂ ಗುರುರ್ಹಂತಿ" ಎಂದು ದೈವಜ್ಞರನ್ನುವಂತೆ ಇಷ್ಟರ ತನಕ ನಿಮಗೆ ಗುರುಮಹಾಶಯನ ಪೂರ್ಣದೃಷ್ಟಿಯಿದ್ದುದರಿಂದ ಎಂತಹ ಮಹದಾಪತ್ತುಗಳಿಗೆ ಸಿಲುಕಿದ್ದರೂ ಅದರಿಂದ ಪಾರಾಗುತ್ತಿದ್ದಿರಿ. ಆದರೆ ಸದ್ಯದಲ್ಲೇ ಆತನು ಅನಿಷ್ಟಸ್ಥಾನವಾದ ಅಷ್ಟಮಕ್ಕೆ ಪ್ರವೇಶಿಸಲಿರುವುದರಿಂದ ದೈವಬಲದಿಂದ ಮುಕ್ತರಾಗಿ ಮೇಲಿಂದ ಮೇಲೆ ಕಷ್ಟಗಳನ್ನನುಭವಿಸುವ ದಿನಗಳೇ ಹೆಚ್ಚಲಿವೆ. ಸಾಲದುದಕ್ಕೆ ನೀಚರವಿಯೂ ಕೂಡ ಅಲ್ಲೇ ಇರುವನು. ದೇಹಾಲಸ್ಯವೂ ಶತ್ರುಪೀಡೆಯೂ ಆರ್ಥಿಕ ಅಡಚಣೆಯೂ ದಿನೇ ದಿನೇ ಹೆಚ್ಚುತಲಿದೆಯಾದ ಕಾರಣ ತಾ. 8, 9, 10, 11 ಈ ದಿನಗಳಲ್ಲಿ ಬಹಳೇ ಜಾಗರೂಕರಾಗಿ ವರ್ತಿಸಿರಿ.

ತುಲಾ—ಹಲಕೆಲವು ದಿನಗಳಿಂದ ಬಹಳ ಕಷ್ಟವನ್ನನುಭವಿಸುತ್ತಿದ್ದ ನಿಮಗೆ ಇಷ್ಟದ ದಿನಗಳು ಸನ್ನಿಹಿತವಾಗಿವೆ. ಮಾಡಿದ ಕಾರ್ಯಕ್ಕೆ ತಕ್ಕ ಫಲವು ಆಚೆಯದಲ್ಲೇ ಸಿಗುವುದು. ಶತ್ರು ಜನರು ಮೇಲಿಂದ ಮೇಲೆ ನಿಮ್ಮ ಕಾರ್ಯಗಳಿಗೆ ತೊಡಕನ್ನುಂಟುಮಾಡಿದರೂ ನೀವು ಹಿಡಿದ ಕಾರ್ಯವನ್ನು ಕೊನೆಗೊಳಿಸದೆ ಬಿಡದಿರಲಾರಿರಿ. ವಿದ್ಯಾರ್ಥಿಗಳಿಗೂ ವಿದ್ಯೋಪಜೀವಿಗಳಿಗೂ ಫಲವು ಉತ್ತಮವಾಗಿ ಲಭಿಸಲಿವೆ. ಖರ್ಚಿಗೆ ಬೇಕಷ್ಟು ಉತ್ಪತ್ತಿಯಿರುವುದರಿಂದ ಹಣದ ಅಡಚಣೆ ಕಾಣದು. ಪ್ರಯಾಣಕ್ಕೆ ದುಃಸಮಯವಲ್ಲ. ತಾ. 6ರಿಂದ 10ರ ವರೆಗಿನ ದಿನಗಳು ಇಷ್ಟಸಾಧಕಗಳಾಗಿವೆ.

ವೃಶ್ಚಿಕ—"ಸದ್ಯದ ನಿಮ್ಮ ಗ್ರಹಮಾನವು ಸುಖಸ್ಯಾನಂತರಂ ದುಃಖಂ" ಎಂಬ ಲೋಕೋಕ್ತಿಯನ್ನು ಎತ್ತಿ ಸಾರುತ್ತಿದೆಯೆಂದು ಹೇಳಬಹುದು. ಅಲ್ಪಾವಕಾಶದಲ್ಲೇ ನೀವು ಬಹಳ ಕಂಗಾಲಾಗಲಿರುವಿರಿ. ದಿನೇ ದಿನೇ ವೃದ್ಧಿ ಹೊಂದುತ್ತಿರುವ ಗೃಹಕಲಹಕ್ಕೆ ಶತ್ರು ಜನರ ಕೈವಾಡವು ಸೇರಿ ಅದು ಭಯಂಕರ ರೂಪ ತಾಳಲಿದೆ. ಸ್ವಕೀಯ ಪರಕೀಯ ಭೇದವಿಲ್ಲದೆ ಸಕಲ ಸ್ತ್ರೀಯರೂ ನಿಮಗೆ ವೈರಿಗಳಾಗುವರು. ದೇಹದಲ್ಲಿ ಅನಾರೋಗ್ಯವು ಕಂಡುಬರುವುದರಿಂದಲೂ ಆಯಕ್ಕಿಂತ ಅಧಿಕವಾಗಿ ವೆಚ್ಚವಾಗುವುದರಿಂದಲೂ ನಿಕ್ಕ ಚಿಂತೆಗೊಳಗಾಗುವಿರಿ. ವಾರಾದಿಯ 4 ದಿನಗಳು ಅಪಾಯಕರಗಳಾಗಿವೆ.

ಧನು—ಅಜ್ಞಾಧಾರಿಗಳಾಗಿರತಕ್ಕವರು ಸ್ವೇಚ್ಛೆಯಾಗಿ ವರ್ತಿಸುವುದರಿಂದ ಮನಸ್ಸಿಗೆ ಬಹಳ ನೋವಾಗುವುದು. ರಾಜಕೀಯ ವಿಚಾರಗಳಲ್ಲಿ ಪ್ರತಿಸ್ಪರ್ಧಿಗಳ ಕೈಯಿಂದ ಮೇಲಾಗಿ ಮಾನಹಾನಿಗೂ ಧನವ್ಯಯಕ್ಕೂ ಗುರಿಯಾಗುವ ಸಂಭವವಿದ್ದರೂ ಪರಸ್ಪರ ರಾಜಿಯಿಂದ ಇತ್ಯರ್ಥ ಪಡಿಸಿಕೊಳ್ಳುವಿರಿ. ಶ್ರಮಕ್ಕೆ ತಕ್ಕ ಫಲ ದೊರೆಯದು. ಕುಟುಂಬದಲ್ಲಿ ಧನಾಭಿವೃದ್ಧಿಯು ಕಾಣಿಸಿಕೊಂಡಿದ್ದರೂ ಸದ್ಯದಲ್ಲೇ ವಿಕೋಪತ್ವವುಂಟಾಗುವುದು. ತಾ. 4 5, 11, ಈ ದಿನಗಳಲ್ಲಿ ಸಾಮಾಜಿಕ ಕಾರ್ಯಗಳಲ್ಲಿ ವಿಜಯ, ಧನ ವಸನಗಳ ಲಾಭವೂ ಸ್ತ್ರೀ ಸುಖವೂ ದೊರೆಯಲಿದೆ.

ಮಕರ—ಸಾಂಸಾರಿಕ ಚಿಂತೆಯು ದಿನೇ ದಿನೇ ಪ್ರಬಲವಾಗುತ್ತಾ ಹೋಗುವುದು. ಪತ್ನೀ ಪುತ್ರರ ವಿರಹ, ದೇಹಾಲಸ್ಯ ಇವುಗಳ ಸಂಬಂಧವಾಗಿ ತಲ್ಲಣ ಕೊರಗುವಿರಿ. ಶತ್ರು ಜನರ ಉಪದ್ರವವು ಮುಂಚಿಗಿಂತಲೂ ಅಧಿಕವಾಗುವುದು. ಇದಕ್ಕೆ ನಿಮ್ಮ ಬಂಧುಗಳು ಸೇರಿರುವುದರಿಂದಲೇ ನಿಮ್ಮ ಮನಸ್ಸಿಗೆ ವಜ್ರಾಘಾತವಾದಂತಿರುವುದು. ದಿನ ಹೋದಂತೆ ಆರ್ಥಿಕ ಬಲವು ಕುಗ್ಗುತ್ತಾ ಬರುವುದರಿಂದ ಜನ ಬೆಂಬಲವೂ ಕಡಿಮೆಯಾಗುವುದು. ಸ್ವೋದ್ಯೋಗದಲ್ಲಿ ತಪ್ಪಾಗಿ ವರ್ತಿಸಿ ಅಧಿಕಾರಿ ಜನರ ಅವಗ್ರಹಕ್ಕೆ ಗುರಿಯಾಗುವಿರಿ. ತಾ. 6, 7 ಬಿಟ್ಟು ಇತರ ದಿನಗಳು ಬಹಳ ಅನಿಷ್ಟಕಾರಿಗಳಾಗಿವೆ.

ಕುಂಭ—ಅಲ್ಪರ ಸಂಗ ಅಭಿಮಾನ ಭಂಗ ಎಂಬ ನಾಣ್ಣುಡಿಯಂತೆ ಯುಕ್ತಾಯುಕ್ತ ವಿಚಾರಹೀನರಾದ ಮಿತ್ರೋಡಿಗಳಾಗಿರತಕ್ಕ ದುರ್ಜನರ ಬಲೆಯಲ್ಲಿ ಅನಾಯಾಸದಿಂದ ಬಿದ್ದು ಹಣ ಕಾಸುಗಳಿಗೂ ಮಾನ ಮರ್ಯಾದೆಗಳಿಗೂ ತುಂಬಾ ಹಾನಿ ಮಾಡಿಕೊಳ್ಳುವಿರಿ ದೇಹದಲ್ಲಿ ಕಿಂಚಿದಾಯಾಸವೂ ತಲೆದೋರುವುದು. ವಿದ್ಯಾರ್ಥಿಗಳು ಒಳ್ಳೇ ಯಶೋವಂತರಾಗಿರುವರು. ಗೃಹೋಪಕರಣಗಳಿಗೇನೂ ಕೊರತೆಯಾಗದು. ನೌಕರಿ ವ್ಯಾಪಾರಗಳಲ್ಲಿ ಫಲವು ಉತ್ತಮವಾಗಿರುವುದು. ಶತ್ರು ಜನರು ತಲೆಮರೆಸಿಕೊಂಡೇ ದಿನಗಳೆಯುವರು. ತಾ. 4, 5 ಮತ್ತು 8, 9, 10 ಈ ದಿನಗಳು ಬಹಳ ಉತ್ತಮವಿವೆ.

ಮೀನ—ನಿಮ್ಮ ಪರಾಕ್ರಮಕ್ಕೆ ಅನುಕೂಲವಾಗಿ ದೈವಬಲವೂ ದೊರೆಯಲಿವೆ. ಕಷ್ಟದ ದಿನಗಳಿಂದ ಒಮ್ಮೆಗೆ ಪಾರಾದಿರೆಂಬುದರ ಅತಿಶಯೋಕ್ತಿಯಾಗದು. ದೈಹಿಕ ಬಲವೂ ಮಾನಸಿಕ ಶಕ್ತಿಯೂ ಉತ್ತಮವಿರುವುದರಿಂದ ಕೈಗೊಂಡ ಕಾರ್ಯಗಳು ವಿಫಲವಾಗುವಂತಿಲ್ಲ. ಆದರೆ ನಿಮ್ಮ ಧನ ಸ್ಥಾನದಲ್ಲಿ ಕುಳಿತಿರತಕ್ಕ ಶನಿ ಮಹಾರಾಜನಿಂದಾಗಿ ನೀವೆಷ್ಟೇ ಹಣ ದುಡಿದರೂ ಕೈಯಲ್ಲಿ ಕಾಸೊಂದೂ ಉಳಿಯುವಂತಿಲ್ಲ. ಆದಷ್ಟು ನಾಲಗೆಯನ್ನು ಬಿಗಿಹಿಡಿದಿರುವುದೊಳ್ಳಿತು. ತಾ. 4, 5, 8, 9, 10 ಈ ದಿನಗಳಲ್ಲಿ ಧನ ಮಾನಗಳಿಗೆ ಹಾನಿಯಿದೆ.

ನಮ್ಮ ಪೋಲಿಸಿದಾರರ ಸೇವಾದೀಕ್ಷೆ ಮತ್ತು ನಮ್ಮ ಕುರಿತಾದ ಕ್ಲೈಮುಗಳ ಕುರಿತು ಸಂಪೂರ್ಣ ಸಮಾಧಾನವೇ ಇಂದೀಗ 25 ವರ್ಷಗಳಿಂದ ನಮ್ಮ ಧೋರಣೆಯಾಗಿದೆ.

ಎಲ್ಲಾ ತರದ ಅಪಾಯಗಳ ಕುರಿತು ಭದ್ರತೆ ಪಡೆಯುವ ಅಭೂತಪೂರ್ವ ಅನುಕೂಲತೆಗಳನ್ನು ನಾವು ಕೊಡುತ್ತೇವೆ.

ಜ್ಯಾರಿಯಲ್ಲಿರುವ ವಹಿವಾಟು ರೂ. 1,75,000,00

ಒಟ್ಟು ಮೂಲಧನ ರೂ. 24,000,00

ದಿ ಈಸ್ಟ್ ಎಂಡ್ ವೆಸ್ಟ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

(1913ರಲ್ಲಿ ಸ್ಥಾಪಿತವಾದುದು.)

55 ಅಪೊಲ್ಲೋ ಸ್ಟ್ರೀಟ್, ಫೋರ್ಟ್,

ಬೊಂಬಾಯಿ.

ಏಜಂಟ್ಸ್ ಮತ್ತು ಓರ್ಗನೈಜರ್ ಬೇಕಾಗಿದ್ದಾರೆ

ರೂಪಾಯಿ200 ಧರ್ಮಾರ್ಥ!

ಮಹಾತ್ಮಾ ಸಿದ್ಧಕವಚ



ಅತ್ಯದ್ಭುತ ಶಕ್ತಿಯುಕ್ತವಾದ ಮಹಾತ್ಮಾ ಸಿದ್ಧಕವಚವೊಂದು ನಿಮ್ಮೊಡನಿದ್ದರೆ ಎಂತಹ ಕಷ್ಟಸಾಧ್ಯವಾದ ಯೋಜನೆಯೂ ಕ್ಷಿಪ್ರ ಫಲಕಾರಿಯಾಗುವುದು. ಈ ಯಂತ್ರಧಾರಣೆಗೆ ಮಂತ್ರ ತಂತ್ರಗಳ ಸಹಾಯ ಬೇಕಾಗಿಲ್ಲ. ಇದನ್ನು ಧರಿಸಿದ ಮಾತ್ರದಿಂದ ನಿಮಗೆ ಬೇಕಾಗುವ ಹೆಂಗಸಾಗಲೀ ಗಂಡಸಾಗಲೀ ನಿಮ್ಮ ಹತೋಟಿಯಲ್ಲಿ ಸಿಕ್ಕುವರು. ತಾಮ್ರದ ಕವಚಕ್ಕೆ ರೂ. ೩; ಮೂರಕ್ಕೆ ರೂ. 6-4-0; ಬೆಳ್ಳಿ ಕವಚಕ್ಕೆ ರೂ.3-14-0; ಬಂಗಾರದಕ್ಕೆ ರೂ. 6-4-0.

ಮಹಾಲಕ್ಷ್ಮೀ ಯಂತ್ರ

ದುಷ್ಟಗ್ರಹರ ವಕ್ರದೃಷ್ಟಿ, ವೈರಿಗಳು ಘಾತಕರಾಗುವುದು, ಪರೀಕ್ಷೆ, ವ್ಯಾಪಾರ, ಕೋರ್ಟು ವ್ಯಾಜ್ಯಗಳು, ನೌಕರಿ, ಪುತ್ರ ಸಂತಾನಪ್ರಾಪ್ತಿ, ಅಪಾರದ್ರವ್ಯ ದೊರೆಯುವಿಕೆ, ಸಾಲದಿಂದ ಮುಕ್ತಿ, ಸ್ವಾತಂತ್ರ್ಯಲಾಭ, ಭಯಾನಕ ಕಾಯಿಲೆಗಳಿಂದ ಪಾರಾಗುವುದು ಇತ್ಯಾದಿ ಸರ್ವಸಿದ್ಧಿಯಾಗಬೇಕೆಂದಿದ್ದರೆ ಒಡನೆಯೇ ಮಹಾಲಕ್ಷ್ಮೀಯಂತ್ರವನ್ನು ಧರಿಸಿರಿ. ತಾಮ್ರದ ಕವಚಕ್ಕೆ ರೂ. ೩,(ಮೂರಕ್ಕೆ ರೂ. 6-4-0)ಬೆಳ್ಳಿಯದಕ್ಕೆ ರೂ. 3-14-0;ಚಿನ್ನದ ಕವಚವುಳ್ಳುದುದಕ್ಕೆ ರೂ. 6-4-0, ನಾಲ್ಕು ಉದ್ದೇಶಗಳನ್ನು ಸಾಧಿಸುವರೆ ನಂಬ್ರ 4ನೇ ವಿಶೇಷ ಕವಚವನ್ನು ರೂ. 5-8-0ಕೊಟ್ಟು ಇಂದೇ ಪಡೆಯಿರಿ. ಎಲ್ಲಕ್ಕೂ ಮಿಕ್ಕಿದ ಯೋಜನೆಗಳನ್ನು ಒಮ್ಮೆಯೇ ಪೂರೈಸಬೇಕೆಂದಿದ್ದರೆ ಅತ್ಯಾಧಿಕ್ಯ ತೇಜೋಮಯವಾದ ನಂಬ್ರ 5ನೇ ಕವಚವನ್ನು 7-10-0 ಕೊಟ್ಟು ಪಡೆಯಿರಿ. ಟಪ್ಪಾಲು ಚಾರ್ಜು ಪ್ರತ್ಯೇಕ.

ಸೂಚನೆ:—ಮೇಲೆ ನಮೂದಿಸಿದ ಕವಚಗಳು ನಿಷ್ಪ್ರಯೋಜಕವೆಂದು ರುಜುಪಡಿಸುವವರಿಗೆ ರೂಪಾಯಿ 200 ಇನಾಮು ಕೊಡಲಾಗುವುದು. ಕವಚದ ಮೌಲ್ಯ ಸಹ ವಾಪಾಸು ಸಿಕ್ಕುವುದು.

SHRI MAHATMA ASHRAM, Post Box No. 12 (N.Y.A.) **AMRITSAR.**

ಭಾರತದಲ್ಲಿ ಡೈರಿ ವ್ಯವಸಾಯ

ಕೃಷಿ ಪ್ರಧಾನವಾದ ದೇಶದಲ್ಲಿ ಅದು ಎಷ್ಟು ಹಿಂದೆ ಬಿದ್ದಿದೆ ?

ಇತ್ತೀಚೆಗೆ ಭಾರತದ ಆವಶ್ಯಕತೆಗಳಲ್ಲಿ ಡೈರಿ ವ್ಯವಸಾಯವು ಮುಖ್ಯವಾಗುತ್ತ ಬಂದಿದೆ. ಈ ದೇಶದಲ್ಲಿ ಹಾಲು ಮತ್ತು ಅದರಿಂದಾಗುವ ಪದಾರ್ಥಗಳ ಅಭಾವವು ಬಹಳವಾಗಿದೆ ಎನ್ನುವುದನ್ನು ಎಲ್ಲರೂ ಬಲ್ಲರು. ನಮ್ಮ ದೇಶದ ಆಹಾರದಲ್ಲಿ ಕ್ಷಾರ ಕಾರಿಯು ವಿಶೇಷವಾದುದು, ಇಂತಹ ಆಹಾರ ಸೇವಿಸುವವರಿಗೆ ಸಾಕಷ್ಟು ಪ್ರಮಾಣದಲ್ಲಿ ಹಾಲು ದೊರೆಯದಿರುವುದು ಈ ದೇಶದ ದೌರ್ಭಾಗ್ಯವಲ್ಲದೆ ಬೇರೆ ಇಲ್ಲ. ಸಿಮ್ಲದಲ್ಲಿ ನಡೆದ ಪಶುವೈದ್ಯ ಸಮ್ಮೇಳನದಲ್ಲಿ ಮಾತನಾಡುತ್ತ ಸ್ಟೀಟಿಂಗ್‌ರವರು ಅತ್ಯಂತ ವ್ಯಸನದಿಂದ ಈ ರೀತಿ ಹೇಳಿದರು. ದೇಶದಲ್ಲಿ ಮಕ್ಕಳು ಕುಡಿಯಲು ಹಾಲೇ ದೊರೆಯುತ್ತಿಲ್ಲ. ಕೆಳಗಿನ ಅಂಕೆಗಳಿಂದ ಇತರ ದೇಶಗಳಲ್ಲಿ ಹಾಲು ದೊರೆಯುವುದನ್ನು ನಮ್ಮ ದೇಶದೊಡನೆ ಹೋಲಿಸಿ ನೋಡಬಹುದು.

ದೇಶದ ಹೆಸರು	ಪ್ರತಿ ಒಬ್ಬನೂ 1 ವರ್ಷದಲ್ಲಿ ಕುಡಿಯುವ ಹಾಲಿನ ಪ್ರಮಾಣ.
ಫಿನ್‌ಲೆಂಡ್	10 ಮಣ 19 ಸೇರು
ಸ್ವಿಜರ್‌ಲೆಂಡ್	8 „ 32 „
ಸ್ವೀಡನ್	8 „ 28 „
ನಾರ್ವೆ	7 „
ಅಮೇರಿಕ	7 „ 36 „
ಕೆನಡ	6 „ 16 „
ಆಸ್ಟ್ರೇಲಿಯ	4 „ 25 „
ಇಂಗ್ಲೆಂಡ್	3 „ 33 „
ಜರ್ಮನಿ	3 „ 16 „
ಫ್ರಾನ್ಸ್	3 „ 5 „
ಡೆನ್ಮಾರ್ಕ್	2 „ 30 „
ಭಾರತ	1 ಮಣ 4 ಸೇರು

ಭಾರತದ ಜನ ಸಂಖ್ಯೆಯ ದೃಷ್ಟಿಯಿಂದ ಒಬ್ಬ ಮನುಷ್ಯನಿಗೆ ದಿನ 1ಕ್ಕೆ 5 ಛಟಾಕು ಹಾಲಿಗಿಂತ ಹೆಚ್ಚಾಗಲಿಲ್ಲ. ಇದರಲ್ಲಿ ತುಪ್ಪ, ಬೆಣ್ಣೆ ಮತ್ತು ಹಾಲಿನಿಂದಾಗುವ ಇತರವಸ್ತುಗಳೂ ಸೇರಿವೆ. ಮೇಜರ್ ಜನರಲ್ ಸರ್ ಜಾನ್ ಮೇಗಾರವರು ಬಿಂದುಗಳನ್ನು ಬಹಳ ಸೂಕ್ಷ್ಮವಾಗಿ ಪರೀಕ್ಷಿಸಿ ಮೇಲ್ಕಂಡ ನಿರ್ಣಯಕ್ಕೆ ಬಂದಿರುವರು. ಇದು ಎಷ್ಟು ಕಡಿಮೆ ಪ್ರಮಾಣವೆಂಬುದು ಬಹಳ ಮುಖ್ಯವಾದುದು!

ಹಾಲನ್ನು ಹೊರಗಿನಿಂದ ತರಿಸುವುದಕ್ಕಿಂತ ಅವಮಾನಬೇಕೆ?

ಹಾಲಿನ ಉಪಯೋಗವು ಮಕ್ಕಳಿಗೆ, ವೃದ್ಧರಿಗೆ ಮಾತ್ರವಲ್ಲದೆ ಯುವಕರಿಗೂ ಪುರುಷ ಸ್ತ್ರೀಯರೆಲ್ಲರಿಗೂ ಅಗತ್ಯವಾದುದು. ಯಾವ ಸುಸಂಸ್ಕೃತ ಜನಾಂಗವೇ ಆಗಲಿ ಹಾಲಿಲ್ಲದೆ ಜೀವಿಸಿರಲಾರದು. ಉತ್ತಮವಾದ ಶುದ್ಧವಾದ ಹಾಲಿಗಿಂತ ಆರೋಗ್ಯಕ್ಕೆ ಬೇಕಾದ ಪದಾರ್ಥವು ಬೇರೆ ಯಾವುದೂ ಇಲ್ಲ. ದಿನ ದಿನಕ್ಕೆ ಬೆಳೆಯುವ ಮಕ್ಕಳಿಗಂತೂ ಹಾಲು ಅನಿವಾರ್ಯವಾದುದು.

ಇಂತಹ ಉತ್ತಮವಾದ ವಸ್ತುವಿನ ಉಪಯೋಗವು ನಮ್ಮಲ್ಲಿ ಸಾಕಷ್ಟು ಪ್ರಮಾಣದಲ್ಲಿಲ್ಲವೆಂಬುದನ್ನು ಮೇಲೆ ವಿವರಿಸಿದ್ದಾಯಿತು. ನಮಗೆ ಎಷ್ಟು ಹಾಲು ಬೇಕೆಂಬುದನ್ನು ನೋಡೋಣ. ಸಾಧಾರಣವಾಗಿ ಪ್ರತಿಯೊಬ್ಬನಿಗೂ 1 ದಿನಕ್ಕೆ 7 ಛಟಾಕು ಹಾಲಿನ ಅಗತ್ಯವಿದೆ. ಆದರೆ ನಮ್ಮ ದೇಶದಲ್ಲಿ ಈಗ ಇದರ ಅರ್ಧಭಾಗ ಮಾತ್ರ ದೊರೆಯುತ್ತಿದೆ. ಒಟ್ಟು ಬೇಕಾಗುವ ಹಾಲಿನ ಸೇ 60 ಭಾಗ ಮಾತ್ರ ದೊರೆಯುತ್ತಿದೆ. ಮಕ್ಕಳಿಗೆ ಪ್ರತಿದಿನವೂ 7ರಿಂದ 14 ಛಟಾಕು ಹಾಲು ಅಗತ್ಯ. ಗರ್ಭಿಣಿ ಸ್ತ್ರೀಯರಿಗೂ ಮತ್ತು ಸ್ತನ್ಯ ಪಾನ ಮಾಡಿಸುವ ಹೆಂಗಸರಿಗೂ ಸಾಧಾರಣವಾಗಿ 14 ಛಟಾಕು, ಯುವಕರಿಗೆ ದಿನವಹಿ 7 ಛಟಾಕೂ ಹಾಲು ಬೇಕು.

ಭಾರತದಲ್ಲಿ ಬ್ರಿಟನ್ನಿನ 14ರಷ್ಟು ಡೆನ್ಮಾರ್ಕಿನ 6ರಷ್ಟು, ಆಸ್ಟ್ರೇಲಿಯದ 6ರಷ್ಟು, ಸ್ವಿಟ್ಜರ್ಲೆಂಡಿನ 7ರಷ್ಟು ಹಾಲು ಆದರೂ, ಇಲ್ಲಿ ಹಾಲು, ಮತ್ತು ಅದರಿಂದಾಗುವ ಪದಾರ್ಥಗಳ ಅಭಾವವು ಬಹಳವಾಗಿದೆ. ಇಲ್ಲವೆ ತನ್ನ ಆವಶ್ಯಕತೆಗಳನ್ನು ಪೂರೈಸಲು ಭಾರತವು ಹೊರಗಿನಿಂದ ಹಾಲು ತರಿಸಿಕೊಳ್ಳುತ್ತಿದೆ ಎಂದರೆ ಇದಕ್ಕಿಂತ ನಾಚಿಕೆಗೇಡಿನ ವಿಚಾರವಿನ್ನೇನು ಬೇಕು? 1935–36ರಲ್ಲಿ 70 ಲಕ್ಷ ರೂ.ಗಳಿಗಿಂತ ಹೆಚ್ಚಿನ ಬೆಲೆಯ ಹಾಲು ಹೊರಗಿನಿಂದ ಇಲ್ಲಿಗೆ ಬಂದಿತ್ತು. 14 ಲಕ್ಷಕ್ಕಿಂತ ಹೆಚ್ಚು ಬೆಲೆಯ ಬೆಣ್ಣೆಯು ಹೊರದೇಶಗಳಿಂದ ಬಂದಿತ್ತು.

ಇನ್ನೊಂದು ಗಮನಾರ್ಹವಾದ ವಿಚಾರವೇನೆಂದರೆ ಭಾರತದ ನಗರಗಳಲ್ಲಿ ಹಾಲು ಬಹಳ ಕಡಿಮೆಯಾಗಿದೆ, ಜೊತೆಗೆ ಶುದ್ಧವಾದ ಹಾಲು ದೊರೆಯದಿರುವುದೊಂದರ ಬೇರೆ. ಅಲ್ಲದೆ ನಮ್ಮ ನಗರಗಳಲ್ಲಿ ಹಾಲು ಮಾರುವ ಬೆಲೆಯು ಇತರ ದೇಶಗಳಿಗಿಂತ ಹೆಚ್ಚಾಗಿದೆ. ನಗರಗಳ ಸುತ್ತ ಹಾಲು ಉತ್ಪತ್ತಿಯಾಗುವ ವಾತಾವರಣವು ತೀರ ಕೆಟ್ಟದ್ದು, ಹಾಲು ಕುಡಿಯಲು ಯೋಗ್ಯವಾಗಿರುವುದಿಲ್ಲ. ಕೆಲವು ದುರಾಶಾಬದ್ಧರು ಆಕಳು, ಎಮ್ಮೆಗಳಿಗೆ ಕುದುರೆ ಲದ್ದಿಯನ್ನು ತಿನ್ನಿಸುತ್ತಾರಂತೆ!. ಇಂತಹ ಆಹಾರವನ್ನು ತಿಂದು ಅವು ಎಂತಹ ಹಾಲನ್ನು ತಾನೇ ಕೊಡಬಲ್ಲವು? ಇದನ್ನು ಕುಡಿಯುವುದಕ್ಕಿಂತ ಹಾಗೇ ಇರುವುದೇ ಉತ್ತಮವಲ್ಲವೆ?

ತುಪ್ಪದ ವಿಚಾರವೂ ಇದೇ ರೀತಿಯೇ ಇದೆ. ಈಗ ಶುದ್ಧವಾದ ತುಪ್ಪವು ದೊರೆಯುವುದೇ ದುರ್ಲಭವಾಗಿದೆ. ಅದರಲ್ಲಿ ಉಗ್ಗೆ ಮತ್ತು ಅನೇಕ ವಿಧವಾದ ಕೊಬ್ಬನ್ನು ಸೇರಿಸಿರುವರು. ಇದರ ಉಪಯೋಗದಿಂದ ಆರೋಗ್ಯವು ಸಹಜವಾಗಿ ಕೆಡುವುದು. ಆದುದರಿಂದ ಅಪ್ಪಟವಾದ ಹಾಲು ಮತ್ತು ತುಪ್ಪವನ್ನು ತಯಾರಿಸುವುದು ನಮ್ಮ ಡೈರಿಗಳ ಮುಖ್ಯ ಕೆಲಸವಾಗಬೇಕು. ಸರಕಾರವೂ ಸಹ ಇದರ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕು. ನಂತರ ರಾಸುಗಳ ತಳಿಗಳ ಕಡೆಗೆ ಸಹ ಗಮನಕೊಡಬೇಕು.

ಡೈರಿ ಉದ್ಯೋಗವು ಹೆಚ್ಚುವುದರ ಮೂಲಕ ನಮ್ಮ ದೇಶಕ್ಕೆ ಅನೇಕ ಲಾಭವುಂಟು. ಭಾರತದ ರೈತನಿಗೆ ಯಾವುದೂ ಸಹಾಯಕರೇ ಇರುವುದಿಲ್ಲ. ವರ್ಷದಲ್ಲಿ ಬಹಳ ಕಾಲ ಅವನು ಕೆಲಸವಿಲ್ಲದೆ ಇರುವನು. ಆಗ ಅವನ ಆದಾಯಕ್ಕೆ ಯಾವ ಮಾರ್ಗವೂ ಇರುವುದಿಲ್ಲ. ಕೇಂಟಜ್‌ಎಂಬವರ ಲೆಕ್ಕದಂತೆ ಮುಂಬಯಿ ಪ್ರಾಂತ್ಯದಲ್ಲಿ ವರ್ಷದಲ್ಲಿ 180-190 ದಿನ ಮಾತ್ರ ಕೆಲಸವಿರುವುದಂತೆ. ಪಂಜಾಬಿನ ವ್ಯವಸಾಯ ಶಾಖೆಯವರ ಲೆಕ್ಕದಂತೆ ರೈತನು ಸರಾಸರಿ ವರ್ಷದಲ್ಲಿ 150 ದಿನಕ್ಕಿಂತ ಹೆಚ್ಚು ಕೆಲಸ ಮಾಡುವುದಿಲ್ಲವಂತೆ. ಈ ಉಳಿದ ಕಾಲವನ್ನು ಡೈರಿ ವ್ಯವಸಾಯದಲ್ಲಿ ವಿನಿಯೋಗಿಸಿದರೆ ಬಹಳ ಲಾಭವಾಗುವುದು. ಇದಕ್ಕಿಂತಲೂ ರೈತರಿಗೆ ಬೇರೆ ಯಾವ ಸಹಾಯಬೇಕು? ನಮ್ಮ ಹಿಂದಿನ ಶಕ್ತಿಯನ್ನು ಪುನಃ ಸಂಪಾದಿಸಬೇಕಾದರೆ, ಹಾಲು, ತುಪ್ಪ, ಮೊಸರಿನಂತಹ ವಸ್ತುಗಳನ್ನು ಹೆಚ್ಚು ಬಳಸಬೇಕು. ನಮ್ಮ ದೇಶದಲ್ಲಿ ಉತ್ತಮವಾದ ತಳಿಗಳಿಗೇನೂ ಕೊರತೆ ಇಲ್ಲ.

ಡೈರಿಯ ಉನ್ನತಿಗೆ ಆ ಬಗ್ಗೆ ಶಿಕ್ಷಣ ಕೊಡುವುದೂ ಒಂದು ಮುಖ್ಯವಾದ ವಿಚಾರ. ಸರಕಾರವು ಇದರ ಕಡೆಗೆ ಗಮನ ನೀಡಬೇಕು. ಹಾಲಿನ ಮಾರಾಟದಲ್ಲಿ ಅತ್ಯಂತ ಕಠಿಣವಾದ ನಿಬಂಧನೆಗಳಿರಬೇಕು.

ಕೃಷಿ ಪ್ರಧಾನವಾದ ಭಾರತದಲ್ಲಿ, ಎಲ್ಲರಿಗೂ ಅತ್ಯಂತ ಅಗತ್ಯವಾಗಿ ಬೇಕಾದ ಹಾಲಿನಂತಹ ಮುಖ್ಯವಾದ ವಸ್ತುವನ್ನು ಸಾಕಷ್ಟು ಪ್ರಮಾಣದಲ್ಲಿ, ಎಲ್ಲರಿಗೂ ದೊರೆಯುವಂತೆ ಮಾಡುವುದು ಸರಕಾರದ ಮತ್ತು ಸಾರ್ವಜನಿಕರ ಬಹಳ ಮುಖ್ಯವಾದ ರಾಷ್ಟ್ರೀಯ ಕೆಲಸ. S.

NAVAYUGA
Advertisement Tariff
1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-Navayuga UDIPI.

ANTARANGA
YUGADI SPECIAL

ADVERTISEMENT RATES

Full Page	... ...	Rs. 25—0—0
Half Page	... ...	Rs. 13—0—0
Quarter Page ...	...	Rs. 7—0—0
⅛ Page	... ...	Rs. 4—0—0
Cover Back Page		Already Reserved.
Cover 2nd & 3rd Page		Rs. 35—0—0

FOR FURTHER PARTICULARS APPLY TO:
Advertisement Manager:—
ANTARANGA, UDIPI.

ಕೆನರಾ ಬೇಂಕ್ ಲಿಮಿಟೆಡ್
ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದುದು.
೧೯೩೯ನೇ ಇಸವಿ ಡಿಸೆಂಬರ ೩೧ಕ್ಕೆ ಅಂತ್ಯವಾಗುವ ವರ್ಷದ
ಆಯವ್ಯಯದ ಸಾರಾಂಶ ಪಟ್ಟಿ.

ಮೂಲಧನ	ರೂ. ಆ. ಪೈ.		ರೂ. ಆ. ಪೈ.
ತೆತ್ತಲ್ಪಟ್ಟ	6,00,000-0-0	ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ	95,489-4-3
ಪೈಡ್ ಆಫ್	3,91,342-0-0	ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು	
ರಿಸರ್ವ್ ಫಂಡು	4,50,000-0-0	ಬೆಲೆಬಾಳುವ ಸೆಕ್ಯುರಿಟಿ	40,97,741-5-6
ಡಿಪೋಸಿಟ್ ಫಿಕ್ಸೆಡ್, ಕರೆಂಟ್ ಇತ್ಯಾದಿ	81,21,622-8-1	ಹುಂಡೀ ಪತ್ರ ಮೊದಲಾದುವುಗಳು	10,30,649-2-10
ಬೇಂಕುಗಳಿಗೆ ಸಲ್ಲತಕ್ಕದ್ದು	ಇಲ್ಲ	ಲೇವಾದೇವಿ	20,64,585-2-0
ವಿವಿಧ	10,51,799-1-7	ವಿವಿಧ	9,82,095-10-4
ಈ ವರ್ಷದ ಲಾಭ	55,003-0-6	ನಗದು	17,99,207-1-3
ಒಟ್ಟು	1,00,69,765-10-2	ಒಟ್ಟು	1,00,69,765-10-2

ಹಠಯೋಗ ಸಾಧನೆಯ ವಿಚಿತ್ರ ಪ್ರದರ್ಶನ

ಮನುಯೋಗಿಯ ಸಜೀವ ಸಮಾಧಿ!

ಕಥಿಯಾವಾಡದ ಮೋರ್ವಿಯಲ್ಲಿ ಇತ್ತಲಾಗಿ ನಡೆದ ಸಮಾಧಿಯ ವಿವರ.

ಕಥಿಯಾವಾಡದ ಮೋರವಿ ಎಂಬ ಪಟ್ಟಣದಲ್ಲಿ ರಿಶಿಕೇಶದ ಶಂಕರ ಯಾನ ಮನುಯೋಗಿ ಎಂಬವರು ಇತ್ತಲಾಗಿ ವಿಚಿತ್ರ ಯೋಗಿಕ ಸಾಧನೆಗಳನ್ನು ಪ್ರದರ್ಶಿಸಿ ಜನತೆಯನ್ನು ವಿಸ್ಮಯಗೊಳಿಸಿರುವರು. 24 ಘಂಟೆಗಳ ವರೆಗೆ ಸಜೀವವಾಗಿ ಹೂಳಲ್ಪಟ್ಟು ಯಾವ ತರದ ದುಷ್ಪರಿಣಾಮವೂ ಇಲ್ಲದೆ ಹೊರತೆಗೆಯಲ್ಪಟ್ಟಿರುವರು.

ಹಠಯೋಗದಿಂದ ಇಂದ್ರಿಯಗಳ ಚಲನವಲನಗಳ ಮೇಲೆ ಸಂಪೂರ್ಣ ಅಧಿಕಾರ ಸ್ಥಾಪಿಸಿ ಅವನ್ನು ನಿಯತಗೊಳಿಸಿ ಶ್ವಾಸೋಚ್ಛ್ವಾಸವನ್ನೂ ಹತೋಟಿಗೆ ತಂದು ಮನಸ್ಸನ್ನು ನಿಶ್ಚಲ ಪ್ರಶಾಂತಸ್ಥಿತಿಗೆ ಮುಟ್ಟಿಸಿ ಆರಾಧ್ಯೋದ್ದೇಶದಲ್ಲಿ ಐಕ್ಯಗೊಳಿಸಬಹುದು. ಯೋಗಿಗಳ ಅಭಿಮತದ ಮೇರೆಗೆ ಮನುಷ್ಯ ದೇಹದಲ್ಲಿ ಪಂಚಪ್ರಾಣಗಳಿರುವವು. ಅದರಲ್ಲಿ ಮುಖ್ಯವಾದುದೆಂದರೆ ಶ್ವಾಸೋಚ್ಛ್ವಾಸದ ವಾಯು. ಹಠಯೋಗಿಯು ಅವುಗಳನ್ನು ನಿಯಂತ್ರಿಸಿ ಸ್ತಂಭಿತಗೊಳಿಸಬಲ್ಲನು. ಇಂತಹ ಅಬೋಧಾವಸ್ಥೆಯು ಸಮಾಧಿಯೆಂದು ಕರೆಯಲ್ಪಡುವುದು. ಯೋಗಿಯು ಸಮಾಧಿಸ್ಥನಾದಾಗ ಶ್ವಾಸೋಚ್ಛ್ವಾಸ ಮತ್ತು ಹೃದಯ ಮಿಡಿತವು ನಿಂತುಹೋದರೂ ಮರಣವುಂಟಾಗಲಾರದು. ಯೋಗಿಯು ಎಷ್ಟು ದೀರ್ಘಕಾಲ ಹೀಗೆ ಸಮಾಧಿಸ್ಥನಾದರೂ ಆತನ ಶರೀರದಲ್ಲಿ ಯಾವ ತರದ ಶಿಥಿಲತೆಯೂ ಉಂಟಾಗಲಾರದು. 3 ತಿಂಗಳುಗಳಿಗಿಂತಲೂ ಹೆಚ್ಚಾಗಿ ಹೀಗೆ ಸಮಾಧಿಸ್ಥರಾಗಿದ್ದ ಸಂಗತಿಗಳಿವೆ. ಸಮಾಧಿಯನ್ನು ಸಾಧಿಸಿ ಅದರಿಂದೇನಾದರೂ ಹಾನಿಯುಂಟಾಗದಂತಾಗಲು ಕೆಲವು ಮುಂಜಾಗ್ರತೆಗಳನ್ನು ತೆಗೆದುಕೊಳ್ಳತಕ್ಕದ್ದು. ಹಠಯೋಗದ ಪೂರ್ವಸಿದ್ಧತೆಯಲ್ಲವು ಅಡಕವಾಗಿದ್ದು ಸಮಾಧಿಯು ಮೊದಲು 2 ದಿನಗಳ ವರೆಗೆ ಅವನ್ನು ನಡಿಸತಕ್ಕದ್ದು.

ಈ ಪೂರ್ವ ಸಿದ್ಧತೆಯ ಸಮಯದಲ್ಲಿ ಯೋಗಿಯು ನಿರಶನನಾಗಿದ್ದು ಧೌತಿ, ಬಸ್ತಿ, ನೇತಿ, ತಾರಕ ಕಪಾಲಿ ಮತ್ತು ಭಾತಿ ಎಂಬ 6 ಬಗೆಯ ಶುದ್ಧೀಕರಣಗಳನ್ನು ನಿಷ್ಠೆಯಿಂದ ನಡಿಸಬೇಕು. ಈ ಶುದ್ಧೀಕರಣ ವಿಧಾನಗಳು ಕೂಡಾ ಸಮಾಧಿಯಷ್ಟೇ ಚಿತ್ತಾಕರ್ಷಕವಿರುತ್ತವೆ. ಅಂಟು ಹಾಕಿದ ಹತ್ತಿ ನೂಲಿನಿಂದ ಗಂಟಲು ಮತ್ತು ಮೂಗನ್ನು ಶುದ್ಧಮಾಡಲಾಗುವುದು. ಅನ್ನಕೋಶವನ್ನು ಶುದ್ಧಮಾಡಲು ನಯವಾದ ರೇಶ್ಮೆಯ ಉದ್ದವಾದ ತುಂಡೊಂದನ್ನು ನುಂಗಿ ಹೊರತೆಗೆಯಲಾಗುವುದು. ನೌಲಿಯ ಮೂಲಕ ಕರುಳನ್ನು ಶುದ್ಧಪಡಿಸಲಾಗುತ್ತದೆ.

ಮೋರ್ವಿಯಲ್ಲಿ ನಡೆದ ಪ್ರದರ್ಶನದಲ್ಲಿ ಮೊದಲಾಗಿ ಸ್ಥಳೀಯ ಶಂಕರ ಆಶ್ರಮದ ಕೋಟೆದಲ್ಲಿ 4 ಅಡಿ ವ್ಯಾಸ ಮತ್ತು 6 ಅಡಿ ಆಳದ ಹೊಂಡವೊಂದನ್ನು ಅಗಯಲಾಯಿತು. ಈ ಗೋಡೆಯ ಸುತ್ತಲಿನ ಗೋಡೆಗೆ ಸರಿಯಾಗಿ ಸಗಣಿ ಒಳೆದು, ಅಡಿಯ ಭಾಗಕ್ಕೆ ಹೊಯಿಗೆ ಹಾಕಲಾಯಿತು. ಪುರೋಹಿತರುಗಳು ಕೆಲವು ಸಂಸ್ಕಾರಗಳನ್ನು ಮಾಡಿದ ಮೇಲೆ ಕೇವಲ ಕೌಪೀನ ಧಾರಿಯಾದ ಮನುಯೋಗಿಯು ಮೂರು ಸಲ ಈ ಹೊಂಡದ ಸುತ್ತು ಬಂದು ಅದರೊಳಗಿಳಿದನು. ಆ ಮೇಲೆ ಪಾದಗಳನ್ನು ಮೇಲಕ್ಕೆತ್ತಿ ಯೋಗಾಸೀನನಾದನು. ಅನಂತರ ಶರೀರವನ್ನೆಲ್ಲಾ ವಸ್ತ್ರದಿಂದ ಮುಚ್ಚಿ 15 ನಿಮಿಷಗಳಲ್ಲಿ ಸಮಾಧಿಸ್ಥನಾದನು.

ಯೋಗಿಯ ಶ್ವಾಸೋಚ್ಛ್ವಾಸವು ನಿಂತಾಗ ಅಥವಾ ಕಡಿಮೆಯಾದಾಗ ಆತನಿದ್ದ ಹೊಂಡವನ್ನು ಕಬ್ಬಿಣದ ತಗಡಿನಿಂದ ಮುಚ್ಚಲಾಯಿತು. ಅನಂತರ ಅದರ ಬದಿಗಳನ್ನೆಲ್ಲಾ ಇಟ್ಟಿಗೆ ಮತ್ತು ಗಚ್ಚಿನಿಂದ ಸರಿಯಾಗಿ ಬಂದುಮಾಡಲಾಯಿತು. ಆ ಮೇಲೆ ಅದರ ಮೇಲೆ ದಪ್ಪವಾಗಿ ಮಣ್ಣು ಹಾಕಿ ವಾಯು ಒಂದಿಷ್ಟಾದರೂ ಹೊಂಡದೊಳಗೆ ಪ್ರವೇಶಿಸದಂತೆ ಮಾಡಲಾಯಿತು. ಅಂದಿನ ರಾತ್ರಿ ಮತ್ತು ಹಗಲಲ್ಲಿ ಇಬ್ಬರು ಪೋಲೀಸರು ಮತ್ತು ಇನ್ನು ಕೆಲವು ಜನರು ಈ ಹೊಂಡದ ಒಳಿ ಕಾವಲಿದ್ದರು. 24 ಘಂಟೆಗಳ ನಂತರ ಮರುದಿನ ಸಂಜೆ ಘಂಟೆ 5-30ಕ್ಕೆ ಹೊಂಡದ ಮೇಲಿನ ಮಣ್ಣು ಇಟ್ಟಿಗೆ ಮತ್ತು ಕಬ್ಬಿಣ ತಗಡುಗಳನ್ನು ತೆಗೆಯಲಾಯಿತು.

ಮನುಯೋಗಿಯು, ಹೊಂಡವು ಮುಚ್ಚಲ್ಪಡುವಾಗ ಇದ್ದಂತೆಯೇ ಇದ್ದನು. ಆತನ ಶ್ವಾಸೋಚ್ಛ್ವಾಸವು ನಿಂತುಹೋದಂತೆ ತೋರುತ್ತಿತ್ತು. ಆದರೆ ಅನಂತರ ಕೆಲವು ನಿಮಿಷಗಳಲ್ಲೇ ಪುನಃ ಉಸಿರಾಟ ಆರಂಭವಾಯಿತು. 10 ನಿಮಿಷಗಳಾದ ಮೇಲೆ ಯೋಗಿಯು ಸರಿಯಾಗಿ ಉಸಿರಾಡಲಾರಂಭಿಸಿದರು. ಪುರೋಹಿತರುಗಳು ಪುನಃ ಕೆಲವು ಸಂಸ್ಕಾರಗಳನ್ನು ಮಾಡಿದರು. ಮನುಯೋಗಿಯು ಹೊಂಡದೊಳಗೆ ಹೋದ ರೀತಿಯಲ್ಲಿಯೇ ಅದರಿಂದ ಹೊರಬಂದನು. 3 ತಿಂಗಳ ವರೆಗೆ ಸಮಾಧಿಸ್ಥನಾಗಿರಲು ತನಗೆ ಅನುಮತಿ ಕೊಡಬೇಕೆಂದು ಮನುಯೋಗಿಯು ಪ್ರಥಮತಃ ಸರಕಾರದೊಡನೆ ಕೇಳಿಕೊಂಡಿದ್ದನು. ಆದರೆ ಅದು ಅತ್ಯಂತ ದೀರ್ಘವಾಗಿ ಅಪಾಯಕರವಿರುವುದೆಂದು ಸರಕಾರವು ಸಮ್ಮತಿಸಲಿಲ್ಲ. ಈ ಯೋಗ ಸಿದ್ಧಿ ಪ್ರದರ್ಶನದ ಕುರಿತು ಆರಂಭದಿಂದಲೂ ಮೋರ್ವಿಯ ಜನರು ಬಹಳ ಉತ್ಸುಕತೆ ತಾಳಿದ್ದರು. ಹಠಯೋಗದಲ್ಲಿ ಜನರಿಗೆ ಕಡಿಮೆಯಾಗುತ್ತಿರುವ ವಿಶ್ವಾಸವನ್ನು ದೃಢಪಡಿಸಲು ಮನುಯೋಗಿಯು ಈ ಪ್ರದರ್ಶನವನ್ನು ಜಾಹೀರಾಗಿ ನಡಿಸಿದನು. ಸರ್ವಸಾಮಾನ್ಯವಾಗಿ ಯೋಗಿಗಳು ಏಕಾಂತವಾಗಿ ಸಮಾಧಿಸ್ಥರಾಗುವರು.

ದಕ್ಷಿಣಕನ್ನಡ ಜಿಲ್ಲಾ ದೇವಾಡಿಗರ ಶುಭೋದಯ ಸಂಘ, ಮಂಗಳೂರು-

ತಾ 24-3-1940ರಲ್ಲು ಮಂಗಳೂರಿನ ಶ್ರೀ ಮಹಮ್ಮಾಯಿ ದೇವಸ್ಥಾನದ ಬಳಿಯಲ್ಲಿರುವ ಶಾಲಾ ಕಟ್ಟೋಣದಲ್ಲಿ ದಕ್ಷಿಣಕನ್ನಡ ಜಿಲ್ಲಾ ದೇವಾಡಿಗರ ನೂತನ ಸಭೆಯೊಂದು ಶ್ರೀ ಭೋಜರಾವ್ ಮಾಸ್ತರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಜಿಲ್ಲೆಯ ಎಲ್ಲಾ ಭಾಗಗಳಿಂದ ಸುಮಾರು 300 ಜನ ಸ್ವಜಾತಿ ಬಾಂಧವರು ಬಂದಿದ್ದರು.

ದೇವತಾಪ್ರಾರ್ಥನೆಯಾದ ನಂತರ ಹೋಟೆಲಿಗರಿಕಾದ ಶರಾವು ಶ್ರೀ ಅಮಿನ್ ಕೋಮಪ್ಪ ದೇವಾಡಿಗರು ಇಂದು ಕೂಡಿ ಬಂದ ಸಭೆಯ ಉದ್ದೇಶವನ್ನು ವಿವರಿಸಿ ಹೇಳಿದರು. ಮಲ್ಕಿ ಶ್ರೀ ಅಚ್ಚಣ್ಣ ದೇವಾಡಿಗರು ಸಂಘದ ಆವಶ್ಯಕತೆ ಮತ್ತು ಕ್ರಮ ನಿಬಂಧನೆಗಳು ಮೊದಲಾದ ವಿಷಯಗಳಲ್ಲಿ ಸಭೆಯ ಮುಂದಿಟ್ಟಿರುವ ಕ್ರಮ ನಿಬಂಧನೆಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟ ನರಪತಿ ಬಗ್ಗೆ 12 ಜನ ಆಡಳಿತೆ ಮೆಂಬರನ್ನು 12 ಜನ ಕಮಿಟಿ ಮೆಂಬರನ್ನು ಸರ್ವಾನುಮತದಿಂದ ಚುನಾಯಿಸಲಾಯಿತು. ಆ ವೇಳೆ ಸಂಘದ ಯಜಮಾನರು ಶ್ರೀ ಕೋನರ ಮಾಸ್ತರರು ಮತ್ತು ಶ್ರೀ ಕೆ. ಅಂತಪ್ಪ ಮೇಸ್ತ್ರಿಯವರು ಸಂಘದ ಏಳಿಗೆಯ ವಿಷಯದಲ್ಲಿ ಎಲ್ಲಾ ಸ್ವಜಾತಿ ಬಾಂಧವರು ಸಹಕರಿಸುವಂತೆ ವಿನಂತಿ ಮಾಡಿಕೊಂಡರು. ಸಭಾಧ್ಯಕ್ಷರು ಈ ರೀತಿಯ ಸಮಾಜ ಸಂಘಗಳು ಅತೀ ಅಗತ್ಯವೆಂದೂ ಎಲ್ಲವರೂ ಅನ್ಯೋನ್ಯದಿಂದ ನಡಕೊಂಡು ಸಮಾಜದಲ್ಲಿ ಬಡವರಿಗೆ ಯೋಗ್ಯ ವಿದ್ಯೆಯು ದೊರಕುವಂತೆ ಇಂಥಾ ಸಂಘಗಳಿಂದ ತಕ್ಕ ಸಹಾಯ ಕೊಡಬೇಕೆಂದೂ ಭಾಷಣವಿತ್ತರು. ಶ್ರೀ ಗೋಪಾಲ ಮಾಸ್ತರರು ಧನ್ಯವಾದಗಳನ್ನು ಅರ್ಪಿಸಿದ ನಂತರ ಮಲ್ಕಿ ಶ್ರೀ ಅಚ್ಚಣ್ಣ ದೇವಾಡಿಗರು ತಾನು ರಚಿಸಿದ ಸಂಘದ ಪ್ರೇಯ ಪ್ರಾರ್ಥನೆಯ ಪಾದನ್ನು ಓದಿದ ಮೇಲೆ ಸಭೆಯು ಕೊನೆಗೊಂಡಿತು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C. 135 R. E. P. 7 [illegible]

ನಲ್ಲಿಗೆ ಮಾಡುವ ಮಲ್ಲಿಕಾರ್ಜುನ-ವಾದಿ-ಅರ್ಜಿದಾರ

ಮತ್ತು

ಬಂಟವಾಳ ತಿಮ್ಮಣ್ಣ ಗುಂಡಿಲ ಅಬ್ಬಲ್ಲಾ ಹಾಜಿಗೆ ವೊಟುಕರೆ ಇ ಪತ್ರೆ ಅಸ್ಯಮ್ಮ ಹೆಂಗ್ಸಿನಲ್ಲಿ ಜ ನಿದ ಮಗ, ಕಾಸರಗೋಡು ತಾಲೂ ಕು ಕಾಸ್ತ್ರಾರಿ ಗ್ರಾಮದಲ್ಲಿರುವವ—	ಪ್ರತಿವಾದಿ ರೆಸ್ ಪಾಂಡೆಂಟ್

ಇವರೊಳಗೆ

ಸದ್ರಿ ರೆಸ್‌ಪಾಂಡೆಂಟಿಗೆ ತಿಳಿಸುವದೇನೆಂದ್ರೆ ಮೇಲ್ಕಂಡ ಅವ್ಲ ಜ್ಯಾರಿಯಲ್ಲಿ ಜಪ್ತಾದ ಸ್ಥಿರಾಸ್ತಿಗಳು ಏಲಂ ಮಾಡುವ ಬಗ್ಗೆ ಏಲಂ ಸಮಯದರು ಕರಿಸುವರೆ ಪವರ್ನ ಕೊಡಿಸುವ ಬಗ್ಗೆ ಸದ್ರಿ ಅರ್ಜಿದಾರನು ಅರ್ಜಿ ದಾಖ್ಲೆ ಮಾಡಿರುವದರಿಂದ ಆ ಕುರಿತು ರೆಸ್‌ಪಾಂಡೆಂಟಿಗೆ ಆಕ್ಷೇಪ ಹೇಳಲಿಕ್ಕೆ ಇದ್ದ ಪಕ್ಷಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ 11 ಘಂಟೆ ಸಮಯಕ್ಕೆ ತಾರೀಕು 2-4-1940ನೇ ದಿವ್ಸ ಹಾಜರಾಗಿ ಆಕ್ಷೇಪ ಹೇಳಬೇಕು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

Kasaragod | Sd C. V Kamath
30—3—40 | Advocate for Petr.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ

ಡಾ ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಖರೀದಿಸುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನು ಗೊನೊಕಿಲರ್ ಹೆಸರನ್ನು ಗಮನಿಸಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3. ವಿ. ಪಿ ಖರ್ಚು 0 8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

THE
PANGAL NAYAK BANK LTD.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

Season Deposits for a period of 3, 4, 5 or 6 months are accepted at all the offices of the Bank and interest is allowed at 4% per annum till maturity or the 30th June 1940, as the case may be, whichever is earlier.

For further information please communicate with or call at any of our offices.

THE VIJAYA BANK LTD.,
ಬದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಅನಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರ ವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,
ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಬಾಲಕರು ಆರೋಗ್ಯಕಾಯರಾಗಲು **ಪ್ರಭೂಸ್–ಬಾಲಾಮೃತ**

ಒಂದೆರಡು ವಾರಗಳಲ್ಲಿ ಅದ್ಭುತ ಗುಣ.

— ಕಮನೀಯವಾದ ಕೇಶಕಲಾಪ ತಂಪಾದ ಮಿದುಳು ಶುಭ್ರ ನೇತ್ರಗಳು ಇವುಗಳನ್ನು ಹೊಂದಲು —

ಪುಷ್ಪಗಂಧಾಮೋದಿತ **ಆಮಲಕೀ ತೈಲ** ಬಹು ಗುಣಯುಕ್ತ ವಾಯುಮಾತ್ರೆಗಳೆಂಬ — **ಧಾನ್ವಂತರಿ ಗುಟಿಕಾ** — ಇವುಗಳನ್ನು ಸೇವಿಸಿ ವಾಯುವೆಂಬ ರೋಗವನ್ನು ಗುಣಪಡಿಸಿಕೊಳ್ಳಿರಿ.

ಮಾತ್ರೆ–12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13 0, 100ಕ್ಕೆ 1-5-0.

5 ಆಣೆಯ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲು, ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು:–

ನವಭಾರತ ಬುಕ್ ಡಿಪೋ, ಉಡುಪಿ, ದ. ಕನ್ನಡ. ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ ಪೋಸ್ಟ್ ದ ಭಾರತ, ಕೆನರಾ ನ್ಯೂಸ್ ಏಜನ್ಸಿ, ಪಿ. ಆರ್ ಪ್ರಭು, ಬಟಾಟುವಾಲಾ ಬಿಲ್ಡಿಂಗ್, ಲಾಲ್‌ಭಾಗ್ ಮುಂಬೈ ನಂಬ್ರ 12, ಗಡಿಯಾರ್ ಲಕ್ಷ್ಮಣ ನಾಯಕ್ ಎಂಡ್ ಬ್ರದರ್ಸ್, ಕೋಟ, ದ. ಕನ್ನಡ.

ಸೀರೆಗಳು
ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ. **ಪಿ. ಎ. ಪೈ ಬ್ರದರ್ಸ್,** ಆಸ್ಪತ್ರೆ ಎದುರು, ಉಡುಪಿ

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES – – – – – MANGALORE

"ನಾಮರ್ದಾಯಿ"
ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರಥ್ ಫಾರ್ಮೆಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Null Bazzar, Duncan Road,
BOMBAY 4.

ಭಾರತೀ ಗ್ರಂಥಮಾಲೆಯ ಪುಸ್ತಕಗಳು.
ಬೆಳಕು (ಚಿಕ್ಕ ಕತೆಗಳ ಸಂಗ್ರಹ.)
ತಿನಿಸು (ಕತೆ, ಕವನ, ಪ್ರಬಂಧಗಳ ಸಂಗ್ರಹ.)
ಪ್ರತೀಕಾರ (ನವಪೌರಾಣಿಕ ನಾಟಕ)
ಲೋಪಾಮುದ್ರೆ (ಪೌರಾಣಿಕ ಕತೆ)
ಚಿಗುರು (10 ಚಿಕ್ಕ ಕತೆಗಳ ಸಂಗ್ರಹ)
ಪಂಚಾರತಿ (5 ಏಕಾಂಕ ನಾಟಕಗಳ ಸಂಗ್ರಹ)

ಪ್ರತಿಯೊಂದರ ಬೆಲೆ ನಾಲ್ಕಾಣೆ ಮಾತ್ರ (ಅಂಚೆವೆಚ್ಚ 0 0-6 ಪ್ರತ್ಯೇಕ)

ರೂ 1-8-0 ಕಳಿಸಿದ್ದಲ್ಲಿ ಆರೂ ಪುಸ್ತಕಗಳನ್ನು ಕಳಿಸಲಾಗುವುದು. (ಅಂಚೆವೆಚ್ಚ ಪುಕ್ಕಟೆ)

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಪ್ರತಿಗಳಿಗೆ ಬರೆಯಿರಿ:–

ಮೆನೇಜರ್,
ನವಭಾರತ ಪುಸ್ತಕ ಭಂಡಾರ
ಉಡುಪಿ

ಕೋಪ್ರಾನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ಡುವದು

ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ. (ಮಾಲಕರು.—ಮಗನಭಾಯಿ ಅಮೀನ್ ಆಂಡ್ ಕಂಪೆನಿ ಮುಂಬಯಿ.)

Degrees· Books: Medicines.
Free H L M S, H M B H M.D etc Free Homeo Ay r-Unani Naturo degres. by post also—Practioners also get soons Homeo Materiamedica, Rs 5. Homeo-Practice book Rs 4, Insanity Cure Pills Rs. 10 Enclose 2 annas stamp.—

Principal, Indian Homeopathic Institute and Society (Govt Regd)
P. O MAHUVA, (Kathiawar Dt, India.

ನಮ್ಮ ಹೊಸ ಪ್ರತಿನಿಧಿಗಳು
ಶ್ರೀ ಕೆ. ಎಂ. ದೇಜಪ್ಪ ಶೆಟ್ಟರು 'ನವಯುಗ'ದ ಪ್ರತಿನಿಧಿಯಾಗಿ ಕೆಲಸ ಮಾಡಲು ಉತ್ಸಾಹದಿಂದ ಮುಂದ ಬಂದಿದ್ದಾರೆ. ಇವರು ಮಿತಭಾಷಿಗಳು, ವಿನಯಸಂಪನ್ನರು ಹಾಗೂ ಸರಳ ಮನೋವೃತ್ತಿಯ ಕಾಂಗ್ರೆಸ್ ಭಕ್ತರು 'ನವಯುಗ'ವನ್ನು ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂಬ ಉತ್ಕಟೇಚ್ಛೆಯಿಂದ ಇವರು ಪ್ರತಿ ಹಳ್ಳಿ, ಪೇಟೆ, ಪಟ್ಟಣಗಳಲ್ಲೂ ಕ್ರಮಶಃ ಸಂಚರಿಸಲಿರುವರು. ಇವರಿಗೆ ಸಕಲರೂ ಉದಾರಾಶ್ರಯವಿತ್ತು 'ನವಯುಗ'ಕ್ಕೆ ಸರ್ವ ಪ್ರೋತ್ಸಾಹ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗುತ್ತದೆ. –ಮೆನೇಜರ್.

ಕನ್ನಡ ನುಡಿವೆಣ್ಣಗೊಂದು ಕನ್ನಡಗಿತ್ತಿಯ ಕಿರುಗಾಣಿಕೆ

ನಾಡ ಸೋದರಿಯರ ನೈಜ ಜೀವನದ ದುರಂತ ಚಿತ್ರವನ್ನೂ, ಸ್ತ್ರೀ-ಪುರುಷ ಹೃದಯಗಳ ಆಳವನ್ನೂ ಹೃದಯಂಗಮವಾಗಿ ಚಿತ್ರಿಸುವ ರಮ್ಯ ಕಥಾನಕ

ವತ್ಸಲಾ
ಸಾಮಾಜಿಕ ಕಾದಂಬರಿ
ಬೆಲೆ: 0-೭-೩.

0—8—0 ಸ್ಟಾಂಪು ಕಳುಹಿಸಿದರೆ 1 ಪ್ರತಿಯನ್ನು ಕಳಿಸಬಹುದು.
ಬರಹಗಾರ್ತಿಯವರು:–

ಶ್ರೀಮತಿ ಮಟ್ಟಾಡಿ ಕಮಲಾಕ್ಷಿ

ಈ ಪುಸ್ತಕದ ಕುರಿತು ಪ್ರಖ್ಯಾತ ವಿಮರ್ಶ ವಿಚಕ್ಷಣ ಕರ್ನಾಟಕ ವಿದ್ಯಾವೈಭವ, ರಾವ್ ಬಹದೂರ್ ಆರ್. ನರಸಿಂಹಾಚಾರ್ಯ M A, M.R A.S ಇವರು ಬೆಂಗಳೂರಿನಿಂದ ಹೀಗೆ ಅಭಿಪ್ರಾಯ ಪಡುತ್ತಾರೆ 'ಗ್ರಂಥದ ಶೈಲಿ ಗಂಭೀರವಾಗಿಯೂ ಹೃದಯ ರಂಜಕವಾಗಿಯೂ ಇದೆ, ಪ್ರತಿಪಾದಿತವಾದ ವಿಷಯವು ನೀತಿಬೋಧಕವಾಗಿಯೂ ದುರ್ನೀತಿ ನಿವಾರಕವಾಗಿಯೂ ಇವೆ, ಸ್ತ್ರೀಯರಿಗೆ ಬೋಧಪ್ರದವಾದ ಗ್ರಂಥ . . . . .'

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.